ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೧೭. 1-1-1959 Vol. 38. No. 17.

ಶಿಕ್ಷಣ ಪ್ರಣಾಳಿ

ಪಾಠ್ಯಕ್ರಮವು ಪರಿವರ್ತನೆ ಹೊಂದಲಿ

ವಿಜ್ಞಾನದ ಸದುಪಯೋಗತನಕ್ಕೆ ಅಕ್ಷರತೆಯೇ ಮೂಲ ತಳಹದಿ

೩೩ನೆಯ ಅಖಿಲ ಭಾರತೀಯ ಶಿಕ್ಷಣ ಸಮ್ಮೇಳನವು ದಶಂಬರ ೨೭ರಂದು ಚಂಡೀಗಡದಲ್ಲಿ ಸೇರಿತ್ತು. ಇದನ್ನು ಪಂಜಾಬದ ರಾಜ್ಯಪಾಲ ಶ್ರೀ ನರಹರಿ ವಿಷ್ಣು ಗಾಡಗೀಳರು ಉದ್ಘಾಟನೆಯನ್ನು ಮಾಡಿದರು. ಹಾಗೆಯೇ ಸಮ್ಮೇಳನದಲ್ಲಿ ಅಧ್ಯಕ್ಷಸ್ಥಾನದಿಂದ ಕೇಂದ್ರೀಯ ಶಿಕ್ಷಣಮಂತ್ರಿ ಶ್ರೀ ಮಾಲಿಯವರೂ ಭಾಷಣವನ್ನಿತ್ತರು. ಇವರಾಡಿದ ಮಾತುಗಳು ಮನನೀಯವಿದ್ದುದರಿಂದ, ಸಂಗ್ರಹಿಸಿ ಕೊಡುತ್ತೇವೆ.

ಭಾರತವಿಂದು ಲೋಕತಾಂತ್ರಿಕ ಪ್ರಣಾಲಿಯ ಮೂಲಕ ಸಮಾಜವಾದವನ್ನು ಸ್ಥಾಪಿಸಬೇಕಾದರೆ, ಶಿಕ್ಷಣದಲ್ಲಿ ಲೋಕತಂತ್ರ, ಅನ್ವೇಷಣ ಮತ್ತು ಸಹಿಷ್ಣುತೆಯ ಭಾವನೆಗಳಿಗೆ ಉತ್ತೇಜನವಿತ್ತು ಅವನ್ನು ಅಳವಡಿಸಿಕೊಳ್ಳಬೇಕು. ಭಾರತವನ್ನು ಪುನರ್ನಿರ್ಮಿಸಲು ಹೊರಟಿರುವ ನಾವು ನಮ್ಮ ಉದ್ದೇಶಕ್ಕಾಗಿ ನಮ್ಮ ಶಿಕ್ಷಣಪ್ರಣಾಳಿಯನ್ನು ಈ ಭಾವನೆಗಳಿಗನುಗುಣವಾಗಿ ಉಚ್ಚ ಆದರ್ಶಗಳಿಗೆ ಹೊಂದಿಕೊಳ್ಳುವಂತೆ ಅಳವಡಿಸಿಕೊಳ್ಳಬೇಕು.

ದೇಶದ ಆರ್ಥಿಕ ಮತ್ತು ಭೌತಿಕ ಸಮೃದ್ಧಿಯು ಒಕ್ಕಲುತನ ಮತ್ತು ಕಾರಖಾನೆಗಳಲ್ಲಿ ನಡೆಯುವ ಕೆಲಸಗಳನ್ನೇ ಹೊಂದಿಕೊಂಡಿದೆ. ಇದರ ಮೇಲೆ ಶಾಲೆ ಇಲ್ಲವೇ ಕಾಲೇಜುಗಳಲ್ಲಿ ಪಡೆದ ಶಿಕ್ಷಣವೇನಾದರೂ ಇದ್ದರೆ, ಅದರ ಪ್ರಭಾವವೂ ಬೀಳುತ್ತದೆ. ಈ ಪ್ರಸಂಗದಲ್ಲಿ ಶಿಕ್ಷಣದ ರೂಪವು ಕಳೆದ ಕೆಲವು ದಶಕಗಳಿಂದ ಕೊಡಲ್ಪಡುತ್ತಿರುವ ಶಿಕ್ಷಣಕ್ಕಿಂತ ಬೇರೆಯಾಗಿರಬೇಕು. ಯಾವುದೇ ಒಂದು ಪಕ್ಷದ ರಾಜನೀತಿಕ ಸ್ವಾರ್ಥಗಳು ಸಿದ್ಧಿಸುವಂತಾಗಬೇಕೆಂದು ಇದರ ಅರ್ಥವಲ್ಲ. ನಾವು ಹೊಂದುವ ಶಿಕ್ಷಣ ಮತ್ತು ಮಾಡುವ ಕೆಲಸ ಇವುಗಳ ನಡುವೆ ಏನಾದರೂ ಸ್ವಲ್ಪ ಹೊಂದಿಕೆ ಇರಬೇಕಾದುದು ಅತ್ಯಗತ್ಯ. ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಭವಿಷ್ಯತ್ತಿನ ನಾಗರಿಕನಾಗುವ ಮಗುವಿನಲ್ಲಿ ಒಂದು ನೈತಿಕ ದರ್ಶನ ವಿಕಾಸವಾಗಿ ಅದು ಅವನ ವಿಚಾರ ಮತ್ತು ಕಾರ್ಯಗಳಲ್ಲಿ ಸಹಾಯವಾಗುವಂತಹ ರೀತಿಯಲ್ಲಿ ರೂಪಿಸಲ್ಪಡುವಂತೆ ಅದರ ಮಾನಸಿಕ ನಿರ್ಮಾಣವಾಗಬೇಕು.

ಶೈಕ್ಷಣಿಕ ಸಂಸ್ಥೆಗಳಲ್ಲಿ ಅತ್ಯಧಿಕ ದಟ್ಟಣೆಯಿರುವ ಪ್ರಯುಕ್ತ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ನಡುವೆ ವ್ಯಕ್ತಿಗತ ಸಂಬಂಧವುಳಿದಿಲ್ಲ ವಾಸ್ತವವಾಗಿ ಶಿಕ್ಷಣವೆಂದರೆ, ಮಾನಸಿಕ ಪ್ರಕಾಶದ ಒಂದು ಪ್ರತಿಕ್ರಿಯೆಯಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಅಧ್ಯಾಪಕನತ್ತಣಿಂದ ಪ್ರಕಾಶವು ಬರುತ್ತದೆ. ಅತ್ಯಂತಾವಶ್ಯಕವಾದ ಈ ಪ್ರಕಾಶವು ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ದೊರೆಯುವುದಿಲ್ಲವಾದರೆ, ಅದನ್ನು ಶಿಕ್ಷಣವೆಂದು ಕರೆಯುವುದು ಅಸಾಧ್ಯ. ಇಂತಹ ಪ್ರಕಾಶರಹಿತ ಶಿಕ್ಷಣವು ಆಕಾಶವಾಣಿಗಳ ಮೂಲಕ ಪ್ರಚಾರ ಮಾಡುವ ಶಿಕ್ಷಣದಷ್ಟೇ ಉಪಯುಕ್ತವಾದುದು. ಅದರಿಂದ ಅಭ್ಯಾಸ ಮಾಡುವುದು ಎಂದಿಗೂ ಅಸಾಧ್ಯ.

ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಕರ ನೇತೃತ್ವದಲ್ಲಿ ವಿಶ್ವಾಸವುಳಿಯದಿರುವುದೂ ಇಂದು ವಿದ್ಯಾರ್ಥಿಗಳಲ್ಲಿ ಅಶಿಸ್ತು ಬೆಳೆಯುತ್ತ ಬರುವುದಕ್ಕೆ ಕಾರಣವಾಗಿದೆ. ಅಲ್ಲದೆ ಇದನ್ನುಳಿದು ಇನ್ನೂ ಅನೇಕ ಹೇತುಗಳಿರಬಹುದು; ಆದರೆ, ಇದೂ ಒಂದು ಬಹಳ ತಥ್ಯಪ್ರದವಾದ ಕಾರಣ.

ಬ್ರಿಟಿಷ್ ರಾಜಕುಮಾರ ಚಾರ್ಲ್ಸರು ಇಂಜಿನ್ ಡ್ರೈವರನಾಗಿ ಅಭ್ಯಾಸನಡೆಸುತಿದ್ದಾರೆ.

ಹಿಂದಿನ ವಿದ್ಯಾರ್ಥಿಗಳಂತೆ, ಇಂದಿನವರು ಆದರ್ಶವಾದಿಗಳಾಗಿಲ್ಲದಿರುವುದೂ ಒಂದು ಕಾರಣವಾಗಿದೆ. ಆದರ್ಶವಾದವು ವಿದ್ಯಾರ್ಥಿ ಬಳಗದಲ್ಲಿ ಬೆಳೆಯದಿರಲು ಅವರು ವಾಸಿಸುತ್ತಿರುವ ವಾತಾವರಣವು ಅವರನ್ನು ಆದರ್ಶವಾದದತ್ತ ಆಕರ್ಷಿಸುವಂತೆ ಮಾಡದಿರುವುದೇ ಮುಖ್ಯ ಕಾರಣ ಏನೇ ಇರಲಿ, ಪ್ರಾಥಮಿಕ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರಬಾರದು; ಅಲ್ಲದೇ ಅವಕ್ಕೆ ಪ್ರಶಿಕ್ಷಿತ, ಶಿಸ್ತು ಹಾಗೂ ಸದಾಚಾರೀ ಶಿಕ್ಷಕರನ್ನೇ ಆರಿಸಿ ನೇಮಿಸುವುದೂ ಅತ್ಯಂತಾವಶ್ಯಕವಾಗಿದೆ.

ಶಿಕ್ಷಕರಿಗೆ ಅವರು ಎಲ್ಲಿಯೇ ಕೆಲಸ ಮಾಡುತ್ತಿರಲಿ, ಪರ್ಯಾಪ್ತ ವೇತನವನ್ನೀಯುವುದು ಆಗತ್ಯವೆಂದು ನಾನು ಒಪ್ಪುತ್ತೇನೆ. ನಿಜ ಪರಿಸ್ಥಿತಿಗಳನ್ನು ಅಭ್ಯಸಿಸಿದ ಒರ್ವ ವ್ಯಕ್ತಿಯು ಇಂದಿನ ಭಾರತದಲ್ಲಿ ಕಳೆದ ಐವತ್ತು ವರ್ಷಗಳಷ್ಟು ಹಿಂದಿದ್ದ ಆದರ್ಶವಾದವು ಉಳಿದಿಲ್ಲ ಎಂದೂ ನಿಜವಾಗಿಯೂ ತಿಳಿದುಕೊಳ್ಳುತ್ತಾನೆ

ಇಂದಿನ ದಿನಗಳಲ್ಲಿ ಶಿಕ್ಷಿತ ಜನಾಂಗದಲ್ಲಿ ನಿರುದ್ಯೋಗವು ಬೆಳೆಯುತ್ತ ಬರುತ್ತಿದೆ. ಬೇರೆ ಬೇರೆ ಜನರ ಪ್ರವೃತ್ತಿಗನುಗುಣವಾದ ವಿಷಯಗಳನ್ನು ಅಭ್ಯಸಿಸುವ ಅವಕಾಶವೊದಗುವಂತೆ ಪಾಠ್ಯಕ್ರಮವನ್ನು ಪರಿವರ್ತಿಸಿಕೊಳ್ಳುವುದೇ ಈ ಮಹಾ ಸಮಸ್ಯೆಯನ್ನು ದೂರೀಕರಿಸಲು ತಾರಕವಾಗಿದೆ.

ನಮ್ಮ ದೇಶವು ವಿಜ್ಞಾನ ಮತ್ತು ಶಿಲ್ಪ ಕ್ಷೇತ್ರದಲ್ಲಿ ಕ್ರಮೇಣ ಪ್ರಗತಿ ಪಡೆಯುತ್ತಾ ಇದೆ. ಸ್ವಾತಂತ್ರ್ಯ ಪ್ರಾಪ್ತ್ಯನಂತರ ನಾವು ಈ ಕ್ಷೇತ್ರದಲ್ಲಿ ಬಹಳ ಮುಂದುವರಿದ್ದೇವೆ. ಸಮಾಜದ ಆರ್ಥಿಕ ಸ್ತರದಲ್ಲಿ ಆದ ಪರಿವರ್ತನೆಯು ಶಿಕ್ಷಣಕ್ಷೇತ್ರದಲ್ಲಿಯೂ ಬದಲಾವಣೆಯ ಅವಶ್ಯವನ್ನು ಮಂಡಿಸಿದೆ. ಇಂದಿನ ಶಿಕ್ಷಣದ ಪ್ರಣಾಲಿಯು ಇಂದಿನ ಸಮಾಜ ರಚನಾ ಕಾರ್ಯದೊಂದಿಗೆ ಹೊಂದಿಕೊಂಡು ಮುಂದುವರಿಯಲು ಅಸಮರ್ಥವಾಗಿದೆ.

ಸರ್ವವರ್ಗಗಳಿಗೂ ಅನಿವಾರ್ಯ ಮತ್ತು ನಿಶ್ಶುಲ್ಕ ಶಿಕ್ಷಣವನ್ನೀಯುವುದು ಅವಶ್ಯ. ನಾವು ವಿಜ್ಞಾನದ ಎಲ್ಲ ಒಳಿತು

(೧೭ನೇ ಪುಟ ನೋಡಿರಿ)

Our Humble Tributes to All Those past and present, who laboured to make this Bank what it is to-day.

THE VIJAYA BANK, LTD.
(A SCHEDULED BANK)

Head Office:
"Vijaya Bank Building"
MANGALORE-3.
ESTD: 1931.

ಹೊಸ ವರುಷ ಸರ್ವತ್ರ ಬೀರಲಿ ಹರುಷ — ಸಿಂಡಿಕೇಟ್ ಬೇಂಕ್

ಕಥಾ ವಿಹಾರ

ನೀಲಾಕಾಶದ ಆಕಾಶ ಬುಟ್ಟಿ

ಮಗುವಿನ ಪ್ರಶ್ನೆಯೊಂದು ಪೂರ್ವಸ್ಮರಣೆ ಮಾಡಿಸಿತು

[ನೀಲಾಕಾಶದಲ್ಲಿ ಹೊರಟಿದ್ದ ಆಕಾಶ ಬುಟ್ಟಿಯನ್ನು ಕಂಡು ಇಂದಿರಾ-ಶೇಖರನ ಮುದ್ದು ಮಗ ಸುರೇಶ "ಅಪ್ಪಾ ನಾಳೆ ನಾವೂ ಆಕಾಶಬುಟ್ಟಿ ಮಾಡಿ ಬಿಡೋಣವೇ?" ಎಂದಾಗ, ಇಂದೂ-ಶೇಖರರು ತಾವು ಚಿಕ್ಕವರಿರುವಾಗ ಕೂಡಿ ಬೆಳೆದುದರ ನೆನಪು ಬಂದಿತು.]

"ಶೇ.. . ಇಂದೂss……" ಎಂದು ಕೂಗಿದ ಶೇಖರ, "ಬಂದೆ" ಎಂದು ಮರುತ್ತರ ಕೊಟ್ಟು, ಓಡುತ್ತ ಬಂದು "ಏನು ವಿಷಯ?" ಎಂದಳು ಇಂದೂ. "ಏನೂ ಇಲ್ಲಕಣೇ ನೀನೇ ಹಿಂದಕ್ಕೆ ಹೇಳಿದಂತೆ ದೀಪಾವಳಿಯ ಕಾಲಕ್ಕೆ ಆಕಾಶ ಬುಟ್ಟಿ ಬಿಡೋಣ ಎಂದಿದಿಲ್ವೆ ಅದಕ್ಕೋಸ್ಕರವೇ ನಾನು, ನಿನ್ನನ್ನು ಕೂಗಿದ್ದು! ಹಾಗಾದರೆ ಈ ದಿನ ಬಿಡೋಣವೇ?" ಎಂದ ಶೇಖರ. "ಅದಕ್ಕೇನು ಸಾಯಂಕಾಲ ಬಿಡೋಣ" ಎಂದು ಹುರಿದುಂಬಿಸಿದಳು ಇಂದೂ.

ಇಂದೂ-ಶೇಖರರು ಬಾಲ್ಯದಿಂದಲೇ ಕೂಡಿ ಬೆಳೆದವರಲ್ಲದೇ, ಕೂಡಿಯೇ ಶಾಲೆಯ ಕಟ್ಟೆ ಏರಿದ್ದರು. ಅವರಿಬ್ಬರಿಗೂ ತುಂಬಾ ಸಲಿಗೆ, ಎತ್ತು ವೈರತ್ವವೂ ಅಷ್ಟೇ!

ಶೇಖರನು ತುಂಬಾ ಹಟಮಾರಿ. ಆದರಂತೆ ಇಂದೂಳದು. ಒಂದೊಂದು ಸಲ ಇಬ್ಬರಿಗೂ ನ್ಯಾಯ ಬಂದಿತೆಂದರೆ ಒಬ್ಬರೂ ಸಹ ಸಹನೆ ತೆಗೆದುಕೊಳ್ಳುತ್ತಿರಲಿಲ್ಲ. ಹೀಗಾಗಿ ಒಂದು ದಿನ, ಶೇಖರ ಗೆಳೆಯರೊಂದಿಗೆ ಮೈದಾನದಲ್ಲಿ ಚಿನಿ-ಪಣಿ ಆಟ ಆಡುತ್ತಿದ್ದಾಗ, ಇಂದಿರಾ ಒಂದು ಮೈದಾನದಲ್ಲಿ ನಿಂತಳು. ಇದನ್ನು ಕಂಡು ಶೇಖಣ್ಣ 'ಇಲ್ಲಿಂದ ತೊಲಗುವೆಯೋ? ಇಲ್ಲೊ?" ಎಂದು ಕೇಳಿದ. "ನೀನು ಬಡಮೇಲಾದರೂ ಪರವಾಯಿಲ್ಲ. ನಾನು ಇಲ್ಲಿಂದ ಕದಲುವದಿಲ್ಲ" ಎಂದು ಗಟ್ಟಿಯಾಗಿ ಹೇಳಿದಳು. ಮೊದಲೇ ತುಂಟ ಶೇಖರ "ಹೋಗುವದಿಲ್ಲವೇ? ನೋಡು" ಎಂದ. 'ಚಿಣಿ'ಯನ್ನು ಬೀಸಿದ ಅದು ಇಂದೂಳ ತಲೆಗೆ ತಾಗಿ; ನೋವಾಗಿ ನೆಲಕ್ಕುರುಳಿದಳು. ಶೇಖರ ಓಡಿಹೋಗಿ 'ಇಂದೂ ತುಂಬಾ ನೋವಾಯಿತೇ? ನನಗೆ ಕೋಪ ಬಂದ್ರೆ ಹೀಗೆಯೇ ನೋಡು ಹೋಗು ಎಂದಾಕ್ಷಣಕ್ಕೆ ಹೋಗಬಾರದೇ" ಎಂದು ಅವಳ ತಲೆಯನ್ನು ತೊಡೆಯ ಮೇಲೆ ಇಟ್ಟು ಗಾಳಿ ಬೀಸುವಾಗ ಹಣೆಯ ಮೇಲೆ ರಕ್ತ ಬರುವದನ್ನು ಕಂಡು ಶೇಖರ ಓಡಿ ಹೋಗಿ ಬಿಟ್ಟ.

ಇಂದೂ ಮನೆಗೆ ಬಂದು ಶೇಖರನ ದೂರು ಒಪ್ಪಿಸಿದಳು. ಶೇಖರನ ತಂದೆಯವರು ಇದನ್ನೂ ಕೇಳಿ ಶೇಖರನ ಮೇಲೆ ಕಿಡಿ, ಕಿಡಿಯಾಗಿ ರುದ್ರಾವತಾರ ತಾಳಿದರು. ಶೇಖರನು ಬಂದ ಮೇಲೆ ಚನ್ನಾಗಿ ಥಳಿಸುವೆನೆಂದು ಇಂದೂನಿಗೆ ಹೇಳಿ 'ಅಳಬಾರದಮ್ಮಾ' ಎಂದು ಘಾಯಕ್ಕೆ ಔಷಧ ಹಚ್ಚಿದರು. ಸಾಯಂಕಾಲದ ವರೆಗೆ ಶೇಖರ ಮನೆಗೆ ಬರಲೇ ಇಲ್ಲ.

ಹನ್ನೆರಡು ಹೊಡೆಯಿತು. ಅದೇ ಆಗ ಎರಡನೇ ಶೋ ಬಿಟ್ಟಿತು. ಶೇಖರ ಆಗ ಮನೆಗೆ ಬಂದು ತಾಯಿಯನ್ನು ಸಾವಕಾಶವಾಗಿ ಕರೆದು "ಶೋss……ಬಾಯಿ ಮಾಡಬೇಡವ್ವಾ ಅಪ್ಪ ಮಲಗಿದ್ದಾರಷ್ಟೇ" ಎಂದ. "ಮಲಗಿದ್ದಾರಪ್ಪ" ಎಂದು ಶೇಖರನಿಗೆ ಉಣಬಡಿಸಿದಳು. ಸದ್ದಿಲ್ಲದೇ ರೂಮಿಗೆ ಹೋಗಿ ಉರಳಿದ.

ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದವು. ಬೇಗ ಎದ್ದು ತಂದೆಗೆ ಬಿಟ್ಟಿಯಾಗದೇ ಹೋಗಬೇಕೆಂದು, ಬೇಗ ಎದ್ದು ಹೋಗುವಾಗಲೇ ಶೇಖರನ ತಂದೆಯವರು ಒಳಕ್ಕೆ ಬಂದೇಬಿಟ್ಟರು. ಶೇಖರನನ್ನು ಕಂಡೊಡನೇ ಮೊದಲು ಶೇಖರನ ಕೆನ್ನೆಗೆ ಎರಡು ಮಾತಾಡಿಸಿಯೇ ಬಿಟ್ಟರು. ಇದಲ್ಲದೇ ಹೀಗೆ ಇನ್ನೊಂದು ಸಲ ಮಾಡಿದರೆ ಮಾವಿನ ಕೊಳ್ಳಕ್ಕೆ ಹಾಕುತ್ತೇನೆಂದು ಬೆದರಿಸಿದರು. ಶೇಖರನು ಇಂದೂನನ್ನು ಮಾತನಾಡಿಸಬಾರದೆಂದು ತೀರ್ಮಾನ ಮಾಡಿದ.

ಸಿರಿಯೂರು. ಶೇಖರನಿಂದ ಹನ್ನೆರಡು ಮೈಲು ಆ ಊರಿನಲ್ಲಿ ಪ್ರತಿ ವರುಷ ಬಸವಣ್ಣ ದೇವರ ಜಾತ್ರೆ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು. ಶಾಲೆಯ ಗುರುಗಳು, ಆ ಜಾತ್ರೆ ನೋಡಲಿಕ್ಕೆ ಹೋಗೋಣವೆಂದು ಹುಡುಗರಿಗೆಲ್ಲ ಹೇಳಿದ್ದರು. ಆದರಂತೆ ಇಂದೂ-ಶೇಖರರು ಆ ಜಾತ್ರೆಗೆ ಹೊರಟರು ಹೋಗುವಾಗ ಇಂದೂ-ಶೇಖರರ ಮನೆಯವರು,—"ಇಬ್ಬರೂ ಜೊತೆಯಾಗಿ ಹೋಗಿ ಜೊತೆಯಾಗಿ ಬನ್ನಿರಪ್ಪಾ, ಅವಳು ಚಿಕ್ಕವಳು. ಜೋಕೆ!" ಎಂದರು. ಶೇಖರ ಸುಮ್ಮನೇ ತಲೆ ಅಲುಗಾಡಿಸಿದ. ಇಂದೂ—ಶೇಖರನನ್ನು ಮಾತನಾಡಿಸಬೇಕೆಂಬ ಇಷ್ಟ. ಆದರೆ ಶೇಖರ ಮಾತನಾಡುವದಿಲ್ಲವಲ್ಲ? ಎಂದು ಸಂಕೋಚ ಬೇರೆ! ಆದರೂ ಸಹ ಶೇಖರ ಆಕೆಯೊಡನೆ ಮಾತನಾಡದೇ ಶಾಲೆಗೆ ಬಂದರು. ಗುರುಗಳು, ಹುಡುಗರಿಗೆಲ್ಲ ಸಿರಿಯೂರಿಗೆ ಕರೆದುಕೊಂಡು ಹೋದರು.

ಸಿರಿಯೂರು ಚಿಕ್ಕದಾದರೂ ಒಳ್ಳೆಯ ಊರು. ಜಾತ್ರೆಗೆಂದು ನಾನಾ ಊರುಗಳಿಂದ ಜನರು ಬಂದಿದ್ದರು, ತುಂಬಾ ಗದ್ದಲ. ಶೇಖರನು, ಸಿರಿಯೂರಿಗೆ ಬಹಳ ಸಲ ಬಂದು ಹೋದುದರಿಂದ ಆ ಊರು ಅವನಿಗೆ ಪರಿಚಯವಿರದೇ ಇರಲಿಲ್ಲ. ಇಂದೂ ಜಾತ್ರೆಯಲ್ಲಿ ತಪ್ಪಿಸಿಕೊಂಡು ಬಿಟ್ಟಿದ್ದಳು. ಅದು ಯಾರಿಗೂ ಗೊತ್ತಿರಲಿಲ್ಲ ಅವರ ತಂದೆ—ತಾಯಿಯ ಹೇಳಿಕೆಯಂತೆ ಮನಸ್ಸಿಲ್ಲವೇ ಇದ್ದಾಳೋ? ಇಲ್ಲವೋ? ಮಹಾರಾಣಿ ಎಂದು ಹೊರಳಿನೋಡುವಾಗ ಇಂದೂ ಇರಲಿಲ್ಲ. ಶೇಖರ ಗಾಬರಿಗೊಂಡು ಊರೆಲ್ಲ ಸುತ್ತ ಹಾಕಿದ. ಗುಡಿಯ ಪಟಾಂಗಣದಾಚೆ ಹಣ ಕಳೆದುಕೊಂಡು ಬಸ್ಸಿಗೆ ಹಣವಿಲ್ಲದ್ದರಿಂದಲೂ ಮತ್ತು ಗುರುಗಳನ್ನು, ಶೇಖರನನ್ನು ತಪ್ಪಿಸಿಕೊಂಡಿದ್ದರಿಂದಲೂ ಅಳುತ್ತಾ ನಿಂತಿದ್ದಳು. ಶೇಖರ ಹಿಂದಿನಿಂದ "ಔss…." ಎಂದು ಹೆದರಿಸಿದ ಅವಳು ಚಟ್ಟನೇ ಹಾರಿ ತಿರುಗಿ ನೋಡಿದಳು……ಶೇಖರ ಎಂದು ಬಿಗಿದಪ್ಪಿದಳು. ಆಗ ಅವಳ ಆನಂದಕ್ಕೆ ಮಿತಿಯೇ ಇಲ್ಲ. ಮತ್ತೆ ಶೇಖರನಿಂದ ಎಲ್ಲಿ ತಪ್ಪಿಸಿಕೊಳ್ಳುವೆನೋ! ಎಂದು ಜಾತ್ರೆ ನೋಡದೇ "ಶೇಖರ ನನಗೆ ಭಯ ಬರುತ್ತೆ ಊರಿಗೆ ಹೋಗೋಣ ನಡೆ" ಎಂದು ಶೇಖರನನ್ನು ಊರಿಗೆ ಕರೆದುಕೊಂಡು ಬಂದಳು.

ಪಂಚಮಿಯ ದಿನ ಇಂದೂ ಕೊಬ್ಬರಿಯ ಬೋಲ ಬಗರಿ ಆಡುತ್ತಿದ್ದರೆ, ಶೇಖರ ಅದನ್ನು ಕಸಿದುಕೊಂಡು ತಿನ್ನುತ್ತಿದ್ದನು. ಅನೇಕ ರೀತಿಯಿಂದ ಜಗಳವಾಡಿ ಕೂಡಿ ಬೆಳೆದವರಾಗಿದ್ದರು.

ಶೇಖರನ ಹೇಳಿಕೆಯಂತೆ ಇಂದಿರಾ ಸಾಯಂಕಾಲ ಬಂದಳು. ಇಬ್ಬರೂ ಜೊತೆಯಾಗಿ ಆಕಾಶಬುಟ್ಟಿ ಮಾಡಿ ಬಿಟ್ಟರು ಅದು ಹೇಗೆ ಮೇಲೆ ಹೋಗಿ ಎಷ್ಟು ಚಂದಾಗಿ ಕಾಣುತ್ತಾ ಹೋದಂತೆ ಇಬ್ಬರೂ ಚಪ್ಪಾಳೆತಟ್ಟಿ ಗಹಗಹಿಸಿ ನಕ್ಕು ಮನೆಗೆ ಹೋದರು.

ಇಂದಿರಾ–ಶೇಖರರು, ಸಾಯಂಕಾಲ 'ವಾಕಿಂಗ್'ಗೆ ಹೋಗಿ ಸರಲಾ ಪಾರ್ಕಿನೊಳಗೆ ಕುಳಿತಾಗ ನೀಲಾಕಾಶದಲ್ಲಿ ಹೊರಟಿದ್ದ ಆಕಾಶಬುಟ್ಟಿಯನ್ನು ಇಂದಿರಾ—ಶೇಖರರ ಮುದ್ದು ಮಗ ಸುರೇಶ "ಅಪ್ಪಾ ನಾಳೆ ನಾವೂ ಒಂದು ಆಕಾಶಬುಟ್ಟಿ ಮಾಡಿ ಬಿಡೋಣವೇ?" ಎಂದಾಗ ಇಂದೂ—ಶೇಖರರು ತಾವು ಚಿಕ್ಕವರಿರುವಾಗ ಮಾಡಿದುದೆಲ್ಲ ನೆನಪಿಗೆ ತಂದು ಗಹಗಹಿಸಿ ನಕ್ಕು ಮನೆಯ ಹಾದಿ ಹಿಡಿದರು.

—ಜಿ. ಚಂದ್ರಶೇಖರ ಹುರಳಿ.



ಬರ್ಕ್ಲೀಯಲ್ಲಿ ಕಟ್ಟಲಾಗುವ ಅಣುಶಕ್ತಿ ಕೇಂದ್ರವಿದು. ಇದು ೧೯೬೧ರ ಸುಮಾರಿಗೆ ಸಂಪೂರ್ಣಗೊಳ್ಳಬಹುದು. ೧೯೬೫ರ ಒಳಗೆ ಇಂತಹ ೧೬ ಅಣುಶಕ್ತಿ ಕೇಂದ್ರಗಳನ್ನು ಬ್ರಿಟನ್ನಿನಲ್ಲಿ ಸ್ಥಾಪಿಸಲಾಗುವುದು.

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಿಮಗೆ ಒಂದು ಕ್ಯಾಬಿನೆಟ್ ಅಗತ್ಯ. ಕಳ್ಳರ, ಹುಳಹುಪ್ಪಟೆಗಳ ಭೀತಿ ಇಲ್ಲದ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು. 3 ಸೈಜುಗಳಿವೆ, ವಿಜೆಟ್, ಪಾಪ್ಯುಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು ಮತ್ತು ಭದ್ರವಾದ ಬೀಗವುಳ್ಳ ಒಳಕೋಣೆಗಳಿವೆ.

ಅಲ್ಲದೆ
ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್,
ಡೆಸ್ಕ್‌ಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು,
ವಿ. ಕೆ ರಾಜ್ ಇಂಡಸ್ಟ್ರೀಸ್, ಅಲಿಘರ್ ಇವರ
ಉತ್ತಮ ಬೀಗಗಳು
ಇವೆಲ್ಲ ಸ್ಟಾಕಿವೆ.
ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.
7 ಲಿವರ್‌ಗಳ ಬೀಗ. ಅದರದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.
ಶೋ ರೂಮನ್ನು ಸಂದರ್ಶಿಸಿ:

ಶಾಸ್ತ್ರೀ ಅಂಡ್ ಕಂಪೆನಿ
ಹಂಪನಕಟ್ಟೆ — — ಮಂಗಳೂರು

The Moolky Bank, Ltd.
MULKI
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮುತ್ತ ಮೇಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಎಂ. ಆರ್. ಎಚ್. ಪೂಂಜ,
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ಇತಿಹಾಸ ಪೃಷ್ಠ

ಆಂಗ್ಲೇಯರೂ ಅತೀವ ಸೋಲೊಪ್ಪಿಕೊಂಡರು!

ಸೇನಾಪತಿ ಬಲಭದ್ರ ಸಿಂಹರ ಅಪ್ರತಿಮ ಪರಾಕ್ರಮ ಪ್ರದರ್ಶನ

ಡೆಹ್ರಾಡೂನಿನ ಸಮೀಪದಲ್ಲಿ ನಡೆದ ಘಟನೆಯಿದು. ೧೮೧೪ರಲ್ಲಿ ಆಂಗ್ಲ ಸೈನಿಕರು ಆಕ್ರಮಿಸಿದ ನೇಪಾಲದ ಐದು ಪ್ರದೇಶಗಳಲ್ಲಿ ಡೆಹರಾಡೂನ್ ಒಂದಾಗಿತ್ತು. ಆ ಕಾಲದಲ್ಲಿ ಸಿಮ್ಲಾ, ನಾಹನ್, ಡೆಹರಾಡೂನ್, ನೈನಿತಾಲ್ ಮೊದಲಾದ ಹೆಚ್ಚಿನ ಪರ್ವತ ಪ್ರದೇಶಗಳು ನೇಪಾಲ ರಾಜ್ಯಕ್ಕೆ ಸೇರಿದ್ದುವು. ಡೆಹರಡೂನಿನತ್ತ ನಡೆದ ಸೇನೆಯ ನಾಯಕತ್ವವನ್ನು ಮೇಜರ್ ಜನರಲ್ ಗಿಲ್ಲಸ್ಪಿ, ಕರ್ನಲ್ ಮಾವಿ ಮತ್ತು ಮೇಜರ್ ಎಲಿಸ್ ಮೊದಲಾದ ಆಂಗ್ಲ ಅನುಭವಿಕ ಸೇನಾಪತಿಗಳು ವಹಿಸಿದ್ದರು. ಇದರಲ್ಲಿ ಮೂರು ಸಾವಿರ ಸೈನಿಕರಿದ್ದರು. ಡೆಹರಡೂನಿನ ರಕ್ಷಣೆಗಾಗಿದ್ದ ನೇಪಾಲದ ಕೇವಲ ಆರುನೂರ ಸೈನಿಕರ ಸೈನ್ಯವು ಜನರಲ್ ಬಲಭದ್ರ ಸಿಂಹರ ನಾಯಕತನದಲ್ಲಿತ್ತು. ಬಲಭದ್ರ ಸಿಂಹರು ನಾಹನಿನ ರಾಜ ಅಮರಸಿಂಹನ ಅಳಿಯನಾಗಿದ್ದರು. ಆಂಗ್ಲ ಸೈನ್ಯವು ಸೇನಾನಿಗಳ ಸಂಖ್ಯೆಯಲ್ಲಿಯೂ ಇತರ ಸನ್ನಾಹಗಳಲ್ಲಿಯೂ ಭದ್ರವಾಗಿದ್ದುದರಿಂದ, ಬಲಭದ್ರ ಸಿಂಹರು ನೇರವಾದ ಯುದ್ಧ ಮಾಡುವುದನ್ನು ಬಿಟ್ಟು ಕೋಟೆಕಾಳಗವನ್ನು ಹೂಡಲು ನಿರ್ಧರಿಸಿದರು. ಇದಕ್ಕಾಗಿ ಡೆಹರಡೂನಿನಿಂದ ನಾಲ್ಕು ಮೈಲು ದೂರದಲ್ಲಿರುವ ನಾಲಾಪಾನಿಯ ಸಮೀಪ ಕಲುಂಗದುರ್ಗದಲ್ಲಿ ಬೀಡು ಬಿಟ್ಟರು. ಈ ಕೋಟೆಯು ಶಾಲ ವೃಕ್ಷಗಳಿಂದ ದಟ್ಟಗಾದ ಎರಡು ಗುಡ್ಡೆಗಳ ಮೇಲೆ ಕಟ್ಟಲ್ಪಟ್ಟಿತ್ತು. ಬಲಭದ್ರಸಿಂಹರು ಈ ಪ್ರಾಕೃತಿಕ ಕೋಟೆಯನ್ನೇ ಕೊಂಚ ಬಲಪಡಿಸಿ ತಮ್ಮ ರಕ್ಷಣೆಯ ಠಾಣ್ಯವನ್ನಾಗಿ ಆರಿಸಿಕೊಂಡರು

ಕಲುಂಗದುರ್ಗವನ್ನು ಆಂಗ್ಲ ಸೈನಿಕರು ನಾಲ್ಕೂ ದೆಸೆಗಳಿಂದ ಮುತ್ತಿದರು. ಸಾಧನಸಂಪನ್ನವಾಗಿರುವ ಮೂರು ಸಾವಿರ ಸೈನಿಕರೆಲ್ಲಿ? ಆರ್ನೂರು ಭಾರತೀಯರ ಸೈನ್ಯವೆಲ್ಲಿ? ಆಂಗ್ಲರ ಸೇನಾಪತಿಯು ಆತ್ಮ ಸಮರ್ಪಣೆ ಮಾಡುವಂತೆ ಬಲಭದ್ರ ಸಿಂಹರಿಗೆ ಹೇಳಿಕಳುಹಿಸಿದನು. "ನಾನು ನಿಮ್ಮನ್ನು ಮುಖತಃ ಭೇಟಿಯಾಗಲು ರಣರಂಗಕ್ಕೆ ಆಗಮಿಸುತ್ತೇನೆ" ಎಂಬ ಉತ್ತರ ಬಂತು. ಬಿಳಿಯ ಅಧಿಕಾರಿಗಳಿಗೆ ಈ ಉತ್ತರವು ಅಪಮಾನಕಾರಕವಾಗಿತ್ತು. ಮರುದಿನ ಮುಂಜಾನೆಗೆ ಮೊದಲೇ ಪರ್ವತಗಳ ಬುಡದಿಂದ ತೋಪುಗಳು ಹಾರಲು ಪ್ರಾರಂಭಿಸಿದುವು. ಆದರೆ ಕೋಟೆಯ ತಲೆಗೂದಲೂ ಇದರಿಂದ ಕಂಪಿಸಲಾರದಾಯಿತು. ಇದರಿಂದಾಗಿ ಸಹಾರನಪುರದ ಮೇಜರ ಜನರಲ್ಲರನ್ನು ಸಹಾಯಕ್ಕಾಗಿ ಆಮಂತ್ರಿಸಲಾಯಿತು. ಅಕ್ಟೋಬರ ೩೧ ರಂದು ಸ್ವಯಂ ಮೇಜರ್ ಜನರಲ್ಲರು ಈ ಪುಟ್ಟ ಕೋಟೆಯನ್ನು ಗೆಲ್ಲುವುದಕ್ಕೆ ಸಹಾಯ ನೀಡಲು ಆಗಮಿಸಿದರು.

ನಾಲ್ಕು ದಿನಗಳಲ್ಲಿ ಪುನಃ ಕೋಟೆಯ ನಾಲ್ಕೂ ನಿಟ್ಟುಗಳಲ್ಲಿ ಆಕ್ರಮಣ ಹೂಡಿ ಗೋಳಿಬಾರು ಮಾಡಲಾಯಿತು. ವೀರರಾದ ಗೂರ್ಖರ ಗೋಲಿಗಳಿಗೆ ಗೋಲಿಗಳ ಮೂಲಕವಾಗಿಯೇ ಉತ್ತರವನ್ನಿತ್ತರು. ಗೂರ್ಖರ ವೀರರಮಣಿಯರು ಸಿಪಾಯಿಗಳಿಗೆ ಆಯುಧ ಸಲಕರಣೆಗಳನ್ನು ಒದಗಿಸುವ ಮತ್ತು ಆಹಾರವನ್ನು ಪೂರೈಸುವ ಗುರುತರವಾದ ಹೊಣೆಯನ್ನು ಹೊತ್ತರು.

ಕೆಲವು ದಿನಗಳ ವರೆಗೆ ಗೋಳಿಬಾರು ನಡೆಯಿತು. ಕೋಟೆಯ ರಕ್ಷಕರು ನಮ್ಮ ನಿರ್ಬಲತೆಯ ಯಾವ ಚಿಹ್ನೆಯನ್ನೂ ತೋರಿಸಿಕೊಡಲಿಲ್ಲ. ಆಂಗ್ಲರ ಧೈರ್ಯ ಉಡುಗಿ ಹೋಯಿತು. ಆಂಗ್ಲ ಸೇನಾಧಿಪತಿಯು ನೇರವಾಗಿ ಆಕ್ರಮಣಗೆಯ್ಯಲು ಆಜ್ಞೆಯಿತ್ತನು. ಆಂಗ್ಲ ಸೇನಾನಿಗಳು ಕೋಟೆಯ ಗೋಡೆಯ ಸಮೀಪಕ್ಕೆ ಬರತೊಡಗಿದರು. ಆದರೆ, ಕಾಲುಕಿತ್ತ ಆಂಗ್ಲ ಸೈನಿಕರು ಗೂರ್ಖರ ಗುಂಡಿನ ಗುರಿಗಾಹುತಿಯಾಗುತಿದ್ದರು. ನಿಯಂತ್ರಣದಿಂದ ಒಂದಾಗಿ ಹೋರಾಡಲು ಆಂಗ್ಲೇಯರರಿತಿದ್ದರು; ಆದರೆ, ಮೃತ್ಯುವಿನೊಡನೆ ಹೋರಾಟ ಸಲ್ಲುವುದೆ? ತಮ್ಮ ಮುಂದೆ ಬಂದವರ ದುರವಸ್ಥೆಯನ್ನು ಕಂಡು ಅವರು ಹಿಂಮುಳಿಯತೊಡಗಿದರು. ಮೇಜರ ಗಿಲ್ಲಸ್ಪಿ ಮತ್ತು ಎಲಿಸರು ಬಹು ಪ್ರಯತ್ನಿಸಿದರೂ ತಮ್ಮವರ ಹಿಂದಿಟ್ಟ ಹೆಜ್ಜೆಯನ್ನು ಮುಂದಿಡಿಸಲಾಗಲಿಲ್ಲ. ಅನ್ತರಲ್ಲಿ ಲೆಫ್ಟನೆಂಟ್ ಎಲಿಸನು ಕೆಲವು ಸೈನಿಕರೊಡನೆ ಕೋಟೆಯ ಮಹಾದ್ವಾರವನ್ನು ಮುತ್ತಲು ಹವಣಿಸಿದನು. ಆ ಸೈನಿಕರು ಅಲ್ಲಿಯೇ ದ್ವಾರದ ಸಮೀಪವಾಗಮಿಸುವಾಗ, ಒಳಗಿನಿಂದ ತೂರಿಬಂದ ಗುಂಡಿಗೆ ಆಹುತಿಯಾದರು. ಸೈನಿಕರಲ್ಲಿ ಕೋಲಾಹಲವೆದ್ದಿತು. ಆದರೆ, ಸೇನಾಪತಿಯ ಬಯಕೆ ಮಾತ್ರ ನಿಲ್ಲಲಿಲ್ಲ

ಕರ್ನಲ್ ಮಾಬಾರ್ಟನು ಸಾಧಾರಣ ತೋಪುಗಳಿಂದ ಕಲುಂಗ ದುರ್ಗವನ್ನು ಸೋಲಿಸುವುದು ಅಶಕ್ತವೆಂದು ಮನಗಂಡು ಗೋಡೆ ಒಡೆಯುವ ಮಹಾ ತೋಪುಗಳನ್ನು ಒದಗಿಸುವಂತೆ ದಿಲ್ಲಿಗೆ ವಿನಂತಿ ಕಳಿಸಿದನು. ಈ ತೋಪುಗಳು ಬಂದು ಅವನ ಕೈಗೆ ದೊರೆಯಬೇಕಾದರೆ, ಒಂದು ಮಾಸವೇ ಬೇಕಾಯಿತು. ಆ ಮೇಲೆ ಆಕ್ರಮಣವು ಪ್ರಾರಂಭವಾಯಿತು; ಆದರೆ, ಸಂಪೂರ್ಣ ನಿಷ್ಫಲವೆನಿಸಿತು.

ಈ ಹೊತ್ತಿಗೆ ದುರ್ಗ ರಕ್ಷಕರ ಸಂಖ್ಯೆಯು ೬೦೦ರಿಂದ ೭೦ ಯಾ ಅಂಕ್ಕೆ ಇಳಿದಿತ್ತು. ಕೆಲವರು ಗುಂಡಿಗೆ ಬಲಿಬಿದ್ದಿದ್ದರು; ಇನ್ನು ಕೆಲವರು ನೀರಿನ ಅಭಾವದಿಂದ ಮಡಿದಿದ್ದರು. ಕೋಟೆಯೊಳಗೆ ನೀರು ಬರುವಂತಹ ವಿಧಾನ ಒಂದೇ ಒಂದಾಗಿತ್ತು. ಪರ್ವತಗಳ ಕೆಳಗೆ ಹರಿಯುವ ನದಿ ನೀರನ್ನು ಗಡಿಗೆಗಳ ಮೂಲಕ ಮೇಲೊಯ್ಯಬೇಕಾಗಿತ್ತು; ಆದರೆ, ಆ ನದಿಯೂ ಆಂಗ್ಲರ ಹಿಡಿತದಲ್ಲಿತ್ತು. ಆದುದರಿಂದ ನೀರು ಕೋಟೆಯ ಮೇಲೆ ಹೋಗುವುದು ತೀರ ಅಸಂಭವವೆನಿಸಿತ್ತು. ಹೀಗಾಗಿ ಬಲಭದ್ರ ಸಿಂಹರಿಗೆ ಎರಡೇ ಉಪಾಯವಿದ್ದುವು: ಆಂಗ್ಲೇಯರ ಸಮಕ್ಷಮದಲ್ಲಿ ವೀರಾವೇಶದಿಂದ ಆಯುಧಪಾಣಿಗಳಾಗಿ ಹೋರಾಡುವುದು ಇಲ್ಲವೇ ಅವರೊಡನೆ ಒಪ್ಪಂದಮಾಡಿಕೊಳ್ಳುವುದು. ಕಂಗಾಲರಾದ ೭೦ ಸೈನಿಕರು ಮತ್ತು ಆಯುಧ ಸಾಧನ ಸಂಪನ್ನರಾದ ವಿಪುಲ ಆಂಗ್ಲ ಸೈನ್ಯಗಳ ಹೊಂದಾಣಿಕೆ ಹೇಗಾಗಬೇಕು? ಆದರೆ, ಬಲಭದ್ರ ಸಿಂಹರು ಮಾಡಿದ ನಿರ್ಣಯಕ್ಕೆ ವಿಶ್ವೇತಿಹಾಸದಲ್ಲಿ ಪ್ರತ್ಯುದಾಹರಣೆಯೆಂಬುದಿಲ್ಲ.

೩೦ನೆ ನವಂಬರದಂದು ಆಂಗ್ಲ ಸೈನ್ಯವು ಕೋಟೆಯತ್ತ ಅಂತಿಮ ಯಾತ್ರೆಯನ್ನು ಮಾಡಲು ತಯಾರಾಗುತಿತ್ತು. ಇವರು ನೋಡುತ್ತಿರುವಂತೆಯೇ ಕಲುಂಗದುರ್ಗದ ಮಹಾ ಲೋಹದ್ವಾರವು ತೆರೆಯಿತು, ತನ್ಮೂಲಕ ಏಕರೂಪದ ೭೦ ಜನ ಸೈನಿಕರು ಹೊರಬಂದರು. ಎಲ್ಲರ ಕೈಯಲ್ಲಿಯೂ ತೆರೆದ ನಿಶಿತ ಖಡ್ಗ, ತಲೆಯಲ್ಲಿ ಭದ್ರವಾದ ಶಿರಸ್ತ್ರಾಣ ಮತ್ತು ಸೊಂಟದಲ್ಲಿ ಕಠಾರಿಗಳಿದ್ದುವು. ಎತ್ತಿನ ತಲೆ, ಸಿಂಹಸಮಾನ ದೃಷ್ಟಿ, ಪ್ರಸನ್ನ ಮುಖಗಳ ಮೂಲಕ ನಿರ್ಭಯತೆಯ ವರ್ಷವನ್ನು ಸುರಿಸುತ್ತಿರುವ ಸೇನಾಪತಿ ಬಲಭದ್ರಸಿಂಹರು ಎಲ್ಲರಿಗಿಂತ ಮುಂದಿದ್ದರು. ಇವರು ಹೊರಬರುವ ರಭಸದಲ್ಲಿ ಆಂಗ್ಲೇಯರ ಪ್ರಾಣಪಕ್ಷಿಯು ತೇಲಿ ಹೋಯಿತು. ಗೂರ್ಖರನ್ನು ತಡೆದು ನಿಲ್ಲಿಸುವ ಪ್ರಯತ್ನವನ್ನೂ ಮಾಡದೆ ಸ್ತಂಭಿತರಾಗಿ ಮಿಕಮಿಕನೆ ನೋಡತೊಡಗಿದರವರು. ೭೦ ಗೂರ್ಖಾ ಸೈನಿಕರು ಆಂಗ್ಲೇಯರ ಎದುರಲ್ಲೇ ಹಾರಿ ದೂರವಾಗಿ ಬೆಟ್ಟಗಳ ತಳದಲ್ಲಿ ಹರಿಯುತಿದ್ದ ತೋಡುಗಳಲ್ಲಿ ಯಥೇಚ್ಛ ನೀರನ್ನು ಕುಡಿದು ದಟ್ಟಗಾದ ಅರಣ್ಯ ಮಧ್ಯದಲ್ಲಿ ಲೀನವಾಗಿ ಹೋದರು. ಹೀಗೆ ಸೇನಾಪತಿ ಬಲಭದ್ರಸಿಂಹ ಮತ್ತವರ ಹಿಂಬಾಲಕರು ಆಂಗ್ಲೇಯ ಸೈನಿಕರ ತಲೆಯನ್ನು ಮೆಟ್ಟಿ, ತಮ್ಮನ್ನು ಉಳಿಸಿಕೊಂಡರು. ಯಾವನೇ ಸಿಪಾಯಿಯ ತಲೆ ಕೂದಲೂ ಕೊಂಕಾಗಲಿಲ್ಲ. ಪ್ರಪಂಚದಲ್ಲಿ ಅನೇಕ ಸಾಹಸಗಳು ನಡೆಯುತ್ತವೆ, ಆದರೆ ಇದಕ್ಕೆ ಮಾತ್ರ ಅವು ಸಮ ಜೋಡಿಯಾಗಲಾರವು. ಆದರೆ, ನಮ್ಮ ದೇಶದ ಇತಿಹಾಸದಲ್ಲಿ ಕಲುಂಗ ದುರ್ಗದ ಹೋರಾಟವು ಉಚಿತ ಸ್ಥಾನವನ್ನು ಮಾತ್ರ ಪಡೆದಿಲ್ಲವೆಂಬುದು ಶೋಚನೀಯ.

ಬಲಭದ್ರಸಿಂಹರ ವೀರ್ಯ, ಧೈರ್ಯಗಳಿಂದ ಮಂತ್ರಮುಗ್ಧರಾದ ಆಂಗ್ಲರು ರೀಶಯುತಾ ನದಿಯ ತಟದಲ್ಲಿ ಅವರ ಸ್ಮಾರಕವೊಂದನ್ನು ರಚಿಸಿದ್ದು ಇದು ಅವರ ಪರಾಕ್ರಮದ ಚಿರನೆನಪಿಗಾಗಿ ಉಳಿದುಕೊಂಡಿದೆ.

ನೇಪಾಲ ಕದನವು ಸುಮಾರು ಎರಡು ವರ್ಷಗಳ ಕಾಲ ನಡೆಯಿತು. ಕೆಲವೊಮ್ಮೆ ಆಂಗ್ಲೇಯರ ಕೈ ಮೇಲಾದರೆ, ಇನ್ನು ಕೆಲವೊಮ್ಮೆ ನೇಪಾಲೀಯರು ಗೆಲ್ಲುತಿದ್ದರು. ಆದರೂ ನೇಪಾಲಿಗಳು ಹಲವಾರೆಡೆ ಜಯಶೀಲರಾಗಿದ್ದಾರೆ. ಕೊನೆಗೆ, ೧೮೧೬ರಲ್ಲಿ ಸೈಗೋಲಿ ಎಂಬಲ್ಲಿ ಇಕ್ಕಡೆಯವರಿಗೂ ಒಪ್ಪಂದದ ಬಗ್ಗೆ ಹಸ್ತಾಕ್ಷರವಾಯಿತು. ಈ ಸಂಧಿಯನ್ವಯ ನೇಪಾಲಿಗಳ ಸ್ವಾತಂತ್ರ್ಯವನ್ನು ಆಂಗ್ಲೇಯರು ಒಪ್ಪಿಕೊಳ್ಳಲೇ ಬೇಕಾಯಿತು.

ಬೇಂಕ್ ಆಫ್ ಇಂಗ್ಲೆಂಡಿನ ಗವರ್ನರರಾದ ಶ್ರೀ ಸಿ. ಎಫ್. ಕಬ್ಬೋಲ್ಡರು.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್
(ಸ್ಥಾಪನೆ: ಮಾರ್ಚ 12, 1906)
ಪ್ರಧಾನ ಕಚೇರಿ, ಉಡುಪಿ (ದ. ಭಾರತ)

ನೋವುಗಳ ಅತ್ಯುತ್ತಮ ಸಂಹಾರಿಣಿ
AMRUTANJAN
ಅಮೃತಾಂಜನ

ದೇಶಾಚಾರ

ದೇಶಾಚಾರವೇ ಸುಖಜೀವನಕ್ಕೆ ದಾರಿ

ಸ್ವಾಮಿತ್ರಯರಿಂದ ಧಾರ್ಮಿಕ ಜೀವನದ ಪ್ರತಿಪಾದನೆ

ನಮ್ಮ ಭಾರತ ದೇಶವು ಪುಣ್ಯಭೂಮಿ ಮಾನವ ಜನಾಂಗವು ಸ್ವಯಂ ಬಂದು ಈ ಮಣ್ಣಿನಲ್ಲಿ ನೆಲಸಿ ನಾಗರಿಕವಾಯಿತು. ನಮ್ಮ ಇಂದಿನ ಭಾರತವು ಸ್ವತಂತ್ರವಾಗಿದೆ. ಅದರ ಸರ್ವತೋಮುಖ ಗೌರವಕ್ಕೆ ಹೆಣಗಾಡುವುದು ನಮ್ಮೆಲ್ಲರ ಕರ್ತವ್ಯ.

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂಬ ಮಾತು ಇದೆ. ನಮ್ಮ ರಾಷ್ಟ್ರವು ಸುದೃಢವಾಗಿ ಬೆಳೆದು ಬಂದರೆ ಮಾತ್ರ ನಾವೂ ಹೆಮ್ಮೆಪಟ್ಟುಕೊಳ್ಳಬಹುದು. ಅದರ ಉನ್ನತಿಯೇ ನಮಗೆ ಸುಖಜೀವನದ ಹೆದ್ದಾರಿಯಾಗುವುದು. ಆದ್ದರಿಂದ, ನಮ್ಮ ದೇಶದ ಕಡೆಗೂ ಅನುಪಮ ಪ್ರೀತಿಯಿರುವುದೂ, ಆ ಭಾವನೆಯು ಬೆಳೆಯುವುದೂ ಆವಶ್ಯಕವಾದುದು.

ದೇಶಭಕ್ತಿ ಯೆಂದರೇನು? ಈ ದೇಶದ ಮಣ್ಣಿಗೆ ದೃಢವಾಗಿ ಅಂಟಿ ಕುಳಿತಿರುವುದಷ್ಟೇ ದೇಶಭಕ್ತಿಯಲ್ಲಿ ಭಾವಶುದ್ಧಿಯಲ್ಲಿ ಸ್ಥೂಲ ವಿಶ್ವಾಸ ಸ್ವಾತಂತ್ರ್ಯದಲ್ಲಿ ವಿಶ್ವಾಸವನ್ನಿಡುವುದೇ ದೇಶಭಕ್ತಿಯಲ್ಲ. ನಮ್ಮ ದೇಶವನ್ನು ನಮ್ಮೆಲ್ಲರ ತಾಯಿಯೆಂದು ತಿಳಿಯುವುದು ಮತ್ತು ಪೂಜಿಸುವುದು ಮಾತ್ರ ಸಾಲದು. ಪ್ರತಿ ದೇಶಕ್ಕೂ ಬಾಹ್ಯ ಹಿರಿಮೆಯಿರುವುದು. ಇದಕ್ಕೆ ದೇಶಾಚಾರವೆನ್ನುತ್ತಾರೆ. ಹಿರಿಯರದನ್ನು ಭಾರತೀಯ ಸಂಸ್ಕೃತಿಯೆನ್ನುತ್ತಾರೆ. ಇದು ವಿವರಿಸಲಸಾಧ್ಯವೆನಿಸಿದ ಗುಣಧರ್ಮವಾಗಿದೆ. ಆದರೆ, ರಾಷ್ಟ್ರದ ವಿದ್ಯಾರ್ಥಿಗಳು ಇದನ್ನು ಸುಲಭದಲ್ಲಿ ಅರ್ಥವಿಸಿಕೊಳ್ಳಬಲ್ಲರು. ಪರಮಾತ್ಮ ಕಟಾಕ್ಷದಡಿಯಲ್ಲಿರುವ ನೈತಿಕ ಮಾರ್ಗವಿದಾಗಿದೆ. ಸಹಸ್ರಾರು ಸಹಸ್ರ ವರ್ಷಗಳಿಂದ ನಮ್ಮ ಪೂರ್ವಜರು ಇದನ್ನು ರಚಿಸಿ ಅನುಸರಿಸಿಕೊಂಡು ಬಂದಿದ್ದಾರೆ. ಇದು ಅಮೌಲ್ಯ ಪರಂಪರೆಯಾಗಿದೆ. ಕಾಲಾಗ್ನಿಯಿಂದಮ ಒಪ್ಪವಿಟ್ಟ ದಿವ್ಯವಾದ ಐಶ್ವರ್ಯವಾಗಿದೆ. ನಿರ್ಮಲವಾದ ಮತ್ತು ಭವ್ಯವಾದ ಜೀವನ ಮಾರ್ಗವಾಗಿದೆ. ನೈಜ ದೇಶಭಕ್ತಿಯು ಒದುಳುವುದು; ಮತ್ತು ಬೆಳೆಯುತ್ತ ಹೋಗುವುದು. ದೇಶಾಚಾರಕ್ಕೆ ಹೊಂದಿಕೊಂಡ ಜೀವನವು ಭಾರತೀಯ ರಾಷ್ಟ್ರವಿಡಿಯನ್ನೂ ಎತ್ತಬಲ್ಲುದು.

ದೇವರಲ್ಲಿ ವಿಶ್ವಾಸ ಮತ್ತು ಧರ್ಮಾವಲಂಬನೆಯೆಂಬ ಅವಳಿಜವಳಿ ಹಿರಿಮೆಯಿರುವಂತೆ ಭಾರತೀಯ ಸಂಸ್ಕೃತಿಯು ನಿರ್ಮಿತವಾಗಿದೆ ಇವುಗಳಲ್ಲಿಯೇ ರಾಷ್ಟ್ರವನ್ನು ಪಾಲಿಸುವ ಮೂಲ ತತ್ವವು ನಿರ್ಮಾಣಗೊಂಡಿದೆ. ಜನತೆಯ ನೈತಿಕ ನಡತೆಯ ಸಾರಸರ್ವಸ್ವವನ್ನು ಹೀರಿಕೊಂಡಿದೆ ಇದು ಎಲ್ಲೆಡೆಯೂ ಕಾರ್ಯಶೀಲರಾಗುವುದೇ ನಮ್ಮ ಜೀವಮಾನದಲ್ಲಿ ಕಂಡು ಬರುವ ಈ ಸಂಸ್ಕೃತಿಯ ಫಲವಾಗಿದೆ. ಇವುಗಳ ದಾರಾಳತೆ ಇಲ್ಲವೇ ಕೊರತೆಯನ್ನೇ ನಮ್ಮ ಉನ್ನತಿ ಇಲ್ಲವೇ ಅವನತಿಯು ಹೊಂದಿಕೊಂಡಿದೆ. ಈ ರೀತಿಯ ಜೀವನವು ಸಾರ್ವತ್ರಿಕವಾಗಿದೆ. ಇದರಿಂದಾಗಿಯೇ ನಮ್ಮ ಹಿಂದಿನ ಪರಂಪರೆಯವರು ಯಾವುದೇ ಭಿನ್ನವಿಧವನ್ನು ನಿರೂಪಿಸದೆ, ಇದನ್ನು ಧರ್ಮವೆಂದೇ ಕರೆದಿದ್ದಾರೆ. ಧರ್ಮವೆಂಬುದು ಅನಂತ ಮತ್ತು ಶಾಶ್ವತ. ಅದರ ಮೂಲ ತತ್ವಗಳು ಅವಿಕಾರಿಗಳಾಗಿವೆ. ಕಾಲದ ಪ್ರಭಾವಕ್ಕನುಗುಣವಾಗಿ ಆಗಾಗ ಕೊಂಚ ಹೊಂದಾಣಿಕೆಗಳು ಮಾತ್ರ ಅವಶ್ಯವೆಂದು ಕಂಡುಬರಬಹುದು. ಆದರೆ, ಮೂಲತತ್ವಗಳಲ್ಲಿ ಮಾತ್ರ ಯಾವುದೇ ವಿಪರ್ಯಾಸವಾಗುವುದಿಲ್ಲ. ಪ್ರತ್ಯೇಕ ಆಚರಣೆಗಳಿದ್ದ ಮಾತ್ರಕ್ಕೆ ಮೂಲ ಪ್ರಕೃತಿಯು ಭಿನ್ನ ಭಿನ್ನವೆಂದು ತಿಳಿಯಬಾರದು.

ನಮ್ಮ ಹಿಂದೂ ಧರ್ಮದಲ್ಲಿರುವಂತೆ ಸದಾಕಾಲವೂ ಪ್ರೀತಿಯೇ ಎಲ್ಲ ಧರ್ಮಗಳ ಸಾರ. ಒಬ್ಬನೇ ಪರಮಾತ್ಮನಿರುವನು, ನಾವು ಅವನನ್ನು ಬೇರೆ ಬೇರೆ ಹೆಸರಿನಿಂದ ಪೂಜಿಸುತ್ತೇವೆ. ಆತನನ್ನು ತಲುಪುವಂತೆ ಮಾಡುವ ಹಲವು ಮಾರ್ಗಗಳಿವೆ. ಹಿಂದುವಾದವನಿಗೆ ಅವನ ಪೂರ್ವಜರು ಪೂಜಿಸಿದ ಮಾರ್ಗದಲ್ಲಿಯೇ ಪೂಜಿಸುವುದು ಉಚಿತವಾದುದು. ಪೂಜೆಯಲ್ಲಿ ಭಿನ್ನ ವಿಧಾನಗಳು ತೋರಿ ಬಂದು, ನಮ್ಮ ಹಿರಿಯರು ಅವನ್ನು ಸ್ವೀಕರಿಸಿದ್ದಾರೆ. ಇದರಲ್ಲಿ ಉನ್ನತಿಕೆ ಇಲ್ಲವೇ ಅವನತಿಕೆಯ ಪ್ರಶ್ನೆಯಿಲ್ಲ. ಪರಂಪರಾ ಪ್ರಾಪ್ತ ಕ್ರಮದಲ್ಲಿ ಪರಿಶುದ್ಧ ಹೃದಯದಿಂದ ಆರಾಧಿಸುವುದಷ್ಟೆ ಮುಖ್ಯ. ಶಾರೀರಿಕ ಪರಿಶುದ್ಧತೆಯಂತೆಯೇ ಮಾನಸಿಕ ಶುದ್ಧಿಯೂ ಅಗತ್ಯ. ಪರಮಾತ್ಮನನ್ನು ಮನೆಯಲ್ಲಿಯೇ ಪೂಜಿಸಬಹುದು ಆದರೆ, ದೇವಾಲಯಗಳ ಮೂಲಕ ಕ್ರಮಪ್ರಾಪ್ತವಾಗಿ ಈ ಆರಾಧನೆಯನ್ನು ನಡೆಸಲಾಗಿದೆ. ಎಲ್ಲರೂ ಪ್ರತಿ ನಿತ್ಯವೂ ಪರಮಾತ್ಮನ ಧ್ಯಾನಕ್ಕಾಗಿ ಕೊಂಚ ವೇಳೆಯನ್ನು ಮೀಸಲಿಡುವುದು ಅವಶ್ಯ. ದೇವಾಲಯಗಳಲ್ಲಿಯೂ ಇತರ ಸಮಾಜ ಕೇಂದ್ರಗಳಲ್ಲಿಯೂ ಭಜನೆಯು ನಡೆಯಬೇಕು. ಪರಂಪರೆಯಿಂದ ಬಂದ ಎಲ್ಲ ಅನುಷ್ಠಾನಗಳನ್ನು ಎಲ್ಲರೂ ತಪ್ಪದೆ ಅನುಸರಿಸಬೇಕು. ಹಿರಿಯರೆಡೆಗೆ ಗೌರವ, ಕಿರಿಯರಲ್ಲಿ ಪ್ರೀತಿ, ಎಲ್ಲರಲ್ಲಿಯೂ ಕರುಣೆ ಎಂಬುವು ನಡತೆಯ ಸಾಮಾನ್ಯ ವಿಧಾನವಾಗಿದೆ. ಈ ಗುಣವನ್ನು ಎಳೆತನದಿಂದಲೇ ಸಂಪಾದಿಸಬೇಕು. ದೇವರಲ್ಲಿ ಸಂಪೂರ್ಣ ವಿಶ್ವಾಸವಿದ್ದ ಪಕ್ಷದಲ್ಲಿ ಎಲ್ಲವೂ ಸುಸೂತ್ರವಾಗಿ ಸಾಗುವುದು.

ಪರಮಾತ್ಮ ಪೂಜೆಯೊಡನೆಯೇ ಜೀವಂತ ತತ್ವಗಳು ಪ್ರವರ್ತನಗೊಳ್ಳುವುವು. ನಡತೆಯಿಂದಲೇ ಒರ್ವ ವ್ಯಕ್ತಿ ಅಥವಾ ರಾಷ್ಟ್ರವು ಗೌರವಕ್ಕೆ ಅರ್ಹವಾಗಬಹುದು. ನಿಯಮಬದ್ಧ ಜೀವನವನ್ನು ಬಾಳಿದ ನಮ್ಮ ಹಿರಿಯರ ಕೆಲವು ಉತ್ತಮ ಗುಣಗಳನ್ನು ನಾವು ಪಡೆಯಬೇಕು. ಯೋಗ್ಯಾಭ್ಯಾಸ, ಉತ್ತಮ ಮಿತ್ರತ್ವ, ನಿಯಮಬದ್ಧ ಗೃಹಜೀವನ, ಹಿರಿಯರ ಒಡನಾಡಿತನಗಳಿಂದ ನಾವು ಇತರ ಗುಣಗಳನ್ನು ಸಂಪಾದಿಸಬೇಕು. ಈ ಭೂಮಿಯಲ್ಲಿ ಜೀವಿಸುವುದೆಂಬುದು ಮಹಾಪುಣ್ಯಪ್ರದವಾದುದು. ಪರಮಾತ್ಮ ಪೂಜೆಯಿಂದ ಈ ಭೂಮಿಯಲ್ಲಿ ಹೇಗೆ ಜೀವಿಸಬೇಕು ಮತ್ತು ಅದರ ಸಂಪೂರ್ಣ ಪ್ರಯೋಜನವನ್ನು ಹೇಗೆ ಪಡೆಯಬೇಕು ಎಂದು ತಿಳಿಯುತ್ತದೆ. ನಮ್ಮ ಹೃದಯದಲ್ಲಿ ಪರಮಾತ್ಮನು ವಾಸಿಸುವನೆಂದು ತಿಳಿದುಕೊಂಡರೆ, ನಾವು ಪಾಪಕೃತ್ಯವನ್ನು ಮಾಡಲು ಹಿಂಜರಿಯುವೆವು. ಎಲ್ಲ ಜೀವಿಗಳಲ್ಲಿಯೂ ಆತನು ನೆಲಸಿರುವನೆಂದು ಅರಿತುಕೊಂಡಾಗ, ಎಲ್ಲರ ಮೇಲೆಯೂ ಪ್ರೀತಿ ಹಾಗೂ ಕರುಣೆಯು ಸದಾ ಪ್ರವಹಿಸುವುದು. ಪ್ರೀತಿಯಿಂದಲೇ ಎಲ್ಲರನ್ನೂ ಗೆಲ್ಲಬಹುದು. ದುರಾಲೋಚನೆ, ದುರ್ವಾಕ್ಯ ಮತ್ತು ದುಷ್ಕೃತ್ಯಗಳಿಂದ ಉಂಟಾಗುವ ಹಾನಿಗಳಿಂದ ಉಳಿದುಕೊಳ್ಳಲು ಇದೇ ಸಾಧನ ಮಾನವ ಜೀವಿಯು ಪವಿತ್ರನಾಗಿರುವಲ್ಲಿ ಸಮಾಜವು ಸುಖಪ್ರದವೂ ಅಭಿವೃದ್ಧವೂ ಆಗುವುದು. ನಮ್ಮ ಶ್ರೇಯಸ್ಸಿಗೆ ಪರಮಾತ್ಮನಲ್ಲಿ ವಿಶ್ವಾಸ ಮತ್ತು ಕ್ರಮಪತ್ತಾಗಿರುವ ಪೂಜೆಗಳೇ ಮೂಲತತ್ವಗಳೆಂದು ನಮ್ಮ ಹಿರಿಯರು ಈ ಕಾರಣದಿಂದಲೇ ತಿಳಿದುಕೊಂಡಿದ್ದಾರೆ.

ಪರಮಾತ್ಮೋಪಾಸನೆಯಂತೆಯೇ ಧಾರ್ಮಿಕ ಜೀವನ ನಡೆಸುವುದೂ ಅಗತ್ಯ. ವೇದ ಉಪನಿಷತ್ತುಗಳು, ಇತಿಹಾಸಗಳು, ಪುರಾಣಗಳು, ಆಳ್ವಾರರ ಮತ್ತು ನಯನ್ಮಾರರ ದಿವ್ಯೋಕ್ತಿಗಳು, ತಿರುಕ್ಕುರಲ್ ಎಲ್ಲ ಉತ್ತಮ ಸಾಹಿತ್ಯ ಕೃತಿಗಳು ಮತ್ತು ಸರ್ವ ಮಹಾಪುರುಷರ ಜೀವನಕ್ರಮ, ಅನುಭವಗಳೆಲ್ಲವೂ ಈ ಮೂಲ ಚಿರಸತ್ಯವನ್ನು ಪ್ರತಿಪಾದಿಸುತ್ತವೆ. ಮಾನವ ಇಲ್ಲವೇ ಸಮಾಜವು ವರ್ಧನೆಯತ್ತ ಸಾಗಬೇಕಾದರೆ, ದಿವ್ಯವಾದ ಬದುಕನ್ನು ಬಾಳುವ ಧರ್ಮದಿಂದಲೇ ಸಹಾಯವು ಬರಬೇಕು. ದೇವತ್ವದಿಂದ ಬರುವ ಶಕ್ತಿಯಿಲ್ಲದೆ ಹೀಗೆ ಮಾಡಲಾಗದು. ಇದರಿಂದಲೇ ನಮ್ಮ ಹಿರಿಯರು ನಮಗೆ ಗುಣನಡತೆಯ ಗೀಟನ್ನು ಹಾಕಿಕೊಟ್ಟಿದ್ದಾರೆ. ಅವರು ನಾವು ಮಾಡಬೇಕಾದ, ಮಾಡಬಾರದ ಕಾರ್ಯಗಳನ್ನು ಎತ್ತಿ ತಿಳಿಸಿದ್ದಾರೆ. ನಾವು ಈ ನಿಯಮಕ್ಕೆ ಸರಿಯಾಗಿ ನಡೆದರೆ ಅಖಿಲ ಸಮಾಜವೇ ಲಾಭ ಹೊಂದುವುದು.

ವಿದ್ಯಾರ್ಥಿಯು ಮುಂದಿನ ನಾಗರಿಕ. ಅವನು ತನ್ನ ಜ್ಞಾನಕೋಶವನ್ನೂ ದೇಹದಾರ್ಢ್ಯ, ಗುಣಗಳನ್ನೂ ಶಾಲೆಯಲ್ಲಿರುವಾಗಲೇ ಕಟ್ಟಿಕೊಳ್ಳಬೇಕು. ಅವನು ಅಭ್ಯಾಸದಲ್ಲಿ ತಲ್ಲೀನನಿರಬೇಕು. ಅದರಿಂದ ಬಾಲಕನ ಮನಸ್ಸು ವಿಚಲಿತಗೊಳ್ಳಬಾರದು. ಬಾಲ್ಯ ಮತ್ತು ಯೌವನದಲ್ಲಿ ಆರ್ಜಿಸಿದ ವಿದ್ಯೆ ಎಂದೆಂದಿಗೂ ಸ್ಥಿರವಾಗಿರುತ್ತದು "ತೊಟ್ಟಿಲಲ್ಲಿ ಗಳಿಸಿದುದು ಮಸಣದವರೆಗೂ ಉಳಿಯುವುದು" ಎಂದೊಂದು ಹಳೆಯ ಗಾದೆಯಿದೆ. ಸತ್ಯವು ಪವಿತ್ರವೂ ಸಂಶ್ರೇಷ್ಠವೂ ಆಗಿವೆ. ಉತ್ತಮ ಗುಣ ಅವಿರತ ಅಭ್ಯಾಸಗಳು ಮಾನವನ ಜೀವನ ಭವನಕ್ಕೆ ಪಂಚಾಂಗ ಹಾಕುತ್ತವೆ. ಹೆತ್ತವರು, ಅಧ್ಯಾಪಕರು, ಸಾಮಾಜಿಕ ಮುಖಂಡರು ಮತ್ತು ಆಳುವ ಅಧಿಕಾರಿಗಳು—ಇವರೆಲ್ಲರೂ ಇಂತಹ ಅವಕಾಶ

(೯ನೇ ಪುಟ ನೋಡಿರಿ).


ನಿಮ್ಮ ಮನೆಯಲ್ಲಿಯೇ ಡೆಲಿವ್ಹರಿ ಪಡೆಯಿರಿ.

ಪ್ರತಿವರ್ಷ, ಪ್ರತಿಪ್ರಸಂಗ, ಯಾವದೇ ಕಾಲ ನಮ್ಮ ನಾಟಕದ ಸಾಮಾನುಗಳಲ್ಲಿ ಹೊಸ ಹೊಸ ವೈವಿಧ್ಯ ಕಾಣುವಿರಿ. ನಿಮ್ಮ ಪೂರ್ಣವಿಳಾಸ ಕೊಟ್ಟು ನಮಗೆ ಬರೆದಲ್ಲಿ ನಮ್ಮ ಉಚಿತ ಕನ್ನಡ ಬೆಲೆಪಟ್ಟಿಯನ್ನು ಕಳಿಸುತ್ತೇವೆ.

ಪತ್ರವ್ಯವಹಾರ ಇಂಗ್ಲಿಷ್, ಹಿಂದಿ ವ, ಮರಾಠಿಯಲ್ಲಿ.

DHARAMSHI MULJI
DRESSWALLA
132 C Bhagatwadi Bhuleshwar Rd.,
Opp. Kabutarkhana, BOMBAY 2.

ಪರಿಚಯ

ಘಾನಾದ ಸ್ವಾತಂತ್ರ್ಯಶಿಲ್ಪಿ ಡಾ। ಕ್ವಾಮೇ ಎನ್‌ಕ್ರೂಮಾ

ಸ್ವಾತಂತ್ರ್ಯಪೂರ್ವ ಮತ್ತು ಉತ್ತರದಲ್ಲಿ ಘಾನಾಪುನಾರಚನೆಯಲ್ಲಿ ಪ್ರಮುಖಪಾತ್ರ ವಹಿಸುತಿದ್ದರು

ವಸಾಹತು ಸ್ಥಾನದಿಂದ ಸ್ವತಂತ್ರ ರಾಷ್ಟ್ರದ ಸ್ಥಾನಕ್ಕೆ ಪರಿವರ್ತನೆ ಹೊಂದಿದ ಸಮಯದಿಂದಲೂ ಘಾನಾದ ಮುಖ್ಯ ಮಂತ್ರಿ ಶ್ರೀ ಎನ್‌ಕ್ರೂಮಾರವರು ನೂತನ ರಾಷ್ಟ್ರವೊಂದರ ಶಿಲ್ಪಿಯಾಗಿ ತಮ್ಮ ರಾಷ್ಟ್ರವನ್ನು ಸಂಘಟಿಸುತ್ತಿದ್ದಾರೆ

೧೯೫೧ರಲ್ಲಿ ಬ್ರಿಟಿಷ್ ಗೋಲ್ಡ್ ಕೋಸ್ಟ್ (ಘಾನಾದ ಹಳೆಯ ಹೆಸರು) ಚುನಾವಣೆಗಳು ನಡೆದಾಗ ಡಾ। ಎನ್‌ಕ್ರೂಮಾರವರ "ಕನ್‌ವೆನ್‌ಷನ್" ಪ್ರಜಾ ಪಾರ್ಟಿಯೇ ಬಹುಮತಗಳಿಸಿ ಅಧಿಕಾರಕ್ಕೆ ಬಂದಿತು. ಆಗ ಪಕ್ಷದ ನಾಯಕರಾಗಿದ್ದ ಡಾ। ಎನ್‌ಕ್ರೂಮಾರವರೇ ಗೋಲ್ಡ್ ಕೋಸ್ಟ್ ಮುಖ್ಯ ಮಂತ್ರಿಯಾಗಿ ಚುನಾಯಿತರಾದರು. ಮುಂದಿನ ವರ್ಷವೇ ಅವರು ಪ್ರಧಾನ ಮಂತ್ರಿಯಾಗಿ ನಾಮಕರಣ ಹೊಂದಿದರು. ಮತ್ತು ೧೯೫೭ರ ಮಾರ್ಚ್ ೬ರಂದು ಸ್ವತಂತ್ರ ಘಾನಾದ ಸ್ಥಾಪನೆಯಾದಾಗ ಡಾ। ಎನ್‌ಕ್ರೂಮಾರವರು ಸ್ವತಂತ್ರ ಘಾನಾದ ಪ್ರಥಮ ಪ್ರಧಾನ ಮಂತ್ರಿಯಾದರು.

ಡಾ। ಎನ್‌ಕ್ರೂಮಾರವರ ಜೀವನ ಚರಿತ್ರೆ ಸಾಕಷ್ಟು ರೋಮಾಂಚಕಾರಿಯಾಗಿದೆ. ಘಾನಾದ ಆಕ್ಸಿಂ ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ ಜನಿಸಿದ ಇವರು ಮುಂದೆ ಒಂದು ಸ್ವತಂತ್ರ ರಾಷ್ಟ್ರದ ಪ್ರಧಾನಿಯಾಗುವರೆಂದು ಯಾರೂ ನಿರೀಕ್ಷಿಸುವಂತಿರಲಿಲ್ಲ. (ಅವರ ತಂದೆ ಒಬ್ಬ ಅಕ್ಕಸಾಲಿಗ). ಮಿಷನ್ ಸ್ಕೂಲಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಗಳಿಸಿದ ಈ ಬಾಲಕ ವಿದ್ಯಾಭ್ಯಾಸದಲ್ಲಿ ತೋರಿದ ಆಸಕ್ತಿಯೇ ಮುಂದೆ ಆತ ಕಾಲೇಜ್ ವಿದ್ಯಾಭ್ಯಾಸ ಪಡೆಯಲೂ ಮತ್ತು ಶಿಕ್ಷಕನ ತರಬೇತಿ ಪಡೆಯಲೂ ಸಹಾಯಕವಾಯಿತು.

ಹೊರದೇಶಗಳಲ್ಲಿ ಉಚ್ಚ ಶಿಕ್ಷಣ

ಕಾಲೇಜ್ ವಿದ್ಯಾಭ್ಯಾಸ ಮಾತ್ರದಿಂದ ತೃಪ್ತಿಪಟ್ಟುಕೊಳ್ಳದೇ ಹೋದ ಶ್ರೀ ಎನ್‌ಕ್ರೂಮಾರವರು ಮುಂದೆ ಉಚ್ಚ ಶಿಕ್ಷಣಕ್ಕಾಗಿ ವಿದೇಶ ಪ್ರಯಾಣಮಾಡಲೂ ಬಯಸಿದರು. ೧೯೩೫ರಲ್ಲಿ ಈ ಬಯಕೆ ಅವರನ್ನು ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಕೊಂಡೊಯ್ದಿತು. ೧೯೩೯ರಲ್ಲಿ ಅವರು ಬಿ. ಎ. ಪದವೀಧರರಾದರು ಅವರು ಪೆನ್ಸಿಲ್ವೇನಿಯಾದಲ್ಲಿರುವ ಲಿಂಕನ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ. ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ಇವೆರಡೂ ಅವರು ಆರಿಸಿದ ಮುಖ್ಯ ವಿಷಯಗಳಾಗಿದ್ದವು. ಇಷ್ಟಕ್ಕೇ ಅವರು ತೃಪ್ತಿಪಟ್ಟುಕೊಳ್ಳದ ಥಿಯಾಲಜಿ ಮತ್ತು ಶಿಕ್ಷಣ ಶಾಸ್ತ್ರಗಳಲ್ಲಿಯೂ ಪದವೀಧರರಾದರು. ಮುಂದೆ ಪಿ. ಎಚ್. ಡಿ. ಪದವಿ ಪಡೆಯುವ ದೃಷ್ಟಿಯಿಂದ ಅದಕ್ಕಾಗಿ ಅಧ್ಯಯನ ನಡೆಸುವ ಸಮಯದಲ್ಲಿ ಲಿಂಕನ್ ವಿಶ್ವವಿದ್ಯಾನಿಲಯದಲ್ಲಿ ಅವರು ತತ್ವಶಾಸ್ತ್ರದ ಬೋಧಕರಾಗಿಯೂ ಕೆಲಸ ಮಾಡುತ್ತಿದ್ದರು ಗ್ರೀಕ್ ಮತ್ತು ನಿಗ್ರೋ ಇತಿಹಾಸವನ್ನೂ ಬೋಧಿಸುತ್ತಿದ್ದರು.

ಹೀಗೆ ಡಾ॥ ಎನ್‌ಕ್ರೂಮಾ ಕೇವಲ ಜನನಾಯಕರಷ್ಟೇ ಅಲ್ಲ ಒಬ್ಬ ದೊಡ್ಡ ವಿದ್ವಾಂಸರೂ ಹೌದು. ಅವರ ವಿದ್ವತ್ತಿಗೆ ಮನ್ನಣೆಕೊಡುವ ದೃಷ್ಟಿಯಿಂದಲೇ ಅವರಿಗೆ ೧೯೫೧ರಲ್ಲಿ, ಅವರು ಅಮೇರಿಕಾಕ್ಕೆ ಭೇಟಿಕೊಟ್ಟಾಗ, ಲಿಂಕನ್ ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿತು.

ಅಮೇರಿಕದಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದ ಸಮಯದಲ್ಲಿ ಅವರು ತಮ್ಮಂತೆಯೇ ಅಮೇರಿಕ ಮತ್ತು ಕೆನಡಾದಲ್ಲಿ ವಿದ್ಯಾಭ್ಯಾಸ ಪಡೆಯಲು ಬಂದಿದ್ದ ಆಫ್ರಿಕನ್ ವಿದ್ಯಾರ್ಥಿಗಳ ಸಂಘವೊಂದನ್ನು ಸ್ಥಾಪಿಸಿದರು. ಮತ್ತು ಈ ವಿದ್ಯಾರ್ಥಿಗಳು ಹೊರಡಿಸುತ್ತಿದ್ದ ಪತ್ರಿಕೆಗೆ ಸಂಪಾದಕರಾಗಿದ್ದರು. ಅವರೇ ಈ ಸಂಘದ ಪ್ರಥಮ ಅಧ್ಯಕ್ಷರಾಗಿದ್ದುದಲ್ಲದೆ ಅವರು ಈ ಸಂದರ್ಭದಲ್ಲಿ ನಡೆಸಿದ ಕಾರ್ಯ ಚಟುವಟಿಕೆಗಳಿಂದ ಜನನಾಯಕರಾಗಲು ಬೇಕಾದ ಎಷ್ಟೋ ಅನುಭವವನ್ನು ಗಳಿಸಿದರು. ಮತ್ತು ಆಫ್ರಿಕಾದ ರಾಜಕೀಯ ಸಮಸ್ಯೆಗಳು ಮತ್ತು ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ವಿಶೇಷ ರೀತಿಯ ಅಧ್ಯಯನವನ್ನು ನಡೆಸಿದರು.

ಅರ್ಥಶಾಸ್ತ್ರದಲ್ಲಿನ ಆಸಕ್ತಿ ಮುಂದೆ ೧೯೪೫ರಲ್ಲಿ ಅವರನ್ನು ಇಂಗ್ಲೆಂಡಿಗೆ ಕೊಂಡೊಯ್ದಿತು. ಅವರು ಅಲ್ಲಿ ಸುಪ್ರಸಿದ್ಧ "ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್" ಸಂಸ್ಥೆಗೆ ಸೇರಿ ಉಚ್ಚ ಶಿಕ್ಷಣ ಪಡೆದರು. ಅದೇ ಸಮಯದಲ್ಲಿ 'ಗ್ರೇಸ್ ಇನ್'ಗೆ ಸೇರಿ ನ್ಯಾಯಶಾಸ್ತ್ರವನ್ನೂ ಅಭ್ಯಸಿಸಿದರು. ಪ್ರಾಯಶಃ ಈ ವಕೀಲಿ ವಿದ್ಯಾಭ್ಯಾಸವೇ ಅವರ ರಾಜಕೀಯಕ್ಕೆ ಧುಮುಕಲು ಸಹಾಯಕವಾಗಿರಬೇಕು.

ರಾಜಕೀಯಕ್ಕೆ ಪ್ರವೇಶ

೧೯೪೫ ಮತ್ತು ೧೯೪೭ರ ಮಧ್ಯೆ ಅವರು ಪಶ್ಚಿಮ ಆಫ್ರಿಕಾದ ರಾಷ್ಟ್ರೀಯ ಸಂಸ್ಥೆಯ ಕಾರ್ಯದರ್ಶಿಗಳಾದರು. ಆಫ್ರಿಕಾದ ಐಕಮತ್ಯಕ್ಕಾಗಿ ಶ್ರಮಿಸುವುದೇ ಈ ಸಂಸ್ಥೆಯ ಉದ್ದೇಶವಾಗಿದ್ದಿತು. ಎನ್‌ಕ್ರೂಮಾರವರು ಪಶ್ಚಿಮ ಆಫ್ರಿಕಾದ ವಿದ್ಯಾರ್ಥಿಗಳು ಪ್ರಕಟಿಸುತ್ತಿದ್ದ ಪತ್ರಿಕೆಯ ಸಂಪಾದಕರಾದರಲ್ಲದೆ, ಅಖಿಲ ಆಫ್ರಿಕಾ ಕಾಂಗ್ರೆಸ್ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾಗಿಯೂ ಕೆಲಸ ಮಾಡಿದರು. ಇದೇ ಸಮಯದಲ್ಲಿ ಡಾ॥ ಎನ್‌ಕ್ರೂಮಾರವರು ೧೯೪೭ರಲ್ಲಿ ಗೋಲ್ಡ್ ಕೋಸ್ಟ್‌ನಲ್ಲಿ ಪ್ರಚಾರದಲ್ಲಿದ್ದ "ನೂತನ ಆಫ್ರಿಕಾ" ಎಂಬ ಪ್ರಚಾರ ಪತ್ರಿಕೆಯ ಸಂಪಾದಕರೂ ಆಗಿದ್ದರು.

ಪ್ರತಿಭಾನ್ವಿತ ಲೇಖಕ

ಡಾ॥ ಎನ್‌ಕ್ರೂಮಾರವರು ಒಬ್ಬ ಒಳ್ಳೆಯ ಕ್ರಿಯಾಶೀಲ ಲೇಖಕರೆಂಬುದಕ್ಕೆ ಅವರು ಬರೆದಿರುವ ಕೆಲವು ಪ್ರಕಟಣೆಗಳೇ ಸಾಕ್ಷಿಯಾಗಿವೆ, ೧೯೪೩ರಲ್ಲಿ ಅವರು "ಪಶ್ಚಿಮ ಆಫ್ರಿಕಾದಲ್ಲಿ ವಿದ್ಯಾಭ್ಯಾಸ ಮತ್ತು ರಾಷ್ಟ್ರೀಯತೆ ಎಂಬ ಒಂದು ಪುಸ್ತಕ ಬರೆದರು. ೧೯೪೭ರಲ್ಲಿ ಅವರು "ಸ್ವಾತಂತ್ರ್ಯದೆಡೆಗೆ ವಸಾಹತಿನ ಮುನ್ನಡೆ" ಎಂಬ ಒಂದು ಗ್ರಂಥವನ್ನೂ ಬರೆದರು. ೧೯೫೦ರಲ್ಲಿ "ನನ್ನ ಕಲ್ಪನೆಯ ಪರಿಣಾಮಕಾರಿ ಕಾರ್ಯಕ್ರಮ" ಎಂಬ ಗ್ರಂಥವನ್ನೂ ೧೯೫೭ರಲ್ಲಿ "ಘಾನಾ: ಕ್ವಾಮೆ ಎನ್‌ಕ್ರೂಮಾನ ಆತ್ಮಕಥೆ" ಎಂಬ ಗ್ರಂಥವನ್ನೂ ಅವರು ಬರೆದಿರುವರು.

ಡಾ॥ ಎನ್‌ಕ್ರೂಮಾರವರು ಇಂಗ್ಲೆಂಡಿನಲ್ಲಿದ್ದುಕೊಂಡೇ ಆಫ್ರಿಕನ್ನರ ಸಂಘಟನೆಗಾಗಿ ನಡೆಸಿದ ಕಾರ್ಯ ಅವರ ಖ್ಯಾತಿಯನ್ನು ಗೋಲ್ಡ್‌ಕೋಸ್ಟ್‌ನ ಮೂಲೆಮೂಲೆಗೂ ಹರಡಿತು. ಸ್ವಾತಂತ್ರ್ಯ ಹಂಬಲದಿಂದ ಕೆರಳಿ ನಿಂತಿದ್ದ ಈ ವಸಾಹತಿನ ಜನತೆ ಸಂಯುಕ್ತ ಗೋಲ್ಡ್ ಕೋಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯ ಪದವಿಯನ್ನು ಡಾ। ಎನ್‌ಕ್ರೂಮಾ ಅವರಿಗೆ ನೀಡಿತು. ಮುಂದಿನ ವರ್ಷಗಳಲ್ಲಿ ಗೋಲ್ಡ್‌ಕೋಸ್ಟ್ ರಾಜಕೀಯದಲ್ಲಿ ಡಾ॥ ಎನ್‌ಕ್ರೂಮಾರವರ ವ್ಯಕ್ತಿತ್ವ ಹೆಚ್ಚು ಹೆಚ್ಚು ಪ್ರಭಾವಶಾಲಿಯಾಗತೊಡಗಿತು ಅವರ ಭಾಷಣಗಳು ಈ ವಸಾಹತು ಪ್ರದೇಶದ ಮೂಲೆಮೂಲೆಯಲ್ಲೂ ಅವರಿಗೆ ಹಿಂಬಾಲಕರ ಗುಂಪನ್ನು ಒದಗಿಸಿದವು; ಅವರೊಬ್ಬ ಹಿರಿಯ ಜನ ನಾಯಕರಾದರು. ೧೯೪೯ರಲ್ಲಿ ಈ ರಾಜಕೀಯ ಪಕ್ಷದಲ್ಲಿ ಒಡಕು ಉಂಟಾಗಿ ಎನ್‌ಕ್ರೂಮಾರವರು ಈ ಪಕ್ಷದಿಂದ ಹೊರಬಂದು ತಮ್ಮದೇ ಆದ ಒಂದು ಹೊಸ ಪಕ್ಷವನ್ನೇ ಸ್ಥಾಪಿಸಿದರು. ಡಾ। ಎನ್‌ಕ್ರೂಮಾರವರ ಪ್ರಜಾಪಕ್ಷವು ಮುಖ್ಯವಾಗಿ ಯುವಕರನ್ನು ತುಂಬಾ ಆಕರ್ಷಿಸಿತು. ಮಧ್ಯಮ ವರ್ಗದವರೇ ವಿಶೇಷವಾಗಿದ್ದ ಸಂಯುಕ್ತ ಗೋಲ್ಡ್ ಕೋಸ್ಟ್ ಕನ್‌ವೆನ್‌ಷನ್ ಪಕ್ಷಕ್ಕಿಂತ ಹೆಚ್ಚು ಜನಪ್ರಿಯವಾಯಿತು ಹೊಸ ರಾಜ್ಯಾಂಗದ ರೀತ್ಯಾ ೧೯೫೧ರಲ್ಲಿ ನಡೆದ ಪ್ರಥಮ ಚುನಾವಣೆಗಳಲ್ಲಿ ಎನ್‌ಕ್ರೂಮಾರವರ "ಕನ್‌ವೆನ್‌ಷನ್ ಪೀಪಲ್ಸ್ ಪಾರ್ಟಿ" ಪಕ್ಷಕ್ಕೆ ಅದ್ಭುತ ವಿಜಯ (೩೮ ಚುನಾಯಿತ ಸ್ಥಾನಗಳ ಪೈಕಿ ಒಟ್ಟು ೩೪ ಸ್ಥಾನಗಳು)ಲಭಿಸಿತು.

ಬರ್ಕ್ಲೀಯಲ್ಲಿರುವ ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಅಣುವಿಕರಣ ಪ್ರಯೋಗಶಾಲೆಯ ಡೈರೆಕ್ಟರರಾದ ಸುಪ್ರಸಿದ್ಧ ವಿಜ್ಞಾನಿ ಡಾ. ಅರ್ನೆಸ್ಟ್. ಓ. ಲೋರೆನ್ಸ್.

ಸಾಮ್ರಾಜ್ಯಶಾಹಿ ಆಕ್ರೋಶ

ಡಾ॥ ಎನ್‌ಕ್ರೂಮಾರವರ ರಾಜಕೀಯ ಚಟುವಟಿಕೆಗಳು ಸಾಮ್ರಾಜ್ಯಶಾಹಿ ಅಧಿಕಾರಿ ವರ್ಗಕ್ಕೊಂದು ದೊಡ್ಡ ತಲೆನೋವಾಯಿತು. ಮತ್ತೆ ಮತ್ತೆ ಅವರು ಅಧಿಕಾರ ವರ್ಗದ ಆಕ್ರೋಶಕ್ಕೆ ಬಲಿಯಾಗುತ್ತಿದ್ದರು.

೧೯೪೯ರಲ್ಲಿ ಎನ್‌ಕ್ರೂಮಾರವರ ಕನ್‌ವೆನ್‌ಷನ್ ಪೀಪಲ್ಸ್ ಪಾರ್ಟಿಯು ಸ್ವಾತಂತ್ರ್ಯದ ಚಳುವಳಿಯನ್ನು ಬಿರುಸುಗೊಳಿಸಿತು. ಸ್ವಯಮಾಡಳಿತಾಧಿಕಾರ ಶೀಘ್ರವೆ [illegible] ಭಾರಿ ಸಂಪು ಹಾಗೂ ಅಸಹಕಾರ ಚಳುವಳಿಯನ್ನೇ ಆರಂಭಿಸುವುದು ಅನಿವಾರ್ಯವಾಗುತ್ತದೆಯೆಂದು ಘೋಷಿಸಿತು. ೧೯೫೦ರಲ್ಲಿ ಎನ್‌ಕ್ರೂಮಾರವರನ್ನು ಆಡಳಿತ ವರ್ಗ, ಸಾರ್ವತ್ರಿಕ ಮುಷ್ಕರದ ಚಿತಾವಣೆ ನಡೆಸಿದರೆಂಬ ಆಪಾದನೆ ಮೇಲೆ ಬಂಧನಕ್ಕೊಳಪಡಿಸಿತು.

ಸಾರ್ವತ್ರಿಕ ಚುನಾವಣೆಗಳಲ್ಲಿ ಡಾ। ಎನ್‌ಕ್ರೂಮಾರವರ ಪಕ್ಷವು ವಿಜಯಿಯಾದಾಗ ಅವರ ಬಿಡುಗಡೆ ಅನಿವಾರ್ಯವಾಯಿತು. ಅವರೇ ಮುಖ್ಯ ಮಂತ್ರಿಯೂ ಆದರು. ಸಂಪರ್ಕ ಸಾಧನಗಳು ಮತ್ತು ಸಾರ್ವಜನಿಕ ಕಾಮಗಾರಿ ಶಾಖೆ ಮಂತ್ರಿಗಳೂ ಆಗಿದ್ದರು. ಒಂದು ವರ್ಷದ ತರುವಾಯ ರಾಜ್ಯಾಂಗಕ್ಕೆ ಸಂಬಂಧಿಸಿದಂತೆ ಅಂಗೀಕೃತವಾದ ಒಂದು ತಿದ್ದುಪಡಿ ಪರಿಣಾಮವಾಗಿ ಅವರು ಗೋಲ್ಡ್ ಕೋಸ್ಟ್‌ನ ಪ್ರಧಾನ ಮಂತ್ರಿಯಾಗಿ ಘೋಷಿಸಲ್ಪಟ್ಟರು.

ಡಾ। ಎನ್‌ಕ್ರೂಮಾರವರು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಾಗಿನಿಂದ ಎಷ್ಟೋ ಪ್ರಗತಿಪರ ಯೋಜನೆಗಳನ್ನು ಜಾರಿಗೆ ತಂದದ್ದಲ್ಲದೆ ೧೯೫೧ರಲ್ಲಿ ಗ್ರೇಟ್ ಬ್ರಿಟನ್ನಿಗೆ ಭೇಟಿ ಇತ್ತು ಗೋಲ್ಡ್‌ಕೋಸ್ಟ್‌ನ ಉನ್ನತಿಗೆ ಅತ್ಯಾವಶ್ಯಕವೆನಿಸಿದ್ದ ತಂತ್ರಜ್ಞರನ್ನು ಆರಿಸಿ ತಮ್ಮ ಯೋಜನೆಗಳು ಯಶಸ್ವಿಯಾಗಿ ಕಾರ್ಯಗತವಾಗಲು ಬೇಕಾದ ಮುಖ್ಯ ಆವಶ್ಯಕತೆಯೊಂದನ್ನು ಪೂರೈಸಿಕೊಂಡು ಬಂದರು.

(೬ನೇ ಪುಟ ನೋಡಿರಿ)

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

> ಮಾನವನಾದವನಿಗೆ ಗೌರವವೇ ಆಯುಪ್ರಮಾಣವಾಗಿದೆ. ಇನ್ನೊಬ್ಬರೊಡನೆ ಸೇರುವಾಗ ಈ ಗೌರವವು ಅಧಿಕವಾಗುತ್ತ ಹೋಗುತ್ತದೆ. ಆತನ ಗೌರವವನ್ನು ಯಾರಾದರೂ ಅಪಹರಿಸಿದರೆಂದರೆ, ಆವನ ಜೀವನನೇ ಸಂಪೂರ್ಣಚ್ಯುತಿಗೊಂಡಂತಾಗುತ್ತದೆ.

NAVAYUGA
Founder:—
A. B. SHETTY,
Former Minister for Public Health
Govt. of Madras & Govt. of Mysore
ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ
ವರುಷ ೩೮ ‖ ಉಡುಪಿ ೮-೧-'೫೯ ‖ ವಾರ ೧೯

ಕಾಂಗ್ರೆಸ್ ಅಧ್ಯಕ್ಷ ಪದ

ಈಗಾಗಲೇ ಪ್ರಾರಂಭವಾದ ಕಾಂಗ್ರೆಸ್ ಸಂಸ್ಥೆಯ ಅರುವತ್ತನಾಲ್ಕನೆಯ ಅಧಿವೇಶನವು ಮಹತ್ವಪೂರ್ಣವಾಗಿದೆ. ಕಾಂಗ್ರೆಸ್ ಸಂಸ್ಥೆಯ ಘಟನೆಯಲ್ಲಿ ಏಕಾವಧಿಗಿಂತ ಹೆಚ್ಚುಕಾಲ ಅವಿರತವಾಗಿ ಒಂದೇ ಪದದಲ್ಲಿ ಓರ್ವ ವ್ಯಕ್ತಿಯಿರಬಾರದು ಎಂಬುದು ಸ್ವೀಕೃತವಾಗಿರುವುದರಿಂದಲೇ ಈ ಅಧಿವೇಶನಕ್ಕೆ ವಿಶೇಷಕಳೆಯೇರಿದೆಯೆನ್ನಬೇಕಾಗಿದೆ, ಪ್ರಕೃತದ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಢೇಬರರು ಈ ಬಾರಿ ತಮ್ಮ ಹುದ್ದೆಯಿಂದ ನಿವೃತ್ತರಾಗಿ ಆದಕ್ಕಾಗಿ ಹೊಸಬರೊಬ್ಬರನ್ನು ಆರಿಸುವ ಕುರಿತು ತೀವ್ರ ಲಕ್ಷ್ಯವು ಹರಿಯುತ್ತದೆ. ಈಗಿನ ಪದಾಧಿಕಾರಿಗಳನ್ನು ಅಧಿಕಾರ ಪೀಠದಿಂದ ಕೆಳಗಿಳಿಸುವುದು ಬಹಳ ಸುಲಭವಾದ ಕಾರ್ಯವಾದರೂ, ಆ ಸ್ಥಾನವನ್ನು ಪೂರ್ಣಗೊಳಿಸುವುದು ಮಾತ್ರ ಅತ್ಯಂತ ಪ್ರಯಾಸಪ್ರದಕರ್ತವ್ಯವೆಂಬುದು ಅನುಭವ ಸಿದ್ಧವಾದ ಮಾತು. ಓರ್ವ ವ್ಯಕ್ತಿಯೇ ಬಹುಕಾಲ ಒಂದು ಹುದ್ದೆಯಲ್ಲಿದ್ದರೆ, ಇತರರಿಗೆ ಸ್ಥಾನಲಭಿಸುವ ಅವಕಾಶವು ಕಡಿಮೆಯಾಗುವುದರಿಂದ ಹೊಸಬರಿಗೂ ಸೇವಾಕಾರ್ಯನಿರತರಾಗುವ ಸಂದರ್ಭವನ್ನು ಒದಗಿಸಿ ಕೊಡುವುದು ಅಸಾಧ್ಯವಾಗುತ್ತದೆ ಆದುದರಿಂದಲೇ ಕಾಂಗ್ರೆಸ್‌ನ ಮುಂದಿನ ಅಭಿವೃದ್ಧಿಗಾಗಿ ಈ ಒಂದು ಚಿಕ್ಕ ತಿದ್ದುಪಡಿಯಾದುದು ನ್ಯಾಯೋಚಿತವಿದೆ.

ಈ ಬಾರಿ, ಹೊಸತಾಗಿ ಸ್ವೀಕೃತವಾದ ನಿಯಮದಂತೆ, ಪ್ರಕೃತದ ಅಧ್ಯಕ್ಷ ಢೇಬರರು ನಿವೃತ್ತರಾಗುವುದು ನಿಶ್ಚಯ. ಈ ಹಿಂದೆ, ಈ ತತ್ವವನ್ನು ಮೂಲತಃ ಒಪ್ಪಿಕೊಳ್ಳಲಾಗಿದ್ದರೂ ಶ್ರೀ ಢೇಭಾರರನ್ನೇ ಮುಂದೆಯೂ ಸ್ವಲ್ಪಕಾಲ, ಅಂದರೆ, ಯೋಗ್ಯ ಹಾಗೂ ಸಮರ್ಥ ವ್ಯಕ್ತಿಯೊಬ್ಬನನ್ನು ಆರಿಸುವ ವರೆಗೆ, ಪುನಃ ಅಧ್ಯಕ್ಷರಾಗಿಯೇ ಮುಂದುವರಿಸಿಕೊಳ್ಳುವುದೆಂದು ವಾರ್ತೆ ಹಬ್ಬಿತ್ತು. ಆದರೆ, ಮುಂದಕ್ಕೆ ಈ ಸುದ್ದಿಗೆ ಪುಷ್ಟಿ ದೊರೆಯಲಿಲ್ಲ. ಈಗ ಈ ಕಡೆಗೆ ಅಧಿಕಾಧಿಕ ಗಮನವನ್ನು ಹರಿಸಲಾಗಿದ್ದು ಮುಖ್ಯವಾಗಿ ಕಾಂಗ್ರೆಸ್ ವರಿಷ್ಠರ ಮನಸ್ಸೆಲ್ಲವನ್ನೂ ಕೇಂದ್ರೀಕೃತಗೊಳಿಸಿದೆ. ವರಿಷ್ಠರ ಮುಖದಿಂದ ಮುಖ್ಯವಾಗಿ ಮದ್ರಾಸಿನ ಆರ್ಥಿಕ ಮತ್ತು ವಿದ್ಯಾಮಂತ್ರಿಗಳಾದ ಶ್ರೀ ಸಿ. ಸುಬ್ರಹ್ಮಣ್ಯಂವರ ಹೆಸರು ಪದೇ ಪದೇ ಕೇಳಿ ಬರುತ್ತದೆ. ಕಾಂಗ್ರೆಸ್ ಸಂಸ್ಥೆಯು ಉತ್ತರ—ದಕ್ಷಿಣ ಭಾರತಗಳೆಂಬ ಪಕ್ಷಪಾತವನ್ನು ತೋರಿಸಿ ದಾಕ್ಷಿಣಾತ್ಯರನ್ನು ಕಡೆಗಣಿಸಿದೆಯೆಂಬ ದೂರು ಕೆಲವು ಪ್ರತಿಷ್ಠಿತರ ಬಾಯಿಯಿಂದ ಹೊರಡುತ್ತಿರುವಾಗ, ಸಾಮಾನ್ಯವಾಗಿ ಯಾರಾದರೊಬ್ಬ ದಕ್ಷಿಣ ಭಾರತೀಯನನ್ನೇ ಈ ಬಾರಿ ಅಧ್ಯಕ್ಷನಾಗಿ ಮಾಡುವ ಇರಾದೆಗೆ ಈಗ ಪರಿಪುಷ್ಟಗೊಂಡಿದೆ. ಮೈಸೂರಿನ ಶ್ರೀ ಕೆಂಗಲ್ ಹನುಮಂತಯ್ಯ ಮತ್ತು ಶ್ರೀ ಎಸ್. ನಿಜಲಿಂಗಪ್ಪನವರ ಹೆಸರುಗಳೂ ದೂರದಲ್ಲಿ ಸುಳಿದಾಡುತ್ತಿವೆ. ಆದರೆ, ಇವರಿಬ್ಬರೂ ಒಂದಲ್ಲ ಒಂದು ಕಾರಣದಿಂದ ಕಾಂಗ್ರೆಸ್ ವರಿಷ್ಠರ ಹಾಗೂ ಜನತೆಯ ಅಪಕೃಪೆಗೆ ಪಾತ್ರರಾಗಿದ್ದಾರೆ. ಶ್ರೀ ಹನುಮಂತಯ್ಯ ನಿಷ್ಠುರವಾದಿಗಳೂ ಶ್ರೀ ನಿಜಲಿಂಗಪ್ಪನವರು ತೀರ ಉದಾರಿಗಳೂ ಆಗಿರುವುದರಿಂದ ಹೆಚ್ಚಿನ ಮಟ್ಟಿಗೆ ಈ ನಾಯಕಮಣಿಗಳಿಗಾಗುವಾಗ ಈ ಪಟ್ಟವು ಕನಸಿನ ಮುಂಡಿಗೆಯಾಗಿಯೇ ಉಳಿಯುವುದೆಂದೂಹಿಸಬಹುದು.

ಶ್ರೀ ಸಿ. ಸುಬ್ರಹ್ಮಣ್ಯಮ್ ನಡುಹರೆಯದ ಉತ್ಸಾಹಿಗಳು; ಉತ್ತಮಕಾರ್ಯಕರ್ತರು; ತಮ್ಮ ಕರ್ತವ್ಯ ಶೀಲತೆಯಿಂದಾಗಿ ಹಾಗೂ ಕಾರ್ಯಪಟುತ್ವಗಳಿಂದಾಗಿ ದಕ್ಷಿಣ ಭಾರತದವರ ಮತ್ತು ಕಾಂಗ್ರೆಸ್ ವರಿಷ್ಠರ ಕೃಪಾಭಾಜನರಾಗಿದ್ದಾರೆ. ಪ್ರಥಮ ಸಾರ್ವತ್ರಿಕ ಚುನಾವಣಾನಂತರ ಮದ್ರಾಸಿನಲ್ಲಿ ಸ್ಥಾಪಿತವಾದ ರಾಜಾಜೀ ಮಂತ್ರಿ ಮಂಡಳಿಯಲ್ಲಿ ಸೇರಿಕೊಂಡ ಇವರು ರಾಜಾಜಿಯವರ ಬಲಗೈ ಬಂಟರಾಗಿದ್ದು ನುರಿತ, ಅನುಭವಿಕ ರಾಜಕಾರಣಿಗಳಾದ ಅವರಿಂದ ಯೋಗ್ಯ ತರಬೇತಿಯನ್ನು ಪಡೆದಿದ್ದಾರೆ. ಮುಂದೆ, ರಾಜಾಜಿ ರಾಜಿನಾಮೆಯಿತ್ತು ಹೊರಹೋದಾಗ, ಕಾಂಗ್ರೆಸ್ ಶಾಸನ ಪಕ್ಷದ ನಾಯಕ ಸ್ಥಾನಕ್ಕೆ ಸ್ಪರ್ಧಿಸಿ ಸೋತು ಹೋದರೂ, ಅನಂತರ ಸ್ಥಾಪಿತವಾದ ಕಾಮರಾಜರ ಎರಡೂ ಸರಕಾರದಲ್ಲಿ ಅದೇ ಹುದ್ದೆಯನ್ನಲಂಕರಿಸಿದ್ದಾರೆ. ಕಾಮರಾಜರು ಮುಖ್ಯಮಂತ್ರಿಗಳಾಗಿರುವುದು ನಿಜವಾದರೂ ಸರಕಾರದಲ್ಲಿ ಮುಖ್ಯ ಕಾರ್ಯಕಾರಣಿಗಳಾಗಿರುವವರು ಇವರೇ ಎಂಬುದು ನಿಸ್ಸಂಶಯ. ಹೀಗಾಗಿ ಮದ್ರಾಸದ ಹೆಸರಿನೊಂದಿಗೆ ಸಾಧನೆಯೊಡನೆ ಶ್ರೀ ಸುಬ್ರಹ್ಮಣ್ಯಂರ ಹೆಸರೂ ಪ್ರಚಾರವಾಯಿತು; ಅವರ ಕರ್ತೃತ್ವಶಕ್ತಿಯ ಪರಿಚಯ ಜನತೆಗಾಯಿತು. ತಮ್ಮ ಬಗ್ಗೆ ಜನತೆಯೂ ಕಾಂಗ್ರೆಸ್ ವರಿಷ್ಠರೂ ಇಟ್ಟಿದ್ದ ಅಭಿಮಾನ, ಉಚ್ಚ ಮನೋಭಾವನೆಗಳನ್ನು ಇಂದಿಗೂ ಅವರು ಉಳಿಸಿಕೊಂಡಿದ್ದಾರೆ.

ಇಲ್ಲಿ ಏಳುವ ತೊಂದರೆಯೆಂದರೆ ಇವರನ್ನು ಬಿಟ್ಟು ಕೊಡಲು ಶ್ರೀ ಕಾಮರಾಜರು ಸಿದ್ಧರಿಲ್ಲದಿರುವುದು ಮಾತ್ರ. ಇದರಿಂದ ಶ್ರೀ ಸುಬ್ರಹ್ಮಣ್ಯಂ ಎಂತಹ ಪಾತ್ರ ವಹಿಸಿದ್ದಾರೆಂದು ಗೋಚರವಾಗುತ್ತದೆ. ಆದರೂ, ಕಾಂಗ್ರೆಸ್ ಸಂಸ್ಥೆಯ ಮೇಲ್ಮೆಗಾಗಿ ಶ್ರೀ ಸುಬ್ರಹ್ಮಣ್ಯಂರ ಸೇವೆಯನ್ನು ಕಾಂಗ್ರೆಸ್ ವರಿಷ್ಠರು ಬಯಸುತ್ತಿರುವಾಗ, ಕಾಮರಾಜರು ಎದುರು ತೊಡರುಗಳನ್ನು ಮುಂದೂಡುತ್ತಿರುವುದು ಸ್ವಾಭಾವಿಕವಾದರೂ ಅವರ ಮನಸ್ಸನ್ನು ಒಲಿಸುವ ಪ್ರಯತ್ನಗಳೂ ಸಾಗುತ್ತಿರುತ್ತಿವೆ. ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರು ಶ್ರೀ ಟಿ. ಟಿ. ಕೃಷ್ಣಮಾಚಾರಿಯವರ ಬಗ್ಗೆ ಅಭಿವ್ಯಕ್ತಗೊಳಿಸಿದ ಆಕಾಂಕ್ಷೆಗೂ ಇದಕ್ಕೂ ತಾಳಕಂತಿ ಇದೆಯೋ ಇಲ್ಲವೋ ಗೊತ್ತಿಲ್ಲವಾದರೂ ಅಂಥಹುದೇ ಓರ್ವ 'ಬುದ್ಧಿವಂತ'ನ ಸೇವೆಯು ಸುಬ್ರಹ್ಮಣ್ಯಂ ದೂರ ಸರಿದರೆ ಮದ್ರಾಸಿಗೆ ಬೇಕಾಗುವುದಂತೂ ಖಂಡಿತ. ಇಲ್ಲವೇ ಕಾಂಗ್ರೆಸ್ ಸಂಸ್ಥೆಗೂ ದೊರೆಯಬಹುದು.

ಸದ್ಯ ಬಂದಿರುವ ವರ್ತಮಾನಗಳಂತೆ ಕಾಮರಾಜರ ಅನುಮತಿಯನ್ನು ಹೇಗಾದರೂ ಸಂಪಾದಿಸಿ ಶ್ರೀ ಸುಬ್ರಹ್ಮಣ್ಯರನ್ನು ಕಾಂಗ್ರೆಸ್ ಪಟ್ಟಕ್ಕೆ ಏರಿಸುವುದು ಬಹ್ವಂಶ ಸಂಭವನೀಯ ಅಥವಾ ಟಿ. ಟಿ. ಕೆ. ಬರುವುದೂ ಅಸಂಭವವಲ್ಲ. ಹೀಗಾದಲ್ಲಿ ಢೇಭರರ ಉತ್ತರಾಧಿಕಾರಿಯಾಗಿ ಓರ್ವ ಕರ್ತೃತ್ವಶಾಲೀ ಪುರುಷನನ್ನೇ ಉನ್ನತ ಪದಕ್ಕೆ ಆರಿಸಿದಂತಾಗುವುದು.

ಸಂಕ್ಷಿಪ್ತ ಸುದ್ದಿಗಳು

ಬೆಂಗಳೂರಲ್ಲಿ ಕೃಷಿಕರ ಸಮ್ಮೇಳನ

ಭೂ ಶಾಸನದ ಮೇಲೆ ತೀವ್ರ ಅಸಮಾಧಾನ

ದಕ್ಷಿಣ ಭಾರತದ ರಾಜ್ಯಗಳ ಕೃಷಿಕರು ಜನವರಿ ಮೊದಲನೆ ದಿನಾಂಕ ಬೆಂಗಳೂರಲ್ಲಿ ಎರಡನೆ ಬಾರಿಗೆ ಸಭೆ ಸೇರಿ ಸರಕಾರವೀಗ ಕೈಗೊಂಡಿರುವ ಭೂಸುಧಾರಣೆಯ ಬಗ್ಗೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿರುವುದಲ್ಲದೇ ಆಹಾರೋತ್ಪನ್ನವು ಹೆಚ್ಚಬೇಕೆಂಬ ಉದ್ದೇಶವಿರುವುದಾದರೆ, ಕೃಷಿಕರ ಸಮಸ್ಯೆಗೆ ಮೊದಲು ಗಮನ ಹರಿಸಬೇಕೆಂದು ಒತ್ತಾಯಿಸಿದ್ದಾರೆ. ಈ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಸರ್ದಾರ್ ಲಾಲ್‌ಸಿಂಗರು ವಹಿಸಿದ್ದರು. ಶ್ರೀ ಎಚ್. ವಿ. ಕೃಷ್ಣಸ್ವಾಮಿಯವರು ಸಮ್ಮೇಲನವನ್ನು ಉದ್ಘಾಟಿಸಿದ್ದರು ಇದರಲ್ಲಿ ಕೇರಳ, ಮೈಸೂರು ಆಂಧ್ರ ಮತ್ತು ತಮಿಳುನಾಡುಗಳ ಬಹಳ ಸಂಖ್ಯೆಯ ಕೃಷಿಕರು ಭಾಗವಹಿಸಿದ್ದರು.

ಅ. ಭಾ. ಕೃಷಿಕರ ಫೆಡರೇಶನಿನ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಬಿ. ಜನರಾಜ ಹೆಗ್ಡೆಯವರು ಸ್ವಾಗತಿಸಿ ಕೃಷಿಕರ ವಿವಿಧ ಸಮಸ್ಯೆಗಳನ್ನು ಪ್ರಸ್ತಾಪಿಸಿ ಭೂಮಿಯನ್ನು ಚಿಕ್ಕ ಹಿಡುವಳಿಗಾಗಿ ವಿಂಗಡಿಸುವುದು ಅಧಿಕ ಆಹಾರೋತ್ಪಾದನೆಗೆ ಬಾಧಕವೆಂದೂ ಮೈಸೂರು ಭೂಸುಧಾರಣೆಯ ಮಸೂದೆಯು ಕೃಷಿಕರಿಗೆ ಹಾನಿಕಾರಕವಾಗಿದೆಯೆಂದೂ ಹೇಳಿದರು.

'ಪಂಚವಾರ್ಷಿಕ ಯೋಜನೆಯ ತಯಾರಕರು ಭೂಮ್ಯುತ್ಪಾದನೆಯನ್ನು ಹೆಚ್ಚಿಸಿ ಆಹಾರದಮಟ್ಟಿಗೆ ರಾಷ್ಟ್ರವನ್ನು ಸ್ವಯಂಪೂರ್ಣ ಹೊಂದುವಂತೆ ಮಾಡುವುದು ಮತ್ತು ಆರ್ಥಿಕ ಹಾಗೂ ಸಾಮಾಜಿಕ ನ್ಯಾಯವೊದಗಿಸುವುದು ಹೇಗೆ ಎಂಬತ್ತ ಗಮನ ಹರಿಸಿದ್ದಾರೆ. ಇದರಲ್ಲಿ ಮೊದಲನೆಯದು ಬಿನ್ನ ಬಿನ್ನ ರೀತಿಯದ್ದಿದ್ದರೂ ಎರಡನೆಯದು ಮಾತ್ರ ಸಮಾಜದ ಅಡಿಗಲ್ಲನ್ನೇ ಕೆಡಹುವ ಭಯವನ್ನು ಹುಟ್ಟಿಸಿದೆ ಎಂದು ಶ್ರೀ ಎಸ್. ವೈ. ಕೃಷ್ಣಸ್ವಾಮಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ನುಡಿದರು.

ಒಂದು ಯೋಗ್ಯ ಹಿಡುವಳಿಯ ಪರಿಮಾಣವೆಷ್ಟೇ ಇರಲಿ, ಅದು ಸುಯೋಗವಾಗಿ ನಡೆಯುದಾದರೆ, ಅದನ್ನು ಮುಟ್ಟಬಾರದು ಎಂದೂ ಸಾಕಷ್ಟು ಪರಿಹಾರ ಕೊಡಬೇಕೆಂದೂ ಭೂಮಾಲಕರು ಕೇಳಬಹುದು. ಆದರೆ, ಇವೂ ಪರಸ್ಪರ ಒಡಂಬಡಿಕೆಯ ಮೂಲಕ ಹೊರತು ಶಾಸನದ ಮೂಲಕವಲ್ಲ. ಹಿಡುವಳಿ ಪರಿಮಿತಿಯೂ ಸ್ವೇಚ್ಛೆಯಿಂದಲೇ ಬರಬೇಕು. ಭೂಮಾಲಿಕರು, ಕಾರ್ಮಿಕರು ಮತ್ತು ಗೇಣಿದಾರರು ಒಂದು ಗ್ರಾಮೀಣ ಸಮಾಜದ ಅಂಗಗಳು ಅವರನ್ನು ಬೇರ್ಪಡಿಸಲು ಯಾವುದೇ ಕ್ರಮ ಕೈಗೊಂಡಲ್ಲಿ ಅದು ರಾಷ್ಟ್ರಕ್ಕೆ ಸಲ್ಲಿಸುವ ಸೇವೆಯಾಗದು" ಎಂದವರು ಎಚ್ಚರಿಸಿದರು.

ಭಾರತದ ಕೃಷಿಕ ಸಮಾಜದ ಪರವಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯನ್ನು ವಿನಂತಿಸುತ್ತ ಸರದಾರ ಲಾಲ್‌ಸಿಂಗರು ಅಧ್ಯಕ್ಷ ಸ್ಥಾನದಿಂದ, ನಿಯೋಜಿತಭೂಸುಧಾರಣೆಯು ಭಾರತದ ಕೃಷಿ ಬೆಳವಣಿಗೆಗೆ ಸಹಾಯಕವಾಗುವುದೇ ಎಂಬ ವಿಚಾರದಲ್ಲಿ ನಿಷ್ಪಕ್ಷಪಾತ ತೀರ್ಪು ಕೊಡುವಂತೆ ಅ. ಭಾ. ಕಾಂಗ್ರೆಸ್ ಸಮಿತಿಯು ಕೃಷಿ ತಜ್ಞರ ಸಮಿತಿಯೊಂದನ್ನು ನೇಮಿಸಬೇಕು.'' ಎಂದರು. ''ಅಧಿಕ ಆಹಾರೋತ್ಪಾದನೆಯ ದೃಷ್ಟಿಯಿಂದಾಗಲಿ ಅಥವಾ ಸಾಮಾಜಿಕ ನ್ಯಾಯವೊದಗಿಸುವ ದೃಷ್ಟಿಯಿಂದಾಗಲೀ ನಿಯೋಜಿತ ಭೂಸುಧಾರಣೆಯನ್ನು ಪರಿಶೀಲಿಸಿದರೆ, ಅದು ಎರಡು ದೃಷ್ಟಿಯಿಂದಲೂ ನ್ಯಾಯಬದ್ಧವಲ್ಲವೆಂದು ಸ್ಪಷ್ಟವಾಗುತ್ತದೆ. ಎಂದು ಮುಂತಾಗಿ ನುಡಿದು, ಕೃಷಿಕರೆಲ್ಲರೂ ಸಂಘಟಿತರಾಗಿ ನಗರದ ಜನರಷ್ಟೇ ಸಮನ್ವಯ ಹಕ್ಕುಗಳಿಗಾಗಿ ಹೋರಾಡುವಂತೆ ಕರೆಯಿತ್ತರು.

ನಿಯೋಜಿತ ಭೂಸುಧಾರಣೆಯ ಮೇಲೆ ಸಾರ್ವಜನಿಕರ ಅಭಿಪ್ರಾಯ ಪಡೆಯದೆ

೭ನೇ ಪುಟದ ಕೊನೆಯ ಕಲಂಮನ್ನು ನೋಡಿ.

ಉಡುಪಿ ಡಿ ಮು. ಕೋರ್ಟಿನಲ್ಲಿ

O S. No 355/1958

ಅಲ್ಬರ್ಟ್ ಮಿನೇಜಸ್ — ವಾದಿ
ಮತ್ತು
ಲಕ್ಷ್ಮೀನಾರಾಯಣರಾವ್-ಸೀತಾರಾಮಯ್ಯ
ಮಗ-ಬೆಳ್ಳೆಗ್ರಾಮ-ಪ್ರತಿವಾದಿ.
ಯವರೊಳಗೆ

ವಾದಿಗೆ ಪ್ರತಿವಾದಿಯು ತಾ9-6-54ರಲ್ಲು ಬರೆಕೊಟ್ಟ ಮೂಲಗೇಣಿ ಚೀಟು ಪ್ರಕಾರ ಮೂಲಗೇಣಿ ಪಕ್ಕಿನಿಂದ ಅನುಭವಿಸಿ ಬರುವ ಆಸ್ತಿಯ ಬಾಬ್ತು ಮನ್ಮಥ ದುರ್ಮುಖಿ ಮತ್ತು ಹೇವಿಳಂಬಿ ಸಂವತ್ಸರಗಳಿಗೆ ಬರತಕ್ಕ ಗೇಣಿ ಬಾಕಿ ಬಡ್ಡಿ ಕೂಡಾ ರೂ. 477.36 ಕೇಳಿ ದಾಖಲು ಮಾಡಿದ ಮೇಲಿನ ವ್ಯಾಜ್ಯವು ಪ್ರತಿವಾದಿಯ ನೋಟೀಸಿನ ಬಗ್ಗೆ ತಾ12-1-59ಕ್ಕೆ ಇಟ್ಟಿದೆ ಪ್ರತಿವಾದಿಯು ಸದರಿ ತಾ12-1-59ನೇ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗುವರೇ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವನ್ನು ಪ್ರತಿವಾದಿಯ ಗೈರುಹಾಜ್ರಿಯಿಂದ ತೀರ್ಮಾನಿಸಲ್ಪಡುವದು.

Gracian C. Rego,
Vakil For Plaintiff.

ಉಡುಪಿ-ತಾ28-12-58

ಅಲ್ಲಿಯ ಸುದ್ದಿ ಸಾರ

ಚಿತ್ರಕಲಾ ಪ್ರದರ್ಶನ: ಮಂಗಳೂರು ಭಾರತ — ರಷ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಲಾವಿದರ ಚಿತ್ರಕಲೆ ಮತ್ತು ಫೊಟೋಗ್ರಾಫ್‌ಗಳ ಪ್ರದರ್ಶನವು ಕಳೆದ ತಾ. 28ರಂದು ಶ್ರೀ ವಿ. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವಿ ಎಸ್. ಕುಡ್ವರು ಈ ಪ್ರದರ್ಶನದ ಉದ್ಘಾಟನೆ ಮಾಡಿ ಪ್ರದರ್ಶನದಲ್ಲಿ ಉತ್ತಮ ಕೃತಿಗಳಿಗೆ ಬಹುಮಾನ ವಿತರಣೆ ಮಾಡಿದರು. ಶ್ರೀಗಳಾದ ಕೆ. ಶಿವರಾಮ ಕಾರಂತ ಮತ್ತು ಟಿ. ಎಸ್. ಹೆಗ್ಡೆಯವರು ಚಿತ್ರಕಲೆ, ಸಾಹಿತ್ಯಕಲೆ ಕುರಿತು ಮಾತನಾಡಿದರು.

ಮಂಗಳೂರಲ್ಲಿ ಕೇಂದ್ರ ಸಚಿವ ಪಾಟೀಲರು: ಕೇಂದ್ರ ಸಾರಿಗೆ ಮತ್ತು ಸಂಪರ್ಕ ಖಾತೆಯ ಸಚಿವರಾದ ಶ್ರೀ ಎಸ್. ಕೆ. ಪಾಟೀಲರು ತಾ. ೪ರಂದು ಉರ್ವದಲ್ಲಿ ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಹೊಸ ಕಟ್ಟಡವನ್ನು ಉದ್ಘಾಟಿಸುತ್ತಾ, ಭಾರತದ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಮಾತೃಭಾಷೆ ಅಥವಾ ರಾಜ್ಯಭಾಷೆ ರಾಷ್ಟ್ರಭಾಷೆ ಹಿಂದಿ ಮತ್ತು ಅಂತರ್ರಾಷ್ಟ್ರೀಯ ಭಾಷೆ ಇಂಗ್ಲಿಷ್ ಈ ಮೂರು ಭಾಷೆಗಳನ್ನು ಕಲಿಯಬೇಕೆಂಬುದಾಗಿ ಕರೆಯಿತ್ತರು.

ಆರಂಭದಲ್ಲಿ ಸಮಿತಿಯ ಅಧ್ಯಕ್ಷ ಶ್ರೀ ಯು. ಕೇಶವರಾಯರು ಸ್ವಾಗತಿಸಿದರು. ಸಮಿತಿಯ ಉಪಾಧ್ಯಕ್ಷೆ ಶ್ರೀಮತಿ ರಾಧಾ ಎಲ್. ರಾಯರು ಬಂದ ಸಂದೇಶಗಳನ್ನೋದಿದರು. ಸಮಿತಿಯ ಕಾರ್ಯದರ್ಶಿ ಶ್ರೀ ಪಿ. ಶಿವರಾಯರು ಧನ್ಯವಾದವಿತ್ತರು.

ಯುವಕ ಕಾಂಗ್ರೆಸಿನ ರ‍್ಯಾಲಿ— ಮಂಗಳೂರಿನ ಯುವಕ ಕಾಂಗ್ರೆಸಿನ ರ‍್ಯಾಲಿಯು ಕೇಂದ್ರ ಮೈದಾನದಲ್ಲಿ ಶ್ರೀ ಎಸ್. ಕೆ. ಪಾಟೀಲರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಯವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಕೆ. ಕೆ. ಸೆಟ್ಟಿ, ಎಮ್. ಎಲ್. ಸಿ. ಯವರು ಸ್ವಾಗತ ಭಾಷಣಮಾಡಿದರು. ಯುವಕ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎಮ್. ಅಬ್ದುಲ್ ಖಾದರರು ವರದಿಯನ್ನೋದಿದರು. ಶ್ರೀ ಮಿತ್ರದಾಸ ಹೆಗ್ಡೆಯವರು ಕೇಂದ್ರ ಹಾಗೂ ರಾಜ್ಯ ಸಚಿವರು ಮೊದಲಾದವರಿಂದ ಬಂದ ಸಂದೇಶಗಳನ್ನೋದಿದರು. ಶ್ರೀ ಟಿ. ಎ. ಪೈಗಳು ಯುವಕ ಕಾಂಗ್ರೆಸಿಗರ ಮಹತ್ ಜವಾಬ್ದಾರಿಯನ್ನು ವಿವರಿಸಿ ಮಾತನಾಡಿದರು. ಸಚಿವರು ತಮ್ಮ ಭಾಷಣದಲ್ಲಿ, ನವಭಾರತವನ್ನು ಕಟ್ಟುವ ಮಹತ್ ಜವಾಬ್ದಾರಿಯನ್ನು ಹೊರಲಿರುವ ಯುವಕರಿಂದು ತಮ್ಮ ಪ್ರಮುಖವಾದ ಜವಾಬ್ದಾರಿಯನ್ನು ಅರಿತುಕೊಂಡು ಅದನ್ನು ವಹಿಸಿಕೊಳ್ಳಲು ಅಗತ್ಯವಾದ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆಂದರು. ಶ್ರೀ ಖಾದರರು ಧನ್ಯವಾದಗಳನ್ನಿತ್ತರು. ಬಳಿಕ ವಿನೋದಾವಳಿ ಕಾರ್ಯಕ್ರಮಗಳಾದುವು.

ವೃದ್ಧಾನಂದ ಸೇವಾಶ್ರಮದ ಹೊಸ ಕಟ್ಟಡವನ್ನು ಸಚಿವ ಶ್ರೀ ಪಾಟೀಲರು ಉದ್ಘಾಟಿಸುತ್ತಾ, ದೇಶದಲ್ಲಿ ಜಾತ್ಯಾತೀತ ಸಮಾಜವನ್ನು ಕಟ್ಟುವ ಹುಮ್ಮಸ್ಸಿನಲ್ಲಿ ನಾವು ನಾಸ್ತಿಕ ಸಮಾಜಕ್ಕೆ ಎಡೆಕೊಡಬಾರದು. ಭಾರತದ ಜನತೆ ನಮ್ಮ ಧಾರ್ಮಿಕ ಹಿನ್ನೆಲೆಯನ್ನು ಮರೆಯದೆ ಅದನ್ನು ಕಾಯ್ದುಕೊಳ್ಳಬೇಕೆಂದು ಕರೆಯಿತ್ತರು.

ಆರಂಭದಲ್ಲಿ ಆಡಳಿತಾ ಸಮಿತಿಯ ಅಧ್ಯಕ್ಷ ಶ್ರೀ ಎಮ್. ಅಪ್ಪುರಾಯರು ಸ್ವಾಗತಿಸುತ್ತಾ ಈ ಹೊಸ ಕಟ್ಟಡವು ಸುಮಾರು ರೂ75,000 ಖರ್ಚಿನಿಂದ ಕಟ್ಟಲ್ಪಟ್ಟಿದೆಯೆಂದೂ ಅದರಲ್ಲಿ ರೂ15,000 ಕೇಂದ್ರ ಸಮಾಜ ಹಿತಚಿಂತನಾ ಬೋರ್ಡಿನವರಿಂದಲೂ ಉಳಿದುದು ಸ್ಥಳೀಯ ಸಹಾಯದಿಂದಲೂ ಕಟ್ಟಲ್ಪಟ್ಟಿದೆಯಾಗಿ ತಿಳಿಸಿ, ಆಶ್ರಮ ಮಾಡುತ್ತಿರುವ ಕಾರ್ಯಗಳನ್ನು ವಿವರಿಸಿದರು. ಶ್ರೀ ಯು. ಶ್ರೀನಿವಾಸ ಕಿಣಿಯರು ಧನ್ಯವಾದವಿತ್ತರು.

ನಗರಸಭೆಯ ಮಾನಪತ್ರಕ್ಕುತ್ತರ

ನಗರಸಭೆಯ ಪರವಾಗಿ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಶ್ರೀ ಪಾಟೀಲರಿಗೆ ಅರ್ಪಿಸಿದ ಮಾನಪತ್ರದಲ್ಲಿ, ಮಂಗಳೂರು ಬಂದರವನ್ನು ಅಭಿವೃದ್ಧಿಗೊಳಿಸಬೇಕು, ಹಾಸನ-ಮಂಗಳೂರು ರೈಲ್ವೆ ಬೇಗನೆ ರಚನೆಗೊಳ್ಳಬೇಕು, ಮಂಗಳೂರಿನ ರೂಪಾಯಿ 139 ಲಕ್ಷದ ಭೂಗತ ಚರಂಡಿಯೋಜನೆಗೆ ಕೇಂದ್ರ ಸರಕಾರ ಸೇಕಡಾ 50 ಗ್ರಾಂಟುರೂಪದಲ್ಲೂ ಸೇಕಡಾ 50 ಸಾಲರೂಪದಲ್ಲೂ ಮಂಜೂರುಮಾಡಬೇಕು ಎಂಬುದಾಗಿಯೂ ಕೇಳಲಾಗಿತ್ತು.

ಸಚಿವರು ಉತ್ತರಿಸುತ್ತಾ, ಭಾರತದಲ್ಲಿ ಪ್ರಜಾಪ್ರಭುತ್ವವು ಸ್ಥಿರವಾಗಿ ಉಳಿದು ಯಶಸ್ವಿಯಾಗಬೇಕಾದಲ್ಲಿ ಪ್ರಜಾಪ್ರಭುತ್ವದ ಅಡಿಗಲ್ಲಿನಂತಿರುವ ಸ್ಥಳೀಯ ಆಡಳಿತ ಸಂಸ್ಥೆಗಳು ಬಲಗೊಳ್ಳಬೇಕು. ಅವುಗಳು ಸರಿಯಾದ ರೀತಿಯಲ್ಲಿ ಸೇವೆ ಸಲ್ಲಿಸುವುದು ಸಾಧ್ಯವಾಗುವಂತೆ ಅವುಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು ಎಂದು ಹೇಳಿದರು. ಮಂಗಳೂರು ಬಂದರವನ್ನು ಅಭಿವೃದ್ಧಿಗೊಳಿಸಬೇಕೆಂದು ಕೇಂದ್ರ ಸರಕಾರ ಬಯಸಿದೆ. ರಾಜ್ಯದ ಇತರ ಬಂದರುಗಳ ಅಭಿವೃದ್ಧಿ ಸರದಿಯು ಬರುವುದು. ಹಾಸನ ಮಂಗಳೂರು ರೈಲ್ವೆ ರಚನೆಯು ಅಗತ್ಯವೆಂದೂ ಆ ವಿಷಯ ಸಂಬಂಧಪಟ್ಟವರೊಡನೆ ಒತ್ತಾಯಿಸುವುದಾಗಿಯೂ ಶ್ರೀ ಪಾಟೀಲರು ಆಶ್ವಾಸನೆಯಿತ್ತರು.

ಸರ್ವೋದಯದ ಕುರಿತು ಭಾಷಣ

ಅ. ಭಾ. ಸರ್ವಸೇವಾ ಸಂಘದ ಜತೆಕಾರ್ಯದರ್ಶಿಗಳಾದ ಶ್ರೀ ವಲ್ಲಭ ಸ್ವಾಮಿಯವರು ತಾ. 30ರಂದು ಸಂಜೆ ಉಡುಪಿ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನ ಪರಾರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಸರ್ವೋದಯ ಕುರಿತು ಭಾಷಣ ಮಾಡಿದರು. ಅವರು ಗಾಂಧೀಜಿಯವರ ತತ್ವ ಮತ್ತು ವಿನೋಬಾಜಿಯವರ ಕಾರ್ಯಕ್ರಮಗಳನ್ನು ವಿವರಿಸಿ, ಸರ್ವೋದಯ ಆಂದೋಲನಕ್ಕೆ ಎಲ್ಲರ ಬೆಂಬಲ ಕೋರಿದರು. ಸಭಾಧ್ಯಕ್ಷತೆ ವಹಿಸಿದ್ದ ಉಡುಪಿ ನಗರ ಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ತಮ್ಮ ಸಮಾರೋಪ ಮಾತುಗಳಲ್ಲಿ ಸರ್ವೋದಯ ವಿಚಾರವು ಹಿಂದೀ ಸಂಸ್ಕೃತಿಗೆ ಹೊಸದಲ್ಲದಿದ್ದರೂ ಗಾಂಧೀಜಿ ಹಾಗೂ ವಿನೋಬಾಜಿಯವರು ಅದನ್ನು ಜಾಗ್ರತಗೊಳಿಸಿ ವ್ಯಾವಹಾರಿಕವಾಗಿ ಆಚರಣೆಗೆ ತರುತ್ತಲಿದ್ದಾರೆ ಎಂದು ಹೇಳಿದರು. ಸ್ಥಳೀಯ ಕಾರ್ಯಕರ್ತರಾದ ಶ್ರೀ ಕೆ. ಶ್ರೀನಿವಾಸ ಪೈಗಳು ಧನ್ಯವಾದವಿತ್ತರು.

ಐದು ವರ್ಷಗಳ ವರೆಗೆ ಸಾರಿಗೆ ರಾಷ್ಟ್ರೀಕರಣವಿಲ್ಲ— ಸ್ಥಳೀಯ ಕೆನರಾ ವರ್ಕ್ ಶೋಪಿನವರು ಮರೋಳಿಯಲ್ಲಿ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಕೇಂದ್ರ ಸಚಿವ ಶ್ರೀ ಎಸ್. ಕೆ. ಪಾಟೀಲರು ಭಾಗವಹಿಸಿದರು. ಆರಂಭದಲ್ಲಿ ಸಂಸ್ಥೆಯ ಟೆಕ್ನಿಕಲ್ ಡೈರಕ್ಟರ್ ಶ್ರೀ ವಿ. ಎಸ್. ಕುಡುವರು ಸ್ವಾಗತಿಸಿದರು ಶ್ರೀ ಪದ್ಮನಾಭ ರಘುನಾಥ ಪೈಗಳು ಮುಖ್ಯ ಅತಿಥಿಗಳಿಗೆ ಹಾರಾರ್ಪಣೆ ಮಾಡಿದರು.

ಸಚಿವರು ಮಾತನಾಡುತ್ತಾ, ಇನ್ನು ಐದು ವರ್ಷಗಳ ವರೆಗೆ ಸಾರಿಗೆ ವ್ಯವಸಾಯದ ರಾಷ್ಟ್ರೀಕರಣವನ್ನು ಮಾಡುವುದಿಲ್ಲವೆಂಬ ಆಶ್ವಾಸನೆಯಿತ್ತರು. ದೇಶದ ಹಿತದೃಷ್ಟಿಯಿಂದ ಕೈಗಾರಿಕೆಗಳು ಸರಿಯಾದ ರೀತಿಯಲ್ಲಿ ಪ್ರಗತಿ ಹೊಂದಬೇಕಾದಲ್ಲಿ ಸರಕಾರಕ್ಕೆ ಎಲ್ಲಾ ಕೈಗಾರಿಕೆಗಳನ್ನು ನಡೆಸಲು ಸರಿಯಾದ ತಾಂತ್ರಿಕ ತಜ್ಞರು ದೊರಕದಿದ್ದಲ್ಲಿ ಅವುಗಳನ್ನು ಉತ್ತಮ ರೀತಿಯಲ್ಲಿ ಚಲಾಯಿಸುವಂತಹ ಖಾಸಗಿ ಆಡಳಿತೆಗಳವರಿಗೆ ಬಿಟ್ಟು ಕೊಡುವುದು ಉತ್ತಮವೆಂದರು

ಕೆನರಾ ಚೇಂಬರಿನಲ್ಲಿ— ಶ್ರೀ ಪಾಟೀಲರಿಗೆ ಮಾನಪತ್ರ ನೀಡಲಾಯಿತು. ಶ್ರೀ ಮನೇಲ್ ಶ್ರೀನಿವಾಸ ನಾಯ್ಕರು ಸ್ವಾಗತಿಸಿದರು. ಶ್ರೀ ಪಿ. ನರಸಿಂಗರಾಯರು ಮನವಿಯೊಂದನ್ನು ಅರ್ಪಿಸಿದರು. ಸಚಿವರು ಉತ್ತರಿಸುತ್ತಾ ರಾಷ್ಟ್ರದ ಸರ್ವತೋಮುಖ ಉನ್ನತಿಗಾಗಿ ಜನತೆ ತಮ್ಮ ವೈಯಕ್ತಿಕ ಭಾವನೆಗಳನ್ನು ಬದಿಗೊತ್ತಿ ಒಂದಾಗಿ ದುಡಿಯಬೇಕೆಂದರು.

ವಾರ್ಷಿಕೋತ್ಸವ ಸಮಾರಂಭವಲ್ಲಿ— ಮೆನೇಜ್‌ಮೆಂಟ್ ಎಸೋಸಿಯೇಶನ ದ್ವಿತೀಯ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿ ಶ್ರೀ ಪಾಟೀಲರು ಮಾತನಾಡುತ್ತಾ ದಿನದಿಂದ ದಿನಕ್ಕೆ ಪ್ರಗತಿಪಥದತ್ತ ಸಾಗುತ್ತಿರುವ ಇಂದಿನ ಈ ವಿಜ್ಞಾನ ಯುಗದಲ್ಲಿ ಜಗತ್ತಿನ ಬಹಳ ಮುಂದುವರಿದ ರಾಷ್ಟ್ರಗಳೊಡನೆ ನಾವು ಸ್ಪರ್ಧಿಸಬೇಕಾದಲ್ಲಿ ನಮ್ಮಲ್ಲಿ ನಾವು ಸುಧಾರಿತ ರೀತಿಯ ಆಡಳಿತ ಪದ್ಧತಿಗಳನ್ನೇ ಅನುಸರಿಸಿ ದೇಶದ ಉತ್ಪಾದನೆಯನ್ನು ಹೆಚ್ಚಿಸಬೇಕಾದುದು ಅಗತ್ಯವೆಂದರು.

ಆರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ. ಜನಾರ್ಧನ ಪ್ರಭುಗಳು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಕೆ. ವಿಶ್ವನಾಥ ಕಾಮತರು ವರದಿಯನ್ನೋದಿದರಲ್ಲದೆ ಕೊನೆಯಲ್ಲಿ ಧನ್ಯವಾದವಿತ್ತರು. ಸಚಿವರು ಮಂಗಳೂರು ಬಂದರ ಪರಿಶೀಲನೆಯನ್ನು ಮಾಡಿ ಪೋರ್ಟ್ ಟ್ರಸ್ಟಿನ ಸದಸ್ಯರೊಡನೆ ವಿಚಾರ ವಿನಿಮಯ ನಡೆಸಿದರು.

ವಿದಾಯ ಸತ್ಕಾರ. ಉಡುಪಿ ನಗರ ಸಭೆಯು ತಾ 2ರಂದು ಜರಗಿತು. ಸಭಾಪತಿ ಶ್ರೀ ಕೆ. ಕೆ. ಪೈಗಳು ತಮ್ಮ ಆಡಳಿತದ ಅವಧಿಯಲ್ಲಿ ಸದಸ್ಯರೂ, ಆಫೀಸು ಸಿಬಂಧಿಯವರೂ, ಪತ್ರಿಕಾ ಸುದ್ದಿಗಾರರೂ ಸಹಕರಿಸಿದ ಬಗ್ಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಹಾಜರಿದ್ದವರೆಲ್ಲರಿಗೂ ಚಹಾಸತ್ಕಾರವಾಯಿತು.

ಉಡುಪಿಯಲ್ಲಿ ಹೊಸ ವರ್ಷದ ಹಬ್ಬ ಪೈಬಂಧುಗಳ ಹತ್ತು ಲಿಮಿಟೆಡ್ ಸಂಸ್ಥೆಗಳ ಆಶ್ರಯದಲ್ಲಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ತಾ1ರಂದು ಹೊಸ ವರ್ಷದ ಹಬ್ಬವನ್ನು ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾಯರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ಈ ಸಂದರ್ಭದಲ್ಲಿ ಹಳೆಯ ನಾಗರೀಕರಾದ ವಕೀಲ್ ಶ್ರೀ ಪಿ. ಪದ್ಮನಾಭರಾಯರನ್ನು ಗೌರವಿಸಲಾಯಿತು. ಆರಂಭದಲ್ಲಿ ಶ್ರೀ ಟಿ ರಮೇಶಪೈಗಳು ಸ್ವಾಗತಿಸಿದರು. ಶ್ರೀಗಳಾದ ಖ್ಯಾಮರಾಯ ಸೆಟ್ಟಿ, ಟಿ.ಎ ಪೈ, ಡಾ| ಮಾಧವಪೈ ಡಾ| ಕೆ. ಎಲ್. ಐತಾಳರು ಅತಿಥಿಗಳ ಗುಣಗಾನ ಮಾಡಿದರು. ಬಳಿಕ ಮುಖ್ಯ ಅತಿಥಿಗಳಾದ ಶ್ರೀ ಪದ್ಮನಾಭರಾಯರ ಭಾಷಣದ ಬಳಿಕ ಶ್ರೀ ಎ ಜಿ. ಆಳ್ವೆಯವರು ಧನ್ಯವಾದಗಳನ್ನಿತ್ತರು.

ಸತ್ಕಾರಕೂಟ— ತಾ ೨ರಂದು ಉಡುಪಿಯ ನಗರಸಭಾ ನೌಕರರು ನಗರಸಭಾಧ್ಯಕ್ಷ ಹಾಗೂ ಸದಸ್ಯರಿಗೆ ಚಹಾಸತ್ಕಾರವನ್ನಿತ್ತು ಗೌರವಿಸುವ ಸಮಾರಂಭವನ್ನು ಡಿ| ಮುನ್ಸಿಫ್ ಶ್ರೀ ಬಿ ಎಸ್ ನಾಗಮೋತಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಹಲವರ ಭಾಷಣವಾದ ಮೇಲೆ ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ಮೂರುವರ್ಷದಲ್ಲಿ ನಗರಸಭೆಯು ಸಾಧಿಸಿದ ಕಾರ್ಯಗಳನ್ನು ವಿವರಿಸಿದರು.

ವಿವಾಹ ಸಮಾರಂಭ— ಉಡುಪಿಯ ಡಾ| ಪಿ ಆರ್. ನಾಯಕರ ಪುತ್ರಿ ಕುಮಾರಿ ಸುಮಿತ್ರಾರವರ ವಿವಾಹವು ಶ್ರೀ ಬಿ. ಶ್ರೀನಿವಾಸ ಪೈಗಳ ಪುತ್ರ ಶ್ರೀ ವಿಠಲ ಪೈಗಳೊಂದಿಗೆ ತಾ ೨ರಂದು ವಧುವಿನ ಗೃಹದಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಸಮಾರಂಭಕ್ಕೆ ಮಹನೀಯರನೇಕರು ಬಂದಿದ್ದರು.

ಮುಂಬಯಿಯ— ಸರ್ವೋದಯ ಕರ್ನಾಟಕ ಕಲಾನಿಕೇತನ'ದ ಮೊದಲ ಕಾಣಿಕೆ 'ದ್ರೋಹಿ' ನಾಟಕದ ಪ್ರಾರಂಭೋತ್ಸವವನ್ನು ಕಳೆದ ತಾ ೨೮ರಂದು ಪ್ರಿನ್ಸಿಪಾಲ್ ಶ್ರೀ ಆರ್. ಆರ್. ನೇಲ್ಸನ್, ಜೆ. ಪಿ ಅವರು ಗವರ್ನಮೆಂಟ್ ಸಿಡನ್ಹೆಮ್ ಕಾಲೇಜಿನ ನಾಟ್ಯಗೃಹದಲ್ಲಿ ನೆರವೇರಿಸಿದರು. ಮುನಿಸಿಪಲ್ ಎಜ್ಯುಕೇಶನಿನ ದಕ್ಷಿಣ ವಿಭಾಗದ ಸ. ಸೂಪರಿಂಟೆಂಡೆಂಟರಾದ ಶ್ರೀ ಯಸ್. ನಟರಾಜನ್ನರು ಸಭಾಧ್ಯಕ್ಷತೆ ವಹಿಸಿದ್ದರು. ಕಲಾನಿಕೇತನದ ಅಧ್ಯಕ್ಷ ಶ್ರೀ ಬಿ. ವಿ ಸೆಟ್ಟರು ಸ್ವಾಗತ ಭಾಷಣ ಮಾಡಿದರು. ಸಂಘದ ಗೌರವ ಕಾರ್ಯದರ್ಶಿ ಶ್ರೀ ಕೆ. ಕೆ. ಜತ್ತನ್ನರು ಧನ್ಯವಾದವಿತ್ತರು.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ ಇದರ ಉದಾತ್ತ ಹಿತಚಿಂತಕ ಹಾಗೂ ಆಶ್ರಯದಾತರಾದ ಶ್ರೀ ಕೆ. ಎನ್. ಗಾಯತೊಂಡೆಯವರು ಕಳೆದ ತಾ೨೮ರಂದು ಪರಂಧಾಮವನ್ನೈದಿದರೆನ್ನಲು ವಿಷಾದವಾಗುತ್ತದೆ. ಅವರ ನಿಧನದ ದುಃಖಸೂಚಕವಾಗಿ ಮಂಡಳಿಯ ವಾಚನಾಲಯ ಮೊಗವೀರ ಫ್ರೀ ನೈಟ್ ಹೈಸ್ಕೂಲ್ ಮತ್ತು ಮಂಡಳಿಯ ಕಾರ್ಯಾಲಯಗಳು ಅಂದು ಮುಚ್ಚಲ್ಪಟ್ಟಿದ್ದವು. ಅಲ್ಲದೆ ಕೀರ್ತಿಶೇಷರ ಆತ್ಮಕ್ಕೆ ಚಿರಶಾಂತಿ ದೊರೆಕಲೆಂದು ಪ್ರಾರ್ಥನೆ ಸಲ್ಲಿಸಲಾಯಿತು.

ಕುಂಜಾರು ಗಿರಿಜಾ ಹಾ|ಎ|ಶಾಲೆ ಮತ್ತು ಕುರುಕಾಲು ಶ್ರೀ ಗಣಪತಿ ಎಲಿಮೆಂಟರಿ ಶಾಲೆಗಳ ಕಟ್ಟಡಾದಿಗಳ ಬಗ್ಗೆ ಆದರ ಮೆನೇಜರ್ ಶ್ರೀ ಕುರುಕಾಲ ಗಣಪಯ್ಯ ಸೆಟ್ಟರು ಬೊಂಬಾಯಿಯತ್ತ ಕಡೆ ಧನ ಸಂಗ್ರಹಿಸಲು ಡಿಪಾರ್ಟ್‌ಮೆಂಟಿನವರ ಹಾಗೂ ಆನ್ಯ ಮಹನೀಯರನೇಕರ ಪ್ರಶಂಸಾ ಪತ್ರಗಳೊಂದಿಗೆ ಹೊರಟಿರುತ್ತಾರೆ. ಸರ್ವರೂ ಉದಾರಮನಸ್ಸಿನಿಂದ ಧನಸಹಾಯವಿತ್ತು ಶ್ರೀಸೆಟ್ಟರ ಸಂಚಾರವು ಜಯಪ್ರದವಾಗುವಂತೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಮಣಿಪಾಲದಲ್ಲಿ ಸಚಿವ ಎಸ್. ಕೆ. ಪಾಟೀಲರು ಕೇಂದ್ರ ಸರಕಾರದ ಸಾರಿಗೆ ಸಂಪರ್ಕ ಶಾಖೆಯ ಸಚಿವ ಶ್ರೀ ಎಸ್. ಕೆ. ಪಾಟೀಲರು ತಾ. ೪ನೆ ರಾತ್ರಿ ಮಣಿಪಾಲಕ್ಕೆ ಆಗಮಿಸಿ, ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನಿನವರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಲೆಕ್ಚರ್ ಹಾಲಿನಲ್ಲಿ ಏರ್ಪಡಿಸಿದ ಭೋಜನ ಸತ್ಕಾರದಲ್ಲಿ ಭಾಗವಹಿಸಿದರು ಎಕೆಡೆಮಿ ರಿಜಿಸ್ಟ್ರಾರ್ ಡಾ| ಮಾಧವ ಪೈಗಳು ಮಂತ್ರಿಗಳನ್ನು ಹಾರ್ದಿಕವಾಗಿ ಸ್ವಾಗತಿಸಿ ಬೆಳೆಯುತ್ತಿರುವ ಎಕೆಡೆಮಿಯ ಶಿಕ್ಷಣ ಸಂಸ್ಥೆಗಳ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟರು. ಮಂತ್ರಿಗಳು ಉತ್ತರಿಸುತ್ತಾ, ಖಾಸಗಿ ಸಂಸ್ಥೆಯಾದ ಎಕೆಡೆಮಿಯು ಸಹಕಾರಿ ಪದ್ಧತಿಯಿಂದ ಅಸಾಧಾರಣವೂ ಅಪೂರ್ವವೂ ಆದ ಮೆಡಿಕಲ್ ಕಾಲೇಜ್, ಇಂಜನಿಯರಿಂಗ್ ಕಾಲೇಜುಗಳನ್ನು ಉಚ್ಚ ಮಟ್ಟದಲ್ಲಿ ನಡೆಸಿಕೊಂಡು ಬರುತ್ತಿರುವುದು ಯಾರನ್ನಾದರೂ ಕಣ್ತೆರೆಯುವಂತೆ ಮಾಡುವ ವಿಚಿತ್ರ ವಿಚಾರವೆಂದರು. ಡಾ| ಮಾಧವ ಪೈಗಳ ದಕ್ಷತೆಯಿಂದ ರೂಪುಗೊಂಡಿರುವ ಅತ್ಯುತ್ತಮ ಕಟ್ಟಡ ಮತ್ತು ಸಲಕರಣಗಳಿಂದ ಕೂಡಿರುವ ಶಿಕ್ಷಣ ಕೇಂದ್ರವು ಬಹು ಬೇಗನೆ ಅಖಿಲ ಭಾರತ ದೃಷ್ಟಿಯನ್ನು ಸೆಳೆಯದಿರದೆಂದು ಹಾರೈಸಿದರು. ಮಂತ್ರಿಗಳು ರಾತ್ರಿ ತಂಗಿ ಮರುದಿನ ವಿವಿಧ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ, ಮಲ್ಪೆಗೆ ಭೇಟಿಯಿತ್ತು ಮಂಗಳೂರಿಗೆ ತೆರಳಿದರು. ಮಂತ್ರಿಗಳ ಜತೆಯಲ್ಲಿ ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಮತ್ತು ಶ್ರೀ ಕೆ ಕೆ. ಸೆಟ್ಟಿ, ಎಮ್. ಎಲ್. ಸಿ. ಯವರು ಬಂದಿದ್ದರು.

ಅದನ್ನು ಶಾಸನವಾಗಿ ವ್ಯವಹಾರಕ್ಕೆ ತರಬಾರದು; ಹಾಳು ಬಿದ್ದ ಭೂಮಿಯನ್ನು ಕೃಷಿಯೋಗ್ಯ ಭೂಮಿಯಾಗಿ ಪರಿವರ್ತಿಸಿ ಅದನ್ನು ವಿತರಣೆಗೈಯುವುದು ಯೋಗ್ಯ. ನಿಯೋಜಿತ ಭೂಶಾಸನದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಬಹಳ ಹಾನಿಯಿದೆ. ಭೂಸ್ವಾಮಿತ್ವ ಸಂಬಂಧದ ವ್ಯಾಜ್ಯಗಳನ್ನು ಟ್ರಿಬ್ಯುನಲ್‌ಗಳ ಬದಲು ಸಿವಿಲ್ ಕೋರ್ಟುಗಳಿಗೆ ಒಪ್ಪಿಸುವುದು ಯೋಗ್ಯ ಎಂದು ಶ್ರೀ ಕೆ. ಬಾಲಕೃಷ್ಣರಾಯರು ಅಭಿಪ್ರಾಯ ಪಟ್ಟರು.

ಅಳಿಯ ಸಂತಾನ ಮಹಿಳಾ ಸಮ್ಮೇಳನದ ಕನ್ವೀನರಾದ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರ ಮಾತಾಡಿ, ಅಳಿಯ ಸಂತಾನ ಕುಟುಂಬದ ವೈಶಿಷ್ಟ್ಯಗಳನ್ನು ವಿವರಿಸಿ, ಅಳಿಯಸಂತಾನ ಕಾನೂನಿನ ಮುಖ್ಯ ವಿಚಾರವನ್ನೇ ಭೂಸುಧಾರಣಾ ಮಸೂದೆಯನ್ನು ತಯಾರಿಸುವಾಗ ಮರೆತಂತಿದೆ. ಭೂಸುಧಾರಣೆಯ ವಿಚಾರದಲ್ಲಿ ಅಳಿಯ ಸಂತಾನ ಕಾನೂನಿನೊಳಗಾದ ಸ್ತ್ರೀಯರ ಅಭಿಪ್ರಾಯ ಪಡೆಯಲು ಸರಕಾರ ಪ್ರಯತ್ನಿಸಿಲ್ಲವೆಂದು ಅವರು ಆರೋಪಿಸಿ, ಹೀಗಾದರೆ ಸಮಾಜಕ್ಕೆ ಅನ್ಯಾಯಮಾಡಿದಂತಾಗುವುದೆಂದರು. ನಿಯೋಜಿತ ಮಸೂದೆಯಂತೆ ಅಳಿಯಸಂತಾನದ ಯಜಮಾನನಿಗೆ ಪರಿಹಾರ ಕೊಟ್ಟಲ್ಲಿ ಪರಿಹಾರ ರೂಪದಲ್ಲಿ ದೊರೆತ ಹಣವನ್ನು ಯಜಮಾನನೇ ನುಂಗಿಹಾಕಿ ಕುಟುಂಬದ ಉಳಿದ ಸದಸ್ಯರು ನಿರ್ಗತಿಕರಾಗುವರೆಂದೂ ಅವರು ಸಂದೇಹ ವ್ಯಕ್ತಪಡಿಸಿದರು.

ವಿಜ್ಞಾನ ಶಾಲೆ

ಪೂನಾದ ರಾಷ್ಟ್ರೀಯ ಪ್ರಯೋಗ ಶಾಲೆ

ದೇಶದ ಮೊತ್ತಮೊದಲ ರಸಾಯನ ಪ್ರಯೋಗ ಶಾಲೆಯಾಗಿ, ಉನ್ನತಸ್ತರದಲ್ಲಿದೆ

೧೯೪೧ರಲ್ಲಿ ಭಾರತ ಸರ್ಕಾರವು ಎರಡು ಪ್ರಮುಖ ಸಂಶೋಧನಾ ಪ್ರಯೋಗ ಶಾಲೆಗಳನ್ನು ಸ್ಥಾಪಿಸಲು ಮೊತ್ತಮೊದಲನೆಯ ಬಾರಿಗೆ ಯೋಚಿಸಿತು. ಒಂದು ಭೌತಿಕ ವಿಜ್ಞಾನಕ್ಕೆ ಸಂಬಂಧಿಸಿದ ರಾಷ್ಟ್ರೀಯ ಪ್ರಯೋಗ ಶಾಲೆ, ಇನ್ನೊಂದು ರಸಾಯನಿಕ ರಾಷ್ಟ್ರೀಯ ಪ್ರಯೋಗ ಶಾಲೆ.

೧೯೪೪ರಲ್ಲಿ ರಾಷ್ಟ್ರೀಯ ರಸಾಯನಿಕ ಪ್ರಯೋಗ ಶಾಲೆಯ ಯೋಜನೆ ಸಿದ್ಧವಾಯಿತು. ೪೭ರಲ್ಲಿ ಮುಂಬಯಿ ಪ್ರಾಂತ್ಯದ ಆಗಿನ ಮುಖ್ಯಮಂತ್ರಿ ಶ್ರೀ. ಬಿ ಜಿ ಖೇರ್ ಅವರು ಕಟ್ಟಡದ ಪಂಚಾಂಗ ಶಿಲೆಯನ್ನು ಪೂನಾದಿಂದ ಉತ್ತರಕ್ಕೆ ಐದು ಮೈಲಿಗಳ ದೂರದಲ್ಲಿರುವ ೪೭೫ ಎಕರೆಯಷ್ಟು ಭೂಮಿಯಲ್ಲಿ ಹಾಕಿದರು. ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ ಅವರು ೧೯೫೦ ಜನವರಿ ೩ರಂದು ಪ್ರಯೋಗ ಶಾಲೆಯ ಉದ್ಘಾಟನೆ ನಡೆಸಿದರು. ರಾಷ್ಟ್ರದ ಒಟ್ಟು ಇಪ್ಪತ್ತು ರಾಷ್ಟ್ರೀಯ ಪ್ರಯೋಗ ಶಾಲೆಗಳಲ್ಲಿ ಮೊತ್ತಮೊದಲನೆಯ ಪ್ರಯೋಗ ಶಾಲೆ ಈ ರೀತಿ ಆರಂಭವಾಯಿತು.

ಈ ಪ್ರಯೋಗ ಶಾಲೆಯನ್ನು ಸ್ಥಾಪಿಸಿದುದರ ಮೂಲ ಉದ್ದೇಶವಾದರೂ ಏನು? ಭವನವನ್ನು ಪ್ರವೇಶಿಸಿದಾಗ ಮುಂಭಾಗದ ಆ ದೊಡ್ಡ ಹಾಲಿನಲ್ಲಿಯೇ ಈ ಪ್ರಶ್ನೆಗೆ ಉತ್ತರ ದೊರಕುತ್ತದೆ. "ಜ್ಞಾನ ಪ್ರಸಾರಕ್ಕೆ ಮತ್ತು ಮಾನವ ಕಲ್ಯಾಣಕ್ಕೆ ರಸಾಯನಿಕ ವಿಜ್ಞಾನವನ್ನು ವಿನಿಯೋಗಿಸುವುದೇ" ಈ ಸಂಸ್ಥೆಯ ಗುರಿಯೆಂದು ಅಲ್ಲಿ ಸ್ಪಷ್ಟವಾಗಿ ಬರೆದಿದೆ

ಈ ಪ್ರಯೋಗ ಶಾಲೆಯ ವ್ಯಾಪ್ತಿ ಬಹಳವಿದ್ದು ರಸಾಯನಿಕ ವಿಜ್ಞಾನಕ್ಕೆ ಸಂಬಂಧಿಸಿದ ಯಾವ ಸಂಶೋಧನೆಯೇ ಆಗಲಿ ಇಲ್ಲಿ ನಡೆಯಲವಕಾಶವಿದೆ. ಚರ್ಮ, ಗಾಜು, ಉಪ್ಪು, ಇಂಧನ, ಆಹಾರ ಮತ್ತು ಔಷಧಾದಿಗಳಿಗೆ ಸಂಬಂಧಿಸಿದ ಹಾಗೆ ಇತರ ಕಡೆಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳಿಗೆಲ್ಲ ಉಪಯೋಗವಾಗುವಂತಹ ಮೂಲ ಸಂಶೋಧನೆ ಇಲ್ಲಿ ನಡೆಯುತ್ತದೆ

ಭಾರತೀಯ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನೆಯ ಪರಿಷತ್ತು ಉದ್ದೇಶಿಸಿರುವ ರಾಷ್ಟ್ರೀಯ ಸಂಶೋಧನಾ ಸ್ವರೂಪ ನಿಂತಿರುವುದು. ರಾಷ್ಟ್ರೀಯ ಭೌತಿಕ ಪ್ರಯೋಗ ಶಾಲೆ ಮತ್ತು ರಾಷ್ಟ್ರೀಯ ರಸಾಯನಿಕ ಪ್ರಯೋಗ ಶಾಲೆಗಳೆಂಬ ಎರಡು ಆಧಾರಸ್ತಂಭಗಳ ಮೇಲೆ ಎಂದು ಹೇಳಬಹುದು.

ರಸಾಯನ ಶಾಸ್ತ್ರ ಮತ್ತು ರಸಾಯನಿಕ ಪ್ರಯೋಗಗಳಿಗೆ ಸಂಬಂಧಿಸಿದಂತೆ ಕಳೆದ ಎಂಟು ವರ್ಷಗಳಲ್ಲಿ ಈ ಸಂಸ್ಥೆಯ

(೧೨ನೇ ಪುಟ ನೋಡಿರಿ)

ಪರಿಚಯ

(೫ನೇ ಪುಟದಿಂದ)

ಸ್ವಾತಂತ್ರ್ಯ ಘೋಷಣೆ

ಘಾನಾ ಸ್ವತಂತ್ರವಾಗುವುದಕ್ಕೆ ಮೊದಲೇ ಡಾ| ಎನ್ ಕ್ರೂಮಾರವರ ಸರಕಾರವು ಪಂಚವಾರ್ಷಿಕ ಯೋಜನೆಯೊಂದನ್ನು ತಯಾರಿಸಿದ್ದು ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆಗೂ ಬೇಸಾಯದ ಉನ್ನತಿಗೂ ಆದಿ ಮಾಡಿತ್ತು. ಅಲ್ಲದೆ ನೀರಿನ ಸೌಕರ್ಯ ಒದಗಿಸುವ ಕಾಮಗಾರಿಗಳು ಮತ್ತು ರಸ್ತೆ ನಿರ್ಮಾಣದ ಭಾರಿ ಯೋಜನೆ ಸಹ ಜಾರಿಯಾಗತೊಡಗಿದ್ದವು. ಸ್ವಾತಂತ್ರ್ಯ ಪ್ರಾಪ್ತಿಯ ಆರಂಭದಲ್ಲಿ ಮೊದಲನೆ ಪಂಚವಾರ್ಷಿಕ ಯೋಜನೆಯೂ ಮುಗಿಯಿತು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಡಾ| ಎನ್‌ಕ್ರೂಮಾರವರ ಸರ್ಕಾರವು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತ ಮಾಡಿದ ಕಾರ್ಯಕ್ರಮಗಳನ್ನೀಗ ಸಂಘಟಿಸುತ್ತಿದ್ದು, ಮುಂದೆ ದ್ವಿತೀಯ ಯೋಜನೆಯನ್ನು ತಯಾರಿಸಲು ಅಭಿಪ್ರಾಯ ಹಾಕುತ್ತಿದೆ.

ಡಾ|| ಎನ್ ಕ್ರೂಮಾರವರ ಸಾಧನೆಗಳ ಪೈಕಿ ಇನ್ನೊಂದು ಮುಖ್ಯ ವೈಶಿಷ್ಟ್ಯವೆಂದರೆ ಅವರು ತಮ್ಮ ಕಾರ್ಯಯೋಜನೆಗಳಲ್ಲಿ ಇತರ ಆಫ್ರಿಕನ್ ರಾಷ್ಟ್ರಗಳ ಸಹಕಾರವನ್ನೂ ಪಡೆಯಲೆತ್ನಿಸುತ್ತಿರುವುದು. ಗೋಲ್ಡ್‌ಕೋಸ್ಟ್‌ನ ಪ್ರಧಾನ ಮಂತ್ರಿಯಾಗಿ ೧೯೫೭ರಲ್ಲಿ ಅವರು ಪ್ರಥಮ ಅಖಿಲ ಆಫ್ರಿಕಾ ಕಾರ್ಮಿಕರ ಸಮ್ಮೇಳನವೊಂದನ್ನು ಕರೆದು ಅದನ್ನು ಯಶಸ್ವೀಗೊಳಿಸಿದರು. ೧೯೫೮ರ ಮಾರ್ಚ್ ತಿಂಗಳಲ್ಲಿ ಆಕ್ರಾದಲ್ಲಿ ಹನೊಂದು ರಾಷ್ಟ್ರಗಳ ಒಂದು ಸಮ್ಮೇಳನ ನಡೆಯಲು ವ್ಯವಸ್ಥೆ ಮಾಡಿದರಲ್ಲದೆ ಸಹಾರಕ್ಕೆ ದಕ್ಷಿಣದಲ್ಲಿರುವ ಆಫ್ರಿಕನ್ ರಾಷ್ಟ್ರಗಳ ಪರಸ್ಪರ ಸಹಕಾರ ವ್ಯವಸ್ಥೆಗೂ ಒಂದು ಸಂಸ್ಥೆ ಸ್ಥಾಪಿಸಿರುವರು. ಏಪ್ರಿಲ್ ತಿಂಗಳಲ್ಲಿ ಆಕ್ರಾದಲ್ಲಿ ಆಫ್ರಿಕಾದ ಸ್ವತಂತ್ರ ರಾಷ್ಟ್ರಗಳ ಇನ್ನೊಂದು ಸಮ್ಮೇಳನ ಸಹ ನಡೆಯಿತು. ಈ ರಾಷ್ಟ್ರಗಳು ಎದುರಿಸುತ್ತಿರುವ ಏಕರೀತಿಯ ಸಮಸ್ಯೆಗಳನ್ನು ಪರಿಶೀಲಿಸಿ ಒಂದು ಇತ್ಯರ್ಥಕ್ಕೆ ಬರುವುದೇ ಈ ಸಮ್ಮೇಳನದ ಉದ್ದೇಶವಾಗಿದ್ದಿತು. ಸಮ್ಮೇಳನದ ತರುವಾಯ ಡಾ| ಎನ್‌ಕ್ರೂಮಾರವರು ಸಮ್ಮೇಳನದಲ್ಲಿ ಭಾಗವಹಿಸಿದ್ದ ರಾಷ್ಟ್ರಗಳಿಗೂ ಹೋಗಿ ಬಂದರು.

ಆಫ್ರಿಕಾದ ಈ ಭೇಟಿ ಮುಗಿಸಿಕೊಂಡು ಶ್ರೀಯುತರು ಉತ್ತರ ಅಮೇರಿಕಾದ ಪ್ರವಾಸವನ್ನು ಕೈಗೊಂಡು ಒಂದರು ಒಟ್ಟಾವಾದಲ್ಲಿ ಕೆನಡಾದ ಪ್ರಧಾನಿ ಡೀಫೆನ್ ಬೇಕರ್ ಮತ್ತು ವಾಷಿಂಗ್‌ಟನ್‌ನಲ್ಲಿ ಅಧ್ಯಕ್ಷ ಐಸೆನ್ ಹೋವರ್‌ರವರ ಅತಿಥಿಗಳಾಗಿದ್ದು ವಿಶೇಷ ರಾಜಕೀಯ ಸಮಾಲೋಚನೆಗಳನ್ನು ನಡೆಸಿ ಬಂದರು.

೧೯೫೭ರಲ್ಲಿ ಡಾ| ಎನ್‌ಕ್ರೂಮಾರವರು ಈಜಿಪ್ಷಿಯನ್ ತರುಣಿ ಮಿಸ್ ಫಾತಿಹಾ ಹೇಲೆನ್ ರಿಷ್ಕ್‌ರವರನ್ನು ಮದುವೆಯಾದರು. ಆಕೆ ಆಗ ಕೈರೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ.

ತೃತೀಯ ಯೋಜನೆ

(೧ನೇ ಪುಟದಿಂದ)

ಹತ್ತು ಲಕ್ಷ ಟನ್ ಉಕ್ಕನ್ನು ಸಿದ್ಧಪಡಿಸುವಂತೆ ಉಕ್ಕಿನ ಕಾರಖಾನೆಗಳ ಕಾರ್ಯಕ್ಷಮತೆಯನ್ನು ಬೆಳೆಸುವುದು, ಇದರಿಂದ ಯಾಂತ್ರಿಕೋಪಕರಣಾದಿಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸುವುದು, ೧೫ ಲಕ್ಷ ಕಿಲೋವಾಟ್‌ಗಳಷ್ಟು ವಾರ್ಷಿಕ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು ಅಗತ್ಯ.

ಗ್ರಾಮೀಣ ಕ್ಷೇತ್ರಗಳಲ್ಲಿ ಔದ್ಯೋಗಿಕ ಸಹಕಾರದ ಬೀಜವನ್ನು ಬಿತ್ತುವ ಉದ್ದೇಶದಿಂದ ಹಿಡಿದ., ಗ್ರಾಮೀಣ ವಿದ್ಯುತ್ತೀಕರಣವನ್ನು ಸಾಧಾರವಾಗಿ ಮುಂದುವರಿಸಿಕೊಂಡು ಹೋಗಬೇಕು.

ಶಿಕ್ಷಿತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿ, ನಿರುದ್ಯೋಗ ನಿವಾರಣೆಯನ್ನು ಮಾಡುವುದು, ಇದಕ್ಕಾಗಿ ಎಲ್ಲ ಕ್ಷೇತ್ರಗಳಲ್ಲಿ ಒಟ್ಟಿಗೆ ಒಂದೂವರೆ ಕೋಟಿ ಹೊಸ ಉದ್ಯೋಗಾವಕಾಶಗಳನ್ನು ನಿರ್ಮಿಸುವುದು.

ಶಿಕ್ಷಣವನ್ನು ವಿಸ್ತರಿಸಿ ಪುನರ್ಘಟಿಸುವುದರಿಂದ ಮಾನವ ಮೌಲ್ಯವನ್ನು ಅಧಿಕಾಧಿಕವಾಗಿ ವಿಕಾಸಗೊಳಿಸುವುದು.

ಈ ಧ್ಯೇಯಗಳನ್ನು ಆಧಾರವಾಗಿಟ್ಟುಕೊಂಡು ಒಂದು ಮಹತ್ವಪೂರ್ಣವೂ ಆಕಾಂಕ್ಷಾ ಪೂರಿತವಾಗಿರುವ ಐತಿಹಾಸಿಕ ಪ್ರಾಧಾನ್ಯವಾದ ಯೋಜನೆಯು ಸ್ವೀಕೃತವಾಗುವಂತೆ ಈ ಗೊತ್ತುವಳಿಯಲ್ಲಿ ಬಲವೀಯಲಾಗಿದೆ. ಈ ಗೊತ್ತುವಳಿಯು ಸರಕಾರೇತರ ವಲಯಗಳಿಂದ ತಯಾರಿಸಲ್ಪಟ್ಟುದರಿಂದಲೂ "ಸುಧಾರಕ" ದಳದವರಿಂದ ಮಂಡಿತವಾಗಿರುವುದರಿಂದಲೂ ವಿನೀತ ಚರ್ಚೆಯು ಆಗುವುದು ಆದರೆ ಕರ್ತವ್ಯದಕ್ಷ ಶಾಸನ ಪ್ರಣಾಳಿಯಿಂದ ಆರ್ಥಿಕ ಹಗರಣ ಸಮಯದ ಅಪವ್ಯಯ ತಪ್ಪುವಂತೆ ಮಾಡುವುದೂ ರಾಷ್ಟ್ರದ ಪ್ರಗತಿಯನ್ನು ತೀವ್ರಗತಿಯಲ್ಲಿ ಸಾಧಿಸುವುದೂ ಈ ಯೋಜನಾ ಸಂಬಂಧದಲ್ಲಿನ ಮುಖ್ಯ ಕತ್ತವ್ಯವಾಗಿದೆ.

ಸಾರ್ವಜನಿಕ ಪ್ರಕಟಣೆ

ಖಾಸಗಿ ಉಮೇದ್ವಾರರಿಗೆ ವೃತ್ತಿಪರೀಕ್ಷೆ (ಟ್ರೇಡ್ ಟೆಸ್ಟ್)

ಈ ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ಮತ್ತು ವೃತ್ತಿಗಳಲ್ಲಿ ನಿಯಮ ಮತ್ತು ಶರ್ತಗಳಂತೆ 19ನೆ ಜನವರಿ 1959ರಂದು ನಡೆಸಲಾಗುವ ವೃತ್ತಿ ಪರೀಕ್ಷೆಗೆ ಅರ್ಹತೆಯುಳ್ಳ ಉಮೇದ್ವಾರರಿಂದ, ಖಾಸಗಿ ಉಮೇದ್ವಾರರ ವೃತ್ತಿ ಪರೀಕ್ಷೆಗೆ ಪ್ರವೇಶಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

I. ಐ. ಟಿ. ಐ. ಹ್ಯಾಗ್ರೌಂಡ್ಸ್, ಬೆಂಗಳೂರು: 1) ಡ್ರಾಫ್ಟ್ಸ್‌ಮೇನ್ ಮೆಕೇನಿಕಲ್ 2) ಡ್ರಾಫ್ಟ್ಸ್‌ಮೇನ್ ಸಿವಿಲ್ 3) ಇಲೆಕ್ಟ್ರೀಶಿಯನ್ಸ್ 4) ಶೀಟ್‌ಮೆಟಲ್ 5) ಇಲೆಕ್ಟ್ರೋಪ್ಲೇಟರ್ಸ್.

2. ಐ. ಟಿ. ಸಿ, ಬಿ. ಟಿ. ಎಸ್, ಬೆಂಗಳೂರು. 1) ಫಿಟ್ಟರ್ಸ್ 2) ಮೆಶೀನಿಸ್ಟ್ಸ್ 3) ಟರ್ನರ್ಸ್ 4) ಮೋಟಾರ್ ಮೆಕೇನಿಕ್ಸ್ 5) ವೆಲ್ಡರ್ಸ್.

ನಿಯಮಗಳು ಮತ್ತು ಶರ್ತಗಳು. 1) ಡ್ರಾಫ್ಟ್ಸ್‌ಮೇನ್ ಮೆಕೇನಿಕಲ್ 2) ಡ್ರಾಫ್ಟ್ಸ್‌ಮೇನ್ ಸಿವಿಲ್ 3) ಇಲೆಕ್ಟ್ರೀಶಿಯನ್ಸ್ ವೃತ್ತಿಗಳಿಗೆ ಉಮೇದ್ವಾರರು ಎಸ್. ಎಸ್. ಎಲ್. ಸಿ ಅಥವಾ ಮೆಟ್ರಿಕ್ಯುಲೇಶನ್ ಪಾಸಾಗಿರಬೇಕು; ಮತ್ತು ಇತರ ವೃತ್ತಿಗಳಿಗೆ ಅವರು ಮೆಟ್ರಿಕ್ಯುಲೇಶನ್ ಅಥವಾ ಅದಕ್ಕೆ ಸಮಾನ ಅರ್ಹತೆಗಿಂತ ಎರಡು ವರ್ಷಗಳ ಕೆಳಗಿನ ತರಗತಿಯ ವರೆಗೆ ಅಭ್ಯಸಿಸಿದವರಾಗಿರತಕ್ಕದ್ದು.

ಯಾವ ವೃತ್ತಿಯಲ್ಲಿ ಅವರು ವೃತ್ತಿಪರೀಕ್ಷೆ ಕೊಡಲಿಚ್ಛಿಸುವರೋ ಅದರಲ್ಲಿ ಒಂದು ಮಂಜೂರಾತಿ ಪಡೆದ ವರ್ಕ್‌ಶೋಪಿನಲ್ಲಿ ಕನಿಷ್ಠಪಕ್ಷ 3 ವರ್ಷಗಳ ಕೈಗಾರಿಕಾ ಅನುಭವವನ್ನು ಅವರು ಪಡೆದಿರಬೇಕು ಮತ್ತು ಕೆಲಸಕ್ಕಿದ್ದ ಸಮಯದಲ್ಲಿ ಮಾಡಿದ ಕೆಲಸದ ಕುರಿತಾಗಿ ತನ್ನ ಮಾಲಿಕರಿಂದ ಉಚಿತ ರೀತಿಯಲ್ಲಿ ದೃಢೀಕರಿಸಲ್ಪಟ್ಟ ವಿವರವಾದ ವರದಿಗಳನ್ನು ಹಾಜರುಪಡಿಸತಕ್ಕದ್ದು.

ಪ್ರತಿಯೊಬ್ಬ ಉಮೇದ್ವಾರನೂ ರೂಪಾಯಿ 20/-ನ್ನು ಪರೀಕ್ಷಾ ಶುಲ್ಕವಾಗಿ ತೆರತಕ್ಕದ್ದು.

ಅರ್ಜಿಗಳನ್ನು, XLVI Miscellaneous-No Miscellaneous-Receipts of Industrial Training Institutes/centres- ಎಂಬ ಎಕೌಂಟ್ ಹೆಡ್ಡಿನಲ್ಲಿ ಖಜಾನೆಗೆ ಪರೀಕ್ಷಾ ಶುಲ್ಕ ಪಾವತಿಮಾಡಿದ ಟ್ರೆಜರಿ ಚಲನನ್ನು ಲಗ್ತೀಕರಿಸಿ ಮೇಲಿನ ಸಂಸ್ಥೆಗಳ ಕೇಂದ್ರಗಳ ಸಂಬಂಧಪಟ್ಟ ಪ್ರಿನ್ಸಿಪಾಲರುಗಳಿಗೆ ಕಳುಹಿಸಿಕೊಡಬಹುದು.

ಅರ್ಜಿದಾರರು ಈ ಕೆಳಗಿನ ವಿವರಗಳನ್ನು ಕೊಡತಕ್ಕದ್ದು:—

1) ಉಮೇದ್ವಾರನ ಹೆಸರು.
2) ಹೆತ್ತವರ ಹೆಸರು ಸಂಪೂರ್ಣ ಅಂಚೆ ವಿಳಾಸದೊಂದಿಗೆ.
3) ಸಾಮಾನ್ಯ ವಿದ್ಯಾ ಅರ್ಹತೆ ಮತ್ತು ಪ್ರಾಯ ರುಜುವಾತುಗಳೊಂದಿಗೆ.
4) ತಾಂತ್ರಿಕ ಅರ್ಹತೆ ಮತ್ತು ಅನುಭವ.
5) ಅವನು ಯಾವ ಪರೀಕ್ಷೆಯನ್ನು ಕೊಡಲು ಇಚ್ಛಿಸುತ್ತಾನೆ ಮತ್ತು ಈ ವೃತ್ತಿಯಲ್ಲಿ ಅವನು ಎಷ್ಟು ವರ್ಷ ಅವಧಿಯ ಕೆಲಸ ಮಾಡಿದ್ದಾನೆಂಬುದರ ಬಗ್ಗೆ ಉಚಿತ ರೀತಿಯಲ್ಲಿ ದೃಢೀಕರಿಸಲ್ಪಟ್ಟ ವಿವರಗಳು.
6) ಅವನು ಕೆಲಸಕ್ಕಿರುವ ಸಂಸ್ಥೆ ಮತ್ತು ಈ ಸಂಸ್ಥೆಗಳಲ್ಲಿ ಅವನು ಮಾಡಿದ ಕೆಲಸದ ಸ್ವಭಾವ. ಅರ್ಜಿಗಳನ್ನು ಉಚಿತ ರೀತಿಯಲ್ಲಿ ದೃಢೀಕರಿಸಲ್ಪಟ್ಟು ಸಂಬಂಧಪಟ್ಟ ಪ್ರಿನ್ಸಿಪಾಲರಿಗೆ ಸಂಸ್ಥೆಯ ಪ್ರಮುಖಾಧಿಕಾರಿಯ ಮೂಲಕ ಕಳುಹಿಸಿಕೊಡತಕ್ಕದ್ದು. ಸರಿಯಾದ ವಿವರಗಳನ್ನು ಕೊಟ್ಟಿರುವ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ತಾರೀಕು 8ನೇ ಜನವರಿ 1959ನೇ ಗುರುವಾರವಾಗಿರುತ್ತದೆ. ವೃತ್ತಿ ಪರೀಕ್ಷೆಗೆ ಪ್ರವೇಶ ದೊರೆತ ಉಮೇದ್ವಾರರು ತಮ್ಮ ಸ್ವಂತ ವೆಚ್ಚದಲ್ಲಿ ಪರೀಕ್ಷೆಗೆ ಹಾಜರಾಗತಕ್ಕದ್ದು.

ಡೈರೆಕ್ಟರ್,
ನೇಶನಲ್ ಎಂಪ್ಲೋಯ್‌ಮೆಂಟ್ ಸರ್ವಿಸ್ ಇನ್ ಮೈಸೂರ್.

ಗೋವಿಜಯ
(ಗೋವಿನಕಥೆ)
ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗಾಗಿ, [illegible] ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.
ತಮ್ಮ ಪುಸ್ತಕ್ಕೆ ತಪ್ಪದೇ ಕತೆ, ಹಾಡು, ಅರ್ಥ ಸಂಭಾಷಣೆ, ವಿನಯ ಮೊದಲಾದ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.
60 ಪುಟಗಳು: ಬೆಲೆ 0-8-0
ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು) ಕಳುಹಿಸಬೇಕು. ಸಂ. ನ.

ಶ್ರೀನಿವಾಸಾಚಾರ್ಯವಿರಚಿತ ಅಭಿಧಾನ ರತ್ನಮಾಲಾ ಅಥವಾ ಷಡ್ರಸನಿಘಂಟು-ಸಂಪಾದಕರು: ವೈದ್ಯರತ್ನ ಡಾ| ಜಿ. ಶ್ರೀನಿವಾಸ ಮೂರ್ತಿ, ಮತ್ತು ಎಸ್. ರಾಮಚಂದ್ರ ಭಟ್. ಪ್ರಕಾಶಕರು: ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಪುಸ್ತಕ ಭಾಂಡಾಗಾರ, ಮದ್ರಾಸು. ಪುಟಗಳು: xxiv + ೯೩. ಬೆಲೆ: ರೂ. ೩—೨೦.

ಶಬ್ದಾರ್ಥಗಳನ್ನೂ ಪರ್ಯಾಯ ಶಬ್ದಗಳನ್ನೂ ಅವುಗಳ ಲಿಂಗವನ್ನೂ ತಿಳಿಸುವ ಶಾಸ್ತ್ರಗ್ರಂಥವು ಕೋಶ ಇಲ್ಲವೇ ನಿಘಂಟು ಎನಿಸುವುದು. ಆದರೆ, ಅವುಗಳಲ್ಲಿ ಶಬ್ದಜಾತಿಯನ್ನು ಅವಲಂಬಿಸಿ ವಿವಿಧ ವರ್ಗಗಳನ್ನಾಗಿ ಮಾಡಬೇಕಾಗುತ್ತದೆ. ಪ್ರಾಚೀನ ಕಾಲದಿಂದಲೂ ಜನತೆಗೆ ವೇದ್ಯವಾಗಿದ್ದು ಆಯುರ್ವೇದವನ್ನು ಹೆಚ್ಚಿಸಲು ಹಾಗೂ ಶರೀರದಲ್ಲಿರುವ ವಾತ, ಪಿತ್ತ, ಕಫಗಳನ್ನು ಒಂದುಚಿತ ಪ್ರಮಾಣದಲ್ಲಿರಿಸಲು ನೆರವಾಗುತ್ತಿದ್ದ ಆಯುರ್ವೇದವು ಮುಖ್ಯವಾಗಿ ವನೌಷಧಿ ವರ್ಗ (ವನಸ್ಪತಿ ವರ್ಗ) ವನ್ನೇ ಹೊಂದಿಕೊಂಡಿದೆ. ಆಯುರ್ವೇದ ಶಾಸ್ತ್ರದಲ್ಲಿ ಬಳಕೆಗೆ ಬರುವ ವಿವಿಧ ಸಸ್ಯ ಅಥವಾ ಸಸ್ಯಜನ್ಯಗಳ ಹೆಸರನ್ನೂ ಅವುಗಳ ಪರ್ಯಾಯ ಪದಗಳನ್ನೂ ತಿಳಿಸುವುದು ಅಭಿಧಾನ ರತ್ನಮಾಲೆ. ಇದನ್ನು ಬರೆದವನ ಹೆಸರು ವಿವರಾದಿಗಳು ನಮಗೆ ದೊರೆಯುವೆ, ಈ ಪ್ರಾಚ್ಯಾಭಿಧಾನ ರೂಪೀ ಅಭಿಧಾನರತ್ನಮಾಲೆಗೆ ದ್ರವ್ಯಗುಣಾಭಿಧಾನವನ್ನೂ ಸೇರಿಸಿ ಸಂಸ್ಕೃತ ವನೌಷಧಿಗಳಿಗೆ ಕನ್ನಡದ ಹೆಸರನ್ನಿತ್ತು ಪುನಾರಚಿಸಿ ವಿಸ್ತರಿಸಿದವನು ಶ್ರೀನಿವಾಸಾಚಾರ್ಯನೆಂಬ ಕನ್ನಡಿಗನೆಂದು ಸಂಪಾದಕರು ಊಹಿಸಿದ್ದಾರೆ ಗ್ರಂಥದ ಪ್ರಾಚೀನತೆಯ ಕುರಿತಾಗಿಯೂ ನಿರ್ಧಾರವಾಗಿಯೇನು ಹೇಳುವುದೂ ಅಸಾಧ್ಯವಾಗಿ ೧೪ನೆ ಶತಮಾನದ ಮಲ್ಲಿನಾಥನು ಇದನ್ನು ಉದಾಹರಿಸಿರುವುದರಿಂದ ಅದಕ್ಕೆ ಪೂರ್ವದ್ದೆಂದು ಮಾತ್ರ ಹೇಳಬೇಕು. ಈ ಅಭಿಧಾನರತ್ನಮಾಲೆಯನ್ನು

ಅಬ್ದೇಸ್ಮಿನ್ ವಿಕೃತಾ ಚ। ವೃಶ್ಚಿಕಗತೆ
ಸೂರ್ಯೇಸಿತೇ ಪಕ್ಷಕೇ
ಶ್ರೋಣಾದ್ಯೋಂಶುನಿ ಜೀವ|ವಾರ ಸಹಿತೇ
ಲಗ್ನೇ ಧನುಷ್ಯಾಲಿಖತ್||

ಎಂಬಿತ್ಯಾದಿ ಗ್ರಂಥಾಂತ್ಯ ಪದ್ಯಗಳಿಂದ ೨೪-೧೧-೧೯೩೦ (ಕ್ರಿಸ್ತಶಕ) ದಂದು ಶ್ರೀ ಮುದ್ದುವೆಂಕಟ ನಾಯಕನ ಕೃಪೆಯಿಂದ ವಿಶ್ವಾಮಿತ್ರಗೋತ್ರದ ವಿಶ್ವವಿದ್ಯಾವಿಶಾರದ ತಾತಾರ್ಯಸ್ವಾಮಿಕಾಲೀ ಗುಣಗಣಜಲಧಿಯೆನಿಸಿದ ರಂಗಧಾಮನ ಸನ್ನಿಧಿಯಲ್ಲಿ ಶ್ರೀರಂಗಾಚಾರ್ಯರ ಸಾನುವಾದ ವೈದ್ಯವಿದ್ಯಾವಿಶವತರನುತಿಯಾದ ಶ್ರೀನಿವಾಸಾಚಾರ್ಯವರ್ಯನು ರಚಿಸಿದನೆಂದು ತಿಳಿಯುತ್ತದೆ.

ಈ ಗ್ರಂಥವು ಆಯುರ್ವೇದದಲ್ಲಿ ಬಳಸಲ್ಪಡುವ ವಿವಿಧ ದ್ರವ್ಯಗಳ ಹೆಸರುಗಳನ್ನೂ ಅವಕ್ಕೆ ಪರ್ಯಾಯಪದಗಳನ್ನೂ ಹೇಳಿ ಮುಂದೆ ಅಂತಹ ಪದಾರ್ಥಗಳ ಗುಣಗಳನ್ನು ವಿವರಿಸಿ ಹೇಳುತ್ತದೆ. ಕೇವಲ ಹೆಸರುಗಳು ಮಾತ್ರ ಕನ್ನಡದಲ್ಲಿದ್ದು ಉಳಿದ ಪರ್ಯಾಯಪದಗಳು ಮತ್ತು ಗುಣಗಳು ಸಂಸ್ಕೃತಭಾಷೆಯಲ್ಲಿದ್ದು ಶ್ಲೋಕರೂಪವಾಗಿದೆ. ಈ ಗ್ರಂಥವನ್ನು ಮಧುರ, ಆಮ್ಲ, ಲವಣ, ತಿಕ್ತ, ಕಟು ಮತ್ತು ಕಷಾಯವೆಂಬ ಷಡ್ರಸಗಳಿಗನುಸಾರವಾಗಿ ಆರು ಸ್ಕಂಧಗಳಾಗಿ ವಿಂಗಡಿಸಲಾಗಿದೆ ಪ್ರತ್ಯೇಕ ಸ್ಕಂಧದಲ್ಲಿ ಆಯಾರುಚಿಗಳುಳ್ಳ ವಿವಿಧ ದ್ರವ್ಯಗಳನ್ನು ವಿವರಿಸಲಾಗಿದೆ ಹೀಗೆ ಒಟ್ಟು ಸುಮಾರು ೫೧೫ ದ್ರವ್ಯಗಳನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ದಾಸವಾಳದ ಪರ್ಯಾಯ ಪದಗಳು ಮತ್ತು ಗುಣಗಳನ್ನು ತಿಳಿಸುವ ಈ ಶ್ಲೋಕವನ್ನು ಉದಾಹರಣೆಗಾಗಿ ಎತ್ತಿ ಬರೆಯಬಹುದು. ಇದು ಕಷಾಯಸ್ಕಂಧದಲ್ಲಿದೆ:

ದಾಸವಾಳ—
ಆರಕ್ತಮಾಲಾ ಶೇಫಾಲೀ । ಪೂತಿಕಾ
ರುದ್ರಪುಷ್ಪಿಕಾ
ಓಡ್ರಪುಷ್ಪಾ ಜಪಾಪುಷ್ಪಾ|ಮಾಯಾಂಗೀ
ವನಮಾಲಿಕಾ ||
ಗುಣಂ—
ಕಷಾಯಾ ವನಮಾಲೀ ಚ, ರಕ್ತಸ್ರಾವಂ ಸ್ತ
ನಾಶಯೇತ್
ಪಿತ್ತಘ್ನೀ ವ್ರಣರೋಗಘ್ನೀ| ಯೋನಿರೋಗಂ
ಚನಾಶಯೇತ್।

ಈ ಶ್ಲೋಕವು ಗ್ರಂಥದ ಸಾರಳ್ಯವನ್ನು ಸೂಚಿಸುತ್ತದೆ. ಅಲ್ಪ ಸಂಸ್ಕೃತಜ್ಞರೂ ಈ ಗ್ರಂಥವನ್ನು ಓದಿ ಅರ್ಥೈಸಿಕೊಳ್ಳುವುದು ಸಾಧ್ಯವಾದರೂ ಹೊಸವೈದ್ಯನಿಗಿಂತ ಹಳೆಯರೋಗಿಯೇ ಲೇಸು ಎಂಬಂತೆ ಅನುಭವವು ವೈದ್ಯರಿಗೆ ಅತ್ಯಗತ್ಯವಾಗಿದೆ ಹೀಗೆ ಅನುಭವವನ್ನು ಪಡೆಯುವ ವೇಳೆ ಇಂತಹ ಗ್ರಂಥಗಳ ಸಹಾಯವೂ ಅವಶ್ಯಕವಾಗುವುದು ಸರಳವೂ ಸುಲಭಗ್ರಾಹ್ಯವೂ ಆದ ಈ ಗ್ರಂಥವು ಜನಾದರಣೀಯವಾಗಬೇಕಾದರೆ, ಪ್ರಾದೇಶಿಕ ಭಾಷೆಗಳಲ್ಲಿ ಇಲ್ಲಿ ವಿವರಿತವಾಗಿರುವ ದ್ರವ್ಯಗಳ ಗುಣಗಳನ್ನು ವಿವರಿಸಬೇಕಿತ್ತೆಂದು ತೋರುತ್ತದೆ. ಆದರೆ, ಪ್ರಕೃತ ಸಂಪಾದಕರು ಮೂಲಗ್ರಂಥವನ್ನಷ್ಟೇ ಸಂಪಾದಿಸುವ ಗುರುತರ ಉತ್ತರದಾಯಿತ್ವವನ್ನು ಹೊತ್ತಿದ್ದಾರೆ. 'ನಿಘಂಟುನಾ ವಿನಾ ವೈದ್ಯೋ ವಿದ್ವಾನ್ ವ್ಯಾಕರಣಂ ವಿನಾ| ಅನಭ್ಯಾಸೇನ ಧಾನುಷ್ಕಸ್ತ್ರಯೋ ಹಾಸ್ಯಸ್ಯ ಭಾಜನಂ' ಎಂಬ ಶ್ಲೋಕದಲ್ಲಿ ಹೇಳಿದಂತೆ ವೈದ್ಯನಾದವನಿಗೆ ನಿಘಂಟು ಅತ್ಯಗತ್ಯ ಇದು ಅಂತಹ ನಿಘಂಟುಗಳಲ್ಲಿ ಒಂದೆಂದು ಹೇಳಬೇಕು.

ಈ ನಿಘಂಟು ೧೯೩೯ರಲ್ಲಿ ತೆಲುಗು ಲಿಪಿಯಲ್ಲಿ ಅಚ್ಚಾಗಿದ್ದರೂ ಅದು ಈ ಗ್ರಂಥದಿಂದ ಕೊಂಚ ಪರಿವರ್ತಿತವಿರುವಂತೆ ಭಾಸವಾಗುವುದಂತೆ. ಶಬ್ದಾಕಲ್ಪದ್ರುಮವೆಂಬ ಗ್ರಂಥ ಮತ್ತು ಇವರಲ್ಲಿ ಉಪಾಪರಿಸಿಪ್ಪಟ್ಟ ಶಬ್ದಗಳಲ್ಲಿ ಹಲವಾರು ವ್ಯತ್ಯಾಸವಿರುವುದು ಹಸ್ತಪ್ರತಿಗೂ ಅಚ್ಚಾದ ಪ್ರತಿಗಳಿಗೂ ತಾಳೆತಂತು ಕೂಡಿ ಬರುತ್ತಿಲ್ಲ. ಆವಶ್ಯ, ಸರಿಯಾದ ಪಾಠಗಳನು ನಿರ್ಧರಿಸುವುದು ಅಸಾಧ್ಯವೆಂದು ಮನ್ನಗಂಡು ಸಂಪಾದಕರು ಹಸ್ತಪ್ರತಿಯ ಸಂದಿಗ್ಧ ಪಾಠಗಳನ್ನು ಧನ್ವಂತರಿ, ರಾಜ ಮೊದಲಾದ ನಿಘಂಟುಗಳ ಆಧಾರದಿಂದ ಸರಿಯೆಂದುಕೊಂಡು ಉಳಿಸಿಕೊಂಡಿದ್ದಾರೆ ತೆಲುಗು ಶಬ್ದಗಳು ಕೆಲವೆಡೆ ಕಂಡುಬರುವುದರಿಂದ ಕನ್ನಡ ಪದಗಳನ್ನೂ ಇಲ್ಲಿ ಕೊಟ್ಟಿದ್ದಾರೆ. ವಿವಿಧ ಪಾಠಗಳಲ್ಲಿ ಮುಖ್ಯವಾದವುಗಳನ್ನು ಅಡಿಟಿಪ್ಪಣಿಯಲ್ಲಿ ಇತ್ತಿದ್ದಾರೆ ಇತರ ನಿಘಂಟುಗಳೊಡನೆ ಹೋಲುವ ಕಡೆಗಳಲ್ಲೂ ಅದನ್ನು ತಿಳಿಸಿದ್ದಾರೆ ಹೀಗೆ ಈ ಗ್ರಂಥದ ಸಂಪಾದನಾಕಾರ್ಯವು ಸಾಕಷ್ಟು ಯಶಸ್ವಿಯಾಗಿದೆಯೆಂದು ಹೇಳಬಹುದು.

ಆಯುರ್ವೇದದ ಬಗ್ಗೆ ಜನಾದರಣೆಯು ಹೆಚ್ಚುತ್ತ ಬರುತ್ತಿರುವ ಇಂತಹ ಕಾಲದಲ್ಲಿ ಈ ಗ್ರಂಥಪ್ರಕಟಣೆಯನ್ನು ಮಾಡಿದ ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರದವರನ್ನು ಅಭಿನಂದಿಸಬೇಕಾಗಿದೆ. ಇದರ ಹಾಗೂ ಇನ್ನಿತರ ಹಲವಾರು ಆಯುರ್ವೇದಕ್ಕೆ ಸಂಬಂಧಿಸಿದ ನಿಘಂಟುಗಳ ಸಹಾಯದಿಂದ, ಒಂದು ಪೂರ್ಣಕೋಶವನ್ನು ರಚಿಸುವುದು ಅಗತ್ಯವೆಂದೂ ಆಯುರ್ವೇದದ ಮಹತ್ವವನ್ನು ವಿಸ್ತರಿಸಲು ಬಯಸುವ ಮಹನೀಯರು ಇಂತಹ ಕೋಶವನ್ನು ಪ್ರಥಮತಃ ತಯಾರಿಸಿದಲ್ಲಿ ಲೋಕಕ್ಕೆ ಉಪಕಾರವಾಗುವುದೆಂದೂ ಸಂಪಾದಕರು ಅಭಿಪ್ರಾಯಪಟ್ಟಿದ್ದು ಇದನ್ನು ನಾವೂ ಸಮರ್ಥಿಸುತ್ತೇವೆ.

ಗ್ರಂಥಾದಿಯಲ್ಲಿ ಕ್ಯುರೇಟರ ಚಂದ್ರಶೇಖರರವರು ಭಂಡಾರದ ಪ್ರಗತಿಯನ್ನೂ ಸಂಪಾದಕರು ಈ ಗ್ರಂಥದ ಹಾಗೂ ಆಯುರ್ವೇದ ಗ್ರಂಥಗಳ ಸೂಕ್ಷ್ಮ ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ. ಒಟ್ಟಿನಲ್ಲಿ ಆಯುರ್ವೇದ ಗ್ರಂಥಪ್ರಕಾಶನವನ್ನು ಪ್ರೋತ್ಸಾಹಿಸಲು ಇದೊಂದು ಮಾರ್ಗದರ್ಶನವೆಂದು ಹೇಳಿ ಪ್ರಕೃತ ಗ್ರಂಥದ ಪ್ರಕಾಶಕರು ಇನ್ನೂ ಉತ್ತಮ, ಅಚ್ಚಾಗದ ಪುಸ್ತಕಗಳಿಗೆ ಪ್ರಕಾಶಕ್ಕೆ ಬರುವ ಅವಕಾಶವೊದಗಿಸಿಕೊಡಲೆಂದು ಹಾರೈಸುತ್ತೇವೆ.

—ಗೋರಾ



ಶಾಂತಿಗಾಗಿ ಅಣುಶಕ್ತಿಯನ್ನು ಬಳಸಿಕೊಳ್ಳುವ ಪ್ರಯತ್ನವು ಈಗೀಗ ನಡೆಯುತ್ತಿದೆ ಇದರಿಂದ ವಿದ್ಯುಚ್ಛಕ್ತಿಯನ್ನು ತಯಾರಿಸುವ ಕೇಂದ್ರಗಳು ಅಮೇರಿಕೆಯಲ್ಲಿ ಹೆಚ್ಚುತ್ತಿವೆ. ಈ ಚಿತ್ರದಲ್ಲಿ ಇಂತಹ ಒಂದು ಅಣುಶಕ್ತಿ ಕೇಂದ್ರವನ್ನು ನೋಡಬಹುದು

ದೇಶಾಚಾ.

(೮ನೇ ಪುಟದಿಂದ)

ವೇಗಗೊಳಿಸಲು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಹೊಣೆಗಾರರಿರುವರು. ಉತ್ತಮಾಚರಣೆ, ಧೈರ್ಯ ಮತ್ತು ಶಕ್ತಿಗಳನ್ನು ಎಲ್ಲ ವಿದ್ಯಾರ್ಥಿಯೂ ಪಡೆಯಬೇಕು ನಿಜವಾದ ವಿದ್ಯೆಯೆಂದರೆ ಇದು.

ನಿಯಮ ಬದ್ಧಜೀವನ ಬಾಳಿದವರೇ ಮುಂದುವರಿಯುವರು. ಜೀವನದ ಅಪರಾಹ್ನದಲ್ಲಿ ಈ ನಿಯಮಬದ್ಧತೆಯನ್ನು ಸುಲಭದಲ್ಲಿ ಅರಗಿಸಿಕೊಳ್ಳಲಾಗುವುದಿಲ್ಲ. ಬಾಲ್ಯದಲ್ಲಿಯೇ ಮಗುವನ್ನು ಹೊಕ್ಕು ಅತನ ಶರೀರದೊಡನೆಯೇ ಬೆಳೆದು ಬರಬೇಕು, ಇದು. ಕ್ರಮಬದ್ಧ ಸಾಧನೆ ಮತ್ತು ಗೌರವಗಳು ಸಾಮಾಜಿಕೋನ್ನತಿಯ ಮೂಲ ತತ್ವಗಳು. ಮಹತ್ವ,ವ ಬದ್ಧ ಸಾಧಕರೇ ಜನನಾಯಕರಾಗುವರು. ದೇಶವನ್ನು ತೂಗಿನೋಡುವಾಗ, ಇದೇ ಇತಿಹಾಸವು ಕಲಿಸಿದ ಪಾಠವೂ ಇತರ ಅನುಭವಿಕ ಐತಿಹಾಸಿಕ ಪುರುಷರು ಪುನಃ ಕಂಡುಕೊಂಡ ಸತ್ಯವೂ ಆಗಿದೆ. ಆದ್ದರಿಂದ ನಾವು ಪಡೆದು ಬಂದ ಉನ್ನತ ಸಂಸ್ಕೃತಿಗೆ ನಿಕಟ ಸಂಬಂಧವಿರುವಂತೆ ನಮ್ಮ ಮಕ್ಕಳಿಗೆ ಶಿಕ್ಷಣವೀಯಲನುವಾಗುವಂತೆ ವಿದ್ಯಾ ಪ್ರಣಾಳಿಯನ್ನು ವ್ಯಾಖ್ಯೇಕರಿಸಬೇಕು.

(ಪೇಜಾವರ, ಕಾಂಚೀಕಾಮಕೋಟಿ ವೃತ್ತ ಅಹೋಬಲ ಮಠದ ಸ್ವಾಮಿಯವರ ಹೇಳಿಕೆಯ ಸಾರ)

JUST PUBLISHED!
A NEW BOOK WITHIN THE REACH OF EVERYBODY
"LETTER WRITING MADE EASY"
(75 EVERY DAY LETTERS)
Written by An Experienced Teacher.
Useful to one and all, the teacher, he student and the layman
Price: Rs 1 = 25 (Postage extra)
If Rs. 1=50 is sent by M. O. one copy will be sent by Bookpost.
Copies can be had from the Publishers:
Navayuga Enterprise Ltd.
Navayuga Press,
Udipi.
and also from:
M/s Indian Industrials & Agencies, Mangalore-1.
M/s Navabharat Book Depot, Udipi.

ಸಾದರ ಸ್ವೀಕಾರ

೧. ಸರ್ವೋದಯ ಪಾತ್ರೆ-ಬರೆದವರು: ವಿನೋಬಾ ಪ್ರಕಾಶಕರು: ಸರ್ವಸೇವಾ ಸಂಘ ಪ್ರಕಾಶನ, ಬೆಂಗಳೂರು—೩. ಪುಟಗಳು. ೪೨. ಬೆಲೆ: ರೂ ೦-೨೫.

೨. ಭಾವಾರ್ಚನೆ—ಬರೆದವರು: "ನಚಿಕೇತ" ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್, ಲಿ; ಉಡುಪಿ. ಪುಟಗಳು: ೧೧೫. ಬೆಲೆ: ರೂ ೧-೨೫

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ವಿಚಾರ ವರ್ಷ

"ಅಪುತ್ರಸ್ಯ ಗತಿರ್ನಾಸ್ತಿ" ಇದು ಸಂಬದ್ಧವೆ?

ಅಧಿಕ ಜನಸಂಖ್ಯೆಯ ಸಮಸ್ಯೆಗೆ ಇದುವೂ ಕಾರಣವಲ್ಲವೆ?

ಜನಸಂಖ್ಯೆಯಲ್ಲಿ ಪ್ರಪಂಚದಲ್ಲಿ ಚೀನವನ್ನುಳಿದರೆ, ಭಾರತವೇ ಸಂಪ್ಯದ್ಧನಾದ ರಾಷ್ಟ್ರ. ಆದರೆ, ಉಳಿದ ದೃಷ್ಟಿಯಲ್ಲಿ ಸಾಮಾನ್ಯತಃ ಇತರ ದೇಶಗಳಿಗಿಂತ ತೀರ ಹಿಂದುಳಿದಿದೆ

ಬಡತನವನ್ನು ದೂರಮಾಡಲು ಭಾರತ ಸರಕಾರವು ಹಿರಿಯ ಅಣೆಕಟ್ಟುಗಳನ್ನು ಕಟ್ಟುತ್ತಿದೆ; ಕಾಲುವೆಗಳನ್ನು ತೋಡುತ್ತಿದೆ. ಹಾಗಿರುವಾಗ, ಜನಸಂಖ್ಯೆ ಬೆಳೆಯಿತೆಂದು ನಾವೇಕೆ ಕಂಗಾಲಾಗಬೇಕು? ಹೌದು, ಸರಕಾರವು ಈ ಕಾರ್ಯಗಳನ್ನು ನಡೆಸುತ್ತಿದೆ; ಅದರೊಡನೆ ಅಧಿಕ ಆಹಾರ ಸಾಮಾಗ್ರಿಗಳನ್ನು ಉತ್ಪಾದಿಸಲು ರಾಸಾಯನಿಕ ಗೊಬ್ಬರಗಳನ್ನು ತಯಾರಿಸುವ ಕಾರಖಾನೆಗಳನ್ನು ತೆರೆದಿದೆ; ರಾಸಾಯನಿಕ ಕೃಷಿ ಪದ್ಧತಿಯನ್ನು ಪ್ರಚಾರಗೊಳಿಸುತ್ತಿದೆ ಆದರೆ, ಇವುಗಳಿಗೂ ಒಂದು ಮಿತಿಯಿದೆ, ನಾವೀಗ ಸಾಗುವಳಿಗೆ ಯೋಗ್ಯವಾದ ಭೂಮಿಯಲ್ಲಿ ಕೃಷಿ ಮಾಡಲು ಪ್ರಯತ್ನಿಸುತಿದ್ದೇವೆ. ನಮ್ಮ ಕೃಷಿಯೋಗ್ಯ ಭೂಮಿಯಲ್ಲಿ ಈಗ ಬೆಳೆವುದಕ್ಕಿಂತ ಮೂರು ಪಟ್ಟು ಅಧಿಕ ಧಾನ್ಯಗಳನ್ನು ಬೆಳೆಸಬಹುದು. ಆದರೆ, ನಮ್ಮ ಕೃಷಿಯೋಗ್ಯ ಭೂಮಿ ದಿನೇ ದಿನೇ ಹೆಚ್ಚಾಗದೆ ಕಡಿಮೆಯಾಗುತ್ತ ಬರುತ್ತಿದೆ. ಇನ್ನೊಂದೆಡೆ ನಮ್ಮ ಜನಸಂಖ್ಯೆ ಏರುತ್ತ ಇದೆ. ಪ್ರತಿ ವರ್ಷ ೫೦ ಲಕ್ಷ ಉಣ್ಣುವ ತಲೆಗಳು ಬೆಳೆಯುತ್ತವೆ. ಇವರಿಗೆ ಉಣ್ಣಲು ಆಹಾರವೂ ವಾಸಿಸಲು ಮನೆಗಳೂ ಬೇಕಾಗಿವೆ. ಮನೆ ಕಟ್ಟಲು ಗದ್ದೆಗಳನ್ನೇ ಬಳಸಲಾಗುತ್ತದೆ ಆಗ ಕೃಷಿ ಭೂಮಿಯ ಪ್ರಮಾಣ ಕುಂದುತ್ತದೆ. ಹೀಗಾಗಿ ಅಧಿಕೋತ್ಪಾದನೆಗೆ ಅಧಿಕ ಭೂಮಿಯನ್ನೊದಗಿಸಲು ನಾವು ಅಸಮರ್ಥರಿದ್ದೇವೆ. ಕಾಡುಗಳನ್ನು ಕಡಿದು ಬಿಟ್ಟಿದ್ದೇವೆ. ಈಗ ಉಳಿದಿರುವುದೆಂದರೆ, ತೀರ ಪರ್ವತ ಗುಡ್ಡಗಳು ಮತ್ತು ಮರಳುಗಾಡುಗಳು ಮಾತ್ರ. ಒಂದೆಡೆ ನಮ್ಮ ಜನಸಂಖ್ಯೆ ಬೆಳೆಯುತ್ತ ನಡೆದರೆ, ಇನ್ನೊಂದೆಡೆಯಲ್ಲಿ ಭೂಮಿ ಕಡಿಮೆಯೆನಿಸುತ್ತದೆ. ಇದೇ ನಮ್ಮ ಸಮಸ್ಯೆ.

ನಾವು ಆಕಾಶವನ್ನಾಗಲೀ ಸಮುದ್ರವನ್ನಾಗಲೀ ಉತ್ತು ಆಹಾರಧಾನ್ಯ ಪಡೆಯಲಾರೆವು. ಸಮುದ್ರದಲ್ಲಿ ಮೀನುಗಳೂ ಹುಲ್ಲೂ ದೊರೆಯುತ್ತವೆ ಆದರೆ, ಅವು ನಮಗೆ ಸಾಲುವಂತಿಲ್ಲ. ಅವರಲ್ಲಿ ನಿಶ್ಚಿತತೆಯೆಂಬುದಿಲ್ಲ.

ಬಡತನ ಮತ್ತು ಮಕ್ಕಳಿಗೆ ನಿಕಟವಾದ ಮೈತ್ರಿಯಿರುವುದು. ಬಡತನವಿರುವಲ್ಲಿಯೇ ಮಕ್ಕಳಸಂಖ್ಯೆಯೂ ಬೆಳೆಯುವುದು. ಇದಕ್ಕೆ ನಿರಕ್ಷರತೆ ಮತ್ತು "ಅಪುತ್ರಸ್ಯ ಗತಿರ್ನಾಸ್ತಿ" ಎಂಬ ತಿಳುವಳಿಕೆಗಳೇ ಕಾರಣವೆನ್ನಬಹುದು. ಈ 'ವೇದವಾಕ್ಯ" ದಂತೆ ಏಳೆಂಟು ಮಗಳಂದಿರು ಜನಿಸಿದರೂ ಮತ್ತೂ ಪುತ್ರನೊಬ್ಬನಾದರೂ ಬೇಕೇ ಬೇಕಾಗಿದೆ. ಇದರಿಂದಾಗಿ ನಮ್ಮಲ್ಲಿ ಮಕ್ಕಳಸಂಖ್ಯೆ ಬೆಳೆಯುತ್ತ ಹೋಗುತ್ತಿರುತ್ತದೆ. ಗಂಡು ಮಕ್ಕಳನ್ನು ಪಡೆಯಲು ಹರಕೆಹೊರುವುದನ್ನು ನಾವು ಕಾಣುತ್ತೇವೆ. ಇದಕ್ಕಾಗಿ ಎಷ್ಟೆಷ್ಟೋ ಹರಕೆಗಳನ್ನು ಒಪ್ಪಿಸುತ್ತಿರುತ್ತಾರೆ.

ಹಾಗಿರುವಾಗ, ಈ ಸಮಸ್ಯೆಯನ್ನು ಹೇಗೆ ಬಿಡಿಸಬಹುದು? ಇದಕ್ಕೊಂದು ಉಪಾಯವನ್ನು ಡಾ! ರಾಧಾಕೃಷ್ಣನರು ಸೂಚಿಸಿದ್ದಾರೆ. ವೈಜ್ಞಾನಿಕೋನ್ನತಿಯು ಧಾರ್ಮಿಕ ವಿಶ್ವಾಸಗಳ ಮೇಲೆ ವಿಚಾರಿಸುವುದಕ್ಕೆ ಮಾನವನಿಗೆ ಸ್ವಾತಂತ್ರ್ಯವಿತ್ತಿದೆ. ಇದರಿಂದಾಗಿ, ತಂದೆಗೆ ಮುಕ್ತಿಯನ್ನು ತಂದೀಯುವ ಕುರಿತಾಗಿಯೂ ಸ್ವತಂತ್ರ ವಿಚಾರ ನಡೆಸಲು ಸ್ವಾತಂತ್ರ್ಯವಿದೆ. ಈ ಕಡೆಗೆ ನಮ್ಮ ಸಾಹಿತಿಗಳ ಗಮನವು ಹರಿಯಬೇಕು. ಅಶ್ಲೀಲ ಸಾಹಿತ್ಯ, ಪ್ರೇಮಾಲಾಪದ ಕಥೆಗಳನ್ನು ತಡೆದು ನಿಲ್ಲಿಸಬೇಕು. ಇತ್ತ ಸರಕಾರದ ಲಕ್ಷ್ಯವೂ ಹರಿಯಬೇಕು – ಎಂದವರು ಅಮೆರಿಕೆಯಲ್ಲಿ ಒಂದು ಭಾಷಣದಲ್ಲಿ ಹೇಳಿದ್ದಾರೆ.

ಇಂಗ್ಲಿಷ್ ಫುಟ್‌ಬಾಲ್ ಎಸೋಸಿಯೇಶನ್ ಕಪ್ಪನ್ನು ಜಯಿಸಿದ 'ಬೋಲ್ಟನ್ ವಂಡರರ್ಸ್'ದ ನಾಯಕ ನಾಟ್ ಲೋಫ್ಟ್ ಹೌಸರು ರಾಜಕುಮಾರ ಫಿಲಿಪರಿಂದ ಬಹುಮಾನವನ್ನು ಪಡೆದರು.

ಗುರಿಯ ಸಾಧನೆ

ಯೋಜನೆಯ ಸಿದ್ಧಿಗೆ ಜನಸಹಾಯ ಅಗತ್ಯ

ಸ್ವಾವಲಂಬನೆಯ ಮೂಲತತ್ವಗಳನ್ನು ಅಕ್ಷರಶಃ ಪರಿಪಾಲಿಸಬೇಕು

ಸಾಮುದಾಯಿಕ ಅಭಿವೃದ್ಧಿ ಯೋಜನೆಯು ಒಂದು ರಾಜ್ಯ ಮಟ್ಟದ ಸಂಸ್ಥೆ ಮತ್ತು ಇದು ರಾಜ್ಯ ವ್ಯವಸ್ಥೆಯ ಒಂದು ಭಾಗ ಮಾತ್ರ. ಗ್ರಾಮಾಂತರ ಜೀವನದಲ್ಲಿ ಒಂದು ಹೊಸ ಚೈತನ್ಯವನ್ನೇ ತುಂಬಿ ಜನ ಬಡತನ ಮತ್ತು ಅಜ್ಞಾನ ಇವುಗಳ ವಿರುದ್ಧ ಒಂದು ದೊಡ್ಡ ಹೋರಾಟವನ್ನೇ ನಡೆಸಲು ಸಿದ್ಧರಾಗುವಂತೆ ಮಾಡುವ ಮತ್ತು ಅವರ. ಈ ಹೋರಾಟದ ಫಲವಾಗಿ ಕಷ್ಟ ಉತ್ಪನ್ನಸಾಧನಗಳು ಹಾಗೂ ಹೆಚ್ಚು ಹಣ ಉಳಿಸಲು ಸಮರ್ಥರಾಗುವಂತೆ ಮಾಡುವ ಕಾರ್ಯಭಾರ ಸಾಮುದಾಯಿಕ ಅಭಿವೃದ್ಧಿ ಕೇಂದ್ರಗಳ ಪಾಲಿಗೆ ಇದೆ. ಈ ಗುರಿಮುಟ್ಟಲು ಸಾಧ್ಯವಾಗಬೇಕಾದರೆ ಪ್ರತಿಯೊಂದು ಕೇಂದ್ರವೂ ಜನ ಹಾಗೂ ಸರ್ಕಾರದ ಮಧ್ಯೆ ಉತ್ತಮ ಸಹಕಾರವನ್ನು ಏರ್ಪಡಿಸಲು ಏದಿ ಮಾಡಬೇಕು; ಗ್ರಾಮದ ನಾಯಕರು ಹಾಗೂ ಸರ್ಕಾರಿ ಆಡಳಿತಾಧಿಕಾರಿಗಳು ಸೇರಿ ಕೆಲಸಮಾಡುವುದಕ್ಕೆ ಅವಕಾಶವಾಗಬೇಕು. ಹೀಗೆ ಮಾಡುವುದರಿಂದ ಮಾತ್ರ ಗ್ರಾಮಾಂತರ ಜೀವನ ಒಂದು ಸಾಮೂಹಿಕ ಘಟಕವಾಗಿ ಬೆಳೆದು ರಾಷ್ಟ್ರೀಯ ಐಕಮತ್ಯಕ್ಕೆ ಹಾದಿಮಾಡುತ್ತದೆ

ನಾವು ನಮ್ಮ ಮುಂದಿಟ್ಟುಕೊಂಡಿರುವ ಕಾರ್ಯಕ್ರಮ ಸುಲಭಸಾಧ್ಯವಲ್ಲ, ಇದು ಯಶಸ್ವಿಯಾಗಬೇಕಾದರೆ ಮುಖ್ಯ ಸಿರಿಕೆಯಾಗಿ ಆಡಳಿತ ದಕ್ಷತೆ ಬೇಕು. ತಾಂತ್ರಿಕ ಸೌಲಭ್ಯ ಬೇಕು ಹಣ ಸಹಾಯ ಮತ್ತು ಸಹಕಾರ ಮನೋಭಾವ ಬೇಕು. ಇದಕ್ಕಾಗಿ ಸರ್ಕಾರದ ಅಧಿಕಾರಿಗಳಿಗೆ ಪ್ರತ್ಯೇಕ ತರಬೇತಿ ಬೇಕು ಗ್ರಾಮ ಪಂಚಾಯತಿಗಳನ್ನು ಮತ್ತು ಸಹಕಾರ ಸಂಘಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುವ ಕಾರ್ಯದಲ್ಲಿ ಗ್ರಾಮನಾಯಕರಿಗೆ ತರಬೇತಿಕೊಡುವ ಮತ್ತು ಸಮಾಜ ಸೇವಾ ಕಾರ್ಯಗಳಲ್ಲಿ ಯುವಕರಿಗೆ ದಕ್ಷ ಕಾರ್ಯದರ್ಶಿಗಳಾಗಿ ಕೆಲಸ ಮಾಡುವ ತರಬೇತಿ ವ್ಯವಸ್ಥೆಯೂ ನಡೆಯಬೇಕು.

ಎಲ್ಲ ಕಾರ್ಯಕ್ರಮಗಳಲ್ಲೂ ಜನನಾಯಕರೇ ಮುಖ್ಯ ಪಾತ್ರವಹಿಸುವಂತೆ ವ್ಯವಸ್ಥೆಯಾಗಬೇಕು. ಒಳ್ಳೆ, ನುರಿತ ಬೇಸಾಯಗಾರರೂ ಸಹಕಾರ ಸಂಘಗಳನು ದಕ್ಷತೆಯಿಂದ ನಡೆಸಿಕೊಂಡು ಹೋಗಬಲ್ಲವರೂ ಈ ಕಾರ್ಯಕ್ರಮಗಳಲ್ಲಿ ಪೂರ್ಣ ಭಾಗಿಗಳಾಗಿ ನಿಲ್ಲಬೇಕು. ಇವರ ನೆರವು ಯಾವತ್ತೂ ಸಿಗುವಂತಿರಬೇಕು ಸ್ವಾವಲಂಬನೆಯ ಮೂಲತತ್ವ ಪ್ರತಿಯೊಂದು ಕಾರ್ಯಕ್ರಮದಮೂಲೋದ್ದೇಶವಾಗಿ ಗ್ರಾಮದಜನ ಇದನ್ನರಿತು ಕೆಲಸ ಮಾಡಲು ಚುರುಕು ತುಂಬ ಬೇಕು. ಪ್ರತಿಯೊಂದು ಕಾರ್ಯಕ್ರಮವೂ ಸ್ವಾವಲಂಬನಕ್ಕೆ ಜನತಾ ಚಳವಳಿಯ ಒಂದು ಪ್ರಮುಖ ಹೆಜ್ಜೆಯೆಂಬ ಭಾವನೆ ಬರಬೇಕು.

ನೀರಾವರಿ ಯೋಜನೆಗಳು ಮತ್ತಿತರ ಕೆಲಸ ಕಾರ್ಯಗಳಿಗೆ ಪ್ರತಿಯೊಂದು ಗ್ರಾಮವೂ ತನ್ನ ಜವಾಬ್ದಾರಿ ಇದೆಯೆಂದು ತಿಳಿಯಬೇಕು. ಸೇವಾ ಶಿಬಿರಗಳಿಗೆ ಪ್ರತಿಯೊಂದು ಗ್ರಾಮವೂ ತನ್ನ ಸ್ವಯಂಸೇವಕರನ್ನು ಕಳುಹಿಸಬೇಕು. ಬೇಸಾಯೋತ್ಪನ್ನ ಹೆಚ್ಚುವಂತೆ ಮಾಡಲು ಮತ್ತು ರಾಷ್ಟ್ರೀಯ ಉಳಿತಾಯ ಯೋಜನೆಗಳಲ್ಲಿ ಭಾಗಿಯಾಗಲು ಪ್ರತಿಯೊಂದು ಗ್ರಾಮವೂ ಒಂದು ಒಳ್ಳೆಯ ಘಟಕವಾಗಿ ಕೆಲಸಮಾಡುವಂತಾಗಬೇಕು.

ಹೀಗಾಗಿ ಭಾರತದ ಈ ಮಹಾ ಸಮಸ್ಯೆಯ ಪರಿಹಾರ ಕಾರ್ಯದಲ್ಲಿ ಸಾಹಿತಿಗಳು ಅಗ್ರಗಣ್ಯ ಸ್ಥಾನವನ್ನು ಪಡೆದಿದ್ದಾರೆ ಆದುದರಿಂದ ಸಾಹಿತಿಗಳು ಈ ದಿಸೆಯಲ್ಲಿ ಕಾರ್ಯಶೀಲರಾಗಿ ದೇಶದ ಮಹಾಸಮಸ್ಯೆಯನ್ನು ಹೋಗಲಾಡಿಸಲು ಪ್ರಯತ್ನಿಸಬೇಕು.

—ಯೋಜನಾ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-

(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA–40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ನೆಹರೂ ಉವಾಚ

ನಾನು ಬಾಲಕನಿದ್ದಾಗ ಮತ್ತು ಈಗ...

ಈ ಬೃಹದಂತರದ ನಡುವೆ ಹೇಗೆ ಸೇತುವನ್ನು ಕಟ್ಟಬಹುದು?

ನಾನಿಂದು ಮುಂಜಾನೆ ಏಳು ಗಂಟೆಗೆ ಹೈದರಬಾದದಲ್ಲಿದ್ದೆನು. ಹನ್ನೊಂದು ಗಂಟೆಯ ಹೊತ್ತಿಗೆ ಇಲ್ಲಿ ಬಂದು ಅಂತಾರಾಷ್ಟ್ರೀಯ ವಿಮಾನ ಪರಿವಹನ ಸಂಘದ ಸಮ್ಮೇಳನದಲ್ಲಿ ಭಾಷಣಮಾಡಿದೆನು. ಆ ಮೇಲೆ ಸ್ವಾಯತ್ತಶಾಸನಾಧಿಕಾರಿಗಳ ಸಮ್ಮುಖದಲ್ಲಿ ಭಾಷಣವಿತ್ತೆನು. ಈ ಮಧ್ಯೆ ಒಂದು ಬಾರಿ ಪಾಲಂ ವಿಮಾನ ನಿಲ್ದಾಣಕ್ಕೆ ತೆರಳಿ, ಅಲ್ಲಿ ಒಂದು ಹೊಸ ಪ್ರಕಾರದ ವಿಮಾನದ ಮೂಲಕ ಅರ್ಧತಾಸು ಹರಿದ್ವಾರದ ವರೆಗೆ ಹಾರಿ ಬಂದೆನು. ಮತ್ತೀಗ ಈ ಯುವಕ ಸಮಾರೋಹದ ಉದ್ಘಾಟನೆಯನ್ನು ಮಾಡುತ್ತಿರುವೆನು.

ನಾನೆಷ್ಟು ವ್ಯಸ್ತನಾಗಿದ್ದೇನೆಂದು ನೀವೆಲ್ಲರೂ ತಿಳಿಯಬೇಕೆಂಬ ಇರಾದೆಯಿಂದ ನಾನು ನಿಮಗೆ ಈ ಮಾತುಗಳನ್ನು ಹೇಳುತ್ತಿಲ್ಲ. ಆದರೆ, ಕಳೆದ ೧೫೦ ವರ್ಷಗಳಲ್ಲಿ ಯಾತ್ರೆಯ ಸಾಧನಗಳಲ್ಲಿ ಅದೆಷ್ಟು ಪರಿವರ್ತನೆಗಳಾಗಿವೆ ಎಂಬುದನ್ನು ತಿಳಿಯುವುದಕ್ಕೋಸ್ಕರ ಆಡುತ್ತಿದ್ದೇನೆ. ೧೫೦ ವರ್ಷ ಪೂರ್ವದಲ್ಲಿ ವೇಗವಾಗಿ ಪ್ರಯಾಣ ಬೆಳೆಸಲು ಒಂದೇ ಒಂದು ಸಾಧನವಿತ್ತು—ಅದೇ ಕುದುರೆ. ಒಂದೂವರೆ ಸಾವಿರ ವರ್ಷಗಳಿಗೆ ಮೊದಲೂ ಅದೇ ಸಾಧನವಿತ್ತು. ಆದರೆ ಹಿಂದಿನ ೧೫೦ ವರ್ಷಗಳ ಅವಧಿಯಲ್ಲಿ ಕಾಲವೇ ಪಲ್ಲಟಗೊಳ್ಳುವಂತಾಯಿತು. ಉಗಿ, ವಿದ್ಯುತ್ತು, ಅಣುಶಕ್ತಿ ಮೊದಲಾದುವು ಈ ಮೊದಲೂ ಇದ್ದುವು; ಆದರೆ, ಜನರು ಮಾತ್ರ ಅವನ್ನು ಗೊತ್ತುಹಚ್ಚಲಿಲ್ಲ; ಅಷ್ಟೆ.

ನಾನು ಭಾರತದ ಸಮೀಪದ ಒಂದು ದೇಶಕ್ಕೆ ಹೋಗಿದ್ದೆನು. ಅಲ್ಲಿ ವಿಮಾನಗಳು ದೂರವಾಗಿದ್ದುವು; ಅಲ್ಲದೇ ಚಕ್ರಗಳ ಗಾಡಿಗಳೂ ಇರಲಿಲ್ಲ. ಅದು ಭೂತಾನ ದೇಶವಾಗಿದೆ. ಆದರೆ, ಅಲ್ಲಿನ ಜನರಲ್ಲಿ ಬುದ್ಧಿಶಕ್ತಿಗೆ ಕೊರತೆಯೇನೂ ಇಲ್ಲ. ನಾನಿಂದು ಮೂರು ತಾಸುಗಳಲ್ಲಿ ೯೦೦ ಮೈಲು ಪ್ರಯಾಣ ಮಾಡಿದೆನು; ಆದರೆ, ಅಂದು ಭೂತಾನದಲ್ಲಿ ೨೦—೪೦ ಮೈಲಿ ಪ್ರವಾಸ ಮಾಡಲು ಮೂರು ದಿನಗಳು ಬೇಕಾಗಿದ್ದುವು. ಸ್ವಲ್ಪ ನಡೆದು ಹೋದೆನು; ಕೊಂಚ ಕುದುರೆಯ ಮೇಲೆ ಕುಳಿತು ಸಾಗಿದೆನು; ಇನ್ನು ತುಸು ದೂರ ಯಾಕಿನ ಮೇಲೆ ಆರೋಹಿಸಿ ನಡೆದೆನು.

ಚಂದ್ರನನ್ನು ತಲಪುವ ಪ್ರಯತ್ನಗಳು ನಿರಾತಂಕವಾಗಿ ಸಾಗುತ್ತಿವೆ ಎಂಬುದನ್ನು ನೀವು ಪತ್ರಿಕೆಗಳಲ್ಲಿ ಓದಿರಬಹುದು. ನನ್ನ ಜೀವನದಲ್ಲಿ ಇಲ್ಲವಾದರೂ ನೀವು ನಿಮ್ಮ ಜೀವಮಾನಾವಧಿಯಲ್ಲಿ ಮಾನವನು ಚಂದ್ರನವರೆಗೆ ಹಾರುವುದನ್ನು ಕಾಣಬಲ್ಲಿರಿ. ನನ್ನ ಜೀವಮಾನದಲ್ಲಿ ವಾಯು ವಿಮಾನಗಳು ಸಿದ್ಧವಾಗತೊಡಗಿದುವು. ನಾನು ಶಾಲೆಯಲ್ಲಿ ಅಭ್ಯಾಸ ನಡೆಸುತ್ತಿರುವಾಗಿನ ಈ ಮಾತು ನನ್ನ ಸ್ಮರಣೆಯಲ್ಲಿದೆ: ವಾಯು ವಿಮಾನವನ್ನು ಹಾರಿಸುವ ಪ್ರಥಮ ಪ್ರಯತ್ನ ನಡೆಯಿತು; ಆಗ ಅದು ಕೇವಲ ನೂರು ಗಜಗಳಷ್ಟು ದೂರ ಮಾತ್ರ ಹಾರುತಿತ್ತು ಮತ್ತು ಕೆಳಗೆ ಇಳಿದುಬರುತಿತ್ತು. ಐವತ್ತು ವರ್ಷಗಳ ನನ್ನ ಜೀವನದಲ್ಲಿ ನೂರು ಗಜ ಹಾರುತ್ತಿದ್ದ ವಿಮಾನವು ಅತ್ಯಂತವೇಗವಾಗಿ ಹಾರತೊಡಗಿದುದನ್ನು ಕಂಡೆನು.

ಪ್ರಪಂಚವು ಎಷ್ಟೊಂದು ವೇಗದಿಂದ ಪರಿವರ್ತನೆಗೊಳ್ಳುತ್ತಿದೆ ಯೆಂಬುದನ್ನೂ ನಾನು ಕಂಡುಕೊಂಡಿದ್ದೇನೆ. ನೀವು ಬದಲಾಗುತಿದ್ದೀರಿ; ನಾನೂ ಪರಿವರ್ತನೆ ಹೊಂದುತಿದ್ದೇನೆ ಯಾವ ವಿಧದ ಸಮಾಜವಿದೆಯೋ, ಮಾನವನು ಯಾವ ವಾತಾವರಣದಲ್ಲಿ ಬದುಕುತ್ತಾನೋ, ಅದನ್ನೆದುರಿಸಲು ಮಾನವನು ಶಕ್ತಿಯನ್ನು ಸಂಪಾದಿಸಬೇಕಾಗಿದೆ; ಆಗ ಮಾನವನ ಆಲೋಚನಾವಿಧಾನವೂ ಪರಿವರ್ತನೆಗೊಳ್ಳುತ್ತದೆ. ನಾನು ಬಳೆದ ಸಮಯ ಮತ್ತು ನಿಮ್ಮ ಕಾಲದ ಜಗತ್ತುಗಳ ನಡುವೆ ಬಹಳ ಅಂತರವಿರುವುದು. ಈಗ ಏಳುವ ಪ್ರಶ್ನೆಯಿದ: "ಈ ಪರಿವರ್ತನೆಯನ್ನು ದೂರೀಕರಿಸಲು ತಕ್ಕ ಸೇತುವೆಯೊಂದನ್ನು ಹೇಗೆ ಕಟ್ಟಬಹುದ.?"

—ಯೋಜನಾ.

ಆಧ್ಯಾತ್ಮ ಕ್ಷೇತ್ರ

ಪರಮಾತ್ಮ ಪ್ರೇಮ ನೈಸರ್ಗಿಕ ಗುಣ

ಸರಿಯಾದ ಸಾಧನೆಯಿಂದಲೇ ಪರಮಾತ್ಮ ಸಾಕ್ಷಾತ್ಕಾರವಾಗುವುದು

ಪರಮಾರ್ಥ ಸಾಧನೆ ಮುಪ್ಪಿನವರಿಗೇ ಮೀಸಲಾದುದಲ್ಲ. ಸಂಸಾರ, ಪರಮಾರ್ಥ ಬೇರೆಯಲ್ಲ. ಮನೆಯಲ್ಲಿ ತಾಯಿ-ತಂದೆ, ಅಣ್ಣ-ತಮ್ಮ ಇವರಲ್ಲಿರುವ ಸ್ನೇಹದಿಂದ ಯಾವ ಆನಂದವಾಗುವದೋ ಅದೇ ಪರಮಾತ್ಮ ಸಂಬಂಧದಿಂದಲೂ ಉಂಟಾಗುತ್ತದೆ. ಪಾರಮಾರ್ಥಿಕ ವಿಷಯದಲ್ಲಿಯೂ ಪ್ರಯೋಗ ಶಾಲೆಯಲ್ಲಿಯಂತೆ ನಾನಾ ಪ್ರಯೋಗಗಳನ್ನು ಮಾಡಿಯೇ ಬೇರೆ ಬೇರೆ ಸಿದ್ಧಾಂತಗಳನ್ನು ಕಂಡುಕೊಳ್ಳಲಾಗಿವೆ ಸಾಕ್ಷಾತ್ಕಾರ ಇದೂ ಒಂದು ಶಾಸ್ತ್ರ; ಸಂಪಾದಿಸತಕ್ಕ ಧ್ಯೇಯ.

ಜೀವನದಲ್ಲಿ ಮಣ್ಣು, ಹೆಣ್ಣು, ಹೊನ್ನು ಇವುಗಳ ಹುಚ್ಚಿನಿಂದ ಇದ್ದವರು ಅನೇಕ. ಆದರೆ ದೇವರ ಹುಚ್ಚು ಹಿಡಿದವರು ವಿರಳ. ಸುಖಗಳಲ್ಲಿ ಅನೇಕ ಬಗೆಯಿದೆ. ಆದರೆ ಶಾಶ್ವತವೂ ಗಂಭೀರವೂ ಆದ ಸುಖ ಪಾರಮಾರ್ಥದಿಂದ ಮಾತ್ರ ದೊರೆಯುವಂಥದು. ಸಂಸಾರ ಮಾಡುತ್ತಿರುವಂತೆಯೇ ಅದರ ಕಡೆಗೆ ಲಕ್ಷ್ಯವೀಯಬಹುದಾಗಿದೆ ಅದಕ್ಕಾಗಿ ಸಂಸಾರವನ್ನೇ ತ್ಯಜಿಸಬೇಕೆಂದೇನೂ ಇಲ್ಲ. ವ್ಯಕ್ತಿಗತ ಅನುಭವ ವಸ್ತುಗತ ಅನುಭವವಾದಾಗ ಅದು ಸತ್ಯವಾಗುತ್ತದೆ. ಪರಮಾರ್ಥ ಸಾಧನೆಗೆ ಯೋಗ್ಯ ಗುರು ಬೇಕು. ಪಾರಮಾರ್ಥಿಕ ಜ್ಞಾನದಲ್ಲಿ ಮಾರ್ಗದರ್ಶನ ಮಾಡಲು ಆತನು ಸಮರ್ಥನಾಗಿರಬೇಕು. ಇಲ್ಲದಿದ್ದರೆ ಕುಂಟನಿಗೆ ಕುರುಡ ದಾರಿ ತೋರಿಸಿದಂತಾದೀತು. ಡಂಬಾಚಾರಕ್ಕಾಗಲಿ ಸುಳ್ಳು ಮೋಸಗಳಿಗಾಗಲಿ ಇಲ್ಲಿ ಎಳ್ಳಷ್ಟು ಅವಕಾಶವಿರಕೂಡದು.

ಪರಮಾತ್ಮನನ್ನು ಕುರಿತು ಮಾನವರಲ್ಲಿ ಭಕ್ತಿ ಪ್ರೇಮ ಹುಟ್ಟುವದು ಅತ್ಯಂತ ಸಹಜವಾದ ನೈಸರ್ಗಿಕ ಗುಣವಾಗಿದೆ. ಅಪೂರ್ಣವಾದ ಮಾನವನು ತನ್ನ ಪೂರ್ಣತೆಗಾಗಿ ಹಾತೊರೆಯುತ್ತಿದ್ದಾನೆ. ಅವನು ತನ್ನ ಇನ್ನರ್ಥವನ್ನು ಪರಮಾತ್ಮನಲ್ಲಿ ಕಂಡುಕೊಂಡಾಗ ಪೂರ್ಣತ್ವವನ್ನು ಪಡೆಯಬಲ್ಲನು. ಯಾವುದಾದರೂ ವಿಷಯದಲ್ಲಿ ಆಸಕ್ತಿ ವಿಶೇಷವಾಗಿದ್ದರೆ ಅದನ್ನು ಸಾಧಿಸುವದು ಹೆಚ್ಚಿನದಲ್ಲ ಹಸಿವೆ ನೀರಡಿಕೆಯ ಪರಿವೆಯಿಲ್ಲದೆ ಪರಮಾರ್ಥದ ಬೆನ್ನು ಹತ್ತಿದಾಗ ಮಾತ್ರ ಅದನ್ನು ಸಾಧಿಸಬಹುದು. ರಾಮಕೃಷ್ಣ ಪರಮಹಂಸರು ಹಾಗೆಯೇ ಕಂಡುಕೊಂಡರು. ಮೊದಲು ಜಿಜ್ಞಾಸೆ ನಂತರ ಯೋಗ್ಯ ಗುರುವಿನ ಮಾರ್ಗದರ್ಶನ ಈ ದಿಸೆಯಲ್ಲಿ ಅವಶ್ಯವಾದುದು. ತರ ವಾಯು ಸಾಧನೆ ಏಕಾಗ್ರ, ಧ್ಯಾನದಿಂದ ತೇಜ, ಆಕಾರ, ನಾದ, ಬಣ್ಣ ಇವು ಗೋಚರವಾಗತೊಡಗುತ್ತವೆ ಇಷ್ಟೇ ಅಲ್ಲದೆ ಪ್ರತ್ಯೇಕವಾಗಿ ಒಂದು ಇಂದ್ರಿಯ ದ್ವಾರ ಒಂದು ಅನುಭವವೂ ಉಂಟಾಗುತ್ತದೆ. ಮುಂದೆ ಇಂದ್ರಿಯಾತೀತವಾದ ಅನುಭವವುಂಟಾದಾಗ ಕಣ್ಣಿಲ್ಲದೆಯೂ ಕಾಣಬಹುದು, ಕಿವಿಯಿಲ್ಲದೆಯೂ ಕೇಳಬಹುದು. ಅನವರತ ಸಾಧನೆಯಂತೆ ಅದರ ಪ್ರಮಾಣದಂತೆ ಸಿದ್ಧಿಯ ಪ್ರಮಾಣವು ಇರುತ್ತದೆ. ಸರಿಯಾದ ಮಾರ್ಗದಲ್ಲಿ ಸಾಧನೆ ಮಾಡುವವರಿಗೆ ಪರಮಾತ್ಮನ ಸ್ವರೂಪದರ್ಶನ ಯಾವ ಚರ್ಚೆ, ವಿವರಣೆ ಬೇಕಿಲ್ಲದೆ ಒಮ್ಮೆಲೆ ತೋರಿಬರುತ್ತದೆ.

—ಕೆ. ವಿ ಗಜೇಂದ್ರಗಡಕರ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)
ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ್, ಎಂ. ಬಿ. ಬಿ. ಎಸ್.)
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

●

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಹಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಜಿಸ್ಟ್ರ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು. ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

NAVAYUGA
REGD. NO. M. 3619

UDIPI, THURSDAY
8-1-1959

LICENSE NO. 31
Licensed to Post without Prepayment

ವಿಜ್ಞಾನ ಶಾಲೆ

(೧ನೇ ಪುಟದಿಂದ)

ಲ್ಲಿ ತುಂಬಾ ಕಾರ್ಯ ಸಾಧ್ಯವಾಗಿದೆ. ಇಲ್ಲಿ ನಡೆದಿರುವ ವಿವಿಧ ರೀತಿಯ ಪ್ರಯೋಗಗಳಿಗೆ ಸಂಬಂಧಿಸಿದಂತೆ ೫೦೦ಕ್ಕೂ ಹೆಚ್ಚು 'ಸಂಶೋಧನಾತ್ಮಕ ಲೇಖನಗಳು ದೇಶವಿದೇಶಗಳ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಯೋಗ ಕ್ಷೇತ್ರದಲ್ಲಿ ಇಲ್ಲಿ ಸಿದ್ಧಪಡೆದಿರುವ ಸುಮಾರು ಎಂಭತ್ತು ಪ್ರಯೋಗ ವಿಧಾನಗಳು ಈಗಾಗಲೇ 'ಪೇಟೆಂಟ್' ಆಗಿ ರಕ್ಷಣೆ ಪಡೆದಿದೆ.

ಈ ಸಂಸ್ಥೆಯಲ್ಲಿ ಸಂಶೋಧನಾ ಕಾರ್ಯದಲ್ಲಿ ತೊಡಗಿರುವ ವಿಜ್ಞಾನಿಗಳು ಬಗೆಹರಿಸುತ್ತಿರುವ ಸಮಸ್ಯೆಗಳ ಮತ್ತು ಕೈಗೊಳ್ಳುತ್ತಿರುವ ಯೋಜನೆಗಳ ಸಂಕ್ಷಿಪ್ತ ಪರಿಚಯವನ್ನು ಈ ಕೆಳಗೆ ಕೊಡಲಾಗಿದೆ.

ಕೈಗಾರಿಕೆಯಲ್ಲಿ ಸುಣ್ಣದ ಸ್ಥಾನ ಎಷ್ಟು ಪ್ರಾಮುಖ್ಯವಾದುದೆಂಬುದು ಎಲ್ಲರಿಗೂ ತಿಳಿದಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಅದೊಂದು ಅತಿ ಮುಖ್ಯ ಕಚ್ಚಾಮಾಲು ಉತ್ತಮ ಮಟ್ಟದ ಸುಣ್ಣ ಯಾವುದು, ಅದರ ಭೌತಿಕ ಹಾಗೂ ರಸಾಯನಿಕ ಲಕ್ಷಣಗಳೇನು ಎಂಬುವದರ ಬಗ್ಗೆ ಪ್ರಯೋಗ ಶಾಲೆಯಲ್ಲಿ ವಿಶಿಷ್ಟ ಸಂಶೋಧನೆ ನಡೆದಿದೆ. ಇದರ ಆಧಾರದ ಮೇಲೆ ಪ್ರಕಟವಾಗಿರುವ ಒಂದು ವರದಿ ರಸಾಯನಿಕ ಕೈಗಾರಿಕೆಗಳಿಗೆ ತುಂಬಾ ಉಪಯುಕ್ತವಾಗಿದ್ದು ಯಾವ ಯಾವ ಕಾರ್ಯಕ್ಕೆ ಯಾವ ಯಾವ ಜಾತಿಯ ಸುಣ್ಣವನ್ನು ಆರಿಸಬೇಕೆಂಬುದಕ್ಕೆ ಒಳ್ಳೆ ಮಾರ್ಗದರ್ಶನ ನೀಡುತ್ತದೆ.

ಅಣುಶಕ್ತಿ ಸಂಶೋಧನಾ ಇಲಾಖೆಯ ಸಹಾಯದೊಡನೆ ರಾಷ್ಟ್ರೀಯ ರಸಾಯನಿಕ ಪ್ರಯೋಗ ಶಾಲೆಯಲ್ಲಿ ಇನ್ನೂ ಒಂದು ಮುಖ್ಯ ಕಾರ್ಯ ನಡೆಯುತ್ತಿದೆ. ಸಾಮಾನ್ಯ ಲೋಹಗಳು ಮತ್ತು ಲೋಹಯುಕ್ತ ಮಣ್ಣಿನ ಮೇಲೆ ನಡೆಯುತ್ತಿರುವ ವಿಶೇಷ ಪ್ರಯೋಗಗಳು ಮತ್ತು ಇವುಗಳಿಗಾಗಿ ಅನುಸರಿಸುತ್ತಿರುವ ಆಧುನಿಕ ವಿಧಾನಗಳು ಗಮನಾರ್ಹ. ಇಷ್ಟೇ ಅಲ್ಲದೆ 'ರೇಡಿಯೋ—ಆ್ಯಕ್ಟಿವ್ ಟ್ರೇಸರ್' ಪ್ರಯೋಗ ಶಾಲೆಯೂ ಒಂದು ಸ್ಥಾಪಿತವಾಗಿದ್ದು ಇಲ್ಲಿ ಆರ್ಗಾನಿಕ್ ರಸಾಯನ ಶಾಸ್ತ್ರಕ್ಕೆ ಸಂಬಂಧಿಸಿದಂತೆಯೂ ಬಣ್ಣದ ಗುಣಗಳಿಗೆ ಸಂಬಂಧಿಸಿದಂತೆಯೂ ಪ್ರಯೋಗಗಳು ನಡೆಯುತ್ತವೆ. ಬೀಜಗಳು ಮತ್ತು ಜೀವಾಣುಗಳಲ್ಲಿನ ವಿಶಿಷ್ಟ ಗುಣಗಳ ಪರಿಶೀಲನೆಗಾಗಿಯೂ ಬಣ್ಣದ ಹಾಗೂ ವಾರ್ನಿಷ್ ಫಿಲಂಗಳ ಪರಿಶೀಲನೆಗಾಗಿಯೂ ರೇಡಿಯೋ ಆ್ಯಕ್ಟಿವ್ ಟ್ರೇಸರುಗಳ ಉಪಯೋಗವಾಗುತ್ತಿದೆ.

ಎಲೆಕ್ಟ್ರಾನ್ ಡಿಫ್ರ್ಯಾಕ್ಷನ್ ಕ್ಯಾಮರಾ, ಒಂದು ಎಕ್ಸ್‌ರೇ ಯೂನಿಟ್ ಇತ್ಯಾದಿ ಆಧುನಿಕ ಯಂತ್ರೋಪಕರಣಗಳನ್ನು ತಯಾರಿಸುವ ಮತ್ತು ದುರಸ್ತುಗೊಳಿಸುವ ಒಂದು ಬೇರೆ ವಿಭಾಗವೂ ಈ ಪ್ರಯೋಗ ಶಾಲೆಯಲ್ಲಿದೆ

ರಸಾಯನ ಶಾಸ್ತ್ರದಲ್ಲಿ "ಸ್ಪೆಕ್ಟರಲ್ ಅನಾಲಿಸಿಸ್"ಗೆ ಸಂಬಂಧಿಸಿದಂತೆ ವಿಶಿಷ್ಟ ರೀತಿಯ ಮತ್ತು ಇತರರಿಗೆ ಮಾದರಿಯಾಗುವಂತಹ ಕಾರ್ಯವನ್ನೂ ಈ ಪ್ರಯೋಗಶಾಲೆ ನಡೆಸುತ್ತಿದೆ.

ಹೊಸ 'ಆಕ್ಸಿಡಿಕ್ ಸೆಮಿಕಂಡಕ್ಟರ್ಸ್' ಮತ್ತು 'ಫೆರೋ ಎಲೆಕ್ಟ್ರಿಕ್ಸ್'ಗಳ ವಿಶ್ಲೇಷಣಾ ಕಾರ್ಯಕ್ಕೆ 'ಎಕ್ಸ್-ರೇ ಎಲೆಕ್ಟ್ರಾನ ಡಿಫ್ರ್ಯಾಕ್ಷನ್' ಮತ್ತು "ಇನ್‌ಫ್ರಾ-ರೆಡ್ ಟೆಕ್ನಿಕ್ಸ್" ಇತ್ಯಾದಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

ಲೋಹಗಳ ಮೇಲೆ ವಾತಾವರಣ ಭೇದದಿಂದಾಗಿ ಆಗುವ ವ್ಯತ್ಯಾಸಗಳನ್ನೂ ಇಲ್ಲಿ ಸಂಶೋಧಿಸಲಾಗುತ್ತಿದೆ.

ಈ ಪ್ರಯೋಗಶಾಲೆಯಲ್ಲಿ ನಡೆಯುತ್ತಿರುವ ಇನ್ನೊಂದು ಮುಖ್ಯ ಕಾರ್ಯವೆಂದರೆ, ತೈಲಗಳ ಶುದ್ಧೀಕರಣ ಕಾರ್ಯ.

ಬೇವು, ಕರಂಜಾ, ನಾಗೇಶ್ವರ್ ಮತ್ತು ಪೊಲಾಂಗ್ ಇತ್ಯಾದಿ ಎಣ್ಣೆಗಳನ್ನು ಶುದ್ಧಗೊಳಿಸಿ ಸಾಬೂನಿನ ತಯಾರಿಕೆಗಾಗಿ ಘನೀಕರಿಸುವುದು ಇತ್ಯಾದಿ ಕಾರ್ಯಗಳಿಗೆ ಸಿದ್ಧಗೊಳಿಸುವ ವಿಶಿಷ್ಟ ವಿಧಾನವನ್ನಿಲ್ಲಿ ಕಂಡುಹಿಡಿಯಲಾಗಿದೆ. ಈ ಎಣ್ಣೆಗಳನ್ನು ಸಾಮಾನ್ಯ ಹಾಗೂ ಗೊತ್ತಾದ ರೀತಿಯಲ್ಲಿ ಶುದ್ಧಗೊಳಿಸುವುದಕ್ಕೆ ಸಾಧ್ಯವಿಲ್ಲದಿರುವುದರಿಂದ "ಆಲ್ಕೊಹಾಲ್ ಎಕ್ಸ್‌ಟ್ರ್ಯಾಕ್ಷನ್" ವಿಧಾನವನ್ನು ಅನುಸರಿಸಿ ಅವುಗಳನ್ನು ಶುದ್ಧಗೊಳಿಸಲಾಗುತ್ತಿದೆ.

ರಕ್ತ ಹೀನರಾದ ರೋಗಿಗಳ ದೇಹಕ್ಕೆ ರಕ್ತ ಅಥವಾ 'ಪ್ಲಾಸ್ಮಾ'ಗೆ ಬದಲಾಗಿ ತುಂಬಬಹುದಾದ 'ಜಿಲೆಟಿನ್' ತಯಾರಿಕೆಯೂ ಸಹ ಈ ಪ್ರಯೋಗ ಶಾಲೆಯಲ್ಲಿ ನಡೆಯುತ್ತಿದೆ. ಇದಕ್ಕಾಗಿ ಅನುಸರಿಸುತ್ತಿರುವ ಹೊಸ 'ಎನ್‌ಜೈಮಿಕ್' ವಿಧಾನ ಗಮನಾರ್ಹ. ಪೂನಾದಲ್ಲಿರುವ ಸೈನಿಕರ ಮೆಡಿಕಲ್ ಕಾಲೇಜಿನಲ್ಲಿ ಈ 'ಜಿಲೆಟಿನ್' ಪ್ರಯೋಗವು ಪ್ರಾಣಿಗಳ ಮೇಲೆ ನಡೆದು ಈ ಪ್ರಯೋಗಗಳು ತೃಪ್ತಿಕರವಾದ ಫಲ ನೀಡಿವೆ. ಈ ಸಂಬಂಧದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯುತ್ತಿವೆ.

ಭಾರತದಲ್ಲಿ ಸುಗಂಧದ್ರವ್ಯ ತಯಾರಿಕೆಗಳಿಗೆ ಬೇಕಾದ ವಿಶಿಷ್ಟ ರಸಾಯನಗಳನ್ನು ಹೊರದೇಶಗಳಿಂದ ತರಿಸಿಕೊಳ್ಳಲು ಕೋಟ್ಯನುಕೋಟಿ ರೂಗಳು ವೆಚ್ಚವಾಗುತ್ತಿವೆ ಅಲ್ಲದೆ ಈ ರಸಾಯನಗಳ ತಯಾರಿಕೆಗೆ ಬೇಕಾದ ಕಚ್ಚಾ ಮಾಲನ್ನು ನಾವು ಹೊರದೇಶಗಳಿಗೆ ರವಾನಿಸುತ್ತಿದ್ದೇವೆ. ಈ ಕಚ್ಚಾ ಮಾಲು ನಮ್ಮಲ್ಲಿ ಹೇರಳವಾಗಿ ಸಿಗುತ್ತಿರುವಾಗ ಅದರ ಶುದ್ಧೀಕರಣ ನಮ್ಮಲ್ಲೇ ಸಾಧ್ಯವಾದರೆ ರಸಾಯನಗಳ ಆಯಾತಕ್ಕೆ ನಮ್ಮ ದೇಶ ಖರ್ಚುಮಾಡುತ್ತಿರುವ ಕೋಟ್ಯನುಕೋಟಿ ಹಣ ನಮ್ಮಲ್ಲೇ ಉಳಿಯುತ್ತದೆ.

ಈ ವ್ಯಾಪಾರಿ ಅಂಶವನ್ನು ಪ್ರಯೋಗ ಶಾಲೆಯು ಗಮನಕ್ಕೆ ತಂದುಕೊಂಡು ಈ ವಿಷಯವಾಗಿ ವಿಶೇಷ ಸಂಶೋಧನಾ ಕಾರ್ಯಕ್ಕೆ ಕೈಹಾಕಿತು. ಈಗಾಗಲೇ ಇದು ಸಾಕಷ್ಟು ಫಲಕಾರಿಯಾಗಿದೆ.

ಬೆಂಗಳೂರಿನಲ್ಲಿರುವ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್' ವಿಜ್ಞಾನ ಸಂಸ್ಥೆಯು ೧೯೫೩ರಲ್ಲಿ ಈ ಪ್ರಯೋಗ ಶಾಲೆಗೆ ಜೀವಾಣುಗಳನ್ನು ಹೇರಳ ಪ್ರಮಾಣದಲ್ಲಿ ಒದಗಿಸಿತು. ಈ ಸಂಗ್ರಹದಲ್ಲಿ ಒಂದು ಸಾವಿರಕ್ಕೂ ಹೆಚ್ಚು 'ಯೀಸ್ಟ್' ಬ್ಯಾಕ್ಟೀರಿಯಾ' ಇತ್ಯಾದಿ ಜೀವಾಣುಗಳು ಇದ್ದುವು. ಇವುಗಳ ವಂಶಾಭಿವೃದ್ಧಿ ನಡೆದು ಸುಮಾರು ೨೦೦ಕ್ಕೂ ಹೆಚ್ಚು ಮಾದರಿಗಳನ್ನು ದೇಶದಲ್ಲಿರುವ ಬೇರೆಬೇರೆ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾಲಯಗಳಿಗೆ ಹಂಚಲಾಗಿದೆ. ೧೯೫೩ರಲ್ಲಿ ಪ್ರಯೋಗ ಶಾಲೆ ಈ ಜೀವಾಣುಗಳ ಸಂತತಿಯ ಒಂದು ದೊಡ್ಡ ಪಟ್ಟಿಯನ್ನೇ ತಯಾರಿಸಿತು. ಈ ಸೂಚಿಪಟ್ಟಿ ತುಂಬಾ ಅಧಿಕೃತ ದಾಖಲೆಯಾಗಿದ್ದು ಸಂಶೋಧನಾ—ವಿಜ್ಞಾನಿಗಳಿಗೆ ತುಂಬಾ ಉಪಯುಕ್ತವಾಗಿದೆ.

ಆಡಳಿತ ಹಾಗೂ ವ್ಯವಸ್ಥಾ ಕಾರ್ಯದ ದೃಷ್ಟಿಯಿಂದ ಪ್ರಯೋಗ ಶಾಲೆಯ ಕೆಲಸವನ್ನು ಏಳು ವಿಭಾಗಗಳಲ್ಲಿ ಹಂಚಿಕೊಳ್ಳಲಾಗಿದೆ. ಇನಾರ್ಗ್ಯಾನಿಕ್ ಕೆಮಿಸ್ಟ್ರಿ ಫಿಸಿಕಲ್ ಕೆಮಿಸ್ಟ್ರಿ, ಆರ್ಗ್ಯಾನಿಕ್ ಕೆಮಿಸ್ಟ್ರಿ, ಬಯೋ ಕೆಮಿಸ್ಟ್ರಿ, ಪೊಲಿಮರ್ ಕೆಮಿಸ್ಟ್ರಿ, ಕೆಮಿಕಲ್ ಎಂಜಿನಿಯರಿಂಗ್ -ಈ ಆರು ಸಂಶೋಧನಾ ವಿಭಾಗಗಳ ಜೊತೆಗೆ ಇರುವ "ಸರ್ವೆ ಮತ್ತು ಇನ್‌ಫರ್ಮೇಷನ್ ವಿಭಾಗ"ವು ರಸಾಯನಿಕ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಹಾಗೂ ಅಂಕೆ ಅಂಶಗಳ ದಾಖಲೆಯನ್ನು ಸಂಗ್ರಹಿಸಿಡುತ್ತದೆ. ಕೆಮಿಕಲ್ ಎಂಜಿನಿಯರಿಂಗ್ ವಿಭಾಗವೊಂದನ್ನೂ ಕಟ್ಟುವ ಕಾರ್ಯ ನಡೆಯುತ್ತಿದೆ.

ಅಮೆರಿಕೆಯ ಸಂರಕ್ಷಣಾ ವಿಭಾಗದ ಮುಖ್ಯಸ್ಥರಾದ ಮೇಜರ್ ಜನರಲ್ ಡೋನಾಲ್ಡ್ ಜೆ ಕೀರ್ನ್.

ಈ ಸಂಸ್ಥೆಯು ಒಂದಲ್ಲ ಒಂದು ಸಂಶೋಧನಾ ಕಾರ್ಯಕ್ಕೆ ಕೈಹಾಕುವಾಗ ಮುಖ್ಯವಾಗಿ ಮೂರು ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ. ಒಂದು, ಯಾವ ರಸಾಯನಿಕ ವಸ್ತುಗಳು ದೇಶಕ್ಕೆ ಮುಖ್ಯವಾಗಿಬೇಕಾಗಿವೆ ಎಂಬ ಅಂಶ ಎರಡು, ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಬೇಕಾಗುವ ಸಲಹೆಗಳು ಹಾಗೂ ಮುಖ್ಯ ರಸಾಯನಗಳು; ಮತ್ತು ಮೂರನೆಯದಾಗಿ ಸಂಶೋಧನಾ ವಿಜ್ಞಾನಿಗಳು ಮುಖ್ಯವಾಗಿ ತಮ್ಮ ಕೆಲಸಕ್ಕೆ ಬಯಸುವ ಆಧಾರಾಂಶಗಳು.

ಸರ್ಕಾರದ ವತಿಯಿಂದ, ಮುಖ್ಯವಾಗಿ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿ ಶಾಖೆಗಳು ಮುಂದಿಡುವಂತಹ ಆಧಾರಾಂಶಗಳು, ಪಂಚವಾರ್ಷಿಕ ಯೋಜನೆಯಲ್ಲಿ ಸೂಚಿತವಾಗಿರುವ ರಸಾಯನಿಕ ಸಂಶೋಧನೆಗೆ ಸಂಬಂಧಿಸಿದ ಶಿಫಾರಸುಗಳು, ಖಾಸಗಿಯಾಗಿ ವಿವಿಧ ಕೈಗಾರಿಕೆಗಳು ಮಂಡಿಸುವ ಸೂಚನೆಗಳು ಮತ್ತು ಸಲಹೆಗಳು—ಇವೇ ಮೊದಲಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಪ್ರಯೋಗ ಶಾಲೆಯಲ್ಲಿನ ಸಂಶೋಧನಾ ವಿಜ್ಞಾನಿಗಳು ತಮ್ಮ ಸಂಶೋಧನಾ ಕಾರ್ಯವನ್ನು ಆರಂಭಿಸುತ್ತಾರೆ.

ದೇಶದ ಕೈಗಾರಿಕಾ ಪ್ರಗತಿ ಮುಂದುವರಿದಂತೆ ಭಾರತದಲ್ಲಿ ರಸಾಯನಿಕ ಕೈಗಾರಿಕೆಗೆ ಈ ಪ್ರಯೋಗಶಾಲೆಯಿಂದ ಇನ್ನೂ ಹೆಚ್ಚಿನ ಪ್ರಯೋಜನ ದೊರಕುತ್ತದೆ.

ಗಂಗಾವತಿ

ವಿಶಾಲವಾಗಿ ಹಬ್ಬುತ್ತಿರುವ
ಸಿಂಡಿಕೇಟ್ ಬೇಂಕಿನ
ನೂರ ಹದಿನಾರನೆಯ ಶಾಖೆಯು

೧೯೫೯ ಜನವರಿ ೨ರಂದು
ರಾಯಚೂರು ಜಿಲ್ಲೆಯ
ಗಂಗಾವತಿಯಲ್ಲಿ ಆರಂಭವಾಗಿದೆ

ಶ್ರೀ ಬಿ. ವಿ. ಕಾಮತ್,
ಏಜಂಟ್.

ಡಾ| ಟಿ. ಎಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

ಶ್ರೀ ಟಿ ಎ. ಪೈ,
ಜನರಲ್ ಮೆನೇಜರ್.

ಒಟ್ಟು ವ್ಯವಹಾರ ಸಂಪತ್ತು ರೂ. ೧೫ ಕೋಟಿಗೂ ಮಿಕ್ಕಿದೆ.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ,
ಉಡುಪಿ.

THE CANARA INDUSTRIAL & BANKING
SYNDICATE LTD., UDIPI.

ಒಂದು ಸುಸಂಧಿ

ಮೂರಾಣೆಯಿಂದ ಹಿಡಿದು ಎರಡು ರೂಪಾಯಿ ಬೆಲೆ ವರೆಗಿನ ಅಂತರಂಗ ಪ್ರಕಾಶಿಸದ ನಾನಾ ವಿಧದ 34 ರೂಪಾಯಿಯ 90 ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ಬರೀ ರೂ.27/-ಕ್ಕೆ ಕೊಡಲಾಗುವುದು. ಈ ಸವಲತ್ತು ಜನವರಿ 1959ರ ವರೆಗೆ ಮಾತ್ರ ಇರುವುದರಿಂದ ಇಂದೇ ರೂ27 ಕಳಿಸಿ ಒಂದು ಸೆಟ್ ಪುಸ್ತಕ ತರಿಸಿಕೊಳ್ಳಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ.ಪೈಸೆ.

ವರುಷ ೩೮. ವಾರ ೧೯. 15-1-1959 Vol. 38. No. 19.

ಕಾಂಗ್ರೆಸ್‌ನ ಗುರಿ

ಜೀವನಾವಶ್ಯಕ ಕನಿಷ್ಠ ಆವಶ್ಯಕತೆಗಳು ಎಲ್ಲರಿಗೂ ಸಿಗಬೇಕು

ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ದೇಬರರಿಂದ ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳ ಕುರಿತಾದ ಅಧ್ಯಕ್ಷ ಭಾಷಣ

ಕಾಂಗ್ರೆಸ್ ಸಂಸ್ಥೆಯನ್ನೂ ಕಾಂಗ್ರೆಸ್ ಸರಕಾರಗಳನ್ನೂ ಟೀಕಿಸುತ್ತಿರುವವರಿಗೆ ದೇಶದ ಮಹಾ ಸಮಸ್ಯೆಗಳ ಪರಿಜ್ಞಾನವಿದ್ದಂತಿರುವುದಿಲ್ಲ. ಒಂದು ವೇಳೆ ಅವರೇನಾದರೂ ಈ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿದ್ದರೆ, ಅವರು ಕಾಂಗ್ರೆಸನ್ನು ಟೀಕಿಸುತ್ತಿರಲಿಲ್ಲ. ಜೀವನದಲ್ಲಿ ಸುಧಾರಿಸುತ್ತಿರುವ ಭಾರತೀಯರೊಡನೆ ಅನುಭವಿಕರೂ ಮೇಧಾವಿಗಳೂ ದಕ್ಷರೂ ಸಹಕರಿಸಬೇಕು

ಕಾಂಗ್ರೆಸ್ ಯಾರನ್ನೂ ನೋಯಿಸಲು, ಪೀಡಿಸಲು ಭಾವಿಸುವುದಿಲ್ಲ. ದೇಶದ ಖಾಸಗಿ ಉದ್ದಿಮೆಯ ರಂಗವು ಕಾಂಗ್ರೆಸ್ಸಿನ ಜನಕಲ್ಯಾಣ ಯೋಜನೆಯ ಕಾರ್ಯದಲ್ಲಿ ಸಹಕರಿಸಬೇಕು. ಭಾರತಕ್ಕೆ ಖಾಸಗಿ ರಂಗದಿಂದಾಗಲಿ ಸಾರ್ವಜನಿಕರಿಂದಾಗಲಿ ಹಣ ದೊರೆತರೂ ಅದಕ್ಕೆ ಬೇಕಾಗಿರುವುದು ಸುಯೋಜಿತ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಮಾತ್ರವಾಗಿದೆ.

ದೇಶದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ, ಚಿಕ್ಕ ಉಳಿತಾಯ ಯೋಜನೆಗಳನ್ನು ಜನಪ್ರಿಯಗೊಳಿಸಿ ಹಣ ಗಳಿಸಬೇಕಾಗಿದೆ. ವಿಕೇಂದ್ರೀಕೃತ ಉದ್ದಿಮೆಗಳ ಉತ್ಪಾದನೆಗಳ ಗುರಿ ಹೆಚ್ಚಿಸಬೇಕಾಗಿದೆ. ದ್ವಿತೀಯ ಯೋಜನೆಯ ಶೇಷಾಂಶದಲ್ಲಿಯೇ ಬಹುಪ್ರಯತ್ನದಿಂದ ಸಾಕಷ್ಟು ಪ್ರಗತಿಕಾರ್ಯ ಸಾಧಿಸುವುದು ಸಾಧ್ಯ.

೧೯೫೮ರಲ್ಲಿ ಭಾರತದ ಸುತ್ತುಮುತ್ತ ಸರ್ವಾಧಿಕಾರಿ ಆಡಳಿತೆಯು ವ್ಯಾಪ್ತವಾದುದರಿಂದ ವೈಯಕ್ತಿಕ ಸ್ವಾತಂತ್ರ್ಯವನ್ನು ಉಳಿಸಿ ದೇಶದ ಎಲ್ಲ ಸಮಸ್ಯೆಗಳನ್ನೂ ಪ್ರಜಾಪ್ರಭುತ್ವ ವಿಧಾನದಿಂದಲೇ ಪರಿಹರಿಸಬಹುದೆಂದು ತೋರಿಸಿಕೊಡುವ ಹೊಣೆಗಾರಿಕೆ ಭಾರತಕ್ಕಿದೆ. ಸ್ವಸಂರಕ್ಷಣೆ, ಶಾಂತಿ ಸುವ್ಯವಸ್ಥೆ, ಆರ್ಥಿಕ ಭದ್ರತೆಗಳನ್ನು ಕಾಪಾಡಿ ದೇಶದ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಮಾನಾವಕಾಶ ಕಲ್ಪಿಸಿ ಕೊಡಬೇಕಾಗಿದೆ.

ಜಾಗತಿಕ ರಂಗವು ಉಬ್ಬಣಾವಸ್ಥೆಗೇರಿರುವುದರಿಂದ ಯುದ್ಧ ಸಿದ್ಧತೆಗೆ ಕೊನೆಯೇ ಇಲ್ಲದಂತಾಗಿ ಪರಿಣಮಿಸಿದೆ. ಪಾಕಿಸ್ತಾನದ ಕಲುಷಿತ ಕಲಹಪ್ರಿಯ ಪರಿಸ್ಥಿತಿಯಿಂದ ಸೌಹಾರ್ದ ಬಯಸುವ ಭಾರತಕ್ಕೆ ಖೇದವೆನಿಸುತ್ತದೆ. ಜಾಗತಿಕ ಸಮಸ್ಯೆಗಳನ್ನು ನೋಡುವ ಉಭಯತರ ದೃಷ್ಟಿಯು ಬೇರೆಯಾಗಿರುವುದೇ ವೈಮನಸ್ಯಕ್ಕೆ ಕಾರಣವಾಗಿದೆ. ರಾಷ್ಟ್ರೀಯತೆಯಿಂದ ಒಕ್ಕಟ್ಟನ್ನು ಸಾಧಿಸಬಹುದು; ಆದರೆ ಪಾಕಿಸ್ತಾನದಂತೆ ಜಾತೀಯತೆಯಿಂದ ಇತರರನ್ನು ನೋಡುವುದಾದರೆ, ಬಿಕ್ಕಟ್ಟೇ ಉದ್ಭವಿಸುವುದು. ಇದರಿಂದಲೇ ನಮ್ಮೊಳಗಿನ ಬಾಂಧವ್ಯ ಸವಕಲಾಗುತ್ತಿದೆ.

ಕಾಶ್ಮೀರದ ಮಹಾರಾಜರು ರಾಷ್ಟ್ರೀಯ ಪರಿಷತ್ತಿನ ಸಲಹೆಯಂತೆ ಕಾಶ್ಮೀರವನ್ನು ಭಾರತದೊಡನೆ ವಿಲೀನಗೊಳಿಸಿದರು. ಯಾವುದೇ ವೈರದಿಂದ ಅಥವಾ ಆಸೆಯಿಂದ ಅವರು ಹೀಗೆ ಮಾಡಲಿಲ್ಲ. ಇತಿಹಾಸ ಕಲಿಸಿದ ಪಾಠವನ್ನರಿತೇ ಅವರು ಕಾರ್ಯಪ್ರವೃತ್ತರಾಗಿದ್ದಾರೆ.

ಭಾರತದಲ್ಲಿ ಮುಸಲ್ಮಾನರು ಬಹುಸಂಖ್ಯೆಯಲ್ಲಿ ಪ್ರೀತಿ ವಿಶ್ವಾಸಗಳಿಂದ ವಾಸಿಸುತ್ತಿದ್ದಾರೆ ಜಾತೀಯತೆಗೆ ಪ್ರೋತ್ಸಾಹನೀಡುವ ವಿಶೇಷ ಆಡಳಿತೆ ಇಲ್ಲಿಲ್ಲ ಎಂಬುದನ್ನು ಪಾಕಿಸ್ತಾನ ಮಾತ್ರ ಮರೆತಿದೆ ಅದು ಕಾಶ್ಮೀರದ ಗಡಿಗಳನ್ನು ಉಲ್ಲಂಘಿಸುತ್ತಿರುವುದು ಮಾತ್ರವಲ್ಲ, ರಾಷ್ಟ್ರೀಯತೆಯ ನೆರಳಲ್ಲಿ ಸ್ವಾತಂತ್ರ್ಯ ಪಡೆಯಲು ಆಶಿಸುತ್ತಿರುವವರ ಆಕಾಂಕ್ಷೆಯನ್ನೂ ಹೀರುತ್ತಿದೆ

ಭಾರತದ ಮತ್ತು ತನ್ನೊಳಗಿರುವ ಸೀಮಾ ವಿವಾದಗಳನ್ನು ನೆಹರೂ ನೂನ ಒಪ್ಪಂದದನ್ವಯ ಬಗೆಹರಿಸಬಹುದಾಗಿದ್ದರೂ ಪಾಕಿಸ್ತಾನವು ಪೂರ್ವದ ಗಡಿಯಲ್ಲಿ ಭಾರತವನ್ನು ಕೆಣಕುತ್ತ ರಣಕಣಕ್ಕೆಳೆಯಬಯಸುತ್ತದೆ. ಆದರೆ, ಹಿಂಸೆಯಿಂದ ಏನು ಮಾಡಲೂ ಸಾಧ್ಯವಿಲ್ಲವೆಂದದು ಇಷ್ಟರಲ್ಲಿಯೇ ತಿಳಿದುಕೊಳ್ಳಬೇಕಾಗಿತ್ತು. ಭಾರತದ ಶಾಂತಿಯುತ ಧೋರಣೆಗೆ ಪ್ರತಿಯಾಗಿ ಪಾಕಿಸ್ತಾನವೂ ಶಾಂತಿಮಾರ್ಗವನ್ನು ಇನ್ನಾದರೂ ಕೈಗೊಳ್ಳಲೆಂದು ಹಾರೈಸಬೇಕಾಗಿದೆ.

ತನ್ನ ಪಂಚಶೀಲ ತತ್ವಗಳಿಂದಲೇ ಭಾರತವು ಹತ್ತು ವರ್ಷಗಳಿಂದ ವಿಶ್ವವಂದ್ಯವಾಗಿದೆ. ತನ್ನ ಸಮಸ್ಯೆಗಳನ್ನು ಎದುರಿಸಿದೆ. ಆರ್ಥಿಕ ವ್ಯವಸ್ಥೆಯ ಒತ್ತಡವನ್ನು ಸಹಿಸಿ ಆರ್ಥಿಕಭದ್ರತೆಯನ್ನು ಕಾಪಾಡಿಕೊಂಡಿದೆ ಜಗತ್ತಿನ ರಾಷ್ಟ್ರಗಳ ಗೌರವಾದರಗಳಿಗೆ ಪಾತ್ರವಾಗಿದೆ.

ಒಕ್ಕಲುತನವು ನಮ್ಮ ಅಭಿವೃದ್ಧಿಯೋಜನೆಗಳಿಗೆ ಅಡಿಗಲ್ಲಾಗಿದೆ ಆದುದರಿಂದ ಈ ವಿಷಯದ ಗುರಿಗಳನ್ನು ಸಾಧಿಸುವುದು ಅಗತ್ಯ. ಆದರೆ ಕಾರಣಾಂತರಗಳಿಂದ ಕೃಷಿಯ ಉತ್ಪಾದನೆ ಶಿಥಿಲವಾಗಿದೆ. ಇದನ್ನು ಬಲಪಡಿಸುವುದು ಅಗತ್ಯ.

ತೃತೀಯಯೋಜನೆಯ ಪ್ರಾರಂಭಕಾಲದಲ್ಲಿ ನಮ್ಮ ದೇಶದ ಜನಬಲ ೪೩ಕೋಟಿಯಾಗುತ್ತದೆ. ಯೋಜನೆಯ ಅವಧಿಯಲ್ಲಿ ಅದು ೫ಕೋಟಿಯಷ್ಟು ಹೆಚ್ಚುವುದು. ದ್ವಿತೀಯ ಯೋಜನಾಂತ್ಯದಲ್ಲಿ ೫೦ಲಕ್ಷ ನಿರುದ್ಯೋಗಿಗಳಿದ್ದರೆ ತೃತೀಯಯೋಜನಾಂತ್ಯದಲ್ಲಿದು ೧೭೫ಲಕ್ಷವಾಗುವುದು. ಇವರಿಗೆ ಉದ್ಯೋಗಕಲ್ಪಿಸಿಕೊಡಲು ಪ್ರಯತ್ನಿಸಬೇಕು. ದೇಶದ ಕೃಷಿಕೂಲಿಗಾರರ ವಾರ್ಷಿಕ ಆದಾಯವು ೧೦೯ರೂಪಾಯಿ ಮಾತ್ರವಾಗಿದೆ. ಭಾರತೀಯರ ಸರಾಸರಿ ವಾರ್ಷಿಕಾದಾಯವು ೨೬೧ರೂಪಾಯಿದೆ.

(೧೩ನೇ ಪುಟ ನೋಡಿರಿ)

ಪೂರ್ವ ನೈಜೀರಿಯದ ಪ್ರಧಾನಿ ನಾಮ್ಡಿ ಅಜಿಕ್ವೆಯವರು ಲಂಡನ್ನಿಗೆ ಭೇಟಿಯಿತ್ತಾಗ ತೆಗೆದಿದ್ದ ಚಿತ್ರ.

Our Humble Tributes to All Those past and present, who laboured to make this Bank what it is to-day.

THE VIJAYA BANK, LTD.

(A SCHEDULED BANK)

Head Office:
"Vijaya Bank Building"
MANGALORE-3.
ESTD: 1931.

ಸರ್ವ ವಿಧದ ಬ್ಯಾಂಕಿಂಗ್ ಸೌಕರ್ಯಗಳಿಗೆ — ಸಿಂಡಿಕೇಟ್ ಬೇಂಕ್

ಕಥಾ ವಿಹಾರ

ಪ್ರೀತಿ ವಿಶ್ವಾಸಗಳ ನಂದಾದೀಪ

ಭಟ್ಟರು ಲಕ್ಷ್ಮಿಯನ್ನು ಬಯಸಿದ್ದರೆ, ಪುತ್ರನು ಸುನೀತಿಯನ್ನೇ ಕೈಹಿಡಿದ.

ಸುನೀತಿ ಒರಗು ಕುರ್ಚಿಯಲ್ಲಿ ಹಾಯಾಗಿ ಒರಗಿಕೊಂಡು ಪತ್ರವನ್ನು ಎಡೆಬಿಡದೆ ದೃಷ್ಟಿಸುತ್ತಿದ್ದಳು. ಮನಸ್ಸು ಪ್ರಶಾಂತವಾಗಿತ್ತು. ನಿಶ್ಶಬ್ದ ವಾತಾವರಣದಲ್ಲಿ ಚಿಂತೆಯಸಹಿತ ಹೃದಯದಿಂದ ಪ್ರತಿಧ್ವನಿಸುವ ಉಸಿರಲ್ಲಿ ಪತ್ರವನ್ನು ಓದುತ್ತಿದ್ದಳು. ಚಂದ್ರಕಿರಣಗಳು ಚಂದ್ರಮುಖಿಯ ಶಯನ ತಳದಲ್ಲಿ ಹಾಯಾಗಿ ವಿಶ್ರಮಿಸಿಕೊಂಡಿದ್ದುವು. ಓದುತ್ತಿದ್ದಂತೆ ಆಕೆಯ ಮುಖಕಮಲವು ಮುಸುಕು ಬಣ್ಣವನ್ನು ತಾಳಿತು. ಇದ್ದಕ್ಕಿದ್ದಂತೆ ನಯನಾಶ್ರುಕಣಗಳು ಎಳಲಿಕ್ಕಿದ ಮುತ್ತಿನ ಮಾಲೆಯಂತೆ ಬೀಳತೊಡಗಿದುವು. ಕಲ್ಪನಾ ಪ್ರಪಂಚದೊಡನೆ ಲೀನಳಾಗಿ ಅಲ್ಲೇ ಒರಗಿದಳು.

ಸುನೀತಿ ಮೋಹನ ರಾಯರ ಎರಡನೇ ಮಗಳು. ಅಕ್ಕರೆಯಿಂದ ಬೆಳೆದವಳು. ಮೊದಲ ಮಗಳಿಗೆ ಮೋಹನ ರಾಯರು ವಿಧಿವತ್ತಾಗಿ ವರಕರದೊಂದಿಗೆ ಮದುವೆ ಮಾಡಿಸಿದ್ದರು. ಸುನೀತಿಯನ್ನೂ ಮತ್ತೂ ಉತ್ತಮ ರೀತಿಯಲ್ಲಿ ಮದುವೆ ಮಾಡಬೇಕೆಂಬುದು ಅವರ ಸಂಕಲ್ಪ. ಸಾಮಾನ್ಯ ಬಿ. ಎ. ಪಾಸುಮಾಡಿದ ವರನಾದರೂ ಆಗಬೇಕು. ಇದಕ್ಕೆ ಹಿನ್ನೆಲೆಯಾಗಿ ಭವಿಷ್ಯದ್ವರ್ತಮಾನ ಕಾಲಗತಿಗೆ ತಕ್ಕಂತೆ ಮಗಳಿಗೆ ಸ್ವಲ್ಪ ವಿದ್ಯೆಯನ್ನೂ ಕೊಡಿಸಿದ್ದರು. ಸುನೀತಿಯು ನೋಡುವವರ ದೃಷ್ಟಿಯಲ್ಲಿ ಸುಂದರಿಯಾಗಿದ್ದಳು. ಹಂಸವರ್ಣದವಳಾಗಿ ಉದ್ದುರುಟು ಮೊಗ. ಬಾದಾಮಿಯಾಕಾರದ ಕಣ್ಣುಗಳು. ಯಾವಾಗಲೂ ಮುಗುಳ್ನಗೆ ಲಾಸ್ಯವಾಡುವಂತಿರತಕ್ಕ ಮೊಗ, ಸಾಮಾನ್ಯರ ದೃಷ್ಟಿಪಥಕ್ಕೆ ತೋಚದ ಸಾಸಿವೆ ಕಾಳು ಬೊಟ್ಟು. ಜೋತಾಡಿಸಿದ ಎರಡು ನೀಳವಾದ ಜಡೆಗಳು. ಸಾಮಾನ್ಯ ವ್ಯಕ್ತಿಯನ್ನು ಇವಳಾರೆನ್ನಿಸುವಂತಿತ್ತವಳ ರೂಪು. ಮೋಹನ ರಾಯರೂ ಹುಡುಗಿಯ ಸೌಂದರ್ಯದಿಂದಲೇ ಈ ಸಂಕಲ್ಪ ಮಾಡಿದ್ದರು. ಆದರೆ ದೈವದ್ರೋಹವನ್ನು ಮೀರಿಸಬಹುದೇ? ಮಗಳ ಪ್ರಾಯದೊಡನೆ ತಂದೆಯು ಸ್ವರ್ಗದ್ವಾರವನ್ನು ಸೇರಿದನು. ಪತಿವ್ರತಾ ಸ್ತ್ರೀ ರಂಗಮ್ಮನ ಸುಖಮಯ ಜೀವನ ಕಷ್ಟದಾಯಕವಾಗಿ ಪರಿಣಮಿಸಿತು. ಸುಖಶಯ್ಯಾಶಯನ ಸುಪ್ತೆಯಾದ ರಂಗಮ್ಮನ ಜೀವನ ದುರ್ಗಮವಾಯಿತು. ದೈನಂದಿನ ಜೀವನ ನಡೆಸುವುದ ಕಷ್ಟಸಾಧ್ಯವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಮಗಳ ಯೌವನವನ್ನು ಹೇಗೆ ಪಾವನವನ್ನಾಗಿ ಮಾಡಿಯಾಳು? ಚಿಂತಾಗ್ನಿ ದಗ್ಧಹೃದಯೆ ರಂಗಮ್ಮ ಯಾರಲ್ಲಿ ಮೊರೆಯಿಟ್ಟಾಳು?

ಸುನೀತಿ ತಾಯಿಯ ಜೀವನದ ಈ ಪರಿವರ್ತನವನ್ನು ನೋಡಿ ಏನುತಾನೆ ಸಮಾಧಾನಯಿತ್ತಾಳು? ಕೆಲವೊಮ್ಮೆ ಚಿಂತಾಗ್ನಿಯಿಂದ ಮೂಕಳಾದಾಗ ಸುನೀತಿ ತನ್ನಿಂದ ಕೂಡಿದ ಧೈರ್ಯ ಕೊಡುತ್ತಿದ್ದಳು. "ತಾಯಿ, ನನಗಾಗಿ ನೀನು ಚಿಂತಿಸಬೇಡ, ದೈವದೊಲ್ಮೆ ಇದ್ದರೆ ನಿರ್ವಿಘ್ನವಾಗಿ ನನ್ನ ಸಂಬಂಧ ಬೆರೆಯುತ್ತದೆ. ನಾನು ಆ ವಿಚಾರ ಯೋಚಿಸುವುದೇ ಇಲ್ಲ. ವಿವಾಹವಾಗದಿದ್ದರೂ ಚಂದವೇ, ನನ್ನ ಜೊತೆಗಾತಿಯರೊಂದಿಗೆ ಹಾಯಾಗಿ ಸಂಚರಿಸಬಹುದಷ್ಟೇ. ಎಷ್ಟೋ ಮಂದಿ ಸ್ತ್ರೀಯರು ವಿವಾಹ ಮಾಡಿಕೊಳ್ಳದೆ ಇದ್ದಾರಮ್ಮ. ಅಂತೆಯೇ ನಾನಿರಕೂಡದೇ? ಈ ಸಮಾಜದ ವರದಕ್ಷಿಣೆಯ ಭೂತಕ್ಕೆ ಎದುರಾಡುವ ಸ್ತ್ರೀ ಸಮಾಜದೊಂದಿಗೆ ಬೆರೆತು ಸುಖಿಸುವೆ. ತಾಯಿ, ನನ್ನ ಮದುವೆಯ ಯೋಚನೆ ಬಿಟ್ಟು ಸುಖಿಯಾಗು." ಇದೇ ರೀತಿಯ ಮಾತುಗಳಿಂದ ತಾಯಿಯನ್ನು ಧೈರ್ಯಸ್ಥಳನ್ನಾಗಿ ಮಾಡಿದರೂ ಆಕ್ಷಣ ತಪ್ಪಿದಲ್ಲಿ ತಾಯಿಯ ಯೋಚನೆ ಎತ್ತೆ ಅದೇ, ಭಾವೀ ಜಗತ್ತಿನ ಆಗುಹೋಗುಗಳನ್ನು ನೋಡಿ ಬೇಸತ್ತಿದ್ದಳು. ಹಾಗಾಗಿ ತಮ್ಮ ಶ್ಯಾಮರಾಯನಲ್ಲಿ ಮೊರೆಯಿಟ್ಟಿದ್ದಳು.

ಶ್ಯಾಮರಾಯರು ಸುನೀತಿಯ ರೂಪ, ಯೌವನ, ಗುಣಕ್ಕನುಗುಣವಾದ ವರನನ್ನು ಹುಡುಕುತ್ತಿದ್ದರು. ಹಲವು ಕಡೆಗೆ ಜಾತಕದ ಪ್ರತಿಯನ್ನು ಕಳುಹಿದ್ದರು.

ರಾಜಮಾತೆ ರಾಣಿ ಎಲಿಜಬೆತರು ರಾಜಕುಮಾರಿ ಮಾರ್ಗರೆಟರಿಗೆ ಲಂಡನ್ ವಿಶ್ವವಿದ್ಯಾಲಯದ ಕಡೆಯಿಂದ ಸಂಗೀತದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನಿತ್ತರು. ಈ ಅವಸರದಲ್ಲಿ ತೆಗೆದ ಚಿತ್ರವಿದು.

ಸಂಘಟನೆ ಕೂಡಿಬಂದ ಕೆಲವು ಕಡೆಯಿಂದ 'ವರದಕ್ಷಿಣೆ' ಎಂಬ ಭೀಕರ ಪ್ರಶ್ನೆಯೊಂದು ಮುಂದಿತ್ತು. ಅಂತೂ ಕೊನೆಗೆ ಹಳ್ಳಿಗೇರಿಯ ವೆಂಕಟ ಭಟ್ಟರ ಮಗನಿಗೆ ಕೂಡಿಬರುವ ಸಂಭವ ಕಂಡುಬಂತು. ಆದರೂ ಸಾಮಾನ್ಯ ವರದಕ್ಷಿಣೆ ಕೊಡದೆ ಮಾಡುವ ನೆಂಟಸ್ತಿಕೆಯಾಗಿರಲಿಲ್ಲ.

ವೆಂಕಟ ಭಟ್ಟರೆಂದರೆ, ಹಿಂದಿನವರ ಮಾತಿನಂತೆ ದೇವತಾಮನುಷ್ಯ. ಪೂರ್ವ ಸಂಪ್ರದಾಯಸ್ಥ ಆಚಾರೀ ಬ್ರಾಹ್ಮಣ. ಅವರಿಗೆ ಇರುವುದು ಒಬ್ಬನೇ ಮಗ, ಕಷ್ಟಪಟ್ಟು ತಮ್ಮ ದಾರಿ ಬಿಟ್ಟು ಬಿ. ಎ. ಓದಿಸಿದ್ದರು. ಉತ್ತಮ ತರಗತಿಯಲ್ಲಿ ಪಾಸಾದ ಮಗನಿಗೆ ತಮ್ಮ ಮುದಿತನದಲ್ಲಿ ಲಗ್ನಶಾಸ್ತ್ರವನ್ನು ತೀರಿಸುವ ಭಾವೀ ಸೊಸೆಯನ್ನು ನೋಡುವ ಲವಲವಿಕೆಯಲ್ಲಿದ್ದರು. ಈ ಸಂದರ್ಭಕ್ಕೆ ಸರಿಯಾಗಿ ಶ್ಯಾಮರಾಯರು ಕಳುಹಿಸಿದ ಜಾತಕವೂ ಗಂಟುಬಿತ್ತು. ಹುಡುಗಿ ನೋಡಿಷ್ಟೆ. ಆದರೂ ವರನೇರ ತಾನೆ. ಎಣಿಸಿದಷ್ಟು ಸಿಗದೆಂಬ ಯೋಚನೆ ಕಾಡುತ್ತಿತ್ತು. ಹೀಗೆ ಯೋಚಿಸುತ್ತಿರುವಾಗ, ಶ್ಯಾಮರಾಯರು ಆಗಮಿಸಿದರು.

ಬನ್ನಿ ರಾಯರೇ ಎಂದು ಅವರನ್ನು ಸ್ವಾಗತಿಸಿ ಚಾಪೆ ಹಾಸಿದರು. ಹೆಂಡತಿಯಲ್ಲಿ ಕಾಫಿಮಾಡಿ ತರಹೇಳಿ ಮಾತಿಗೆ ಪ್ರಾರಂಭಿಸಿದರು. ಉಭಯರ ಕ್ಷೇಮಸಮಾಚಾರವೇ ಆದಿಯಾಗಿ ಹಲವು ಪುರಾಣ ಶ್ರವಣ ವಾಚನವಾಯಿತು. ಕಾಫಿಯಾದಮೇಲೆ ಶ್ಯಾಮರಾಯರು ಪ್ರಕೃತ ವಿಷಯಕ್ಕೆ ಪೀಠಿಕೆ ಹಾಕಿದರು. 'ಭಟ್ಟರೇ—ನಾನೀಗ ಬಂದ ಉದ್ದೇಶ ಗೊತ್ತಷ್ಟೇ. ನಮ್ಮ ಸುನೀತಿಯ ಜಾತಕ ಕಳಿಸಿದ್ದೆ. ಸಂಬಂಧ ಕೂಡಿಬರುತ್ತೆಂತ ವರ್ತಮಾನ ತಿಳಿದು ಬಂದೆ. ನಿಮ್ಮ ಹುಡುಗನಿಗೆ ಕೊಡುವುದರಲ್ಲಿ ನನಗೆ ತುಂಬಾ ಇಷ್ಟ. ಒಂದು ಸದ್ವಂಶಕ್ಕೆ ದಾನಮಾಡಿದಂತಾಗುತ್ತೆ: ಹೇಗೆ? ಹೇಳಿ.'

"ಹೌದು, ನಮಗೂ ನಿಮ್ಮ ಸಂಬಂಧದಲ್ಲಿ ಇಷ್ಟವೇ. ಹುಡುಗಿ ನೋಡಬೇಕಾಗಿಲ್ಲ. ಜಾತಕವು ರೂಪ್ಯಾಗೆ ರೂಪಾಯಿ ಅಲ್ಲದಿದ್ದರೂ ೧೪ ಆಣೆ ಅಂಶವಾಗಬಹುದು. ಆದರೂ ನನಗೆ ಈಯೊಂದು ವಿಷಯ ಹೊಂದಿಕೆಯಾಗುವುದು ಕಷ್ಟ ನೋಡಿ, ನಮ್ಮ ಹುಡುಗ ಬಿ. ಎ. ವರೇಗೆ ಓದಿದ್ದಾನೆ. ಸಾಮಾನ್ಯ ಅವನ ಕಲಿಕೆಯ ಗೌರವವಾದರೂ ಉಳಿಯಬೇಕಷ್ಟೇ."

'ಭಟ್ಟರೇ, ನೀವು ಕೇಳಿದ ವಿಷಯ ಖರೇ. ಆದರೆ ನೋಡಿ, ನಮ್ಮ ಪರಿಸ್ಥಿತಿ ....ನಿಮ್ಮಿಂದ ಒಂದು ಒಳ್ಳೆದು ಮಾಡುವ ಯೋಗ್ಯತೆ ಇದೆ. ಇಂದಲ್ಲದಿದ್ದರೂ ನಾಳೆ ತೆಗೆದುಕೊಳ್ಳುವ ಯೋಗ್ಯತೆಯೂ ನಿಮಗಿದೆ. ನೋಡಿ, ಪ್ರಕೃತ ತಾವು ಇನ್ನೂರಲ್ಲೇ ತೃಪ್ತಿಹೊಂದಬೇಕು. ಲಗ್ನ ನಿಶ್ಚಯಿಸುವ ಆಗದೇ?"

ಅಂತೂ ಭಟ್ಟರು ಶ್ಯಾಮರಾಯರ ದಾಕ್ಷಿಣ್ಯದ ಬಲೆಗೆ ಸಿಕ್ಕಿಬಿದ್ದು ಒಪ್ಪಿದರು. ಲಗ್ನದ ದಿವಸವೂ ನಿಶ್ಚಯವಾಯಿತು. ಮುಂದಿನ ಸಂಪೂರ್ಣ ವಿಚಾರವನ್ನು ಇಂದೇ ಮುಗಿಸಿ ಶ್ಯಾಮರಾಯರು ಮನೆಯ ಕಡೆ ಪಯಣ ಬೆಳೆಸಿದರು. ಆದರೆ ಭಟ್ಟರ ತಲೆಯಲ್ಲಿ ಸುಳಿಯುವುದೇ ವರದಕ್ಷಿಣೆ ವಿಚಾರ. ಸ್ವಲ್ಪ ಗಡುಸಾಗಿದ್ದಿದ್ದರೆ ಏನೂರಾದರೂ ಹೆಚ್ಚಿಗೆ ಹೊಡೆಯಬಹುದಿತ್ತು. ಇನ್ನೂ ಕಾಲ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮುತ್ತ ಮೇಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜು
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ರಾಮತೀರ್ಥ ಬ್ರಾಹ್ಮೀ ತೈಲ
ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲನಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಕಲಾರಾಧನೆ

ಕಲಾಭ್ಯಾಸದತ್ತ ಭಾರತೀಯರ ಆಸಕ್ತಿ

ವಿವಿಧ ಭಾಗಗಳಲ್ಲಿ ಪರಿಪರಿಯ ಕಾರ್ಯಕ್ರಮಗಳು ಏರ್ಪಡುತ್ತಿವೆ ಆದರೆ, ಅವು ಸಾಕೆ?

ದೇಶದಲ್ಲಿ ಜನತೆಯ ಅಗತ್ಯ ವಸ್ತುಗಳಾದ ಆಹಾರ, ಬಟ್ಟೆ, ವಸತಿ ಇತ್ಯಾದಿಗಳಿಗೆ ಸಂಬಂಧಿಸಿದ ಮೂಲ ಸಮಸ್ಯೆಗಳ ಪರಿಹಾರ ಹಾಗೂ ಆ ಮೂಲಕ ಜನತೆಯ ಜೀವನದ ಮಟ್ಟವನ್ನು ಸುಧಾರಿಸುವುದು ನಮ್ಮ ಪಂಚವಾರ್ಷಿಕ ಯೋಜನೆಗಳ ಮುಖ್ಯ ಗುರಿ. ಆದರೆ ಯಾವುದೇ ಯೋಜನೆಯು ನಿಜವಾದ ಸಫಲತೆಗೆ ನಾವು ಇತರ ಮಾನವೀಯ ಅಗತ್ಯಗಳ ಕಡೆಗೂ ಗಮನ ಕೊಡಬೇಕಾಗುತ್ತದೆ. ವಿದ್ಯಾಭ್ಯಾಸ, ಸಂಸ್ಕೃತಿ, ಕಲೆ ಇತ್ಯಾದಿಗಳ ಕಡೆಗೂ ನಾವು ಸಾಕಷ್ಟು ಗಮನ ಕೊಡಲೇ ಬೇಕು; ಅನ್ನ ಬಟ್ಟೆಗಳಷ್ಟೇ ಮಾನವೀಯ ಜೀವನವನ್ನು ಪರಿಪೂರ್ಣಗೊಳಿಸಲಾರವು ಕುಶಲ ಕಲೆಗಳು ಮನಸ್ಸಿಗೆ ಆಹ್ಲಾದವನ್ನು ಒದಗಿಸುವುದರ ಜೊತೆಗೆ ಸಾಮಾಜಿಕ ಶಿಸ್ತು ಹಾಗೂ ಜನತೆಯಲ್ಲಿ ಸಮಾನ ದೃಷ್ಟಿ ಬೆಳೆಯಲು ತುಂಬಾ ಸಹಾಯಕವಾಗುತ್ತವೆ.

ಆದುದರಿಂದಲೇ ಸಾಮುದಾಯಿಕ ಅಭಿವೃದ್ಧಿ ಯೋಜನೆಯಲ್ಲಿ ಈ ಅಂಶಕ್ಕೆ ವಿಶೇಷ ಪ್ರಾಮುಖ್ಯ ಕೊಡಲಾಗಿದೆ. ಜನರಲ್ಲಿ ಕುಶಲ ಕಲೆಗಳ ಬಗ್ಗೆ ಆಸಕ್ತಿ ಹೆಚ್ಚುವಂತೆ ಮಾಡುವುದೇ ಇದರ ಉದ್ದೇಶ.

ಅಭಿವೃದ್ಧಿ ಕೇಂದ್ರಗಳಲ್ಲಿ ಮಕ್ಕಳಲ್ಲಿ ಕಲಾಸಕ್ತಿ ಬೆಳೆಯಲು ನಡೆಸುತ್ತಿರುವ ಪ್ರಯತ್ನ ಮೇಲೆ ತಿಳಿಸಿದ ಉದ್ದೇಶದ ಅಂಗವಾಗಿಯೇ ನಡೆಯುತ್ತಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಕಲೆ ಮತ್ತು ಸಂಸ್ಕೃತಿ ಇವುಗಳ ಬೆಳವಣಿಗೆಗೆ ನಡೆಯುತ್ತಿರುವ ಕಾರ್ಯ ಸಹ ಈ ಸಂದರ್ಭದಲ್ಲಿ ವಿಶೇಷ ಸಮಾಧಾನ ನೀಡುತ್ತದೆ.

ಮೈಸೂರು ರಾಜ್ಯದಲ್ಲಿ ೧೯೫೫ರ ಫೆಬ್ರವರಿಯಲ್ಲಿ ಕುಶಲ ಕೈಗಾರಿಕಾ ಪ್ರದರ್ಶನವೊಂದೂ ಏರ್ಪಡುವ ಸೂಚನೆಗಳಿವೆ. ಸ್ಥಳದಲ್ಲಿಯೇ ಸಿಗುವ ವಸ್ತುಗಳಿಂದ ಕುಶಲ ಕೈಗಾರಿಕೆಗಳನ್ನು ಕೈಗೊಳ್ಳುವ ಒಂದು ಕೇಂದ್ರ ಇಲ್ಲಿ ಸ್ಥಾಪಿತವಾಗುತ್ತದೆ.

ಪಂಜಾಬಿನ ನಿಲೋಖೇರಿಯಲ್ಲಿರುವ ಸಮಾಜ ಶಿಕ್ಷಣ ವ್ಯವಸ್ಥಾಪಕರ ತರಬೇತಿ ಕೇಂದ್ರದ ಕಲಾವಿಭಾಗದ ಜನ ಸುತ್ತಮುತ್ತಲ ಹಳ್ಳಿಗಳಿಗೆ ಆಗಾಗ ಹೋಗುತ್ತಲಿದ್ದು ಗ್ರಾಮಸ್ಥರ ಮುಂದೆ ಚಿತ್ರ ಬರೆಯುವುದು, ಮಣ್ಣಿನ ಸಾಮಾನುಗಳನ್ನು ತಯಾರಿಸುವುದು ಮತ್ತು ಗೊಂಬೆ ತಯಾರಿಸುವುದು— ಇತ್ಯಾದಿ ಕುಶಲ ಕಲೆಗಳನ್ನು ಪ್ರದರ್ಶಿಸುತ್ತಾರೆ. ಗ್ರಾಮ್ಯ ಪ್ರದೇಶದ ಉಪಾಧ್ಯಾಯರಿಗೆ ಈ ಕುಶಲ ಕಲೆಗಳಲ್ಲಿ ಶಿಕ್ಷಣ ಕೊಟ್ಟು, ಅವರ ಮೂಲಕ ಗ್ರಾಮಗಳಲ್ಲೇ ಮಕ್ಕಳಿಗೆ ಕಲಾಭ್ಯಾಸ ಒದಗಿಸುವ ಪ್ರಯತ್ನಗಳು ನಡೆಯುತ್ತಿವೆ.

ನವೆಂಬರ್ ೧೪ರಂದು ಪೂಜಂ ಎಂಬ ಗ್ರಾಮದಲ್ಲಿ ಮಕ್ಕಳ ಕುಶಲ ಕಲೆಗಳ ಒಂದು ಪ್ರದರ್ಶನವೇ ನಡೆಯಿತು ನೀಲೋಖೇರಿಯಲ್ಲಿ ಕಳೆದ ಎಪ್ರಿಲ್ ತಿಂಗಳಲ್ಲಿ ಕಲೆಗಳು ಮತ್ತು ಸೌಂದರ್ಯೋಪಾಸನೆಗೆ ಸಂಬಂಧಿಸಿದಂತೆ ನಡೆದ ಒಂದು ವಿಚಾರಗೋಷ್ಠಿ ಸುತ್ತಮುತ್ತಲ ಗ್ರಾಮಸ್ಥರ ಆಸಕ್ತಿಯನ್ನು ತುಂಬಾ ಕೆರಳಿಸಿತು.

ಉತ್ತರ ಪ್ರದೇಶದಲ್ಲಿ ಲಕ್ಷ್ಮಿ-ಕಾ-ತಲಾಬ್ ಬಳಿ ಇರುವ ಇಂದೌರಾಬಾಗ್ ಎಂಬ ಗ್ರಾಮದಲ್ಲಿರುವ ಅಪ್ಪರ್-ಪ್ರೈಮರಿ ಶಾಲೆ, ಮಕ್ಕಳ ಕಲಾಭ್ಯಾಸ ಯಶಸ್ವಿಯಾಗಿ ನಡೆಯುತ್ತಿರುವ ಒಂದು ಪ್ರಮುಖ ಕೇಂದ್ರ. ಬೊಂಬೆಗಳ ತಯಾರಿಕೆ, ಮಣ್ಣಿನ ಮಾದರಿಗಳು ಮತ್ತು ಶಿಲ್ಪಕಲೆ ಇವುಗಳಲ್ಲಿ ಮಕ್ಕಳ ಆಸಕ್ತಿಯನ್ನು ಹೆಚ್ಚಿಸುವ ಪ್ರಯತ್ನಗಳು ಯಶಸ್ವಿಯಾಗಿ ನಡೆಯುತ್ತಿವೆ. ಶಾಲೆಯ ಸುಮಾರು ೩೦ ಮಕ್ಕಳು ಈ ಸಂಬಂಧದ ಕಾರ್ಯ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿವಹಿಸಿ ಕೆಲಸ ಮಾಡುತ್ತಿವೆ.

ಪಶ್ಚಿಮ ಬಂಗಾಳದ ಬೇಲೂರು ಮಠದಲ್ಲಿರುವ ಸಮಾಜ ಶಿಕ್ಷಣ ವ್ಯವಸ್ಥಾಪಕರ ತರಬೇತಿ ಕೇಂದ್ರದಲ್ಲಿ ಮಕ್ಕಳಲ್ಲಿ ಕಲಾಭ್ಯಾಸದ ಆಸಕ್ತಿಯನ್ನು ಕೆರಳಿಸುವ ಪ್ರಯತ್ನಗಳು ನಡೆಯುತ್ತಿವೆ. ಚಿತ್ರ ಬಿಡಿಸುವುದ, ಬೊಂಬೆ ತಯಾರಿಸುವುದು, ಕಾಗದದ ನಮೂನೆಗಳನ್ನು ಕತ್ತರಿಸುವುದು, ಇತ್ಯಾದಿ ಕುಶಲ ಕಲೆಗಳಲ್ಲಿ ತರಬೇತಿ ಕೊಡಲಾಗುತ್ತದೆ. ಶ್ರೀನಿಕೇತನದಲ್ಲಿ ವಿಶ್ವಭಾರತಿ ಸಮಾಜ ಶಿಕ್ಷಣ ವ್ಯವಸ್ಥಾಪಕರ ಕೇಂದ್ರದ ಮೂಲಕ ನಡೆಯುತ್ತಿರುವ, ಮಕ್ಕಳಲ್ಲಿ ಕಲಾಸಕ್ತಿ ಕೆರಳಿಸುವ ಪ್ರಯತ್ನ ಸುತ್ತಮುತ್ತಲ ಗ್ರಾಮಗಳಿಗೆ ವಿಸ್ತರಿಸಲ್ಪಡುತ್ತಿವೆ.



ಬ್ರಸಲ್ಸ್ ಪ್ರದರ್ಶನದಲ್ಲಿಟ್ಟ ಬ್ರಿಟಿಷ ಹಿಂಕ್ಲಿ ಪ್ಯೋಟ್ ಅಣುಶಕ್ತಿ ಕೇಂದ್ರದ ಮಾದರಿಯನ್ನೊಬ್ಬ ಸಂದರ್ಶಕನು ನೋಡುತ್ತಿದ್ದಾನೆ ಈ ಕೇಂದ್ರವು ಪೂರ್ಣವಾಗುವಾಗ ಪ್ರಪಂಚದಲ್ಲಿಯೇ ಅತ್ಯಂತ ಹಿರಿದಾಗುವುದು.

ಮುಂಬಯಿಯ ಆರು ವಿಭಾಗಗಳಲ್ಲೂ ಒಂದೊಂದು 'ಕ್ಷೇತ್ರವ'ನ್ನು ಈ ಕಾರ್ಯಕ್ಕೆ ಆರಿಸಲಾಗುತ್ತಿದೆ. ನವೆಂಬರ್ ೫ರಂದು ಬರೋಡಾದಲ್ಲಿರುವ ಸಮಾಜ ಶಿಕ್ಷಣ ವ್ಯವಸ್ಥಾಪಕರ ಕೇಂದ್ರವು ಒಂದು ಕಲಾ ಹಾಗೂ ಸಾಂಸ್ಕೃತಿಕ ಮಹೋತ್ಸವವನ್ನು ಏರ್ಪಾಟು ಮಾಡಿದ್ದಿತು. ಮಕ್ಕಳ ಕಲಾ ಪ್ರದರ್ಶನ ಮತ್ತು ಸ್ಪರ್ಧೆಗಳು ಈ ಪ್ರದರ್ಶನದ ಒಂದು ಮುಖ್ಯ ಅಂಗವಾಗಿದ್ದುವು.

ಮದರಾಸಿನ ಗಾಂಧಿ ಗ್ರಾಮದಲ್ಲಿ ಕಲಾವಿದರ ವಿಚಾರ ಗೋಷ್ಠಿಯೊಂದನ್ನು ಏರ್ಪಡಿಸಲಾಗಿದ್ದು ಕ್ರಿಯಾ ಶೀಲ ಕಲೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲಾಯಿತು. ಈ ವರ್ಷದ ಆದಿಯಲ್ಲಿ ಗ್ರಾಮ್ಯ ಕಲಾವಿದರ ಕಲಾಭ್ಯಾಸಕ್ಕೆ ಹೊಸ ಸುಧಾರಿತ ದೃಷ್ಟಿಕೋನವನ್ನೊದಗಿಸುವ ದೃಷ್ಟಿಯಿಂದ ಒಂದ ಶಿಕ್ಷಣ ಶಿಬಿರವನ್ನು ಏರ್ಪಡಿಸುವ ಉದ್ದೇಶವಿದೆ. ಕಳೆದ ನವೆಂಬರ್ ೨೦ರಂದು ದಿಂಡಿಗಲ್ ಬ್ಲಾಕಿನ ನರಸಿಂಗಾಪುರಂ ಗ್ರಾಮದಲ್ಲಿ ಕಲಾ ಮಹೋತ್ಸವವೊಂದನ್ನು ಏರ್ಪಡಿಸಲಾಗಿದ್ದಿತು. ಜಾನಪದ ನೃತ್ಯಗಳು ಮತ್ತು ಗೀತೆಗಳ ಜೊತೆಗೆ ಮಕ್ಕಳ ಕಲಾ ಪ್ರದರ್ಶನವೊಂದೂ ನಡೆಯಿತು.

ರಾಜಸ್ಥಾನ ಸರಕಾರವು ಗ್ರಾಮಾಂತರ ಕಲಾವಿದರು ಕೆಲವರನ್ನು ಆರಂಭಿಸಿದೆ ಭಾರತೀಯ ಲೋಕ ಕಲಾಮಂಡಲವು ಸರಕಾರಕ್ಕೆ ಈ ವಿಷಯದಲ್ಲಿ ತನ್ನ ನೆರವು ನೀಡಿದೆ ತಮ್ಮ ತಮ್ಮ ಪ್ರದೇಶಗಳಲ್ಲಿ ಜನರಲ್ಲಿ ಕಲಾಸಕ್ತಿಯನ್ನು ಕೆರಳಿಸಲು ಹೀಗೆ ನೂರು ಜನ ಕಲಾವಿದರು ಈ ಕೇಂದ್ರಗಳಲ್ಲಿ ವಿಶೇಷ ತರಬೇತಿ ಪಡೆಯುವರು. ಸೂತ್ರದ ಬೊಂಬೆ ಆಟದಲ್ಲಿ ಹೆಸರುವಾಸಿಯಾಗಿರುವ ಕಲಾವಿದರ ಒಂದು ತಂಡವನ್ನು ಸಹ ಆರಿಸಿದ್ದು ಅವರಿಗಾಗಿ ಬೆಡ್ಲಾ ಎಂಬಲ್ಲಿ ಎಂಟು ತಿಂಗಳ ಶಿಕ್ಷಣ ಶಿಬಿರವನ್ನು ಏರ್ಪಡಿಸಲಾಗಿದೆ. ಸರಕಾರದ ನೆರವನ್ನು ಪಡೆದಿರುವ ಈ ತಂಡ ತನ್ನ ಕಲೆಗಾರಿಕೆಯಲ್ಲೀಗ ವಿಶೇಷ ಆಧುನಿಕ ಕಲಾವಸ್ತುಗಳನ್ನು ಪ್ರದರ್ಶನಕ್ಕಾಗಿ ಆರಿಸಿಕೊಳ್ಳುತ್ತಿದೆ.

ಮದುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ;
'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!
ಜೀವನದ ಬೇರೆ ಘಟನೆಗಳನ್ನು ಹೃದಯ
ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ
ಉಡುಗೊರೆಯಾಗಿ ಕೊಡಲಿಕ್ಕೂ ಯೋ
ಗ್ಯವಾದ ಪುಸ್ತಕ.
ಬೆಲೆ ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು
ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮಗಾಗಿ —
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋಪೋರೇಶನ್
ಲಿಮಿಟೆಡ್
(ಸ್ಥಾಪನೆ: ಮಾರ್ಚ 12, 1906)
ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ನಮ್ಮ ಹಬ್ಬಗಳು

ಮಕರ ಸಂಕ್ರಮಣದ ಪ್ರಸಿದ್ಧ ಪರ್ವಕಾಲ

ಎಲ್ಲೆಡೆಯೂ ಸೂರ್ಯಾರಾಧನೆಯು ಉತ್ಸಾಹದಿಂದ ನಡೆಯುತ್ತದೆ

ಪ್ರಾಚೀನ ಭಾರತೀಯರಲ್ಲಿ ಆಧ್ಯಾತ್ಮಿಕತೆಯೇ ತುಂಬಿಕೊಂಡಿದೆ ಎಂಬುದು ಸತ್ಯವಾದರೂ ಆ ರೀತಿಗೆ ವೈಜ್ಞಾನಿಕ ಅಂಶವನ್ನು ಧಾರ್ಮಿಕರು ಉಪೇಕ್ಷಿಸಿರುವುದಿಲ್ಲ ನಮ್ಮ ಜೀವನದಲ್ಲಿ ನಮ್ಮ ಸಂಸ್ಕೃತಿಯು ಆಳವಾಗಿ ಬೇರೂರಿಬಿಟ್ಟಿದ್ದು ಹಬ್ಬಹರಿದಿನಗಳೆಲ್ಲವೂ ನಮ್ಮ ಸುಖಜೀವನಕ್ಕೆ ಅನುಕೂಲವಾಗುವಂತೆ, ನಮ್ಮ ಜೀವನಕ್ಕೆ ಪರಿಪೋಷಕವಾಗುವಂತೆ ಸಮಾವೇಶಗೊಳಿಸಲ್ಪಟ್ಟಿವೆ ಇಂತಹ ಪ್ರಧಾನ ಪಾತ್ರವಹಿಸಿರುವ ಹಬ್ಬದದಿನಗಳಲ್ಲಿ ಮಕರ ಸಂಕ್ರಮಣವೂ ಒಂದು

ಮಕರ ಸಂಕ್ರಾಂತಿಯು ಸೂರ್ಯನಿಗೆ ಸಂಬಂಧಿಸಿದ ಹಬ್ಬ ಮೇಷಾದಿ ದ್ವಾದಶ ರಾಶಿಗಳಲ್ಲಿ ಸುತ್ತುವರಿಯುತ್ತಿರುವ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುವ ಸಂಭ್ರಮವೇ ಹಬ್ಬವಾಗಿ ಆಚರಿಸಲ್ಪಡುತ್ತದೆ ನಮ್ಮ ವಿಜ್ಞಾನಿಗಳೂ ಜ್ಯೋತಿಷಿಗಳೂ ಭೂಗೋಲಶಾಸ್ತ್ರಜ್ಞರೂ ಒಪ್ಪುವಂತೆ ಮಕರಸಂಕ್ರಾಂತಿಯ ದಿನದಿಂದ ಸೂರ್ಯನು ಉತ್ತರಾಭಿಮುಖನಾಗಿ ಚಲಿಸುವಂತೆ ಭಾಸವಾಗುವುದು ಭೂಮಧ್ಯರೇಖೆಯ ಉತ್ತರಾರ್ಧದಲ್ಲಿ ಹಗಲು ಅಂದಿನಿಂದ ಹೆಚ್ಚುತ್ತದೆ ಚಳಿಗಾಲವು ನಿಧಾನವಾಗಿ ಕಳೆದು ವಸಂತಾಗಮನದ ಶುಭ ಸೂಚನೆಗಳು ಕಾಣಿಸ ತೊಡಗುತ್ತವೆ ಸೃಷ್ಟಿಯ ಹೊಸ ವಿಲಾಸವನ್ನು ಕಂಡ ಜನರು ಇದಕ್ಕೆ ಕಾರಣವಾದ ಮಕರ ಸಂಕ್ರಾಂತಿಯನ್ನು ಸಂತೋಷದಿಂದ ಹಬ್ಬದ ಗದ್ದಲದೊಂದಿಗೆ ಬರಮಾಡಿಕೊಳ್ಳುವುದು ತೀರ ಸಹಜ

ಹಿಂದಿನ ನಂಬಿಕೆಯಂತೆ ಉತ್ತರಾಯಣವು ದೇವತೆಗಳಿಗೆ ಹಗಲಾಗಿದೆ ದಕ್ಷಿಣಾಯನದ ಕಾಲದಲ್ಲಿ ಮುಚ್ಚಿದ್ದ ಸ್ವರ್ಗದ ಬಾಗಿಲು ಮಕರ ಸಂಕ್ರಾಂತಿಯ ದಿನದಿಂದ ತೆರೆಯುವುದಂತೆ ಆದದರಿಂದ ಉತ್ತರಾಯಣದಲ್ಲಿ ಸತ್ತರೆ ಕೂಡಲೇ ಸ್ವರ್ಗಪ್ರಾಪ್ತಿಯಾಗುವುದೆಂದೂ ದಕ್ಷಿಣಾಯನದಲ್ಲಿ ತೀರಿ ಹೋದರೆ ಉತ್ತರಾಯಣವು ಪ್ರಾರಂಭವಾಗುವವರೆಗೆ ಅವರು ಬಾಗಿಲು ಕಾಯಬೇಕಾಗುವುದೆಂದೂ ನಂಬಿಗೆ ಇಂದಿಗೂ ಇದೆ ಆದದರಿಂದ ಈ ಉತ್ತರಾಯಣ ಪ್ರಾರಂಭದ ಪರ್ವದಿನ ಮಕರ ಸಂಕ್ರಮಣದಂದು ಸೂರ್ಯನ ಪ್ರೀತ್ಯರ್ಥವಾಗಿ ತಿಲದಾನ, ಗಂಗಾಸ್ನಾನ, ಸಮುದ್ರಸ್ನಾನಾದಿಗಳನ್ನು ಮಾಡುತ್ತಾರೆ

ಉತ್ತರ ಭಾರತದಲ್ಲಿ ಸಂಕ್ರಮಣದ ಕಾಲದಲ್ಲಿ ಗೃಹಸ್ಥರು ದಾನ ನೀಡುವ ಪದ್ಧತಿಯಿದೆ ಈ ದಾನವನ್ನು ಸ್ವೀಕರಿಸಲು ಕೆಲವರು ಈ ದಿನಕ್ಕೆ ಹಲವಾರು ದಿನ ಪೂರ್ವದಲ್ಲಿಯೇ ಮನೆ ಮನೆಯನ್ನು ಸಂಚರಿಸಿ, ತಮ್ಮ ಪಾಲಿಗೆ ಬರಲಿರುವ ದಾನವನ್ನು ಕಾಯ್ದಿರಿಸುವುದು ಇದೆ ಯಾವುದಕ್ಕೂ ಬೇಡವಾದ ಹಳೆಯ ಬಟ್ಟೆಬರೆಗಳು ಅಂದು ಅಪಾರ ಪುಣ್ಯಸಂಪಾದಿಸುವ ಉಪಾಯನಗಳಾಗುವುವು. ಮಹಾರಾಷ್ಟ್ರದಲ್ಲಿ ಸಂಕ್ರಾಂತಿಯು ಹೆಚ್ಚಾಗಿ ಸ್ತ್ರೀಯರ ಹಬ್ಬವಾಗಿದೆ ಪರಸ್ಪರ ಉಡುಗೊರೆ, ದಾನಗಳನ್ನಿತ್ತು ಬೆಲ್ಲ ಮತ್ತು ಎಳ್ಳುಗಳನ್ನು ಮೆಲ್ಲುತ್ತ ಸರಸವಾಗಿ ಅಂದಿನ ದಿನ ದೂಡುವ ಪದ್ಧತಿಯುಳ್ಳದೆ

ತಮಿಳ ನಾಡಿನಲ್ಲಿ ಈ ಸಂಕ್ರಾಂತಿಯು ವಿಶೇಷ ರೀತಿಯ ಹಬ್ಬ ಭೋಗಿ, ಪೊಂಗಲ್, ಮತ್ತು ಪೊಂಗಲ್ ಎಂದು ಮೂರು ದಿನ ಇದನ್ನು ಆಚರಿಸುತ್ತಾರೆ ಬಂಗಾಳದಲ್ಲಿಯೂ ಅತಿ ಪ್ರಚಲಿತವಿದೆ ತಿಂಡಿತಿನಸುಗಳನ್ನು ಅಮೂಲ್ಯ ಬಟ್ಟೆಯಲ್ಲಿ ಕಟ್ಟಿ ದೂರದ ಸ್ವಬಾಂಧವರಿಗೆ ಕಳಿಸಿಕೊಡುವುದು ಬಂಗಾಲಿಗಳ ಕ್ರಮ ಧಾನ್ಯ ಸಂಗ್ರಹಾಲಯದ ಸುತ್ತಲೂ ಹುಲ್ಲಿನ ಹಗ್ಗ ಬಿಗಿದು ಧಾನ್ಯ ಹೆಚ್ಚಲೆಂದು ಪ್ರಾರ್ಥಿಸುವುದಿದೆ ತಮಿಳುನಾಡಿನ ಸ್ವಾದಿಷ್ಟ ತಿಂಡಿ ಪೊಂಗಲ್ ಇದರಿಂದಾಗಿ, ಈ ಹಬ್ಬದ ದಿನವನ್ನು ಅವರು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ ಹಿಂಗಾರು ಮಳೆಯ ಸಹಾಯದಿಂದ ಪೈರು ಬೆಳೆಸುವ ಈ ಜನರಿಗೆ ಮುಂಗಾರು ಮಳೆಯ ಪ್ರದೇಶಗಳ ದೀಪಾವಳಿ ಹಬ್ಬದಂತೆಯೇ ಭೋಗಿ, ಪೊಂಗಲ್ ಮತ್ತು ಪೊಂಗಲ್ ಹಬ್ಬಗಳು ಪವಿತ್ರವೂ ಉತ್ಸಾಹಪ್ರದವೂ ಆಗಿರುವುವು

ಮೂರು ದಿನಗಳ ವರೆಗೆ ತಮಿಳರಿಂದ ಆಚರಿಸಲ್ಪಡುವ ಈ ಹಬ್ಬದಲ್ಲಿ ಮೊದಲಾಗಿ ಮಳೆರಾಯ ಇಂದ್ರನನ್ನು ಪೂಜಿಸಿ, ಬಳಿಕ ಸೂರ್ಯದೇವನಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ ಕೊನೆಗೆ ರೈತರ ಜೀವಾಳವಾದ ಗೋವುಗಳ ಪೂಜೆಯು ನಡೆಯುತ್ತದೆ ಮನೆಯನ್ನು ನಿರ್ಮಲವಾಗಿ ಗುಡಿಸಿ ತಳಿರು ತೋರಣಗಳಿಂದಲೂ, ರಂಗೋಲೆಗಳಿಂದಲೂ ನಾರಣೆಕಾಣಿಗಳಿಂದಲೂ ಶೃಂಗರಿಸುತ್ತಾರೆ ಹೆಂಗಸರು ಹೊಸ ಪಾತ್ರೆಗಳನ್ನು ತರುತ್ತಾರೆ. ಧಾನ್ಯಗಳಿಂದ ತುಂಬಿಸಿಟ್ಟ ಕಣಜವುಳ್ಳ ತಮಿಳರು ಸೂರ್ಯನಿಗೆ ಪೊಂಗಲ್ ಭಕ್ಷ್ಯವನ್ನು ಸಮರ್ಪಿಸಿ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ. ಹಬ್ಬಗಳ ಹೂರಣಹೋಳಿಗೆಯನ್ನೇ ಸೂರ್ಯದೇವನಿಗೆ ನೈವೇದ್ಯ ಮಾಡುವುದೂ ಇದೆ ನಮ್ಮಲ್ಲಿಯ ಮಕ್ಕಳು ದೀಪಾವಳಿ ಸಮಯದಲ್ಲಿ ಗೂಡದೀಪ ಏರಿಸುವಂತೆಯೇ ಈ ಸಮಯದಲ್ಲಿ ತಮಿಳುನಾಡಿನ

(೧೧ ಪುಟ ನೋಡಿ)



ಲಂಡನ್ನಿನ ವೂಲಿಚ್ ಪಾಲಿಟೆಕ್ನಿಕ್ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಸೈನ್ಸ್‌ನಲ್ಲಿ ಕಲ್ಕತೆಯ ಶ್ರೀ ಅೃರ್ಬನ್ ಎಂಬವರು ಅಭ್ಯಾಸ ಮಾಡುತ್ತಿದ್ದಾರೆ

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಡಿಗ ಪುಸ್ತಕಗಳು, ಸೊಸೈಟಿ ರಶೀದಿ ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರು ಮತ್ತು ಎಲ್ಲಾ ತರದ ಫಾರ್ಮುಗಳು ಕುರಿಪಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಮೂಲಗೇಣಿ ಚೀಟುಗಳು, ಗೇಣಿ ಮತ್ತು ಒಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ

ನವಯುಗ ಪ್ರೆಸ್, ಉಡುಪಿ

ನಿಮ್ಮ ಮನೆಯಲ್ಲಿಯೇ ಡೆಲಿವ್ವರಿ ಪಡೆಯಿರಿ.

ಪ್ರತಿವರ್ಷ, ಪ್ರತಿಪ್ರಸಂಗ, ಯಾವದೇ ಕಾಲ ನಮ್ಮ ನಾಟಕದ ಸಾಮಾನುಗಳಲ್ಲಿ ಹೊಸ ಹೊಸ ವೈವಿಧ್ಯ ಕಾಣುವಿರಿ ನಿಮ್ಮ ಪೂರ್ಣವಿಳಾಸ ಕೊಟ್ಟು ನಮಗೆ ಬರೆದಲ್ಲಿ ನಮ್ಮ ಉಚಿತ ಕನ್ನಡ ಬೆಲೆಪಟ್ಟಿಯನ್ನು ಕಳಿಸುತ್ತೇವೆ ಪತ್ರವ್ಯವಹಾರ ಇಂಗ್ಲಿಷ್, ಹಿಂದಿ, ಮರಾಠಿಯಲ್ಲಿ

DHARAMSHI MULJI
DRESSWALLA
132 C Bhagatwadi Bhuleshwar Rd ,
Opp Kabutarkhana BOMBAY 2



PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ವಿಚಿತ್ರ ಜೀವನ

ಇಲ್ಲಿ ಪುರುಷರು ಮಾತ್ರ ಪರದೆ ಧರಿಸುತ್ತಾರೆ!

ಮಧ್ಯ ಆಫ್ರಿಕೆಯ ಕೆಲವು ಚಿತ್ರ ವಿಚಿತ್ರ ಜನಾಂಗಳ ನಡೆನುಡಿಗಳು

ಆಫ್ರಿಕೆಯನ್ನು ಒಂದು ದೇಶವೆನ್ನುವುದಕ್ಕಿಂತ ಮಹಾ ದ್ವೀಪವೆಂದು ಕರೆಯುವುದೇ ಒಳ್ಳೆಯದು. ವಿಸ್ತಾರದಲ್ಲಿ ಇದು ಅಮೇರಿಕೆಯ ಸಂಯುಕ್ತ ರಾಷ್ಟ್ರ, ರಶ್ಯವನ್ನುಳಿದ ಯುರೋಪು ಖಂಡ, ಭಾರತ ಮತ್ತು ಚೀನಗಳನ್ನು ಒಟ್ಟು ಸೇರಿಸಿದಷ್ಟು ವಿಶಾಲವಾಗಿದೆ. ಒಂದು ಕೋಟಿ ಹನಿಮೂರು ಲಕ್ಷ ಚದರ ಮೈಲು ವಿಸ್ತೀರ್ಣವಿದಿದೆ. ಇಷ್ಟು ದೊಡ್ಡ ಭೂಭಾಗವಿದ್ದರೂ ಇಲ್ಲಿ ಕೇವಲ ಇಪ್ಪತ್ತು ಕೋಟಿ ಜನರಷ್ಟೇ ಇರುವರೆಂದರೆ ಆಶ್ಚರ್ಯಪಡಬೇಕಾಗಿದೆ. ಎಂದರೆ, ಭಾರತದ ಜನಸಂಖ್ಯೆಯ ಅರ್ಧದಷ್ಟು ಮಾತ್ರ. ಭೂಮಧ್ಯ ಸಾಗರದಿಂದ ಹಿಂದೂ ಸಾಗರದ ವರೆಗೆ ಅರಬಿ ಸಮುದ್ರದಿಂದ ಅತ್ಲಾಂತಿಕ ಸಾಗರದ ವರೆಗೆ ಹರಡಿರುವ ಇಲ್ಲಿ ಸುಮಾರು ಏಳುನೂರು ಭಾಷೆಗಳನ್ನಾಡುತ್ತಾರೆ. ಆದರೆ, ಇಲ್ಲಿ ಶಿಹಾಯಿಲಿಯೆಂಬ ಒಂದು ಭಾಷೆಗೆ ಮಾತ್ರ ಲಿಖಿತ ಸ್ವರೂಪವೊದಗಿದೆ.

ಆಫ್ರಿಕೆಯ ಕ್ಷೇತ್ರಫಲದಲ್ಲಿ ಆದರ ವಿಚಿತ್ರತೆಯು ಹರಡಿಲ್ಲ. ಇಲ್ಲಿನ ನಿವಾಸಿಗಳ ಆಚಾರ ವಿಚಾರ, ರೀತಿ ರಿವಾಜು ಮತ್ತು ಅಲ್ಲಿನ ಪ್ರಕೃತಿಗಳ ಪರಸ್ಪರ ವೈಷಮ್ಯವೇ ಈ ಅದ್ಭುತಕ್ಕೆ ಕಾರಣವೆನ್ನಬಹುದು. ಇದರ ಕೆಲವೊಂದು ಭಾಗಗಳು ಅದೇ ಭೂಖಂಡದ ಭಾಗಗಳೆಂದು ತಿಳಿಯುವುದೂ ಕಷ್ಟ. ಉತ್ತರದಲ್ಲಿ ರೋಮ್ ಸಮುದ್ರಕ್ಕೆ ಸಮೀಪವಿರುವ ಮೊರೊಕ್ಕೊ, ಅಲ್ಜೀರಿಯಾ, ಲಿಬಿಯಾ, ಈಜಿಪ್ತ ಇತ್ಯಾದಿ ದಕ್ಷಿಣ ಯುರೋಪಿಗೆ ಸಮಾನವಾಗಿವೆ. ಆಫ್ರಿಕೆಯ ದಕ್ಷಿಣ ಭಾಗದಲ್ಲಿಯೂ ಯುರೋಪಿಯಾದ ರೀತಿಯ ಜೀವನವಿದೆ. ಈ ಎರಡರ ಮಧ್ಯದಲ್ಲಿ ಆಫ್ರಿಕೆಯ ನೈಜ ಚಿತ್ರ ಕಾಣುತ್ತದೆ. ವರ್ಷದ ಹಿಂದೆ ವರ್ಷಗಳು ಕಳೆಯುತ್ತ ಬಂದರೂ ಆಕಾಶದಲ್ಲಿ ಮೋಡದ ಚೂರನ್ನೂ ಕಾಣದಿರುವ ವಿಶ್ವವಿಖ್ಯಾತವಾದ ಸಹಾರಾ ಮರು ಭೂಮಿಯೂ ಇದರ ಒಂದಂಗವಾಗಿದೆ. ರಾತ್ರಿಯಲ್ಲಿ ತಾರೆಗಳು ಜಗಜಗಿಸುತ್ತವೆ; ಹಗಲಿನಲ್ಲಿ ನೀಲಾಕಾಶವು ತನ್ನ ವಿರಾಟ್ ರೂಪವನ್ನು ಜನತೆಗೆ ತೀವ್ರವಾಗಿ ತೋರಿಸುತ್ತದೆ; ಬೆಂಕಿಯನ್ನು ಉರಿಸುತ್ತಿರುತ್ತದೆ. ಇಲ್ಲಿನಅಜೀಜಿಯಾ ಎಂಬಲ್ಲಿ ಜಗತ್ತಿನಲ್ಲೇ ಅತ್ಯಂತ ಉಷ್ಣತೆಯಿರುವುದು (೧೩೬.೪ ಡಿಗ್ರಿ ಫರನ್‌ಹೈಟ್) ಇಲ್ಲಿ ವನಸ್ಪತಿಗಳಿಲ್ಲ. ಸಾವಿರಾರು ಮೈಲು ದೂರ ಸಂದರೂ ಹ್ಯೊಗೆಯಷ್ಟೇ ದೃಷ್ಟಿಗೋಚರವಾಗುವುದು. ಆದರೆ, ಇಂತಹ ಮರುಸ್ಥಲದ ದಕ್ಷಿಣದಲ್ಲಿಯೇ ಭಯಾನಕ ಅರಣ್ಯಗಳಿಂದ ಕೂಡಿದ ಕಾಂಗೋ ನದೀ ದ್ರೋಣಿವಿದೆ! ಸೂರ್ಯನ ಪ್ರತಾಪೀ ಕಿರಣಗಳೂ ಈ ಕಾಡನ್ನು ಹಾದು ಒಳಸರಿಯಲಾರದಷ್ಟು ಘನವಾಗಿವೆ. ಇಲ್ಲಿನ ನದಿಗಳಲ್ಲಿ ಭಯಂಕರ ಪ್ರಾಣಿಗಳು ಆಡುತ್ತಿರುತ್ತವೆ. ಇಂದ್ರನ ಅಪಾರ ಕೃಪೆಯಿಂದಾಗಿ ಇಲ್ಲಿ ಪ್ರತಿದಿನವೂ ವಿಶೇಷ ಮಳೆ ಸುರಿಯುತ್ತಿದೆ. ಇಲ್ಲಿನ ಕಾಡುಗಳಲ್ಲಿ ವಾಸಿಸಿರುವ ಮನುಷ್ಯರೂ ಪ್ರಾಣಿಗಳೂ ತಮ್ಮ ಜೀವನದಲ್ಲಿಯೇ ಸೂರ್ಯನನ್ನಂತಿರಲಿ; ಸೂರ್ಯನ ಕಿರಣಗಳನ್ನೂ ನೋಡಲಾರರು! ಮಧ್ಯಾಹ್ನದ ಹೊತ್ತಿನಲ್ಲಿಯೇ ಅಮವಾಸ್ಯೆಯಷ್ಟು ಕತ್ತಲೆಯು ವ್ಯಾಪಿಸುತ್ತದೆಂದಾಗ, ರಾತ್ರಿಯ ಅಂಧಕಾರವನ್ನು ಪ್ರತ್ಯೇಕ ವರ್ಣಿಸಬೇಕಾಗಿಲ್ಲ.

“ಬೌನಾ” ಎಂಬ ಜಾತಿಯ ಮಾನವರಿರುತ್ತಾರೆ ಇಲ್ಲಿ. ಇವರ ಜೀವನವು ವಿಚಿತ್ರವಾಗಿದೆ. ಪ್ರಪಂಚದ ಎಲ್ಲ ಮನುಷ್ಯರಿಗಿಂತ ಇವರು ಆಕಾರದಲ್ಲಿ ಕುಳ್ಳರು-ನಿಜವಾಗಿ ಹೇಳುವುದಾದರೆ, ಇವರು ಮಾನವರಿಗೆ ಅಪಮಾನವೆಸಗುತ್ತಾರೆ. ಐದು ಅಡಿಗಳಿಂದ ಎತ್ತರದ ಆಳುಗಳು ಇಲ್ಲಿ ಇಲ್ಲವೇ ಇಲ್ಲ. ನಾಲ್ಕು, ನಾಲ್ಕೂವರೆ ಅಡಿ ಉದ್ದದವರೇ ಅಧಿಕ ಜನರು. ಆಕೃತಿ ಬಹಳ ನಿರಾಡಂಬರ, ಆಕಾರ ಕುಳ್ಳ, ಮೂಗು ಚಪ್ಪಟೆ, ಹೊಟ್ಟೆ ಡೊಳ್ಳು! ಸಾಮಾನ್ಯ ನಗ್ನ ಶರೀರ! ಅಸಭ್ಯರಾದರೂ ಇವರು ತಮ್ಮ ಮನೆಗಳಿಗೆ ಎರಡು ಬಾಗಿಲುಗಳನ್ನಿಡುತ್ತಾರೆ. ಶತ್ರುವು ಒಂದು ಬಾಗಿಲಿನಿಂದ ಆಕ್ರಮಿಸಿ ಬಂದರೆ, ಇನ್ನೊಂದರಲ್ಲಿ ಹೊರಗೋಡುತ್ತಾರೆ. ಇವರು ಕೃಷಿ ಮಾಡುವುದಿಲ್ಲ; ಪಶು ಪಾಲಿಸುವುದಿಲ್ಲ. ಶಿಕಾರಿಯಲ್ಲಿಯೇ ಜೀವಿಸುತ್ತಾರೆ. ಹಣ್ಣುಹೂಗಳನ್ನು ಕೂಡಿಸುತ್ತಾರೆ. ಆನೆಯನ್ನು ಹೊಡೆಯುವಷ್ಟು ಅವರ ಬಾಣಗಳು ಹರಿತವಾಗಿವೆ. ಬೇನಃ ಮತ್ತು ಇರುವೀನದಿಗಳ ಘನಾರಣ್ಯಗಳಲ್ಲಿ ಈ ಬೌನರು ಹೆಚ್ಚಾಗಿ ವಾಸಿಸುತ್ತಾರೆ.

ಈ ಬೌನಾರಿಂದ ಸುಮಾರು ನೂರು ಮೈಲು ದೂರದಲ್ಲಿ ವಿಕ್ಟೋರಿಯಾ ಮತ್ತು ಟೆಂಗನೀಕಾ ಸರೋವರ ಮಧ್ಯದಲ್ಲಿ ರುಆಂಡಾ ಎಂಬ ಪ್ರದೇಶವಿದೆ. ಇಲ್ಲಿನ ಜನರಷ್ಟು ಉದ್ದನ್ನದವರಾದವರು ಇಡಿ ಪ್ರಪಂಚದಲ್ಲಿ ಅನ್ಯರಿಲ್ಲ. ಏಳಡಿಗಳಿಗಿಂತಲೂ ಹೆಚ್ಚು ಇವರು ಎತ್ತರವಿರುತ್ತಾರೆ! ಇವರನ್ನು “ವಾತುತ್ಸಿ”ಎಂದು ಕರೆಯುತ್ತಾರೆ. ಮಾನವ ದೈತ್ಯರೆಂದೂ ಇವರಿಗೆ ಹೇಳುವುದುಂಟು. ಕೆಲವರು ಬೌನಾ ಮತ್ತು ಈ ಮಾನವ ದೈತ್ಯರ ಪರಂಪರೆಯೊಂದೇ ಎಂದು ಹೇಳುವರಾದರೂ ಅದಕ್ಕೆ ಆಧಾರ ಸಾಲದು.

ಆಫ್ರಿಕೆಯ ನಿವಾಸಿಗಳ ಮೇಲೆ ಬಿಳಿಯರು ಬರುವುದಕ್ಕೆ ಮೊದಲು ಅರಬರ ಪ್ರಭಾವಬಿದ್ದಿತ್ತು. ಇದರಿಂದಲೇ ಇಲ್ಲಿ ಪರದಾ ಪದ್ಧತಿಯು ಇರುವುದು. ಸಹರದ ದಗ್ಧಮರು ಭೂಮಿಯಲ್ಲಿ “ತ್ವಾರೋಗಾ” ಎಂಬ ಒಂದು ಜಾತಿ ಇದೆ. ಇವರ ಸ್ತ್ರೀಯರು ಪರದೆ ಹೊದ್ದುಕೊಳ್ಳದೆ ಪುರುಷರು ಅದನ್ನು ಧರಿಸುತ್ತಾರೆ. ತಮ್ಮ ಸ್ತ್ರೀಯರೊಡನೆಯೂ ಪರದೆ ಹೊದ್ದುಕೊಂಡೇ ಇರುತ್ತಾರೆ. ಉಣ್ಣುವಾಗ ಕುಡಿಯುವಾಗಲೂ ಬಾಯಿಯ ಮೇಲೆ ಕಡು ನೀಲ ಬಣ್ಣದ ಪರದೆ ಇರುತ್ತದೆ. ಈ ಪದ್ಧತಿಯ ಬಗ್ಗೆ ಸರಿಯಾದ ವಿಚಾರ ತಿಳಿದು ಬಂದಿಲ್ಲ. ಇವರು ರಣವೀರರೆಂದೂ ಅಲ್ಲಾದ ಗಾಯಗಳನ್ನು ತಮ್ಮ ಹೆಂಡಂದಿರಿಂದ ಮಾಡ ಬಯಸುವರೆಂದೂ ಅದಕ್ಕಾಗಿ ಈ ವೇಷವೆಂದೂ ಕೆಲವರನ್ನುವರು. ಸೂರ್ಯನ ಬಿಸಿಲಿನ ರಕ್ಷಣೆಗಾಗಿ ಎಂದು ಇನ್ನು ಕೆಲವರು ಹೇಳುವರಾದರೂ ಇದರಲ್ಲಿ ಯಥಾರ್ಥತೆಯಿರುವುದಿಲ್ಲ ಏಕೆಂದರೆ, ಸ್ತ್ರೀಯರಿಗೂ ಪರದೆ ಬೇಡವೆ? ಅವರಿಗೆ ಬಿಸಿಲಾಗುವುದಿಲ್ಲವೆ? ಈ ವಿಷಯ ಆ ಜನರಿಗೇನೇ ಏಕೆಂದು ಗೊತ್ತಿಲ್ಲ. ನಮ್ಮ ತಂದೆ, ಅಜ್ಜ ಎಲ್ಲರೂ ತೊಟ್ಟಿದ್ದರು; ನಾವೂ ಅದನ್ನು ತೊಡುತ್ತೇವೆ ಎಂದು ಮಾತ್ರ ಅವರು ಹೇಳುವರು.

ಮಧ್ಯ ಆಫ್ರಿಕದಲ್ಲಿ ಬಾಕುಬ್ ಎಂಬ ಜಾತಿಯ ಜನರಿದ್ದಾರೆ. ಇವರ ಸಾಮಾಜಿಕ ಜೀವನ ಅತ್ಯಂತ ವಿಚಿತ್ರವಿದೆ. ಬಂಜೆ ಸ್ತ್ರೀಯನ್ನಿವರು ತಿರಸ್ಕಾರ ದೃಷ್ಟಿಯಿಂದ ಕಾಣುತ್ತಾರೆ. ತನ್ನ ಪತ್ನಿಯು ಸಂತಾನಹೀನಳಾಗಬೇಕೆಂದು ಯಾರು ಬಯಸುವುದಿಲ್ಲ ಅತ್ಯುಷ್ಣದ ಕಾರಣದಿಂ ಶಾರೀರಿಕ ಪಕ್ವತೆಯು ಬೇಗನೇ ಆಗುವುದರಿಂದ ೧೨ನೆ ವರ್ಷದಲ್ಲಿಯೇ ಗಂಡುಮಕ್ಕಳ ವಿವಾಹವು ನಡೆಯುತ್ತದೆ. ಆದರೆ, ಇವರ ಪ್ರಥಮ ಪ್ರಣಯವು ಇದಕ್ಕೆ ಮೊದಲೇ ವಿವಾಹವಾಗಲಿರುವ ಕನ್ಯೆಯೊಡನೆ ಆಗಿ ಹೋಗಿರುತ್ತದೆ!

ಎಲ್ಲಕ್ಕಿಂತ ವಿಚಿತ್ರ ಜಾತಿ ಬಾಟು ಎಂಬುದು. ವಸ್ತುತಃ ಇದೊಂದು ವರ್ಗವಲ್ಲ. ಭಾಷಾಭೇದದಿಂದಾದ ಪಂಗಡ ಮಾತ್ರ. ಇವರಲ್ಲೊಂದು ಅಂಧವಿಶ್ವಾಸವಿದೆ ಒಬ್ಬನು ಎಷ್ಟು ಹೆಚ್ಚು ಮಕ್ಕಳ ತಂದೆಯಾಗುತ್ತಾನೋ ಅಷ್ಟೆ ಪಾಲು ಆತನ ಭೂಮಿಯು ಫಲವತ್ತಾಗುವುದೆಂದಿವರು ತಿಳಿಯುತ್ತಾರೆ. ಇದರಿಂದಾಗಿ ಎಲ್ಲರೂ ನೂರು ಗಟ್ಟಲೆ ಮಕ್ಕಳ ತಂದೆಯಾಗುವುದಕ್ಕಾಗಿ ಬಹುವಿವಾಹವನ್ನು ಮಾಡಿಕೊಳ್ಳುತ್ತಾರೆ! ಜನರು ಆಡು ಕುರಿಗಳ ಹಾಗೆ ಎಲೆಗಳನ್ನು ತಿಂದು ಜೀವಿಸುತ್ತಾರೆ!

ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಇಂತಹ ಜನರಿರುವ ಭೂಭಾಗಗಳಿವೆಯೆಂದರೆ ನಂಬುವುದು ಸಾಧ್ಯವೆ? ಆದರೆ ಇಲ್ಲಿ ನಿರೂಪಿತವಾಗಿರುವುದು ಮಾತ್ರ ಪ್ರಕೃತಿ ಸತ್ಯ.

ಬಂಟರ ಯಾನೆ ನಾಡವರ ಸಂಘ

ಜುಬಿಲಿ ಫಂಡಿಗೆ ರೂ. 500/- ಮತ್ತು ಹೆಚ್ಚಿಗೆ ಧನಸಹಾಯ

1. ದಿವಂಗತ ಅತ್ತಾವರ ದೇವಪ್ಪ ಪೂಂಜರ ಸ್ಮಾರಕ ಫಂಡಿನಿಂದ (ಅವರ ಮಕ್ಕಳು ಮತ್ತು ಎ. ಟಿ. ಶೆಟ್ರ ಮೂಲಕ)	ರೂ.	10,000
2. ಶ್ರೀ ಕೆ. ಪಿ. ರಾಮಣ್ಣ ಶೆಟ್ರು, ಪ್ಲಾಂಟರ್	ರೂ.	5,000
3. ಮತ್ತು ಅವರ ಪತ್ನಿ ಶ್ರೀಮತಿ ಅಮ್ಮಣ್ಣಿ R. ಶೆಟ್ಟಿ	ರೂ.	5,000
4. ಶ್ರೀ ಕುತ್ಯಾರು ಗಣಪಯ್ಯ ಶೆಟ್ರು ಪ್ಲಾಂಟರ್ ಮತ್ತು ಅವರ ಪತ್ನಿ ಶ್ರೀಮತಿ ಪಾಜಮ್ಮ ಶೆಟ್ಟಿ	ರೂ.	2,001
5. ಶ್ರೀ ಕೆ. ಎಲ್. ಬಂಡಾರಿಗಳು, ಪ್ಲಾಂಟರ್	ರೂ.	1,501
6. ಶ್ರೀ ಎಂ. ಡಿ. ರಾಮಣ್ಣ ಶೆಟ್ರು, ಪ್ಲಾಂಟರ್	ರೂ.	1,500
7. ಶ್ರೀ ಗೋಪಾಲ ಭಂಡಾರಿಗಳು (ಪಂಚಿನ ಕಾರ್ಖಾನೆ ಮಾಲೀಕರು)	ರೂ.	1,500
8. ಶ್ರೀಮತಿ P. R. T. ಪೂಂಜರು, ಮಡಿಕೇರಿ	ರೂ.	1,500
9. ಶ್ರೀ ಪಿ. ಸುಬ್ಬಯ ನಾಯ್ಕರು (ಪಂಚಿನ ಕಾರ್ಖಾನೆ ಮಾಲೀಕರು)	ರೂ.	1,501
10. ಶ್ರೀ ಅಲಂಗಾರ್ ನಾರಾಯಣ ಹೆಗ್ಡೆಯವರು (ಮೆನೇಜಿಂಗ್ ಡೈರೆಕ್ಟರ್, ವೆಸ್ಟ್‌ಕೋಸ್ಟ್ ಇಂಡಸ್ಟ್ರಿಯಲ್ ಎಂಡ್ ಕಮರ್ಶಿಯಲ್ ಸಿಂಡಿಕೇಟ್ ಲಿ., ಪಾರ್ಟನರ್ ಅನಂತಪದ್ಮನಾಭ ಮಿಲ್ಸ್)	ರೂ.	1,501
11. ಶ್ರೀ ಎಂ. ಜಿ ಗಣೇಶನಾರಾಯಣ ರೈಗಳು (ಎಡ್ವೊಕೇಟ್, ಕಾಸರಗೋಡು)	ರೂ.	1,500
12. ಡಾಕ್ಟರ್ ಕೆ ಮಂಜುನಾಥ ರೈಗಳು, ಮದ್ರಾಸು	ರೂ.	1,500
13. ಶ್ರೀ ಕೆ. ಎಲ್ಲಪ್ಪ ಅಜಿಲರು, ಪ್ಲಾಂಟರ್	ರೂ.	1,500
14. ಡಾಕ್ಟರ್ ಪಿ. ಎ. ಅದ್ಯಂತಾಯರು, ಪ್ಲಾಂಟರ್	ರೂ	1,500
15 ಶ್ರೀ ಯತ್ತರೆ ಸೂರ್ಯಣ್ಣ ಶೆಟ್ರು (ಕೃಷ್ಣಪ್ಪ ಶೆಟ್ರ ಸ್ಮರಣಾರ್ಥವಾಗಿ,	ರೂ.	1,500
16. ಶ್ರೀ ನೈಲಾಡಿ ಶೀನಪ್ಪ ಶೆಟ್ರು ರೈಸ್ ಮಿಲ್ಸ್	ರೂ.	1,500
17. ಶ್ರೀ ಸಾಣೂರು ಅಂತಯ್ಯ ಶೆಟ್ರು	ರೂ.	1,500
18. ಶ್ರೀ ಬಸ್ರೂರು ತೇಜಪ್ಪ ಶೆಟ್ರು	ರೂ.	1,500
19. ಶ್ರೀ ಬಿ ಜಗಜ್ಜೀವನದಾಸ್ ಶೆಟ್ರು, M.L.A.	ರೂ	1,500
20. ಶ್ರೀ ಪಂದ್ಯಾಡಿ ಮೋನಪ್ಪ ಶೇರ್ವೆಗಾರರು	ರೂ.	1,501
21. ಶ್ರೀ ಕೆ. ಮರ್ತಪ್ಪ ಶೆಟ್ರು, ಪ್ಲಾಂಟರ್	ರೂ.	1,501
22. ಶ್ರೀಮತಿ ಮೀನಾಕ್ಷಿ ಶೆಟ್ಟಿ ಮತ್ತು ಶ್ರೀ ಗೋಪಾಲ ಭಂಡಾರಿಯವರು, (ಪೇಲರ ನಾಂ ಶಾ ಶೆಟ್ರ ಸ್ಮರಣಾರ್ಥವಾಗಿ)	ರೂ.	1,500
23. ಶ್ರೀ ಕೆ. ಮಹಾಬಲ ಶೆಟ್ರು B.Sc (Ag) (ಅವರ ಮಗ ರಮೇಶ್‌ಚಂದ್ರ ಶೆಟ್ರ ಸ್ಮರಣಾರ್ಥವಾಗಿ)	ರೂ	1 500
24. ಶ್ರೀ ಕೆ ಟಿ. ಅಳ್ವರ ಹೆಸರಲ್ಲಿ ಅವರ ಪತ್ನಿ ಮತ್ತು ಮಕ್ಕಳಿಂದ	ರೂ.	1,500
25. ಶ್ರೀ ಬಿ. ರಾಜೀವ ಶೆಟ್ರು, B. A , B. L., ಜನರಲ್ ಮೆನೇಜರ್, ಯುನೈಟೆಡ್ ಇಂಪೋರ್ಟರ್ಸ್ (ಬೊಂಬಾಯಿ) ಲಿಮಿಟೆಡ್.	ರೂ.	500
26 ಶ್ರೀ ಕೆ. ಜಯರಾಮ ಶೆಟ್ರು, (ಸೆಕ್ರೆಟರಿ, ವಿಜಯಾ ಬೇಂಕ್ ಲಿ.)	ರೂ.	501
27. ಶ್ರೀ ಕೆ. ಎಂ ರಾಮ ಶೆಟ್ರು, ಪ್ಲಾಂಟರ್, ಮೂಡಿಗೆರೆ	ರೂ.	500
28 ಶ್ರೀ ಬೆಳಿಂಜೆ ಮೋನಪ್ಪ ಹೆಗ್ಡೆಯವರು	ರೂ.	501
29. ಡಾಕ್ಟರ್ ಬಿ. ಭುಜಂಗ ಹೆಗ್ಡೆಯವರು	ರೂ.	500
30. ಶ್ರೀ. ಕೆ. ಕೊರಗ ಮುಲಾಂಟರು, ಪ್ರೊಪ್ರೈಟರ್ ಭಾರತೀ ವೀವಿಂಗ್ ಫೇಕ್ಟರಿ, ಪಡೀಲ್ ಮಂಗಳೂರು.	ರೂ.	500
31. ಶ್ರೀ. ಕಾಪು ಅನಂತ ಶೆಟ್ರು (ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿ)	ರೂ.	501
32. ಕೆಪ್ಟನ್ (ಡಾಕ್ಟರ್) ಅನಂತರಾಮ ಶೆಟ್ರು	ರೂ.	500

ಕೆ. ಸುಂದರ ರಾಮ ಶೆಟ್ಟಿ, B. A., B. L.,
ಎಡ್ವಕೇಟ್, ಮಂಗಳೂರು-3.
ಟ್ರೆಜರರ್.

ಮಂಗಳೂರು,
10—1—1959.

NAVAYUGA' WEEKLY
is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

> ಆಲಸ್ಯವೆಂಬುದು ಮಾನವ ಶರೀರದ ಮಹಾ ವೈರಿಯು; ಇದನ್ನು ಆರಂಭಕಾಲದಲ್ಲಿಯೇ ನಾಶಮಾಡದೆ ಹೋದರೆ, ಕ್ರಮೇಣ ಆತ್ಮನಾಶವನ್ನೂ ಇದು ಗೆಯ್ಯಬಲ್ಲುದು. ಆದುದರಿಂದ, ಸದಾ ಪರಿಶ್ರಮಿಯಾಗಿರುವುದೇ ಆತ್ಮನಿಗೆಸಗುವ ಶುಶ್ರೂಷೆ.

NAVAYUGA
Founder:—
A. B. SHETTY,
Former Minister for Public Health
Govt. of Madras & Govt. of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೫-೧-'೫೯	೨೦

ಅಭಯಂಕರ ಫಲಶ್ರುತಿ

ಕಾಂಗ್ರೆಸ್ಸಿನ ೬೪ನೆಯ ಅಧಿವೇಶನವು ನಾಗಪುರದಲ್ಲಿ ನಿರ್ಮಿಸಲಾದ ಅಭಯಂಕರ ನಗರದಲ್ಲಿ ಮುಕ್ತಾಯಗೊಂಡಿತು. ಸಾಮಾನ್ಯವಾಗಿ ಇಂತಹ ಸಮ್ಮೇಳನಗಳಲ್ಲಿ ಹಲವಾರು ಗೊತ್ತುವಳಿಗಳು ಮಂಡಿಸಲ್ಪಟ್ಟು, ಅವು ಸ್ವೀಕೃತವಾಗುವುದೂ, ಕಾಂಗ್ರೆಸಿನ ನೀತಿಯನ್ನು ಪುನರ್ವಿಮರ್ಶಿಸಿ ಮುಂದಿನ ಧ್ಯೇಯ ಧೋರಣೆಗಳನ್ನು ರೂಪಿಸಿಕೊಳ್ಳುವುದೂ ಸಂಪ್ರದಾಯವಾಗಿ ಪರಿಣಮಿಸಿದೆ. ಸದ್ಯದ ಕಾಂಗ್ರೆಸ್ ಅಧಿವೇಶನವು ಮಹತ್ವಪೂರ್ಣವಾಗುವುದೆಂದು ಮೊದಮೊದಲು ಹೇಳಲಾಗುತ್ತಿದ್ದರೂ ಅಷ್ಟೇನೂ ಮಹತ್ತಿಕೆಯ ವಿಚಾರಗೋಷ್ಠಿಯೇರ್ಪಟ್ಟಂತಿಲ್ಲ. ಸಾಮಾನ್ಯವಾಗಿ, ಕೆಲವಾರು ಪ್ರಚಲಿತ ಸಮಸ್ಯೆಗಳನ್ನು ಗಮನಿಸಿ ಅವಕ್ಕೆ ಗೊತ್ತುವಳಿಯ ರೂಪವನ್ನು ಮಾತ್ರವಿತ್ತಿತು. ಕಾಂಗ್ರೆಸ್ ಅಧ್ಯಕ್ಷರ ರಾಜಿನಾಮೆಯನ್ನು ಸ್ವೀಕರಿಸಿ ಆ ಸ್ಥಾನಕ್ಕೆ ಬೇರೊಬ್ಬ ಸಮರ್ಥ ವ್ಯಕ್ತಿಯನ್ನು ಆರಿಸುವ ಕರ್ತವ್ಯವೇ ಈ ಸಮ್ಮೇಳನದಲ್ಲಿ ಗುಜುಗುಜೆಂದು ಕೇಳಿಬರುತ್ತಿತ್ತು. ಎಂತಲೇ ಪತ್ರಿಕೆಗಳಲ್ಲಿ ಪ್ರತಿನಿತ್ಯವೆಂಬಂತೆ ಎರಡು ಮೂರು ಹೊಸ ಹೆಸರುಗಳು ಆ ಪದವಿಗೆ ಸೂಚಿತವಾಗಿರುತ್ತವೆಂದು ಪ್ರಕಟವಾಗಿದೆ. ಇದರಿಂದಲೇ ಅಲ್ಲಿ ನಡೆದ ವಿಚಾರವಿನಿಮಯಗಳಲ್ಲಿ ಭಾಗವಹಿಸಿದವರ ದೃಷ್ಟಿ ಎಲ್ಲಿತ್ತೆಂದು ಊಹಿಸಬಹುದು.

ಸಮಾಜವಾದ ಮಾದರಿಯ ಸಮಾಜವನ್ನು ರೂಪಿಸುವ ಧ್ಯೇಯವನ್ನು ದೇಭರರನ್ನು ಅಧ್ಯಕ್ಷರನ್ನಾಗಿ ಆರಿಸಿದ ಆವಡಿ ಕಾಂಗ್ರೆಸ್ ಸಮ್ಮೇಳನದಲ್ಲಿ ಸ್ವೀಕರಿಸಲಾಗಿತ್ತು. ಅದೇ ದೇಭರರನ್ನು ಪಟ್ಟದಿಂದಿಳಿಸುವ ಈ ನಾಗಪುರ ಕಾಂಗ್ರೆಸ್ ಸಮ್ಮೇಳನದಲ್ಲಿ ಅದರ ಒಂದಂಗವಾದ ಆಸ್ತ್ಯಧಿಕ ಪರಿಮಿತಿಯನ್ನು ಹೇರುವ ಅನುಷ್ಠೇಧವುಳ್ಳ ಭೂಸುಧಾರಣೆಯನ್ನು ಪ್ರಚಲಿತ ಕ್ರಿಸ್ತ ವರ್ಷದೊಳಗೆ ಎಲ್ಲ ರಾಜ್ಯಗಳಲ್ಲಿಯೂ ವ್ಯವಹಾರದಲ್ಲಿ ತರುವ ದೃಢ ನಿಶ್ಚಯವನ್ನೂ ಮಾಡಲಾಯಿತು. ಪ್ರಧಾನಿ ನೆಹರೂರವರು ಇದರ ಆವಶ್ಯಕತೆಯನ್ನು ಬಲವತ್ತರವಾಗಿ ಪ್ರತಿಪಾದಿಸಿದರು. ಅಂತೂ ಗೊತ್ತುವಳಿಯು ಸ್ವೀಕಾರವಾಯಿತು. ಆದರೆ, ದೇಶದ ಹೆಚ್ಚಿನ ಜನರ ಉತ್ಪನ್ನ ಪೇಟೆವೆನಿಸಿದ ಕೃಷಿಕ್ಷೇತ್ರದಲ್ಲಿ ಆಧಾಯದ ಪರಿಮಿತಿಯನ್ನು ನಿರ್ಧರಿಸುವಾಗ ವೇತನ ಹಾಗೂ ಇತರ ಆದಾಯಗಳ ಮೇಲೆಯೂ ಅತ್ಯಧಿಕ ಮಿತಿಯನ್ನು ಹೇರುವುದೂ ಅಗತ್ಯವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಜನತೆಯ ಜೀವನವು ಸುಗಮವೂ ಸುಖಪ್ರದವೂ ಆಗಬೇಕಾದರೆ, ಕೇವಲ ಆಧಾಯದ ಮೇಲೆ ಮಿತಿ ಹೇರಿದರೆ ಪ್ರಯೋಜನವಿಲ್ಲ. ಜನ ಸಾಮಾನ್ಯರೂ ಸುಯೋಗ್ಯವಾಗಿ ಜೀವನ ನಿರ್ವಹಿಸಲು ಆಹಾರಾದಿ ಆವಶ್ಯಕ ಪದಾರ್ಥಗಳ ಬೆಲೆಯನ್ನೂ ನಿರ್ದಿಷ್ಟಗೊಳಿಸ ಬೇಕಾಗುತ್ತದೆ. ಕೃಷಿಯ ಉತ್ಪನ್ನಗಳನ್ನೇ ಹೊಂದಿಕೊಂಡು ತಮ್ಮ ಕುಟುಂಬಭರಣೆಯನ್ನು ಮಾಡುತ್ತಿರುವವರಿಗೆ ಸದ್ಯದ ಭೂಸುಧಾರಣಾ ಶಾಸನಗಳಿಂದ ಕಷ್ಟವಾಗಿ ಪರಿಣಮಿಸುವುದು ಅಸಾಧ್ಯವೇನಲ್ಲ. ಆದರೆ, ಸದ್ಯದ ಅಧಿವೇಶನವು ಇಂತಹ ಸುಧಾರಣೆಯನ್ನು ಒತ್ತಾಯಪೂರ್ವಕವಾಗಿ ತರುವಂತೆ ಪ್ರೇರೇಪಿಸುತ್ತದೆ. ಗ್ರಾಮ ಪಂಚಾಯತಿ, ಸಹಕಾರ ಸಂಘ ಮೊದಲಾದುವುಗಳ ನಾಯಕತನದಲ್ಲಿ ಭೂಸುಧಾರಣೆಯ ವ್ಯಾಜದಿಂದ ಭೂಮಾಲಿಕರಿಂದ ಪಡೆದ ಭೂಮಿಯನ್ನು ಸಾಗುಮಾಡುವುದಾದರೆ, ಅದರಿಂದ ಈ ಸುಧಾರಣೆಯ ಮೂಲೋದ್ದೇಶವಾದ ಅಧಿಕ ಆಹಾರೋತ್ಪಾದನೆಯ ಉಳುವವನೇ ಹೊಲದೊಡೆಯನೆಂಬ ಗುರಿಯು ಪೂರ್ಣಗೊಳ್ಳುವುದು ಸಾಧ್ಯವೆ? ಕಮ್ಯುನಿಸ್ಟ್ ಚೀನದಂತಹ ಸಾಮ್ಯವಾದೀ ರಾಷ್ಟ್ರದಲ್ಲಿಯೂ ಸಹಕಾರಿ ವ್ಯವಸಾಯ ಪದ್ಧತಿಯು ಸಂಪೂರ್ಣ ನಿಷ್ಫಲವಾಗಿ ಪರಿಣಮಿಸಿವೆಯೆಂಬ ಅಭಿಪ್ರಾಯಗಳು ಕೇಳಿಬರುತ್ತಿವೆ. ಹಾಗಿರುವಾಗ, ನಮ್ಮ ದೇಶದಲ್ಲಿ ಅದರಿಂದ ಗುರಿಸಾಧಿಸುವುದು ಸಾಧ್ಯವೆಂದು ನಂಬಿದರೆ ದಿಟ್ಟತನವಾಗದುಳಿಯುವುದು ಸಾಧ್ಯವೆ? ಈ ದೃಷ್ಟಿಯಿಂದ ಅಭಯಂಕರ ನಗರದ ಅಧಿವೇಶನವು ರಾಷ್ಟ್ರದ ಭವಿಷ್ಯವನ್ನು ಭಯಂಕರ ರೂಪಕ್ಕಿಳಿಸುತ್ತಿದೆಯೇ ಎಂಬ ಸಂದೇಹ ಹುಟ್ಟುತ್ತದೆ.

ದೇಶದ ಅಭಿವೃದ್ಧಿಗಾಗಿ ಯೋಜನೆಗಳನ್ನು ತಯಾರಿಸಲಾಗಿವೆ. ಇವುಗಳಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯು ಪೂರ್ಣವಾಗುತ್ತ ಬರುತ್ತಿದೆ. ಈಗ ತೃತೀಯ ಯೋಜನೆಯ ರೂಪರೇಷೆಗಳನ್ನು ತಯಾರಿಸಲಾಗುತ್ತಿದೆ. ಈ ದ್ವಿತೀಯ ಯೋಜನೆಯೂ ಮಹತ್ವಪೂರ್ಣವಾಗಿದ್ದು ಕೇವಲ ಮಹತ್ವಾಕಾಂಕ್ಷೆಯಿಂದ ಕೂಡಿದೆಯೆಂಬ ಅಭಿಪ್ರಾಯವು ಬರುತ್ತಿದೆ. ಹಾಗೆಯೇ ತೃತೀಯ ಯೋಜನೆಯು ಇದಕ್ಕಿಂತಲೂ ದೊಡ್ಡದಿದ್ದು ಅದನ್ನು ಪೂರ್ಣಗೊಳಿಸಲು ಸುಮಾರು ೧೦ ಸಾವಿರ ಕೋಟಿ ರೂಪಾಯಿಗಳು ಬೇಕಾಗಬಹುದು. ಸ್ವದೇಶೀಯ ಸಂಪತ್ತನ್ನು ಹೆಚ್ಚಾಗಿ ಬಳಸಿಕೊಳ್ಳಬೇಕೆಂಬ ಮಾತಿಗೆ ಬೆಂಬಲ ದೊರೆತುದು ಸ್ವಾಭಾವಿಕ. ಆದರೆ ದ್ವಿತೀಯ ಯೋಜನೆಯನ್ನೇ ಪೂರ್ಣಗೊಳಿಸಲು ಹಣ ಮೇಳದಿದಿರು ನೋಡುತ್ತಿರುವಾಗ ಮೂರನೆಯದು ಕೈಗೆನಿಲುಕುವುದು ಇನ್ನೂ ಪ್ರಯಾಸ. ಅಂತಹ ಸಮಾಜವಾದಿ ವಿಧಾನ ಸಹಿತವಾದ ಮತ್ತು ಔದ್ಯಮಿಕ ಕ್ರಾಂತಿಯನುಂಟುಮಾಡುವಲ್ಲಿ ಮುಂದಾಗುವ ಯೋಜನೆಯನು ಕೈಗೊಂಡು ಅಪಾರ ಪರಿಶ್ರಮ ಮತ್ತು ಅವಿರತ ಕಾರ್ಯದ ಮೂಲಕ ಮುಂದೊತ್ತುವ ನಿರ್ಣಯ ಈ ಅಧಿವೇಶನದಲ್ಲಾದುದು ನಿರೀಕ್ಷಿತವೇ ಸರಿ

ಇನ್ನು ಭಾರತದ ವಿದೇಶ ನೀತಿಯ ಬಗ್ಗೆ ಗೊತ್ತುವಳಿಯು ಸ್ವೀಕೃತವಾದರೂ, ಈ ನೀತಿಯು ಈಗ ಅನುಸರಿಸಲಾಗುತ್ತಿರುವ ಮತ್ತು ಪಂಚಶೀಲಗಳ ಆಧಾರದ ಮೇಲೆ ರೂಪಿಸಲ್ಪಟ್ಟಿರುವ ನೀತಿಯಿಂದ ಬೇರೆಯಾಗಿಲ್ಲ. ಇದುವರೆಗೆ ನಡೆಯುತ್ತ ಬಂದುದನ್ನೇ ಈ ಸಲವೂ ಒತ್ತಿ ಹೇಳಲಾಯಿತಷ್ಟೆ

ಈಯೆಲ್ಲ ದೃಷ್ಟಿಯಿಂದ ನೋಡುವಾಗ ಆ ಬಗ್ಗೆ ಅಧಿವೇಶನಕ್ಕೆ ಮೊದಲೇ ಕಾಂಗ್ರೆಸ್ ವರಿಷ್ಠ ವಲಯಗಳಿಂದ ಮುಂದೆ ಬಂದಿದ್ದ ಅಭಿಪ್ರಾಯಗಳೇ ಈ ಅಧಿವೇಶನದ ಅನುಮತಿಯ ಮುದ್ರೆಯನ್ನು ಪಡೆದುವು. ಆ ಹಿಂದೆ ನಿರೀಕ್ಷಿಸಿದಂತೆಯೇ ಸಮ್ಮೇಳನವು ನಡೆಯಿತು. ಯಾವ ವಿಶೇಷ "ಮಹತ್ವಪೂರ್ಣ" ಗೊತ್ತುವಳಿಯು ಸ್ವೀಕಾರವಾಗದೆ ಹಳೆಯ ಮಾತಾಗಿ ಪರಿಣಮಿಸಿರುವುವುಗಳೇ ಸ್ಥಿರೀಕರಿಸಿ ಸ್ಪಷ್ಟೀಕರಿಸಲ್ಪಟ್ಟುವೆಂದು ಹೇಳಬಹುದು. ಇದಕ್ಕೆ ಕಾರಣಗಳು ಬೇರೆ ಹಲವಾರು ಇರಬಹುದು ಆದರೂ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಯು ಪಡೆದಷ್ಟು ಮನ್ನಣೆಯನ್ನು ಉಳಿದ ವಿಷಯಗಳು ಪಡೆಯದೆ ಸಾಂಗವಾಗಿ ಮುಂದುವರಿದುವು ಎಂದೇ ಹೇಳ ಬೇಕಾಗಿದೆ. ಅಂತೂ ಅಭಯಂಕರ ನಗರದ ಅಧಿವೇಶನದ ಫಲಶ್ರುತಿಯು ಹಳಸಲೇ ಆಗಿರುವುದರಿಂದ ಅಭಯಂಕರವೆಂದೇ ತಿಳಿಯಬಹುದು.

ಸಂಕ್ಷಿಪ್ತ ಸುದ್ದಿಗಳು

ಸಮೀಕರಣ ಸಮಿತಿಯ ವರದಿ

ವಿಶ್ವವಿದ್ಯಾಲಯ ಶಿಕ್ಷಣ ಸಮೀಕರಣ ಸಮಿತಿಯು ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೂಲಂಕಷವಾಗಿ ಚರ್ಚಿಸಿ ಶಿಕ್ಷಣ ಸುಧಾರಣೆಗೆ ಹಲವಾರು ಸಲಹೆ ಸೂಚನೆಗಳನ್ನಿತ್ತಿದೆ. ಮದ್ರಾಸು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ಎ. ಲಕ್ಷ್ಮಣಸ್ವಾಮಿ ಮುದಲಿಯಾರರು ಈ ಸಮಿತಿಯ ಅಧ್ಯಕ್ಷರಾಗಿದ್ದರು.

ಸದ್ಯಕ್ಕೆ ಮೈಸೂರು ವಿಶ್ವವಿದ್ಯಾಲಯದ ಆಡಳಿತೆಯಲ್ಲಿರುವ ವಿಜ್ಞಾನ ಮತ್ತು ಕಲಾ ಕಾಲೇಜುಗಳನ್ನು ರಾಜ್ಯ ಸರಕಾರವು ವಹಿಸಿಕೊಂಡು, ಸಲಹಾಸಮಿತಿಗಳ ಮೂಲಕ ಅವನ್ನು ಸರಕಾರೀ ಕಾಲೇಜುಗಳೆಂದು ನಡೆಸಿಕೊಂಡು ಹೋಗಬೇಕು ಎಂಬುದು ಪ್ರಮುಖ ಅಭಿಪ್ರಾಯವಾಗಿದೆ. ಸ್ನಾತಕೋತ್ತರ ಶಿಕ್ಷಣದ ಕಡೆಗೆ ಎರಡೂ ವಿಶ್ವವಿದ್ಯಾಲಯಗಳು ಗಮನವೀಯಬೇಕು. ದಕ್ಷಿಣಕನ್ನಡ ಮತ್ತು ಹೈದರಬಾದ ಕರ್ನಾಟಕದ ಕಾಲೇಜುಗಳನ್ನು ಅಂತಿಮವಾಗಿ ಸೇರ್ಪಡಿಸುವಾಗ ಜಿಲ್ಲೆಯನ್ನು ಘಟಕವಾಗಿಟ್ಟುಕೊಂಡು ಆಯಾ ವಿಶ್ವವಿದ್ಯಾಲಯಗಳ ಕೇಂದ್ರಸ್ಥಳಗಳಿಗೆ ಭೌಗೋಲಿಕ ಸಾಮಿಪ್ಯ ಸಂಪರ್ಕವನ್ನು ಗಮನಿಸಬೇಕು; ವಿಶ್ವವಿದ್ಯಾಲಯ ಶಿಕ್ಷಕದ ಮೇಲ್ವಿಚಾರಣೆಯ ಬಗ್ಗೆ ಪ್ರತ್ಯೇಕ ಡೈರೆಕ್ಟರರ ನೇಮಕವಾಗಬೇಕು, ಹಿಂದುಳಿದವರಿಗೆ ಸಂರಕ್ಷಣೆ ನೀಡುವುದು ಅಗತ್ಯವಾದರೂ ಸಮಾಜವು ಮುಂದುವರಿಯುತ್ತಾ ಹೋದಂತೆ ಹಿಂದುಳಿದ ವರ್ಗಗಳ ಪರಿಶೀಲನೆ ನಡೆಯಬೇಕು ಎಂದು ಮುಂತಾಗಿ ವರದಿಯಲ್ಲಿ ಹೇಳಲಾಗಿದೆ.

ಹೊಸ ಆಸ್ಪತ್ರೆಗಳು

ಮೈಸೂರು ಸರಕಾರವು ಈ ವರ್ಷದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಒಟ್ಟು ೧೮ ಹೊಸ ದವಾಖಾನೆಗಳನ್ನು ತೆರೆಯಲು ನಿಶ್ಚಯಿಸಿ ಅದಕ್ಕೆ ತನ್ನ ಅಂತಿಮ ಮಂಜೂರಾತಿಯನ್ನು ಇತ್ತಿದೆ. ಈ ಯೋಜನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯ ಹುಸನೇಮಕ್ಕಿ ಮತ್ತು ಹೆಗ್ಗುಂಬಗಳಲ್ಲಿ ಹೊಸತಾಗಿ ಸರಕಾರದ ಆಸ್ಪತ್ರೆಗಳು ಪ್ರಾರಂಭವಾಗಲಿರುವುವು ಎಂದು ತಿಳಿದು ಬರುತ್ತದೆ.

ನಿರುದ್ಯೋಗ ಪ್ರಶ್ನೆ ಕಾಡುತ್ತಿದೆ

ಭಾರತದ ಎರಡು ಪಂಚವಾರ್ಷಿಕ ಯೋಜನೆಗಳ ಫಲವಾಗಿ ಒದಗಿದ ಉದ್ಯೋಗಾವಕಾಶಗಳಿಂದಾಗಿ ನಿರುದ್ಯೋಗಿಗಳ ಸಂಖ್ಯೆಯು ತಗ್ಗಿರುವುವಾದರೂ ರಾಷ್ಟ್ರದಲ್ಲಿ ದಿನದಿನಕ್ಕೆ ಹೆಚ್ಚುತ್ತಿರುವ ಕೆಲಸಗಾರರ ಸಂಖ್ಯೆಗನುಗುಣವಾಗಿ ನೌಕರಿ ಸ್ಥಳಗಳು ನಿರ್ಮಾಣವಾಗುತ್ತಿಲ್ಲ ಎಂದು ರಾಷ್ಟ್ರೀಯ ಉದ್ಯೋಗ ಸಮಿತಿಯು ಪರಿಶೀಲನೆಯಿಂದ ಕಂಡುಬಂದಿದೆ. ಕಳೆದ ಐದು ವರ್ಷಾವಧಿಯಲ್ಲಿ ಉದ್ಯೋಗಾರ್ಥಿಗಳ ಸಂಖ್ಯೆಯು ಪ್ರತಿ ವರ್ಷವೂ ಹೆಚ್ಚುತ್ತ ಬಂದಿರುವುದೆಂದೂ, ನೌಕರಿಯ ಸ್ಥಳಗಳೂ ಹೆಚ್ಚಾಗಿದ್ದರೂ ಸರಾಸರಿ ನೂರು ನೌಕರಿ ಸ್ಥಾನಗಳಿಗೆ ಎರಡು ಸಾವಿರ ಅರ್ಜಿಗಳು ಬರುತ್ತಿವೆಯೆಂದೂ ತಿಳಿದುಬಂದಿದೆ.

ಪ್ರಾಧಾನಿ ಜ| ಡಿಗಾಲೆ

ಫ್ರಾನ್ಸಿನ ಸರ್ವಾಧಿಕಾರಿಯಾಗಿ ವಿಶ್ವವಿಖ್ಯಾತರಾದ ಜ| ಡಿಗಾಲೆಯವರು ಫ್ರೆಂಚ ಪ್ರಧಾನಿಯಾಗಿ ಆರಿಸಿಬಂದಿದ್ದರು. ಈಗ ಅವರು ಪ್ರಧಾನಿಯ ಪಟ್ಟವನ್ನು ಕ್ರಮಬದ್ಧವಾಗಿ ಸ್ವೀಕರಿಸಿದರು. ಆಪತ್ತಿನಿಂದ ರಾಷ್ಟ್ರವನ್ನು ಉಳಿಸಿದ ಮಹಾಧೀರನೆಂಬ ಉಪನಾಮದಿಂದ ಅವರನ್ನು ಫ್ರೆಂಚ ಜನತೆ ಗೌರವಿಸಿತು. ಈ ಪ್ರಧಾನಿ ಪಟ್ಟವೂ ಅಂತಹ ದೇಶಪ್ರೇಮಿ ವೀರನಿಗೆ ರಾಷ್ಟ್ರದ ಜನತೆಯು ತಮ್ಮನ್ನುಳಿಸಿದುದಕ್ಕೆ ಪ್ರತಿಯಾಗಿ ಇತ್ತ ಸನ್ಮಾನವೆಂದೂ ಹೇಳಬಹುದು.

ನವಯುಗ ಪ್ರಜಾರಾಜ್ಯ

ವಿಶೇಷ ಸಂಚಿಕೆಯು

ಎಂದಿನಂತೆ ಕರ್ನಾಟಕದ ಸುಪ್ರಸಿದ್ಧ ಲೇಖಕರನೇಕರ ಲೇಖನ, ಕತೆ, ಕವನಗಳಿಂದ ಕೂಡಿ ಪ್ರಕಟವಾಗುವುದು.

ಈ ಸಂಬಂಧ ತಾ22-1-59ರ ಸಂಚಿಕೆಯನ್ನು ನಿಲ್ಲಿಸಲಾಗಿದೆ. ಅನಂತರದ ಸಂಚಿಕೆಯು ವಿಶೇಷ ಸಂಚಿಕೆಯಾಗಿ ಸಕಾಲದಲ್ಲಿ ವಾಚಕರ ಕೈಸೇರುವುದು. ವಾಚಕರು ಗಮನಿಸಬೇಕಾಗಿ ವಿನಂತಿ.

ಅಲ್ಲಲ್ಲಿಯ ಸುದ್ದಿಸಾರ

ಮಂಗಳೂರಲ್ಲಿ ಕಂದಾಯ ಸಚಿವರು—ಮೈಸೂರಿನ ಕಂದಾಯ ಸಚಿವ ಶ್ರೀ ಕಡಿದಾಳ ಮಂಜಪ್ಪನವರು ತಾ೨ರಂದು ಮಂಗಳೂರಿಗೆ ಆಗಮಿಸಿದರು. ಕಿರು ಪ್ರವಾಸಿ ಬಂಗ್ಲೆಯಲ್ಲಿ ದ.ಕ.ಜಿಲ್ಲಾ ಭೂಮಾಲಕ ಸಂಘದ ಪ್ರತಿನಿಧಿಗಳು ಮತ್ತು ಜಿಲ್ಲೆಯ ಅಳಿಯ ಸಂತಾನಿಗ ಮಹಿಳೆಯರ ಪ್ರತಿನಿಧಿಗಳು ಭೇಟಿಯಾಗಿ ಮೈಸೂರು ಭೂ ಶಾಸನ ಮಸೂದೆ 1958ರ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ದ. ಕ. ಜಿಲ್ಲೆಯಲ್ಲಿ ಜ್ಯಾರಿಯಲ್ಲಿರುವ ವಿಶಿಷ್ಟ ಪದ್ಧತಿಗಳು, ಅಳಿಯಸಂತಾನ ಪದ್ಧತಿ, ನ್ಯಾಯಗೇಣಿ, ನ್ಯಾಯಪರಿಹಾರ, ಭೂಪರಿಮಿತಿ ಮೊದಲಾದ ವಿಷಯಗಳ ಕಡೆಗೆ ಮಂತ್ರಿಗಳ ಗಮನ ಸೆಳೆಯಲಾಯಿತು.

ಶ್ರೀಗಳಾದ ಎನ್. ಎಮ್. ಅದ್ಯಂತಾಯ, ಎಚ್. ದಾಸಣ್ಣ ಆಳ್ವ, ಎಮ್. ಕೆ. ದೇವರಾಜ್, ಪಿ. ವಾಸುದೇವರಾವ್, ಎ ಎಲ್. ಪಿಂಟೊ, ಎಮ್ ಎನ್. ಚೌಟ, ಜಯರಾಮ ಸೆಟ್ಟಿ, ಸುಂದರರಾಮ ಸೆಟ್ಟಿ, ಬಿ ಮಂಜಯ್ಯ ಹೆಗ್ಡೆ, ಕೃಷ್ಣ ಭಟ್, ಎಮ್. ಶಂಕರನಾರಾಯಣ ಭಟ್ ಕೆ. ಸೂರ್ಯನಾರಾಯಣ ಅಡಿಗ, ಯು. ಮಂಜಪ್ಪ ಮತ್ತು ಶ್ರೀಮತಿಯರಾದ ಕಮಲಆಳ್ವ, ಕಲ್ಯಾಣಿ ಸೆಟ್ಟಿ, ಕೌಸಲ್ಯಾ ಸೆಟ್ಟಿ, ಸರಲಾದೇವಿ, ಗಿರಿಜಾ ನಾಯಕ್, ಸರಸ್ವತಿ ಆಳ್ವ, ಸುಮತಿ ಎಸ್. ನಾಯಕ್, ಪುಷ್ಪ ಭಂಡಾರಿಯವರು ಸಚಿವರನ್ನು ಭೇಟಿಯಾದವರಲ್ಲಿ ಪ್ರಮುಖರಿರುವರು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕಂದಾಯ ಸಚಿವರು ಮಾತನಾಡುತ್ತಾ, ಉಳುವವನೇ ನೆಲದೊಡೆಯನಾಗಬೇಕೆಂಬ ಧ್ಯೇಯವನ್ನಿಟ್ಟುಕೊಂಡಿರುವ ಕಾಂಗ್ರೆಸ್ ಸಂಸ್ಥೆ, ಆದರ್ಶಾನುಗುಣವಾಗಿ ಭೂಸುಧಾರಣಾ ಕಾನೂನನ್ನು ಮುಂದೆ ತರುವುದಕ್ಕೆ ಎಂದಿಗೂ ಹಿಂಜರಿಯಲಾರದು ಎಂದು ನುಡಿದರು. ಕಾಂಗ್ರೆಸಿಗರು ಸ್ವಾತಂತ್ರ್ಯಪೂರ್ವದಲ್ಲಿ ತಮ್ಮಲ್ಲಿದ್ದ ದೇಶಭಕ್ತಿ, ಸತ್ಯನಿಷ್ಠೆಗಳನ್ನು ಈಗಲೂ ಇರಿಸಿಕೊಳ್ಳಬೇಕೆಂದು ಅವರು ಕಾಂಗ್ರೆಸಿಗರನ್ನು ಕೇಳಿಕೊಂಡರು

ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್. ಅಧ್ಯಕ್ಷ ಶ್ರೀ ಕೆ. ಕೆ. ಸೆಟ್ಟರು ಸ್ವಾಗತಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ಡಾ| ಕೆ. ಬಾಲಪ್ಪ ಸೆಟ್ಟರು ಧನ್ಯವಾದವಿತ್ತರು.

ಹಿರಿಯಡ್ಕದಲ್ಲಿ ಸಚಿವ ಕಡಿದಾಳರು—ತಾ 10ರಂದು ಶ್ರೀ ಕಡಿದಾಳ ಮಂಜಪ್ಪನವರು ಪೂರ್ವಾಹ್ನ ಹಿರಿಯಡಕಕ್ಕೆ ಆಗಮಿಸಿ ಶ್ರೀ ವೀರಭದ್ರ ಸ್ವಾಮಿ ದರ್ಶನ ಮಾಡಿದರು. ದೇವಸ್ಥಾನದ ಕಡೆಯಿಂದ ಶ್ರೀ ಜಗಂಜೀವನ ಆಳ್ವರೂ, ಕಾಂಗ್ರೆಸ್ ಸಮಿತಿ ಕಡೆಯಿಂದ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರೂ ಸಚಿವರಿಗೆ ಭೂಸಮಸ್ಯೆ ವಿಚಾರದಲ್ಲಿ ಮನವಿಗಳನ್ನಿತ್ತರು. ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಭೂಸಮಸ್ಯೆ ಬಗೆಹರಿಸಬೇಕೆಂಬುವೇ ಸರಕಾರದ ಧ್ಯೇಯವಿರುವುದಾಗಿ ಹೇಳಿದರು. ಡಾ| ಚಂದಯ್ಯ ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

ಮಣಿಪಾಲದಲ್ಲಿ ಮಧ್ಯಾಹ್ನ ಹೊತ್ತಿಗೆ ಕಂದಾಯ ಸಚಿವರು ಬಂದಿಳಿದಾಗ ಡಾ| ಮಾಧವ ಪೈಗಳು ಸ್ವಾಗತ ನೀಡಿದರು. ಅವರ ಗೌರವಾರ್ಥ ಏರ್ಪಡಿಸಲಾದ ಸತ್ಕಾರ ಕೂಟದಲ್ಲಿ ಡಾ| ಪೈಗಳು ಎಕೆಡೆಮಿ ಸಂಸ್ಥೆಯ ಚಟುವಟಿಕೆಗಳನ್ನು ವಿವರಿಸಿದರು. ಆಗುಂಬೆಯನ್ನು ಆರೋಗ್ಯ ಹಾಗೂ ಪ್ರವಾಸೀ ಕೇಂದ್ರವನ್ನಾಗಿ ಮಾರ್ಪಡಿಸಬೇಕೆಂದು ಕೇಳಿಕೊಂಡರು. ಶ್ರೀ ಟಿ. ಎ. ಪೈಗಳು ಮಾತನಾಡುತ್ತಾ, ಭೂಸುಧಾರಣೆಗೆ ಜನರಿನ್ನೂ ಸಿದ್ಧರಿಲ್ಲದುದರಿಂದ ಅಲ್ಲಲ್ಲಿ ವಿರೋಧ ಕಾಣುತ್ತಿದ್ದರೂ ಕೆಲವೊಂದು ಅಡಚಣೆಗಳನ್ನು ದೂರಪಡಿಸಿದರೆ ಮಸೂದೆಯು ನ್ಯಾಯಸಮ್ಮತವಾಗುವುದೆಂದರು. ನಮ್ಮ ಬಡತನವೇ ಮೊದಲಾದ ಕಷ್ಟಗಳಿಗೆ ಜನಸಂಖ್ಯೆಯೇರುತ್ತಿರುವುದೇ ಕಾರಣ ಎಂಬ ಮಾತನ್ನು ಖಂಡಿಸುತ್ತಾ, ಶ್ರೀ ಪೈಗಳು ಕಡೂರು ಕೊಡಗು ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಗಳನ್ನು ಒಂದು ಘಟಕವಾಗಿ ತೆಗೆದುಕೊಂಡರೆ ಇಲ್ಲಿನ ಜನಸಂಖ್ಯೆಯು ಬರೇ 32 ಲಕ್ಷವಾಗಿರುವದು.

ಶ್ರೀ ಕಡಿದಾಳರು ಉತ್ತರಿಸುತ್ತಾ, ಭೂಸುಧಾರಣೆಯನ್ನು ಕಾಂಗ್ರೆಸ್ ವರಿಷ್ಠರು ಹಾಗೂ ಯೋಜನಾ ಆಯೋಗದವರು ನಿರ್ಧರಿಸಿದಂತೆ ದೇಶದ ಮುಂದೆ ಹಲವಾರು ವರ್ಷಗಳಿಂದ ಇಟ್ಟಿದ್ದು ಇಂದು ಬಿಡಿಸಲ್ಪಡುತ್ತಿರುವ ಪ್ರಶ್ನೆಯಾಗಿರುತ್ತದೆ. ಇದರಲ್ಲಿ ದ. ಕ. ಜಿಲ್ಲೆಯ ಅಳಿಯಸಂತಾನ ಹಾಗೂ ಗೈರಹಾಜರಿಯ ಭೂಮಾಲಕರಿಗೆ ಸ್ವಲ್ಪ ಅಡಚಣೆಯಾಗಿರಬಹುದು. ಅದನ್ನು ಬಗೆಹರಿಸಿ ಧನಿ ಒಕ್ಕಲುಗಳಿಗೆ ನ್ಯಾಯ ಜರಗಿಸುವ ರೀತಿಯಲ್ಲಿ ನಿರ್ದಿಷ್ಟ ಮೂಲಭೂತ ನಿಯಮಗಳಿಗೆ ಧಕ್ಕೆಯಾಗದ ರೀತಿಯಲ್ಲಿ ಪರಿಹರಿಸಲ್ಪಡಬೇಕಾಗಿದೆ ಎಂದರು. ಮಣಿಪಾಲದಲ್ಲಿ ನಿಸ್ವಾರ್ಥ ದೃಷ್ಟಿಯಿಂದ ಸರ್ವ ಪ್ರಯತ್ನದಿಂದ ವಿದ್ಯಾಸಂಸ್ಥೆಗಳನ್ನು ಬೆಳೆಸಿ ರಾಷ್ಟ್ರಕ್ಕೆ ದೊಡ್ಡ ಸೇವೆಯನ್ನು ಸಲ್ಲಿಸುತ್ತಿರುವ ಡಾ| ಪೈಗಳನ್ನು ಅಭಿನಂದಿಸಿದರು.

ಮಂಗಳೂರಲ್ಲಿ ಜಿಲ್ಲಾ ಭೂಮಾಲಿಕರ ಸಭೆಯು ತಾ. 11ರಂದು ಬೆಂಟ್ಸ್ ಹೊಸ್ಟೆಲಿನಲ್ಲಿ ಮದ್ರಾಸು, ಮೈಸೂರುಗಳ ಮಾಜಿ ಮಂತ್ರಿಗಳಾದ ಶ್ರೀ ಎ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀ ಎಮ್ ಕೆ. ದೇವರಾಜರಿಂದ ಅಧ್ಯಕ್ಷರ ಸೂಚನೆಯಾದ ಬಳಿಕ ಸಂಘದ ಅಧ್ಯಕ್ಷ ಶ್ರೀ ಎನ್. ಎಮ್. ಅದ್ಯಂತಾಯರು ಸ್ವಾಗತ ಭಾಷಣ ಮಾಡುತ್ತಾ, ಈ ಭೂಸುಧಾರಣಾ ಮಸೂದೆಯಿಂದಾಗಿ ಹೆಚ್ಚಿಗೆ ಆಹಾರ ಉತ್ಪಾದನೆಯಾಗುವ ಬದಲು ಆಹಾರ ಉತ್ಪಾದನೆ ಕಡಿಮೆಯಾಗುವುದೆಂದರು. ಶ್ರೀಗಳಾದ ಕೆ. ಬಾಲಕೃಷ್ಣ ರಾವ್, ಎಮ್. ಎಲ್. ಸಿ. ಬಿ. ಜನಂಜ ಹೆಗ್ಡೆ, ಎನ್. ಕೃಷ್ಣ ಭಟ್, ಎಚ್. ದಾಸಣ್ಣ ಆಳ್ವ, ಬಿ. ವಾಸುದೇವ ರಾವ್, ಎಮ್. ಶಂಕರನಾರಾಯಣ ಭಟ್, ಯು. ಸಿ. ಎಸ್. ಭಟ್, ಸುಂದರರಾಮ ಸೆಟ್ಟಿ ಮೊದಲಾದವರು ಭೂಮಾಲಿಕರ ವಿವಿಧ ರೀತಿಯ ಸಮಸ್ಯೆಗಳನ್ನು ವಿವರಿಸಿದರು.

ಶ್ರೀ ಎ ಬಿ ಸೆಟ್ಟರು ಮಾತನಾಡುತ್ತಾ, ಮದ್ರಾಸು ರಾಜ್ಯದಿಂದ ಬೇರ್ಪಟ್ಟು ಮೈಸೂರು ರಾಜ್ಯದೊಡನೆ ಸೇರಿದುದು ನಮ್ಮ ಗ್ರಹಚಾರವೆಂದರು. ಮೈಸೂರು ಸರಕಾರವು ಮುಂದೆ ತರಲಿರುವ ಈ ಭೂಸುಧಾರಣೆಯು ಬಹುಜನರ ಅಭಿಪ್ರಾಯಕ್ಕೆ ವಿರೋಧವಾದುದಾಗಿದ್ದು ಇದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾದುದೆಂದರು. ಮೈಸೂರು ಭೂಸುಧಾರಣಾ ಮಸೂದೆಯಿಂದ ಭೂಮಾಲಿಕರಿಗೆ ಸಂಭವಿಸುವ ಸಂಕಷ್ಟಗಳನ್ನು ನಿವಾರಿಸಲೋಸುಗ ಹಲವು ಸೂಚನೆಗಳನ್ನೊಳಗೊಂಡ ಈ ಕೆಳಗಿನ ನಿರ್ಣಯಗಳು ಮಂಜೂರಾದುವು

ಒಕ್ಕಲುತನದ ಭದ್ರತೆ ಮತ್ತು ನ್ಯಾಯಗೇಣಿ ನಿರ್ಣಯವನ್ನು ಮಾತ್ರ ಮಾಡಿದರೆ ಸಾಕು, ಮದ್ರಾಸಿನ ನ್ಯಾಯಗೇಣಿ ಕಾನೂನಿನಂತೆ ನಿರ್ಣಯಿಸಲಾದ ಸೇಕಡಾ 40 ಗೇಣಿಯನ್ನು ಇಲ್ಲಿಯೂ ಮುಂದುವರಿಸಬೇಕು, ವೈಯಕ್ತಿಕ ಸಾಗುವಳಿಗಾಗಿ ಭೂಮಿ ಸಾಗುವಳಿ ಮಾಡುವುದಕ್ಕೆ ಭೂಮಿಯನ್ನು ಹಿಂದಕ್ಕೆ ಪಡೆಯುವುದಕ್ಕೆ ಅನುಮತಿ ನೀಡಬೇಕು ಭೂಮಿಗೆ ಪರಿಮಿತಿಯನ್ನು ಹೊರಿಸುವುದು ಬೇಡ, ಹೊರಿಸುವುದೇ ಆದರೆ ಇನ್ನು ಮುಂದಿನ ಭೂಮಿಯ ಮೇಲೆ ಮಾತ್ರ ಪರಿಮಿತಿ ಹೊರಿಸಬೇಕು. ಒಕ್ಕಲುತನವನ್ನು ರದ್ದುಗೊಳಿಸಿ ಭೂಮಿಯನ್ನು ಒಕ್ಕಲಿಗೆ ಕೊಡುವುದಾದ ಪಕ್ಷದಲ್ಲಿ ಭೂಮಾಲಕರಿಗೆ ಕೊಡುವಂತಹ ಪರಿಹಾರ ಧನವನ್ನು ಸರಿಯಾದ ರೀತಿಯಲ್ಲಿ ಕೊಡಬೇಕು, ಪರಿಮಿತಿಯನ್ನು ಒಂದು ವ್ಯಕ್ತಿಗೆ ರೂಪಾಯಿ 2000/- ಆದಾಯ ಬರುವ ಭೂಮಿ ಎಂದು ಇರಿಸಬೇಕು. ಧಾರ್ಮಿಕ ಸಂಸ್ಥೆಗಳನ್ನು ಭೂಶಾಸನದಿಂದ ವಿರಹಿತಗೊಳಿಸಬೇಕು.

ಮೈಸೂರು ಭೂಸುಧಾರಣಾ ಮಸೂದೆ 1958 ತಕ್ಕ ತಿದ್ದುಪಡಿಗಳನ್ನು ಸೂಚಿಸುವರೆ ಶ್ರೀಗಳಾದ ಎ. ಬಿ ಸೆಟ್ಟಿ, ಪಿ. ವಾಸುದೇವ ರಾವ್, ಎಚ್. ಡಿ. ಆಳ್ವ, ಕೆ.ಬಿ. ಜಿನರಾಜ ಹೆಗ್ಡೆ, ಎನ್ ಕೃಷ್ಣ ಭಟ್, ಸುಂದರ ರಾಮ ಸೆಟ್ಟಿ, ರಾಮರಾಯ ಶ್ಯಾನುಭಾಗ್, ಬಿ. ಶೀನಪ್ಪ ಹೆಗ್ಡೆ, ಎನ್. ಎಮ್. ಅದ್ಯಂತಾಯ ಎಮ್. ಎಸ್ ಭಟ್ಟರಿರುವ ಸಮಿತಿ ರಚಿಸಲಾಯಿತು.

ಡಿಸ್ಟ್ರಿಕ್ಟ್ ಬೋರ್ಡ್ ಉಪಚುನಾವಣೆ—ಹಿರಿಯಡಕ, ಡಿಸ್ಟ್ರಿಕ್ಟ್ ಬೋರ್ಡು ಮತದಾರರ ಸದಸ್ಯ ಡಾ. ಕೆ. ಕೆ. ಹೆಗ್ಡೆಯವರು ರಾಜಿನಾಮೆಯಿತ್ತುದರಿಂದ ಅವರ ಸ್ಥಾನದಲ್ಲಿ ಶ್ರೀ ಹಿರೆಬೆಟ್ಟು ಸದಾಶಿವ ಹೆಗ್ಡೆಯವರು ಅವಿರೋಧವಾಗಿ ಆಯ್ಕೆಗೊಂಡರು. ಶ್ರೀ ಹೆಗ್ಡೆಯವರೊಡನೆ ನಾಮಪತ್ರ ಸಲ್ಲಿಸಿದ ಇತರ ನಾಲ್ವರು ಉಮೇದ್ವಾರರು ತಮ್ಮ ನಾಮಪತ್ರಗಳನ್ನು ಹಿಂತೆಗೆದರು.

ನಿಧನ—ಬಂಟಕಲ್ಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸ್ಥಾಪಕ ಹಾಗೂ ರಾಜಾಪುರ ಸಾರಸ್ವತ ಬ್ರಾಹ್ಮಣ ಸಮಾಜದ ಮುಂದಾಳುಗಳೊಬ್ಬರೂ ಆದ ಶ್ರೀ ನೀರೆ ಶ್ಯಾಮನಾಯಕರು ಇದೇ ತಾ 12ರಂದು ತಮ್ಮ 72ನೆ ವಯಸ್ಸಿನಲ್ಲಿ ಪರಲೋಕ ವಾಸಿಗಳಾದುದು ವಿಷಾದಕರವಿದೆ.

ನಗರ ಸಭಾ ಚುನಾವಣೆ

ಉಡುಪಿ ಮತ್ತು ಮಂಗಳೂರು ನಗರ ಸಭೆಗಳಿಗೆ ನೂತನ ಸದಸ್ಯರನ್ನಾರಿಸುವ ಸಲುವಾಗಿ ಇದೇ ತಿಂಗಳ ೨೮ರಂದು ಚುನಾವಣೆ ನಡೆಯುವುದು. ಇದರಲ್ಲಿ, ಮಂಗಳೂರಲ್ಲಿ ವಿವಿಧ ರಾಜಕೀಯ ಪಕ್ಷಗಳು ಪಕ್ಷದ ಬೆಂಬಲ ಮತ್ತು ಹೆಸರಿನಿಂದ ಸ್ಪರ್ಧಿಸುತ್ತವೆಯಾದರೂ ಉಡುಪಿಯಲ್ಲಿ ಜನಸಂಘ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಮಾತ್ರ ಪಕ್ಷದ ಹೆಸರಿನಿಂದ ಸ್ಪರ್ಧಿಸುತ್ತವೆ. ಕಾಂಗ್ರೆಸ್ಸು ಪಕ್ಷವಾಗಿ ಸ್ಪರ್ಧಿಸುವುದನ್ನು ಬಿಟ್ಟು ನಗರದ ಹಿತಚಿಂತನೆಯನ್ನು ಯೋಗ್ಯ ರೀತಿಯಲ್ಲಿ ಮುನ್ನಡೆಸುವರೆಂದು ನಂಬಿ, ಕೆಲವು ಸ್ಪರ್ಧಾಳುಗಳಿಗೆ ತನ್ನ ಬೆಂಬಲವನ್ನು ನೀಡುವ ನಿರ್ಧಾರ ಮಾಡಿದೆ. ಆ ಮೇರೆಗೆ ಪ್ರಬಲ ರಾಜಕೀಯ ಪಕ್ಷವಾದ ಕಾಂಗ್ರೆಸ್ಸು ಸಮರ್ಥ ವ್ಯಕ್ತಿಗಳಿಗೇನೇ ಬೆಂಬಲ ನೀಡಿರುವುದರಿಂದ ನಗರದ ಕ್ಷೇಮವನ್ನೂ ಸುವ್ಯವಸ್ಥೆಯನ್ನೂ ಆದರ್ಶ ಆಡಳಿತೆಯನ್ನೂ ಬಯಸುವವರು ಇವರನ್ನೇ ತಂತಮ್ಮ ವಾರ್ಡಿನ ನಗರಸಭಾ ಸದಸ್ಯರನ್ನಾಗಿ ಆರಿಸಿ ನಗರಾಭಿವೃದ್ಧಿಗೆ ನೆರವಾಗಬೇಕು.

೧. ಗುಂಡಿಬೈಲು—ಶ್ರೀ ಆರ್. ಆರ್. ಕುಂಜೂರು ೨. ಕಡಿಯಾಳಿ—ಶ್ರೀ ಅಮ್ಮುಂಜೆ ನಾರಾಯಣ ನಾಯಕ್. ೩. ಕುಂಜಿಬೆಟ್ಟು—ಶ್ರೀ ಪಿ. ಎನ್. ಕೃಷ್ಣಮೂರ್ತಿ ರಾವ್. ೪ ಟೆಂಪಲ್—ಡಾ| ಪಿ.ಜಿ. ಆಚಾರ್ ೫. ವಡಿಯಾಡಿ—ಶ್ರೀ ಟಿ. ಶ್ರೀಪತಿ. ೬. ತೆಂಕಪೇಟೆ—ಶ್ರೀ ಪಿ. ರಂಗನಾಥ ಶೆಣೈ. ೭. ಸೆಂಟ್ರಲ್—ಡಾ| ಕೆ ಎಲ್. ಐತಾಳ ೮. ಸಿರಿಬೀಡು—ಶ್ರೀ ಎ ಜೆ. ಆಲ್ವೆ ೯. ಮೂಡನಿಡಂಬೂರು. ಶ್ರೀ ಯು ಶ್ರೀನಿವಾಸ ರಾವ್ ೧೦. ಬನ್ನಂಜೆ—ಶ್ರೀ ಪಿ. ಶೀನಸೆಟ್ಟಿ ೧೧ ಅಂಬಲಪಾಡಿ—ಶ್ರೀ ಇರ್ವಿನ್ ಅಂದ್ರಾದೆ ೧೨. ಕನ್ನರ್ಪಾಡಿ—ಶ್ರೀ ಸಂಜೀವ ಸೆಟ್ಟಿಗಾರ ೧೩. ಕಿನ್ನಿಮೂಲ್ಕಿ ಶ್ರೀ ಓ. ಮೈಕಲ ೧೪ ಬೈಲೂರು—ಶ್ರೀ ಎಚ್. ವೆಂಕಟೇಶನಾಯಕ್ ೧೫. ಕಾಡಬೆಟ್ಟು—ಶ್ರೀ ಟಿ. ಎ. ವಾಸುದೇವನ್ (ಸಾಮಾನ್ಯ ಸ್ಥಾನ) ಮತ್ತು ಶ್ರೀ ಬಿಳಿಯ (ಕಾದಿಟ್ಟ ಸ್ಥಾನ)೧೬. ಅಜ್ಜರಕಾಡು—ಶ್ರೀಮತಿ ಆರ್. ಫೆರ್ನಾಂಡೀಸ್ (ಕಾದಿಟ್ಟ ಸ್ಥಾನ) ಮತ್ತು ಶ್ರೀ ಕೆ. ಆನಂದ ಸೆಟ್ಟಿ (ಸಾಮಾನ್ಯ ಸ್ಥಾನ.)

ಗೀತಾಭವನಂ, ಅಂಬಲಪಾಡಿ, ಉಡುಪಿ—ಇದರ ೫ನೆಯ ವರ್ಷಕ್ಕೆ ಶ್ರೀ ಬಿ. ಅಣ್ಣಾಜಿ ಬಲ್ಲಾಳರು ಅಧ್ಯಕ್ಷರಾಗಿಯೂ ಶ್ರೀ ಕೆ. ಎಲ್. ಎನ್. ಉಪಾಧ್ಯಾಯರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಎಸ್. ಗೋಪೀಚಂದ ರಾವ್ ಮತ್ತು ಬಿ. ಶ್ರೀಶಬಲ್ಲಾಳರು ಜತೆ ಕಾರ್ಯದರ್ಶಿಗಳಾಗಿಯೂ ಶ್ರೀ ಎ. ಕೃಷ್ಣರಾಯರು ಕೋಶಾಧಿಕಾರಿಗಳಾಗಿಯೂ ಶ್ರೀಗಳಾದ ಎ ಸುಬ್ರಾಯ ಆಚಾರ್ಯ, ಎ. ವರದರಾಜ ಬಲ್ಲಾಳ ಕೆ ಎ. ದೇವದಾಸ, ಎ. ಮುಕ್ಯಪ್ರಾಣ ಉಪಾಧ್ಯಾಯ ಮತ್ತು ಬಿ. ಶ್ರೀನಿವಾಸ ಬಲ್ಲಾಳರು ಕಾರ್ಯಕಾರೀ ಸಮಿತಿಯ ಸದಸ್ಯರಾಗಿಯೂ ಆರಿಸಿ ಬಂದಿರುವರು.

ಅಜೆಕಾರಿನಲ್ಲಿ ಗ್ರಾಮ ನೈರ್ಮಲ್ಯ ದಿನಾಚರಣೆ ಮತ್ತು ಆರೋಗ್ಯ ಪ್ರದರ್ಶನವು ತಾ೪ರಂದು ಹಿರಿಯಪ್ರಾಥಮಿಕ ಶಾಲೆಯಲ್ಲಿ ರೆ| ಫಾ| ಎಸ್. ಫೆರ್ನಾಂಡಿಸರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಸ್. ಲೋಕನಸೆಟ್ಟರು ಧ್ವಜಾರೋಹಣ ಮಾಡಿದರು. ಜಿಲ್ಲಾ ಬೋರ್ಡು ಸದಸ್ಯ ಡಾ| ಯು ಕೃಷ್ಣನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ, ಶ್ರೀ ಕೆ ಗೋಪಾಲ ಸೆಟ್ಟರಿಂದ ಸ್ವಾಗತಭಾಷಣವಾಯಿತು. ನಂತರ ಆರೋಗ್ಯಾಧಿಕಾರಿ ಶ್ರೀ ಬಿ ನಾರಾಯಣ ಭಟ್, ಎಸ್. ಪೂವಣಿಸೆಟ್ಟಿ ಎಮ್. ಡಿ ಶರ್ಮ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಎ ಪಾಂಡುರಂಗ ಕಿಣಿಯವರು ಧನ್ಯವಾದಗಳನ್ನಿತ್ತರು

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. S. 453/47 R. E. P. 445/58

ನಾರಾಯಣ ಜೋಯಿಸ — ವಾದಿ.

1. ಮಹಾಲಿಂಗ ಜೋಯಿಸ, 2. ಪರಮೇಶ್ವರ ಜೋಯಿಸ 3. ರಾಮಕೃಷ್ಣ ಜೋಯಿಸ, 4. ನಾರಾಯಣ ಜೋಯಿಸ, 5. ಮಂಜುನಾಥ ಸೆಟ್ಟಿ, 6. ಶ್ರೀನಿವಾಸ ಸೆಟ್ಟಿ 7 ಅಣ್ಣಯ್ಯ ಸೆಟ್ಟಿ, 8 ಗೋಪಾಲ ಸೆಟ್ಟಿ, 9. ಗೋವಿಂದ ರಾಯ ಸೆಟ್ಟಿ— ಉದ್ಯಾವರ ಗ್ರಾಮದಲ್ಲಿರುವವರು—ಪ್ರತಿವಾದಿಯು

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವದೇನೆಂದರೆ—

ವಾದಿಯು ಮೇಲ್ಕಂಡ ಅಮ್ಲುಜಾರಿಯಲ್ಲಿ ಪ್ರತಿವಾದಿರ ಬಾಬ್ತು ಸ್ಥಿರ ಆಸ್ತಿಯನ್ನು ಏಲಂಮಿಗೆ ಆಪೇಕ್ಷಿಸಿ ಇಷ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ. 21.1.59ಕ್ಕೆ ಇಟ್ಟಿರುತ್ತದೆ ಎಂಬ ಸಂಗ್ತಿಯನ್ನು ಕೋರ್ಟ ಹುಕುಂನಾ ಪ್ರಕಾರ ಜ್ಯಾಹೀರು ಮಾಡಿಕೊಂಡಿರುತ್ತದೆ.

ವ್ಯಾ. ತೇಜಪ್ಪ ಶೆಟ್ಟಿ,
ವಾದಿಯ ಕಡೆ ಎಡ್ವೊಕೇಟ್.

ಕುಂದಾಪುರ ಕ್ಸಬಾ,
ತಾ. 11.1.59.

ಉಡುಪಿ ಡಿ. ಮು ಕೋರ್ಟಿನಲ್ಲಿ

O P. No. 61/1958
R. I. A. 1215/1958

1. ಫಿಲೋಮಿನಾ ಫೆರಾಂಬ್ಯಾ, 2 ದಾಮಿಯಾಂ ಆಗೋಸ್ತಿನ್ ಬಾಬೋಜ, 3. ನಿಕೊಲಸ್ ಪಿಲಿಪ ಬಾಬೋಜ, 4. ರಿತಾ ಬಾಬೋಜ 5. ಗ್ರೇಸಿ ಬಾಬೋಜ,

6. ಲೂಸಿ ಬಾಬೋಜ, 7. ಸಿರಿಲ್ ಬಾಬೋಜ, 8. ಮೇರಿ ಬಾಬೋಜ, } ಮ್ಯಾನರ್ ಗಾರ್ಡಿಯನ್ 3ನೇ ಅರ್ಜಿದಾರ

—ಅರ್ಜಿದಾರರು.

ಮತ್ತು

1. Mrs. ಎಪ್ಸಿ ಮತಾಯಸ್, 2. ರೋಬರ್ಟ್ ಬಾಬೋಜ, 3 ಅಲ್ಬರ್ಟ್ ಜೇಮ್ಸ್ ಬಾಬೋಜ —ಎದುರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ

1ನೇ ಅರ್ಜಿದಾರಳ ಮಗ 2ರಿಂದ 5ನೇವರೆಗಿನ ಅರ್ಜಿದಾರರ ಮ 3ನೇ ಎದುರು ಸಹೋದರ 6ರಿಂದ 8ನೇ ವರೆಗಿನ ಅರ್ಜಿದಾರರ ಮ. 2ನೇ ಎದುರು ತಂದೆ ಮ 1ನೇ ಎದುರಿಳ ಗಂಡ ತಾ 20.11-50ರಲ್ಲಿ ಮೃತ ಪೀಟರ್ ಅಗೋಸ್ತಿನ್ ಬಾಬೋಜರ ಹೆಸರಿನಲ್ಲಿರುವ ಬೇಂಕು ಡಿಪೋಜಿಟು ಹಣಗಳನ್ನು, ಇನ್ಶೂರೆನ್ಸ್ ಪೋಲಿಸಿ ಪ್ರಕಾರ ಬರಾ ಬೈವೆಜುಗಳನ್ನು ನೋಟುಗಳ ಪ್ರಕಾರ ಬರಾ ಬೈವೇಜುಗಳನ್ನು ಶೇರ್ಸುಗಳಲ್ಲಿ ಬರಾ ಬೈವೇಜುಗಳನ್ನು ವಸೂಲು ಮಾಡುವರೇ ಎಲ್ಲಾ ಅರ್ಜಿದಾರರ ಪರವಾಗಿ 3ನೇ ಅರ್ಜಿದಾರನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲು ಮಾಡಿದ ಮೇಲಿನ ಅರ್ಜಿಯು ಮತ್ತು ಮೇಲಿನ ಅರ್ಜಿಯು 2ನೇ ಅರ್ಜಿದಾರನು ಮೃತಪಟ್ಟು ಆತನ ವಾರಿಸುದಾರರಾಗಿ ಆತನ ಹೆಂಡತಿ ಮಕ್ಕಳನ್ನು ವಾರಿಸುದಾರರಾಗಿ 9ರಿಂದ 13ನೇ ವರೆಗಿನ ಅರ್ಜಿದಾರರನ್ನಾಗಿ ಸೇರಿಸಬೇಕಾಗಿಯೂ ದಾಖಲುಮಾಡಿದ R I A 1215/58ನೇ ಅರ್ಜಿ ಸಹಾ ತಾ 31.1-59ಕ್ಕೆ ಮೇಲಿನ ಕೋರ್ಟಿನಲ್ಲಿ ಇಡಲಾಗಿಯದೆ. ಆಕ್ಷೇಪ ಹೇಳುವವರು ಸದ್ರಿ ತಾ, 31.1.59ರಲ್ಲು ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಮೇಲಿನ ಅರ್ಜಿಯಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.

Gratian C. Rego,
Pleader.

ಉಡುಪಿ, 14-1-59.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ)

ಬೆಂಕಿಯಿಂದ ರಕ್ಷಣೆ — ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ—೮. ಪುಟಗಳು: ೪೪. ಬೆಲೆ: ರೂ. ೦—೬೫.

ನೀರು ಮತ್ತು ಬೆಂಕಿಗಳು ಹಾನಿ ಮಾಡುವಷ್ಟು ಮತ್ತಾವುದೂ ಎಸಗಲಾರದೆಂದು ಹಿಂದಿನವರ ಮಾತು. ಅಂತಹ ಇದಿರಿಸಲು ಸಾಧ್ಯವಾದ ಬೆಂಕಿಯನ್ನೂ ಇಂದಿನ ವೈಜ್ಞಾನಿಕ ಯುಗದಲ್ಲಿ ಅಂಕಿತದಲ್ಲಿಟ್ಟುಕೊಳ್ಳುವುದು ಸಾಧ್ಯವಾಗಿದೆ. ಇದು ವರೆಗೂ ಅಸಾಧ್ಯವಾಗಿಯೇ ಉಳಿದಿದ್ದರೆ, ಆಧುನಿಕ ಸುಖಸಾಧನಗಳ ಪರಿಣಾಮಗಳಿಂದ ಬಿದ್ದ ಬೆಂಕಿಯು ಊರಿಗೆ ಊರನ್ನೇ ಸುಟ್ಟು ಬೂದಿ ಮಾಡುತಿದ್ದಿತು.

"ಬೆಂಕಿಯಿಂದ ರಕ್ಷಣೆ" ಎಂಬ ಈ ಪುಸ್ತಕದಲ್ಲಿ ಮನೆಗಳಿಗೆ ಬೆಂಕಿ ಬೀಳಲು ಇರುವ ಕಾರಣಗಳನ್ನು ಸೂಕ್ಷ್ಮವಾಗಿ ತಿಳಿಸಿ, ಅದರಿಂದ ದೂರವಿರಲು ಕೆಲವು ಮುಂಜಾಗ್ರತೆಗಳನ್ನು ಈಯಲಾಗಿದೆ. ಕೇವಲ ಮನೆ ಮಾಡುಗಳಿಗೆ ಅಲ್ಲ, ಮನುಷ್ಯನ ಮೈಕೈಗಳಿಗೂ ಬೆಂಕಿ ಬೀಳಬಹುದು. ಆದುದರಿಂದ ಪ್ರಾಥಮಿಕ ಉಪಾಯಗಳನ್ನು ಕೈಗೊಳ್ಳುವುದಲ್ಲದೇ ಅಗ್ನಿಶಾಮಕ ದಳಗಳಿಂದ ಸದುಪಯೋಗ ಪಡೆದುಕೊಳ್ಳುವುದೂ ನಮ್ಮ ಕರ್ತವ್ಯವಾಗಿದೆ. ಬೆಂಕಿಯಿಂದ ವಿವಿಧ ರೀತಿಗಳಿಂದ ಪಾರಾಗುವ ವಿಧಾನವನ್ನೂ ಬೆಂಕಿಯನ್ನು ನಂದಿಸುವವರು ವಹಿಸಿಕೊಳ್ಳಬೇಕಾದ ಮುಂಜಾಗ್ರತೆಗಳನ್ನೂ ತಿಳಿಸಿ, ಬೆಂಕಿಯ ಅನಾಹುತಕ್ಕೆ ಸಿಕ್ಕಿ ಬಿದ್ದವರನ್ನು ಸುರಕ್ಷಿತವಾಗಿ ಹೊರಗೆ ತರುವ ಉಪಾಯಗಳನ್ನೂ, ಇಂತಹ ಪರಿಸ್ಥಿತಿಯಲ್ಲಿ ಮೈದೋರಬಹುದಾದ ಗಾಯಾದಿಗಳಿಗೆ ಮಾಡಬೇಕಾದ ಪ್ರಥಮ ಚಿಕಿತ್ಸೆಯನ್ನೂ ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಅಲ್ಲದೇ ಅಂತಹ ವಿಪತ್ತಿನ ಸಮಯದಲ್ಲಿ ನೆರೆಕರೆಯವರೆಲ್ಲರೂ ಸಹಕಾರ ಬುದ್ಧಿಯಿಂದ ನಡೆದುಕೊಳ್ಳಬೇಕೆಂದೂ ವಿನಂತಿಸಿಕೊಳ್ಳಲಾಗಿದೆ. ಹಳ್ಳಿಗಳೇ ಹೆಚ್ಚಾಗಿರುವ ಭಾರತದಲ್ಲಿ ಹಳ್ಳಿಗರು ಮುಖ್ಯವಾಗಿ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳನ್ನು ಇಲ್ಲಿ ವಿಶೇಷವಾಗಿ ಈಯಲಾಗಿದೆ. ಪ್ರತಿ ಮನೆಯಲ್ಲೂ ಇಟ್ಟುಕೊಳ್ಳಬಹುದಾದ ಸಾಮಾನ್ಯ ಮಟ್ಟದ ಆಧುನಿಕ ಅಗ್ನಿಶಾಮಕೋಪಕರಣಗಳನ್ನು ಬಳಸಿಕೊಳ್ಳುವ ಕ್ರಮವನ್ನೂ, ಆಗ ಗಮನಿಸಬೇಕಾದ ಎಚ್ಚರಿಕೆಗಳನ್ನೂ, ಗಂಟು ಹಾಕುವ ಮತ್ತು ಕೃತಕ ಉಸಿರಾಟವನ್ನು ಪ್ರಾರಂಭಿಸುವ ವಿಧಾನಗಳನ್ನೂ ಅನುಬಂಧಗಳಲ್ಲಿ ಜೋಡಿಸಲಾಗಿದೆ.

ಪುಸ್ತಕದಲ್ಲಿ ವಿವರಿಸಲಾದ ಎಲ್ಲ ವಿಷಯಗಳೂ ಸಚಿತ್ರವಾಗಿರುವುದು ಮತ್ತು ಸಂಪೂರ್ಣ ಮಾಹಿತಿಯಿಂದ ಕೂಡಿರುವುದು ಪುಸ್ತಕದ ವೈಶಿಷ್ಟ್ಯವೆನ್ನಬೇಕು. ಸುಲಭವಾದ ಮತ್ತು ಅಚ್ಚುಕಟ್ಟಾದ ಭಾಷಾ ಶೈಲಿಗೆ ಸುಂದರವಾದ ಮುದ್ರಣವು ಒಪ್ಪವಿಟ್ಟಂತಾಗಿದೆ. ಬೆಂಕಿಯಿಂದ ತಮ್ಮನ್ನೂ ತಮ್ಮವರನ್ನೂ ಉಳಿಸಬೇಕೆಂಬ ಇರಾದೆಯಿಂದ ಕೂಡಿರುವವರು ಈ ಹೊತ್ತಗೆಯನ್ನೊಮ್ಮೆ ಅವಶ್ಯ ಓದಬೇಕು.

ಸ್ನೇಹಸ್ಮೃತಿ— ಲೇಖಕರು: ನಚಿಕೇತ, ಪ್ರಕಾಶಕರು: ಗಾಯತ್ರಿ ಪ್ರಕಾಶನ, ಚಾಮುಂಡಿಪುರಂ, ಮೈಸೂರು. ಪುಟಗಳು: ೧೨೮. ಬೆಲೆ: ರೂ. ೧—೨೫.

"ಸ್ನೇಹಸ್ಮೃತಿ"—ಹೆಸರೇ ಸೂಚಿಸುವಂತೆ ಅಳಿದುಹೋದ ಸ್ನೇಹದ ಸ್ಮರಣೆಯನ್ನು ಮಾತ್ರ ವಿವರಿಸಿ ಹೇಳುವ ಕಾದಂಬರಿ. ವಿಷಯ "ಪ್ರಣಯ"ರಸ "ವಿಪ್ರಲಂಭಶೃಂಗಾರ" ಪ್ರಣಯ ಕಥಾವಸ್ತುವನ್ನಾಧರಿಸಿಯೇ ಬರೆದಿರುವ ಹಲವಾರು ಕಾದಂಬರಿಗಳಿರುವುದಾದರೂ ಈ ಬಗೆಯ ಕಾದಂಬರಿಗಳು ಮಾತ್ರ ವಿರಳವೆನ್ನಬಹುದು.

ಕಸ್ತೂರಿಯು ಬಾಲವಿಧವೆ. ಆಕೆ ತಂದೆಯ ಮನೆಯಲ್ಲೇ ಇರುತಿದ್ದಳು. ಅಲ್ಲಿಯೇ ಸಮೀಪದಲ್ಲಿನ ಒಂದು ಕೋಣೆಯಲ್ಲಿ ಶಾಲಾ ಉಪಾಧ್ಯಾಯರಿಬ್ಬರು ಇದ್ದರು. ಅವರಿಬ್ಬರಿಗೂ ಕಸ್ತೂರಿಯ ಬಗೆಗೆ ಅನುತಾಪ ಕರುಣೆಗಳಿದ್ದುವು. ಅವರಲ್ಲಿ ಒಬ್ಬನ ದೃಷ್ಟಿ ಮಾತ್ರ, ಕೇವಲ ಸಹಾನುತಾಪ ಪೂರ್ಣವೇ ಆಗಿತ್ತೆಂದು ಹೇಳಬರುತ್ತಿರದೆ, ಕ್ರಮೇಣ ಅವರಲ್ಲಿ ಅವ್ಯಕ್ತಾನುರಾಗ ಬೆಳೆದುದರಿಂದ ಪರಸ್ಪರ ವಿವಾಹವಾಗುವ ಬಯಕೆಯು ಅವ್ಯಕ್ತವಾಗಿ ಬೆಳೆಯಿತು. ಆದರೆ ಈ ಅನುರಾಗಿಯು ತಾನಾಗಿ ಈ ಪ್ರಶ್ನೆಯನ್ನು ಎತ್ತಲು ಅಶಕ್ತನಾದರೂ ಅನುರಾಗಿಣಿಯೇ ವಿಷಯ ಪ್ರಸ್ತಾಪಿಸಿದಳು. ಆದರೆ, ಪ್ರೇಮಿಯು ಇದಕ್ಕೆ ತಕ್ಷಣ ಉತ್ತರಕೊಡಲು ಅಸಾಧ್ಯನಾಗಿ ತನ್ನ ಸ್ನೇಹಿತನೊಡನೆ ಸಲಹೆ ಕೇಳಿದಾಗ, ಊರವರ ಚುಚ್ಚುಮಾತುಗಳನ್ನು ಸಹಿಸುವ ಮನೋದಾರ್ಢ್ಯವಿಲ್ಲವೆಂದು ತಿಳಿದು, ಆ ಕೇಳಿಕೆಯನ್ನು ತಿರಸ್ಕರಿಸಬೇಕಾಗಿ ಬಂದರೂ ಅಂತರಾತ್ಮವು ಮಾತ್ರ ಆಕೆಯನ್ನೇ ಬಯಸುತಿತ್ತು. ಕೆಲವೇ ದಿನಗಳಲ್ಲಿ ಬೊಂಬಾಯಿಯಲ್ಲಿ ವಾಸಿಸುತ್ತಿರುವ ಸುಧಾರಿತ ಮನೋವೃತ್ತಿಯ ವಿದುರರೊರ್ವರೊಡನೆ ಕಸ್ತೂರಿಯ ವಿವಾಹವು ನಿಶ್ಚಯವಾಯಿತೆಂಬ ವಾರ್ತೆ ಕೇಳಿದಾಗ ಆತನಿಗೆ ಸಿಡಿಲು ಬಡಿದಂತಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಈ ಕಥೆಯನ್ನು ಮೃತನ ಪ್ರೇತವೇ ತನ್ನ ಪೂರ್ವ ಜನ್ಮದ ಸ್ನೇಹಿತ (ತನ್ನ ಸಹಯೋಗಿ)ನಿಗೆ ಹೇಳುವಂತೆ ನಿರೂಪಿಸಲಾಗಿದೆ. ಕಸ್ತೂರಿ ಮತ್ತು ಇವನೊಳಗೆ ಬೆಳೆದ ಅನುರಾಗಲತೆಗೆ ನೀರೆರೆದ ಕ್ರಮವು ಸುಂದರವಾಗಿಯೂ ಉಚಿತವಾಗಿಯೂ ಇದೆ. ಕುಂಕುಮವನ್ನು ಹಚ್ಚುವಷ್ಟು ಧೈರ್ಯಶಾಲಿಯಾದವನು ಸಮಾಜಕ್ಕೆ ಹೆದರಿಯೇ ತನ್ನ ಅಪೇಕ್ಷಾಲತೆಯನ್ನು ಮುರುಟಿಸಿ, ಕೊನೆಗೆ ತನ್ನ ಜೀವಕ್ಕೇನೇ ಸಂಚಕಾರವನ್ನು ತಂದುಕೊಂಡುದರಿಂದ, ಆತನಲ್ಲಿದ್ದ ಅನುರಾಗದ ಬಗೆಯ ಬಗ್ಗೆ ಸಂದೇಹವೇಳುವುದು ಸ್ವಾಭಾವಿಕ. ಕಥೆಯನ್ನು ಹೇಳುವಾಗ ಕೇಳುತಿದ್ದವನಿಗೆ ಆಗಾಗ "ಮುಂಗತೆಯಂ ಕೇಳ" ಎಂಬಂತೆ ಕೆಲವೆಡೆ ಸೂಚನೆಗಳು ಬಂದಿದ್ದರೂ ಕೊನೆಗೆ ಕೇಳುವಾತ ನಿದ್ರೆಮಾಡಿದನೆಂದೂ ತಿಳಿಯಬಾರದೆಂದಿಲ್ಲ.

ಒಟ್ಟಿನಲ್ಲಿ ಕಾದಂಬರಿಯು ಹಿರಿದಾಗಿದ್ದರೂ ಪಾತ್ರಗಳು ಕೇವಲ ಐದು ಯಾ ಆರು ಮಾತ್ರ. ಕಥೆ ಹೇಳುವ ಶೈಲಿ, ಬಿಗಿಪು ಆಕರ್ಷಣೀಯವಿದೆ. "ವಿಧವಾ ವಿವಾಹದ" ಸಮಸ್ಯೆಯ ಬಗ್ಗೆ ಕೆಲವೊಂದು ಕೃತಿಗಳು ಹುಟ್ಟಿಕೊಂಡಿರುವುವಾದರೂ ಅವು ಸಾಲದೆ ಹೋದುದರಿಂದ, ಈ ಸ್ನೇಹಸ್ಮೃತಿಯು ಆ ಪಂಕ್ತಿಯಲ್ಲಿ ಸೇರಬಹುದಾದರೂ ಇದರ ಉದ್ದೇಶವೇನೆಂಬುದು ಖಚಿತವಾಗಿ ಉಲ್ಲೇಖವಾಗಿಲ್ಲ. ಆದರೂ "ನಿಮ್ಮ ಹಣೆಯಲ್ಲಿ ಇನ್ನು ಮುಂದಕ್ಕಾದರೂ ಕುಂಕುಮವನ್ನು ಅಳಿಸುವ ಘಟನೆಗಳು ಜರಗದಿರಲಿ" ಎಂಬ ಆಶೀರ್ವಚನದಿಂದ ಅಲ್ಪ ಮಟ್ಟಿಗೆ ಸಮಾಧಾನವೊದಗೀತು. ನೂತನ ತಂತ್ರಯುಕ್ತವಾದ ಈ ಕಾದಂಬರಿಯು ಶ್ರೀ ನಚಿಕೇತರ ಚೊಚ್ಚಲ ಕೃತಿಯಾದುದರಿಂದ ಸಾಮಾನ್ಯ ಶಬ್ದದೋಷಗಳು ಕೆಲವಿದ್ದರೂ ತೀರ ಸರಳ ಆದರೆ ಬಿಗುವಾದ ಶೈಲಿಯಿಂದ ಕೂಡಿದೆ. ನಚಿಕೇತರಿಂದ ಇನ್ನೂ ಉತ್ತಮವಾದ ಮತ್ತು ಸಮಸ್ಯಾಪರಿಹಾರಕರೂಪವಾದ ಕಾದಂಬರಿಗಳನ್ನು ಕನ್ನಡಿಗರು ನಿರೀಕ್ಷಿಸಿದರೆ, ಅದರಲ್ಲಿ ತಪ್ಪಿಲ್ಲ.

ವಂದನಾರ್ಪಣೆ—(ವಿಡಂಬನೆಗಳು) ಬರೆದವರು: ಪು. ಹ. ಆಚಾರ್ಯ. ಪ್ರಕಾಶಕರು: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ. ಕ. ಪುಟಗಳು: ೮೦. ಬೆಲೆ: ರೂ. ೧-೦೦.

ಕಾದಂಬರಿಗಳ ಜಡಿಮಳೆಯ ನಡುವೆಯೂ ಆಗೊಮ್ಮೆ ಈಗೊಮ್ಮೆ ವಿಡಂಬನೆಗಳ ಮಿಂಚು ಮಿಂಚುತ್ತಿರುವುದು ಸಂತೋಷದ ಸಂಗತಿ. ಶ್ರೀ ಆಚಾರ್ಯರು ನಾವು ಓದಿ ನಗುವಂತೆ ಮತ್ತು ನಮ್ಮಲ್ಲಿಯ ಹಲವು ಲೋಪದೋಷಗಳನ್ನು ತಿದ್ದಿಕೊಳ್ಳಲು ಅವ್ಯಕ್ತ ಪ್ರೇರಣೆಯಾಗುವಂತೆ "ವಂದನಾರ್ಪಣೆ"ಯನ್ನು ಬರೆದು ಸಂಗ್ರಹಿಸಿದ್ದಾರೆ. ಇದರಲ್ಲಿ ಒಟ್ಟು ೧೦ ವಿಡಂಬನಾಲೇಖಗಳಿವೆ. ವಂದನಾರ್ಪಣೆ, ಶಬ್ದದ ಕೊಲೆ, ಅಜ್ಜಿ ಉವಾಚ, ಕರ್ಮಣ್ಯೇವಾಧಿಕಾರಸ್ತೆ— ಎಂಬಿವು ಸಮಾಜದ ಡೊಂಕುಗಳನ್ನು ಎತ್ತಿ ಹೇಳುತ್ತದೆ. ಉಳಿದ ಕವಿಯಾಗ ಹೊರಟು, ಎಮರಂಗಡಿ, ರೌದ್ರಾವತಾರ, ಅಪಮ್ಯಾವ್ರೇಗೆದ್ದು, ೧, ೨, ೩ ಸನ್ಯಾಸಿಗಳು, ಅಳಿಯ ಅಲ್ಲ-? ಎಂಬಿವು ನಗೆಯನ್ನು ಹೊಂದಿಸುತ್ತವೆ, ಓದುಗನಿಗೆ.

ಈ ವಿಡಂಬನೆಗಳನ್ನು ಬರೆಯುತ್ತ ನಡುನಡುವೆ ಸಂಸ್ಕೃತ ಶ್ಲೋಕಗಳನ್ನು ಸಾಧಾರಣವಾಗಿ ಬಳಸಿಕೊಂಡುದನ್ನು ಯಾರೂ ಅಲ್ಲಗಳೆಯುವಂತಿಲ್ಲವಾದರೂ ಅವುಗಳ ಅರ್ಥವನ್ನು ಕನ್ನಡದಲ್ಲಿ ಕೊಡದೆ ಹೋದುದರಿಂದ, ಹಳೆಗನ್ನಡವನ್ನೂ ಅರಗಿಸಿಕೊಳ್ಳದ ಕನ್ನಡದ ವಾಚಕರಿಗೆ ಸಂಪೂರ್ಣಾರ್ಥವಾಗುವುದು ಸುಲಭವಲ್ಲ. ಸಂಗ್ರಹಿತವಾದ ವಿಡಂಬನೆಗಳು ತೀರ ಉಚ್ಚಮಟ್ಟದವುಗಳೆಂದು ಹೇಳುವುದು ಸಾಧ್ಯವೇ ಇಲ್ಲ. ಕಸ್ತೂರಿ, ನಾಡಿಗೇರ, ಬೀಚಿಯವರದನ್ನೂ ಇವನ್ನೂ ಹೋಲಿಸುವಾಗ ಅಜಗಜಾಂತರವಿದೆ. ಆದರೂ ಆ ದಿಸೆಯಲ್ಲೊಂದು ಪ್ರಯತ್ನವೆಂಬುದರಿಂದ ಸಂಗ್ರಹವು ಸ್ವಾಗತಾರ್ಹ. ತೆತ್ತ ಬೆಲೆಗೆ ಮತ್ತು ಕಳೆದ ಹೊತ್ತಿಗೆ ತಕ್ಕ ಪ್ರತಿಫಲವನ್ನು ಕೊಟ್ಟೀತು.

ವಿಕಟ ವಿನೋದಿನಿ— (೮ನೆಯ ವಾರ್ಷಿಕ ವಿಶೇಷಾಂಕ) ಪ್ರಕಾಶಕರು: ವಿಕಟ ವಿನೋದಿನಿ ಆಫೀಸ್, ಆರಳೇಪೇಟೆ, ಬೆಂಗಳೂರು-೨. ಪುಟಗಳು:೧೧೨. ಬೆಲೆ: ೦..೫೦.

ತಿಳಿಹಾಸ್ಯದ ಮಾಸಪತ್ರಿಕೆಯ ೮ನೆಯ ವಾರ್ಷಿಕ ಸಂಚಿಕೆಯನ್ನು ಸಂತೋಷದಿಂದ ಸ್ವಾಗತಿಸುತ್ತೇವೆ. ತನ್ನ ಮಾಮೂಲ ವಿಕಟ ಹಾಸ್ಯ ಪ್ರವೃತ್ತಿಯು ಹಲವಾರು ಲೇಖಗಳಿಂದ ಒಡಗೂಡಿ ಓದುಗರನ್ನು ವಿನೋದಗೊಳಿಸಲು ವಿಕಟ ವಿನೋದಿನಿಯು ಕನ್ನಡಿಗರ ಬಳಿ ಬಂದಿದ್ದಾಳೆ. ಆಕೆಯನ್ನು ಎಲ್ಲರೂ ಬರಮಾಡಿಕೊಂಡು ಅಂತರಾಳದ ರಸಾಸ್ವಾದನೆಯನ್ನು ಮಾಡಿ, ಆಕೆಯಿಂದ ಪಡೆಯಬಹುದಾದ ಫಲಗಳನ್ನು ಸವಿದು ನಲಿದಾಡಲಿ.

—ಗೋರಾ.

ಸಾದರ ಸ್ವೀಕಾರ

ಸಮಾಧಿಯ ಸುರಂಗ-ಲೇಖಕರು: ಶ್ರೀ ಪಿ. ಜಿ. ಕೃಷ್ಣಮೂರ್ತಿ, ಬಿ. ಎ. ಪ್ರಕಾಶಕರು: ಗಾಯತ್ರಿ ಪ್ರಕಾಶನ, ಚಾಮುಂಡಿಪುರಂ, ಮೈಸೂರು. ಪುಟಗಳು; ೧೫೫. ಬೆಲೆ: ರೂ. ೧.

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ
ಭಾರತದ ಅಂಗ-ಕಾಶ್ಮೀರ
ಎಂಬ ನೂತನ ಪುಸ್ತಕವನ್ನೋದಿರಿ!
ಬರೆದವರು- ಎಮ್. ರಘುನಂದನ ರಾವ್
ತಲ್ಲೂರು.

ಪಾಕಿಸ್ತಾನವು ಭಾರತ ಕಾಶ್ಮೀರದ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.
ಬೆಲೆ_ ಐದಾಣೆ ಮಾತ್ರ ಟ. ಖ. ಪ್ರತ್ಯೇಕ
ನವಯುಗ ಪ್ರೆಸ್, ಉಡುಪಿ.

ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗಳ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40
ಸ್ಟಾಕಿಸ್ಟರು: **ಷಾ ಕಂಪೆನಿ, ಮಂಗಳೂರು—1.**

ನಮ್ಮ ಹಬ್ಬಗಳು

(೪ನೇ ಪುಟದಿಂದ)

ಹುಡುಗ ಹುಡುಗಿಯರು ಗೂಡುದೀಪಗಳನ್ನು ಮಾಡಿ ಹಾರಿಸುವುದಿದೆ.

ದನಕರುಗಳನ್ನು ಮೀಯಿಸಿ, ಶೃಂಗರಿಸಿ ಅವಕ್ಕೆ ಪೊಂಗಲನ್ನು ತಿನ್ನಕೊಡುವುದೂ ತಮಿಳುನಾಡಿನ ರೈತರ ಕರ್ತವ್ಯವಾಗಿ ಪರಿಣಮಿಸಿದೆ. ಎತ್ತುಗಳನ್ನು ಓಡಿಸಿ ಮನೋರಂಜನೆಯನ್ನೂ ಈ ದಿನಗಳಲ್ಲಿ ಮಾಡಿಕೊಳ್ಳುತ್ತಾರೆ ಒರಟಾದ ಮತ್ತು ಸುದೃಢವಾದ ಎತ್ತಿನ ಕೊಂಬುಗಳ ನಡುವೆ ಹಣದ ಚಿಕ್ಕ ಗಂಟೊಂದನ್ನು ಕಟ್ಟಿ ಅದನ್ನು ಓಡಿಸುವುದೂ, ಹಾಗೆ ಓಡುತ್ತಿರುವ ಎತ್ತನ್ನು ಹಿಡಿದು ನಿಲ್ಲಿಸಿ, ಆ ಗಂಟನ್ನು ಬಿಚ್ಚಬಲ್ಲ ಧೈರ್ಯಶಾಲಿಗೆ ಆ ಹಣವನ್ನು ಬಹುಮಾನವಾಗಿ ನೀಡುವುದೂ ಇದೆ. ಈ ಹಬ್ಬಗಳಲ್ಲಿ ಬಾಲಕರು ಯುವಕರು ವೃದ್ಧರು ಸ್ತ್ರೀಯರು-ಎಲ್ಲರೂ ದರಿದ್ರ ಶ್ರೀಮಂತರೆಂಬ ಭೇದ ಭಾವವಿಂದೆ ಉತ್ಸಾಹದಿಂದ ಭಾಗವಹಿಸುತ್ತಾರೆ; ಆತ್ಮಸಂತುಷ್ಟರಾಗುತ್ತಾರೆ.

ಭಾರತದ ನಾನಾ ಎಡೆಗಳಲ್ಲಿ ಈ ಸೂರ್ಯಾರಾಧನೆಯು ಬೇರೆ ಬೇರೆ ವಿಧಗಳಲ್ಲಿ ನಡೆಯುತ್ತದೆ. ಕನ್ನಡ ನಾಡಿನ ಸುಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಒಂದಾದ ಉಡುಪಿಯಲ್ಲಿ ಈ ಸಮಯದಲ್ಲಿ ಜಾತ್ರೆಯು ವಾರ. ಒಂದು ವಾರದ ವರೆಗೆ ಅವಿರತವಾಗಿ ನಡೆಯುವ ತೆಪ್ಪೋತ್ಸವ ಸಹಿತ ರಥೋತ್ಸವಕ್ಕೆ ಮಕರ ಸಂಕ್ರಾಂತಿಯ ದಿನ ವಿಶೇಷ ಕಳೆಯೇರುತ್ತದೆ. ಈ ಉತ್ಸವಗಳನ್ನು ಕಣ್ಣಾರೆ ಕಂಡು ಆನಂದ ತುಂದಿಲರಾಗಲು ಕರ್ನಾಟಕದ ಎಲ್ಲೆಡೆಗಳಿಂದಲೂ ಪ್ರೇಕ್ಷಕರು ಕಿಕ್ಕಿರಿದು ನೆರೆಯುತ್ತಾರೆ. ದ್ವೈತಮತ ಸಂಸ್ಥಾಪಕರಾದ ಶ್ರೀಮತ್ ಮಧ್ವಾಚಾರ್ಯರ ಪರಂಪರೆಯ ಅಷ್ಟ ಮಠದ ಯತಿಗಳು ಈ ಉತ್ಸವವನ್ನು ಮತ್ತಷ್ಟು ಆಕರ್ಷಣೀಯವಾಗಿ ಮಾಡುತ್ತ ಜನತೆಯ ಪ್ರೀತ್ಯಾದರಗಳಿಗೆ ಪಾತ್ರರಾಗುತ್ತಾರೆ. ಜಾತ್ರೆಯ ಸಮಯದಲ್ಲಿ ಪ್ರೇಕ್ಷಕರ ಊಟ ವಸತಿ ಮೊದಲಾದುವುಗಳ ವ್ಯವಸ್ಥೆಯು ಈ ಮಠಗಳಿಂದಲೇ ನೋಡಿಕೊಳ್ಳಲ್ಪಡುತ್ತದೆ. ಅನ್ನದಾನದಿಂದ ಸುಪ್ರಖ್ಯಾತವಾದ ಉಡುಪಿಯ ಸಂಕ್ರಮಣ ಜಾತ್ರೆಯು ನಿಜವಾಗಿಯೂ ಕಣ್ಣಿಗೊಂದು ಹಬ್ಬ; ಅದನ್ನು ಪ್ರತಿಯೊಬ್ಬನೂ ನೋಡಿ ಆನಂದಿಸಿ ಮನಸ್ಸಿಗೆ ಸಮಾಧಾನಪಟ್ಟುಕೊಳ್ಳಬೇಕು.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
ಬಡಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ.
**ನವಭಾರತ ಪುಸ್ತಕ ಭಂಡಾರ,
ಉಡುಪಿ.**

ಬ್ರಿಟನ್ನಿನ ಶ್ರೋಪ್‌ಶಾಯರ್‌ನಲ್ಲಿ ನೈಜೀರಿಯದ ಆಟಗಾರರು ತರಬೇತಿ ಪಡೆಯುತ್ತಿರುವುದನ್ನಿಲ್ಲಿ ಕಾಣಬಹುದು.

ಋತು ವರ್ಣನೆ

ಗಡಗಡನೆ ನಡುಗಿಸುವ ಶಿಶಿರರ್ತು

ರಗಳೆಕವಿ ಹಂಪೆಯ ಹರೀಶ್ವರನು ಅನುಭವಿಸಿದ ಚಳಿಗಾಲ ಹೇಗಿತ್ತು?

ಹಿಂದೂಶಾಸ್ತ್ರ ಸಂಪ್ರದಾಯದಂತೆ ಮಾರ್ಗಶಿರ ಮತ್ತು ಪುಷ್ಯಮಾಸಗಳು ಹೇಮಂತ ಋತುವಿಗೂ ಮಾಘ ಮತ್ತು ಫಾಲ್ಗುಣ ಮಾಸಗಳು ಶಿಶಿರ ಋತುವಿಗೂ ಸೇರುತ್ತವೆ. ಹೇಮಂತದಲ್ಲಿ ಪ್ರಾರಂಭವಾಗುವ ಚಳಿಗಾಲವು ಶಿಶಿರದಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟುತ್ತದೆ. ಈ ಶಿಶಿರದ ವರ್ಣನೆಯು ಹರಿಹರ ಮಹಾಕವಿ ಪ್ರಣೀತ ಗಿರಿಜಾಕಲ್ಯಾಣ ಮಹಾ ಪ್ರಬಂಧದಲ್ಲಿ ಮನಮುಟ್ಟುವಂತೆ ವರ್ಣಿಸಲಾಗಿದೆ. ಅದರಿಂದ ಚಳಿಗಾಲದ ವರ್ಣನೆಯನ್ನು ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ. ಚಳಿಯಿಂದ ಗಡಗಡನೆ ನಡುಗಲು ಪ್ರಾರಂಭವಾಗುತ್ತಿರುವ ಈ ಸಮಯದಲ್ಲಿ, ನಮ್ಮ ಸಾಹಿತಿಗಳೂ ಯಾವ ಅನುಭವಗಳನ್ನು ಪಡೆದಿದ್ದರೆಂದಿದರಿಂದ ತಿಳಿದುಕೊಳ್ಳಬಹುದು.

ಭೂಮಿಯು ಜನರನ್ನು ಚೆನ್ನಾಗಿ ನಡುಗಿಸುತ್ತ ರಾತ್ರಿ ಆವರಿಸುತ್ತ ಸುಗಿಯುತ್ತ ಮುತ್ತುತ್ತ, ಮುಂದುಗೆಡಿಸುತ್ತ ಮುಸುಕಿಡುತ್ತ ಹಿಮವು ತುಂಬಿ ಬಂದಿತು ಮೃಗ ಸಂತತಿಯನ್ನು ಪರ್ವತದ ತಪ್ಪಲಲ್ಲಿ, ಕೊಳರ್ವಕ್ಕಿಗಳನ್ನು ಕೊಳಗಳೊತ್ತುಗಳಲ್ಲಿ ಪಕ್ಕಿಗಳನ್ನು ಕೋಟರದಲ್ಲಿ ಹೊಗಿಸುತ್ತ ಶಿಶಿರ ನೃಪಾಲನು ಬಂದನು.

ಕೆಂಗಿಡಿಗಳನ್ನು ಆಲಿಕಲ್ಲುಗಳಾಗಿ ಉರಿಯನ್ನು ಕೆಂದಳಿರನ್ನಾಗಿ, ಕೆಂಡಗಳನ್ನು ಮಾಣಿಕಗಳನ್ನಾಗಿ, ಉರಿಯುವ ಸೂರ್ಯನನ್ನು ಚಂದ್ರನನ್ನಾಗಿ, ಬಿಸಿಲನ್ನು ಬೆಳುದಿಂಗಳನ್ನಾಗಿ ಮಾಡಿ ಹಿಮರಾಜನು ತನ್ನ ರಾಜ್ಯಭಾರವನ್ನು ಭೂಚಕ್ರದಲ್ಲಿ ಪ್ರಾರಂಭಿಸಿದನು.

ಹಿಮದಿಂದಾಗಿ ಬೆವರು ಆರಿತು; ನೀರಡಿಕೆಗಳು ಇಂಗಿ ಹೋದುವು, ಬಿಸಿಯುಸಿರು ಅಡಗಿತು; ಸೂರ್ಯನು ತಣ್ಣಗಾದನು; ಅಗ್ನಿಗೆ ಶೀತವಾಯಿತು. ಶಿಶಿರಕಾಲನ ಅಜ್ಞೆಯಿಂದಾಗಿ, ರವಿಯು ತನ್ನ ತೇಜಸ್ಸನ್ನು ಕಳೆದುಕೊಂಡು ಸ್ವಪಥದಲ್ಲಿ ನಿಲ್ಲಲು ಅಂಜಿ, ಬೇಗ ಬೇಗನೆ ಓಡಿಯೋಡಿ ಅದ್ರಿಯ ಮರೆಯಲ್ಲಿ ನಿಂತುಕೊಂಡನು; ದಾವಾನಲವು ಒಮ್ಮೆಗೇ ನಿಂತು ಹೋಯಿತು. ಉದಯಕಾಲವು ಶೀತೋದಯ ಕಾಲವಾಗಿ, ಮಧ್ಯಾಹ್ನವು ಹಿಮಸಹಿತವಾದ ಮಧ್ಯಾಹ್ನವಾಗಿ, ಅಸ್ತಮಯವು ಉಷ್ಣರಹಿತವಾದ ಅಸ್ತಮಯ ಕಾಲವಾಗಿ ಪರಿಣಮಿಸಿದುವು

ಸೂರ್ಯನನ್ನು ಚಂದ್ರನನ್ನಾಗಿಯೂ ಬೆಳಗುವ ಬಿಸಿಲನ್ನು ಜ್ಯೋತ್ಸ್ನೆಯನ್ನಾಗಿಯೂ ಬಿಸುಪನ್ನು ಚಳಿಯನ್ನಾಗಿಯೂ ಮಾಡಿ ಹಿಮರಾಜನತೇಜವು ಸೂರ್ಯಚಂದ್ರರಲ್ಲಿನ ಅಂತರವನ್ನು ಹೋಗಲಾಡಿಸಿತು. ಹಲ್ಲುಗಳೊಳಗೇನೇ ಹು ಹು ಹು ಎಂಬ ಉಗ್ಗಡಣೆಯು ಜನರ ಬಾಯಿಂದ ಹೊರಬರಲಾರಂಭಿಸಿತು. ಮಾತನಾಡಿದರೂ ಅದು ಹು ಹು ವೇ. ಹಾಗಿರುವಾಗ ನಡೆಯ ಮಾತೇಕೆ? ಈ ಶಿಶಿರವೇ ಪ್ರಾಣಕ್ಕೆ ಚಳಿಯ ಕುಪ್ಪಸವಾಗಿ ಪರಿಣಮಿಸಿತೆಂದರೆ, ಹಿಮದ ಮಹಿಮೆಯನ್ನು ಬೇರೆ ಮಾತುಗಳಿಂದ ಹೇಳಬೇಕಾಗಿಲ್ಲ.

ಜೀವಕ್ಕೆ ಬಲವಾದ ಶೀತವು ತಾಗಲು, ಕೋಪಗೊಂಡ ಜೀವವು ಜಠರಾಗ್ನಿಯನ್ನು ಎಚ್ಚರಿಸಿ ಉರಿಸಲು, ಆಗ, ಜಠರಾಗ್ನಿಯ ಜ್ವಲನದಿಂದುಂಟಾದ ಹೊಗೆಯು ಜನರ ಬಾಯಿಯ ಮೂಲಕ ಹೊರಬರ ತೊಡಗಿತೆಂದರೆ ಚಳಿಯ ಹಿಡಿತವೆಷ್ಟೆಂದು ಊಹಿಸಬಹುದು.

ಶೀತಮಾತೆಯು ಶಿಖಿ ಬಾಲಕನನ್ನು ನೋಡಿದಳು; ಭಸ್ಮದ ರಕ್ಷೆಯನ್ನು ಅವನಿಗೆ ಪ್ರೀತಿಯಿಂದಿಟ್ಟಳು; ಮಂಜಿನಿಂದ ದೃಷ್ಟಿ ನಿವಾಳಿಸಿದಳು, ದಂಡನೆಯನ್ನಿತ್ತು ದೂಡುತ್ತ ಅವನನ್ನು ರಕ್ಷಿಸುತ್ತಿದ್ದಳು. ಈ ಭೂಭಾಗದಲ್ಲಿ ತಾನೇ ತಾನಾಗಿ ವ್ಯಾಪಿಸಿದ ಶೀತಕ್ಕಂಜಿ ಕಂಪಿಸುತ್ತ ಇಲ್ಲಿ ಮುಂದೆ ನಿಲ್ಲಲು ಅಸಮರ್ಥನಾಗಿ ಬಡವಾಗಿ ಕಂಗೆಟ್ಟು, ಕಟ್ಟಿಗೆಯೊಳಗೆ ಹೋಗಿ ಅಗ್ನಿಯು ಅಡಗಿಕೊಂಡನು.

ತಮ್ಮನ್ನು ಮುಚ್ಚಿ ಮುಸುಕಿದ ಹಿಮವನ್ನು ಕಿಚ್ಚಿನಿಂದ ಕಳೆಯಲಾರದೆ ಮೆಲ್ಲನೆ ಬಂದು ವಿರಹಿಯನ್ನು ಒಲವಿಂದ ಕಾಯ್ದು ಜನರು ತಮ್ಮ ಚಳಿಯನ್ನು ಹೋಗಲಾಡಿಸುತ್ತಿದ್ದರು.

ತುಂಬಿದ ಸರೋವರದ ಮೇಲೆ ಉರಿಯಿಲ್ಲದ ಹೊಗೆಯು ಏಳುತ್ತಿರಲು, ವಿರಹಿಗಳು ಈ ಭಯಂಕರವಾದ ತಾಪವನ್ನು ಸಹಿಸಲಾರದೆ ನೀರಿನಲ್ಲಿ ಮುಳುಗುತಿದ್ದರು.

ಹುಟ್ಟಿದುದೂ ಚಳಿ, ಬಳೆದುದೂ ಚಳಿ, ಕೊಟ್ಟುದೆಲ್ಲವೂ ಚಳಿ, ಕೊಂಡುದೂ ಚಳಿಯಾಗಿ ಕಂಡುಬಂತು. ಚಳಿ ಚಳಿಯೆಂದು ಉಡಲು ತೆಗೆದ ಬಟ್ಟೆಯೂ ಚಳಿ, ತೊಟ್ಟುದೂ ಚಳಿ, ಮೆಟ್ಟಿದುದೂ ಚಳಿಯಾಗಿ ಹೊಸತಾಗಿ ಬಂದ ಚಳಿಯು ಎಲ್ಲೆಲ್ಲಿಯೂ ಚಳಿಯೇ ಚಳಿಯಾಗಿ ಪ್ರಪಂಚವನ್ನು ವ್ಯಾಪಿಸಿಬಿಟ್ಟಿತು.

ಹೀಗೆ ಚಳಿಗಾಲವು ಭುವನ ಜನರೆಲ್ಲರನ್ನೂ ಚಳಿಯಿಂದ ಗಡಗಡನೆ ನಡುಗಿಸುತ್ತ ತನ್ನ ಏಕಚಕ್ರಾಧಿಪತ್ಯವನ್ನು ಪ್ರತಿಷ್ಠಾಪಿಸಿತು.

—ಗೋರಾ

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ
ಮನೆ ಮದ್ದು
(HOME REMEDIES)
ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.
●
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶುದ್ಧ ಹರಟೆ

— “ಹರಿದಾಸ”ಎಂದರೆ ಹರಿಯುದವನಲ್ಲವೆ?

ಇದರಿಂದಲೇ ಅವರು ಹರಿದಾಸರಾಗಿ ಹೋಗುತ್ತಾರೆ.

“ಹರಿಕತೆ”ಯೆಂದರೆ ತಿಳಿಯದ ಜನವೇ ಇಲ್ಲ ನಮ್ಮೂರಲ್ಲಿ. ಇತ್ತೀಚೆಗಂತೂ ‘ಹರಿ-ದಾಸ”ರ ಉಪಟಳ ಬಹಳವಾಗಿದೆ ಇಲ್ಲಿ. ಏಕೆಂದರೆ ನಿನ್ನೆ-ಮೊನ್ನೆ-ಇಂದು-ನಾಳೆ-ಎಲ್ಲಾ ಹರಿಕತೆಗಳು ಎಡೆಬಿಡದೆ ನಡೆದಿದೆ-ನಡೆಯುತ್ತಿದೆ-ಎಲ್ಲಿ ಏನು ಎಂಬ ವಿಚಾರವೇ ಬರುವುದಿಲ್ಲ. ದೈವ ಸನ್ನಿಧಿಯಲ್ಲೇ ನಡೆಯಬೇಕು ತಾನೆ! ಆ-ಊರ ಜನ ಸೇರಿ ದೇವರ ಸೇವೆಮಾಡಿ— “ಪಾಪ-ಹಾರಿ”ಗಳಾಗಿ-ಪುಣ್ಯದ ಗಂಟನ್ನು ಹೇರಿ-ಹೊರಡುವಲ್ಲಿ. ‘ಹರಿಯದ’ ಕತೆಯನ್ನು ಕೇಳಿ-ಹರಿಯದಾಸರಾಗಿ ತೆರಳುತ್ತಾರೆ. ದುರಿತ ರಾಶಿಯನ್ನು ಹರಿಯುವ ಆತುರ-ಜನ್ಮಸಾಫಲ್ಯವನ್ನುಗಿಟ್ಟಿಸಿಕೊಳ್ಳುವ ತವಕ-ರೋಮ ರೋಮದಲ್ಲಿ ಸೇರಿಕೊಂಡಿರುತ್ತದೆ. “ಹರಿ-ದಾಸ”ರೆಂದರೆ ಜನ “ಹೌಹಾರಿ” ಬರುತ್ತಾರೆ. “ಏನೆನ್ನುತ್ತೀರಿ-ಸಾಕ್ಷಾತ್ ನಾರದರೇ ಬಂದಂತೆ-ಹಾಡುತ್ತಾರೆ. ಭಕ್ತಿಯ ಹೊಳೆಯನ್ನೇ ಹರಿಯಿಸುತ್ತಾರೆ. ಸಾಕ್ಷಾತ್ ವೈಕುಂಠವನ್ನೇ ಕಾಣಿಸುತ್ತಾರೆ. ಅಬ್ಬಾ! ಎಂತಹ ಮಹಾತ್ಮರಪ್ಪಾ” ಎಂದು ತಾಯಂದಿರ ಬಾಯಿಯಲ್ಲಿ ಕುಣಿಕುಣಿದಾಡುತ್ತಿರುತ್ತದೆ. ಮಕ್ಕಳಂತೂ ಹರಿದಾಸರ ಬಾಯಿಯಿಂದ ಹೊರಡುವ ಚುಟುಕು ಕತೆಗಳ ಸಿಹಿಗಾಗಿ ಬಾಯಿ ಚಪ್ಪರಿಸಿ ಕೊಂಡಿರುತ್ತವೆ. ಮಕ್ಕಳೇಕೆ! ಕೆಲವು ಹಿರಿಯ ತಲೆಗಳೂ ನಗೆಗಡಲಲ್ಲಿ ತೇಲಿಕೊಂಡು ದಣಿಯುತ್ತವೆ. ಹರಿದಾಸರ ವಾಗ್ಬಾಣಗಳಿಗೆ ಗುರಿಯಾದ ಪ್ರೇಕ್ಷಕರಂತೂ—ತಮ್ಮ ಆತ್ಮಾವಲೋಕನದಲ್ಲೇ ಸಮಯ ಕಳೆದು ತೃಪ್ತರಾಗಿರುತ್ತಾರೆ. ಕ್ಷಣಕಾಲ “ಆತ್ಮಾನುಭವ” ಆಗ ಬೇಕು ಈಗ. ದಿನವಿಡೀ ಲಾಭನಷ್ಟದ ಜಪದಲ್ಲಿ ತಲ್ಲೀನನಾಗಿರುತ್ತಿದ್ದ ಸೆಟ್ಟಿ— “ಪರಮಾತ್ಮ ಲೀಲೆ”ಗೆ ತಲೆಬಾಗಿ, ಶ್ರೀ ರಾಮಧ್ಯಾನತತ್ಪರನಾಗಿ ಮುಂದಿನ ಜೀವನದ ಗತಿಯನ್ನು ರೂಪಿಸಲು ಹವಣಿಸುತ್ತಿರುತ್ತಾನೆ. ಆದರೆ ಮರುದಿನ ಎದ್ದಾಗ ನೋಡಬೇಕು__ಲಾಭನಷ್ಟದ ಚಕ್ರಗಳಲ್ಲಿ ಸಿಲುಕಿ ಸುತ್ತ ತೊಡಗುತ್ತಾನೆ

“ಹರಿ”ಯೆಂದರೆ ಅರ್ಥಗಳ ಸಾಲೇ ಬಂದು ನಿಲ್ಲುತ್ತವೆ ನಮ್ಮೆದುರು. ಮಹಾವಿಷ್ಣು-ಜಿಂಕೆ-ಕಪ್ಪೆ ಮೊದಲಾಗಿ. ಆದರೆ “ಹರಿಯದವ” ಅಂದರೆ ಏನು ಮಾಡಲೂ ಶಕ್ತನಾಗದವ ಎಂಬರ್ಥವಾಗುತ್ತದಷ್ಟೆ! ನಿಮಗೂ-ನಮಗೂ-‘ಹರಿಯುದವ ಹರಿ’ —ಎಂದು ರೂಪವಾದರೆ ಅದು ಆಗದಿಲ್ಲ ತಾನೆ. ಯಾವುದರಲ್ಲಿ ಹರಿಯದವ ಎಂಬ ಆಕಾಂಕ್ಷೆಗುತ್ತರ- ಜೀವನದಲ್ಲಿ—ಎಂದು ಸೇರಿಸಿಕೊಂಡರೆ-ಏ ‘ಊ ಹರಿಯದವ ಬಾಳನ್ನು ನಡೆಸಲು ಶಕ್ತನಾಗದವ-ಹರಿಯದವ-ಅಂತಹ ದಾಸ-ಸೇವಾ ವೃತ್ತಿಯುಳ್ಳವ—ಅರ್ಥಾತ್ ಆತ ಬೋಧಿಸುವುದು ಏನೂ ತಿರುಳಿಲ್ಲದ್ದು— ಏನೂ ಪ್ರಯೋಜನಕರವಲ್ಲದ್ದು (ಹಿರಿಯರು ಕ್ಷಮಿಸಬೇಕು)—ಎಂಬುದೇ ತಾತ್ಪರ್ಯ. ಅಂದರೆ—ಯಾರು, ಏನು ಬೇಕೆಂದು-ಕೇಳಬಯಸುತ್ತಾರೋ – ಅಂತಹದಕ್ಕೆ ಇಂತಹ ‘ಹರಿಯದ ‘ಕತೆ’ಗಳಿಗೆ ಬರುತ್ತಾರೆ. ಪಾಪ—ಪುಣ್ಯ—ಸ್ವರ್ಗ –ನರಕ-ಎಲ್ಲಾ ಹರಿಯದ್ದು-ಅಂತಹ ಕತೆಗಳೇ ಕೇಳಬೇಕು.. ಈ ಹರಿಕತೆಗಳಲ್ಲಿ! ಈಗ ಅರ್ಥವಾಯಿತು ತಾನೆ! ಯಾರು—ಏನು—ಎಲ್ಲಿ—ಒಂದೂ ಇಲ್ಲದ-ವ್ಯರ್ಥಾಲಾಪವೆಂದರೆ ಇಂತಹ ‘ಕತೆ’ಗಳೆಂದರೆ ಸಲ್ಲುವುದು. ಒಂದು ಕತೆ ನೆನಪಾಗುತ್ತೆ —ಬಾಲ ಹೋದ ನರಿ ಹೇಳಿತ್ತು—“ನನ್ನಂತೆ ಬಾಲ ಹೋದರೆ ನಿಮ್ಮ ಉದ್ಧಾರ–” ಎಂದು. ಹಾಗೆಯೇ ಪುರಾಣ— ಉಪದೇಶ—ಎಲ್ಲಾ ಹರಿದಾಸರ ಬಾಯಿಯಿಂದ ಬರುತ್ತೆ. ಕೂಡಿದ ಜನ ‘ಹ್ಹಾ! ಹ್ಹಾ!’ ಎಂದು ನಗುತ್ತೆ. ಕ್ಷಣಕಾಲ ಹರಿದಾಸನ ಮಾತಿಗೆ ಜನ ಮೆಚ್ಚುತ್ತದೆ.

ಆದರೆ ಕತೆಯ ಬಾಲ ಹಿಡಿದ ಬಾಲಕರು ಹರಿದಾಸರ ತುಂಟತನಕ್ಕೆ ಕೆಲವೊಮ್ಮೆ ಜರೆಯುತ್ತಾರೆ. ಶಾಸ್ತ್ರ ಪುರಾಣಗಳಿಂದ ಕಹಿ ಗುಳಿಗೆಗಳನ್ನು—ತಿನ್ನಿಸಹತ್ತಿದಾಗ ಅವರು ಹೇಗೆ ಮೆಚ್ಚಿಯಾರು? ಆದರೂ ಅ ರ ಭಾರ ದೊಡ್ಡದಷ್ಟೆ! ಸೇರಿದ ಜನರಲ್ಲಿ ಕೆಲವರಾದರೂ "ಹಿರಿಯ ಮುದುಕರಿದ್ದಾರಲ್ಲ! ಅವರಿಗೆ ಈ ಕತೆ ಏನು ಮಣ್ಣು ಎಂದೆನಿಸಿದಾಗ —ಹರಿದಾಸರ ಬಾಯಿಂದ “ವಿದುರನ ಉಪದೇಶ” ಅಕ್ಕಮಹಾ ಮಹಾದೇವಿಯ ವಚನದ ಸಾರ,’ ಬಸವಣ್ಣನವರ ಬಸವಳಿಯದ ಮಾತುಗಳ ಲಹರಿ, ಮಹಾತ್ಮರ ಅಹಿಂಸಾಶಾಸ್ತ್ರ,’— ಎಲ್ಲಾ ಹೊರಹೊರಡಲು ಸುರುವಾಗುವುದು. ಕೆಲವೊಮ್ಮೆ ಕೂಡಿದ ತುಂಟ ಬಾಲಕರ ತಂಡ ಏನು ಹರಟೆ ಎಂದು ಅತೃಪ್ತಿಗೊಂಡು ಗುಲ್ಲೆಬ್ಬಿಸಿದಾಗ-ಹೋಯ್ ನೀವೇನು chatting machine ಗಳಾಗಿದ್ದೀರಲ್ಲ!— ಎಂದು ಸುರುಮಾಡುತ್ತಾರೆ. ಅವರಿಗೆ ಅನುಕೂಲವಾಗಿ “ಒಡ್ಡಂಬಟ್ಟನೋ— ಚಾಣಿತ್ರಲೆಯನದೋ ಹಾಡು ಹೇಳಿ ನಕ್ಕು ನಗಿಸಲು.

ಈಗ ತಾನೆ ತಲೆಕಾಣಿಸಿಕೊಂಡ ಹರಿಕಥೆಯ ವ್ಯವಸ್ಥಾಕರ ಪೈಕಿ ಹಿರಿಯರೊಬ್ಬರು ಹರಿದಾಸರ ಕುಟುಕುವ ಚುಟುಕು ಹಾಸ್ಯದ ಮೊನೆಗೆ ಗುರಿಯಾಗುತ್ತಾರೆ. ಅಷ್ಟರಲ್ಲಿ ಜಾಂಬವಂತನ ಭಾಗಬಂದದ್ದು ತಾಸಂ—ನೋಡಿರಿ ಜಾಂಬವಂತನು ತಯಾರು ರಾಮ ಸಭೆಗೆ”ಎಂದು ಹೇಳಿ ಸಭೆಯಲ್ಲಿ ನಗುವಿನ ಗೊಂದಲವನ್ನೇ ಎಬ್ಬಿಸಿಬಿಡುವರು. ಮುಖಭಂಗವಾದರೂ ತೋರಗೊಡದೆ ನಗುವಿನ ಮುಸುಕು ಹಾಕಿ ಅವರು ಸರಸರನೆ ಅಲ್ಲಿಂದ ಜಾರುತ್ತಾರೆ.

ಇನ್ನು ಹರಿದಾಸರ ರಾಜಕೀಯ ಕಷಾಯವಂತೂ-ಅವರು ಜೀರ್ಣಿಸಿಕೊಂಡ ರೀತಿಯಂತೂ ತೀರಾ ಒಗಟಾಗಿ ಬಿಟ್ಟಿದೆ. ರಾಜಕೀಯ ಕಷಾಯಕ್ಕೆ-ಧಾರ್ಮಿಕ ಸಕ್ಕರೆಯನ್ನೂ ಬೆರಸಿ ಹೊಸ ಸಮಸ್ಯೆಯನ್ನೇ ತಂದೊಡ್ಡುತ್ತಾರೆ. “ಏನು! ರಾಜಕೀಯಕ್ಕೆ ಇಳಿದರೋ ಹರಿದಾಸರು-ಎಂದು ಜನ ತಲೆಯೆತ್ತಿದಾಗ ರಾಜಕೀಯದ ಪಾಂಡಿತ್ಯವನ್ನು ಪ್ರಕಟಿಸುವ ಚಪಲವುಳ್ಳ ಹರಿದಾಸ ಮಹಾಶಯರು- ಏನಿಲ್ಲ! ನಾನೇನು ಯಾವ ಪಾರ್ಟಿಯವನೂ ಅಲ್ಲ! ನಾನು ನನ್ನ ಪಾರ್ಟಿ”ಎಂದು ನಗೆಯ ಕಡಲಲ್ಲಿ ತೇಲುವರು-“ಹ್ಹಾ! ಹ್ಹಾ” ಎಂದು.

-ಮುಗಿಸಲೇ-ಹರಿಯದ ನಮ್ಮ ಕತೆಯನ್ನು-ಆದರೆ ಒಂದ. ವಿಚಾರ ಬರೆಯದಿದ್ದರೆ ವಾಚಕಮಹಾಶಯರು ಎಲ್ಲಿ ತಿರುಗಿ ಬೀಳುವರೋ ಎಂದು ಬರೆಯುತ್ತಿದ್ದೇನೆ.

ಇದೀಗ ಕ್ರಾಂತಿಯ ಕಾಲ. ಹಳೆತನ್ನು ಹೊಸತಾಗಿ ಜನತೆ ಇದಿರುಗೊಳ್ಳುವ-ಸಾಧಿಸಲು ಹವಣಿಸುವ ಸಂಧಿಕಾಲ. ಹೀಗಿದ್ದು ಒಳಿತನ್ನು ಬಿಟ್ಟು ಕೆಡುಕನ್ನೇ ಬಯಲಿಗೆಳೆಯಲು ಬಯಸುತ್ತಾರೆ-ಕೆಲ ಜನ ಹರಿದಾಸ-ಭಕ್ತರು. ಆದರೆ ಮೇಲ್ಮೆಯ ದೃಷ್ಟಿಯಿಂದ ಇದು ಒಳಿತೇ-ಕೆಡುಕೇ-ಎಂಬ ಸಮಸ್ಯೆ ಓದುಗರ ಪಾಲಿಗೆ-ಎಲ್ಲವೂ ಹೊಸತೆಂದರೂ-ಹಿಂದಿನ ಆದರ್ಶ-ವ್ಯಕ್ತಿಗಳು ಇಂದಿನ ಯುವಕರಿಗೆ ಆದರ್ಶಪ್ರಾಯರಾಗಿರಲಿ! ಇದನ್ನು ತಿಳುಹಿಸುವ ಕಟು-ಜವಾಬ್ದಾರಿ-“ಹರಿದಾಸರದು”- ಎಂಬ ನಂಬುಗೆ ಈ ಲೇಖಕನದು.

-ಅಂತೂ ‘ಹರಿ-ಕತೆ’ಯನ್ನು ಮುಗಿಸುವೆನು.

—ಕಾವೆಂಕ್ಯ.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ಸಂವಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ನೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನ ದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾ ಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಪಮಾಸ್ತರ	1	8
33	ಬಾಳಿನ ಬೆಡಗು	1	4
34	ರಾಜಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6
39	ಮದುವೆ ಸೀರೆ	1	0

ರೂ38-6-0ಯ ಈ ಎಲ್ಲಾ ಪುಸ್ತಕಗಳ ಒಮ್ಮೆಯೇ ತರಿಸಿಕೊಂಡರೆ ರೂ.30-0-0ಕ್ಕೆ ಕೊಡಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

In the Court of the District Munsiff of Kundapur

O. S. 478/1958

1- Ummar Saheb
2. Abdul Rehman Saheb
3. Sheik Bibi
4. Masabi
5. Sakhinabi
6: Moidin Saheb
7. Hassan Saheb
8. Khatijabi.
} Plaintiffs

Versus

1. Panju
2. Duggu
3. Devi
4. Bacha
5. Manja
6. Sadiya
7. Gowrakka
8. Sanka
9. Shesha
10. Lingu,
11. Laxmi
12. Subbu
13. Putti
14. Narain Bhandary
} Defendants

Summons to 1) 9th Deft. Shesha, son of Halramma and
2) 14th Deft. Narain Bhandary, son of Akkunje Ramaiya Bhandary—
both known to have resided last in Siddapur village, Coondapur Taluq,

Whereas the Plaintiffs above-named have instituted the above suit for the recovery of Mulgeni rent arrears owning by the family of Defendants 1 to 13 and whereas the 14th Defendant is impleaded in the suit as a Co-mulgar holding an equal charge over the lease-hold in the suit, each of you is hereby summoned to appear before this Court at 11 A. M. on 5—2—1959 and be heard in answer to the above suit, failing which, you will be 'set exparte' and the suit will proceed accordingly.

By order of the Court.

Coondapur,
6—1—1959.

S. N. Acharya,
Advocate for Plaintiffs.

ಹೊಸ ಪುಸ್ತಕ
ಇದೀಗ ಪ್ರಕಟವಾಗಿದೆ.

ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‍ಟನ್

ಲೇಖಕ: ಜಿನೇ ಇಯೋಟೆನ್.
ಅನುವಾದಕರು:
ಯು. ಎಲ್. ಆಚಾರ್ಯ,
ಎಮ್. ಎ.ಎಲ್. ಟಿ.

ಬೆಲೆ: ರೂಪಾಯಿ ಒಂದೂಕಾಲು.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ್ ವಾಶಿಂಗ್‍ಟನ್ನನ ಜೀವನ ಚರಿತ್ರೆಯಿದು. ಈತನ ಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಒಂದು ರೂಪಾಯಿ ಎಂಟಾಣೆ (ರೂ. 1=50 ನಯೇಪೈಸೆ) ಮನಿಯಾರ್ಡರ್ ಮಾಡಿದರೆ ಒಂದು ಪ್ರತಿಯನ್ನು ಬುಕ್‍ಪೋಸ್ಟು ಮಾಡಬಹುದು.

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಥಾ ವಿಹಾರ

(೨ನೇ ಪುಟದಿಂದ)

ಳಂಬವಾಗಿಲ್ಲ. ನೋಡುವ ಹುಡುಗ ವದಿಂದ ಒಂದು ಪತ್ರ ಬರೆದು. ಮುಂ ನ ತಂಗಿ ತಾನಾಗಿ ಹೊರಬರುತ್ತದೆ ಂದುಕೊಂಡರು.

ಮದುವೆಗೆ ನಾಲ್ಕು ದಿನದ ಮುಂಚೆ ೋಹನರಾಯರ ಹೆಸರಲ್ಲಿ ಕಾಗದ. ನೀತಿ ಆದೊಂದು ಸಂಜೆ ದಿನಚರಿಯು ಲ್ಲಿ ಮಗ್ನಳಾದಾಗ ಅಂಚೆಯವನು ಗಿದ ತಕ್ಷಣ ಸುನೀತಿಯ ಕೈಯಲ್ಲಿ ಗದವಿತ್ತ. ಸುನೀತಿ ಅದನ್ನು ಉತ್ಸುಕತೆ ಂದ ಜೋಪಾನವಾಗಿರಿಸಿದಳು. ಸಂಜೆ ಉಪಾಹಾರವಾದ ಮೇಲೆ ಕೋಣೆಗೆ ೋದಾಗ ಪತ್ರದ ಸ್ಮರಣೆ ಬಂದು ತೆಗೆ ಸುತ್ತ ದೃಷ್ಟಿ ಹೊರಳಿಸಿದಳು. ತಂದೆ ಹೆಸರಿನಲ್ಲಿರುವುದರಿಂದ ತೆಗೆದು ಓದ ಡಗಿದಳು. ಸಂಪೂರ್ಣ ವಿಚಾರ ಮನ ಕೆಯಾಯಿತು. ಮುಂಜಾನೆ ಬಂದ ಾವನಲ್ಲಿ ಓಲೆಯಿತ್ತಳು. ಶ್ಯಾಮರಾ ಯರು ಉತ್ಸುಕತೆಯಿಂದ ಪತ್ರವನ್ನು ಡಿ ಓದಲು ಪ್ರಾರಂಭಿಸಿದರು ಓದು ದ್ದಂತೆ ಕಣ್ಣುಗಳು ಕೆಂಪಗಾಗತೊಡ ದುವು. ಮುಖದಲ್ಲಿ ರೋಷಾವೇಶವು ನರಿಸಿತು. ಇದ್ದಕ್ಕಿದ್ದಂತೆ ಹಲ್ಲು ಮಿಟ ಸುತ್ತ, 'ಚಾಂಡಾಲ-ಏನು? ಹುಡುಗ ಒಪ್ಪಿಗೆ ಇಲ್ಲವೇ? ದ್ರೋಹಿ, ಹುಡು ನ ಹೆಸರು ಹೇಳಿ ಹುಡುಗಿಯ ಕೊಲೆ ಾಡಬಯಸುವೆಯಾ? ನಿನ್ನಂತಹ ಧನ ಾಚಿಯ ಸಂಬಂಧ ಬೇಡವೇ ಬೇಡ. ವರ ದಯೆ ಇದ್ದರೆ ಸುನೀತಿಗೆ ಎಲ್ಲಿ ಾದರೂ ವರ ಸಿಕ್ಕಿಯಾನು. ಆದರೂ ನ್ನಂತಹ ಪಿಶಾಚಿಗೆ ನೀರು ಕುಡಿಸದಿದ್ದ ನಾನು ಶ್ಯಾಮರಾಯನಲ್ಲ. ತಂಗೀ, ನ್ನ ಮದುವೆಗೆ ೩೦೦ ವಿಘ್ನಗಳು ಬಂದ ೂ ನಾನಿದ್ದೇನೆ. ಧೈರ್ಯವಾಗಿರು, ಬೇ ಸಪಡಬೇಡ ಎಂದು ಸುನೀತಿಗೂ ಧೈರ್ಯ ಹೇಳಿ ಆಕ್ಷಣ ಅಲ್ಲಿಂದ ಹೊರ ರು.

ಭಟ್ಟರು ನೆಂಟಸ್ತಿಕೆ ಮುರಿದು ಹೋ ದಿನಿಂದ ತುಂಬಾ ಬೇಸರಗೊಂಡವ ಾಗಿದ್ದರು. ಬೇರೆ ಸಂಬಂಧ ಬೆಳೆಸುವ ಂದರೆ ಯಾರೂ ಮುಂದೆ ಬರುವವರಿಲ್ಲ. ಟ್ಟರನ್ನು ನೋಡಿ ಎಲ್ಲರೂ ಹೆದರಿದ್ದ . ಕೇಶವನು ತಂದೆಯ ಈ ಆಶಾವಾದ ಂಡ ಬೇಸತ್ತಿದ್ದ. ಹೊರಗಿನಿಂದಲೂ ವೇ ಕೂಗಾಟ, ಅಂತೂ ಅವನಿಗೆ ಜೀವ ಾರವಾಗಿತ್ತು. ಅದೊಂದು ದಿನ ರಾತ್ರಿ ದ್ರೆಯಿಲ್ಲದೆ ಶೈಯ್ಯಾತಳದಲ್ಲಿ ಹೊರಳು ದ್ದ. ಒಂದೊಂದೇ ಭಾವನೆಗಳು ಮನಃ ಟಲದಲ್ಲಿ ಮೂಡಿ ಮರೆಯಾಡತೊಡಗಿ ವು. ಇದ್ದಕ್ಕಿದ್ದಂತೆ ದಟ್ಟನೆ ಎದ್ದು ೇಜ ಬಳಿ ಸಾರಿ ಪೆನ್ನು ತೆಗೆದು ಬರೆಯ ಡಗಿದ. ಎಷ್ಟು ಹೊತ್ತು ಹಾಗೆ ಕುಳಿತನೋ ತಿಳಿಯದು.

ಮುಂಜಾನೆ ಭಟ್ಟರೆದ್ದು 'ಕರಾಗ್ರೇವಸತೇ ಲಕ್ಷ್ಮೀಃ' ಇತ್ಯಾದಿ ಪ್ರಾತಃಸ್ತೋತ್ರಗಳನ್ನು ಹೇಳಿ ಮಗನ ಹೆಸರೆತ್ತಿ ಕೂಗಿದರು. ಕೇಶವಾ ಇನ್ನೂ ಏಳಲಾಗಿಲ್ಲವೇ? ಹೊತ್ತು ಎರಡು ಮೂರು ಬಂತು. ಎಂತ ಗದರಿಸಿದರೂ ಅಷ್ಟಾದರೂ ಮಗನು ಏಳದುವನ್ನು ನೋಡಿ ಕೋಣೆಯೊಳಗೆ ಧಾವಿಸಿದರು ಕೋಣೆ ಖಾಲಿಯಾಗಿತ್ತು. ಮಗನಿಲ್ಲ. ಪ್ರಕೃತ ಭಟ್ಟರಿಗೆ ಸಿಕ್ಕಿದುದು ಕಾಗದದ ಚೂರು ಮಾತ್ರ ಅದನ್ನೆತ್ತಿ ಓದ ತೊಡಗಿದರು.

ತಂದೆಯ ಚರಣಾರವಿಂದಗಳಲ್ಲಿ ಕೇಶವನ ನಮಸ್ಕಾರ,

ನಿಮ್ಮನ್ನು ದೂರಗೈದು ನಾನು ಹೊರಟಿರುವೆ. ಗೊತ್ತು ಗುರಿ ಇಲ್ಲದ ನನ್ನ ಪಯಣವನ್ನು ಮುಂದುವರಿಸುತ್ತೇನೆ. ನನ್ನ ಸರ್ವಾಪರಾಧವನ್ನು ಕ್ಷಮಿಸಿ, ತಾವು ತಾಯಿಯೊಂದಿಗೆ ಸುಖ ಜೀವನವನ್ನು ಸಾಗಿಸುತ್ತಿದ್ದು ನನ್ನನ್ನು ಮರೆತಿರಿ. ತಮ್ಮ ಪಾದಕಮಲಕ್ಕೆ ನನ್ನ ಅಂತಿಮ ಪ್ರಣಾಮಗಳು. ಇತಿ.

ಕೇಶವ.

ಕಾಗದವನ್ನೋದಿ ಅಲ್ಲೇ ಮೂರ್ಛೆಗೆಸಂದರು.

೦೦ ೦೦ ೦೦

ಸುನೀತಿಯ ವಿವಾಹ ಶ್ರೀಧರನೊಂದಿಗೆ ಜರಗಿ ಹೋಗಿತ್ತು. ಸುಬ್ಬಜೋಯಿಸರ ಏಕಮಾತ್ರ ಪುತ್ರ ಶ್ರೀಧರ ಎಂ.ಎ. ಪಾಸುಮಾಡಿ ಈಗ ತಾನೆ ಊರಕಡೆ ಶಾಲೆಯ ಮುಖ್ಯೋಪಾಧ್ಯಾಯನಾಗಿದ್ದ. ಇಂದಿನ ಸಮಾಜದ ವರದಕ್ಷಿಣೆಗೆ ಅವನು ಬಾಹಿರನಾಗಿದ್ದು ಸಹೋದ್ಯೋಗಿಗಳಿಗೆ ಉಪದೇಶಿಸುತ್ತಿದ್ದನು. ಎಲ್ಲದಕ್ಕೂ ಸೀರಿಕೆಯಾಗಿ ತೋರಿಸಬೇಕೆಂಬ ಲವಲವಿಕೆಯಿಂದ ಸುನೀತಿಯ ವಿವಾಹವಾದನು. ವರದಕ್ಷಿಣಾ ಶುಲ್ಕಕ್ಕೆ ಬಾಹಿರವಾದ ಒಂದು ಸಮಾಜವನ್ನು ಎತ್ತಿ ಕಟ್ಟಿದನು ಶ್ಯಾಮರಾಯರು ಕಷ್ಟಪಟ್ಟೂ ಯೋಗ್ಯನಾದ ವರ ಸಿಕ್ಕಿದುದಕ್ಕೆ ಸಂತೋಷಪಟ್ಟರು. ನವದಂಪತಿಗಳು ಹಂಗಿಗ ಬಳುವಳಬಿಟ್ಟು ಅನ್ಯೋನ್ಯ ಪ್ರೀತಿ ವಿಶ್ವಾಸದ ನಂದಾದೀಪ ಬೆಳಗಿಸಿದರು.

ಕೆ. ಎಸ್. ಕಾರಂತ.

ವಿಚಿತ್ರ ಸಸ್ಯ

ನೀರಿರುವಲ್ಲಿ ಕೆಸರಿರುವುದು

ಅಮೆರಿಕೆಯ ವಿದ್ಯಾರ್ಥಿಗಳು ಕುಶಲರಿದ್ದರೂ ಅವರ ವಿಲಾಸ ವಿಭ್ರಮಗಳಿಂದ ಜನಾಂಗ ತಿಪ್ಪೆಗೆ ಕುಸಿಯುತ್ತಿದೆ

ನವನಿಕೇತನ ಸೊಸಾಯಿಟಿಯವರು ಸಹಕಾರ ಪ್ರಯತ್ನದಿಂದ ಒಂದು ನಗರವನ್ನೇ ಯಶಸ್ವಿಯಾಗಿ ನಿರ್ಮಿಸಿದರು. ಸಹಕಾರದಲ್ಲಿರುವ ಅದ್ಭುತ ಶಕ್ತಿಯನು, ಇಂದು ಕಂಡುಕೊಳ್ಳುವಂತಾಯಿತು. ಕವಿಯು ಕನಸನ್ನು ಕಾಣಬಲ್ಲ; ಆದರೆ, ಕನಸನ್ನು ನನಸಾಗಿಸುವ ಕಾರ್ಯಶಾಲಿಗಳು ಇಲ್ಲಿದ್ದಾರೆ. ಇಂದು ಬಾಗಿಲು ತೆರೆದ ಶಿಕ್ಷಣದ ಈ ದೇಗುಲದಿಂದ ಹೊರಬೀಳುವ ವಿದ್ಯಾರ್ಥಿಗಳು ನಾಡಿನ ರಕ್ಷಕರಾಗಲಿ, ಸಾಕ್ಷಿ ಪುರುಷರಾಗಲಿ, ಕಾರ್ಯಶಾಲಿಗಳಾಗಲಿ.

ಅಮೇರಿಕೆಯ ಸಂದರ್ಶನ ಕಾಲದಲ್ಲಿ ಅಲ್ಲಿಯ ಲೆಕ್ಸಿಂಗಟನ್ ಎಂಬಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಸಂದರ್ಶಿಸಿದ್ದೆ. ಅಲ್ಲಿಯ ಶಾಲೆಗಳ ಸ್ಥಿತಿಗತಿಗೂ ಇಲ್ಲಿನವುಗಳಿಗೂ ಮಹದಂತರವಿರುತ್ತದೆ. ಅಲ್ಲಿ ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಕೊಡುವ ಮಹತ್ವವನ್ನು ಪ್ರಾಥಮಿಕ ವಿದ್ಯಾಭ್ಯಾಸಕ್ಕೂ ಕೊಡುವರು ಶಿಕ್ಷಕರಲ್ಲಿ ಭೇದವಿಲ್ಲ; ಪ್ರಾಥಮಿಕ ಮಾಧ್ಯಮಿಕ ವಿಶ್ವವಿದ್ಯಾಲಯಗಳ ಶಿಕ್ಷಕರಿದ್ದರೂ ಏಕರೀತಿಯ ಸಂಬಳವನ್ನು ಅವರಿಗೀಯಲಾಗುತ್ತದೆ ಸಸಿ ನೆಡುವಿಕೆಯನ್ನೇ ಮರದ ಮುಂದಿನ ಬೆಳವಣಿಗೆಯು ಅವಲಂಬಿಸಿರುವುದರಿಂದ ಪ್ರಾಥಮಿಕ ಶಿಕ್ಷಣವು ಅಷ್ಟು ಮಹತ್ವದ್ದಾಗಿದೆ. ಆದರೆ, ಭಾರತದ ಪರಿಸ್ಥಿತಿಯೇ ಬೇರೆ, ಇಲ್ಲಿಯ ಶಿಕ್ಷಕನ ಸ್ಥಾನ ದೇವರ ಸ್ಥಾನ ಇದ್ದಂತೆ, ಆದರೆ, ಸಮಾಜದ ಮನ್ನಣೆ ಮಾತ್ರ ಇಲ್ಲ. ಇನ್ನು ನೋಡಿದರೆ ನಮ್ಮ ಸಮಾಜ ಬಹಳ ಹಿಂದೆ ಬಿದ್ದಿರುವುದು ಕಂಡುಬರುತ್ತದೆ ಅಲ್ಲಿಯ ಪ್ರಗತಿ ನೋಡಿ, ನಮ್ಮ ಜನ ದಂಗು ಬಡಿಯುತ್ತಾರೆ, ಜೀವ ಹಾರಿಹೋಗದಂತೆ ನೆತ್ತಿಯ ಮೇಲೆ ಕೈ ಇಟ್ಟುಕೊಳ್ಳಬೇಕಾಗುತ್ತದೆ ನಾವು ಗುಳಿಗುಂಪೆಯಲ್ಲಿ ಬಿದ್ದಿರುವೆವೋ ಎಂದೆನಿಸುತ್ತದೆ. ಏಕೆ? ಅಮೆರಿಕನ್ನರು ಬಾಳಲು ಕಲಿತಿದ್ದಾರೆ. ಸಾಹಸ ಪರಿಶ್ರಮಾದಿಗುಣಗಳಿಂದ ಬಹಳ ಮುಂದುವರಿರುವರು. ಉದಾಹರಣೆಗಾಗಿ ೧೮೪೭ರಲ್ಲಿ ಉಪ್ಪಿನ ಸರೋವರ ಎಂಬಲ್ಲಿ ನೆಲಸಿದ ಕೆಲವೇ ಜನರು ಆ ಮರುಭೂಮಿ ಪ್ರದೇಶವನ್ನು ನಲ್ವತ್ತು ವರ್ಷಗಳಲ್ಲಿ ನಂದನವನವನ್ನಾಗಿ ಪರಿವರ್ತಿಸಿದ ಅದ್ಭುತ ಕಥೆಯನ್ನು ಹೇಳಬಹುದು.

ಹೀಗೆ ಹೇಳಿದ ಮಾತ್ರಕ್ಕೆ ಅಮೆರಿಕೆಯಲ್ಲಿ ಎಲ್ಲವೂ ಸುಖವಾಗಿದೆ, ಅದು ಸ್ವರ್ಗ ಎಂದು ತಿಳಿಯುವ ಕಾರಣವಿಲ್ಲ. ಅಲ್ಲಿಯೂ ಅನೇಕ ಸಮಸ್ಯೆಗಳಿವೆ. ಅಮೆರಿಕನ್ನರು ಅಲ್ಲಿ ನೆಲಸುವ ಮೊದಲು ಮೂಲ ನಿವಾಸಿಗಳಾದ ರೆಡ್ ಇಂಡಿಯನ್ ಜನಾಂಗದ ಕೊಲೆ ಮಾಡಿದರು. ಈಗ ಅದು ಅವರ ವಿವೇಕವನ್ನು ಕೊರೆಯುತ್ತಿರುವುದರಿಂದ ಆಳದುಳಿದ ಅವರ ವಂಶಜರಿಗಾಗಿ ಸಾಕರ್ಯಗಳನ್ನು ಕಲ್ಪಿಸಿಕೊಡುತ್ತಿರುವರು.

ಎರಡನೆಯದಾಗಿ ಅಮೆರಿಕನ್ ನಾಗರಿಕತೆ ತ್ವರಿತಗತಿಯಿಂದ ಮುಂದುವರಿದಂತೆ ಅಷ್ಟೇ ರಭಸದಿಂದ ಕುಸಿದು ಬೀಳುವ ಹೆದರಿಕೆಯುಂಟಾಗುತ್ತದೆ. ಅವಸರದ ಜೀವನದಿಂದ ಹುಚ್ಚರ ಸಂಖ್ಯೆ ಹೆಚ್ಚಾಗುತ್ತಿದೆ ಶಿಕ್ಷಣ ಮಂದಿರಗಳು ವೈಭವದಿಂದ ಮೆರೆಯುತ್ತಿದ್ದರೂ ವಿದ್ಯಾರ್ಥಿಗಳು ಕುಶಲರಾಗಿದ್ದರೂ ವಿಶ್ರಾಂತಿ, ವಿಲಾಸ ಜೀವನ ಅವರಲ್ಲಿ ಬೆಳೆಯುತ್ತದೆ ವಾರಾಂತ್ಯದಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಜೋಡಿಯಾಗಿ ಕೆಲವು ಸರಾಯಿ ಬಾಟ್ಲಿಗಳನ್ನು ಸಂಗ್ರಹಿಸಿಕೊಂಡು ವಿಹಾರಕ್ಕೆ ಹೋಗುವುದು ಕ್ರಮವಾಗಿದೆ. ಈ ವಿಲಾಸ ವಿಭ್ರಮ ಕೆಲವೇ ಜನರಿಗೆ ಅಂಟಿಕೊಂಡಿರದೆ ನೂರಕ್ಕೆ ೮೦ರಷ್ಟು ಜನರನ್ನು ಆವರಿಸಿವೆ. ೧೪-೧೫ ವರ್ಷಗಳಾಗುತ್ತಲೆ ಕನ್ಯೆ ತನಗಾಗಿ ತಾನೇ ವರನನ್ನು ಶೋಧಿಸಿಕೊಳ್ಳಬೇಕಾಗುತ್ತದೆ. ಅವಳು ಅದರಲ್ಲಿ ತಪ್ಪಿದರೆ, ಅಥವಾ ವಾರಾಂತ್ಯದ ವಿಹಾರಕ್ಕೆ ಹುಡುಗನನ್ನು ಆಕರ್ಷಿಸಲು ತಪ್ಪಿದರೆ, ಅವಳು ಮುಪೀನೆ ಎಂದು ಪರಿಚಿತರು ಅವಳನ್ನೂ ಅವಳ ಮಾತಾಪಿತರರ ಜರೆಯುತ್ತಾರೆ. ಅವರ ಜೀವನ ನೆನೆದರೆ, ನಮ್ಮ ವಿದ್ಯಾರ್ಥಿಗಳು ಸಾವಿರ ಪಾಲು ಮೇಲೆನಿಸುತ್ತದೆ. ನಮ್ಮವರ ಶಿಸ್ತು ಸಂಯಮಗಳು ಪ್ರಶಂಸನೀಯವಾಗಿವೆ. ಅಮೆರಿಕೆಯ ಇಂದಿನ ವಿಲಾಸಮಯ ಜೀವನವು ತಾಂತ್ರಿಕಯುಗದ ಪರಿಣಾಮ; ಭಾರತೀಯ ಜೀವನದಲ್ಲಿ ಅವರ ಹಳೆಯ ಒಳ್ಳೆ ಸಂಸ್ಕೃತಿಯ ಅಂಶ ಉಳಿದಿದೆಯೆಂದೇ ನಾವು ಪಾರಾಗಿದ್ದೇವೆ. ಆದರೆ, ಇಲ್ಲಿಯೂ ತಾಂತ್ರಿಕ ಪ್ರಗತಿ ರಭಸದ ಹೆಜ್ಜೆಹಾಕುತ್ತಿರುವುದರಿಂದ ಇನ್ನು ೩೦—೪೦ ವರ್ಷಗಳಲ್ಲಿ ಅಮೆರಿಕೆಯ ಸ್ಥಿತಿ ಇಲ್ಲಿಯೂ ಉಂಟಾಗಬಹುದು. ಅಲ್ಲಿ ಇಂದು ಕಂಡು ಬರುತ್ತಿರುವ ಜೀವನದ ಸಾಂಸ್ಕೃತಿಕ ಸಂಕಟ ನಮ್ಮನ್ನೂ ನುಂಗಬಾರದೆಂದು ಬಯಸುವುದಾದರೆ, ಈಗಿನಿಂದಲೇ ತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು.

(ಶ್ರೀ ವಿ. ಕೃ. ಗೋಕಾಕರ ಭಾಷಣದಿಂದ).


ೋವುಗಳ ಅತ್ಯುತ್ತಮ ಸಂಹಾರಿಣಿ.

ಮೃತಾಂಜನ

ನೀವು ಈ ಗುರುತನ್ನು ನೋಡಿದೊಡನೆಯೇ

ನಿಮಗೆ ಅತ್ಯುತ್ತಮವಾದುದು ದೊರಕಿತೆಂದು ತಿಳಿಯುವಿರಿ

SR

ಎಸ್. ಆರ್.

ಉತ್ತಮ ತಂಬಾಕು ಎಲೆಗಳಿಂದ ತಯಾರಿಸಲ್ಪಟ್ಟ ಬೀಡಿಗಳಾಗಿರುತ್ತವೆ.

S. R. Beedi Works UDIPI S.K.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ಕಾಂಗ್ರೆಸ್‌ನ ಗುರಿ

(೧ನೇ ಪುಟದಿಂದ)

ಆದುದರಿಂದ ಈ ವಿಷಮತೆಯನ್ನು ದೂರೀಕರಿಸಿ ದೇಶದ ಜನರಲ್ಲಿ ಸೇಕಡಾ ೭೦ರಷ್ಟಿರುವ ರೈತ ಕೂಲಿಗಾರರ ಅಭ್ಯುದಯವನ್ನು ಸಾಧಿಸಬೇಕು. ಈ ಜನರಿಗೆ ಕೆಲಸ ಒದಗಿಸುವುದಲ್ಲದೆ ಅನ್ನ, ಶಿಕ್ಷಣ ಸೌಕರ್ಯ, ಆರೋಗ್ಯ ರಕ್ಷಣೆ, ವಸತಿ ಸೌಕರ್ಯ ಮುಂತಾದ ಜೀವನಾವಶ್ಯಕ ಸೌಕರ್ಯಗಳನ್ನು ಕಲ್ಪಿಸಿಕೊಡಲೇಬೇಕಾಗಿದೆ.

ಜನತೆಯ ಆದಾಯದಲ್ಲಿರುವ ವೈಷಮ್ಯವನ್ನು ಹೋಗಲಾಡಿಸಲು ಶ್ರೀಮಂತರನ್ನು ಬಡವರನ್ನಾಗಿ ಮಾಡದೆ ಬಡವರ ಆದಾಯವನ್ನು ಹೆಚ್ಚಿಸಬೇಕು. ಈ ಮಹಾಕಾರ್ಯದಲ್ಲಿ ಏನಾದರೂ ತ್ಯಾಗಮಾಡಬೇಕಾಗಿ ಬಂದಲ್ಲಿ ಖಾಸಗಿ ಉದ್ದಿಮೆದಾರನೂ ಸಿದ್ಧನಿರಬೇಕು. ಯಾರಾದರೂ ಉತ್ತಮ ಕಾರ್ಯವನ್ನು ಮಾಡಬಯಸಿದರೆ, ಅವನಿಗೆ ಪ್ರೋತ್ಸಾಹ ನೀಡಬೇಕು; ದಬ್ಬಾಳಿಕೆಯಿಂದ ಕಾರ್ಯೋತ್ಸಾಹ ಭಂಗವಾಗುತ್ತದೆ ಎಂದು ಕಾಂಗ್ರೆಸ್ ಅರಿತಿದೆ. ಪ್ರಜಾಪ್ರಭುತ್ವದಲ್ಲಿ ಜನತೆಯ ಜೀವನ ಸಂಪ್ರದಾಯವನ್ನು ಗಮನಿಸಬೇಕಾಗುತ್ತದೆ. ಆದರೂ ನಾವೀಗ ಸಾಧಿಸಬೇಕಾದುದು ಅಪಾರವಿದೆ; ಆದರೆ, ಕಾಲವು ಮಾತ್ರ ಪ್ರತಿಕೂಲವಿದೆ.

ಉದ್ದಿಮೆಗಳಲ್ಲಿ ನಾವು ತೊಡಗಿಸಿದ ಬಂಡವಾಳವೂ ದುಡಿಯುವ ಜನರೂ ಕಡಿಮೆ. ವಿದ್ಯುತ್ತು, ಉಕ್ಕು, ಸಿಮೆಂಟುಗಳ ಪ್ರಮಾಣ ೧೯೫೧ಕ್ಕಿಂತ ಹೆಚ್ಚಿದ್ದರೂ ಅದು ಜನನಿಬಿಡವಾದ ನಮ್ಮ ದೇಶಕ್ಕೆ ಕಡಿಮೆಯೆನಿಸಿದೆ. ಇಲ್ಲಿ ತೀವ್ರ ಪ್ರಗತಿಯಾಗುವುದು ಅತ್ಯಗತ್ಯ.

ಇದು ಕಾಂಗ್ರೆಸ್ಸಿನ ಸತ್ವಪರೀಕ್ಷೆಯ ಕಾಲ. ಕಾಂಗ್ರೆಸ್ಸು ಮುಂಬರಿಯಬೇಕಾದರೆ, ತನ್ನ ವೈಯಕ್ತಿಕ, ಪಾಕ್ಷಿಕ ವೈಮನಸ್ಯ ದೂರಮಾಡಬೇಕು. ಸ್ವಾರ್ಥತ್ಯಾಗ, ಪರಿಶ್ರಮಕ್ಕೆ ಮುಂದಡಿಯಿಡಬೇಕು. ಸಮಾಜವಾದ ಮತ್ತು ಪಕ್ಷ ಮನೋವೃತ್ತಿಗಳು ಹೊಂದಿ ನಡೆಯಲಾರವು. ಆಚಾರ ಮತ್ತು ಪಾರಗಳು ಎಂದಿಗೂ ಒಂದಾಗಲಾರವು. ಜನತಾ ಕಲ್ಯಾಣವನ್ನು ವಿರೋಧಿಸುವುದಿರಲಿ, ತಾತ್ಸಾರದಿಂದ ಕಂಡರೂ ಸಮಾಜವಾದವು ನಮ್ಮ ಗುರಿಯಾಗಲಾರದು. ನಮ್ಮ ಗುರಿಯನ್ನು ನಾವು ಈಗಲೇ ನಿರ್ದಿಷ್ಟಪಡಿಸಿ ಮುಂದುವರಿದರೆ ಮಾತ್ರ ನಾವು ವೇಗವಾಗಿ ಮುಂದುವರಿಯಬಹುದು. ನಮ್ಮ ಸಮಸ್ಯೆಗಳೊಡನೆ ಇನ್ನೂ ಕಣ್ಣುಮುಚ್ಚಾಲೆಯಾಡುತ್ತ ಕುಳಿತರೆ ಕಾರ್ಯಸಾಧನೆಯಾಗಲಾರದು

ದೇಶ ಸಂಪತ್ತಿನಿಂದಲೇ ತೃತೀಯ ಯೋಜನೆ ಕಾರ್ಯಾನ್ವಿತವಾಗಬೇಕು. ಜೀವನ ಮರಣದ ಪ್ರಶ್ನೆಯಿದಾದುದರಿಂದ, ಪ್ರಯಾಸದಿಂದಾದರೂ ಅವಶ್ಯಕ ಧನವನ್ನು ನಾವು ಗಳಿಸಿಕೊಳ್ಳಲೇ ಬೇಕು. ಅಪೂರ್ಣ ಯೋಜನೆಗಳನ್ನು ಪೂರ್ಣಗೊಳಿಸಿ ಔದ್ಯೋಗಿಕ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ, ಉತ್ಪಾದನೆಯ ಗುರಿಯನ್ನು ಸಾಧಿಸುವುದರಿಂದ, ಅವಶ್ಯಕ ಪದಾರ್ಥಗಳ ಬೆಲೆ ನಿರ್ಣಯಿಸುವುದರಿಂದ, ಸಂಬಳಪ್ರಮಾಣ ಮತ್ತು ಉದ್ದಿಮೆಗಳಲ್ಲಿ ಲಾಭದ ಪ್ರಮಾಣ ನಿರ್ಧರಿಸುವುದರಿಂದ ಮತ್ತು ಉಳಿತಾಯ ಸಾಧಿಸುವುದರಿಂದ ನಾವು ಹಣ ಕೂಡಿಸಬಹುದು

ಸಾಂಸ್ಕೃತಿಕ ಹಿನ್ನೆಲೆ, ಪರಿಸ್ಥಿತಿ, ಆರ್ಥಿಕ ಸ್ಥಿತಿಗಳನ್ನು ಹೊಂದಿಕೊಂಡು ಸಮೀಕೃತ ಶಿಕ್ಷಣಪದ್ಧತಿಯನ್ನು ರೂಪಿಸಿಕೊಳ್ಳಬೇಕಾಗಿದೆ. ದೇಶದಲ್ಲಿ ಪಕ್ಷದ ಸಂಘಟನೆ ಮುಖ್ಯವಲ್ಲ; ದೇಶದ ಅಭಿವೃದ್ಧಿಗಾಗಿ ಮಾನವಬಲ ಮತ್ತು ಸಂಪತ್ತಿನ ಸಂಘಟನೆ ಅಗತ್ಯ. ಗ್ರಾಮ ಪಂಚಾಯತಿಯು ಆಡಳಿತದ ತಳಹದಿಯಾಗಿ, ಹಳ್ಳಿಯ ಸಹಕಾರಿ ಸಂಘವು ಅದರ ಆರ್ಥಿಕ ವಿಭಾಗವಾಗಿ, ಶಾಲೆಯು ಸಾಂಸ್ಕೃತಿಕ ಘಟಕವಾಗಿ ಸಮಾಜ ರೂಪುಗೊಳ್ಳಬೇಕು. ಆಗ ಶಾಶ್ವತ ಕಟ್ಟಡ ನಿರ್ಮಾಣ ಸಾಧ್ಯ.

ಸಜೀವ ಮಂಡಳ ಕಾಂಗ್ರೆಸ್‌ಗಳಿಂದ ಕಾಂಗ್ರೆಸ್ಸು ಚೈತನ್ಯಯುಕ್ತವಾಗಿ ರೂಪುಗೊಳ್ಳುತ್ತಿದೆ. ಯುವಕರ, ಮಹಿಳೆಯರ, ಸೇವಾರಹಿತ ಕೂಲಿಗಾರರ, ಹರಿಜನರ ಗಿರಿಜನರ ವಿಭಾಗಗಳಿಂದ ಕೂಡಿ, ಅಭ್ಯಾಸ ಮಂಡಳ, ಸಂಶೋಧನೆ, ಪ್ರಚಾರ ಮುಂತಾದ ವಿಧಾಯಕ ಕಾರ್ಯಮಾಡುವ ಮಂಡಳ ಕಾಂಗ್ರೆಸ್ಸು ಸಮಿತಿಗಳು ಮುಂದುಬರಬೇಕು. ಆಗ ಬಲವೂ ಧೈರ್ಯವೂ ಬರುತ್ತದೆ. ಹಾಗಾದಾಗ ಹೇಳುವವರ ಮಾತನ್ನು ಯಾರೂ ನಿರಾಕರಿಸಲಾರರು.

ಕಾಂಗ್ರೆಸ್ಸನ್ನು ಭದ್ರವಾಗಿಸಬೇಕಾಗಿದೆ; ಆಕರ್ಷಕಗೊಳಿಸಬೇಕಾಗಿದೆ. ಕಾಂಗ್ರೆಸ್ಸು ಒಕ್ಕಟ್ಟಿನಲ್ಲಿರುವಲ್ಲೆಲ್ಲ ಬೇರೆ ಪಕ್ಷಗಳನ್ನು ತಲೆಯೆತ್ತಲು ಅವಕಾಶವಿತ್ತಿಲ್ಲ. ಕಾಂಗ್ರೆಸ್ಸೀಗ ಪರಿಸ್ಥಿತಿಯನ್ನೆದುರಿಸಲು ಬದ್ಧಕಂಕಣವಾಗಬೇಕು.

ನಿರುದ್ಯೋಗ, ಅರೆಗೆಲಸಗಳಿಂದ ಜನರು ಸದ್ಯಫಲವೀಯುವ ಯೋಜನೆಗಳತ್ತ ಉತ್ಸಾಹತೋರಿಸುತ್ತಿಲ್ಲ. ನಿರುದ್ಯೋಗದಿಂದ ನೀತಿ ಮತ್ತೆ ತಗ್ಗುವುದು. ಜನತೆಯಲ್ಲಿಯೂ ಉತ್ಸಾಹ ಕುಂದಿದೆ. ಈ ವೈಷಮ್ಯವೆಲ್ಲವೂ ದೂರವಾಗಬೇಕು. ಎಲ್ಲರಿಗೂ ಜೀವನಾವಶ್ಯಕವಾದ ಕನಿಷ್ಠ ಸೌಕರ್ಯಗಳಾದರೂ ದೊರೆಯುವಂತಾಗಬೇಕು. ದೇಶದಲ್ಲಿರುವ ಲಂಚಗುಳಿತನವು ದೂರವಾಗಬೇಕು; ನ್ಯಾಯದಾನವೂ ತ್ವರಿತದಲ್ಲಿ ಸುಲಭದಲ್ಲಿ ಎಲ್ಲರಿಗೂ ದೊರೆಯಬೇಕು.

ಜಗತ್ತಿನ ಮಹಾವ್ಯಕ್ತಿಗಳಲ್ಲೊಬ್ಬರಾದ ಪಂ. ನೆಹರೂರ ನೇತೃತ್ವದಲ್ಲಿ ಜನತೆಯು ಸಮಾಜವಾದಿ ಸಮಾಜ ಸ್ಥಾಪಿಸುವ ಕಾರ್ಯದಲ್ಲಿ ಯಶಸ್ವಿಯಾಗಲಿ.

ಒಂದು ಸುಸಂಧಿ

ಮೂರಾಣೆಯಿಂದ ಹಿಡಿದು, ಎರಡು ರೂಪಾಯಿ ಬೆಲೆ ವರೆಗಿನ ಅಂತರಂಗ ಪ್ರಕಾಶನದ ನಾನಾ ವಿಧದ 34 ರೂಪಾಯಿಯ 30 ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ಬರೀ ರೂ. 27/-ಕ್ಕೆ ಕೊಡಲಾಗುವುದು. ಈ ಸವಲತ್ತು ಜನವರಿ 1959ರ ವರೆಗೆ ಮಾತ್ರ ಇರುವುದರಿಂದ ಇಂದೇ ರೂ27 ಕಳಿಸಿ ಒಂದು ಸೆಟ್ ಪುಸ್ತಕ ತರಿಸಿಕೊಳ್ಳಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ

ಅನುಭವಾಮೃತ

ವಿಶ್ವಾಸೋ ಫಲದಾಯಕಃ ಎಂಬುದು ವೇದವಾಕ್ಯ

ರೋಗಿಯ ವಿಶ್ವಾಸದಿಂದಲೇ ಆತನ ರೋಗ ದೂರವಾಯಿತು!

(ಈ ಶೀರ್ಷಿಕೆಯಡಿಯಲ್ಲಿ ಪ್ರಕಟಣೆಗೆ ಓದುಗರ ಸ್ವಾನುಭವ ಇಲ್ಲವೇ ಕಂಡುಕೇಳಿದ ಅನುಭವಗಳನ್ನು ಸ್ವಾಗತಿಸಲಾಗಿದೆ.-ಸಂ.ನ.)

ನಮ್ಮಜ್ಜನು ಕೊಟ್ಟ ಔಷಧವು ಊರಿನಲ್ಲಿ ಹಲವು ತರದ ರೋಗನಿವಾರಣೆ ಮಾಡುತ್ತಿತ್ತು—ಸರ್ಪಸುತ್ತು, ತದ್ದು, ಗಬ್ಬದ ಇಲಿ ಕಡಿತ, ಹುಚ್ಚು ನಾಯಿಯ ಕಡಿತ—ಕುಷ್ಠ— ಸಂಜೆನ ನುದ್ದು ವಗೈರೆ—ಎಷ್ಟೋ ವ್ಯಾಧಿಗಳಿಗೆ ಒಬ್ಬರಲ್ಲ ಒಬ್ಬರು ಪ್ರತಿದಿನ ನಮ್ಮ ಮನೆಗೆ ಬಂದೇ ಬರುತ್ತಿದ್ದರು. ನಮ್ಮ ಅಜ್ಜನವರು ಎಲ್ಲರಿಗೂ ಒಂದೇ ಚಾರ್ಜ್ ಇಟ್ಟಿದ್ದರು. ಆ ಚಾರ್ಜ ಎಂದರೆ "ಒಂದು ಕಾಯಿ ನಾಲ್ಕು ಹಣ್ಣು" —

ಅಂದು ಅಜ್ಜ ಹಾಸಿಗೆ ಹಿಡಿದಿದ್ದರು. ಅವರಿಗೆ ಎರಡು ಮೂರು ದಿನದಿಂ ಮೈಯಲ್ಲಿ ಜ್ವರವಿತ್ತು. ಸರ್ಪಸುತ್ತಿನಿಂದ ಪೀಡಿತನಾದೊಬ್ಬ ಹಳ್ಳಿಗ ಬಂದು ಮದ್ದು ಕೇಳ—ತೊಡಗಿದ್ದ! ಅಜ್ಜನವರು ಏಳುವ ಪರಿಸ್ಥಿತಿಯಲ್ಲಿರಲಿಲ್ಲ!! ಸರ್ಪಸುತ್ತಿನ ಬೇರು ತರಲು ಒಂದು ಮೈಲಿ ದೂರದ ಬೆಟ್ಟಕ್ಕೆ ಹೋಗಿ ಬರಬೇಕಾಗಿತ್ತು! ಆ ಹಳ್ಳಿಗನಿಗೆ "ನಾಳೆ ಬಾ" ಎನ್ನುವದೇ? ಪಾಪ! ಅವನು ೬ ಮೈಲು ದೂರದಿಂದ ನಡೆದು ನಮ್ಮಲ್ಲಿಗೆ ಮದ್ದಿಗೋಸ್ಕರವೇ ಬಂದಿದ್ದ.

ಅಜ್ಜಯ್ಯ ನನ್ನ ಕಡೆ ಹೇಳಿದರು "ಮನೆಯ ಹಿಂಬದಿಯ ಯಾವದೇ ಬಳ್ಳಿಯದೊಂದು ಬೇರು ತಾ. "ಇಂದಿಗೆ ಅದನ್ನೇ ಕೊಡೋಣ. ನಾಲ್ಕು ದಿನದ ನಂತರ ಕಡಿಮೆಯಾಗಾದಿದ್ದಲ್ಲಿ ಅವನು ಬಂದೇ ಬರ್ತ್ತಾನೆ" ನಾನೂ "ಹೂಂ" ಎಂದು ನಮ್ಮ ಹಿತ್ತಲದಲ್ಲಿ ಮೊದಲಿನ ದಿನ ಕೆತ್ತಿದ್ದ ಬದನೇ ಗಿಡದ ಬೇರೊಂದನ್ನು ತಂದು ಅಜ್ಜಯ್ಯನಿಗಿತ್ತೆ!!

ಅಜ್ಜಯು ಊರುಗೋಲಿನ ಸಹಾಯದಿಂದ ಹೊರಬಂದು ಅದೇ ಬೇರನ್ನು ಹಳ್ಳಿಗನಿಗೆ ಕೊಡುತ್ತಾ "ನೋಡಪ್ಪಾ ಪಥ್ಯ ಚೆನ್ನಾಗಿ ಆಗಬೇಕು. ಈ ಬೇರನ್ನು ಗೋಮೂತ್ರದಲ್ಲಿ ದಿನಾ ಮೂರು ಬಾರಿ ತೇದಿ ಸೇವಿಸಬೇಕು. ಅಲ್ಲದೆ ವ್ರಣವಿದ್ದ ಘಾಯಕ್ಕೂ ಮೂರು ಬಾರಿ ಲೇಪಿಸಬೇಕು: ೭ ದಿನ. ಗಂಜಿ ಬೆಲ್ಲ ಊಟಮಾಡಬೇಕು. ಉಪ್ಪು ಖಾರ, ಚಹಾ, ಕಾಫಿ— ಇವೆಲ್ಲವನ್ನೂ ತ್ಯಜಿಸಬೇಕು. ಅಲ್ಲದೆ—ನಾಲ್ಕನೇ ದಿನ ಇಲ್ಲಿ ಬಂದು ಹ್ಯಾಗಿದೆ ಎಂತ ತಿಳಿಸಬೇಕು" ಎಂದರು.

ಹಳ್ಳಿಗನು ಅಜ್ಜಯ್ಯನಿಗೆ "ರಾಮ ರಾಮ ಬುದ್ಧಿ, ಬಾಳ ಉಪಕಾರ ಆಯಿತು. ನಿಮ್ಮ ಶೀಕು ಇದ್ದರೂ ಲೆಕ್ಕ ಮಾಡ್ದೆ ನಂಗೆ ಔಷಧ ಕೊಟ್ರಿ..." ಎನ್ನುತ್ತಾ ತನ್ನ ಮನೆಗೆ ತೆರಳಿದ.

ನಾಲ್ಕು ದಿನದ ನಂತರ ಅವನು ನಮ್ಮಲ್ಲಿ ಬರುವಾಗ ನಗೆ ಮುಖದಿಂದಿದ್ದ. ಅವನು ಸರ್ಪಸುತ್ತಾದ ಸ್ಥಳವನ್ನು ನಾನೂ ನೋಡಿದೆ. ಅದು ಮಾಯವಾಗಿತ್ತು!! ನನಗಿಂತಲೂ ನನ್ನಜ್ಜನಿಗೆ ಇನ್ನೂ ಆಶ್ಚರ್ಯ—ಮನೆಯಲ್ಲೆಲ್ಲಾ ಅಂದೂ ಬದನೇ ಬೇರಿನ ಸುದ್ದಿ!! ಎಲ್ಲರಿಗೂ ಆ ಹಳ್ಳಿಗನ ಮುಗ್ಧ ವಿಶ್ವಾಸವೇ ಅವನ ಘಾಯದ ನಿವಾರಣೆಗೆ ಕಾರಣವೆನ್ನುವದು ಸ್ಪಷ್ಟವಾಗಿತ್ತು!!

—ಸಿರಿಪತಿ.

ಗಂಗಾವತಿ

ವಿಶಾಲವಾಗಿ ಹಬ್ಬುತ್ತಿರುವ
ಸಿಂಡಿಕೇಟ್ ಬೇಂಕಿನ
ನೂರ ಹದಿನಾರನೆಯ ಶಾಖೆಯು

೧೯೫೯ ಜನವರಿ ೨ರಂದು
ರಾಯಚೂರು ಜಿಲ್ಲೆಯ
ಗಂಗಾವತಿಯಲ್ಲಿ ಆರಂಭವಾಗಿದೆ

ಶ್ರೀ ಬಿ. ವಿ. ಕಾಮತ್,
ಏಜಂಟ್.

ಡಾ| ಟಿ. ಎಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

ಶ್ರೀ ಟಿ ಎ. ಪೈ,
ಜನರಲ್ ಮೆನೇಜರ್.

ಒಟ್ಟು ವ್ಯವಹಾರ ಸಂಪತ್ತು ರೂ. ೧೫ ಕೋಟಿಗೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,
ಉಡುಪಿ.

THE CANARA INDUSTRIAL & BANKING
SYNDICATE LTD., UDIPI.

ಗೋವಿಜಯ
(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60, ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

NAVAYUGA

REPUBLIC DAY
SPECIAL 1959

ಪ್ರಜಾರಾಜ್ಯ ವಿಶೇಷಾಂಕ ೧೯೫೯

ಬೆಲೆ: ೨೦ ನಯೇಪೈಸೆ



ಜನವರಿ ಇಪ್ಪತ್ತಾರು...

ಭಾರತವು ಪ್ರಜಾರಾಜ್ಯವಾಗಿ ರೂಪುಗೊಂಡ
ಈ ಪುಣ್ಯದಿನದಂದು
ನಾಡಿನ ಪ್ರತಿ ಪ್ರಜೆಯ ಪ್ರಗತಿಗಾಗಿ ಶ್ರಮಿಸಲು
ಪ್ರತಿಜ್ಞಾಬದ್ಧರಾಗೋಣ
ಅಂತೆಯೇ ಫಲಪ್ರದವಾದ
ಉಳಿತಾಯ ಯೋಜನೆಗಳಿಂದ
ಆರ್ಥಿಕ ಭದ್ರತೆಯನ್ನೂ ಗಳಿಸೋಣ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಟಿ. ಎ. ಪೈ
ಜನರಲ್ ಮೆನೇಜರ್

ಟಿ. ಎಂ. ಎ. ಪೈ
ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd., Udipi.

ಭುವನೇಂದ್ರ ಪ್ರೊಡಕ್ಟ್ಸ ಪ್ರೈವೇಟ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಹೆಡ್ ಆಫೀಸು ಮತ್ತು ಕಾರಖಾನೆ:-
ಕಟಪಾಡಿ, ದ. ಕನ್ನಡ.

ಡಿಪೊ: ಉಡುಪಿ, ದ. ಕನ್ನಡ.
(2) ಮರಾಠಗಲ್ಲಿ, ಹುಬ್ಬಳ್ಳಿ.

ಸರ್ವರಿಗೂ ಪ್ರಜಾರಾಜ್ಯದಿನದ ಶುಭಾಶಯಗಳು.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ವಸಡುಗಳಿಂದ ರಕ್ತ ವ ಕೀವು
ಬರುವುದು ಇತ್ಯಾದಿ ಪೀಡೆಗಳಲ್ಲಿ ಅತ್ಯಂತ ಉಪಯುಕ್ತ.
ಹಲ್ಲುಗಳನ್ನು ಶುಭ್ರವಾಗಿರಿಸುತ್ತದೆ.

Bhuvanendra Products Private Ltd.,

KATAPADI, S. K.

Depot:- **(1) Udipi, S. Kanara (2) Maharata Galli, Hubli.**

P. J. Nayak,
Managing Director.

P. R. Nayak B. Com.,
General Manager

NAVAYUGA REPUBLIC DAY SPECIAL ಪ್ರಜಾರಾಜ್ಯ ವಿಶೇಷಾಂಕ 1959

Vol. 38
No. 20

ನವಯುಗ

ಸಂಪುಟ ೩೮
ಸಂಚಿಕೆ ೨೦

ಭಾರತ ಪ್ರಜಾಪ್ರಭುತ್ವದ ದಶಮಾರುಣೋದಯ

ಪರದಾಸ್ಯ ಶೃಂಖಲೆಯಿಂದ ವಿಮುಕ್ತವಾದ ಭಾರತವಿಂದು ತನ್ನನ್ನು ತನ್ನ ಜನರಿಂದಲೇ ಉತ್ಥಾನ ಪಥದತ್ತ ಸಾಗಿಸಿಕೊಳ್ಳಲು ಸಾಧನವಾದ ಸ್ವಾತಂತ್ರ್ಯ—ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದಿದೆ; ಪ್ರಪಂಚದ ಬಹುವಿಶಾಲ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಒಂದಾಗಿದೆ. ತನ್ನ ಉದಾರ ಆದರೆ ಉದಾತ್ತ ಧ್ಯೇಯ ಧೋರಣೆಗಳ ಪರಿಣಾಮವಾಗಿ, ಆಂತರಿಕ ಅಭ್ಯುತ್ಥಾನ ಸಾಹಸಗಳ ಕಾರಣವಾಗಿ ಭಾರತವು ವಿಶ್ವವಂದ್ಯ ರಾಷ್ಟ್ರವಾಗಿ ಪರಿವರ್ತಿತಗೊಳ್ಳುತ್ತ ಇದೆ. ತಮ್ಮನ್ನು ಆಳಿಕೊಳ್ಳುವ ಶಕ್ತಿ ಭಾರತೀಯರಿಗಿಲ್ಲ ಎಂಬ ಸಂದೇಹವನ್ನು ವ್ಯಕ್ತಪಡಿಸುತಿದ್ದ ವಿದೇಶೀಯರೂ ಕೆಲವು ಸ್ವದೇಶೀಯರೂ ಮನ ಮೆಚ್ಚಿ ತಲೆದೂಗಿ ತಮ್ಮ ಮಿಥ್ಯ ಕಲ್ಪನೆಯ ಬಗ್ಗೆ ವಿಸ್ಮಿತರಾಗಿದ್ದಾರೆ. ಇಂತಹ ಭಾರತವು ಸಂಪೂರ್ಣ ಪ್ರಜಾಪ್ರಭುತ್ವವಾಗಿ ಒಂಭತ್ತು ವರ್ಷಗಳು ಸಂದು ಇದೀಗ ಹತ್ತನೆಯದಕ್ಕೆ ಕಾಲಿಡುತ್ತಿದೆ.

ಒಂದು ವ್ಯಕ್ತಿಯ ಜೀವಮಾನದಲ್ಲಿ ಒಂಭತ್ತು ವರ್ಷವೆಂಬುದು ಪರಿಣಾಮದಾಯಕ ಪರಿಣಾಮವನ್ನು ಗೆಯ್ಯಬಲ್ಲ ಅವಧಿ. ಮಾನವನಿಗಿಂತ ನಿಕೃಷ್ಟವೆನಿಸಿದ ಕೆಲವು ಪಶು ಪಕ್ಷಿಗಳ ಆಯುರ್ಮಾನವು ಇದಕ್ಕೂ ಕಡಿಮೆಯಿರುವುದುಂಟು. ಆದರೆ, ಒಂದು ರಾಷ್ಟ್ರದ ಇತಿಹಾಸದಲ್ಲಿ ಮುಖ್ಯವಾಗಿ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವ ರಾಷ್ಟ್ರದಲ್ಲಿ, ಈ ಮಾನವನ್ನು ಮಾನವನ ಆಯುರ್ಮಾನದೊಂದಿಗೆ ತುಲನೆಮಾಡಿದರೆ ಅಜಗಜಾಂತರವಾಗುವುದು. ಆದುದರಿಂದಲೇ ದೇಶದಲ್ಲಿ ನಾನಾತರದ ಒಕ್ಕಲುತನ, ಉದ್ದಿಮೆ, ವಿಜ್ಞಾನ, ಶಿಕ್ಷಣಾದಿ ಕ್ಷೇತ್ರಗಳಲ್ಲಿ ಸುಧಾರಣೆಗಳು ಆಗಿಹೋಗಿದ್ದರೂ ಅವು ನಮ್ಮ ಸ್ಥೂಲದೃಷ್ಟಿಗೆ ಗೋಚರಿಸಲಾರವು. ಆದರೂ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಟ್ಟು, ಸಾಧನೆ-ವಿಫಲತೆಗಳ ಅಲ್ಪಜ್ಞಾನವಿರಬಲ್ಲ ಓರ್ವ ರಾಷ್ಟ್ರೀಯನು ದೇಶದ ಎಲ್ಲ ಹಳ್ಳಿಗಳನ್ನೂ ಒಮ್ಮೆ ಸಂಚರಿಸಿ ಅಲ್ಲಿಯ ಪರಿಸ್ಥಿತಿಗಳನ್ನು ಸೂಕ್ಷ್ಮದೃಷ್ಟಿಯಿಂದೀಕ್ಷಿಸಿ ಕಂಡುಕೊಂಡರೆ, ಅವನಿಗೆ ಸತ್ಯದರ್ಶನವಾಗದುಳಿಯದು.

ಒಂದು ಕಾಲದಲ್ಲಿ ತೀರ ಹಿಂದುಳಿದಿದ್ದ ಭಾರತೀಯ ಗ್ರಾಮಗಳಲ್ಲಿ ಇಂದು ಎಲ್ಲವಲ್ಲದೆ ಹೋದರೂ ಒಂದೆರಡಾದರೂ ಯೋಜನೆಗಳು ಕಾರ್ಯಗತವಾಗಿವೆ. ಹಳ್ಳಿಗರ ಸಂಪರ್ಕಾಭಿವೃದ್ಧಿಗೆ ಅಂಚೆಮನೆ, ನಿರಕ್ಷರಸ್ಥರಿಗೆ ವಿದ್ಯಾಭ್ಯಾಸಕೊಡಲು ವಯಸ್ಕರ ಶಾಲೆ,ಅವರ ಮಕ್ಕಳಿಗೆ ಎಳೆಹರೆಯದಲ್ಲೇ ಅಕ್ಷರಾಭ್ಯಾಸ ನಡೆಸಲನುಕೂಲವಾಗುವಂತೆ ಒಂದು ಶಾಲೆ, ಊರ ಹೊಳೆಗೊಂದು ಅಣೆಕಟ್ಟು ಇಲ್ಲವೇ ಸೇತುವೆ, ಸಾಧ್ಯವಿದ್ದಲ್ಲೆಲ್ಲಾ ಸಾಮಾನ್ಯಮಟ್ಟದ್ದಾದರೂ ಒಂದು ರಸ್ತೆ, ಎರಡು ಗ್ರಾಮಗಳಿಗೊಂದಾದರೂ ಗ್ರಾಮಪಂಚಾಯಿತಿ, ಅವುಗಳಲ್ಲಿ ಮನರಂಜನೆಗಾಗಿ ಆಕಾಶವಾಣಿ, ಮೂರು ನಾಲ್ಕು ಗ್ರಾಮಗಳಿಗೊಂದಾದರೂ ಸಣ್ಣ ವರ್ಗದ ಆಸ್ಪತ್ರೆ, ಶಿಶು ಸಂರಕ್ಷಣಾ ಕೇಂದ್ರ, ಪ್ರಸೂತಿ ಗೃಹ, ವಾಚನಾಲಯ, ಪುಸ್ತಕ ಭಂಡಾರ ಮೊದಲಾದ ಒಂದಲ್ಲ ಒಂದು ರೀತಿಯಲ್ಲಿ ಸುಧಾರಣೆಯ ಗಾಳಿ ಸೋಕಿರುವುದನ್ನು ಮನಸ್ಸಿಗೆ ತಂದುಕೊಳ್ಳಬಹುದು. ನೀರು ಹಾಯಿಸುವ ಯಂತ್ರ, ಅವುಗಳಿಗೆ ಬೇಕಾದ ಶಕ್ತಿನೀಡಬಲ್ಲ ವಿದ್ಯುತ್ ದೇಶದ ಹೆಚ್ಚಿನ ಭಾಗಗಳಲ್ಲಿ ಸಿಗುವಂತಾಗಿದೆ. ಸಾಮಾನ್ಯವಾಗಿ ಸಾರಿಗೆ ಸಂಪರ್ಕಗಳು ಬೆಳೆಯುತ್ತ ಬಂದು ಎಲ್ಲಿಡೆಯೂ ಬಸ್ಸುಗಳು ಸಂಚಾರಾನುಕೂಲತೆಗಳನ್ನು ಒದಗಿಸುತ್ತಿವೆ.

ಸಾಮಾಜಿಕ ದೃಷ್ಟಿಯಿಂದ ಇವು ಉನ್ನತ ಯೋಜನೆಗಳೇ ಆಗಿವೆ. ಅಲ್ಲದೇ ನೈತಿಕ ಮಟ್ಟವನ್ನು ಉಳಿಸುವ, ಶಾಂತಿ ಸುರಕ್ಷೆಗಳನ್ನು ಕಾಪಾಡುವ ಪೋಲೀಸ ವ್ಯವಸ್ಥೆಯು ಎಂಟು-ಹತ್ತು ಮೈಲುಗಳ ದೂರದಲ್ಲಿಯೇ ಸಿಗುವಂತಾಗಿದೆ. ನ್ಯಾಯಾಲಯಗಳಲ್ಲಿ ಸಮಾಜಕ್ಕೆ ಶೀಘ್ರ ನ್ಯಾಯದಾನ ಮಾಡಬೇಕೆಂಬ ಇರಾದೆಯಿಂದ ನ್ಯಾಯಾಧೀಶರ ಸಂಖ್ಯೆಗಳನ್ನು ಹೆಚ್ಚಿಸಲಾಗಿದೆ. ಹೀಗೆ ರಾಷ್ಟ್ರವು ಪ್ರಗತಿಯತ್ತ ಸಾಗುತ್ತ ಬಂದಿದೆ.

ಆದರೆ, ಸಾರ್ವಜನಿಕ ರಸ್ತೆಗಳನ್ನು ಕೇವಲ ಶ್ರೀಮಂತರ ಕಾರು ಸಂಚಾರಕ್ಕೆ ಮಾತ್ರ ನಿರ್ಮಿಸಿದರೆನ್ನುವ, ಹಳ್ಳಿಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಮನೆಗೆ ದೀಪ ಹಾಕಿಸಬಲ್ಲ, ನೀರು ಹಾಯಿಸುವ ಯಂತ್ರ ಕೊಂಡುಕೊಳ್ಳಬಲ್ಲ ಶ್ರೀಮಂತರ ಉಪಯೋಗಾರ್ಥವಾಗಿಯೇ ಒಯ್ದರೆನ್ನುವ, ಕಾಯಕಷ್ಟದಿಂದ ಸಂಪಾದಿಸಿದ ಹಣದಿಂದ ಹಿಂದಿಗಿಂತ ಸ್ವಲ್ಪ ಸುಖೀ ಜೀವನವನ್ನು ನಡೆಸತೊಡಗಿದವರನ್ನು ಬಡವರ ರಕ್ತಹೀರುವ ಜಿಗಳೆಗಳೆಂದು ದೂಷಿಸುವ, ಎಲ್ಲಿಡೆಯಲ್ಲೂ ಎಲ್ಲ ಸಂದರ್ಭಗಳಲ್ಲೂ ಎಲ್ಲ ಕ್ಷೇತ್ರಗಳಲ್ಲಿಯೂ ಅಜ್ಞಾನಿ ದರಿದ್ರ ಜನತೆಯನ್ನು ಅವರಿಗಿಂತ ಕಿಂಚಿತ್ ಉತ್ತಮಸ್ತರದವರೊಡನೆ ಎತ್ತಿಕಟ್ಟಿ, ಇಕ್ಕಡೆಗಳ ನಡುವೆ ಬಿರುಕನ್ನು ತೋಡಿ, ಅದರ ದುರುಪಯೋಗವನ್ನು ಸಂಪಾದಿಸುವ ರಾಷ್ಟ್ರ ವಿಘಾತಕ ಕಾರ್ಯತತ್ಪರವಾದ ಒಂದು ವರ್ಗ, ಈ ಅಭಿವೃದ್ಧಿ ಯೋಜನೆಗಳನ್ನೂ ದೂರುತ್ತಿದೆ. ಇಂತಹ ಬಾಯಿಬಡುಕರ ರಂಗಿನ ಮಾತುಗಳಿಗೆ ಜನಸಾಮಾನ್ಯರೂ ಮರುಳಾಗಿ ಅವರೆಂದುದೇ ಸತ್ಯವೆಂದೂ ರಾಷ್ಟ್ರವು ಕೈಗೊಂಡ ಯೋಜನೆಗಳಿಂದ ತಮಗಾವ ಲಾಭವಿಲ್ಲವೆಂದೂಹಿಸಿ, ಅವುಗಳ ಸಮುಚಿತ ಲಾಭ ಪಡೆಯುವ ಗೋಜಿಗೂ ಹೋಗುವುದಿಲ್ಲ!

ಇಂತಹ ಕುಮಾರ್ಗ ಸಂಚಾರಿಗಳ ಸಂಖ್ಯೆ ಬೆಳೆಯುತ್ತ ಬರುತ್ತಿದೆ; ಸುಲಭದಲ್ಲಿ ಜನತೆಯನ್ನು ತಮ್ಮ ವಶಪಡಿಸುವ ಯೋಜನೆಯಲ್ಲಿವರು ಜಯಶೀಲರಾಗುತ್ತಾರೆ. ಆಗ, ಜನತೆಯಲ್ಲಿ ರಾಷ್ಟ್ರದ ಬಗ್ಗೆ ಯಾವ ವಿಧದ ಗೌರವವೂ ಉಳಿಯಲಾರದು. ಸ್ವದೇಶ ಪ್ರೇಮವಿಲ್ಲದ ನಾಗರಿಕರಿಂದ ರಾಷ್ಟ್ರ ಕಲ್ಯಾಣವಾಗುವುದಂತೂ ದೂರದ ಮಾತು; ಆದರೆ, ರಾಷ್ಟ್ರ ಸಂಮೃದ್ಧಿಗೆ ಮಾತ್ರ ಕೆಡುಕುಂಟಾಗುವುದು ಸಹಜ. ಆದ್ದರಿಂದ ರಾಷ್ಟ್ರೀಯತೆಯ ಹಿಂಬಾಲಕರು ಸಾಮಾನ್ಯ ಜನತೆಗೆ ರಾಷ್ಟ್ರೀಯತೆಯ ಪಾಠವನ್ನು ಅವರ ಭಾಷೆಯಲ್ಲಿ ಕಲಿಸಬೇಕು. ಭಾರತೀಯರೆಲ್ಲರನ್ನೂ ರಾಷ್ಟ್ರೀಯವಾದಿಗಳಾಗಿ ಮಾಡಬೇಕು. ರಾಜಕೀಯ ಪಕ್ಷವಾವುದೇ ಇರಲಿ, ಅದರಲ್ಲಿ ಹೆಚ್ಚಿನ ಕೊರತೆಯಿಲ್ಲ; ಆದರೆ, ರಾಷ್ಟ್ರೀಯತೆಯ ಅಭಾವದಿಂದಲೇ ರಾಷ್ಟ್ರವು ಅಧಃ ಪತನಗೊಳ್ಳಬಹುದು; ನಾವು ಸ್ಥಾಪಿಸಿದ ಪ್ರಜಾಪ್ರಭುತ್ವ ಸಂಪೂರ್ಣ ನಾಶಗೊಳ್ಳಬಹುದು. ಆದುದರಿಂದ, ರಾಷ್ಟ್ರೀಯತೆಯ ಸೂತ್ರದಿಂದ, ಗ್ರಾಮೀಣ ಜನತೆಯನ್ನೂ ಗ್ರಾಮೇತರ ಜನತೆಯನ್ನೂ ಹೊಂದಿಸಿಕೊಂಡು ಹೋಗುವುದಿಂದು ಅಗತ್ಯವಾಗಿದೆ.

ಇನ್ನು,ಭಾರತವು ಸಾಧಿಸಿದ ಅಭಿವೃದ್ಧಿ ಯೋಜನೆಗಳ ಕುರಿತು ಹಲವಾರು ವಿದೇಶೀಯ ಪ್ರತಿನಿಧಿಗಳು ಸದಭಿಪ್ರಾಯ ವ್ಯಕ್ತಪಡಿಸುತ್ತ ಬಂದಿದ್ದಾರೆ. ಅವರೆಲ್ಲರೂ ಅತ್ಯಲ್ಪ ಕಾಲಾವಧಿಯಲ್ಲಿ ಸಾಧಿಸಿರುವ ಈ ಸಾಧನೆಯ ಬಗ್ಗೆ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಹಾಗಿರುವಾಗ ಆದಾವುದರಿಂದಲೂ ಪ್ರಯೋಜನವಿಲ್ಲ ಎಂಬ ವಾದ ರಾಷ್ಟ್ರೀಯ ದೃಷ್ಟಿಯಿಂದ ಅಸಾಧುವೆಂಬುದು ಖಂಡಿತ. ಭಾರತವೂ ತನ್ನ ರಕ್ಷಣಾವೆಚ್ಚವನ್ನು ಹೆಚ್ಚಿಸಿಕೊಳ್ಳಲೇ ಬೇಕಾದ ಪರಿಸ್ಥಿತಿ ಬಂದಿದೆ. ಪಾಕಿಸ್ತಾನದ ಕುಟಿಲ ನೀತಿಯಿಂದಾಗಿ, ಭಾರತವೂ ವ್ಯಥಿತವಾಗಬೇಕಾಗಿದೆ. ಅಲ್ಲದೇ ಸ್ವತಂತ್ರ ರಾಷ್ಟ್ರಕ್ಕೆ ಅವಶ್ಯಕವಾದ ಭೂ, ಜಲ, ವಾಯು ಸೇನೆಗಳೂ ಸುಸಜ್ಜಿತವಾಗಿಯೇ ಇವೆಯೆನ್ನಬೇಕು.

ಇಂದು ಭಾರತದ ಸ್ಥಾನ ಪ್ರಪಂಚದ ಭೂಪಟದಲ್ಲಿ ಮಹತ್ವಪೂರ್ಣವಾಗಿದೆ. ಒಂದೆಡೆ ಬಡ ಅಜ್ಞರ ನೆಲೆವೀಡಾದ ದಟ್ಟ ದರಿದ್ರವಾದ ಜನನಿಬಿಡವಾದ, ಜನಸಂಖ್ಯೆಯು ವರ್ಷಂಪ್ರತಿ ಧಾರಾಳವಾಗಿ ಏರುತ್ತಿರುವ ಭಾರತದಲ್ಲಿ "ಕಮ್ಯೂನಿಸಂ ಒಂದೇ ಪರಿಹಾರ ಮಾರ್ಗ"ವೆಂದು ಕಂಡುಕೊಂಡಿದ್ದ ಕೆಲವು ವಕ್ರದೃಷ್ಟಿಗಳಿಗೆ ಪ್ರಜಾಪ್ರಭುತ್ವ ವಿಧಾನದಿಂದಲೇ ಅಭಿವೃದ್ಧಿ ಸಾಧಿಸಬಹುದೆಂಬುದನ್ನು ಸಾರಿ ಹೇಳಬೇಕಾಗಿದೆ, ಕಾರ್ಯಸಾಧನೆಯ ಮೂಲಕವಾಗಿ ಈ ಕಾರಣದಿಂದ ಅಮೆರಿಕೆಯಿಂದಾರಂಭಿಸಿ ರಶ್ಯದ ವರೆಗಿನ ಎಲ್ಲ ವಿಧದ ರಾಷ್ಟ್ರಗಳೂ ಇತ್ತ ದೃಷ್ಟಿ ಹರಿಸಿವೆ. ಎರಡನೆಯದಾಗಿ, ಇಂದು ಭಾರತ ಸರ್ವಾಧಿಕಾರೀ ರಾಷ್ಟ್ರಗಳ ನಡುವೆ ಉಳಿದ ಪ್ರಜಾಪ್ರಭುತ್ವವಾಗಿದೆ. ಯುರೋಪಿನ ಫ್ರಾನ್ಸಿನಲ್ಲಿ ಎದ್ದ ಈ ಸರ್ವಾಧಿಕಾರದ ಬಿರುಗಾಳಿ ಏಶ್ಯಾದಲ್ಲಿ ಹಬ್ಬಿದೆ. ಭಾರತದ ಸುತ್ತಲೂ ಭಯಂಕರಾಕಾರದಿಂದ ಸುಳಿದಾಡುತ್ತಿದೆ. ಭಾರತವು ಈ ಕರಾಳ ರಾಕ್ಷಸನ ಹಿಡಿತಕ್ಕೆ ಬಾರದೆ, ಅವನನ್ನು ಬೆದರಿಸಿ ಓಡಿಸುವುದೇ ಇಲ್ಲವೇ ಆತನ ಕವಳವಾಗುವುದೇ ಎಂದೂ ವಿದೇಶೀಯರು ನೋಡುತ್ತಿರುತ್ತಾರೆ. ಹೀಗೆ ಕರ್ತರೀಕ್ರಮುಕ ಸ್ಥಿತಿಯಲ್ಲಿರುವ ಭಾರತವು ಪ್ರಜಾಪ್ರಭುತ್ವ ತತ್ವಗಳನ್ನೇ ನೆಮ್ಮಿ ತನ್ನ ಧೈರ್ಯ ಸಾಹಸಗಳನ್ನು ಪ್ರದರ್ಶಿಸಬೇಕಾಗಿದೆ. ಇದಕ್ಕಾಗಿಯೂ ರಾಷ್ಟ್ರೀಯತೆಯು ಅಗತ್ಯ.

ಹೀಗೆ, ಕಳೆದ ಒಂಭತ್ತು ವರ್ಷಗಳಲ್ಲಿ ನಾವು ತೋರಿಸಿದ ಸಾಹಸಗಳೂ ಮಾಡಿದ ಸಾಧನೆಗಳು ಅತ್ಯಲ್ಪವೆಂದೂ ಅಪ್ರಧಾನವೆಂದೂ ಹೇಳುವಂತಿಲ್ಲ. ಇದೇ ರೀತಿಯಿಂದ ಮುಂದುವರಿಯಬೇಕು; ಕ್ರಮೇಣ ನಾವು ಬಯಸಿದ ಜೇನು ಸುರಿವ ಹಾಲು ಹರಿವನಾಡಾಗಿ ಭಾರತ ಮೆರೆಯಬಹುದು. ಈ ಮಧ್ಯೆ ದಿನೇ ದಿನೇ ಭಾರತೀಯರಲ್ಲಿ ಮಾಯವಾಗುತ್ತಿರುವ ವ್ಯಕ್ತಿಗೌರವ, ಆತ್ಮವಿಶ್ವಾಸ, ರಾಷ್ಟ್ರೀಯತೆ ಎಂಬ ತ್ರಿಕರಣಗಳನ್ನು ಸುಪ್ತವಾಗಿಸದೆ ಜಾಗ್ರತವಾಗಿರಿಸುವುದೂ ಅಗತ್ಯ. ಇವಿಲ್ಲದೆ ಹೋದರೆ, ನಮ್ಮ ಯಾವುದೇ ವಿಧದ ಪ್ರಗತಿಯಾದರೂ ತೀರ ನಿಷ್ಫಲಗೊಳ್ಳುವುದು. ಆದುದರಿಂದ ಗಣರಾಜ್ಯದ ದಶಮ ಜನ್ಮದಿನದವಸರದಲ್ಲಿ ನಾವು ನಮ್ಮಲ್ಲಿ ಖಿಲವಾಗುತ್ತಿರುವ ಈ ಗುಣತ್ರಯಗಳನ್ನು ಪುನಃ ಸ್ಥಾಪಿಸುವ ದೃಢ ನಿಶ್ಚಯವನ್ನು ಮಾಡಿ,ಪ್ರಜಾಪ್ರಭುತ್ವವನ್ನು ಚಿರಸ್ಥಾಯಿಯಾಗಿಸಲು ನಮ್ಮ ದೇಣಿಗೆಯನ್ನು ಸಲ್ಲಿಸುವ "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿಗರೀಯಸಿ" ಎಂಬ ಆರ್ಯೋಕ್ತಿಯನ್ನು ಮರೆಯದೆ ದುಡಿಯಲು ಮುಂದಾಗುವ.

॥ ಜೈ ಹಿಂದ್ ॥

ವಿಶೇಷ ಸಂಚಿಕೆ

ನಾವು ವಾಡಿಕೆಯಂತೆ ಪ್ರಕಟಿಸುತ್ತಿರುವ ಈ ಪ್ರಜಾರಾಜ್ಯ ವಿಶೇಷಾಂಕವನ್ನು ಹೊರಡಿಸುವಲ್ಲಿ ನೆರವಾದ ಲೇಖಕರು ಜಾಹೀರಾತುದಾರರು, ಮತ್ತು ಮುದ್ರಣಾಲಯದವರಿಗೆ ಹೃತ್ಪೂರ್ವಕ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ. ಇಲ್ಲಿ ಸಂಗ್ರಹಿತವಾದ ಲೇಖನಗಳು ವೈವಿಧ್ಯಪೂರ್ಣವಾಗಿದ್ದು ಭಾರತ ಗಣರಾಜ್ಯದ ವಿವಿಧ ಮುಖಗಳತ್ತ ಮತ್ತು ಸಮಸ್ಯೆಗಳತ್ತ ಸೂಕ್ಷ್ಮದೃಷ್ಟಿಹರಿಸಿ ವಿವೇಚನೆ ನಡೆಸಿವೆಯೆಂದು ಓದುಗರು ಕಂಡುಕೊಳ್ಳಬಹುದು.

ಗಾಂಧೀಜೀವನದ ರಸನಿಮಿಷಗಳು

ರಾಷ್ಟ್ರಪಿತ ಮಹಾತ್ಮಾಗಾಂಧಿಯವರು ತಾವು ನಗುತಿದ್ದರಲ್ಲದೆ ಇತರರನ್ನೂ ನಕ್ಕುನಲಿಸುತಿದ್ದರು ಎಂತಲೇ ಅವರು ನಗೆಗಾರ ಗಾಂಧೀ ಎಂಬ ಉಪನಾಮವನ್ನು ಗಳಿಸಿದರು. ಅವರ ಜೀವನದ ಪ್ರತಿಯೊಂದು ನಿಮಿಷಕ್ಕೂ ತನ್ನದೇ ಆದ ವೈಚಿತ್ರ್ಯಪೂರ್ಣ ಉಪಸ್ಥಿತಿಯಿದೆ ಅದನ್ನು ವಾಚಕರು ಇಲ್ಲಿ ಕಂಡುಕೊಳ್ಳಬಹುದು

ಸಂಗ್ರಹಿಸಿದವರು: ಶ್ರೀ ಸಂಜೀವ ಲಕ್ಷ್ಮೇಶ್ವರ, ಬಿ. ಎ.

ಮಹಾತ್ಮಾ ಗಾಂಧಿಜೀಯವರ ಜೀವನದ ಬಗ್ಗೆ ಅನೇಕ ಭಾಷೆಗಳಲ್ಲಿ ಅನೇಕಾನೇಕ ಮಹಾನುಭಾವರಿಂದ ಸಾಹಿತ್ಯಕೃತಿಗಳು ನಿರ್ಮಾಣಹೊಂದಿವೆ. ಅವರ ಜೀವನದ ಪ್ರತಿ ಒಂದು ಕ್ಷಣವೂ ಮಹತ್ವವಾಗಿತ್ತು. ಅವರ ಜೀವನದ ಅಭ್ಯಾಸ ಮಾಡುವುದೇ ಒಂದು ಸಾಧನೆ ಎನಿಸೀತು. ಮಹಾತ್ಮರ ಜೀವನದಲ್ಲಿ ನಡೆದ ಅನೇಕಾನೇಕ ಘಟನೆಗಳು ಅವರ ಉಚ್ಚತರಹದ ಮಾನವೀಯತೆಯ ನಿದರ್ಶನಗಳಾಗಿವೆ. ಸ್ವಾತಂತ್ರ್ಯದಿನದಂತಹ ಮಹತ್ವದ ದಿನದಂದು ಸ್ವಾತಂತ್ರ್ಯ ಗಳಿಸಿಕೊಟ್ಟು ಭಾರತೀಯರನ್ನು ಪಾರತಂತ್ರ್ಯದಿಂದ ಮುಕ್ತಗೊಳಿಸಿದ ಆ ಮಹಾತ್ಮನ ಜೀವನದ ಪರಿಚಯ ಮಾಡಿಕೊಳ್ಳುವುದು ಪ್ರತಿ ಒಬ್ಬ ಭಾರತೀಯನ ಕರ್ತವ್ಯವೇ ಸರಿ. ಅಂಥಕೆಲ ಸಂಸ್ಮರಣೀಯ ಘಟನೆಗಳನ್ನು ಉಲ್ಲೇಖಿಸಿ ಮಹಾತ್ಮರ ತುಂಬು ಜೀವನದ ಪರಿಚಯ ಮಾಡಿಕೊಡುವುದೇ ಈ ಲೇಖದ ಉದ್ದೇಶ

೧೯೪೭ರಲ್ಲಿ ಗಾಂಧೀಜಿ ಬಂಗಾಲಕ್ಕೆ ಹೊರಟಿದ್ದರು. ಅವರಿಗೂ ಅವರ ಶಿಷ್ಯವರ್ಗಕ್ಕೂ ಪ್ರಯಾಣ ಬೆಳಸಲೆಂದು ಎರಡು ಮತ್ತು ಮೂರನೇ ವರ್ಗದ ಡಬ್ಬಿಗಳನ್ನು ಕಾದಿರಿಸಲಾಗಿತ್ತು. ಗಾಂಧೀಜೀಯವರು ಬಂದು ಅದನ್ನು ನೋಡಿ ಎರಡು ಡಬ್ಬಿಗಳು ತಮಗೆ ಅನವಶ್ಯವೆಂದು ಕಂಡುಬಂದದ್ದರಿಂದ ಎಲ್ಲರಿಗೂ ಒಂದೇ ಡಬ್ಬಿಯಲ್ಲಿ ಕುಳಿತುಕೊಳ್ಳಲು ಹೇಳಿದರು. ಅವರ ಶಿಷ್ಯರಲ್ಲಿ ಒಬ್ಬನು, "ಬಾಪೂಜೀ, ಈ ಎರಡು ಡಬ್ಬಿಗಳನ್ನು ನಮಗಾಗಿಯೇ ಕಾದಿರಿಸಲಾಗಿದೆ, ಅದಕ್ಕಾಗಿ ಹಣವನ್ನೂ ತುಂಬಿದೆ." ಎಂದು ಹೇಳಿದ. ಅದನ್ನು ಕೇಳಿ ಗಾಂಧೀಜಿಯವರು, "ಹಣಕೊಟ್ಟಿಗೆ ಅದೇನೂ ದೊಡ್ಡ ವಿಷಯವಲ್ಲ. ನಾವು ಬಂಗಾಲಕ್ಕೆ ಹೋಗುವುದು ಉಪವಾಸದಿಂದ ಬಳಲುವ ಬಡವರ ಸೇವೆಗೆ. ಈ ರೀತಿ ಸುಖಪಡುವುದು ಸರಿಯಲ್ಲ. ಅಲ್ಲದೆ ಉಳಿದ ಡಬ್ಬಿಗಳಲ್ಲಿ ಜನದಟ್ಟಣೆಯಿದ್ದು ಜನರು ಒದ್ದಾಡುವಾಗ ನಾವು ಹೆಚ್ಚಿನ ಜಾಗ ಆಕ್ರಮಣ ಮಾಡುವುದು, ಅಪರಾಧ"ವೆಂದು ಹೇಳಿದರು. ಮತ್ತು ಒಂದೇ ಡಬ್ಬಿಯಲ್ಲಿ ಪರಿವಾರ ಸಮೇತರಾಗಿ ಪ್ರಯಾಣ ಬೆಳಸಿದರು.

ಗಾಂಧೀಜಿಯವರು ತಮ್ಮ ಆಶ್ರಮದಲ್ಲಿ ಇರಬಯಸುವವರೆಗೆಲ್ಲಾ ಅವರ ಅರ್ಹತೆಯನ್ನು ಪರೀಕ್ಷಿಸುತ್ತಿದ್ದರು. ಮೊದಲು ವಿನೋಬಾ ಬಾವೆಯವರು ಆಶ್ರಮದಲ್ಲಿ ಇರಲು ಬಯಸಿ ಬಂದಾಗ್ಗೆ, ಅವರ ತೆಳ್ಳಗಿನ ದೇಹ ಕಂಡು, ಆಶ್ರಮ ಜೀವನಕ್ಕೆ ಅವರು ಒಗ್ಗರೆಂದು ತಿಳಿದು, "ನನ್ನ ಆಶ್ರಮದಲ್ಲಿರಬೇಕಾದರೆ, ನೀನು ನೀರು ಸೇದಬೇಕು" ಎಂದು ಆಶ್ರಮದ ಆಳವಾದ ಭಾವಿಯನ್ನು ತೋರಿಸಿದರು. ಆ ಕೆಲಸದಲ್ಲಿ ವಿನೋಬಾ ಗೆದ್ದಾಗ ಮಹಾತ್ಮರ ಅನುಯಾಯಿಗಳಾದರು. ಗಾಂಧೀಜಿಯವರ ಕುಲುಮೆಯಲ್ಲಿ ಕಾದು ಪರೀಕ್ಷೆಗೊಂಡ ವ್ಯಕ್ತಿಗಳೆಲ್ಲ ಪರಿಶುದ್ಧ ಕನಕದ ಮುಷ್ಟೆಗಳೇ ಸರಿ.

ಕಸ್ತೂರ ಬಾರವರ ದೇಹವು ಪಂಚಮಹಾ ಭೂತಗಳಲ್ಲಿ ಲೀನವಾಗಿತ್ತು. ಅವರ ಮೃತ ದೇಹಕ್ಕೆ ಅಗ್ನಿ ಸಂಸ್ಕಾರವು ನಡೆದಿತ್ತು. ಪ್ರಾತಃಕಾಲದಿಂದಲೂ ಬಾಪೂಜಿ ಆ ಅಗ್ನಿಯನ್ನು ನೋಡುತ್ತಾ ಕುಳಿತಿದ್ದರು. ಯಾರೋ ಬಾಪೂಜಿಗೆ "ಬಾಪೂಜಿ ಬೆಳಗಿನಿಂದಲೂ ನೀವಿಲ್ಲಿ ಕುಳಿತಿದ್ದೀರಿ ನಿಮಗೆ ವಿಶ್ರಾಂತಿ ಬೇಡವೇ? ದಯವಿಟ್ಟು ಇಲ್ಲಿಂದ ಏಳಿರಿ" ಎಂದರು. ಬಾಪೂಜಿ ನಗುತ್ತ "ಅರವತ್ತೆರಡು ವರ್ಷಗಳ ಸಂಬಂಧವನ್ನು ಕಡಿದುಕೊಂಡು ನಾನೀಗ ಅವಳಿಂದ ಬೇರೆ ಆಗಿದ್ದೇನೆ, ಇನ್ನೂ ಅವಳ ದೇಹ ಪೂರ್ಣವಾಗಿ ಅಗ್ನಿಗೆ ಆಹುತಿಯಾಗಿಲ್ಲ ಹೀಗೆಯೇ ಹೋದರೆ ಅವಳು ನನ್ನನ್ನು ಕ್ಷಮಿಸಲಾರಳು". ಎಂದು ನುಡಿದರು. ಅಂದು ಬಾಪೂಜಿಯವರನ್ನು ಮಾತನಾಡಿಸಲು ತಂಡ ತಂಡವಾಗಿ ಬಂದ ಜನರನ್ನು ಅವರು ನಕ್ಕು ನಗಿಸಿದರು. ೬೨ ವರುಷಗಳ ಸಂಬಂಧವು ಮುಗಿದು ಬಾರವರು ಮರಣಹೊಂದಿದ್ದರಿಂದ ಮುಂದೆ ತಮ್ಮ ಜೀವನವನ್ನು ಹೇಗೆ ನಡೆಸಬೇಕೆಂಬ ಚಿಂತೆಯಾಯಿತಂತೆ. ಭಗವದ್ಗೀತೆ ಓದಿ ಸ್ಥಿತಪ್ರಜ್ಞರಾದರು.

ಗುಜರಾಥ ವಿದ್ಯಾಪೀಠದ ಸಭೆಗೆ ಬಾಪೂಜಿಯವರು ಹೋಗಬೇಕಿತ್ತು. ಅವರಿಗಾಗಿ ಬರಬೇಕಾಗಿದ್ದ ವಾಹನವು ಸಮಯಕ್ಕೆ ಸರಿಯಾಗಿ ಬರಲಿಲ್ಲ. ತಡವಾಗುವದೆಂದು ನಡೆಯುತ್ತಲೇ ಹೊರಟರು. ಹೀಗೆ ಹೋಗುವಾಗ ಯಾರೋ ಸಾಯಕಲ್ಲ ಹತ್ತಿಕೊಂಡು ಹೊರಟ್ಟಿದ್ದರು ಅವರಿಂದ ಸಾಯಕಲ್ ಕೇಳಿ ಇಸಿದುಕೊಂಡು ೬೦ ವರ್ಷದ ಹಲ್ಲಿಲ್ಲದ, ಬರಿಯ ಮೈಯ ಬಾಪು ಸಾಯಕಲ್ ಹತ್ತಿ ಹೊರಟರು. ಅವರು ವಿದ್ಯಾಪೀಠದಲ್ಲಿ ಸಾಯಕಲಮೇಲಿಂದ ಇಳಿದಾಗ್ಗೆ ಎಲ್ಲರಿಗೂ ನಗು ಬಂದಿತು. ಅವರೊಡನೆ ಸಮಯಕ್ಕೆ ಸರಿಯಾಗಿ ಬಂದೆನಲ್ಲಾ ಎಂದೂ ಅವರೂ ನಕ್ಕರು.

"ಯಂಗ ಇಂಡಿಯಾ"ದಲ್ಲಿ ರಾಜದ್ರೋಹದ ಲೇಖ ಬರೆದರೆಂದು ಅಪಾದನೆ ಹೊರಿಸಿ ಗಾಂಧೀಜಿಯವರನ್ನು ಬಂಧಿಸಿ ವಿಚಾರಣೆ ಪ್ರಾರಂಭಿಸಿದರು. ಶ್ರೀ ಸಿ. ಎನ್. ಭ್ರೂಮ ಫೀಲ್ಡರು ನ್ಯಾಯಾಧೀಶರಾಗಿದ್ದರು. ವಿಚಾರಣೆ ನಡೆದ ನಂತರ ನ್ಯಾಯಾಧೀಶರಾದ ಭ್ರೂಮ ಫೀಲ್ಡರು ಆರೋಪಿಗಳಾದ ಗಾಂಧೀಜಿಯವರಿಗೆ ನಮಿಸಿ, ನಿರ್ಣಯವನ್ನು ಓದುತ್ತಾ "ಈ ವಿಚಾರಣೆಯಲ್ಲಿ ನಾನೇನು ನಿರ್ಣಯ ಕೊಡಬೇಕೆಂಬುದು ನನಗೇ ತಿಳಿಯದಾಗಿದೆ ನಿಮ್ಮನ್ನು ಲಕ್ಷಾವಧೀ ಭಾರತೀಯ ನಾಯಕರೆಂದು ಗಣಿಸುವುದನ್ನೂ ನಾವು ಕಡೆಗಣಿಸುವುದಿಲ್ಲ. ನಿಮ್ಮೊಡನೆ ರಾಜಕಾರಣದಲ್ಲಿ ಭಿನ್ನಾಭಿಪ್ರಾಯ ತಾಳಿದರೂ ನೀವೊಬ್ಬ ಆದರ್ಶ ಮತ್ತು ಸಾತ್ವಿಕ ವ್ಯಕ್ತಿಗಳೆಂದು ಒಪ್ಪುತ್ತೇವೆ." ಎಂದು ಹೇಳಿ "ಗಾಂಧಿಜೀಯವರೇ, ನಿಮಗೆ ಆರುವರ್ಷದ ಶಿಕ್ಷೆ ಕೊಟ್ಟಿದ್ದೇನೆ, ನೀವು ಯೋಗ್ಯರೆಂದು ಕಂಡು ಬಂದು ಸರಕಾರವು ನಿಮ್ಮ ಶಿಕ್ಷೆಯನ್ನು ಕಡಿಮೆಮಾಡಿದರೆ ನನ್ನಷ್ಟು ಬೇರಾರಿಗೂ ಸಂತೋಷವಾಗಲಿಕ್ಕಿಲ್ಲ." ಎಂದು ನುಡಿದಾಗ ನ್ಯಾಯಾಲಯದಲ್ಲಿ ಸೇರಿದ ಜನರಿಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ ಹೀಗೆ ಪಾಶ್ಚಾತ್ಯ ನ್ಯಾಯಾಧೀಶನು ಮಹಾತ್ಮರ ಬಗ್ಗೆ ನುಡಿಯಬೇಕಾದರೆ ಅವರ ವ್ಯಕ್ತಿತ್ವವು ಎಷ್ಟು ಉಚ್ಚ ಮಟ್ಟದ್ದಿರಬಹುದು ಎಂಬ ಕಲ್ಪನೆ ಬರುವುದು. ಮಹಾತ್ಮರು ಕೇವಲ ಭಾರತೀಯರಿಗಷ್ಟೇ ಅಲ್ಲ, ಇಡಿ ಜಗತ್ತಿನ ಜನಾಂಗಕ್ಕೆ ಪೂಜ್ಯರಾಗಿದ್ದರು

ಜಗತ್ತಿಗೆ ಮಾರ್ಗದರ್ಶಿಯಾದ ಬಾಪೂಜೀಯವರು ನಮ್ಮನ್ನಗಲಿ ಹೋದರು ಅವರ ಜೀವನದ ರಸನಿಮಿಷಗಳು ಭಾರತೀಯರಾದ ನಮಗೆ ಮಾರ್ಗದರ್ಶಕಗಳಾಗಿವೆ ಅವರ ತುಂಬು ಜೀವನದ ಪರಿಚಯ ಮಾಡಿಕೊಂಡು ಅವರು ಸಾಧಿಸಿದ ಮಾನವತೆಯ ಕೆಲ ಅಂಶವನ್ನಾದರೂ ಸಂಪಾದಿಸೋಣ ಎಂದು ಪ್ರಜಾಪ್ರಭುತ್ವ ದಿನದಂದು ಪ್ರತಿಜ್ಞೆ ಮಾಡಿದರೆ ಅದಕ್ಕಿಂತಲೂ ಹೆಚ್ಚಿನ ಉತ್ಸವವು ಬೇರಾವುದೂ ಆಗಲಾರದು.

(ಈ ಲೇಖನದಲ್ಲಿ ಬಾಪೂಜೀಯವರ ಜೀವನದಲ್ಲಿ ನಡೆದ ಘಟನೆಗಳ ವಿವರಗಳನ್ನು ಶ್ರೀ ಗೋವಿಂದಮೂರ್ತಿ ದೇಸಾಯಿಯವರು ಬರೆದ "**ಬಾಪೂಜಿಯ ಬದುಕು**" ಎಂಬ ಪುಸ್ತಕದಿಂದ ಆರಿಸಲಾಗಿದೆ. ಈ ಲೇಖದ ಶ್ರೇಯಸ್ಸೆಲ್ಲ ಅವರದೇ, ನಾನು ನಿಮಿತ್ತ ಮಾತ್ರ ಅದಕ್ಕಾಗಿ ಅವರಿಗೆ ಆಭಾರಿ ಆಗಿದ್ದೇನೆ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O S. 334/1956 R. L P 629/58
in R L A 619/59
ರಾಮಣ್ಣ ಗೌಡ — ಅರ್ಜಿದಾರ
ಮತ್ತು
ರಮಾ ಬ್ಯಾ — ಎದ್ರಿಗಳು

ರಮಾ ಬ್ಯಾ ಶಿವ ಪ್ರಭುಜರ ಪತ್ನಿ ಪುತ್ತೂರು ತಾಲ್ಲೂಕು ಪುತ್ತೂರು ಕಸಬಾ ಬೊಳ್ವಾರು ಎಂಬಲ್ಲಿ ಪೋಸ್ಟು, ಪುತ್ತೂರು (ದ. ಕ)

ಸದ್ರಿ ಮೇಲಿನ ಅರ್ಜಿಯಲ್ಲಿ ಎದ್ರಿಗೆ ಕೋರ್ಟು ಮೂಲಕ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ಈ ಕೋರ್ಟು O S 334/1956ನೇ ದಾವೆಯಲ್ಲಾದ ಡಿಕ್ರಿ ಮೇರೆಗೆ ಬಹಾ ಅಮ್ಮರಿ ಕಂತಿನ ಆಪೇಕ್ಷಗಳನ್ನು ಬರಮಾಡಿಕೊಳ್ಳುವರೆ ನಿಮ್ಮ ಮೇಲೆ ಅರ್ಜಿದಾರನು ಮಾಡಿದ ಮೆ. ಲಿಸ ಅಪ್ಲಿಕ್ಯಾರಿ ಅರ್ಜಿಯಲ್ಲಿ ದಾಖಲಾದ ಫಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ಮತ್ತು ಅರ್ಜಿದಾರನಿಗೆ ಫಲಂ ಕಾಲ್ಯ ದರ ಖಾಸ್ತಿಗೆ ನಿಲ್ಲಲು ಪರ್ಮಿಶನ್ ಕೊಡಿಸಬೇಕೆಂತ ಮಾಡಿದ ಅರ್ಜಿಗಳಿಗೆ ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನೀವು ತಾರೀಖು 11-2-59ನೇ ದಿನ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ದಾಖಲು ಮಾಡದಿದ್ದಲ್ಲಿ ಅವುಗಳನ್ನು ನಿಮ್ಮ ಗೈರುಹಾಜರಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ತೀರ್ಮಾನಿಸಲಾದೀತು.

(By Order)
K. R Chamayya
Advocate for Petitioner
ಪುತ್ತೂರು, 11-1-59

ಸ್ಪ್ರಿಂಗುಗಳು ಮುರಿದು ಬೀಳುವುದನ್ನು ತಪ್ಪಿಸಿರಿ.

ಕೆನರಾ ಸ್ಪ್ರಿಂಗುಗಳು

ನಿಶ್ಚಿಂತೆಯಿಂದ ನಿಮ್ಮನ್ನೊಯ್ಯುವುವು.

ಬಾಳಿಕೆ ಮತ್ತು ಭರವಸೆ ಬೇಕಾದಲ್ಲಿ ಅವೆರಡೂ ಈ ಸ್ಪ್ರಿಂಗಿನಲ್ಲಿವೆ.

ತಯಾರಿಕೆಯ ಪ್ರತಿ ಮಟ್ಟದಲ್ಲೂ ಗುಣ ಪರೀಕ್ಷಿಸಲಾಗಿದ್ದು ಅಮೇರಿಕದ ಅತ್ಯುತ್ತಮ ಮಟ್ಟದಂತೆ ಸ್ಪ್ರಿಂಗಿನ ಪ್ರತಿ ಹಾಳೆಗಳನ್ನು ದೀರ್ಘಕಾಲ ಬಾಳುವಿಕೆಯ ಬಗ್ಗೆ ಆಧುನಿಕ ವಿಜ್ಞಾನ ರೀತ್ಯಾ ಉಷ್ಣಶಕ್ತಿ ಪ್ರಯೋಗಿಸಲ್ಪಟ್ಟಿದೆ.

ತಯಾರಕರು—

ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್

ಮಂಗಳೂರು-3.

ದೇವಭಾಷೆಯಲ್ಲಿ ಮಹಾತ್ಮರ ಕಥೆ

ರಾಷ್ಟ್ರಪಿತ ಗಾಂಧಿಯವರ ಜೀವನೇತಿಹಾಸವು ಭಾರತೀಯ ವ್ಯಾವಹಾರಿಕ ಭಾಷೆಗಳಲ್ಲಿ ಸರ್ವಸಾಮಾನ್ಯವಾಗಿರುವುದಾದರೂ ದಿವ್ಯ ಹಾಗೂ ದೇವ ಭಾಷೆಯೆನಿಸಿದ ಸಂಸ್ಕೃತದಲ್ಲಿ ಅಲ್ಪಮಟ್ಟಿನ ನ್ಯೂನವಾಗಿತ್ತು. ಸದ್ಯ ಅಹಮದಬಾದದ ಶ್ರೀ ಭಗವದಾಚಾರ್ಯ ಯತಿಗಳು ತಮ್ಮ ಅಭ್ಯಾಸ, ಪ್ರತಿಭೆ, ಗಾಂಧೀಸೇವೆಗಳನ್ನು ಪುಷ್ಪರಿಗೊಳಿಸಿ ಸುಲಭ ಸರಳ ಸಂಸ್ಕೃತದಲ್ಲಿ, ಮಹಾಕಾವ್ಯ ಮಾರ್ಗದಲ್ಲಿ, ಪ್ರಾಚೀನಪರಂಪರಾನುಗತವಾಗಿ ಈ ಸತ್ಯಕಥೆಯನ್ನು ವರ್ಣಿಸಿದ್ದಾರೆ. ಈ ಕಾವ್ಯದ ಸ್ಥೂಲ ಪರಿಚಯ ಇಲ್ಲಿದೆ.

ಬರೆದವರು: ಶ್ರೀ ಎನ್. ಭೀಮ ಭಟ್ಟ, ಶಿರೋಮಣಿ, ವಿಶಾರದ.

ಭಾರತದ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಮಹಾತ್ಮಾ ಗಾಂಧೀಜಿಯವರ ಕುರಿತು ಅನೇಕ ಕಾವ್ಯಗಳು ಪ್ರಕಟವಾಗಿವೆ. ಅವುಗಳಲ್ಲಿ ಅಹಮ್ಮದಾಬಾದಿನ ಸ್ವಾಮಿ ಶ್ರೀ ಭಗವದಾಚಾರ್ಯರು ರಚಿಸಿದ "ಭಾರತ ಪಾರಿಜಾತಂ" ಎಂಬ ಮಹಾ ಕಾವ್ಯವು ಅಸಿತರ ಸಾಧಾರಣವಾದುದು. ಗಾಂಧೀಜಿಯವರ ಪೋಟ್ಬ್ರರಿನವರೇ ಆದ ಶ್ರೀಮದಾಚಾರ್ಯರು ಸಾಬರ್ಮತಿಯಲ್ಲಿ ಸಂಸ್ಕೃತ, ಹಿಂದೀ ಪಾರ್ಸಿ ಶಿಕ್ಷಕರಾಗಿ ಗಾಂಧೀಜಿಯವರ ನಿಕಟ ಸಂಪರ್ಕವನ್ನು ಪಡೆದವರಾಗಿದ್ದು ಗಾಂಧೀ ವಿಚಾರ ಧಾರೆಗಳನ್ನು ಚೆನ್ನಾಗಿ ಅಳವಡಿಸಿಕೊಂಡವರಾಗಿದ್ದಾರೆ. ಶ್ರೀಮದಾಚಾರ್ಯರು ಸಂಸ್ಕೃತ ಹಿಂದೀ ಗುಜರಾತಿ ಭಾಷೆಗಳಲ್ಲಿ ನೂರಕ್ಕೂ ಮಿಕ್ಕಿದ ಕೃತಿರತ್ನಗಳನ್ನು ರಚಿಸಿರುವರಲ್ಲದೆ ಸಂಸ್ಕೃತದಲ್ಲಿ ರಾಮಾನಂದ ದಿಗ್ವಿಜಯವೇ ಮೊದಲಾದ ಹಲವು ಮಹಾ ಕಾವ್ಯಗಳನ್ನು ಬರೆದಿದ್ದಾರೆ.

ಗಾಂಧೀ ಜೀವನ ದರ್ಶನವನ್ನು ಅವರ ಆತ್ಮಕಥೆ ಹಾಗೂ ಇನ್ನಿತರ ಗ್ರಂಥಗಳಿಂದ ವಿವಿಧ ಭಾಷೆಗಳಲ್ಲಿ ಪಡೆಯಬಹುದಾದರೂ, ಆತ್ಮ ಸ್ವಾತಂತ್ರ್ಯ ಸಂಗ್ರಾಮದ ರೋಮಾಂಚಕಾರಿ ಸನ್ನಿವೇಶಗಳು, ರಾಷ್ಟ್ರಪ್ರೇಮ ಪ್ರಚೋದಕ ಭಾಷಣಗಳು, ತಾತ್ತ್ವಿಕ ಚರ್ಚೆಗಳು ಮುಂತಾದವುಗಳನ್ನು ಗಾಂಧೀ ಜೀವನದ ಪರಿಪೂರ್ಣ ದರ್ಶನವನ್ನೂ ರಾಷ್ಟ್ರದ ಸ್ಥಿತಿಗತಿಗಳನ್ನೂ ಏಕತ್ರ ಮಹಾಕಾವ್ಯದ ರಸಚರ್ವಣೆಯೊಂದಿಗೆ ಪಡೆಯಬೇಕಿದ್ದರೆ ಶ್ರೀಮದಾಚಾರ್ಯರು ರಚಿಸಿದ ಈ ಮಹಾಕಾವ್ಯವನ್ನೋದಬೇಕು. ಮೂರು ಸಂಪುಟಗಳ, ಎಪ್ಪತ್ತೈದು ಸರ್ಗಗಳ; ವಿವಿಧ ವೃತ್ತಗಳ, ಐದು ಸಾವಿರದ್ದೈನೂರೆಂಟು ಶ್ಲೋಕಗಳ ಹದಿನೆಂಟು ರೂಪಾಯಿ ಬೆಲೆ ಬಾಳುವ ಒಂದು ಉದ್ಗ್ರಂಥವಿದು. 'ಭಾರತ ಪಾರಿಜಾತಂ, ಪಾರಿಜಾತಾಪಹಾರಃ, ಪಾರಿಜಾತಸೌರಭಂ" ಎಂಬ ಮೂರು ಹೆಸರಗಳುಳ್ಳ ಮೂರು ಭಾಗಗಳಿಗೂ ಶ್ರೀಮದಾಚಾರ್ಯರೇ ಹಿಂದಿಯಲ್ಲಿ ಭಾವಾರ್ಥ ಬರೆದಿದ್ದಾರೆ. ಸಂಸ್ಕೃತಾನಭಿಜ್ಞರಾದ ಹಿಂದೀ ವಿದ್ವಾಂಸರೂ ಈ ಕಾವ್ಯದ ರಸವನ್ನು ಆಸ್ವಾದಿಸಬಹುದಾಗಿದೆ.

ಶ್ರೀಮದಾಚಾರ್ಯರು ಈ ಮಹಾಕಾವ್ಯದಲ್ಲಿ ಪ್ರತಿ ಪದವನ್ನೂ ಔಚಿತ್ಯಪೂರ್ಣವಾಗಿಯೇ ಬಳಸಿದ್ದಾರೆ. ಆದಿಯಿಂದ ಅಂತ್ಯದ ತನಕ ಗಾಂಧೀ ಜೀವನವನ್ನು ಸತ್ಯ ಸುಂದರವಾಗಿ ನಿರೂಪಿಸಿದ್ದಾರೆ. "ಯದಿಹಾಸ್ತಿ ತದನ್ಯತ್ರ, ಯನ್ನೇಹಾಸ್ತಿ ನ ತತ್ ಕ್ವಚಿತ್" ಇಲ್ಲಿಲ್ಲದ್ದು ಇನ್ನೆಲ್ಲೂ ಇಲ್ಲ, ಇಲ್ಲಿರುವುದೇ ಎಲ್ಲೆಲ್ಲೂ" ಎಂಬ ಮಾತು ಈ ಕೃತಿಯ ಬಗ್ಗೆ ಅಕ್ಷರಶಃ ಅನ್ವಯಿಸುತ್ತದೆ.

ಈ ಕಾವ್ಯದಲ್ಲಿ ಅತಿಶಯೋಕ್ತಿ, ಉತ್ಪ್ರೇಕ್ಷೆಗಳಿಂದ ಗಾಂಧಿಜಿಯವರ ಜೀವನವನ್ನು ವರ್ಣಿಸದೆ, ಜೀವನದ ಯಥಾರ್ಥ ವಿಚಾರಗಳನ್ನೇ ಕವಿಗಳು ಚಿತ್ರಿಸಿದ್ದಾರೆ

"ಅಸ್ಮಿನ್ ಕಥಾ ಕಾಪಿ ನ ಕಲ್ಪಿತಾಸ್ತಿ!
ನಾತ್ಯುಕ್ತಿಲೇಶೋಪಿ ಕಥಂಚಿದತ್ರ|
ಸತ್ಯೋ ಮಹಾತ್ಮಾ ಚರಿತಂಚ ಸತ್ಯಂ!
ತಲ್ಲೇಖಕೋಯಂ ಯತಿರಸ್ತಿ ಸತ್ಯಃ||

ಈ ಮಹಾಕಾವ್ಯದಲ್ಲಿ ಕಲ್ಪಿತ ಕತೆಯಾಗಲಿ, ಅತ್ಯುಕ್ತಿಯಾಗಲಿ, ಸ್ವಲ್ಪವೂ ಇಲ್ಲ. ಮಹಾತ್ಮರೂ ಸತ್ಯ. ಅವರ ಚರಿತವೂ ಸತ್ಯ. ಬರೆಯುವ ಯತಿಯೂ ಸತ್ಯ. ಎಂದು ಮಹಾಕವಿಯ ಪ್ರತಿಜ್ಞೆ. ಗಾಂಧೀಜಿಯವರ ತತ್ತ್ವಗಳನ್ನು ಭಾಷಣಗಳನ್ನೆಲ್ಲಾ ನವಜೀವನ ಟ್ರಸ್ಟಿನವರ ಅನುಮತಿ ಪಡೆದು ಸಂಪೂರ್ಣ ಯಥಾವತ್ತಾಗಿ ಚಿತ್ರಿಸಲಾಗಿದೆ. ಗಾಂಧೀಜಿಯವರ ಜನನದಿಂದ ಮೃತ್ಯುವಿನ ತನಕದ ಪ್ರತಿಘಟನೆಯೂ ಅನುಕ್ರಮವಾಗಿ ಅನುಸ್ಯೂತವಾಗಿ ಸರ್ವಾಂಗ ಸುಂದರವಾಗಿ ಇಲ್ಲಿ ಕಾಣಿಸುತ್ತದೆ. ಭಾರತದ ಅರ್ಧ ಶತಮಾನದ ರಾಜಕೀಯ ಸಾಮಾಜಿಕ ಚಿತ್ರಣವು ಈ ಮಹಾಕಾವ್ಯದಲ್ಲಿ ರಮ್ಯವಾಗಿ ಬಂದಿದೆ. ಗಾಂಧೀಜಿಯವರ ಪ್ರಭಾವದಿಂದ ಭಾರತದ ಭಾಗ್ಯರೇಖೆ ಮೂಡಿ ಬೆಳಗಿದ ವರ್ಣನೆ ಚಿತ್ತಾಕರ್ಷಕವಾಗಿದೆ.

ಭಾರತ ಭಾಗ್ಯ ವಿಧಾತನ ಜೀವನ, ತತ್ತ್ವಗಳು, ಭಾರತದ ರಾಜಕೀಯ ಪರಿಸ್ಥಿತಿ, ಸ್ವಾತಂತ್ರ್ಯ ಸಮರದ ಇತಿಹಾಸ, ರಾಷ್ಟ್ರೀಯತೆಯ ಪ್ರಚೋದನೆ, ಮಹಾಕಾವ್ಯದ ರಸಾಸ್ವಾದಗಳೆಲ್ಲಾ ಅಮರವಾಣಿಯಲ್ಲಿ ಲಭಿಸುವಂತಾದ ಸುಯೋಗಕ್ಕೆ ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಪಡಬಹುದು. ವಿಶ್ವದ ಯಾವುದೇ ಭಾಷೆಯಲ್ಲಿಯೂ ಗಾಂಧೀ ಜೀವನದ ಮೇಲೆ ಇಂಥ ಮಹಾಕಾವ್ಯವು ಈ ತನಕ ನಿರ್ಮಾಣವಾಗಿಲ್ಲ. ಸಂಸ್ಕೃತಕ್ಕೇ ಪ್ರಥಮ ಸ್ಥಾನವು ಈ ಪಟ್ಟಿಗೆ ಸಲ್ಲುತ್ತದೆ.

ಅಕ್ಟೋಬರ ೧೯೫೮ರ "ಜರ್ನಲ್ ಆಫ್ ಎಜ್ಯುಕೇಶನ್ ಸೈಕೋಲಜಿ"ಯಲ್ಲಿ ಪ್ರಸಿದ್ಧ ಗಾಂಧೀವಾದಿಗಳಾದ ಕಿ. ಘ. ಮಶ್ರೂವಾಲರು ಈ ಮಹಾಕಾವ್ಯವನ್ನು ಮುಕ್ತಕಂಠವಾಗಿ ಕೊಂಡಾಡಿ, ಕಾಲೇಜ್ ಹೈಸ್ಕೂಲುಗಳ ವಿದ್ಯಾರ್ಥಿಗಳಿಗೆ ಇದನ್ನು ಪಠ್ಯವಾಗಿ ಸ್ವೀಕರಿಸುವಂತೆ ಕೇಳಿಕೊಂಡಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯವಾಗಿರಿಸುವುದರಿಂದ ವಿದ್ಯಾರ್ಥಿ

(೨೬ನೇ ಪುಟ ನೋಡಿರಿ)

Khira

ಮೆಸರ್ಸ್ ಖೀರಾ ಸ್ಟೀಲ್ ವರ್ಕ್ಸ್, ಪ್ರೈವೇಟ್ ಲಿಮಿಟೆಡ್ ಮುಂಬಯಿ
— ಇವರ —
ಮೋಡರ್ನ್ ಸ್ಟೀಲ್ ಫರ್ನಿಚರುಗಳು

ಮನೆ ಮತ್ತು ಆಫೀಸುಗಳ ಸೌಂದರ್ಯವನ್ನು ಹೆಚ್ಚಿಸುವದು ಮಾತ್ರವಲ್ಲದೆ ಅವುಗಳ ಬಳಕೆಯಲ್ಲಿ ಅಚ್ಚುಕಟ್ಟುತನವಿದೆ—ಒಂದು ಬಗೆಯ ವ್ಯವಸ್ಥೆ ಎದ್ದು ಕಾಣುತ್ತದೆ. ಆಸ್ಪತ್ರೆಗಳಲ್ಲಿ ಈ ಫರ್ನಿಚರುಗಳು ಇನ್ನೂ ಹೆಚ್ಚಿನ ಅವಶ್ಯಕತೆಗಳನ್ನು ಪೂರೈಸುತ್ತವೆ.

ಶಾಸ್ತ್ರಿ ಎಂಡ್ ಕಂಪೆನಿ

ಇವರ ಅಂಗಡಿ ಇಂತಹ ಉಪಯುಕ್ತ ವಸ್ತುಗಳ ಒಂದು ಕೇಂದ್ರ ಸ್ಥಳವಾಗಿದೆ.

ಖೀರಾ ತಯಾರಿಕೆ:

ಚಿಕ್ಕ ದೊಡ್ಡ ಆಫೀಸು, ಮನೆ, ಹೋಟೆಲುಗಳಿಗೆ ಬೇಕಾಗುವ ಮಡಚುವ ಕುರ್ಚಿಗಳು, ಚಿಕ್ಕ ದೊಡ್ಡ ಮತ್ತು ಮಧ್ಯಮ ತರದ ನಿತ್ಯೋಪಯೋಗಿ ಬೀರುಗಳು, ಸ್ಪ್ರಿಂಗ್ ಮಲಗುವ ಮಂಚಗಳು, ಬರೆಯಲನುಕೂಲವಾಗಿದ್ದು ಮಡಚುವ ಟೇಬ್ಲ್‌ಗಳು, ಊಟದ ಮನೆಯ ಕುರ್ಚಿ ಮತ್ತು ಸೋಫಾಗಳು, ಸೋಫಾ ಮತ್ತು ಸೆಲ್ಫ್‌ಗಳು, ಆಫೀಸು ಹಾಗೂ ಮನೆಗಳ ಹಾಲಿನಲ್ಲಿನ ಹಾಲುಗಳಿಗಾಗಿರುವ ಸೋಫಾಗಳು ಇತ್ಯಾದಿ, ಇತ್ಯಾದಿ.

● ಸೀಲಿಂಗ್ ಹಾಗೂ ಟೇಬ್ಲ್ ಫೇನುಗಳು ಇತರ ವಿದ್ಯುತ್ ಸಲಕರಣೆಗಳು. ● ಮನೆಯ ಸುವ್ಯವಸ್ಥೆಯ ಸ್ಟೈಯಿನ್‌ಲೆಸ್ ಪಾತ್ರೆ ಸರಡಿಗಳು.

ಸ್ವಸ್ತಿಕ್ ರೋಲಿಂಗ್ ಶಟ್ಟರ್ಸ್ ಮತ್ತು ಇಂಜಿನಿಯರಿಂಗ್ ವರ್ಕ್ಸ್, ಮುಂಬಯಿ
ಮೆಸರ್ಸ್ ಬೆಸ್ಟ್ ಎಂಡ್ ಕೋ, (ಪ್ರೈವೇಟ್) ಲಿಮಿಟೆಡ್, ಮದ್ರಾಸ್
ಇವರ ಸಬ್ ಡಿಸ್ಟ್ರಿಬ್ಯೂಟರರು.

ಮೇಲಿನವುಗಳಿಗಾಗಿ—

ಶಾಸ್ತ್ರಿ ಎಂಡ್ ಕೋ., ಶೋ ರೂಮ್, ಹಂಪನಕಟ್ಟೆ, ಮಂಗಳೂರು.

ಇವರನ್ನು ಸಂದರ್ಶಿಸಿರಿ

ಅಳಿಯ ಉವಾಚ

ಅಳಿಯನ ಸಂಪತ್ತನ್ನಪಹರಿಸಲೆಳಸಿದ ಮಾವ, ಭಟ್ಟರನ್ನು ಮಧ್ಯಸ್ಥಿಕೆಗಟ್ಟಿ ಕೆಲವು ಚಿಲ್ಲರೆಕಾಸು ತೆತ್ತು ಅಳಿಯನನ್ನು ಒಳಗು ಮಾಡುವ ಯೋಚನೆ ಮಾಡಿದರು. ಸಂಧಾನಕಾರ್ಯಕ್ಕೆ ಐತಂದ ಭಟ್ಟರನ್ನು ಅಳಿಯ ಗೌರವಾದರಗಳಿಂದಸ್ವಾಗತಿಸಿ ತಮ್ಮ ವೈಮನಸ್ಯದ ಕಾರಣವನ್ನು ವಿವರಿಸಿ ಹೇಳತೊಡಗಿದ. ಅದೇನು?

ಬರೆದವರು:ಶ್ರೀ ಕೆ. ಎ. ದೇವದಾಸ, ಶಿರೋಮಣಿ

“ಓಹೋ, ಹಾಗಾದರೆ ನನ್ನ ಮಾವಯ್ಯನವರು ನನಗೆ ತಿಳಿಸಬೇಕೆಂಬುದಾಗಿ ಈ ಮಾತನ್ನು ನಿಮ್ಮ ಕೂಡೆ ಹೇಳಿಕಳುಹಿಸಿದ್ದಾರೆ—ಅಲ್ಲವೇ ಭಟ್ಟರೇ? ಸರಿ. ನೀವೇನೂ ನಮಗೆ ಹೊಸಬರಲ್ಲ. ಹಾಗೆಂದು ನಿಮಗೆ ನಮ್ಮ ಮನೆತನದ ಆಸ್ತಿಪಾಸ್ತಿಗಳ ಕತೆ ಅಷ್ಟೇನೂ ಗೊತ್ತಿರಲಿಕ್ಕಿಲ್ಲ. ಆದ್ದರಿಂದ ಕೊಂಚ ಕೇಳಿರಿ—

ನಾವು ಕೊಯಮ್ಪಾಡಿ ಗ್ರಾಮದ ನರ್ಸಂಗುರಿ ಮನೆತನದವರು ನಿಮ್ಮ ಬ್ರಾಹ್ಮಣರು ನರ್ಸಂಗುರಿಗೆ ‘ನಮಸ್ಕಾರ ತಗ್ಗು’ ಎಂದು ದೇವಭಾಷೆಯ ಲೇಪಹಾಕುತ್ತಾ ಇದ್ದಾರೆ. ಆದರೆ ನಮ್ಮ ಮೂಲಪುರುಷರಲ್ಲೊಬ್ಬರಾದ ನರಸಿಂಹ ಯಾನೆ ನರ್ಸಣ್ಣ ಎಂಬವರು ಅಲ್ಲಿ ಒಂದು ಕೊಳವನ್ನು ನಿರ್ಮಿಸಿ ಮಳೆಗಾಲದಲ್ಲಿ ಅರಾಳಿತ್ತರದ ಜಲಪ್ರಪಾತದ ಸುಖವನ್ನು ಅನುಭವಿಸುವಂತೆ ಮಾಡಿದ್ದರಿಂದ ನರ್ಸಂಗುರಿ ಎಂಬ ಹೆಸರಾದ ಸಂಗತಿಯು ನಿಮ್ಮ ಪುರಾಣಗಳಲ್ಲಿರಲಿಕ್ಕಿಲ್ಲ. ಗುರಿ ಎಂಬುದು ಗುಳಿಯ ತುಳುರೂಪ. ಅದಿರಲಿ. ಆ ನರ್ಸಣ್ಣನ ಒಬ್ಬಳೇ ಒಬ್ಬಳು ತಂಗಿ ಸಂಕಮ್ಮ. ಶಂಕರಿ ಎಂದಾಗಿರಬಹುದು ಅವರ ಹೆಸರು. ಆದರೆ ಆ ಸಂಸ್ಕೃತದ ಹೆಸರು ಬ್ರಾಹ್ಮಣರಿಗೆ ಮೀಸಲಾಗಿದ್ದ ಕಾಲ ಅದು. ಏನೇ ಇರಲಿ. ಆ ಸಂಕಮ್ಮನೇ ಇಂದಿನ ಈ ಮುದಿ ಯಜಮಾನರ ತಾಯಿ. ಅವರು ತೀರಿದನಂತರ-ಎಂದರೆ—ಸುಮಾರು 40 ವರ್ಷಗಳ ಹಿಂದೆ ನಮ್ಮ ಕುಟುಂಬದಲ್ಲಿ ಕವಲು ಎಂದರೆ—ಪಾಲಾಗುವ ಸಂದರ್ಭ ಬಂತು. ಈ ಮಾವಯ್ಯನೂ ಅವರ ಅಕ್ಕನೂ ಒಂದು ಕವಲು. ಸಂಕಮ್ಮನವರಿಗೆ ಮೂವರು ತಂಗಿಯಂದಿರಿದ್ದರು. ಆ ಮೂವರ ಮಕ್ಕಳೂ ಬೇರೆ ಬೇರೆ ಮೂರು ಕವಲುಗಳು. ನಾಲ್ಕಾಯ್ತಲ್ಲವೇ ಭಟ್ಟರೆ! ನಾವು ಐದನೆಯ ಕವಲಿನವರು. ಈ ಯಜಮಾನರ (ಮಾವನ) ತಾಯಿ ಸಂಕಮ್ಮನವರ ತಾಯಿಯು ನನ್ನ ತಾಯಿಯ ತಾಯಿಯ ಖಾಸಾ ತಂಗಿ. ಈಗ ಇರುವ ಈ ಮನೆತನದ ಸಂಪೂರ್ಣ ಆಸ್ತಿಯು ನನ್ನ ಅಜ್ಜಿಯ ತಾಯಿಗೆ ಎಂದರೆ—ಸಂಕಮ್ಮನವರ ಅಜ್ಜಿಗೆ-ಪುತ್ರಾವಕಾಶವಾಗಿ ಸಿಕ್ಕಿದ್ದು—ಎಂಬೀ ಸಂಗತಿಯಷ್ಟೇ ತಿಳಿದುಕೊಂಡರೆ ಸಾಕು. ಆ ಅಜ್ಜಿಯ ತಾಯಿ ಸಾಯುವಾಗ ‘ಇದು ಹೆಮ್ಮಕ್ಕಳ ಅವಕಾಶದ್ದು” ಎಂದು ವೀಲುಗೀಲೇನೂ ಬರೆಯಿಸಿದ್ದಿಲ್ಲವೆಂಬುದೇನೋ ನಿಜ. ಇಂದಿನ ಕಾಲದಲ್ಲಿ ಅದರ ಅಗತ್ಯವೂ ಇರಲಿಲ್ಲ.

ನಾವು 5 ಕವಲು ಬೇರೆಯಾದೆವೆಂದೆನಲ್ಲಾ. ಆದರೆ ನಮ್ಮ ಆಸ್ತಿ ಪಾಲಾಯಿತೆಂದೋ, ಅಥವಾ ಖರ್ಚಿನಪಟ್ಟಿಗೆ ಏನಾದರೂ ಹಿಂಗಡಿಸಿಟ್ಟಿರಬಹುದೆಂದೋ ತಿಳಿದುಕೊಳ್ಳಬೇಡಿರಿ—ಭಟ್ಟರೇ. ಬೇರೆ ಬಿಡಾರ ಕೂತೆವು ಮಾತ್ರ. ಇದೇ ಈ ದೂಮಣ್ಣ ಮಾವನ—ಈ ಧೂಮ್ರಾಕ್ಷನ ಕಾರ್ಬಾರಿನ ಪರಿಣಾಮ.

ಈ ದೂಮಣ್ಣನ ಆಡಳಿತೆ ತೊಡಗಿದೊಡನೆ ನಾವು ಒಬ್ಬ ತಾಯಿಯೂ 9 ಮಕ್ಕಳೂ ನಮ್ಮ ನರ್ಸಂಗುರಿ ಮನೆಯಿಂದ ದೂರವಾಗಿಬಿಟ್ಟಿದ್ದೇವೆ. ಏನು ಹೇಳಲಿ ಭಟ್ಟರೇ? ಅವರು ಪಟ್ಟವನ್ನೇರಿದೊಡನೆಯೇ ನಮಗೆ ಕಂಟಕಶನಿ ಹಿಡಿಯಿತು-ಕಂಟಕಶನಿ. ಮಾವನಿಗೆ ಕಣ್ಣು ಮಂಜಾಯಿತು. ತನ್ನ ಕವಲಿಗೆ ಒಂದು—ತಂಗಣ್ಣು; ಅವರ ಮಹಿವರು ಚಿಕ್ಕತಾಯಂದಿರ ಮಕ್ಕಳಿರುವ 3 ಕವಲಿಗೆ ಒಂದು—ಸಾಧಾರಣ ಕಣ್ಣು, ಮೂರನೆಯದು—ಅಗ್ನಿನೇತ್ರ, ಪಂಚಬಾಣನಂತೆ—ಅವರು ಪಂಚಮದಳವೆಂದೆನಿಸಿರುವ—5ನೇ ಕವಲಿನ ನಾವು ಅದಕ್ಕೆ ಗುರಿ. ನೀವೇ ಹೇಳಿರಿ ಭಟ್ಟರೇ, ಆ ದೃಷ್ಟಿಬಿದ್ದಲ್ಲಿ ಹುಲ್ಲು ಕೂಡಾ ಬೆಳೆದಾವೇ? ಪಾಪಿ! ಸುಡಲಿ ನಮ್ಮನ್ನು—ಸುಡಲಿ. ಪ್ರದ್ಯುಮ್ನನನ್ನು ಸುಟ್ಟ ಕಣ್ಣು—ಸುಡಲಿ.

40 ವರ್ಷ ಕಾಲ ಆ ಧೂಮ್ರಾಕ್ಷ ಪ್ರಭುವಿನ ನಿರ್ದಯವಾದ ಮರ್ದನವನ್ನು ಸಹಿಸಿದೆವು. ಅವರು ನರ್ಸಂಗುರಿ ಮನೆಯ ಸಿಂಹಾಸನವನ್ನೇರುವಾಗ ನನ್ನ ತಾಯಿಗೆ 20 ವರ್ಷ ಪ್ರಾಯ. ನಾನು ಒಂದು ವರ್ಷದ ಮಗು. ನನ್ನ ತಂದೆಯವರು ಏನೋ ಒಂದು ಚಿಕ್ಕ ನೌಕರಿಯಲ್ಲಿದ್ದರು. ಕೋರ್ಟು ಕಚೇರಿ ಎಂದೊಡನೆ ‘ಶಿವಶಿವಾ’ ಎಂದು ಕಿವಿಮುಚ್ಚುವ ಬರೀ ಸಾಧು ಅವರು. ಮನೆತನದ ಅಂಶದಿಂದ ದೂಮಣ್ಣ ಮಾವನವರು ನಮಗೇನೂ ಖರ್ಚಿಗೆ ಕೊಡುತ್ತಿರಲಿಲ್ಲ. ನಮ್ಮ ಪರವಾಗಿ ತಂದೆಯವರು ಅವರನ್ನು ಯಾಚಿಸುತ್ತಲೂ ಇರಲಿಲ್ಲ. ತಂದೆಯವರಿಗೆ ನಾವು ಹೊರತು ಇನ್ನೊಂದು ಮನೆಯ ಖರ್ಚೂ ತಲೆಗೆ ಬಿದ್ದಿತ್ತು. ಅಂತೂ ತನ್ನ ಕಡಿಮೆ ವರಮಾನದಿಂದ ನಮ್ಮನ್ನೂ ಆ ಮನೆಯವರನ್ನೂ ಹಾಗೂ ಹೀಗೂ ಎರಡೆರಡು ದಿನ ಉಪವಾಸ ಬೀಳದಂತೆಯಲ್ಲಿ ದಿನಗಳನ್ನು ಉರುಳಿಸಿದರು.

ಇದೊಂದು ಬಡ ಕುಟುಂಬದ ಕತೆಯೆಂದು ತಿಳಿಯಬೇಡಿರಿ ಭಟ್ಟರೇ! ನಮ್ಮ ಆಸ್ತಿಯ ಬೆಲೆ ಗೊತ್ತಿದೆಯೇ? 40 ವರ್ಷ ಹಿಂದಿನ ಬೆಲೆ 60 ಸಾವಿರ ರೂಪಾಯಿ. ಜನಸಂಖ್ಯೆ ಮಕ್ಕಳು ಮರಿಗಳ ಸಮೇತ 36 ಮಂದಿ. ಇಷ್ಟು ಮಂದಿಗೆ ರಾಜಸುಖ ಅನುಭವಿಸಲಿಕ್ಕೆ ಸಾಲದೇ ಭಟ್ಟರೇ ಈ ಆಸ್ತಿ? ಇಂದಿನ ಬೆಲೆಯ ಅಂದಾಜು ನೀವೇ ಮಾಡಿರಿ. ಆ ದೂಮಣ್ಣ ದೊರೆಗಳೂ ಅವರ ಕವಲಿನವರೂ ರಾಜಸುಖವನ್ನಲ್ಲ—ರಾಜಾಧಿರಾಜ ಸುಖವನ್ನೇ ಅನುಭವಿಸುತ್ತಾರೆ. ತನ್ನ ಇಬ್ಬರು ಮಕ್ಕಳನ್ನೂ ಒಬ್ಬ ಅಳಿಯನನ್ನೂ ವಿಲಾಯತಿಗೆ ಕಳುಹಿಸಿದ್ದಾರೆ—ಬ್ಯಾರಿಸ್ಟರ್ ಮಾಡಲಿಕ್ಕೆ. ಉಂಟಲ್ಲ ಹಣ! ಮಗಳಿಂದ ಮಗಳಿಗಂಬ ಪುತ್ರಾವಕಾಶದಂತೆ ಆ ಆಸ್ತಿಯ ಒಡೆಯರಾದ ನಮಗೆ ಮುರುಕುಮನೆ, ಎರಡು ಕ್ಲಾಸು ವಿದ್ಯೆ ಮತ್ತು ಅರ್ಧೋಪವಾಸ—ಪ್ರತಿಫಲ.

ನಮ್ಮೀ ಪಾಡನ್ನು ದೂಮಣ್ಣ ಮಾವನಲ್ಲಿ ತೋಡಿಕೊಂಡೆ ಹಲವು ಬಾರಿ. ಅದೆಲ್ಲಾ ಹೇಳಿ ಫಲವಿಲ್ಲ ಭಟ್ಟರೇ. ಹೇಳಿದರೆ—ದೂಮಣ್ಣ ಮಾವನಂತಹ ನರಪಿಶಾಚಿಗಳನ್ನು ತುಳಿದು, ಕೆಡಹಿ, ಸುಡದೆ ಈ ವರೆಗೂ ಬದುಕಿ ಮೆರೆಯಲುಬಿಟ್ಟ ಪರಮಾತ್ಮನಲ್ಲಿ ಅಚಲವಾಗಿರುವ ನಿಮ್ಮ ನಂಬಿಕೆಯು ನಿಮ್ಮಿಂದ ತೊಲಗಿಹೋದೀತು. ಇತ್ತನೋಡಿರಿ—ನನ್ನ ಬೆನ್ನಮೇಲೆ ಒಂದು ಗಾಯದ ಕಲೆ ಕಾಣುತ್ತದಲ್ಲವೇ! ಬಿದ್ದಾದ ಗಾಯವಲ್ಲ ಇದು. ಯಾರೊಡನೆಯೂ ಜಗಳಕ್ಕಿಳಿದು ದೊರಕಿದ ಪ್ರತಿಫಲವೂ ಅಲ್ಲ. ಮಾವನು ಕೊಟ್ಟ ಮುರುಕು ಗುಡಿಸಲಿನಲ್ಲಿ ಬಿದ್ದುಕೊಂಡು, ಉಪ್ಪಿಗೂ ಗತಿಯಿಲ್ಲದೆ, ಇದ್ದಬಿದ್ದ ಕಾಳನ್ನು ಬೇಯಿಸಿ ತಿಂದು ಬಿಕ್ಕಿ ಬಿಕ್ಕಿ ಅಳುತ್ತಿದ್ದ ತಾಯಿಯನ್ನು ನೋಡುತ್ತಾ ಅದೊಂದು ದಿನ ನಿಮ್ಮ ನೀತಿನಿಪುಣನಾದ ದೂಮಣ್ಣ ಪ್ರಭುಗಳೆಡೆಗೆ ಹೋಗಿ—‘ಖರ್ಚಿಗೇನಾದರೂ—’ ಎಂದು ಯಾಚಿಸಿದಾಗ ಅವರಿಂದಲೇ ದೊರೆತ ಬಹುಮಾನವಿದು. ತಿಳಿಯಿತಲ್ಲ! ಅಲ್ಲಿಯ ನೌಕರರಿಗಾದರೂ ಏನೊಂದು ಸುಖ ಅಲ್ಲಿ! ಅಭಿಮಾನ ತೊರೆದಾದರೂ ಅಲ್ಲಿ ಕೆಲಸಕ್ಕೆ—ಅವರ ಚಾಕರಿಗೆ ನಿಂತುಬಿಡುವಾ ಎಂದು ನಾನು ಆಸೆಪಟ್ಟದ್ದೂ ಉಂಟು. ಆದರೆ ನಾನು ಅವರ ಕುಟುಂಬ ಬಂಧುವಾದುದರಿಂದ ನನ್ನನ್ನು ಕೆಲಸಕ್ಕಿಟ್ಟುಕೊಳ್ಳುವದು ಅವರ ಗೌರವಕ್ಕೆ ಕುಂದೆಂದು ಅವರು ನನ್ನನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾರರು. ಒಪ್ಪಿದರೆ ಭಟ್ಟರೆ—ನಾನು ತಯಾರು.

ತಂದೆ ತೀರಿದಾಗ ನನಗೆ 17 ಪ್ರಾಯ. ಅವರ ಸಂಪಾದನೆ ಏನಿತ್ತೆಂದು ಗೊತ್ತಾಯಿತಷ್ಟೆ! ಅಂದಿನಿಂದ ನಾವು ರೌರವದಿಂದ ಮಹಾ ರೌರವಕ್ಕೆ ಕಾಲಿಟ್ಟೆವು. ತಾಯಿಗೆ ನಾವು 4 ಗಂಡು ಮಕ್ಕಳು, 5 ಹೆಣ್ಣು ಮಕ್ಕಳು. ಆ ಪೈಕಿ 2 ಗಂಡೂ, 2 ಹೆಣ್ಣೂ ತಂದೆ ತೀರಿದ 3 ವರ್ಷಗಳೊಳಗಾಗಿ ತೀರಿಹೋದವು. ಹೊಟ್ಟೆಗಿಲ್ಲದೆ—ಭಟ್ಟರೇ! ಹೊಟ್ಟೆಗಿಲ್ಲದೆ ಸತ್ತವು. ನಮ್ಮ ಆಸ್ತಿ 60 ಸಾವಿರದ್ದು—40 ವರ್ಷ ಹಿಂದಿನ ಕ್ರಯ. ಏನು ಭಟ್ಟರೇ? ನಿಮ್ಮ ಮುಖದಲ್ಲಿ ಆಶ್ಚರ್ಯ ಚಿಹ್ನೆ! ಕಣ್ಣೀರು ಹರಿಯದೆ—ದನಿ ಕುಗ್ಗದೆ—ನಾನೀಕತೆ ಹೇಳುತ್ತೇನಲ್ಲಾ—ಎಂದೋ? ಆ ನನ್ನ ಕಣ್ಣೀರೆಲ್ಲಾ ಎಂದೋ ಹರಿದು ಮುಗಿದು ಬರಿದಾಗಿದೆ. ಗಂಜಿನೀರಿಗೆ ತಕ್ಕ ಒಂದು ಮುಷ್ಟಿ ಅಕ್ಕಿ ದಿನಂಪ್ರತಿ ದೊರಕಿದ್ದರೆ—ಸೋರಿದ ಮಳೆ ನೀರಿನಿಂದ ಒದ್ದೆಯಾದ ಹರಕು ಬಟ್ಟೆಗೆ ಬದಲೊಂದು ತುಂಡಿರುತ್ತಿದ್ದರೆ- ಆ ನನ್ನ ಚಿನ್ನ ಕಂದರು ಹಾಗೆ ಸಾಯುತ್ತಿರಲಿಲ್ಲ.

ನಾಲ್ಕು ದುರ್ಘಟನೆ ನಡೆದಾಗ - ನಾಲ್ಕು ಬಾರಿ ನಾನೇ ಸಂಗತಿಯನ್ನು ದೂಮಣ್ಣ ಮಾವನಿಗೆ ತಿಳಿಸಿದೆ. ‘ಅದಕ್ಕೆ ನಾನೇನು ಮಾಡಬೇಕು? —ಎಲ್ಲಾ ಬ್ರಹ್ಮಲಿಪಿ—ಹೋಂ—ಹೋಗು—ಏನು? —ಭ

(೨೫ನೇ ಪುಟನೋಡಿರಿ)

ಜಯಂತಿಲಾಲ್ ಬ್ರದರ್ಸ್

ಮಂಗಳೂರು. ದ. ಕನ್ನಡ.

ನಿಮ್ಮ ವಿವಿಧೋದ್ದೇಶಗಳಿಗೊಪ್ಪುವ ಯಾವತ್ತೂ
ಜವುಳಿಗಳಿಗೆ ಜಿಲ್ಲೆಯ ಪ್ರಾಮುಖ್ಯ ಜವುಳಿ ಮಳಿಗೆ.

ಬೆಂಗಳೂರು, ಬೆನಾರಿಸ್, ಧರ್ಮಾವರಂ, ಕಂಜೀವರಂ, ತಂಜಾವೂರು, ಆರಣಿ, ಕಲ್ಕತ್ತಾ, ಮುಂಬಯಿ, ವರಿಯೂರು, ಕೊಯಮುತ್ತೂರು, ಮಧುರೆ, ಕಂಬಾಯತ್ ವಗೈರೆ ಉತ್ಪಾದಕ ಕೇಂದ್ರಗಳಿಂದಲೇ ನೇರವಾಗಿ ತರಿಸಿ ವಿತರಣೆ ಮಾಡುವ ಪ್ರಾಮುಖ್ಯ ವಸ್ತ್ರ ಭಂಡಾರ.

ದಿ. ಬಕ್ಕಿಂಗ್‌ಹಾಮ್ ಎಂಡ್ ಕರ್ನಾಟಿಕ್
ಕಂಪೆನಿ ಲಿಮಿಟೆಡ್, ಮದ್ರಾಸು
ದಿ. ಬೆಂಗಳೂರು ಊಲನ್, ಕೋಟನ್ ಎಂಡ್
ಸಿಲ್ಕು ಮಿಲ್ಸ್ ಲಿಮಿಟೆಡ್, ಬೆಂಗಳೂರು
ದಿ. ಮೆಟ್ಟೂರ್ ಇಂಡಸ್ಟ್ರಿಸ್ ಲಿಮಿಟೆಡ್,
ಮೆಟ್ಟೂರು

ಇವರ ಅಧಿಕೃತ ವಿತರಣೆಗಾರರು.

ಸ್ವತಂತ್ರಭಾರತ ಎತ್ತ ಸಾಗಿದೆ?

ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರದ ಆಡಳಿತೆಯು ರಾಷ್ಟ್ರದ ಅತ್ಯಧಿಕ ಸಂಖ್ಯಾಕ ಜನಬೆಂಬಲವುಳ್ಳ ರಾಜಕೀಯ ಪಕ್ಷದ ಮೂಲಕ ನಡೆಯುತ್ತದೆ ಆದರೆ, ಈ ಪಕ್ಷದ ಸದಸ್ಯರ ಮತ್ತು ದೇಶದ ಜನತೆಯ ಸಂಖ್ಯೆಯನ್ನು ಹೋಲಿಸುವಾಗ ಅಜಗಜಾಂತರವಿಲ್ಲವೆ? ಹಾಗಿರುವಾಗ, ನಮ್ಮ ಆಡಳಿತಗಾರರು ವಿಶಾಲ ಜನಸಮುದಾಯದ ಅಭಿಪ್ರಾಯವನ್ನು ತಿಳಿಯದೆ ಕಾರ್ಯಪ್ರವೃತ್ತರಾಗುವುದು ನ್ಯಾಯೋಚಿತವೆನಿಸುವದೆ?

ಬರೆದವರು ಶ್ರೀ ಬೈಕಾಡಿ ವೆಂಕಟಕೃಷ್ಣರಾಯ

ಭಾರತಕ್ಕೆ ಸ್ವಾತಂತ್ರ್ಯ ದೊರೆತು ಹತ್ತು ವರ್ಷಗಳಾದುವು. ಈ ಅವಧಿಯಲ್ಲಿ ನಮ್ಮ ಜನಜೀವನದಲ್ಲಿ ನಾನಾ ಮುಖಗಳಲ್ಲಿ ಮಾರ್ಪಾಟು ಆಗಿದೆ. ಆದರೆ ಇದರ ಅರಿವು ನಮ್ಮ ಜನಕ್ಕೆ ಎಷ್ಟರ ಮಟ್ಟಿಗಿದೆ? ಇದರ ಅರಿವನ್ನು ಜನಕ್ಕೆ ಉಂಟುಮಾಡುವಲ್ಲಿಯಾದರೂ ನಾವು ಎಷ್ಟು ಯಶಸ್ವಿಯಾಗಿದ್ದೇವೆ? ನಿತ್ಯ ಜೀವನದಲ್ಲಿ, ವಿವಿಧ ವಿಚಾರಗಳಲ್ಲಿ ಜನತೆ ಹೊಂದಿರುವ ಭಾವನೆ ಏನು, ಇದನ್ನೇ ಇಂದಿನ ಪ್ರಜಾಪಾಲಕರು ಸಂಗ್ರಹಿಸುವುದು ತೀರ ಅವಶ್ಯ—ಈ ಕಾಲದಲ್ಲಿ ಇದು ಅತ್ಯಂತ ಪ್ರಭಾವಯುತವಿದಷ್ಟು. ಅಂದ ಮೇಲೆ ಈ ಬಗ್ಗೆ ರಾಜಕೀಯ ಕ್ಷೇತ್ರಗಳಲ್ಲಾಗಲೀ, —ಇತರ ಕ್ಷೇತ್ರಗಳಲ್ಲಾಗಲೀ ಪ್ರಯತ್ನ ಏನು ನಡದಿದೆ? ಇಷ್ಟೊಂದು ವಿಸ್ತಾರವಾದ ಈ ನಮ್ಮ ದೇಶದಲ್ಲಿ, ನಲವತ್ತು ಕೋಟಿ ಪ್ರಜಾ ಸಮೂಹವಿರುವ ರಾಷ್ಟ್ರದಲ್ಲಿ, ಇದರ ಕಲ್ಯಾಣಕ್ಕಾಗಿಯೇ ನಡೆದ ಕಾರ್ಯ ಬಹಳ ಬಹಳಿದ್ದರೂ ಆದರ ಅರಿವು ಅವರಿಗೇ ಇರದಿದ್ದರೆ, ಈ ಅಜ್ಞಾನವೇ ದೇಶಕ್ಕೆ ಒಂದು ದೊಡ್ಡ ನಷ್ಟ. ಜನತೆಯ ಅಜ್ಞಾನವನ್ನೇ ಕೇವಲ ಕೆಲವೇ ವ್ಯತ್ಸಿದ್ಧಿ ರಾಜಕಾರಣಿಗಳು ದುರುಪಯೋಗಿಸಿಕೊಂಡರೂ, ಸ್ವರಾಜ್ಯ ಕೇವಲ ಕೆಲವೇ ಜನರ ಸ್ವತ್ತಾಗಿ ಉಳಿದೀತು—ಆದ್ದರಿಂದಲೇ ಹತ್ತು ವರುಷಕ್ಕೊಂದು ಬಾರಿಯ ಜನಗಣತಿಯಂತೆ, ಹತ್ತು ವರ್ಷಕ್ಕೊಮ್ಮೆಯಾದರೂ ದೇಶವಾದ್ಯಂತ ಜನತೆಯ ಅಭಿಪ್ರಾಯಗಳ ಸಂಗ್ರಹಣೆ ಅತೀ ಅವಶ್ಯ ಎಂದು ನಾನು ಸೂಚಿಸಬಲ್ಲೆ

ಈ ಹತ್ತು ವರ್ಷಗಳಲ್ಲಿ ನಮ್ಮ ಪ್ರಜಾಪ್ರಭುತ್ವ ರಾಷ್ಟ್ರ ಸಾಧಿಸಿರುವ ಮುಖ್ಯ ಸಾಧನೆಗಳನ್ನು ನಮ್ಮ ರಾಷ್ಟ್ರದ ಚಿತ್ರವನ್ನೇ ಬದಲಿಸಿರುವ ಕೆಲವಾದರೂ ಸಾಧನೆಗಳನ್ನು ನೆನಸಿಕೊಳ್ಳುವ—ಆದರ ಸಾಧಕ ಬಾಧಕಗಳನ್ನು ವಿಚಾರಿಸುವ— ಮೊತ್ತ ಮೊದಲನೆಯ ಸಾಧನೆಯೇ ನಮ್ಮ ದೇಶದಲ್ಲಿ ಆರುನೂರಕ್ಕೂ ಮೇಲ್ಪಟ್ಟು ಬ್ರಿಟಿಷ್‌ರಿಂದ ರಚಿಸಲ್ಪಟ್ಟ ದೇಶೀಯ ರಾಜರುಗಳ ಆಡಳಿತಕ್ಕೆ ಒಳಪಟ್ಟ ಆಶ್ರಿತ ಸಂಸ್ಥಾನಗಳನ್ನು ಸಮಾವೇಶಗೊಳಿಸಿದ್ದು. ಈ ಮಹಾತ್ಕಾರ್ಯದ ಕೀರ್ತಿ ದಿವಂಗತ ಸರದಾರ ವಲ್ಲಭಾಯಿಯವರಿಗೆ ಸಲ್ಲಬೇಕು. ಅಂದು ಅದು ಆಗದೆ ಉಳಿದಿದ್ದರೆ ಇಂದಿಗೂ, ಈ ಆರುನೂರ ಇಪ್ಪತ್ತು ಸಂಸ್ಥಾನಗಳು, ನಮ್ಮ ದೇಶದ ಸಹಸ್ರ ಆಪತ್ತುಗಳಾಗಿಯೇ ಉಳಿಯುತ್ತಿದ್ದುವು. ಹೈದರಾಬಾದು, ಬರೋಡದಂತಹ ಗಂಟಿಕೋರ ಸಂಸ್ಥಾನಗಳನ್ನು ಜೀರ್ಣಿಸಿಕೊಂಡ ಸರದಾರರು ಧನ್ಯ. ಇಂದಿನ ಕಾಶ್ಮೀರ, ಗೋವಗಳ ನೀತಿಯನ್ನು ನೆನಸಿಕೊಂಡರೆ, ಸರದಾರರು ಮತ್ತೊಮ್ಮೆ ಜನಿಸಬಾರದೆ ಅನ್ನಿಸುತ್ತದೆ—ಅಥವಾ ಅವರೊಂದಿಗೇ ನಮ್ಮ ದೇಶ ದಕ್ಷ ನಾಯಕತ್ವದ ಬಲವನ್ನು ಕಳಕೊಂಡಿದೆ ಎಂದೂ ಅನ್ನಿಸುತ್ತದೆ.

ಸಂಸ್ಥಾನಗಳ ಸಮಾವೇಶನ ಕಾರ್ಯದನಂತರ ನಮ್ಮ ದೇಶ ಪ್ರಾಂತೀಯ ಜನಗಳ ನಡುವೆ ಐಕ್ಯಭಾವನೆ ಹೆಚ್ಚಿಸಲು ಭಾಷಾವಾರು ಪ್ರಾಂತಗಳನ್ನು ರಚಿಸಿತು ಆದರೆ ಇಲ್ಲಿ ನಮ್ಮ ಆಡಳಿತದ ಪಕ್ಷವಾದ ಕಾಂಗ್ರೆಸ್ಸು ಭಾಷಾವಾರು ಪ್ರಾಂತಗಳ ವಿಚಾರದಲ್ಲೇ ಒಂದು ವಿಚಿತ್ರ ಧೋರಣೆಯನ್ನು ತಾಳಿದುದರ ಪರಿಣಾಮವಾಗಿ ಇಂದು ಒಂದೊಂದು ಪ್ರಾಂತ ಒಂದೊಂದು ಸಮಸ್ಯೆಯನ್ನು ಮುಂದೊಡ್ಡಿದೆ. ಪ್ರಾಂತಗಳ ರಚನೆಯ ಕಾಲದಲ್ಲಿ ಪ್ರಜಾಭಿಪ್ರಾಯಕ್ಕೇ ವಿರೋಧವಾಗಿ ಕಾಂಗ್ರೆಸು ನಡಕೊಂಡುದರ ಫಲವಾಗಿ ಇಂದು ಅಲ್ಲಲ್ಲಿ ಗಡಿ ಸತ್ಯಾಗ್ರಹವೇ ಮುಂತಾದ ಕ್ರಾಂತಿದಾಯಕ ಚಳವಳಿಗೆ ಎಡೆ ದೊರಕಿದೆ

ಬೊಂಬಾಯಿಯನ್ನು ಒಡೆಯಬೇಕೆಂಬ ಬಗ್ಗೆ ಒಂದೆಡೆ ಚಳವಳಿ ನಡೆಯುತ್ತಿದ್ದರೆ, ಇತ್ತ ಬೆಳಗಾಂವಿಯ ಗಡಿಯ ಬಗ್ಗೆ ಇನ್ನೂ ಚಳವಳಿ ನಡೆಯುತ್ತಿದೆ. ಕಾಸರಗೋಡಿನ ಕನ್ನಡ ಪ್ರದೇಶಗಳು ನ್ಯಾಯವಾಗಿ ಕರ್ಣಾಟಕಕ್ಕೆ ಸೇರಬೇಕಾಗಿದ್ದರೂ, ಆತ್ಮ ವಿಶ್ವಾಸವನ್ನು ಕಳಕೊಂಡ ನಮ್ಮವರಿಂದಾಗಿಯೊ—ಇಂದು ಅದು ಕೇರಳಕ್ಕೆ ಸೇರಬೇಕಾಯ್ತು ದಕ್ಷಿಣ ಕನ್ನಡದ ಮುಖಂಡರು-ರಾಜಕಾರಣಿಗಳು, ಜಗತ್ತಿಗೇ ಪ್ರಸಿದ್ಧರಾದರೂ ತಮ್ಮ ಮನೆಯ ಕೆಲವು ಮುಖ್ಯ ಸಮಸ್ಯೆಗಳು ಇನ್ನೂ ಪರಿಹಾರವಾಗದೇ ಉಳಿದಿವೆ.

ಇತ್ತ ಮೈಸೂರ ಶಾಸನ ಸಭೆಯಲ್ಲಿ ಬಹ್ವಂಶ ಸದಸ್ಯರು ಪ್ರಾಂತದ ಹೆಸರು ಕರ್ಣಾಟಕವಿರಬೇಕೆಂದು ಅಭಿಪ್ರಾಯಪಡುವುದಾದರೂ— ಮೈಸೂರ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರಲ್ಲಿಯೂ ಬಹ್ವಂಶ ಮಂದಿ ಪ್ರಾಂತದ ಹೆಸರು ಕರ್ಣಾಟಕ ಎಂದಿರಬೇಕೆಂದೇ ಅಭಿಪ್ರಾಯವುಳ್ಳವರಾದರೂ, ಮೈಸೂರ ಹೊರಗೂ, ಒಳಗೂ ಕರ್ಣಾಟಕದ್ಯಂತ ಅಧಿಕ ಬಹ್ವಂಶದ ಪ್ರಜೆಗಳು ತಮ್ಮ ಪ್ರಾಂತದ ಹೆಸರು ಕರ್ಣಾಟಕವೆಂದಿರಬೇಕೆಂದು ಆಗ್ರಹಪಡುವುದಾದರೂ—ಕಾಂಗ್ರೆಸ್ ವರಿಷ್ಠ ವರ್ತುಲದಲ್ಲಿ ಈ ಬಗ್ಗೆ ಸಮಭಿಪ್ರಾಯವಿಲ್ಲ. ಅಲ್ಲದೆ ಈ ಪ್ರಶ್ನೆಯನ್ನು ಅನಿರೀಕ್ಷಿತ ಕಾಲ ಮುಂದೂಡುವ ಪ್ರಯತ್ನವೂ ನಡದಿದೆ— ಇದು ಯಾವ ಪ್ರಜಾಪ್ರಭುತ್ವದ ಲಕ್ಷಣವೋ ತಿಳಿಯದು ಅಂದರೆ, ಶಾಸನ ಸಭೆಯಲ್ಲಿ ಮೈಸೂರೊಡನೆ ಸೇರ್ಪಡೆ ಹೊಂದಿದ ಭಾಗದ ಸದಸ್ಯರ ಸಂಖ್ಯೆಯೂ ಅಧಿಕಾರದಲ್ಲಿದ್ದರೂ ಮೈಸೂರು ಮಂತ್ರಿ ಮಂಡಳದಲ್ಲಿ ಹಳೆಯ ಮೈಸೂರಿಗೇನೇ ಪ್ರಾಧಾನ್ಯ ಜಾಸ್ತಿ. ಇದರಿಂದಲೇ ಮೈಸೂರು ಮೈಸೂರಾಗಿಯೇ ಉಳಿಯಿತಲ್ಲದೆ ಕರ್ಣಾಟಕವಾಗಲಿಲ್ಲ ವರಿಷ್ಠರ ಅಭಿಲಾಷೆಯಾದರೋ—ಭಾವನೆಯಲ್ಲಿ ಅಂತಾರಾಷ್ಟ್ರೀಯದಷ್ಟು ವಿಶಾಲವುಳ್ಳದ್ದಾದರೂ ಮನೆಯಲ್ಲಿ—ತನ್ನ ಸ್ವಕ್ಷೇತ್ರದಲ್ಲಿ, ವಿಶಾಲ ಕರ್ಣಾಟಕದ ಬದಲು ಸಂಕುಚಿತ ಮೈಸೂರಿಗೇ ಗೌರವ ಹೆಚ್ಚು. ಇಲ್ಲಿ ಮಾತಿಗೂ ಕೃತಿಗೂ, ವಿರೋಧಾಭಾಸ ಸ್ಪಷ್ಟವಾಗಿ ಕಾಣುತ್ತದೆ-ಇಲ್ಲೇ ಪ್ರಜಾಪ್ರಭುತ್ವ ಸೋಲುತ್ತದೆ ಒಟ್ಟಿನಿಂದ ಭಾಷಾವಾರು ಪ್ರಾಂತಗಳ ರಚನೆಯ ಕಾರ್ಯದಲ್ಲಿ ಆಡಳಿತ ಪಕ್ಷವಾದ ಕಾಂಗ್ರೆಸ್ಸ ಜನತೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ ಕೆಲವೆಡೆ ನಡದು ಜನತೆಯ ಅವಿಶ್ವಾಸಕ್ಕೆ ಪಾತ್ರವಾಗಿದೆ-ಮುಂದಾದರೂ, ಈ ತಪ್ಪನ್ನು ತಿದ್ದಿಕೊಳ್ಳುವುದು ಅವಶ್ಯವಾದೀತು.

ನಮ್ಮ ರಾಷ್ಟ್ರ ಜಾತ್ಯತೀತ ರಾಷ್ಟ್ರವೆಂದು ಘಟನೆಯಲ್ಲಿ ಉಲ್ಲೇಖಿಸಿದೆ—ಈ ಮಾತು ನಮ್ಮ ನಿತ್ಯ ಜೀವನದಲ್ಲಿ ಎಷ್ಟು ಸತ್ಯವಾಗಿ ಉಳಿದಿದೆ? ಸರಕಾರಿ ಹುದ್ದೆಗಳಲ್ಲಾಗಲೀ, ಶಾಲಾ ಕಾಲೇಜುಗಳ ಪ್ರವೇಶದಲ್ಲಾಗಲೀ ಅಥವಾ ಇತರ ಸೌಲಭ್ಯಗಳಲ್ಲಾಗಲೀ, ಯೋಗ್ಯತೆ ಅರ್ಹತೆ, ಎಲ್ಲ ಇದ್ದು ಕೆಲವರಿಗಾದರೂ ಜಾತಿಯೇ ತೊಡಕಾಗಿ ನಿಂತ ಉದಾಹರಣೆಗಳು ನಮ್ಮಲ್ಲಿಲ್ಲವೆ? ನ್ಯಾಯಾಲಯಗಳ ತನಕವೂ ಈ ಮಾತು ಹೋಗಿ, ಅಲ್ಲಿ ಪರಿಹಾರ ದೊರಕಿದ ಉದಾಹರಣೆಗಳೂ ಇವೆ. ಹಿಂದುಳಿದ ವರ್ಗ ಮುಂದೆ ಬರಬೇಕು. ಸೌಲಭ್ಯಗಳು, ಕೇವಲ ಕೆಲವೇ ವರ್ಗದವರ ಸ್ವತ್ತಾಗಿ ಉಳಿಯಬಾರದು ಎಂಬ ಮಾತು ಎಲ್ಲರೂ ಒಪ್ಪತಕ್ಕದ್ದು. ಆದರೆ ಹಿಂದುಳಿದವರು, ಮುಂದೆ ಬರುವ ಮಾರ್ಗವಾದರೂ ಹೇಗೆ? ಹಿಂದೆಲ್ಲ ಅಂದರೆ ಶತಮಾನಗಳಿಂದ ಬ್ರಾಹ್ಮಣರು ಶ್ರೇಷ್ಠರೆಂದೆನ್ನಿಸಿಕೊಂಡರು ನಿಜ. ಇಂದು ಅವರಲ್ಲೇ ಯೋಗ್ಯತೆ ಉಳಿದಿರುವುದು ಹೆಚ್ಚು. ಅದೂ ನಿಜ ಆದರೆ ಅದಕ್ಕಾಗಿ ಪ್ರಯತ್ನ ಎಷ್ಟು ಕಾಲದಿಂದ ನಡದಿದೆ—ಹೇಗೆಲ್ಲ ನಡದಿದೆ ಎಂಬುದನ್ನಾದರೂ, ಇಂದು ಮುಂದೆ ಬರಬೇಕು ಎನ್ನಿಸಿಕೊಂಡವರು ತಿಳಿಯುವುದು ಅಗತ್ಯ—ಅಲ್ಲದೆ ಇಂದು ಬ್ರಾಹ್ಮಣರಾದರೂ ಕರ್ಮರಹಿತರಾಗಿ ಹಿಂದೆ ಸರಿಯುತ್ತಿದ್ದಾರೆ. ಹೀಗೆಯೇ ಬ್ರಾಹ್ಮಣರೂ ಕರ್ಮರಹಿತರಾದರೆ ಇನ್ನೊಂದು ಶತಮಾನ ಎರಡು ಶತಮಾನಗಳಲ್ಲಿ ಬ್ರಾಹ್ಮಣ ಕುಲವೇ ನಾಶವಾದೀತು ಎಂಬುದನ್ನು ಮರೆಯಬಾರದು

ಋಷಿಗಳು ತಪಸ್ಸನ್ನಾಚರಿಸಿದರು, ಆತ್ಮಸಂಯಮನ, ಇಂದ್ರಿಯ ನಿಗ್ರಹ, ವೇದ, ಶಾಸ್ತ್ರಗಳ ಅಭ್ಯಾಸ, ನಿಷ್ಠೆಯ ಜೀವನ ಮತ್ತು ಕರ್ಮ—ವ್ರತಾದಿಗಳ ಆಚರಣೆ, ಶಿಸ್ತು ಪಾಲನೆ, ಮುಂತಾದ ಆದರ್ಶಣೀಯ ಜೀವನಗಳನ್ನೂ ಸಹಸ್ರ ವರ್ಷಗಳಿಂದ ನಡಸಿಕೊಂಡು ಬಂದುದರ ಫಲವಾಗಿ ಆ ಒಂದು ಜನಾಂಗ—ಬ್ರಾಹ್ಮಣ ಎನಿಸಿಕೊಂಡಿದೆ—ಹುಟ್ಟಿನಿಂದ ಬ್ರಾಹ್ಮಣನು ಯಾರೂ ಇಲ್ಲ, ಕರ್ಮದಿಂದಲೇ ಬ್ರಾಹ್ಮಣನಾದ—ಶೂದ್ರನಾಗಿ ಜನಿಸಿಯೂ ಆಚಾರ ಕರ್ಮಗಳಿಂದ ಶ್ರೇಷ್ಠ ಬ್ರಾಹ್ಮಣನಾದ ಉದಾಹರಣೆ ನಮ್ಮ

ಲೇಖಕರು

* * *

ಇತಿಹಾಸದಲ್ಲಿ ಸಾಕಷ್ಟು ಇದೆ ಈ ಬ್ರಾಹ್ಮಣ ಶಾಕಾಹಾರಿಯಾದ, ಅಹಿಂಸಾವ್ರತವನ್ನು ಆಚರಿಸಿದ, ಪ್ರತಿದಿನ ಸ್ನಾನ ಜಪತಪಗಳನ್ನೂ ತಪ್ಪದೆ ನಡಸಿದ, ಗುರುಹಿರಿಯರಲ್ಲಿ ಭಕ್ತಿಯಿಂದ ನಡಕೊಂಡ; ಜೀವನದಲ್ಲಿ ಸತ್ಯವನ್ನು ಎಷ್ಟಕ್ಕೂ ಮಾರಿಕೊಡಲಿಲ್ಲ ಬ್ರಹ್ಮಚರ್ಯ, ಗ್ರಹಸ್ಥಾಶ್ರಮವೇ ಮುಂತಾದ ಧರ್ಮಗಳನ್ನು ಪಾಲಿಸಿ ಪವಿತ್ರ ಬಾಳ್ವೆಯನ್ನು ನಡೆಸಿದ-ಇಂದಿಗೂ. ಮಂಕಾಗಿಯಾದರೂ, ಬ್ರಾಹ್ಮಣ ಈ ಕರ್ಮಗಳನ್ನು ನಡಸುತ್ತಿದ್ದಾನೆ. ಇದಕ್ಕಾಗಿ ಸಂಸ್ಥೆಗಳಿವೆ, ಆಚಾರ್ಯರು ಇದ್ದಾರೆ, ಮಠ ಸಂಸ್ಥಾನಗಳಿವೆ. ಹೀಗೆ ಇಂದಿನ ಬ್ರಾಹ್ಮಣನಲ್ಲಾದರೂ, ಕಾಣುವ ಯೋಗ್ಯತೆಗೆ, ಸಹಸ್ರ ವರ್ಷಗಳ ಹಿಂದಿನ ಜೀವನದ ಸಂಸ್ಕಾರದ ಬಲವಿದೆ, ಆ ಋಷಿರಕ್ತ ಇಂದಿಗೂ ಬ್ರಾಹ್ಮಣನಲ್ಲಿ ಹರಿಯುತ್ತಿದೆ ಹೊರತು—ಒಂದು ತಾಲೂಕು ಕಚೇರಿಯ ಗುಮಾಸ್ತೆ ಕೆಲಸ ದೊರಕಿಯೋ— ತಹಶೀಲ್ದಾರನಾಗಿಯೋ ಮುನಸಿಫನಾಗಿಯೋ—ಸರಕಾರದ ದರ್ಜೆದ ಅಧಿಕಾರಿ ಹುದ್ದೆಗಳನ್ನು ಅಲಂಕರಿಸಿಯೋ—ಬ್ರಾಹ್ಮಣನು ಉದ್ಧಾರನಾಗಲಿ ಇಲ್ಲ ಇಂತಹ, ಹುದ್ದೆಗಳಿಂದ ಇವನ ಕುಲವನ್ನು ಬೆಳೆಸಲೂ ಇಲ್ಲ, ಅರ್ಥಾತ್, ಬ್ರಾಹ್ಮಣ ಇಂತಹ ಹುದ್ದೆಗಳನ್ನು ಹಂಬಲಿಸಿಯೇ ತನ್ನ ಭವಿಷ್ಯವನ್ನು ಕೆಡಿಸಿಕೊಂಡ ಎಂದರೆ ಆಶ್ಚರ್ಯವಲ್ಲ

ಸಂಕುಚಿತ ಜಾತೀಯ ಮನೋಭಾವ ತಾಳಿ ಹಿಂದುಳಿದವರು ಎಂಬ ತಪ್ಪು ಭಾವನೆಯಿಂದ—ಒಡನೆಯೆ ಮುಂದೆ ಬರಬೇಕೆಂಬ ಹಂಬಲಿನಿಂದ, ಒದ್ದಾಡುವರು, ಮೊದಲು ಬ್ರಾಹ್ಮಣ್ಯಕ್ಕೆ ಯೋಗ್ಯವಾದ ಸತ್ಕರ್ಮ ಸದ್ಧರ್ಮ, ನಿಷ್ಠಾವಂತ, ಶಿಸ್ತಿನ ಜೀವನವನ್ನು ನಡಸಲು ಪ್ರಯತ್ನಿಸಬೇಕು—ಅವರೂ ಬ್ರಾಹ್ಮಣರಾಗಲು ಯತ್ನಿಸಬೇಕು ಅವರ ನಿತ್ಯಜೀವನದಲ್ಲಿ ಈ ಸಂಸ್ಕಾರ ಆಗುವಂತೆ ಪ್ರಯತ್ನಿಸಬೇಕು—ಕಾಲೇಜುಗಳಲ್ಲಿ ಸೀಟು ದೊರಕಿಸಿಕೊಂಡೊಡನೆ, ಸರಕಾರಿ ಹುದ್ದೆಗಿಟ್ಟಿಸಿಕೊಂಡೊಡನೆ—ತಮ್ಮ ಕುಲ ಉದ್ಧಾರವಾಗುತ್ತದೆಂಬ ಭ್ರಾಂತಿ ಬಿಡಬೇಕು— ಈ ಲಾಭ ಕೇವಲ ಕ್ಷಣಿಕ ಇದರಿಂದ ಆಗುವ ನಷ್ಟ ಶಾಶ್ವತವಾದುದು. ಇನ್ನು ಹುದ್ದೆಗಳನ್ನಾದರೂ ಈ ರೀತಿ ಹಿಂದುಳಿದ ವಿಶಿಷ್ಟ ಜನರಿಗೆ ಹಂಚುವ

(೨೪ನೇ ಪುಟ ನೋಡಿರಿ)

ಸರ್ವಾಧಿಕಾರದ ಬಿರುಗಾಳಿ

ವಿಶ್ವದಲ್ಲೀಗ ಬೀಸುತ್ತಿರುವುದು ಸರ್ವಾಧಿಕಾರದ ಬಿರುಗಾಳಿ ಯುರೋಪಿನಲ್ಲಿ ಎದ್ದ ಈ ಬಿರುಗಾಳಿ ಅಲ್ಲಿಂದ ಆಫ್ರೇಸ್ಯಾದತ್ತ ಧಾವಿಸಿ, ಅನೇಕ ರಾಷ್ಟ್ರಗಳನ್ನು ಬಲಿಗೊಂಡಿತು ಇಂತಹ ಸರ್ವಾಧಿಕಾರಿ ರಾಷ್ಟ್ರಗಳ ನಡುವೆ ನಮ್ಮ ಭಾರತವಿದೆ ಹೀಗಾಗಿ ಭಾರತದ ಭವಿಷ್ಯವೇನೆಂದು ಹೇಳಬಲ್ಲವರಾರು?

ಬರೆದವರು ಶ್ರೀ ಸೇವನನಿರಾಜ ಮಲ್ಲ, ಎಂ ಎ, ಬಿ. ಎಲ್.

ಸೈನಿಕ ಸರ್ವಾಧಿಕಾರದಿಂದ ಸುತ್ತುವರಿಯಲ್ಪಟ್ಟ ನಾವು ಒಂಬತ್ತನೆಯ ಪ್ರಜಾರಾಜ್ಯದ ದಿನವನ್ನು ಒಂದು ರೀತಿಯ ಭಯೋನ್ಮಿಶ್ರ ಭಾವನೆಯಲ್ಲೇ ಆಚರಿಸುತ್ತಿದ್ದೇವೆನ್ನಬೇಕು. ಏಕೆಂದರೆ ರಾಜಕೀಯ ತತ್ವಗಳು ಚಂಡಮಾರುತನಂತೆ ಎಲ್ಲೆ ಮೀರಿ ಬೀಸಬಲ್ಲವು, ಅವುಗಳು ಕೇಶ ವಿನ್ಯಾಸ, ವಸ್ತ್ರ ವಿನ್ಯಾಸಗಳಂತೆ ಎಲ್ಲೆಡೆಗೂ ಸೂಕ್ಷ್ಮವಾಗಿ ಕ್ಷಿಪ್ರವಾಗಿ ಹಂಚಬಲ್ಲವು ಪ್ಯಾರಿಸಿನಲ್ಲಿ ಡಿಯೋರ್ ಹೊಲಿದ ಅಂಗ ಕುಪ್ಪಸಗಳ ವಿನ್ಯಾಸ ಸ್ವಲ್ಪ ಸಮಯದಲ್ಲೇ ಲೋಕದ ಎಲ್ಲೆಡೆಗೂ ಹರಡುವುದು ಹಾಗೆಯೇ ಹಾಲಿವುಡ್ ತಾರಾ ಸ್ತ್ರೀಗಳು ಉಡುವ ಉಡುಪಿನ ಫ್ಯಾಷನ್, ಅವರ ಕ್ರಾಪಿನ ಫ್ಯಾಷನ್ ಎಲ್ಲ ತನ್ನಷ್ಟಕ್ಕೆ ವಿವಿಧ ಜನಾಂಗಗಳಲ್ಲಿ ಹರಡಿಕೊಳ್ಳುವುವು ನಮ್ಮಲ್ಲಿನ ಜುಟ್ಟಿನ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಹತ್ತಿಪ್ಪತ್ತು ವರ್ಷಗಳ ಹಿಂದೆ ಜುಟ್ಟು ಇದ್ದವರ ಸಂಖ್ಯೆ ಕ್ರಾಪಿನವರ ಸಂಖ್ಯೆಗಿಂತ ಬಹುಶಃ ವಿಶೇಷ ಕಡಿಮೆಯಿರಲಿಲ್ಲ ಆದರೆ ಇಂದು ಜುಟ್ಟಿದ್ದವರ ಗಣನೆಯನ್ನು ಮಾಡಬೇಕಾದರೆ ಗುಡ್ಡಗಾಡುಗಳಿಗೆ ಹೋಗಬೇಕಷ್ಟೆ.

ಈ ಫ್ಯಾಷನ್—ಪರಿವರ್ತನೆಗಳಿಗೆ ಹೆಚ್ಚುಕಾಲ ಬೇಕಾಗಿಲ್ಲ ಅವುಗಳಿಗೆ ಇನ್ನೊಬ್ಬರ ಒತ್ತಾಯವೂ ಬೇಡ ಹಳೆಯದು ಹೊನ್ನಾಗಿದ್ದರೂ ಹೊಸದಾದ ಜರ್ಮನ್ ಬಂಗಾರ ಅದನ್ನು ಅಡಗಿಸಿಬಿಡುವುದು, ಸ್ಥಲಾಂತರಿಸುವುದು ಈ ಸ್ವಭಾವವು ಸರ್ವ ಸಾಮಾನ್ಯವಾದುದು ಇದು ರಾಜಕೀಯ ತತ್ವದಲ್ಲೂ ಅಡಕವಾಗಿದೆ

ಪ್ರಜಾರಾಜ್ಯದ ತತ್ವವೇನಾದರೂ ಇಂದು ನಿನ್ನೆಯದಲ್ಲ ಅಲೆಕ್ಸಾಂಡರರು ಎರಡು ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ದಂಡೆತ್ತಿ ಬಂದಾಗ ಇಲ್ಲಿ ಲಿಚ್ಛವಿ ಮುಂತಾದ ಗಣ ರಾಜ್ಯಗಳಿದ್ದುವೆಂದು ಇತಿಹಾಸ ಹೇಳುತ್ತಿದೆ ಅಲೆಕ್ಸಾಂಡರನ ಹುಟ್ಟೂರಾದ ಗ್ರೀಸ್ ದೇಶದಲ್ಲಂತೂ ಅಥೆನ್ಸ್, ಸ್ಪಾರ್ಟಾ ಮುಂತಾದ ನಗರ ರಾಜ್ಯಗಳಲ್ಲಿ ಪ್ರಜಾರಾಜ್ಯ ಪದ್ಧತಿಯು ಆಚರಣೆಯಲ್ಲಿತ್ತು. ಆ ತತ್ವ ಮತ್ತು ರೋಮ್ ರಾಜ್ಯಕ್ಕೂ ಹರಡಿತು ಆದರೆ ಅಲೆಕ್ಸಾಂಡರನು ಆಚರಿಸಿದ ತತ್ವ ಬೇರೆಯೇ ಅವನದು ರಾಜ್ಯಶಾಹೀ ತತ್ವ ಸೈನ್ಯಬಲದ ಮೇಲೆಯೇ ಅವನಿಗೆ ವಿಶ್ವಾಸ

ಮತ್ತೆ ಹದಿನೆಂಟನೆಯ ಶತಮಾನದಲ್ಲಿ ಬ್ರಿಟನಿನಲ್ಲೊಮ್ಮೆ ರಾಜ್ಯಶಾಹಿಯ ಪತನವಾಗಿ ಕೆಲವು ವರ್ಷಗಳಕಾಲ ಪ್ರಜಾರಾಜ್ಯ ತತ್ವವು ಆಚರಣೆಗೆ ಬಂತು ಆದರೆ ಅದು ಹೆಚ್ಚುಕಾಲ ಬಾಳಲಿಲ್ಲ ಪುನಃ ರಾಜಶಾಹಿಯೇ ಅಲ್ಲಿ ನೆಲೆ ನಿಂತಿತು

ಮುಂದ ಹದಿನೆಂಟನೇ ಶತಮಾನದಲ್ಲಿ ಫ್ರಾನ್ಸಿನಲ್ಲಿ ನಡೆದ ಕ್ರಾಂತಿ ಇತಿಹಾಸ ಪ್ರಸಿದ್ಧವಾದುದು ಆದರೆ ಆ ಕ್ರಾಂತಿಯ ಬೆನ್ನಲ್ಲೇ ನೆಪೋಲಿಯನನ ರಾಜ್ಯಭಾರ ಉದ್ಭವಿಸಿ ಇಡೀ ಯುರೋಪನ್ನೇ ಅಲುಗಾಡಿಸಿತು

ಹತ್ತೊಂಬತ್ತನೆಯ ಶತಮಾನದಲ್ಲಿ ಸಮಾಜವಾದ, ಪ್ರಜಾಪ್ರಭುತ್ವದ ಕ್ರಾಂತಿಕಾರಿ ತತ್ವಗಳು ಬೆಳಕಿಗೆ ಬಂದುವು ಸಮಾಜವಾದೀ ಚಳವಳಿ ಬೇರೆ ಬೇರೆ ರಾಜ್ಯಗಳಲ್ಲಿ ಆರಂಭವಾಯಿತು ಮೊದಲನೆಯ ಮಹಾಯುದ್ಧದಲ್ಲಿ ಪುನಃ ಅರಸೊತ್ತಿಗೆಯ ಪ್ರಾಧಾನ್ಯವು ಎಲ್ಲರಿಗೂ ವಿಶದವಾದರೂ ಯುರೋಪಿನ ಚಿಕ್ಕ ಚಿಕ್ಕ ರಾಷ್ಟ್ರಗಳು ಸಮಾಜವಾದದ ತತ್ವವನ್ನು ಅನುಷ್ಠಾನಕ್ಕೆ ತಂದುವು ಆದರೆ ಅಷ್ಟರಲ್ಲಿ ಇನ್ನೊಂದು ಗಾಳಿ ಬೀಸಿತು

ಅದೇ ಸರ್ವಾಧಿಕಾರದ ಗಾಳಿ ಯುರೋಪಿನ ಹೆಚ್ಚಿನ ಜನರು ಪ್ರಜಾರಾಜ್ಯದ ಅಪಯಶಸ್ಸು ಮತ್ತು ದುರ್ಬಲತೆಗಳನ್ನು ಕಂಡು ಅಂಜಿದರು ಮುಸೋಲಿನಿ, ಹಿಟ್ಲರರು ಅವಿರೋಧವಾಗಿ ಸರ್ವಾಧಿಕಾರಿಗಳಾದರು ಸ್ಪಾನಿಷ್ ಅಂತರ್ಯುದ್ಧದಲ್ಲಿ ಅವರ ಸಹಾಯದಿಂದ ಜನರಲ್ ಫ್ರಾಂಕೋ ಕೂಡಾ ಸರ್ವಾಧಿಕಾರಿಯಾದ. ಅವರಿಬ್ಬರೂ ಎರಡನೆಯ ಮಹಾಯುದ್ಧಕ್ಕೆ ಆಹುತಿಯಾದರೂ ಫ್ರಾಂಕೋ ಇನ್ನೂ ಸ್ಪೈನಿನಲ್ಲಿ ಸರ್ವಾಧಿಕಾರ ನಡೆಸುತಿದ್ದಾನೆ ರಷ್ಯಾದಲ್ಲಂತೂ ಕೂಲಿಕಾರ ಸರ್ವಾಧಿಕಾರವು ಕ್ರಾಂತಿಯೊಡನೆಯೇ ಉದ್ಭವವಾಗಿತ್ತು

ಎರಡನೆಯ ಮಹಾಯುದ್ಧ ಕಳೆವೊಡನೆ ಏಷಿಯಾ ಖಂಡಕ್ಕೆ ಪ್ರಜಾರಾಜ್ಯದ ಬಿರುಗಾಳಿ ಬೀಸಿತು. ದೇಶಭಕ್ತಿಯಿಂದೊಡಗೂಡಿದ ರಾಷ್ಟ್ರನಾಯಕರು ತಮ್ಮ ದೇಶಗಳನ್ನು ಯುರೋಪಿನ ಚಕ್ರಾಧಿಪತಿಗಳ ಕೈಯಿಂದ ಬಿಡಿಸಿಕೊಳ್ಳಲು ಚಳವಳಿ ಹೂಡಿದರು ಹೋರಾಟ ನಡೆಸಿದರು. ಹಾಗೆಯೇ ಏಷಿಯಾದ ಅರಸೊತ್ತಿಗೆ ಬಹುಮಟ್ಟಿಗೆ ಕೊನೆಗೊಂಡಿತು ಈಗ ಅಫಘಾನಿಸ್ತಾನ, ಇರಾನ್, ಜೋರ್ಡಾನ್ ಮುಂತಾದ ಕೆಲವೇ ರಾಜ್ಯಗಳಲ್ಲಿ ಅರಸೊತ್ತಿಗೆ ಉಳಿದಿದೆಯೆನ್ನಬಹುದು. ಹತ್ತು-ಹನ್ನೊಂದು ವರ್ಷಗಳ ಹಿಂದಿನ ತನಕ ತಮ್ಮ ದೇಶದಲ್ಲೇ ಸುಮಾರು ಆರುನೂರು ಮಂದಿ ರಾಜರಿದ್ದರು!

ತನ್ಮಧ್ಯೆ ಚೀನಾದಲ್ಲಿ ಜನತಾ ಸರ್ಕಾರವು ಅಧಿಕಾರಕ್ಕೆ ಬಂತು. ಈಜಿಪ್ಟಿನ ಅರಸ ತನ್ನ ಗದ್ದುಗೆಯನ್ನು ಕಳೆದುಕೊಂಡ. ಅಲ್ಲಿ ಈಗಲೂ ಸೇನಾ ಸರ್ಕಾರವೇ ಇದೆಯೆನ್ನಬಹುದು ಕಳೆದ ವರ್ಷ ಇರಾಕಿನ ಅರಸೊತ್ತಿಗೆಯೂ ನಾಶವಾಯಿತು ಅಲ್ಲಿಯೂ ಸೇನಾ ಸರ್ಕಾರವಿದೆ. ಇರಾನಿನಲ್ಲಿ

(೨೩ನೇ ಪುಟ ನೋಡಿರಿ)

QUALITY in
PRINTING INKS
means many things . . .
- brilliance
- depth of colour
- covering power
- drying capacity
- workability
- fastness to light etc.

in GANGES inks
the emphasis is on QUALITY
used and proved for 30 years

Factories at
HOWRAH—BOMBAY—MADRAS

ವರಕವಿ - ಪರಮದೇವ

ಎಲೆಮರೆಯಕಾಯಂತೆ, ಉದ್ದಾಮರೆಂದು ಹೆಸರಾದವರ ನಡುವೆ ಕೆಲವು ಅಪ್ರಸಿದ್ಧ ಕವಿಗಳೂ ಇರುತ್ತಾರೆ. ಕೊಟಚಾದ್ರಿಯ ಪರಮದೇವನು ತುರಂಗ ಭಾರತವನ್ನು ಬರೆದು, ಕನ್ನಡ ಸಾಹಿತ್ಯಾಕಾಶದಲ್ಲಿ ಕನಕದಾಸ, ಸರ್ವಜ್ಞ ಮೊದಲಾದವರು ಪಡೆದ ಸ್ಥಾನವನ್ನೇ ಸಂಪಾದಿಸಿಕೊಂಡಿದ್ದಾನೆ. ಆದರೆ, ಈ ಸಂಗತಿಯೆಷ್ಟು ಜನರಿಗೆ ತಿಳಿದಿದೆ?

ಬರೆದವರು: ಶ್ರೀ. ಯ. ನಾ. ಉಡುಪ, ವಿದ್ವಾನ್.

ಕನ್ನಡ ಸಾಹಿತ್ಯದಲ್ಲಿ ಬೆರಗನ್ನುಂಟು ಮಾಡುವ ಕವಿಗಳಲ್ಲಿ ಕನಕದಾಸನೊಬ್ಬ; ಪರಮದೇವನು ಮತ್ತೊಬ್ಬ. ಕನಕದಾಸನು ತನ್ನ ಮೋಹನ ತರಂಗಿಣಿಯೆಂಬ ಕಾವ್ಯದಲ್ಲಿ—

|| ಸಾಂಗತ್ಯ ||
ಬರೆಹವ ತಿಳಿಯಬೇಡೆನುತೆನ್ನ ನೊಸಲೊಳು |
ಬರೆದು ನಿರ್ಮಿಸಲದರಿಂದ ||
ಬರೆಹವನರಿಯೆನಾ ಪದವಿಟ್ಟು ಕಡಿತದೊಳ್ |
ಬರೆದುಮಾಡಿದ ಕೃತಿಯಲ್ಲ ||೧-೨೧||

ತನಗೆ ಅಕ್ಷರ ಜ್ಞಾನವಿಲ್ಲದೆ ಈ ಕೃತಿಯನ್ನು ರಚಿಸಿದ್ದೇನೆನ್ನುತ್ತಾನೆ. ಈ ಕವಿಗೆ ಈ ಶಕ್ತಿಯು ವ್ಯಾಸರಾಯರಂಥಾ ವಿಭೂತಿಪುರುಷರ ಮತ್ತು ಕವಿಗಳ ಒಡನಾಟದಿಂದ ಸಾಧ್ಯವಾಯಿತು ಎಂದು ಮನಸ್ಸಿಗೆ ಸಮಾಧಾನ ಹೇಳಿದರೂ, ಪರಮದೇವನ ಕುರಿತು ಈತನಿಗೆ ಹೇಗೆಯೇ ಕವಿತಾಶಕ್ತಿ ಪ್ರಾಪ್ತವಾಯಿತು ಎನ್ನುವುದು ಕಷ್ಟವಾಗಿದೆ. ಅವನ ಜನ್ಮಭೂಮಿ ಸಾಹಿತ್ಯದ ಗಂಧಗಾಳಿಇಲ್ಲದ ಪ್ರದೇಶ; ಅಲ್ಲಿ ಅಡಕೆಯ ತೋಟಗಳು ಬೆಟ್ಟಗಳ ಬುಡದಲ್ಲಿ ಹೊಡೆ ಹೊಡೆಯಾಗಿ ಹಬ್ಬಿವೆ. ಇವುಗಳ ಮರೆಯಲ್ಲಿ ಕೆಲವು ಚಿಕ್ಕ ಚಿಕ್ಕ ಗುಡಿಸಲುಗಳು. ದಿನದ ಇಪ್ಪತ್ತನಾಲ್ಕು ಗಂಟೆಯೂ ಆ ನಾಡಿನ ವನಮಾಲೆಯಲ್ಲಿ ವಾಸ್ತವ್ಯವಿಟ್ಟು ಚೀರುವ ಕೀಟಗಳ ಕೀರುದನಿ ಅಡಕೆ ತೋಟಗಳ ಮಗ್ಗುಲಲ್ಲಿ ಅಥವಾ ನಡುವಿನಲ್ಲಿ ಕಿರಿಕುಣಿತದಿಂದ ಹಿರಿಯ ನರ್ತನದವರೆಗೆ ಹಜ್ಜೆಇಡುತ್ತಾ ಆ ನಿಶ್ಶಬ್ದ ಪ್ರದೇಶಕ್ಕೆ ಜೀವವೂಡುವ ಚಿಕ್ಕ ದೊಡ್ಡ ಕಾಡು ಹೊನಲುಗಳ ಬಳಗಗಳು. ಇಲ್ಲಿ ಸೂರ್ಯನು ಕಾಣಿಸುವುದೇ ಒಂಭತ್ತು ತಾಸಿನ ಮೇಲೆ. ಮಂಜು ಮೋಡಗಳಿಂದ ಸೂರ್ಯಾಸ್ತಮಾನ ಐದು ತಾಸಿಗಾದರಾಯಿತು; ಕೆಲವು ದಿನ ನಾಲ್ಕು ತಾಸಿಗೂ ಆಗಬಹುದು. ಕಟಿಗುಟ್ಟುವ ಚಳಿಗೆ ಬೆದರಿದ ಆ ಕ್ಷೇತ್ರವಾಸಿಗಳು ಮನೆಯಲ್ಲೊಂದು ಅಗ್ಗಿಷ್ಟಿಕೆ ಇಟ್ಟುಕೊಂಡೇ ಇರುವರು. ಅಲ್ಲಿ ಮಲೆಜ್ವರದ ಹಾವಳಿಯಿಂದ ಜನರೆಲ್ಲಾ ಸೊಪ್ಪಾಗಿದ್ದಾರೆ. ಇದರಿಂದ ಈ ಊರಿನ ಜನತೆಗೆ ಸಾಯುವವರೆಗೆ ಬದುಕುವುದು ಮಾತ್ರ ಗೊತ್ತು. ಅವರಿಗೆ ಜ್ಞಾನವೆಂದರೆ ಅಡಕೆ ತೋಟಗಳದ್ದು; ಇನ್ನು ಬೇಸಾಯ. ಇನ್ನು ಅವರ ವ್ಯವಹಾರವೆಂದರೆ ಸಂಪಾದಿಸಿದಷ್ಟು ಹಣವನ್ನು ಅನುಭವಿಸಲು ಶಕ್ತಿ ಸಾಲದೆ ಪೆಟ್ಟಿಗೆಯಲ್ಲಿ ಬಚ್ಚಿಟ್ಟು, ಒಂದು ಹೆಂಡತಿಯು ಕಾಲವಾದ ಮೇಲೆ ಮತ್ತೊಂದನ್ನು ದಕ್ಷಿಣೋತ್ತರ ಕನ್ನಡಗಳಿಂದ ಹಣಕೊಟ್ಟೋ—ಬೇರೆ ರೀತಿಯಿಂದಲೋ ಸಾಗಿಸುವುದು. ಈ ಧಂದೆಯಲ್ಲೇ ಅವರ ಜೀವಮಾನವೆಲ್ಲಾ ಸಾಗಿಬಿಡುವುದು, ಅವರೊಡನೆ ಸಾಹಿತ್ಯವೆಂದರೆ, ಹಾರೆಕತ್ತಿಗಳ— ಬೇಸಾಯದ ಉಪಕರಣಗಳ ಕಡೆಗೆ ನೋಡುವ ಜನರವರು. ಈ ಜನರ ಮಧ್ಯದಲ್ಲಿ ಗೋಮಯದ ಮಧ್ಯೆ ಗೋಮೇಧಿಕದಂತೆ ಹುಟ್ಟಿ ಪರಮ ದೇವನು ತುರಂಗ ಭಾರತದಂಥಾ ಕಾವ್ಯವನ್ನು ಬರೆದನೆಂದರೆ ಇದು ವಿಧಿಯ ಬಿಡುಗಯ್ಯೋ ಅಥವಾ ಅರನೆಯ ಆಶ್ಚರ್ಯವೋ ಆಗಿರಬೇಕು.

ಪರಮ ದೇವನು ಶುದ್ಧ ಬಂಜರು ನೆಲದಲ್ಲಿ ಹುಟ್ಟಿ ಬೆಳೆದು ಸರಸ ಫಲವಿತ್ತ ಸಿಹಿ ಮಾವಿನ ಮರ! ಇವನ ಹಟ್ಟೂರಲ್ಲಿ ಈ ಸುಧಾರಣಾ ಯುಗದಲ್ಲೂ ಸೇಕಡಾ ನಾಲ್ಕಕ್ಕಿಂತ ಹೆಚ್ಚು ಓದು ಬರಹದ ಪಾಂಡಿತ್ಯವಿದ್ದವರು ಇಲ್ಲವೆನ್ನುವಾಗ ಸುಮಾರು ಇನ್ನೂರು ವರ್ಷಗಳ ಹಿಂದೆ? ಅಂದು ಕರ್ನಾಟಕ ಮಾತೆಯೇ ಪರಮ ದೇವನ ಕಡೆಗೆ ಪ್ರತ್ಯೇಕ ಗಮನ ಕೊಟ್ಟು, ಅವನನ್ನು ಹರಸಿ ಆ ಕಾವ್ಯವನ್ನು ಬರೆಸಿರಬೇಕು. ಇದಕ್ಕೆ ಕಾರಣವಿಲ್ಲದೆ ಇಲ್ಲ. ಪಂಪ ಭಾರತವು ಪಂಡಿತರ ಸೊತ್ತಾಯಿತು. ಗದುಗಿನ ಭಾರತವು ಗಮಕ ಕತ್ತಲೆಯನ್ನು ಬಲ್ಲ ರಸಿಕರ ಆಭರಣವಾಯಿತು. ಉಳಿದ ಜೈನ ಭಾರತಗಳು ಸಾಮಾನ್ಯ ಜನರಿಗೆ ರುಚಿಸುವಂತಿಲ್ಲ. ಅಂದ ಮೇಲೆ ಆ ಬಾಲ ಗೋಪಾಲರಿಗೂ, ಪಾಮರ ಜಗತ್ತಿಗೂ ಸಾಹಿತ್ಯವೆಲ್ಲಿ? ಅವರು ಪಂಚಮ ವೇದದ ಸಾರವನ್ನು ಸವಿಯುವುದು ಬೇಡವೆ? ಅದಕ್ಕಾಗಿ ಪಾಮರನಾಗಿದ್ದ ಪರಮ ದೇವನನ್ನು ಪಂಡಿತನನ್ನಾಗಿ ತಿದ್ದಿ, ನಾಡತಾಯಿಯು ಅವನ ಹೃದಯದಲ್ಲಿ ಕವಿತಾ ಝರಿಯನ್ನು ಹುಟ್ಟಿಸಿ ಜನಪದ ಸಾಹಿತ್ಯದ ಭಾರತವೊಂದನ್ನು ಬರೆಯುವಂತೆ ಪ್ರೋತ್ಸಾಹಿಸಿರಬೇಕು. ಮಾತೆಯ ಆಶೆಗೂ ದೈವೇಚ್ಛೆಗೂ ವ್ಯತ್ಯಾಸವಿಲ್ಲದುದರಿಂದ ಆ ಕವಿಯಿಂದ ಭಾರತವು ನಿರ್ಮಾಣವಾಯಿತು. ಅಂದು ಕರ್ನಾಟಕ ಸಾಹಿತ್ಯ ಭಂಡಾರಕ್ಕಿದ್ದ ಒಂದು ವಿಧದ ಕೊರತೆಯು ತೊಲಗಿ ಪರಿಪೂರ್ಣವಾಯಿತು. ಅದರೊಂದಿಗೇ ಪರಮ ದೇವನು ಅಮರ ಕವಿಗಳ ಪಂಕ್ತಿಯಲ್ಲಿ ಪರಮ ಪದವಿಯನ್ನು ಪಡೆದನು!

ಪರಮ ದೇವನ ಜನ್ಮ ಭೂಮಿ ಕುಟಚಾದ್ರಿಯ ಪೂರ್ವದಲ್ಲಿರುವ ಹನ್ನರ ಮಾಗಣೆ. ಇವನ ತಂದೆ ಶಂಕರನಾರಾಯಣಯನವರು ಬಡವರಾಗಿದ್ದರೂ ಸಾತ್ವಿಕರಾಗಿದ್ದರು. ಇವರು ಹವ್ಯಕ (ಹವೀಕ) ಬ್ರಾಹ್ಮಣ ವರ್ಗಕ್ಕೆ ಸೇರಿದವರು. ಪರಮ ದೇವನು ಒಂದು ಹುಲ್ಲು ಜೋಪಡಿಯಲ್ಲಿ ಕ್ರಿ. ಶ. ೧೭೪೨ರಲ್ಲಿ ಹುಟ್ಟಿದನು. ಇವನು ಆ ಪ್ರಾಂತದ ಪದ್ಧತಿಯಂತೆ ತನ್ನ ತಾಯಿಯನ್ನು ಬಾಲ್ಯದಲ್ಲೇ ಕಳೆದುಕೊಂಡಿರಬಹುದೆಂದು ತೋರುತ್ತದೆ. ಆ ಮಲೆನಾಡಿನಲ್ಲಿ ಇಂದೂ ಪುರುಷರಿಗಿಂತ ಸ್ತ್ರೀಯರ ಆಯುಷ್ಯ ಕಡಿಮೆ. ಇಂತಹ ಗತಿಯೇ ಪರಮ ದೇವನ ತಾಯಿಗೆ ಪ್ರಾಪ್ತವಾಗಿರಬಹುದು. ಈ ಕವಿಗೆ ಬಾಲ್ಯದಲ್ಲಿ ಪರಮಯ್ಯ ಅಥವಾ ಪರಮಣ್ಣ ಎಂಬ ಹೆಸರೇ ರೂಢಿಯಾಗಿತ್ತು. ಆದರೆ ಕವಿಯು ಬರೆದ ತುರಂಗ ಭಾರತದಲ್ಲಿ ತನ್ನನ್ನು ಪರಮ ದೇವನೆಂದು (ನಾಂದೀಪದ್ಯ ೪) ಕೊಂಡಾಡಿದ್ದಾನೆ. ಶಂಕರನಾರಾಯಣಯ್ಯನು ಪತ್ನೀ ವಿಯೋಗವಾದ ಮೇಲೆ ಗೃಹಕೃತ್ಯದಲ್ಲಿ ಆಲಸ್ಯ ತೋರಿಸಿದರೆಂದು ತೋರುತ್ತದೆ. ಇದರ ಪರಿಣಾಮವಾಗಿ ಇವರು ಸಾಲಂಡಿಗರಾಗಬೇಕಾಯಿತು. ಬಾಲಕ ಪರಮದೇವನು ಕಷ್ಟದಿಂದ ಕನ್ನಡದಲ್ಲಿ ಓದಿ ಬರೆಯುವಷ್ಟು ಜ್ಞಾನವನ್ನು ಮಾತ್ರ ಸಂಪಾದಿಸಿದ್ದನು.

|| ವಾ | ಷ ||
ತಿಳಿದಕವಿಯಲ್ಲಮರ ಕಾವ್ಯಂಗಳಂಮುನ್ನ
ಹೊಲಬನರಿಯೆನು ಸಂಸ್ಕೃತಂಗಳಂ ಕನ್ನಡದ
ನೆಲೆಯನರಿಯೆನು ಗ್ರಂಥದಲಿದರ್ಥಂ
ಗಳಂ ಶಾಸ್ತ್ರಮನ್ನರಿಯೆ ಮುಜಡ ನಾನು||
ತಿಳಿಯಲಿದರ ಗುಣಾಗುಣಂಗಳಂ ಯಾದವರ
ಕುಲಶಿರೋಮಣಿ ಕೃಷ್ಣ ತಿದ್ದಿ ನಡೆಸುವ ಚಿತ್ರ
ದ್ದಲಿಗೆಗಾರನು ನುಡಿಸಿದಂತಾನು
ಪೊಗಳುವೆನು ಶಿರವೆರಗಿಗುರುಚರಣಕೆ||
|| ನಾಂ. ಸ. ೧೨ ||

ಕವಿಯು ತಾನು ಸಂಸ್ಕೃತ ಕಾವ್ಯಗಳನ್ನು ಓದಿದವನಲ್ಲ; ಕನ್ನಡದ ಮಹಾ ಗ್ರಂಥಗಳ ಅಭ್ಯಾಸವೂ ತನಗಿಲ್ಲ. ಶ್ರೀಕೃಷ್ಣನ ಅನುಗ್ರಹದಿಂದ ಈ ಪುಣ್ಯಕಾವ್ಯವಾಹಿನಿಯು ತನ್ನ ಹೃದಯದಿಂದ ಜಿನುಗಿತೆಂದು ಹೇಳುತ್ತಾನೆ. 'ಗುರುಚರಣಕೆ ಶಿರವೆರಗಿ ಪೊಗಳುವೆನು' ಎನ್ನುವುದರಿಂದ ಇವನ ಗುರುವಿಗೂ ಕವಿತಾ ಶಕ್ತಿ ಇದ್ದಿರಬಹುದು. ಅವರು ಹಲವು ತುಂಡು ಪದ್ಯಗಳನ್ನು ನಿರ್ಮಿಸಿರಬಹುದೆಂದು ತೋರುತ್ತದೆ.

ಪರಮದೇವನ ತಂದೆಯೋ ಹಿರಿಯರೋ ಆತನಿಗೆ ಲಗ್ನ ಮಾಡಿಸಿದರು, ಆದರೆ ಕವಿಯು ಸ್ವಾಭಾವಿಕವಾಗಿ ವೈರಾಗ್ಯಶಾಲಿಯಾದುದರಿಂದ ತನ್ನ ಪತ್ನೀ ಪುತ್ರರ ಹೆಸರೆತ್ತಿ ಬರೆಯದಿದ್ದರೂ 'ಸತಿ-ಸುತರ ಕರೆಕೊಂಡು ಬರುತ ಇಕ್ಕೇರಿಯೊಳ್' (ನಾಂ. ಪ. ೪) ಎನ್ನುವುದರಿಂದ ಸಂಸಾರಿಯಾಗಿದ್ದುದು ಮಾತ್ರವಲ್ಲದೆ ಮಕ್ಕಳೊಂದಿಗನಾಗಿದ್ದನೆಂದೂ ತೋರುವುದು.

ಪರಮದೇವನಿಗೆ ಜ್ಞಾನ ಸಂಗ್ರಹದಲ್ಲಿ ತುಂಬಾ ಆಸಕ್ತಿ ಇತ್ತು. ಇವನು ತನ್ನ ಬಳಿಯಲ್ಲಿದ್ದ ಕೆಲವು ಪುಸ್ತಕಗಳನ್ನೇ ದಿನವೆಲ್ಲಾ ಓದುತ್ತಿದ್ದನಂತೆ. ಇವನ ನೆರೆಹೊರೆಯವರ ನಿತ್ಯದ ಹೊರೆಯಾದ ಬೇಸಾಯ ತೋಟಗಾರಿಕೆಗಳಲ್ಲಿ ಇವನಿಗೆ ಆಸಕ್ತಿ ಇರದುದರಿಂದ ಜೀವನವು ಸಾಲದ ಹಣದಿಂದಲೇ ಸಾಗಬೇಕಾಯಿತು. ಪಿತ್ರಾರ್ಜಿತವಾದ ಸಾಲವು ಇವನ ಕಾಲದಲ್ಲಿ ಇನ್ನೂ ವೃದ್ಧಿಯಾಗಿ ಜನ್ಮಭೂಮಿಯನ್ನೇ ಬಿಟ್ಟು ಹೊರಡುವ ಪ್ರಸಂಗವೂ ಬಂತು. ಸಾಲವಿತ್ತ ಶ್ರೀಮಂತರು ಪರಮದೇವನನ್ನು ಸಂಸಾರಸಹಿತ ಮನೆಯಿಂದ ಹೊರಡಿಸಿದರು. ಆಗ ಕವಿಯು ಹನ್ನರಕ್ಕೆ ಕೊನೆಯ ನಮಸ್ಕಾರಹೊಡೆದು ಇಕ್ಕೇರಿ-ಸಾಗರ ಪ್ರಾಂತದ ಚಿಪ್ಪಳಿಯೆಂಬಲ್ಲಿಗೆ ಹೋದನು. ಆಗ ಆ ಊರಿನಲ್ಲಿ ಆಢ್ಯವಕ್ತಿಯೆನ್ನಿಸಿಕೊಂಡ ಗೋಪಾಲಯ್ಯನ ಮಗ ಲಕ್ಷ್ಮೀನಾರಣಪ್ಪನೆಂಬ ಧಾರ್ಮಿಕ ವ್ಯಕ್ತಿಯು ಇವರನ್ನು ವಿಚಾರಿಸಿ ತಮ್ಮ ಗೃಹದಲ್ಲೇ ಇಟ್ಟುಕೊಂಡರು. ಮುಂದೆ ಪರಮದೇವನು ಈ ಮನೆಯಲ್ಲೇ ಕೆಲವು ವರ್ಷಗಳವರೆಗೆ ಐಗಳ ಕೆಲಸ ನಡೆಸಿಕೊಂಡಿದ್ದನು. ಈಗಲೂ ಸಾಗರದ ಯಲಗಳಲ ಸೀಮೆಯ ಜನರು ಕೆದಲಸರದ ಐಗಳ (ಪರಮದೇವ) ಹೆಸರನ್ನು ಮರೆತುಬಿಟ್ಟಿಲ್ಲ. ಪರಮದೇವನು ಉತ್ತಮ ತರಗತಿಯ ಅಧ್ಯಾಪಕನೂ ಆಗಿದ್ದನು.

ಈ ವರಕವಿಯು ತನ್ನ ಕಾವ್ಯದಲ್ಲಿ ಶುಕ ಶೌನಕ ವ್ಯಾಸ ಮೊದಲಾದ ಸಂಸ್ಕೃತಜ್ಞ ಮಹರ್ಷಿಗಳನ್ನು ಮಾತ್ರ ಸ್ಮರಿಸಿದ್ದಾನೆ. ಇದರಿಂದ ಈ ಕವಿಗೆ ಸಂಸ್ಕೃತದಲ್ಲಿ ಸ್ವಲ್ಪ ಅಭ್ಯಾಸವೂ ಆಗಿರಬಹುದೆಂದು ತೋರುತ್ತದೆ. ಇವನಿಗೆ ಕಾಳಿದಾಸನ ಆದರ್ಶವು ಒಪ್ಪದೆ ವ್ಯಾಸ ಶುಕರ ಜೀವನವೇ ಮೆಚ್ಚಿನದ್ದಾಗಿತ್ತು. ಇವನು ತನ್ನ ಕಾಲದ ಮೊದಲೇ ಹೆಸರ್ಗೊಂಡ ಕುಮಾರವ್ಯಾಸ ಲಕ್ಷ್ಮೀಶರಂತಹ ಪ್ರಸಿದ್ಧ ಕವಿಗಳನ್ನೂ

(೨೨ನೇ ಪುಟ ನೋಡಿರಿ)

ESTD: 1919 VISIT PHONE NO. 374
K.R.K. SHET DIAMOND MART
JEWELLERS & DIAMOND MERCHANTS
FRESH ARRIVALS OF LATEST SPORTS PRESENTATION ARTICLES
HAMPANKATTA, MANGALORE, S. K.
Prop: K. R. K. SHET. TEL. AD. BLUEYAGAR.

ಸ್ವಯಂತಂತ್ರ ಅಥವಾ ಒಟೋಮೆಶನ್

(ಹೊಸ ಔದ್ಯೋಗಿಕ ಸಂಕಟ)

ಆಧುನಿಕ ಕಾಲದಲ್ಲಿ ಎದ್ದು ಕಾಣಬರುವ ಸಂಕಟವೆಂದರೆ ಸ್ವಯಂತಂತ್ರ ಅಥವಾ ಒಟೋಮೆಶನ್ ಎಂಬುದು ಅದರೆ ಯಂತ್ರವಿದ್ಯೆಯು ನಮಗೆ ವೇಳೆಯುಳಿಸಲು ಕಲಿಸಿದೆಯೇ ಹೊರತು ಉಳಿಸುವ ವೇಳೆಯನ್ನು ಬಳಸುವ ಕಲೆಯನ್ನು ಕಲಿಸಿಲ್ಲಯೆಂಬುದು ಗಮನೀಯಾಂಶ.

ಬರೆವವರು. ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ಜಗತ್ತಿನ ಬಂಡುವಾಳಗಾರಿಕೆಯ ರಾಷ್ಟ್ರಗಳಿಗೆ ಹಗಲು ಬುದ್ಧಿಯನ್ನೂ ರಾತ್ರಿಗೆ ನಿದ್ದೆಯನ್ನೂ ಕೆಡಿಸುವ ಭಯ ಯಾತರದು? ಎಂಬ ಪ್ರಶ್ನೆಗೆ ನಿಸ್ಸಂದಿಗ್ಧವೂ ಸರ್ವಸಮ್ಮತವೂ ಆದ ಉತ್ತರ ಒಂದೇ — "ಆಭಯ ಸೋವಿಯತ್ ರಶಿಯಾದ್ದು." ಆದರೆ ಬಂಡುವಳಗಾರ ಮತ್ತು ಕಮ್ಯುನಿಸ್ಟ ಇವೆರಡೂ ಪದ್ಧತಿಯ ರಾಷ್ಟ್ರಗಳ ಜನರಿಗೆ ಕೂಡಿಯೇ ಕಂಗೆಡಿಸುವ ಅಂಥ ಭೀತಿ ಯಾವದು? ಎಂಬ ಪ್ರಶ್ನೆಗೆ ಒಮ್ಮೆಲೆ ಉತ್ತರ ತೋಚಲಿಕ್ಕಿಲ್ಲ ತೋಚಿದರೂ ಅದು ಒಮ್ಮೆಲೇ ಒಪ್ಪಿಗೆಯಾಗಲಿಕ್ಕಿಲ್ಲ. ಆದರೆ ಅಂಥ ಒಂದು ಭಯ ಜಗತ್ತಿನ ತೀರ ಮುಂದುವರಿದ ಉದ್ದಿಮೆಗಾರ ರಾಷ್ಟ್ರಗಳನ್ನು ಕಾಡುತ್ತಿರುವದು ನಿಜ ಆ ಭಯ ಸರಕಾರದ್ದಲ್ಲ, ಬಂಡಾಯದ್ದಲ್ಲ, ಪರರಾಷ್ಟ್ರದ್ದಲ್ಲ, ಬಡತನದ್ದಲ್ಲ, ಇಲ್ಲವೆ ಪ್ರಳಯಾಂತರ ಅಣುಬಾಂಬಿನದೂ ಅಲ್ಲ. ಅಭಯ "ಸ್ವಯಂಚಲನೆ"ಯದು. ಇದಕ್ಕೆ ಇಂಗ್ಲ ಪರಿಭಾಷೆಯಲ್ಲಿ 'automation" ಎನ್ನುತ್ತಾರೆ. ಆಧುನಿಕ ಯಂತ್ರ ಚಾಲಿತ ಉತ್ಪಾದನಾಪದ್ಧತಿಗೆ ಆದರ ಉತ್ತರೋತ್ತರ ಉತ್ತಮತೆ ಹಾಗೂ ಪ್ರಗತಿಗೆ ಅಂಟಿಕೊಂಡೇ ಅನಿವಾರ್ಯವಾಗಿ ಬಂದ ಶಾಪವಿದು "automation" (ಒಟೊಮೆಶನ್) ಅಂದರೆ 'ಸ್ವಯಂತ್ರತ್ರತೆ".

ಆರ್ಥಿಕ ವ್ಯವಸ್ಥೆ ಎಂಥದ್ದೇ ಇರಲಿ, ಉತ್ಪಾದನೆಯ ಪದ್ಧತಿ ಏನೇ ಇರಲಿ. ಆಡಳಿತ ಯಾವ ವರ್ಗದ್ದೇ ಇರಲಿ, ಸತ್ತೆ —ಅಧಿಕಾರದ ಕೇಂದ್ರೀಕರಣವೋ ವಿಕೇಂದ್ರೀಕರಣವೋ ಏನೇ "ಇಂದ್ರೀಕರಣ"ವಾಗಲಿ ಬಿಡಲಿ ಇಂದಿನ ಯಂತ್ರ ಯುಗದಲ್ಲಿ ಯಂತ್ರತಂತ್ರೋಪಜೀವಿಯಾಗಿ ಬದುಕುವ ಜನತೆಗೆ ಈ "ಸ್ವಯಂತತ್ರತೆ" ಒಂದು ಭಸ್ಮಾಸುರನ ವರವೇ ಆಗಲಿವೆ

೧೯೫೫ರಲ್ಲಿಯೇ ಅಮೇರಿಕೆಯ ಡಿಟ್ರಾಯಿಟದಲ್ಲಿ ಒಂದು ಜನಮತಗಣನೆ ಈ ಕುರಿತು ನಡೆಯಿತು ಆಗಲೇ ನಾನು ಮೇಲೆ ಹೇಳಿದ ಭಯ ಸಾರ್ವತ್ರಿಕವೆಂಬುದು ಧಾರಾಳವಾಗಿ ಸಿದ್ಧವಾಯಿತು. ಅಮೇರಿಕೆಯ ಜನಕ್ಕೆ ರಶಿಯಾದ ನಂತರ ಇನ್ನೊಂದು ಅಷ್ಟೇ ಕಳವಳಕ್ಕೆ ಕಾರಣವಾದ ಸಂಕಟ್ಟು ಈ "ಒಟೊಮೆಶನ್" ಅದವಾ ಸ್ವಯಂತತ್ರತೆ ಎಂಬುದು ಸಿದ್ಧವಾಯಿತು. ನಂತರದ ಮೂರು ವರ್ಷಗಳಲ್ಲಿ ಈ ಭಯ ಇನ್ನಷ್ಟು ಬೇರು ಬಿಟ್ಟಿರಬೇಕ, ದೂರ ಹಬ್ಬಿರಬೇಕು

ಅಂಥ ಈ 'automation" ಅಂದರೇನು? ಒಬ್ಬ ತಜ್ಞರು ಅದನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ "With the aid of the most advanced techniques and devices—but with certain economic limitations—their method of production attempts to perform by machinery all the functions hitherto performed by human beings The machines are controlled by machines" ಅಂದರೆ ಇದುವರೆಗೆ ಎಂಥ ಯಂತ್ರಸಜ್ಜಿತ ಕಾರಖಾನೆಯಲ್ಲಿಯೂ ಯಾಂತ್ರಿಕ ಉತ್ಪಾದನಾ ಪದ್ಧತಿಯಲ್ಲಿಯೂ ಆ ಯಂತ್ರೋಪಕರಣ, ಯಂತ್ರೋತ್ಪಾದನೆಯ ನಿಯಂತ್ರಣ ನಿರ್ವಹಣಗಳು ಮನುಷ್ಯನ ಕೈಯಲ್ಲಿಯೇ ಇರುತ್ತಿದ್ದವು. ಆದರೆ ಇನ್ನು ಇತ್ತೀಚೆಯ ಅತ್ಯಂತ ಸುಧಾರಿಸಿದ ಉಪಕರಣ—ಉಪಾಯ ತಂತ್ರಗಳಿಂದ ಈ ಮನುಷ್ಯನ ನಿಯಂತ್ರಣದ ಅವಶ್ಯಕತೆಯನ್ನೆ ಇಲ್ಲದಂತೆ ಮಾಡಲಾಗುತ್ತದೆ ಯಂತ್ರಗಳ ನಿಯಂತ್ರಣ ಯಂತ್ರಗಳೇ ಮಾಡುತ್ತವೆ! ಇಂದಿನವರೆಗೆ ಮನುಷ್ಯನ ಮೈಮಿದುಳುಗಳು ಮಾಡುತಿದ್ದ ಕಾರ್ಯಭಾಗವನ್ನೆಲ್ಲ ಹೆಚ್ಚು ಹೆಚ್ಚು ಯಂತ್ರಗಳೇ ನೆರವೇರಿಸುವವು ಈ "ಸ್ವಯಂತಂತ್ರ" ಉತ್ಪಾದನಾ ಪದ್ಧತಿಯ ಸ್ವರೂಪವಿರುತ್ತದೆ. ವಿಶೇಷತ ಕಳೆದ ಮಹಾಯುದ್ಧ ಮುಗಿದಂದಿನಿಂದ ಈ ಹೊಸ ತಂತ್ರ–ಯಂತ್ರ ಸ್ವಾವಲಂಬನದ ತತ್ವ! –ಔದ್ಯೋಗಿಕವಾಗಿ ಮುಂದುವರಿದ ರಾಷ್ಟ್ರಗಳಲ್ಲಿ ರೂಢವಾಗತೊಡಗಿತು

ಈ ಸ್ವಯಂಚಾಲನೆಯು ಹೊಸ ಪದ್ಧತಿ ಅನೇಕ ದೃಷ್ಟಿಯಿಂದ ಅವಶ್ಯವಾಯಿತೆನ್ನಬಹುದು. ಕಳೆದ ಮಹಾಯುದ್ಧದಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಜನಬಲ ಆದೂ ಯಂತ್ರವಿದ್ಯೆ ಬಲ್ಲವರ ತಜ್ಞರ ಸಂಖ್ಯೆ— ವಿಪರೀತ ಕುಗ್ಗಿತು. (ಕಳೆದ ಮಹಾಯುದ್ಧದಲ್ಲಿ ಒಟ್ಟು ೨೫ ದಶಲಕ್ಷ ಜನ ಸತ್ತರು ೩೦ ದಶಲಕ್ಷ ಜನ ಊನಾಂಗರಾದರು!) ಇದರಿಂದ ಔದ್ಯೋಗಿಕ ಕ್ಷೇತ್ರದಲ್ಲಿ ತುಂಬಿಬರಲಾರದ ಹಾನಿಯಾಯಿತು ಕೆಲಸಗಾರ ಕೈಗಳ ಕೊರತೆ ಯಂತ್ರೋಪಕರಣಗಳಿಂದ ತುಂಬಿಕೊಳ್ಳಬೇಕಾಯಿತು. ಇವರೆ ಈ ಒತ್ತಾಯದಿಂದ ಯಂತ್ರ ಚಾಲನೆಯ ಈ ಸ್ವಯಂ ತಂತ್ರ ಬರಲು ಹೆಚ್ಚು ತ್ವರೆಯಾಯಿತು. ಇಷ್ಟೇ ಇಲ್ಲವಾದರೂ ಈ ತಂತ್ರ ಕುಸುತಪವಾಗಿ ಆದರೂ ಬರತಕ್ಕದ್ದೇ ಇತ್ತು. ಏಕೆಂದರೆ ಔದ್ಯೋಗಿಕ ಕ್ರಾಂತಿ ಎಂಬ ಹೆಸರಿನಿಂದ ಆರಂಭವಾದ ಯಾಂತ್ರಿಕ ಉತ್ಪಾದನೆಯ ಯುಗದ ಕಾರ್ಯ ಪದ್ಧತಿಯ ವಿಕಾಸ-ವಿನ್ಯಾಸಗಳ ಒಂದು ಅಪರಿಹಾರ್ಯ ಫಲವಾಗಿ ಯಂತ್ರ-ತಂತ್ರದ ವಿದ್ಯೆ (Techology) ಪ್ರಗತಿಯ ಒಂದು ಸ್ವಾಭಾವಿಕ ವಟ್ಟವಾಗಿ ಈ "ಸ್ವಯಂ ತಂತ್ರ" ತಲೆದೋರುವುದೇ ಇತ್ತು ನೆಲೆಯೂರುವದೇ ಆಗಿತ್ತು

ಉತ್ಪಾದನೆಯ ರೀತಿ ಹೆಚ್ಚು ಹೆಚ್ಚು ಯಾಂತ್ರಿಕವಾದಂತೆ, ವಿವಿಧ ಅಂಗಗಳಲ್ಲಿ ವಿಪುಲ ಪರಿಣಾಮಕ್ಕಾಗಿ ಅನೇಕ ವಿಧದ ಯಂತ್ರಗಳು ರೂಪುಗೊಳ್ಳಲು ಆರಂಭವಾದೊಡನೆಯೇ— ಈ ಮಾರ್ಪಾಟದ ಕೊನೆ ಆಗುವುದೆಲ್ಲಿ? ಯಂತ್ರಗಳೇ ಪೂರ್ತಿ ತಮ್ಮ ಕೆಲಸ ತಾವೇ ಮಾಡಿಕೊಳ್ಳುವುದರಲ್ಲಿ. ಕ್ರಮೇಣ ಬೇರೆ ಬೇರೆ ಕ್ಷೇತ್ರಗಳಿಂದ ಮನುಷ್ಯನನ್ನೂ, ಕೈಗಾರಿಕೆಯ ಕೆಲಸಗಾರನನ್ನೂ ತಳ್ಳಿ ಅವನ ಕಲಸ ಹೆಚ್ಚು ಶೀಘ್ರವಾಗಿ, ಹೆಚ್ಚು ಶುದ್ಧವಾಗಿ, ಹೆಚ್ಚು ನಿಯಮಿತವಾಗಿ, ಹೆಚ್ಚು ಪರಿಮಾಣದಲ್ಲಿ ಮಾಡಿ ಮುಗಿಸಲು ಯಂತ್ರಗಳು ಉಂಟಾದವು. ಇದಕ್ಕೆ ವಿಜ್ಞಾನದ ಅಖಂಡವಾದ ಅಧಿಕಾಧಿಕವಾದ ಶೋಧ-ಶ್ರೇಯಸ್ಸುಗಳೂ ತುಂಬ ಸಹಾಯ ನೀಡಿದವು ಯಂತ್ರ ವಿದ್ಯೆ ವ್ಯವಹಾರಿಕ ವಿಜ್ಞಾನದ ಕೈಗೂಡು ವಿದ್ಯುತ್—ಅಣುಶಕ್ತಿಗಳ ಹೊಸಹೊಸ ಮೂಲಗಳನ್ನು ಕಂಡುಕೊಂಡೊಡನೆ ಯಾಂತ್ರಿಕ ಕಾರ್ಯ ಪದ್ಧತಿಗೆ ಆದರ ಕುರಿತ ಪ್ರಯೋಗಕ್ಕೆ, ಕಟ್ಟಕಡೆಗೆ ಎಂದೂ ಇಲ್ಲದ ಅನುವು ವೇಗ ಮತ್ತು ಚಾಲನೆ ದೊರೆತಂತಾಯಿತು. ಸಾವಿರಗಟ್ಲೆ ದೂರದ ಗುರಿದಾಣಗಳಿಗೆ ಇದ್ದಲ್ಲಿಂದೇ ನೇರವಾಗಿ ಮಾರಕಾಸ್ತ್ರಗಳನ್ನು ಒಗೆದು ಅವು ತಮ್ಮ ಕೆಲಸ ಮುಗಿಸಿ ಸರಿಯಾಗಿ ಮರಳಿ ಹೊರಟ ಸ್ಥಳಕ್ಕೆ ಬರುವಂತೆ ಮಾಡುವ ಅಪೂರ್ವ ಪ್ರಯತ್ನವು ಯಶಸ್ವಿ ಆಯಿತು. ಇದಕ್ಕೆ I. C. B M ಬಾಣಗಳೇ ಸಾಕ್ಷಿ

ಇಷ್ಟು ಭರದಿಂದ ವಿಜ್ಞಾನದ ಪ್ರಗತಿ ವಿನಿಯೋಗದ ಕ್ಷೇತ್ರದಲ್ಲಿಯೂ ನಡೆದಿರುವಾಗ ವೈಜ್ಞಾನಿಕ ಶೋಧ–ಸಂಸ್ಥೆಗಳಿಗೆ ಅಪಾರ ಹಣವನ್ನು ಪೂರೈಸುವ ಬಂಡುವಾಳಗಾರರೂ, ಉದ್ದಿಮೆಗಾರರೂ ಅದರ ಉಪಯೋಗಪಡೆಯದೇ ಉಳಿಯುವಷ್ಟು ಹುಂಬರೇ? ಅಂದಮೇಲೆ ಯಂತ್ರ ವಿದ್ಯೆ ತನ್ನ ಒಳ ಒತ್ತಾಯದಿಂದಲೇ ಯಾಂತ್ರಿಗ ಲಾಭದ ಯಾಂತ್ರಿಕ ಕೌಶಲ್ಯ—ಪರಿಣಾಮ್ಯ ಕಾರಿತೆಗಳ ಸುಧಾರಣೆಯ ಅಗತ್ಯದಿಂದಲೇ ತನ್ನನ್ನೂ ತನ್ನನ್ನೇ ಅವಲಂಬಿಸಿದ್ದ ಉತ್ಪಾದನೆಯ ಪದ್ಧತಿಯನ್ನೂ ಈ ಪದ್ಧತಿಯಿಂದಲೇ ಬದುಕಿ ಬಾಳಬೇಕಾದ ಶ್ರಮಜೀವಿಗಳನ್ನೂ-ವಿಶೇಷವಾಗಿ ಕುಶಲ ಕೆಲಸಗಾರರನ್ನೂ "ಸ್ವಯಂ ಚಾಲನೆ" ಮತ್ತು ರಭಸದಿಂದಲೇ ಒಯ್ದರೆ ಆಶ್ಚರ್ಯವೇನು?

ಹೀಗೆ 'ಒಟೋ ಮೆಶನ್' ಔದ್ಯೋಗಿಕ ಕ್ರಾಂತಿಯ ಒಂದು ಅವಶ್ಯ ಫಲವೆಂದು ಭಾವಿಸಿ ನೋಡುವವರಿಗೆ ಇದೊಂದು ದೊಡ್ಡ ಸಂಕಟವೆಂದು ತೋರುವುದಿಲ್ಲ ಇದರಿಂದ ಯಾವ ವಿಪರೀತದ ವಿಪ್ಲವ ಒದಗುವುದೆಂದೂ ಅನಿಸುವುದಿಲ್ಲ. ಹಿಂದೆ ಕೈ ಗೈಮೆಯ ಕಾಲ ಹೋಗಿ, ಯಂತ್ರ ಯುಗದ ನಾಂದಿ ಹಾಡಿದಾಗ ಯಂತ್ರವು ಮಂದಿಯ ದುಡಿಮೆಯನ್ನು ಕಡಿಮೆಗೊಳಿಸಿತ್ತು. ಈಗಲೂ ಒಮ್ಮೆಲೇ ಅನೇಕ ದುಡಿಮೆಗಾರರ ಕೆಲಸ ತಪ್ಪಿತು. ವಲಸೆ ನಿಂತಿತು. ನಾಲ್ಕು ಆಳುಗಳ ದುಡಿತ ಒಂದು ಯಂತ್ರ— ೪೦ ರಾಟಿಗಳ ಕೆಲಸ ಒಂದು ನೂಲುವ ಯಂತ್ರ— ಒಬ್ಬ ಆಳಿನಿಂದ ನಡೆಯತೊಡಗಿತು. ಇದರಿಂದ ಬರತಕ್ಕ ಭವಣೆಗೆ ಅಂದಿನ ಶ್ರಮಜೀವಿ ವರ್ಗ ಬಲಿಯಾಗೇ ಆಯಿತು. ನಿರುದ್ಯೋಗ-ಅಸಂತೋಷ ಆಂದೋಲನ ವರ್ಗ ವಿಗ್ರಹದ ತಾತ್ಕಾಲಿಕ ಉಲ್ಬಣ ಇವೆಲ್ಲ ಅದರ ಬೆನ್ನಿಗೇ ಬಂದುವು ಆದರೆ ಆದೆಲ್ಲ ಕ್ರಮೇಣ ಹೊಸ ಹೊಂದಾಣಿಕೆಗೆ ಮೈಗೊಟ್ಟು ಹೊಸ ಉತ್ಪಾದನಾ ಪದ್ಧತಿಯನ್ನು ಮೈಗೊಂಡು ಸರಂಜಾಮಿ ಸಮಾಜವನ್ನೂ ಬಂಡುವಾಳಗಾರ ಸಮಾಜವಾಗಿ ಮಾರ್ಪಡಿಸುವ ಕಾಯಕಲ್ಪದ ಶಸ್ತ್ರಕ್ರಿಯೆಯಂತೆ ನಡೆದುಹೋಯಿತು.

ಈ ಇತಿಹಾಸ ನೆನಪಿದ್ದ ಯಂತ್ರವಿದ್ಯಾ ಪಕ್ಷಪಾತಿಗಳು ಈ ಹೊಸ ಸ್ವರೂಪದ ಯಾಂತ್ರಿಕ ಕ್ರಾಂತಿಗೂ ಕಂಗೆಡುವದಿಲ್ಲ ಅವರ ವಾದ ಹೀಗೆ— ಉತ್ತರೋತ್ತರ ಯಂತ್ರ ಪ್ರಸ್ಥದ ಉದ್ದಿಮೆಗರಿಕೆಗೆ ಬೇಕಾದ ಬಂಡುವಾಳದ ಗಾತ್ರ ದೊಡ್ಡದಾಗುತ್ತ ನಡೆಯುತ್ತದೆ ಅದೇ ಕಾಲಕ್ಕೆ ಯಂತ್ರ ವಿದ್ಯಾತಜ್ಞರ ಹಾಗೂ ಕುಶಲ ಕಾರ್ಮಿಕರ ಪ್ರಮಾಣ ಕಡಿಮೆ ಆಗಿದೆ. ಅಲ್ಲದೆ ಕಾರ್ಮಿಕರ ಅಸಂತೋಷ ಕಮ್ಯುನಿಸ್ಟರು ಕೆರಳಿಸುವ

(೨೧ನೇ ಪುಟ ನೋಡಿರಿ)

ಎಸ್. ಆರ್.
ಅತ್ಯುತ್ತಮ ಬೀಡಿಗಳು

ಲಕ್ಷ್ಮೀಶನು ಕಂಡ ಕನ್ನಡನಾಡು

ಕರ್ನಾಟಕ ಕವಿಚೂತ ವನಚೈತ್ರನೆಂದು ಬಿರುದಾಂತ ಲಕ್ಷ್ಮೀಶ ಕವಿ ಶ್ರೇಷ್ಠನು ತನ್ನ ಏಕಮೇವ ಮಹಾಕಾವ್ಯ ಜೈಮಿನಿ ಭಾರತದಲ್ಲಿ ಸ್ವಕಾಲೀಯ ಕನ್ನಡ ನಾಡನ್ನು ಹೃದಯಂಗಮವಾಗಿಯೂ ಮನಚೇತೋಹಾರಿಯಾಗಿಯೂ ವರ್ಣಿಸಿದ್ದಾನೆ. ಈ ಅರ್ಥಗರ್ಭಿತ ವರ್ಣನೆಯು ಆ ಕಾಲದ ಕನ್ನಡ ನಾಡಿನ ನೈಜ ಸ್ಥಿತಿಯಾಗಿರಲಾರದೆ?

ಬರೆದವರು: ಶ್ರೀಮತಿ ರುಕ್ಮಿಣಿ ದೇವಿ, ಐರೋಡಿ.

ಕನ್ನಡ ನಾಡಿನ ಡಿಯು-ಹೆಸರನ್ನು ಚಿರಸ್ಥಾಯಿಗೊಳಿಸುವ ಉದ್ದೇಶವಿದ್ದ ಮಹಾಕವಿಗಳ ಧ್ಯೇಯವೆರಡಿತ್ತೆಂದು ಅವರ ಅಮರ ಕಾವ್ಯಗಳ ಸೂಕ್ಷ್ಮಾವಲೋಕನದಿಂದಲೇ ಹೊಳೆಯುವುದು. ೧. ರಸಿಕವರ್ಗಕ್ಕೆ ಮರ್ತ್ಯಲೋಕದಲ್ಲೇ ಸ್ವರ್ಗಸುಖವನ್ನುಂಟುಮಾಡುವುದು. ೨. ತಮ್ಮ ಕಾಲದ ಕನ್ನಡ ನಾಡಿನ ಚಿತ್ರ ಮತ್ತು ಸಂಸ್ಕೃತಿಯನ್ನು ಭಾವೀ ಕನ್ನಡ ಜನತೆಯ ಮುಂದಿಡುವುದು. ಇವುಗಳಲ್ಲಿ ಇವರು ಒಂದನ್ನು ಪ್ರಧಾನ; ಇನ್ನೊಂದನ್ನು ಗೌಣವಾಗಿಟ್ಟುಕೊಂಡಿಲ್ಲ. ಈ ಎರಡರಲ್ಲಿ ಒಂದು ಕಾರ್ಯವು ಅವರ ಉದ್ದೇಶ ಪೂರ್ವಕ ನಡೆದಿದ್ದರೆ, ಇನ್ನೊಂದು ದೇಶದ ಸಂಸ್ಕೃತಿ ಸೌಂದರ್ಯಗಳ ಪ್ರೇರೇಪಣೆಯಿಂದ ತಾನಾಗಿ ನಡೆಯಿತು. ಒಂದು ಮಹಾಕಾವ್ಯವು ಜನ್ಮವೆತ್ತಬೇಕಾದರೆ ಮೊದಲು ಆ ಕವಿಯು ತೆರೆದ ಕಣ್ಣುಗಳಿಂದ ಪ್ರಕೃತಿಯ ಕುಸುರು ಕಲೆಯನ್ನೋ ಜನಜೀವನವನ್ನೋ ನಡೆನೋಡಿ ತನ್ನ ಹೃದಯಪಟದಲ್ಲಿ ಆ ಚಿತ್ರವನ್ನು ಮುದ್ರಿಸಿ ಜೋಪಾನ ಮಾಡಿಟ್ಟುಕೊಳ್ಳಬೇಕು. ಆ ಮೇಲೆಯೇ ಕಾವ್ಯದ ವಸ್ತುವನ್ನು ಹುಡುಕಬೇಕಾಗುವುದು. ಆಗ ನಾಡಿನ ತನ್ನ ತನವೂ ಅವನಲ್ಲಿ ಸಾಕಷ್ಟಿದ್ದು, ಮುಂದೆ ಅವನಿಂದ ನಿರ್ಮಿತವಾಗುವ ರಸದೂಟವು ಸಾರ್ಥಕವಾಗುವುದು. ಮಹಾಕವಿ ಲಕ್ಷ್ಮೀಶನು ಈ ನಿಯಮಗಳನ್ನೆಲ್ಲಾ ಎಸಳು ಎಸಳಾಗಿ ಮುಂದಿಟ್ಟುಮಾಡಿಕೊಂಡೇ 'ಜಾಣರಂ ತಲೆದೂಗಿಸದ ನುಡಿದೊಡಾ ಪದಕ್ಕೊಣೆಯಂ ಬಹುದೆಂ'ದು ಔಪಚಾರಿಕವಾಗಿ ಹೇಳಿ ಕಾವ್ಯವನ್ನು ಮುಂದರಿಸಿದನು. ಅವನು ತನ್ನ ಕಾವ್ಯದಲ್ಲಿ ಹಲವು ಧರ್ಮಗಳ ಒಕ್ಕೂಟವಾಗಲು ಯಾತ್ರಾದೃಷ್ಟಿಯಿಂದಲೋ-ಹಾಗಿರಲಾರದು-ನಾಡಿನ ಸೌಂದರ್ಯ, ಜನತೆಯ ಬುದ್ಧಿ, ಸಂಸ್ಕೃತಿಗಳ ಅಭ್ಯಾಸದ ಆತುರದಿಂದಿರಬಹುದು, ಆಗಾಗ ಚಿಕ್ಕ ಚಿಕ್ಕ ಪ್ರವಾಸಗಳನ್ನು ಕೈಗೊಂಡಿರಬೇಕು. ಈ ಹಿರಿ ಕಿರಿಯ ಪ್ರವಾಸಗಳೇ ಅವನ ಮನೋಪಟಲದಲ್ಲಿ ಚಲಚ್ಚಿತ್ರದ ಸುರುಳಿಯಾಗಿ ಮುದುರಿದ್ದು ಅವನ ಕಾವ್ಯವಾಹಿನಿಗೆ ಚೇತನವನ್ನಿತ್ತವು; ಇವೇ ಅವನ ಬರಹದಲ್ಲಿ ರಸದೊರಕೆಯನ್ನೂರಿದುವು; ಅವನ ಮಾತಿನಲ್ಲಿ ನಾಡ ನುಡಿಗಿದ್ದ ಶಕ್ತಿಯ ಸೀಮಾಂತವನ್ನು ಸೂಚಿಸಿದುವು. ಹೆಚ್ಚೇಕೆ, ಲಕ್ಷ್ಮೀಪತಿಯ ರಚನೆಯು ಸಂಸ್ಕೃತ ಜೈಮಿನಿಯ ಅಶ್ವಮೇಧ ಪರ್ವದ ಹೆಸರನ್ನುಳಿಸಿತು; ಆ ಮಹಾ ಗ್ರಂಥವನ್ನು ಕಂಡು ಮುಗುಳುನಗು ನಕ್ಕಿತು. ಅಲ್ಲದೆ, ಈ ಕವಿಗೇ, ಮೂಲ ಗ್ರಂಥವನ್ನು ಮೀರಿದ ನಾಡನುಡಿಯ ಚೆಲುವು ತನ್ನ ಕಾವ್ಯದಲ್ಲೆಲ್ಲಾ ಚೆಲ್ಲಾಡಿದುದನ್ನು ಕಂಡು ತಾಸುಗಟ್ಟಲೆ ಆನಂದಾಶ್ರುವು ಕಣ್ಣುಗಳನ್ನು ಕುರುಡುಗಟ್ಟಿರಬಹುದು; ರೋಮಾಂಚನವು ದೇಹದಲ್ಲೆಲ್ಲಾ ಅಮೃತಾನಂದವನ್ನು ಹರಿಸಿರಬಹುದು. ಮಹಾಕವಿಯ ಆನಂದವನ್ನೊ ವೇದನೆಯನ್ನೊ ಸಾಮಾನ್ಯರು ಹೇಗೆ ತಿಳಿದು ಅಳೆಯಬಲ್ಲರು.?

ಲಕ್ಷ್ಮೀಶನು ತನ್ನ ಕಾವ್ಯವನ್ನು ಬರೆಯುವ ಮೊದಲು ಕನ್ನಡ ನಾಡನ್ನು ಯಾವ ದೃಷ್ಟಿಯಿಂದ ನೋಡಿದ್ದ? ಅವನ ಇಷ್ಟದೇವತೆಯಾದ ಗೀರ್ವಾಣಪುರದ ಲಕ್ಷ್ಮೀರಮಣನು ಬತ್ತದ ಬಾಯಾರದ ರಸಚಿಲುಮೆಯನ್ನು ಅವನಲ್ಲಿ ಯಾವ ಸೆಲೆಯಲ್ಲಿಟ್ಟಿದ್ದ? ಇವೆಲ್ಲಾ ಆ ಮಹಾಕಾವ್ಯದ ದೀರ್ಘಾಭ್ಯಾಸವನ್ನಿಟ್ಟುಕೊಂಡವರಿಂದ ಮಾತ್ರ ಹೇಳಲು ಸಾಧ್ಯ. ಆದರೆ ಈ ಕವಿಯು ಅಚ್ಚಕನ್ನಡಿಗನು; ಕನ್ನಡದಲ್ಲಿ ಮೂಸದ ಮರೆಯದ ಅಭಿಮಾನವುಳ್ಳವನು; ತನ್ನ ನಾಡಿನ ಕುರಿತು ಬರೆಯುವಾಗ ಮೈ ನವಿರೆದ್ದು ಮೈ ಮರೆಯುವವನು—ಎಂದಿಷ್ಟನ್ನು ಮಾತ್ರ ನಾವು ಸುಲಭದಲ್ಲಿ ಹೇಳಬಹುದು.

ಸಂಸ್ಕೃತ ಅಶ್ವಮೇಧಿಕ ಪರ್ವದ ಭೀಮವಾಕ್ಯವೆಂಬ ಮೂರನೆಯ ಅಧ್ಯಾಯದ ಕೊನೆಯಲ್ಲಿ ಕವಿಯು ಯಾವುದೋ ಒಂದು ಭದ್ರಾವತಿಯನ್ನು ವರ್ಣಿಸಿದ್ದಾನೆ ಆದರೆ ಕನ್ನಡ ಜೈಮಿನಿ ಭಾರತದಲ್ಲಿ ಕರ್ನಾಟಕದ ಆ ಕಾಲದ ಭದ್ರಾವತಿಯ ಸುತ್ತಮುತ್ತಲಿನ ಪ್ರದೇಶಗಳ ವರ್ಣನೆಯೇ ಇದ್ದಂತೆ ತೋರುವುದು. ಕವಿಯಲ್ಲಿ ಆಗ ಮೂಲ ಭದ್ರಾವತಿಯ ವಿಚಾರ ಮರವೆಯಾಗಿ ಕರ್ನಾಟಕದ ಭದ್ರಾವತಿಯ ಸೊಬಗಿನ ಒರತೆಯೂರಿರಬೇಕು. ಇದೂ ಸಹಜವೇ ಅನ್ನಿ. ಆ ಕಾಲದ ಕನ್ನಡಿಗರಲ್ಲಿ ಅಧಿಕ ಸಂಖ್ಯೆಯವರಲ್ಲಿ ನಾಡಿನ ತನ್ನತನವು ವಿಪುಲವಾಗಿತ್ತು.

ಸಂಸ್ಕೃತ ಜೈಮಿನಿಯಲ್ಲಿ ಭದ್ರಾವತಿಯನ್ನು ಹೀಗೆ ವರ್ಣಿಸಿದೆ—'ಯೌವನಾಶ್ವನಿಂದ ಪಾಲಿತವಾದ ಭದ್ರಾವತೀ ಪಟ್ಟಣವು ಹಲವು ವನಗಳಿಂದಲೂ, ಸರೋವರಗಳಿಂದಲೂ ತುಂಬಿ ರಮ್ಯವಾಗಿರುವುದನ್ನು ಭೀಮನು ಪರ್ವತದ ಮೇಲೆ ನಿಂತು ನೋಡಿದನು. ಅದು ಅಸಂಖ್ಯ ಯೂಪಸ್ತಂಭಗಳಿಂದ, ಮಾರ್ಗಗಳು ಕಾಣಿಸದಷ್ಟು ದಟ್ಟವಾದ ಹೋಮ ಧೂಮದಿಂದ, ಧನುಷ್ಟಂಕಾರದಂತೆ ಕೇಳಿಸುವ ವೇದಘೋಷದಿಂದ ತುಂಬಿತ್ತು. ... ... ಭೀಮನು ಅಲ್ಲಿ ಅನೇಕ ಫಲ ವೃಕ್ಷಗಳಿಂದ ಸುಂದರವಾದ ತೋಟಗಳನ್ನು ಕಂಡನು. ಅಲ್ಲಿ ವಿನಯದಿಂದ ವಿನಮಿತವಾದಂತಿದ್ದ ಫಲ ಬಿಟ್ಟ ಬಾಳೆಗಳೂ, ಸತ್ಪುರುಷರಂತೆ ಸರಳ, ಸುವೃತ್ತ, ದೀರ್ಘವಾಗಿದ್ದ ತೆಂಗಿನ ಮರಗಳೂ, ಫಲಭರಿತವಾದ ಕವುಂಗೂ, ಪರರ ತೃಪ್ತಿಗೆಂದೇ ಸರ್ವಾಂಗದಲ್ಲೂ ಫಲಗಳನ್ನು ಹೊತ್ತ ಹಲಸಿನ ಮರಗಳೂ, ಸಂಕುಚಿತವಾದ ಫಲಗಳಿಂದ ಜನರ ಪಾಪ ನಿವಾರಕಗಳಾದ ಖರ್ಜೂರ ವೃಕ್ಷಗಳೂ, ಗಿಳಿಗಳನ್ನು ಆಕರ್ಷಿಸುವ ಬಿರಿದು ಬಿಂದ ದಾಳಿಂಬೆಯ ಗಿಡಗಳೂ ಅಲ್ಲಲ್ಲಿ ಶೋಭಿಸುತ್ತಿದ್ದುವು. .... ಆ ಮಹಾವನವನ್ನೂ ಸುಂದರವಾದ ಆ ನಗರವನ್ನೂ ರತ್ನ ಬೆಳ್ಳಿಯ ಗಟ್ಟಿಗಳಿಂದ ರಚಿಸಿದ್ದರು. ಅಲ್ಲಿಯ ಕಾಸರಗಳು ಅನೇಕ ವಿಧದ ಜಲಚರಗಳಿಗೆ ವಾಸಸ್ಥಾನವಾಗಿ ಶ್ರೀಮನ್ನಾರಾಯಣನ ಮನಸ್ಸಿನಂತೆ ನಿರ್ಮಲವಾಗಿದ್ದುವು. . ಇಲ್ಲಿ ಸಂಸ್ಕೃತ ಜೈಮಿನಿಯು ಯಾವ ವೈಶಿಷ್ಟ್ಯವನ್ನಾದರೂ ತೋರಿಸಿದಂತಿಲ್ಲ. ಆ ಮುನಿಗೆ ಭದ್ರಾವತಿಯನ್ನು ವರ್ಣಿಸಬೇಕಾಗಿತ್ತು ಮಾತ್ರ. ಅದನ್ನು ವರ್ಣಿಸಿದ. ಅದರಲ್ಲವನು ತನ್ನತನದ ಗೋಜಿಗೇ ಹೋಗಿಲ್ಲ. ಕನ್ನಡ ಕವಿ ಚೂತವನ ಚೈತ್ರನಿಗೆ ಮೇಲಿನ ಭದ್ರಾವತಿಯ ವರ್ಣನೆಯು ನೀರಸವಾಗಿ ತೋರಿತೋ ಅಥವಾ ಸಂದರ್ಭದಲ್ಲಿ ಅವನ ಊರಿನ ವಿಭೂತಿಯು ಅವನ ಹೃದಯವನ್ನು ಕೆರಳಿಸಿ ಅರಳಿಸಿತೋ—ತಿಳಿಯದು. ಆದಿಕವಿ ವಾಲ್ಮೀಕಿಗೆ ಕರುಣೆಯೇ ಮಹಾಕಾವ್ಯ ರಚನೆಗೆ ಪ್ರೋತ್ಸಾಹ ಕೊಟ್ಟಿದ್ದರೆ, ಈ ಮಹಾ ಕವಿಗೆ ನಾಡೊಲ್ಮೆಯೇ ತನ್ನ ಊರಿನ ಚಿತ್ರಪ್ರಕಾಶಕ್ಕೆ ಯಾಕೆ ಪ್ರಚೋದಿಸಿರಬಾರದು? ಅವನು ತಾನು ಕಂಡ ಅಂದಿನ ಕನ್ನಡ ನಾಡನ್ನೇ ತನ್ನ ಕಣ್ಣಮುಂದಿಟ್ಟುಕೊಂಡು ಹೀಗೆ ಬರೆದನು. ಅದೊಂದು ಕನ್ನಡಿಗರ ಸುಂದರ ಸುಮುಹೂರ್ತ!

'ಭದ್ರಾವತೀ ಪ್ರದೇಶವನ್ನು ಭೀಮ, ವೃಷಕೇತು, ಘಟೋತ್ಕಚನ ಮಗ—ಹೀಗೆ ಮೂವರು ಪ್ರವೇಶಮಾಡಿದರು.' ಆಗ ಭದ್ರಾವತಿಯು ನಿರ್ಮಲವಾದ ಸಂಪತ್ತು ಮತ್ತು ಮಂಗಲಕರ ದೃಶ್ಯಗಳ ಆಗರವಾಗಿತ್ತು. ಅದು ಸಸ್ಯ ಶ್ಯಾಮಲ ಕೋಮಲತೆಯಿಂದ ಹರಿಯಂತೆ ಮನ್ಮಥೋದ್ಭವಕಾರಿಯಾಗಿತ್ತು. ಇಲ್ಲಿ ಕವಿಯು ತನ್ನ ತುಣುಕುಮಾತುಗಳಲ್ಲಿ ಎಷ್ಟು ಗಂಭೀರವಾದ ಅರ್ಥವನ್ನು ಹುದುಗಿಸಿದ್ದಾನೆ!

ಆ ನಾಡು—

|| ವಾ | ಷ ||

ಎಲ್ಲಿಯುಂ ಪರಿವ ಸೆದೊರೆಯಿಂದೆ ಕೆರೆಯಿಂದೆ
ಎಲ್ಲಿಯುಂ ಕುಸುಮದಾಗರದಿಂದೆ ಸರದಿಂದೆ
ಎಲ್ಲಿಯುಂ ರತ್ನಮಯದಿಳೆಯಿಂದೆ ಬೆಳೆಯಿಂದೆ ಮಣಿ ಕೃತಕ ಶೈಲದಿಂದೆ||
ಎಲ್ಲಿಯುಂ ಸುಳಿವ ಗೋವ್ರಜದಿಂದೆ ಗಜದಿಂದೆ
ಎಲ್ಲಿಯುಂ ಕಸ್ತೂರಿಯ ಮೃಗದಿಂದೆ ಖಗದಿಂದೆ
ಎಲ್ಲಿಯುಂ ವಿರಚಿತ ಭವನದಿಂದೆ ಜನದಿಂದೆ ಈ ನಾಡ ಸಿರಿ ಮೆರೆದುದು ||
ಅಂಚೆವಿಂಡಿಡದ ಕೊಳಂ ಕೊಳಗಳೊಳ್ಪಲೆ ಪ
ಳಂಚಿ ಸುಳಿಯದ ಗಾಳಿ ಗಾಳಿಗಳ ಬಳವಿಡಿದು

(೨೦ನೇ ಪುಟ ನೋಡಿರಿ)

IN DAVANGERE
VISIT
UDIPI SHRI KRISHNA BHAVAN
Gandhi Circle, Poona-Bangalore Road
For
BOARDING, LODGING AND RESTAURENT

Individual and prompt service comfortable Rooms - very close to the Railway station the Busstand.

Bombay and Madras meal served very homely indeed.

❖

ನೀವು ದಾವಣಗೆರೆಗೆ ಬಂದಾಗ
ಉಡುಪಿ ಶ್ರೀ ಕೃಷ್ಣಭವನ್ ಸಂದರ್ಶಿಸಿರಿ
ಬೋರ್ಡಿಂಗ್, ಲಾಡ್ಜಿಂಗ್ ಅಂಡ್ ರೆಸ್ಟೋರೆಂಟ್
ಗಾಂಧಿ ಸರ್ಕಲ್, ದಾವಣಗೆರೆ.

ನೊಗಸಾದ ಊಟ, ಉಪಚಾರ— ಗಾಳಿ ಬೆಳಕುಗಳ ರೂಂಗಳು, ರುಚಿ ಮತ್ತು ಶುಚಿಯಾದ ತಿಂಡಿ, ತಿನಸುಗಳು ರೈಲ್ವೆಸ್ಟೇಷನ್ ಮತ್ತು ಬಸ್‌ಸ್ಟ್ಯಾಂಡಿಗೆ ಸಮೀಪದಲ್ಲಿರುವ ಗಾಂಧಿಸರ್ಕಲ್ ಬಳಿ **ಪೂನಾ-ಬೆಂಗಳೂರು ರಸ್ತೆಯಲ್ಲಿದ್ದು**, ನಗರದ ಮಧ್ಯಭಾಗದಲ್ಲಿದೆ.

ಬೊಂಬಾಯಿ ಮತ್ತು ಮದ್ರಾಸ್ ಊಟದ ವ್ಯವಸ್ಥೆ ಉಂಟು. ಒಮ್ಮೆ ಸಂದರ್ಶಿಸಿ ನಮ್ಮ ಸೇವೆ ಸ್ವೀಕರಿಸಬೇಕಾಗಿ ವಿನಂತಿ.

ಬಿ. ಪಿ. ಆಚಾರ್ಯ ಅಂಡ್ ಬ್ರದರ್ಸ್,
ಪಾರ್ಟನರ್ಸ್: M/s. ವಿಜಯಕೆಫೆ,
ಆಚಾರ್ಯ ಕಾಫಿವರ್ಕ್ಸ್, ದಾವಣಗೆರೆ.

ಭಾರತ ಗಣರಾಜ್ಯ ಮತ್ತು ಕಾಂಗ್ರೆಸ್

ಒಂದು ಕಾಲದಲ್ಲಿ ಭಾರತೀಯರೆಲ್ಲರ ಪ್ರೀತ್ಯಾದರಗಳಿಗೆ ಪಕ್ಕಾದ ಕಾಂಗ್ರೆಸ್ಸು ತನ್ನ ಗೌರವವನ್ನೂ ಜನಪ್ರೀತಿಯನ್ನೂ ಏಕೆ ಕಳೆದುಕೊಳ್ಳುತ್ತಿದೆ? ಇಂತಹ ಕಾಂಗ್ರೆಸನ್ನು ಪುನಃ ಹೇಗೆ ಜನಪ್ರಿಯಗೊಳಿಸಬಹುದು? ಕಾಂಗ್ರೆಸ್ ಬಲಗುಂದಿದರೆ, ದೇಶದ ಭವಿಷ್ಯತ್ತು ಹೇಗಾಗಬಲ್ಲುದು ಎಂಬುವಕ್ಕೆ ಇಲ್ಲಿ ಸಮರ್ಥವಾದ ಉತ್ತರವು ಇದೆ.

ಬರೆದವರು: ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ

ಭಾರತದ ಸರ್ವಶ್ರೇಷ್ಠ ರಾಜನೈತಿಕ ಪಕ್ಷವಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ೬೪ನೆಯ ಮಹಾಧಿವೇಶನವು ಈ ವರ್ಷದಲ್ಲಿ ನಾಗಪುರದಲ್ಲಿ ಸೇರಿತಷ್ಟೆ? ಇದೇ ರೀತಿಯಲ್ಲಿ ೧೮೯೧ರಲ್ಲಿ ಶ್ರೀ ಪಿ. ಆನಂದ ಚಾರ್ಲುರವರ ಮತ್ತು ೧೯೨೦ರಲ್ಲಿ ಶ್ರೀ ವಿಜಯರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಆಗಿ ಹೋಗಿದ್ದುವು. ನಾಗಪುರದ ಪ್ರಥಮಾಧಿವೇಶನದಲ್ಲಿ ಕಾಂಗ್ರೆಸ್ಸನ್ನು ಜನಸಾಮಾನ್ಯಕ್ಕೆ ಮುಕ್ತದ್ವಾರವನ್ನಾಗಿಡಬೇಕೇ ಅಥವಾ ಯಾವುದಾದರೂ ಒಂದು ವರ್ಗಕ್ಕೆ ಮಾತ್ರ ತೆರೆದಿರಬೇಕೇ ಎಂಬ ವಿಚಾರದ ಕುರಿತು ಮಹತ್ವಪೂರ್ಣ ನಿರ್ಣಯ ಮಾಡಲಾಯಿತು. ಏತದ್ರೀತಿಯಲ್ಲಿ ಅಲ್ಲಿಯೇ ನಡೆದ ಎರಡನೆ ಅಧಿವೇಶನವೂ ಕೆಲವೊಂದು ಮಹತ್ತಿಕೆಯ ನಿರ್ಧಾರಗಳನ್ನು ಮಾಡಿತ್ತು.

೧೯೨೦ರ ಅಧಿವೇಶನದಲ್ಲಿ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಅಸಹಯೋಗ ಮತ್ತು ಸತ್ಯಾಗ್ರಹದ ಪಾಂಚಜನ್ಯವನ್ನೂದಲಾಯಿತು. ಈ ಅಸಹಯೋಗವು ವಿದೇಶೀಯ ರಾಜ್ಯಗಳ ವಸಾಹತುವಾದದ ವಿರುದ್ಧ ಕಾಂಗ್ರೆಸ್ ಹೂಡುವ ಹೋರಾಟದ ಪ್ರಥಮ ಹಂತವಾಗಿತ್ತು. ೧೯೩೦ರಲ್ಲಿ ಸವಿನಯ ಕಾಯದೆಭಂಗ ಮತ್ತು ೧೯೪೨ರಲ್ಲಿ ಭಾರತವನ್ನು ತ್ಯಜಿಸಿರಿ ಚಳವಳಿಗಳ ರೂಪದಲ್ಲಿ ಇದು ವಿಕಸಿತವಾಗಿ ವಿಶಾಲಗೊಂಡಿತು. ಹೀಗೆ ನಾಗಪುರ ಕಾಂಗ್ರೆಸ್ ನಿಜವಾಗಿಯೂ ವಿದೇಶೀಯ ಆಳರಸರೊಡನೆ ನೂತನ ವಿಧಾನದ ಅಹಿಂಸಾ ಸಂಗ್ರಾಮವನ್ನು ಪ್ರಾರಂಭಿಸಿತೆಂಬ ಮಾತು ನಿರ್ವಿವಾದ. ಈ ಸಂಗ್ರಾಮದ ಪೂರ್ಣ ಫಲವಾಗಿಯೇ ನಮಗೆ ೧೯೪೭ರಲ್ಲಿ ಸ್ವಾತಂತ್ರ್ಯ ಸಿಕ್ಕಿತು; ೧೯೫೦ರಲ್ಲಿ ಭಾರತವು ಸಂಪೂರ್ಣ ಗಣರಾಜ್ಯವಾಯಿತು.

ತದನಂತರ ಕಾಂಗ್ರೆಸ್ಸು ದೇಶದ ಶಾಸನ ಸೂತ್ರವನ್ನು ವಹಿಸಿತು. ಎರಡು ಬಾರಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದುವು; ಹೀಗಾಗಿ ಕಾಂಗ್ರೆಸ್ ನವಶಕ್ತಿ ನವತತ್ವಗಳನ್ನು ಅಳವಡಿಸಿಕೊಳ್ಳಬೇಕಾಗಿ ಬಂತು. ೧೯೫೧ರಲ್ಲಿ ಸುವಿಚಾರಿತ ಆಯೋಜನೆಗಳ ಮೂಲಕ ದೇಶದ ವಿಕಾಸ ಕಾರ್ಯಕ್ರಮವನ್ನು ಸಿದ್ಧಪಡಿಸಿತು. ೧೯೫೫ರಲ್ಲಿ ಸಮಾಜವಾದೀ ಸಮಾಜರಚನೆಯ ಲಕ್ಷ್ಯವನ್ನು ತನ್ನ ಮುಂದಿಟ್ಟುಕೊಂಡಿತು.

ಕಾಂಗ್ರೆಸ್‌ನ ಅಧಿವೇಶನಗಳು ಹಿಂದಿನ ವರ್ಷಗಳಲ್ಲಿ ‘‘ನಾಗರಿಕ ಉತ್ಸವ’ ಅಥವಾ ‘‘ರಾಷ್ಟ್ರೀಯ ಉತ್ಸವ’’ಗಳೆಂದು ಕರೆಯಲ್ಪಡುತ್ತಿದ್ದರೂ ವರ್ಷ ವರ್ಷ ಕಳೆದಂತೆ ಉತ್ಸಾಹವು ಮಾತ್ರ ಮಂದವಾಗುತ್ತ ಬಂತು ಕೆಲವೊಮ್ಮೆ ಇಂತಹ ಅಧಿವೇಶನವು ಯಾವುದೇ ಪಕ್ಷದ ನೀತಿ ಅಥವಾ ದೃಢ ನಿರ್ಧಾರ ಮಾಡುವುದಕ್ಕಾಗಿರುವುದಲ್ಲ; ಶಾಸನಿಕ ನೀತಿಗಳ ಸಮರ್ಥನೆ ಅಥವಾ ಸಂಪುಷ್ಟಿಗೊಳಿಸುವುದಕ್ಕೋಸ್ಕರವಾಗಿ ನೆರವೇರುವುದೆಂದು ಕೆಲವರು ಅನ್ನತೊಡಗಿದರು ಆದರೆ, ಇಂತಹ ಕಲ್ಪನೆಯು ತೀರ ಅಸಾಧುವಾದುದು. ಅವಡಿ ಮಹಾಧಿವೇಶನದಲ್ಲಿ ಸಮಾಜವಾದ, ಅಮೃತಸರದ ಮಹಾಧಿವೇಶನದಲ್ಲಿ ರಾಜ್ಯ ಪುನರ್ಘಟನೆ ಮತ್ತು ಇಂದೋರ್ ಅಧಿವೇಶನದಲ್ಲಿ ಚುನಾವಣೆಯ ಘೋಷಣಾ ಪತ್ರದ ಸಿದ್ಧತೆ ಮೊದಲಾದ ನಿರ್ಣಯಗಳಾಗಿದ್ದು ಇವು ಮಹತ್ವದವುಗಳಾಗಿಯೇ ಇವೆ.

ನಾಗಪುರ ಮಹಾಧಿವೇಶನವು ಕೂಡ ಮಹತ್ವಪೂರ್ಣ ನಿಶ್ಚಯಗಳ ದೃಷ್ಟಿಯಿಂದ ಉಲ್ಲೇಖನೀಯವಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾರ್ಯಾನ್ವಯದಿಂದ ಕಲಿತುಕೊಂಡ ಪಾಠ ಮತ್ತು ಮೂರನೆಯ ಯೋಜನೆಯ ವಿಧಾನಗಳನ್ನೂ ರೂಪರೇಷೆಗಳನ್ನೂ ರೂಪಿಸಿಕೊಳ್ಳುವುದು; ಭೂ ಹಿಡುವಳಿಯ ಅತ್ಯಧಿಕ ಪರಿಮಿತಿಯನ್ನು ಹೇರುವುದು; ಸಹಕಾರೀ ವ್ಯವಸಾಯ ಪ್ರಣಾಳಿಯ ಪರಿಸ್ಥಿತಿ, ಆರ್ಥಿಕ ಪರಿಸ್ಥಿತಿಯ ಕಾರಣದಿಂದ ಸಾರ್ವಜನಿಕ ಕ್ಷೇತ್ರದಲ್ಲುಂಟಾದ ಗೊಂದಲ, ಕಾಂಗ್ರೆಸ್ ಸಂಘಟನೆಗಾಗಿ ಮಂಡಲ ಕಾಂಗ್ರೆಸ್ ಸಮಿತಿಗಳನ್ನು ಸಕ್ರಿಯಗೊಳಿಸುವುದು ಮೊದಲಾದುವುಗಳ ಮೇಲೆ ಆದ ಗೊತ್ತುವಳಿಗಳು ತೀರ ಮಹತ್ವಪೂರ್ಣವಾಗಿತ್ತು.

ಈ ಮಹಾಧಿವೇಶನದಲ್ಲಿ ಕೆಲವು ವಿವಾದಾಸ್ಪದ ವಿಷಯಗಳೂ ಎದ್ದುವು. ಕಾರ್ಯಕರ್ತರು ಮತ್ತು ವರಿಷ್ಠರು ಹಾಗೂ ಕಾರ್ಯಕರ್ತರು ಮತ್ತು ಜನತೆ-ಇವರ ನಡುವೆ ದಿನೇದಿನೇ ಬೆಳೆಯುತ್ತ ಹೋಗುತ್ತಿರುವ ಅಂತರದ ಮೇಲೆ ಚರ್ಚೆಯು ಭಾಷಣಗಳಲ್ಲಿ ನಡೆಯಿತು. ಆದರೆ, ಈ ಅಂತರವನ್ನು ಕಡಿಮೆಮಾಡುವ ಯಾವ ವ್ಯಾವಹಾರಿಕ ಪರಿಸ್ಥಿತಿಯನ್ನೂ ಇಲ್ಲಿ ವಿವೇಚಿಸಲಾಗಲಿಲ್ಲ.

ಸ್ವಾತಂತ್ರ್ಯಪೂರ್ವದಲ್ಲಿ ಕಾರ್ಯಕ್ರಮವು ತೀರ ಸರಳವಾಗಿತ್ತು. ಬ್ರಿಟಿಷ ಶಾಸನವನ್ನು ದೂರವೋಡಿಸುವುದರಲ್ಲಿಯೇ ಎಲ್ಲರ ಗಮನವೂ ಕೇಂದ್ರೀಕೃತವಾಗಿತ್ತು. ಈ ಕಾರಣವೊಂದರಿಂದಲೇ ಜನತೆಯು ಕಾಂಗ್ರೆಸ್‌ನ ಬೆನ್ನಹಿಂದಿತ್ತು. ಅಲ್ಲದೇ ಕಾರ್ಯಕರ್ತರಲ್ಲಿಯೂ ಉತ್ಸಾಹವು ತುಂಬಿ ತುಳುಕಾಡುತಿತ್ತು. ಸೇವಾಗ್ರಾಮದಂತಹ ಪ್ರಶಿಕ್ಷಣ ಕೇಂದ್ರವನ್ನು ತೆರೆದು, ದಕ್ಷ ಕಾರ್ಯಕರ್ತರನ್ನು ತರಬೇತುಗೊಳಿಸಿತು.

ಸ್ವಾತಂತ್ರ್ಯಾನಂತರ ಈ ಎಲ್ಲಾ ವಿಷಯಗಳಿರಲಿಲ್ಲ. ಕಾಂಗ್ರೆಸ್ ಜನರು ಸಾಮಾನ್ಯ ಜನತೆಯಿಂದ ದೂರ ಸರಿದರು. ಈ ಕಡೆಗೆ ಮೊದಮೊದಲು ಅಧಿಕ ಗಮನಹರಿಯಲಿಲ್ಲ. ಆದರೂ ಕಳೆದ ಎರಡು ಮೂರು ವರ್ಷಗಳಿಂದ ಈ ವಿಷಯವು ವಿಶೇಷ ಲಕ್ಷ್ಯಕ್ಕೆ ಗುರಿಯಾಯಿತು. ಕರ್ಮಠ ಸದಸ್ಯರ ಸೂಚನೆ, ರಚನಾತ್ಮಕ ಕಾರ್ಯಕ್ರಮ, ಮಂಡಲ ಕಾಂಗ್ರೆಸ್ ಸಮಿತಿಗಳ ಪುನರ್ಘಟನೆ ಮೊದಲಾದ ಕೆಲವು ಮಾತುಗಳು ಮುಂದೆ ಬಂದುವು; ಆದರೆ, ಈ ಸಮಸ್ಯೆ ಮಾತ್ರ ಹಾಗೆಯೇ ನಿಂತು ಬಿಟ್ಟಿದೆ. ಕೆಲವಾರು ಪ್ರದೇಶಗಳಲ್ಲಿ ಸಂಸ್ಥೆಯಲ್ಲಿ ಒಳಪಂಗಡ ಭೇದಗಳು ಹಾಗೂ ಪರಸ್ಪರ ಕಲಹಗಳಿಂದಾಗಿ ಈ ಸಮಸ್ಯೆಯು ಮತ್ತಷ್ಟು ಆಳವಾಗಿ ಬೇರು ಬಿಟ್ಟಿತು. ಈ ಕಾರಣಗಳಿಂದಾಗಿ ಸಂಘಟನೆಯು ಮತ್ತೂ ಶಿಥಿಲವಾಗಿ ಪರಿಣಮಿಸಿತು.

ಕಾಂಗ್ರೆಸ್ ದಿನೇ ದಿನೇ ಬಲಹೀನವಾಗುತ್ತ ಬಂತು; ಆದರೆ, ಕಾಂಗ್ರೆಸ್ ತನ್ನ ಅಂತ್ಯದುಸಿರನ್ನೆಳೆಯುತ್ತಿದೆಯೆಂದು ವಿರೋಧೀ ಪಕ್ಷಗಳ ಅಪಪ್ರಚಾರ ಮಾಡುತ್ತಿರುತ್ತಾರೆ, ಇದು ಮಾತ್ರ ಆಕ್ಷೇಪಣೀಯ. ದೇಶದ ಸರ್ವಕೊನೆಯಲ್ಲಿಯೂ ತನ್ನ ಶಾಖೆಗಳನ್ನು ಹರಡಿಸಿಕೊಂಡು ವಿಶಾಲ ಪ್ರಚಾರದಲ್ಲಿರುವ ರಾಜಕೀಯ ಪಕ್ಷ ಕಾಂಗ್ರೆಸ್ಸೊಂದೇ ಆಗಿದೆ. ದೇಶದ ಐಕ್ಯವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಕಾಂಗ್ರೆಸನ್ನು ಸುದೃಢವಾಗಿ ಬಲಪಡಿಸುವುದು ಅತ್ಯಂತಾವಶ್ಯಕವೆಂದು ಎಲ್ಲರೂ ತಿಳಿದುಕೊಂಡಿದ್ದಾರೆ.

ಅಹಿಂದೀ ಪ್ರದೇಶಗಳಲ್ಲಿ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಪರಿಗಣಿಸುವುದು, ಉಪೇಕ್ಷಿಸಲ್ಪಟ್ಟಿರುವ ಹಾಗೂ ಹಿಂದುಳಿದಿರುವ ವರ್ಗಗಳಿಗೆ ಅಗ್ರಗಣ್ಯ ಸ್ಥಾನವನ್ನೀಯುವುದು, ಆರ್ಥಿಕ ಅಸಮಾನತೆಯನ್ನು ದೂರೀಕರಿಸಿ ಸ್ವಾತಂತ್ರ್ಯ ಪ್ರಾಪ್ತಿಯ ಫಲವನ್ನು ದೇಶದ ಎಲ್ಲ ನಿವಾಸಿಗಳಿಗೂ ವಿತರಣೆ ಮಾಡುವುದು, ದೇಶದ ಉತ್ಥಾನಕ್ಕಾಗಿ ಹೆಜ್ಜೆಯಿಟ್ಟು, ಅದರ ಸರ್ವಾಂಗೀಣ ಪ್ರಗತಿಯ ಕಾರ್ಯಕ್ರಮಗಳನ್ನು ಪೂರ್ಣಗೊಳಿಸುವುದು, ಎಲ್ಲ ಧರ್ಮ, ಮತ ಸಂಪ್ರದಾಯಗಳಿಗೆ ಸಮಾನ ಸ್ಥಾನಮಾನಾವಕಾಶವನ್ನೊದಗಿಸುವುದು— ಮೊದಲಾದ ನಮ್ಮ ಧ್ಯೇಯಗಳು ಕಾಂಗ್ರೆಸ್ ಪಕ್ಷದಿಂದ ಮಾತ್ರ ಕಾರ್ಯರೂಪಕ್ಕೆ ಬರುವುದು ಸಾಧ್ಯವೇ ಹೊರತು ಉಳಿದ ಯಾವ ರಾಜಕೀಯ ಪಕ್ಷದಿಂದಲೂ ಅಸಾಧ್ಯವೆಂದು ದೃಢನಿಶ್ಚಯವಾಗಿ ಹೇಳಬಹುದು.

ಆಧುನಿಕ ವಿಶ್ವಮಾನ್ಯರಾದ ಪಂಡಿತ ಜವಾಹರಲಾಲರಂತಹ ನಿಸ್ವಾರ್ಥಿ ನಾಯಕನ ಮಾರ್ಗದರ್ಶನವಿರುವ ಪಕ್ಷವೂ ಕಾಂಗ್ರೆಸ್ ಮಾತ್ರ. ಈ ನಾಯಕ ಮಣಿಯ ಮೇಲೆ ಪಕ್ಷ ಜಾತಿ ಮತಗಳ ಭೇದವೆಣಿಸದೆ ಎಲ್ಲ ಭಾರತೀಯರೂ ಗೌರವ ಪ್ರದರ್ಶಿಸುತಿದ್ದಾರೆ. ಇಂತಹ ಜನಪ್ರೀತನಾದ ಮುಂದಾಳು ಯಾವುದೇ ಇತರ ಪಕ್ಷಗಳಲ್ಲಿ ಇಲ್ಲವೆಂದಿಲ್ಲಿ ಗಮನಿಸಬೇಕು. ಎಂತಲೇ ‘ಶ್ರೀಮಂತ ದರಿದ್ರ, ನಗರವಾಸಿ ಗ್ರಾಮವಾಸಿ, ಜ್ಞಾನಿ ಅಜ್ಞಾನಿ, ವರಿಷ್ಠ ಕನಿಷ್ಠ ಎಂಬ ಯಾವುದೇ ಭೇದ

(೧೯ನೇ ಪುಟ ನೋಡಿರಿ)

MANGALORE
P. V. S. BEEDIES . . . .
. . . . Awarded Gold Medals for
its Superfine Quality!



A Product that has maintained a
tradition for Quality since 1906

MANUFACTURERS:

P. V. S. BEEDIES,
PRIVATE LTD.,
KODIYALBAIL, MANGALORE-3.

Grams. ‘PUTHUBIDIS.’
Post Box No. 7.
Phone 83,83A, Residence. 593

ಅಮೇರಿಕದ ಪ್ರಜಾಜನರ ಅರ್ಥಜೀವನ

ವಿಶ್ವದ ಬಂಡವಳಶಾಹೀ ರಾಷ್ಟ್ರವೆಂಬ ನಿಂದನೆಗೆ ಈಡಾಗುತ್ತಿರುವ ಅಮೇರಿಕೆಯ ಸಂಯುಕ್ತ ರಾಷ್ಟ್ರಗಳಲ್ಲಿಯೂ ಸಮಾಜವಾದವು ಕಾರ್ಯಪ್ರವೃತ್ತವಾಗಿದೆಯೆಂದು ಅಂದರೆ, ವಿಸ್ಮಿತರಾಗುವ ಅಗತ್ಯವಿಲ್ಲ; ಅಲ್ಲಿನ ಪ್ರಜಾಜನರ ಅರ್ಥಜೀವನವನ್ನರಿತುಕೊಂಡಾಗ ಇದು ಸ್ವಯಂ ವೇದ್ಯವಾಗುವುದು.

ಬರೆದವರು: ಶ್ರೀ ಕು. ಶಿ. ಹರಿದಾಸಭಟ್ಟ, ಎಂ. ಎ.

ಅಮೇರಿಕದ ಸಂಯುಕ್ತ ರಾಷ್ಟ್ರದ (U. S. A.) ಸಾಮಾಜಿಕ ಪದ್ಧತಿಯಲ್ಲಿ ಕಳೆದ ೨೫–೫೦ ವರ್ಷಗಳಿಂದ ನಡೆದ ಬದಲಾವಣೆಗಳಿಂದಾಗಿ ಇದನ್ನು ಯಾವುದೆಂದು ಕಟ್ಟುನಿಟ್ಟಾದ ಅರ್ಥಪದ್ಧತಿಯಲ್ಲಿ ಸೇರಿಸುವುದು ಕಷ್ಟಸಾಧ್ಯವಾಗಿದೆ. ಈ ಪರಿವರ್ತನೆಯು ಮೂಲಭೂತವಾದ್ದು; ಆದರೂ ಕ್ರಾಂತಿ ಇಲ್ಲದೆಯೇ ಸಾಧಿಸಲ್ಪಟ್ಟದು ಪರಂಪರೆಯಿಂದ ಬಂದ ಆರ್ಥಿಕ ಸಂಸ್ಥೆಗಳ ಸ್ವಾಭಾವಿಕ ಮಾರ್ಪಾಟುಗಳಿಂದ ಉತ್ಪನ್ನವಾದ ಈ 'ಕ್ರಾಂತಿ'ಯು ಕಡಿಮೆ ಮಹತ್ತ್ವದ ಸಂಗತಿಯಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಸಂಯುಕ್ತ ರಾಷ್ಟ್ರದ ಪ್ರಜೆಗೆ ಕೇವಲ ವ್ಯೆಯಕ್ತಿಕವಾದ ಪ್ರಾಶಸ್ತ್ಯವನ್ನು ಕೊಡುವುದು ಎಲ್ಲ ಬಗೆಯ ಅಮೇರಿಕನ್ ಅರ್ಥಸಂಸ್ಥೆಗಳ ಸಹಜ ಧರ್ಮವೆನಿಸಿರುವುದನ್ನು ನಾವು ಗಮನದಲ್ಲಿಡಬೇಕು. ಅತ ಯಾವ ಕ್ಷೇತ್ರದಲ್ಲಿ ದುಡಿಯುವವನೇ ಆಗಿರಲಿ; ಅವನಿಗೆ ಸಲ್ಲತಕ್ಕ ವ್ಯಕ್ತಿಗೌರವವು ಅವನಿಗೆ ಅನಿವಾರ್ಯವಾಗಿ ಸಿಗುವುದು. ಅಂತೆಯೇ ಅವನ ಸ್ಥಾನಮಾನಗಳ ಕುರಿತು ವಿವಾದ, ಚರ್ಚೆ, ವಿಮರ್ಶೆ ಎಲ್ಲವೂ ಬಹಿರಂಗವಾಗಿ ನಡೆಯುವುದು.

ರಾಷ್ಟ್ರವು ತನ್ನ ಮುಂದಿಟ್ಟುಕೊಂಡಿರುವ ಗುರಿಗೋಸ್ಕರ ನಾವೆಲ್ಲ ದುಡಿಯಬೇಕೆನ್ನುವುದು ಒಂದು ದೊಡ್ಡ ಮಟ್ಟದ ಧೋರಣೆಯೆಂದು ಎಲ್ಲ ದೇಶಗಳಲ್ಲಿ–ಭಾರತದಲ್ಲಿರುವಂತೆ–ಘನತೆಯನ್ನು ಪಡೆದರೂ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆರ್ಥಿಕ ಬಲವನ್ನು ವರ್ಧಿಸಿಕೊಳ್ಳಲು ದುಡಿಯುತ್ತಿರುವುದು ನಮಗೆ ಎಲ್ಲೆಲ್ಲೂ ಗೋಚರವಾಗುವುದು. ಸ್ವಂತ ಪ್ರಯೋಜನವನ್ನು ಸಾಧಿಸಿಕೊಳ್ಳುವಾಗ ಸಮಾಜದ ಹಿತಕ್ಕೆ ಆಡಚಣೆಯಾಗದಂತೆ ವರ್ತಿಸಬೇಕಾದ್ದು ಎಲ್ಲ ಸಾಮಾಜಿಕರ ಕರ್ತವ್ಯವಾಗಿರುವಂತೆ ಲಾಭಬಡಕ ಸಮಾಜ ರಚನೆಯಲ್ಲಿ ಕಠಿಣವೂ ಎನಿಸೀತು. ಆದರೆ ಅಮೇರಿಕನ್ ಪ್ರಜಾರಾಜ್ಯದಲ್ಲಿ ವ್ಯಕ್ತಿಹಿತವೂ, ಸಮಾಜಕಲ್ಯಾಣವೂ ಏಕ ಕಾಲದಲ್ಲಿ ಸುಂದರ ಸಮನ್ವಯಃ ಪಡೆದಿರುವಂಥ ಸಂಸ್ಥೆಗಳನ್ನು ತಾವು ನಿರ್ಮಿಸಿದ್ದೇವೆಂದು ಅಮೇರಿಕನ್ ಪಂಡಿತರು ವಾದಿಸುವರು. ವರ್ಗಸಂಘರ್ಷವನ್ನು ವರ್ಗಮೈತ್ರಿಯಾಗಿ ಸುಲಭವಾಗಿ ಮಾರ್ಪಡಿಸುವ ಸ್ಪರ್ಶಮಣಿಯನ್ನು ಅವರು ಸಂಪಾದಿಸಿರುವಂತೆ ತೋರುವುದು.

ಸಂಯುಕ್ತ ರಾಷ್ಟ್ರವು ಇತ್ತೀಚೆಗೆ ಮಧ್ಯಮ ವರ್ಗದ ಜನರರಾಷ್ಟ್ರವಾಗಿ ಪರಿವರ್ತಿತವಾಗಿದೆ ಎತ್ತರದಲ್ಲಿರುವವರನ್ನು ಕೆಳಗೆ ಇಳಿಸದೆ, ಕೆಳಗಿನವರನ್ನು ಮೇಲಕ್ಕೆ ಉದ್ಧರಿಸಿಯೇ ಈ ಪರಿವರ್ತನೆ ಜರಗಿದೆಯಂತೆ

ಕಡಿಮೆ ವರಮಾನದ (ಅಂದರೆ ಸುಮಾರು ವರ್ಷಕ್ಕೆ ೧೦೦೦೦ ವರಮಾನವುಳ್ಳ ಕುಟುಂಬಗಳ ಸಂಖ್ಯೆಯು ಈಗ ಕುಂದುತ್ತಿದೆ. ೧೯೨೯ರಲ್ಲಿ ಇಂಥ ಕುಟುಂಬಗಳು ನಾಡಿನ ಒಟ್ಟು ಕುಟುಂಬಗಳ ೪೧.೫ ಶೇಕಡಾ ಇರುತ್ತಿದ್ದರೆ ಈಗ (೧೯೫೩-೫೪) ೧೮.೯ ಶೇಕಡಾದಷ್ಟು ಇಳಿದಿದೆ. ೧೯೪೯ರಲ್ಲಿ ಅಮೇರಿಕನ್ ಕುಟುಂಬಗಳ ಪೈಕಿ ಅರ್ಧವಾಸಿ ಜನಕ್ಕೆ ಮನೆಗೊಂದರಂತೆ ಕಾರು ಇರುತಿತ್ತು; ಈಗ ನೂರಕ್ಕೆಪ್ಪತ್ತೈದರಷ್ಟು ಜನಕ್ಕೆ ಈ ಸೌಲಭ್ಯ ದೊರೆಯುತ್ತಿದೆ. ಎರಡಕ್ಕಿಂತ ಹೆಚ್ಚು ಕಾರುಗಳನ್ನಿರಿಸುವ ಕುಟುಂಬಗಳು ೧೯೪೯ರಲ್ಲಿ ಕೇವಲ ೩% ಈಗ ೧೦% ಮನೆಗಳ ನಿರ್ಮಾಣದಲ್ಲಿಯೂ ಇಂಥದೇ ಪ್ರಗತಿಯನ್ನು ನಾವು ಕಾಣುತ್ತೇವೆ. ೧೯೪೦ರಲ್ಲಿ ಕೃಷಿಕ್ಷೇತ್ರದ ಹೊರಗಿರುವ ಔದ್ಯಮಿಕ ಕುಟುಂಬಗಳಲ್ಲಿ ೧೦೦ಕ್ಕೆ ೪೩ ಕುಟುಂಬಗಳಿಗೆ ಮಾತ್ರ ಸ್ವಂತ ಮನೆ ಇರುತಿತ್ತು; ಈಗ ೬೦ ಕುಟುಂಬಗಳಿಗೆ ಇದು ಸಾಧ್ಯವಾಗಿದೆ. ಇದೇರೀತಿ ವರಮಾನದ ವಿತರಣೆಯಲ್ಲಿಯೂ ವಿಶೇಷಪರಿವರ್ತನೆಯಾಗಿದೆ ೧೯೨೯ರಲ್ಲಿ ೫% ಅಮೇರಿಕನರು ಒಟ್ಟು ನಾಡಿನ ವರಮಾನದಲ್ಲಿ ೩೪.೭%ನ್ನು ಸಂಪಾದಿಸುವ ಸ್ಥಿತಿಯಲ್ಲಿದ್ದರು; ೧೯೫೧ರಲ್ಲಿ ಅವರು ಒಟ್ಟು ವರಮಾನದ ೧೫.೮%ಗೆ ಮಾತ್ರ ಜವಾಬ್ದಾರರು. ವಾರಸು ತೆರಿಗೆ ಮತ್ತು ಪ್ರಗತಿಶೀಲ ವರಮಾನ ತೆರಿಗೆಗಳು ಸಫಲವಾಗಿರುವುದಕ್ಕೆ ಇದೇ ನಿದರ್ಶನ.

ಅಮೇರಿಕದಲ್ಲಿ ಕೂಲಿಕಾರರು ಕೂಡ ವರಮಾನ ತೆರಿಗೆಯನ್ನು ತೆರುತ್ತಾರೆ. ವರ್ಷಕ್ಕೆ ರೂ.೩೫೦೦ ಗಿಂತಹೆಚ್ಚು ಉತ್ಪನ್ನವಿರುವ ಕೂಲಿಕಾರರೆಲ್ಲ ತೆರಿಗೆ ಕೊಡುತ್ತಿರುವರೆಂದ. ಪರಿಗಣಿಸಿದಲ್ಲಿ ೧೯೩೯ರಲ್ಲಿ ಇವರ ಪೈಕಿ ೭% ಜನ ಮಾತ್ರ ತೆರಿಗೆ ಕೊಡುತ್ತಿದ್ದರು. ೧೯೫೫ರಲ್ಲಿ ೬೫% ಜನ ಕೊಡುತ್ತಿದ್ದಾರೆ. ಅಮೇರಿಕದ ಕೇಂದ್ರ ಸರಕಾರದ ತೆರಿಗೆಯ ನೀತಿ ಪ್ರತಿಗಾಮಿಯಾಗಿಲ್ಲ. ಕರಭಾರವು ಹೇರಲ್ಪಡುವ ಅತಿಕಡಿಮೆ ಮೊತ್ತದ ಮೇಲೆ ೨೦%ನಷ್ಟು ತೆರಿಗೆ ಬಿದ್ದರೆ ಅತಿ ಹೆಚ್ಚಿನ ಮೊತ್ತದ ಮೇಲೆ ೯೦ರಷ್ಟು ತೆರಿಗೆ ಬೀಳುತ್ತಿದೆ ಸಮಾಜವಾದದ ರುಚಿಕಂಡ ಇಂಗ್ಲೆಂಡಿನ ಕರನೀತಿಗೆ ಅಮೇರಿಕದ ಧೋರಣೆ ಬಹಳ ಬಿಡುವುದಿಲ್ಲವೆಂದು ಇದರಿಂದ ತಿಳಿಯಬಹುದು. ವರ್ಷಕ್ಕೆ ೨೦ ರಿಂದ ೨೫ ಸಾವಿರ ರುಪಾಯಿವರೆಗೆ ವರಮಾನವುಳ್ಳವರು ಲೆಕ್ಕಾಚಾರವೆಲ್ಲ ಕಳೆದ ಮೇಲೆ ನೂರಕ್ಕೆ ೭ ರುಪಾಯಿಯಂತೆ ತೆರಿಗ ಕೊಟ್ಟರೆ

(೧೮ನೇ ಪುಟ ನೋಡಿರಿ)

HANDLOOM WEEK
celebrations.
BIGGEST
HANDLOOM
FABRICS
SHOW
from
2—2—1959
50% cut in profit margin
on all ranges of
HANDLOOM GOODS.
Chandarana
Brothers,
Hampankatta, MANGALORE.

"Bharath"
Fruit Products
are good.
SQUASHES, SYRUPS, BICCOLA (A Special Drink),
JAMS, PURE JUICES, CANNED
FRUITS IN SYRUP, PICKLES,
GINGER PRESERVE
ETC.
● ○ ●
"ಬಿಕ್ಕೊ" ರವರ
ಮಕ್ಕಳ ಮಮತೆಯು, ಗ್ಲುಕೋಸು ಕೂಡಿದ
'ರುಚಿಕರ ಮಿಠಾಯಿಗಳು'
ಮನರಂಜನೆಯ ಸೇವನೆಗೆ ಪ್ರಸಿದ್ಧಿ ಪಟ್ಟಿವೆ.
BHARAT INDUSTRIAL & CANNING CO. LTD.,
KAUP, S. K.

ಅನ್ಯ ದೇಶದ ಅನುಕರಣೆ ಬೇಡ

ಭಾರತದ ಪ್ರಜಾರಾಜ್ಯವು ಬೆಳೆಯುತಿದ್ದಂತೆ ಅದು ಅನ್ಯದೇಶಗಳಿಂದ ಎರವಲು ಪಡೆಯುತ್ತಿರುವ ದೈನಂದಿನ ಆಗು ಹೋಗುಗಳೂ ಹೆಚ್ಚುತ್ತವೆ. ಆದರೆ, ಇಂತಹ ಅನುಕರಣೆಗಳು ನಮ್ಮ ಭೂಮಿಗೆ, ಜನಕ್ಕೆ ಒಡಿಸದ ದೇಶಕ್ಕೆ ಅಪಾರ, ನಷ್ಟಮಾತ್ರವಾಗುತ್ತಿದೆ. ಹಾಗಿರುವಾಗ ಇಂತಹ ಅನುಕರಣೆಗಳ ಅಗತ್ಯ ನಮಗೆಲ್ಲಿ?

ಬರೆದವರು: ಶ್ರೀ ತದ್ದಲಸೆ ವಿಶ್ವೇಶ್ವರ ಶರ್ಮಾ. ಶಿರಸಿ.

(ಶಿರಸಿ ಶ್ರೀ ಮಾರಿಕಾಂಬಾ ಹೈಸ್ಕೂಲ ಸ್ನೇಹ ಸಮ್ಮೇಲನಕ್ಕೆ ಆಗಮಿಸಿದ ಶ್ರೀ ಕೆ. ಹನುಮಂತಯ್ಯ, ಮಾಜಿ ಮುಖ್ಯ ಮಂತ್ರಿ ಅವರು ಮಾಡಿದ ಭಾಷಣದ ಕೆಲವಾಂಶವನ್ನಿಲ್ಲಿ ಸಮಾವೇಶಗೊಳಿಸಲಾಗಿದೆ.)

ಬಹುಕಾಲದಿಂದ ಬೇರೆ ದೇಶದ ಆಳ್ವಿಕೆಯಲ್ಲಿದ್ದ ಭಾರತದಲ್ಲಿ ಇದೀಗ ಸ್ವಾತಂತ್ರ್ಯ ಬಂದಿದ್ದರೂ ಇನ್ನೂ ಆ ದೇಶಗಳ ಅನುಕರಣೆಯ ಸ್ವಭಾವ ಮಾತ್ರ ಕಡಿಮೆಯಾಗದೇ ಅದು ದಿನ ದಿನಕ್ಕೆ ಬೆಳೆಯುತ್ತಲೇ ಇದ್ದುದು ಕಂಡು ಬರುತ್ತದೆ. ನಮ್ಮ ಭಾರತೀಯರದ್ದೆಂದು ಹೇಳಿ ಕೊಳ್ಳುವ, ತೋರಿಸಿ ಕೊಡುವ ಯಾವುದೇ ಸಂಪ್ರದಾಯವನ್ನಾಗಲೀ ಸಂಸ್ಕೃತಿಯ ಹಿರಿಮೆಯನ್ನಾಗಲೀ ನಾವು ಅನುಷ್ಠಾನಕ್ಕೆ ತರುವ, ಅಥವಾ ಕಾದುಕೊಳ್ಳುವ ಪ್ರಯತ್ನದತ್ತ ನಮ್ಮ ಗಮನ ಸಾಗಿಲ್ಲ. ದಿನಚರಿಯ ವೇಷ ಭಾಷೆಗಳಿಂದ ಹಿಡಿದು ಸಾಮಾನ್ಯ ವಿಷಯಕ್ಕೂ ಸಹಾ ನಾವು ವಿದೇಶೀಯರ ಅನುಕರಣೆಗೆ ಮನಸ್ಸು ಕೊಡುತ್ತಿದ್ದೇವೆ.

ನಮ್ಮ ಶಿಕ್ಷಣ ತಂತ್ರ, ಬೇಸಾಯ, ರಾಜಕೀಯ ಇವೆಲ್ಲವೂ ಬೇರೆ ದೇಶದ ಅನುಕರಣೆಗೆ ಒಳಗಾಗುತ್ತಿದೆ. ಶಿಕ್ಷಣ ತಂತ್ರವಂತೂ ವಿದೇಶೀಯರದ್ದೇ ಇದ್ದು ನಮ್ಮ ಭಾರತೀಯ ಜನಜೀವನಕ್ಕೆ ಸರಿಯಾಗಿ ಹೊಂದಿಕೆಯಾಗುವ ಹಾಗೆ ಇನ್ನೂ ಸಾಕಷ್ಟು ಬದಲಾವಣೆ ಹೊಂದಲಿಲ್ಲ, ಹಾಗಾಗಿ ದಿನ ದಿನಕ್ಕೂ ಸುರಕ್ಷಿತ ನಿರುದ್ಯೋಗಿಗಳ ಸಮಸ್ಯೆ ಒಂದು ರಾಷ್ಟ್ರೀಯ ಸಮಸ್ಯೆಯಾಗುತ್ತಿದೆ.

ಗಾಂಧೀಜಿಯವರು ಸಹಾ ನಮ್ಮ ಶಿಕ್ಷಣ ಬಗ್ಗೆ—"ಇನ್ನು ನಮಗೆ ಕ್ರಿಯಾತ್ಮಕ ಶಿಕ್ಷಣ ಬೇಕು" ಎಂದು ಹೇಳಿದ್ದರು. ಯಾಕಂದರೆ ವಿದೇಶೀಯರು ಇಲ್ಲಿ ರೂಪಿಸಿದ ಶಿಕ್ಷಣತಂತ್ರ ಇವರನ್ನು ಜ್ಞಾನವಂತರನ್ನಾಗಿಸುವದಕ್ಕೆ ಮಾಡಿದ ಯೋಜನೆಯಾಗಿರಲಿಲ್ಲವಾಗಿತ್ತು. ನೌಕರಿಯ ಆಕರ್ಷಣೆ ಹಚ್ಚಿ ಆಡಳಿತಕ್ಕೆ ಬೇಕಾದ ಕೆಲವಂಶವನ್ನು ತಯಾರಿಸುವುದು ಅವರ ಉದ್ದೇಶ್ಯವಿತ್ತು. ಹಾಗಾಗಿ ಹೆಚ್ಚಿನ ಶಿಕ್ಷಣ ಕಲಿಯುವುದೆಂದರೆ ಅದು ನೌಕರಿಗಾಗಿ ಎಂಬುದು ಕೆಲವರ ತಿಳಿವಳಿಕೆಯಾಗಿದೆ. ಇಷ್ಟೇ ಅಲ್ಲ ಇದೇ ಉದ್ದೇಶ್ಯದಿಂದಲೇ ಪ್ರತಿವರುಷ ಲಕ್ಷಾಂತರ ಜನರು ಪದವೀಧರರಾಗುತ್ತಿದ್ದಾರೆ! ನಿಜವಾಗಿ ವಿಚಾರಮಾಡಿದರೆ ನಮ್ಮ ವಿದ್ಯಾಲಯಗಳಲ್ಲಿ ವಿದ್ಯಾಲಯವಾಗುತ್ತಿರುವುದರ ಜೊತೆಗೆ ಅದು ನಿರುದ್ಯೋಗಿಗಳನ್ನೂ ಸೃಷ್ಟಿಸುವ ಫ್ಯಾಕ್ಟರಿಯೂ ಆಗಿದೆ.

ಯಾಕಂದರೆ ಈ ವಿದ್ಯಾಲಯದಲ್ಲಿ ಅಭ್ಯಾಸಮುಗಿಸಿ ಹೊರಬಿದ್ದನಂತರ ಅವರಿಗೆ ಜೀವನ ಸಮಸ್ಯೆ ದೊಡ್ಡದಾಗುತ್ತದೆ. ತಮ್ಮ ಜೀವನವನ್ನೂ ನೋಡಿಕೊಳ್ಳಲಾರದಷ್ಟು ದುರ್ಬಲರಾಗುವಾಗ ಈ ವಿದ್ಯಾಭ್ಯಾಸ ಎಷ್ಟು ಸತ್ವಶಾಲಿಯಾಗಿದೆ ಯೆಂಬುದಕ್ಕೆ ಇದೊಂದೋ ನಿದರ್ಶನ ಸಾಕು

ವ್ಯವಸಾಯದ ಬಗ್ಗೆಯೂ ಹಾಗೆಯೇ ಬೇರೆ ದೇಶದ ಅನುಕರಣೆಗೆ ಪ್ರಯತ್ನ ನಡೆದುಪ್ರತಿ ವರುಷವೂ ಭಾರತದಿಂದ ಅನೇಕರನ್ನು ವಿದೇಶಕ್ಕೆ ರಪ್ತುಮಾಡಲಾಗುತ್ತಿದೆ. ಅಲ್ಲಿಯ ಒಕ್ಕಲುತನ, ಬೇಸಾಯಗಳನ್ನೆಲ್ಲ ಅಭ್ಯಾಸಮಾಡುವುದಕ್ಕೆ ಲಕ್ಷಾಂತರ ರೂ. ಗಳ ವೆಚ್ಚ ಮಾಡಲಾಗುತ್ತಿದೆ. ಆದರೆ ಇದರಿಂದ ಪ್ರಯೋಜನವಿದೆಯೋ ಎಂಬುದರ ಕಡೆಗೆ ಮಾತ್ರ ನಮ್ಮ ಗಮನ ಸಾಗಿಲ್ಲ. ಇಂದು ಚೀನಾ, ಜಪಾನ, ರಶಿಯಾಗಳು ಈ ವ್ಯವಸಾಯದಲ್ಲಿ ಮುಂದುವರಿದಿರಬಹುದು ಆದರೆ ಇದಕ್ಕೂ ಮುಂಚೆ ನಮ್ಮ ಭಾರತ "ಸುಜಲಾಂ, ಸುಫಲಾಂ, ಸಸ್ಯ ಶ್ಯಾಮಲಾಂ" ಆದದ್ದು ಅನೇಕರಿಗೆ ಮರೆತಿರಲಿಕ್ಕಿಲ್ಲ. ವ್ಯವಸಾಯವು ಅಲ್ಲಿಯ ಪ್ರಾಕೃತಿಕ, ಹವೆ ಮಣ್ಣು, ನೀರು, ಧಾನ್ಯಗಳಿಗೆ ಅವಲಂಬಿಸಿ ಉಂಟು. ಇಂದು ಜಪಾನಿನಲ್ಲಿ ನಡೆಯುತ್ತಿರುವ ವ್ಯವಸಾಯವನ್ನೇ ನಮ್ಮಲ್ಲಿ ಅನ್ವಯಿಸುವದಕ್ಕಿಂತ ಹಿಂದೆ ಭಾರತ ಅಭಿವೃದ್ಧಿಯ ಸ್ಥಿತಿಯಲ್ಲಿದ್ದಾಗ ಯಾವ ರೀತಿಯ ಬೇಸಾಯ ನಡೆಯುತ್ತಿತ್ತೆಂಬುದನ್ನು ಸಂಶೋಧಿಸಿದರೆ ಅದೇ ನಮಗೆ ಹೆಚ್ಚು ಹಿತಕಾರಿಯಾಗಬಹುದು.

ಇನ್ನು ನಮ್ಮ ಪ್ರಜಾಪ್ರಭುತ್ವವಂತೂ ಇಂಗ್ಲೆಂಡಿನಿಂದ ಎರವಲು ತಂದಿದ್ದೆಂದು ಹೇಳಲಡ್ಡಿಇಲ್ಲ. ಯಾಕಂದರೆ ನಮ್ಮದು ಪ್ರಜಾಪ್ರಭುತ್ವವೆಂದು ಹೇಳಿಕೊಳ್ಳುತ್ತಿದ್ದರೂ ನಮ್ಮದು ಸಮಕಾವಾದ, ಮತ್ತು ಪ್ರಜಾಪ್ರಭುತ್ವದ ಸಾಮರಸ್ಯ ಪ್ರಯೋಗವಾಗಿದೆ. ನಾವು ವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರಧಾನ್ಯತೆ ಕೊಡಲಿಲ್ಲ. ಪ್ರಜಾಪ್ರಭುತ್ವ ಪದ್ಧತಿ ಇಂಗ್ಲೆಂಡಿನಲ್ಲಿ ಹುಟ್ಟಿತು. ಫ್ರಾನ್ಸ ರಾಜ್ಯ ಕ್ರಾಂತಿಯಲ್ಲಿ ಪ್ರಜಾಪ್ರಭುತ್ವದ ಬೀಜ ಅಲ್ಲಿ ಬಿತ್ತಲ್ಪಟ್ಟಿತು. ಗ್ರೀಕ್ ರೋಮಗಳಲ್ಲಿಯೂ ಪ್ರಜಾಪ್ರಭುತ್ವವಿದ್ದು ಅದು ಚೆನ್ನಾದ ಪ್ರಯೋಗದಲ್ಲಿಯೂ ಇತ್ತು. ಇಂಗ್ಲೆಂಡಿನ ಪ್ರಜಾಪ್ರಭುತ್ವ ರಾಜಕೀಯಕ್ಕೆ ಮಾತ್ರ ಮೀಸಲು. ಅದಕ್ಕೇ ಅದು ಅಲ್ಲಿ ಯಶಸ್ವಿಯಾಗಿದೆ. ಇಂದು ಸಾಮಾನ್ಯವಾಗಿ ಎಲ್ಲಾ ದೇಶಗಳೂ ಈ ಇಂಗ್ಲೀಷ ಮಾದರಿಯನ್ನು ಅನುಸರಿಸಿಕೊಂಡಿವೆ.

ಸಮಾಜ ಪದ್ಧತಿಯೆಂದರೆ ಅಚ್ಚು ಹಾಕಿ ಹಂಚುವದಲ್ಲ. ದೇಶ, ಕಾಲಕ್ಕನುಸರಿಸಿ ಉಡುಪು, ಆಹಾರ, ಪ್ರಾಕೃತಿಕವಾಗಿರುವಂತೆ, ದೇಶ ನಾಚಿಸುವ ಸರ್ಕಾರದ ಪದ್ಧತಿಕೂಡ ಅಲ್ಲಿಯ ನಾಗರೀಕತೆ, ಸಂಸ್ಕೃತಿ, ಸಂಪ್ರದಾಯಗಳಿಗೆ ಅನುಗುಣವಾಗಿರಬೇಕು. ಸಮಾಜ ಮತ್ತು ಸರ್ಕಾರವನ್ನು ಈ ಮೂರು ತತ್ವಗಳ ತಳಹದಿಯ ಮೇಲೆ ಕಟ್ಟಬೇಕು. ಇದಕ್ಕೆ ಹೊಂದಿ

(೧೭ನೇ ಪುಟ ನೋಡಿರಿ)

INDIA'S MOST DURABLE
& ECONOMICAL

DIESEL TRUCK & BUS CHASSIS....

TATA - MERCEDES - BENZ

DIESEL TRUCKS & BUS CHASSIS

The Arvind Motors (Private) Ltd.,

BALMATTA ROAD : : MANGALORE.

ಭಾರತದ ತೃತೀಯ ಯೋಜನೆ

ಯೋಜನೆಗಳನ್ನು ರೂಪಿಸುವಾಗ ದೂರಾಲೋಚನೆಯು ತೀರ ಅಗತ್ಯ. ಇಂತಹ ದೂರಾಲೋಚನಾರಹಿತತೆಯಿಂದ ನಾವು ಈಗಾಗಲೇ ಕೈಸುಟ್ಟುಕೊಂಡಿದ್ದೇವೆ. ಹೀಗೆ ಕಲಿತ ಪಾಠದಿಂದ ನಮ್ಮ ಮುಂದಿನ ಯೋಜನೆಯನ್ನು ಯಾವ ರೀತಿ ತಯಾರಿಸಬಹುದು ಎಂದಿಲ್ಲಿ ವಿವರಿತವಾಗಿದೆ.

ಬರೆದವರು: ಡಾ| ಕೆ. ಎನ್. ರಾಜ್.

ನಾವಿನ್ನೂ ದ್ವಿತೀಯ ಪಂಚವಾರ್ಷಿಕ ಯೋಜನೆಯ ಮಧ್ಯಭಾಗದಲ್ಲಿದ್ದೇವೆ. ಈ ಯೋಜನೆಯ ಕಾಲಾವಧಿ ಮುಗಿಯಲು ಇನ್ನೂ ಎರಡು ವರ್ಷಗಳಿಗೂ ಹೆಚ್ಚಿನ ಕಾಲಬೇಕು. ನಾವಿನ್ನೂ ಬಗೆಹರಿಸಬೇಕಾಗಿರುವ ಸಮಸ್ಯೆಗಳು ಅನೇಕವಿವೆ. ಬೇಸಾಯೋತ್ಪನ್ನದಲ್ಲಿ ನಮ್ಮ ನಿರೀಕ್ಷೆಯನ್ನು ಮುಟ್ಟಲು ಸಾಧ್ಯವಾಗಿಲ್ಲ. ಕೈಗಾರಿಕಾ ಕ್ಷೇತ್ರದಲ್ಲಿಯೂ ನಾವು ಹಿಂದೆಯೇ ಉಳಿದಿದ್ದೇವೆ. ದ್ವಿತೀಯ ಪಂಚವಾರ್ಷಿಕ ಯೋಜನೆಯೇ ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿರುವಾಗ ತೃತೀಯ ಯೋಜನೆ ಕುರಿತಾಗಿ ನಾವು ಯೋಚಿಸುವುದು ಅದೆಷ್ಟು ಸಮಂಜಸ?

ಆದರೆ ಯೋಜನೆಯ ವಿಷಯದಲ್ಲಿ ನಾವು ಎಷ್ಟು ಹಿಂದಿನಿಂದಲೇ ಯೋಚಿಸುತ್ತೇವೆಯೋ ಅಷ್ಟೂ ಒಳ್ಳೆಯದು. ದೀರ್ಘಕಾಲದ ಸಮಸ್ಯೆಗಳು ಸಮಸ್ಯೆಗಳು ದೀರ್ಘ ಕಾಲದ ಪರಿಹಾರ ಯೋಜನೆ ಅತ್ಯಾವಶ್ಯಕವಾಗಬಹುದು. ತುರ್ತಿನ ಪರಿಹಾರಗಳು ಸಾಧ್ಯವಿದ್ದರೆ ಅವನ್ನೂ ಯೋಚಿಸಬೇಕಾಗುತ್ತದೆ. ಅನುಭವದಿಂದ ಹೇಳುವುದಾದರೆ ಇಂತಹ ಮುಂದಾಲೋಚನೆ ಅತ್ಯಾವಶ್ಯಕ. ಉದಾಹರಣೆಗೆ ಪಂಚವಾರ್ಷಿಕ ಯೋಜನೆಯ ಸಮಯದಲ್ಲಿಯೇ ಉಕ್ಕಿನ ತಯಾರಿಕೆಗೆ ನಾವು ಕ್ರಮ ಕೈಗೊಂಡು ಐದು ಲಕ್ಷ ಟನ್ನುಗಳಷ್ಟು ಉಕ್ಕನ್ನಾದರೂ ನಾವು ಹೆಚ್ಚು ತಯಾರಿಸಲು ಸಾಧ್ಯವಾಗಿದ್ದಿದ್ದರೆ ಕೋಟ್ಯಂತರ ರೂಪಾಯಿಗಳ ವಿದೇಶಿ ವಿನಿಮಯ ಸಮಸ್ಯೆ ಪರಿಹಾರವಾಗುತ್ತಿತ್ತು. ದ್ವಿತೀಯ ಯೋಜನೆ ಸಮಯದಲ್ಲಿ ಈ ಹಣವನ್ನು ಅನ್ಯಾಯವಾಗಿ ಹೊರದೇಶಗಳಿಗೆ ತೆತ್ತಿದ್ದೇವೆ. ಇಂತಹ ಹಲವಾರು ನಿದರ್ಶನಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಬಹುದು.

ಪ್ರಥಮ ಯೋಜನೆಯಲ್ಲಿ ಉಕ್ಕಿನ ತಯಾರಿಕೆ ಅಗತ್ಯದ ಪ್ರಸ್ತಾಪವಿತ್ತಿದ್ದರೂ ಈ ಅಗತ್ಯವನ್ನು ಪೂರೈಸಲು ಕೊಡಬೇಕಾಗಿದ್ದ ಪ್ರಾಧಾನ್ಯವನ್ನೂ ಕೊಡಲಿಲ್ಲ; ಇದರಿಂದಾಗಿ ಉಕ್ಕಿನ ಅಗತ್ಯವನ್ನು ಪೂರೈಸಿಕೊಳ್ಳಲು ವಿದೇಶಿ ವಿನಿಮಯಕ್ಕಾಗಿ ಹಣ ಒದಗಿಸಲೇ ಬೇಕಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಇಂತಹ ಒಂದು ಲೋಪ ಅನುಭವಕ್ಕೆ ಬಂದಿದೆ. ಯಂತ್ರಗಳನ್ನು ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ದ್ವಿತೀಯ ಯೋಜನೆಲ್ಲಿ ವಿಶೇಷ ಪ್ರಾಮುಖ್ಯ ಕೊಡಲಾಯಿತು. ಎಂಜಿನಿಯರಿಂಗ್ ಕೈಗಾರಿಕೆಗೆ ಮೂಲವಾಗಿ ಉಕ್ಕಿನ ಕೈಗಾರಿಕೆಯ ಬೆಳವಣಿಗೆಗೆ ಪ್ರಾಮುಖ್ಯ ಕೊಡಲಾಯಿತು.

ಫೌಂಡ್ರಿಗಳ ಸ್ಥಾಪನೆಯನ್ನು ಕೈಗೊಳ್ಳಲು ಸಾಧ್ಯವಾಗದೆ ಹೋಗಿದೆ ಮತ್ತು ಈ ಕಾರ್ಯವನ್ನು ಮುಂದಕ್ಕೆ ಹಾಕುತ್ತಾ ಬರಲಾಗಿದೆ. ಹಿರಿಯ ಪ್ರಮಾಣದ ವಿದ್ಯುತ್ ಸಲಕರಣೆಗಳ ಕಾರ್ಖಾನೆಗಳ ಸ್ಥಾಪನೆಯಾಗಲು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಮಾತ್ರ ಸಾಧ್ಯವಾಗಬಹುದು. ಹಿಂದಿನ ಅಂದಾಜಿನಂತೆ ಈ ಕಾರ್ಯವನ್ನು ತೃತೀಯ ಯೋಜನೆಯಲ್ಲಿಯೇ ಸೇರಿಸಬೇಕಾಗಿದ್ದಿತು. ದ್ವಿತೀಯ ಯೋಜನೆ ಸಮಯದಲ್ಲಿ ಯಂತ್ರ ತಯಾರಿಕೆಗಳ ಕಾರ್ಖಾನೆಗಳ ಸ್ಥಾಪನೆಗೆ ೧೫೦ ಕೋಟಿ ರೂಗಳನ್ನು ಮೀಸಲಾಗಿಡಲಾಗಿತ್ತು. ಆದರೆ ಈ ತನಕ ಇದರಲ್ಲಿ ಅರ್ಧದಷ್ಟು ಮಾತ್ರ ವಿನಿಯೋಗಿಸಿಕೊಂಡಿದ್ದರೆ ಹೆಚ್ಚು. ಇದರಿಂದಾಗಿ ತೃತೀಯ ಪಂಚವಾರ್ಷಿಕ ಯೋಜನೆ ತಯಾರಿಸುವಾಗ ಕೈಗಾರಿಕಾಕರಣ ಕಾರ್ಯಕ್ಕಾಗಿ ಹೆಚ್ಚಿನ ವಿದೇಶಿ ಹಣ ವಿನಿಮಯಕ್ಕೆ ಅವಕಾಶ ಕಲ್ಪಿಸಬೇಕಾಗುತ್ತದೆ.

ಸಿಂಧ್ರಿ ಗೊಬ್ಬರದ ಕಾರ್ಖಾನೆ ವಿಷಯವಾಗಿ ಪ್ರಥಮ ಪಂಚವಾರ್ಷಿಕ ಯೋಜನೆ ಕಾಲದಲ್ಲಿ ಹಲವು ರೀತಿಯ ಟೀಕೆಗಳು ಬಂದವು. ಆರ್ಥಿಕವಾಗಿ ಇದೊಂದು 'ಅನುಪಯುಕ್ತ' ಕಾರ್ಖಾನೆಯೆಂದೇ ಪರಿಗಣಿಸಲಾಯಿತು. ಈ ಕಾರ್ಖಾನೆಯ ಪ್ರಗತಿಗೆ ಅಷ್ಟಾಗಿ ತುರ್ತಿನ ಅಗತ್ಯವಿಲ್ಲವೆಂಬ ಭಾವನೆಯೇ ೧೯೫೦ರ ತನಕ ಪ್ರಬಲವಾಗಿತ್ತು. ಆದರೆ ನಾವು ಗಳಿಸಿರುವ ಅನುಭವ ತದ್ವಿರುದ್ಧವಾಗಿದ್ದು ಆದಷ್ಟು ಬೇಗ ಇನ್ನೂ ಮೂರು ಕಾರ್ಖಾನೆಗಳ ಸ್ಥಾಪನೆಗೆ ಸರ್ಕಾರ ಆಸಕ್ತಿವಹಿಸಿದೆ ಆದಷ್ಟು ಬೇಗ ನಮ್ಮ ದೇಶದಲ್ಲಿ ಗೊಬ್ಬರದ ಅಭಾವವನ್ನು ನೀಗಿಸುವುದು ಇದರ ಉದ್ದೇಶವಾಗಿದೆ

ಆದರೆ ಇಷ್ಟು ನಿಜ ನಾವು ತೃತೀಯ ಯೋಜನೆಯನ್ನು ಸಿದ್ಧಗೊಳಿಸುವಾಗ ನಮ್ಮ ಕೈಗೆಟಕುವ ಸಂಪತ್ಸಾಧನಗಳನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಅದನ್ನೂ ತಯಾರಿಸಬೇಕಾಗುತ್ತದೆ; ನಮ್ಮ ದೇಶದಲ್ಲಿಯೇ ದೊರಕುವ ಸೌಲಭ್ಯಗಳು ಮತ್ತು ಹೊರಗಿನಿಂದ ದೊರಕುವ ಸೌಲಭ್ಯಗಳ ಸ್ಪಷ್ಟ ಕಲ್ಪನೆಯಿಲ್ಲದೆ ಯೋಜನೆ ಸಿದ್ಧಗೊಳಿಸುವುದು ಅಸಾಧ್ಯ.

ನಮ್ಮ ಕೈಗೆಟಕುವ ಸೌಲಭ್ಯಗಳ ಅಂದಾಜು ಮಾಡುವಾಗ ನಮ್ಮ ದೇಶದ ಜನಸಂಖ್ಯೆ, ನಮ್ಮ ಜನಾಂಗದ ಸ್ವಭಾವ ಹಾಗೂ ಮನೋಧರ್ಮ ಇವೇ ಮೊದಲಾದವುಗಳ ಅಂದಾಜು ಹಾಕುವುದು ಸಹಜ. ಜನಬಲದ ಸಂಘಟನೆಯಿಂದ ಎಲ್ಲ ಕಾರ್ಯ ಸಾಧ್ಯ ಎಂಬ ಭಾವನೆ

(೧೬ನೇ ಪುಟ ನೋಡಿರಿ)

ಪಾವಿತ್ರ್ಯತೆಗೆ ಪ್ರಾಧಾನ್ಯತೆ!

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟಪಾಡಿ ನಾಯಕ ಮನೆತನವೆಂದರೆ ವೈದ್ಯಾಭ್ಯಾಸದಲ್ಲಿ **ಶ್ರೀಮದ್ವಸುದೇಂದ್ರತೀರ್ಥ ಶ್ರೀಪಾದಂಗಳವರಿಂದ** ಅನುಗ್ರಹಿಸಲ್ಪಟ್ಟ ಮನೆತನ. ಅದರಲ್ಲೂ ವೈದ್ಯಶಾಲೆಯಲ್ಲೇ ಬೆಳೆದು ನುರಿತ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರವರು ಈಗ ತಮ್ಮದೇ ಆದ

'ನಾಯಕ ಆಯುರ್ವೇದ ಆಶ್ರಮದಲ್ಲಿ'

ತಯಾರಿಸಿದ ಶುದ್ಧಾಯುರ್ವೇದೀಯ ಔಷಧಿಗಳಲ್ಲಿ

ಬಾಣಂತಿಯರಿಗೆ: ಅಷ್ಟವರ್ಗ ಸಹಿತ ಕಸ್ತೂರಿಯುಕ್ತ

ದಶಮೂಲ ಮತ್ತು **ಪ್ರಸೂತಿ ಕಲ್ಯಾಣ,**

ಇನ್ನು ಅಮೃತ ಮಂಜರಿ, ಜಂಭೀರದ್ರಾವ, ಚ್ಯವನಪ್ರಾಶ,

ಬಾಲಕಲ್ಯಾಣ, ಸಿದ್ಧಲಕ್ಷ್ಮೀ ವಿಲಾಸ, ಹೇಮಗರ್ಭ ಪೋಟಲಿ,

ರಾಜಮೃಗಾಂಕ ಇತ್ಯಾದಿ ರಸಪ್ರಧಾನ ಔಷಧಿಗಳೂ, ಮತ್ತು

ಮೂರ್ಛಿತ ಮಹಾವಿಷ್ಣು, ನಾರಾಯಣ, ನಯನಾಮೃತ ತೈಲಗಳೂ,

ಲೇಹ, ಆಸವಾರಿಷ್ಟಗಳೂ ಪ್ರಸಿದ್ಧವಾಗಿವೆ.

ಇನ್ನಿತರ ಆಯುರ್ವೇದ ಔಷಧಗಳ ಬಗ್ಗೆ ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ—

ನಾಯಕ ಆಯುರ್ವೇದಾಶ್ರಮ

ಕಟಪಾಡಿ, ದ. ಕ.

ಪ್ರಧಾನ ಮಾರಾಟ ಕೇಂದ್ರ:—

ಇಗರ್ಜಿ ಎದುರು, ಉಡುಪಿ, (ದ. ಭಾರತ).

ನಿಮ್ಮ ಮೋಟಾರ್ ವಾಹನವನ್ನು

ಎಮ್ ಜಿ ಐ ಡಿ **MGID**

ಯಲ್ಲಿ ವಿಮೆ ಇಳಿಸಿರಿ

ಅತ್ಯಲ್ಪ ದರದಲ್ಲಿ ವ್ಯಾಪಕ ಪಾಲಿಸಿಗಳನ್ನು

ಕೊಡಲಾಗುವುದು.

ಕ್ಲೇಮುಗಳನ್ನು ಶೀಘ್ರವಾಗಿ

ಪಾವತಿ ಮಾಡಲಾಗುವುದು.

ಮೈಸೂರು ಸರ್ಕಾರದ

ವಿಮಾ ಶಾಖೆ

ಅಥವಾ

ನಿಮ್ಮ ಸಮೀಪದ ಏಜಂಟರೊಡನೆ

ಸಂಪರ್ಕ ಬೆಳೆಸಿರಿ

೧೯೫೮

೧ ಭಾರತದಲ್ಲಿ ಕುಶಲಕಲೆಗಳಿಗೆ ಪ್ರಾಶಸ್ತ್ಯವೀಯುತಿದ್ದು ಎಲ್ಲ ರಾಜ್ಯಗಳಲ್ಲಿಯೂ ಅಂತಹ ಕೇಂದ್ರಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳನ್ನು ಈ ಚಿತ್ರದಲ್ಲಿ ಗುರುತಿಸಿರುವುದನ್ನು ಕಣ್ಣಾರೆ ನೋಡಬಹುದು.

೧


Handicrafts of India
JAMMU AND KASHMIR
PUNJAB
HIMACHAL PRADESH
UTTAR PRADESH
RAJASTHAN
BIHAR
ASSAM
WEST BENGAL
TRIPURA
MANIPUR
MADHYA PRADESH
ORISSA
BOMBAY
ANDHRA PRADESH
MYSORE
MADRAS
KERALA

೨ ''ಕಲ್ಯಾಣ ರಾಷ್ಟ್ರ''ದ ತತ್ವವನ್ನು ಕಾರ್ಯಕಾರಿಗೊಳಿಸಲು ಭಾರತ ಸರಕಾರವು ಈ ವರ್ಷವೂ ಪ್ರಯತ್ನಿಸಿದೆ. ಮಕ್ಕಳು ಮತ್ತು ಸ್ತ್ರೀಯರು ಹಾಗೂ ಹಿಂದುಳಿದ ವರ್ಗಗಳ ಶ್ರೇಯಸ್ಸಿಗಾಗಿ ಹಲವಾರು ಯೋಜನೆಗಳನ್ನು ಕಾರ್ಯಗತ ಮಾಡಿದೆ.

ಇಲ್ಲಿನ ಒಂದನೆ ದೃಶ್ಯದಲ್ಲಿ ನವದೆಹಲಿಯ ಸ್ತ್ರೀಯರ ಔದ್ಯೋಗಿಕ ತರಬೇತಿ ಕೇಂದ್ರದಲ್ಲಿ ಕೈಮಗ್ಗ ವಿಭಾಗದಲ್ಲಿ ಅಭ್ಯರ್ಥಿಗಳ ಆಸಕ್ತಿಯನ್ನು ದೃಷ್ಟಿಸಬಹುದು

೨ನೆ ದೃಶ್ಯದಲ್ಲಿ ಇಂತಹುದೇ ಮತ್ತೊಂದು ಕೇಂದ್ರದಲ್ಲಿ ಸ್ತ್ರೀ ತರಬೇತಿದಾರಳು ಮಾದರಿ ಬರೆಯುವುದು ಮತ್ತು ಚಿತ್ರ ಬರೆಯುವುದನ್ನು ಅಭ್ಯಸಿಸುತ್ತಿರುವುದನ್ನು ನೋಡಬಹುದು

ಅಭಿವೃದ್ಧಿ ಪ್ರಸರಣಾ ಕೇಂದ್ರಗಳನ್ನು ಹೆಚ್ಚು ಹೆಚ್ಚಾಗಿ ಗ್ರಾಮೀಣಕ್ಷೇತ್ರಗಳಲ್ಲಿ ತೆರೆಯಲಾಯಿತು ಇಲ್ಲಿ ಮಕ್ಕಳ ಆರೋಗ್ಯದಕಡೆಗೆ ವಿಶೇಷಗಮನಹರಿಸಲಾಗಿದೆ ೩ನೆಯ ಚಿತ್ರದಲ್ಲಿ ನೀಲಗಿರಿಯ ಇಂತಹ ಕೇಂದ್ರವೊಂದರಲ್ಲಿ ಮಕ್ಕಳಿಗೆ ಪುಕ್ಕಟೆಯಾಗಿ ಹಾಲು ಹಂಚುತ್ತಿರುವುದನ್ನು ಕಾಣಬಹುದು

ಬೆತ್ತದಿಂದ ಬುಟ್ಟಿ ತಯಾರಿಸುವುದನ್ನು ಕಲಿಯುವ ವಿವಿಧೋದ್ದೇಶ ಶಾಲೆಯೊಂದರ ವಿದ್ಯಾರ್ಥಿಗಳನ್ನು ನಾಲ್ಕನೆಯ ಚಿತ್ರದಲ್ಲಿ ನೋಡಬಹುದು

ಔದ್ಯೋಗಿಕ ಅಭಿವೃದ್ಧಿಯನ್ನು ಭಾರತದ ಪಂಚವಾರ್ಷಿಕ ಯೋಜನೆಯಲ್ಲಿ ಅಡಕಗೊಳಿಸಿದ್ದು ೧೯೫೮ರಲ್ಲಿ ಅದು ಮತ್ತಷ್ಟು ಪ್ರಬಲಗೊಂಡಿದೆ ಈ ಸಂಬಂಧದ ಕೆಲವು ನೋಟಗಳನ್ನು ಇಲ್ಲಿ ನೋಡಿರಿ:

೪ ೧ನೆ ದೃಶ್ಯದಲ್ಲಿ ಭಿಲೈ ಕಾರಖಾನೆಯ ದೈನಂದಿನ ಕಾರ್ಯಕ್ರಮಗಳ ಕುರಿತು ಸೋವಿಯತ್ ರಶ್ಯ ಮತ್ತು ಭಾರತದ ತಂತ್ರಜ್ಞರು ಚರ್ಚಿಸುತ್ತಿರುವುದನ್ನೂ ಕಾಣಬಹುದು.

೨ನೆ ಚಿತ್ರ
ನ್ನು ಪ್ರವೇಶ
ತ್ತದೆ. ಅಧಿ
ತಾಂತ್ರಿಕ ಪ
ಕೆಗಳು ಈ ಪ್ರ
ವುವು.

ಭಾರತ
ಳಲ್ಲಿ ೧೯ ಔದ್ಯ
ಲು ನಿಶ್ಚಯಿ
ಪದ ಒಕ್ಕಲ
ಮೂರನೆಯ
ಭಾಗವನ್ನೂ
ಕೆಲಸದಲ್ಲಿ ತ
ನ್ನೂ ಕಾಣಬ

೪ನೆ ದೃಶ್ಯ
ಎಣ್ಣೆಯ ಒ
ಯಲ್ಲಿ ಪ್ರಾಕೃ
ಶೋಧಿಸಿ

ವಿಶಾಖ ಪ
ಣದಲ್ಲಿ 'ಎಂ.
ಗಿರುವುದನ್ನು
ಇದು ಜುಲೈ
ಕ್ಕಾಗಿ ಇಳ್ಳ

೬ನೆಯ
ಣಗೊಳ್ಳು
ವಾಗಾರಗಳ
ಮತ್ತು ವಿದ್ಯು
ಕಾಧಿಕ ಸಾ
ಯುತ್ತಿದೆ
ಬಗ್ಗೆ ಅಧಿಕಾ
ಳ ಹಿಂದಿನ
ಸ್ವಾತಂತ್ರ್ಯ
ಡ ಭಾರತದ



ಭಾರತ

ರ್ಶನ, ಗಾಲ
ದನ್ನು ತೋರಿಸು
, ವೈಜ್ಞಾನಿಕ,
ಬಂಧಿ ಪ್ರದರ್ಶ
ದರ್ಶಿಸಲ್ಪಟ್ಟರು

ದ ವಿವಿಧೆಡೆಗ
ಗಳನ್ನು ತೆರೆಯು
ಹೆಲಿಯ ಸಮೀ
ಬೃಹತ್ತಾದುದು
ಕ್ಷೇತ್ರದ ಒಂದು
ಯ ಕೇಂದ್ರದಲ್ಲಿ
ಕರ್ಮಚಾರಿಯ

ಸಮೀಪದಲ್ಲಿ
ಸುತ್ತವ ಕೇಂಬೆ
ಮೇ ಗಿಳಿರಂದು

ನ ನೌಕಾಂಗ
ರ ಹಡಗು ತಂ
ತೋರಿಸುತ್ತದೆ.
ಯ ನೌಕಾದಳ
ದಗವಾಗಿದೆ
ನಲ್ಲಿ ಸಂಪೂ
ಮತ್ತು ವಿದ್ಯು
ದಿ ನೀರಾವರಿ
ಂತ್ರಗಳಿಂದ ಆಧಿ
ರತವೆಂದು ಪಡೆ
ವ ಲ್ಲಿಯೂ ಈ
ತ್ತಿದೆ
ಗಾಜಿರಲ್ಲಿಯೂ
ಪ್ರೋತ್ತೇಜಕಗೊಂ
ವನವು ಕಲವಾ

ರು ವಿಧಗಳಲ್ಲಿ ಅನುಭವಕ್ಕೆ ಬಂದಿತು. ಈ ಕೆಳಗಿನ ಚಿತ್ರವು ಸಂಸ್ಕೃತಿ ಮತ್ತು ವಿದ್ಯಾಕ್ಷೇತ್ರಗಳಲ್ಲಿ ನಡೆದ ಕೆಲವೊಂದು ಘಟನೆಗಳನ್ನು ಎತ್ತಿ ತೋರಿಸುತ್ತದೆ.

ಉಜ್ಜಯಿನಿಯ ಇತಿಹಾಸ ಪ್ರಸಿದ್ಧ ನಗರದಲ್ಲಿ ಕಾಳಿದಾಸ ಜಯಂತಿಯ ಅಂಗವಾಗಿ ಪ್ರದರ್ಶಿಸಲಾದ ಆತನ "ಮೇಘದೂತ ಕಾವ್ಯ"ದ ದೃಶ್ಯಗಳ ವರ್ಣಚಿತ್ರಗಳ ಪ್ರದರ್ಶನವೊಂದು ನಡೆದಾಗ ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರು ಅಲ್ಲಿ ಉಪಸ್ಥಿತರಿದ್ದರು ೧ನೆಯ ದೃಶ್ಯದಲ್ಲಿ ಈ ಪ್ರದರ್ಶನವನ್ನವರು ಕುತೂಹಲದಿಂದೀಕ್ಷಿಸುತ್ತಿರುವುದನ್ನು ಕಾಣಬಹುದು.

'ಭಾರತೀಯ ರಾಷ್ಟ್ರೀಯ ಗ್ರಂಥ ವಿವರಣಿ'ಯ ಪ್ರಪ್ರಥಮ ಸಂಪುಟವನ್ನು ಕಳೆದ ಸಪ್ತಂಬರ ಮಾಸದಲ್ಲಿ ಭಾರತ ಸರಕಾರದ ವೈಜ್ಞಾನಿಕ ಸಂಶೋಧನೆ ಮತ್ತು ಸಾಂಸ್ಕೃತಿಕ ವಿಷಯಗ ಮಂತ್ರಿ ಶಾಖೆಯು ಪ್ರಸಿದ್ಧಿಸಿತು ಎರಡನೆಯ ದೃಶ್ಯದಲ್ಲಿ ಈ ಮಹತ್ವಭರಿತ ಸಂಪುಟದ ಪ್ರತಿಯೊಂದನ್ನೂ ಆ ವಿಭಾಗದ ಮಂತ್ರಿಯು ಉಡುಗೊರೆಯಾಗಿ ಈಯುತ್ತಿರುವುದನ್ನು ಪ್ರಧಾನಿ ನೆಹರು ಸ್ವೀಕರಿಸುತ್ತಿರುವುದನ್ನು ನೋಡಬಹುದು.

ಮೇ ತಿಂಗಳಲ್ಲಿ ಇಸ್ಲಾಮಿ ಸಾಧುವಾದ ಅಮೀರ್ ಖುಸ್ರೋವಿನ ಸಮಾಧಿಯ ಬಳಿ ನಡೆದ ಆತನ ಸ್ಮಾರಕೋತ್ಸವದಂದು ಪ್ರಾರ್ಥನೆ ಸಲ್ಲಿಸುತಿಸುತ್ತಿರುವುದನ್ನು ೩ನೇ ದೃಶ್ಯದಲ್ಲಿ ಈಕ್ಷಿಸಬಹುದು

ನವದೆಹಲಿಯಲ್ಲಿ ಉದ್ಘಾಟಿಸಲ್ಪಟ್ಟ ವಿದೇಶೀಯ ವಿದ್ಯಾರ್ಥಿ ಚಿಕಿತ್ಸಾಲಯದಲ್ಲಿ ಭಾರತದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅಭ್ಯಸಿಸುತ್ತಿರುವ ಆಫ್ರೀಸ್ಯಾದ ವಿದ್ಯಾರ್ಥಿಗಳೊಂದಿಗೆ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ವಿಷಯಕ ಮಂತ್ರಿಗಳು ಮಾತಾಡುತ್ತಿರುವುದನ್ನು ೪ನೆಯ ನೋಟದಲ್ಲಿ ನೋಡಬಹುದು.

೫ನೆಯ ದೃಶ್ಯದಲ್ಲಿ ಅಂತರ್ವಿಶ್ವ ವಿದ್ಯಾಲಯೋತ್ಸವದ ಅವಸರದಲ್ಲಿ ಕಳೆದ ನವಂಬರ ಮಾಸದಲ್ಲಿ ನವದೆಹಲಿಯಲ್ಲಿ ಮುಂಬಯಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನರ್ತಿಸುತ್ತಿರುವುದನ್ನು ದೃಷ್ಟಿಸಬಹುದು



ಭಾರತದ ತೃತೀಯ ಯೋಜನೆ

(೧೩ನೇ ಪುಟದಿಂದ)

ಯೊಂದು ಬರುತ್ತದೆ. ಶ್ರಮದಾನದ ಮಾತು ಬರುತ್ತದೆ. ಶ್ರಮದಾನದ ಮೂಲಕ ಎಷ್ಟೋ ಕಾರ್ಯ ಸಾಧ್ಯವಾಗುತ್ತದೆ, ನಿಜ ಆದರೆ ಹಣ ಕೊಡದೆಯೇ ದುಡಿಸಿಕೊಳ್ಳಬಹುದು ಅಥವಾ ಶ್ರಮದಾನವೊಂದರಿಂದಲೇ ಎಲ್ಲಾ ಸಾಧಿಸಿಬಿಡಬಹುದು ಎಂಬ ಕಲ್ಪನೆ ಮಾತ್ರ ತಪ್ಪು ಕಲ್ಪನೆಯಾಗುತ್ತದೆ; ವಾಸ್ತವಾಂಶಕ್ಕೆ ಇದು ದೂರವಾಗುತ್ತದೆ. ಚೀಣಾ ದೇಶದಲ್ಲಿಯೂ ಸಹ ದುಡಿತಕ್ಕೆ ಹಣಕೊಟ್ಟೇ ದುಡಿಸಿಕೊಳ್ಳಲಾಗಿದೆ ಎಂಬುದು ಗಮನಾರ್ಹ.

ನಮ್ಮಲ್ಲಿ ಸಾಕಷ್ಟು ಜನ ನಿರುದ್ಯೋಗಿಗಳಿದ್ದಾರೆ, ಅವರನ್ನು ಉಪಯೋಗಿಸಿಕೊಳ್ಳುವುದರ ಮೂಲಕ ನಾವು ಏನೆಲ್ಲ ಸಾಧಿಸಬಹುದೆಂಬುದನ್ನು ಯೋಚಿಸುವಾಗ ಅವರಿಗೆ ಕೊಡಬೇಕಾದ ಸಂಭಾವನೆಯನ್ನೂ ಎಲ್ಲಿಂದ ಎತ್ತಬೇಕೆಂಬ ಪ್ರಶ್ನೆಯನ್ನೂ ವಿಚಾರ ಮಾಡಿ ನೋಡಬೇಕು ನಾವು ಈ ವಿಷಯದ ಕಡೆಗೆ ಈ ತನಕ ಅಷ್ಟಾಗಿ ಗಮನಕೊಟ್ಟಿಲ್ಲ; ಆದರ್ಶಗಳ ಕಲ್ಪನೆ ಆಗಾಗ ಮಿಂಚಿ ಮಾಯವಾಗಿದೆಯೇ ಹೊರತು ನಮ್ಮಲ್ಲಿರುವ ಅಪಾರ ಜನ ಬಲವನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕೆಂಬ ಬಗ್ಗೆ ನಾವು ಕಾರ್ಯೋನ್ಮುಖರಾಗಿಲ್ಲ.

ನಮ್ಮ ಸಾಮಾಜಿಕ ಹಾಗೂ ರಾಜಕೀಯ ಚೌಕಟ್ಟಿಗೆ ಹೊಂದಿಕೊಳ್ಳುವ ರೀತಿಯಲ್ಲಿ ನಾವು ಜನಬಲವನ್ನು ಸಂಘಟಿಸಿಕೊಳ್ಳಬೇಕಾದ ಸಮಸ್ಯೆ ಇದೆ.

ಈ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡೇ ಇದೀಗ ಗ್ರಾಮಾಂತರ ಪ್ರದೇಶಗಳಲ್ಲಿ ಜಲವನ್ನು ಸಂಘಟಿಸುವ ಪ್ರಯತ್ನಕ್ಕೆ ವಿಶೇಷ ಗಮನಕೊಡಲು ನಿರ್ಧರಿಸಲಾಗಿದೆ. ಅಲ್ಲದೆ ಗ್ರಾಮಾಂತರ ಮಟ್ಟದ ಸಂಘ ಸಂಸ್ಥೆಗಳನ್ನು ಬಲಪಡಿಸಿ ಅವುಗಳನ್ನು ಜೀವಂತಗೊಳಿಸುವ ದೃಷ್ಟಿಯಿಂದ ಭೂಕಂದಾಯದ ಆದಾಯದಲ್ಲಿ ಬಹುಭಾಗವನ್ನು ಗ್ರಾಮ ಪಂಚಾಯತಿಗಳಿಗೆ ಒಪ್ಪಿಸಿ, ಸಾಮುದಾಯಿಕ ಅಭಿವೃದ್ಧಿ ಕಾರ್ಯವನ್ನು ಅಧಿಕಾರ ಶಾಹಿಯ ಹಿಡಿತದಿಂದ ಪಾರುಮಾಡಿ, ಜನತೆಯ ಪ್ರತಿನಿಧಿಗಳ ಕೈಗೆ ಒಪ್ಪಿಸುವ ಕಾರ್ಯಕ್ಕೆ ವಿಶೇಷ ಗಮನಕೊಡುವುದರ ಆಗತ್ಯವನ್ನು ವಿಶೇಷವಾಗಿ ಗಮನಿಸಲಾಗುತ್ತಿದೆ ಯೋಜನೆಗೆ ಸ್ಥಳೀಯ ಮಟ್ಟದಲ್ಲಿಯೇ ಜನತೆಯು ಭಾಗಿಯಾಗುವಂತೆ ಮಾಡುವುದು ಇದರ ಉದ್ದೇಶ.

—'ಯೋಜನಾ ಕೃಪೆಯಿಂದ'

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಹಂಚುಗಳನ್ನು ಆರಿಸುವಾಗ ಜಾಣ್ಮೆಯಿರಲಿ!

ನಿಮಗೆ ಹೆಂಚುಗಳು ಬೇಕಾದಾಗ ತಾಳಿಕೆ ಬಾಳಿಕೆಯಲ್ಲಿ ನಾಜೂಕಿನಲ್ಲಿ ಉತ್ತಮವಾದುದೆಂದು ಸರ್ವತ್ರ ಪ್ರಸಿದ್ಧವಾಗಿ ಪ್ರಚಾರದಲ್ಲಿರುವ ಕೋಮನ್ ವೆಲ್ತ್ ನವರ

ಬಾಸೆಲ್ ಮಿಶನ್ ಹಂಚುಗಳನ್ನೆ ಆರಿಸಿಕೊಳ್ಳಿರಿ.

ಬಾಸೆಲ್ ಮಿಶ್ಶನಿನ ಹಂಚು, ಎರಡು ಚಡಿಯ ಹಂಚು, ಹಂಚೆ ಇತ್ಯಾದಿಗಳಿಗೆ ನಮ್ಮೊಡನೆ ವಿಚಾರಿಸಿರಿ.

ಕಾರ್ನಾಡು ಪಾಂಡುರಂಗ ರಾವ್,
ಕಮಿಶನ್ ಏಜಂಟ್, ಸರ್ವಿಸ್ ಬಸ್ ಸ್ಟ್ಯಾಂಡಿನ ಬಳಿ, ಉಡುಪಿ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗಳ ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40
ಸ್ಟಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಕನ್ನಡ ಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಮ್ಮ ಯಾವತ್ತೂ ಗ್ರಾಹಕ ಮತ್ತು ಹಿತೈಷಿಗಳಿಗೆ
ಹೊಸ ವರುಷದ ಶುಭಾಶಯಗಳು

ಎಂದಿನಂತೆ ಎಂದೆಂದೂ ನಮ್ಮ ನಿಮ್ಮೊಳಗಣ ಬಾಂಧವ್ಯವು
ನಮ್ಮ ವೈಶಿಷ್ಟ್ಯಪೂರ್ಣ ಸೇವೆಯೊಂದಿಗೆ ಸದಾ
ವೃದ್ಧಿಸಲೆಂದು ಹಾರೈಸುವೆವು.

ಶ್ರೀನಿವಾಸ ಬ್ರದರ್ಸ್

ಪ್ರಮುಖ ಕಾಗದ ವ್ಯಾಪಾರಿಗಳು
ಪೋಸ್ಟ್ ಬಾಕ್ಸ್ ನಂಬ್ರ 130
ರಥಬೀದಿ, ಮಂಗಳೂರು, ದ. ಕನ್ನಡ.

ಅಧಿಕೃತ ವಿತರಣೆಗಾರರು:

ಪ್ರಖ್ಯಾತಿಪಟ್ಟ **"BAMBOO"** ಕಾಗದಗಳು
"J. B. A." ಮುದ್ರಣ ಶಾಯಿಗಳು ಮತ್ತು
ಮುದ್ರಕರ ಇತರ ಸಲಕರಣೆಗಳು.

SRINIVAS BROTHERS
Post Box No. 130, Car Street, Mangalore.
Phone 449 : Grams "ACTIVE"

SRI RAMAKRISHNA THEATRE, LIMITED,
UDIPI

ನಿಮ್ಮ ಮನರಂಜನೆಗೆ
ಉತ್ತಮ ಚಿತ್ರಗಳ ಪ್ರದರ್ಶನ!

ವ್ಯಾಪಾರ ಅಭಿವೃದ್ಧಿಗೆ ಸ್ಲೈಡ್ ಮತ್ತು
ಪತ್ರಿಕಾ ಜಾಹೀರಾತಿನ ನಿದರ್ಶನ!!

- "ಪ್ರಕಾಶ" ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲೆ ಕ್ಷ-ಕಿರಣ—
- ಮೋಟಾರು, ರೇಡಿಯೋ ಬೆಟ್ರಿಗಳನ್ನು ಅತ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—
- ಸಭೆ, ಸತ್ಕಾರ ಕೂಟದಲ್ಲಿ ಉಪಯೋಗವಾಗುವ ಧ್ವನಿವರ್ಧಕ ಯಂತ್ರವನ್ನು ಒದಗಿಸುವುದು—
- ಮದುವೆ, ಮುಂಜಿಗಳಾಗಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?
ಇಲ್ಲಿಯೇ—

ಶ್ರೀರಾಮಕೃಷ್ಣ ಥಿಯೇಟರ್, ಲಿಮಿಟೆಡ್,
ಉಡುಪಿ

ನಮೋ ನಮೋ ಧರ್ಮ ಚಕ್ರ!

೧

ನಮೋ ನಮೋ ಧರ್ಮ ಚಕ್ರ—
ತಿರುತಿರುಗುವ ಕಾಲ ಚಕ್ರ!
ನಿನ್ನಡಿಯಲಿ ನಿಂತಿರುವೆವು
ಕನಸನೆನಿತೊ ಹೆಣೆಯುತಿಹೆವು,
ದಣಿಯುತಿಹೆವು, ತಣಿಯುತಿಹೆವು,
ನಿನ್ನಡಿಗಿದೊ ಮಣಿಯುತಿಹೆವು!
ಮುಂಜಾವಿನ ಸ್ವರ್ಣ ವರ್ಣ
ಕುಣಿಸಿದೆ ತರುಲತೆಯ ಪರ್ಣ—
ನಡುನಡುವೆಯೆ ನಸುನಗುತಿವೆ
ಪರಿಮಳಿಸುವ ಪುಷ್ಪಪೂರ್ಣ!
ನಿನ್ನೆಡೆಗಿದೊ ಧಾವಿಸಿಹೆವು
ಕಲ್ಲು ಮುಳ್ಳು ತುಳಿಯುತಾ—
ಏರಿಳಿತವನೇರಿಳಿಯುತ
ಮೇಲು—ಕೀಳ ಮರೆಯುತಾ!
ನೀನು ನಿಂತ ನೆಲವೆ ಸಮತೆ,
ಸ್ವಾತಂತ್ರ್ಯದ ಮಮತೆ!

೨

ನಮೋ ನಮೋ ಧರ್ಮ ಚಕ್ರ!
ತಿರುತಿರುಗುವ ಕಾಲ ಚಕ್ರ!
ಯುಗ ಶಕಟವ ನೆಳೆದು ತಂದೆ,
ಅವತಾರವ ನಿಳಿಸಿ ಬಂದೆ,
ರಕ್ತನದಿಯೊಳಿಳಿದು ಮಿಂದೆ,
ಇನ್ನೇನಿದೆ ಮುಂದೆ?
ಅತಿವರ್ತನ, ಭೇದ ಬುದ್ಧಿ
ಕುರುಪಾಂಡವ ಕುಲವನದ್ದಿ
ಅತಿವಂತರ, ಮಿತಿವಂತರ
ಸರ್ವನಾಶ ತಂದಿತು—
ದುಷ್ಟರೊಡನೆ ಶಿಷ್ಟರನೂ
ಕ್ರೂರತೆಯಲಿ ಕೊಂದಿತು!
ನಾಗರಿಕತೆ ನಂದಿತು,
ಭೂ ಭಾರವು ಸಂದಿತು!

೩

ನಮೋ ನಮೋ ಧರ್ಮ ಚಕ್ರ!
ತಿರು ತಿರುಗುವ ಕಾಲ ಚಕ್ರ!
ಬುದ್ಧ ಬಸವರಿದ್ದು ಬಂದು
ಮಾನವತೆಯ ತಿದ್ದಲೆಂದು
ರಕ್ತನದಿಗೆ ಒಡ್ಡು ಕಟ್ಟಿ,
ಹಿಂಸೆಯ ಕಲ್ಮಲವ ಕುಟ್ಟಿ,
ಸಮತೆಯೆಂಬ ನೀರನುಣಿಸಿ,
ಪ್ರೇಮವೆಂಬ ಬೆಳೆಯ ಗುಣಿಸಿ,
ಒಂದೆ ಜಾತಿ, ಒಂದೆ ನೀತಿ,
ಒಂದೆ ಧರ್ಮ ದೇವರೆಂದು
ನುಡಿದು, ನಡೆದು ಹೋದರೂ—
ನಿಂತಲ್ಲಿಯೆ ನಿಂತ ನೀರು–
ಪಾತಾಳಕೆ ಬಿಟ್ಟ ಬೇರು—
ಅತಿವರ್ತನ ತೊಲಗದು!
ಭೇದ ಬುದ್ಧಿ ನೀಗದು!!
ಘರ್ಷಣೆಯೂ ಹೋಗದು!!

೪

ನಮೋ ನಮೋ ಧರ್ಮ ಚಕ್ರ!
ತಿರು ತಿರುಗುವ ಕಾಲ ಚಕ್ರ!
ಹಿಂದು, ಕ್ರೈಸ್ತ, ಮುಸಲ್ಮಾನ
ನಮ್ಮೊಳೊಂದೆ ಸ್ವಾಭಿಮಾನ!
ಹೋರಾಡುವ ರಣ ಕಣದಲಿ,
ನಲಿದಾಡುವ ಮನೆ ತನದಲಿ
ಸರ್ವಸುಖದ ಸಮಾನತೆ
ಸ್ನೇಹಧರ್ಮ ಕೋಮಲತೆ
ಹೊಳೆಯುತಿರಲಿ, ಬೆಳೆಯುತಿರಲಿ,
ಲೋಕವನ್ನ ಸೆಳೆಯುತಿರಲಿ!
ನಮೋ ನಮೋ ಧರ್ಮ ಚಕ್ರ!
ತಿರು ತಿರುಗುವ ಕಾಲ ಚಕ್ರ!
ನೀನು ನಿಂತ ನೆಲವೆ ಸಮತೆ,
ಸ್ವಾತಂತ್ರ್ಯದ ಮಮತೆ!

—ಜಿ. ಆರ್. ಪಾಂಡೇಶ್ವರ್.

ಅನ್ಯದೇಶದ ಅನುಕರಣೆ ಬೇಡ

(೧೨ನೇ ಪುಟದಿಂದ)

ಕೆ ಇಲ್ಲದ ಪದ್ಧತಿ 'ಕಾನೂನು ನಿಯಮಗಳು ಲೋಪದೋಷಗಳಿಗೆ ಕಾರಣವಾಗುತ್ತದೆ. ಇಂಗ್ಲೆಂಡಿನಲ್ಲಿ ಪ್ರಜಾಪ್ರಭುತ್ವ ಈ ಸಂಪ್ರದಾಯಕ್ಕನುಸಾರವಾಗಿರುವುದರಿಂದ ಅದು ಖ್ಯಾತಿಹೊಂದಿದೆ. ಇತರ ದೇಶಗಳಿಗೆ ಮಾತ್ರ ಸ್ವರೂಪದ್ದಾಗಿದೆ.

ಇತರ ಕಡೆ ನಾಯಕರಾದವರು ಕೆಲವು ವರ್ಷಗಳ ನಂತರ ಅಧಿಕಾರ ಬಿಟ್ಟುಕೊಡುತ್ತಾರೆ. ನಮ್ಮಲ್ಲಿ ಈ ನಿದರ್ಶನಗಳೇ ಇಲ್ಲ. ಇದು ವಂಶ ಪರಂಪರಾಗತ ಹಕ್ಕೋ ಎಂಬಂತೆ ನಮ್ಮ ಧುರೀಣರ ಭಾವನೆಯಾಗಿದೆ. ಇದರಿಂದ ಅವಿಶ್ವಾಸ ಸೂಚನೆ ಬರಲು ಅವಕಾಶವಾಗುತ್ತದೆ. ಸುಖಮಯ ದಾಂಪತ್ಯದ ಹಾಗೆ ಇಂಗ್ಲಂಡದಲ್ಲಿ ನಾಯಕರೂ ಸದಸ್ಯರೂ ಕೂಡಿ ಸಾಗುತ್ತಾರೆ. ಜನಕ್ಕೆ ಬೇಕಾದುದನ್ನು ತಾವೇ ತಿಳಿದು ಮಾಡುತ್ತಾರೆ, ಅಲ್ಲಿ ವರ್ಗಗಳ ತಳಹದಿಯ ಮೇಲೆ ಸರಕಾರ, ರಾಜಕೀಯ ಪಕ್ಷವಿದೆ. ಪ್ರಜಾಪ್ರಭುತ್ವದ ಪ್ರಾತಿನಿಧ್ಯವಿದೆ. ಪಾರ್ಟಿಯೂ ಇದೆ. ನಮ್ಮಲ್ಲಿಯ ಪದ್ಧತಿಯೇ ಬೇರೆ. ಇಲ್ಲಿ ಜಾತೀಯ ತಳಹದಿಯೇ ಮುಖ್ಯದ್ದಾಗುತ್ತದೆ.

ಗಾಂಧೀಜಿ ಹೇಳಿದ ಹಾಗೆ ಪಕ್ಷಾತೀತ ಸರ್ಕಾರಬೇಕು. ಅದೇ ವರ್ಗರಹಿತ ಜಾತ್ಯತೀತವಾಗಬಲ್ಲದು.

ಇಂಗ್ಲೆಂಡಿನಲ್ಲಿ ತತ್ವಗಳ ತಳಹದಿಯ ಮೇಲೆ ಹೋರಾಟವಾದರೆ ನಮ್ಮಲ್ಲಿ ಸ್ಥಾನಾಪೇಕ್ಷೆಯ ವ್ಯಕ್ತಿ ಪ್ರಧಾನತೆಯ ಗುಂಪು ರಚನೆಯ ಹೋರಾಟ! ಆದ್ದರಿಂದ ಇಂಗ್ಲೀಷ ಪದ್ಧತಿಯ ನಾವಿಂದು ಅನುಸರಿಸುವ ಪ್ರಜಾಪ್ರಭುತ್ವ ನಮಗೆ ಅನುಗುಣವಾಗಿಲ್ಲ. ಆದಕ್ಕಾಗಿಯೇ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ವಿಕೃತ ರೂಪ ತಳೆದಿದೆ. ಯಾವ ಮಂತ್ರಿ ಮಂಡಳಕ್ಕೂ ಭದ್ರತೆ ಇಲ್ಲ. ಕೇವಲ ನೆಹರೂ ವರ್ಚಸ್ಸಿನಿಂದ ಕೇಂದ್ರ ಸರ್ಕಾರ ನಿಂತಿದೆ. ಏನೇ ಇರಲಿ—ಇಂಗ್ಲೀಷ ಪದ್ಧತಿ ನಮ್ಮ ದೇಶದ ಸಂಸ್ಕೃತಿ, ಸಂಪ್ರದಾಯಕ್ಕೆ ಹೊಂದಿಕೆಯಾಗಿಲ್ಲ.

ನಾವು ಭಾರತೀಯರು. ಒಂದು ಸಂಪ್ರದಾಯಕ್ಕೆ ತುತ್ತಾದವರು. ಪ್ರಪಂಚದ ಇತಿಹಾಸದಲ್ಲಿ ಇರಬಹುದಾದ ಎಲ್ಲ ಮಾನವ ಕೋಟಿಯ ಮಿಶ್ರಣ ಇಲ್ಲಿಯ ಜನಾಂಗವೆನ್ನಬಹುದು. ಹಾಗೆಯೇ ಧರ್ಮ ಪ್ರಸರಣೆ ಸಹಾ ಸಮ್ಮಿಳಿತವಾಗಿದೆ. ಪ್ರಪಂಚದ ಎಲ್ಲ ನಾಗರೀಕತೆಗಳ ಸಂಮಿಶ್ರಣ ಇಲ್ಲಿ ಸಿಗುತ್ತದೆ.

ಈ ಹಿನ್ನೆಲೆ ನೋಡಿದರೆ ಪ್ರಜಾಪ್ರಭುತ್ವ ಮತ್ತು ಸಮತಾವಾದಗಳ ಸಮನ್ವಯ ರಚನೆ ಭಾರತಕ್ಕೆ ಇನೆಯೋ ಮತ್ತು ಭಾರತವು ಇದರಿಂದಾಗಿ ಪ್ರಪಂಚಕ್ಕೆ ಮಾದರಿಯಾಗಬಲ್ಲದೋ ಎಂದೆನಿಸುತ್ತದೆ.

ನಾವು ಭಾರತೀಯರು. ಭಾರತೀಯ ಸಂಸ್ಕೃತಿ, ಸಭ್ಯತೆ, ಸಂಪ್ರದಾಯಗಳಿಗೆ ಅನುಗುಣವಾಗಿ ನಮ್ಮ ರಾಜಕೀಯ, ಶಿಕ್ಷಣ, ವ್ಯವಸಾಯ ಪದ್ಧತಿಗಳು ನಮಗೆ ಅವಶ್ಯವೇ ಹೊರತು ಇದಕ್ಕಾಗಿ ಬೇರೆ ದೇಶಗಳ ಅನುಕರಣೆ ನಮಗೆ ಬೇಡ, ನಮ್ಮ ಮೂಲ ನಮಗಿರಲಿ, ದೇಶ, ಕಾಲ, ಪರಿಸ್ಥಿತಿಗೆ ಅನುಸಾರವಾಗಿ ಅದೇ ನಮಗೆ ಮಾರ್ಗದರ್ಶನ ಮಾಡಿಸುತ್ತದೆ.

ಫೋನ್: 19 ಮೆನೇಜಿಂಗ್ ಡೈರೆಕ್ಟರ್
19A ವರ್ಕ್ಸ್ ಮೆನೇಜರ್
80 ಸಂತೆಕಟ್ಟೆ ಆಫೀಸ್

ಸ್ಥಾಪನೆ: 1930

ತಂತಿ: "HANUMANCO"
ಪೊ. ಬಾ. ನ. 27

ದಿ. ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿ ಪ್ರೈವೇಟ್ ಲಿಮಿಟೆಡ್,
ಉಡುಪಿ
(ಮೈಸೂರು ಪ್ರಾಂತ್ಯ)

ಉಡುಪಿ ಕ್ಷೇತ್ರದಿಂದ ಕೊಲ್ಲೂರು ಕ್ಷೇತ್ರಕ್ಕೆ

ಪ್ರತೀನಿತ್ಯವೂ ಉಡುಪಿಯ ಶ್ರೀ ಕೃಷ್ಣನನ್ನು ಸಂದರ್ಶಿಸಲು ಯಾತ್ರಾರ್ಥಿಗಳು ಬರುವಂತೆ ಶ್ರೀಕ್ಷೇತ್ರ ಕೊಲ್ಲೂರಿಗೆ ಪ್ರತಿದಿನವೂ ನೂರಾರು ಯಾತ್ರಾರ್ಥಿಗಳು ದೇಶದ ನಾನಾ ಮೂಲೆಗಳಿಂದ ಬರುತ್ತಿರುವರು. ಅರಣ್ಯ ಮಧ್ಯದ ಪ್ರಕೃತಿ ಸೌಂದರ್ಯದ ನೆಲೆವೀಡಿನಲ್ಲಿ ಭಕ್ತಾದಿಗಳನ್ನು ಆಕರ್ಷಿಸುತ್ತಿರುವ ಈ ಪುರಾತನ ಪುಣ್ಯಕ್ಷೇತ್ರಕ್ಕೆ ಪ್ರತಿಯೊಬ್ಬನೂ ತನ್ನ ಜೀವಮಾನದಲ್ಲಿ ಒಮ್ಮೆಯಾದರೂ ಸಂದರ್ಶನವೀಯಲೇ ಬೇಕು.

ಯಾತ್ರಾರ್ಥಿಗಳ ಸುಖಸೌಕರ್ಯವೇ ನಮ್ಮ ಧ್ಯೇಯ. ನಮ್ಮ ಬಸ್ಸುಗಳು ನಿಮ್ಮ ಸೇವೆಗೆ ಸದಾ ಸಿದ್ಧವಾಗಿರುತ್ತವೆ.

ಹೆಚ್ಚಿನ ಮಾಹಿತಿಗೆ
The Hanuman Transport Co., Private Ltd., Udipi
ಅಥವಾ
The Combined Booking Agency, Udipi, S. K.

The Hanuman Transport Co., Private Ltd.,
POST BOX No. 27, **UDIPI, S. K.**

ತಾಯಿ ಮಕ್ಕಳನು ರಕ್ಷಿಸುವಂತೆ-*

(ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.)

[ಈ ಉಪನಿಷತ್ತು ಪ್ರಶ್ನೋತ್ತರ ರೂಪವಾಗಿರುವುದರಿಂದ ಪ್ರಶ್ನೋಪನಿಷತ್ ಎಂದು ಕರೆಯಲ್ಪಟ್ಟಿತು. ಪಿಪ್ಪಲಾದನೆಂಬ ಆಚಾರ್ಯನಲ್ಲಿಗೆ ಸುಕೇಶ, ಸತ್ಯಕಾಮ, ಸೌರ್ಯಾಯಣಿ, ಕೌಸಲ್ಯ, ಭಾರ್ಗವ, ಕಬಂಧಿ–ಇವರು ಬಂದು ಪ್ರಶ್ನೆಗಳನ್ನು ಕೇಳುವರು. ಅವರ ಪ್ರಶ್ನೆಗಳಿಗೆ ಪಿಪ್ಪಲಾದನು ಉತ್ತರ ಕೊಡುವನು. ಕಬಂಧಿಯು ಜಗತ್ತಿಗೆ ಮೂಲಕಾರಣವಾವುದೆಂಬ ಮೊದಲನೆಯ ಪ್ರಶ್ನೆಯನ್ನು ಕೇಳಿದನು. ಪ್ರಜಾಪತಿಯೇ ಸೃಷ್ಟಿಯ ಮೂಲ–ಅವನು ರಯಿ–ಪ್ರಾಣಗಳೆಂಬ ಮಿಥುನವನ್ನು ಸೃಷ್ಟಿಸಿದನು. ಅವರೆರಡರ ಸಂಯೋಗದಿಂದ ವಿವಿಧ ವಸ್ತುಗಳು ಹುಟ್ಟಿದುವು ಎಂದು ಆಚಾರ್ಯನು ಉತ್ತರಿಸಿದ ಮೇಲೆ, ಭಾರ್ಗವವೈದರ್ಭಿಯು, ದೇಹದಲ್ಲಿರುವ ಇಂದ್ರಿಯಗಳಿಗೂ ಮುಖ್ಯಪ್ರಾಣನಿಗೂ ಇರುವ ಸಂಬಂಧದ ಕುರಿತು ಪ್ರಶ್ನಿಸಲು, ಇಲ್ಲಿ ಸಮಸ್ತ ಇಂದ್ರಿಯಗಳೂ ಪ್ರಾಣನು ಎದ್ದಾಗ ಏಳುವುದೂ, ನಿಂತಾಗ ನಿಲ್ಲುವುದೂ ಆಗಲು, ಇಂದ್ರಿಯಗಳಿಗೆಲ್ಲಾ ಪ್ರಾಣನೇ ಶ್ರೇಷ್ಠನೆಂದು ಪ್ರಾಣನನ್ನು ಸ್ತುತಿಸುವ ಕಥೆ ಹೇಳಿದೆ.]

ಮುಂತೆ, ಭಾರ್ಗವನು ವೈದರ್ಭಿ ಕೇಳಿದ ನಿಂತು:
"ಭಗವಂತ, ಪೇಳೆನಿತು ದೇವತೆಗಳು—
೧ ಪ್ರಜೆಯನ್ನು ಧರಿಸಿ ಕೊಂಡಿರ್ಪರಾರು ಸಮಂತು
ಬೆಳಗಿಪರಿವರೊಳಾರು ಶ್ರೇಷ್ಠ ಹೇಳು."

ಪಿಪ್ಪಲಾದಂಪೇಳ್ದನವಗೆ: "ಈ ಆಕಾಶ —
ದೇವ ಗಾಳಿಯು ಬೆಂಕಿ ನೀರು ನೆಲವು,
೨ ವಾಙ್ಮನಸು ಕಣ್ಣು ಕಿವಿಗಳು ಬೆಳಗಿ ಪೇಳಿದರು:
'ನಾವೀಶರೀರವ ನೆತ್ತಿ ಧರಿಸುವೆವು'

ಅವರೊಳ್ ವರಿಷ್ಠನಹವಾಯುವೆಂದನು: 'ಮೋಹ—
ಮಂಬಿಡಿರಿ, ನಾನೆನ್ನನು ಪಂಚಧಾ
೩ ಹಂಚುತ್ತಲೀ ಶರೀರವನೆತ್ತಿ ಹಿಡಿದಿಹೆನು'
ಎಂದುದನ್ನವರು ನಂಬರು ಸರ್ವಥಾ.

ಅಭಿಮಾನದಿಂ ವಾಯು ಮೇಲಕೆದ್ದಂತೆ ಗೈ—
ದೊಡೆ ಆತನೊಡನಿತರರೆಲ್ಲರೆದ್ದರು, ಮೇಣ
ವಂ ನಿಂತೊಡೆಲ್ಲ ನಿಂತರು, ಎಂತೆನಲ್ಕೆ ಜೇ—
ನ್ನೊಣಗಳರಸನ ಕೂಡೆ ನೊಣಗಳೆಲ್ಲವುಯೇಳು—
ತಿಹವೆಂತೊ, ಮೇಣದುವೆ ನಿಂತೊಡೆಲ್ಲವು ನಿಲ್ಲು—
೪ ತಿಹವೆಂತೊ;—ಅಂತೆ—ವಾಙ್ಮನಸು ಕಣ್ ಕಿವಿಗಳಿವ
ರೆಲ್ಲ ಪ್ರೀತ ಪ್ರಾಣವನ್ನಿಂತು ನುತಿಸಿದರು:

'ಇವನಗ್ನಿಯಾಗಿ ಸುಡುತಿಹನು, ಸೂರ್ಯನುಮೀತ
ಪರ್ಜನ್ಯನಿವನು ಮಘವಾನ ನೀತ;
೫ ಇವನು ವಾಯುವು ಪೃಥಿವಿಯಿವನು ರಯಿದೇವತಾ—
ನಿವನು ಸದಸತ್ತು ಮೇಣ ಮೃತನೀತ

'ರಥನಾಭಿಯೊಳ್ಳರಗಳೆಂತು ಸೇರಿಹವಂತೆ
ಪ್ರಾಣದೊಳಗೆಲ್ಲವು ಪ್ರತಿಷ್ಠಿಸಿಹವು;
೬ ಋಕ್ಕುಗಳ್ ಯಜುಗಳಂತೆಯೆ ಸಾಮಗಳು ಯಜ್ಞ
ಕ್ಷತ್ರ ಬ್ರಹ್ಮಂ ಕೂಡ ಕೂಡಿರುವುವು.

ನೀಂ ಪ್ರಜಾಪತಿಯಾಗಿ ಗರ್ಭದಲಿ ಚರಿಸುತಿಹೆ
ನೀಂ ಪುಟ್ಟುತಿಹೆಯುತ್ತೆ ಹೇ ಪ್ರಾಣನೆ!
೭ ಪ್ರಾಣಂಗಳೊಡನೆ ಕೂಡಿರುವ ನಿನಗೆಯೆ ಬಲಿಯ
ನೊಪ್ಪಿಸುವರೀ ಪ್ರಜೆಗಳರ್ತಿಯಿಂದೆ.

'ದೇವತೆಗಳಿಗೆ ಹವಿಸ್ಸಂಕೊಂಡು ಪೋಗುತಿಹೆ
ಪಿತೃಗಳಿಗೆ ಪ್ರಥಮಸ್ವಧಾ ಪ್ರಾಪಕಂ;
೮ ಅಂಗಿರಸರೆನಿಪಥರ್ವರ್ಷಿಗಳಿಗೆಯು ನೀನೆ
ಚರಿತವಾಗಿರ ತಿರ್ಪೆಯಲ್ತೆ ಸತ್ಯಂ.

'ಹೇ ಪ್ರಾಣ! ನೀನಿಂದ್ರ, ನಹೆ, ತೇಜದಿಂ ರುದ್ರ
ನಾಗಿರುವೆ, ಸುತ್ತೆ ನೀಂ ಪರಿರಕ್ಷಿತೆಂ;
೯ ನೀಂ ಸೂರ್ಯನಾಗಿ ಚರಿಸುವೆ ಯಂತರಿಕ್ಷದಲಿ
ನೀನೆ ಜ್ಯೋತಿಗಳಿಂಗೆ ಪತಿಯಾದವಂ.
ಎಂದಿಂಗೆ ನೀನು ಪರ್ಜನ್ಯನಾಗುತೆ ಮಳೆಯ
ಸುರಿಸುತಿಹೆಯೆಂದಿಗೀ ಪ್ರಜೆಗಳೆಲ್ಲ
೧೦ ಬದುಕುವರು; ಬಯಸಿದನ್ನ ತನ್ನ ದೊರಕುವುದೆಂದು
ಆನಂದ ರೂಪರಾಗಿರ್ಪರಲ್ಲ.

'ವ್ರಾತ್ಯನೈ ನೀನು ಹೇ ಪ್ರಾಣ! ನೀನೇಕರ್ಷಿ
ಭುಜಿಸುವವ ನೀನು ವಿಶ್ವದ ಸತ್ಪತಿ,
೧೧ ನಾವು ಕೊಡುವೆವು ಹವಿಸ್ಸುಗಳನ್ನು, ಹೇ ಮಾತ—
ರಿಶ್ವ! ನೀನೇ ನಮಗೆ ತಂದೆತಾಯಿ.

'ಆವೊಂದು ನಿನ್ನ ತನು ವಾಕ್ಕಿನಲಿ ಶ್ರೋತ್ರದಲಿ
ಚಕ್ಷುಸ್ಸಿನಲ್ಲಿ ಕೂಡಿಹುದೊ ಕೂಡ;
೧೨ ಆವುದನು ಸಂತತವದಾಗಿಹುದೊ ಮನಸಿನಲಿ
ಮಾಡದನು ಶಿವವಾಗಿ, ಹೋಗ ಬೇಡ.

'ಎಲ್ಲವಿದುಯಿಹುದು ಪ್ರಾಣನವಶದಿ, ತ್ರಿದಿವದಲಿ
ಇರ್ಪುದಿರುತಿಹುದು ಪ್ರಾಣನಲಿ ನೋಡು.
ತಾಯಿಮಕ್ಕಳನು ರಕ್ಷಿಸುವಂತೆ ಕರುಣದಲಿ
ಕಾಪಾಡು, ಶ್ರೀ ಪ್ರಜ್ಞೆಗಳನು ನೀಡು'.

---

*ಪ್ರಶ್ನೋಪನಿಷತ್ ಎರಡನೆಯ ಪ್ರಶ್ನೆ.

ಅಮೇರಿಕದ ಪ್ರಜಾಜನರ ಅರ್ಥಜೀವನ

(೧೧ನೇ ಪುಟದಿಂದ)

ನಾಕು. ಆದರೆ ೫ ಲಕ್ಷ ವರಮಾನವುಳ್ಳವರು ಅರ್ಧವಾಸಿ ಹಣವನ್ನು ಸರ್ಕಾರಕ್ಕೆ ಒಪ್ಪಿಸಲೇಬೇಕು.

ತೆರಿಗೆಯ ನೀತಿಯಿಂದ ನಿಮ್ನವರಮಾನದ ಜನವರ್ಗಕ್ಕೆ ತುಂಬಾ ಉಪಕಾರವಾಗಿರುವುದರಿಂದ ಅವರ 'ವಾಸ್ತವಿಕ ವರಮಾನ' (Real Income)ವು ಲೆಕ್ಕದ ಪುಸ್ತಕದಲ್ಲಿ ನಮೂದಿಸಲ್ಪಟ್ಟಿರುವುದಕ್ಕಿಂತ ಹೆಚ್ಚೇ ಆಗಿರುತ್ತದೆ. ಸ್ತ್ರೀಯರಿಗೆ ಉದ್ಯೋಗದ ಅವಕಾಶ ಹೆಚ್ಚಿರುವುದರಿಂದ ಕುಟುಂಬದ ವರಮಾನಕ್ಕೆ ಅವರೂ ಕಾಣಿಕೆ ತೆರಬಲ್ಲರು. ಆರ್ಥಿಕ ದುರ್ದೆಸೆಗೆ ತುತ್ತಾದ ಜನರಿಗೆ ಕೇಂದ್ರ ಸರ್ಕಾರದ ನೇರವಾದ ಸಹಾಯವೂ ಈಗ ಬೆಳೆದಿದೆ. ಉದಾಹರಣೆಗೆ ೧೯೪೦ ಮತ್ತು ೧೯೫೩ ಈ ಎರಡು ವರ್ಷಗಳನ್ನು ತುಲನೆಮಾಡಿದರೆ ವೃದ್ಧಾಪ್ಯದ ಜನರಿಗೆ ಸರ್ಕಾರವು ಮುಟ್ಟಿಸುವ ಸಹಾಯವು ಇಮ್ಮಡಿಯಾಗಿ ವಿಸ್ತರಿಸಿದೆ. ೧೯೪೦ರಲ್ಲಿ ಈ ಯೋಜನೆಗೆ ಒಳಗಾದವರು 3½ ಕೋಟಿ ಜನ; ೧೯೫೩ರಲ್ಲಿ ಸುಮಾರು ೭ ಕೋಟಿ ಜನ. ಸಾಮಾನ್ಯ ಶಿಕ್ಷಣ, ವೃತ್ತಿ ಶಿಕ್ಷಣ, ಸಾರ್ವಜನಿಕ ಆರೋಗ್ಯ, ವಿನೋದವಿಹಾರ, ಕಡಿಮೆ ಖರ್ಚಿನ ಮನೆಗಳ ನಿರ್ಮಾಣ ಮುಂತಾದ ವಿಷಯಗಳು ಸರಕಾರವು ನೀಡುವ ಅಪ್ರತ್ಯಕ್ಷ ಸಹಾಯದಿಂದ ಜನರ ಆರ್ಥಿಕ ಬಲವು ಖಂಡಿತವಾಗಿಯೂ ವೃದ್ಧಿಯಾಗಿದೆ. ಸರಕಾರದೊಡನೆ ಸಹಕರಿಸುವ ಖಾಸಗೀ ಪ್ರಯತ್ನಕ್ಕೆ ಅಮೇರಿಕದ ಅರ್ಥ ಮಂಡಲದಲ್ಲಿ ವಿಶಿಷ್ಟ ಸ್ಥಾನವಿರುವುದನ್ನು ನಾವಿಲ್ಲಿ ಮರೆಯ ಕೂಡದು. ಏಕೆಂದರೆ ಶಿಕ್ಷಣ, ಆರೋಗ್ಯ, ಸಾಹಿತ್ಯ ಮತ್ತು ಕಲೆ, ಸಮಾಜ ಕಲ್ಯಾಣ, ಧರ್ಮ, ಸಂಶೋಧನೆ ಮುಂತಾದ ನಾನಾ ಕ್ಷೇತ್ರಗಳಿಗೆ ಖಾಸಗೀ ವಿಭಾಗವು ೧೯೫೨ನೆಯ ಸಾಲಿನಲ್ಲಿ ಸುಮಾರು ೪೦೦೦ ಕೋಟಿ ರುಪಾಯಿಗಳಷ್ಟು ನೆರವನ್ನು ನೀಡಿದೆ.

ಅಮೇರಿಕದ ಅರ್ಥ ಮಂಡಲವು ಎರಡನೇ ಮಹಾ ಯುದ್ಧಕ್ಕೆ ಪೂರ್ವದಲ್ಲಿ ಅನುಭವಿಸಿದಂಥ ಏರಿಳಿತಗಳನ್ನು ಇನ್ನು ಕಡ್ಡಾಯವಾಗಿ ಅನುಭವಿಸಬೇಕಾಗಿಲ್ಲವೆಂದು ಅಲ್ಲಿನ ಅರ್ಥ ಶಾಸ್ತ್ರಜ್ಞರು ವಾದಿಸುವರು. ಹಿಂದೆ ವ್ಯಾಪಾರ ವಾಣಿಜ್ಯ ಕ್ಷೇತ್ರದಲ್ಲಿ ಗಾಬರಿಯುಂಟಾದೊಡನೆ ಬ್ಯಾಂಕಿನಲ್ಲಿ ಡಿಪಾಸಿಟ್ಟಿರುವ ಜನರೆಲ್ಲ ಸಾಲು ಹಿಡಿದು ತವೇ ಹಣವನ್ನು ವಾಪಸು ಕೊಳ್ಳುವ ಭರದಲ್ಲಿ ಅರ್ಥ ಮಂಡಳವನ್ನು ಕಲಕೆಳಗುಮಾಡುವ ಪ್ರಸಂಗವಿತ್ತು. ನಿರುದ್ಯೋಗಿಗಳಾದವರ ಕಡಿಮೆ ವರಮಾನ—ಕಡಿಮೆ ವೆಚ್ಚದ ದೆಸೆಯಿಂದ ಪೇಟೆಯ ಸರಕುಗಳಿಗೆ ಗಿರಾಕಿ ಕಡಿಮೆಯಾಗಿ ಔದ್ಯಮಿಕ ಉತ್ಪಾದನೆ ಕುಂಟುತ್ತಿತ್ತು. ತೆರಿಗೆಯ ಧೋರಣೆಯಿಂದಲೂ ಅರ್ಥ ಮಂಡಲದ ಮೇಲೆ ವಿಶೇಷ ಪರಿಣಾಮವಾಗುತ್ತಿರಲಿಲ್ಲ. ಈಗ ಬ್ಯಾಂಕಿನಲ್ಲಿರುವ ಡಿಪಾಸಿಟನ್ನು ವಿಮೆ ಇಳಿಸುವ ಕ್ರಮದಿಂದಾಗಿ ಸಾರ್ವತ್ರಿಕ ಗಾಬರಿಗೆ ಅವಕಾಶವೇ ಇಲ್ಲದಂತಾಗಿದೆ. ನಿರುದ್ಯೋಗಿಗಳಿಗೆ ನಿರುದ್ಯೋಗ ಕಾಲದಲ್ಲಿ ಸರ್ಕಾರವು ಒದಗಿಸುವ ಧನ ಸಹಾಯದಿಂದ ಬೇಡಿಕೆಯಲ್ಲಿಯೂ ಗಾಬರಿಪಡುವಂಥ ವ್ಯತ್ಯಾಸಗಳಾಗುವುದಿಲ್ಲ. ತೆರಿಗೆಯ ಧೋರಣೆಯನ್ನು ಪೂರ್ಣೋದ್ಯೋಗದ ಗುರಿಗೆ ಹೂಡುವುದು ಈಗ ಸರ್ವಮಾನ್ಯವಾಗಿದೆ. ಕಾಲದುದಕ್ಕೆ ಸರ್ಕಾರವು ಆರ್ಥಿಕ ಕ್ಷೇತ್ರದಲ್ಲಿ ಹಸ್ತಕ್ಷೇಪಮಾಡಿ ಸಾರ್ವಜನಿಕ ಕಾಮಗಾರಿಗಳನ್ನು ಆರಂಭಿಸಿ ನಾಡಿನ ವರಮಾನವನ್ನು ಇಳಿಯಲು ಬಿಡದಂತೆ ಏರ್ಪಾಡು ಮಾಡಲು ಸದಾ ಸಿದ್ಧವಾಗಿದೆ. ಒಟ್ಟಿನಲ್ಲಿ ಅಮೇರಿಕನ್ ಅರ್ಥ ಮಂಡಲದಲ್ಲಿ ಲಾಭದ ಉದ್ದೇಶಕ್ಕೆ ಅವಕಾಶವಿರುವುದರಿಂದದನ್ನು ಬಂಡವಾಳಶಾಹಿ ಅರ್ಥ ಪದ್ಧತಿ ಎಂದು ಕರೆದರೂ, ಲಾಭಬಡುಕತನವನ್ನು ನಿಯಂತ್ರಿಸುವ ಸರ್ವಾಧಿಕಾರವೂ ಪ್ರಜಾಜನರ ಮತ್ತು ಅವರು ರಚಿಸುವ ಸರ್ಕಾರದ ಕೈಯಲ್ಲಿ ಇರುವುದರಿಂದ ಬೇಕಾದಾಗ, ಬೇಕಾದ ಪ್ರಮಾಣದಲ್ಲಿ ಸಮಾಜ ಕಲ್ಯಾಣಕ್ಕಾಗಿ ವ್ಯಕ್ತಿ ಸ್ವಾರ್ಥವನ್ನು ಸಂಯಮಿಸುವುದು ಸಾಧ್ಯವಾಗಿದೆ. ಸರ್ಕಾರದ ನಾನಾ ಮುಖ ಸೇವೆಗಳನ್ನು ನೋಡಿದರೆ ಅಮೇರಿಕದಲ್ಲಿಯೂ ಸಮಾಜವಾದವು ಕಾರ್ಯ ಪ್ರವೃತ್ತವಾಗಿರುವುದನ್ನು ನಾವು ನೋಡಬಹುದು.

(Challenge ಪತ್ರಿಕೆಯ ಲೇಖನದ ಆಧಾರದಿಂದ).

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—6

ನವಯುಗ ಪ್ರೆಸ್, ಉಡುಪಿ

ಭಾರತ ಗಣರಾಜ್ಯ ಮತ್ತು ಕಾಂಗ್ರೆಸ್

(೧೦ನೇ ಪುಟದಿಂದ)

ಭಾವನೆಯಿಲ್ಲದೆ, ನೆಹರೂರವರ ಮೇಲೆ ಸಂಪೂರ್ಣ ವಿಶ್ವಾಸತಾಳಿದ್ದಾರೆ, ಭಾರತೀಯರು.

ಆದರೆ, ಕಾಂಗ್ರೆಸ್ಸನ್ನು ಸಚೇತನಗೊಳಿಸಲು ಸಮರ್ಥರಾದರೂ ಶ್ರೀ ನೆಹರೂರವರಿಗೆ ತಮ್ಮಿತರ ಕಾರ್ಯಬಾಹುಳ್ಯದಿಂದ ಆ ಕಡೆಗೆ ಗಮನಹರಿಸುವುದು ಕಷ್ಟಪ್ರದವಾಗಿದೆ. ತನ್ನ ಮಂತ್ರಿಮಂಡಲಿಯ ಬಲಗೈ ಬಂಟರಂತಿದ್ದ ಸರದಾರ ವಲ್ಲಭ ಭಾಯಿ ಪಟೇಲ, ರಫಿ ಅಹಮದ ಕಿಡ್ವಾಯಿ, ಮೌಲಾನಾ ಅಬ್ಬುಲ್ ಕಲಮ್ ಅಜಾದರು ಈ ಕಾಲದಲ್ಲಿ ಅವರ ನೆರವಿಗೆ ಸಿಗುವಂತಿಲ್ಲ. ಹೀಗಾಗಿ ಹಿರಿಯ ಬಡ ರಾಷ್ಟ್ರ ಭಾರತದ ಬಗ್ಗೆ ಅಹೋರಾತ್ರಿ ಚಿಂತಿಸುವ ನೆಹರುವಿಗೆ ಅನ್ಯ ಕ್ಷೇತ್ರದ ಕಡೆಗೆ ನೋಡಲು ಸಾಕಷ್ಟು ಅವಕಾಶವೆಲ್ಲಿ? ಆದರೆ, ಶ್ರೀ ನೆಹರೂರವರು ಕಾಂಗ್ರೆಸ್ಸಿನ ಬಲಸಂವರ್ಧನೆಯ ಕಾರ್ಯದತ್ತ ಕಣ್ಣರಳಿಸಿ ನೋಡದೆ ಹೋದರೆ, ಆಗ ಕಾಂಗ್ರೆಸ್‌ನ ಶಕ್ತಿಯು ಮತ್ತಷ್ಟು ಕುಂಠಿತವಾಗುತ್ತ ಹೋಗುವುದು ಖಂಡಿತ; ಇದರಿಂದ ಕಾಂಗ್ರೆಸ್ ತನ್ನ ಸ್ಥಾನಮಾನಗಳಿಗೆ ಚ್ಯುತಿಯನ್ನು ತಂದುಕೊಳ್ಳುವುದು ಮಾತ್ರವಲ್ಲದೇ ತನ್ಮೂಲಕ ದೇಶದ ನಾಯಕತ್ವವು ಅನ್ಯ ಸಂಕುಚಿತ ಧ್ಯೇಯವಾದಿಗಳ ಕೈಗೂ ಕ್ರಮೇಣ ಹೋಗುವುದು ಅಥವಾ ಅರಾಜಕವಾಗುವುದು ಅಸಂಭವವಲ್ಲ—ಹೀಗಾದಲ್ಲಿ ನಮ್ಮ ರಾಮರಾಜ್ಯದ ಕನಸು ಕನಸಾಗಿಯೇ ಉಳಿದು, ಬಡತನಾದಿಗಳು ಬಲಿದು ದೇಶವು ಪತನದತ್ತ ಧಾವಿಸಿ ಕೊನೆಗೆ ವಿದೇಶೀಯರ ಪಾತಾಳಕ್ಕೆ ಕುಸಿಯುವುದೂ ಸಂಭವನೀಯವೇ. ಆದುದರಿಂದ ಕಾಂಗ್ರೆಸ್‌ನ ಬಲಸಂವರ್ಧನೆಯಿಂದಲೇ ಭಾರತದ ಕೀರ್ತಿಜ್ಯೋತಿಯುಳಿಯಬಲ್ಲುದು; ವಿಶ್ವಮಾನ್ಯವಾಗಿ ಮೆರೆದಾಡಿ ಆಚಂದ್ರಾರ್ಕ ಚಿರಸ್ಥಾಯಿಯಾಗಿ ಬಾಳಬಲ್ಲುದು.

ಆದರ್ಶ ಜನಪ್ರಿಯ ನಾಯಕತನದ ಅಭಾವವಿರುವಂತೆ ಕಾಂಗ್ರೆಸ್ಸಿನಲ್ಲಿ ವಿಚಾರಕರ ಕೊರತೆಯೂ ನೆಲೆಯೂರಿದೆ ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕಾನೇಕ ವಿಚಾರಕರೂ ಉದಾರರೂ ನಿರ್ದಲೀಯರಾಗಿದ್ದರು. ಸ್ವಾತಂತ್ರ್ಯ ದೊರೆತನಂತರ ದೇಶದ ಸಂವಿಧಾನದ ರಚನೆಯ ಕಾಲದಲ್ಲಿ ಕಾಂಗ್ರೆಸಿಗರು ಇಂತಹರ ಅಮೂಲ್ಯ ವಿಚಾರಗಳನ್ನು ಅಳವಡಿಸಿಕೊಂಡರು. ಆಡಳಿತೆಯ ಕಾರ್ಯದಲ್ಲೂ ಅವರ ಸಹಯೋಗವನ್ನು ದೂರಮಾಡಲಿಲ್ಲ. ಅವರ ಪಕ್ಷದೊಳಗೆ ಅವರನ್ನು ಸೇರಿಸಿಕೊಳ್ಳುವ ಪ್ರಯತ್ನ ಮಾತ್ರ ಮಾಡಲಿಲ್ಲ.

ಇದರಿಂದಾಗಿ ಕೆಲವಾರು ಸಂದರ್ಭದಲ್ಲಿ ನಿರ್ದಿಷ್ಟವಾದ ಒಂದು ಪರಿಭಾಷೆಯನ್ನು ಕಾಂಗ್ರೆಸ್ ಕಾರ್ಯಕರ್ತರು ಮಾಡಲು ಅಸಮರ್ಥರಾದರು. ಈ ನಡುವೆ "ಎಳೆ ನೆತ್ತರಿ"ನವರನ್ನೂ ಕಾಂಗ್ರೆಸ್ಸಿನೊಳಗೆತರುವ ಪ್ರಯತ್ನವೂ ನಡೆಯಿತು. ಆದರೆ, ಅದೂ ಸಾಕಷ್ಟು ಪ್ರಭಾವಶಾಲೀ ಪರಿಣಾಮವನ್ನೀಯುವುದೆಂಬ ವಿಶ್ವಾಸವುದಿಸಲಿಲ್ಲ.

ಕಾಂಗ್ರೆಸ್ಸು ತಾನು ಅನುಷ್ಠಾನಕ್ಕೆ ತರುವ ಯೋಜನೆಗಳನ್ನು ರಾಷ್ಟ್ರದ ಹಿತದೃಷ್ಟಿಯಿಂದ ನೋಡುವಷ್ಟು ವಿಚಾರವಂತರಿಂದ ಇಂದು ಕೂಡಿಕೊಂಡಿಲ್ಲ. ಭೂಸುಧಾರಣೆಯು ಒಂದು ಉದಾಹರಣೆಯನ್ನೇ ಇಲ್ಲಿ ಉದಾಹರಿಸಬಹುದು. ಗ್ರಾಮ ಪಂಚಾಯತುಗಳ ಅಡಿಯಲ್ಲಿ ಸಹಕಾರೀ ಸಂಘಗಳ ಸಹಾಯದಿಂದ ನಡೆಸಲಾಗುವ ಸಹಕಾರೀ ಪದ್ಧತಿಯ ಕೃಷಿ ವಿಧಾನ; ಇದಕ್ಕಾಗಿ, ಭೂಮಾಲಿಕರಲ್ಲಿರಬಹುದಾದ ಭೂಮಿಗೆ ಮಿತಿ ಹೇರಿ, ಉಳಿದುದನ್ನು ಸರಕಾರ ಹಸ್ತಾಂತರಗೊಳಿಸುವುದು ದೇಶದ ಪ್ರಕೃತದ ಸ್ಥಿತಿಯಲ್ಲಿ ಸರಿಯೆಂದು ಯಾರೂ ಹೇಳಲಾರರು. ಸಹಕಾರಿ ಪದ್ಧತಿಯು ಚೀನ, ಜಪಾನುಗಳಂತಹ ರಾಷ್ಟ್ರಗಳಲ್ಲಿ ಸಂಪೂರ್ಣ ಯಶಸ್ವಿಗೊಂಡಿದ್ದಾಗ, ನಮ್ಮ ದೇಶದಲ್ಲಿ ಅದು ಯಶಸ್ವಿಯಾದೀತೆಂಬ ವಿಶ್ವಾಸ ತೀರ ಅತ್ಯಲ್ಪ. ದೇಶದಲ್ಲಿ ಆಹಾರ ಸ್ಥಿತಿಯು ಕಂಗೆಟ್ಟು ಹೋಗುತ್ತಿರುವ ಈ ವೇಳೆಯಲ್ಲಿ ಇಂತಹ ಭಯಾನಕ ಸುಧಾರಣೆಗಳನ್ನು ತಂದರೆ, ಅದರಿಂದ ಹಾನಿಯಲ್ಲದೆ ಮತ್ತೇನೂ ಇಲ್ಲ ಎಂಬುದು ನಿರ್ವಿವಾದ. ರಾಷ್ಟ್ರದ ಪ್ರತ್ಯೇಕ ನಿವಾಸಿಯ ಆದಾಯದ ಮೇಲೂ ಕನಿಷ್ಠ ಮತ್ತು ಗರಿಷ್ಠ ಮಿತಿಯನ್ನು ಹೊರಿಸದೆ ಕೇವಲ ಒಂದು ವಿಭಾಗಕ್ಕೆ ಮಾತ್ರ ಗರಿಷ್ಠ ಮಿತಿಯನ್ನು ಅನ್ವಯಿಸುವುದೂ ಒಂದು ಅನ್ಯಾಯವೇ. ಅಂತೆಯೇ ಯೋಜನೆಗಳಲ್ಲಿ ಕೋಟಿಗಟ್ಟಲೆ ವೆಚ್ಚವಾಗುವುದಾದರೂ ಜನತೆಗೆ ಅದರ ಗಣನೆಯೇ ಇಲ್ಲದೆ ಇರುವುದೂ ಕಾಂಗ್ರೆಸ್‌ನ ಮೇಲೆ ಜನತೆಯ ವಿಶ್ವಾಸ ಮಾಯುಲೊಂದು ಕಾರಣ. ಧನಿ-ಒಕ್ಕಲುಗಳಲ್ಲಿ ಸಮರಸ ಭಾವನೆಯನ್ನು ಹುಟ್ಟಿಸಲು ನ್ಯಾಯ ಗೇಣಿಗೆ ಸಂಬಂಧಪಟ್ಟ ಶಾಸನವನ್ನು ತಯಾರಿಸಬಹುದು; ಒಕ್ಕಲುಗಳ ಹಿತರಕ್ಷಣೆಯನ್ನು ಮಾಡಬಹುದು. ಯೋಜನೆಯಲ್ಲಿ ಪೋಲು ಹೋಗುವುದು; ಶಾಸನಿಕ ಪ್ರಣಾಳಿಗಳಲ್ಲಿ ಕುಂದು ಕೊರತೆಗಳಿರುವುದನ್ನು ತಡೆಹಿಡಿದು, ತಮ್ಮ ಡೊಂಕನ್ನು ತಿದ್ದಿಕೊಳ್ಳಬೇಕು. ಚುನಾವಣೆಯ ಸಮಯದಲ್ಲಿ ಮಾತ್ರ ಮತದಾರರ ಸುಖ ದುಃಖವನ್ನು ಒಂದು ಕಿವಿಯಿಂದ ಕೇಳಿ ಇನ್ನೊಂದರಿಂದ ಬಿಡುವ ಬದಲು ಜನತೆ ಮತ್ತು ಕಾರ್ಯಕರ್ತರ ನಡುವಿರುವ ಶಿಥಿಲಗೊಂಡ ಸಂಬಂಧವನ್ನು ಬಿಗಿಗೊಳಿಸಬೇಕು. ಜನತೆಯ ಪ್ರೀತಿ ವಿಶ್ವಾಸಗಳನ್ನು ಸಾತ್ವಿಕ ವಿಧಾನಗಳಿಂದ ಗಳಿಸಬೇಕು. ಆಗ ಮಾತ್ರ ಕಾಂಗ್ರೆಸ್ಸು ಸುಸಂಗಠಿತವಾಗುವುದು ಸಾಧ್ಯ.

ರಾಷ್ಟ್ರದ ಹಿತದೃಷ್ಟಿಯಿಂದ ಹಾಗೂ ರಾಷ್ಟ್ರಾಭಿವೃದ್ಧಿಯ ಕಾರಣದಿಂದ ಇನ್ನು ಕೆಲವಾರು ದಶಕಗಳವರೆಗೆ ಇತರ ರಾಜಕೀಯ ಪಕ್ಷಗಳು ಸ್ವತಂತ್ರ ನಿಲುಮೆಯನ್ನು ತಾಳಿ ದೃಢವಾಗಲಾರವಾದುದರಿಂದ, ಕಾಂಗ್ರೆಸ್ಸೇ ಗಳಿಸಿದ ಸ್ವಾತಂತ್ರ್ಯವನ್ನುಳಿಸಿ ನಮ್ಮ ಮೇಲ್ಮೆಯನ್ನು ಬಯಸಿ ಅದಕ್ಕಾಗಿ ದುಡಿಯಬೇಕಾಗಿದೆ. ಹಾಗಿರುವಾಗ, ಎಲ್ಲರಿಗೂ ಮಾರ್ಗದರ್ಶನ ಮಾಡಲಿರುವ ಕಾಂಗ್ರೆಸ್ಸು ಶಿಥಿಲಗೊಳ್ಳುತ್ತ ಹೋದಲ್ಲಿ ರಾಷ್ಟ್ರದ ಭವಿಷ್ಯ ಅಂಧಕಾರಮಯವಾಗುವುದು ಕಾಂಗ್ರೆಸಿಗರು ಈ ವಿಷಯವನ್ನು ತಿಳಿದೂ ತಿಳಿಯದ ಅಂಧ ಬುದ್ಧಿಹೀನರಂತೆ ವರ್ತಿಸಿದರೆ, ಆಗ ಅವರು ದೇಶವನ್ನು ಪತನದತ್ತ ಒಯ್ಯುತ್ತಿರುವರೆಂದು ಹೇಳಲೇ ಬೇಕಾಗುವುದು. ಹಾಗಾದಾಗ, ಈಗ ನಾಯಕ ಶಿರೋಮಣಿಗಳು ದೇಶ ಸೇವಕರು ಎಂಬಿತ್ಯಾದಿ ಉಪನಾಮಗಳಿಗೆ ಪಾತ್ರರಾದ ಮಹಾನೇತಾರರು ದೇಶವನ್ನು ಅಧಃಪತನದತ್ತ ಒಯ್ದರೆಂದು ಮುಂದಿನ ಜನಾಂಗ ದೂರಿಕೊಂಡು ಅವರ ಮುಖಕ್ಕೆ ಮಸಿ ಬಳೆಯದಿರದು. ಆದುದರಿಂದ ನಮ್ಮ ಕಾಂಗ್ರೆಸ್ ನಾಯಕರು ಏಕತೆ, ಸ್ನೇಹ ಸೌಹಾರ್ದ, ಜನಪ್ರೇಮ, ಜನತಾ ಸಂಪರ್ಕ ರಾಷ್ಟ್ರಾಭಿವೃದ್ಧಿ ಮೊದಲಾದ ಮೂಲಭೂತ ತತ್ವಗಳನ್ನು ಅನುಷ್ಠಾನಕ್ಕೆ ತಂದು, ತಮ್ಮ ಪ್ರತಿಕಾರ್ಯಾರಂಭಕ್ಕೂ ಮೊದಲೇ ಅದರ ಲೋಪದೋಷ, ಗುಣಾಗುಣ, ಲಾಭಾಲಾಭಾದಿಗಳನ್ನು ಸರಿಯಾಗಿ ವಿವೇಚಿಸಬೇಕು; ಆದರೆ, ಜನತೆಯ ಪ್ರೀತಿ ವಿಶ್ವಾಸಕ್ಕೆ ಮಾತ್ರ ಎರವಾಗಬಾರದು.

ದೇಶ ಉನ್ನತಿಗಾಗಿ ಕಾಂಗ್ರೆಸ್ಸಿಗರೆಲ್ಲರೂ ಒಮ್ಮತದಿಂದ ಪ್ರತಿಜ್ಞೆತೊಟ್ಟು, ಉತ್ಥಾನಪಥದಲ್ಲಿ ಪಾದಾರ್ಪಣ ಮಾಡಬೇಕು; ಕಾಂಗ್ರೆಸ್ಸನ್ನು ಭಾರತದ ಭವಿಷ್ಯಕ್ಕಾಗಿ ಸುದೃಢವಾಗಿಸಿ ಉಳಿಸಬೇಕು.

|| ಜೈ ಹಿಂದ್ ||

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ
ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಕಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

BISON BRAND
QUALITY PAPERS
Manufacturers:
THE MYSORE PAPER MILLS LTD.,
BHADRAVATI.
Distributors:
SCHOOL BOOK COMPANY
CAR STREET
Telephone: 229 Telegrams: SCHOOL BOOK
MANGALORE.
Branch at
VISHWA BHAVAN, HAMPANKATTA,
MANGALORE.

ಒಂದು ಸುಸಂಧಿ
ಮೂರಾಣೆಯಿಂದ ಹಿಡಿದು, ಎರಡು ರೂಪಾಯಿ ಬೆಲೆ ವರೆಗಿನ ಅಂತರಂಗ ಪ್ರಕಾಶನದ ನಾನಾ ವಿಧದ 34 ರೂಪಾಯಿಯ 90 ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ಬರೇ ರೂ.27/-ಕ್ಕೆ ಕೊಡಲಾಗುವುದು. ಈ ಸವಲತ್ತು ಜನವರಿ 1959ರ ವರೆಗೆ ಮಾತ್ರ ಇರುವುದರಿಂದ ಇಂದೇ ರೂ27 ಕಳಿಸಿ ಒಂದು ಸೆಟ್ ಪುಸ್ತಕ ತರಿಸಿಕೊಳ್ಳಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಲಕ್ಷ್ಮೀಶನು ಕಂಡ ಕನ್ನಡನಾಡು

(೯ನೇ ಪುಟದಿಂದ)

ಸಂಚರಿಸದೆಳೆದುಂಬಿ ತುಂಬಿಗಳ ಬಿಡ
ಯಕಿಂಪೆನಿಸದಚ್ಚಲರಲರ್ಗಳ ||
ಗೊಂಚಲೆರಗಿಸದಲತೆ ಲತೆಗಳಡರದ
ತಳ್ಕೆ
ನಿಂಚಿಗುರದಿಮ್ಮಾವು ಮಾವುಗಳ ಚೆಂ
ದಳಿ
ರ್ಮಿಂಚದ ಬನಂ ಬನಗಳಿಂ ಬಳಸ
ದೂರೂರ್ಗಳಿಲ್ಲಮೆಸೆಯಿಲ್ಲೆಳೆಯೊಳು ||
|| ೩ ೨-೩ ||

ದೊಡ್ಡ ದೊಡ್ಡ ನದಿಗಳಿಂದ ಕೆರೆ ಸರೋವರಗಳಿಂದ, ಉದ್ಯಾನಗಳಿಂದ, ರತ್ನದ ಗನಿಗಳಿಂದ, ಪೈರು ಪಚ್ಚೆಗಳಿಂದ, ವಿಲಾಸಿಗಳ ಕೃತಕ ಶೈಲಿಗಳಿಂದ, ಗೋಗಜ, ಕಸ್ತೂರಿ ಮೃಗ, ನುಣ್ದನಿಬೀರುವ ಪಕ್ಷಿಗಳಿಂದ, ಸುಂದರ ಮಂದಿರಗಳಿಂದ ಮತ್ತು ಪುರುಷ ಪುಂಗವರಿಂದ ಶೋಭಿಸುತ್ತಿತ್ತು. ಆ ಊರಲ್ಲಿ ಹಂಸೆಗಳಿಲ್ಲದೆ ಕೊಳಗಳಿಲ್ಲ; ಕೊಳಗಳಲ್ಲಿ ತೇನತೇನವಾಗಿ ಚಲಿಸದ ಎಳಗಾಳಿಯಿಲ್ಲ. ಅದರ ಸುಳಿವನ್ನನುಸರಿಸಿ ತಿರುಗದ ತುಂಬಿ, ತುಂಬಿಗಳಿಗೆ ಆಕರ್ಷಕವಾಗದ ಹೂಗಳು, ಹೂಗಳ ಗೊಂಚಲಿಂದ ಬಾಗದಲತೆ, ಲತೆಗಳ ಆಲಿಂಗನದಿಂದ ಚಿಗುರದ ಸಿಹಿಮಾವು, ಮಾವುಗಳ ಚೆಂದಳಿರ್ಗಳಿಂದ ಮಿಂಚದ ವನ, ವನಗಳಿಂದ ಬಳಸದ ಊರುಗಳು ಎಲ್ಲಿಯೂ ಸಿಕ್ಕಲಾರವು. ಕವಿಯು ಒಂದು ಮಾರ್ಗದಿಂದ—ದೇಶವು ಸಂಪತ್ಸಮೃದ್ಧವಾಗಿತ್ತು, ಜನಜೀವನವು ನೆಮ್ಮದಿಯಲ್ಲಿತ್ತು-ಎಂದು ಒಕ್ಕಣಿಸಿರುವನು. ಮೇಲಿನ ಪದ್ಯಗಳನ್ನು ಓದುವಾಗ ಏನೋ ಒಂದು ಸುಖವುಂಟಾಗುವುದನ್ನು ವಾಚಕರು ಲಕ್ಷ್ಯಕೊಡಬೇಕು.

ಆ ಪ್ರದೇಶದಲ್ಲಿ ಬೆಳೆಬೆಳೆಯದೆ ಬೀಳು ಬಿದ್ದ ಹೊಲಗಳಿಲ್ಲ; ಬೆಳ್ದಾವರೆಗಳರಳದ ಕೊಳಗಳಿಲ್ಲ; ವನಲಕ್ಷ್ಮಿಯು ಹಾಸದಿಂದ ಮಿರುಗದ ವನಗಳಿಲ್ಲ. ಅಲ್ಲಿ ಕಿವಿಗೆ ಇಂಪನ್ನೂ, ಮನಸ್ಸಿಗೆ ತಂಪನ್ನೂ, ಬಾಳ್ವೆಗೆ ಪೆಂಪನ್ನೂ ಬೀರದ ಸ್ಥಳಗಳಿಲ್ಲ. ಪರಸ್ಪರ ಅಹಿತವನ್ನು ಕೋರುವ ಜನಗಳನ್ನು ಆ ನಾಡಿನಲ್ಲಿ ಮುಳಿದು ಹುಡುಕಿದರೂ ಕಾಣಸಿಗವು. ಇದು ಲಕ್ಷ್ಮೀಶನು ಕಂಡ ಕರ್ನಾಟಕದ ಒಂದು ಚಿತ್ರ!

ಇನ್ನು ಅಲ್ಲಿಯ ಹೊಲಗಳ ಕೆಯ್ಗಳ ಪರಿಮಳ, ಆ ಹೊಲವನ್ನು ಕಾಯುವ ಪಾಮರಿಯರ ಮೈ ಪರಿಮಳ, ಯಾವಾಗಲೂ ಪುಷ್ಪಿತವಾಗಿರುವ ತರುಲತಾಳಿಗಳ ಸುಮಸಂಚಯದ ಪರಿಮಳ, ತಿಳಿನೀರ ಕೊಳಗಳಲ್ಲಿ ಅರಳಿದ್ದ ಹೊಂದಾವರೆಗಳ ಪರಾಗಧೂಳಿಯನ್ನುಂಡು ಸೊಕ್ಕಿದ ಭ್ರಮರಗಳ ಗುಂಪನ್ನು ಚದರಿಸುತ್ತಿರುವ ತಂಗಾಳಿಯ ಹಿತಕರವಾದ ಪರಿಮಳ—ಇವುಗಳಿಂದ ಆ ನಾಡ ಪಥಿಕರು ಮಾರ್ಗಶ್ರಮವನ್ನು ಕಳೆದುಕೊಳ್ಳುವರು. ಆ ಕಾಲದಲ್ಲಿ ಪಥಿಕರಿಗೆ ಅಲ್ಲಲ್ಲಿ ತಂಪಾದ ಅರವಟ್ಟಿಗೆಗಳಿದ್ದುವು. ಅಲ್ಲಿ ಕಲಶ ಕುಚೆಯರು ಕುಳಿತು ಕಲಶದಿಂದ ಪ್ರಯಾಣಿಕರಿಗೆ ತಮ್ಮ ಕೈದಾರೆಯಾಗಿಯೇ ಜಲದಾನಮಾಡುತ್ತಿದ್ದರು. ಅವರು ಸ್ವಾದು, ಸ್ವಚ್ಛತೆ, ಶೈತ್ಯ ಪರಿಮಳದ ಸುಖವನ್ನುಂಟುಮಾಡುವ ತಮ್ಮ ಕರತಳದಿಂದೆರೆಯುವ ಜಲಧಾರೆಯು ಯಾವ ಪಾಂಥನ ಆಯಾಸವನ್ನು ಪರಿಹರಿಸದು? ಇವೆಲ್ಲಾ ಇಂದಿನ ಬರಗೆಟ್ಟ ಕನ್ನಡಿಗರಿಗೆ—ಕವಿಯ ಕನಸಿನ ರಾಜ್ಯದಲ್ಲಿ ವಿಹರಿಸಿದಂತೆ ತೋರುವುದಿಲ್ಲವೆ?

ಭದ್ರಾವತೀ ನಗರದ ದೇವತೆಯು ತನ್ನ ಪ್ರಜೆಗಳ ಸೌಖ್ಯವನ್ನು ಬಯಸಿ, ತನ್ನಿಷ್ಟ ದೇವತೆಯ ಒಲುಮೆಯನ್ನು ಹೊಂದಿ, ಮುದಿತಾಂತಃಕರಣಳಾಗಿ ಹಸುರು ಪೈಟನಿ ಸೀರೆಯನ್ನು ಬಿಚ್ಚು ಮನದಿಂದುಟ್ಟಂತೆ ಅಲ್ಲಿ ಮರಕತ ಶ್ಯಾಮಲ ಪಲ್ಲವರಾಜಿಗಳಿಂದಲಂಕೃತವಾದ ಉಪವನಗಳು ಶೋಭಿಸುತ್ತಿದ್ದುವು ಇಲ್ಲಿಯ ಲತಾವಧುಗಳು ಸದಾ ಪುಷ್ಪಿಣಿಯರಾಗಿರುವುದರಿಂದ ಇವರನ್ನು ಮುಟ್ಟಬಾರದೆಂದು ರಾಜೀವ ಮಿತ್ರನು ತನ್ನ ನಿರ್ಮಲಕರಗಳನ್ನು ಹಿಂದೆಗೆದನೆನ್ನುವಂತೆ ನಿಬಿಡ ಪತ್ರಪುಷ್ಪ ಛಾಯೆಯಿಂದ ತಂಪು ಮತ್ತು ಆನಂದವನ್ನುಂಟು ಮಾಡುತ್ತಿರುವ ಆರಾಮಗಳು ಆ ನಗರದಲ್ಲಿ ವಿಲಾಸಕ್ಕೆ ಅನುಮೋದನೆಯನ್ನಿತ್ತಿದ್ದುವು. ಈ ಆರಾಮಗಳಲ್ಲಿದ್ದ ತಿಳಿಗೊಳಗಳನ್ನು ಕಲಕಾಡಿ, ಜಲಕುಸುಮಗಳ ಧೂಳಿಗಳನ್ನು ಚೆಲ್ಲಾಡಿ ಅದರಿಂದ ಉಂಟಾದ ಸೊಕ್ಕಿನಿಂದ ತರುಲತೆಗಳನ್ನು ಅಣಿವಾಡಿ, ಮರಿದುಂಬಿಗಳ ಪಡೆಯೊಡನೆ ಮಲೆತ ಕಿರುಗಾಳಿಯೆಂಬ ಸೊಕ್ಕಾನೆಯು ಸ್ವೇಚ್ಛೆಯಾಗಿ ವಿಹರಿಸುತ್ತಿದೆ. ಈ ಸುಖದ ಅಮಲಿನಲ್ಲಿ ‘ವಿರಹಿಗಳು ಇಲ್ಲಿಂದ ತೊಲಗಿ’ ಎಂದು ಕೋಗಿಲೆಗಳು ಕಾತರ ಭಾವದಿಂದ ಹುಯಿಲಿಡುತ್ತಿವೆ! ಅವಕ್ಕೂ ಕನ್ನಡಿಗನಲ್ಲಿ ಎಂತಹ ನಿರ್ವ್ಯಾಜವಾತ್ಸಲ್ಯ! ಅವಕ್ಕೂ ಪರೋಪಕಾರದಲ್ಲಿ ಎಂತಹ ನಿಸ್ವಾರ್ಥ ಬುದ್ಧಿ! ಇನ್ನು ಈ ಪ್ರದೇಶದಲ್ಲಿ ವಾಸ್ತವ್ಯವಿಟ್ಟ ನವಿಲುಗಳು ಮೊರೆವ ತುಂಬಿಗಳ ಗುಂಪನ್ನೇ ಮುಗಿಲೆಂದು ಭಾವಿಸಿ, ಸುಳಿಗಾಳಿಗೆ ತಳಿಯನ್ನು ಕೊಡಹುವ ಲತೆಗಳ ಕೆಂಪಾದ ಚಿಗುರನ್ನೇ ಮಿಂಚೆಂದು ಗ್ರಹಿಸಿ ಅಲ್ಲಿದ್ದ ಸುಂದರ ಸುಮಗಳಿಂದ ತೊಟ್ಟಿಕ್ಕುವ ಮಧು ಬಿಂದುಗಳನ್ನೇ ಮಳೆಯೆಂದು ತಿಳಿದು ಕಾರ್ಗಾಲ ಸನ್ನಿಹಿತವಾದುದಕ್ಕಾಗಿ ಮೈಮರೆತು ಕುಣಿಯುತ್ತಿವೆ. ಇವೆಲ್ಲಾ ಈಗ ಕನ್ನಡಿಗರಿಗೆ ಕವಿಗಳ ರಾಜ್ಯದ ಮಾತುಗಳೆಂದು ತೋರವೆ? ಇವನ್ನು ಕವಿ ಕಲ್ಪನೆಗಳೆಂದಿಟ್ಟುಕೊಂಡರೂ, ಕವಿಯ ಕಾಲದ ವಾತಾವರಣದ ರೇಖೆಯನ್ನು ಸೂಚಿಸುವುದಿಲ್ಲವೆ? ಅಖಂಡ ಕರ್ನಾಟಕದಲ್ಲಿ ಇವೆಲ್ಲಾ ಸಾಧ್ಯ.

ಲಕ್ಷ್ಮೀಶನು ತನ್ನ ನಾಡಿನ ವರ್ಣನೆಗೆ ಒಂದು ಸಂಧಿಯನ್ನೆಲ್ಲಾ ಉಪಯೋಗಿಸಿಕೊಂಡುದು ಮಾತ್ರವಲ್ಲದೆ, ವರ್ಣಿಸುವಾಗ ಅವನಿಗುಂಟಾದ ಉತ್ಸಾಹವೆಷ್ಟು! ಆ ವರ್ಣನೆಯಲ್ಲಿ ಬಳಸಿದ ಚಮತ್ಕಾರವೆಷ್ಟು! ಇದನ್ನು ಓದಿದರೆ ಇದು ಮೂಲದ ಅನುವಾದವೆಂದು ಯಾರಿಗೂ ತೋರದು. ಮೂಲದಲ್ಲಿ ಈ ವಿಚಾರಗಳಿಲ್ಲವೇ ಇಲ್ಲ. ಇದೊಂದು ಹೊಸ ವಾರ್ತೆಯಲ್ಲ. ಆದಿ ಪಂಪನಿಗೂ ವಿಕ್ರಮಾರ್ಜುನ ವಿಜಯವನ್ನು ಬರೆಯುವಾಗ ಇಂತಹದೇ ಒಂದು ಸನ್ನಿವೇಶವೊದಗಿ ತನ್ನ ದೇಶಾಭಿಮಾನವನ್ನು ಸ್ಪಷ್ಟವಾಗಿ—ನವಿರು ನವಿರಾಗಿ— ಹೇಳಿದ್ದಾನೆ.

|| ವೃತ್ತ ||

ಚಾಗದ ಭೋಗದಕ್ಕರದ ಗೇಯದ
ಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನ
ಸರಂತವರಾಗಿ ಪುಟ್ಟಲೇ ||
ನಾಗಿಯುಮೇನೊ ತೀರ್ದಪುದೆ ತೀರ
ದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದ
ನದೊಳ್ ಬನವಾಸಿ ದೇಶದೊಳ್|| ೧ ||
ತೆಂಕಣ ಗಾಳಿ ಸೋಂಕಿದೊಡಮೊಳ್ನು
ಡಿಗೇಳ್ದೊಡಮಿಂಪನಾಳ್ದಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆ
ಗಂಡೊಡಮಾದ ಕೆಂದಲಂ ||
ಪಂ ಗಡೆಗೊಂಡೊಡಂ ಮಧುಮಹೋ
ತ್ಸವಮಾದೊಡಮೇನನೆಂಬೆನಾ
ರಂಕುಸಮಿಟ್ಟೊಡಂ ನೆನೆವುದೆನ್ನ ಮ
ನಂ ಬನವಾಸಿ ದೇಶಮಂ || ೨ ||

೦ ೦ ೦ ೦

ತೆಂಕನಾಡ ಮರೆಯಲ್ಕಿನ್ನೇಂ ಮನಂ ಬರ್ಕುಮೆ?

ಕನ್ನಡಿಗರು ಈ ಆದಿ ಕವಿಯ ದೇಶಾಭಿಮಾನವನ್ನೊಮ್ಮೆ ನೋಡಲಿ. ಈ ಮಹಾ ಕವಿಯೂ ತನ್ನ ಕಾಲದ ಕರ್ನಾಟಕವನ್ನು ಲಕ್ಷ್ಮೀಶನಿಗಿಂತಲೂ ಸ್ಪಷ್ಟವಾಗಿ ವರ್ಣಿಸಿದ್ದಾನೆ. ನಾಡೋಜನಲ್ಲವೆ?

ಲಕ್ಷ್ಮೀಶನ ಕಾಲದ ಕನ್ನಡ ನಾಡಿಗೆ ಮುಸಲ್ಮಾನರ ಅಭಿಯೋಗವಾಗಿದ್ದಂತೆ ತೋರುತ್ತದೆ. ಆ ಪರಮತೀಯರು ಹುಡಿಗುಟ್ಟಿದ ದೇವಾಲಯ ಮತ್ತು ಮೂರ್ತಿಗಳಿಲ್ಲದ ಪೀಠ—ಇವನ್ನು ಕಂಡೇ ‘ಲಿಂಗವಿಲ್ಲದ ಪೀಠ’ವೆಂದು ಕವಿ ಉಸುರ್ಗರೆದಿದ್ದಾನೆ. ಯಾವ ದೇಶಾಭಿಮಾನಿಗೆ ಸಂಪತ್ಸಮೃದ್ಧವಾದ, ಸಕಲ ಸುಖಗಳಗಾಕರವಾದ ನಾಡಿನ ಕೀಟಲೆಯು ಸಹನವಾದೀತು?

ಲಕ್ಷ್ಮೀಶನು ಕಂಡ ಕನ್ನಡನಾಡು ಸುಖ-ಸುಭಿಕ್ಷದ ನೆಲೆವೀಡಾಗಿ ಪುನಃ ನಮ್ಮ ಮುಂದೆ ಮೈದೋರಲಿ! ಕನ್ನಡಿಗರಲ್ಲಿ ಬಾಳುತಿದ್ದ ಬಿಕ್ಕಟ್ಟು ಸರಿದು, ಅಂದಿನ ಒಕ್ಕಟ್ಟು ಹರಿದು ನಾಡಿನಲ್ಲಿ ಅಭಿಮಾನ, ಆತ್ಮೀಯತೆಗಳು ಭದ್ರವಾಗಿ ನೆಲಸಲಿ! ಕನ್ನಡ ನಾಡು ಮಹಾಕವಿಗಳ ತಾಯ್ಮನೆಯಾಗಲಿ! ಕನ್ನಡಿಗರು ಕಲಾಪ್ರಿಯರಾಗಲಿ!

|| ಜಯ ಕರ್ನಾಟಕ ||

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

●

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ್,ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸ್ವಯಂತಂತ್ರ ಅಥವಾ ಒಟೊಮೆಶನ್

(೬ನೇ ಪುಟದಿಂದ)

ವರ್ಗ ಕಲಹದ ಕಿರುಕುಳು, ಆಗಾಗ್ಗೆ ಸಂಪುಗಳ ಗದ್ದರಿಕೆ, ಸಂಧಾನಗಳ ಕಾಲಹರಣ ಇವೆಲ್ಲವೂ ಕೆಲಸಗಾರರ ಪೂರೈಕೆ ಸಾಕಷ್ಟು, ಸಕಾಲದಲ್ಲಿ ಸುಕರವಾಗಿ ಒದಗಿಬರುವದು ಕಷ್ಟವಾಗಿದೆ. ಇದೂ ಅಲ್ಲ ಕೆಲವೊಮ್ಮೆ, ಬಂಡುವಾಳಗಾರಿಕೆಯ ಉದ್ದಿಮೆಗಳಲ್ಲಿ ಪೇಟೆಗಿಂತ ಪುರವಠೆ, ಬೇಡಿಕೆಗಿಂತ ಪೂರೈಕೆ ಹೆಚ್ಚುವಾಗ ಉದ್ದಿಮೆಗಾರರೇ ಉತ್ಪಾದನೆಯ ವೇಗವನ್ನೂ ಪ್ರಮಾಣವನ್ನೂ ಕುಗ್ಗಿಸುವದುಂಟು ಆಗ ಅನೇಕ ಕೆಲಸಗಾರರನ್ನು ಮನೆಗೆ ಕಳುಹಿಸುವದುಂಟು. ಇದರಿಂದ ಮತ್ತೆ ಅನೇಕ ಕಲಿತಿನ್ನುವ ಸಾಮಾಜಿಕ ಆರ್ಥಿಕ ಅಶಾಂತಿಯ ಪ್ರಶ್ನೆಗಳು ಹೆಡೆಎತ್ತಿ ಪೂತ್ಕರಿಸುವದೂ ಉಂಟು. ಶ್ರಮಶಕ್ತಿ—ಮಾನವ ಶಕ್ತಿಯನ್ನೂ—ಯಾಂತ್ರಿಕ ಉತ್ಪಾದನೆಗೆ ಮತ್ತು ಬಂಡುವಾಳಗಾರಿಕೆಯ ಅಂದರೆ, ಲಾಭ ಹೇತುವಿನ—ಉತ್ಪಾದನೆಯ ಪದ್ಧತಿಗೆ ಹೂಡಿದಾಗ ಇವೆಲ್ಲ ಅಕಲ್ಪಿತ, ಅನಪೇಕ್ಷಿತ ಅತಂತ್ರಗೊಳಿಸುವ ತೊಡಕುಗಳು ತಲೆಎತ್ತುವ ತೊಂದರೆ ಇದ್ದೇ ಇದೆ. ಅಂಥಾಗ ಉದ್ದಿಮೆಗಾರರಿಗೆ ಉಪದ್ವ್ಯಾಪಿ ಕೆಲಸಗಾರರಿಗಿಂತ ನಿರುಪದ್ರವಿ ಯಂತ್ರಗಳು—ತಡಮಾಡದ, ಸಂಪುಹೂಡದ, ಭತ್ತೆ-ಬೋನಸು—ಸಂಬಳಕ್ಕಾಗಿ ಕಾಡದ, ವಸತಿ ವಿಮಾ ಮುಂತಾದ ಸೌಕರ್ಯಗಳು ಅವಶ್ಯಬೀಳದ ಮೂಕವಾಗಿ ವಿಧೇಯವಾಗಿ ನಿರಾತಂಕವಾಗಿ ನಿರಂತರವಾಗಿ ಕೆಲಸ ಮಾಡುತ್ತ ಸಾಗುವ ಯಂತ್ರಗಳೇ ಹೆಚ್ಚು. ಅನುಕೂಲ ಆಕರ್ಷಕ ಮತ್ತು ಆದಾಯವಾಗಿ ಕಾಣುವುದು ಸ್ವಾಭಾವಿಕ. ಆದ್ದರಿಂದ ಕ್ರಮೇಣ ಒಂದಲ್ಲ ಒಂದು ದಿನ, ಒಂದು ದಿನ ಮುಂಚೆಯೋ ಉತ್ಪಾದನಾ ಪದ್ಧತಿಯಲ್ಲಿ "ಸ್ವಯಂತಂತ್ರ" ಯೋಜನೆ ರೂಢವಾಗುವದು ಅಷ್ಟೇ ಕ್ರಮಪ್ರಾಪ್ತ.

ಸಂಕ್ರಮಣಾವ್ಯವಸ್ಥೆಯಲ್ಲಿ ಕೆಲವೆಲ್ಲ ಕೀಲು ಕಳಚುವದು ಅನಿವಾರ್ಯ. ಇಂಥ ಯಾಂತ್ರಿಕ ಯಂತ್ರ ನಿಯಂತ್ರಣೆಯಿಂದಾಗಿ ಕುಶಲ ಕಾರ್ಮಿಕರಿಗೆ ಕೆಲಸವಿಲ್ಲದಂತೆ ಆಗಬಹುದು. ಆದರೆ ಅದಕ್ಕೆ ಉಪಾಯವಿಲ್ಲ. ಇದೂ ಒಂದು ತಾತ್ಕಾಲಿಕ ಅವಸ್ಥೆ. ಒಟ್ಟು ವ್ಯವಸ್ಥೆಯಲ್ಲಿ ಎಲ್ಲ ಸರಿಹೋಗುವದು. ಮಾನವನು ಉಪಕರಣ ಉಪಯೋಗಿಸುವ ಪ್ರಾಣಿ. ಅವನ ಪಂಚಕರಣಗಳಿಗೆ ಅಂತಃಕರಣ ಒಂದು ಕೂಡಿದ್ದರೆ—ಮನುಷ್ಯನಿಗೆ ಉಪಕರಣಗಳೂ ಅವಶ್ಯವಾದವು ಪ್ರಕೃತಿಯನ್ನು ಗೆಲ್ಲಲಿಕ್ಕೆ ಪ್ರಯತ್ನ-ಪ್ರಯೋಗಗಳನ್ನು ಮುಂದುವರಿಸಲಿಕ್ಕೆ. ಇದರ ಆ ಪರಂಪರಾಗತ ಪರಿಣಾಮವೇ ಯಂತ್ರಗಳ ಸ್ವಯಂಚಾಲನೆ ಇಲ್ಲವೆ "ಒಟೊಮೆಶನ್". ಅದನ್ನು ಒಪ್ಪಿ ಇದನ್ನು ಅಲ್ಲಗಳೆಯುವದು ಯುಕ್ತವೂ ಅಲ್ಲ ಇಷ್ಟವೂ ಅಲ್ಲ. ಇಂದು ಯಂತ್ರ-ತಂತ್ರ ವಿದ್ಯೆ ಮುಟ್ಟಿದ ಪ್ರಗತಿಯ ಮಟ್ಟದಲ್ಲಿ ಮಾನವ ಕೋಟಿಗೆ ದೈನಂದಿನ ದೈನ್ಯದ ಬಿಡುವಿಲ್ಲದ ದುಡಿಮೆಯ ಹಣಗಾಟದಿಂದ ಮುಕ್ಕಾಲು ಪಾಲಿಗೂ ಮೇಲ್ಪಟ್ಟು ಬಿಡುಗಡೆ ದೊರೆಯುವದು ಶಕ್ಯವಿದೆ ಯುಕ್ತವೂ ಇದೆ. ಅಂಥ ಬಿಡುವು ಅವನ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ವಿಕಾಸೋನ್ನತಿಗಾಗಿ ಅತ್ಯಂತ ಅಗತ್ಯ. ಮಾನವ ಸಂಸ್ಕೃತಿಯ ಹಾಗೂ ಸಾಮೂಹಿಕ ನಾಗರಿಕತೆಯ ಮಟ್ಟವೂ ಸತ್ವವೂ ವೃದ್ಧಿ ಹೊಂದುತ್ತ ಬಂದ ಇತಿಹಾಸವೆಲ್ಲ ಇಂಥ ಬಿಡುವಿನ ವಿರಾಮ ವೇಳೆಯ ವಿನಿಯೋಗದ ಇತಿಹಾಸವಾಗಿದೆ. ಈಶ್ವರನು ಉಚ್ಛಿಷ್ಟ"ದಿಂದ ಜಗತ್ತು ನಿರ್ಮಿಸಿದನೆಂದು ಶ್ರುತಿಸಾರುತ್ತದೆ. ವಿಶ್ವಕರ್ಮನೂ ತನ್ನ ಭಾಗ್ಯದ ಈಶ್ವರನು ಅವಮಾನವ ತನ್ನ ಶ್ರಮ—ಸಮಯ—ಸಾಮರ್ಥ್ಯಗಳ ಉಚ್ಛಿಷ್ಟದಿಂದಲೇ ನಾಗರಿಕತೆಯ ಮೊತ್ತವನ್ನು ಸಂಸ್ಕೃತಿಯ ಮೂಲ್ಯಗಳನ್ನು ನಿರ್ಮಿಸುತ್ತ ಬಂದಿದ್ದಾನೆ. ಅಂದ ಮೇಲೆ ಎಂದಿಗೂ ಹೆಚ್ಚಾಗಿ ಶ್ರಮಿತರಿಗೆ ಕಾರ್ಮಿಕರಿಗೆ ವಿರಾಮ ಒದಗಿಸುವ ಈ ಯಾಂತ್ರಿಕ ಯಂತ್ರ ನಿಯಂತ್ರಣ ನಿರ್ವಹಣೆಗಳ ಹೊಸ ಸ್ವಯಂಚಾಲಿತ ಯೋಜನೆಯಿಂದ ತತ್ವತಃ ಗಾಬರಿಯುಂಟಾಗಬೇಕೆಂದಿಲ್ಲ.

ಉತ್ಪಾದನೆ ಸ್ವಯಂ ಚಾಲಿತವಾದ ಮಾತ್ರಕ್ಕೆ ಉತ್ಪನ್ನದ ವಿತರಣೆ, ಅದಕ್ಕೆ ಸಂಬಂಧಪಟ್ಟ ವ್ಯವಹಾರ ವ್ಯವಸ್ಥಾಪನೆ ಇವೆಲ್ಲವೂ ಯಂತ್ರ ಚಾಲನೆಗೆ ಒಪ್ಪಿಸುವದಿಲ್ಲ. ದುಡಿಮೆಗೆ ಅನಂತ ಮುಖಗಳಿವೆ ಮಾರ್ಗಗಳಿವೆ, ಆದರೆ ಮುಖ್ಯ ಬೇಕಾದದ್ದು ಆಯೋಜನೆ ಮತ್ತು ಹೊರದಾಣಿಕೆ. ಲಾಭ ಹೇತುವಿನ ಬಂಡುವಾಳಗಾರಿಕೆಯ ಉದ್ದಿಮೆಗಳ ನಿರ್ವಹಣೆ—ನಿಯಂತ್ರಣೆಗಳ ಇಂದಿನ ಚೌಕಟ್ಟಿನಲ್ಲಿ ಸ್ವಯಂಚಾಲನೆ ಕಾರ್ಮಿಕರಿಗೆ ಯಂತ್ರರೂಪಿ ಭಸ್ಮಾಸುರನ ಬೆಂಕಿಯ ಕೈಯಾಗಿ ಕಾಣಬಹುದು. ಏಕೆಂದರೆ "ಸ್ವಯಂಚಾಲನೆ" ಕಾರಖಾನೆಗಳಲ್ಲಿ ಸ್ಥಾಪಿತವಾದೊಡನೆ ನೂರಾರು ಕೆಲಸಗಾರರು ಮನೆಗೆ ಬರಬೇಕಾಗುವದು. ಸದ್ಯ ಈ 'ಒಟೋಮೆಶನ್' ಅಮೇರಿಕೆಯಲ್ಲಿ ಪ್ರಚಲಿತವಾಗಿದೆ. ಅಲ್ಲಿ ಯಂತ್ರಚಲನೆಯಿಂದಾಗಿ ಯಾಂತ್ರಿಕ ಪದ್ಧತಿಯ ಉತ್ಪಾದನೆ ಬಹು ಪ್ರಚಂಡ ವೇಗದಿಂದ ಅಷ್ಟೇ ಪ್ರಚಂಡ ಪ್ರಮಾಣದಲ್ಲಿ ಸಾಗುವುದು ಸುಗಮವಾದಂತೆ ಉತ್ಪಾದನೆಯ ವಿಷಯದ ಮಾನವ ಹಿತ ಸಂಬಂಧಿಯಾದ ಪ್ರಶ್ನೆಗಳು ಕಡಿಮೆಯಾಗಿ ಕೇವಲ ತಾಂತ್ರಿಕ, ಯಾಂತ್ರಿಕ ಸೌಕರ್ಯ-ಕೈಂಕರ್ಯಗಳ ಸಮಸ್ಯೆಗಳಿಗೂ ಸಾಮಂಜಸ್ಯಗಳಿಗೂ ಪ್ರಾಶಸ್ತ್ಯ ಹೆಚ್ಚುಹೆಚ್ಚು ಬರತೊಡಗುವುದು. ಎಷ್ಟು ವೇಗದಿಂದ ಎಷ್ಟು ವಿಪುಲವಾಗಿ ಉತ್ಪಾದನೆ ನಡೆಯುವುದೋ ಅಷ್ಟೇ ವೇಗ ವೈಪುಲ್ಯಗಳಲ್ಲಿ ಆ ಸಿದ್ಧ ಸರಕುಗಳ ವಿಕ್ರಯ-ವಿನಿಮಯ-ವಿನಿಯೋಗಗಳಾಗದಿದ್ದರೆ ದುರ್ಧರವಾದ ಅನವಸ್ಥಾ ಪ್ರಸಂಗ ಇದಿರಾಗುತ್ತದೆ.

ಏಕೆಂದರೆ ಮಾನವನ ಜೀವನದ ಮಟ್ಟ ಎಷ್ಟೇ ಎತ್ತರಿಸಿದರೂ ಆ ಮಟ್ಟದಲ್ಲಿ ತನ್ನ ಕಾಮನೆ-ಲಾಲಸೆಗಳನ್ನು ತೃಪ್ತಿಗೊಳಿಸಿಕೊಳ್ಳುವ ಮಾನವನ ತೃಷೆ ತೃಪ್ತಿಗಳ ಅನ್ಯೋನ್ಯ ಪ್ರಮಾಣಕ್ಕೆ ಒಂದು ಮಿತಿ ಇರುತ್ತದೆ. ಒಂದು ಶಾರೀರಕವೂ ಮಾನಸಿಕವೂ ಆದ ವೇಗ ಇಲ್ಲವೆ ಲಯವಿರುತ್ತದೆ. ಮಾನವನ ಶರೀರ-ಮನೋಧರ್ಮ ಒಂದು ಯಾಂತ್ರಿಕ ವ್ಯಾಪಾರವಲ್ಲ. ಅದನ್ನು ಕೃತಕವಾಗಿ ಬೇಕಾದಾಗ ಬೇಕಾದಷ್ಟು ಹೆಚ್ಚಿಸಲು ಹಿಗ್ಗಿಸಲು ಬರುವುದಿಲ್ಲ. ಹಾಗೆ ಒತ್ತಾಯಗೊಳಿಸಿದರೆ ಆ ಶರೀರವೆಂಬ ಸೇಂದ್ರಿಯ—ಸಜೀವ ಯಂತ್ರ ತಡೆಯುವುದು ಕಷ್ಟ. ಆದ್ದರಿಂದ ಕೇವಲ ಕೃತ್ರಿಮವಾದ ಯಾಂತ್ರಿಕ ಉತ್ಪಾದನೆಯ ವೇಗ-ವ್ಯಾಪ್ತಿ—ವಿಕಾಸಕ್ಕೆ ಮಿತಿ ಇಲ್ಲ. ಆದರೆ ಅದೇ ಪ್ರಮಾಣದಲ್ಲಿ ಮಾನವೀ ತೃಷೆ-ತೃಪ್ತಿಗಳನ್ನೂ ಒತ್ತಾಯದಿಂದ ಒತ್ತರಕ್ಕೆ ತರುವದು ಕಷ್ಟಸಾಧ್ಯ—ಅದರಿಂದ ಕೇವಲ ಕಷ್ಟವೇ ಸಾಧ್ಯ. ಆದ್ದರಿಂದ ಯಂತ್ರ ನಿಯಂತ್ರಿತ ಉತ್ಪಾದನೆಯ ಒತ್ತಡದ ದ್ರುತಗತಿಯ ಪಾಲಕ್ಕೆ ತೋಲಹಿಡಿದೂ ಸಾಗುವಂತೆ ಮಂದಿಯ ಬಯಕೆ-ಬೇಡಿಕೆಗಳನ್ನು ಕುದುರಿ ಅಣಿಗೊಳಿಸುವದು ಎಲ್ಲಿಯತನಕ ಸಾಧ್ಯ? ಅದೂ ಬೇರೆ ಬೇರೆ ನಿಟ್ಟಿನಿಂದ ಇದೇ ಮಾದರಿಯ ಉತ್ಪಾದನೆಯು ಸ್ಪರ್ಧೆಗಾಗಿ ಸಡ್ಡೆ ಹೊಡೆದು ಧಾವಿಸುತ್ತಿರುವಾಗ?

ಆದ್ದರಿಂದ ಸುದೂರದ ಭವಿಷ್ಯದಲ್ಲಿ ಎಲ್ಲವೂ ಸರಿಗೂಡಿ ಹೋಗಲು ಬಿಡಲಿ—ಹೋಗಿಯೇ ಬಿಟ್ಟರೂ, ಸದ್ಯಕ್ಕೆ ನೋಟ ಇಲ್ಲವೆ ನಾಡಿದ್ದಿನ ಭವಿಷ್ಯದಲ್ಲಿ ಈ "ಸ್ವಯಂತಂತ್ರ"ದ ತತ್ವದಿಂದ ಆರ್ಥಿಕ ವ್ಯವಸ್ಥೆಯು ಭದ್ರತೆಯೇ ತತ್ತರಿಸುವಂತಿದೆ. ಚೀನ, ಭಾರತದಂಥ ಕಿಕ್ಕಿರಿದ ಜನಸಂಖ್ಯೆಯ ದೇಶಗಳಲ್ಲಿ ಉದ್ದಿಮೆಗಳ ತಕ್ಕ ಹಾಗೂ ತಾರತಮ್ಯದ ವಿಕೇಂದ್ರೀಕರಣದಿಂದ ಇಂಥ "ಸ್ವಯಂ ಚಾಲನೆ" ಅನವಶ್ಯವೂ ಅಶಕ್ಯವೂ ಆಗಬಹುದು. (ಈ ವಿಧಾನದ ವಿವರಣೆಗೆ ಇಲ್ಲಿ ಅವಕಾಶವಿಲ್ಲ.) ಆದರೆ ಯುರೋಪದಲ್ಲಿ ಇಂಥ ಯಂತ್ರಾಧಿ ಯಂತ್ರಸತ್ತೆಯಿಂದ ಕುಶಲ ಕಾರ್ಮಿಕರ ಮುಂದೆ ಜೀವನ ಮರಣದ ಇಕ್ಕಟ್ಟು ಆಯೆಂದು ಬಾಯಿಕಳೆದು ನಿಂತರೆ ಸೋಜಿಗವಿಲ್ಲ.

ಇನ್ನೊಂದು ನಿಟ್ಟಿನಿಂದ ನೋಡಿದರೆ ಈ "ಒಟೊಮೆಶನ್ನಿ"ನ ತಂತ್ರದಿಂದ ಕೆಲಸಗಾರ ವರ್ಗಗಳಿಗೆ ತುಂಬ ವಿರಾಮ ದೊರೆಯುವದು ಒಂದು ಸಕ್ತಿಯ ಸುಖವಾಗಿ ಬಿಡುತ್ತದೆ.. ಆದರೆ ಇದ್ದಂತೆ ಈ ಜನಸಮುದಾಯ ಆ ವಿರಾಮದ ವಿನಿಯೋಗ ಸರಿಯಾಗಿ ಮಾಡುವದೆಂಬುದಕ್ಕೆ ಯಾವ ಆಶ್ವಾಸನ? ಯಾವ ಆಯೋಜನೆ? ಈ ವರೆಗೆ ವಿರಾಮವುಳ್ಳ ಮೇಲ್ವರ್ಗಗಳಿದ್ದರೆ ಇನ್ನು ಮುಂದೆ ವಿರಾಮವುಳ್ಳ ಜನಸಮುದಾಯಗಳು (Leisured masses) ಎರಡಾಗುವರು. "Technology has mastered the art of saving time, but not the art of spending it." ಅಂದರೆ ಯಂತ್ರವಿದ್ಯೆ ನಮಗೆ ವೇಳೆ ಉಳಿಸುವ ಕಲೆಯನ್ನು ಕಲಿಸಿದೆಯೇ ಹೊರತು ಉಳಿಸಿದ ವೇಳೆಯನ್ನು ಬಳಸುವ ಕಲೆಯನ್ನು ಕಲಿಸಿಲ್ಲ. ಹಾಗೆ ಅದು ಕಲಿಸಲೂ ಆಗದು! ಒತ್ತಾಯದ ವಿರಾಮದಿಂದ ಮಾನಸಿಕ ರೋಗಗಳಿಗೆ ಒಂದು ಹುತ್ತ ಕಟ್ಟಿಕೊಟ್ಟಂತೆ ಚಟುವಟಿಕೆ ಜೀವಿಯ ಚಟ. ಅದಕ್ಕೆ ಯೋಗ್ಯ ಅವಕಾಶ ದೊರೆಯುವಂತೆ ಹೊಸದೊಂದು "ವಿರಾಮ ವಿನಿಯೋಗ ವಿದ್ಯೆ" ಇಂದು 'ಒಟೊಮೆಶನ್" ಪ್ರಚಲಿತವಾದ ಅಮೇರಿಕೆಯ ಈ ಸಕ್ತಿಯ ಸೋಮಾರಿಗಳಿಗೆ ಕಲಿಸಬೇಕಾಗಿದೆ. ನಿಜವಾಗಿಯೂ ನಮ್ಮಲ್ಲಿಯ ರಾಟಿ ತಕಲಿ ಪಾದಯಾತ್ರೆ ಇಂಥ ಚಟುವಟಿಕೆಗಳು ಮುಷ್ಟಿಕೃಷಿಯಂಥ ಉಪದ್ವ್ಯಾಪಗಳು ಅಮೇರಿಕೆಗೆ ನಮ್ಮಲ್ಲಿಗಿಂತ ಹೆಚ್ಚು ಅಗತ್ಯವಾಗಿ ಅನ್ವಯಿಸಬೇಕೇನೋ! ಹೀಗಿದೆ ಈ "ಸ್ವಯಂತಂತ್ರ" ಅಥವಾ ಒಟೊಮೆಶನ್‌ದ ಹೊಸ ಔದ್ಯೋಗಿಕ ಸಂಕಟದ ಸ್ವರೂಪ.

ಗಮನಿಸಿರಿ! ಗಮನಿಸಿರಿ!!

ನೀವು ರೋಗನಿವಾರಣೆಯನ್ನು ಹೊಂದಲು ಸುಸಮಯ. ಹಸಿವು ಇಲ್ಲದಿರುವಿಕೆ, ಅಜೀರ್ಣ, ನರಗಳ ದುರ್ಬಲತೆ, ಆಯಾಸ, ತಲೆಸುತ್ತುವಿಕೆ, ಕಣ್ಣುಗಳು ಗುಳಿಬಿದ್ದು ಕಾಂತಿಹೀನವಾಗಿರುವುದು, ಯಾವ ಕೆಲಸ ಮಾಡುವುದಕ್ಕೂ ಸೋಮಾರಿತನವಿರುವುದು, ಮೇಹವ್ಯಾಧಿ, ಸ್ವಪ್ನಸ್ಖಲನ ಇವೇ ಮೊದಲಾದ ಎಲ್ಲಾ ಖಾಯಿಲೆಗಳಿಗೂ ನಮ್ಮ ಉತ್ಕೃಷ್ಟವಾದ "ಮನ್ಮಥ ಚಿಂತಾಮಣಿ ಲೇಹ್ಯ" ದೊಡನೆ "ಶೃಂಗಭಸ್ಮ" "ಅಯಃಸಿಂಧೂರ" ಇವನ್ನು ಸೇರಿಸಿ ಆರು ವಾರಗಳ ತನಕ ಸೇವಿಸಿದ್ದಲ್ಲಿ ಸಂಪೂರ್ಣ ಗುಣವಾಗುವುದು.

ಆರು ವಾರಗಳಿಗೆ ಈ ಮೂರು ಔಷಧಗಳ ಬೆಲೆ 8 ರೂ. 25 ನ.ಪೈ. ಟಪ್ಪಾಲು ಖಾಸಲು ರೂ. 2-00.

ಮಲಯಾಳ ಮೆಡಿಕಲ್ ಹಾಲ್
ತಿರುವನಂತಪುರಂ (Trivandrum)

ಎಲ್ಲಾ ತರದ ಫೋಟೋ ಮತ್ತು ಆರ್ಟ್
ಕೆಲಸಗಳಿಗೆ ಸಂದರ್ಶಿಸಿರಿ.

ನಾಯಕ್ ಸ್ಟುಡಿಯೋ,

ಲೈಟ್ ಹೌಸ್ ಹಿಲ್ ರೋಡು, **ಹಂಪನಕಟ್ಟೆ**, ಮಂಗಳೂರು-1.

ಮದುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ;
'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವರಕವಿ ಪರಮದೇವ

(೭ನೇ ಪುಟದಿಂದ)

ಮರೆತೂ ಸ್ಮರಿಸದಿದ್ದುದನ್ನು ಕಂಡರೆ ಅವರ ಶೃಂಗಾರ ರಸಿಕತನವು ಇವನಿಗೆ ಮೆಚ್ಚುಗೆಯಾಗಿರಲಿಲ್ಲವೆನ್ನಬೇಕಾಗುತ್ತದೆ. ಒಟ್ಟಾರೆ ಈ ಕವಿಯು ಕುಮಾರವ್ಯಾಸ ಭಾರತವನ್ನು ಚೆನ್ನಾಗಿ ಓದಿದ್ದಾನೆನ್ನುವುದರಲ್ಲಿ ಸಂದೇಹವಿಲ್ಲ

ಪರಮದೇವ ಕವಿಯ ಕಾಲದಲ್ಲಿ ಹನ್ನೆರ ಇಕ್ಕೇರಿ ಪ್ರಾಂತಗಳಲ್ಲಿ ಬೇರೊಂದು ಭಾರತವು ಪ್ರಚಾರದಲ್ಲಿದ್ದು, ಅದು ಈಗ ಮೂಲೆಗುಂಪಾಗಿಯೋ, ಗೆದ್ದಲು ಹುಳುಗಳ ಆಹಾರವಾಗಿಯೋ ಇದ್ದಿರಬೇಕು. ಅದರಲ್ಲಿ ಪರ್ವಗಳ ವ್ಯತ್ಯಾಸವಿದ್ದಿರಬೇಕು ಎಷ್ಟೋ ಹೊಸ ಕಥೆಗಳಿದ್ದಿರಬೇಕು ಈ ಭಾರತವನ್ನೇ ಕವಿಯು ಅನುಸರಿಸಿರಬಹುದು. ಭವನ ಭಿಕ್ಷಾಟನೆ, ಭೀಮನು ಪುರುಷ ಮೃಗ ತಂದದ್ದು, ಕೌರವನು ತನ್ನ ನೂರು ಮಂದಿ ವಣಾವರನ್ನು ಸೆರೆ ಹಿಡಿದದ್ದು ಮೊದಲಾದ ಇವರ ಹಲವು ಕಥೆಗಳೂ, ಸನ್ನಿವೇಶಗಳೂ ಈ ಸಂಶಯವನ್ನು ಇನ್ನೂ ಬಲಪಡಿಸುತ್ತವೆ. ಅಲ್ಲದೆ ಕನ್ನಡ ಸಂಸ್ಕೃತ ಭಾರತಗಳಲ್ಲಿ ಸಮಾನವಾಗಿರುವ ಆದಿ, ಸಭಾ, ವನ, ವಿರಾಟ, ಉದ್ಯೋಗ, ಭೀಷ್ಮ, ದ್ರೋಣ, ಕರ್ಣ, ಶಲ್ಯ,(ಗದುಗಿನ ಭಾರತದಲ್ಲಿ ಶಲ್ಯ ಪರ್ವದೊಡನೆ ಗದಾ ಪರ್ವವಿದೆ) ಸೌಪ್ತಿಕ, ಸ್ತ್ರೀ, ಶಾಂತಿ, ಅನುಶಾಸನ, ಅಶ್ವಮೇಧಿಕ, ಆಶ್ರಮವಾಸಿಕ, ಮೌಸಲಿ, ಮಹಾಪ್ರಸ್ಥಾನಿಕ, ಸ್ವರ್ಗಾರೋಹಣವೆಂಬ ಹದಿನೆಂಟು ಪರ್ವಗಳ ಬದಲಿಗೆ, ಈ ಕವಿಯ ಭಾರತದಲ್ಲಿ ಪೌಲೋಮ, ಆಸ್ತಿಕ, ಆದಿ, ಸಭಾ, ಅರಣ್ಯ, ವಿರಾಟ,ಉದ್ಯೋಗ, ಭೀಷ್ಮ, ದ್ರೋಣ, ಕರ್ಣ, ಶಲ್ಯ, ಗದಾ, ಶಾಂತಿ, ಅಶ್ವಮೇಧ, ಆಶ್ರಮ, ಮುಸಲಿ, ಸ್ವರ್ಗಾರೋಹಣವೆಂಬ ಹದಿನೇಳು ಪರ್ವಗಳು ಈ ಸಂಶಯಕ್ಕೆ ಪೋಷಕಗಳಾಗಿವೆ

ಕುಮಾರವ್ಯಾಸ ಮೊದಲಾದ ಕನ್ನಡ ಕವಿಗಳು ತಮ್ಮ ಇಷ್ಟದೇವತೆಯನ್ನು ಕಾವ್ಯದ ಆರಂಭದಲ್ಲೂ, ಪ್ರತಿಸಂಧಿಗಳ ಅಂತ್ಯದಲ್ಲೂ ಪ್ರಾರ್ಥಿಸಿದ್ದಾರೆ ಆದರೆ ಪರಮದೇವನು ತನ್ನ ಭಾರತದ ಆರಂಭದಲ್ಲಿ 'ಶಾಮಸುಂದರನ ಪುತ್ರ ಗಣಪನಮಾದೀಕ್ಷಿತ ಸ್ವಾಮಿ ವಿಘ್ನೇಶನು' ಎಂದು ಗಣಪತಿಯನ್ನು ಪ್ರಾರ್ಥಿಸಿ, ಪ್ರತಿಸಂಧಿಯ ಅಂತ್ಯದಲ್ಲಿ ಭೀಮನ ಕೋಣೆಯ ಲಕ್ಷ್ಮೀರಮಣನನ್ನು ನೆನೆದಿದ್ದಾನೆ!

ಈ ಕಾಲದಲ್ಲಿ ಬೆಳಗಲ ಸೀಮೆಯ ಕೇದಿಗೆ ಸರುವೆಂಬ ಊರಿನ ಹರವಸಿಯ ಸಾಪ್ಪಿನ ಸುಬ್ಬಣ್ಣ ಹೆಗ್ಗಡೆಯೆಂಬ ಬ್ರಾಹ್ಮಣ ಸದ್ಗೃಹಸ್ಥರು ಚೆನ್ನಾಸಿಗರಾಗಿದ್ದು ಅತಿಥಿ ಅಭ್ಯಾಗತರಿಗೆ ಆಶ್ರಯದಾತರಾಗಿ ಒಂದು ಗಣಪತಿ ದೇವಾಲಯವನ್ನು ಕಟ್ಟಿಸಿ, ಅದಕ್ಕೆ ಅಮೃತಪಡಿ ನಂದಾದೀವಿಗೆಯೊಡನೆ ಅರಮನೆಯಿಂದ ಉತ್ತಾರವನ್ನೂ (ಆಗ ಆ ಪ್ರಾಂತ್ಯದಲ್ಲೊಬ್ಬ ಪಾಳೆಯಗಾರನಿದ್ದನು) ಕೂಡಿಸಿದರು. (ನಾಂ ಪ ೭) ಇವರ ಈ ದೇವಾಲಯಕ್ಕೆ ಉತ್ತಮ ಅರ್ಚಕರೊಬ್ಬರು ಬೇಕಾಗಿದ್ದರು. ಅವರು ಪರಮದೇವನ ಸಾತ್ವಿಕ ಸ್ವಭಾವ, ವೈರಾಗ್ಯ ಮತ್ತು ಜ್ಞಾನದ ಕುರಿತು ಈ ಮೊದಲೇ ತಿಳಿದಿದ್ದುದರಿಂದ, ಇವನನ್ನು ಸಂಸಾರ ಸಹಿತ ಕರೆಸಿ, ತಮ್ಮ ಗಣಪತಿ ದೇವಾಲಯದ ಬಳಿಯಲ್ಲೇ ಅವರಿಗೆ ವಾಸ್ತವ್ಯವನ್ನು ಕಲ್ಪಿಸಿ, ಅವರಿಗೆ ದೇವಾಲಯದ ಅರ್ಚಕ ಪದವಿಯನ್ನೊಪ್ಪಿಸಿದರು. ಈ ಮೊದಲೇ ಈ ಕವಿಯು ಹಲವು ತುಂಡು ಪದ ಪತ್ತು ಹಾಡುಗಳನ್ನು ರಚಿಸಿದ್ದರೂ, ತುರಂಗ ಭಾರತವನ್ನು ಬೆಳಗಲ ಸೀಮೆಯ ಆ ಗಣಪತಿಯ ದೇವಾಲಯದಲ್ಲೇ ವಾರ್ಧಕ ಷಟ್ಪದಿಯಲ್ಲಿ ಬರೆಯಲಾರಂಭಿಸಿದನು (ನಾಂ ಪ. ೧೦) ಇಲ್ಲಿ ನಾಂದೀ ಪದ್ಯಗಳನ್ನು ಮಾತ್ರ ಮುಗಿಸಿ ಕೆಲವು ತೊಂದರೆಗಳಿಂದ ಇಲ್ಲಿಯ ಅರ್ಚಕ ಪದವಿಯನ್ನು ಬಿಟ್ಟು, ಭೀಮನ ಕೋಣೆಯ ಲಕ್ಷ್ಮೀರಮಣ ದೇವಾಲಯದಲ್ಲೇ ಭಾರತದ ಉಳಿದ ಎಲ್ಲಾ ಪರ್ವಗಳನ್ನು ಮುಗಿಸಿದಂತೆ ತೋರುತ್ತದೆ ಬಡತನದಿಂದ ಕಂಗೆಟ್ಟ ಈ ವರಕವಿಯು ಲಕ್ಷ್ಮೀನಾರಾಯಣನನ್ನು ಇಷ್ಟ ದೇವತೆಯಾಗಿ ಇಟ್ಟುಕೊಂಡುದರಲ್ಲಿ ಆಶ್ಚರ್ಯವೇನೂ ಇಲ್ಲ ಈ ಕವಿಯು ಕೇದಿಗೆ ಸರುವಿನಲ್ಲೇ ೫೪ ಪದ್ಯಗಳುಳ್ಳ ತತ್ವ ಚೌಪದವನ್ನೂ, ಆ ಪ್ರಾಂತ್ಯದಲ್ಲಿ ಈಗಲೂ ಪ್ರಚಾರದಲ್ಲಿದ್ದ ನಾರಾಯಣಾಕ್ಷರ ಮಾಲಿಕಾ ಸ್ತೋತ್ರವನ್ನೂ ಬರೆದ ಮೇಲೆಯೇ ಈ ಕವಿಯ ಹೆಸರನ್ನುಳಿಸ ತಕ್ಕ ೯೬ ಸಂಧಿಯ ೪೭೨೦ ಪದ್ಯಗಳಿರುವ ತುರಂಗ ಭಾರತವನ್ನು ಬರೆದು ಮುಗಿಸಿದನು —ಕನ್ನಡ ಸಾಹಿತ್ಯದಲ್ಲೇ ತುರಂಗ ಭಾರತದಂತಹ ಸುಲಭದ ಬಾಲ ಸಾಹಿತ್ಯವು ಬೇರೊಂದಿಲ್ಲ.

|| ವಾ | ಷ ||

ಸ್ವಸ್ತಿ ಶ್ರೀಮಚ್ಛಾಲಿವಾಹನಗೆ
ಶಕವರುಷ
ಗುತ್ತಿಗೆಗೆ ಸಾವಿರದ ಏಳ್ನೂರು
ಪೂರ್ಣಸಲು
ತಿತ್ತು ಲೆಕ್ಕಕೆ ಹೇಮಲಂಬಿ ಸಂವತ್ಸರದ
ವರ್ಷಋತು ಶ್ರಾವಣದೊಳು ||
ಉತ್ತಮಂ ಶುಕ್ಲ ಪಕ್ಷದ ಪಂಚಮಿಯು
ದಿನಂ
ಹಸ್ತನಕ್ಷತ್ರ ಶುಭಲಗ್ನದಿಂ ಭಾರತವ
ವಿಸ್ತರಿಸ ತೊಡಗಿದೆನು ಭಾರ್ಗವವಾಸರ
ದುದಯ ಕಾಲದೊಳು ಗುರುಕರಣದಿಂ ||

ತುರಂಗ ಭಾರತವನ್ನು ಈ ಕವಿಯು ಕ್ರಿ ಶ ೧೭೭೮ರಲ್ಲಿ ಬರೆಯ ತೊಡಗಿದನೆಂದು ಮೇಲಿನ ಪದ್ಯದಿಂದ ಸ್ಪಷ್ಟವಾಗುವುದು ಇದಕ್ಕೆ ಸಂಕ್ಷೇಪ ಭಾರತವೆಂಬ ಹೆಸರಿದ್ದಂತೆಯೂ ತೋರುವುದು ಆದರೆ ಇದನ್ನು ಓದುವವರು ತುರಂಗ (ಕುದುರೆ)ದ ಹೆಜ್ಜೆಯ ಗತ್ತಿನಲ್ಲಿ ಓದುತ್ತಿದ್ದುದರಿಂದ ಇದಕ್ಕೆ ತುರಂಗ ಭಾರತವೆಂಬ ಹೆಸರಾಯಿತೆಂದು ಹೇಳುತ್ತಾರೆ ಈ ಕವಿಯು ತನ್ನ ಕಾವ್ಯದಲ್ಲಿ ಒಂದು ಕಠಿನ ಪದವನ್ನೂ ಉಪಯೋಗಿಸದೆ ಜನಪದ ಸಾಹಿತ್ಯವಾಗಿ ಸರಳ ಪದಗಳಿಂದಲೇ ಮನೋಹರವಾದ ಸೃಷ್ಟಿಯೊಂದನ್ನು ನಿರ್ಮಿಸಿದ್ದಾನೆ ಕವಿಯ ಈ ಅದ್ಭುತ ಶಕ್ತಿಗಾಗಿ ಯಾವ ಸಾಹಿತಿಯೂ ತಲೆದೂಗಲೇಬೇಕು

ಗದುಗಿನ ನಾರಣಪ್ಪನು ಪಂಪನ ಅನುಸರಣದಿಂದ ಅರ್ಜುನನನ್ನು ಮೇಲಕ್ಕೆತ್ತಿರುವನು ಪರಮದೇವನು ತನ್ನ ಕಾವ್ಯದಲ್ಲಿ ಭೀಮನನ್ನು ಎತ್ತಿ ಆಡಿರುವನು ಅವನನ್ನು ರುದ್ರಾವತಾರಿಯೆನ್ನಲೂ ಕವಿಗೆ ಅಳುಕಿಲ್ಲ ಕವಿಯ ಇಷ್ಟದೇವತೆ ಇರುವುದೋ ಭೀಮನ ಕೋಣೆಯಲ್ಲಿ! ಇದರಿಂದ ಭೀಮನ ಶೌರ್ಯವನ್ನು ವರ್ಣಿಸುವ ಸಂದರ್ಭ ಬಂದಾಗಲೆಲ್ಲಾ ಕವಿಯು ಮೈಮರೆತು ವರ್ಣಿಸುವನು

ದುಶ್ಶಾಸನನನ್ನು ಭೀಮನು ಚಿತ್ರಹಿಂಸೆಯಿಂದ ಕೊಂದಾಗಿದೆ ಆಗಲೇ ಅವನು ರುದ್ರಭೀಮನಾಗಿ ಕುರು ಸೇನೆಯ ವೀರರನ್ನೆಲ್ಲಾ ಕರೆದು ದುಶ್ಶಾಸನನನ್ನು ಬಿಡಿಸಿಕೊಳ್ಳುವಂತೆ ಹೇಳಿಯಾಗಿದೆ ಆದರೆ ಆ ಚೂಣಿಯಲ್ಲಿ ಮುಂದರಿಯುವ ಭಟನೊಬ್ಬನೂ ಇರಲಿಲ್ಲ ಇದರಿಂದ ಇನ್ನೂ ಕೆರಳಿದ ರುದ್ರಭೀಮನು ತನ್ನ ಪಕ್ಷದ ವೀರರನ್ನೇ ಕರೆಯುತ್ತಾನೆ

|| ವಾ | ಷ ||

ಎಲ್ಲಿ ದೃಷ್ಟದ್ಯುಮ್ನ ಸಾತ್ಯಕಿ ಶಿಖಂಡಿ
ನೃಪ
ರೆಲ್ಲಿ ಕೃಷ್ಣಾರ್ಜುನರು ವೈರಿಯಂ ಸೆಳೆ
ದು ಕೊಳ
ಲೆಲ್ಲಿ ನೋಳ್ಪ ಪೆಣ್ಣಿಗಳೆಂದುಭಯ ಬಲ
ವ ಮೊದಲಿಸಿದಂ ಸಂಗರದೊಳು || ೧ ||
ನೆಲ ನೊಳಗುವಂತೆ ಬೊಬ್ಬಿರಿದು ದಳ
ವಂ ನೋಡಿ
ಫಲುಗುಣನ ಕರೆದು ಮೂದಲಿಸಿದಂ
ತ್ರೈಲೋಕ್ಯ
ದೊಳಗೆಣೆಗಳಿಲ್ಲೆಂಬ ಬಿರುದುಳ್ಳೊಡರೆ
ನಿನಗೆ ತನಗೆ ಕೊಡು ಕಾಳಗವನು ||
ಗೆಲಿದರಿಯ ಸೆಳೆದುಕೊಳ್ಳೆಂದು ಕಲಿ
ಪಾರ್ಥನಂ
ಚಲನ ಸಂಭವನು ಮೂದಲಿಸುತಿರೆ
ಕೋಪದಿಂ
ದಿಳೆಗೆ ರಥದಿಂದ ಧುಮ್ಮಿಕ್ಕಿದಂ ಫಲು
ಗುಣನು ಭೀಮನೊಳ್ ಕಾದಲೆಂದು ||೨||
ಎಲೆಮರುಳೆ ಗಾಂಡೀವಿ ಭೀಮನ ಪ್ರ
ತಾಪಮಂ
ತಿಳಿಯದೈದುವೆಯಾ ರಿಪು ಕೌರವ
ಸಹೋದರನ
ಸಲಹುವೆಯಾ ದ್ರೋಹಿ ನಿಜಬಲ ಸ
ಹಿತ ನಿಂದನಿಲಸುತನೊಡನೆ ಗೆಲಲಾ
ಪೆಯಾ?
ಬಲುಹನರಿಯದೆ ಬರಿದೆ ಪೋಗದಿರು
ಭೀಮಗಂ
ಅಳುಕುವೆನು ತಾನಿಂದು ವಿಗ್ರಹಕೆ
ನಿಲುವೊಡಂ
ಸಲವರಂ ಬಿಡು ನೋಡು ರುದ್ರಾವ
ತಾರನಂ ನಿಲ್ಲೆಂದನಾ ಮರುದಿಸು || ೩ ||

○ ○ ○

ತೋರಿಸಿದನಾ ಸವ್ಯಸಾಚಿಗಂ ಪವನ
ಜನ
ಶೌರ್ಯ ಪ್ರತಾಪಮಂ ಚಕ್ರವಂ ಮರೆ
ಮಾಡಿ
ತೋರಿಸಲು ರುದ್ರಾವತಾರನಾಗಿರ
ಲ್ಕಲಿಪಾರ್ಥ ಕಡುಭಯದೊಳು ||
ಜಾರಿದಂ ಹರ ಹರಾ ಹರಯೆಂದು
ಮಣಿರಥವ
ನೇರಿದಂ ಇವ ರುದ್ರನೋ ಅಲ್ಲದಿರಲು
ಸುರ
ವೈರಿಬಲಂ ಸೀಳ್ದ ನರಹರಿಯೋ ಕಟ್ಟುಗ್ರ
ತೆಯ ನಾನೀಸುದಿನವರಿಯೆನು || ೪ ||
ಇಂದು ಕಂಡೆನು ದೇವ ಭೀಮನಾ
ಕೃತಿಯನಾ
ನೆಂದು ಕಾಣೆನೆನಲ್ಕೆ ಮುರಹರಂ
ನಗುತ ನಾ
ವಿಂದಿವಂಗಳುಕಿದೆವು ನಿನ್ನ ಪಾಡೇನೆಂ
ದು ಭೀತಿಯಂ ಪರಿಸಿದನು ||

(ಕರ್ಣಪರ್ವ, ಸಂ ೩೬, ಪ ೪೫–೪೯)

ಗದುಗಿನ ಭಾರತದಲ್ಲಿ ಈ ಭಾವನೆಗಳೇ ಇದ್ದರೂ ಇಲ್ಲಿ ಕವಿಯು ಭೀಮನನ್ನು ಮತ್ತೂ ಚಮಕಿಸಿ ಲೆಕ್ಕಿಸಿರುವನು, ಅಲ್ಲದೆ ಭೀಮನನ್ನು ವರ್ಣಿಸುವ ಪ್ರಸಂಗವನ್ನೆಲ್ಲಿಯೂ ಕವಿಯು ಕಳೆದುಕೊಳ್ಳಲಿಲ್ಲ ಆ ನಾಡವರಿಗೂ ಆಗ ಬುದ್ಧಿ ಪ್ರಧಾನನಾದ ಅರ್ಜುನನಿಗಿಂತ ದೇಹಶಕ್ತಿ ಪ್ರಧಾನನಾದ ಭೀಮಸೇನನೇ ಉತ್ಸಾಹದಾಯಕನಾಗಿದ್ದಿರಬಹುದು.

ಈ ಸಾತ್ವಿಕನಾದ ವರಕವಿಯು ಕ್ರಿ ಶ ೧೮೦೭ರಲ್ಲಿ ದೈವಾಧೀನನಾದನು ಭಗವತ್ಕೃಪೆಗೆ ಪಾತ್ರನಾದ ಈತನು ಕೆಲವು ದಿನಗಳಲ್ಲೇ ತನಗೆ ಬರಲಿರುವ ಮರಣವನ್ನು ಬಂಧುಮಿತ್ರರಿಗೆ ಮೊದಲಾಗಿಯೇ ತಿಳಿಸಿ ಅವರನ್ನೆಲ್ಲಾ ಕರೆಸಿಕೊಂಡು ಮಾತನಾಡುತ್ತಾ ಮಾತನಾಡುತ್ತಾ ಸ್ವರ್ಗಸ್ಥನಾದನಂತೆ!

ಈ ಕವಿಯು ತನ್ನೊಡನೆ ಹುಟ್ಟಿದ ದಾರಿದ್ರ್ಯದ ನಡುವೆ ಕನ್ನಡ ಸಾಹಿತ್ಯ ಸೇವೆಯನ್ನು ಮರೆಯದೆ—ನಾಗವಲ್ಲಿಯು ಕೊಡಲು ಹೂಹಣ್ಣುಗಳಿಲ್ಲದಿದ್ದರೂ ಪತ್ರವನ್ನಾದರೂ ಜನತೆಗೆ ಸಮರ್ಪಿಸುವಂತೆ ಅಪಾರ ವಿದ್ವತ್ತಿಲ್ಲದಿದ್ದರೂ ಇದ್ದ ತಿಳಿವನ್ನೇ ಪೋಣಿಸಿ ಸುಂದರವಾದ ಮಾಲೆ ರಚಿಸಿ, ಕನ್ನಡ ತಾಯಿಯ ಕೊರಳಿಗಿಕ್ಕಿ ಆಕೆಯ ಪ್ರಸನ್ನ ದೃಷ್ಟಿಯನ್ನು ಕಂಡೇ ತೃಪ್ತನಾದ ಪರಮದೇವನು ಪ್ರಾತಃಸ್ಮರಣೀಯನಲ್ಲದೆ ಮತ್ತೇನು? ಇವನಿಗೆ ಸಾಹಿತ್ಯ ರಂಗದಲ್ಲಿ ಸರ್ವಜ್ಞ, ಕನಕದಾಸರ ಮಗ್ಗುಲಲ್ಲೇ ಪೀಠ ದೊರೆಯಲು ಸಂದೇಹವಿಲ್ಲ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ–
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣ ಪತ್ರಿಕೆಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು
NAVAYUGA PRESS, UDIPI.

Quality Air Cushion Rubber Stamps
Crown
RUBBER STAMP CO.
PHONE 203 ESTD 1920
BALMATTA ROAD MANGALORE

ಸರ್ವಾಧಿಕಾರದ ಬಿರುಗಾಳಿ

(೬ನೇ ಪುಟದಿಂದ)

ಅರಸೊತ್ತಿಗೆ ಎಷ್ಟು ದಿನ ಬಾಳಬಹುದೆಂದು ಹೇಳಲಾಗುವುದಿಲ್ಲ.

ಆದರೆ ಸೇನೆಯ ಸರ್ವಾಧಿಕಾರದ ಗಾಳಿ ಕಳೆದ ವರ್ಷ ಪ್ರಥಮ ಆರಂಭವಾದುದು ಫ್ರಾನ್ಸಿನಲ್ಲಿ ಎನ್ನಬಹುದು. ಮಿತಿಮೀರಿದ ಪ್ರಜಾತಂತ್ರ ತತ್ವವನ್ನು ಅಳವಡಿಸಿಕೊಂಡಿದ್ದ ಫ್ರಾನ್ಸಿನ ರಾಜಕೀಯ ಯಂತ್ರವು ತನ್ನ ದೌರ್ಬಲ್ಯವನ್ನು ಜಗತ್ತಿಗೇ ಪ್ರದರ್ಶಿಸಿತು. ಕಮ್ಯೂನಿಸ್ಟರನ್ನುಳಿದ ಉಳಿದ ಅಲ್ಲಿನ ಎಲ್ಲ ಪಕ್ಷಗಳೂ ಜನರಲ್ ಡಿಗಾಲೆಯನ್ನು ಆಮಂತ್ರಿಸಿದರು, ಸ್ವಾಗತಿಸಿದರು, ಅವನಿಗೆ ಸರ್ವಾಧಿಕಾರದ ಪಟ್ಟ ಕಟ್ಟಿದರು. ಅಲ್ಲಿನ ಉದ್ರಿಕ್ತ ನರಮಂಡಲದ ರಾಜಕಾರಣಿಗಳಿಗೆ ದೀರ್ಘ ವಿಶ್ರಾಂತಿ ಹೀಗೆ ದೊರೆಯಿತು.

ಫ್ರಾನ್ಸಿನಲ್ಲಾದ ಈ ಬದಲಾವಣೆ ಏಷಿಯಕ್ಕೆ ರೂಪದರ್ಶಿಯಾದಂತೆ ತೋರುತ್ತದೆ. ಏಕೆಂದರೆ ಫ್ರಾನ್ಸಿನ ಅಂದಿನ ಪರಿಸ್ಥಿತಿಯೂ ಏಷಿಯಾದ ನವೋದಿತ ಸ್ವತಂತ್ರ ರಾಷ್ಟ್ರಗಳಿಗೂ ಮೂಲಭೂತವಾದ ಸಾಮ್ಯವಿದೆ. ಫ್ರಾನ್ಸ್ ಆಫ್ರಿಕಾದಲ್ಲಿ, ಏಷಿಯಾದಲ್ಲಿ ವಸಾಹತುಗಳನ್ನುಳಿಸಲು ಸೋಲುವ ಯುದ್ಧಗಳನ್ನು ಮಾಡಿ ದಿವಾಳಿಯಾಯಿತು. ಜನರ ಸಂಕಷ್ಟಗಳನ್ನು ಬಗೆಹರಿಸಲು ರಾಜಕಾರಣಿಗಳಿಗೆ ಅಸಾಧ್ಯವಾಗಿ ತಮ್ಮೊಳಗೇ ಅವರು ಜಗಳಾಡಿಕೊಂಡರು. ಪ್ರಜಾಪ್ರಭುತ್ವದ ಸಂಖ್ಯಾತ್ಮಕ ಪ್ರಾಧಾನ್ಯವು ಸರ್ಕಾರದ ಸ್ಥಿರತೆಗೇ ಕೊಡಲಿಯೇಟು ಹಾಕಿತು.

ಏಷಿಯಾದ ರಾಜ್ಯಗಳಲ್ಲಿ ಅಂತಹ ದಾರಿದ್ರ್ಯವನ್ನು ಕಿತ್ತೊಗೆಯುವ ಕೆಲಸವು ನೂತನ ಪ್ರಜಾರಾಜ್ಯಗಳಿಂದ ಯಶಸ್ವಿಯಾಗಿ ಮತ್ತು ಸಮರ್ಪಕವಾಗಿ ಆಗಿಲ್ಲ. ನಮ್ಮ ದೇಶ ಮತ್ತು ಪಾಕಿಸ್ಥಾನ ಕಾಶ್ಮೀರದಂತಹ ಅರ್ಬುದ ಮಾದರಿಯ ಪ್ರಶ್ನೆಗಳನ್ನೇ ಕೆದಕಿಸಿಟ್ಟುಕೊಂಡು ಸೇನೆಯನ್ನು ಸಾಕಲಿಕ್ಕೆ ತಮ್ಮ ಸಂಪತ್ತಿನ ಅಧಿಕಾಂಶವನ್ನು ವ್ಯಯಿಸುತ್ತವೆ. ಸುಧಾರಣೆ ಎಂಬ ಪದವು ಈ ದೇಶಗಳಲ್ಲಿ ಅರ್ಥರಹಿತವಾಗಿಗೆ. ಇವುಗಳಲ್ಲಿನ ಉತ್ಪನ್ನ ಹೆಚ್ಚಿಲ್ಲ, ಅದರ ಬದಲು ಜೀವನ ವೆಚ್ಚದ ಮಟ್ಟ ಏರುತ್ತಲೇ ಇದೆ. ವಿದೇಶಗಳೊಡನೆ ಸಾಲದ ವ್ಯವಹಾರವನ್ನು ನಡೆಸುತ್ತ ಈ ದೇಶಗಳು ತಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಅಸಮರ್ಥವಾಗಿವೆ.

ಮತ್ತೆ ಈ ದೇಶಗಳ ರಾಜಕಾರಣಿಗಳು ವಹಿಸುತ್ತಿರುವ ಪಾತ್ರವು ರಾಷ್ಟ್ರದ ಉನ್ನತಿಗೆ ಪ್ರೇರಕವಾಗಿಲ್ಲ. ಎಲ್ಲೆಡೆಯಲ್ಲೂ ಸ್ವಾರ್ಥದ ಸಂಕುಚಿತ ಮನೋಭಾವದಿಂದ ಈ ಹೊಸ ರಾಜಕಾರಣಿಗಳು ವರ್ತಿಸುತ್ತಿದ್ದಾರೆ, ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ಧ್ಯೇಯವು ಇವರಿಗಿಲ್ಲವೆನ್ನಬಹುದು. ಆದ್ದರಿಂದ ದೇಶದ ಒಗ್ಗಟ್ಟಿಗೆ ಇವರು ಸಹಾಯಕರಾಗಿಲ್ಲ.

ಲೆಬನಾನಿನಲ್ಲಿ ಎರಡು ತಂಡದ ರಾಜಕಾರಣಿಗಳೊಳಗೆ ಅಂತರ್ಯುದ್ಧ ನಡೆದು ಒಂದು ಘಟ್ಟದಲ್ಲಿ ರಷ್ಯಾ-ಅಮೇರಿಕಗಳೊಳಗೆ ಚಕಮಕಿಯಾಗುವ ಸಂಭವ ಕೂಡಾ ತೋರಿಬಂತು. ಅರಬ ರಾಷ್ಟ್ರಗಳಲ್ಲೆಲ್ಲ ಈ ರೀತಿಯ ಪ್ರಜಾಪ್ರಭುತ್ವದ ವಿರುದ್ಧವಾದ ಪ್ರತಿಕ್ರಿಯೆ ಹೆಚ್ಚೆಚ್ಚಾಗಿ ತೋರುತ್ತಿದೆ. ನಾಸ್ಸೆರರ ಈಜಿಪ್ಟ್, ಜೋರ್ಡಾನ್, ಟ್ಯೂನಿಸ್, ಕಾಸೆಪಾ, ಇರಾಕ್ ಮುಂತಾದೆಡೆ ಪ್ರಜಾಸತ್ತೆ ನೆಲೆಗೊಂಡಂತೆ ತೋರುವುದಿಲ್ಲ. ಮಧ್ಯಪೂರ್ವದ ಈ ಬಿಸಿ ವಾತಾವರಣ ಪಾಕಿಸ್ಥಾನದ ಮೇಲೆ ನೇರವಾಗಿ ತಟ್ಟಿ, ಅಲ್ಲಿಯ ಪ್ರಜಾಸತ್ತೆ ನಾಶವಾಗಿ ಅಯೂಬ್ ಖಾನರ ಸೇನಾಡಳಿತೆ ಊರ್ಜಿತಕ್ಕೆ ಬಂತು. ಸಮಾಜವಾದೀ ಬರ್ಮಾದಲ್ಲೂ ಸೇನಾಧಿಕಾರಿಯು ಪ್ರಧಾನಿಯಾಗಿದ್ದಾನೆ. ಇಂಡೋನೇಷಿಯಾದಲ್ಲಿ ಸುಮಾರು ಸಮಯದಿಂದ ಅಂತರ್ಯುದ್ಧ ನಡೆಯುತ್ತಿದೆ. ಕ್ಯಾಂಬೋಡಿಯಾ, ಲಾವೋಸ್, ಮಲಯಾಗಳಲ್ಲೂ ಪ್ರಜಾಸತ್ತೆಯ ಸ್ಥಿತಿ ತೀರ ಅನಿಶ್ಚಿತವಾಗಿ ಉಳಿದಿದೆ. ಸಿಂಹಳದ ರಾಜಕಾರಣವೂ ಸರ್ವಾಧಿಕಾರದ ಕಡೆಗೆ ಸಾಗುತ್ತಿದೆ. ಈಗಾಗಲೇ ಒಮ್ಮೆ ನಾಯಕರ ಕೊಲೆಗೆ ಒಳಸಂಚು ನಡೆದಿದೆ.

ಹೀಗಿರುವಾಗ ಈ ಸರ್ವಾಧಿಕಾರದ ಬಿರುಗಾಳಿ ನಮ್ಮ ದೇಶದ ಮೇಲೂ ಬೀಸಿದರೆ ಯಾರೂ ಆಶ್ಚರ್ಯಪಡಬೇಕಿಲ್ಲ. ಏಕೆಂದರೆ ಪ್ರಜಾಸತ್ತೆ ನಮಗೆ ಹೊಸದು. ಅದರ ಈ ಆರಂಭದ ಘಟ್ಟವು ಅಷ್ಟೊಂದು ಪ್ರಶಸ್ತವಾಗಿ ನಡೆದಿದೆಯೆನ್ನುವುದು ಕಷ್ಟಸಾಧ್ಯ. ಜಯಪ್ರಕಾಶ ನಾರಾಯಣರು ಈಗಾಗಲೇ ಇದರ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ. ಮುಂಧ್ರಾ ಪ್ರಕರಣದಂಥ ಪ್ರಸಂಗಗಳು ಪ್ರಜಾಸತ್ತೆಯ ಹಿರಿಮೆಯನ್ನು ತೋರಿಸಿ ಕೊಟ್ಟಿವೆಯೆನ್ನುವುದರ ಬದಲು ಅದರ ದೌರ್ಬಲ್ಯವನ್ನು ಹೊರಗೆಡಹಿವೆಯೆನ್ನುವುದು ಹೆಚ್ಚು ಸತ್ಯವೆಂದು ಕಾಣುತ್ತದೆ. ಈಗಲಂತೂ ಸಮಾಜವಾದದ ನಿಷ್ಠೆಯಿಂದ ಭೂಮಿಗೆ ಸಂಬಂಧಿಸಿ ಕ್ರಾಂತಿಕಾರೀ ಸುಧಾರಣೆಗಳಿಗೆ ಆಳುವ ಪಕ್ಷ ಕೈಹಾಕಿದೆ. ಆದರೆ ಈ ಸುಧಾರಣೆಯು ಭೂಮಾಲೀಕರ ಹೊರತು ಬೇರೆಯವರಿಗೂ ಅನ್ವಯಿಸುವುದಿಲ್ಲ. ಇದನ್ನು ತತ್ವನಿಷ್ಠರಾಗಿ ಎಲ್ಲರೂ ಸ್ವಾಗತಿಸಿ, ದೇಶದ ಉದ್ಧಾರವನ್ನು ಸಾಧಿಸುತ್ತಾರೋ ಎಂಬುದನ್ನು ನೋಡಬೇಕಾಗಿದೆ.

ಸಕ್ರಮ ದಿನಚರಿ

ನಾವು ದೃಢಕಾಯರೂ ನಿರೋಗಿಗಳೂ ಸದಾನಂದರೂ ಪ್ರಫುಲ್ಲಿತ ವದನರೂ ಕಾರ್ಯಪಟುಗಳೂ ಪರಿಶ್ರಮಶೀಲರೂ ರಾಷ್ಟ್ರೀಯರೂ ದೀರ್ಘಾಯುಗಳೂ ಆಗಿ ಬಾಳಬೇಕಾದರೆ, ತಮ್ಮ ಜೀವನದಲ್ಲಿ ಸಕ್ರಮವಾದ ದಿನಚರಿಯನ್ನು ಅಳವಡಿಸಿಕೊಳ್ಳಬೇಕು. ಸ್ವತಂತ್ರ ಪ್ರಜಾರಾಜ್ಯ ಭಾರತದ ನಾಗರಿಕರಾದ ನಮಗೆ ನಮ್ಮ ಪ್ರಧಾನಿಯವರ ಜೀವನವಿಧಾನವು ಈ ದಿಸೆಯಲ್ಲಿ ಮಾರ್ಗದರ್ಶಕವಾಗದುಳಿಯದು.

ಸಂಗ್ರಹಕಾರರು: ಶ್ರೀ. ಎಂ. ರಂಗರಾವ್

ಒಬ್ಬರು ೭೦ನೆಯ ವರುಷಕ್ಕೆ ಕಾಲಿಡುತ್ತಿದ್ದಾರೆನ್ನುವಾಗ ನಾವು ಅವರನ್ನು ಕುರಿತು ಹೇಗೆ ಚಿತ್ರಿಸಿಕೊಳ್ಳುತ್ತೇವೆ? ಕೈಕಾಲು ನಡುಗುತ್ತಿರಬಹುದು; ಮುಖವು ಸುಕ್ಕು ಬಿದ್ದಿರಬಹುದು. ಊರುಗೋಲಂತೂ ಅತೀ ಅಗತ್ಯ. ಮುಖವು ಭೂಮಿಯ ಕಡೆಗೇ ಬಾಗಿದ್ದೀತು. ಅವರು ಶ್ರೀಮಂತರಿರಲಿ, ಬಡವರಿರಲಿ; ಅಷ್ಟು ವೃದ್ಧಾಪ್ಯದಲ್ಲಿ ನಾವು ಅವರನ್ನು ಈ ರೂಪದಿಂದಲೇ ಚಿತ್ರಿಸಿಕೊಳ್ಳುತ್ತೇವೆ. ನಾವೆಲ್ಲರೂ ಬಲ್ಲ ಅಷ್ಟು ಪ್ರಾಯವಾದವರೊಬ್ಬರು ಇತ್ತೀಚೆಗೆ 'ನಾನೇನೋ ಹುಡುಗನಾಗುತ್ತಾ ಬರೋ ಹಾಗೆ ನನಗೆ ಕಾಣುತ್ತೆ!' ಅಂದರೆ ನಮಗೆಷ್ಟು ಆಶ್ಚರ್ಯವಾಗಲಿಕ್ಕಿಲ್ಲ? ಆ 'ಮುದಿ ಹುಡುಗನ' ದಿನಚರ್ಯೆಯನ್ನು ಗಮನಿಸಿದರೆ ಅವರ ಆ ಹುಡುಗತನದ ಕಾರಣವನ್ನು ಕಂಡು ಹಿಡಿಯಬಹುದು.

ಸದಾ ಚುರುಕಾಗಿದ್ದು, ೧೮ ಗಂಟೆ ಮಿದುಳಿಗೆ ಕೆಲಸ ಕೊಡುತ್ತ, ದೀರ್ಘ ಪ್ರಯಾಣದಿಂದ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗುತ್ತ ವಿದೇಶೀಯರನ್ನು ಕೂಡ ಆಶ್ಚರ್ಯಪಡಿಸುವ ಆ ಮುದಿ ಹುಡುಗನ ಹಸನ್ಮುಖದ ಪೂರ್ವ ಮುಂಜಾನೆಯ ೬ ಗಂಟೆಯ ಆ ದಿವ್ಯ ಮುಹೂರ್ತದಲ್ಲಿ ಅಡಗಿದೆ. ಯಾವ ಋತುವೇ ಆಗಿರಲಿ ೬ ಗಂಟೆಯ ಮೇಲೆ ಆತ ಮಲಗುವುದಿಲ್ಲ.

ಆತನ ಜೈಲುವಾಸದಲ್ಲಿ ಅಭ್ಯಾಸ ಮಾಡಿದ ವ್ಯಾಯಾಮಗಳನ್ನು ಆತ ಈ ರಾಜಪದವಿಯಲ್ಲಿಯೂ ಬಿಟ್ಟು ಕೊಡಲಿಲ್ಲ. ಬೆಳಿಗ್ಗೆ ಶರೀರ ವ್ಯಾಯಾಮವಾದ ಮೇಲೆ ಶೀರ್ಷಾಸನ ಹಾಕುತ್ತಾನೆ ಆ ಹುಡುಗ. ಸಕ್ರಮವಾದ ಈ ಲಘು ವ್ಯಾಯಾಮಗಳೇ ಅವನ ದೇಹಾರೋಗ್ಯದ ಜೀವಾಳವಂತೆ. ಹೌದು, ಔಷಧ ಸೇವನೆಯ ಅಭ್ಯಾಸವೇ ಆತನಿಗಿಲ್ಲ; ಅದರಲ್ಲಿ ವಿಶ್ವಾಸವೂ ಇಲ್ಲ. ತಲೆನೋವೋ ನೆಗಡಿಯೋ ಬಂದರೆ ಉಪ್ಪು ಹಾಕಿದ ನಿಂಬೇರಸ ಮತ್ತು ಬಿಸಿಯಾದ ಚಹಾ ತೆಗೆದುಕೊಳ್ಳುತ್ತಾನಂತೆ.

ವ್ಯಾಯಾಮದ ನಂತರ ಸ್ನಾನ, ಆ ಮೇಲೆ ಪತ್ರಿಕಾ ವಾಚನ. ದಿನಪತ್ರಿಕೆಗಳೆಲ್ಲವನ್ನೂ ಈ ಮೂಲೆಯಿಂದ ಆ ಮೂಲೆಯ ವರೆಗೂ ತಿರುಗಿಸಿ ನೋಡುತ್ತಾನೆ. ಯಾವ ಪುಟದಲ್ಲಿ ತನಗೆ ಬೇಕಾದ್ದುಂಟೆಂಬುದು ಆತನಿಗೆ ಗೊತ್ತಿರುವುದೇನೋ ಅನಿಸುತ್ತದೆ. ಒಮ್ಮೆ ಓದಿದುದನ್ನು ಸರಿಯಾದ ವಿವರಣೆಯೊಂದಿಗೆ ನೆನಪಿಟ್ಟುಕೊಳ್ಳುತ್ತಾನೆ. ಜಾತೀಯ—ಅಂತರ್ಜಾತೀಯ ಪರಿಣಾಮಕಾರಕವಾದ ಲೇಖನಗಳ ಮೇಲೆ ಆತನಿಗೆ ಪ್ರತ್ಯೇಕ ಇಷ್ಟವಿರುತ್ತದೆ. ಈ ಪತ್ರಿಕಾ ವಾಚನ ಮುಗಿಯುವದೆ, ಅಧಿಕಾರ ರೀತಿಯಾಗಿಯೋ ಅನಧಿಕಾರ ರೀತಿಯಾಗಿಯೋ ಆತ ಯಾರೊಂದಿಗೂ ಕಲೆತುಕೊಳ್ಳಲಾರ. ಪ್ರಧಾನಿಯಾಗಿ ವಿದೇಶಾಂಗ ಮಂತ್ರಿಯಾಗಿ, ಜಗತಿಕ ನಾಯಕನಾಗಿ ತನಗೆ ಅಗತ್ಯವುಳ್ಳ ಆಜಾವಾರ್ತೆಗಳೆಲ್ಲವನ್ನೂ ಆತ ತಿಳಿದುಕೊಂಡಿರುತ್ತಾನೆ.

ಬೆಳಿಗ್ಗೆ ಮನೆಯಲ್ಲಿರುವ ಎಲ್ಲರೊಂದಿಗೆ ಕೂಡಿಕೊಂಡೇ 'ಛೋಟಾ ಹಜ್ರೀ' ತೆಗೆದುಕೊಳ್ಳುತ್ತಾನೆ. ಕುಮಾರಿ ಮೊಮ್ಮಕ್ಕಳು ಮೊದಲಾದ ಆಪ್ತರೊಂದಿಗೆ, ಇನ್ನೂ ಯಾರಾದರೂ ಗೆಳೆಯರೊಂದಿಗೆ ಆತ ಕುಶಾಲಾಗಿ ಕಳೆಯುವ ವೇಳೆಯೇ ಅದಾಗಿರುತ್ತದೆ. ಹುಡುಗರಿಗೆ ಹೇಗೆ ಸೈಕಲ್ ತುಳಿಯಬೇಕೆಂಬುದನ್ನು ಹೇಳಿಕೊಡುವಂತಹ ಈ ಸಮಯವೇ ಆತನಿಗೊಂದು ಸ್ವತಂತ್ರ ಸುಖಸಮಯ. ಮತ್ತೆ ಆಫೀಸಿಗೆ ಹೊರಟುಹೋದನೆಂದರೆ ಅರ್ಧರಾತ್ರಿಯ ವರೆಗೂ ಸರಕಾರೀ ಕಾರ್ಯಕಲಾಪಗಳಲ್ಲಿಯೇ ಮುಳುಗಿ ಹೋಗಿರುತ್ತಾನೆ.

(ಮುಂದಿನ ಪುಟ ನೋಡಿರಿ)

ತಾಜಾ ವಜ್ರಗಳಿಗೆ ಖಾತ್ರಿ ವಜ್ರದಂಗಡಿ
ಎಸ್. ಎಲ್. ಶೇಟ್ ಡಾಯಮಂಡ್ ಹೌಸ್
ಕಾರ್ನಾಡ್ ಸದಾಶಿವ ರಾವ್ ರೋಡ್,
ಮಂಗಳೂರು.
ಚಿನ್ನದ ಯಾವತ್ತೂ ಆಧುನಿಕ ಫೇಶನಿನ ಆಭರಣಗಳಿಗೆ
ಹೆಸರಾಂತ ಸುವರ್ಣ ಗೃಹ.
ಬೆಳ್ಳಿ, ಬಂಗಾರದ ತರಹವಾರು ಒಡವೆಗಳು ಸದಾ ದೊರೆಯುತ್ತವೆ.
ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.
Tel. GOLDKING· *Proprietor.* S. L. SHET.

ಮೈಸೂರು ಟೈಪ್ ಫೌಂಡ್ರಿ,
ಸುಬೇದಾರ್ ಛತ್ರಂ ರೋಡು, ಬೆಂಗಳೂರು—2.
ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಕೊಡುವುದರಿಂದ ವಿಶೇಷ ಉಳಿತಾಯವಾಗುತ್ತದೆ.
ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು
ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ:—
THE MYSORE TYPE FOUNDRY
Subedar Chatram Road, BANGALORE-2.

(ಹಿಂದಿನ ಪುಟದಿಂದ)

ಧನಾಢ್ಯ ವಂಶಜಾತನಾದ ಈತನಿಗೆ ಜನತಾ ಮಧ್ಯದಲ್ಲಿರುವುದೇ ಆನಂದ. ತನ್ನ ಖಚಿತವಾದ ಅಭಿಪ್ರಾಯ ಸೂಚಿಸುವ ಆಡಂಬರವಿಲ್ಲದ ಭಾಷೆಯಿಂದ ತನ್ನ ಚಿತ್ತ ಶುದ್ಧಿಯನ್ನು ಜನತೆಯ ಹೃದಯಕ್ಕೆ ಮುಟ್ಟಿಸುವ ಶಕ್ತಿ ಆವನಿಗುಂಟು. ಬೆಳಗ್ಗಿನ ಆ ಸ್ವಲ್ಪ ವೇಳೆಯನ್ನೇ ಆತ ಅಂತಹ ಜನರ ದರ್ಶನಕ್ಕಾಗಿ ಪ್ರತ್ಯೇಕಿಸಿರುತ್ತಾನೆ. ಅಂತಹ ಸಮಯದಲ್ಲಿ ಆತನ ಮನೆಯ ಆವರಣದ ಮುಂದೆ ವೈಸರೋ ಯುವಕರೋ ಕೂಡಿರುತ್ತಾರೆ. ತಮ್ಮ ಕೋರಿಕೆಗಳನ್ನು ನಿವೇದಿಸಿಕೊಳ್ಳುವವರು ಕೆಲವರಾದರೆ ಕೆಲವರು ಸುಮ್ಮನೆ ಆತನ ದರ್ಶನ ಮಾತ್ರಕ್ಕೆ ಬಂದವರು. ಅವರೊಡನೆ ಹೇಗೆ ನಿಸ್ಕಪಟವಾಗಿ ಮಾತಾಡುತ್ತಾನೋ, ಸಲಹೆಕೊಡುತ್ತಾನೋ, ಆಮೋದನೆ ತೋರುತ್ತಾನೋ, ದೊಡ್ಡ ದೊಡ್ಡ ಸಭೆಗಳಲ್ಲಿಯೂ, ಅದೇ ರೀತಿಯಾಗಿ ಮಾತಾಡುತ್ತಾನೆ. ಮಾತಿನ ನೈಪುಣ್ಯದಿಂದ ಭ್ರಮೆಗೊಳಿಸಲಾರ; ಮಾರ್ಮಿಕತೆಯಿಟ್ಟು ಹೇಳಲಾರ. ಅಂತೆಯೇ ದೇಶದ ಪ್ರತಿವ್ಯಕ್ತಿಯ ಹೃದಯದಲ್ಲಿಯೂ ಅವನ ಹೆಸರು ಕೇಳುತ್ತಲೇ ಒಂದು ಆಶಾಜ್ಯೋತಿ ಬೆಳಗುತ್ತದೆ. ಆತ ಎಚ್ಚರಿಸಿದರೂ, ಕೋಪಿಸಿದರೂ, ವಿರೋಧಿಸಿದರೂ ಜನತೆಗೆ ಅವನ ಮೇಲಿರುವ ಪ್ರೇಮಾಭಿಮಾನಗಳು ಮಾತ್ರ ಒಂದಿಷ್ಟೂ ತಗ್ಗುವುದಿಲ್ಲ.

ಮಕ್ಕಳ ಲೀಲಾಕಾರ್ಯದಲ್ಲಿ ಸೇರಿಕೊಳ್ಳುವುದೆಂದರೆ ಆತನಿಗೆ ಅಮಿತ ಪ್ರೀತಿ. ಈ ಮಕ್ಕಳ ಪ್ರೇಮದಿಂದಲೇ ಆತ ಹುಡುಗನಾಗುತ್ತ ಬರುತ್ತಿದ್ದಾನೇನೊ! ಮಕ್ಕಳು ಕೂಡ ಆತನನ್ನೊಬ್ಬ ಅಣ್ಣನಂತೆ ಧಾರಾಳವಾಗಿ ತಮ್ಮಾಟದೊಂದಿಗೆ ಸೇರಿಸಿಕೊಳ್ಳುತ್ತಾರೆ. ಪಾಪ, ಹೆಚ್ಚು ಆಡಲು ಆತನಿಗೆ ಸಮಯವಿಲ್ಲ.

ಈತನನ್ನು ತಿದ್ದಿ ಸರಿಮಾಡಿದವರಾರು ಗೊತ್ತೇ? ಸಾಕ್ಷಾತ್ ಮಹಾತ್ಮಾಗಾಂಧಿ, "ಪ್ರಜ್ಞಾ ವಿಶೇಷವುಳ್ಳ ರಾಜನೀತಿಜ್ಞ, ಯೋಧನಿವ" ಎಂದು ಮಹಾತ್ಮಾಗಾಂಧಿ ಈತನನ್ನು ಕುರಿತು ಹೇಳಿರುತ್ತಾರೆ. ಅರ್ಧರಾತ್ರಿಯ ಮೇಲೆ ನಿದ್ರೆಗೆ ಮೊದಲು ಗಾಂಧೀ ಸಾಹಿತ್ಯವನ್ನಷ್ಟು ಮನನಮಾಡಿಕೊಂಡೇ ಈತ ಮಲಗುವುದಂತೆ.

ಮಹಾತ್ಮಾಗಾಂಧಿಯೂ ಹೇಳಿದ್ದರು. ತಾನು ೧೨೫ ವರ್ಷ ಬದುಕುತ್ತೇನೆಂದು. ಅಂಥ ಆತ್ಮವಿಶ್ವಾಸವೂ ಧೈರ್ಯವೂ ಮತ್ತಾರಿಗೆ ಬಂದೀತು? ೪೫-೫೦ ವಯಸ್ಸಾಗುತ್ತಲೇ ಇನ್ನೇನಪ್ಪಾ, ಅರ್ಧಾಯುಸ್ಸು ತೀರಿತು, ಇನ್ನು ಬೇಗ ಸಾಯುವೆನೋ ಎಂದು ಮರಣಭಯದಿಂದ ನಡುಗುತ್ತಾರೆ ಸಾಮಾನ್ಯ ಜನರು. ಮುದುಕರಾದರಂತೂ ಇಂದೋ ನಾಳೆಯೋ ಎಂಬುದೇ ಜಪ!

ಏಕೀ ಭಯ? ಮರಣವು ಕಟ್ಟಿಟ್ಟ ಗಂಟಿನಂತೆ ಒಂದು ದಿನ ಬರುವುದು ಗೊತ್ತೇ ಇದೆ. ಅದು ಬರುವವರೆಗೂ ಅದರ ಗೊಡವೆಯೇಕೆ? ಅದು ಮೂಲೆಯಲ್ಲೇ ಇರಲಿ. ಎಲ್ಲರಲ್ಲಿಯೂ ಆತ್ಮವಿಶ್ವಾಸ ಬೆಳೆಯಲಿ! ಅಂತಹ ವಿಶ್ವಾಸವನ್ನು ಗಳಿಸಿಕೊಳ್ಳಲು ಸಕ್ರಮವಾದ ದಿನಚರ್ಯೆಯನ್ನು ತಪ್ಪದೆ ಆಳವಡಿಸಿಕೊಳ್ಳಬೇಕು; ಇದಕ್ಕೆ, ಈ ಮೇಲೆ ಹೇಳಿದ ಮುದಿ ಹುಡುಗನಾದ ನಮ್ಮ ಮಹಾ ಪ್ರಧಾನಿ ಜವಾಹರಲಾಲ ನೆಹರುಗಳ ದಿನಚರಿ ಕಾರ್ಯಕ್ರಮಗಳೇ ಆದರ್ಶವಾಗಬಲ್ಲುದು.

ಸ್ವತಂತ್ರ ಭಾರತ ಎತ್ತ ಸಾಗಿದೆ?

(೫ನೇ ಪುಟದಿಂದ)

ಸರಕಾರದ ಧೋರಣೆ ಸರಿಯಲ್ಲ ಎನ್ನಬೇಕು-ಸರಕಾರಿ ಕಚೇರಿಗಳೇನು ಅನಾಥಾಲಯಗಳಲ್ಲ ಸರಕಾರಿ ಕಚೇರಿಗಳಲ್ಲಿ ಅಧಿಕಾರಿಗಳು, ಗುಮಾಸ್ತರು ಏಕೆ ಇರಬೇಕು-ಸರಕಾರದ ಆಡಳಿತದ ಕಾರ್ಯಗಳನ್ನು ಸುಸೂತ್ರವಾಗಿ ನಡಸಿಕೊಂಡು ಬರುವದಕ್ಕಾಗಿಯಲ್ಲವೆ? ಹಾಗಾದರೆ ಇಲ್ಲಿ ದಕ್ಷತೆ ಮತ್ತು ಯೋಗ್ಯತೆ ಪ್ರಧಾನವಾಗಿರಬೇಕೇ? ಅಥವಾ ಹಿಂದುಳಿದ-ಮುಂದುಳಿದ ಸಂಗತಗಳು ಪ್ರಧಾನವೆ? ಇಂದಿನ ಸರಕಾರಿ ಕೆಲಸಗಳೆಲ್ಲ ನಿಧಾನವಾಗಿವೆ-ಸರಕಾರಿ ಯಂತ್ರ ಆಮೆ ನಡಿಗೆಯಲ್ಲಿದೆ ಎಂಬ ದೂರಿಗೆ ಈ ದೋಷವೇ ಕಾರಣವಲ್ಲವೆ? ಜಾತ್ಯತೀತ ರಾಷ್ಟ್ರವೆಂದ ಮೇಲೆ ಆ ರಾಷ್ಟ್ರದ ಎಲ್ಲ ಕಾರ್ಯಗಳಲ್ಲೂ ಈ ಮಾತು ಅರ್ಥವತ್ತಾಗಿರಬೇಕು. ಹಿಂದುಳಿದವರನ್ನು ಮೇಲೆತ್ತಲು ಅವರಿಗೆ ಉಚಿತ ವಿದ್ಯಾಭ್ಯಾಸ ಇತ್ಯಾದಿಗಳನ್ನು ಒದಗಿಸಿ, ಯೋಗ್ಯ ವಾತಾವರಣವನ್ನು ಕಲ್ಪಿಸಿ ಅವರು ಉತ್ತಮ ಬಾಳ್ವೆಯನ್ನು ನಡೆಸುವಂತೆ ಅವಕಾಶಗಳನ್ನು ಕಲ್ಪಿಸಿಕೊಡುವುದೇ ಮುಂತಾದ ಕಾರ್ಯಗಳು ಗೊತ್ತುಪಡಿಸಬೇಕು ಹೊರತು ಅವರನ್ನು ಇತರರೊಡನೆ ಸ್ಪರ್ಧೆಗೆ ಬಿಡಬಾರದು.

ಹತ್ತು ವರ್ಷಗಳ ನಂತರವಾದರೂ, ನಮ್ಮಲ್ಲಿ ಪಾನನಿರೋಧ ಶಾಸನವಿರಬೇಕೆ, ಇರಬಾರದೆ, ಈ ಕಾರ್ಯವನ್ನು ಸರಕಾರವೇ ಜವಾಬ್ದಾರಿ ಹೊತ್ತು ನಡಸಬೇಕೆ, ಅಥವಾ ಸಮಾಜ ಸುಧಾರಕರಿಗೆ ಬಿಡಬೇಕೆ ಎಂಬುದನ್ನು ಯೋಚಿಸುವುದು ಅವಶ್ಯ—ಪಾನನಿರೋಧದ ಕಾರ್ಯವನ್ನು ಸರಕಾರ ಸಮಾಜ ಸುಧಾರಕರಿಗೆ ಬಿಡಬೇಕು-ಎಂಬುದು ದೇಶದಾದ್ಯಂತ ಜನಜನಿತವಾದ ಅಭಿಪ್ರಾಯ. ನಮ್ಮ ಪಾನನಿರೋಧ ಕಾರ್ಯ ಯಾವ ಪ್ರಾಂತದಲ್ಲೂ ಯಶಸ್ವಿಯಾಗಿಲ್ಲ. ಇದರಿಂದ ಕಳ್ಳಭಟ್ಟಿಯ ತಯಾರಿ-ಸರಕಾರಿ ಕಾನೂನುಗಳ ಉಲ್ಲಂಘನ,—ಆರೋಗ್ಯಕ್ಕೆ ತೀರ ಕೆಡುಕಾದ ಪಾನೀಯಗಳ ಸೇವನೆ,—ಇತ್ಯಾದಿ ಸಮಾಜ ಘಾತಕ ಕಾರ್ಯಗಳೇ ಹೆಚ್ಚಿವೆ ಎಂಬುದನ್ನು ತಜ್ಞರೇ ಸರಕಾರಕ್ಕೆ ತೋರಿಸಿಕೊಟ್ಟಿದ್ದಾರೆ. ಕಾಂಗ್ರೆಸ್ಸಾದರೂ ಕೇವಲ ಪ್ರತಿಷ್ಠೆಯ ದೃಷ್ಟಿಯಿಂದ ಈ ಶಾಸನವನ್ನು ಮುಂದುವರಿಸಿಕೊಂಡು ಬಂದಿದೆ. ಆದರೆ ವಸ್ತುಸ್ಥಿತಿಯನ್ನು ಅರಿತು ಕಾಂಗ್ರೆಸ್ಸು ತನ್ನ ಧೋರಣೆಯನ್ನು ಇನ್ನಾದರೂ ಬದಲಿಸುವುದು ಅಗತ್ಯ. ಮದ್ಯಪಾನವನ್ನು ಪ್ರೋತ್ಸಾಹಿಸಬೇಕು ಎಂದು ಯಾರೂ ಹೇಳಲಾರರು. ಆದರೆ ಬರಿಯ ಶಾಸನದಿಂದ ಇದನ್ನು ಪ್ರತಿಬಂಧಿಸುವುದು ಅಸಾಧ್ಯ ಎಂದು ಈಗ ಸಿದ್ಧಾಂತವಾಗಿದೆ. ಮದ್ಯಪಾನ ಎಷ್ಟು ನಿಷೇಧ್ಯವೋ ಮಾದಕ ಪದಾರ್ಥಗಳ ಸೇವನೆ, ಕಾಫಿ, ಚಹಾ, ಪಾನೀಯಗಳೂ ಅಷ್ಟೇ ಹಾನಿಕರವಲ್ಲವೆ? ಹಾಗಾದರೆ ಸರಕಾರ ಈ ವಿಚಾರಗಳಲ್ಲಿ ಏಕೆ ಮೌನವಾಗಿದೆ? ಚಹಾ ಪಾನೀಯದ ಪ್ರಚಾರಕ್ಕೆ ಮತ್ತು ಕಾಫಿಯ ಪ್ರಚಾರಕ್ಕೆ ಸರಕಾರವೇ ಪ್ರೋತ್ಸಾಹ ಇತ್ತಿದೆ. ಇದರಿಂದಾಗಿ ಪರಿಶುದ್ಧ ಹಾಲಿನ ಕೊರತೆ ನಮ್ಮ ದೇಶದಲ್ಲಿ ತುಂಬ ಉಂಟಾಗಿದೆ, ಅಲ್ಲದೆ ಕೂಲಿಕಾರರೇ ಆದಿಯಾಗಿ ಎಲ್ಲ ಶ್ರಮಜೀವಿಗಳೂ, ಪ್ರಾಯ ಹರಿಯದ, ದೇಹ ತುಂಬದ ವಿದ್ಯಾರ್ಥಿಗಳು, ಮಹಿಳೆಯರೂ, ಅವ್ಯಾಹತವಾಗಿ, ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ಯಥೇಷ್ಟವಾಗಿ ಚಹಾ ಕಾಫಿಗಳನ್ನು ಸೇವಿಸಲು ಅಭ್ಯಸಿಸಿ, ಒಂದೆಡೆ ಬಡತನ ಹೆಚ್ಚುತ್ತಿದೆ; ಇನ್ನೊಂದೆಡೆ ಪೌಷ್ಟಿಕ ಆಹಾರದ ಕಡೆ ಜನತೆಯ ಲಕ್ಷ್ಯ ಕಡಿಮೆಯಾಗುತ್ತಿದೆ; ಮಗದೊಂದೆಡೆ, ಇಂತಹ ಪಾನೀಯಗಳ ವಿಶೇಷ ಸೇವನೆಯಿಂದಾಗಿ ಜನತೆಯಲ್ಲಿ ದೇಹದ ದೌರ್ಬಲ್ಯ ಹೆಚ್ಚಿ, ನಾನಾರೂಪದ ಕಾಹಿಲೆಗಳಿಗೆ ಅವಕಾಶವಿತ್ತಂತಾಗಿದೆ. ಹಾಗೆಯೇ ಬೀಡಿ, ಸಿಗರೇಟು, ಮುಂತಾದ ತಂಬಾಕು ಸೇವನೆ. ಎಳೆಯ ಮಕ್ಕಳ ಆದಿಯಾಗಿ, ಇಂದು ಎಲ್ಲರೂ ಕಡ್ಡಾಯರೂಪದಲ್ಲಿ ತಂಬಾಕು ಸೇವಿಸುತ್ತಿದ್ದಾರೆ. ಬೀಡಿ ಸಿಗರೇಟುಗಳ, ತಯಾರಿಕೆ, ಕಾಫಿ, ಚಹಾ, ಇವುಗಳು ನಮ್ಮ ದೇಶದ ಪ್ರಸಿದ್ಧ ಕೈಗಾರಿಕೆಗಳಾಗಿವೆ. ಅಷ್ಟೇ ಹೆಚ್ಚಾಗಿ ದೇಶದ ಮಾನವಬಲ ಸಂಪತ್ತನ್ನು ಕುಗ್ಗಿಸಲೂ ಕಾರಣವಾಗಿದೆ. ಜತೆಯಲ್ಲಿಯೇ ನಿತ್ಯ ಜೀವನದ ಬೆಲೆಯನ್ನು ಹೆಚ್ಚಿಸಿ, ದೇಶದಲ್ಲಿ ಸಾಮೂಹಿಕ ಬಡತನಕ್ಕೂ ಕಾರಣವಾಗಿವೆ. ವಿಶೇಷ ತಂಬಾಕು ಸೇವನೆಯಿಂದ ಕ್ಯಾನ್ಸರ್ ಮುಂತಾದ ಕಾಹಿಲೆಗಳು ಉತ್ಪನ್ನವಾಗುತ್ತವೆ ಎಂದು ಹೇಳಲಾಗುತ್ತಿದೆ. ಒಂದೆಡೆ ಬಿ. ಸಿ. ಜಿ. ದಾಕುಗಳ ಪ್ರಚಾರ, ಇನ್ನೊಂದೆಡೆ ಬೀಡಿ, ಸಿಗರೇಟು ಕೈಗಾರಿಕೆಗೆ ಪ್ರೋತ್ಸಾಹ, ಹೇಗಿದೆ ನಮ್ಮ ಈ ಧೋರಣೆ? ಭಾರತದ ಯಾವ ಹಳ್ಳಿಯನ್ನೇ ಸಂದರ್ಶಿಸಿದರೂ, ಬೀಡಿ, ಸಿಗರೇಟುಗಳು, ಕಾಫಿ ಚಹಾ, ಅಂಗಡಿಗಳಿಲ್ಲದ ಹಳ್ಳಿಗಳೇ ಇಲ್ಲ. ಗಂಜಿ ಕುಡಿದು, ಹೊಲವನ್ನು ಸೇರಿ, ಮುಂಜಾನೆಯಿಂದ ಸಂಜೆಯ ತನಕ ಆಯಾಸವಿಲ್ಲದೆ ದುಡಿಯುತ್ತಿದ್ದ ರೈತ—ಇಂದು ಮೊದಲು ಚಹಾ ಸೇವಿಸಿ, ನಂತರ ಬಾಯಿಯಲ್ಲಿ ಬೀಡಿ ಸಿಕ್ಕಿಸಿಕೊಂಡು ಹೊಲಕ್ಕೆ ಹೋದರೆ ಕೆಲವೇ ಗಂಟೆಗಳಲ್ಲಿ ಆಯಾಸಗೊಂಡು ಹಿಂತಿರುಗುತ್ತಾನೆ—ದುಡಿಮೆಯ ಕಾಲ ಹೀಗೆ ಕಡಿಮೆಯಾಯಿತು—ಅಷ್ಟೇ ಉತ್ಪಾದನೆಯೂ, ಕಡಿಮೆಯಾಯ್ತು. ಹೊಲದ ಒಡೆತನ ಉಳುವವನಿಗೆ ಕೊಡದೆ ವ್ಯವಸಾಯದ ಉತ್ಪಾದನೆ ಕಡಿಮೆಯಾಯ್ತು-ಎನ್ನುವವರು, ಈ ವಿಚಾರವನ್ನೂ ಗಮನಿಸಬೇಕು. ಮದ್ಯಪಾನ ನಿಷೇಧವು ಸರಕಾರದ ಶಾಸನದ ವಸ್ತುವಾಗಲೇಬೇಕಾದರೆ, ಮಾದಕ ಪದಾರ್ಥಗಳ ಸೇವನೆ ಹಾಗೂ ಕಾಫಿ ಚಹಾಪಾನೀಯಗಳ ಪ್ರತಿಬಂಧಕ ಇವುಗಳನ್ನು ಶಾಸನಕ್ಕೆ ಒಳಪಡಿಸಬೇಕು—ಇಲ್ಲವಾದರೆ ಇವೆಲ್ಲವನ್ನೂ ಸಮಾಜ ಸುಧಾರಕರಿಗೆ ಬಿಡಬೇಕು—ಇವು ಕ್ರಮವಾಗಿ ಸುಧಾರಣೆಗೆ ಒಳಪಡತಕ್ಕ ವಿಷಯಗಳು. ಶಾಸನಗಳಿಂದ ಸಮಾಜ ಸುಧಾರಣಾ ಕಾರ್ಯ ಸಲ್ಲದು—.

ಹೀಗೆಯೇ ವಿಚಾರಮಾಡುತ್ತಾ ಹೋದರೆ ವಿದ್ಯಾಭ್ಯಾಸದ ವಿಚಾರದಲ್ಲಿ ನಮ್ಮ ಸರಕಾರ ಕೈಗೊಂಡಿರುವ ಕಾರ್ಯ, ವಿದ್ಯಾಭ್ಯಾಸದಲ್ಲಿ ಶಿಸ್ತು ತಪ್ಪಲು ಕಾರಣ,-ಇಷ್ಟೆಲ್ಲ ಪ್ರಯತ್ನ ನಡೆದು, ಸೌಲಭ್ಯಗಳು ಹೆಚ್ಚಿಯೂ-ತಜ್ಞರ ಸಲಹೆ ಪಡೆದೂ- ವಿದ್ಯಾಭ್ಯಾಸದ ಮಟ್ಟ ಏರಿದೆಯೇ? ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿ ಔದ್ಯೋಗಿಕ ವಿದ್ಯಾಭ್ಯಾಸಕ್ಕೆ ಗಮನ ಅತಿಯಾಗ ಹೆಚ್ಚಿದೆಯೇ?—ಇವೆಲ್ಲ ವಿಮರ್ಶಿಸತಕ್ಕ ವಿಚಾರಗಳು. ಸಾರ್ವಜನಿಕರು ಆಸಕ್ತಿಯಿಂದ ಯೋಚಿಸಿ ಆಗಿಂದಾಗ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾದ ವಿಚಾರಗಳು ಇವು. ಅಂತೆಯೇ ನಮ್ಮ ದೇಶದ ರಾಜಕೀಯ ಪಕ್ಷಗಳು, ಮತದಾನ ಪದ್ಧತಿ, ನಮ್ಮ ನಾಯಕರ ವಿಚಾರ, ಮಂತ್ರಿಗಳ ಮತ್ತು ಸಾರ್ವಜನಿಕ ವ್ಯಕ್ತಿಗಳ ನೀತಿ, ನಮ್ಮ ಪಂಚವಾರ್ಷಿಕ ಯೋಜನೆಗಳ ವಿವರ—ಅವುಗಳ ಸಾಫಲ್ಯ, ಸಮಾಜ ವಿಕಾಸನ ಯೋಜನಾ ಕಾರ್ಯಗಳಿಂದ ನಮ್ಮ ಹಳ್ಳಿಗಳ ಉದ್ಧಾರ—ಯೋಜನೆಗಳು ಕೇಂದ್ರೀಕೃತವಾಗಿರಬೇಕೆ, ಗ್ರಾಮೀಣ ಮಟ್ಟದಲ್ಲಿರಬೇಕೆ-- ನಮ್ಮ ದೇಶದ ಕೈಗಾರಿಕಾ ನೀತಿ ಹೇಗಿರಬೇಕು-ಈಗ ಹೇಗಿದೆ?— ಹೀಗೆ ಈ ಹತ್ತು ವರ್ಷಗಳಲ್ಲಿ ನಮ್ಮ ಜನರ ಮನೋಭಾವ ಈ ಎಲ್ಲ ವಿಚಾರಗಳಲ್ಲಿ ಹೇಗೆ ಪರಿವರ್ತನೆ ಹೊಂದಿದೆ-ಉತ್ತಮಗೊಂಡಿದೆಯೆ, ಅವನತವಾಗಿದೆಯೇ, ಅಥವಾ ಮನೋಭಾವದಲ್ಲಿ ಏನೂ ಬದಲಾವಣೆ ಆಗಿಲ್ಲವೆ? ಎಂದು ತಿಳಿಯುವುದು ಅವಶ್ಯ.

ಸರಕಾರದ ಆಡಳಿತದ ಪಕ್ಷವೇ ದೇಶದ ದೊಡ್ಡ ರಾಜಕೀಯ ಪಕ್ಷವಾದರೂ, ಕೇವಲ ಒಂದು ಯಾ ಒಂದುವರೆ ಕೋಟಿ ಸದಸ್ಯತ್ವವುಳ್ಳ ಒಂದು ರಾಜಕೀಯ ಪಕ್ಷ ನಲವತ್ತು ಕೋಟಿ ಪ್ರಜೆಗಳ ಭವಿಷ್ಯವನ್ನು ತಿದ್ದಲಾರದು. ವಿರೋಧ ಪಕ್ಷಗಳೂ ಅಷ್ಟೆ; ಕಡಿಮೆ ಪ್ರಾತಿನಿಧ್ಯವುಳ್ಳವು. ಯಾವ ರಾಜಕೀಯ ಪಕ್ಷಕ್ಕೂ ಸೇರದ ಜನತೆ ಒಂದಿದೆ. ಇದೇ ದೊಡ್ಡ ಪಕ್ಷ—ಈ ಜನತೆಯ ವಿಚಾರ ಕ್ರಾಂತಿಯೇ ಇಂದು ಅವಶ್ಯವಾದ ಸಂಗತಿ. ಅವರ ಅಭಿಪ್ರಾಯ ಸಂಗ್ರಹಣೆ ತೀರ ಅವಶ್ಯ. ಅವರ ಮನೋಧರ್ಮವನ್ನು ತಿಳಿಯಲು ನಮ್ಮ ಸರಕಾರ ಯತ್ನಿಸಬೇಕು. ಅವರನ್ನು ಕಾರ್ಯೋನ್ಮುಖವಾಗಿ ಮಾಡುವುದು—ದೇಶಪಾಲಕರ ಹೊಣೆಗಾರಿಕೆಯಾಗಿದೆ—ಈ ಬೃಹತ್ ಸಮೂಹವಾದ, ಜನತೆಯನ್ನು ಕಡೆಗಣಿಸಿ, ಏನು ಸಾಧಿಸಿದರೂ ಅದು ಪ್ರಜಾಪ್ರಭುತ್ವದ ಫಲವಾಗಲಾರದು.

ಸ್ವತಂತ್ರ ಜೀವನೋಪಾಯ
(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)
ಜೀವನದ ಹೋರಾಟವನ್ನು ಕಣ್ಣು ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.
"ಸಂವಾದದಲ್ಲಿಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ.........ಶೈಲಿಯು ಚಲೋದಿದೆ"
—'ಕಂಠೀರವ'.
ಬಿಳಿ ಕಾಗದ - ಸುಂದರ ಮುದ್ರಣ - ಬೆಲೆ: 0-4-0
ನವಭಾರತ ಪುಸ್ತಕ ಭಂಡಾರ, ಉಡುಪಿ.

38 ವರ್ಷಗಳ ಭದ್ರ ಹಾಗೂ
ಸಮರ್ಥ ಬೇಂಕಿಂಗ್ ಸೇವೆ.
ದಿ
ಪಾಂಗಾಳ ನಾಯಕ್ ಬೇಂಕ್
ಲಿಮಿಟೆಡ್.
ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನಮ್ಮ ಬೇಂಕಿನ
ಕುಣಿಗಲ್ ಶಾಖೆ
(ತುಮಕೂರು ಜಿಲ್ಲೆ)
ತಾ. **8—1—1959**ಕ್ಕೆ
ತೆರೆಯಲ್ಪಟ್ಟಿರುವುದು.

The Pangal Nayak Bank Ltd.
H. O: **UDIPI, S. K.** ESTD: **1920**

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ೧.

ಧಾತುಪುಷ್ಟಿ ಲೇಹ (ಸುವರ್ಣ, ಸಾಲಾಮಿಶ್ರಿ ಕಲ್ಪದ ಮಿಶ್ರಿತ)
ಸ್ವಪ್ನಾವಸ್ಥೆ, ಶರೀರದ ಉಷ್ಣತೆ: ಮೂತ್ರದೊಡನೆ ಧಾತು ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಒಳಜ್ವರ, ಅಶಕ್ತತೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ವೀರ್ಯವೃದ್ಧಿಗೊಳಿಸುವುದು
ಪೌಂಡು 1ರ ರೂ. 7 ಪೌಂಡು ½ರ ರೂ. 4

ಕಸ್ತೂರಿ ಮಿಶ್ರಣ ದಶಮೂಲ
ಬಾಣಂತಿಯರ ಪ್ರಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನರುದ್ದೀಪ್ತಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಶಿಶುವಿಗೂ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವುದು.
24 ಔನ್ಸ್ ರೂ. 6-00, 12 ಔನ್ಸ್ ರೂ. 3-00, 8 ಔನ್ಸ್ ರೂ. 2-00

ಚ್ಯವನಪ್ರಾಶ ಲೇಹ (ಬಂಗಾರ ಮಿಶ್ರಿತ)
ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿ, ಧಾತುತ್ವ ಉಂಟುಮಾಡುವುದು.
ಪೌಂಡು 1ರ ರೂ. 6-00, ½ ಪೌಂಡು ರೂ. 3.25

ಮೇಹಕುಠಾರ
ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಮಾಡುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಮುಂತಾದುವನ್ನು ಗುಣಪಡಿಸುವುದು. ಡಬ್ಬಿ 1ರ ರೂ. 3-50

ಔಷಧಿಗಳು ಸಿಗುವಸ್ಥಳ:- 1) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ಸ್, 643-A, ದಿಲ್ಯಾಲ್ ರೋಡ್, ಬ್ಯಾಕುಲ್ಲಾ. 2) ಜನರಲ್ ಸ್ಟೋರ್ಸ್, G. I. P. ವಾಟುಂಗಾ. 3) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕುಲ್ಲಾ. 4) ಪ್ರಭು ಫಾರ್ಮೆಸಿ, ಕಾರ್ಕಳ. 5) ಜಯಾ ಫಾರ್ಮೆಸಿ ಕುಂದಾಪುರ. 6) H. ಗಣಪಯ್ಯ ನರಸಿಂಹ ಕಾಮತ್, ಕುಂದಾಪುರ. 7) ಶ್ರೀಧರ ಭಟ್ ಬ್ರದರ್ಸ್, ಪುತ್ತೂರು. 8) ವೆಂಕ್ಯಾಟ ಸ್ಟೋರ್ಸ್, ಸುಳ್ಯ. 9) T. ಗೋಪಾಲಕೃಷ್ಣ ಪೈ, ಮರ್ಚೆಂಟ್, ಬ್ರಹ್ಮಾವರ.

ಭಾರತಚೇತನವೆ!

೧
ಈ ಶತಮಾನದ ಶಿಖರವನೇರಿದ
ಸಾಹಸ ಸಂಮುಖ ಭಾರತ-ಚೇತನವೆ!
ಸ್ವಾತಂತ್ರ್ಯದ ಜ್ಯೋತಿರ್ಮಯ ರತ್ನವ
ಶಿರದಲಿ ಧರಿಸಿಯೆ ಮುಂದಕೆ ಸಾಗಿರುವೆ!

೨
ಕಾಲದ ಕೊಳ್ಳದಿ ಬೀಳುತ ಏಳುತ
ಉನ್ನತಗಿರಿಯಲಿ ಇಂದಿಗೆ ನಿಂದಿರುವೆ
ಕಳಚಿದ ರತ್ನವ ಮರಳಿಯೆ ಗಳಿಸುತ—
ನವಕಾಂತಿಯ ತಪನಿಧಿಯನು ತಂದಿರುವೆ.

೩
ಕೊನೆಗಾಣದ ಘನನೀಲವು ಮೇಲಿದೆ
ಮುಗಿಯದ ಶಿಖರದ ಮೇರುವು ಮುಂದಿಹುದು
ಕೊರೆಯುವ ಚಳಿಯನು ಬಿರುಬಿನ ಗಾಳಿಯ
ತರಹರಿಸುತ ನೀನಳುಕದೆ ಸಾಗುವುದು.

೪
ಕೂಳಿನ ಗೋಳಿನ ರಾಗದ್ವೇಷದ
ಜ್ವಾಲಾಮುಖಿಗಳು ಬಾಯ್ತೆರೆ ದೂರ ಉರಿವೆ
ನಾಶದ ಲಾವಾರಸನದಿ ನಿನ್ನನು
ಮೆಲ್ಲನೆ ಸುತ್ತುತಮುತ್ತುತ ಹರಿಯುತಿವೆ.

೫
ಮೌಳಿಯ. ರತ್ನದ ಕಾಂತಿಯ ಕೆಡಿಸಲು
ಹೊಂಚನು ಹಾಕಿವೆ ಆಸುರಶಕ್ತಿಗಳು
ದಾಸ್ಯದ ಕಾಲದ ಬೇಡಿಗಳಿನ್ನೂ
ಬಿಗಿದಿವೆ ಅಗಿಯೆ ತರತರ ಯುಕ್ತಿಗಳು.

೬
ಸ್ವಾತಂತ್ರ್ಯವು ಬಂದಿದೆ ನಿಜ, ಹೋಗಿದೆ
ಬೆಳೆಯದ ತಿಳಿಯದ ಸಾವಿರ ಮನದಿಂದ
ಗಣರಾಜ್ಯವು ಗುಣರಾಜ್ಯವದಾಗಲು
ಘನಸಂಕಲ್ಪದಿ ದುಡಿವುದು ಹೊಸ ಚಂದ

೭
ಕಾಲಿನ ಬುಡನೆಲ ಕಾಲೆಳೆಯುತ್ತಿರೆ
ಕೆರಳದೆ ಹೊರಳದೆ ಮುಂದಕೆ ನೀಸಾಗು
ಸ್ವೈರದ ವೈರದ ಬೇಗೆಯು ಬೀಗಿರೆ
ಸಮತೆಯ ಮಮತೆಯ ತಾಳ್ಮೆಯ ತವರಾಗು.

೮
ಕಿಂದೋ ಹಿರಿದೋ ವಿಷದುಸಿರಾಡಲು
ನಿನ್ನಯ ಅಮೃತಸೇಚಕ ಬಾಗಿರಲಿ
ಅಪಾರ ಪ್ರೇಮವೆ ಅನಂತತ್ಯಾಗವೆ
ನಿನ್ನಯ ರಕ್ಷೆಯ ಕವಚವದಾಗಿರಲಿ.

—ರಸಿಕ ರಂಗ.

ಅಳಿಯ ಉವಾಚ

(೪ನೇ ಪುಟದಿಂದ)

ತ್ತವೋ?—ಇಲ್ಲ ಇಲ್ಲ. ಈ ವರ್ಷದ ಗೇಣಿ ಅರೆವಾಸಿಯೂ ವಸೂಲಾಗಲಿಲ್ಲ. ರಾಜಾರಾಮನಿಗೆ ವಿಲಾಯತಿಗೆ ಹಣಕಳುಹಿಸಬೇಕೆಂದು ತಂತಿ ಬಂದಿದೆ. ಇಲ್ಲಿ ಒಂದು ಪುಡಿ ಕಾಸು ಕೂಡಾ ಇಲ್ಲ.' ಇದಾಗಿತ್ತು ಯಜಮಾನರ ಉತ್ತರ.

ನಾವಿರುವ ಹಿತ್ತಲಲ್ಲಿ ಹತ್ತಿಪ್ಪತ್ತು ತೆಂಗುಗಳಿದ್ದುವು. ಒಂದು ಕಾಯನ್ನೂ ನಾವು ಮುಟ್ಟಕೂಡದು. ಎಲ್ಲವನ್ನೂ ಗೇಣಿಗೆ ಕೊಟ್ಟಿದ್ದಾರೆ. ಹಿತ್ತಲನ್ನು ಅಗೆಯಬೇಕಂತೆ ನಾವು. ಹೇಗಿದೆ ಭಟ್ಟರೇ ನಿಮ್ಮ ಧೂಮ್ರಾಕ್ಷ ದೊರೆಗಳ ಮರ್ಜಿ! ಗಂಜಿಗೆ ಗತಿಯಿಲ್ಲದ ನಾವು ಹಾರೆ ಗುದ್ದಲಿ ಹಿಡಿದು ಮಣ್ಣಿನೊಂದಿಗೆ ಹೋರಾಡುವುದೋ—ಮಣ್ಣುಪಾಲಾಗುವುದೋ? ನೋಡಿ ನನ್ನ ಕೈ. ಬಲವೇ ಇಲ್ಲ. ಒಂದು ದಿನವಾದರೂ ಹೊಟ್ಟೆ ತುಂಬ ಉಂಡ ನೆನಪು ನನಗಿಲ್ಲ.

ಇರಲಿ. ಈಗ ಏನಾಗಬೇಕಂತೆ ದೂಮಣ್ಣ ಮಾವನಿಗೆ? ನಾನು ಕೊಟ್ಟ ಕೇಸನ್ನು ಹಿಂತೆಗೆಯಬೇಕಂತೆ ಅಲ್ಲವೆ? ಚಿಲ್ಲರೆ ಮನೆ ಖರ್ಚಿಗೇನಾದರೂ ಕೊಡಲಿಕ್ಕೆ ಅವರು ತಯಾರಂತೆ — ಅಲ್ಲವೆ? ಅರ್ಧ ಶತಮಾನ ಕಾಲದ ಆ ರಾಕ್ಷಸೀ ಮನೋಭಾವ ಮಾತ್ರ ಬಿಟ್ಟುಬಿಡಲು ಅವರಿನ್ನೂ ತಯಾರಾಗಿಲ್ಲ ಅಲ್ಲವೇ?—ಕೇಳಿರಿ ಭಟ್ರೇ— ಕೇಳಿರಿ.

ಆ ಸುಯೋಧನನಷ್ಟು ವೈಭವದಿಂದೆ
ಸುಖಿಸನೆ? ಸುಖಿಸನೆ?
ಗ್ರಾಸವಿಲ್ಲದೆ ಪಾಂಡವರು ಏಂ? ಕಾಡಿನಲಿ ಇನ್ನಲೆವರೆ? ||

೦ ೦ ೦ ೦

ಮೋಸ ಸಾಗು ಮುಂದೆ, ನಾನಿರುವನಕ. ಪೇಳಿರಿ ಮುದುಕಗೆ—
ಲೇಸು ಭಟ್ಟರೆ ತೊಲಗುವುದು ನೀವೀಗಲೇ—ನಾಂ ನೋಡುವೆ. ||

ಅಳಿಯ ಮಾವನು ತನಗೆಸಗಿದ್ದ ಕ್ರೂರವರ್ತನೆಯೊಂದನ್ನೂ ಮರೆಮಾಚದೆ ಭಟ್ಟರಿಗೆ ತಿಳಿಹೇಳಿ ತನ್ನ ದೃಢನಿಶ್ಚಯವನ್ನೇ ಮತ್ತಷ್ಟು ನಿರ್ಧಾರಕ್ಕೆ ತಂದನು.

ಆಧಾರ: ಮಲೆಯಾಳೀ "**ಸಂಜಯ**"

NOTICE.

Notice is hereby given that Share Certificate Nos. 1114, 842, 1630, 1800 & 2081 issued by The Vijaya Bank Limited in respect of 22 Shares numbered 3501, 4668 to 4675, 11852, 14845 to 14852 and 16931 to 16934, standing in the name of Sri S. Jagannath Shetty, S/o. B. Nandiappa Shetty, Kalthod Village, P. O. Kalthod, are reported to be lost and an application has been received from him for the issue of a fresh Share Certificate in the place of the originals. Any person having any objection whatsoever for the issue of a fresh Share Certificate to the applicant, should communicate immediately the same to the undersigned. If objection is not filed with the undersigned within 15 days from this date, a fresh Share Certificate in the place of the said original Share Certificate Nos. 1114, 842, 1630, 1800 & 2081 for the total number of 22 Shares will be issued to the applicant Sri S. Jagannath Shetty.

The Vijaya Bank Ltd.,
Head Office,
MANGALORE—3.
Dated 27—1—1959.

(Sd). P. Jayarama Shetty.
Secretary.

ದೇವ ಭಾಷೆಯಲ್ಲಿ ಮಹಾತ್ಮರಕಥೆ

(೩ನೇ ಪುಟದಿಂದ)

ಗಳಿಗೆ ಭಾಷಾಜ್ಞಾನದೊಂದಿಗೆ ಗಾಂಧೀ ತತ್ತ್ವ, ರಾಷ್ಟ್ರ ಪ್ರೇಮಗಳಿಗೆ ಪ್ರಚೋದನೆಯನ್ನಿತ್ತಂತೆ ಆಗುತ್ತದೆ.

ಈ ಮಹಾಕವಿಗಳು ಗಾಂಧೀಜಿಯವರನ್ನು ‘ಭಾರತಪಾರಿಜಾತ” ಎಂಬ ಬಿರುದಿನಿಂದ ಬಣ್ಣಿಸಿದ್ದಾರೆ. ಪಾರಿಜಾತವು ಸುಮನಸಶ್ರೇಷ್ಠವೆನಿಸಿರುವುದಲ್ಲದೆ ಸ್ವರ್ಗದಿಂದ ಧರೆಗೆ ಬಂದು ಪರಿಮಳದಿಂದ ಜಗತ್ತನ್ನೇ ತಣಿಸುವಂತೆ, ಈ ಮಹಾತ್ಮರೂ ಅವತರಿಸಿ ಪಾರಿಜಾತದಂತೆ ಸಕಲರಿಗೂ ಆನಂದವನ್ನಿತ್ತು ಶ್ಲಾಘನೀ"ಯರೆನಿಸಿರುವುದು ಈ ಶೀರ್ಷಿಕೆಯಿಂದ ವ್ಯಕ್ತವಾಗುವ ಅಂಶ. ಪಾರಿಜಾತವು ಅಮರ ಪುಷ್ಪ. ಮಹಾತ್ಮರೂ ಅಮರರು.

ಶ್ರೀಯುತರ ಕಾವ್ಯದಲ್ಲಿ ಪ್ರಸಾದ ಗುಣವು ಪ್ರಧಾನವಾಗಿದೆ. ಆದರೆ ದಾರ್ಶನಿಕ ವಿಚಾರಗಳಲ್ಲಿ ಭಾಷಾಬಂಧವು ಸಹಜವಾಗಿಯೇ ಬಿಗಿಯಾಗುತ್ತದೆ. ಸರಸ ಸುಂದರ ಪದಬಂಧ ಅಲಂಕಾರ ಸಂಪತ್ತಿ, ಪ್ರಸನ್ನ ಮಧುರ ಶೈಲಿ, ಉಚಿತ ವಿಚಾರ ಪರಂಪರೆ, ತಾತ್ತ್ವಿಕ ನಿರೂಪಣೆ, ಉತ್ತಮ ಕೃತಿಯ ಲಕ್ಷಣವೆನಿಸಿದರೆ, ಈ ಮಹಾಕವಿಗಳು ಅವುಗಳಲ್ಲಿ ಸಿದ್ಧಹಸ್ತರಾಗಿದ್ದಾರೆ. ನಮ್ಮ ಪ್ರಾಚೀನ ಕಾವ್ಯಗಳಲ್ಲಿ ರಸಾಲಂಕಾರ ಭಾವ ರೀತಿನೀತಿಗಳ ಕಡೆಗೆ ಕವಿಗಳ ದೃಷ್ಟಿ ಹರಿದಿದ್ದರೆ, ಈ ಕಾವ್ಯದಲ್ಲಿ ಕವಿಗಳು ಆ ಕಡೆಗೆ ಆಸ್ಥೆಯಿಟ್ಟೇ ಇದ್ದಾರೆ. ಆದರೆ ವಿಶೇಷವೇನೆಂದರೆ ಹಿಂದಿನ ಕವಿಗಳಿಗೆ ಸರಿಮಿಗಿಲೆನಿಸಿಕೊಂಡು, ಉಜ್ವಲ ರಾಷ್ಟ್ರೀಯತೆಯನ್ನು ಪ್ರಚೋದಿಸುವುದು ಈ ಕವಿಯ ಹಿರಿಮೆ, ಕಾವ್ಯದ ಮಹತ್ತ್ವ. ಯಾವ ರಾಷ್ಟ್ರಪಿತನ ಗುಣಕರ್ಮ ಸಾಹಸಗಳಿಂದ ಕವಿಗಳು ಮುಗ್ಧರಾಗಿರುವರೋ, ಅವರ ಕಾವ್ಯದಲ್ಲಿ ರಾಷ್ಟ್ರೀಯತೆಯ ಪ್ರವಾಹವು ಯಾವ ರೂಪದಲ್ಲಿರಬಹುದೆಂದು ಯಾರಿಂದಲೂ ಊಹಿಸಿಕೊಳ್ಳಬಹುದಾಗಿದೆ.

ಮಹಾ ಕವಿಗೆ ತನ್ನ ರಾಷ್ಟ್ರದ ಕುರಿತಾದ ಪ್ರೇಮ ಭಾವನೆಯನ್ನು ನೋಡಿರಿ. ಮರಾ ಸಮಸ್ತಂ ಜಗದಧ್ಯ ಭಾಸಯನ್ ಪ್ರಧಾನತೋ ಜ್ಞಾನ ಮಹಾಮಹೇರಲಂ, ಅತಿಕ್ಷಯಜ್ಜೀವನ ಪರ್ವಶರ್ವರೀ ವಿಭೇದನಂ ಯತ್ರ ಧನೋರುಣೋದಯೇ” ಜ್ಞಾನದ ಅಂದರೆ ವಿದ್ಯೆ ಸಂಸ್ಕೃತಿ, ಜೀವನ ಸಾಮಗ್ರಿ, ಸಾಮಾಜಿಕ ನೀತಿ, ಅಧ್ಯಾತ್ಮವಾದ ಇವುಗಳ ಪ್ರಕಾಶವು, ಅಜ್ಞಾನಾವೃತವಾದ ಜಗತ್ತಿಗೆ ಭಾರತದಿಂದಲೇ ಮೊತ್ತಮೊದಲಿಗೆ ಲಭಿಸಿತೆಂದು ಮಹಾಕವಿಯ ಆಶಯ. ಇಡೀ ಜಗತ್ತಿಗೆ ಭಾರತವೇ ಈ ಶಿಕ್ಷಣವನ್ನು ನೀಡಿದೆಯೆಂದು ಕವಿಗಳು ಘೋಷಿಸುತ್ತಾರೆ. ದೇಶದ ಪರಿಸ್ಥಿತಿ, ಪರಾಧೀನತೆ, ದೀನದಲಿತರು ಈ ಕುರಿತು ಕವಿವಾಣಿಯಲ್ಲಿ ಕಣ್ಣೀರ ಹೊನಲೇ ಹರಿದು ಬಿಟ್ಟಿದೆ. ಸಮಾಜದ ಕಟ್ಟನಡವಳಿಕೆಗಳ ಕುರಿತು ಕವಿ ಹೃದಯವು ಪರಿತಪ್ತವಾಗಿದೆ. “ಇಂದು ದೇಶವು ಹೊಟ್ಟೆಬಟ್ಟೆಗಳಿಗಾಗಿ ಆಕ್ರಂದಿಸುತ್ತಿದೆ. ಆದರೂ ಕಟ್ಟಚಟಗಳಲ್ಲಿ ಬಿದ್ದ ಜನರು ಲಕ್ಷೋಪಲಕ್ಷ ಹಣವನ್ನು ಬೆಂಕಿಗೆ ಒಗೆಯುತ್ತಿದ್ದಾರೆ. ಇದು ಸಹೃದಯ ಸಮಾಜಕ್ಕೆ ಅಸಹ್ಯ; ರಾಷ್ಟ್ರಕ್ಕೆ ವಿಘಾತುಕ ಎಂದು ಕವಿಗಳ ಉದ್ಗಾರ ಹೊರಡುತ್ತದೆ. ಇಷ್ಟು ಮಾತ್ರವಲ್ಲದೆ ಜನತೆಯು ಇನ್ನೂ ಹಲವಾರು ಲೋಪದೋಷಗಳನ್ನೂ, ಹೀನಾವಸ್ಥೆಯನ್ನೂ ದಾಸ್ಯದ ನರಳಾಟವನ್ನೂ ಸಾರ್ವಭೌಮರ ನಿರಂಕುಶ ಪ್ರಭುತ್ವದ ಕುಪರಿಣಾಮವನ್ನೂ ಚಿತ್ರಿಸಿರುವುದು ಮರ್ಮಸ್ಪರ್ಶಿಯಾಗಿದೆ.

ಗಾಂಧೀಜಿಯವರ ಖಾದೀ ಪ್ರಚಾರ ಚಳವಳವನ್ನುದ್ದೇಶಿಸಿ ಕವಿಯ ಉಪದೇಶವಿಂತಿದೆ.

ವಸ್ತ್ರಂ ಸ್ವದೇಶೋದ್ಭವ ಮೇವ ನೇಯಂ | ತಂತಾನ್ ಸ್ವಹಸ್ತೇನ ಚ ನಿರ್ಮಿಮೀಧ್ವಂ |
ಪಾನಂ ಸುರಾಯಾಶ್ಚ ರಸಸ್ಯತ್ಯಾಲಃ|
ತ್ಯಕ್ತ್ವಾ ಪವಿತ್ರಾ ಭವತಾತಿ ಮಾತ್ರಸು ॥

ಸ್ವದೇಶೀ ಬಟ್ಟೆಯನ್ನೇ ಧರಿಸಿರಿ, ಕೈಯಿಂದಲೇ ನೂಲಿರಿ, ಪಾನನಿರೋಧಮಾಡಿ ಪರಿಶುದ್ಧರಾಗಿರಿ ಎಂಬ ಮಹಾತ್ಮರ ಸಂದೇಶವು ಮೇಲಿನ ಶ್ಲೋಕದ ಮೂಲಕ ಪ್ರಕಟವಾಗಿದೆ.

ಉಪ್ಪಿನ ಸತ್ಯಾಗ್ರಹದ ಜೈತ್ರಯಾತ್ರೆಯ ವರ್ಣನೆಯು ಕಾಳಿದಾಸನ ರಘುದಿಗ್ವಿಜಯವನ್ನು ನೆನಪಿಗೆ ತರುವಂತಿದೆ.

“ಯುದ್ಧಸ್ಯ ಮರ್ಮ ಪ್ರತಿಬೋಧ್ಯ ಸಮ್ಯಕ್ ಗ್ರಂಗ್ರೇಜ ರಾಜ್ಯಸ್ಯ ವಿಬೋಧ್ಯ ದೌಷ್ಟ್ಯಂ |
ಕ್ಷಾರಾಹವೇ ಸ್ವೇತುಮುಪಸ್ಥಿತಾನ್ ತಾನ್ | ಆಮಂತ್ರಯಾಮಾಸ ಮುದಾ ಮಹಾತ್ಮಾ”

ಬ್ರಿಟಿಷ್ ಆಳರಸರ ದೌಷ್ಟ್ಯವನ್ನು ತಿಳಿಯಪಡಿಸಿ, ಸತ್ಯಾಗ್ರಹ ಸಮರದ ವೈಶಿಷ್ಟ್ಯವನ್ನು ಮನವರಿಕೆಮಾಡಿಕೊಟ್ಟು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಜನರಿಗೆ ಗಾಂಧೀಜಿಯವರು ಕರೆಕೊಡುವುದು ಹೃದಯಸ್ಪರ್ಶಿಯಾಗಿದೆ.

ಹೀಗೆ ಈ ಮಹಾಕಾವ್ಯದಲ್ಲಿ ಹೆಜ್ಜೆಹೆಜ್ಜೆಗೂ ರಾಷ್ಟ್ರಾಭಿಮಾನವು ಅಭಿವ್ಯಕ್ತವಾಗಿದೆ. ಗಾಂಧೀಜಿಯವರು ಜನಿಸುವ ಮೊದಲಿನ ಭಾರತದ ಚಿತ್ರಣವನ್ನೂ, ಅವರು ಭಾರತದ ಉದ್ಧಾರಕ್ಕೆ ಪಟ್ಟ ಪರಿಶ್ರಮವನ್ನೂ ಅವರ ತರುವಾಯದ ಚಿತ್ರಣವನ್ನೂ ಈ ಕಾವ್ಯದಲ್ಲಿ ಕಾಣುವುದರಿಂದ ಬಾಪೂಜಿಯವರಿಗೆ ರಾಷ್ಟ್ರಪಿತ ಎಂಬ ಬಿರುದು ಲಭಿಸಿದ್ದರ ಸಾರ್ಥಕ್ಯವು ಸುಸ್ಪಷ್ಟವಾಗುತ್ತದೆ. ಗಾಂಧೀಜಿಯವರ ಜನನದಿಂದ ಜಗತ್ತಿಗೇ ಬೆಳಕು ಬಂದ ಆನಂದ ಕಾವ್ಯದಲ್ಲಿ ಸ್ಪಷ್ಟವಾಗಿ ಕಂಡರೆ ಅವರ ದೇಹಾಂತಕಾಲದ ಅಂಧಕಾರಮಯ ವಾತಾವರಣವು ನಮ್ಮನ್ನು ದುಃಖಾವರ್ತದಲ್ಲಿ ತಳ್ಳುತ್ತದೆ. ಗಾಂಧೀಜಿಯವರು ತೀರಿಕೊಂಡಾಗ ಕವಿಯು ಚಿತ್ರಿಸಿದ ವಿಲಾಪವು ಎಂಥಾ ಕಲ್ಲೆದೆಯನ್ನೂ ಕರಗಿಸದಿರದು. ಕಾಳಿದಾಸನ ಅಜವಿಲಾಪ, ರತಿವಿಲಾಪಗಳಂತೆ ಅಷ್ಟೊಂದು ಮೃದುವಾದ ಕರುಣಬಂಧವು ಈ ಕಾವ್ಯದ ಉತ್ಕೃಷ್ಟಾಂಶಗಳಲ್ಲೊಂದು

ಅಂಥ ಸನಾತನಿಗಳನ್ನು ಕುರಿತು ಕವಿಯು ಹೇಳುವ ಮಾತು ಬಹಳ ಮಾರ್ಮಿಕವಾಗಿದೆ. “ನಿಮಗೆ ಗಾಂಧೀಜಿಯವರ ನಿಸ್ಪೃಹತೆ, ವ್ಯಕ್ತಿತ್ವ, ಆಧ್ಯಾತ್ಮಿಕ ಪ್ರಗತಿಗಳನ್ನು ಕಾಣಬೇಕಿದ್ದರೆ ಸೇವಾಗ್ರಾಮಕ್ಕೆ ಹೋಗಿರಿ, ಅಲ್ಲಿನ ಪ್ರಾರ್ಥನೆಯನ್ನಾಲಿಸಿರಿ, ತುಳಸೀರಾಮಾಯಣದ ಪಠನವನ್ನು ಕೇಳಿರಿ, ಗಾಂಧೀಜಿಯವರ ಪ್ರತಿಚರ್ಯೆಯನ್ನೂ ಗಮನವಿಟ್ಟು ಪರೀಕ್ಷಿಸಿರಿ, ಆಗ ನಿಮ್ಮ ಭ್ರಮನಿರಸನವಾದೀತು, ಸೂರ್ಯರಶ್ಮಿಯ ಪತನಕಾಲದಲ್ಲಿ ಮಂಜಿನಬೆಟ್ಟ ಕರಗಿದಂತೆ!” ಇನ್ನು ಕವಿಗಳು ಗಾಂಧೀಜಿಯವರ ಸಮಾಜಸುಧಾರಣೆಯ ಹಿನ್ನೆಲೆಯನ್ನು ಬಣ್ಣಿಸಿ ರಾಷ್ಟ್ರೋದ್ಧಾರ ಕಾರ್ಯದಲ್ಲಿ ಅದರ ಮಹತ್ತ್ವವನ್ನು ತಿಳಿಯಪಡಿಸಿ ಸಂಸ್ಕೃತಿಯ ಮೇಲಿನ ಅವರ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ.

ಮಹಾಕವಿ ಶ್ರೀ ಹರ್ಷನ ತರುವಾಯ ಎಂಟುನೂರು ವರ್ಷಗಳಲ್ಲಿ ಇಂಥ ಮಹಾಕೃತಿಯು ಸಂಸ್ಕೃತಕಾವ್ಯದಲ್ಲಿ ರಚಿತವಾಗಿರುವುದು. “ಇದಂ ಪ್ರಥಮ” ವೆನ್ನಬಹುದು. ಆಧುನಿಕ ವಿಚಾರಗಳ ಮೇಲೆ ಇಂಥಾ ಮಹಾಕಾವ್ಯಗಳನ್ನ “ಮಹಾಕಾವ್ಯಮಾರ್ಗ”ದಲ್ಲೇ ಸಹೃದಯ ಹೃದಯಾಹ್ಲಾದಕವಾಗಿ ರಚಿಸಬಹುದೆಂದು ಪ್ರಯೋಗದ ಮೂಲಕ ತೋರಿಸಿಕೊಟ್ಟುದೂ ಇದೇ ಮೊದಲು. ತಮ್ಮ ಎಪ್ಪತ್ತೇರ ಹರೆಯಲ್ಲಿ ಇಂದಿಗೂ ರಾಷ್ಟ್ರೀಯತೆ, ಗಾಂಧೀ ವಿಚಾರ, ದೇಶೋದ್ಧಾರ, ಸಂಸ್ಕೃತ ಪ್ರಚಾರಗಳ ಕುರಿತು ಶ್ರೀಮದಾಚಾರ್ಯರು ವಾಙ್ಮನಃ ಕಾಯಗಳಿಂದ ದುಡಿಯುತ್ತಿರುವುದು ಸರ್ವರಿಗೂ ಅವರ್ಣನೀಯವಾಗಿದೆ, ಎಂತಲೇ ಅವರ ಹೆಸರು ಭಾರತೀಯ ಸಾಹಿತ್ಯದಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಲರ್ಹವೆನಿಸಿವೆ ಸಂಸ್ಕೃತ ಭಾಷೆ, ಗಾಂಧೀಜಿಯವರ ಹೆಸರು ಇರುವ ತನಕ ಈ ಮಹಾಕಾವ್ಯದ ಮಹತ್ತ್ವ ಅಚ್ಚಳಿಯದೇ ಉಳಿಯುತ್ತದೆ ಎಂಬಲ್ಲಿ ಸಂದೇಹವಿಲ್ಲ

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O P. No 1 /1959

1 ಕೃಷ್ಣಿ ಶೆಟ್ತಿ. S. ನಾರಾಯಣ ಶೆಟ್ರ ವಿಧವೆ

2, ಭವಾನಿಶಂಕರ ಶೆಟ್ಟಿ, 3 ವೇಣುಗೋಪಾಲ ಶೆಟ್ಟಿ, 1. ಸರೋಜಿನಿ ಶೆಟ್ತಿ, 5, ಶಾಂತ ಶೆಟ್ತಿ, 6 ಅಂಬ ಶೆಟ್ತಿ, 7, ಪ್ರೇಮ ಶೆಟ್ತಿ, 8 ಕರುಣಾಕರ ಶೆಟ್ಟಿ, 9 ಇಂದಿರೆ ಶೆಟ್ಟಿ, 10, ರಮೇಶ ಶೆಟ್ಟಿ, 11 ಬಾಲಕೃಷ್ಣ ಶೆಟ್ಟಿ ಸದ್ರಿ ನಾರಾಯಣ ಶೆಟ್ರ ಮಕ್ಕಳು. ಪೈಕಿ 9, 10 11 ನೇಯವರು ಪ್ರಾಪ್ತ ವಯ, [illegible] ಬಂತಕಳು ತಾಯಿ 1ನೇ ಕೃಷ್ಣಿ ಶೆಟ್ತಿ (ನಾರಿಕೂರು) ಉಡುಪಿ ತಾಲ್ಲೂಕು [illegible] ಎಂಬಲ್ಲಿ [illegible] ಅರ್ಜಿದಾರರು –

ಮೇಲ್ಕಂಡ ಪ್ರಕರಣವು 1ನೇಯವಳ ಗಂಡ, [illegible] ತಂದೆ ಮೃತರಾಗಿ ಪ್ಪ ಕ ಶೆಟ್ಟಿ S ನಾರಾಯಣ ಶೆಟ್ಟರಿಗೆ ಅರ್ಜಿಯಲ್ಲಿ ಕಾಣಿಸಿದ The Canara Mutual Assurance, Co, ಉಡ್ಪಿ-ಯದ ರ ನಂಬ್ರ 3265ನೇ Policy ಬಾಬ್ತು ಬಡ್ಡಿ ಸಹಿತ ರೂಪಾಯಿ 558 06ನ್ನು ಸ್ವಲು ಮಾಡುವರೇ ಅರ್ಜಿದಾರರ ಬಗ್ಗೆ 1ನೇ ಕೃಷ್ಣಿ ಶೆಟ್ತಿ ಹೆಸರಿಗೆ ಒಂದು ಸಕ್ಸೆಶನ್ ಸರ್ಟಿಫಿಕೇಟ್ ಕೊಡಿಸಬೇಕಾಗಿ ದಾಖಲು ಮಾಡಿದ ಮೋಕದ್ದಮೆಯ ಬಗ್ಗೆ ಕುರಿತು ಆಕ್ಷೇಪವುಳ್ಳವರು ತಾ12.2.1959ರಲ್ಲಿ ಬೆಳಗ್ಗೆ10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಹಾಜರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ಯಾವತ್ತೂ ಜನರಿಗೆ ತಿಳಿಸಲಾಗಿಯದೆ.

S/d I Subba Rao,
ಅರ್ಜಿದಾರರ ಕಡೆ ಎಡ್ವಕೇಟ್.

ಕಾರ್ಕಳ, ತಾ19.1.59

ಉಚಿತ ಕನ್ನಡ ಬೆಲೆಪಟ್ಟಿ

ನಿಮಗೆ ಶ್ರೇಷ್ಟ ನಾಟಕ ಸಾಮಾನುಗಳು ಬೇಕಾಗಿದ್ದರೆ ಪೂರ್ಣ ವಿಳಾಸ ತಿಳಿಸಿ ಉಚಿತ ಕನ್ನಡ ಬೆಲೆಪಟ್ಟಿ ತರಿಸಿಕೊಳ್ಳಿರಿ ನಮ್ಮ ಬೆಲೆ ಪಟ್ಟಿಯು ನಮ್ಮಲ್ಲಿ ದೊರೆಯುವ ಎಲ್ಲ ನಾಟಕ ಸಾಮಾನುಗಳ ಚಿತ್ರಸಹಿತವಾಗಿ ಇದ್ದು ಇನ್ನಿತರ ವಿವರವನ್ನೂ ಒದಗಿಸುತ್ತದೆ.

ಕೂಡಲೇ ಬರೆಯಿರಿ:

DHARAMSHI MULJI
DRESSWALLA
132 C Bhagatwadi Bhuleshwar Rd.,
Opp. Kabutarkhana, BOMBAY 2

ಬಂಟರ ಯಾನೆ ನಾಡವರ ಸಂಘ

ಜುಬಿಲಿ ಫಂಡಿಗೆ ರೂ. 500/- ಮತ್ತು ಹೆಚ್ಚಿಗೆ ಧನಸಹಾಯ

1. ದಿವಂಗತ ಅತ್ತಾವರ ದೇವಪ್ಪ ಪೂಂಜರ ಸ್ಮಾರಕ ಫಂಡಿನಿಂದ (ಅವರ ಮಕ್ಕಳು ಮತ್ತು ಎ. ಬಿ. ಶೆಟ್ಟಿ ಮೂಲಕ)	ರೂ.	10,000
2. ಶ್ರೀ ಕೆ. ಪಿ. ರಾಮಣ್ಣ ಶೆಟ್ಟಿ, ಪ್ಲಾಂಟರ್	ರೂ.	5,000
3. ಮತ್ತು ಅವರ ಪತ್ನಿ ಶ್ರೀಮತಿ ಅಮ್ಮಣ್ಣಿ R. ಶೆಟ್ಟಿ	ರೂ.	5,000
4. ಶ್ರೀ ಕುತ್ಯಾರು ಗಣಪಯ್ಯ ಶೆಟ್ಟಿ, ಪ್ಲಾಂಟರ್ ಮತ್ತು ಅವರ ಪತ್ನಿ ಶ್ರೀಮತಿ ಪಾಚಮ್ಮ ಶೆಟ್ಟಿ	ರೂ.	2,001
5. ಶ್ರೀ ಕೆ. ಎಲ್. ಭಂಡಾರಿಗಳು, ಪ್ಲಾಂಟರ್	ರೂ.	1,501
6. ಶ್ರೀ ಎಂ. ಡಿ ರಾಮಣ್ಣ ಶೆಟ್ಟಿ, ಪ್ಲಾಂಟರ್	ರೂ.	1,500
7. ಶ್ರೀ ಗೋಪಾಲ ಭಂಡಾರಿಗಳು(ಹಂಚಿನ ಕಾರ್ಖಾನೆ ಮಾಲಿಕರು)	ರೂ.	1,500
8. ಶ್ರೀಮತಿ ರುಕ್ಮಿಣಿ P. R. T. ಪೂಂಜರು, ಮಡಿಕೇರಿ	ರೂ.	1,500
9. ಶ್ರೀ ಪಿ.ಸುಬ್ಬಯ ನಾಯ್ಕರು(ಹಂಚಿನ ಕಾರ್ಖಾನೆ ಮಾಲಿಕರು)	ರೂ	1,501
10. ಶ್ರೀ ಅಲಂಗಾರ್ ನಾರಾಯಣ ಹೆಗ್ಡೆಯವರು (ಮೆನೇಜಿಂಗ್ ಡೈರೆಕ್ಟರ್, ವೆಸ್ಟ್‌ಕೋಸ್ಟ್ ಇಂಡಸ್ಟ್ರಿಯಲ್ ಎಂಡ್ ಕಮರ್ಶಿಯಲ್ ಸಿಂಡಿಕೇಟ್ ಲಿ., ಪಾರ್ಟನರ್ ಶ್ರೀ ಅನಂತ ಪದ್ಮನಾಭ ಮಿಲ್ಸ್)	ರೂ.	1,501
11. ಶ್ರೀ ಎಂ. ಜಿ. ಗಣೇಶನಾರಾಯಣ ರೈಗಳು (ಎಡ್ವೊಕೇಟ್, ಕಾಸರಗೋಡು)	ರೂ.	1,500
12. ಡಾಕ್ಟರ್ ಕೆ. ಮಂಜುನಾಥ ರೈಗಳು, ಮದ್ರಾಸು	ರೂ.	1,501
13. ಶ್ರೀ ಕೆ. ಎಲ್ಲಪ್ಪ ಅಜಿಲರು, ಪ್ಲಾಂಟರ್	ರೂ.	1,500
14. ಡಾಕ್ಟರ್ ಪಿ. ಎ. ಅಡ್ಯಂತಾಯರು, ಪ್ಲಾಂಟರ್	ರೂ.	1,500
15. ಶ್ರೀ ಯಡ್ತರೆ ಸೂರ್ಯಣ್ಣ ಶೆಟ್ಟಿ (ಶ್ರೀ ಕೃಷ್ಣಪ್ಪ ಶೆಟ್ರ ಸ್ಮರಣಾರ್ಥವಾಗಿ)	ರೂ.	1,500
16. ಶ್ರೀಮತಿ ಮೀನಾಕ್ಷಿ ಶೆಟ್ಟಿ ಮತ್ತು ಶ್ರೀ ಟಿ ಗೋಪಾಲ ಭಂಡಾರಿಯವರು,(ಶ್ರೀ ಪೇರ್ಲ ನಾಂಞು ಶೆಟ್ರ ಸ್ಮರಣಾರ್ಥವಾಗಿ)	ರೂ.	1,501
17. ಶ್ರೀ ಕೆ. ಮರ್ತಪ್ಪ ಶೆಟ್ಟಿ, ಕಾಫಿ ಪ್ಲಾಂಟರ್	ರೂ.	1.505
18. ಶ್ರೀ ನೈಲಾಡಿ ಶೀನಪ್ಪ ಶೆಟ್ಟಿ, ರೈಸ್ ಮಿಲ್ಸ್	ರೂ.	1,502
19. ಶ್ರೀ ಸೌಕೂರು ಅಂತಯ್ಯ ಶೆಟ್ಟಿ	ರೂ	1,500
20. ಶ್ರೀ ಬಸ್ರೂರು ತೇಜಪ್ಪ ಶೆಟ್ಟಿ	ರೂ.	1,500
21. ಶ್ರೀ ಕೆ. ಮಹಾಬಲ ಶೆಟ್ಟಿ, B. Sc. Ag. (ಅವರ ಮಗ ರಮೇಶಚಂದ್ರ ಶೆಟ್ರ ಸ್ಮರಣಾರ್ಥವಾಗಿ)	ರೂ.	1,500
22. ಶ್ರೀ ಬಿ. ಜಗಜ್ಜೀವನದಾಸ್ ಶೆಟ್ಟಿ, M. L. A.	ರೂ.	1,500
23. ಶ್ರೀ ಹಂದಾಡಿ ಮೋನಪ್ಪ ಶೇರ್ವೆಗಾರರು	ರೂ	1,501
24. ಶ್ರೀ ಕೆ. ಸುಂದರರಾಮ ಶೆಟ್ಟಿ, ಡಾಕ್ಟರ್ ವೇಣುಗೋಪಾಲ ಶೆಟ್ಟಿ ಮತ್ತು ಸಹೋದರರು ಶ್ರೀಮತಿ ಹೇಮಲತಾ ಶೆಟ್ಟಿಯವರ ಸ್ಮರಣಾರ್ಥವಾಗಿ	ರೂ.	1,500
25. ಶ್ರೀಮತಿ ಕೆದಿಂಜೆ ಕಮಲಾಕ್ಷಿ ಹೆಗ್ಡೆ	ರೂ.	1,500
26. ಶ್ರೀಮತಿ ಕುಂಡಡ್ಕ ಲಕ್ಷ್ಮಿ ಶೆಟ್ಟಿ	ರೂ.	1,500
27. ಶ್ರೀಮತಿ ಸರಸ್ವತಿ ಭಂಡಾರಿ (ಡಾಕ್ಟರ್ ಕೆ. ಶೀನಪ್ಪ ಭಂಡಾರಿಗಳ ಪತ್ನಿ)	ರೂ.	1,500
28. ಶ್ರೀ ಕೆ. ಟಿ. ಆಳ್ವರ ಹೆಸರಿನಲ್ಲಿ ಅವರ ಪತ್ನಿ ಮತ್ತು ಮಕ್ಕಳಿಂದ	ರೂ.	1,500
29. ಶ್ರೀ ಕೆ. ಟಿ ಆಳ್ವರು	ರೂ.	1,000
30. ದಿವಂಗತ ಮಾವೂರುಗುತ್ತು ವೆಂಕಪ್ಪ ನಾಯ್ಕರ ಬಗ್ಗೆ ಅವರ ಕುಟುಂಬದವರಿಂದ	ರೂ.	1,000
31. ಶ್ರೀ ಬಿ. ರಾಜೀವ ಶೆಟ್ಟಿ, B.A.,B.L. (ಜನರಲ್ ಮೆನೇಜರ್, ಯುನೈಟೆಡ್ ಇಂಪೋರ್ಟರ್ಸ್ (ಬೊಂಬಾಯಿ) ಲಿಮಿಟೆಡ್)	ರೂ.	500
32. ಶ್ರೀ ಪಿ. ಜಯರಾಮ ಶೆಟ್ಟಿ(ಸೆಕ್ರೆಟರಿ,ವಿಜಯಾ ಬೇಂಕ್,ಲಿ.)	ರೂ	501
33. ಶ್ರೀ ಕೆ. ಎಂ ಶಾಮ ಶೆಟ್ಟಿ, ಪ್ಲಾಂಟರ್, ಮೂಡಿಗೆರೆ	ರೂ	500
34. ಶ್ರೀ ಕೊರಗ ಮೋಲಾಂಟರು, ಭಾರತಿ ವೀವಿಂಗ್ ಫೆಕ್ಟರಿ ಅಳ್ಳಿ ಗ್ರಾಮ	ರೂ.	500
35. ಶ್ರೀ ಬೆಳಿಂಜೆ ಮೋನಪ್ಪ ಹೆಗ್ಡೆಯವರು, ರೈಸ್‌ಮಿಲ್ಸ್	ರೂ.	501
36. ಡಾಕ್ಟರ್ ಬಿ. ಭುಜಂಗ ಹೆಗ್ಡೆಯವರು	ರೂ.	500
37. ಶ್ರೀ ನಿಟ್ಟೆ ಕರುಣಾಕರ ಅಡ್ಯಂತಾಯರು, (ಇಂಡೋನೇಶ್ಯ)	ರೂ.	500
38. ಶ್ರೀ ಮೂಲ್ಕಿ ಚಂದಯ ಶೆಟ್ಟಿ	ರೂ.	500
39. ಶ್ರೀ ಲೋಕಯ ನಾಯ್ಕರು, (ದುರ್ಗಾ ವರ್ಕ್ಸ್, ಬೆಂಗಳೂರು,	ರೂ.	501
40. ಡಾಕ್ಟರ್ ನಿಟ್ಟೆ ಶಂಕರ ಅಡ್ಯಂತಾಯರು	ರೂ.	500
41. ಡಾಕ್ಟರ್ ಪಿ. ಅನಂತ ಭಂಡಾರಿಗಳು, (ಆನರರಿ ಅಸಿಸ್ಟೆಂಟ್ ಸರ್ಜನ್, ವಿಲ್ಲುಪುರಂ)	ರೂ.	500
42 ಶ್ರೀ ಕಾಪು ಅನಂತ ಶೆಟ್ಟಿ (ಹನುಮಾನ್ ಟ್ರಾನ್ಸ್ ಪೋರ್ಟ್ ಕಂಪೆನಿ)	ರೂ.	501
43. ಕೇಪ್ಟನ್ (ಡಾಕ್ಟರ್) ಅನಂತರಾಮ ಶೆಟ್ಟಿ	ರೂ.	500

ಜುಬಿಲಿ ಫಂಡಿಗೆ ರೂ. 500/- ಅಥವಾ ರೂ. 1000/- ಧನಸಹಾಯವಿತ್ತವರ ಫೋಟೋಗಳನ್ನು ಜುಬಿಲಿ ಸ್ಮಾರಕ ಸಂಚಿಕೆಯಲ್ಲಿ ಮುದ್ರಿಸಲಾಗುವುದು ರೂ. 500ಕ್ಕಿಂತ ಕಡಿಮೆ ವಂತಿಗೆ ವಿವರವನ್ನು ಹಿಂದಿನಿಂದ ಪ್ರಕಟಿಸಲಾಗುವುದು.

19—1—1959

ಕೆ. ಸುಂದರ ರಾಮ ಶೆಟ್ಟಿ, B.A.,B.L.
ಎಡ್ವೊಕೇಟ್, ಮಂಗಳೂರು—3
ಟ್ರೆಜರರ್.

ಎರಡು ವರ

ಕೈಕಯಿಗೆ ಮಾತ್ರ ದಶರಥನಿತ್ತನಲ್ಲ
    ವರವೆರಡನಂತೆಯೆ ಕಣಾ ಪ್ರತಿ ವ್ಯಕ್ತಿ
    ಗಿಹವು [೧]ಹುಟ್ಟೊಡನೆರಡು ವರಮಾತ್ಮಶಕ್ತಿ
ಯಿಂದವಂ ಗಳಿಸದಿರೆ ಅನ್ಯಥಾ [೨]ಹೊಲ್ಲ. ೪
ಸ್ವಾರ್ಥವನೊ ವರಕೆ ಪರಮಾರ್ಥವನೊ [೩]ಕುರಿವೆ?
    ರಾಮನಿಗೆ ಕಾಡು, ತನ್ನಣುಗನಿಗೆ ನಾಡು
    [೪]ಎಂದೆರೆಯಲೆಬ್ಬಿಸಿದೆ [೫]ಕಣಜಗಳ ಗೂಡು!
ಪರಮಾರ್ಥದಲಿ ಸಲಿಸೆ, [೬]ತೆತ್ತು ಪಡೆದಿರುವೆ! ೮
ಪರಮವೆನೆ ಮೋಕ್ಷವೆಂದಿತ್ತೊಂದು ಹೊತ್ತು;
    ಮಾತೃಭೂ, ಮಾತೃಧರ್ಮವೆ ಇಂದು ಪರಮಂ.
    ದೇಶವನು, ಧರ್ಮವನು [೭]ಕಾಯೆರಡು ವರಮಂ
ಬಳಸು, ಇನ್ನಾಗದಂತ[೮]ವು ಪರರ ತೊತ್ತು! ೧೨
ಏಳು! ಖಂಡಿಸು ನಿನ್ನ ದೇಶಧರ್ಮಗಳಾ
ಹಗೆಗಳನ್ನೀನಳಿಯೆ [೯]ಅಳಿದುಳಿದು [೧೦]ನೆಗಳಾ!

—ಗೋವಿಂದ ಪೈ.

---

೧ ಹುಟ್ಟೊಡನೆ = ಜನಿಸುವಾಗಲೇ. ೨ ಹೊಲ್ಲ = ಕೇಡು ೩ ಕುರಿ = ಉದ್ದೇಶಿಸು, ಗುರಿಪಡಿಸು. ೪ ಎರೆಯು = ಬೇಡು ೫ ಕಣಜ = ಕಡಜ, ಗಂಡೋಲಿ ಎಂಬ ಒಂದು ಜಾತಿಯ ವಿಷದ ಕೊಂಡಿಯುಳ್ಳ ಹಾರಾಡುವ ಹುಳ, ಕಣಜಗಳ ಗೂಡು = Hornets' nest. ೬ ಕೊಟ್ಟು ಪಡೆದಿರುವಿ. ೭ ಕಾಯಿ = ರಕ್ಷಿಸಲಿಕ್ಕೆ. ೮ ಅವು = ನಿನ್ನ ದೇಶ ಮತ್ತು ನಿನ್ನ ಧರ್ಮ. ೯ ಅಳಿದುಳಿದು = ಸತ್ತರೂ ಬದುಕಿ, ಅಂದರೆ ಕೀರ್ತಿಶೇಷನಾಗಿ. ೧೦ ನೆಗಳಾ = ಪ್ರಖ್ಯಾತನಾಗು.

ಕರ್ನಾಟಕ ಬೇಂಕ್
(ಶೆಡ್ಯೂಲ್ಡ್ ಬೇಂಕ್)
ಸದ್ಯವೇ ತೆರೆಯಲ್ಪಡಲಿರುವ ಶಾಖೆಗಳು:
ಹೊಸನಗರ, ಶಿಕಾರಿಪುರ, ಹೊನ್ನಾಳಿ,
ಹೊಳೆನರಸೀಪುರ ಮತ್ತು ರಾಮನಗರಮ್
ಸಾಧನ ಸಂಪತ್ತು
ರೂ. 1,65,77,000ಕ್ಕೂ ಮಿಕ್ಕಿದೆ.
(ತಾ. 31—12—1958ರಲ್ಲು)
Karnataka Bank
Limited.

ಮನುಷ್ಯ ಹೃದಯದ ಕಣಗಳಲ್ಲಿರುವ ಲೋಹಭಾಗದ ಸಂಶೋಧನೆ

ಡಾ| ವಿ. ಬಾಲಕೃಷ್ಣ ಹೆಗ್ಡೆಯವರ ಪರಿಶ್ರಮ

ಹೃದಯದ ಕಣಗಳಲ್ಲಿ ಲೋಹವರ್ತನೆಗಳನ್ನು ಕಂಡು ಹಿಡಿಯುವ ಸಂಶೋಧನೆಯು ಇದೀಗ ಅಮೇರಿಕದ ಎಸ್. ಸಿ. ಮೆಡಿಕಲ್ ಸ್ಕೂಲಿನಲ್ಲಿ ನಡೆಯುತ್ತಿದೆ. ಹೃದಯ ರೋಗದ ನಿದಾನ ಮತ್ತು ಚಿಕಿತ್ಸೆಗೆ ಇದರಿಂದ ಹೊಸದೊಂದು ಮಾರ್ಗವೇ ಶೋಧಿತವಾಗಬಹುದೆಂದು ನಿರೀಕ್ಷೆಯಿದೆ. ಲಾಸ್ ಏಂಜಲಿಸ್ ಜಿಲ್ಲೆಯ ಹೃದಯ ಸಂಘದವರು ಕಾರ್ಡಿಯೋ ವೆಸ್ಕ್ಯುಲರ್ ಪದ್ಧತಿಯನ್ನು ಕುರಿತು ಸಂಶೋಧನೆ ನಡೆಸುವ ಐವರು ವೈದ್ಯ ವಿಜ್ಞಾನಿಗಳಿಗೆ ಯೋಗ್ಯತಾ ಪ್ರಶಸ್ತಿಯನ್ನು ಕೊಟ್ಟರು. ಅವರಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಡಾ| ಬಾಲಕೃಷ್ಣ ಹೆಗ್ಡೆ (ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿಯ ಡೈರೆಕ್ಟರ್ ಮತ್ತು ವರ್ಕ್ಸ್ ಮೆನೇಜರ್ ಶ್ರೀ ಕೆ. ಅನಂತ ಶೆಟ್ಟಿ ಪುತ್ರರಾಗಿದ್ದು ಉನ್ನತ ವೈದ್ಯಕೀಯ ಶಿಕ್ಷಣಕ್ಕಾಗಿ 1956ರಲ್ಲಿ ಅಮೇರಿಕಕ್ಕೆ ತೆರಳಿದವರು. ಸಂ ನ) ಇವರೂ ಒಬ್ಬರೆನ್ನಲು ನಮಗೆ ಹೆಮ್ಮೆ ಎನಿಸುತ್ತಿದೆ. ಡಾ| ಹೆಗ್ಡೆಯವರು ಜಾರ್ಜ್. ಸಿ. ಗ್ರಿಫಿತ್ ಎಂಬ ಪ್ರಮುಖ ವೈದ್ಯರ ಜತೆ ಈ ಸಂಶೋಧನೆ ನಡೆಸಲು ‹ಲಾಸ್ ಏಂಜಲಿಸ್ ಹೃದಯ ಸಂಘ› (Los Anjeles Heart Association)ವು ಅವರಿಗೆ ಫೆಲೋಶಿಪ್ ವೇತನವನ್ನೂ ದಯಪಾಲಿಸಿದೆ

ಲೋಹದ ಶೋಧ

ಡಾ| ಹೆಗ್ಡೆಯವರು ಲಾಸ್ ಏಂಜಲಿಸ್ ಜಿಲ್ಲೆಯ ಆಸ್ಪತ್ರೆಯಲ್ಲಿ 390 ರೋಗವಿಲ್ಲದ ಸಾಧಾರಣ ಹೃದಯ (normal hearts)ಗಳನ್ನು ಪರಿಶೀಲಿಸಿದಾಗ ಅವರಿಗೆ ಮನುಷ್ಯ ಹೃದಯದಲ್ಲಿ ತವರ, ಕಬ್ಬಿಣ, ತಾಮ್ರ, ಸೀಸ ಮತ್ತು ಮ್ಯಾಂಗನೀಸ್ ಮುಂತಾದ 13 ಲೋಹಗಳ ಛಾಯೆ ಇರುವುದು ವ್ಯಕ್ತವಾಯಿತು. ಇದಾದ ಮೇಲೆ ಅವರು ರಕ್ತದ ಒತ್ತಡ ಅತಿಯಾಗಿರುವ ಹೃದಯಗಳನ್ನೂ, ರಕ್ತನಾಳಗಳು ಗಟ್ಟಿಗೊಂಡ ಹೃದಯಗಳನ್ನೂ, ಹೃದಯ ಕಣಗಳು ನಾಶವಾಗುತ್ತಿರುವ ಹೃದಯಗಳನ್ನೂ ಪರೀಕ್ಷಿಸಿ ಅಲ್ಲಿ ಯಾವಯಾವ ಲೋಹ ಛಾಯೆಗಳಿರುವುವೆಂದು ಶೋಧಿಸತೊಡಗಿದರು. ಪ್ರತಿಯೊಂದು ಹೃದಯ ರೋಗದಲ್ಲಿಯೂ ಹೃದಯದಲ್ಲಿ ವಿಶಿಷ್ಟ ಲೋಹಛಾಯೆಗಳುತ್ಪನ್ನವಾಗುವುದನ್ನು ಡಾ| ಹೆಗ್ಡೆಯವರು ಪರಿಶೋಧಿಸಿದರು. ಹೃದಯಕಣದಲ್ಲಿರುವ ಲೋಹಛಾಯೆಯ ಪ್ರಮಾಣವು (values) ಹೆಚ್ಚುಕಡಿಮೆಯಾಗುವುದರಿಂದಲೇ ಹೃದಯರೋಗಗಳು ಉತ್ಪನ್ನವಾಗಬಹುದೆಂದು ಡಾ| ಹೆಗ್ಡೆಯವರಿಗೆ ಅನಿಸತೊಡಗಿದೆ. ಈ ವಿಷಯವು ಇನ್ನೂ ಹೆಚ್ಚಿನ ಪರಿಶೀಲನೆಯಿಂದ ನಿರ್ಧಾರವಾಗಿ ನಿರ್ಣಯಿಸಲ್ಪಟ್ಟಲ್ಲಿ ಹೃದಯ ರೋಗದ ನಿದಾನಕ್ಕೂ ಚಿಕಿತ್ಸೆಗೂ ನೆರವಾಗಬಹುದು. ಅಲ್ಲದೆ ಲೋಹ ಛಾಯೆಯ ಮಟ್ಟವು ಎಲ್ಲಿದೆ ಎಂಬುದನ್ನು ಕಂಡು ಹಿಡಿದರೆ ರೋಗವು ಎಷ್ಟು ಕಾಲ ಮುಂದುವರಿದೀತು, ರೋಗಿ ಎಂದು ಗುಣಮುಖನಾದಾನು ಎಂಬುದನ್ನು ಕೂಡ ಕಂಡುಕೊಳ್ಳಲು ಸಾಧ್ಯವಾದೀತೆಂದು ಡಾ| ಹೆಗ್ಡೆ ನಂಬಿದ್ದಾರೆ.

(ಅಮೇರಿಕೆಯ ‘ಟ್ರೋಜನ್’ ದಿನಪತ್ರಿಕೆಯಿಂದ)

ಉಷಾ ಹೊಲಿಗೆ ಯಂತ್ರಗಳು
ಗಟ್ಟಿಮುಟ್ಟಾದ ರಚನೆ! ಸರ್ವರ ಅಭಿರುಚಿಗೊಪ್ಪುವ
ವಿವಿಧ ಮಾದರಿಯ ತಯಾರಿಕೆ.
ಪ್ರತಿಯೊಂದು ಶೋಧನೆಯಲ್ಲೂ ಶ್ರೇಷ್ಠತೆಯನ್ನು ಗಳಿಸಿ
ನಮ್ಮ ದೇಶದಲ್ಲಿ ವಿಶೇಷವಾಗಿ ವಿಕ್ರಯವಾಗುತ್ತಿರುವ ಯಂತ್ರ.
ನಮ್ಮ ಶೋ ರೂಮನ್ನು ಸಂದರ್ಶಿಸಿ ಯಂತ್ರಗಳನ್ನು
ಪರಿಶೀಲಿಸಿರಿ!
ಇಂಡಿಯನ್ ಒಟೊಮೊಬೈಲ್ಸ್
ಕಾರ್ನಾಡ್‌ಕರ್ ಬಿಲ್ಡಿಂಗ್ಸ್, ಉಡುಪಿ, ದ. ಕನ್ನಡ
ಫೋನ್ 65 ತಂತಿ: ಕಾರ್ನಾಡ್.

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿರುವ
ಹಿತಕರವಾದ ಅತ್ಯುತ್ಕೃಷ್ಟ ವಸತಿಗೃಹ—
ರೋಯಲ್ ಮಹಾಲ್
ಉಡುಪಿ, ದ. ಕ.
ನಗರದ ಕೇಂದ್ರ ಸ್ಥಳದಲ್ಲಿ, ಪ್ರಶಾಂತ ಪ್ರದೇಶದಲ್ಲಿ, ಪೇಟೆಯ ಮುಖ್ಯ ಸ್ಥಳಗಳಿಗೆ ಅತೀ ಸಮೀಪದಲ್ಲಿ ಇದ್ದುಕೊಂಡು ಜನಾಕರ್ಷಣೆಯನ್ನೂ ಜನಾನುರಾಗವನ್ನೂ ಗಳಿಸಿಕೊಂಡಿರುವ ಆದರ್ಶ ನಿವಾಸ.
ಕೆ. ವೆಂಕಟ್ರಮಣ ಭಟ್,
ಮಾಲಕ.

ಫೀನಿಕ್ಸ್ ಥ್ರೆಡ್ ಕಂಪೆನಿ,
ಬಲರಾಜ್ ಅರಸ್ ರಸ್ತೆ, ಶಿವಮೊಗ್ಗ.
ಬಿಳಿ ಮತ್ತು ಬಣ್ಣಗಳಲ್ಲಿ ಉತ್ತಮ ತರದ
ಹೊಲಿಯುವ ಮತ್ತು ಕಸೂತಿ ನೂಲನ್ನು
ತಯಾರಿಸುವವರು.
●ಸ್ಟೇಗ್ ●ಟೂಮ್ಯಾನರ್ ●ಗಾಂಧೀಜಿ
ಹಾಗೂ ●ಫೀನಿಕ್ಸ್ ಬ್ರಾಂಡುಗಳು
ಜನಪ್ರಿಯವಾಗಿವೆ.
Phoenix Thread Co.,
BALARAJ URS ROAD,
SHIMOGA.

ಸ್ಪೇಶಲ್ ನಂ. ೧
ರಾಮತೀರ್ಥ
ಬ್ರಾಹ್ಮಿ ತೈಲ
[ಆಯುರ್ವೇದಿಕ್ ಔಷಧ]

ರಾಮತೀರ್ಥ ಬ್ರಾಹ್ಮಿ ತೈಲ (ರಜಿಸ್ಟರ್ಡ್ ಸ್ಪೇಶಲ್ ನಂ. ೧) ಅನೇಕ ಔಷಧಗಳಿಂದ ತಯಾರಿಸಿದ ರಾಮತೀರ್ಥ ಬ್ರಾಹ್ಮೀ ತೈಲದಿಂದ ಎಲ್ಲ ಋತುಗಳಲ್ಲೂ ಎಲ್ಲರಿಗೂ ಲಾಭ ದೊರಕುತ್ತದೆ. ಶರೀರಕ್ಕೆ ಮಾಲೀಶ್ (ಅಭ್ಯಂಗನ) ಮಾಡಿದರೆ ಉತ್ತಮ.
ಚಿತ್ರಪಟದ ಬೆಲೆ ೫೦ ನ. ಪೈಸೆ
ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ,(ಸೆಂಟ್ರಲ್ ರೇಲ್ವೆ) ಮುಂಬಯಿ-೧೪

ಇಂದಿಗೆ **53** ವರುಷಗಳಿಂದಲೂ "ಕೊರ್ಪೊರೇಶನ್" ಬೇಂಕು ರಾಷ್ಟ್ರಕ್ಕೆ ಆರ್ಥಿಕ ರೂಪದಲ್ಲಿ ಸಲ್ಲಿಸಿದ ಸೇವೆಯನ್ನು ಎಲ್ಲರೂ ಬಲ್ಲರು. ಇನ್ನು ಮುಂದಕ್ಕೂ ರಾಷ್ಟ್ರದ ಆರ್ಥಿಕ ರಂಗದಲ್ಲಿ ಹೆಚ್ಚೆಚ್ಚು ಸೇವೆ ಸಲ್ಲಿಸುವ ಆಶ್ವಾಸನೆಯನ್ನು ನಮ್ಮ ಪ್ರಜಾರಾಜ್ಯದ

೯ನೇ ವಾರ್ಷಿಕೋತ್ಸವದಂದು

ಇದು ರಾಷ್ಟ್ರಕ್ಕೆ ನೀಡುತ್ತಿದೆ!

ಈ ಬೇಂಕಿನ ಒಟ್ಟು ಚಲಾವಣಾ ಬಂಡವಾಳ ೯ ಕೋಟಿ ರೂಪಾಯಿಗಳಿಗೂ ಮೀರಿದೆ.

ಮೈಸೂರು ರಾಜ್ಯದಲ್ಲಿ ಈ ಬೇಂಕಿನ ಶಾಖೆಗಳು:

ಉಡುಪಿ
ಕುಂದಾಪುರ
ಮಂಗಳೂರು (ರಥಬೀದಿ)
ಮಂಗಳೂರು (ಬಂದರ)
ಶಿವಮೊಗ್ಗ
ಮಡಿಕೇರಿ
ವಿರಾಜಪೇಟೆ
ಸಕಲೇಶಪುರ
ಮೈಸೂರು
ಸಾಗರ
ಶಿರ್ಸಿ
ಮುಲ್ಕಿ
ತೀರ್ಥಹಳ್ಳಿ
ಭದ್ರಾವತಿ
ಹಾಸನ
ಬೆಂಗಳೂರು ನಗರ
ಹುಬ್ಬಳ್ಳಿ
ಧಾರವಾಡ
ಬ್ಯಾಡಗಿ
ಹಾವೇರಿ
ಪೊನ್ನಂಪೇಟೆ
ಸೋಮವಾರಪೇಟೆ
ಬಳ್ಳಾರಿ
ಕೊಟ್ಟೂರು
ರಾಣೆಬೆನ್ನೂರ
ರಾಯಚೂರು
ಬೆಂಗಳೂರು ದಂಡು
ದೊಡ್ಡ ಬಳ್ಳಾಪುರ

ಇವಲ್ಲದೆ

ಇದಕ್ಕೆ ಇನ್ನೂ ಹಲವಾರು ಶಾಖೆಗಳು ಆಂಧ್ರ ಪ್ರದೇಶ, ಮದರಾಸು, ಕೇರಳ, ಮುಂಬಯಿ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿವೆ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] **[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)**

ತಂತಿ: "LAXMINIVAS". **ಟೆಲಿಫೋನ್: 82.**

ಮಂಗಳೂರನ್ನು ಸಂದರ್ಶಿಸಿದಾಗ ನೆನಪಿರಲಿ—

"ಜಯ ಕೆಫೆ -- ಲಕ್ಷ್ಮಿ ನಿವಾಸ್"

ಅತ್ಯಾಧುನಿಕವಾದ ಸಕಲ ಸೌಕರ್ಯಗಳಿಂದೊಡಗೂಡಿದ
ಬೋರ್ಡಿಂಗ್ ಲಾಡ್ಜಿಂಗ್ ಊಟ ಮತ್ತು ವಸತಿಗೃಹ.

ಜನತಾ ಸೇವೆಯೇ ನಮ್ಮ ಮುಖ್ಯ ಗುರಿ.

FOR ENTIRELY MODERNISED AND SELF CONTAINED ROOMS:—

JAYA CAFE - LAXMI NIVAS

K. S. Rao Road, MANGALORE. (S. K.)

H. O. COIMBATORE. *Prop:* **N. V. BHAT.**

NAVAYUGA 29-1-1959

Regd No. M. 3619
LICENCE No 31
Licensed to Post without Prepayment

ದಿ ವಿಜಯ ಬೇಂಕ್, ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:—
ಮಂಗಳೂರು

ಸ್ಥಾಪನೆ
1931

ಪ್ರಜಾಪ್ರಭುತ್ವದ ಸಾಮಾಜಿಕ ಅಭಿಪ್ರಾಯವನ್ನು ಪ್ರತಿಬಿಂಬಿಸಲು ಶ್ರಮಿಸಬೇಕು.

ಬೇಂಕುಗಳು ಜನತೆಯ ಅವಶ್ಯಕತೆಗಳನ್ನು ಪೂರೈಸಲು ಪ್ರಯತ್ನಿಸಬೇಕು.

ನಮ್ಮ ಬೇಂಕಿನ **27** ವರ್ಷಗಳ ತೃಪ್ತಿಕರ ಸೇವೆ ಮತ್ತು ಪರಿಪಕ್ವ ಅನುಭವ.

ಠೇವಣಾತಿಗಳಿಗೆ ಆಕರ್ಷಕ ಬಡ್ಡಿ ದರ.

ಹೆಚ್ಚಿನ ಮಾಹಿತಿಗಳಿಗೆ ದಯಮಾಡಿ ನಮ್ಮನ್ನು ವಿಚಾರಿಸಿರಿ.

ಡೈರೆಕ್ಟರರ ಮಂಡಳಿ:—

1 **ಶ್ರೀ ಕೆ ಸುಂದರರಾಮ ಶೆಟ್ಟಿ** ಬಿ ಎ, ಬಿ ಎಲ್,
ಎಡ್ವೊಕೇಟ್, (ಅಧ್ಯಕ್ಷ)
2 **ಶ್ರೀ ಬಿ ಮಂಜಯ್ಯ ಹೆಗ್ಡೆ**, ಬಿ ಎ, ಬಿ. ಎಲ್.,
ಎಡ್ವೊಕೇಟ್ ಮತ್ತು ದ. ಕ ಜಿಲ್ಲಾ ಬೋರ್ಡು ಅಧ್ಯಕ್ಷ
3 **ರಾವ್ ಬಹದ್ದೂರ್ ಕೆ ಟಿ ಆಳ್ವ**,
ಮಾಜಿ ಡಿಪ್ಯುಟಿ ಡೈರೆಕ್ಟರ್—ಕೃಷಿ ಇಲಾಖೆ
4 **ಶ್ರೀ ಯಂ ಜಿ ಗಣೇಶ ನಾರಾಯಣ ರೈ**, ಬಿ ಎ, ಬಿ ಎಲ್,
ಎಡ್ವೊಕೇಟ್
5 **ಡಾಕ್ಟರ್ ಕೆ ಬಾಲಪ್ಪ ಶೆಟ್ಟಿ**, ಡಿ ಯಂ ಆರ್, ಝುಡ್ ಯಂ ಆರ್.(ವಿಯನ್ನ)
ಮೆಡಿಕಲ್ ಪ್ರೇಕ್ಟಿಶನರ್
6 **ಕೆ ಪಿ ಭವಾನಿಶಂಕರ ಶೆಟ್ಟಿ**,
ಬ್ರೇಂಚ್ ಸೆಕ್ರೆಟರಿ, ಟ್ರೈಟನ್ ಮತ್ತು ಎಟ್ಲಾಸ್ ಇನ್ಸ್ಯೂರೆನ್ಸ್ ಕಂಪೆನಿಗಳು
7 **ರಾವ್ ಬಹದ್ದೂರ್ ಯನ್ ಯಂ. ಆಡ್ಯಂತಾಯ**, ಬಿ ಯಸ್ ಸಿ (ಎಡಿನ್)
ಮಾಜಿ ಜೊಯಿಂಟ್ ಡೈರೆಕ್ಟರ್, ಇಂಡಸ್ಟ್ರೀಸ್ ಇಲಾಖೆ
8 **ಡಾಕ್ಟರ್ ಕೆ. ಚಿಕ್ಕಪ್ಪ ಆಳ್ವ**,
ರಿಜಿಸ್ಟರ್ಡ್ ಮೆಡಿಕಲ್ ಪ್ರೇಕ್ಟಿಶನರ್
9. **ಶ್ರೀ ಯಂ ಸುಂದರರಾಮ ಶೆಟ್ಟಿ**,
ಬ್ರೇಂಚ್ ಮೆನೇಜರ್, ಟ್ರೈಟನ್ ಮತ್ತು ಎಟ್ಲಾಸ್ ಇನ್ಸ್ಯೂರೆನ್ಸ್ ಕಂಪೆನಿಗಳು.
10 **ಶ್ರೀ ಬಿ ಟಿ ರವೀಂದ್ರನಾಥ ಪೂಂಜ**, ಬಿ ಯಸ್ ಸಿ,
ಕಾಫಿ ಪ್ಲೇಂಟರ್.

* * *

ಶ್ರೀ ಪಿ ಜಯರಾಮ ಶೆಟ್ಟಿ, ಯಂ ಎ ಬಿ ಎಲ್., ಸಿ ಎ ಐ ಐ ಬಿ,
ಸೆಕ್ರೆಟರಿ

ಹೊಸತಾಗಿ ತೆರೆಯಲಿರುವ ಶಾಖೆಗಳು:

ಭಟ್ಕಲ್, ಮೂಡಿಗೆರೆ, ಗೋಣಿಕೊಪ್ಪಲ್, ನಂಜನಗೂಡ್, ಚಾಮರಾಜನಗರ ಮತ್ತು ಕೊಳ್ಳೆಗಲ್.

The VIJAYA BANK, Ltd.,

(A SCHEDULED BANK)

Edited, Printed & Published by K H Shetty at the Navayuga Press, Udipi, S. India

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ.ಪೈಸೆ

ವರುಷ ೩೮. ವಾರ ೨೧ 5-2-1959 Vol. 38 No 21.

ಇತಿಹಾಸ ಪೃಷ್ಠ

ಭಾರತ ವಿಭಜನೆಗೆ ಕಾರಣೀಭೂತರಾರು

ಮುಸ್ಲಿಂಲೀಗನ್ನು ಉದ್ರೇಕಿಸಿ, ಪ್ರೋತ್ಸಾಹಿಸಿದ ಕಾಂಗ್ರೆಸ್ ನೇತಾರರೆನ್ನುತ್ತಾರೆ, ಮೌಲಾನಾ

ಭಾರತದ ಪ್ರಧಾನಿಯವರೂ ತನ್ನ ನಿಕಟ ಸ್ನೇಹಿತರೂ ಆದ ಪಂಡಿತ ನೆಹರೂ ಎರಡು ತಪ್ಪುಗಳನ್ನು ಮಾಡದೆ ಹೋಗಿದ್ದರೆ, ಭಾರತವು ಅವಿಭಾಜ್ಯವಾಗಿಯೇ ಉಳಿಯುತಿತ್ತು ಎಂದು ಮೌಲಾನಾ ಅಬುಲ್ ಕಲಮ್ ಆಜಾದರು "ಇಂಡಿಯಾ ವಿನ್ಸ್ ಫ್ರೀಡಮ್" ಎಂಬ ತನ್ನ ಆತ್ಮಕಥೆಯ ಪ್ರಥಮ ಭಾಗದಲ್ಲಿ ಬರೆದಿರುವರೆಂದು ವರದಿಗಳು ಬಂದಿವೆ.

ಶ್ರೀ ನೆಹರೂರವರ ಸೂಕ್ಷ್ಮ ಸಿದ್ಧಾಂತದ ತೀವ್ರೇಚ್ಛೆಯಿಂದಾಗಿ ಮುಸ್ಲಿಂಲೀಗಿಗೆ ೧೯೩೭ರಲ್ಲಿ ಹೊಸಜೀವನವು ಪ್ರಾಪ್ತಿಯಾಯಿತು. ಆಗ ಕಾಂಗ್ರೆಸ್ಸು ಭಾರತದ ವಿವಿಧ ರಾಜ್ಯಗಳಲ್ಲಿ ಚುನಾವಣೆಗೆ ನಿಂತಿತು. ಅದರಲ್ಲಿ ಬೊಂಬಾಯಿ ಮತ್ತು ಉತ್ತರ ಪ್ರದೇಶಗಳಲ್ಲಿ ಕಾಂಗ್ರೆಸ್ಸಿಗೆ ಮಂತ್ರಿ ಮಂಡಳ ರಚಿಸಲು ಅವಶ್ಯಕವಾದ ಬಹುಮತವು ದೊರೆಯಲಿಲ್ಲ. ಆಗಾಗಲೇ ಮುಸ್ಲಿಂ ಲೀಗು ಪ್ರತ್ಯೇಕ ಪಕ್ಷವಾಗಿ ನಿರ್ಮಾಣಗೊಂಡಿದ್ದು, ಅದೂ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಅಲ್ಲದೆ, ಉತ್ತರ ಪ್ರದೇಶದಲ್ಲಿ ಹಲವಾರು ಸ್ಥಾನಗಳನ್ನೂ ಪಡೆದಿತ್ತು. ಉತ್ತರ ಪ್ರದೇಶದಲ್ಲಿ ಕಾಂಗ್ರೆಸಿಗೆ ಬಹುಮತವಿಲ್ಲದೆ ಇದ್ದುದರಿಂದ ಮುಸ್ಲಿಂ ಲೀಗಿನ ಬೆಂಬಲದಿಂದ ಸಂಯುಕ್ತ ಮಂತ್ರಿ ಮಂಡಲವನ್ನು ರಚಿಸಬಹುದಾಗಿತ್ತು. ಆದರೆ, ಹೀಗೆ ಬೆಂಬಲ ನೀಡಬೇಕಾದರೆ, ತಮಗೆ ಮಂತ್ರಿ ಮಂಡಲಿಯಲ್ಲಿ ಎರಡು ಸ್ಥಾನಗಳನ್ನೀಯಬೇಕೆಂದೂ ತಮ್ಮ ನಾಯಕರಾಗಿದ್ದ ಕಲೀಕುಜ್ಜಮಾನ ಮತ್ತು ನವಾಬ ಇಸ್ಮಾಯಿಲರನ್ನು ಸಚಿವ ಸಂಪುಟದಲ್ಲಿ ಸೇರಿಸಿಕೊಳ್ಳಬೇಕೆಂದೂ ತಿಳಿಸಿದರು. ಈ ನಡುವೆ ಮೌಲನಾರ ಮಧ್ಯಸ್ಥಿಕೆಯಿಂದಾಗಿ ಈ ಇರ್ವರು ನಾಯಕರು ಕಾಂಗ್ರೆಸ್ಸಿನ ಕಾರ್ಯಕ್ರಮಗಳನ್ನು ಸ್ವೀಕರಿಸುವೆವೆಂಬ ಪ್ರತಿಜ್ಞಾಪತ್ರಕ್ಕೆ ಸಹಿಹಾಕಿದ್ದರು

ಇಷ್ಟರಲ್ಲಿಯೇ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳಿಂದ ಗೆದ್ದು ಬಂದ ಸದಸ್ಯರ ದಾಪಾಶಯದಂತೆ ಲೀಗಿಗೆ ಎರಡು ಸ್ಥಾನವನ್ನು ಮಂತ್ರಿ ಮಂಡಲಿಯಲ್ಲಿ ನೀಡಲಾಗುವುದಿಲ್ಲ ಎಂದು ಪಂಡಿತ ನೆಹರೂ ಲೀಗಿಗೆ ಪತ್ರ ಬರೆದು ತನ್ನ ಸೂಕ್ಷ್ಮ ಸಿದ್ಧಾಂತವನ್ನು ಪ್ರದರ್ಶಿಸಿದರು. ಆದರೆ, ಇದರಿಂದ ಲೀಗಿನ ಮನಸ್ಸು ನೊಂದುಹೋಗಿ ಅವರು ಕಾಂಗ್ರೆಸ್ಸಿನೊಡನೆ ಸಹಕರಿಸುವ ತಮ್ಮ ನಿರ್ಧಾರವನ್ನೂ ಹಿಂತೆಗೆದುಕೊಂಡಿತು ಈ ಘಟನೆಯಿಂದ ಮೌಲಾನಾ ಆಜಾದರಿಗೆ ಬಹಳ ವ್ಯಥೆಯಾಯಿತು. ಈ ಕಾರ್ಯವು ಬಹಳ ದುರ್ಭಾಗ್ಯಪೂರ್ಣವಾಗಿತ್ತು. ಉತ್ತರ ಪ್ರದೇಶದಲ್ಲಿ ಲೀಗು ಕಾಂಗ್ರೆಸ್ಸಿನೊಂದಿಗೆ ಸಹಯೋಗ ನೀಡುತಿದ್ದರೆ, ಕ್ರಮೇಣ ಕಾಂಗ್ರೆಸ್ಸಿನ ಪ್ರತಿಯೊಂದು ವ್ಯಾವಹಾರಿಕ ವಿಷಯಗಳಲ್ಲೂ ಅದು ತನ್ನ ಅನುಮೋದನೆಯನ್ನೀಯುತಿತ್ತು. ಆದರೆ, ಪಂಡಿತ ನೆಹರೂರವರ ಕಠೋರ ಕಾರ್ಯದಿಂದ ಮುಸ್ಲಿಂ ಲೀಗು ತನ್ನ ಬಲ ಸಂವರ್ಧನೆಗೆ ಮೊದಲುಮಾಡಿತು, ಮತ್ತಿದರಿಂದ ಪ್ರತ್ಯೇಕತಾ ಭಾವನೆಯು ಮತ್ತಷ್ಟು ಬೆಳೆಯುತ್ತ ಬಂತು.

ಎರಡನೆಯ ತಪ್ಪು ೧೯೪೬ರಲ್ಲಿ ನಡೆಯಿತು. ೧೯೪೬ ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಸ್ವೀಕರಿಸಿದನಂತರ ಅವರು ಬೊಂಬಾಯಿಯಲ್ಲಿ ಒಂದು ಪತ್ರಿಕಾ ಸಮ್ಮೇಲನದಲ್ಲಿ ಮಾತಾಡುತಿದ್ದರು ಈ ರೀತಿ ಮಾತಾಡುತ್ತಿರುವಾಗ ನಡೆದ ಘಟನೆಯೊಂದರಿಂದ ಭಾರತದ ಇತಿಹಾಸವೇ ಪರಿವರ್ತನೆಗೊಂಡಿತು.

ವೇಲ್ಸ್‌ನಲ್ಲಿ ನೇತ್ರ ತಜ್ಞರು ಸಭೆ ಸೇರಿದರು. ದ ಆಫ್ರಿಕಾ, ಭಾರತ, ಆಸ್ಟ್ರೇಲಿಯಾ, ಸಂಯುಕ್ತ ರಾಷ್ಟ್ರ ಮತ್ತು ಬ್ರಿಟನ್ ಇದರಲ್ಲಿ ಭಾಗವಹಿಸಿದುವು.

ಈ ಸಂದರ್ಭದಲ್ಲಿ ಕಾಂಗ್ರೆಸ್, ಬ್ರಿಟಿಷ ಕೇಬಿನೆಟ್ ಯೋಜನೆಯನ್ನು ಸ್ವೀಕರಿಸಿತ್ತು. ಈ ಸಂಬಂಧದ ಒಂದು ಪ್ರಶ್ನೆಯನ್ನು ಪತ್ರಿಕಾ ಸಮ್ಮೇಲನದಲ್ಲಿ ಅವರಿಗೆ ಕೇಳಿದಾಗ, ಕಾಂಗ್ರೆಸು ಅದನ್ನು ಸ್ವೀಕರಿಸಿದ್ದರೂ ಆ ವಿಚಾರವಾಗಿ ಆಲೋಚಿಸಲು ಅದು ಸ್ವತಂತ್ರವಿದೆ ಎಂಬುದಾಗಿ ಅವರು ಉತ್ತರಿಸಿದರು. ನೆಹರು ಈ ರೀತಿಯಾಗಿ ಹೇಳಿದುದೇ ಒಂದು ದೊಡ್ಡ ಅಪರಾಧವಾಗಿಬಿಟ್ಟಿತು. ಆದರೂ ಸಾಮಾನ್ಯವಾಗಿ ವಾತಾವರಣವು ತಿಳಿಯಾಗಿರುವಾಗ, ಅವರ ಈ ಮಾತಿನ ಕಡೆಗೆ ಯಾರ ಗಮನವೂ ಹರಿಯುವಂತಿರಲಿಲ್ಲ. ಆದರೆ, ಆ ಕಾಲವು ಎಂದಿನಂತಿರದೆ, ಅಶಾಂತತೆಯಿಂದ ಕೂಡಿಕೊಂಡಿತ್ತು. ಆದುದರಿಂದಲೇ ಅವರ ಈ ಮಾತು ದೇಶದಲ್ಲಿ ಭಯಾನಕ ಪ್ರತಿಕ್ರಿಯೆಯನ್ನೇ ಮಾಡಿಬಿಟ್ಟಿತು. ಇದರ ಪರಿಣಾಮವಾಗಿ ದೇಶದಲ್ಲಿ ಅನೇಕ ದುಃಖದಾಯಕ ಘಟನೆಗಳು ನಡೆದುಹೋದವು. ಇವುಗಳ ದೆಸೆಯಿಂದ ಮುಸ್ಲಿಂ ಲೀಗು ಒಂದು ಹೆಜ್ಜೆ ಮುಂದುವರಿದು ಬ್ರಿಟಿಷ್ ಕೇಬಿನೆಟ್ ಯೋಜನೆಯನ್ನು ಬೆಂಬಲಿಸದೆ ಅಸ್ವೀಕಾರ ಮಾಡಿತು.

ಆದಾದ ಮೇಲೆ ಭಾರತದಲ್ಲಿ ಮಧ್ಯಕಾಲೀನ ಮಂತ್ರಿ ಮಂಡಲವು ಸ್ಥಾಪನೆಯಾಯಿತು. ಆಗ, ಸರದಾರ ವಲ್ಲಭಭಾಪಟೇಲರು ಗೃಹಖಾತೆಯನ್ನು ನೋಡಿಕೊಳ್ಳಲು ತೀರ ಆತುರರಾಗಿದ್ದರು. ಹಾಗಾಗಿ, ಅರ್ಥ ವಿಭಾಗವನ್ನು ಲೀಗಿಗೆ ಬಿಟ್ಟುಕೊಡಲೇ ಬೇಕಾಯಿತು. ಈ ಅರ್ಥ ವಿಭಾಗವನ್ನು ತನ್ನ ಭದ್ರ ಮುಷ್ಟಿಯಲ್ಲಿಟ್ಟುಕೊಂಡು, ಅದು ಕೇಂದ್ರ ಸರಕಾರಕ್ಕೆ ಪಂಗುನಾಮ ಹಾಕತೊಡಗಿತು ಅರ್ಥ ವಿಭಾಗವನ್ನು ತಾನು ಇಟ್ಟುಕೊಳ್ಳದೆ, ಮುಸ್ಲಿಂ ಲೀಗಿಗೆ ಕೊಟ್ಟುಬಿಟ್ಟುದು ಮಹತ್ವಪೂರ್ಣ ಅಪರಾಧವಾಗಿದೆ ಏಕೆಂದರೆ, ಕಾಂಗ್ರೆಸ್ ಸದಸ್ಯರು ಮಂಡಿಸಿದ ಸೂಚನೆಗಳೆಲ್ಲವನ್ನೂ ವಿತ್ತ ಮಂತ್ರಿ ಶ್ರೀ ಲಿಯಾಖತ ಆಲೀಖಾನರು ಕಿವಿಗೆ ಹಾಕಿಕೊಳ್ಳುತ್ತಲೇ ಇರಲಿಲ್ಲ ಒಂದು ವೇಳೆ ಹಾಕಿಕೊಂಡರೂ ಅವುಗಳಲ್ಲಿ ಸಾಕಷ್ಟು ಪರಿವರ್ತನೆಗಳನ್ನು ಮಾಡಿ, ಮೂಲ ಸೂಚನೆಯ ಮಹತ್ವಪೂರ್ಣಾಂಶವೆಲ್ಲವನ್ನೂ ಕಿತ್ತು ಹಾಕುತಿದ್ದರು

(೧೨ನೇ ಪುಟ ನೋಡಿರಿ)

Our Humble Tributes to All Those past and present, who laboured to make this Bank what it is to-day.

THE VIJAYA BANK, LTD.
(A SCHEDULED BANK)

Head Office:
"Vijaya Bank Building"
MANGALORE-3.
ESTD: 1931.

ಕಥಾ ವಿಹಾರ

ಮರುಗಿದ ಮನಸ್ಸು ಶಾಂತಿ ಪಡೆಯಿತು

ಗೋಪಾಲ ಒಂದು ರೀತಿಯಲ್ಲಿ ಜೀವಿಸುತಿದ್ದರೂ ಮನಸ್ಸು ಮರುಗುತಿತ್ತು; ಅವನ ಪರಿವರ್ತಿತ ಜೀವನದಿಂದ ಅದು ಪ್ರಫುಲ್ಲಿತವಾಯಿತು.

ಅಶೋಕ ಮತ್ತು ಗೋಪಾಲರ ಗೆಳೆತನವು ಇಂದು ನಿನ್ನೆಯದಲ್ಲ. ಬಹಳ ಹಿಂದಿನದು. ಹೈಸ್ಕೂಲಿನ ಕೊನೆಯ ಪರೀಕ್ಷೆಯಲ್ಲಿ ಮೂರುಬಾರಿ ಫೈಲಾಗಿ ಬಳಿಕ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನಿತ್ತು ಹೊರ ಪ್ರಪಂಚಕ್ಕೆ ಕಾಲಿರಿಸುವುದಕ್ಕಿಂತಲೂ ನಾಲ್ಕು ವರ್ಷದ ಮೊದಲಿನದು ಆ ಗೆಳೆತನ. ಹೈಸ್ಕೂಲು ಬಿಟ್ಟು ವರ್ಷಗಳು ನಾಲ್ಕು ಸಂದಿವೆ. ಇಂದಿನತನಕವೂ ಒಬ್ಬರನ್ನೊಬ್ಬರು ಅಗಲಿದವರಲ್ಲ. ಸಿನೇಮಾ ಮಂದಿರದಲ್ಲೇ ಇರಲಿ, ಮೈದಾನಿನ ಬಳಿ ಇರಲಿ, ಅಥವಾ ನದೀತೀರದಲ್ಲೇ ಇರಲಿ, ಅವರಲ್ಲೊಬ್ಬನನ್ನೇ ಸಂಧಿಸಬೇಕೆಂದು ಆ ಯಾವ ತರುಣಿಯೂ ಎಷ್ಟು ಪ್ರಯತ್ನಪಟ್ಟರೂ ಅಸಫಲಳೇ ಆಗಬೇಕಿತ್ತು. ಅಂತಿತ್ತು ಅವರ ಆ ಗೆಳೆತನ.

ಆ ಭಾನುವಾರವೂ ಎಂದಿನಂತೇ ಕಣ್ಣು ಕಿವಿಗಳಿಗೆ ತಮ್ಮದೇ ಆದ ರೀತಿಯಲ್ಲಿ ಹಬ್ಬ ಮಾಡಬೇಕೆಂದು ಆ ತರುಣರು ಹೊರ ಹೊರಟಿದ್ದರು. ಮಾರ್ಗದಲ್ಲಿ ಕಾಲುಗಳು ಜಾಗರೂಕವಾಗಿ, ನಿಧಾನವಾಗಿ ನಡೆಯುತಿದ್ದರೆ, ಅವರ ಕಣ್ಣುಗಳು ಮಾತ್ರ ಸಿಕ್ಕ ಸಿಕ್ಕೆಡೆಗೆ ಹುಚ್ಚುನಾಯಿಗಳಂತೆ ಓಡುತಿದ್ದುವು. ಹಾಂ, ಅದಾರು? ಗೋಪಾಲನು ಆ ಕಡೆಗೆ ದೃಷ್ಟಿ ಹರಿಯಿಸಿದ–ನಾಲ್ವರು ತರುಣಿಯರು, — ನಾಲ್ವರು ನಾಲ್ಕು ರೀತಿಯ ವೇಷಗಳನ್ನೇ ಧರಿಸಿಕೊಂಡಿರುವರಲ್ಲಾ "ಅಶೋಕ್, ಸ್ವಲ್ಪ ತಾಳು. ಐದು ಮಿನಿಟು ನಿಲ್ಲು" ಮಾತುಗಳು ತಾನಾಗಿಯೇ ಹೊರಟಿದ್ದುವು. ಕಣ್ಣುಗಳು ಹೆಂಗಸರನ್ನೇ ಈಕ್ಷಿಸುತಿದ್ದುವು. ಹೌದು, ನಾಲ್ವರದು ನಾಲ್ಕು ವೇಷ ಆಹಾ, ಆ ದೊಡ್ಡವಳು, ತೋರದಾಕೆ. ಕೆಂಪು ಹೂಗಳ ಆ ಸೀರೆಯನ್ನು, ಅದಕ್ಕೊಪ್ಪುವ ರವಕೆ ತೊಟ್ಟು, ಎಷ್ಟು ಚಂದವಾಗಿರುವಳು? ಇನ್ನೋರ್ವಳು ಸೀರೆಯನ್ನೇ ಉಡಲಿಲ್ಲ. ಆದರೂ ಆ ಅಲಂಕಾರಗಳೇನು? ಮತ್ತೊಬ್ಬಳು—ಏನು? ರವಕೆಯನ್ನೇ ತೊಡಲಿಲ್ಲವೆ? ಅಂ, ಇದೆ, ಅಷ್ಟು ತೆಳುವಿನದು. ಏನೀ ಫೇಶನ್? ಅಯ್ಯೋ ಮತ್ತೋರ್ವಳು—ಸರಿಯಾಗಿ ಕಾಣಿಸಲೊಲ್ಲಳು. "ಅಶೋಕ್, ಬಾ, ಬಾ. ನಾವೂ ಆ 'ವಿಶ್ರಾಂತಿಭವನ'ವನ್ನು ಸೇರೋಣ." ಗೋಪಾಲನು ಅವಸರದಿಂದ ಅಶೋಕನ ಕೈಯನ್ನು ಹಿಡಿಯುತ್ತಾ ಹೇಳಿದ. "ಬೇಡಯ್ಯಾ ಇನ್ನೂ ಮುಂದಕ್ಕೆ ಹೋಗೋಣ ಇವರಿಂದಲೂ ಸುಂದರಿಯರು ಅದೆಷ್ಟೋ ಕಾಣಸಿಗುವರು" ಗೋಪಾಲನ ಮನವನ್ನು ಪರಿಕಿಸಲೆಂದು ಅಶೋಕ ಹೇಳಿದ. "ಬೇಡ, ಅಲ್ಲಿಗೇ ಹೋಗಬೇಕು. ಅವರೂ ಅಲ್ಲಿಗೇ ಹೋದರು. ಬಾ. ಬೇಗ ಹೋಗೋಣ" ಎಂದು, ತವಕದಿಂದ ಅಶೋಕನನ್ನೆಳೆದುಕೊಂಡು ಗೋಪಾಲ ಮುಂದುವರಿದ ಅಷ್ಟರಲ್ಲೇ "ಅಯ್ಯಾ.... ಬೆಳಗಿನಿಂದ ಹೊಟ್ಟೆಗೇನೂ ಇಲ್ಲ, ಮಗು ಹಸಿವೆಯಿಂದ ಕಿರುಚುತ್ತಿದೆ ದಯವಿಟ್ಟು ಒಂದಾಣೆ ಕೊಡಿರಿ, ಅಯ್ಯಾ...." ಎಂದು ಕೂಗುತ್ತಾ ಹರುಕು ಬಟ್ಟೆಯನ್ನುಟ್ಟಿದ್ದ ಮುದುಕಿಯೋರ್ವಳು ಮಗುವಿನೊಡನೆ, ಓಡುತಿದ್ದ ಗೋಪಾಲನಿಗಡ್ಡವಾಗಿ ಬಂದು ಕೈ ಮುಂದೆ ಮಾಡಿದಳು. "ಛೀ, ತೊಲಗಾಚೆ—ಸ್ವರ್ಗದ ಬಾಗಿಲ ನಾಯಿ" ಎಂದು ದಾರಿಗಡ್ಡವಾಗಿ ಬಂದ ಆಕೆಯನ್ನು ಬೈದು, ನೆಲಕ್ಕೆರಡುಬಾರಿ ಅಸಹ್ಯತೆಯಿಂದ ಉಗುಳಿ ಗೋಪಾಲನು ಬೇಗ ಬೇಗನೆ ವಿಶ್ರಾಂತಿ ಗೃಹದ ಮೆಟ್ಟಲುಗಳನ್ನು ಹತ್ತಿದ. ಅಲ್ಲಿ ನೋಡುವುದೇನು? ಆ ಸುಂದರಿಯರು ಹೋಟೇಲಿನ ಹೊರಗಿಟ್ಟಿರುವ ಆ ಭಾರನೋಡುವ ಯಂತ್ರದ ಮೇಲೆ ನಗುನಗುತ್ತಾ ಕುಣಿಯುತಿದ್ದಾರೆ, ತಮ್ಮ ಅಂಗ ಸೌಂದರ್ಯವನ್ನು ಆ ತೆಳು ಬಟ್ಟೆಗಳ ಮೂಲಕ ಪ್ರದರ್ಶಿಸುತ್ತಾ. ಗೋಪಾಲನಿಗೆ ತಡೆಯಲಾಗಲಿಲ್ಲ. ಅವರಿಳಿಯುವುದೇ ತಡ. ಆತನೂ ಆಣೆಯೊಂದನ್ನು ಕಿಸೆಯಿಂದ ತೆಗೆದು ಅಶೋಕನೊಡನೆ ಆ ಯಂತ್ರದೆಡೆಗೆ ದಾವಿಸಿದ. ಆ ನಾರಿಯರು ಕಾಫಿ ಕುಡಿದು ಹೊರ ಹೋದಬಳಿಕ ಐದು ಮಿನಿಟುಗಳ ತನಕ ಅವರು ಹೋದ ದಾರಿಯನ್ನೇ ನೋಡಿ, ಬಳಿಕ ನಿಟ್ಟುಸಿರೊಂದನ್ನು ಬಿಟ್ಟು ಅಶೋಕನೊಂದಿಗೆ ಹೊರ ಹೊರಟಾಗ ಗಂಟೆ ಹನ್ನೆರಡಾಗಿತ್ತು. ಹಸಿವೂ ಪ್ರಾರಂಭವಾದುದರಿಂದ ಈರ್ವರೂ ಪಕ್ಕದ ಊಟದ ಹೋಟೇಲಿನೊಳಗೆ ನಡೆದರು.

ಮತ್ತೊಂದು ಭಾನುವಾರ. ಮಧ್ಯಾಹ್ನ ಎರಡು ಗಂಟೆ ಸಮಯ ಅಶೋಕ ಗೋಪಾಲರು ಎಂದಿನಂತೇ ಆ ಹೋಟೇಲಿನಲ್ಲಿ ಊಟತೀರಿಸಿ ಮೈದಾನಿನ ಕಡೆ ನಡೆಯೋಣವೆಂದು ಮಾರ್ಗಕ್ಕಿಳಿಯುತಿದ್ದರು. ತಕ್ಷಣ ಕರ್ಣ ಕರ್ಕಶವಾದ ಶುನಕಗಳ ಕಿರುಚಾಟವೊಂದು ಅವರ ಲಕ್ಷ್ಯವನ್ನು ತನ್ನೆಡೆಗೆ ಸೆಳೆದುಕೊಂಡಿತು. ಗೋಪಾಲನು ನೆಟ್ಟ ದೃಷ್ಟಿಯಿಂದ ಆ ಕಡೆಗೆ ನೋಡಿದನು ಏನದು? ಆ ತಿರುಕನು ಅದೇನನ್ನು ಹುಡುಕುತಿದ್ದಾನೆ? ಹಾಂ, ಮಾರ್ಗದ ಬದಿಯ ಆ ಕಸದ ಪೆಟ್ಟೆಯಲ್ಲಿ ಹೋಟೇಲಿನವರು ತುಂಬಿಸಿದ ಆ ಎಂಜಲೆಲೆಗಳನ್ನು ತೆಗೆತೆಗೆದು ಮಾರ್ಗ ಮಧ್ಯಕ್ಕೆ ಬಿಸುಡುತಿದ್ದಾನೆ. ಆ ನಾಯಿಗಳೆರಡು ಇದು ತನ್ನ ಪಾಲಿನದು, ಇದು ತನ್ನದೆಂದು ಜಗಳಾಡಿಕೊಳ್ಳುತ್ತಿವೆ. ತಿರುಕನು ಅವುಗಳಿಗೆಂದು ಬಿಸಾಡುತ್ತಿರುವನೆ? ಛೀ, ಅಲ್ಲ, ತನಗೆ ಬೇರೆಯೇ ಹೆಚ್ಚಿನ ಆಹಾರ ಸಿಗಬಹುದೆಂದು ಹುಡುಕುತಿದ್ದಾನೆ ಅಯ್ಯೋ ಆತನ ಜೀವನವೇ?....ಗೋಪಾಲನ ಮನ ಮರುಗಿತು. ಆತನು ಅದೆಷ್ಟೋ ಬಾರಿ ಈ ದೃಶ್ಯಗಳನ್ನು ಕಂಡಿದ್ದರೂ ಆ ಕಡೆಗೆ ಕಣ್ಣೆತ್ತಿಯೂ ನೋಡಿರಲಿಲ್ಲ. ಅದೇಕೋ ಇಂದು ಮಾತ್ರ ಆ 'ಶುನಕ ಪ್ರಸಂಗ'ದಿಂದಾಗಿ ಆತನ ಲಕ್ಷ್ಯ ಆ ಕಡೆಗೆ ಹರಿಯಿತು. ಮತ್ತೂ ನೋಡಿದ—ಅಯ್ಯೋ, ಆತನ ದೇಹವೇ!—ಧೂಳಿನಿಂದ ಮುಚ್ಚಿ ಹೋಗಿದೆ. ಶರೀರದ ಮೇಲ್ಪದಿಯ ಚರ್ಮ ಸುಕ್ಕುಗಟ್ಟಿ ನೇತಾಡುತಿದ್ದರೆ, ಕೆಳಬದಿಯ ಉಬ್ಬಿದ ಕಾಲುಗಳ ಆ ಚರ್ಮ ತನ್ನ ಅಸಮರ್ಥತೆಯನ್ನು ಸೂಚಿಸಲು ಈಗ ಒಡೆಯುವಂತಿದೆ. ಮೇಲ್ಪದಿಯ, ಎಲುಬಿನ ಗೂಡು ಮೇಲೆದ್ದು ಕಾಣಿಸುತ್ತಿದೆ. ಚರ್ಮದಿಂದಲೂ ಮೇಲ್ಪಂದ ನರಗಳು ಆ ಬಡ ದೇಹವನ್ನು ಸುತ್ತಿ ಆವರಿಸಿಕೊಂಡಿವೆ. ತಲೆಗೂದಲು ಕೆಂಪಾಗಿ, ರಾಶಿಯಾಗಿ, ಮುದ್ದೆಯಾಗಿದೆ. ಆ ಧರಿಸಿದ ಅಂಗಿ ಒಂದು ಕೈಯನ್ನು ಅರ್ಧ ಮಾತ್ರ ಮುಚ್ಚಿಕೊಂಡಿದೆ. ಕೆಳಗಿನದು ಕೌಪೀನ. ಎರಡೇ ಇಂಚು ಅಗಲ. "ಬೇಡ, ತನ್ನಿಂದಾಗದು" ಎಂದು ತನ್ನ ಸ್ಥಾನವನ್ನು ತ್ಯಜಿಸಿ ನೇತಾಡುತ್ತಿದೆ. ಅಯ್ಯೋ, ಈತನು ಮನುಷ್ಯನೊ? ಅಲ್ಲ ಪ್ರಾಣಿಯೊ? ಹಾಂ; ಏನು? ಹುಡುಕಿ ಹುಡುಕಿ ಬೇಸತ್ತು ನಿರಾಶನಾದನೆ? ಅಯ್ಯೋ, ಇನ್ನು ತನಗಿಲ್ಲವೆಂದು ನಾಯಿಗಳು ಜಗಳಾಡುತಿದ್ದ

(೧೧ನೇ ಪುಟ ನೋಡಿರಿ)



ಟೆಲಿವಿಜನ್ನಿನ ಸಹಾಯದಿಂದ ವಿದ್ಯಾ ಪ್ರಸಾರಕ್ಕೂ ರೆಕ್ಕೆ ಬಂದಂತಾಗಿದೆ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ಎಸ್.ಆರ್.
ಅತ್ಯುತ್ತಮ ಬೀಡಿಗಳು

ಮದುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ;
'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!
ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಾರ ವರ್ಷ

೧

ಮೂಲ ಶಿಕ್ಷಣದಿಂದ ಭಾರತದ ಪ್ರಗತಿ

ಸಪ್ತಾಹಾಚರಣೆಯೊಂದಿಗೆ ಕರ್ತವ್ಯಜ್ಞಾನವೂ ಅವಶ್ಯ

ಮೈಸೂರು ರಾಜ್ಯದಲ್ಲಿ ಜನವರಿ ೨೦ರಿಂದ ೨೬ರ ವರೆಗಿನ ಏಳು ದಿನಗಳನ್ನು "ಮೂಲ ಶಿಕ್ಷಣ ಸಪ್ತಾಹ"ವೆಂಬ ಹೆಸರಿನಿಂದ ವಿವಿಧ ಕಾರ್ಯಕ್ರಮಗಳ ಮುಖಾಂತರ ಆಚರಿಸಲಾಯಿತು. ಈ ವಾರವು ಭಾರತದ ರಾಷ್ಟ್ರೀಯ ದೃಷ್ಟಿಯಿಂದಲೂ ಮಹತ್ವದ್ದಾಗಿದೆ. ಏಕೆಂದರೆ, ಭಾರತವು ಗಣರಾಜ್ಯವೆಂದು ಸಾರಲ್ಪಟ್ಟು ವಿಶ್ವದ ಸರ್ವತಂತ್ರ ರಾಷ್ಟ್ರಗಳಲ್ಲಿ ಗಣನೀಯವೆನಿಸುವಂತಾದ ದಿನವೂ ಈ ವಾರಾಂತ್ಯ ದಿನದಂದೇ ಆಚರಿಸಲ್ಪಡುತ್ತದೆ.

ಭಾರತೀಯರಲ್ಲಿ ಇಂದು ಕಡಿಮೆಯಿಸುವುಗಳು ಬಹಳವಿದ್ದರೂ, ಎಲ್ಲ ಕೊರತೆಗಳನ್ನೂ ನೀಗಿಸಬಲ್ಲ ಮೂಲ ತತ್ವಾರವು ರಾಷ್ಟ್ರೀಯತೆಯಲ್ಲದಗಿದೆ. ಭಾರತೀಯರ ಮನೋವೃತ್ತಿಯು ಒಂದಲ್ಲೊಂದು ದೃಷ್ಟಿಯಿಂದ ಸಂಕುಚಿತವಾಗಿರುವುದರಿಂದಲೇ ನಾವು ಪಡಬಾರದ ಬನ್ನವನ್ನು ಅನುಭವಿಸಿ ತೊಳಲಾಡಬೇಕಾಯಿತು. ಆದರೆ, ನಮ್ಮಲ್ಲಿ ರಾಷ್ಟ್ರೀಯತೆಯು ಜಾಗ್ರತವಾಗತೊಡಗಿ ಅದು ಒಂದು ಮಹತ್ತರ ಸ್ತರಕ್ಕೇರುತ್ತಿರುವಾಗಲೇ ನಮ್ಮ ಸ್ವಾತಂತ್ರ್ಯ ಜ್ಯೋತಿ ಪ್ರಜ್ವಲಿಸಿತು; ಭಾರತವು ಸ್ವತಂತ್ರವಾಯಿತು. ಕೆಲವರ್ಷಗಳಲ್ಲಿಯೇ ಗಣರಾಜ್ಯವಾಗಿ ಘೋಷಿತವಾಯಿತು.

ಪ್ರಜಾಪ್ರಭುತ್ವದಲ್ಲಿ ಜನತೆಯಲ್ಲಿ ರಾಷ್ಟ್ರೀಯತೆಯ ಭಾವನೆಯು ಬಲಿಯಬೇಕು; ಅದಕ್ಕಾಗಿ ಜನರು ತಮ್ಮ ಸರ್ವಸ್ವವನ್ನೂ ತ್ಯಾಗಮಾಡುವ ದೃಢನಿಶ್ಚಯ ಮಾಡಿಕೊಂಡಿರಬೇಕು. ಈ ರಾಷ್ಟ್ರೀಯತೆಯು ಭಾರತೀಯರಲ್ಲಿ ಕೊರತೆಯಾಗುತ್ತ ಬರುತ್ತಿದೆ ಎಂಬ ದೂರು ಉಚ್ಚ ರಾಜಕಾರಣಿಗಳ ಬಾಯಿಯಿಂದಲೂ ಬರುತ್ತಿದೆ. ಈ ಕಾರಣದಿಂದಾಗಿಯೇ ನಮ್ಮ ಜನತೆಯಲ್ಲಿ ಜಾತಿ, ಮತ, ಪಂಥಗಳ ಭೇದಗಳು, ಭಾಷಾವಾದ ಮತ್ತು ಪ್ರಾಂತೀಯವಾದಗಳ ಪ್ರತ್ಯೇಕತೆಗಳು ಕಾಡುತ್ತವೆ. ಈ ಭಾವನೆಗಳೊಂದಿಗೆ ಧನಿಕ—ದೀನರೆಂಬ, ಶ್ರಮಜೀವಿ—ವಿರಾಮಜೀವಿಯೆಂಬ ಸಾಮ್ಯವಾದಿ — ಬಂಡವಾಳಶಾಹಿಯೆಂಬ ಭೇದಗಳು ಹೆಚ್ಚಿ, ದೇಶವು ಆಂತರಿಕವಾಗಿಯೇ ವಿಭಾಗಿತವಾಗಿಬಿಟ್ಟಿದೆ. ಇಂತಹ ಭಾವನೆಯು ಬೆಳೆಯುತ್ತ ಬಂದರೆ, ದೇಶದ ಐಕ್ಯವು ಚ್ಯುತವಾಗಿ, ರಾಷ್ಟ್ರೀಯತೆಯು ನಿರ್ನಾಮವಾಗಿ ಜನತೆಯು ಹಲವಾರು ಪಂಗಡಗಳಾಗಿ ಒಡೆದು ಅಶಾಂತಿಯ ತವರೂರಾಗಿ ರಾಷ್ಟ್ರವು ಪರಿಣಮಿಸುವುದು. ಇದಕ್ಕಾಗಿಯೇ "ರಾಷ್ಟ್ರೀಯತೆ"ಯ ಭಾವನೆಯು ಎಷ್ಟರ ಪ್ರಮಾಣದಲ್ಲಿ ಬೆಳೆದು ಬರುತ್ತದೆಯೋ ಅಷ್ಟೇ ಶಾಂತಿ ನಮ್ಮ ದೇಶದಲ್ಲಿ ನೆಲಸುವುದು; ಮತ್ತು ಆದರಿಂದಲೇ ನಮ್ಮ ಹೆಚ್ಚಿನ ಪ್ರಗತಿಯೂ ಸಾಧ್ಯವೆಂದು ಬಲ್ಲವರು ಅಭಿಪ್ರಾಯ ಪಟ್ಟಿರುವರು.

ಈ ದೃಷ್ಟಿಯಿಂದ ಭಾರತದಲ್ಲಿ ರಾಷ್ಟ್ರೀಯತಾ ಮನೋಭಾವನೆಯನ್ನು ಬೆಳೆಸುವುದು ಅತ್ಯಗತ್ಯವಾಗಿದೆ. ಆದರೆ, ಯಾವ ಮಟ್ಟದಿಂದ ಈ ಬೆಳವಣಿಗೆಯ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂಬ ಪ್ರಶ್ನೆಯೀಗ ಉದ್ಭವಿಸುತ್ತದೆ. ಆಗ, ಹೆಚ್ಚಿನ ತಜ್ಞರ ಮನಸ್ಸು ಮಕ್ಕಳ ಕಡೆಗೆ ಹರಿಯುವುದು ಸ್ವಾಭಾವಿಕ.

ಮಕ್ಕಳೆಂದರೆ, ದೇವರಿಗೆ ಸಮಾನರಾದವರು. ಇದರಿಂದಲೇ ನಮ್ಮಲ್ಲಿ ಎಳೆಯ ಮಕ್ಕಳ ತಲೆಯ ಮೇಲೆ ಅಣೆಯಿಡುವ ಪದ್ಧತಿ ವ್ಯವಹಾರದಲ್ಲಿದೆ. ತೀರ ಕಿರಿಯ ಮಕ್ಕಳ ಮನಸ್ಸು ಪ್ರಪಂಚದ ಜಂಜಾವಾತದಿಂದ ದೂರವಾಗಿದ್ದು, ಸುಕೋಮಲವಾಗಿರುವುದು ಅನುಭವಸಿದ್ಧವಾದುದು. ಅಂತಹ ನಿಷ್ಕಲ್ಮಶ ಮನಸ್ಸಿನಲ್ಲಿ ರಾಷ್ಟ್ರೀಯತೆಯ ಮುದ್ರೆಯನ್ನು ಅಚ್ಚಳಿಯದಂತೆ ಒತ್ತಿ ಅವರಲ್ಲಿ ಮುಂದೆ ಹುಟ್ಟಿ ಅವರ ಮೆದುಳನ್ನು ಕೆಡಕಿ ವಿಪರೀತ ಪರಿಣಾಮವೆಸಗಬಲ್ಲ, ಮನಸ್ತಾಪಕ್ಕೆ ಕಾರಣವಾಗಬಹುದಾದ ಸಂಕುಚಿತತೆಯನ್ನು ದೂರಮಾಡುವುದು ಬಹಳ ಸುಲಭವೂ ಸರಳವೂ ಯಶಸ್ವಿಯೂ ಆದ ವಿಧಾನವಾಗಬಲ್ಲುದು.

ಭಾರತದಂತಹ ಜನನಿಬಿಡವಾದ, ಸಸ್ಯಶ್ಯಾಮಲವಾದ, ಸವಿಸ್ತಾರವಾದ, ನಿರಕ್ಷರಕುಕ್ಷಿಗಳ ತಾಯ್ಮನೆಯಾದ ಹಾಗೂ ವಿವಿಧ ವರ್ಗೀಣ ಭೇದ ಭಾವನೆಗಳ ಆವಾಸಸ್ಥಾನವಾದ ದೇಶದಲ್ಲಿ ನಮ್ಮ ಭಾವಿ ಪ್ರಜೆಗಳಲ್ಲಿ ಜ್ಞಾನದೃಷ್ಟಿಯನ್ನು ವಿಕಸಿತಗೊಳಿಸುವ ಆಸಕ್ತಿಯೂ, ನಮ್ಮ ಸಂಪತ್ತನ್ನು ಸದುಪಯೋಗಗೊಳಿಸುವ ಪ್ರವೃತ್ತಿಯೂ ಬೆಳೆಯಬೇಕಾಗಿದೆ. ಹಾಗಾದರೆ ಮಾತ್ರ ನಮ್ಮ ದಟ್ಟದರಿದ್ರ ನಾಡು ಹೊನ್ನಕಳಸವಾಗುವುದು ಸಾಧ್ಯ.

ಒಂದು ಕಾಲದಲ್ಲಿ ಭಾರತವು ಸಂಪತ್ಸಮೃದ್ಧವಾಗಿತ್ತು. ಮೊನ್ನೆ ಮೊನ್ನೆಯವರೆಗೆ, ಎಂದರೆ, ಬ್ರಿಟಿಷ ಆಳರಸರು ನಮ್ಮ ದೇಶವನ್ನು ಆಕ್ರಮಿಸುವುದಕ್ಕೆ ಮೊದಲು, ಇಂತಹ ಸ್ಥಿತಿಯಿತ್ತೆಂಬುದಕ್ಕೆ ಇತಿಹಾಸವೇ ಸಾಕ್ಷಿ ನುಡಿಯುತ್ತದೆ. ಆಗಿನ ಜನರಲ್ಲಿ ತುಂಬಿ ತುಳುಕುತಿದ್ದ ರಾಷ್ಟ್ರೀಯ ಮನೋವೃತ್ತಿ, ಸೋದರತೆ, ಸಮಾನತೆಯ ಸಮದೃಷ್ಟಿ ಆ ಮೇಲೆ ಉಳಿಯಲಿಲ್ಲ. ಇದಕ್ಕೆ ಅನ್ಯರಾಳಿಕೆ ಕಾರಣವಿರಲೂ ಬಹುದು; ನಾವು ನಿರ್ಧನರಾಗುತ್ತ ಬಂದುದೂ ಇರಬಹುದು; ಆ ಮಾತದಂತಿರಲಿ. ನಾವಿಂದು ಸಂಪನ್ನ ಭಾರತವನ್ನು ಕಟ್ಟಬೇಕಾದರೆ, ಅಂದಿನ ರೀತಿಯ ಸಮದೃಷ್ಟಿಯ ಸಮಾಜವನ್ನು ನಿರ್ಮಿಸುವುದೇ ತಾರಕವೆನ್ನುವುದು ಚಿರಸತ್ಯ.

ಇಂತಹ ಸಮಾಜ ನಿರ್ಮಾಣದ ಕಾರ್ಯ ಎಳೆ ವಯಸ್ಸಿನ ಮಕ್ಕಳ ಮೇಲೆ ಪರಿಣಾಮಕರವಾಗಿ ನಡೆಯುವಂತಾದರೆ, ಅವರು ಬೆಳೆದು ಹಿರಿಯರೆನಿಸುವಾಗ, ಸುವ್ಯಸ್ಥಿತ ಹಾಗೂ ಸುಶಿಕ್ಷಿತ ಮತ್ತು ಸಮದೃಷ್ಟಿಯ ಸಮಾಜ ನಿರ್ಮಾಣವಾಗುವುದು. ಇಂತಹ ನಾಗರಿಕರಿಂದಲೇ, ಭಾರತದ ಗುರಿಯು ಪೂರ್ಣವಾಗುವುದು. ಹಾಗಾಗಿ, ನಮ್ಮ ಎಳೆಯ ಮಕ್ಕಳನ್ನು ಯೋಗ್ಯ ಹಾಗೂ ಸಕ್ರಮವಾದ ಮಾರ್ಗದಲ್ಲಿ ಸಾಗಿಸುವುದೂ ನಮ್ಮ ನೇತಾರರ ಪ್ರಧಾನ ಕರ್ತವ್ಯಗಳಲ್ಲಿ ಒಂದು.

ಇದಕ್ಕಾಗಿ, ನಮ್ಮ ಸರಕಾರ ರಾಷ್ಟ್ರೀಯತಾ ಭಾವನೆಯು ಬೆಳೆಯಲು ಅನುಕೂಲ ಮಾಡಿಕೊಡುವ ಪ್ರಯತ್ನ ನಡೆಸುತ್ತದೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅನಕ್ಷರಸ್ಥರಿರುವುದು ಲಾಂಛನಾಸ್ಪದ ಎಂತಲೇ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನೀಯುವ ದೃಢ ನಿಶ್ಚಯ ಮಾಡಿದೆ; ಮತ್ತಿದನ್ನು ಅಂಶತಃ ಕಾರ್ಯರೂಪಕ್ಕೆ ತರುತ್ತಿದೆ. ಬ್ರಿಟಿಷರ ಕಾಲದಲ್ಲಿ, ಆ ಹಿಂದೆ ಈಯಲ್ಪಡುತಿದ್ದ ರಾಷ್ಟ್ರೀಯ ಶಿಕ್ಷಣ ಪ್ರಣಾಳಿಯು ಕೊನೆಗೊಂಡು, ಜೀವನಕ್ಕೆ ನಿರುಪಯೋಗಿಯಾದ, ಗುಮಾಸ್ತರನ್ನು ಮಾತ್ರ ತಯಾರಿಸಲು ಶಕ್ಯವಾದ, ನೀರಸವಾದ ಪಾಠ್ಯಕ್ರಮವನ್ನು ಅನುಕರಣೆಗೆ ತರಲಾಯಿತು. ಆದರೆ, ಭಾರತದ ಸ್ವಾತಂತ್ರ್ಯ ಸಂಗ್ರಾಮಕಾಲದಲ್ಲಿ ರಾಷ್ಟ್ರೀಯ ಶಿಕ್ಷಣಾಲಯಗಳನ್ನೂ ಕಾಂಗ್ರೆಸ್ಸು ಸರಕಾರದ ನೆರವಿಲ್ಲದೇನೇ ನಡೆಸಲು ತೊಡಗಿತು. ದುರ್ದೈವವಶದಿಂದ ಈ ಯೋಜನೆ ಅರ್ಧದಲ್ಲಿಯೇ ಕೈಬಿಟ್ಟು ಹೋಯಿತು.

ಆದರೆ, ಇಂದು ನಾವು ಸ್ವತಂತ್ರರಿದ್ದೇವೆ. ಸ್ವತಂತ್ರ ಭಾರತದ ಕುಂದುಕೊರತೆಗಳನ್ನು ಅರಿತುಕೊಂಡಿದ್ದೇವೆ; ಅವನ್ನು ತುಂಬಿಕೊಳ್ಳುವುದೂ ನಮ್ಮ ಕರ್ತವ್ಯವೆಂದು ಮನದಂದಿದ್ದೇವೆ; ಅದಕ್ಕಾಗಿ ದುಡಿಯುವ ಶಕ್ತಿ ಹಾಗೂ ಉತ್ತೇಜನಗಳನ್ನೂ ಹೊಂದಿದ್ದೇವೆ. ಇಂತಹ ಶಕ್ತಿಯ ಪರಿಣಾಮವಾಗಿಯೇ ಭಾರತದ ರಾಷ್ಟ್ರಪಿತ ಮಹಾತ್ಮಾಗಾಂಧಿಯವರು ಭಾರತದ ಹಿಂದಿನ ವಿದ್ಯಾ ಪ್ರಣಾಳಿಯನ್ನು ಇಂದಿನ ಯುಗಧರ್ಮ ಹೊಂದಿಕೊಳ್ಳುವಂತೆ ತಿದ್ದಿ ಸರಿಪಡಿಸಿ ಮೂಲ ಶಿಕ್ಷಣ ಪ್ರಣಾಳಿಯೊಂದನ್ನು ತಯಾರಿಸಿದರು.

ಮೂಲ ಶಿಕ್ಷಣ ಇಲ್ಲವೆ ಬುನಾದಿ ಶಿಕ್ಷಣವನ್ನು ಅಸ್ತಿವಾರ ಶಿಕ್ಷಣವೆನ್ನಬಹುದು. ಅಡಿಗಲ್ಲು ಮೇಲೆಕಟ್ಟುವ ಮನೆಗೆ ಭದ್ರತೆಯನ್ನೀಯುವುದಾದರೆ, ಇಂತಹ ಆದರ್ಶ ಶಿಕ್ಷಣವು ವ್ಯಕ್ತಿಯ ವಿಕಾಸಕ್ಕೆ ಹಾಗೂ ಜೀವನಕ್ಕೆ ಭದ್ರತೆಯನ್ನೀಯುತ್ತದೆ. ತನಗೆ ಬೇಕಾದ ಎಲ್ಲವನ್ನೂ ತಾನೇ ಒದಗಿಸಿಕೊಳ್ಳುವ, ಎಲ್ಲರನ್ನೂ ತನ್ನಂತೆಯೇ ಬಗೆದು ಆದರಿಸುವ, ತನ್ನ ರಾಷ್ಟ್ರದ ಕಡೆಗೆ ಗೌರವವನ್ನೂ ತನ್ನ ಬಗೆಗೆ ವಿಶ್ವಾಸವನ್ನೂ ವ್ಯಕ್ತಪಡಿಸಿ, ಪರಿಶ್ರಮದ ಕಡೆ ಆಸಕ್ತಿ ಹೊಂದುವ ಒಂದು ಉದಾರ ಹಾಗೂ ಆದರ್ಶ ಸಮಾಜವನ್ನು ನಿರ್ಮಿಸಲು ಈ ಶಿಕ್ಷಣ ಪ್ರಣಾಳಿ ಪುಟವೀಯುತ್ತದೆಯೆಂದರೆ ಅತಿಶಯೋಕ್ತಿಯಲ್ಲ.

ಇದಕ್ಕಾಗಿ, ಮಕ್ಕಳೆಲ್ಲರನ್ನೂ ಶಾಲೆಗೆ ಸೇರಿಸಿ, ಅಲ್ಲಿ ಅವರಿಗೆ ಇಂತಹ ವಿಶಾಲ ಪ್ರಪಂಚ ವ್ಯವಹಾರದ ರಾಷ್ಟ್ರೀಯ ಶಿಕ್ಷಣವನ್ನಿತ್ತು ಅವರನ್ನು ಬೌದ್ಧಿಕ ಹಾಗೂ ದೈಹಿಕವಾಗಿ ಮತ್ತು ಜತೆಗೆ ಮಾನಸಿಕವಾಗಿ ಸ್ವತಂತ್ರ ಪ್ರಜಾಪ್ರಭುತ್ವದ ಪ್ರಜೆಗಳನ್ನಾಗಿ ರೂಪಿಸುವ ಗುರುತರ ಹೊಣೆಗಾರಿಕೆಯನ್ನು ಸರಕಾರ ವಹಿಸುತ್ತಿದೆ. ಇದು ಪ್ರಶಂಸನೀಯವೂ ಸ್ವಾಗತಾರ್ಹವೂ ಆದ ಪದನ್ಯಾಸವಾಗಿದೆ.

ಆದರೆ, ಇಂತಹ ರಾಷ್ಟ್ರೀಯ ಶಿಕ್ಷಣವನ್ನು ಆಯಾ ಸನ್ನಿವೇಶಕ್ಕೆ, ಮಕ್ಕಳ ಸುತ್ತುಮುತ್ತಲಿನ ವಾತಾವರಣಕ್ಕೆ ಹೊಂದಿಕೊಂಡೇ ಈಯಬೇಕು ಎಂಬುದು ಮಾತ್ರ ಸಂಬಂಧಪಟ್ಟವರ ಮನಸ್ಸನ್ನು ಹೆಚ್ಚಾಗಿ ಆಕರ್ಷಿಸಿದ ಮೂಲ ತತ್ವವಾಗಿಲ್ಲ. ಒಂದು ದೇಶದ, ಇಲ್ಲವೇ ರಾಜ್ಯದಲ್ಲಿ ಸಮಾನತೆಯನ್ನು ಕಾಯ್ದಿರಿಸುವ ವ್ಯಾಜ್ಯದಿಂದ ಸನ್ನಿವೇಶಕ್ಕೆ ವಿರುದ್ಧವಾಗಿ ವೃತ್ತಿಮೂಲಕ ಶಿಕ್ಷಣ—ಇದು ರಾಷ್ಟ್ರೀಯ ಶಿಕ್ಷಣದ ಸಾಧನೆಯ ಪ್ರತೀಕ—ವೀಯುವ ದುರಭ್ಯಾಸವು ಬಂದು ಬಿಟ್ಟಿದೆ. ಕ್ರಮೇಣ ಇದು ದೂರವಾಗಿ, ತನ್ನ ವರ್ಗದ ಮಕ್ಕಳ ಆಶೆ, ಆಕಾಂಕ್ಷೆ, ಅಭಿರುಚಿ ಹಾಗೂ ಸಾಮರ್ಥ್ಯಗಳಿಗೆ ಹೊಂದಿಕೊಂಡೇ ಶಿಕ್ಷಣವೀಯುವ ಅಧಿಕಾರ ಮತ್ತು ಸ್ವಾತಂತ್ರ್ಯವು ಅಧ್ಯಾಪಕನ ಕೈಗೆ ದೊರೆಯುವುದೆಂದು ನಂಬುವುದಾದರೆ, ಆಗ ಅಸ್ವೈಸರ್ಗಿಕ ಪ್ರಣಾಳಿಯು ದೂರವಾಗದುಳಿಯದು. ಅಧ್ಯಾಪಕನು, "ಉಪಾಧ್ಯಾಯ ವೃತ್ತಿಯು ಬಹಳ ಶ್ರೇಷ್ಠವಾದುದು; ಅತ್ಯಂತ ಪೂಜ್ಯವಾದುದು ತೀರ ಪುಣ್ಯಕರವಾದುದು" ಎಂಬ ಕೊಂಡಾಡುವಿಕೆ; "ನೀವು ಸೂರ್ಯನಂತೆ ಪ್ರಕಾಶಮಾನವಾಗಿರಬೇಕು; ಚಂದ್ರನಂತೆ ಶಾಂತವಾಗಿರಬೇಕು; ಬುಧನಂತೆ ಚಾಲಾಕಾಗಿರಬೇಕು; ಬೃಹಸ್ಪತಿಯಂತೆ ಪ್ರಾಜ್ಞರಿರಬೇಕು" ಎಂಬ ಉಪದೇಶಗಳನ್ನು ಮಾತ್ರ ಪಡೆಯುವಂತಾಗದೆ, ಅತನಲ್ಲಿರಬಹುದಾದ ಕೆಲವು ಗುಣಗಳನ್ನಾದರೂ ಸಂಪೂರ್ಣ ಉಪಯೋಗಿಸಿಕೊಳ್ಳುವ ಅಧಿಕಾರ ಕಾಯ್ದೆ ಬದ್ಧವಾಗಿ ದೊರೆಯುವಂತಾಗಬೇಕು; ಅವರು ಮರ್ಯಾದೆಯ ಜೀವನವನ್ನು ಬಾಳಲು ಸಾಕಾಗುವಷ್ಟು ವೇತನವನ್ನೀಯಬೇಕು. ಆಗ ಅವನೂ ತನ್ನ ಕೆಲಸವನ್ನು ಪವಿತ್ರವೆಂದೂ ತನ್ನಿಂದ ರೂಪುಗೊಳ್ಳಲಿರುವವರು ಭಾರತದ ಪ್ರಜೆಗಳೆಂದೂ ತಿಳಿದು

(ಮುಂದಿನ ಪುಟ ನೋಡಿರಿ)

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ವಿಚಾರ ವರ್ಷ

ಉನ್ನತರನ್ನಾಗಿ ಸಿದ್ಧಪಡಿಸದಿರುವನೆಂದು ನಂಬುವುದು ಅಸಾಧ್ಯ.

ಅಧ್ಯಾಪಕನಾಗುವವನಲ್ಲಿ ಮುಖ್ಯವಾಗಿ ವರ್ಚಸ್ಸು, ಪ್ರಸನ್ನತೆ, ಗಾಂಭೀರ್ಯ, ವಾಕ್ ಶುದ್ಧಿ, ಸ್ವಸ್ಥಾನ ಜ್ಞಾನ, ಶೀಲವಂತಿಕೆ, ಅನುಭವ ಮತ್ತು ಗ್ರಹಣಶಕ್ತಿ, ವಿಚಾರ, ಕಾರ್ಯಕಾರಣ ವಿವೇಚನಾಶಕ್ತಿ ಮತ್ತು ಸ್ಮೃತಿಶಕ್ತಿ ಎಂಬ ನವರತ್ನಗಳು ಕೂಡಿರಬೇಕಾದುದು ಅಗತ್ಯ. ಇವುಗಳಿಲ್ಲದ ಅಧ್ಯಾಪಕನಲ್ಲಿ ನಾವು ಉನ್ನತ ಗುಣಗಳನ್ನಾಗಲೀ ಉನ್ನತ ಆದರ್ಶವನ್ನಾಗಲೀ ನಿರೀಕ್ಷಿಸುವುದೇ ತಪ್ಪಾದೀತು. ಆದುದರಿಂದಲೇ ಸಮಾಜನಿರ್ಮಾಪಕರಾದ ಅಧ್ಯಾಪಕರ ಸ್ಥಾನಕ್ಕೆ ಅತ್ಯಂತ ಯೋಗ್ಯರನ್ನು ಆಕರ್ಷಿಸಬೇಕಾದರೆ, ಕೇವಲ ಕೊಂಡಾಟ ಮತ್ತು ಉಪದೇಶಗಳು ಸಾಕಾಗಲಾರವು. ಆರ್ಥಿಕ ದೃಷ್ಟಿಯಿಂದಲೂ ಸರಕಾರವು ಪ್ರೋತ್ಸಾಹಿಸಿ, ಅವರನ್ನು ಉನ್ನತ ಸ್ಥಾನದಲ್ಲಿರಿಸಬೇಕು.

ಬುನಾದಿ ಶಿಕ್ಷಣದಿಂದ ವಿದ್ಯಾರ್ಥಿಗಳಲ್ಲಿ ಸಾಮರಸ್ಯವೂ ಸೋದರತೆಯೂ ಸಮಾನತೆಯೂ ಬೆಳೆಯುತ್ತವೆ; ಮೇಲು ಕೀಳು ಎಂಬ ಭಾವನೆ ದೂರವಾಗಿ, ನಾವೆಲ್ಲರೂ ಭಾರತೀಯರೆಂಬ ವಿಶಾಲ ಮನೋವೃತ್ತಿ ಉದ್ಭವಿಸುತ್ತವೆ; ಪರಿಶ್ರಮದ ಕಡೆಗೆ ಅವರ ಮನಸ್ಸು ಒಲಿದು ಸ್ವಾವಲಂಬನದ ತತ್ವವು ಅರಿವಾಗುತ್ತದೆ; ಆ ಬಗ್ಗೆ ಇರುವ ತುಚ್ಛಭಾವನೆ ದೂರವಾಗುತ್ತದೆ. ಮನಸ್ಸಿನಲ್ಲಿನ ಕಲ್ಮಶವು ನಾಮಾವಶೇಷವಾಗಿ, ಅವರು ಬೆಳೆದು ಬರುವಾಗ, ಭವ್ಯ ಭಾರತೀಯರಾಗುತ್ತಾರೆ. ಇದಕ್ಕಾಗಿ ಭಾರತೀಯ ಮಕ್ಕಳ ಹೆತ್ತವರಲ್ಲಿ ಮೂಲಶಿಕ್ಷಣದ ಕಡೆಗೆ ಆಸಕ್ತಿಯನ್ನೂ ಅಧ್ಯಾಪಕರಲ್ಲಿ ಕರ್ತವ್ಯ ಜ್ಞಾನವನ್ನೂ ಜಾಗ್ರತಗೊಳಿಸಬೇಕಾಗಿದೆ. ಇದಕ್ಕೆ ಸಪ್ತಾಹಾಚರಣೆಯೊಂದೇ ಮಾರ್ಗವೆನ್ನುವುದು ಮಾತ್ರ ಸರಿಯಲ್ಲ.

ಮೂಲಶಿಕ್ಷಣ ನಿಜವಾಗಿಯೂ ಉದಾತ್ತವಾದುದೆಂದು ಮೇಲೆ ಹೇಳಿದೆ. ಇದನ್ನು ವ್ಯವಹಾರಕ್ಕೆ ತರುವಲ್ಲಿ ಕೈಗೊಳ್ಳಬೇಕಾದ ಮಹತ್ವದ ಕಾರ್ಯಕ್ರಮಗಳನ್ನೂ ವಿವರಿಸಿದೆ. ಅವನ್ನು ಕಾರ್ಯಗತ ಮಾಡದೆ ಕೇವಲ ಸಪ್ತಾಹ ಆಚರಿಸಿ ಕೈಕಟ್ಟಿ ಸುಮ್ಮನುಳಿದರೆ, ಒಂದು ವನಮಹೋತ್ಸವದಂದು ತೋಡಿದ ಗುಂಡಿಗಳಲ್ಲೇ ಮರು ವರ್ಷವೂ ಗಿಡ ನೆಡುವ ಸೌಭಾಗ್ಯ ಒದಗಿಬರುವ 'ವಾಡಿಕೆ'ಯಂತೆಯೇ ಹತ್ತು ಹಲವಾರು ವಾರಗಳ ಆಚರಣೆಗಳ ನಡುವೆ ಇದೂ ಒಂದು ಸೇರಿ ಪ್ರತಿ ವರ್ಷ ಬರುತ್ತದೆ; ಬಂದ ರೀತಿಯಲ್ಲೇ ದೂರಹೋಗುತ್ತದೆ; ಹೀಗಾದಲ್ಲಿ ಪರಿಣಾಮ ಲೇಶವೆಂಬುದು ಮಾತ್ರ ದೂರವುಳಿಯಿತು.

ಆದರೆ, ಹೀಗಾಗಬಾರದು. ಭಾರತಕ್ಕಿಂದು ಅವಶ್ಯ ಬೇಕಾದ ಈ ಶಿಕ್ಷಣ ಪ್ರಣಾಳಿಯನ್ನು ಸಂಪೂರ್ಣ ಯಶಸ್ವಿಗೊಳಿಸುವುದು ರಾಷ್ಟ್ರೀಯ ಸರಕಾರದ ಕರ್ತವ್ಯ; ಸರಕಾರದ ನೌಕರರ ಕರ್ತವ್ಯ ನೌಕರರನ್ನು ಪ್ರತಿದೃಷ್ಟಿಯಲ್ಲಿಯೂ ಉತ್ತೇಜಿಸುವುದು ಜನತಾ ಸರಕಾರದ ಆದ್ಯ ಕರ್ತವ್ಯ.

—ಎಸ್. ಗೋಪೀಚಂದ ರಾವ್,
ವಿದ್ವಾನ್ ಮತ್ತು ವಿಶಾರದ, ಉಡುಪಿ.

೨

ಸ್ವತಂತ್ರ ಭಾರತಕ್ಕೆ ಅವಶ್ಯಕ ಶಿಕ್ಷಣ ಪ್ರಣಾಳಿ

ಯಾವುದೇ ಒಂದು ದೇಶವು ಪ್ರಗತಿಪಥದಲ್ಲಿ ಮುನ್ನಡೆಯ ಬೇಕಾದರೆ ಅಲ್ಲಿಯ ಜನರು ಕಷ್ಟ ಸಹಿಷ್ಣುಗಳೂ, ಸ್ವಾವಲಂಬಿಗಳೂ ಆಗಿರಬೇಕು. ನಮ್ಮ ಹಿಂದೂದೇಶವು ಬಡದೇಶ ಮಾತ್ರವಲ್ಲ; ಹಳ್ಳಿಗಳ ದೇಶ. ಈ ದೇಶವು ಏಳಿಗೆ ಹೊಂದಬೇಕಾದರೆ ಹಳ್ಳಿಗಳ ಪುನರುಜ್ಜೀವನವಾಗಬೇಕು. ಅದಕ್ಕಾಗಿ ಪೂಜ್ಯ ಬಾಪೂಜಿಯವರು ಈ ಮೂಲ ಶಿಕ್ಷಣ ಅಥವಾ ಜೀವನ ಶಿಕ್ಷಣ ನಮ್ಮ ದೇಶಕ್ಕೆ ಅತ್ಯಗತ್ಯವೆಂದು ಮನಗಂಡರು.

ಒಂದಾನೊಂದು ಕಾಲದಲ್ಲಿ ಇಡಿ ಪ್ರಪಂಚವೇ ಅಜ್ಞಾನವೆಂಬ ಕಗ್ಗತ್ತಲೆಯಲ್ಲಿ ಬಿದ್ದಿರುವಾಗ ಭಾರತದಲ್ಲಿ ಮಾತ್ರ ಜ್ಞಾನವೆಂಬ ಸೂರ್ಯನು ಬೆಳಗುತಿದ್ದನು. ಆದರೆ ವಿದೇಶೀಯರ ದಾಸ್ಯಕ್ಕೊಳಗಾದ ನಾವು ಅವರ ಶಿಕ್ಷಣ ಕ್ರಮವನ್ನೇ ಅನುಸರಿಸುತ್ತ ಬಂದೆವು. ಈಗ ನಮ್ಮಲ್ಲಿ ಎಷ್ಟೋ ಜನ ವಿದ್ಯಾವಂತ ಪದವೀಧರರು ಕೆಲಸಕ್ಕಾಗಿ ವಿವಿಧ ಸಂಸ್ಥೆಗಳನ್ನು ಹೊಕ್ಕು ಕೆಲಸವಿದೆಯೇ ಎಂದು ಕೇಳುತ್ತಾರೆ. ಎಲ್ಲಿಯ ಕೆಲಸ? ಅದಕ್ಕುತ್ತರವಾಗಿ 'ಸದ್ಯಕ್ಕೆ ಸ್ಥಳವಿಲ್ಲ' ಎಂಬ ನಾಮಫಲಕವು ಓದಿದ ಪದವೀಧರನ ಹಣೆಬರಹವನ್ನು ಸೂಚಿಸುತ್ತದೆ.

ಈ ಹಾಳು ಶಿಕ್ಷಣಕ್ಕಿಂತ ಬೆವರು ಸುರಿಸಿ ಉಣ್ಣುವ ಶಿಕ್ಷಣವು ಎಷ್ಟೋ ಪಾಲು ಮೇಲು. ಉದ್ಯೋಗಕ್ಕಾಗಿ ಶಿಕ್ಷಣವಲ್ಲ. ಮನುಷ್ಯನನ್ನು ಸ್ವಯಂಪೂರ್ಣನನ್ನಾಗಿ ಮಾಡುವ ಶಿಕ್ಷಣವೇ ನಿಜವಾದ ಶಿಕ್ಷಣ. ಮಾನವನ ಮುಖ್ಯ ಬೇಡಿಕೆಗಳಾದ ಅನ್ನ ಮತ್ತು ಬಟ್ಟೆಗೆ ನಾವು ಸ್ವಯಂಪೂರ್ಣರಾಗಬೇಕು. ನಮಗೆ ಬೇಕಾದ ಅನ್ನವನ್ನು ನಾವು ಕೃಷಿ ಮಾಡಿ ತಯಾರಿಸುವ, ನಮಗೆ ಬೇಕಾದ ಬಟ್ಟೆಯನ್ನು ನಾವೇ ನೂತು ನೇಯುವ, ನಮ್ಮ ಕೆಲಸವನ್ನು ನಾವೇ ಮಾಡುವ, ನಮ್ಮ ಕಾಲಮೇಲೆಯೇ ನಾವು ನಿಲ್ಲುವ ಎಂಬ ಮನೋಭಾವ ಪ್ರತಿಯೊಬ್ಬನಲ್ಲಿ ಮೂಡಬೇಕು. ಹೀಗಾದರೇನೆ ನಮ್ಮ ವಿದ್ಯೆ ಸಫಲವಾದೀತು; ನಮ್ಮ ದೇಶದ ಕಲ್ಯಾಣವಾದೀತು.

ಈ ಕಾರ್ಯದಲ್ಲಿ ಉಪಾಧ್ಯಾಯನ ಪಾತ್ರದೊಡ್ಡದು. ಯಾಕೆಂದರೆ ಒಂದು ದೇಶದ ಮುಖ್ಯ ಸಂಪತ್ತು ಆ ದೇಶದ ಮಕ್ಕಳು. ಉಪಾಧ್ಯಾಯನು ಆ ಮಕ್ಕಳನ್ನು ತಿದ್ದಿ ರೂಪುಗೊಳಿಸುವ ಶಿಲ್ಪಿ. ಉಪಾಧ್ಯಾಯರಾದವರಿಗೆ ಸಿಕ್ಕುವ ಮಕ್ಕಳು ಎಳೆಯ ಪ್ರಾಯದವರು. ನಮ್ಮಲ್ಲಿ ಒಂದು ಗಾದೆಯಿದೆ. 'ಮೂರು ವರುಷದ ಬುದ್ಧಿ ನೂರು ವರುಷದ ತನಕ" ಎಂದು. 'ನಿನ್ನೆ ಮಾಡಿದ ಒಂದು ಮಣ್ಣಿನಗೋಡೆಗೆ ಒಂದು ಕಲ್ಲು ಹರಳನ್ನು ಬಿಸಾಡಿದರೆ ಅದು ಆ ಹರಳನ್ನು ಹಿಡಿದು ಕೊಳ್ಳುವುದು, ಹಾಗೆಯೇ ಉಪಾಧ್ಯಾಯರು ಈ ಎಳೆಯ ಮಕ್ಕಳಿಗೆ ಮುಂದೆ ಜೀವನದಲ್ಲಿ ಪ್ರಯೋಜನಕಾರಿ ಹಾಗೂ ಉತ್ಪತ್ತಿದಾಯಕವಾದ ಚಟುವಟಿಕೆಗಳ ಮೂಲಕ ಪಾಠಮಾಡಿ ಮಕ್ಕಳನ್ನು ಕ್ರಿಯಾಶೀಲರನ್ನಾಗಿ ಮಾಡುವುದು ಮಾತ್ರವಲ್ಲದೆ, ಅವರನ್ನು ಯೋಗ್ಯ ಪ್ರಜೆಗಳನ್ನಾಗಿ ಮಾಡುವುದು ಅಗತ್ಯ.

ಆದುದರಿಂದ ಹಳ್ಳಿ ಹಳ್ಳಿಗಳಿಗೆ ಹೋಗಿ ಮೂಲಶಿಕ್ಷಣದ ಧ್ಯೇಯ, ಗುರಿ ಆಗತ್ಯತೆಯನ್ನು ಜನತೆಗೆ ಮುಂದಿಟ್ಟುಮಾಡಬೇಕು. ದೇಶದ ಸಂಪತ್ತಾದ ಮಗುವೆಂಬ ಪಾಪೆಯನ್ನು ಕೆತ್ತಿ, ನಿರುಗುಗೊಳಿಸಿ ರೂಪುಗೊಳಿಸುವಂತಹ ಕಾರ್ಯವು ದೇಶ ಕಲ್ಯಾಣದಲ್ಲಿ ಮೊದಲನೇ ಹಂತವೆಂಬುದನ್ನು ಗಮನಿಸಬೇಕು.

—ಬಿ. ಶೀನಪ್ಪ ಶೆಟ್ಟಿ.

ಪ್ರಕಟಣೆ

ಕೊಂಡಾಣಿ ರಾಮಕೃಷ್ಣ ಭಟ್ಟರ ಮಗನಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ ಈ ತನಕ ನಾನು S. ನಾರಾಯಣ ಭಟ್ ಎಂದು ಸಹಿ ಹಾಕುತ್ತಿದ್ದುದನ್ನು ಈ ಪ್ರಕಟಣೆ ತಾರೀಕಿನಿಂದ K R. ನಾರಾಯಣ ಭಟ್ ಎಂದು ಬದಲಾಯಿಸಿ ದಸ್ಕತು ಹಾಕಲಾರಂಭಿಸಿರುತ್ತೇನೆ. ಇದು ಈ ತಾರೀಕಿನಿಂದ ಸಿಂಧು ಎಂಬುದನ್ನು ಜಾಹೀರು ಮಾಡಿರುತ್ತೇನೆ.

(ಸಹಿ) K.R. ನಾರಾಯಣ ಭಟ್,

ಭಾಗಮಂಡಲ ದೇವಸ್ಥಾನ
ಭಾಗಮಂಡಲ (ದ. ಕೊಡಗು)

Quality Air Cushion
Rubber Stamps
Crown
RUBBER STAMP CO.
PHONE 203
ESTD 1926
BALMATTA ROAD, MANGALORE.

ಲೈಬ್ರರಿಗಳಿಗೆ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ. ಬರೆದವರು: ಡಾಕ್ಟರ ಜೇಮ್ಸ್ ಬಿ. ಕೊನೇಂಟ್ ಅನುವಾದಕ: ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೧೪೦. ಬೆಲೆ: ರೂ. ೧.೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ. ಮಾಡಿರದ ಅಪರಾಧಗಳಿಗಾಗಿ ಏಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು.ಶಿ.ಹರಿದಾಸ ಭಟ್ಟರು. ಪುಟ: ೪೦೮ ಬೆಲೆ: ರೂ. ೨.೫೦.

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು: ಕೆ. ಬಿ. ರಾಮಕೃಷ್ಣರಾಯ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೨೫೦. ಬೆಲೆ: ರೂ ೨ ೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ವಿಮರ್ಶಿಸುವ ಅಪೂರ್ವ ಗ್ರಂಥ. ಅನುವಾದಕ: ಕು. ಶಿ. ಹರಿದಾಸ ಭಟ್ಟ. ಪುಟ: ೨೫೦. ಬೆಲೆ: ರೂ. ೨,

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಪಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ ವರ್ಣಿಸಲಾಗಿದೆ. ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ: ರೂ. ೧.೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆ ಒಂದು ಸ್ವತಂತ್ರ ರಚನೆ. ಬರೆದವರು: ಕು. ಶಿ. ಹರಿದಾಸ ಭಟ್ಟ. ವಿ. ಸೀತಾರಾಮಯ್ಯನವರ ಮುನ್ನುಡಿ ಇದೆ. ಪುಟ: ೧೫೦. ಬೆಲೆ: ರೂ. ೨.

ಫಂಟಮಾರಾ

ಇಗ್ನೇಜಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ. ಅನುವಾದಕರು: ಕು ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ: ರೂ. ೨.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

—ಬೇಕಾಗಿದ್ದಾರೆ—

ಮೋಹನ್‌ರವರ ಜನಪ್ರಿಯ ತಯಾರಿಕೆಗಳಾದ ಹೇರ್‌ಆಯಿಲ್ ಬ್ರಿಲಿಯನ್‌ಟೈನ್, ಫೌಂಟನ್‌ಪೆನ್ ಮಸಿ, ರಬ್ಬರ್‌ಸ್ಟಾಂಪಮಸಿ ಮತ್ತು ದತ್ತಭಜನಾವಳಿಗಳನ್ನು ಧಾರಾಳವಾದ ಕಮೀಷನ್ ಮೇಲೆ ಮಾರಾಟಮಾಡತಕ್ಕ ಏಜಂಟರೂ, ವ್ಯಾಪಾರಸ್ಥರೂ ಬೇಕಾಗಿದ್ದಾರೆ. ಏಜನ್ಸಿ ಮತ್ತು ವ್ಯಾಪಾರದ ನಿಯಮಗಳಿಗಾಗಿ ೧೫ಪೈಸೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಕುಲಕರ್ಣಿ ಅಂಡ್ ಸನ್ಸ್
೨೮, ಗಾಂಧಿ ಬಜಾರ
ಬೆಂಗಳೂರು 4

ಅತಿಥಿ ಪರಿಚಯ

ರಾಜಕುಮಾರ ಫಿಲಿಪರ ಭಾರತ ಸಂದರ್ಶನ

೧೦ವರ್ಷಗಳನಂತರ ಡ್ಯೂಕ್ ಆಫ್ ಎಡಿನ್‌ಬರೊ ಭಾರತಕ್ಕೆ ಬರುತಿದ್ದಾರೆ.

ಭಾರತ ಮತ್ತು ಪಾಕಿಸ್ತಾನಗಳನ್ನು ಸಂದರ್ಶಿಸುತ್ತಿರುವ ರಾಜಕುಮಾರ ಫಿಲಿಪರು

ರಾಜಕುಮಾರ ಫಿಲಿಪರು ಎಡಿನ್‌ಬರ್ಗ್‌ನ ಡ್ಯೂಕರಾಗಿದ್ದು ಅವರು ದಿವಂಗತರಾದ ಗ್ರೀಸಿನ ರಾಜಕುಮಾರ ಆಂಡ್ರ್ಯೂ ಮತ್ತು ರಾಜಕುಮಾರಿ ಆಲಿಸ್‌ರವರ ಪುತ್ರರಿರುವರು ಹೀಗಾಗಿ, ಮಹಾರಾಣಿ ವಿಕ್ಟೋರಿಯಾರವರ ಮರಿಮೊಮ್ಮಗನ ಮಗ. ಇವರು ೧೯೨೧ನೆ ಜೂನ್ ೧೦ರಂದು ಜನ್ಮಿಸಿ ಚೀಮ್ ಗೋರ್ಡನ್ಸ್‌ಟೌನ್ ಮತ್ತು ರಾಯಲ್ ನೇವಲ್ ಕಾಲೇಜ್, ಡಾರ್ಟ್‌ಮೌತ್‌ಗಳಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪಡೆದರು. ತಮ್ಮ ಹದಿನಂಟನೆಯ ವಯಸ್ಸಿನಲ್ಲಿಯೇ ಅವರು ಬ್ರಿಟಿಷ ನೌಕಾದಳವನ್ನು ಸೇರಿದರು

೧೯೩೯ರಿಂದ ೪೫ರ ವರೆಗೆ ನಡೆದ ದ್ವಿತೀಯ ಮಹಾಯುದ್ಧಾವಧಿಯಲ್ಲಿ ಅವರು ನೌಕಾದಳದಲ್ಲಿದ್ದುಕೊಂಡು ವಿವಿಧ ರಂಗಗಳಲ್ಲಿ ದುಡಿದರು.

೧೯೪೭ರ ಫೆಬ್ರವರಿಯಲ್ಲಿ ಗ್ರೀಸ್ ಮತ್ತು ಡೆನ್‌ಮಾರ್ಕ್‌ಗಳಲ್ಲಿನ ಸಿಂಹಾಸನಗಳ ಉತ್ತರಾಧಿಕಾರವನ್ನು ಅವರು ಅಲ್ಲಗಳೆದರು. ಅಂದಿನಿಂದ ಅವರು ಮೌಂಟ್‌ಬೇಟನ್ ಉಪನಾಮವನ್ನು ಧರಿಸಿ ಅವರು ಬ್ರಿಟಿಷ ನಾಗರಿಕರಾದರು.

೧೯೪೭ರಲ್ಲಿ ಅವರು ರಾಜಕುಮಾರಿ (ಈಗ ಮಹಾ ರಾಣಿ) ಎಲಿಜಬೆತರನ್ನು ವಿವಾಹವಾದರು. ಈಗ ಅವರಿಗೆ ರಾಜಕುಮಾರ ಚಾರ್ಲ್ಸ್ ಮತ್ತು ರಾಜಕುಮಾರಿ ಆ್ಯನ್ ಎಂಬೆರಡು ಮಕ್ಕಳಿರುವರು.

ಡ್ಯೂಕ್ ಆಫ್ ಎಡಿನ್‌ಬರ್ಗರು ಉತ್ತಮ ಆಟಗಾರರು. ಪೋಲೋ ಆಡುವುದರಲ್ಲಿ ನಿಪುಣರು. ಆಗಾಗ ತಮ್ಮ ವಿಮಾನವನ್ನು ಇವರು ಸ್ವತಃ ನಡೆಸುವುದಿದೆ. ಇವರು ಅತ್ಯುನ್ನತ ಮಟ್ಟದ ವಾಗ್ಮಿಗಳು, ಆರ್ಥಿಕ ಸ್ಥಿತಿಗತಿ ಮತ್ತು ಉದ್ದಿಮೆಗಳ ಕಡೆಗೆ ವಿಶೇಷ ಗಮನ ಹರಿಸುತ್ತಾರೆ.

ಹಲವಾರು ಬಾರಿ ಅವರು ಟೆಲಿವಿಜನಿನಲ್ಲಿ ದರ್ಶನವಿತ್ತಿದ್ದಾರೆ. ಮಹಾರಾಣಿ ಎಲಿಜಬೆತರು ೧೯೫೭ನೇ ಫೆಬ್ರವರಿ ೨೨ರಂದು ಇವರಿಗೆ ಪ್ರಿನ್ಸ್ ಎಂಬ ಪದವಿಯನ್ನು ದಯಪಾಲಿಸಿದರು. ಅಂದಿನಿಂದ ಇವರು "ಹಿಸ್ ರಾಯಲ್ ಹೈನೆಸ್ ದಿ ಪ್ರಿನ್ಸ್ ಫಿಲಿಪ್, ಡ್ಯೂಕ್ ಆಫ್ ಎಡಿನ್‌ಬರ್ಗ್" ಎಂಬ ಹೆಸರನ್ನು ತಾಳಿದರು

ರಾಣಿಯೊಂದಿಗೆ ಅಲ್ಲದೆ ಸ್ವತಃ ಏಕಾಂಗಿಯಾಗಿಯೂ ಇವರು ಹಲವಾರುಬಾರಿ ವಿದೇಶಗಳಿಗೆ ಸಂಚಾರ ಮಾಡಿದ್ದಾರೆ. ಜನವರಿ ೨೧ರಂದು ನವದೆಹಲಿಗೆ ಆಗಮಿಸಿದರು. ಅವರು ಇಲ್ಲಿ ನಡೆಯುವ ವೈಜ್ಞಾನಿಕ ಸಭೆಗಳಲ್ಲಿ ಬ್ರಿಟಿಷ ವೈಜ್ಞಾನಿಕ ಮುನ್ನಡೆಯ ಸಂಘವನ್ನು ಪ್ರತಿನಿಧೀಕರಿಸುವರು. ಭಾರತದಲ್ಲಿ ಅವರು ಕಲಕತ್ತೆ, ಮದ್ರಾಸು, ಬೆಂಗಳೂರು, ಬೊಂಬಾಯಿ ಮೊದಲಾದ ನಗರಗಳನ್ನೂ ಸಂದರ್ಶಿಸುವರು.

ರಾಜಕುಮಾರ ಫಿಲಿಪರು ಭಾರತಕ್ಕೆ ಮೊದಲನೇ ಬಾರಿಯಾಗಿ ಇದೀಗ ಸಂದರ್ಶನವಿತ್ತಿರುವರು ವಿಕ್ಟೋರಿಯಾ ಮಹಾರಾಣಿಯವರ ೨ನೆ ಪುತ್ರ ಡ್ಯೂಕ್ ಆಫ್ ಎಡಿನ್‌ಬರೊ ಭಾರತಕ್ಕೆ ಆಗಮಿಸಿದ್ದರು.

ಗಣಿಯೊಂದರಿಂದ ಮೇಲೆದ್ದು ಬರುತ್ತಿರುವ ರಾಜಕುಮಾರ ಫಿಲಿಪರು.

ಅನುಭವಾಮೃತ

ನಿದ್ರಿಸಲೂ ಸ್ಥಳಾಸ್ಥಳ ವಿವೇಚನೆ ಅವಶ್ಯವೆ?

ನನಗೇನೂ ಆಘಾತವೊದಗಲಿಲ್ಲ; ವಿಶ್ವಾಸವುದಿಸಲಿಲ್ಲ; ನಿಮಗೆ.....?

ನಾನೊಮ್ಮೆ ನಮ್ಮ ದೊಡ್ಡಮ್ಮನ ಮನೆಗೆ ಹೋಗಿದ್ದೆ. ಅದೊಂದು ಹಳ್ಳಿ. ಅವರೆಲ್ಲ ಹಳೇ ಸಂಪ್ರದಾಯದವರು! ಬೇಸಿಗೆ ದಿನ—ಜಗುಲಿಯ ಮೇಲೆ ರಾತ್ರಿ ಊಟ ತೀರಿದ ಅನಂತರ ಅದು ಇದು ಮಾತನಾಡಿ ವೇಳೆ ತೆಗೆದುದಲ್ಲದೆ ನೆರೆಮನೆಯ ಹುಡುಗರೊಡನೆ "ಇಸ್ಪೀಟು ಪಾರಾಯಣ ಮುಗಿಸಿದ ನಂತರ ಮಲಗುವ ಸಿದ್ಧತೆ ನಡೆಯತೊಡಗಿತು. ನಾನು ಇದನ್ನರಿತು "ನಾನಿಲ್ಲಿಯೇ ಹೊರ ಜಗಲಿಯಲ್ಲಿಯೇ ಮಲಗುವೆ, ನನ್ನ ಹಾಸಿಗೆ ಸಾಮಾನು ಇತ್ತ ಕಡೆಗೇ ಕಳಿಸಿ" ಯೆಂದು ನಮ್ಮ ದೊಡ್ಡಮ್ಮನವರೊಡನೆ ತಿಳಿಸಿದೆ! ಅವರು ಕೂಡಲೇ "ಅಲ್ಲಿ ಮಲಗಿ ನಿದ್ರಿಸುವದು ಒಳಿತಲ್ಲ, ಅದು 'ವತ್ತಗನ' ಸ್ಥಳ. ಅಲ್ಲಿ ಯಾರೂ ಮಲಗುವದಿಲ್ಲ" ಎಂದರು.

ನನಗೆ ಈ ಹಳೇ ಸಂಪ್ರದಾಯದ ಜನರ ನಡನಳಿಗೆ ವಿಚಿತ್ರವಾಗಿ ಕಂಡಿತು. ಅಲ್ಲದೆ ಅವರೊಂದು ಸಮಸ್ಯೆಯೇ ಆಗಿದ್ದಾರೆ. ನನಗೆ ಮನೆಯೊಳಗೆ ಮಲಗಿದರೆ—ನಿದ್ರೆ ಬರಲೊಲ್ಲದು. ಯಾವಾಗಲೂ ಗಾಳಿ ಇಲ್ಲದ ಸ್ಥಳದಲ್ಲಿ ಅವರೆಲ್ಲ ಹೇಗೆ ನಿದ್ರಿಸುವರೋ ಎನಿಸಿತು "ಅವರಲ್ಲಿ ಒತ್ತಾಯದಿಂದ ವಿನಂತಿಸಿಕೊಂಡೆ—" ನಾನು ಇಲ್ಲೇ ಮಲಗುವೆ! ನನಗೆ ನಿಮ್ಮ ವತ್ತಗ" "ಏನು ಮಾಡಿದರೂ ಸರಿ" ಎಂದೆ ಖಂಡಿತವಾಗಿ. ಅವರೆಂದರು "ನೋಡಪ್ಪಾ ನಿನ್ನ ಧೈರ್ಯ"—ಎನ್ನುತ್ತಾ ನನ್ನ ಹಾಸಿಗೆ ತಂದು ಬಿಚ್ಚಿ ಕೊಟ್ಟರು—

- ಹಳ್ಳಿಯ ಜನ ಹಳೇ ಸಂಪ್ರದಾಯವನ್ನು ತಮ್ಮ ಜೀವನದ ಬುನಾದಿಯನ್ನಾಗಿ ಕಲಿಸಿರುತ್ತಾರೆ. ಅಲ್ಲ "ಪಂಚ ಭೂತಾತ್ಮಕವಾದ ಮಣ್ಣಿನ ಈ ದೇಹ ಮಣ್ಣಿನಲ್ಲಿ ಹುಟ್ಟಿ ಮಣ್ಣನ್ನು ಸೇರಲಿದೆ' ಈ ಅಲ್ಪ ಕಾಲದಲ್ಲಿ ವಿಶಾಲ ಸ್ಥಳವಿದ್ದಾಗ ಎಲ್ಲಿ ಮಲಗಿ ನಿದ್ರಿಸಿದರೇನು? ಮನುಷ್ಯನು ನಿದ್ರಿಸಿದಾಗ ಅವನಿಗೆ ಯಾವ "ವತ್ತಗನು" ಏನು ಮಾಡುವನು? ಅಂಥ ಉಪದ್ರವವು ಮನುಷ್ಯನಿಗಿದ್ದರೆ ಅವನು ಎಲ್ಲಿ ಮಲಗಿದರೂ ತಪ್ಪಿದ್ದಲ್ಲವೆಂದೂ ಈ ಬಗ್ಗೆ ಸ್ಥಳಾಸ್ಥಳದ—ಭೇಧವಿಲ್ಲವೆಂದೂ— ಮನುಷ್ಯನ ಹೃದಯದ ಮತ್ತು ಚಿತ್ತದ ದುರ್ಬಲತೆಯೆಂದೂ ಆ ಜನಕ್ಕೆ ತಿಳಿಯುವದೆಂತು! ಅವರ ಅಜ್ಞಾನಕ್ಕೆ ನಾನು ಮರುಗಿದೆ.— ಅಂತೂ ನಾನು ಅಂದು—ಅದೇ ಸ್ಥಳದಲ್ಲೆ ಮಲಗಿದೆ. ನನಗೇನೂ ಅನಿಸಲಿಲ್ಲ— ದಿನಕ್ಕಿಂತ ಸುಖವಾಗಿ ನಿದ್ರೆ ಬಂದಿತ್ತು! ದೊಡ್ಡಮ್ಮನಿಗೂ ಅವರ ಮಕ್ಕಳಿಗೂ ಅವರ ಅಣ್ಣನಿಗೂ ಎಲ್ಲರಿಗೂ ಅಲ್ಲದೆ ನಮ್ಮ ಮಾವಯ್ಯನವರಿಗೂ ಅಜ್ಜಯ್ಯನಿಗೂ ಸಹಾ ಕುತೂಹಲವಾಗಿರಬೇಕು—ಅವರು ನಾನು ರಾತ್ರಿ ಕೂಗಬಹುದೆಂತಲೂ— ನಿದ್ದೆಗೆಡಬಹುದೆಂತಲೂ ಬಾವಿಸಿರಬೇಕು. ನನಗೂ "ವತ್ತಗ" ವಿಷಯ ತಿಳಿದಿರಲಿಲ್ಲ.

ಮೊನ್ನೆ ತಜ್ಞರೊಬ್ಬರು "ವತ್ತಗ"ನ ನಿಜ ಅಸ್ತಿತ್ವದ ಬಗ್ಗೆ ವಿವರಿಸುತ್ತ "ವತ್ತಗ"ನೆಂದರೆ— ವಾಯುರೂಪದಲ್ಲಿರುವ 'ಹತಾತ್ಮ"ಗಳೆಂತಲೂ— ಅವು ಸಂಚರಿಸುವುದು ನಿಜವೆಂತಲೂ— ಅವಕ್ಕೆ ಕಾರಣ ಸೂಕ್ಷ್ಮ, ಸ್ಥೂಲ, ಮೂರು ಆಕಾರಗಳಿವೆಯೆಂತಲೂ ತಿಳಿಸಿದರಲ್ಲದೆ —ಈ "ವತ್ತಗಗಳು ಬಾಲಕರನ್ನೂ ಹೆಂಗಸರನ್ನೂ (ವಿಧವೆಯರು, ಯಾ ನಿರಾಶೆಗೊಂಡ—ಮತ್ತು ಅಸಂತುಷ್ಟ ಸಧವೆಯರು) ಯಾ—ವೃದ್ಧರನ್ನೂ ಪೀಡಿಸುವವೆಂತಲೂ ತಿಳಿಸಿದರು. ಈ ಪೀಡನೆಗೆ ಕಾರಣವನ್ನು ವಿವರಿಸುತ್ತಾ ಮಕ್ಕಳ ಬಾಲಗ್ರಹ ವಿದೇಯೆಂತಲೂ—ಹೆಂಗಸರು ಇದರಿಂದಾಗಿ— ಕ್ಷೀಣ ಹೊಂದುವರೆಂತಲೂ ಮುದುಕ ಮುದುಕಿಯರ ಆಯುಷ್ಯದ ಕೊನೆಯಲ್ಲಿ ಈ ಚೇಷ್ಟೆಗೊಳಗಾಗುವರೆಂತಲೂ ತಿಳಿಸಿದರು. ಇವಕ್ಕೆ ಅದಾವುದೋ ರೂಪು ಸಹ ಇದ್ದು ಅದನ್ನು ನೋಡಬಹುದೆಂತಲೂ—ಅಲ್ಲದೆ ಇವು ಕೊಡುವ ಪೀಡೆಯೆಂದರೆ—ಮೈಯನ್ನೇ ಎದೆಯ ಮೇಲೆ ಕುಳಿತು ಕೈಯೆರಡರಿಂದ ಬಲವಾಗಿ ಎದೆಯನ್ನೊತ್ತುವದು ಇದರಿಂದಾಗಿ ಶ್ವಾಸ — ಉಚ್ಛ್ವಾಸಗಳಿಗೆ ತೊಂದರೆಯಾಗಿ ನಿದ್ರಿತರು ಅಪಸ್ವರದಿಂದ ಕೂಗುವದು ಎಂದೂ ತಿಳಿಸಿದರು. ನನಗೆ ಈ ತಜ್ಞರ ಅಭಿಪ್ರಾಯ ಇನ್ನೂ ವಿಚಿತ್ರವಾಗಿದೆ, ನಿಮಗೆ?

—ಸಿರಿಪತಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1-25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

> ಮೊಗ್ಗೆಯಾಗಿರುವ ಹೂವನ್ನು ಅರಳಲು ಬಿಟ್ಟರೆ, ಅದರ ಸುವಾಸನೆಗೆ ಜೇನು ನೊಣಗಳು ತಾವಾಗಿಯೇ ಅದರ ಸಮೀಪ ಓಡಿ ಬರುತ್ತವೆ. ತನ್ನ ವ್ಯಕ್ತಿತ್ವವನ್ನು ವಿಕಾಸ ಪಡಿಸಿ ಚರಿತ್ರವಂತನಾದ ಮಾನವನನ್ನು ವಿಶ್ವಕ್ಕೆ ವಿಶ್ವವೇ ಅರಸಿಕೊಂಡು ಬಂದು ಆತನಲ್ಲಿ ಮೋಹವಶವಾಗುತ್ತದೆ.

NAVAYUGA
Founder.—
A. B. SHETTY,
Former Minister for Public Health
Govt. of Madras & Govt of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೫-೨-'೫೯	೨೧

ನೂತನ ಅಧ್ಯಕ್ಷಿಣಿ

ಹಲವಾರು ಊಹಾಪೋಹಾ ನಂತರ, ಅನೇಕ ಸುಪ್ರತಿಷ್ಠಿತ ಕಾಂಗ್ರೆಸ್ ನಾಯಕರ ಹೆಸರುಗಳು ಮುಂಬಂದ ಮೇಲೆ ಶ್ರೀಮತಿ ಇಂದಿರಾ ಗಾಂಧಿಯವರ ನಾಮಪತ್ರವು ಮುಂಬಂದು ಇದೀಗ ಅವರು ಅವಿರೋಧವಾಗಿ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದರೆಂದು ಅಧಿಕೃತವಾಗಿ ಸಾರಲಾಗಿದೆ. ಶ್ರೀಮತಿ ಗಾಂಧಿಯವರ ಹೆಸರು ಆ ಸ್ಥಾನಕ್ಕೆ ಮುಂಬಂದೊಡನೆಯೇ ಅವರ ಆಯ್ಕೆಯು ಅವಿರೋಧವಾಗಿಯೇ ನಡೆಯುವುದು ಸಂಭವನೀಯವೆಂದು ಊಹಿಸಲಾಗಿದ್ದು, ಅದೀಗ ಸತ್ಯವಾಗಿ ಪರಿಣಮಿಸಿದೆ. ಶ್ರೀಮತಿಯವರು ಇಂದಿರಾ ಗಾಂಧಿಯೆಂಬ ಹೆಸರಿಗಿಂತ ಪ್ರಧಾನಿ ನೆಹರೂರವರ ಪುತ್ರಿಯೆಂಬ ಉಪನಾಮದಿಂದಲೇ ಭಾರತದಲ್ಲಿ ಹೆಸರಾಗಿದ್ದಾರೆ. ಅವರು ತಮ್ಮ ತಂದೆಯೊಡನೆಯೂ ಖಾಸಗಿ ಯಾಗಿಯೂ ದೇಶದ ವಿವಿಧ ಭಾಗಗಳನ್ನಲ್ಲದೇ ವಿದೇಶಗಳನ್ನೂ ಸಂಚರಿಸಿದ್ದಾರೆ. ಕಾಂಗ್ರೆಸ್ ತನ್ನ ಬಲವನ್ನು ದಿನೇ ದಿನೇ ಕಳೆದುಕೊಳ್ಳುತ್ತ ಬರುತ್ತಿರುವ ಈ ಸಂಕ್ರಾಂತಿ ಸಮಯದಲ್ಲಿ ನೂತನ ಅಧ್ಯಕ್ಷಿಣಿಯವರು ಯೋಗ್ಯ ಮಾರ್ಗದರ್ಶನ ಮಾಡಿ, ಬಲಪಡಿಸುವುದಲ್ಲದೇ ದೇಶದ ಮುಗ್ಗಟ್ಟಿನ ಈ ಅವಸರದಲ್ಲಿ ಸರಕಾರಕ್ಕೆ ಕಾಂಗ್ರೆಸ್ಸಿನ ಮೂಲಕ ಯೋಗ್ಯ ಸಲಹೆ ಸೂಚನೆಗಳನ್ನು ಇತ್ತಾರೆಂದು ನಂಬಬಹುದು. ಆದರೆ ಕಾಂಗ್ರೆಸ್ ಪಕ್ಷವು ಅಧಿಕಾರ ವಹಿಸಿ, ರಾಜ್ಯ ಸೂತ್ರವನ್ನು ಮುಂದೊಯ್ಯುತ್ತಿರುವಾಗ, ಪಂಡಿತ ನೆಹರೂ ಪ್ರಧಾನಿಯಾಗಿರುವಾಗ, ಅವರ ಪುತ್ರಿಯೇ ಕಾಂಗ್ರೆಸ್ಸಿನ ಅಧ್ಯಕ್ಷಿಣಿ ಯಾಗಿರುವುದು ಅಸಮಂಜಸವೆಂಬ ಅಭಿಪ್ರಾಯಕ್ಕೂ ಎಡೆಯಿದೆ. ಕಾಂಗ್ರೆಸ್ ಸ್ವತಂತ್ರ ಸಂಸ್ಥೆಯಾಗಿ ನಿಲ್ಲದೆ "ಪಂಡಿತ ನೆಹರೂ"ರವರ ಖಾಸಗಿ ಸಂಸ್ಥೆಯಾಗಿ ಏಕೆ ಪರಿಣಮಿಸಬಾರದು? ಎಂಬ ಮಾತೂ ಎದ್ದು ಕೇಳಿ ಬರುವುದನ್ನು ಅಲ್ಲಗಳೆಯುವಂತಿಲ್ಲ. ಆದರೂ ಕಾಂಗ್ರೆಸ್ಸಿಗೆ ಇಂದು ಸರಿಯಾದ ಮಾರ್ಗದರ್ಶನ ದೊರೆತು, ಅದರ ಬಲ ಸಂವರ್ಧನೆಯಾಗಿ, ಕಾಂಗ್ರೆಸ್ ಸರಕಾರಗಳ ಕಾರ್ಯಕ್ಷಮತೆಯು ಹೆಚ್ಚುವುದರಿಂದಲೇ ಭಾರತದ ಪ್ರಗತಿಯು ದೃಢವಾಗಿರುವುದರಿಂದ, ಪಂಡಿತ ನೆಹರೂರವರು ಈ ದಿಸೆಯಲ್ಲಿ ತಮ್ಮ ಪ್ರಭಾವವನ್ನೂ ಬೀರಲಿರುವರೆಂದು ಭಾವಿಸಬಹುದು. ಆದರೆ, ಆ ಪ್ರಭಾವವು ಮಾತ್ರ ಯಾವ ರೂಪದಲ್ಲಿ ಮುಂಬರುವದೆಂದು ಹೇಳುವುದು ಸದ್ಯ ಸಾಧ್ಯವಿಲ್ಲ.

ಆದರೆ, ಉತ್ತರ-ದಕ್ಷಿಣ ಭಾರತಗಳ ನಡುವೆ ಭೇದಭಾವನೆಗಳು ಬಲಿತು, ಇದು ಹಲವಾರು ಸಮಸ್ಯೆಗಳಿಗೆಡೆಯಿತ್ತಿರುವಾಗ, ದಕ್ಷಿಣ ಭಾರತೀಯರೊಬ್ಬರಿಗೆ ಈ ಬಾರಿ ಕಾಂಗ್ರೆಸ್ ಅಧ್ಯಕ್ಷ ಪದವನ್ನು ಕೊಡುವುದೆಂದು ಸಾಮಾನ್ಯತಃ ತಿಳಿದುಕೊಳ್ಳಲಾಗಿದ್ದರೂ, ಈ ಊಹೆಯು ಈಗ ಬುಡಮೇಲಾಗಿ ಪರಿಣಮಿಸಿದೆ; ಅಲ್ಲದೇ ಈ ಘಟನೆಯು ದಾಕ್ಷಿಣಾತ್ಯರಲ್ಲಿ ಹಲವರನ್ನು ಉದ್ರೇಕಿಸಿರಲೂಬಹುದು. ಆದರೂ ದೇಶದ ಭದ್ರತೆ ಮತ್ತು ಸುವ್ಯವಸ್ಥೆ ಹಾಗೂ ಏಕತೆಯ ದೃಷ್ಟಿಯಿಂದ ಈ ರೀತಿಯ ಭೇದಭಾವನೆಗಳನ್ನು ಪುರಸ್ಕರಿಸದೆ ಒಮ್ಮತದಿಂದ ಸಹಯೋಗವಿತ್ತು ಕಾಂಗ್ರೆಸ್ಸನ್ನು ಉಜ್ವಲಗೊಳಿಸುವುದು ಅಗತ್ಯವೆಂದು ಒತ್ತಿ ಹೇಳ ಬಯಸುತ್ತೇವೆ. ಶ್ರೀಮತಿಯರಾದ ಅನ್ನಿಬಿಸೆಂಟ್, ಸರೋಜಿನಿ ನಾಯ್ಡು ಮತ್ತು ನೆಲ್ಲಿಸೇನ ಗುಪ್ತರು ಅಲಂಕರಿಸಿದ್ದ ಈ ಅಧ್ಯಕ್ಷಪಟ್ಟವನ್ನು ಈಗ ನಾಲ್ಕನೆಯ ಮಹಿಳೆಯಾಗಿ ಶ್ರೀಮತಿ ಇಂದಿರಾ ಗಾಂಧಿಯವರು ಆರೋಹಿಸಿ ರಾಷ್ಟ್ರದ ಭದ್ರತೆಗಾಗಿ ಕಾಂಗ್ರೆಸ್ಸಿನ ಶಕ್ತಿಯನ್ನೂ ಜನಪ್ರಿಯತೆಯನ್ನೂ ಬೆಳೆಯಿಸುವಂತಾಗಲೆಂದೂ ಕಾಂಗ್ರೆಸ್ಸಿಗರೆಲ್ಲರೂ ತಮ್ಮ ಭಿನ್ನಾಭಿಪ್ರಾಯಗಳನ್ನು ದೂರವಿಟ್ಟು ಏಕ ಪಂಥವನ್ನು ಹಿಡಿದು ಸಾಗಲೆಂದೂ ಹಾರೈಸುತ್ತೇವೆ.

ಮೂಲಶಿಕ್ಷಣ ಸಪ್ತಾಹ

ಭಾರತದಲ್ಲಿ ಈಯಲಾಗುತ್ತಿದ್ದ ಯಾಂತ್ರಿಕ ವಿಧಾನದ ಶಿಕ್ಷಣ ಪ್ರಣಾಳಿಯು ಭಾರತೀಯರನ್ನು ಚಿರಂತನ ದಾಸ್ಯದಲ್ಲಿ ಕೊಡಹಲು ಸಹಾಯಕವಾಗುವುದಲ್ಲದೇ ಅವರಲ್ಲಿ ರಾಷ್ಟ್ರಾಭಿಮಾನ, ಸಹೋದರತೆ ಮೊದಲಾದ ಉಚ್ಚ ಆದರ್ಶಗಳನ್ನು ತಲೆಯೆತ್ತದಂತೆ ಸಾಗುವುದೆಂಬ ಕಾರಣದಿಂದ ಭಾರತದ ಪ್ರಾಚೀನ ವಿದ್ಯಾ ಪ್ರಣಾಳಿಯನ್ನು ತಾತ್ಕಾಲಿಕ ಸುಧಾರಣೆಗಳೊಂದಿಗೆ ಹೊಂದಿಸಿಕೊಂಡು ರಾಷ್ಟ್ರಪಿತ ಗಾಂಧೀಜಿಯವರು ಅದಕ್ಕೆ ಮೂಲ ಶಿಕ್ಷಣವೆಂದು ಹೆಸರಿತ್ತು ಪ್ರಚಾರಕ್ಕೆ ತಂದರು. ಈಗ, ನಮ್ಮ ಸರಕಾರಗಳು ಈ ಮೂಲ ಶಿಕ್ಷಣ ಪ್ರಚಾರವನ್ನು ಭರದಿಂದ ಸಾಗಿಸುತ್ತಿವೆ. ಶಾಲೆಗಳೆಲ್ಲವನ್ನೂ ಮೂಲಶಿಕ್ಷಣ ಮಾದರಿಯ ಶಾಲೆಗಳನ್ನಾಗಿ ಪರಿವರ್ತಿಸಲಾಗುತ್ತದೆ. ವೃತ್ತಿಯ ಮೂಲಕ ಶಿಕ್ಷಣವೀಯುವುದೇ ಈ ಯೋಜನೆಯ ಮೂಲ ತತ್ವವಾದುದರಿಂದ ವಿದ್ಯಾರ್ಥಿಗಳಲ್ಲಿ ಪರಿಶ್ರಮದ ಬಗ್ಗೆ ಗೌರವವು ತಲೆದೋರುವುದು; ಭೇದಭಾವನೆಯಳಿಯುವುದು; ಮುಂದೆ ತನ್ನ ಜೀವನದಲ್ಲಿ ತಾನು ಶಾಲೆಯಲ್ಲಿ ಕಲಿತ ಒಂದಲ್ಲ ಒಂದು ವಿದ್ಯೆಯಿಂದ ಪ್ರಯೋಜನವನ್ನು ಪಡೆದು ಸ್ವತಂತ್ರನಾಗಿಬಾಳಲು ಸಹಾಯವೊದಗಿದಂತಾಗಿ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯವೆ ಇಂದಿನಕಾಲದಲ್ಲಿ ಸ್ವರ್ಗಸಮಾನಾಗಿವೆ.

ಆದುದರಿಂದ ಮೂಲ ಶಿಕ್ಷಣದ ಬಗ್ಗೆ ಜನತೆಯಲ್ಲಿ ಸದಭಿಪ್ರಾಯವನ್ನು ಮೂಡಿಸುವ ಸಲುವಾಗಿ ಮೂಲ್ಯಶಿಕ್ಷಣ ಸಪ್ತಾಹವನ್ನು ಮೈಸೂರು ರಾಜ್ಯದಲ್ಲಿ ಆಚರಿಸಲಾಯಿತು. ವರ್ಷದ ಎಲ್ಲ ವಾರಗಳಲ್ಲಿಯೂ ಒಂದೊಂದು 'ಸಪ್ತಾಹ'ಗಳು ಆಚರಿಸಲ್ಪಡುವಂತಾಗಿರುವ ಇಂದಿನ ಕಾಲಸ್ಥಿತಿಯಲ್ಲಿ ಇಂತಹ ಅವಶ್ಯಕ ಸಪ್ತಾಹಗಳ ಆಚರಣೆಯ ಕಡೆಗೆ ಸಾಕಷ್ಟು ಗಮನ ಹರಿದಿದೆ ಎಂಬು ಹೇಳುವಂತಿಲ್ಲ. ಆದರೂ ತೀರ ನಿರ್ಜೀವವಾಗಿ ಮಾತ್ರ ಉಳಿದಿಲ್ಲ. ಮೂಲ ಶಿಕ್ಷಣವನ್ನು ಜನತೆ ಬೆಂಬಲಿಸಿ, ಅದರ ಅನುಷ್ಠಾನ ಪ್ರಣಾಳಿಯಲ್ಲಿರಬಹುದಾದ ಕುಂದುಕೊರತೆಗಳನ್ನು ಎತ್ತಿ ತೋರಿಸಿ, ಅವನ್ನು ಸರಿಪಡಿಸುವಂತೆ ಮಾಡಿ, ರಾಷ್ಟ್ರದ ಭವಿಷ್ಯತ್ತನ್ನು ಬೆಳಗಬಲ್ಲ ನಾಗರಿಕರನ್ನು ಈಗಿಂದೀಗಲೇ ಯೋಗ್ಯ ಕ್ರಮ ಕೈಗೊಳ್ಳುವುದು ಅವಶ್ಯ. ಆದುದರಿಂದ, ಮುಂದಿನ ವರ್ಷಗಳಲ್ಲಾದರೂ ಈ ರೀತಿಯ "ಸಪ್ತಾಹ"ದಲ್ಲಿ ಕೇವಲ ಮೆರವಣಿಗೆ, ಸಭೆಗಳಗೇನೇ ಪ್ರಾಶಸ್ತ್ಯವೀಯದೆ ವಿಚಾರ ವಿನಿಮಯಕ್ಕೂ ಆಸ್ಪದ ದೊರೆಯುವಂತಾಗಲಿ; ಅದನ್ನು ಹೆಚ್ಚಿನ ತಜ್ಞರು ಈ ಚರ್ಚೆಗಳಲ್ಲಿ ಭಾಗವಹಿಸುವಂತಾಗಿ, ಅದರ ನಿಜವಾದ ಲಾಭಗಳ ಪರಿಚಯ ಜನತೆಗಾಗಲಿ.

ನಗರಸಭಾ ಚುನಾವಣೆ.

ಉಡುಪಿ ನಗರಸಭೆಯ ಸದಸ್ಯರ ಚುನಾವಣೆಗಳ ಫಲಿತಾಂಶವು ಹೊರಬಿದ್ದು, ಅದರಲ್ಲಿ ಕಾಂಗ್ರೆಸ್ ಬೆಂಬಲದಿಂದ ಸ್ಪರ್ಧಿಸಿದ ಸ್ವತಂತ್ರರು ಬಹುಮತದಿಂದ ಆರಿಸಲ್ಪಟ್ಟಿದ್ದಾರೆ. ಹಾಗಾಗಿ ಉಡುಪಿ ನಗರದಲ್ಲಿ ಕಾಂಗ್ರೆಸ್ ತನ್ನ ಹಿರಿಮೆಯನ್ನೂ ತನ್ನ ಶಕ್ತಿಯನ್ನೂ ಉಳಿಸಿಕೊಂಡಿದೆ ಎಂದು ತಿಳಿಯಬಹುದು. ಇತರ ಸ್ವತಂತ್ರ ಮತ್ತು ರಾಜಕೀಯ ಪಕ್ಷಗಳ ಜರಚಾಟಗಳು ಹೆಚ್ಚಿದ್ದರೂ ಉಡುಪಿ ನಾಗರಿಕರು ಕಾಂಗ್ರೆಸ್ ಬೆಂಬಲಿಸಿದ ಸದಸ್ಯರನ್ನೇ ಬಹು ಮತದಿಂದ ಆರಿಸಿರುವುದು ಪ್ರಶಂಸನೀಯವಿದೆ. ಹೀಗೆ ಆರಿಸಿ ಬಂದ ೧೫ ಜನರಲ್ಲಿ ಹಳೆಯ ಅನುಭವಿಕರು ಇರುವುದಲ್ಲದೆ ಹೊಸಬರೂ ಇರುವರು. ಇನ್ನು, ಆಗಬೇಕಾದುದು ಅಧ್ಯಕ್ಷ ಚುನಾವಣೆ. ನಗರ ಸಭೆಯ ಚುನಾಯಿತ ಸದಸ್ಯರು ನಗರದ ಹಿತದೃಷ್ಟಿಯನ್ನು ಮುಂದಿಟ್ಟುಕೊಂಡು, ಓರ್ವ ಅನುಭವಿಕ ಹಿರಿಯನನ್ನೇ ಆ ಸ್ಥಾನಕ್ಕೆ ಅವಿರೋಧವಾಗಿ ಆರಿಸಿ, ತಮಗೆ ಜನತೆಯಿತ್ತ ಅವಕಾಶವನ್ನು ಅವರ ನೇತೃತ್ವದಲ್ಲಿ ಸದುಪಯೋಗಪಡಿಸಿಕೊಳ್ಳುವರೆಂದು ಹಾರೈಸಿದರೆ ತಪ್ಪಾಗಲಾರದು.

ಆದರೆ, ಮಂಗಳೂರಲ್ಲಿ ಪಕ್ಷವಾಗಿ ಸ್ಪರ್ಧಿಸಿದ ಕಾಂಗ್ರೆಸ್ಸು ೩೬ ಸ್ಥಾನಗಳಲ್ಲಿ ಕೇವಲ ೧೮ನ್ನೇ ಪಡೆದಿದ್ದು, ಅದು ಗೌರವಕ್ಕೆ ಹೇತುವಾಗಲಾರದು. ಮಂಗಳೂರಲ್ಲಿ ಹಿಮ್ಮೆಟ್ಟುತ್ತಿರುವ ಕಾಂಗ್ರೆಸ್ಸನ್ನು ಮುಂದೊತ್ತುವ ಕೆಲಸ ತ್ವರಿತಗತಿಯಿಂದ ನಡೆಯುವುದು ತೀರ ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಸಂಕ್ಷಿಪ್ತ ಸುದ್ದಿಗಳು

ಸಹಕಾರ ಪದ್ಧತಿ ನಿಷ್ಫಲ

ಉತ್ತರ ಪ್ರದೇಶದ ನಿವೃತ್ತ ರಾಜ್ಯಪಾಲರಾದ ಶ್ರೀ ಕೆ. ಎಂ. ಮುನಶಿಯವರು ಸಹಕಾರೀ ವ್ಯವಸಾಯ ಪದ್ಧತಿಯ ಖಟ್ಟಾ ವಿರೋಧಿಗಳಾಗಿದ್ದು, ಅವರು ತಮ್ಮ ಅನುಭವದ ಅಭಿಪ್ರಾಯವನ್ನು ಹಿಂದೊಮ್ಮೆ ಸಾರ್ವಜನಿಕವಾಗಿ ವ್ಯಕ್ತಪಡಿಸಿದ್ದರು. ಆದರೆ, ಮೊನ್ನೆ ನಡೆದ ಹುತಾತ್ಮರ ದಿನಾಚರಣೆಯಂದು ಪ್ರಧಾನಿ ನೆಹರು ಅವರು ಈ ಅಭಿಪ್ರಾಯವನ್ನು ಬಲವಾಗಿ ಟೀಕಿಸಿದ್ದರು. ಏಕೆಂದರೆ, ಪಂಡಿತ ನೆಹರು ಅವರಿಗೆ ಸಹಕಾರಿ ವ್ಯವಸಾಯ ಪದ್ಧತಿ ಯಶಸ್ವಿಯಾಗುವುದೆಂಬ ದೃಢ ವಿಶ್ವಾಸ. ತನ್ನ ಮೇಲೆ ಗೈದ ಟೀಕೆಯನ್ನು ಗಮನಿಸಿ ಶ್ರೀ ಮುನಶಿಯವರೀಗ ವಾದಕ್ಕೆ ಇಳಿದಿದ್ದು, "ಭಾರತದಲ್ಲಿ ಎಲ್ಲೆಲ್ಲಿ ಸಹಕಾರಿ ಒಕ್ಕಲತನವನ್ನು ಕೈಗೊಳ್ಳಲಾಗಿದೆಯೋ ಅಲ್ಲೆಲ್ಲ ಅದು ನಿಷ್ಫಲವಾಗಿ ಕಂಡುಬಂದಿವೆ. ನಿಷ್ಪಕ್ಷಪಾತ ವಿಚಾರಣೆಯಿಂದ ಇದರ ಸತ್ಯಾಸತ್ಯತೆಗಳ ಅರಿವಾಗಬಹುದು ಅಲ್ಲದೇ ನಿರಂಕುಶ ರಾಷ್ಟ್ರಗಳಲ್ಲಿ ಕೂಡ ಈ ಪದ್ಧತಿಯಿಂದ ಆಹಾರ ಧಾನ್ಯ ಹೆಚ್ಚಿಲ್ಲ" ಎಂದು ಒಂದು ಪ್ರಕಟಣೆ ಹೊರಡಿಸಿ, ತಮ್ಮ ಖಚಿತಾಭಿಪ್ರಾಯವನ್ನು ಪುನಃ ದೃಢೀಕರಿಸಿದ್ದಾರೆ.

ಎಡಿನ್ ಬರ್ಗದ ಡ್ಯೂಕರು

ರಾಜಕುಮಾರ ಮತ್ತು ಎಡಿನ ಬರ್ಗದ ಡ್ಯೂಕರು ಭಾರತವನ್ನು ಸಂದರ್ಶಿಸುವ ಸಲುವಾಗಿ ಬಂದಿದ್ದು, ಅವರಿಲ್ಲಿ ಅನೇಕ ಪ್ರೇಕ್ಷಣೀಯ ನಗರಗಳನ್ನೂ ಸ್ಥಳಗಳನ್ನೂ ಸಂದರ್ಶಿಸಿದರು. ಭಾರತೀಯ ವಿಜ್ಞಾನ ಸಂಸ್ಥೆಯ ಸುವರ್ಣಮಹೋತ್ಸವದಲ್ಲಿವರು ಭಾಗ ವಹಿಸಿದರು. ಕಲಕತ್ತೆ ಮದ್ರಾಸು, ಮಹಾಬಲಿಪುರಂ, ಎಲ್ಲೋರ ಬೆಂಗಳೂರು ಮೊದಲಾದೆಡೆಗಳನ್ನು ಸಂದರ್ಶಿಸಿ, ಭಾರತವುಗಳಿಸಿದ ಪ್ರಗತಿಯನ್ನು ಕೊಂಡಾಡಿದರು. ಭಾರತೀಯ ವಿಜ್ಞಾನ ಸಂಸ್ಥೆಯ ಸುವರ್ಣ ಮಹೋತ್ಸವು ಬೆಂಗಳೂರಲ್ಲಿ ನಡೆಯಿತು. ಇದನ್ನು ಪ್ರಿನ್ಸ್ ಫಿಲಿಪರು ಉದ್ಘಾಟಿಸುತ್ತ ವೈಜ್ಞಾನಿಕ ಪಾಂಡಿತ್ಯವನ್ನೂ ಮಾನವೀಯ ಹಾಗೂ ಕಲಿತನದ ವಿಚಾರಗಳನ್ನೂ ಒಂದಕ್ಕೊಂದು ಜೋಡಿಸಿ ಸುಭಿಕ್ಷೆಯನ್ನು ತಂದುಕೊಳ್ಳಬೇಕಾಗಿವೆ ಎಂದು ಉಪದೇಶಿಸಿದರು.

ಶಿಶುಸಾಹಿತ್ಯ ಪುರಸ್ಕಾರ.

ಮಕ್ಕಳ ಅಭಿರುಚಿಗೆ ತಕ್ಕಂತಹ ಪುಸ್ತಕಗಳನ್ನು ರಚಿಸುವ ಬಗ್ಗೆ ಭಾರತ ಸರಕಾರದ ಶಿಕ್ಷಣ ಮಂತ್ರಿ ಶಾಖೆಯು ಪ್ರತಿವರ್ಷದಂತೆ ಈ ಬಾರಿಯೂ ಸ್ಪರ್ಧೆಯನ್ನು ನಡೆಸುತ್ತಿದೆ. ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟ ಪುಸ್ತಕಗಳನ್ನು ಸ್ಪರ್ಧೆಗಾಗಿ ಮೈಸೂರು ಸರಕಾರದ ಶಿಕ್ಷಣ ಶಾಖೆಗೆ ಸಲ್ಲಿಸಬೇಕು. ಪುಸ್ತಕಗಳು ಅಚ್ಚಾಗದೆ ಹೋಗಿದ್ದರೆ, ಹಸ್ತಪ್ರತಿಗಳನ್ನು ಕಳಿಸಬಹುದು. ಪುಸ್ತಕ ಮತ್ತು ಹಸ್ತಪ್ರತಿಗಳನ್ನು ಕಳಿಸಲು ಕೊನೆಯ ದಿನ ೧೯೫೯ನೆಯ ಮೇ ತಿಂಗಳ ೧೫ನೆಯ ದಿನಾಂಕ. ಉತ್ಕೃಷ್ಟವಾದ ಪುಸ್ತಕಗಳು ಅಥವಾ ಹಸ್ತಪ್ರತಿಗಳ ಲೇಖಕರಿಗೆ ತಲಾ ರೂ. ೫೦೦ರ ೨೫ ಬಹುಮಾ

ಉಡುಪಿ ಮುನಿಸಿಪಲ್ ಚುನಾವಣೆಯು-ತಾ. 28ರಂದು ಜರಗಿ ತಾ. 29 ಮತ್ತು 30ರಲ್ಲಿ ಮತಗಣನೆಯಾಗಿ ಆರಿಸಿಬಂದ ಮಹನೀಯರು.

ಗುಂಡಿಬೈಲು ವಾರ್ಡು: ಶ್ರೀ ಆರ್. ಆರ್. ಕುಂಜೂರು (ಕಾಂ. ಸ್ವ). ಶ್ರೀಮತಿ ಜಲಜಾಕ್ಷಿ (ಕಮ್ಯೂ.) (ಮಹಿಳೆಯರಿಗೆ ಕಾದಿಟ್ಟ ಸ್ಥಾನ).

ಕಡಿಯಾಳಿ ವಾರ್ಡು: ಶ್ರೀ ಎ. ನಾರಾಯಣ ನಾಯಕ್ (ಕಾಂ. ಸ್ವ).

ಕುಂಜಿಬೆಟ್ಟು ವಾರ್ಡು: ಶ್ರೀ ಪಿ. ಎನ್. ಕೃಷ್ಣಮೂರ್ತಿ ರಾವ್ (ಕಾಂ. ಸ್ವ).

ಟೆಂಪಲ್ ವಾರ್ಡು: ಡಾ. ಪಿ. ಜಿ. ಆಚಾರ್ (ಕಾಂ. ಸ್ವ)

ಪಣಿಯಾಡಿ ವಾರ್ಡು: ಶ್ರೀ ಟಿ. ಶ್ರೀಪತಿ (ಕಾಂ. ಸ್ವ).

ತೆಂಕಪೇಟೆ ವಾರ್ಡು: ಶ್ರೀ ಪಿ. ರಂಗನಾಥ ಶೆಣೈ (ಕಾಂ. ಸ್ವ).

ಸೆಂಟ್ರಲ್ ವಾರ್ಡು: ಡಾ| ಕೆ. ಎಲ್. ಐತಾಳ್ (ಕಾಂ. ಸ್ವ).

ಶಿರಿಬೀಡು ವಾರ್ಡು: ಶ್ರೀ ಎ. ಜೆ. ಆಳ್ವ (ಕಾಂ, ಸ್ವ).

ಬನ್ನಂಜೆ ವಾರ್ಡು: ಶ್ರೀಮತಿ ರಾಜಮ್ಮ (ಸ್ವ).

ಅಂಬಲಪಾಡಿ ವಾರ್ಡು: ಇರ್ವಿನ್ ಅಂದ್ರಾದೆ (ಕಾಂ. ಸ್ವ).

ಕರ್ನಪಾಡಿ ವಾರ್ಡು: ಗಂಗಯ್ಯ ಸೆಟ್ಟಿಗಾರ (ಕಮ್ಯೂ).

ಕಿನ್ನಿಮೂಲ್ಕಿ ವಾರ್ಡು: ಪಿ. ವೈಕಾ (ಕಾಂ. ಸ್ವ).

ಒಳಕಾಡು ವಾರ್ಡು: ಶ್ರೀ ಕೆ. ಅನಂತ ಶೆಣೈ (ಕಾಂ. ಸ್ವ).

ಬೈಲೂರು ವಾರ್ಡು: ಶ್ರೀ ಎಚ್. ವೆಂಕಟೇಶ ನಾಯ್ಕ (ಕಾಂ. ಸ್ವ.)

ಮೂಡನಿಡಂಬೂರು ವಾರ್ಡು: ಶ್ರೀ ಪಿ. ಶೀನ ನಾಯ್ಕ (ಕಮ್ಯೂ.)

ಕಾಡಬೆಟ್ಟು ವಾರ್ಡು: ಶ್ರೀ ಟಿ. ಎ. ವಾಸುದೇವನ್ (ಕಾಂ. ಸ್ವ.) ಮತ್ತು ಶ್ರೀ ಬಿಳಿಯ (ಕಾಂ. ಸ್ವ.)(ಹರಿಜನರಿಗೆ ಕಾದಿಟ್ಟ ಸ್ಥಾನ.)

ಅಜ್ಜರಕಾಡು ವಾರ್ಡು: ಶ್ರೀ ಎನ್. ಸೀತಾರಾಮ ಕಾಮತ್ (ಸ್ವ.) ಮತ್ತು ಶ್ರೀಮತಿ ಎಲ್. ಎಸ್. ಫೆರ್ನಾಂಡೀಸ್ (ಕಾಂ. ಸ್ವ.)

20 ಮಂದಿ ಮೆಂಬರ ನಗರ ಸಭೆಗೆ ಕಾಂಗ್ರೆಸ್ ಬೆಂಬಲಿತ ಸ್ವತಂತ್ರರು 15 ಮಂದಿಯೂ, ಕಮ್ಯೂನಿಸ್ಟರು 3 ಮಂದಿಯೂ, ಸ್ವತಂತ್ರರು 2 ಮಂದಿಯೂ ಆರಿಸಿ ಬಂದಿರುವರು. ಜನ ಸಂಘದವರಿಗೆ ಒಂದು ಸ್ಥಾನವೂ ದೊರೆಯಲಿಲ್ಲ ಅಲ್ಲದೆ ನಾಲ್ವರು ಇಡುಗಂಟನ್ನು ಕಳಕೊಂಡರು.

ಮಣಿಪಾಲ-ಹ್ಯಾಸ್ಕೂಲಿನ ವರ್ಧಂತ್ಯುತ್ಸವವು ಕಳೆದ ತಾ 28ರಂದು ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕಾಲಗಿ ಶೇಷಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಬಿ. ಶಾಮರಾಯ ಸೆಟ್ಟರು ಸ್ವಾಗತ ಮಾತುಗಳನ್ನಾಡಿ ಶಾಲಾ ವರದಿಯನ್ನೋದಿದರು. ಶ್ರೀ ಬಿ. ಆರ್. ಹೆಗ್ಡೆಯವರು ಸಂದೇಶ ವಾಚನಮಾಡಿದರು. ಶಾಲಾ ಹಳೇ-ವಿದ್ಯಾರ್ಥಿ ಕುಮಾರ ಎಚ್. ಬಾಲಕೃಷ್ಣ ಪ್ರಭುಗಳು ಸ್ವಸ್ತಿವಾಚನಗೈದರು. ಅಧ್ಯಕ್ಷರ ಭಾಷಣಾನಂತರ ವಿದ್ಯಾರ್ಥಿ ನಾಯಕ ಶ್ರೀ ಎಚ್. ಕೃಷ್ಣಮೂರ್ತಿ ತಂತ್ರಿಗಳು ಧನ್ಯವಾದವಿತ್ತರು.

ಮಣಿಪಾಲ ಹ್ಯಾಸ್ಕೂಲಿನಲ್ಲಿ ಎಲ್ಲಾ ಪಾಠಗಳನ್ನು ಆಂಗ್ಲ ಭಾಷೆಯಲ್ಲಿಯೂ ಸಹ (Additional English medium Section) ಕಲಿಸಬಹುದೆಂದು ಮೈಸೂರು ಸಂಸ್ಥಾನದ ವಿದ್ಯಾ ಡೈರೆಕ್ಟರರು ಅನುಮತಿ ಕೊಟ್ಟಿದ್ದು ಮುಂದಿನ ಜೂನ್ ತಿಂಗಳಿಂದ ಅದು ಕಾರ್ಯರೂಪಕ್ಕೆ ಬರುವುದೆಂದು ಶಾಲಾಧಿಕಾರಿಗಳು ಸಾರ್ವಜನಿಕರಿಗೆ ಈ ಮೂಲಕ ತಿಳಿಸುತ್ತಾರೆ.

ಕಡಿಯಾಳಿ ಹಿರಿಯ ಬುನಾದಿ ಶಾಲೆಯ ವಿಜಯ ಬಾಲವೀರ ಹಾಗೂ ಗೈಡ್ಸ್ ಮೊದಲಾದ ದಳಗಳ ಸಂಯುಕ್ತ ಕೂಡುವಿಕೆಯಿಂದ ಕಳೆದ ತಾ25 ರಂದು ಶಿಬಿರಾಗ್ನಿ ಸಮಾರಂಭವು ಡಾ| ವಿ. ಎಲ್. ಪಂಡಿತರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಪೂರ್ವಾಹ್ನ ಪ್ರೊಫೆಸರ್ ಶ್ರೀ ವಿನಾಯಕರಾವ್ ಭಾಪಟ್, ಅವರು ಧ್ವಜಾರೋಹಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಸ್ವಾಗತ ಭಾಷಣ ಮಾಡಿದರು. ಉಡುಪಿ ಉತ್ತರ ಶ್ರೇಣಿಯ ಹಿರಿಯ ಪರೀಕ್ಷಾಧಿಕಾರಿಗಳಾದ ಶ್ರೀ ಎನ್. ವಿಶ್ವನಾಥ ಮೊದಲಾದವರ ಕಾಲೋಚಿತ ಭಾಷಣಗಳಾದುವು. ಅಧ್ಯಕ್ಷ ಭಾಷಣಾನಂತರ ವಿನೋದ ಕಾಲಕ್ಷೇಪವಾಯಿತು.

ಬೀಳೂರು ಪಂಚಾಯತ ಚುನಾವಣೆಯು — ಕಳೆದ ತಾ. 7ರಂದು ನಡೆದು ಶ್ರೀಗಳಾದ ಬಿ. ಸೀನಪ್ಪ ಸೆಟ್ಟರು ಅಧ್ಯಕ್ಷರಾಗಿಯೂ, ಶ್ರೀನಿವಾಸನಾಯಕ್, ಪುಟ್ಟಯ್ಯ ಸೆಟ್ಟಿ, ಚಿಕ್ಕಯ್ಯ ಸೆಟ್ಟಿ, ಭೂಪಾಲಸೆಟ್ಟಿ, ವೆಂಕಟ್ರಮಣಬಾಯರಿ ಮತ್ತು ಜಗನ್ನಾಥಸೆಟ್ಟರು ಸದಸ್ಯರಾಗಿಯೂ ಆರಿಸಲ್ಪಟ್ಟರು.

ಹೆಡುಕಳತ್ತೂರು — ಹಾ| ಎ| ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ವಿದ್ವಾನ್ ಕೆ. ಎಮ್. ಹೊಳ್ಳರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನಡೆಯಿತು.

ಅಂಜಾರು ಹಿರಿಯಡಕ—ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನದಂದು ಶ್ರೀ ಎ. ಜಗಂ ಜೀವ ಹೆಗ್ಡೆಯವರು ಧ್ವಜಾರೋಹಣಗೈದರು. ಅಂಜಾರು ಪಟೇಲ್ ಶ್ರೀ ಕೆ. ಶಂಕರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಭಾಷಣಗಳಾದುವು

ಬಂಟ್ವಾಡಿ — ದಿ ನ್ಯೂ ಏಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಯು. ಅನಂತ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆ ಜರಗಿತು. ಹೆಡ್ಮಾಸ್ಟರ್ ಶ್ರೀ ಪಿಯುಸ್ ಕ್ರಾಸ್ತರು ಧನ್ಯವಾದವಿತ್ತರು.

ಸುರತ್ಕಲ್—ಮಿತ್ರಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆ ಮತ್ತು ಅಗ್ಗಿದ ಕರಿ ಹಾ| ಎ| ಶಾಲೆಗಳಲ್ಲಿ ಧ್ವಜವಂದನೆ, ಭಾಷಣ ಇತ್ಯಾದಿ ಕಾರ್ಯಕ್ರಮಗಳಿಂದ ಪ್ರಜಾದಿನವು ಆಚರಿಸಲ್ಪಟ್ಟಿತು.

ನೀರೆ ಬೈಲೂರು—ಬೋರ್ಡು ಹ್ಯಾಸ್ಕೂಲಲ್ಲಿ ಕಳೆದ ತಾ23ರಂದು ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರವೀಯುವ ಸಮಾರಂಭವು ಹ್ಯಾಸ್ಕೂಲ್ ಹೆಡ್ಮಾಸ್ಟರ್ ಶ್ರೀ ಬಿ. ಎನ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದೀ ಅಧ್ಯಾಪಕ ಶ್ರೀ ಎಸ್. ಎಸ್. ಎನ್ ಉಪಾಧ್ಯಾಯರು ಸ್ವಾಗತಿಸಿದರು. ಡಾ| ಎ. ಕೆ. ಲಕ್ಷ್ಮೀನಾರಾಯಣರಾಯರು ಪ್ರಮಾಣಪತ್ರವಿತರಣೆ ಮಾಡಿದರು. ಶಾಲಾಧ್ಯಾಪಕ ಶ್ರೀ ಬಿ. ರಾಮಕೃಷ್ಣನಾಯ್ಕರು ಧನ್ಯವಾದವಿತ್ತರು

ಉದಿಯಾವರ-ಬಿಲ್ಲವ ಮಹಾಜನಸಂಘದ ವಾರ್ಷಿಕೋತ್ಸವವು ಹಾಗೂ ಭಜನಾಸಪ್ತಾಹವು ಕಳೆದ ತಾ. 10 ರಿಂದ 21ರ ತನಕ ಜರಗಿತು. ಶ್ರೀ ಯು. ಕೃಷ್ಣಪ್ಪ ಸಾಹುಕಾರರು ಸಂಘದ ಸದನಕ್ಕೆ ವಿದ್ಯುತ್-ದೀಪಗಳನ್ನು ಒದಗಿಸಿಕೊಟ್ಟಿರಲ್ಲದೆ ಸಪ್ತಾಹ ದಿನಗಳಲ್ಲಿ ಭೋಜನ ಸಂತರ್ಪಣೆಗೆ ಬೇಕಾದ ಅಕ್ಕಿಯನ್ನು ಸಂಘದ ಅಧ್ಯಕ್ಷ ಶ್ರೀ ಯು. ಎಸ್. ಗಿರಿಯಪ್ಪ ಸಾಹುಕಾರರು ಒದಗಿಸಿಕೊಟ್ಟಿದ್ದರು; ಶ್ರೀ ಯು. ಭಾಸ್ಕರ ಸೆಟ್ಟರು ಮತ್ತು ಮಿತ್ರರು ಸಂಘದ ನಿಧಿಗೆ ಧನ ಸಂಗ್ರಹಿಸಿ ನೆರವಾಗಿದ್ದರು.

ಕುತ್ಪಾಡಿ—ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನವನ್ನು ಶ್ರೀ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಾದಿ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಕಿದಿಯೂರು- ಎಯಿಡೆಡ್ ಹಾ| ಎ| ಶಾಲೆಯಲ್ಲಿ ಶ್ರೀ ಯು. ಲಕ್ಷ್ಮೀನಾರಾಯಣ ಕಿಣಿಯರ ಅಧ್ಯಕ್ಷತೆಯಲ್ಲಿ ಪ್ರಜಾ ದಿನಾಚರಣೆ ನಡೆಯಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ಪದ್ಮನಾಭ ಭಟ್ಟರು ಸ್ವಾಗತ ಭಾಷಣ ಮಾಡಿದರು ನಂತರ ಪಾರಿತೋಷ ವಿತರಣಾದಿಗಳು ಸಾಂಗವಾದುವು.

ಮಂಗಳೂರು ಎಸ್.ಆರ್. ಎಸ್. ಹೋಮಿನ ಸುವರ್ಣ ಮಹೋತ್ಸವವು-ತಾ. 1ರಂದು ಬೆಳಿಗ್ಗೆ ಪಂದ್ಯಾಟ ಮತ್ತು ಫಲಾಹಾರದಿಂದ ಪ್ರಾರಂಭವಾಯಿತು.

ಸಮಾರಂಭಕ್ಕೆ ಬಹುಮಂದಿ ಆಗಮಿಸಿದ್ದರು. ಲಂಡನಿನ ಭಾರತ ಹ್ಯಾಕಮಿಶನಿನ ಸದಸ್ಯರಾದ ಶ್ರೀ ಬಿ. ಎನ್. ಪೂಂಜರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ ಎಮ್. ಹೆಗ್ಡೆಯವರು ಉತ್ಸವವನ್ನು ಉದ್ಘಾಟಿಸಿದರು. ಉಡುಪಿಯ ಎಡ್ವೋಕೇಟ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ವಿದ್ಯಾರ್ಥಿ ಯೂನಿಯನ್ನಿನ ಸ್ವಸ್ತಿವಾಚನ ಮಾಡಿದರು. ಈ ಮೂವರು ಮಹನೀಯರೂ ಹಾಸ್ಟೆಲಿನ ಗಣನೀಯ ಹಳೆ ಸದಸ್ಯರಿರುವರು. ಡಾ|| ಬಿ. ಆರ್. ಹೆಗ್ಡೆ, ಸುಪರಿಂಟೆಂಡೆಂಟ್ ಅವರು ಸ್ವಾಗತ ಭಾಷಣ ಮಾಡಿದರು. ಭಾಷಣಗಳೆಲ್ಲವೂ ಮೇಲ್ಮಟ್ಟದಲ್ಲಿದ್ದುವು.

ಭವನದ ವಿದ್ಯಾರ್ಥಿಗಳಿಂದ ಕನ್ನಡ ಮತ್ತು ತುಳು ನಾಟಕಗಳು ಪ್ರದರ್ಶಿಸಲ್ಪಟ್ಟವು. ನಾಟಕಗಳ ಮಧ್ಯೆ ನೃತ್ಯ ಮೊದಲಾದ ವಿನೋದಾವಳಿಗಳಿದ್ದುವು. ಪಂದ್ಯಾಟ, ಭಾಷಣ, ಪ್ರಬಂಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯಾಯಿತು.

ಉಡುಪಿಯಲ್ಲಿ ಮಂತ್ರಿ ಪಾಟೀಲರು— ಮೈಸೂರು ರಾಜ್ಯದ ಆಹಾರ ಹಾಗೂ ಒಕ್ಕಲುತನ ಮಂತ್ರಿ ಶ್ರೀ ಕೆ. ಎಫ್. ಪಾಟೀಲರು ಕಳೆದ ತಾ. 22ರಂದು ಉಡುಪಿಗೆ ಆಗಮಿಸಿ ಸ್ಥಳೀಯ ಗೋ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆ ಮಾಡಿದರು. ಅದಮಾರು ಮಠದ ಶ್ರೀ ವಿಭುಧೇಶತೀರ್ಥ ಶ್ರೀಪಾದಂಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಯು. ಎಸ್. ನಾಯಕ್, ಎಮ್. ಎಲ್. ಎ. ಅವರು ಪುಷ್ಪಹಾರಗಳನ್ನಿತ್ತರು. ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣಮಾಡಿದರು. ರಾಜ್ಯದ ಪಶು ಇಲಾಖಾಧಿಕಾರಿ ಡಾ| ಕೆ. ಎಸ್. ಸೆಟ್ಟರು ಮಾತನಾಡಿ; ಈ ಆಸ್ಪತ್ರೆಗೆ ಐದು ಎಕ್ರೆ ಜಮೀನನ್ನು ಬೈಲೂರಲ್ಲಿ ದಾನಮಾಡಿದ ಶ್ರೀ ಬಿ. ವಾಸುದೇವರಾಯರನ್ನು ಕೊಂಡಾಡಿದರು, ಸಚಿವರು ಆಹಾರೋತ್ಪಾದನೆ ಜಾಸ್ತಿ ಮಾಡುವ ಆವಶ್ಯಕತೆಯನ್ನು ವಿವರಿಸಿ, ಕೃತಕ ಗರ್ಭಧಾರಣಾ ಕೇಂದ್ರವನ್ನು ಉದ್ಘಾಟಿಸಿದರು. ಶ್ರೀ ಎ. ಜೆ. ಆಳ್ವೆಯವರು ಧನ್ಯವಾದವಿತ್ತರು.

ಮಂತ್ರಿಗಳು ಮಣಿಪಾಲದಲ್ಲಿ ಡಾ| ಮಾಧವ ಪೈಗಳು ಏರ್ಪಡಿಸಿದ ಭೋಜನ ಸತ್ಕಾರದಲ್ಲಿ ಭಾಗವಹಿಸಿದರು. ಭೋಜನಾನಂತರ ಡಾ| ಪೈಗಳು ಎಕೆಡೆಮಿಯ ಶಿಕ್ಷಣಸಂಸ್ಥೆಗಳ ಪರಿಚಯಾತ್ಮಕ ಭಾಷಣ ಮಾಡಿದರು. ಮಂತ್ರಿಗಳು ಉನ್ನತ ಮಟ್ಟದಲ್ಲಿರುವ ಶಿಕ್ಷಣ ಸಂಸ್ಥೆಗಳ ಪ್ರಗತಿಗಾಗಿ ಮೆಚ್ಚಿಗೆ ವ್ಯಕ್ತಪಡಿಸಿ ಒಂದು ಎಗ್ರಿಕಲ್ಚರಲ್ ಸ್ಕೂಲನ್ನು ಇಲ್ಲಿ ತೆರೆಯುವ ಯುಕ್ತತೆಯನ್ನು ವಿವರಿಸಿ ಆ ಕುರಿತು ಡಾ| ಪೈಗಳು ಪ್ರಯತ್ನಿಸಬೇಕೆಂದು ಸೂಚಿಸಿದರು.

ಅಪರಾಹ್ನ ಮಂತ್ರಿಗಳು ಉದಿಯಾವರಕ್ಕೆ ಹೋಗಿ ಮೀನುಗಾರರ ಸಹಕಾರಿ ಮಾರ್ಕೆಟಿಂಗ್ ಸಂಘವನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಟಿ. ಎ. ಪೈಗಳು ವಹಿಸಿದ್ದರು. ರಾಜ್ಯದ ಮೀನುಗಾರಿಕೆಯ ಅಧಿಕಾರಿ ಶ್ರೀ ಕಲ್ಯಾಣಿಯವರು ಭಾಷಣವಿತ್ತರು.

ಪಡುಬಿದ್ರೆ— ಕಾಡಿಪಟ್ಣ ನಡಿಪಟ್ಣ ಮೊಗವೀರ ಮಹಾಜನರ ಹಾಗೂ ವಿದ್ಯಾಪ್ರಚಾರಕ ಸಂಘದ ವತಿಯಿಂದ ಮೈಸೂರು ವಿಧಾನ ಪರಿಷತ್ತಿಗೆ ನಾಮಕರಣ ಹೊಂದಿದ ಡಾ|| ಎಸ್. ಚಂಪ, ಎಮ್. ಎಲ್. ಸಿ. ಯವರನ್ನು ಸನ್ಮಾನಪತ್ರವಿತ್ತು ಗೌರವಿಸುವ ಸಮಾರಂಭವು ತಾ. 27ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಗೋಪಾಲಕೃಷ್ಣರಾಯರು ಸ್ವಾಗತಿಸಿದರು. ಬಳಿಕ ಹಲವರ ಭಾಷಣಗಳಾದುವು

ಪಡುಬಿದ್ರೆ ಗವರ್ನಮೆಂಟ್ ಫಿಷರೀಸ್ ಹಾ| ಎ| ಶಾಲೆಯಲ್ಲಿ ಪ್ರಜಾರಾಜ್ಯ ದಿನಾಚರಣೆಯು ಧ್ವಜವಂದನೆ, ಭಾಷಣಾದಿಗಳಿಂದ ನಡೆಯಿತು

ಪಡುಬಿದ್ರೆ ಪಂಚಾಯತ ಬೋರ್ಡಿನ ಮಾಜಿ, ಅಧ್ಯಕ್ಷ ಶ್ರೀ ಕೆ. ಗೋಪಾಲಹೆಗ್ಡೆಯವರ ನಿಧನದ ಬಗ್ಗೆ ಕಳೆದ ತಾ. 11ರಂದು ದುಃಖಸೂಚಕ ಸಭೆ ಜರಗಿತು.

ಡಾ| ರವಿವರ್ಮ ಹೆಗ್ಡೆಯವರ ವಿದೇಶಗಮನ-ಬೆಂಗಳೂರು ಹೆಬ್ಬಾಳ್ ವೆಟರ್ನರಿ ಕಾಲೇಜಿನ ಲೆಕ್ಚರರಾಗಿದ್ದ ಡಾ| ಕೀತಿಬೆಟ್ಟು ರವಿವರ್ಮ ಹೆಗ್ಡೆ, ಬಿ. ವಿ. ಎಸ್. ಸಿ. ಯವರು (ದಿ ಏಟ್ಟಿಗುತ್ತು ನಾರಾಯಣ ಅಡ್ಯಂತಾಯರ ಪುತ್ರ) ಇದೀಗ ಇಂಡಿಯಾ ಸರಕಾರದ ಸಹಾಯದಿಂದ ಅಮೇರಿಕಾದ ಕಾನ್ಸಸ್ ಸಿಟಿ ಯೂನಿವರ್ಸಿಟಿಯಲ್ಲಿ ಹೆಚ್ಚಿನ ತರಬೇತಿಗಾಗಿ ಕಳೆದ ತಾ 10ರಂದು ನವದೆಹಲಿಯಿಂದ ವಿಮಾನ ಮೂಲಕ ಪ್ರಯಾಣ ಬೆಳೆಸಿದರು.

ಉಡುಪಿಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆ ನಿಮಿತ್ತ ಕಳೆದ ತಾ26 ರಂದು ಬೆಳಿಗ್ಗೆ ಅಜ್ಜರಕಾಡಿನ ಗಾಂಧಿಮೈದಾನದಲ್ಲಿ ನಗರ ಸಭೆಯ ಉಪಾಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರು ಧ್ವಜಾರೋಹಣ ಮಾಡಿದರು ಸಂಜೆ ಸಾರ್ವಜನಿಕ ಸಭೆಯು ಶ್ರೀ ರೋಬಿ ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿ ಪಾರಿತೋಷ ವಿತರಣೆ ಮೊದಲಾದ ಕಾರ್ಯಕ್ರಮಗಳಾದುವು. ಲ್ಯಾಫ್ ಇನ್ಶೂರೆನ್ಸ್ ಕಾರ್ಪೊರೇಶನಿನ ಉಡುಪಿ ಡಿವಿಜನಿನ ನೌಕರರು ತಮ್ಮ ನಾಯಕ ಶ್ರೀ ಕೆ. ಆರ್. ಕೆ. ಭಟ್ಟರ ನೇತೃತ್ವದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ವರದೇಂದ್ರ ಕಲಾಮಂದಿರದಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರದರ್ಶಿಸಿ ಪ್ರಜಾದಿನವನ್ನು ಆಚರಿಸಿದರು.

ಅಂಚೆತಂತಿ ನೌಕರರ ಕ್ಲಬ್ಬಿನ ಕ್ರೀಡಾ ವಾರ್ಷಿಕೋತ್ಸವವು ಲ್ಯಾಫ್ ಇನ್ಶೂರೆನ್ಸ್ ಕಾರ್ಪೊರೇಶನಿನ ಉಡುಪಿ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಅಪ್ಪಾ. ಕೆ. ಆರ್. ಕೆ. ಭಟ್ಟರು ಬಹುಮಾನ ವಿತರಣೆ ಮಾಡಿದರು. ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಎಂ. ಕೆ. ಅಪ್ಪಾದೊರೈ, ಅವರು ಉತ್ಸವವನ್ನು ಉದ್ಘಾಟಿಸಿದರು.

ನಗಳನ್ನೂ ತಲಾ ರೂ. ೧೦೦ರ ಐದು ಬಹುಮಾನಗಳನ್ನೂ ಈಯಲಾಗುವುದು.

ಶ್ರೀಮತಿ ಇಂದಿರಾಗಾಂಧಿ

ಈಗಾಗಲೇ ತಮ್ಮ ಅವಧಿಯು ಮುಗಿದುದರಿಂದ ತಮ್ಮ ಹುದ್ದೆಗೆ ರಾಜೀನಾಮೆಯಿತ್ತ ಕಾಂಗ್ರೆಸ್ ಅಧ್ಯಕ್ಷರ ಸ್ಥಾನವೀಗ ಶ್ರೀಮತಿ ಇಂದಿರಾ ಗಾಂಧಿಯವರಿಂದ ಪೂರ್ಣಗೊಳಿಸಲ್ಪಟ್ಟಿತು ಆಂಧ್ರ, ಬಿಹಾರ, ಮುಂಬಯಿ, ಕೇರಳ, ಮದರಾಸು, ಉತ್ತರ ಪ್ರದೇಶ ಮೊದಲಾದೆಡೆಗಳಿಂದ ಶ್ರೀಮತಿ ಗಾಂಧಿಯವರಿಗೆ ಬೆಂಬಲವು ಕಂಡುಬಂದಿದೆ. ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರ ನಾಮಪತ್ರವೂ ಬಂಗಾಳದವರ ಸಹಾಯದಿಂದ ಸಲ್ಲಿಸಲ್ಪಟ್ಟಿತ್ತಲ್ಲದೇ ಶ್ರೀ ಕುಂಭರಾಮ ಆರ್ಯರ ಹೆಸರನ್ನು ರಾಜಸ್ಥಾನದವರೂ ಸೂಚಿಸಿದ್ದರು. ಆದರೆ, ಅಂತ್ಯದ ಗಳಿಗೆಯಲ್ಲಿ ಶ್ರೀ ಕುಂಭರಾಮರ ನಾಮಪತ್ರವು ರದ್ದಾಗಿ, ಶ್ರೀ ನಿಜಲಿಂಗಪ್ಪನವರು ಚುನಾವಣಾರಂಗದಿಂದ ಹಿಂದೆಸರಿದು, ತಮ್ಮ ನಾಮಪತ್ರವನ್ನು ಹಿಂತೆಗೆದುಕೊಂಡರು. ನೂತನಾಧ್ಯಕ್ಷಿಣಿ ಶ್ರೀಮತಿ ಇಂದಿರ ಗಾಂಧಿಯವರು ಇದೇ ತಿಂಗಳ ೮ನೆ ದಿನಾಂಕ ಶ್ರೀ ಯು. ಎನ್. ದೇಭರಿಂದ ಅಧಿಕಾರ ಸ್ವೀಕರಿಸುವರು. ಆ ಮೇಲೆ ಅವರು ಹೊಸ ಕಾರ್ಯಕಾರೀ ಸಮಿತಿಯನ್ನು ರಚಿಸುವರು.



ಲಂಡನ್ನಿನ ಮೆಟ್ರೊಪೊಲಿಟನ್ ಪೋಲೀಸ್‌ನ ಥೇಮ್ಸ್ ನದಿ ಸಾರಿಗೆಗೆ ಸೇರಿಸಲ್ಪಟ್ಟ ೬೫ ಕುದುರೆ ಬಲವಿರುವ ೩೦ ಅಡಿ ಉದ್ದದ ಅತ್ಯಾಧುನಿಕ ಮಾದರಿಯ ಲಾಂಚ್.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ)

ಮಿಲನ—(ಸಾಮಾಜಿಕ ನಾಟಕ). ಬರೆದವರು ಮತ್ತು ಪ್ರಕಾಶಕರು: ಯಂ. ವೀರಪ್ಪ, ವಿದ್ಯಾರ್ಥಿ, ಗವರ್ನಮೆಂಟ್ ಕಾಲೇಜು, ಮಂಗಳೂರು, ದ.ಕ. ಪುಟಗಳು: ೩೩, ಬೆಲೆ: ೦–೬೨.

ಸುಪ್ರಸಿದ್ಧ ನಾಟಕಕರ್ತರೂ ನಾಟಕರಂಗದಲ್ಲಿ ಹಿರಿಯ ಸ್ಥಾನದಲ್ಲಿರುವವರೂ ಆದ ವಿದ್ವಾನ್ ಬೇಲಗದ್ದೆ ಅಪ್ಪಯ್ಯನವರು ಮುನ್ನುಡಿಯಿಟ್ಟು ಹರಸಿದ "ಮಿಲನ"ವೆಂಬೀ ಕಿರುನಾಟಕವು ಶ್ರೀ ವೀರಪ್ಪನವರ ಚೊಚ್ಚಲ ಕೃತಿಯಾಗಿದೆ. ತನ್ನ ಕುಕರ್ಮಗಳನ್ನು ಮುಚ್ಚಿಟ್ಟು ಶ್ರೀಮಂತ ಸುಬ್ಬಯ್ಯನ ಸ್ನೇಹವನ್ನು ಸಂಪಾದಿಸಿ ಆತನನ್ನು ತನ್ನ ಸಾಕು ಮಗಳು ಶಾರದೆಯ ಮೂಲಕ ಒಲಿಸಿ ಆತನ ಸಂಪತ್ತನ್ನು ಸೂರೆಗೊಳ್ಳಲು ಹವಣಿಸಿದ ಸೀತಾರಾಮಯ್ಯನವರು ಪೋಲೀಸು ಅಧಿಕಾರಿಗಳ ಹತೋಟಿಯಲ್ಲಿಟ್ಟುಕೊಳ್ಳಲು ಸಮರ್ಥರಾಗುತ್ತಾರೆ. ತನ್ನ ವಂಚನೆಯ ಪ್ರಕರಣಕ್ಕೆ ಕಂಟಕಪ್ರಾಯರೆನಿಸಿದ ಶಿವಪ್ಪಯ್ಯ ಮತ್ತು ಶೇಖರರನ್ನು ಮುಗಿಸಿಬಿಡುವ ಹಂಚಿಕೆಯಲ್ಲಿ ಅರ್ಧ ಯಶಸ್ವಿಯಾಗುತ್ತಾರೆ. ಇನ್ಸ್ಪೆಕ್ಟರ ಕೇಶವರಾಯರೂ ಈ ಕಾರ್ಯದಲ್ಲಿ ಸಹಾಯಕರಾಗಿ ಶೇಖರನನ್ನು ಕೊಲೆಯ ಅಪರಾಧದ ಗುಮಾನಿಯ ಮೇಲೆ ಸೆರೆಹಾಕುತ್ತಾರೆ. ಆದರೆ, ಕೇಶವರಾಯರಿಗೆ ವರ್ಗವಾಗಿ ಇನ್ಸ್ಪೆಕ್ಟರ ಮಾಧವರಾಯರು ಬಂದಾಗ, ಸೀತಾರಾಮಯ್ಯನವರ ಗುಟ್ಟು ಕಾರಸ್ಥಾನವೆಲ್ಲ ರಟ್ಟಾಗಿ ಹೋಗಿ ಶಿಕ್ಷೆಯನ್ನು ಅನುಭವಿಸಬೇಕಾಗುವುದು. ಶೇಖರ ಮತ್ತು ಶಾರದೆಯರ ಪ್ರೇಮ, ವಿರಹದಿಂದ ಪುನೀತವಾಗಿ ಅವರ ಮಿಲನವಾಗುವುದು.

ಶಾರದೆ ಮತ್ತು ಶೇಖರರ ಮಿಲನದಿಂದಲೇ ಇದಕ್ಕೆ ಆ ಹೆಸರನ್ನೀಯಲಾಗಿದೆ. ಕಥೆಯು ಪತ್ತೇದಾರಿ ಪದ್ಧತಿಯಿಂದ ಸಾಗಿರುವುದೆಂದು ಹೇಳಲಾಗಿದ್ದರೂ, ಅದೇನೂ ಯಶಸ್ವಿಯಾಗಿಲ್ಲ. ಕೊನೆಯಲ್ಲಿ ಒಂದೇ ಬಾರಿಗೆ ತನ್ನ ಪೂರ್ವ ಚರಿತ್ರೆಯನ್ನೆಲ್ಲಾ ಬಿಡಿಬಿಡುವ ಸೀತಾರಾಮಯ್ಯನ ಮಾತುಗಳು ಕೋರ್ಟಿನಲ್ಲಿ ಆರೋಪಿಯ ಹೇಳಿಕೆಯಂತೆಯೇ ಇದೆ; ಆದರೆ, ಅದಕ್ಕೆ ಸನ್ನಿವೇಶ ಮಾತ್ರ ಹೊಂದಿಕೊಂಡು ಬಂದಿಲ್ಲ. ಕಥಾದೃಷ್ಟಿಯಿಂದ ವಸ್ತು ತೀರ ಸಾಮಾನ್ಯವೇ ಆಗಿದೆ. ಶೇಖರನ ಪಾತ್ರ ಇದ್ದುದರಲ್ಲಿ ತೃಪ್ತಿಕರವಾಗಿರುವುದಾದರೂ ಭಾವನಾತ್ಮಕತೆಯು ಅತಿರೇಕಕ್ಕೆ ಎಡೆಕೊಟ್ಟು ವಾಸ್ತವಿಕತೆಗೆ ದೂರವಾದಂತೆ ಭಾಸವಾಗುತ್ತದೆ. ನಾಟಕದ ದೃಶ್ಯಗಳು ಅಭಿನಯಕ್ಕೆ ಹೊಂದಿಕೊಳ್ಳುವುದೂ ಕಷ್ಟ. ಹೀಗೆ ಈ ನಾಟಕವು ನೀರಸವಾಗಿಯೇ ಇದೆ. ಭಾಷೆಯು ಉತ್ತಮವಿದ್ದರೂ, ಪಾತ್ರಾ ಪಾತ್ರತೆಯ ಕಡೆಗೆ ಗಮನವೀಯದಿರುವುದು ಗೋಚರವಾಗುತ್ತದೆ.

"ಬರಬರುತ್ತ ಇವರು ಎಲ್ಲ ನೋಟಗಳಿಂದಲೂ ಅಚ್ಚುಕಟ್ಟಾದ, ಸಮಾಜ ಸುಧಾರಣೆಗೆ ಹಿತಕರವಾದ ಇದಕ್ಕಿಂತಲೂ ಗಂಭೀರವಾದ ಉತ್ತಮ ವಿಷಯಗಳನ್ನಾಯ್ದು ಬರೆಯುವಂತಾಗಲೆಂದು ನಾವೂ ಆಶಿಸುತ್ತೇವೆ.

ನಾರೀ ಲೋಕದಲ್ಲಿ ನಾರದರು—(ನಾಟಕ) ಲೇಖಕರು ಶ್ರೀ ಹೆಚ್. ಆರ್ ನಾಗೇಶರಾವ್, ಪ್ರಕಾಶಕರು: ಚಾತಕ ಪ್ರಕಾಶನ, 47, ಜರ್ನಲಿಸ್ಟ್ಸ್ ಕಾಲೊನಿ, ಶ್ರೀ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು–೨. ಪುಟಗಳು ೫೭, ಬೆಲೆ: ರೂ. 0—೭೫.

ಬೆಂಗಳೂರು ಆಕಾಶವಾಣಿ ಕೇಂದ್ರದವರು ೧೯೫೭ರ ಆದಿ ಭಾಗದಲ್ಲಿ ನಡೆಸಿದ "ನರ ಲೋಕದಲ್ಲಿ ನಾರದರು" ಎಂಬ ವಿನೋದ ಶಬ್ದ ಚಿತ್ರಮಾಲೆಯ ನಡುವೆ ಪ್ರಸಾರವಾಗಿದ್ದ ಮೂಲಕೃತಿಯನ್ನೇ ವಿಸ್ತರಿಸಿ ಲೇಖಕರು ಈ ಪ್ರಹಸನವನ್ನು ಬರೆದಿದ್ದಾರೆ. ಸ್ತ್ರೀ-ಪುರುಷರ ನಡುವೆ ಸಮಾನತೆಯು ಬೆಳೆಯುತ್ತ ಹೋಗಿ ಸಮಾಜದಲ್ಲಿ ಸ್ತ್ರೀಯರು ಪುರುಷರಿಗಿಂತಲೂ ಉನ್ನತಾಧಿಕಾರಗಳಲ್ಲಿ ರಾರಾಜಿಸಿ, ಎಲ್ಲೆಲ್ಲಿಯೂ ಹಾರಾಡುತ್ತಿರುವ ಈ ಕಾಲದಲ್ಲಿ ನಾರದರು ಭೂಮಿಗಿಳಿದರೆ ಆಗಬಹುದೆಂದು ಊಹಿಸಿ ಬರೆದ ಪರಿಸ್ಥಿತಿ ವಿವೇಚನೆಯು ಪ್ರಹಸನವಿದು. ತೀರ ಕಲ್ಪನೆಯಾದುದರಿಂದ ಉತ್ಪ್ರೇಕ್ಷೆಯಿಲ್ಲಿ ಕೋಡಿ ಹರಿದಿದೆ. ಮಹಿಳೆಯರು ಎಷ್ಟರಮಟ್ಟಿಗೆ ಮುಂದರಿದಿದ್ದಾರೆಂದು ಇಲ್ಲಿ ವಿವರಿಸಲಾಗಿದೆ

ಪ್ರಹಸನದ ಪ್ರತಿ ಸನ್ನಿವೇಶವೂ ಮನೋಹರಕವಾಗಿಯೂ ಉತ್ಪ್ರೇಕ್ಷಾ ಭರಿತವಾಗಿಯೂ ಇದ್ದು ವಾಚನೀಯವಿದೆ. ಹಾಸ್ಯ ಪ್ರಧಾನವಾದ ಈ ನಾಟಕ ಅಭಿನಯಕ್ಕೆ ಬರುವುದು ಕಷ್ಟವಾದರೂ ಓದಲಿಕ್ಕೆ ಅನುಕೂಲವಾಗಿಯೇ ಇದೆ. ಒಂದು ತಾಸಿನ ಮನೋರಂಜನೆಗೆ ಸಹಾಯಕವಾಗಿದೆ. ಒಂದು ಬಾರಿ ಓದಿ ಆನಂದಿಸಬಹುದಾದ ಕೃತಿಯಿದು.

—ಗೋರಾ

ಭಾರತೀಯ ಮಹಾಪುರುಷರು— ಲೇಖಕರು: ಎಸ್. ಗೋಪೀಚಂದ ರಾವ್ ವಿದ್ವಾನ್, ವಿಶಾರದ. ಪ್ರಕಾಶಕರು: ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಉಡುಪಿ. ಪುಟ: ೧೨೪. ಬೆಲೆ: ರೂ. ಒಂದೂವರೆ

ನಮ್ಮ ಭಾರತ ದೇಶ ಅನೇಕ ಮಹಾನ್ ವ್ಯಕ್ತಿಗಳಿಗೆ ಜನ್ಮವಿತ್ತಿದೆ. ಮಹಾರಾಜರು, ಮತಸ್ಥಾಪಕರು, ತತ್ವಜ್ಞಾನಿಗಳು ರಾಜಕಾರಣ ಪಟುಗಳು ಮೊದಲಾದ ಮಹಾನುಭಾವರು ನಮ್ಮಲ್ಲಿ ಅನೇಕ ಜನರಿದ್ದಾರೆ. ಅಂತಹ ಆದರ್ಶ ವ್ಯಕ್ತಿಗಳ ಜೀವನಧಾರೆಯನ್ನು ತಿಳಿದುಕೊಂಡು ನಾವು ಅವುಗಳನ್ನು ಕಾರ್ಯಾಚರಣೆಗೆ ತರುವುದು ಇಂದಿನ ಪರಿಸ್ಥಿತಿಯಲ್ಲಿ ಅತ್ಯವಶ್ಯವಾಗಿದೆ.

'ಭಾರತೀಯ ಮಹಾಪುರುಷರು' ಎಂಬ ಈ ಸಂಗ್ರಹವು ಈ ದಿಶೆಯಲ್ಲಿ ನಡೆದೊಂದು ಲಘು ಪ್ರಯತ್ನವೆನ್ನಬಹುದು. ಇದರಲ್ಲಿ ೧೨ ಮಹಾವ್ಯಕ್ತಿಗಳ ವ್ಯಕ್ತಿಚಿತ್ರಗಳಿವೆ. ಅವರ ಜೀವನ ಚಿತ್ರದೊಂದಿಗೆ ಅವರು ಜಗತ್ತಿಗೆ ಸಾರಿದ, ಮಾನವನ ಬಾಳ್ವೆಯನ್ನು ಹಸನಾಗಿಸಬಹುದಾದ ಉಪದೇಶಗಳನ್ನು ಸಂಗ್ರಹಿಸಿ ಇಲ್ಲಿ ನೀಡಲಾಗಿದೆ. ಇಲ್ಲಿ ಐತಿಹಾಸಿಕ ಪುರುಷರಾದ ಪ್ರತಾಪಸಿಂಹ, ಶೇರಶಹ ಸೂರಿ, ಸಾಮ್ರಾಟ ಅಶೋಕ, ಪುರಂದರದಾಸ್, ಪುರಾಣ ಪುರುಷರಾದ ಗೌತಮ ಬುದ್ಧ, ಏಕಲವ್ಯ ಮತ್ತು ಇಂದಿನ ರಾಜಕಾರಣ ಪಟು ರಾಜಗೋಪಾಲಾಚಾರಿ, ಭಾರತೀಯ ಸಸ್ಯ ವಿಜ್ಞಾನಿ ಶ್ರೀ ಜಗದೀಶ ಚಂದ್ರ ಬೋಸ್, ಭಾರತೀಯ ತತ್ವ ಶಾಸ್ತ್ರವೇತ್ತ ಡಾ. ರಾಧಾಕೃಷ್ಣನ್, ಮಹಾ ಯೋಗಿ ಶ್ರೀ ಅರವಿಂದ ಘೋಷ್, ಸ್ವಾತಂತ್ರ್ಯ ಸಮರದ ಸಮರ್ಥ ಸೇನಾನಿ ಬಾಲಗಂಗಾಧರ ತಿಲಕ, ಭೂದಾನಯಜ್ಞದ ಪ್ರವರ್ತಕ ಹಾಗೂ ಯುಗಪುರುಷ ಆಚಾರ್ಯ ವಿನೋಬಾರವರ ಜೀವನ ಚಿತ್ರಗಳನ್ನು ಸಂಗ್ರಹಿಸಿ ಕೊಡಲಾಗಿದೆ.

ಇದರಲ್ಲಿರುವ ಕೆಲ ವ್ಯಕ್ತಿಗಳ ಚಿತ್ರ ಈ ಮೊದಲೆ ಕೆಲ ಪುಸ್ತಕಗಳಲ್ಲಿ ಸಂಗ್ರಹವಾಗಿದ್ದರೂ, ಶೇರಶಹ ಸೂರಿ ಏಕಲವ್ಯ ಮೊದಲಾದವರ ಜೀವನಚಿತ್ರ ನಮಗೆಲ್ಲಾ ಹೊಚ್ಚಹೊಸತಾಗಿದೆ. ಇನ್ನು ಉಳಿದ ಹಲವಾರು ಮಹಾತ್ಮರ ಪರಿಚಯವನ್ನು ಮುಂದೆಮಾಡಿಕೊಡುವ ಅವರ ಆಲೋಚನೆ ಸ್ವಾಗತಾರ್ಹವಾಗಿದೆ. ಆದರೆ ಮುಂದಿನ ಸಂಗ್ರಹದಲ್ಲಿ ಅವರು ಇದುತನಕ ಕನ್ನಡದಲ್ಲಿ ಸಂಗ್ರಹವಾಗದವರ ಜೀವನ ಚಿತ್ರವನ್ನು ಬರೆಯುವುದು ಉತ್ತಮವಾಗಿದೆ. ಲೇಖಕರ ಶೈಲಿ ಅತ್ಯುತ್ತಮವಾಗಿದೆ.... ಶ್ರೀ ಅರವಿಂದರೊಬ್ಬರು ಯೋಗಿ. ಬಾಹ್ಯ ದೃಷ್ಟಿಯಿಂದ ಅವರೊಬ್ಬ ವಿರಾಟ, ಮೌಲಿಕ ಪ್ರತಿಭಾಸಂಪನ್ನ, ದೇಶಪ್ರೇಮಿ, ಮಹಾ ಪಂಡಿತ ಮತ್ತು ಶ್ರೇಷ್ಠ ಚರಿತರಾಗಿರುವ ಮಹರ್ಷಿ. ಅಂತರಿಕವಾಗಿ ಯೋಗೀಶ್ವರ, ಬ್ರಹ್ಮದರ್ಶಿ, ಬ್ರಹ್ಮಜ್ಞಾನಿ ಮತ್ತು ಯೋಗಿ– ಇದು ಅವರ ಗಡುತರ ಶೈಲಿಯ ಒಂದು ನಿದರ್ಶನವಾಗಿದೆ. ಅಂತು ಈ ಪುಸ್ತಕ ಸಂಗ್ರಹಯೋಗ್ಯವಾಗಿದೆ. ಅವರ ಮೊದಲ ಪ್ರಯತ್ನವು ಜಯಪ್ರದವಾಗಿದೆ. ಪುಸ್ತಕದ ಕಾಗದ, ಮುದ್ರಣ ಆಕರ್ಷಕವಿದೆ.

—ಕುಂತಲಾಪ್ರಿಯ

ಸಾದರ ಸ್ವೀಕಾರ

೧. **ಶೋಭನ ಗೀತೆ**— ಕವಿ: ಪುಂಡೂರು ದಾಮೋದರ ಪುಣಿಂಚಿತ್ತಾಯ ಪ್ರಕಾಶಕರು: ವಿಶ್ವರೂಪ ಸಾಹಿತ್ಯ ವಿಸ್ತರಣ, ಪುಂಡೂರು, ನೆಕ್ರಾಜೆ, ಪೆರಡಾಲ. ಪದ್ಯಗಳು. ೪೦, ಬೆಲೆ: ರೂ. 0—12—0

೨. **ವಿಕಾರಿ ಸಂವತ್ಸರದ ಶಾಸ್ತ್ರಸಿದ್ಧ ಶ್ರೀಕೃಷ್ಣ ಪಂಚಾಂಗ**— ಸಂಪಾದಕರು: ಕರಂಬ ಕೃಷ್ಣಬನ್ನಿಂತಾಯ ಮತ್ತು ಮರಕಿಣಿ ರಾಮಚಂದ್ರಾಚಾರ್ಯ. ಪುಸ್ತಕ ದೊರೆಯುವ ಸ್ಥಳ: ಕರಂಬ ಕೃಷ್ಣ ಬನ್ನಿಂತಾಯ, ವಿಟ್ಲ. ಪುಟಗಳು: ೬೦. ಬೆಲೆ: ರೂ 0—೬—0.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

ದಿ ಕೆಥೋಲಿಕ್ ಬೇಂಕ್, ಲಿಮಿಟೆಡ್, ಶಿರ್ವ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಕ್ರಮ ಪ್ರಕಾರ ರಿಜಿಸ್ತ್ರಿನೋಟೀಸು ಕೊಟ್ಟಲ್ಲಿ ಸಹಾ ಮರುಪಾವತಿ ಮಾಡದಿರುವುದರಿಂದ, ಸದರಿಯವರಿಗೆ ವ ಸದರಿಯವರು ಮೃತಪಟ್ಟಲ್ಲಿ ಸದರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು ತಾ10-2-59ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 14-2-59ನೇ ಶನಿವಾರ ಮಧ್ಯಾಹ್ನ ಘಂಟೆ 12ಕ್ಕೆ ಯಾ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
33 / 362	ಗೋಪಾಲ ಸೆಟ್ಟಿ, N o ಹೊನ್ನಯ್ಯ ಸೆಟ್ಟಿ, ಪಳ್ಳಿ, ಕಲ್ ಕೊಡಂಗೆ ಮನೆ, P. O. ಕುಡ್ತಕುಮೇರಿ.	210 00
378	ತೋಮಸ್ ಮೆಂಡೋನ್ಸ. S/o ಸಿಲ್ವೆಸ್ತರ್ ಮೆಂಡೋನ್ಸ, ಕುಡ್ತಬೈಲು, P O. ಕುಡ್ತಕುಮೇರಿ.	25 00
1073	ಸುಂದರ ಸೆಟ್ಟಿ, N/o ನಾರಾಯಣ ಸೆಟ್ಟಿ, ಬೊಮ್ಮಾರ್ ಬೆಟ್ಟು, ಕೊಲ್ಯಾರ್, ಪಡುಬೋಗ, P.O ಹಿರಿಯಡ್ಕ.	100 00
34 / 159	ಲೋರೆನ್ಸ್ ಡಿ'ಸೋಜ, S/o ಮರ್ಸಿನ್ ಡಿ'ಸೋಜ, ಬೂತಬೆಟ್ಟು, ಶಿರ್ವ P. O	20 00
177	ಲಕ್ಷ್ಮೀನಾರಾಯಣ ಭಟ್ಟ, S/o ಶ್ರೀನಿವಾಸ ಭಟ್ಟ, ಕಟ್ಟಿಂಗೇರಿ, P O ಮೂಡುಬೆಳ್ಳೆ	50 00
322	ಸಿಲೆಸ್ತೀನ್ ಮೋನಿಸ್, W/o ಆಗೊಸ್ತಿನ್ ಮೋನಿಸ್, ತಂಕರಪಲ್ಕೆ, P. O. ಶಿರ್ವ.	115 00
339	ಲೂಸಿ ಮೆಂಡೋನ್ಸ, W/o ಗ್ರಿಗೋರಿ ಸೊರೊನ್ಸ, ಪಾಂಬೂರು, P. O. ಮೂಡುಬೆಳ್ಳೆ.	30 00
470	ಅಂದ್ರು, ಎಸ್. ಪಿಂಟೋ, S/o ಆಂತೋನಿ ಪಿಂಟೋ, ಬಡಗು ಪಂಜಿಮಾರ್, P. O ಬಂಟಕಲ್ಲು.	15 00
519	ಮರ್ತಿಸ್ ಡಿ'ಸೋಜ, W/o ಬೇಪ್ಟಿಸ್ಟ್ ಲೋಬೊ, ತೊಟ್ಲಗುರಿ, P. O. ಶಿರ್ವ.	30 00
2200	ಎಮ್. ಶಿವರಾಯ ಆಚಾರಿ, S/o ತಿಮ್ಮಪ್ಪ ಆಚಾರಿ, ನ್ಯಾರ್ಮ, P. O. ಶಿರ್ವ.	20 00

Office of The Catholic Bank, Ltd.,
Shirva, 2-2-1959

E. D'CUNHA
Agent.

ಗ್ರಾಮ ಪಂಚಾಯತು

ಗ್ರಾಮದೇಳಿಗೆಯ ಪ್ರಮುಖ ಕಾರ್ಯಕ್ಷೇತ್ರ

ಆಡಳಿತಾನನುಭವ, ಆರ್ಥಿಕದುಸ್ಥಿತಿಗಳಿಂದ ಗ್ರಾಮ ಪಂಚಾಯತುಗಳು ಕಾರ್ಯಾಸಕ್ತಿ ತೋರಿಸುತ್ತಿಲ್ಲ.

ಪ್ರತಿಯೊಂದು ಗ್ರಾಮದ ಉನ್ನತಿಗೆ ಮುಖ್ಯವಾಗಿ "ಆಧಾರ"ವಾಗುವ ಮೂರು ಸಂಸ್ಥೆಗಳ ಪೈಕಿ ಗ್ರಾಮ ಪಂಚಾಯತಿಯೂ ಒಂದು. ಪ್ರಧಾನಿ ನೆಹರೂರವರು ಈ ವಿಷಯದ ಕಡೆಗೆ ಆಗಾಗ ಜನತೆಯ ಗಮನವನ್ನು ಸೆಳೆಯುತ್ತಿರುವರು. ಭಾರತದಲ್ಲಿ ಗ್ರಾಮರಾಜ್ಯ ಯಶಸ್ವಿಯಾಗಬೇಕಾದರೆ ಪ್ರತಿಯೊಂದು ಗ್ರಾಮದ ಪಂಚಾಯತಿ ನಿರ್ವಹಿಸಬೇಕಾದ ಕಾರ್ಯ ಬಹಳವಿದೆ.

ಗ್ರಾಮ ಪಂಚಾಯತಿಗಳು ನಿನ್ನೆಮೊನ್ನೆ ಹುಟ್ಟಿಕೊಂಡ ಸಂಸ್ಥೆಗಳಲ್ಲ. ಇವು ಅನಾದಿಕಾಲದಿಂದಲೂ ಇವೆಯಾದರೂ ಇವುಗಳಿಗೆ ಶಾಸನದ ಮೂಲಕ ಒಂದು ಮಹತ್ವದ ಸ್ಥಾನ ದೊರೆತುದು ಬ್ರಿಟಿಷರ ಆಳ್ವಿಕೆಯ ಉತ್ತರಾರ್ಧ ಸಮಯದಲ್ಲಿ, ಎಂದು ಹೇಳಬಹುದು. ಆದರೂ ಅವುಗಳ ಕಾರ್ಯವ್ಯಾಪ್ತಿಗೆ ಅನೇಕ ಇತಿಮಿತಿಗಳು ಇದ್ದುವು. ಅಲ್ಲದೆ ಗ್ರಾಮದಲ್ಲಿನ ಪಕ್ಷ ವೈಷಮ್ಯದಿಂದಾಗಿ ಇವು ಯಶಸ್ವಿ ಪಾತ್ರ ವಹಿಸಲು ಅಸಮರ್ಥವಾಗಿವೆ.

ಈ ಅಸಹಾಯಕ ಪರಿಸ್ಥಿತಿಯಿಂದ ಗ್ರಾಮ ಪಂಚಾಯತಿಗಳನ್ನು ಪಾರುಮಾಡಿ, ನಮ್ಮ ದೇಶದಲ್ಲಿ ಗ್ರಾಮಾಂತರ ಜೀವನದ ಸುಧಾರಣೆಗೆ ಗ್ರಾಮಪಂಚಾಯತಿಗಳ ಮೂಲಕ ಉತ್ತಮ ಅಡಿಪಾಯ ಹಾಕಲು ೧೯೫೦ರಲ್ಲಿ ಪ್ರಥಮತಃ ಒಂದು ದೊಡ್ಡ ಪ್ರಯತ್ನ ನಡೆಯಿತು. ರಾಜ್ಯಾಂಗದ ೪೦ನೆಯ ವಿಧಿ ಗ್ರಾಮಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಅವು ಸ್ವಯಮಾಡಳಿತಾಧಿಕಾರವುಳ್ಳ ಘಟಕಗಳಾಗಿ ಕೆಲಸಮಾಡುವಂತೆ ಮಾಡಿತು.

ಅದಕ್ಕನುಗುಣವಾಗಿ, ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸಹ ಗ್ರಾಮ ಪಂಚಾಯತಿಗಳಿಗೆ ವಿಶೇಷ ಜವಾಬ್ದಾರಿ ವಹಿಸಿಕೊಡುವ ಪ್ರಯತ್ನ ನಡೆಯಿತು. ಎಲ್ಲ ಗ್ರಾಮಾಭಿವೃದ್ಧಿ ಕಾರ್ಯ ಗ್ರಾಮ ಪಂಚಾಯತಿಗಳ ಮೂಲಕವೇ ಆಗಬೇಕೆಂಬುದು ಮುಖ್ಯ ಉದ್ದೇಶವಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಹಲವು ರೀತಿಯ ವಿಶಿಷ್ಟ ಜವಾಬ್ದಾರಿಗಳನ್ನು ಗ್ರಾಮ ಪಂಚಾಯತಿಗಳಿಗೆ ವಹಿಸಿಕೊಡಲಾಯಿತು. ವ್ಯವಸಾಯೋತ್ಪನ್ನದ ಕಾರ್ಯಕ್ರಮ ಸರ್ಕಾರದ ನೆರವು ಪಡೆಯಲು ಕೈಗೊಳ್ಳಬೇಕಾದ ಕಾರ್ಯ, ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಸ್ವಯಂ ಸೇವಕರ ತಂಡವನ್ನು ಸಿದ್ಧಗೊಳಿಸುವುದು—ಇವೇ ಮೊದಲಾದ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತಿಗಳೇ ಕೈಗೊಳ್ಳುವಂತೆ ವ್ಯವಸ್ಥೆ ಮಾಡಲಾಯಿತು.

ಸಾಮುದಾಯಿಕ ಅಭಿವೃದ್ಧಿ ಯೋಜನೆಯೊಂದಿಗೆ ಗ್ರಾಮ ಪಂಚಾಯತಿಗಳ ಪಾತ್ರವೂ ತಾನೇ ತಾನಾಗಿ ಬೆಳೆಯಿತು; ಮತ್ತು, ಯೋಜನೆಯ ಯಶಸ್ಸಿಗೆ ಗ್ರಾಮ ಪಂಚಾಯತಿಗಳೇ ಮುಖ್ಯ ಕಾರ್ಯಕ್ಷೇತ್ರಗಳಾದುವು. ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಗುರಿ ಗ್ರಾಮದ ಸರ್ವತೋಮುಖ ಏಳಿಗೆ. ಉತ್ಸಾಹಶಾಲಿ ಗ್ರಾಮಸ್ಥರನ್ನು ಸಂಘಟಿಸಿ ಅವರ ಮೂಲಕ ಗ್ರಾಮಾಭಿವೃದ್ಧಿ ಕಾರ್ಯ ಮಾಡಿಸುವ ಪ್ರಯತ್ನದಲ್ಲಿ ಗ್ರಾಮ ಪಂಚಾಯತಿಗಳ ಸಹಕಾರವಿಲ್ಲದೆ ಏನು ತಾನೇ ಮಾಡಲು ಸಾಧ್ಯ?

ಅಂತೆಯೇ ಗ್ರಾಮ ಪಂಚಾಯತಿಗಳ ಸಂಖ್ಯೆಯ ವಿಸ್ತರಣೆಗೂ ಸಾಕಷ್ಟು ಗಮನ ಕೊಡಲಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆ ಆರಂಭವಾದಾಗಿನಿಂದ ೮೧,೩೭೦ಕ್ಕೂ ಹೆಚ್ಚು ಹೊಸ ಪಂಚಾಯತಿಗಳನ್ನು ಸ್ಥಾಪಿಸಲಾಗಿದ್ದು, ೧೯೫೮ರ ಮಾರ್ಚಿ ೩೧ರ ವರೆಗೆ ದೇಶದಲ್ಲಿ ಒಟ್ಟು ೧,೬೪,೩೫೮ ಗ್ರಾಮ ಪಂಚಾಯತಿಗಳು ಇರುವ ದಾಖಲೆ ದೊರೆತಿದೆ. ಆದರೂ ಈ ಪೈಕಿ ಯಶಸ್ವಿಯಾಗಿ ಕೆಲಸ ಮಾಡುತ್ತಿರುವ ಗ್ರಾಮ ಪಂಚಾಯತಿಗಳ ಸಂಖ್ಯೆ ಶೇ ೬೦ಕ್ಕಿಂತ ಹೆಚ್ಚಿರಲಾರದು ಎಂದು ಹೇಳಬಹುದು. ಕೈಗೆ ಎಟುಕದ ವಿಸ್ತಾರ ವ್ಯಾಪ್ತಿ, ಸಾಕಷ್ಟು ಅಧಿಕಾರದ ಅಭಾವ ಮತ್ತು ಸೌಲಭ್ಯಗಳ ಅಭಾವ—ಇವೇ ಮೊದಲಾದ ಕೊರತೆಗಳು ಅವು ಕೆಲಸ ಮಾಡದಿರಲು ಕಾರಣವಾಗಿವೆ.

ಗ್ರಾಮಾಂತರ ಅಭಿವೃದ್ಧಿ ಕಾರ್ಯಗಳ ಸಂಪೂರ್ಣ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಗಳೇ ನಿರ್ವಹಿಸುವಂತೆ ಮಾಡಲು ಇವುಗಳಿಗೆ ಹಣ ಮತ್ತು ಅಧಿಕಾರಗಳೆರಡನ್ನೂ ಒದಗಿಸಲು ನಿರ್ಧರಿಸಲಾಗಿದೆ. ಸಾಮುದಾಯಿಕ ಅಭಿವೃದ್ಧಿ ಮಂತ್ರಿ ಶಾಖೆಗೇ ಗ್ರಾಮ ಪಂಚಾಯತಿಗಳ ಆಡಳಿತವನ್ನು ಇದೀಗ ಒಪ್ಪಿಸಲಾಗಿರುವುದು ಗಮನಾರ್ಹ.

ಯಶಸ್ವಿಕಾರ್ಯ ನಡೆಯಬೇಕಾದರೆ ಗ್ರಾಮ ಪಂಚಾಯತಿಗಳು ಚಿಕ್ಕದಾಗಿರಬೇಕು. ಸದಸ್ಯರಲ್ಲಿ ಪರಸ್ಪರ ವಿಚಾರ ವಿನಿಮಯಕ್ಕೆ ಪೂರ್ಣಾವಕಾಶವಿರಬೇಕು. ಸಾಮಾನ್ಯವಾಗಿ ಒಂದೊಂದು ಗ್ರಾಮಕ್ಕೂ ಒಂದೊಂದು ಪಂಚಾಯತಿ ಇರಬೇಕು.

ಗ್ರಾಮ ಪಂಚಾಯತಿಗಳಿಗೆ ಆದಷ್ಟು ಹಣ ಒದಗಿಸುವ ದೃಷ್ಟಿಯಿಂದ ಭೂಕಂದಾಯದ ಮೂಲಕ ಸಂಗ್ರಹವಾಗುವ ಹಣದಲ್ಲಿ ಸಾಕಷ್ಟು ಭಾಗವನ್ನು ಗ್ರಾಮ ಪಂಚಾಯತಿಗಳಿಗೆ ಒದಗಿಸಬೇಕೆಂದು ಉದ್ದೇಶಿಸಲಾಗಿದೆ.

ಮೈಸೂರು ಮತ್ತು ಮುಂಬಯಿ, ಇವೇ ಮೊದಲಾದ ಕೆಲವು ರಾಜ್ಯಗಳಲ್ಲಿ ಭೂಕಂದಾಯದ ಕಾಲುಭಾಗ ಇಲ್ಲವೇ ಕೆಲವು ಸಂದರ್ಭಗಳಲ್ಲಿ ಇನ್ನೂ ಸ್ವಲ್ಪ ಹೆಚ್ಚು ಭಾಗವನ್ನೇ ಗ್ರಾಮ ಪಂಚಾಯತಿಗಳಿಗೆ ಮೀಸಲಿಡಲಾಗುತ್ತಿದೆ. ಇದೇ ರೀತಿ ಇತರ ರಾಜ್ಯಗಳಲ್ಲೂ ಭೂಕಂದಾಯದ ಆದಾಯದಲ್ಲಿ ನಿರ್ದಿಷ್ಟ ಭಾಗವನ್ನು ಗ್ರಾಮ ಪಂಚಾಯತಿಗಳಿಗೆ ಒದಗಿಸಲು ವ್ಯವಸ್ಥೆಮಾಡಬೇಕಾಗಿದೆ. ತೃತೀಯ ಪಂಚವಾರ್ಷಿಕ ಯೋಜನೆ ಇದನ್ನು ಕಡ್ಡಾಯವಾಗಿ ಸೂಚಿಸುತ್ತದೆ.

ರಾಜಮಾತೆ ರಾಣಿ ಎಲಿಜಬೆತರು ವಿದೇಶೀಯ ವಿದ್ಯಾರ್ಥಿಗಳೊಂದಿಗೆ ಮಾತಾಡುತ್ತಿದ್ದಾರೆ.

ದುಡ್ಡಿದ್ದ ಮಾತ್ರಕ್ಕೇ ಸಾಲದು; ಜೊತೆಗೆ ಆಡಳಿತಾನುಭವವೂ ಬೇಕು. ಪಂಚರು, ಸರಪಂಚರು, ಪಂಚಾಯತಿ ಕಾರ್ಯದರ್ಶಿ, ಪಂಚಾಯತಿ ವಿಸ್ತರಣಾಧಿಕಾರಿ ಇವರೇ ಮೊದಲಾದವರಿಗೆ ತರಬೇತಿ ಒದಗಿಸುವ ಯೋಜನೆ ಸಹ ಸರ್ಕಾರದ ಮುಂದಿದೆ.

ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಲು ಕಾರ್ಯನಿರ್ವಾಹಕ ಉಪಸಮಿತಿಗಳ ರಚನೆ ಸಹ ಅತ್ಯಾವಶ್ಯಕ. ರೈತರ ಸಂಘಗಳು, ಮಹಿಳಾ ಸಮಾಜ, ಯುವಜನ ಸಂಘ ಇವೇ ಮೊದಲಾದ ಸಾರ್ವಜನಿಕ ಸಂಸ್ಥೆಗಳ ಪ್ರತಿನಿಧಿಗಳು ಗ್ರಾಮ ಪಂಚಾಯತಿಗಳ ಉಪಸಮಿತಿಗಳಲ್ಲಿ ಕೆಲಸ ಮಾಡಲು ಅವಕಾಶವಿರಬೇಕು. ಗ್ರಾಮ ಪಂಚಾಯತಿಗಳನ್ನು ಹೀಗೆ ಬಲಪಡಿಸುವುದರಿಂದ ಅಧಿಕಾರದ ವಿಕೇಂದ್ರೀಕರಣ ಸಾಧ್ಯವಾಗುವುದಲ್ಲದೆ ಈ ಸಂಸ್ಥೆಗಳು ಗ್ರಾಮಾಂತರ ಜೀವನದ ಜೀವನಾಡಿಯಾಗಲು ಸಾಧ್ಯವಿದೆ.

ಗ್ರಾಮ ಪಂಚಾಯತಿಗಳನ್ನು ಪುನರುಜ್ಜೀವನಗೊಳಿಸಬೇಕೆಂದು ಸಲಹೆಮಾಡಿದ ಬಲವಂತರಾಯ್ ಮೆಹತಾ ಸಮಿತಿಯು ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಪಂಚಾಯತಿ ಸಮಿತಿಯೊಂದರ ರಚನೆ ಸಹ ಗ್ರಾಮ ಪಂಚಾಯತಿಯ ಅಂಗವಾಗಿ ಆಗಬೇಕಾದುದು ಅಗತ್ಯ ಎಂದು ಅಭಿಪ್ರಾಯಪಟ್ಟಿತು.

ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರದ ಮಟ್ಟದಲ್ಲಿ ಕೆಲಸಮಾಡುವ ಈ ಸಮಿತಿ ಬೇಸಾಯದ ಅಭಿವೃದ್ಧಿಗೆ ಮುಖ್ಯವಾಗಿ ಗಮನ ಕೊಡುತ್ತದೆ. ಪಶುಪಾಲನೆ, ಗುಡಿಕೈಗಾರಿಕೆಗಳ ಬೆಳವಣಿಗೆ, ಸಾರ್ವಜನಿಕ ಆರೋಗ್ಯ, ಪ್ರಾಥಮಿಕ ಶಾಲೆಗಳ ಆಡಳಿತ ಇವುಗಳನ್ನೆಲ್ಲ ಈ ಪಂಚಾಯತಿ ಸಮಿತಿಗಳೇ ನಿರ್ವಹಿಸುವುವು.

ರಾಷ್ಟ್ರೀಯ ಅಭಿವೃದ್ಧಿ ಸಮಿತಿಯು ಮೇಲಿನ ಸುಧಾರಣೆಗಳನ್ನೆಲ್ಲಾ ಸ್ವಾಗತಿಸಿದ್ದು ವಿವರಗಳ ನಿರ್ಧಾರ ಕಾರ್ಯವನ್ನು ಆಯಾ ರಾಜ್ಯಸರ್ಕಾರಕ್ಕೆ ಬಿಟ್ಟಿರುತ್ತದೆ. ಸ್ಥಳೀಯ ಸ್ಥಿತಿಗತಿಗಳನ್ನು ಗಮನಕ್ಕೆ ತೆಗೆದುಕೊಂಡು ಪ್ರತಿಯೊಂದು ರಾಜ್ಯವೂ ಅಧಿಕಾರದ ವಿಕೇಂದ್ರೀಕರಣಕ್ಕೆ ಪ್ರಯತ್ನಿಸಬಹುದಾಗಿದೆ.

ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಅಡಿಪಾಯ ನಿರ್ಮಾಣವಾಗುತ್ತಿರುವುದು ಗ್ರಾಮಾಂತರ ಪ್ರದೇಶದ ಈ "ಸಣ್ಣ ಗಣರಾಜ್ಯ"ಗಳ ಬಲದ ಮೇಲೆ. ಪ್ರತಿಯೊಂದು ಗ್ರಾಮದ ಆಡಳಿತ ಕಾರ್ಯ ಪಂಚಾಯತಿಗಳ ಮಟ್ಟದಲ್ಲಿಯೇ ನಿರ್ವಹಿಸಲ್ಪಟ್ಟು ತಾಂತ್ರಿಕ ಹಾಗೂ ಹಣಕಾಸಿನ ನೆರವಿಗೆ ಮಾತ್ರ ಸರ್ಕಾರದ ಕಡೆಗೆ ನೋಡುವಂತಾಗಬೇಕೆಂಬುದೇ ಯೋಜಕರ ಗುರಿಯಾಗಿದೆ.

ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗಳ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & CO. (N. J.) CALCUTTA-40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಶುದ್ಧ ಹರಟೆ

ಆಹಾರ ತಯಾರಕರು ಯಾರು ಗೊತ್ತೆ?

ಮೊದಲು ನಿಮ್ಮ ಉತ್ತರ ಬರೆದಿಟ್ಟು, ಅನಂತರ ಮುಂದೆ ಓದತೊಡಗಿರಿ; ಆಗ ಸತ್ಯದರಿವು ನಿಮಗಾಗುವುದು.

ಅಡಿಗೆ, ಕಾಫಿ, ತಿಂಡಿ ಮುಂತಾದ ಆಹಾರ ಪದಾರ್ಥಗಳನ್ನು ತಯಾರಿಸಲಿಕ್ಕೆ ಮನಸುಗೊಟ್ಟು ಕಲಿಯಬೇಕಾದವರು ಯಾರು? ಅಂದರೆ ಗೃಹಿಣಿಯರು ಎಂದು ನೀವು ತಟಕ್ಕನೆ ಹೇಳಿಬಿಡುತ್ತೀರಿ. ಇದು ಪ್ರತಿ ಹೆಂಗುಸೂ ಕಲಿತಿರಬೇಕಾದ ಪ್ರತ್ಯೇಕ ವಿದ್ಯೆ ಎಂದು ಮೋಜುಗುದ್ದಿಯೇ ಹೇಳಬಹುದು ನೀವು. ಊಹುಂ, ಅದಲ್ಲ. ಆ ವಿಷಯವನ್ನು ಅಗತ್ಯವಾಗಿ ಕಲಿಯಬೇಕಾದ ಜಾತಿ ಬೇರೆಯೇ ಇದೆ ಅಂತ ನಾನು ಹೇಳುತ್ತೇನೆ. ಹೌದು. ನಿಮಗಿಂತಲೂ ಜೋರಾಗಿ ಮೋಜುಗುದ್ದಿ!

ಈ ಜಾತಿಗಳಲ್ಲಿ ನಾಲ್ಕು ಕವಲುಗಳಿವೆ. ಒಂದನೆಯದಕ್ಕೆ "ಕೆಟ್ಟಲ್ ವಾಲಾ" ಎಂದು ಹೆಸರು. ಇವರದೆಲ್ಲಾ ಒಂದಾಣೆಯ ಅರ್ಧಾಣೆಯ ವ್ಯಾಪಾರ. ಎರಡನೆಯದಕ್ಕೆ "ಚಾ ಮನೆ" ಅಥವಾ "ಟೀ ಕ್ಲಬ್" ಎಂದು ಹೆಸರು. ಕಾಲುದಾರಿಯೊಂದು ಹರಿದು ಬಂದು ಬೀದಿಗೆ ಕೊಡುವಂತಹ ಸಂದುಗೊಂದಿಗಳಲ್ಲಿ ಈ "ಚಾ ಮನೆ"ಗಳು ಅರಳಿಕೊಂಡಿರುತ್ತವೆ. ಮೂರನೆಯದಕ್ಕೆ "ಹೋಟೆಲ್" ಎಂದರಾಯಿತು. ಈ ಹೋಟೆಲ್‌ಗಳಲ್ಲಿ ಬರೆಹ ಮೂಲಕ ಮಾತ್ರ ಜಾತಿ ಕುರುಹುಳ್ಳ "ಬ್ರಾಹ್ಮಣರ" ಹೋಟೆಲ್‌ಗಳೂ ಒಂದು ಪ್ರತ್ಯೇಕ ಶಾಖೆಯೆಂದೇ ತಿಳಿಯಿರಿ ತಮ್ಮ ಪ್ರತಿಭೆ ಕಲ್ಪನಾಶಕ್ತಿಗಳ ತಿಂಡಿಗಳಲ್ಲಾ ಇಲ್ಲಿವೆ. ಚಾ ಮನೆ ಮತ್ತು ಹೋಟೆಲ್‌ಗಳಲ್ಲಿ ಹಳೆಯ ಕಾಲದ ಗ್ರಾಮೊಫೋನ್ ರಿಕಾರ್ಡುಗಳು ಎಲ್ಲರನ್ನೂ ಕೂಗಿ ಕೂಗಿ ಕರೆಯುತ್ತಿರುತ್ತವೆ ಇದರ ಮೇಲೆ ನಾಲ್ಕನೆಯ ಶಾಖೆಯೊಂದಿದೆ. ಇವರು ಬಲು ವಿಶಿಷ್ಟರು. ಬುದ್ಧಿಯ ಮೇಲೆ ಹಣದ ಮುಸುಗೆಳೆದುಕೊಂಡವರಿಂದ ಬಹಳ ಉತ್ತಮರೆನಿಸಿಕೊಂಡವರು. ಹಣವಂತರು ಹೊಗಳಿ ಹೊಗಳಿ ಹಾಡುವಾಗ ಒಡವರೂ ದನಿಗೂಡಿಸುವುದು ಸಹಜತಾನೆ? ಹೆಸರಿಗೋಸ್ಕರ ಹೆಸರಾದವರನ್ನು ಪೋಷಿಸುವ ಬೃಹ್ಮ್ರಹ್ಮಾಂಡವಾದ ಮಂದಿರಗಳನ್ನಿವರು ಇಟ್ಟುಕೊಂಡಿದ್ದಾರೆ.

ಈ ನಾಲ್ಕು ಹೋಟೆಲ್‌ವಾಲಾ ಜಾತಿಗಳಿಗೂ ಅವರವರ ದುಡ್ಡಿನ ಬೆಲೆಗೆ ತಕ್ಕಹಾಗೆ ಸಮಾಜದಲ್ಲಿ ಸ್ಥಾನವು ಅಂಟಿಕೊಂಡಿದೆ. ಮೊದಲಿನ ಮೂರು ಚಿಕ್ಕ ಮಟ್ಟದ ಶಾಖೆಗಳನ್ನು ನಾನು ಹೇಳುವುದಿಲ್ಲ. ಏಕೆಂದರೆ ಅವರೆಲ್ಲಾ ನಾಲ್ಕನೇ ಮಟ್ಟಕ್ಕೆ ಬರಬೇಕೆಂತಲೇ ಚಟಪಟಾಯಿಸುವುದರಿಂದ, ಆ ನಾಲ್ಕನೇ ವಿಶಿಷ್ಟ ಶಾಖೆಯನ್ನು ಕುರಿತೇ ಈಗ ಸ್ವಲ್ಪ ಹೇಳುತ್ತೇನೆ.

ಇವರಲ್ಲಿಯೂ ಎರಡು ವಿಧದವರಿದ್ದಾರೆ. ಒಂದನೆಯವರು ಕೆಟ್ಟಲ್‌ವಾಲಾ ಮೆಟ್ಟಲಿನಿಂದ ಕ್ರಮವಾಗಿ ಮೇಲೆ ಬಂದವರು. ಇನ್ನೊಬ್ಬರು ಹಾಗಲ್ಲ; ಒಮ್ಮಿಂದೊಮ್ಮೆಗೇ ಬಂದವರು. ಪಿತ್ರಾರ್ಜಿತವೋ, ಲಾಟ್ರೀ, ಕುದುರೇ ಪಂದ್ಯಗಳ ಹಣವೋ ಇವರ ಮೂಲಧನವಾಗಿರುತ್ತದೆ. ನಗರದ ಮಧ್ಯಭಾಗದಲ್ಲೇ ಇವರ ಲಕ್ಷ್ಯಭವನ. ಆ ಭವನದ ಪ್ರಾರಂಭೋತ್ಸವಕ್ಕೆ ಎಲ್ಲಾ ಕಾರಧಿಕಾರಿಗಳಿಗೂ ಆಮಂತ್ರಣವಿರುತ್ತೆ. ಗವರ್ನರೋ ಮಂತ್ರಿಗಳೋ ಪತ್ರಿಕೆಯಲ್ಲಿ ಬರುವಂಥವರೇ ಅದರ ಉದ್ಘಾಟಕರಾಗಿರುತ್ತಾರೆ. ಆ ಭವನಗಳಲ್ಲಿ ನಡೆಯುವ ಪಾರ್ಟಿಗಳಲ್ಲಿ ಕೂಡಾ ಪತ್ರಿಕಾ ಪ್ರಸಿದ್ಧ ವ್ಯಕ್ತಿಗಳೇ ಮುಖ್ಯ ಅತಿಥಿಗಳಾಗಿರುತ್ತಾರೆ. ಹಲಸಿನ ಹಣ್ಣಿನ ಹಿಂದೆ ಹೋಗುವ ನೊಣಗಳ ಹಾಗೆ ಪತ್ರಿಕಾಪ್ರತಿನಿಧಿಗಳೂ ಹೋಗುತ್ತಾರೆ.

ಅಲ್ಲಿಯ ಪಾರ್ಟಿಗಳಲ್ಲಾದರೋ ಪಾರ್ಟಿಗಳಲ್ಲಿರುವವರಿಗೆ ಮಾತ್ರ ಆಸ್ವಾದ್ಯವಾದ ವಿಚಿತ್ರ ತಿಂಡಿಗಳು. ಸ್ಪೂನು ಪ್ಲೇಟುಗಳ ಕಣ ಕಣ ರವದೊಂದಿಗೆ ನಾಲಗೆಯಲ್ಲಿ ನರ್ತನವಾಡುವುದೇ ಅವುಗಳ ವಿಶಿಷ್ಟತೆ. ಯಾವ ವಿಷಯದ ಪಾರ್ಟಿಯೇ ಆಗಲಿ, ನಾಡಿನ ಹಿತ ಆರೋಗ್ಯಗಳನ್ನು ಕಾಪಾಡುವಂತಹ ಸೌಕರ್ಯಗಳ ದಾತಾರರೆಂದು ಆ ಹೋಟೆಲ್ ವಾಲಾರಿಗೆ ಪ್ರತ್ಯೇಕ ಗೌರವವುಂಟು. ಅವರನ್ನು ಕುಂಬಳಕಾಯಿ ಮುಂಡಾಸಿನಿಂದ ಹೊತ್ತುಕೊಳ್ಳುವ ಪತ್ರಿಕೆಗಳೂ ಉಂಟು.

ಇವರು ಮಾತಾಡುವ ಭಾಷೆ ವಿಶ್ರಮ ಇಂಗ್ಲೀಷು. ಪೇಪರ್ ಬಿಡಿಸಿ ನೋಡುವ ಪತ್ರಿಕಾಸೌಗ್ಧಿಯೇ ಅವರಿಗಿದೆ. ತಾವೇ ಪೋಷಿಸಿ ಬೆಳೆಸಿಬಿಟ್ಟ ಪಕ್ಷಪ್ರಶಂಸಕರು ಆಗಾಗ ಹಾಜರಾಗಿ ತಮ್ಮೊಡೆಯರ ಮಯೋದ್ಗೀತ ಲೋಕಜ್ಞಾನವನ್ನು ಕೇಳಿ ಕೊಂಡಾಡುತ್ತಿರುತ್ತಾರೆ.

ಸಾಮಾನ್ಯವಾಗಿ ಕೂಡ ಹೊಟ್ಟೆಯಿಂ ಕೊಬ್ಬಿದ ಆಕೃತಿಯಿಂದಿರುತ್ತಾರೆ ಇವರು. ಇದಕ್ಕೊಂದು ವಸ್ತ್ರ ಇತ್ತಿ ಮೇಲೆ ಜುಬ್ಬಾದ ಮುಸುಗು ನೇತಾಡುತ್ತಿರುತ್ತೆ. ಚಿನ್ನದ ಚೈನಿನ ರಿಸ್ಟುವಾಚು. ಉಂಗುರಗಳು. ಕೆಲವರಿಗೆ ಕೊರಳಿನಲ್ಲಿಯೂ ಬಂಗಾರದ ಚೈನು ಮಿರುಗಿಕೊಂಡಿರುವುದುಂಟು. ಸಂದರ್ಭೋಚಿತವಾಗಿ ಇವರು ಫುಲ್‌ಸೂಟಿನ ಪಕ್ಕಾ ಆಂಗ್ಲೇಯ ವೇಷದಲ್ಲಿಯೂ ಒಳ್ಳೇ ಜಬರ್ದಸ್ತಾಗಿ ಶೋಭಿಸಿ ಮಾಯವಾಗಿಬಿಡುವುದೂ ಉಂಟು.

ಇವರ ಮನೆಯಲ್ಲಿ ಎರಡು ಅಲ್ಸೇಷಿಯನ್ ನಾಯಿಗಳು ಇದ್ದಾವು. ಕಲೆಯ ಬಗ್ಗೆ ಏನೂ ತಿಳಿಯದಿದ್ದರೂ ಕಲಾಪರವಾದ ಚಿತ್ರಗಳು ಗೋಡೆಯಲ್ಲಿದ್ದೇ ಇರುತ್ತವೆ. ಅವುಗಳ ಮಧ್ಯೆ ಮಧ್ಯೆ ತಾವು ಅನೇಕ ಮಾನ್ಯ ಅತಿಥಿಗಳೊಡನೆ ಸೇರಿ ನಿಂತಿರುವ ಫೋಟೋಗಳೂ ಇರುತ್ತವೆ. ಸ್ವಯಂ ಮಾಲೆ ಧರಿಸಿಕೊಂಡ ಒಂದು ಫೋಟೋ ಎಲ್ಲಕ್ಕೂ ದೊಡ್ಡದಾಗಿರುತ್ತದೆ.

ಕಮರ್ಷಿಯಲ್ ಟ್ಯಾಕ್ಸ್. ಇನ್‌ಕಮ್ ಟ್ಯಾಕ್ಸ್, ಮುನ್ಸಿಪಾಲ್ಟಿ, ಪೋಲೀಸ್ ಇಂತಹ ವಿಭಾಗದ ಕೆಲವು ಉದ್ಯೋಗಸ್ಥರು ಅವರು ೧೮ರೂಪಾಯಿ ಸಂಬಳದ ಶಿಪಾಯಿಯಾದರೂ ಆದೀತು,-ಅವರೊಡನೆ ತುಂಬಾ ಗೆಳೆತನ ಗಳಿಸಿಕೊಂಡಿರುತ್ತಾರೆ. ಆ ಬಗೆಯ ವಿಭಾಗದವರಿಗೆ ಸತ್ಯ ಸಂಧತೆಯಿಂದ ಕಾಣಿಸುವ ಅವರ ಪರಿಕರಣ ಗಣನೆಗಳಿಲ್ಲಾ. "ನಮಃಶಿವಾಯ"ವೇ ಸರಿ. ಮತ್ತೆ ಅವರೊಡನೆ ಕೈ ಕುಲುಕಿ ನಗದೇ ಇರಲು ಸಾಧ್ಯವೆ?

ಇವರ ಸಹಾಯವನ್ನು ಬಡವರಿಗೆ ಮುಟ್ಟಲು ಸಾಧ್ಯವಿಲ್ಲ. ದೊಡ್ಡ ದೊಡ್ಡ ಹೆಸರಿನ ಸಂಸ್ಥೆಗಳಿಗೆ ವ್ಯಕ್ತಿಗಳಿಗೆ ಇವರುಗಳ ಮಹತ್ತೋ ಸಹಾಯ ಸಲ್ಲುತ್ತೆ. ಸಣ್ಣ ಉದ್ಯಮಗಳಿಗೆ ಕೈಕೊಡುವುದೋ ಕಣ್ಣೆತ್ತಿ ನೋಡುವುದೋ ಅವರ ಘನತೆಗೆ ಕುಂದು. ಅಂಥವರು ನಂಬಿ ದರ್ಶನಕ್ಕೆ ಬಂದರೆ ನಿರಾಯಾಸವಾಗಿ ಮೂರು ಗಂಟೆ ಹೊತ್ತು ಸುಮ್ಮನೆ ಕೂಡಿಸುತ್ತಾರೆ. ಅವರು ತುಂಬ 'ಬಿಸೀ'ಯಾಗಿರುವುದನ್ನು ಆತ ನೋಡುತ್ತಾ, ಅವರನ್ನು ತನ್ನ ಮನಸ್ಸಿನಲ್ಲೇ ಎಷ್ಟೋ ಘನತೆಗೇರಿಸಿದ ಮೇಲೆ, ಅವರ ಬಾಯಿಯಿಂದ ಬರುವ ನಕಾರವನ್ನು ಕೇಳಿ ಚಕಾರವೆತ್ತದೆ ಹೋಗಲೇಬೇಕು.

ಇನ್ನೂ ಇವರ ಕಪ್ಪು ಪುಟಗಳನ್ನು ಬಿಡಿಸಿ ರಾತ್ರಿಗಳನ್ನು ನೋಡಲು ನನ್ನಿಂದಾಗದು. ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ನಿಷ್ಣಾತರಾದವರು, ಆಗಬೇಕಾದವರು, ಆಗುತ್ತಾ ಇರುವವರು ಈ ವಿಭಾಗದವರೋ, ನಮ್ಮ ನಿಮ್ಮ ಅಡಿಗೇ ಮನೆಯ ಮಹಿಳೆಯರೋ, ನೀವೇ ಹೇಳಿರೀಗ!

ನೋಟೀಸು

ಪುತ್ತೂರು ಡಿ ಮು. ಕೋರ್ಟಿನಲ್ಲಿ
R. E. P 609/58.
O. S. 410/52

ವಾದಿ:—ಬಾಲಕೃಷ್ಣ—ಅರ್ಜಿದಾರ
ಪ್ರತಿವಾದಿ:—ಸಾಂತಪ್ಪ—ಅಜ್ಜಂಗಾಯಿ ಸುಬ್ಬಪ್ಪ ಗೌಡರ ಮಗ—ಅಜ್ಜಾವರ ಗ್ರಾಮದ ಅಜ್ಜಂಗಾಯಿ. ಪುತ್ತೂರು ತಾಲೂಕು—ಎದುರ್ರೀಗೆ.

ಮೇಲಿನ ಡಿಕ್ರಿ ಆಪೀಜು ವಸೂಲಿಗೆ ಪ್ರತಿವಾದಿಯ ಆಸ್ತಿ ಜಪ್ತಿ ಮಾಡಿ ಏಲಂಗೆ ಮುಂದರಿಸಬೇಕಾಗಿ ಅರ್ಜಿದಾರನು ಮಾಡಿದ ಮೇಲಿನ ಅನುಲ್ಜಾರಿಯು ತಾರೀಕು 18-2-59ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಣೆಗಳಿದ್ರೆ ನೀವು ಆ ದಿನ ಬೆಳಿಗ್ಗೆ ಗಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಪಡಿಸದಿದ್ರೆ ನಿಮ್ಮನ್ನು ಶಿಕ್ಯಾ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಲಾಗಿದೆ.

(S/d)H· Pundarik Bhat,
Advocate for petr.

ಪುತ್ತೂರು, 19-1-59

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಡಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1 ಸ್ವತಂತ್ರ ಜೀವನೋಪಾಯ	0	4
2 ಸಂಶಯ ಪಿಶಾಚಿ	0	10
3 ನಾಡ ಕತೆಗಳು	0	4
4 ಕುಶಲವ	0	3
5 ಕಾವ್ಯ ಸಾಮ್ರಾಜ್ಯ	1	8
6 ಮಧುವನ	3	0
7 ಮುಂದಿನ ದೇವರು	0	4
8 ವ್ಯಭಿಚಾರಿಣಿ ಯಾರು.	1	0
9 ಹೆಂಡ್ತಿ ಗಂಡನಾದರೆ	0	4
10 ಪುರುಷ ವಧು	0	4
11 ಸನ್ಯಾಸಿಯ ಸೋಗಿನಲ್ಲಿ	0	12
12 ನಂದಾದೀಪ	0	14
13 ದೇಶಭಕ್ತ	1	0
14 ಪ್ರೇಮ ವಿಜಯ	1	4
15 ರಂಗಭೂಮಿ	0	10
16 ಸೇವಾಪಥ	0	8
17 ನಾರೀ ಹೃದಯ	1	8
18 ಭಾರತೀಯ ಕತೆಗಳು	1	12
19 ಪ್ರಕಾಶ	2	6
20 ಮೂರು ಪ್ರಹಸನಗಳು	1	4
21 ನಗೆ ನೋಟಗಳು	1	4
22 ಅನ್ನದೇವರು ಮತ್ತಿತರ ಕತೆಗಳು	1	0
23 ಭಾರತದಲ್ಲಿ ಜಾತಿಭೇದ	1	0
24 ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25 ಆಕಾಶ ಗಂಗೆ	1	12
26 ಸ್ವಾತಂತ್ರ್ಯವೀರ ಸಾವರಕರರು	1	4
27 ಜೀವನ ಸಂಗ್ರಾಮ	1	8
28 ಕದಂಬ	1	4
29 ಕವಿತಾಕಾಮಿನಿ	2	0
30 ಸ್ವರಾಜ್ಯ ವಿಜಯ	0	8
31 ಸಪ್ತಸಾಗರ	0	12
32 ಜವಿನಾಸ್ದಾರೆ	1	8
33 ಬಾಳಿನ ಬೆಡಗು	1	4
34 ಲೋಪಾಮುದ್ರೆ	1	0
35 ಚಿಗುರು	0	10
36 ನನ್ನ ಕಥೆಗಳು	0	10
37 ನಕ್ಕರೂ ನಗಬಹುದು	0	10
38 ಧರ್ಮ ಸಂಕಟ	0	6
39 ಮದುವೆ ಸೀರೆ	1	0

ರೂ32-6-0ಯ ಈ ಎಲ್ಲಾ ಪುಸ್ತಕಗಳ ಒಮ್ಮೆಯೇ ತರಿಸಿಕೊಂಡರೆ ರೂ.30-0-0ಕ್ಕೆ ಕೊಡಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಥಾ ವಿಹಾರ

(೨ನೇ ಪುಟದಿಂದ)

ಎಲೆಗಳನ್ನು ಹೆಕ್ಕಿ—ಏನು? ನೆಕ್ಕುತಿದ್ದಾನೆ? ಅಯ್ಯೋ, ಪಾಪ, ಅದೇನು ಎಲೆಗಳನ್ನೆಸೆದಾಗ ನಾಯಿಗಳು ರೇಗಿ ಆತನ ಮೇಲೆ ಹಾರಬೇಕೆ? ಕಚ್ಚುತ್ತಿವೆ ಬೊಬ್ಬಿಡುತಿದ್ದಾನೆ. "ಅಯ್ಯೋ' ಎನ್ನುತ್ತಾ ಗೋಪಾಲ ಮುಂದೆ ಸರಿಯಲೆಳಸಿದ ಆದರೆ ಕಾಲುಗಳೇಕೋ ಮುಂದರಿಯಲಿಲ್ಲ ಪುನಃ ಆ ಕಡೆಗೆ ನೋಡಿದ ದೊಡ್ಡದಾದ ಆ ವನೆ ಯಾವ ಗೊಡವೆಯೂ ಇಲ್ಲದೆ ಕಿವಿಯಲ್ಲಾಡಿಸುತ್ತಾ, ಬಾಲ ಬೀಸುತ್ತಾ ಮೆಲ್ಲನೆ ಆ ಎಲೆಗಳನ್ನು ತಿನ್ನುತ್ತಿದೆ ಆದರ ಪುಣ್ಯವೇ. ಈತನ ಭಾಗ್ಯವೇ- "ಗೋಪಾಲ್, ಇಲ್ನೋಡು, ನೋಡು, ಆ ನಿನ್ನೆಯ ರಂಭೆಯರನ್ನು- ನೋಡು, ಸಾವಕಾಶವಾಗಿ ಕೈ ಬೀಸುತ್ತಾ, ಕಣ್ಣು ತಿರುಗಿಸುತ್ತಾ ಈ ಕಡೆಗೆ ಬರುತಿದ್ದಾರೆ ನೋಡೊಮ್ಮೆ ಇಂದಿನ ಅವರ ಹೊಸ ವೇಷಗಳನ್ನು, ಎಷ್ಟು ಚೆನ್ನಾಗಿ ಶೋಭಿಸುತಿದ್ದಾರೆ" ಅವಸರದಿಂದ ಅಶೋಕನೆಂದ. "ಸಾಯಲಿ ಅವರು ಇಲ್ಲಿ ನೋಡು, ಮೂರ್ತಿವತ್ತಾದ-ಮಾನವನ ಬಡತನದ ಮಹಾಭೂತವನ್ನು" ಗೋಪಾಲನು ದೃಷ್ಟಿ ಕದಲಿಸದೇ ಮಾರ್ನುಡಿದ ಪಕ್ಕದಲ್ಲೇ ಸರಿದು ಹೋದ ಆ ಮಹಿಳೆಯರ ಸುಂದರಾಂಗಗಳ ಕಡೆಗೆ ಇಂದು ಗೋಪಾಲನ ದೃಷ್ಟಿ ಹರಿಯಲಿಲ್ಲ. ಆ ಬಿಕ್ಷುಕನ ಅವಸ್ಥೆಯನ್ನೇ ನೋಡುತಿದ್ದ ಹೌದು, ನಾಯಿಗಳ ಕಡಿತದಿಂದ ರಕ್ತ ಸುರಿಯುತ್ತಿದೆ ಕಣ್ಣಿನಿಂದ ನೀರು ಹರಿಯುತ್ತಿದೆ. ಪಾಪ, ಹತಾಶನಾಗಿ ಹೊರಟೇ ಬಿಟ್ಟ ಎಲ್ಲಿಗೆ? ಗೋಪಾಲನು ಯೋಚಿಸುತ್ತಾ, ಭಿಕ್ಷುಕನು ಹೋದೆಡೆಗೇ ನೋಡುತ್ತಾ ಶಿಲಾ ಪ್ರತಿಮೆಯಂತಾಗಿ ಅಲ್ಲೇ ನಿಂತು ಬಿಟ್ಟನು ಭಿಕ್ಷುಕನು ಅದೆಲ್ಲಿಗೋ ತನಗರಿವಿಲ್ಲದೇ ನಡೆವನು

ಮರು ದಿವಸ ಸಂಜೆ ಎಂದಿನಂತೇ ಅಶೋಕ ಕರೆದಾಗ ಗೋಪಾಲನೆಂದ 'ಅಶೋಕ್ ನಾನಿಂದು ಬರುವುದಿಲ್ಲ. ಎಲ್ಲಿ ಹೋದರೂ ಆ ಮಾರಿ ಭಿಕ್ಷುಕರು. ನನ್ನ ದೃಷ್ಟಿ ಬೇಡವೆಂದರೂ ಅವರ ಬಳಿಗೇ ಸರಿಯುತ್ತದೆ ನನಗವರನ್ನು ನೋಡಲಾಗುವುದಿಲ್ಲ ನೋಡದೇ ಹೋಗಲೂ ಆಗುವುದಿಲ್ಲ ಆದುದರಿಂದ ನಾನು ಬರುವುದೇ ಇಲ್ಲ" ನಿರಾಶನಾದ ಅಶೋಕನು ಹುರಿದುಂಬಿಸುತ್ತಾ ಹೇಳಿದ "ಏ ಹೇಡಿ, ಅವರು ಕಾಣಸಿಕ್ಕಿದರೆ ನಿನಗೇನು ಮಾಡುವರೋ? ಅವರು ಕಾಣಲೇ ಬಾರದೆಂದಿದ್ದರೆ ನದಿಯ ಕಡೆ ತೆರಳೋಣ ಬಾ, ಅಲ್ಲಿಯೂ 'ಬಣ್ಣದ ಚಿಟ್ಟೆ'ಗಳಿಗೇನೂ ಕೊರತೆಯಿಲ್ಲ. ಹೋಗೋಣ" "ಆಯ್ತಪ್ಪಾ" ಎಂದುಕೊಂಡು ನಿರುಪಾಯನಾದ ಗೋಪಾಲನು ಮನಸ್ಸಿಲ್ಲದೆ ಹೊರಟನು ಈರ್ವರೂ ನದಿಯ ಕಡೆ ತೆರಳಿದರು

ಮೈದಾನಿನಿಂದ ಅನತಿ ದೂರದಲ್ಲೇ ಅಂಕು ಡೊಂಕಾದ ಅಗಲ ಕಿರಿದಾದ ಒಂದು ಓಣಿ. ಗೋಪಾಲ ಅಶೋಕರು ನದಿಯ ಬಳಿಗೆ ಸಾವಕಾಶವಾಗಿ ಸಾಗುತಿದ್ದರು. ಕಿರಿದಾದ ಓಣಿಯಲ್ಲಿ ತಿರುಗುತಿದ್ದಾಗ ಗೋಪಾಲನು ಫಕ್ಕನೆ ಗಾಬರಿಗೊಂಡು ನಿಂತುಬಿಟ್ಟನು ಏನದ? ಅದೇ ಭಿಕ್ಷುಕ ಹೀಗೇಕೆ ಬಿದ್ದಿರುವನು? ಯಾವ ಚಿಂತೆಯೂ ಇಲ್ಲದೆ ನೆಲದಲ್ಲಿ ಬಿದ್ದಿರುವನಲ್ಲಾ, ನಿನ್ನೆ ಇದ್ದ ಬಟ್ಟೆಯೂ ಇಂದಿಲ್ಲ ಹೊಟ್ಟೆಯು ಬೆನ್ನನ್ನಪ್ಪಿದೆ. ಮುಖ ಕಾಣದು ಕೆಳಬದಿಗಿದೆ ನೊಣಗಳೇಕೆ ಮುತ್ತುತ್ತಿವೆ? ಸತ್ತಿರುವನೇ? ಯಾ ಜೀವವಿದೆಯೆ? ಯೋಚಿಸುತ್ತಾ ಗೋಪಾಲ ಸಮೀಪ ಸರಿದ ತಕ್ಷಣ ಅಶೋಕನು ಆತನನ್ನು ಹಿಡಿದೆಳೆದು ಬೊಬ್ಬಿಟ್ಟ "ಹೆಣ ಮಹಾರಾಯ, ಹೆಣ ದೂರಸರಿ, ನಾವು ಮುಂದೆ ಹೋಗೋಣ" "ಅದಾಗದು" ಧೃಢತೆಯಿಂದ ಗೋಪಾಲನೆಂದ ಹೆಣವೆಂದು ನಿಶ್ಚೈಸಿದ ಬಳಿಕ ಹೊಸ ಧೈರ್ಯವನ್ನು ಅನಾಯಾಸವಾಗಿ ಪಡೆದಿದ್ದ ಗೋಪಾಲನು ತಕ್ಷಣ ನಗರ ಸಭಾದಿಪತಿಗಳ ಗೃಹದೆಡೆಗೆ ನಡೆದನು ಅಶೋಕನೂ ಶೋಕಭರಿತನಾಗಿ ಆತನ ಹಿಂದೆಯೇ ಸಾಗಿದ ಇಂದಿನ 'ಗಮ್ಮತ್ತು' ತಪ್ಪಿತೆಂದು

ಹೆಣ ತೆಗೆಸಿ ಮನೆಗೆ ಬಂದಾಗ ರಾತ್ರೆ ಹತ್ತು ಗಂಟೆಯಾಗಿತ್ತು ಸ್ನಾನ ಊಟ ತೀರಿಸಿ ಮಲಗಿದ ಗೋಪಾಲನಿಗೆ ನಿದ್ದೆಯೇ ಬರಲಿಲ್ಲ ಏನೇನೋ ಯೋಚನೆಗಳು ಕಾಡುತಿದ್ದವು ಆ ಭಿಕ್ಷುಕನ ಬಾಡಿದ ಮುಖವು ಕಣ್ಣಮುಂದೆ ಕಾಣುತಿತ್ತು. ಆತನು ಎಂದೆಂದೋ ಕಂಡಿದ್ದ ಹಲವಾರು ಭಿಕ್ಷುಕರ ಮುಖಗಳು ಇಂದು ಆತನಿಗೆ ವಿಕಾರರೂಪಿಗಳಾಗಿ ಕಾಣುತಿದ್ದವು ಇವರ ಉದ್ಧಾರವೆಂದು? ಹೇಗೆ? ಈ ಯೋಚನೆಗಳು ಆತನನ್ನು ಕಾಡುತಿದ್ದುವು. ಕೊನೆಗೆ ನಿದ್ದೆ ಬಂದಾಗ ಏನೇನೋ ಕನಸು ಕಾಣತೊಡಗಿತು — ದೊಡ್ಡದಾದೊಂದು ಭಿಕ್ಷುಕ ಗೃಹ ಭಿಕ್ಷುಕ ಗೃಹಕ್ಕ ತಾಗಿ ಪಕ್ಕದಲ್ಲೊಂದು ಧರ್ಮಾರ್ಥ ಔಷಧಾಲಯ. ಬಳಿಯಲ್ಲೇ ಭಿಕ್ಷುಕರಿಗಾಗಿ ಕೆಲಸ ಮಾಡಲಾಗುವಂತಹ ಒಂದು ಉದ್ಯೋಗಶಾಲೆ ಓರ್ವ ಕಲಾಶಿಕ್ಷಕರು ಹಾಡುತ್ತಾ ನಲಿಯುತ್ತಾ ಇರುವ ಭಿಕ್ಷುಕರ ಮಕ್ಕಳು, ನಗುಮೊಗದ ನಾರಿಯರು, ಇವರೆಲ್ಲರ ಮಧ್ಯೆ ಪ್ಯಾಜಾಂ ಮತ್ತು ಬನಿಯನ್ ಧರಿಸಿ, ಅತ್ತಿತ್ತ ಓಡಾಡುತ್ತಿರುವ ಆ ಭಿಕ್ಷುಕ, ಯಾರವನು? ಅವನೇ, ಹೌದು, ಅವನೇ, ಅಂದು ನಾಯಿಗಳಿಂದ ಎಂಜಲೆಲೆಗಳನ್ನು ಎಳೆಯುತಿದ್ದವನೇ, ಇಂದು ಎಷ್ಟು ಸಂತಸದಿಂದ ಓಡಾಡುತಿದ್ದಾನೆ, "ಏ,—ಏ, ನಾಗಾ ಇಲ್ಲಿ ಬಾರೋ" ನಿದ್ದೆಯಲ್ಲೇ ಭಿಕ್ಷುಕನನ್ನು ಕರೆದು ಫಕ್ಕನೆ ಗೋಪಾಲನು ಎಚ್ಚರಗೊಂಡನು ಸ್ವಪ್ನದ ಈ ಕತೆ ನಿಜವಾಗಿ ಪರಿಣಮಿಸಬಹುದೆ? ನಿಜವಾಗಿ ಪರಿಣಮಿಸಿದಾಗ? ಅದೆಷ್ಟು ಭಿಕ್ಷುಕರು ಸಂತಸದಿಂದ ಕುಣಿಯಲಾರರು? ಅದೆಷ್ಟು ಮಕ್ಕಳು ಸತ್ಪ್ರಜೆಗಳಾಗಲಾರರು? ಎಂದೆಲ್ಲಾ ಯೋಚಿಸುತ್ತಾ ಕಣ್ಣುಜ್ಜಿಕೊಳ್ಳುತ್ತಲೆ ಛಾಪೆಯಲ್ಲೇ ಕುಳಿತುಕೊಂಡನು ಮನಸ್ಸಿನಲ್ಲಿ ಏನೇನೋ ಪ್ರತಿಜ್ಞೆಗಳನ್ನೂ ಮಾಡಿಕೊಂಡನು.

ಅಂದಿನಿಂದ ಗೋಪಾಲನು ಭಿಕ್ಷುಕರ ಉದ್ಧಾರಕ್ಕಾಗಿ ದುಡಿಯತೊಡಗಿದ ಅವರ ಸಮಸ್ಯೆಗಳನ್ನು ಅರಿಯುವುದು, ಪರಿಹಾರವನ್ನು ಹುಡುಕುವುದು, ಅವರಿಗಾಗಿ ಔಷಧಗಳನ್ನು ಒದಗಿಸುವುದು, ಎಲ್ಲಕ್ಕಿಂತಲೂ ಹೆಚ್ಚಾಗಿ ಅವರ 'ಕ್ಷೇಮನಿಧಿ'ಗಾಗಿ ಹಣ ಸಂಗ್ರಹಿಸುವುದು ಈ ಕೆಲಸಗಳಲ್ಲೇ ಸಮಯ ಕಳೆಯತೊಡಗಿದ ಈ ಕೆಲಸಗಳಲ್ಲಿ ಅದೆಷ್ಟು ವಿಘ್ನಗಳು ಬಂದರೂ ಎದುರಿಸುವ ಶಕ್ತಿಯನ್ನೂ ಸಂಪಾದಿಸಿಕೊಂಡ. ಎಳ್ಳಷ್ಟೂ ಸ್ವಾರ್ಥವಿಲ್ಲದೆ, ತನ್ನಾವ ಕಷ್ಟಗಳನ್ನೂ ಲೆಕ್ಕಿಸದೆ, ಭಿಕ್ಷುಕರ ಏಳ್ಗೆಗಾಗಿ ಅನವರತವೂ ದುಡಿಯತೊಡಗಿದ.

○ ○

ನಾಲ್ಕು ವರ್ಷಗಳು ಸಂದಿವೆ ಆ ಜನ್ಮ ಬ್ರಹ್ಮಚಾರಿಯಾಗಿ ಭಿಕ್ಷುಕರ ಉದ್ಧಾರಕ್ಕಾಗಿ ದುಡಿಯುವೆನೆಂದು ಪಣತೊಟ್ಟ ಗೋಪಾಲನ ಸತತ ಪರಿಶ್ರಮದ ಫಲವಾಗಿ ಆ ನಗರದಲ್ಲಿ ಚಿಕ್ಕ ಭಿಕ್ಷುಕ ಗೃಹವೊಂದು ತಲೆಯೆತ್ತಿ ನಿಂತಿದೆ ಮೂವತ್ತು ನಲ್ವತ್ತು ಭಿಕ್ಷುಕರು ವಾಸಿಸುತಿದ್ದಾರೆ ಚಿಕ್ಕದಾದೊಂದು ಔಷಧಾಲಯವೂ ಅದರೊಳಗಿದೆ ಉಳಿದ ಸೌಕರ್ಯಗಳನ್ನು ಪೂರೈಸಿ ಕೊಡುವುದಕ್ಕಾಗಿ ಇಮ್ಮಡಿ ಉತ್ಸಾಹದಿಂದ ಗೋಪಾಲನು ದುಡಿಯುತಿದ್ದಾನೆ ಆದರೆ ಆತನ ಆತ್ಮೀಯ ಗೆಳೆಯ ಅಶೋಕನು ಮಾತ್ರ ಈಗ ಆತನ ಸಂಗವನ್ನು ತ್ಯಜಿಸಿ ತನ್ನ ಇಚ್ಛಾಪೂರ್ತಿಗಾಗಿ ಬೇರೊಂದು ಕೂಟವನ್ನು ಕಟ್ಟಿಕೊಂಡಿದ್ದಾನೆ ಆದರೂ ತನ್ನ ಮಿತ್ರನ ಕನಸು ನನಸಾಗುತ್ತಿರುವುದನ್ನು ಕಂಡು ಆನಂದ ಭರಿತನಾಗಿ ನಾಲ್ಕು ದಿವಸಗಳಿಗೊಮ್ಮೆಯಾದರೂ ಗೋಪಾಲನನ್ನು ಭೇಟಿಯಾಗಿ ಬೆನ್ನುತಟ್ಟಿ ನಾಲ್ಕು ಪ್ರೋತ್ಸಾಹದ ಮಾತುಗಳನ್ನಾಡಿ ಹೋಗಲು ಮರೆಯುತ್ತಿಲ್ಲ

—ರಾಧಾಕೃಷ್ಣ ಯಳಚಿತ್ತಾಯ
ವಿಶಾರದ.



ನ್ಯೂಯಾರ್ಕಿನಿಂದ ಪೇರಿಸ್‌ನ ವರೆಗೆ ಅತ್ಲಾಂಟಿಕ ಸಾಗರವನ್ನು ಹಾದು ಹೋಗುವಂತೆ ಅಮೆರಿಕೆಯು ಜೆಟ್ ವಿಮಾನ ಸೇವೆಯನ್ನು ನಿತ್ಯವೂ ಒದಗಿಸುವುದು.

ಗೋವಿಜಯ
(ಗೋವಿನಕಥೆ)
ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ
ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.
60 ಪುಟಗಳು: ಬೆಲೆ 0—8—0
ನವಯುಗ ಪ್ರೆಸ್, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ
ಅಮೃತಾಂಜನ

ರಾಮತೀರ್ಥ
ಬ್ರಾಹ್ಮೀ ತೈಲ
ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 4—0—0
ಸಣ್ಣ ಬಾಟ್ಲಿಗೆ ರೂ. 2—0 —0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

NAVAYUGA
REGD. NO. M. 3619

UDIPI, THURSDAY
5-2-1959

LICENSE NO. 31
Licensed to Post without Prepayment

ಭೂಸುಧಾರಣೆ

ನಾಗಪುರ ಕಾಂಗ್ರೆಸು ಭೂಸುಧಾರಣೆಯ ಕುರಿತು ಸ್ವೀಕರಿಸಿದ ಗೊತ್ತುವಳಿಯ ಉಚಿತಾನುಚಿತಗಳವಿವೇಚನೆ

ನಾಗಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಕೃಷ್ಯುತ್ಪನ್ನವನ್ನು ಶೇಕಡಾ ೧೦೦ರಷ್ಟು ಹೆಚ್ಚಿಸಬಲ್ಲ ಭೂ ಸುಧಾರಣಾ ಯೋಜನೆಯೊಂದನ್ನು ನೀಡಿರುವುದಾಗಿ ಹೇಳಲಾಗುತ್ತಿದೆ. ಆದರ ಪ್ರಾಮುಖ್ಯ ವಿಷಯಗಳೆಂದರೆ:—

೧. ಭೂಸ್ವಾಮಿತ್ವದ ಮೇಲೆ ಪರಮಾವಧಿ ಮಿತಿ ಹೇರುವುದು ವಿನಾ ಆದಾಯದ ಮೇಲಲ್ಲ: ೨. ಪ್ರಾಂತ್ಯಗಳಲ್ಲಿ ಕೇಂದ್ರ ಸರಕಾರವು ೧೧ ಕೋಟಿ ಎಕ್ರೆ ಒಣ ಪ್ರದೇಶವನ್ನು ಕೃಷಿಯೋಗ್ಯವಾಗಿ ಪರಿವರ್ತಿಸುವುದು; ೩. ಅಂತಹ ಪರಿವರ್ತಿತ ಭೂಮಿಯನ್ನೂ ಮತ್ತು ಪರಮಾವಧಿ ಮಿತಿ ಪ್ರಯೋಗದಿಂದ ದೊರೆಯುವ ಉಳಿಕೆ ಭೂಮಿಗಳನ್ನು ಭೂರಹಿತ ಕಾರ್ಮಿಕರ ಪರವಾಗಿ ಗ್ರಾಮ ಪಂಚಾಯತುಗಳಿಗೆ ಕೊಡುವುದು ಹಾಗೂ ತಮ್ಮ ಭೂಮಿಗಳ ಮೇಲಿನ ಸ್ವಾಮಿತ್ವವನ್ನು ಕಳೆದುಕೊಳ್ಳದೆ ಇಂತಹ ಸಂಸ್ಥೆಗಳನ್ನು ಸೇರಲು ಭೂಮಾಲಕರಿಗೆ ಸ್ವಾತಂತ್ರ್ಯವೀಯುವುದು; ೪. ದೇಶದಾದ್ಯಂತ ಪ್ರತಿ ಗ್ರಾಮದಲ್ಲಿಯೂ ಸಮ್ಮಿಳಿತ ಸಹಕಾರಿ ಕೃಷಿ ಸಂಸ್ಥೆಗಳನ್ನು (Joint Co-operative Farming Society) ಗಳನ್ನು ಪ್ರಾರಂಭಿಸುವ ಸಲುವಾಗಿ ಪ್ರಥಮ ಹೆಜ್ಜೆಯಾಗಿ ಕೂಡಲೆ ಸೇವಾ ಸಹಕಾರಿ ಸಂಸ್ಥೆ (Service Co-operatives) ಗಳನ್ನು ಪ್ರಾರಂಭಿಸುವುದು. ಸಹಜವಾಗಿಯೂ ಕಾಂಗ್ರೆಸಿನ ಈ ನಿರ್ಣಯದ ದೆಸೆಯಿಂದ ಪ್ರಾಂತ್ಯಗಳಲ್ಲಿ ಈಗಾಗಲೇ ಪ್ರಕಟಪಡಿಸಿರುವ ಮಸೂದೆಗಳನ್ನು ಒಂದೋ ತಿದ್ದುಪಡಿ ಮಾಡಬೇಕಾದೀತು ಇಲ್ಲವೇ ಪೂರ್ಣವಾಗಿ ಬದಲು ಮಾಡಬೇಕಾದೀತು. ಹೈದರಾಬಾದಿನಲ್ಲಿ ಕಳೆದ ಅಧಿವೇಶನವು ಸೇರಿದ್ದಾಗ ನೇಮಿಸಲಾಗಿದ್ದ ಅಖಿಲ ಭಾರತ ಕಾಂಗ್ರೆಸಿನ ಉಪಸಮಿತಿಯು ಹಳ್ಳಿಗರಲ್ಲಿ ಪಕ್ಷಪಾತದ ಭಾವನೆಯುಂಟಾಗದಂತೆ ಎಲ್ಲಾ ಆರ್ಥಿಕ ವ್ಯವಸ್ಥೆಗಳ ಮೇಲೂ ಪರಮಾವಧಿ ಮಿತಿ ಹೇರಬೇಕೆಂದು ಸ್ಪಷ್ಟವಾಗಿ ಹೇಳಿತ್ತು. ಆದರೆ ಈ ಸೂಚನೆಯನ್ನು ನಾಯಕರು ಮನ್ನಿಸಲಿಲ್ಲ. ತೀಕ್ಷ್ಣ ವಿಧಾನದ ಕೃಷಿ, ಮಣ್ಣು ಕರಗಿಹೋಗುವುದನ್ನು ತಡೆಗಟ್ಟುವುದು, ಜಮೀನುಗಳ ಅಂಚುಗಳ ರಕ್ಷಣೆ, ನೀರಿನ ಪೂರ್ಣ ಉಪಯೋಗ ಮುಂತಾದವುಗಳನ್ನು . ಶಿಫಾರಸು ಮಾಡಲಾಗಿತ್ತಲ್ಲದೆ ಗ್ರಾಮವೊಂದಕ್ಕೆ ೧೦,೦೦೦ ರೂಪಾಯಿಯಂತೆ ಖರ್ಚು ಲೆಕ್ಕಹಾಕಲಾಗಿತ್ತು. ಪ್ರಕೃತದ ಮತ್ತು ಮುಂದಿನ ಬೆಳೆಗಳ ಮೇಲೆ ಸಾಲ ತೆರಲು ಅನುಕೂಲವಾಗುವಂತೆ ಸಹಕಾರ ಸಂಘಗಳಿಗೆ ಸರಕಾರವು ಹಣ ಒದಗಿಸಿಕೊಡುವ ಕರ್ತವ್ಯವನ್ನು ಪ್ರಾಂತ್ಯ ಸರಕಾರಗಳ ಮೇಲೆ ಹೊರಿಸಲಾಗಿತ್ತು. ಮಧ್ಯವರ್ತಿಗಳನ್ನು ಹೋಗಲಾಡಿಸಿ ಒಕ್ಕಲಿಗರಿಗೆ ಸ್ವಾಮಿತ್ವ ನೀಡುವವರೆಗೆ ಕಾಯದೆ, ಸಾಧ್ಯವಿದ್ದಲ್ಲೆಲ್ಲ ನೇರವಾಗಿ ಸಹಕಾರಿ ಸಾಗುವಳಿಯನ್ನು ಪ್ರಾರಂಭಿಸುವ ಇಚ್ಛೆಯೂ ಅವರಿಗಿದೆ. ಆದರೆ ಈ ಯಾವುದೇ ಬದಲಾವಣೆಯು ಕೃಷ್ಯುತ್ಪನ್ನವನ್ನು ಕಡಿಮೆ ಮಾಡಬಾರದೆಂದೂ ಅವರೆನ್ನುತ್ತಾರೆ.

ಉತ್ಪನ್ನವು ಹೆಚ್ಚಾಗಬೇಕಾದರೆ ಹೊಸತಾಗಿ ಭೂಮಾಲಕರಾಗುವಂತಹ ಗ್ರಾಮ ಪಂಚಾಯತಗಳಿಗೆ ಹಾಗೂ ಹೊಸತಾಗಿ ಕೃಷಿಗಾರರಾಗುವ ಸಮ್ಮಿಳಿತ ಕೃಷಿಕ ಸಹಕಾರ ಸಂಘಗಳಿಗೆ ಸಾಕಷ್ಟು ಮೂಲಧನ, ಮುಂದಾಳುತನ ಹಾಗೂ ಕೃಷಿಯ ವಿಶಿಷ್ಟ ಜ್ಞಾನ-ಇವುಗಳು ಅತ್ಯವಶ್ಯ. ಈ ಎರಡು ಸಂಸ್ಥೆಗಳೂ ತಕ್ಕ ಶಾಸನ ಮುಖೇನ ಇನ್ನು ಅಸ್ತಿತ್ವಕ್ಕೆ ಬರಬೇಕಷ್ಟೆ. ಗ್ರಾಮ ಪಂಚಾಯತಗಳೊಂದಿಗೆ ಸೇರಿಕೊಂಡು ಸಹಕಾರ ಸಂಘಗಳ ಮೂಲಕ ಸಾಗುವಳಿ ಮಾಡುವ ಭೂರಹಿತರಿಗೆ ಸಾಗುವಳಿಗೆ ಅವಶ್ಯವಿರುವ ಧನ ಸಹಾಯವು ಸರಕಾರದಿಂದ ಬರಬೇಕಾದೀತು. ಇದು ಸರಕಾರಿ ಟ್ರೆಜರಿಗೆ ಹೊರಲಾರದ ಹೊರೆ ಹಾಗೂ ಅಧಿಕೋತ್ಪನ್ನವೆಂಬುದು ಭೂರಹಿತ ಹಾಗೂ ಅವಿದ್ಯಾವಂತ ಜನತೆಗೆ ಅತಿ ಕಠಿಣವಾದುದು. ಪಟ್ಟಣಿಗರಿಗೆ ಅಥವಾ ನಿರ್ಯಾತಕ್ಕೆ ಉಳಿಯುವಷ್ಟು ಬೆಳೆಸುವುದಂತಿರಲಿ, ಅವರು ತಮಗೆ ಬೇಕಾದಷ್ಟನ್ನಾದರೂ ಉತ್ಪಾದಿಸಬಲ್ಲರೆಂಬುದು ಸಂದೇಹಾಸ್ಪದ. ಪ್ರತಿ ಗ್ರಾಮದಲ್ಲಿಯೂ ಈ ಸಹಕಾರ ಸಂಘಗಳನ್ನು ನಡೆಸಲು ತಕ್ಕ ಮನುಷ್ಯರು ಸಿಗುವುದೂ ಜಮೀನಿನಿಂದಾಗಲಿ ಸರಕಾರದಿಂದಾಗಲಿ ಆಡಳಿತೆಯ ಖರ್ಚು ವೆಚ್ಚಗಳಿಗೆ ಹಣ ಪೂರೈಸುವುದೂ ಯೋಗ್ಯ ನೌಕರ ವರ್ಗ ಆಫೀಸು ಇತ್ಯಾದಿಗಳು ಲಭಿಸುವುದೂ ವಿವೇಚಿಸತಕ್ಕ ತೀವ್ರ ಸಮಸ್ಯೆಗಳು. ದೇಶದಲ್ಲಿ ಈ ಮೊದಲು ಪ್ರಾರಂಭಿಸಲಾಗಿದ್ದ ಒಂದು ಸಾವಿರ ಸಹಕಾರಿ ಕೃಷಿ ಸಂಸ್ಥೆಗಳಲ್ಲಿ ಒಂದು ಕೂಡಾ ಸಫಲವಾಗುವುದಂತಿರಲಿ, ಒಟ್ಟಿನ ಮೇಲೆ ನಮ್ಮ ದೇಶದಲ್ಲಿ ಪಂಚಾಯತುಗಳೂ ಯಶಸ್ವಿಯಾಗಿ ಕಾರ್ಯವೆಸಗಿಲ್ಲವೆಂಬುದು ಗಮನಾರ್ಹ ವಿಚಾರ. ಆದರೆ ನಿಯೋಜಿತ ಭೂ ಸುಧಾರಣೆಗಳು ದೇಶದಲ್ಲಿ ಹೊಸ ಹುರುಪನ್ನೂ ಯತ್ನಗಳನ್ನೂ ಹುಟ್ಟಿಸುವುವೆಂದು ಕಾಂಗ್ರೆಸ್ ನಾಯಕರ ಯೋಚನೆಯಾಗಿದೆ. ಯೋಜನೆಯ ವಿವರಗಳನ್ನು ರೂಪಿಸುವವರು ಆಯಾ ರಾಜ್ಯಗಳವರಾದ್ದರಿಂದ ರಾಜ್ಯದ ಸಚಿವರುಗಳು ಮುಖಂಡರ ಕೃಪಾಕಟಾಕ್ಷದ ಲಾಭಕ್ಕೆ ಕುಣಿಯದೆ ಪರಿಸ್ಥಿತಿಯ ನೈಜ ಚಿತ್ರವನ್ನು ಅರಿತುಕೊಂಡು ವರ್ತಿಸುವರಾಗಿ ಕೃಷಿಕರು ನಂಬಿದ್ದಾರೆ.

ಪರಮಾವಧಿ ಮಿತಿಯನ್ನು ಇತರ ಎಲ್ಲರಿಗೂ ಅನ್ವಯಿಸಬೇಕೆಂದೂ ಪೇಟೆ-ಪಟ್ಟಣಿಗರೇ ಅಧಿಕವಾಗಿರುವ ನಮ್ಮ ಶಾಸಕರು ಪರಮಾವಧಿ ಮಿತಿ ಹೇರುವುದಾದರೆ ಮೊದಲು ತಮ್ಮ ಮೇಲೆಯೇ ಹೇರಿಕೊಳ್ಳಬೇಕೆಂದೂ ಕೃಷಿಕರ ಕೇಳಿಕೆಯಾಗಿದೆ. ಕೃಷಿಕರ ಮೇಲೆ ಆದಾಯದ ಮಿತಿ ಹೇರುವ ಮೊದಲು ಅಂತಹ ಮಿತಿಯು ಎಷ್ಟೇ ಆಗಿರಲಿ-ಬುಡದಿಂದ ಕೊನೆವರೆಗೆ ಸರ್ವ ಮಂತ್ರಿಗಳು, ಯಂ. ಪಿ.ಯವರು, ಎಮ್. ಎಲ್. ಎ.ಯವರು ಹಾಗೂ ಎಲ್ಲಾ ನೌಕರರು ತಮ್ಮ ತಮ್ಮ ವರಮಾನಗಳನ್ನು ಈ ಮಿತಿಗೆ ಇಳಿಸಿಕೊಳ್ಳುವುದನ್ನು ನಾವು ನೋಡಬೇಕು. ಆದಾಯ ಮಿತಿಯು ಅನ್ಯಾಯವನ್ನಾಗಲಿ ಜೀವನದ ಅನುಕೂಲತೆಗಳನ್ನು ತಮಗೆ ನಿರಾಕರಿಸುವುದನ್ನಾಗಲಿ ಕೃಷಿಕರು ಮೌನವಾಗಿ ಸಹಿಸಿಕೊಂಡಾರೆಂದು ಯೋಚಿಸುವುದು ತಪ್ಪು.

—ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ,

ಇತಿಹಾಸ ಪೃಷ್ಠ

(೧ನೇ ಪುಟದಿಂದ)

ಶ್ರೀ ವಲ್ಲಭಭಾಯಿ ಪಟೇಲರು ನಿಜವಾಗಿಯೂ ಗೃಹಮಂತ್ರಿಯಾಗಿದ್ದರೂ ಲಿಯಾಖತ್ ಅಲೀಖಾನರ ಸಹಮತವಿಲ್ಲದೆ ಹೋದರೆ ತಾವು ಚಪರಾಸಿಗಿಂತಲೂ ನಿಕೃಷ್ಟನೆಂದು ಅನುಭವ ಪಡೆದರು. ಇದರಿಂದಾಗಿ ಅವರು ಕ್ರುದ್ಧರಾದರು. ಆದುದರಿಂದ, ಲಾರ್ಡ್ ಮೌಂಟ್ ಬೇಟನರ ಮುಖದಿಂದ ಬಂದ ವಿಭಜನೆಯ ಸೂತ್ರವನ್ನು ಸ್ವೀಕರಿಸಿದ ಮೊತ್ತಮೊದಲಿಗರವರಾದರು.

ಉಕ್ಕಿನ ಮನುಷ್ಯ ಸರದಾರರನ್ನೂ ಇಲಿಯನ್ನಾಗಿ ಮಾಡಿ ತನ್ನ ಸೂಚನೆಗೆ ಒಡಂಬಡಿಸಿಕೊಂಡ ಮೇಲೆ, ಲಾರ್ಡ್ ಮೌಂಟ್ ಬೇಟನ್ನರ ದೃಷ್ಟಿ ಪಂಡಿತ ನೆಹರೂರವರತ್ತ ಹರಿಯಿತು. ಪ್ರಾರಂಭದಲ್ಲಿ ಅವರೀ ಯೋಜನೆಯನ್ನು ತೀವ್ರವಾಗಿ ವಿರೋಧಿಸಿದರು. ಆದರೆ, ಮೌಂಟ್ಬೇಟನರು ಭಾರತಕ್ಕಾಗಮಿಸಿದ ಒಂದು ತಿಂಗಳೊಳಗೆ ಇವರ ಅಭಿಪ್ರಾಯವೂ ಬದಲಾಯಿತು! ಈ ರೀತಿಯ ಪರಿವರ್ತನೆಯಾಗಲು ಸರದಾರ ಪಟೇಲರ ಪ್ರಭಾವವೂ ಕಾರಣವಾಯಿತು; ಆದರೂ ಅದು ಇಷ್ಟರಿಂದಲೇ ನಿರ್ಣಾಯಕ ರೂಪವನ್ನು ಪಡೆಯುವಂತಿಲ್ಲವಿತ್ತು. ಶ್ರೀ ಜವಾಹರಲಾಲ ನೆಹರೂ ಲಾರ್ಡ್ ಮೌಂಟ್ ಬೇಟನ್ನರಿಂದ ಪ್ರಭಾವಿತರಾಗಿದ್ದರು; ಅದಕ್ಕಿಂತಲೂ ಹೆಚ್ಚಾಗಿ, ಶ್ರೀಮತಿ ಮೌಂಟ್ ಬೇಟನ್ ಅವರ ಮೇಲೆ ತನ್ನ ಪ್ರಭಾವವನ್ನು ಬೀರಿದ್ದರು! ಶ್ರೀ ವಿ. ಕೆ. ಕೃಷ್ಣ ಮೆನನ್ನರಿಂದಲೂ ಶ್ರೀ ನೆಹರೂ ಪ್ರಭಾವಿತರಾಗಿದ್ದರು. ಶ್ರೀ ಮೆನನ್ನರು ಹೆಚ್ಚಾಗಿ, ಅವರಿಗೆ ತಪ್ಪು ಸಲಹೆಗಳನ್ನೇ ಕೊಡುತ್ತಾ ಬರುತ್ತಿದ್ದರು!

ಆಗ ಉಳಿದೊಬ್ಬ ವ್ಯಕ್ತಿ ಗಾಂಧಿಜೀ. ಅವರು ತನ್ನ ಶವವನ್ನು ಪಕ್ಕಕ್ಕೆಸೆದು ಈ ವಿಭಜನೆಯ ಸೂತ್ರವನ್ನು ಸ್ವೀಕರಿಸಬೇಕೆಂದು ಮೊದಲಿಗೆ ಗುಡುಗಾಡಿದರು. ಆದರೆ, ಕೆಲವೇ ದಿನಗಳಲ್ಲಿ ಅವರ ಮೇಲೂ ಭಾರತೀಯ ನೇತಾರರಿತರರ ಪ್ರಭಾವವೂ ಮೌಂಟ್ ಬೇಟನ್ನರ ಮಾತುಗಳೂ ತೀವ್ರ ಪರಿಣಾಮವನ್ನು ಬೀರಿ, ವಿಭಜನೆಗೆ ಅವರ ಒಪ್ಪಿಗೆಯೂ ದೊರೆಯುವಂತಾಯಿತು.

ಇತಿಹಾಸದ ಪುಟಗಳನ್ನೇ ಬದಲಾಯಿಸಿದ ಈ ಭಾರತವಿಭಜನೆಯ ಘಟನೆಯು ನಡೆಯುದಿರಬೇಕಾಗಿದ್ದರೆ, ಮುಸ್ಲಿಂ ಲೀಗನ್ನು ಕೆರಳಿಸದೆ, ತನ್ನೊಂದಿಗೆ ಹೊಂದಿಸಿಕೊಂಡು ಹೋಗಬೇಕಾಗಿತ್ತು. ಆದರೆ ಪಂಡಿತ ನೆಹರೂರವರ ಮಹಾಪರಾಧದ್ವಯಗಳಿಂದ ಭಾರತೇತಿಹಾಸ ಪರಿವರ್ತಿತವಾಯಿತು; ಬ್ರಿಟಿಷ ಆಳರಸರ ಆಶಾಲತೆಗೆ ನೀರೆರೆಯಿತು. ಹೀಗಾಗದೇ ಹೋಗಿದ್ದರೆ, ಅಖಂಡ ಭಾರತವಿಂದಿಗೂ ಉಳಿಯುವುದು ಸಾಧ್ಯವೆನಿಸಬಹುದಿತ್ತು.

ಕಾರ್ಕಳ ಡಿ.ಮು. ಕೋರ್ಟಿನಲ್ಲಿ

O.S. No 447/1958

ಜನಾರ್ಧನ ಶೆಣೈ—ವಾದಿ.

ಮತ್ತು

ಅಚ್ಯುತನ್ಯಾಕ ಕೂಡಾ—ಪ್ರತಿವಾದಿರು

ಇವರೊಳಗೆ

ಈ ಮೂಲ್ಕ ಸದ್ರಿ ದಾವೆಯ 1ನೇ ಪ್ರತಿವಾದಿ ಅಚ್ಯುತನ್ಯಾಕ ಜರ್ಪಪ್ಪ ನ್ಯಾಕ್ರ ಮಗ, ಕಾರ್ಕಳ ತಾಲ್ಲೂಕು ಕುಕ್ಕುಜೆ ಗ್ರಾಮದಲ್ಲಿರುವವರಿಗೆ ತಿಳಿಸುವದೇನಂದ್ರೆ-

ವಾದಿಯು ನಿಮ್ಮ ಮೇಲೆ ಕೂಡಾ, ಕೋರಡವಿನ ಹಣಗಳನ್ನು ಬರಮಾಡಿಕೊಳ್ಳುವ ಬಗ್ಗೆ ಮಾಡಿದ ಮೇಲ್ಕಂಡ ದಾವಾ ನಿಮ್ಮ ಹಾಜರಾತಿ ಬಗ್ಗೆ ತಾರೀಕು 28-2-1959ಕ್ಕೆ ಇಟ್ಟಿದೆ. ನೀವು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು-ತಪ್ಪಿದಲ್ಲಿ ನಿಮ್ಮ ಗೈರು ಹಾಜರಿ ಸಂಬಂಧ ನಿಮ್ಮನ್ನು ಶಿಮ್ಯಾ ಮಾಡಿ ಸದ್ರಿ ದಾವಾ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

(By order of the court.)

N. M. Adyanthaya,
Advocate for Plff.

Karkala, 30-1-1959

ಪಯಣದ ಹಾದಿಯಲ್ಲಿ............

ಹರದಾರಿ ನಡೆದು, ಹೊಸ ಊರು ಕಂಡು, ಇಲ್ಲೊಂದು ಅಲ್ಲೊಂದು ಶಾಖೆಯನ್ನು ತೆರೆಯುವುದೆಂದರೆ ನಮ್ಮ ಬೇಂಕಿನ ಉದ್ಯೋಗಸ್ಥರಿಗೆ ಎಲ್ಲಿಲ್ಲದ ಹುರುಪು - -ದಕ್ಷಿಣ ಭಾರತದಲ್ಲಿ ಅತ್ಯುತ್ತಮ ಬೇಂಕಿಂಗ್ ಸೇವೆಯನ್ನು ಸಲ್ಲಿಸಿ ಕ್ಷಿಪ್ರಗತಿಯಿಂದ ಮುಂದುವರಿಯುವ "ಸಿಂಡಿಕೇಟ್ ಬೇಂಕ್" ಇನ್ನೈದು ಮೈಲುಕಲ್ಲುಗಳನ್ನು ಬೇಗನೆ ದಾಟಲಿದೆ; ಆಧುನಿಕ ಬೇಂಕಿಂಗ್ ವ್ಯವಹಾರದ ಸಂದೇಶವನ್ನು ಇನ್ನಷ್ಟು ವಿಸ್ತಾರವಾಗಿ ಹರಡಲಿದೆ. ..

ದಾಂಡೇಲಿ .... ಉತ್ತರ ಕನ್ನಡ, ಮೈಸೂರು.
ಕಾಕಿನಾಡ .... ಪೂರ್ವ ಗೋದಾವರಿ, ಆಂಧ್ರ.
ನೆಲ್ಲೂಡು .... ನೆಲ್ಲೂರು, ಆಂಧ್ರ.
ವೆಲ್ಲೂರು .... ಉತ್ತರ ಆರ್ಕಾಟು, ಮದರಾಸು.
ಯಾದಗಿರಿ .... ಗುಲ್ಬರ್ಗ, ಮೈಸೂರು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.... ಮೈಸೂರು ರಾಜ್ಯದಲ್ಲಿ ಅತ್ಯಧಿಕ ಶಾಖೆಗಳಿರುವ ಬೇಂಕ್.

Edited, Printed & Published by K, H. Shetty, at the Navayuga Press, Udipi, S, India,

ನವಯುಗ

ವಾ ಚಂದಾ ರೂ 5-75} ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ ಪೈಸೆ

ವರುಷ ೩೮ ವಾರ ೨೨. 12 -2-1959 Vol. 38. No. 22.

ಅಭಿಪ್ರಾಯ

ಇಂದಿರಾ ಗಾಂಧಿಯವರು ಕಾಂಗ್ರೆಸ್ ಅಧ್ಯಕ್ಷರಾದರು

ಆದರಿದು ಔಚಿತ್ಯರಹಿತ ಆಕಾಲಿಕ ಆಯ್ಕೆಯಾಗಿದೆ

ಅಖಿಲ ಭಾರತೀಯ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನವು ಶ್ರೀಮತಿ ಇಂದಿರಾ ಗಾಂಧಿಯವರ ನೇಮಕದಿಂದ ಪೂರ್ಣವಾಯಿತು. ಕಾಂಗ್ರೆಸ್ ಅಧ್ಯಕ್ಷಪದವಿಯನ್ನು ಇಂದಿರಾ ಗಾಂಧಿಯವರು ಇದೇ ತಾರೀಕು ೮ರಂದು ಸ್ವೀಕರಿಸಿಕೊಂಡದ್ದೂ ಆಯಿತು. ಈ ಆಯ್ಕೆಯ ಬಗ್ಗೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿವೆ ಸ್ವಯಂ ಪಂಡಿತ ನೆಹರೂರವರೇ ತಾನು ಪ್ರಧಾನಿಯಾಗಿರುವಾಗ, ತನ್ನ ಮಗಳು ಕಾಂಗ್ರೆಸ್ ಅಧ್ಯಕ್ಷಸ್ಥಾನವನ್ನು ಅಲಂಕರಿಸುವುದು ಅಷ್ಟು ಸಮಂಜಸವಲ್ಲ ಎಂದು ವ್ಯಕ್ತಪಡಿಸಿದ್ದಾರೆ ಈ ಅಭಿಪ್ರಾಯವು ಉಚಿತವಾದುದೇ ಆಗಿದೆ. ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿರುವಾಗ, ಅಂತಹ ಪಕ್ಷದ ಧ್ಯೇಯ ಧೋರಣೆಗಳನ್ನು ರೂಪಿಸುವ ಸಮಿತಿಯ ಸರ್ವೋಚ್ಚ ಪದದಲ್ಲಿ ಪ್ರಧಾನಿಯ ಪುತ್ರಿ ರಾರಾಜಿಸುವುದು ನಿಜವಾಗಿಯೂ ಶ್ರೇಯಸ್ಕರವಲ್ಲ ಆದರಿಂದ ಆಡಳಿತೆಯ ಮೇಲೆ ತೀರಪರಿಣಾಮ ಬೀಳುವುದು ಸುಸಾಧ್ಯ.

ಪಂಡಿತ ನೆಹರುರವರನ್ನು ವಂತೆ ನಾಗಪುರ ಕಾಂಗ್ರೆಸ್ ಅಧಿವೇಶನದ ಅಂತ್ಯದ ಗಳಿಗೆಯಲ್ಲಿ ಈ ಸೂಚನೆಯು ಮುಂದೆ ಬಂದುದು. ಇದನ್ನು ಕೇಳಿದೊಡನೆಯೇ ಅವರು ಒಮ್ಮೆಗೆ ಆಶ್ಚರ್ಯಚಕಿತರಾದರು ಮುಂದೆ, ದೀರ್ಘಾಲೋಚನೆ ಮಾಡಿ, ಈ ವಿಷಯದಲ್ಲಿ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಲು ಹಾಗೂ ತಮ್ಮ ಪ್ರಭಾವವನ್ನು ಬೀರಲು ಹೋಗಲಿಲ್ಲ. ಆದರೆ, ನೆಹರೂರವರು ತಾನು ಪ್ರಧಾನಿಯಾಗಿರುವಾಗ, ತನ್ನ ಮಗಳು ಕಾಂಗ್ರೆಸ್ ಅಧ್ಯಕ್ಷೆಯಾಗುವುದು ಸರಿಯಲ್ಲ ಅಥವಾ ಬೇಡ ಎಂಬ ಅಭಿಪ್ರಾಯದಿಂದಿದ್ದರೆ, ಅವರು ಆಗಲೇ ಅದನ್ನು ಸ್ಪಷ್ಟೋಕ್ತಿಗಳಲ್ಲಿ ಆಡಿಬಿಡಬಹುದಿತ್ತು; ಆಗ ಈ ಆಯ್ಕೆಯು ಆಗುತ್ತಿರಲೇ ಇಲ್ಲ ಪ್ರಧಾನಿಯವರ ಮನೋಭಿಲಾಷೆಯೂ ಪೂರ್ತಿಯಾಗುತಿತ್ತು; ಉಚಿತತೆಯೇ ಕಾರ್ಯಾನುಷ್ಠಾನಕ್ಕೆ ಬರುತಿತ್ತು.

ಆದರೆ, ಪ್ರಧಾನಿ ನೆಹರೂ ಆ ರೀತಿ ತಿಳಿಸದೆ ಹೋದರು. ಅವರ ಮೌನವೇ ಸಮ್ಮತಿ ಸೂಚನೆಯ ದ್ಯೋತಕವಾಗಿ ಪರಿಣಮಿಸಿತು. ಶ್ರೀಮತಿ ಇಂದಿರ ಗಾಂಧಿಯವರ ನಾಮಪತ್ರವು ಸಲ್ಲಿಸಲ್ಪಟ್ಟ ಮೇಲೆ, ಅದಕ್ಕೆ ಪ್ರಧಾನಿಯವರ ಅನುಮತಿಯೂ ಪರೋಕ್ಷವಾಗಿ ದೊರೆಯಿತೆಂಬ ಮೇಲೆ, ಅದಕ್ಕೆದುರಾಗಿ ನಾಮಪತ್ರ ಸಲ್ಲಿಸುವ ಧೈರ್ಯವು ಯಾವ ಕಾಂಗ್ರೆಸ್ ರಾಜಕಾರಣಿಗೂ ಇರಲಾರದ ಪ್ರಧಾನಿಯವರನ್ನೇ ಮೆಚ್ಚಿಸಿ, ತಂತಮ್ಮ ಪ್ರಾದೇಶಿಕ ಸ್ಥಾನಗಳನ್ನು ಭದ್ರವಾಗಿರಿಸುವುದರಿಂದಲೇ ತಮ್ಮ ಶ್ರೇಯಸ್ಸಡಗಿದೆ ಎಂದು ಭಾವಿಸಿರುವ ಕಿರುನಾಯಕರು ಇದಾವುದಕ್ಕೂ ಚಿಂತಿಸದೆ, ಮೌನವಾಗಿಯೇ ಕೂತುಕೊಳ್ಳುವುದು, ಅನಿವಾರ್ಯವೇ ಆಯಿತು ಆದರೂ ನಾಮ ಮಾತ್ರಕ್ಕೆ ನಾಮಪತ್ರಸಲ್ಲಿಸಿದವರೂ ಕೊನೆಯ ಗಳಿಗೆಯಲ್ಲಿ ಅದನ್ನು ಹಿಂತೆಗೆದುಕೊಂಡರು. ಹೀಗೆ ನೆಹರೂ ಮಗಳು ಅವಿರೋಧವಾಗಿ ಕಾಂಗ್ರೆಸ್ ಅಧ್ಯಕ್ಷಿಣಿಯಾಗಿ ಆಯ್ಕೆಗೊಂಡಳು

ಆಯ್ಕೆಯು ಸಿದ್ಧವಾದ ಮೇಲೆ ನೆಹರು ತನ್ನ ಅರ್ಧ ಮನಸ್ಸಿನ ಭಾವನೆಯನ್ನು ಹೊರ ಹೊಮ್ಮಿಸಿದರೆ, ಅದು ಔಪಚಾರಿಕವಾಗಿ ಮಾತ್ರ. ಅವರ ಅಂತಃಕರಣವು ಈ ಆಯ್ಕೆಯನ್ನು ಬೆಂಬಲಿಸುತಿತ್ತು ಎಂದು ನಂಬದೆ ಇರಲು ಸಾಕಷ್ಟು ಸಬಲಕಾರಣಗಳಿಲ್ಲ.

ಈಗ, ಒಂದು ಪ್ರಶ್ನೆ ಎದ್ದು ಬರುತ್ತದೆ: ತಂದೆ ಪ್ರಧಾನಿಯಾಗಿರುವಾಗ ಮಗಳು ಆಡಳಿತ ಪಕ್ಷದ ಉಚ್ಚ ಪದದಲ್ಲಿರುವುದು ತಪ್ಪೆ? ಅಥವಾ ತಂದೆ ಇಲ್ಲವೇ ತನ್ನ ನಿಕಟ ಸಂಬಂಧಿಯೊಬ್ಬನು ಪ್ರಧಾನಿಯಾಗಿರುವಾಗ ಶಾಸನಿಕ ಪಕ್ಷದ ಅಧ್ಯಕ್ಷ ಪದವಿಯನ್ನು ತಾನು ಸ್ವೀಕರಿಸಬಾರದೆ? ತಾನು ಅಂತಹ ಪುರುಷನೊಂದಿಗಿರುವ ಸಂಬಂಧವೇ ತನ್ನನ್ನು ಹುದ್ದೆಯಿಂದ ವಂಚಿಸುವುದು ನ್ಯಾಯವೆ? ಎಂದರೆ, ಇಂದಿರಾ ಗಾಂಧಿ ನೆಹರೂರವರ ಮಗಳಾದುದು ಆಕೆಯ ತಪ್ಪೆ? ಆ “ತಪ್ಪಿ”ನಿಂದಾಗಿ ಆಕೆ ಕಾಂಗ್ರೆಸ್ ಅಧ್ಯಕ್ಷೆಯಾಗಬಾರದೆ? ಇತರ ಕಾಂಗ್ರೆಸಿಗರಿಗಿರುವ ಹಕ್ಕು ಆಕೆಗೆ ಮಾತ್ರ ಇರಬಾರದೆ?

ಇದು ಗಡುತರ ಪ್ರಶ್ನೆ ಇದನ್ನು ಅಷ್ಟು ಸುಲಭದಲ್ಲಿ ಉತ್ತರಿಸುವುದೂ ಅಸಾಧ್ಯ ಕಾಂಗ್ರೆಸ್ ಸದಸ್ಯರಿಗೆ ಇರುವ ಅಧಿಕಾರ ಆಕೆಗೂ ಇದೆ. ಆಕೆಯೂ ಕಾನೂನಿನ ದೃಷ್ಟಿಯಿಂದ ಕಾಂಗ್ರೆಸ್ ಅಧ್ಯಕ್ಷೆಯಾಗಬಹುದು ಪ್ರಧಾನಿ ನೆಹರೂರವರ ಮಗಳೆಂಬ ಕಾರಣದಿಂದ ಮಾತ್ರ ಆಕೆ ಇದಕ್ಕೆ ಹೊರತಾಗುವುದು ನ್ಯಾಯವಲ್ಲ. ಅದವಾ ಪ್ರಧಾನಿ ನೆಹರೂರವರ ತಪ್ಪೂ ಅಲ್ಲ. ಕಾನೂನು ಬದ್ಧವಾಗಿ ಅದನ್ನು ಅಲ್ಲಗಳೆಯುವುದೂ ಅಸಾಧ್ಯ. ಆದರೆ, ನಾವು ಕೇವಲ ಕಾನೂನನ್ನು ಮಾತ್ರ ನೋಡಿಕೊಂಡರೆ, ರಾಷ್ಟ್ರದ ಕಡೆಗೆ ಗಮನ ಹರಿಸಿದಂತಾಗಲಿಲ್ಲ. ನೆಹರೂ ಭಾರತದ ಪುರೋಭಿವೃದ್ಧಿಗಾಗಿ ಅಹರ್ನಿಶಿ ಯೋಚಿಸಿ, ದುಡಿಯುತ್ತಿರುವ ವ್ಯಕ್ತಿ. ಭಾರತವೆಂದರೆ ನೆಹರೂ, ನೆಹರೂ ಎಂದರೆ ಭಾರತ—ಎಂದಿಷ್ಟು ಸಾಮ್ಯ ಭಾರತ ನಹರೂರವರ ನಡುವಿದೆ ನೆಹರೂ ಸರ್ವಾಧಿಕಾರಿಯಾಗಿದ್ದಾರೆಂಬ ದೂರೂ ಕೇಳಿ ಬರುತ್ತಿದೆ ಹಾಗಿರುವಾಗ, ಇಂದಿ

(೧೨ನೇ ಪುಟ ನೋಡಿರಿ)

ಅರ್ಲ್ ಮೌಂಟ್ ಬೇಟನರು ರಾಜನೌಕಾಶಾಲಾವಿದ್ಯಾರ್ಥಿಗಳ ಪ್ರದರ್ಶನವನ್ನು ಉದ್ಘಾಟಿಸುತಿದ್ದಾರೆ

ದಿ ವಿಜಯ ಬೇಂಕ್ ಲಿಮಿಟೆಡ್,

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:-
ಮಂಗಳೂರು—3.

ಸ್ಥಾಪನೆ -
1931

ಈ ಬೇಂಕನ್ನು ಇಂದಿನ
ಉನ್ನತಿ ಸ್ಥಾನಕ್ಕೆ ತರಲು
ಪರಿಶ್ರಮಿಸಿದ ಪ್ರತಿಯೊಬ್ಬ
ರಿಗೂ ನಮ್ಮ ನಮ್ರ ಕೃತಜ್ಞತೆಗಳು.

NAVAYUGA WEEKLY, UDIPI, S. India.

ಕಥಾವಿಹಾರ

ಕಟ್ಟಲಿರುವ ಮಂದಿರ ಮುರಿದೇ ಹೋಯಿತು!

ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಲು ತೆರಳಿದ ಬಾಬೂರವರಿಗೆ ಮೂರುದಶಕಗಳ ಹಿಂದಿನ ಸಂಸ್ಮರಣೆ ಬಂದಿತು.

೧

“ಶಂಕರಾ! ಶಂಕರಾ!! ಏ ಶಂಕರ!!! ಗಾಡಿಯನ್ನು ಇಲ್ಲಿಯೇ ನಿಲ್ಲಿಸು. ಪ್ರಭುವು ಈ ವರೆಗೆ ಬರಲಿಲ್ಲ. ನೋಡು, ಆ ಕೂಡು ರಸ್ತೆಯಲ್ಲಿ! ಅವನೇಕೆ ಇಂದು ತಡಮಾಡಿದನೋ?”

“ಮೇಲಿನ ವಾಕ್ಯವೃಂದ ಇಪ್ಪತ್ತೈದು ವರ್ಷಗಳ ಪೂರ್ವದಲ್ಲಿ ಇದೇ ರಸ್ತೆಯಲ್ಲಿ ಕೇಳಬರುತ್ತಿತ್ತು. ಅದೇ ಇಂದು ಕೇಳಬರುತ್ತದೆ ಅವೇ ವ್ಯಕ್ತಿಯೇ ಇಂದು ಅನ್ನುತ್ತಿದ. ಈ ವ್ಯಕ್ತಿ ಯಾರು ...??”

“ಅವಳು ಶಹರದ ಓರ್ವ ಪ್ರತಿಷ್ಠಿತನ ಮಗಳು. ಕೆಲವರು ಜನ್ಮತಃ ಸಿರಿದೇವಿಯನ್ನು ವರಿಸಿ ಬಂದಿರುತ್ತಾರೆ. ಇನ್ನೂ ಕೆಲವರು ವಯಪಾಗಿ ಮೂಗಿನ ಮೇಲೆ ಕೋಪದ ಸೊಬಗು—ಸಿರಿಯನ್ನು ತುಂಬಿಕೊಂಡು ಕೊನೆಯುಸಿರು ನಿಲ್ಲುವವರೆಗೂ ಆ ಸಿರಿ ಕುವರಿಯನ್ನು ಪಡೆಯದೇ ಪೆಚ್ಚು ಮುಖದಿಂದ ಅದೆಲ್ಲಿಯೋ ಮಣ್ಣಲ್ಲಿ ಮುಚ್ಚಿಹೋಗಿದ್ದಾರೆ. ಅಂಥವರ ಎಣಿಕೆಯ ದಿನಗಳಿಗೆ ಧನ್ಯವಾದಗಳು. ಅವರು ಸುಭಾಗ್ಯ ಬವಣೆಯಲ್ಲಿರುವರು. ಅವರ ಚಿಂತೆ ಬೇಡ. ಆದರೆ ಇಹದಲ್ಲಿ ಮಾತ್ರ; ಯಾವಳನ್ನು ಪಡೆಯಲು ಹಗಲಿರುಳು ಕನವರಿಸಿ ಕರೆಯುತ್ತಿರುವರೋ, ಯಾರಿಗಾಗಿ ಧೂಪ, ದೀಪ, ನೇಮ, ವ್ರತಾಚಾರಗಳಿಂದ ಮಣ—ಮಣ ಮಂತ್ರೋಚ್ಚಾರಣೆ ಮಾಡುವರೋ, ಯಾರನ್ನು ಸತ್ ಚರಿತ್ರರು ತುಚ್ಛೀಕರಿಸುವರೋ ಅಂಥ ನಿರ್ಲಜ್ಜ, ನಿಷ್ಕರುಣೆ, ಧೂರ್ತ, ಚಂಚಲಶ್ರೀಗಾಗಿ ಈ ಮಹಾ ಪುರುಷರು ಯಾವ ಕಷ್ಟವನ್ನು ಉಂಡಂತೆ ಕಾಣಲಿಲ್ಲ. ಅವಳೇ ಓಡಿಬಂದು ಮನೆಯನ್ನು ಹೊಕ್ಕಿದ್ದಾಳೆ. ಅವರಪ್ಪ ಕರೆತಂದನೋ, ಅವರಜ್ಜ ಕರೆದು ತಂದನೋ ಅದು ತಿಳಿಯದು. ಅಂತೂ ಆ ಸಿರಿಯನ್ನು ತಮ್ಮ ಪ್ರೇಮ ಮೂರ್ತಿಯನ್ನಾಗಿ ಸುಖದ ಸಾಮ್ರಾಜ್ಯದಲ್ಲಿ ವಿಹರಿಸುವವರ ಏಕಮಾತ್ರ ಪುತ್ರಿಯೇ ಮನು. ಅವಳು ಅಂದು ಮಾತಾಡಿದ ಮಾತು. ಅಂದು ಅವಳು ಮೊಂಟೇಸರಿ ಪದ್ಧತಿ ಶಿಕ್ಷಣ ಕೇಂದ್ರದಲ್ಲಿ ಓದುತ್ತಿದ್ದಳು. ಅವಳನ್ನು ಶಾಲೆಗೆ ಕರೆತರುವದಕ್ಕೂ, ಕರೆದೊಯ್ಯುವದಕ್ಕೂ ಮಧ್ಯಂತರ ಚಹಾಪಾನಕ್ಕೂ ಕಾರು ಮನೆಯಿಂದ ಶಾಲೆಗೆ ಓಡಾಡುತ್ತಿದೆ. ಅಂತೂ ಅವಳ ಚಲನವಲನ ಕಾರಿನಿಂದಲೇ.”

ಎಷ್ಟೋ ವರ್ಣನಕಾರರು ಸಾಹುಕಾರರನ್ನು — ಬಡವರನ್ನೂ ಪ್ರತ್ಯೇಕ್ಕರಿಸಿ ಭೂತಗನ್ನಡಿಯಿಂದ ಕಂಡ ತೆರದಲ್ಲಿ ಬರೆಯುತ್ತಾರೆ. ಓರ್ವನನ್ನು ಅತ್ಯಂತ ಎತ್ತರದ ಶಿಖರದ ಮೇಲೆ ನಿಲ್ಲಿಸಿ ಇನ್ನೊಬ್ಬನನ್ನು ಅಷ್ಟೇ ನಿಕೃಷ್ಟ ಸ್ಥಾನದಲ್ಲಿ ನಿಲ್ಲಿಸಿ ಅವನ ಅವಹೇಳನ ಮಾಡಿ ತಮ್ಮ ವೃತ್ತಿಗೆ ಆನಂದವನ್ನು ತಂದುಕೊಳ್ಳುತ್ತಾರೆ. ಆದರೆ ಇದಕ್ಕೆ ನನ್ನ ಒಪ್ಪಿಗೆ ಇಲ್ಲ. ಒಪ್ಪಿಗೆ ಇಲ್ಲವೆಂದರೆ ಭೌತಿಕವಾದಿಯೂ ಅಲ್ಲ. ನಾನೆಂದೂ ಆದಿಭೌತಿಕ ತತ್ವಕ್ಕೆ ವಿರೋಧ. ಚಾರ್ವಾಕರ ಮತದಂತೆ ನನ್ನ ಬುದ್ಧಿಯಲ್ಲಿ, ಬರವಣಿಗೆಯಲ್ಲಿ ಸರಿಸಮಾನರು. ಈ ವಿಷಯ ಬೇಧವನ್ನು ಅರಿಯಲು ಹೊರಟರೆ ಈ ಆಯುಷ್ಯ ಇದಕ್ಕೆ ಸಾಲದು. “ನರ ಜನ್ಮ ದುರ್ಲಭಂ” ಎಂಬ ಈ ಅಲ್ಪಾಯುಷ್ಯವನ್ನು ಇಂಥ ಹೀನ ವಿಚಾರಗಳನ್ನು ಚರ್ಚಿಸಲು ಕಳೆಯಲಾರೆ. ಇಂಥಹ ಸುಪುತ್ರಿ ಮನು ಅದಾವುದೋ ಬಾಲಕನಿಗಾಗಿ ಕಾಯುತ್ತಿದ್ದಾಳೆ.

ಶಂಕರನು ಕಾರನ್ನು ರಸ್ತೆಯ ಒಂದು ಬದಿಯಲ್ಲಿನಿಲ್ಲಿಸಿ ಆಕೂಡುರಸ್ತೆಯಒಂದು ರಸ್ತೆಯಲ್ಲಿ ಹೋಗಿ ಪ್ರಭುವನ್ನು ಕಾಣದೇ “ಅಯ್ಯೋ! ದರಿದ್ರ ಹುಡುಗಾ ಒಂದು ದಿನವಾದರೂ ಇವಳು ನಿನ್ನನ್ನು ಬಿಟ್ಟು ಮನೆಗೆ ಹೋಗುವದಿಲ್ಲ, ಯಾವ ಎಣ್ಣೆಯನ್ನು ತಿಕ್ಕಿರುವಿಯೋ? ಎಂಥಾ ಮೋಸ ಮಾಡಿರುವಿ. ಒಂದು ದಿನವಾದರೂ ನಿನ್ನನ್ನು ನೋಡದ ಮುಖದಲ್ಲಿ ನಗೆ ಎಂಬುದು ಕಂಡು ಬರುವದೇ? ಈ ವಯದಲ್ಲಿಯೇ ಈ ಪರಿ. ಮುಂದೆ........!’

“ಮನು! ಪ್ರಭು ಬರಲಿಲ್ಲ. ಅವನಿಲ್ಲದೇ ಇಂದು ಮನೆಗೆ ಹೋಗಲಿಕ್ಕೆ ಆಗುವದಿಲ್ಲವೇ?”

“ಶಂಕರಜ್ಜ, ಪ್ರಭು ಬರಲಿ. ಇನ್ನು ಕೆಲವು ನಿಮಿಷದಲ್ಲಿ ಬರಬಹುದು. ತಡವಾದರೂ ಅಪ್ಪನಿಂದಲೂ ತೊಂದರೆ ಇಲ್ಲ!”

“ಅಮ್ಮ ಇಷ್ಟು ಪ್ರೇಮದಿಂದ ಇರಬಾರದು. ಇದರಿಂದ ಮುಂದೆ ತೊಂದರೆಯಾಗುತ್ತದೆ.”

“ಅಂದರೆ ಶಂಕರಜ್ಜ?”

“ನೋಡು ತಾಯಿ! ನೀವು ಇದೇ ರೀತಿಯಿಂದ ಬೆಳೆದು ದೊಡ್ಡವರಾದಿರಿ. ಆವಾಗ್ಗೆ ನೀವು ಮದುವೆಯಾಗಿ ಗಂಡನ ಮನೆ ಸೇರಬೇಕಾದರೆ ಅವನನ್ನು ಬಿಟ್ಟು ಹೋಗಬೇಕಾಗುತ್ತದೆ. ಆವಾಗ್ಯೆ ನಿಮಗೆ ತ್ರಾಸಾಗುತ್ತದೆ. ಅದಕ್ಕಾಗಿಯೇ ..!’

“ಗೊತ್ತು ಶಂಕರಜ್ಜ! ನಾನು ಮದುವೆಯನ್ನು ಮಾಡಿಕೊಂಡ ಬಳಿಕ ಗಂಡನ ಮನೆಗೆ ಹೋಗುವುದಿಲ್ಲ. ಹೋದರೂ ಪ್ರಭುವನ್ನು ಬಿಟ್ಟು ಹೋಗುವುದಿಲ್ಲ.”

“ಆಗುತ್ತದೆಯೇ ಅಮ್ಮ! ಗಂಡನು ಪ್ರಭುವನ್ನು ಹೊಡೆದು ತಳ್ಳಿಬಿಡುತ್ತಾನೆ.”

“ಹಾಗಾದರೆ ಆ ಗಂಡನನ್ನೇ ಮಾಡಿಕೊಳ್ಳುವುದಿಲ್ಲ!”

ಶಂಕರಜ್ಜ ಬಲವಾಗಿ ನಕ್ಕಿದ್ದ.

“ಯಾಕೆ ನಗುತ್ತೀಯಜ್ಜ?”

“ತಿಳಿಯದು ಹುಡುಗಿ ,ತಿಳಿಯದು. ಮದುವೆಯಾಗದೆ ಜಗತ್ತಿನಲ್ಲಿರುವುದು ಸ್ತ್ರೀಯರಿಗೆ ಅಸಾಧ್ಯ” ಎಂದಿದ್ದ.

ಉತ್ತಮವಾದ ಬೀದಿಗೆ ಕಲಂಕ ಎನ್ನುವಂತೆ ಹರಕು ಅರಿವೆ, ತಲೆಕೂದಲು ಗಾಳಿಯಿಂದ ಹರಡಿದ, ಹೊಲಸು ಹುಡುಗ ಆ ರಸ್ತೆಯಲ್ಲಿ ಬರುತ್ತಿದ್ದಾನೆ ಅವನು ಸೆರೆಯನ್ನು ಕುಡಿದು ಹುಚ್ಚಾಚಾರ ಹಾಕುವ ಹೆಜ್ಜೆಯಂತೆ ನಡೆದು ಬರುತ್ತಿದ್ದಾನೆ. ಆ ಕೈಯಲ್ಲಿ ಹರಿದ ಹಾಳೆಯ ಎರಡು ತುಣುಕುಗಳು ಇವೆ. ಅವನ್ನು ಕೂಡಿಸಿ ಓದುತ್ತ ಬರುತ್ತಿದ್ದಾನೆ. ಆವನ ಚಿತ್ತ ಆ ಕಾಗದದ ಮೇಲೆ ಇರುವ ಅಕ್ಷರಗಳತ್ತ ಇದೆ. ರಸ್ತೆಯಲ್ಲಿ ಚಲಿಸುವ ವಾಹನಗಳತ್ತ ಲಕ್ಷ್ಯವಿಲ್ಲ. ವಾಹನ ಚಾಲಕರು ತಾವೇ ಓರೆಯಾಗಿ ವಾಹನ ನಡೆಯಿಸಿಕೊಂಡು ಹೋಗುತಿದ್ದರು. ಅವನು ಕೂಡು ರಸ್ತೆಗೆ ಸಮೀಪಿಸುತ್ತಿರುವಂತೆಯೇ ..

“ಪ್ರಭು! ಏ ಪ್ರಭು! ಇಷ್ಟೇಕೆ ತಡ. ನೀನು ಹೀಗೆ ತಡಮಾಡಿದರೆ ನನಗೆ ಸಂಕಟವಾಗುತ್ತದೆ” ಮನು ಎಚ್ಚರದಪ್ಪಿದ ಪ್ರಭುವನ್ನು ತಟ್ಟಿ ಕೇಳಿದಳು. ಅವನು ಉತ್ತರಕೊಡದಾಗಲು “ಯಾರು ಹೊಡೆದರು ಪ್ರಭು?”

ದುಃಖತುಂಬಿದವನಾಗಿ ಪ್ರಭು “ಮನು! ಹಾಗೆ ಯಾರಾದರೂ ಮಾಡಿದ್ದರೆ ದುಃಖ ಕೊನೆಯವರೆಗೆ ಬರಲಾರದು ಯಾಕಂದರೆ ಹೊಡೆದಾಗ ಮಾತ್ರ ಇಂದ್ರಿಯಗಳಿಗೆ ಪೆಟ್ಟು ಹತ್ತುತ್ತದೆ ಆದರೆ...”

“ಆದರೆ ಪ್ರಭು?”

(೧೧ನೇ ಪುಟ ನೋಡಿರಿ)

ಆರೋಗ್ಯ ಭೌತಶಾಸ್ತ್ರದ ಕುರಿತು ಭಾರತ ಸರಕಾರದ ಅಣುಶಕ್ತಿ ಖಾತೆ ಜಾಗತಿಕ ಆರೋಗ್ಯ ಸಂಸ್ಥೆಗಳಿಂದ ನಡೆಸಲಾದ ಸಂಯುಕ್ತ ವಿಸ್ತರಣೋಪನ್ಯಾಸ ಸಮಾರಂಭದಲ್ಲಿ ಅಮೆರಿಕೆಯ ಡಾ। ಎಲ್ಡಾ ಇ. ಆಂಡರ್ಸನರು ಉಪನ್ಯಾಸವೀಯುತಿದ್ದಾರೆ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
4 ತಿಂಗಳ ವರೆಗೆ 4%
5 ರಿಂದ 12 ,, 4¼%
13 ., 24 ,, 4½%
ರೂ. 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

‘ಖೀರಾ’ ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)
ನಿಮಗೆ ಒಂದು ಕ್ಯಾಬಿನೆಟ್ ಆಗತ್ಯ ಕಳ್ಳರ, ಹುಳಹುಪ್ಪಟೆಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು. 3 ಸೈಜುಗಳಿವೆ, ಮಿಜೆಟ್, ಪಾಪ್ಯುಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಶಲ್ಫಗಳು ಮತ್ತು ಭದ್ರವಾದ ಬೀಗವುಳ್ಳ ಒಳಕೋಣೆಗಳಿವೆ.
ಅಲ್ಲದೆ
ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್,
ಡೆಸ್ಕ್‌ಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು,
ವಿ. ಕೆ. ರಾಜ್ ಇಂಡಸ್ಟ್ರೀಸ್, ಅಲಿಘರ್ ಇವರ
ಉತ್ತಮ ಬೀಗಗಳು
ಇವೆಲ್ಲ ಸ್ಟಾಕಿವೆ.
ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.
7 ಲಿವರ್‌ಗಳ ಬೀಗ. ಅದರದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.
ಶೋ ರೂಮನ್ನು ಸಂದರ್ಶಿಸಿ:
ಶಾಸ್ತ್ರೀ ಅಂಡ್ ಕಂಪೆನಿ
ಹಂಪನಕಟ್ಟೆ — — ಮಂಗಳೂರು

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ಶಬ್ದ ಕೋಶಗಳು

ಸಾಹಿತ್ಯ ನಿರ್ಮಾಣಕ್ಕೆ ಶಬ್ದಕೋಶಾಭ್ಯಾಸ ಅವಶ್ಯ

ರನ್ನಕಂದ, ವಸ್ತುಕೋಶ ಮತ್ತು ಅಕಾರಾದಿ ವೈದ್ಯ ನಿಘಂಟುಗಳ ಸ್ಥೂಲ ಪರಿಚಯ

ಸಾಹಿತ್ಯವು ಜೀವಂತವಾಗುವುದು ಅನುಕೂಲ ಪದಗಳಿಂದ. ಅನುಕೂಲ ಪದಗಳು—ಸಜೀವ ಶಬ್ದಗಳು ಸಾಹಿತ್ಯದ ಜೀವಾಳ. ಪದ ಪ್ರಯೋಗದಲ್ಲಿ ಸಿದ್ಧಿಯಾಗದವನ್ನು ಎಂದೂ ಉತ್ತಮ ಸಾಹಿತಿಯಾಗಲಾರನು. ಸಾಹಿತಿಗೆ ಶಬ್ದ ಭಂಡಾರದ ನೆರವು, ವ್ಯಾಕರಣದಲ್ಲಿ ಪ್ರಭುತ್ವ, ರಸಾಲಂಕಾರಗಳಲ್ಲಿ ಆತ್ಮೀಯ ತನ್ಮಯತೆ ಇಲ್ಲದಿದ್ದರೆ ಅವನೊಬ್ಬ ನಂಕವಿಯೆನಿಸುವನು. ಅವನ ಕಾವ್ಯವು ಬೀಳ್ಗಬ್ಬವೆನ್ನಿಸುವುದು. ಬೀಳುಗಬ್ಬಗಳಿಗೆ ಜನ್ಮದೊಡನೆಯೇ ಮರಣವು ಗಂಟು ಬೀಳುವುದು ಸಾಹಿತಿಗೆ ಇದಕ್ಕಿಂತ ಹೆಚ್ಚಿನ ಸಂಕಟಯಾತನೆ ಯಾವುದು? ಈ ವೇದನೆಗಳ ಉಪಶಮನಕ್ಕಾಗಿಯೇ—ಸಾಹಿತಿಯು ತನ್ನ ಕಂದನ ದೀರ್ಘಾಯುಷ್ಯಕ್ಕಾಗಿಯೇ—ಮೊದಲು ನಿಘಂಟುಗಳನ್ನು ಬರೆದು ಆ ಭಾಷೆಯ ಶಬ್ದ ಸಾಗರಗಳನ್ನು ಹಿಡಿತಕ್ಕೆ ತಂದುಕೊಳ್ಳುವನು. ಶಬ್ದಕೋಶಗಳು ಅಥವಾ ನಿಘಂಟುಗಳು ಸಾಹಿತ್ಯದ ಜೀವನಾಡಿಗಳು—

ಎರಡನೆಯ ನಾಗವರ್ಮನ, ಇರೆ ಶಬ್ದಾರ್ಥಂಗಳ್ | ತತ್ಪರತೆಯಿನದು ಕಾವ್ಯ'ವೆಂದು ಅನುಕೂಲ ಶಬ್ದ ಸಂಪತ್ತಿಗೆ ಪ್ರಧಾನ್ಯತೆಯನ್ನು ಕೊಟ್ಟಿದ್ದಾನೆ. ಪ್ರಾಚೀನರಲ್ಲಿ ಸಂಸ್ಕೃತ ಸಾಹಿತ್ಯಾಭ್ಯಾಸದ ಮೊದಲು ಸಾಹಿತ್ಯ ಪಾರದ ಮೂಣಿಯಿಂದ ಅಮರ ಕೋಶವನ್ನು ಕಂಠಪಾಠ ಮಾಡಿಸುತ್ತಿದ್ದರು. ಇದರಿಂದ ಅಂದಿನ ಸಾಹಿತ್ಯೋದ್ಯಾನಗಳು ಇಂದೂ ಕುಸುಮ ಫಲ ಭಾರದಿಂದ ಬಾಗಿ ರಸಿಕ ಭ್ರಮರಗಳಿಗೆ ಆಕರ್ಷಕವಾಗಿವೆ! ಇದರಿಂದ ಅವರೆಲ್ಲಾ ಸಮ ಸಂಸ್ಕೃತ, ತದ್ಭವ, ದೇಶ್ಯ ಪದಗಳನ್ನು ಮಣಿಸಿ ಕುಣಿಸುವಂತಾದ ಮೇಲೆಯೇ ಮಹಾಕಾವ್ಯ ರಚನೆಗೆ ತೊಡಗುತ್ತಿದ್ದರೆಂದು ತಿಳಿಯಬೇಕು. ಆ ಚಂದ್ರಾರ್ಕ ಪರ್ಯಂತ ನಿಲ್ಲುವ ಸಾಹಿತ್ಯದ ಕಡೆಗೇ ನಮ್ಮ ಹಿರಿಯರ ಗಮನವಿತ್ತು. ಮುದ್ದಣನಾದರೂ ರಾಮಾಶ್ವಮೇಧದ ರಚನೆಗೆ ಮೊದಲು ಕಿಟ್ಟೆಲ್ ನಿಘಂಟಿನ ಬಹು ಭಾಗವನ್ನು ಕಂಠ ಪಾಠಮಾಡಿಕೊಂಡಿದ್ದನು. ಹೇವು ಸಾಹಿತಿಗಳು ಭಾಷಾ ದೇವಿಯ ಪದವಿನ್ಯಾಸವೃತ್ತೋದ್ಯಾಪನೆಯೆಂದು ಶಬ್ದ ಕೋಶವನ್ನು ರಚಿಸಿ, ವಾಗ್ದೇವಿಯು ತನ್ನ ಮುಂದಿನ ಕಾವ್ಯಗಳಲ್ಲಿ ತನ್ನ ಪಾದಗಳ ಮಂಜು ಮಂಜೀರ ಕಂಕಣ ಕಿಂಕಿಣಿಗಳಿಂದ ಹೇಗೆ ನಲಿದಾಳೆಂದು ಗೊತ್ತಿಗೆ ಒಂದೇ ಮಹಾ ಕಾವ್ಯ ರಚನೆಗೆ ಲೇಖನಿ ಹಿಡಿದರು. ಸಾರಾಂಶ—ಸಾಹಿತ್ಯಮಂದಿರವು ಅನುಕೂಲ ಶಬ್ದಶಿಲಾ ಖಂಡಗಳಿಂದ ನಿರ್ಮಾಣವಾದರೇನೇ ಭದ್ರ.

ಕನ್ನಡ ಸಾಹಿತ್ಯದಲ್ಲಿರನ್ನ ಕವಿಪ್ರಣೀತ ರನ್ನನ ಕಂದ'ವೆಂಬ ಶಬ್ದಕೋಶವೇ ಮೊತ್ತ ಮೊದಲನೆಯದೆಂದು ತೋರುತ್ತದೆ. ನೃಪತುಂಗ ದೇವನ ಕವಿರಾಜ ಮಾರ್ಗದಲ್ಲಿ ಹಲವು ಮಹಾ ಕವಿಗಳ ಹೆಸರೆತ್ತಿರುವುದರಿಂದ, ರನ್ನಕವಿಯ ಮೊದಲೂ ಕನ್ನಡ ಶಬ್ದಕೋಶಗಳು ಕೆಲವಾದರೂ ಇದ್ದಿರಬೇಕೆಂದೂ ಊಹಿಸಲು ಸಾಧ್ಯವಿದೆ. ರನ್ನನು ಅವರ ಮೊದಲಾದ ಹಲವು ಸಂಸ್ಕೃತ ಕೋಶಗಳು—ಅಥವಾ ಇವುಗಳಲ್ಲಿ ಕೆಲವಾದರೂ ತುಂಬಾ ಪ್ರಚಾರದಲ್ಲಿದ್ದುದನ್ನು ಕಂಡು ಕನ್ನಡಿಗರಿಗಾಗಿಯೇ ಕನ್ನಡ ನಿಘಂಟುವಿನ ಆಗತ್ಯವು ರನ್ನನಿಗೆ ತೋರಿತು. ಅಲ್ಲದೆ ಅವನಿಗೆ ಮುಂದೆ ತಾನು ರಚಿಸಲಿರುವ ವೀರರಸದ ಹೆದ್ದೊರೆಯಾದ ಸಾಹಸ ಭೀಮವಿಜಯದ ಪಾತ್ರ ಪ್ರದೇಶದ ಶೋಧನೆ ನಡೆಯಲೂ ಬೇಕಿತ್ತು. ಇವೆರಡು ಕೆಚ್ಚು ನೆಚ್ಚುಗಳು ಅವನಿಂದ ರನ್ನನ ಕಂದವೆಂಬ ನಿಘಂಟೊಂದನ್ನು ಕಂದ ಪದ್ಯರೂಪವಾಗಿ ಹೊರಬೀಳಿಸಿತು—

೧. ರನ್ನನ ಕಂದ

ರನ್ನನ (ಕ್ರಿ. ಶ. ೯೯೩) ಈ ಕೋಶವು ಎಷ್ಟು ದೊಡ್ಡದು? ಅದು ಅಂದಿನ ಸಾಹಿತ್ಯದ ಮೇಲೆ ಎಷ್ಟು ದೂರದವರೆಗೆ ತನ್ನ ಬೆಳಕನ್ನು ಚೆಲ್ಲಿತ್ತು? ಅದರಲ್ಲಿ ಚೆಲ್ಲಿದ ದೇಶೀಯ ಪದಗಳು ಯಾವ ಮಟ್ಟದಲ್ಲಿದ್ದುವು? ಇವುಗಳನ್ನೆಲ್ಲಾ ಕನ್ನಡಿಗರಿಗೆ ತಿಳಿಯುವ ಭಾಗ್ಯವಿಲ್ಲದೆ ಹೋಯಿತು. ಆ ನಿಘಂಟು ಸಾಹಸ ಭೀಮವಿಜಯ, ಅಜಿತ ತೀರ್ಥಂಕರ ಪುರಾಣದಂತೆ ಚಿರಂಜೀವಿಯಾಗಲಿಲ್ಲ. ಈಗಲೂ ಅದು ಅಸಮಗ್ರವಾಗಿ ದೊರೆಯುತ್ತಿದೆ. ಈ ನಿಘಂಟಿನ ಕುರಿತು ಈಗ ಇಷ್ಟು ಮಾತ್ರ ಹೇಳಬಹುದು. ರನ್ನನಿಗೆ ತನ್ನ ಮಗನಾದ ರಾಯ, ಮಗಳಾದ ಅತ್ತಿಮಬ್ಬೆಗಿಂತ ಈ ಕೋಶದಲ್ಲಿ ಅತಿಶಯ ಪ್ರೀತಿ ಇತ್ತು. ಇಲ್ಲದಿದ್ದರೆ ಇದನ್ನು ರನ್ನನ ಕಂದ (ಮಗ) ವೆಂದು ಕರೆಯದೆ ರನ್ನನ ಕೋಶವೆಂದೇ ನಾಮಕರಣ ಮಾಡುತ್ತಿದ್ದನು. ಅಜಾಗ್ರತೆಯಲ್ಲಿ ಅಗ್ರಗಾಮಿಗಳಾದ ಕನ್ನಡಿಗರು ಸಾಹಿತ್ಯದ ನಿಧಿಯಾದ ರನ್ನನಿಗೆ, ಆತನ ಚಿರಂಜೀವಿ ಕಂದನನ್ನು ಇಹಲೋಕದಲ್ಲಿ ಅಸಂಪೂರ್ಣತೆಯಿಂದ ಬಾಳುವಂತೆ ಮಾಡಿ, ಅವನಿಗೆ ಪುತ್ರಶೋಕವನ್ನುಂಟುಮಾಡಿದುದಕ್ಕಾಗಿ ಈಗ ಎಷ್ಟು ಹಳಹಳಿಸಿದರೂ ಅಲ್ಪವೇ. ಈಗ ಕಂದ ಪದ್ಯಗಳಲ್ಲಿ ದೊರೆಯುವ ಇದರ ಅಸಂಪೂರ್ಣ ಪ್ರತಿಯೊಂದರಲ್ಲಿ ಪ್ರತಿ ಪದ್ಯವೂ "ಕವಿರತ್ನಾ" ಎಂದು ಮುಗಿಯುತ್ತಿದೆ.

|| ಕಂದ ||
ಸಣ್ಣದೆನಲ್ ಕಿರಿದಳ್ಪಂ
ಪಣ್ಣೆನೆಮಾಡೆಂಬವಾಚಿ ಬಳಿಯೆನೆ
ವಂಶಂ ||
ಎಣ್ಣೆನೆ ಲೆಕ್ಕಿಪುದುಂಬಿಸು
ಗಣ್ಣನೆದಲ್ ಗೊರವನಪ್ಪುದೆಲೆ
ಕವಿರತ್ನಾ ||

೨. ವಸ್ತು ಕೋಶ

ಇದು ನುಡಿವೆಣ್ಣಿಗೆ ಎರಡನೆಯ ನಾಗವರ್ಮನಿಂದ (ಸು. ಕ್ರಿ. ಶ. ೧೧೪೫) ಅಪೀಕಶವಾದ ವಿಪುಲ ಪದ ಕಾಣಿಕೆ. ಇವನು ಜೈನ ಬ್ರಾಹ್ಮಣನಾದರೂ ಒಂದನೆಯ ನಾಗವರ್ಮ, ಒಂದನೆಯ ಗುಣವರ್ಮ, ನಾಗವರ್ಮಾಚಾರ್ಯ, ಶಂಖವರ್ಮ ಶಾಂತಿವರ್ಮರಂತೆ ಯುದ್ಧಪ್ರಿಯನಾಗಿರಬೇಕು. ಇವನು ಪೆರ್ಮ ಜಗದೇಕ ಮಲ್ಲನಲ್ಲಿ (ಕ್ರಿ. ಶ. ೧೧೩೯—೧೧೪೯) ಕಟಕೋಪಾಧ್ಯಾಯನಾಗಿ ಜನ್ನ ಮಹಾಕವಿಯ ಗುರುವಾಗಿದ್ದನು. ಇವನು ನಿಘಂಟು ರಚನೆಯಲ್ಲೇ ತೃಪ್ತಿಗೊಳ್ಳದೆ, ಸಂಸ್ಕೃತ ಕಾತಂತ್ರ ಶಾಸ್ತ್ರವೆಂಬ ಪ್ರಸಿದ್ಧ ವ್ಯಾಕರಣ ಶಾಸ್ತ್ರವನ್ನು ಬರೆದು ಹೆಸರ್ಗೊಂಡ ಶರ್ವವರ್ಮನಂತೆ ಈತನೂ ಕನ್ನಡಕ್ಕೆ ಶಬ್ದಸ್ಮೃತಿ, ಕಾವ್ಯಾವಲೋಕನ, ಭಾಷಾ ಭೂಷಣವೆಂಬ ಕನ್ನಡ ವ್ಯಾಕರಣ ಮತ್ತು ಲಕ್ಷಣ ಗ್ರಂಥಗಳನ್ನು ಬರೆದು ಅಭಿನವ ಶರ್ವವರ್ಮ ಅಥವಾ ಇದಾನೀಂತನ ಶರ್ವವರ್ಮ (ಇದಾನೀಂತನ=ಈಗಣ)ನೆಂದು ದಿಕ್ ದಿಗಂತಗಳಲ್ಲಿ ಅನುರಣಿತವಾಗುವ ಯಶಸ್ಸನ್ನು ಪಡೆದನು.

ಇವನ ವಸ್ತುಕೋಶದಲ್ಲಿ ಏಕಾರ್ಥಕಾಂಡ (ಅವಿಭಿನ್ನಾರ್ಥಕಾಂಡ, ಸಾಮಾನ್ಯಕಾಂಡ ಮತ್ತು ನಾನಾರ್ಥಕಾಂಡವೆಂಬ ಮೂರು ಭಾಗಗಳಿವೆ. ಏಕಾರ್ಥಕಾಂಡದಲ್ಲಿ ಸ್ವರ್ಗ, ಕಾಲ, ಸಂಕರಣ, ಸಲಿಲ, ಭೂ, ಕಾಲೀಯಸಾಧಿ ಧಾತು, ವನ, ವೃಕ್ಷ, ಮೃಗ ಪಕ್ಷಿ, ಪಶು, ಧಾನ್ಯವರ್ಗಗಳೆಂಬ ಹದಿನಾರು ವರ್ಗಗಳಿವೆ. ಎರಡನೆಯ ಸಾಮಾನ್ಯಕಾಂಡದಲ್ಲಿ ವಿಶೇಷಣ ಮತ್ತು ವಿಶೇಷ್ಯನೆಂಬ ಎರಡು ವರ್ಗಗಳು ಮಾತ್ರ ಇವೆ. ಮೂರನೆಯ ನಾನಾರ್ಥ ಕಾಂಡದಲ್ಲಿ ನಾನಾರ್ಥಗಳ ವರ್ಗವಿದೆ. ಈ ಕೋಶ ತುಂಬಾ ಕಂದಪದ್ಯಗಳ ವಿರಳವಾಗಿ ಉತ್ಪಲ, ಶಾರ್ದೂಲ, ಸ್ರಗ್ಧರಾದಿ ಸಮವೃತ್ತಗಳ, ಉಪಜಾತಿ ಮತ್ತು ಅರ್ಧ ಸಮವೃತ್ತಗಳ, ಅಕ್ಕರ, ತ್ರಿಪದಿಗಳ ಕೋಶ. ಈ ಕವಿಯು ವರ ರುಚಿ ಹಲಾಯುಧಂಭಾ ! ಗುರಿ ಶಾಶ್ವತಮಮರಕೋಶವೆಂಬಿವು......'ಗಳನ್ನು ಆಧಾರವಾಗಿಟ್ಟುಕೊಂಡು ವಸ್ತುಕೋಶವನ್ನು ಬರೆದಿದ್ದೇನೆಂದು ಹೇಳುತ್ತಾನೆ. ಇದು ಮನಸ್ತಮವನ್ನು ಹೋಗಲಾಡಿಸಿ ಸದರ್ಥಪ್ರಕಾಶವನ್ನು ಮಾಡುವುದರಿಂದ ಸಮಸ್ತ ವಿದ್ಯಾಪ್ರದೀಪವಾದ ಇದನ್ನು ಅಭಿಧಾನಕೋಶವೆಂದು ಕರೆದಿದ್ದಾನೆ. ಇವನು 'ಕರಮೆಜಡಮತಿಯು ಮಱವಂ|ತಿರೆ ಕನ್ನಡದಿಂ ಜಲಕ್ಕನಾಗಿರ್ಪನಗಂ || ವಿರಚಿಸಿದಂ ಕವಿಕಂಠಾ | ಭರಣಸಿದಂ ನಾಗವರ್ಮ'ನೆಂದು ಅಲ್ಪಮತಿಗಳಿಗಾಗಿ ರಚಿಸಿದ್ದರೂ ಇದೊಂದು ಪಂಡಿತ ನಿಘಂಟೆನ್ನುವುದರಲ್ಲಿ ಸಂದೇಹವಿಲ್ಲ. ಅಮರಕೋಶದಂತೆ ಇದಕ್ಕೂ ವ್ಯಾಖ್ಯಾನದ ಆಗತ್ಯವಿದೆ. ಇಂದು ಸಿಕ್ಕಿರುವ ಪ್ರಾಚೀನ ನಿಘಂಟುಗಳಲ್ಲೆಲ್ಲಾ ಇದೇ ವಿಸ್ತಾರವಾದುದು. ಎರಡನೆಯ ಮಂಗರಸನು (ಕ್ರಿ. ಶ. ೧೩೯೮), ದೇವೋತ್ತಮನೂ (ಕ್ರಿ. ಶ. ೧೬೦೦) ಇವನ ಕೋಶದ ಆಧಾರದಿಂದಲೇ ತಾವೊಂದೊಂದು ನಿಘಂಟನ್ನು ಬರೆದರು.

ನಾಗವರ್ಮನ ವಸ್ತುಕೋಶದಿಂದ ಎರಡು ಪದ್ಯಗಳು—

|| ಕಂದ ||
ಅಂಗದಮೇನಕೇಯೂರಮ
ದುಂಗುರಮೂರ್ಮಿಕೆಯು ಮುಂಗುಳೀ
ಯಕಮಕ್ಕುಂ ||
ಸಂಗತ ಲಿಖಿತಾಕ್ಷರಚಯ
ಮಂಗುಳಿ ಮುದ್ರಿಕೆಯೆನಿಪ್ಪುದಕ್ಕುಂ
ಪೆಸರಿಂ || ಏಕಾರ್ಥ—೧೩-೫ ||
|| ಮಾಲಿನೀ ವೃತ್ತ ||
ಅವನಿರಹ ವಿಶಾಲ ಸ್ಕಂಧದೇಶಂ
ಪ್ರಕಾಂಡಂ
ಪ್ರವರ ಗುಣ ನಿಕಾಯ ಶ್ಲಾಘ್ಯಮುಂ-
ತಾಂ ಪ್ರಕಾಂಡಂ ||
ಯುವತಿಜಘನ ವಸ್ತ್ರ ಗ್ರಂಥಿನೀ ವಿಸ
ಮಾಖ್ಯಂ
ವ್ಯವಹೃತಿಗತ ಮೂಲ ದ್ರವ್ಯಮುಂ
ನೀವಿಯಕ್ಕುಂ || ನಾನಾರ್ಥ—೫೦ ||

೩. ಅಕಾರಾದಿ ವೈದ್ಯನಿಘಂಟು.

ಅಮೃತ ನಂದಿ(ಕ್ರಿ. ಶ. ೧೩೦೦)ಯು ಈ ನಿಘಂಟಿನಲ್ಲಿ ಸಂಸ್ಕೃತ ಪದಗಳಿಗೆ ಸರಿಯಾದ ಕನ್ನಡ ಪದಗಳನ್ನು ಹೇಳಿದ್ದಾನೆ. ಇದು ಇನ್ನೂ ಮುದ್ರಣ ಕಂಡಿಲ್ಲ.

(ಮುಂದುವರಿದುದು)

—ಯು. ಸಾ. ಉಡುಪ, ವಿದ್ವಾನ್.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No 466 N/50 date 2-12-1950 of the Director of public Instruction, Madras·

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋಪೋರೇಶನ್
ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ; ಉಡುಪಿ (ದ ಭಾರತ)

ಅದ್ಭುತ ಸಾಧನೆ

ಟ್ರಾಂಬೆಯ ಅಣುವಿಜ್ಞಾನ ಕೇಂದ್ರದಲ್ಲಿ ಮಹತ್ಸಾಧನೆ

ಭಾರತೀಯ ವಿಜ್ಞಾನಿಗಳು ಅನ್ಯ ವಿಜ್ಞಾನಿಗಳಿಗೆ ಕಡಿಮೆಯಿಲ್ಲ ಎಂಬುದಕ್ಕೆ ಒಂದು ಉತ್ತಮ ದಾಖಲೆ

ಅಣುಶಕ್ತಿಯ ಬಳಕೆ ಸಂಬಂಧವಾಗಿ ಮುಂಬೈಗೆ ಸಮೀಪದ ಟ್ರಾಂಬೆಯಲ್ಲಿ ಸಂಶೋಧನಾಲಯವೊಂದು ಸ್ಥಾಪನೆಯಾಗಿ ಎರಡು ವರ್ಷಗಳು ಕಳೆದಿವೆ. ೧೯೫೭ರ ಜನವರಿ ೨೦ರಂದು ಪ್ರಧಾನಿ ನೆಹರೂರವರು ಇದನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು.

ಕೈಗಾರಿಕೋದ್ಯಮಗಳಲ್ಲಿ ಅಣುಶಕ್ತಿಯನ್ನು ಬಳಸುವ ವಿಚಾರದಲ್ಲಿ ಈ ಸಂಸ್ಥೆಯಲ್ಲಿ ನಡೆಯುತ್ತಿರುವ ಸಂಶೋಧನೆಗಳು ನಾಳೆ ನಮ್ಮ ದೇಶಕ್ಕೆ ತುಂಬಾ ಪ್ರಯೋಜನಕಾರಿಯಾಗುವ ನಿರೀಕ್ಷೆ ಇದೆಯೆಂತಲೇ ಈ ಸಂಸ್ಥೆಯ ಪ್ರಾಮುಖ್ಯ ನಮ್ಮ ದೇಶದ ವಿಜ್ಞಾನ ಕ್ಷೇತ್ರದಲ್ಲಿ ವಿಶೇಷವಾಗಿದೆ. ಅಣುಶಕ್ತಿ ಕಮಿಷನ್ನಿನ ಕಾರ್ಯ ಚಟುವಟಿಕೆಗಳ ಮುಖ್ಯ ಕೇಂದ್ರ, ಈ ಸಂಸ್ಥೆಯೆನ್ನಬಹುದು.

ಭಾರತದ ತರುಣ ವಿಜ್ಞಾನಿಗಳು ನಾಳೆ ಅಣುಶಕ್ತಿಯ ಬಳಕೆಗೆ ಹೊಂದಿಕೊಳ್ಳಬೇಕೆಂಬ ಉದ್ದೇಶದಿಂದ, ಎರಡು ವರ್ಷಗಳ ಹಿಂದೆ ಈ ಸಂಸ್ಥೆಯಲ್ಲಿ ತರಬೇತಿ ಕಾರ್ಯಕ್ರಮವೊಂದನ್ನು ಆರಂಭಿಸಲಾಯಿತು. ಈ ಕಾರ್ಯಕ್ರಮದ ರೀತ್ಯಾ ಪ್ರತಿವರ್ಷ ವಿಶ್ವವಿದ್ಯಾನಿಲಯಗಳಿಂದ ೨೫೦ ಪದವೀಧರರನ್ನು ಆರಿಸಿ ಅವರಿಗೆ ಅಣುವಿಜ್ಞಾನದಲ್ಲಿ ವಿಶೇಷ ತರಬೇತಿ ದೊರಕಿಸುವ ಕಾರ್ಯ ನಡೆಯುತ್ತಿದೆ; ಕ್ರಮೇಣ ೩೫೦ ಮಂದಿ ತರುಣರನ್ನು ಆರಿಸಿ ಶಿಕ್ಷಣ ಒದಗಿಸುವುದು ಸಂಸ್ಥೆಯ ಉದ್ದೇಶ.

ಸಲಕರಣೆಗಳ ತಯಾರಿಕೆ

ಅಣುಶಕ್ತಿ ಸಂಬಂಧವಾದ ಕೆಲಸ ಕಾರ್ಯಗಳಿಗೆ ಬೇಕಾದ ಎಲ್ಲ ಸಲಕರಣೆಗಳನ್ನೂ “ಎಲೆಕ್ಟ್ರಾನಿಕ್” ಬಿಡಿ ಭಾಗಗಳನ್ನೂ ಇದೀಗ ಟ್ರಾಂಬೆಯಲ್ಲಿಯೇ ತಯಾರಿಸಲಾಗುತ್ತಿದೆ. ಈ ಅಗತ್ಯ ವಸ್ತುಗಳನ್ನು ನಮ್ಮ ದೇಶದಲ್ಲಿಯೇ ಪೂರೈಸಿಕೊಳ್ಳುವುದು ಸಂಸ್ಥೆಯ ಉದ್ದೇಶವಾಗಿದೆ. ಇದರಿಂದ ಉಳಿತಾಯವಾಗುವ ವಿದೇಶೀ ಧನ ವಿನಿಮಯದ ಪ್ರಮಾಣ ಅಪಾರ.

ಟ್ರಾಂಬೆಯಲ್ಲಿನ ಕಾರ್ಯ ಬಾಹುಳ್ಯವನ್ನು ೧೪ ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಈ ವಿಭಾಗಗಳೂ ನಾಲ್ಕು ಮುಖ್ಯ ವಿಭಾಗಗಳಲ್ಲಿ ವಿಂಗಡಿಸಿಕೊಳ್ಳಲ್ಪಟ್ಟಿವೆ, ಭೌತ ಶಾಸ್ತ್ರ, ರಾಸಾಯನಿಕ ಶಾಸ್ತ್ರ, ಎಂಜಿನಿಯರಿಂಗ್ ಮತ್ತು ಜೀವ ಶಾಸ್ತ್ರ ಇವೇ ಆ ನಾಲ್ಕು ಮೂಲ ವಿಂಗಡಣೆಗಳು.

ಭಾರತದ ಪ್ರಥಮ ಅಣು ರಿಯಾಕ್ಟರ್ “ಅಪ್ಸರಾ’ ಸಹ ಇದೇ ಸಂಶೋಧನಾಲಯದಲ್ಲಿದೆ. ಅಲ್ಲದೆ ರೇಡಿಯೋ ಕೆಮಿಸ್ಟ್ರಿ ಪ್ರಯೋಗ ಶಾಲೆ, ಥೋರಿಯಂ ಪ್ರೊಸೆಸಿಂಗ್ ವಿಭಾಗ, ಇವುಗಳೂ ಸಹ ಇಲ್ಲಿವೆ.

‘ಅಪ್ಸರಾ’—ಭಾರತದ ಪ್ರಥಮ ರಿಯಾಕ್ಟರ್

ಭಾರತದ ಪ್ರಥಮ ಅಣು ರಿಯಾಕ್ಟರ್ ಆದ ‘ಅಪ್ಸರಾ’ ಈಗ್ಗೆ ಎರಡೂವರೆ ವರ್ಷಗಳ ಹಿಂದೆ—೧೯೫೬ರ ಆಗಸ್ಟ್ ೪ರಂದು—ಕಾರ್ಯೋನ್ಮುಖವಾಯಿತು. ಅನೇಕ ವಿಚಾರಗಳಲ್ಲಿ ಸಂಶೋಧನೆಗಳಿಗೆ ಇದರಿಂದ ಸಹಾಯವಾಗಿದೆ. ಏಷ್ಯಾದಲ್ಲಿಯೇ ಪ್ರಪ್ರಥಮವಾಗಿ ಸ್ಥಾಪಿತವಾದ ಈ ರಿಯಾಕ್ಟರ್ ಸಂಪೂರ್ಣವಾಗಿ ಭಾರತದಲ್ಲಿಯೇ ತಯಾರಾದ ರಿಯಾಕ್ಟರ್ ಎಂಬುದನ್ನಿಲ್ಲಿ ಮುಖ್ಯವಾಗಿ ಗಮನಿಸಬೇಕು. ಭಾರತೀಯ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಇದರ ಮಾದರಿ ಹಾಗೂ ನಿರ್ಮಾಣ ಕಾರ್ಯವನ್ನು ಕೈಗೊಂಡರು. ಈ ರಿಯಾಕ್ಟರ್‌ಗೆ ಜೀವ ತುಂಬುವ ಕಾರ್ಯದಲ್ಲಿ ಮಾತ್ರ ಬ್ರಿಟನ್ನಿನ ಅಣುಶಕ್ತಿ ವಲಯಗಳಿಂದ ಸಹಾಯ ಪಡೆಯಲಾಯಿತು; ಈ ರಿಯಾಕ್ಟರ್‌ಗೆ ಪ್ರೇರಕ ಶಕ್ತಿ ಸಾಧನಗಳನ್ನು ಬ್ರಿಟನ್ನಿನಿಂದ ಪಡೆಯಲಾಯಿತು. ಗುಣ ವಿಶೇಷವುಳ್ಳ ಯುರೇನಿಯಂ ಲೋಹದ ಈ ಉಬ್ಬು—ತಟ್ಟೆಗಳನ್ನು ಬ್ರಿಟನ್ ಒದಗಿಸಿತು. ಅಲ್ಯೂಮಿನಿಯಂ ಸಹಾಯದಿಂದ ‘ಅಲಾಯ’’ ಮತ್ತು ಅಲ್ಯೂಮಿನಿಯಂ ಲೋಹದಲ್ಲಿ ಹದಮಾಡಿರುವ ಈ ತಟ್ಟೆಗಳು ರಿಯಾಕ್ಟರಿಗೆ ಅತ್ಯಾವಶ್ಯಕ ಸಾಧನಗಳು. ಇವುಗಳನ್ನು ಬಿಟ್ಟರೆ ಇತರ ಎಲ್ಲ ಕಾರ್ಯ ಭಾರತದಲ್ಲಿಯೇ ಭಾರತೀಯ ವಿಜ್ಞಾನಿಗಳಿಂದಲೇ ನಡೆದಿದೆ. ಇದೊಂದು ಹೆಮ್ಮೆಯ ಸಾಧನೆಯೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಕಾಮನ್‌ವೆಲ್ತ್ ಸೊಸೈಟಿಯು ನೆರವೇರಿಸಿದ ಅಭ್ಯಾಸ ಸಮ್ಮೇಳನವೊಂದರಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳಾದ ಇಂಡಿಯಾ ನೈಜೀರಿಯಾ ಮಲಯಾಗಳ ವಿದ್ಯಾರ್ಥಿಗಳೊಂದಿಗೆ ಸೊಸೈಟಿಯ ಕಾರ್ಯದರ್ಶಿ ಶ್ರೀ ಅಲಿಕ್ ಡಿಕ್ಸನರು ಮಾತಾಡುತ್ತಿದ್ದಾರೆ.

ಸಣ್ಣ ಆಕಾರದ ಈ ರಿಯಾಕ್ಟರ್ ಸ್ಥಾಪನೆಗೆ ೩೫ ಲಕ್ಷ ರೂ. ಗಳ ವೆಚ್ಚ ತಗುಲಿತು. ಇಲ್ಲಿ ತಯಾರಾಗುತ್ತಿರುವ ‘ರೇಡಿಯೋ ಐಸೋಟೋಪ್’’ಗಳು ಭಾರತದಲ್ಲಿ ಈಗಾಗಲೇ ಬೇಸಾಯ, ಕೈಗಾರಿಕೆ ಹಾಗೂ ಔಷಧಗಳ ತಯಾರಿಕೆ, ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳು ನಡೆಸುವ ಸಂಶೋಧನಾ ಕಾರ್ಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಬಳಕೆಗೆ ಬಂದಿವೆ. ರಿಯಾಕ್ಟರ್ ವಿಜ್ಞಾನದಲ್ಲಿ ಭಾರತೀಯ ತರುಣ ವಿಜ್ಞಾನಿಗಳಿಗೆ ಕೊಡುವ ತರಬೇತಿ ವ್ಯವಸ್ಥೆಗೆ ಇದೊಂದು ಮುಖ್ಯ ಸಾಧನವಾಗಿದೆ.

ಹೊಸದಾಗಿ ನಿರ್ಮಿತವಾಗುತ್ತಿರುವ “ಜೆರ್ಲೀನಾ” ರಿಯಾಕ್ಟರ್ ೧೯೫೯ರ ಹೊತ್ತಿಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಹೊಸ ರಿಯಾಕ್ಟರ್ ವ್ಯವಸ್ಥೆಗಳ ಅಧ್ಯಯನ ಕಾರ್ಯಕ್ಕೆ ಇದು ತುಂಬಾ ಉಪಯುಕ್ತವಾಗಲಿದೆ.

ಏಳೂವರೆ ಕೋಟಿ ರೂ. ಗಳ ವೆಚ್ಚ

ಅಣು ವಿಜ್ಞಾನದಲ್ಲಿ ಭಾರತವು ಸಾಧಿಸುತ್ತಿರುವ ಮುನ್ನಡೆಯ ಪ್ರತೀಕವಾಗಿ ಇದೀಗ ಟ್ರಾಂಬೆಯಲ್ಲಿ ಏಳೂವರೆ ಕೋಟಿ ರೂ.ಗಳ ವೆಚ್ಚದಲ್ಲಿ ಕೆನಡಾ-ಇಂಡಿಯಾ ರಿಯಾಕ್ಟರ್-ವೊಂದರ ಸ್ಥಾಪನೆಯಾಗುತ್ತದೆ. ಮುಂದಿನ ವರ್ಷದಲ್ಲಿ ಇಲ್ಲಿ ಐಸೋಟೋಪ್‌ಗಳ ಸ್ಥಾಪನೆ ಸಾಧ್ಯವಾಗಲಿದ್ದು ವಿಶ್ವದಲ್ಲಿಯೇ ಈ ವಿಚಾರದಲ್ಲಿ ಭಾರತಕ್ಕೊಂದು ಪ್ರಮುಖ ಸ್ಥಾನದೊರೆಯಲಿದೆ. ಭಾರತದಲ್ಲಿ ಆಗ ತಯಾರಾಗುವ ವಿವಿಧ ಬಗೆಯಲ್ಲಿ ಆಕ್ಟಿವ್ “ರೇಡಿಯೋ ಐಸೋಟೋಪ್’ಗಳು ಭಾರತದ ಕೈಗಾರಿಕಾ ಬೆಳವಣಿಗೆಗೆ ಒಂದು ಉತ್ತಮ ಪ್ರೇರಕ ಶಕ್ತಿಯಾಗಲಿವೆ ಮತ್ತು ಪ್ರಪಂಚದಲ್ಲಿ ಅತ್ಯುತ್ತಮ ದರ್ಜೆಗೆ ಸೇರಿದ ‘ಐಸೋಟೋಪ್’ಗಳೆಂಬ ಖ್ಯಾತಿಗಳಿಸಲಿವೆ.

ಈ ರಿಯಾಕ್ಟರ್ ಸ್ಥಾಪನೆಗೆ ಕೊಲಂಬೋ ಯೋಜನೆ ರೀತ್ಯಾ ಕೆನಡಾ ದೇಶವು ಭಾರತದೊಡನೆ ಸಹಕರಿಸಿ ಕೆಲಸಮಾಡುತ್ತಿದೆ; ಕೆನಡಾ ಗಳಿಸಿರುವ ಅಪಾರ ಅನುಭವ ಭಾರತಕ್ಕೆ ತುಂಬಾ ಪ್ರಯೋಜನಕಾರಿಯಾಗಲಿದೆ ಈ ರಿಯಾಕ್ಟರ್‌ಗೆ ಬೇಕಾಗುವ ೨೦ ಟನ್ ‘ಭಾರಜಲ’ವನ್ನು ಅಮೇರಿಕಾದ ಅಣುಶಕ್ತಿ ಕಮಿಷನ್ ಭಾರತಕ್ಕೆ ಮಾರಿದೆ.

ರೇಡಿಯೋ ರಸಾಯನಿಕ ಪ್ರಯೋಗಶಾಲೆ

ಟ್ರಾಂಬೆಯ ಅಣುಶಕ್ತಿ ಸಂಸ್ಥೆಯ ಅಂಗವಾಗಿರುವ ‘ರೇಡಿಯೋ ಕೆಮಿಸ್ಟ್ರಿ’ ಪ್ರಯೋಗಶಾಲೆ ರಾಸಾಯನಿಕ ವಿಜ್ಞಾನಿಗಳ ವಿಶೇಷ ತರಬೇತಿಗಾಗಿ ಹೆಣಗುತ್ತಿದೆ. ಕೊಲಂಬೋ ಯೋಜನೆ ರೀತ್ಯಾ ಇಲ್ಲಿ ಕೆಲಸಮಾಡುತ್ತಿರುವ ಡಾ|| ವೆಲ್ಸ್ ಬ್ರಿಟನ್ನಿನ ಒಬ್ಬ ಹಿರಿಯ ವಿಜ್ಞಾನಿಯಾಗಿದ್ದು ಪ್ರಯೋಗಶಾಲೆಯನ್ನು ಒಂದು ಉತ್ತಮ ತಳಹದಿಯ ಮೇಲೆ ವ್ಯವಸ್ಥೆಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಈ ಪ್ರಯೋಗಶಾಲೆ ಸ್ಥಾಪಿಸಿದವರೂ ಬ್ರಿಟನ್ನಿನ ಇನ್ನೊಬ್ಬ ವಿಜ್ಞಾನಿ; ಹಾರ್ವೆಲ್‌ನಲ್ಲಿರುವ ಅಣು ಸಂಶೋಧನಾ ಕೇಂದ್ರದಿಂದ ಅವರು ಈ ಪ್ರಯೋಗಶಾಲೆಯ ಸ್ಥಾಪನೆಗಾಗಿಯೇ ಬಂದಿದ್ದರು.

ಥೋರಿಯಂ ಕಾರ್ಖಾನೆ

ನಾಲ್ಕು ವರ್ಷಗಳ ಹಿಂದೆ ಇಲ್ಲಿ ಸ್ಥಾಪ

(೯ನೇ ಪುಟ ನೋಡಿರಿ.)

NOTICE.

In the Court of the District Munsif of Coondapoor·

R. E. P. No. 725/58 in O. S. No. 729/55·

Between:

P. Laxmana Kamath — Petitioner.

and

Gowri Hengsu (dead) and others — Respondents.

To

1. Sri Jagannatba Pujary (8th respondent)
2. Sanjeeva Pujary (10th respondent)

} Children of Giriyamma Hengsu.

3. Mahabala Pujary (13th respondent)
4. Laxmana Pujary (15th respondent)
5. Krishnayya Pujary (16th respondent)

} Children of Minka Hengsu

6. Basava Pujary (19th respondent)
7. Hoovamma Hengsu (20th respondent)
8. Giriya Pujary (21st respondent)

} Children of Muthakka Pujarthy.

9. Girija Pujarthy (22nd respondent)
10. Parvathy Pujarthy (23rd respondent)

} Chidren of Medya Hengsu.

11. Narasimha Pujary (32nd respondent) son of Sheshi Pujarthy.

All residing at Kachur Village, Udipi Taluk

Please take notice that the above execution petition in which the petition has sought the sale of immoveable property stands posted to 20—2—1959 before the above court for settlement of terms for sale. You are hereby requested to appear before the above court on the said date at 11 A: M. either in person or through a duly instructed pleader and urge your objection if any, failing which you will be declared ex-parte and further steps will be ordered in your absence.

By Order of the Court

Coondapoor
6—2—1959

Sd. K. Ramappayya, *B. A , B. L.,*
Advocate for Petitioner.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನೆರೆಹೊರೆ

ದೇಶೋದ್ಧಾರಕ್ಕೆ ಜನತೆಯ ಸಕ್ರಿಯಯೋಗ ಅಗತ್ಯ

ವಿಯತನಾಮೀಯರಿಂದ ಇಂದು ಭಾರತೀಯರೂ ಬುದ್ಧಿ ಕಲಿಯಬೇಕು

ಡಿ ಯನ್ ಬಿಯನ್ ಫೂನಿನ ಯುದ್ಧ ತದನಂತರ ವಿಯತನಾಮದ ಉತ್ತರ ದಕ್ಷಿಣವೆಂಬ ವಿಭಜನೆಗಳಿಂದ ಒಂದೇ ದೇಶದಲ್ಲಿ ಎರಡು ರಾಜ್ಯಗಳು ಆವಿರ್ಭವಿಸುವಂತಾಯಿತು. ೧೭ನೆಯ ಸಮಾನಾಂತರರೇಖೆಯ ಉತ್ತರ ಪಾರ್ಶ್ವದಲ್ಲಿರುವ ಭಾಗವು ಡೆಮೊಕ್ರೆಟಿಕ್ ರಿಪಬ್ಲಿಕ್ ಆಪ್ ವಿಯತನಾಮು ಎಂದು ಕರೆಯಲ್ಪಡುತ್ತದೆ. ಶ್ರೀ ಹೋ ಚಿ ಮಿನ್ಹ ಅದರ ರಾಷ್ಟ್ರಪತಿಗಳಾಗಿದ್ದಾರೆ. ಇವರ ನೇತೃತ್ವದಲ್ಲಿಯೇ ದೇಶಭಕ್ತ ವಿಯತನಾಮಿಯರು ಫ್ರೆಂಚ ಸೇನೆಗೆ ಬುದ್ಧಿಗಲಿಸಿ ಜನಶಕ್ತಿಯ ಅಜೇಯ ಬಲವನ್ನು ತೋರಿಸಿಕೊಟ್ಟರು. ತಮ್ಮ ವಸಾಹತುಗಳನ್ನಾಗಿಟ್ಟುಕೊಂಡ ಏಶಿಯಾದ ವಿವಿಧ ದೇಶಗಳಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಕೆಲವೊಂದು ಪ್ರಕಾರದ ಅನುಷ್ಠಾನದಿಂದ ತಮ್ಮ ಸ್ವಾರ್ಥವನ್ನು ಸಾಧಿಸಿಕೊಂಡಿದ್ದರೆಂಬುದು ಐತಿಹಾಸಿಕ ಸತ್ಯವಾಗಿದೆ. ವಸಾಹತುಗಳಲ್ಲಿನ ಅಧಿಕ ಸಂಖ್ಯಾಕ ಜನರನ್ನು ಅನಕ್ಷರಸ್ಥರನ್ನಾಗಿಯೇ ಉಳಿಸಿಕೊಳ್ಳುವುದು, ಜನತೆಯಲ್ಲಿ ವಿದೇಶೀಯರಿಂದಲೇ ತಮ್ಮ ಉದ್ಧಾರವೆಂಬ ಸುದೃಢ ವಿಶ್ವಾಸವನ್ನು ಹುಟ್ಟಿಸುವುದು, ತಮ್ಮ ಆತ್ಮ ಶಕ್ತಿಯನ್ನು ಸಂಪೂರ್ಣ ಕಳೆದುಕೊಂಡು ಯಾವ ಜೀವವೂ ಅನ್ಯರ ದಾಸಾನುದಾಸರಂತೆ ದಿನಗಳೆಯುವುದೇ ಶ್ರೇಯಸ್ಕರವೆಂಬ ಭಾವನೆಯನ್ನು ಹರಡಿಸುವುದು—ಇವೇ ಪಾಶ್ಚಾತ್ಯರ ಮೂಲತಂತ್ರಗಳಾಗಿದ್ದುವು. ಭಾರತದಲ್ಲಿ ಒಕ್ಕಲುಗಳು ಧನಿಯರಿಗೆ ತೆರಬೇಕಾದ ಗೇಣಿಯನ್ನು ಕಟ್ಟಿಸದೆ ಹೋದರೆ, ಅವರ ಮನೆ, ಎತ್ತು, ಪಾತ್ರೆ ಪರಡಿಯೆಲ್ಲವನ್ನೂ ಹರಾಜು ಹಾಕುವ ಕ್ರಮವಿದ್ದಂತೆಯೇ ವಿಯತನಾಮದಲ್ಲಿ ಶ್ರೀಮಂತರು ತಮ್ಮ ಸಾಲಿಗನ ಮಗಳನ್ನು ಬಲಾತ್ಕಾರದಿಂದ ಸೆಳೆದು ಸಾಲವನ್ನು ತುಂಬಿಸಿಕೊಳ್ಳುತಿದ್ದರು. ಹೀಗೆ ಅಲ್ಲಿ ಒಬ್ಬೊಬ್ಬರಿಗೆ ನಾಲ್ಕಾರೂ ಪತ್ನಿಯರೂ ಇರುತಿದ್ದರು! ಸೇಕಡಾ ೯೫ರಷ್ಟು ನಿರಕ್ಷರಸ್ಥರು, ಹಸ್ತ ಕಲೆಗಳಲ್ಲದೆ ಯಾವ ಉದ್ಯೋಗಗಳೊಂದೂ ಇರಲಿಲ್ಲ. ಫ್ರೆಂಚರು ಇನ್ನೂ ಕೆಲವು ಸುಧಾರಣೆಗಳನ್ನು ಮಾಡಿದರು. ಅಲ್ಲಲ್ಲಿ ಹೆಂಡದಂಗಡಿಗಳನ್ನು ತೆರೆದರು; ಇಲ್ಲಿ ಫ್ರೆಂಚ ಅಧಿಕಾರಿಗಳೂ ಇತರ ಶ್ರೀಮಂತರೂ ಮದಿರಪಾನೋನ್ಮತ್ತರಾಗಿ ಪ್ರಥಭ್ರಷ್ಟ ಹುಡುಗಿಯರೊಂದಿಗೆ ಆಮೋದ—ಪ್ರಮೋದಗಳಿಂದ ಕೂಡಿರುತ್ತಿದ್ದರು. ವಿಯತನಾಮೀ ಜನತೆಗೆ ಇದೊಂದು ರಾಷ್ಟ್ರೀಯ ಅಪಮಾನವಾಗಿದೆ.

ಇಂತಹ ಹಿಂದುಳಿದ ಅವಸ್ಥೆಯಿಂದ ಎದ್ದು, ಉನ್ನತಿ ಪಥದತ್ತ ಧಾವಿಸುವ ವಿಯತನಾಮೀಯರ ಆದರ್ಶಗುಣಗಳು, ಸಂಸ್ಕಾರ ಮತ್ತು ಪರಿಶ್ರಮಗಳು ಅವರ ಸ್ವಾತಂತ್ರ್ಯ ಸಂಗ್ರಾಮಕಾಲದಲ್ಲಿ ಉಪಯೋಗಕ್ಕೆ ಬಂದುವು. ಆವೇ ಗುಣಗಳು ಈಗಲೂ ಅವರಲ್ಲಿ ನೆಲೆಯೂರಿವೆ. ಅಂದು ಫ್ರೆಂಚಸತ್ತೆಯನ್ನು ಮುರಿದೆಸೆಯಲು ಕೇಂದ್ರೀಕೃತವಾಗಿದ್ದ ಅವರ ಸ್ಫೂರ್ತಿ ಮತ್ತು ದೃಢ ಸಂಕಲ್ಪಗಳು ಈಗ, ದೇಶೋದ್ಧಾರ ಕಾರ್ಯದತ್ತ ಸರಿದಿವೆ. ವಿಯತನಾಮೀಯರ ಮುಖ್ಯಾಹಾರವಾದ ಅಕ್ಕಿಯ ಉತ್ಪಾದನೆಯು ೨೦ ಲಕ್ಷ ಟನ್ನುಗಳಿಂದ ೪೦ ಲಕ್ಷ ಟನ್ನುಗಳಿಗೇರಿದೆ. ಉದ್ಯೋಗಧಂಧೆಗಳಲ್ಲಿ ಮಹತ್ವದ ವಿಕಾಸಕಾರ್ಯಗಳು ನಡೆಯುತ್ತಿವೆ. ಹಿಂದೆ ಆಯಾತವಾಗುತಿದ್ದ ಹೆಚ್ಚಿನ ಸೊತ್ತುಗಳು ಈಗ ದೇಶದಲ್ಲೇ ತಯಾರಾಗುವಂತಾಗಿದೆ. “ಲೈಕರ್ ಚಿತ್ರಕಾರಿ” ಎಂಬುದು ಇಲ್ಲಿನ ಪ್ರಮುಖ ಹಸ್ತಕಲೆಯಾಗಿದೆ. ರಬ್ಬರಿನಂತೆಯೇ ‘ಲೈಕರ್” ಕೂಡಾ ಮರದಿಂದಲೇ ದೊರೆಯುತ್ತದೆ. ಇದರ ರಸದಿಂದ ಅನೇಕ ವಿಧದ ಪೈಂಟ್‌ಗಳನ್ನು ತಯಾರಿಸುತ್ತಾರೆ. ಇದರ ಉಪಯೋಗದಿಂದ ಅನೇಕಾನೇಕ ಚಿತ್ರಗಳನ್ನು ಬರೆಯಲಾಗುತ್ತವೆ. ಇಂತಹ ಚಿತ್ರಗಳು ಆಕರ್ಷಕವಿದ್ದು, ಲಕ್ಷಾಂತರ ಬೆಲೆ ಬಾಳುವಷ್ಟು ನಿರ್ಯಾತವಾಗುತ್ತವೆ.

ಸದ್ಯ ಉತ್ತರ ವಿಯತನಾಮದ ರಾಷ್ಟ್ರಪತಿಗಳಾಗಿರುವ ಶ್ರೀ ಹೋ ಚಿ ಮಿನ್ಹರ ಜೀವನವು ಸ್ವಾತಂತ್ರ್ಯಪ್ರಾಪ್ತಿಗಾಗಿ ಹೊಡೆದಾಡುವುದರಲ್ಲಿಯೇ ಕಳೆಯಿತು. ಅವರು ಸರ್ವ ಜನಪ್ರಿಯರಾಗಿರುವರು ಚಾಚಾನೆಹರೂವರಂತೆಯೇ ‘ಚಾಚಾ ಹೋ” ಎಂದಲ್ಲಿಯ ಮಕ್ಕಳೂ ಅವರನ್ನು ಕರೆಯುತ್ತಾರೆ. ಭಾರತ ಮತ್ತು ವಿಯತನಾಮುಗಳ ಸಂಬಂಧವು ಬೆಳೆಯುತ್ತ ಬರುತಿದ್ದು ಕಲಾವಿದ ಮತ್ತು ವಿಶೇಷಜ್ಞರ ಆದಾನ ಪ್ರದಾನಗಳೂ ನಡೆಯುತ್ತಿವೆ. ಏಶಿಯಾದ ರಾಷ್ಟ್ರವಾದ ನೆರೆಯ ವಿಯತನಾಮದ ಕಲ್ಯಾಣದತ್ತ ಭಾರತೀಯ ಪ್ರಭಾವವೂ ಬೀರಿದೆ. ವಿಯತ ನಾಮದಲ್ಲಿ ನಿಯುಕ್ತವಾಗಿದ್ದ ಅಂತಾರಾಷ್ಟ್ರೀಯ ನಿರೀಕ್ಷಣಾ ಸಮಿತಿಯಲ್ಲಿ ಭಾರತಕ್ಕೆ ಅಧ್ಯಕ್ಷ ಸ್ಥಾನವು ದೊರಕಿತ್ತು.

ನಿರಕ್ಷರತೆಯನ್ನು ದೂರ ಮಾಡುವುದರಲ್ಲಿ ವಿಯತನಾಮಕ್ಕೆ ಸಂಪೂರ್ಣ ಸಾಫಲ್ಯ ದೊರೆತಿದೆ. ಸ್ವಾತಂತ್ರ್ಯ ದೊರತಾಗ ಇಲ್ಲಿ ನೂರಕ್ಕೆ ೯೫ರಷ್ಟು ಅನಕ್ಷರಸ್ಥರಿದ್ದರು. ಆಗ ಅಲ್ಲಿ ಸಾಕ್ಷರತಾ ಆಂದೋಲನವು ಪ್ರಾರಂಭವಾಗಿ ಇಂದಿಗೂ ಅದು ಮುಂದುವರಿಯುತ್ತಿದೆ ಕೆಲವಾರು ಕೋಟಿ ಜನತೆಯನ್ನು ನಿರಕ್ಷರತಾರಾಕ್ಷಸನಿಂದ ಮುಕ್ತಗೊಳಿಸಲಾಗಿದೆ. ಎಲ್ಲ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ನಿಯಮಾನುಸಾರ ನಿರಕ್ಷರಸ್ಥವಯಸ್ಕರಿಗೆ ಹೇಳಿಕೊಡುತ್ತಾರೆ. ಶಾಲಾ ಪ್ರಾಯದ ಮಕ್ಕಳೆಲ್ಲರಿಗೂ ಅಕ್ಷರಾಭ್ಯಾಸ ಕೊಡಲಾಗುತ್ತಿದೆ ಕೆಲವು ನಗರ ಮತ್ತು ಗ್ರಾಮಗಳಲ್ಲಿ ಎಲ್ಲರೂ ಅಕ್ಷರಸ್ಥರಾಗಿದ್ದಾರೆ. ವಿಶ್ವವಿದ್ಯಾಲಯಗಳ ವರೆಗಿನ ಶಿಕ್ಷಣವೂ ನಿಶ್ಶುಲ್ಕವಾಗಿದೆ. ಸರಕಾರದ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಜನರೂ ಹೃತ್ಪೂರ್ವಕ ಉತ್ಸಾಹಿತರಾಗಿ ಮುಂದೆ ಬರುತ್ತಾರೆ ತಮ್ಮ ಮೊಮ್ಮಕ್ಕಳು-ಮರಿಮಕ್ಕಳ ಪ್ರಾಯದ ಎಳೆಯರೊಂದಿಗೆ ಕೂತು ಅಭ್ಯಾಸಮಾಡುವ ವೃದ್ಧವೃದ್ಧೆಯರನ್ನು ಕಾಣಲು ಮನೋಹರವೆನಿಸುತ್ತದೆ. ವಿಯತನಾಮೀ ಭಾಷೆಯು ರೋಮನ್ ಲಿಪಿಯಲ್ಲಿ ಬರೆಯಲ್ಪಡುತ್ತದೆ ಅಲ್ಲದೇ ‘ಆಯಿೊ’ ಮತ್ತು ‘ಟೇ ಎಂಬೆರಡು ಅಕ್ಷರಗಳೂ ಅಧಿಕ ಪ್ರಯೋಗದಲ್ಲಿವೆ. ಈ ಅಕ್ಷರಗಳು ವಿಯತನಾಮದ ಎಲ್ಲೆಡೆಯಲ್ಲಿಯೂ, ಮನೆ, ವಸ್ತುಗಳ ಮೇಲೆ, ಜಾನುವಾರುಗಳ ಮೈಮೇಲೆ ಹಾಗೂ ಸ್ತ್ರೀ ಪುರುಷರ ವಸ್ತ್ರಗಳ ಮೇಲೆ ತೋರಿಬರುತಿದ್ದು, ಇದೇ ನಿರಕ್ಷರತಾ ದೂರೀಕರಣದ ದ್ಯೋತಕವಾಗಿದೆ. ಈ ಎರಡು ಅಕ್ಷರಗಳ ಅಭ್ಯಾಸವೇ ನಿರಕ್ಷರತಾ ನಿರ್ಮೂಲನೆಯ ಆಂದೋಲನಕ್ಕೆ ಉತ್ಸಾಹವನ್ನು ತಂದೀಯುವಷ್ಟು ಶಕ್ತಿಸಂಪನ್ನವಾಗಿ ಪರಿಣಮಿಸಿವೆ.

ಇತರ ದೇಶಗಳಂತೆಯೇ ವಿಯತನಾಮದಲ್ಲಿಯೂ ಅಲ್ಲಿನಜನತೆ ನೂರಾರು ವರ್ಷಗಳಿಂದ ತಿಳಿದುಕೊಂಡಿದ್ದ ಜನಪದ ಗಥೆಗಳಿವೆ. ಅಡಿಕೆ ಮತ್ತು ವೀಳ್ಯದೆಲೆಯ ಪ್ರಯೋಗದ ಕುರಿತಾಗಿ ಒಂದು ಮನೋರಂಜಕ ಕಥೆಯಿದೆ. ಟಾಂಡ್ ಮತ್ತು ಲಾನ್ ಎಂಬವರಿಬ್ಬರು ಅನಾಥ ಸಹೋದರರು. ಅವರಿಬ್ಬರೂ ಪರಸ್ಪರ ಬಹಳವಾಗಿ ಪ್ರೀತಿಸುತಿದ್ದರು; ಅರೆಗಳಿಗೆಯ ವಿರಹವನ್ನೂ ಅವರು ಸಹಿಸುತ್ತಿರಲಿಲ್ಲ. ಅವರ ಗುರುವಿಗೆ ಒಬ್ಬಾಕೆ ಸುಂದರಿ ಮಗಳಿದ್ದಳು. ಆಕೆ ಇಬ್ಬರೊಡನೆಯೂ ಸ್ನೇಹವಿರಿಸಿಕೊಂಡಿದ್ದರೂ ಮುಂದೆ, ಹಿರಿಯವನಾದ ಟಾನನೊಡನೆ ವಿವಾಹ ಸಂಬಂಧ ಬೆಳೆಸಿದಳು. ನೂತನ ವಿವಾಹದ ಉತ್ಸಾಹದಿಂದಾಗಿ ಅಣ್ಣ ಟಾನನು ತಮ್ಮ ಲಾನನ ಸುಖದುಃಖಗಳನ್ನು ಮರೆತುಬಿಟ್ಟನು. ಇದರಿಂದ ಲಾನ್ ದುಃಖಿತನಾಗಿನೊಂದು ಮನೆಯನ್ನು ಬಿಟ್ಟು, ಬಹಳ ದೂರಪೋಡಿ ಬಿಕ್ಕಿ ಬಿಕ್ಕಿ ಅಳುತ್ತ ಪ್ರಾಣತ್ಯಾಗ ಮಾಡಿದನು. ಪರಮಾತ್ಮನು ಆತನ ಶವವನ್ನು ಒಂದು ದಿನ್ನೆಯಾಗಿ ಮಾರ್ಪಡಿಸಿದನು. ಲಾನನು ದೂರ ಹೋದ ಕೆಲವು ಕಾಲಾ ನಂತರ ಅಣ್ಣ ಟಾನನಿಗೆ ತನ್ನ ತಪ್ಪಿನ ಅರಿವಾಯಿತು. ತಮ್ಮನನ್ನು ಅರಸುತ್ತ ಹೊರಟನು. ಆಹಾರ ತೃಷಾ ಪೀಡಿತನಾಗಿ ಅವನು ಅದೇ ದಿನ್ನೆಯ ಸಮೀಪ ಬಂದನು. ಆದರೆ, ಅವನು ತೀರ ನಿರ್ಬಲನಾಗಿದ್ದುದರಿಂದ ಅದನ್ನು ಏರ ಏರುತ್ತಲೇ ಸತ್ತು ಹೋದನು. ಅದೇ ಸ್ಥಾನದಲ್ಲಿ ಒಂದು ಅಡಿಕೆಯ ಮರವು ಕಂಗೊಳಿಸಿತು. ಅದರ ನೆರಳು ಬಹು ಉದ್ದಕ್ಕೆ ಹರಡುತಿತ್ತು. ಟಾನನು ಮನೆಗೆ ಹಿಂತಿರುಗಿ ಬಾರದಿರುವುದನ್ನು ನೋಡಿ, ಆತನ ಪತ್ನಿ ಅರಸುತ್ತ ಹೊರ ಬಿದ್ದಳು ಆಕೆಯೂ ಅದೇ ದಿನ್ನೆ

(ಆನೇ ಪುಟ ನೋಡಿರಿ.)



ಕೆನಿಯಕ್ಕೆ ಬ್ರಿಟನ್ನಿನಿಂದ ರವಾನಿಸಲಾದ ಕಾಫಿ ಮಿಶ್ರಿಸುವ ಯಂತ್ರವೊಂದು.

‘ನಚಿಕೇತ’ರು ಬರೆದ ಭಾವಪೂರ್ಣ ಕಾದಂಬರಿ

◆ ಭಾವಾರ್ಚನೆ ◆

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿವರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ಗೋವಿಜಯ
(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0
ನವಯುಗ ಪ್ರೆಸ್, ಉಡುಪಿ.

ಯೋಚಿಸಲರಿಯದ ಮಾನವನು ಮೂರ್ಖನು; ಯೋಚನೆಯು ಮಾಡಲು ಬಯಸದವ ಅಂಧವಿಶ್ವಾಸಿ; ಯೋಚಿಸುವಷ್ಟು ಧೈರ್ಯವೂ ಇಲ್ಲದವನು ದಾಸಾನುದಾಸನು; ಯೋಚಿಸಿ ತನ್ನ ಕಾರ್ಯಗಳನ್ನು ಮಾಡುವನು. ಜ್ಞಾನಿ, ಪ್ರಗತಿಶೀಲ ಮತ್ತು ಸ್ವ ಸ್ವಾಮಿ ಎಂಬುದನ್ನು ಮರೆಯಬಾರದು.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೨-೨-'೫೯	೨೨

ಕೈಮಗ್ಗ ಸಪ್ತಾಹ

ಅನ್ನ, ಬಟ್ಟೆ, ವಸತಿಗಳ ಸಮಸ್ಯೆ ಮಾನವನಿಗೆ ಅವಶ್ಯ ಪರಿಹರಿಸಲ್ಪಡಬೇಕಾದುವು. ಅನ್ನದ ಪುಟ್ಟಿಗೆ ಅಧಿಕ ಆಹಾರೋತ್ಪಾದನೆ, ವಸತಿ ಒದಗಿಸಲು ಅನೇಕಾನೇಕ ವಸತಿಗಳ ನಿರ್ಮಾಣ ಯೋಜನೆಗಳು ಕೈಗೊಳ್ಳಲ್ಪಟ್ಟಿರುವಂತೆಯೇ ಬಟ್ಟೆಯ ಸಮಸ್ಯೆಗೂ ಪರಿಹಾರಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿವೆ. ಜನನಿಬಿಡನೆನಿಸಿದ ಭಾರತದಲ್ಲಿ ಸರ್ವಜನೋಪಯೋಗಿ ಬಟ್ಟೆಗಳ ಅಭಾವವು ಸಾಕಷ್ಟಿದ್ದು, ನಮ್ಮ ದೇಶದಲ್ಲಿನ ಗಿರಣಿ ವಸ್ತು ಕೈಮಗ್ಗಗಳಲ್ಲಿ ಸಿದ್ಧವಾಗುವ ಬಟ್ಟೆಯ ಪ್ರಮಾಣವು ನಮಗೆ ಸಾಕಾಗುವುದಿಲ್ಲ. ಮಹಾತ್ಮಾ ಗಾಂಧಿಯವರು ಒರ್ವ ಮನುಷ್ಯನಿಗೆ ಸಾಮಾನ್ಯ ಸರಾಸರಿ ನಾಲ್ಕು ಗಜ ಬಟ್ಟೆ ದೊರೆಯುವುದೆಂದು ಹೇಳುತಿದ್ದರು; ಅಲ್ಲದೇ ನಮ್ಮಲ್ಲಿ ಕೆಲವರು ಇದಕ್ಕಿಂತ ಹೆಚ್ಚು ಬಟ್ಟೆಯನ್ನು ಬಳಸುವುದರಿಂದಲೇ ಹಲವರು ಆವಶ್ಯಕವಾದಷ್ಟು ಬಟ್ಟೆಗಳನ್ನು ಕೊಂಡುಕೊಳ್ಳುವ ಯೋಗ್ಯತೆಯಿಂದ ವಂಚಿತರಾಗಿದ್ದಾರೆ. ಈಗ, ಈ ಪ್ರಮಾಣವು ಸ್ವಲ್ಪ ಏರಿರಬಹುದು. ಆದರೂ ತಯಾರಾಗುವ ಬಟ್ಟೆಯು ನಮಗೆ ಸಾಕಾಗುವುದಿಲ್ಲ; ಆದುದರಿಂದಲೇ ಈ ಕಡೆಗೆ ಅವಶ್ಯ ಗಮನ ಹರಿಸುವುದು ಅಗತ್ಯ.

ಈ ಬಟ್ಟೆಯನ್ನು ಗಿರಣಿಗಳ ಮೂಲಕ ಅಥವಾ ಕೈ ಮಗ್ಗಗಳ ಮೂಲಕ ತಯಾರಿಸಬಹುದು. ದೇಶದಲ್ಲಿ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ, ಕುಶಲ ಕಲೆಗಳನ್ನು ಉತ್ತೇಜಿಸುವ ಆದರ್ಶ ಧ್ಯೇಯಗಳನ್ನು ಇಟ್ಟುಕೊಂಡಿರುವ ಭಾರತವು ಗಿರಣಿಗಳಿಗೆ ವಿಶೇಷ ಪ್ರಾಧಾನ್ಯವೀಯದೆ, ದೇಶದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಉದ್ದೇಶದಿಂದ ಕೂಡಾ ಕೈ ಮಗ್ಗಗಳ ಮೂಲಕ ಬಟ್ಟೆಗಳನ್ನು ತಯಾರಿಸಲು ಉತ್ತೇಜನವೀಯುತ್ತಿದೆ. ಕೈ ಮಗ್ಗಗಳ ಬಟ್ಟೆಗಳನ್ನು ಜನಪ್ರಿಯಗೊಳಿಸಲು ಮತ್ತು ಅವುಗಳಿಗೆ ಉತ್ತಮ ಮಾರುಕಟ್ಟೆಗಳನ್ನು ಕಂಡುಹಿಡಿಯಲು ಆವಶ್ಯಕ ಕಾರ್ಯಕ್ರಮಗಳನ್ನು ಕೈಕೊಳ್ಳಲು ಹಾಗೂ ಕೈಮಗ್ಗಗಳಲ್ಲಿ ದುಡಿಯುವ ನೇಕಾರರ ಸುಖ ಕಷ್ಟಗಳನ್ನು ಗಮನಿಸಲು ಕೇಂದ್ರ ಕೈಮಗ್ಗದ ಮಂಡಳಿಯೊಂದನ್ನು ಸ್ಥಾಪಿಸಿದೆ. ಈ ಮಂಡಳಿಯು ನೇಕಾರರ ಹಿತಚಿಂತನೆಯನ್ನು ಮಾಡುವುದಲ್ಲದೇ ಜನತೆಯಲ್ಲಿ ಕೈಮಗ್ಗದ ಬಟ್ಟೆಗಳ ಕಡೆಗಿರುವ ಅನಾಸಕ್ತಿಯನ್ನು ಹೋಗಲಾಡಿಸುವ ಪ್ರಯತ್ನವನ್ನೂ ನಡೆಸುತ್ತಿದೆ.

ಇಂತಹ ಪ್ರಯತ್ನಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಕೈಮಗ್ಗದ ಸಪ್ತಾಹಾಚರಣೆಯೂ ಒಂದಾಗಿದೆ. ಕೈಮಗ್ಗಗಳಲ್ಲಿಯೇ ತಯಾರಾದ ಉತ್ತಮ ಮಾದರಿಯ ಬಟ್ಟೆಗಳನ್ನು ಪ್ರದರ್ಶಿಸುವುದು; ಕೈಮಗ್ಗದ ಬಟ್ಟೆಗಳು ಬಾಳಿಕೆಯಲ್ಲಿಯೂ ಗುಣಗಳಲ್ಲಿಯೂ ಇತರ ಬಟ್ಟೆಗಳ ಸಮಾನ ಸ್ಥಾನದಲ್ಲಿಯೇ ನಿಂತಿರುವುವು ಎಂಬುದನ್ನು ಜನತೆಗೆ ತಿಳಿಸಿ, ತನ್ಮೂಲಕ ಜನಪ್ರಿಯತೆಯನ್ನು ಗಳಿಸಿಕೊಳ್ಳುವುದು—ಇತ್ಯಾದಿಗಳೇ ಈ ಸಪ್ತಾಹದ ಮೂಲೋದ್ದೇಶ. ಕೈಮಗ್ಗದ ಬಟ್ಟೆಗಳೆಂದರೆ, ತೀರ ಒರಟು ಮತ್ತು ನಾಜೂಕಲ್ಲದುವುಗಳು ಎಂಬ ದೂರು ಬರುತಿತ್ತು. ಆದರೆ, ಈಗೀಗ ಕೈಮಗ್ಗಗಳಲ್ಲಿಯೂ ಆಧುನಿಕ ತಂತ್ರಕ್ಕನುಗುಣವಾಗಿ ಬಟ್ಟೆಗಳು ತಯಾರಾಗುತ್ತವೆ; ಆಧುನಿಕ ಮಾದರಿಗಳನ್ನು ಅನುಸರಿಸಲಾಗುತ್ತದೆ; ಕೈಮಗ್ಗಗಳ ಬಟ್ಟೆಗಳಿಗೆ ಬಳಸುವ ನೂಲು ಉತ್ತಮವಾಗಿಯೇ ಇರುತ್ತದೆ. ಗುಣ ಮತ್ತು ಬಾಳಿಕೆಗಳು ಹಾಗೂ ರಂಗುಗಳ ಗುಣಗಳು ಗಿರಣಿಗಳಲ್ಲಿ ತಯಾರಾಗುವ ಬಟ್ಟೆಗಳನ್ನು ಎಂದಿಗೂ ಬಿಟ್ಟು ಕೊಡಲಾರವು. ಹಾಗಾಗಿ ಕೈಮಗ್ಗದ ಬಟ್ಟೆಗಳು ಹಿಂದಿಗಿಂತ ಇಂದು ಜನಮನ್ನಣೆಯನ್ನು ಪಡೆಯುವಂತಾಗಿವೆ.

ಕೈಮಗ್ಗದ ಬಟ್ಟೆಗಳನ್ನು ಸಿದ್ಧಪಡಿಸುವವರು ಬಡನೇಕಾರರು. ನಾವು ಕೈಮಗ್ಗದ ಬಟ್ಟೆಗಳನ್ನು ಕೊಂಡುಕೊಳ್ಳುವುದರಿಂದ, ನಾವು ತೆರುವ ಹಣವು ಅವರ ಜೀವನೋಪಾಯಕ್ಕೆ ನೆರವಾಗುತ್ತದೆ. ಬೆಲೆಯಲ್ಲಿಯೂ ಈಗ ಅಗ್ಗವಾಗಿಯೇ ಇದೆ. ದೇಶದಲ್ಲಿ ಈ ಕೈಮಗ್ಗಗಳಲ್ಲಿ ದುಡಿಯುವ ಲಕ್ಷಾಂತರ ನೇಕಾರರ ಜೀವನವನ್ನು ಸುಗಮವಾಗಿಸುವ ಕಾರ್ಯವನ್ನು ನಾವು ಮಾಡಿದಂತಾಗುತ್ತದೆ. ಮಹಾತ್ಮಾ ಗಾಂಧಿಯವರು ಉಪದೇಶಿಸಿದ ಸ್ವದೇಶೀಗೆ ಪುರಸ್ಕಾರವಿತ್ತಂತೆಯೂ ಆಗುವುದು. ಗ್ರಾಮದಲ್ಲಿ ತಯಾರಾದ ಕೈಮಗ್ಗದ ಬಟ್ಟೆಗಳನ್ನು ಆಯಾ ಗ್ರಾಮವಾಸಿಗಳು ಪಡೆದುಕೊಳ್ಳುವುದರಿಂದ, ಗ್ರಾಮವೂ ಸ್ವಾವಲಂಬಿಯಾಗಲು ಸಹಾಯಕವಾಗುವುದು. ನಮ್ಮ ಮೈಸೂರು ರಾಜ್ಯದಲ್ಲಿಯೇ ಸುಮಾರು ಒಂದೂವರೆ ಲಕ್ಷ ಕೈಮಗ್ಗಗಳಿದ್ದು, ಅವುಗಳಲ್ಲಿ ಆರು ಲಕ್ಷ ನೇಕಾರರು ದುಡಿಯುತ್ತಾರೆ. ಇಷ್ಟು ಜನರ ಪರಿಶ್ರಮಕ್ಕೆ ತಕ್ಕ ಫಲವನ್ನೀಯುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಭಾರತದಲ್ಲಿ ನಿರ್ಮಾಣ ಹೊಂದಿದ ಕೈಮಗ್ಗದ ಬಟ್ಟೆಗಳು ವಿದೇಶಗಳಲ್ಲಿಯೂ ಮನ್ನಣೆಯನ್ನು ಪಡೆಯುತ್ತಿವೆ. ಹಾಗಿರುವಾಗ, ನಮ್ಮ ದೇಶದಲ್ಲಿಯೂ ಅವಕ್ಕೆ ಜನಪ್ರಿಯತೆಯನ್ನು ಸಂಪಾದಿಸಲು ದೇಶದಾದ್ಯಂತ ತಾ. ೮ರಿಂದ ೧೪ರ ವರೆಗೆ ಆಚರಿಸಲಾಗುತ್ತಿರುವ ಕೈ ಮಗ್ಗ ಬಟ್ಟೆಗಳ ಸಪ್ತಾಹವು ತನ್ನ ಸದುದ್ದೇಶಗಳನ್ನು ಜನಮನದಲ್ಲಿ ನಾಟಿಸುವಂತಾಗಲಿ. ಜನತೆಯೂ ಕೈ ಮಗ್ಗದ ಬಟ್ಟೆಗಳನ್ನೇ ಉಪಯೋಗಿಸುವ ದೃಢ ನಿರ್ಧಾರಗೈದು, ಅದನ್ನು ಕಾರ್ಯರೂಪಕ್ಕೆ ತರಲಿ.

ಶಿಕ್ಷಣ ಮಾಧ್ಯಮ

ದೆಹಲಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ|| ವಿ.ಕೆ.ಆರ್.ವಿ. ರಾವ್ ಅವರು ಹೈದರಾಬಾದದಲ್ಲಿ ಆಂಧ್ರಪ್ರದೇಶದ ಸರಕಾರಿ ಶಿಕ್ಷಕರ ಸಂಘದವರ ಏರ್ಪಡಿಸಿದ "ನಮ್ಮ ಶಿಕ್ಷಣ ಮಟ್ಟವು ಕೆಳಗಿಳಿಯುತ್ತಿರುವ ಕುರಿತಾದ ವಿಚಾರ ಸಂಕಿರಣ"ದ ಅಧ್ಯಕ್ಷ ಸ್ಥಾನದಿಂದ ಮನನೀಯ ಉದ್ಗಾರವನ್ನು ಹೊರಡಿಸಿರುವರು. ದಿನೇ ದಿನೇ ನಮ್ಮ ಶಿಕ್ಷಣ ಮಟ್ಟವು ಕೆಳಗೆ ಕುಸಿಯುತ್ತಿವೆ ಎಂಬ ದೂರು ಬಹಳವಾಗಿ ಕಿವಿಗೆ ಬಡೆಯುತ್ತಿರುವಾಗ, ಡಾ| ರಾಯರ ಮಾತುಗಳು ವಿಚಾರಣೀಯವಿವೆ. "ನಮ್ಮ ದೇಶದಲ್ಲಿ ಶಿಕ್ಷಣ ಮಟ್ಟವು ಸುಧಾರಿಸಬೇಕಾದರೆ, ವಿಶಿಷ್ಟ ಪ್ರದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ಪ್ರದೇಶದ ಮಾತಾಡುವ ಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದೊಂದೇ ತಾರಕ ಉಪಾಯವಾಗಿವೆ" ಎಂದು ಅವರು ಹೇಳಿದರು. ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸವಾಗಬೇಕಾದರೆ, ಮಾತೃ ಭಾಷೆಯ ಮೂಲಕ ಶಿಕ್ಷಣವೀಯುವುದು ಉತ್ತಮ ಉಪಾಯವೆಂದು ಮಹಾತ್ಮಾ ಗಾಂಧಿಯವರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ನಾವು ಈ ಗಾಂಧೀವಾದದಿಂದ ದೂರ ಸರಿಯುತ್ತಿದ್ದೇವೆ ಎಂದು ಅವರು ಹೇಳಿ, ಈ ಕಾರಣದಿಂದಲೇ ನಮ್ಮ ಶಿಕ್ಷಣ ಮಟ್ಟವು ಕುಸಿಯುತ್ತಿದೆಯೆಂದರು. ಇಂಗ್ಲಿಷೇ ಶಿಕ್ಷಣ ಸಂಸ್ಥೆಗಳಲ್ಲಿ ಎಂದಿಗೂ ಶಿಕ್ಷಣ ಮಾಧ್ಯಮವಾಗುಳಿಯಬೇಕೆಂಬ ವಾದಸರಣಿಯನ್ನು ತಾವು ಒಪ್ಪಲಾರೆವೆಂದೂ ಅವರು ಆಡಿದರು.

ಡಾ| ರಾಯರ ಈ ಅಭಿಪ್ರಾಯವನ್ನು ಕಾರ್ಯಗತಗೊಳಿಸಲು ಪ್ರಾರಂಭಿಕ ಹದದಲ್ಲಿ ಕೊಂಚ ಪ್ರಯಾಸವೆನಿಸಿದರೂ ಇದರಿಂದ ವಿದ್ಯಾರ್ಥಿಗೆ ತನ್ನ ವಿಕಾಸವನ್ನು ಸಂಪೂರ್ಣ ಮಾಡಿಕೊಳ್ಳುವುದು ಸಾಧ್ಯವಾಗಿದೆ. ವಿದ್ಯಾಭ್ಯಾಸದ ಚರಮ ಧ್ಯೇಯವು ವ್ಯಕ್ತಿತ್ವದ ವಿಕಾಸವೇ ಅಲ್ಲದೆ, ಪ್ರಮಾಣ ಪತ್ರ ಮತ್ತು ಉದ್ಯೋಗ ಪ್ರಾಪ್ತಿಯಲ್ಲವಾದುದರಿಂದ, ಶಿಕ್ಷಣದ ಮಾಧ್ಯಮವು ಆಯಾ ಪ್ರದೇಶದ ಮಾತೃಭಾಷೆಯೇ ಆಗುವುದು ಅವಶ್ಯ. ಅದರೊಂದಿಗೆ ಆಯಾ ರಾಜ್ಯ ಸರಕಾರದ ಭಾಷೆಯೂ ಪ್ರಾದೇಶಿಕ ಭಾಷೆಯೇ ಆಗುವುದು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ. ಆದರೆ, ನಮ್ಮ ಶಿಕ್ಷಣ ಸಂಸ್ಥೆಗಳೂ, ರಾಜ್ಯ ಸರಕಾರಗಳೂ ಈ ಕಾರ್ಯವನ್ನು ಸಾಧಿಸಲು ಮೀನ ಮೇಷವೆಣಿಸುವುದು ಸರ್ವಥಾ ಸಮವಲ್ಲ; ಡಾ| ರಾಯರ ಉದ್ಗಾರದತ್ತ ಶಿಕ್ಷಣತಜ್ಞರೂ ರಾಜ್ಯ ಸರಕಾರಗಳೂ ತಮ್ಮ ತೀವ್ರ ಗಮನ ಹರಿಸುವುದು ಅನಿವಾರ್ಯವೆಂದೂ, ಪ್ರಾದೇಶಿಕ ಭಾಷೆಯನ್ನು ಪ್ರತಿಕ್ಷೇಪಿಸುವ ಆವಶ್ಯಕತೆಯನ್ನು ಮನಗಂಡು ಕಾರ್ಯಪ್ರವೃತ್ತರಾಗುವುದೂ ಅವಶ್ಯವೆಂದೂ ಹೇಳಬೇಕಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಭೂಮಿಯ ವೇಗ ಹೆಚ್ಚುತ್ತಿದೆ!

ಲಂಡನಿನಲ್ಲಿ ಸೇರಿದ್ದ ಕಾಮನ್ಸ್ ಸಭೆಯಲ್ಲಿ ಒರ್ವ ಸದಸ್ಯರು ಭೂಮಿಯು ಅನಿಯಮಿತವಾಗಿ ಸುತ್ತುತ್ತಿರುವುದನ್ನು ಕಂಡು ಹಿಡಿಯಲು ರಾಷ್ಟ್ರೀಯ ಭೌತಶಾಸ್ತ್ರ ಪ್ರಯೋಗ ಶಾಲೆಯು ಕೈಗೊಂಡ ಕಾರ್ಯಗಳನ್ನು ಪ್ರಶ್ನಿಸಿದಾಗ, ಮಧ್ಯ ಚಳಿಗಾಲದ ದಿನಕ್ಕಿಂತ ಬೇಸಗೆಯ ದಿನದಂದು ಒಂದು ಸೆಕೆಂಡಿನ ಒಂದು ಸಾವಿರದ ಒಂದು ಅಂಶದಷ್ಟು ಚಲನೆಯು ಕಡಿಮೆ ಯಾಗಿರುತ್ತದೆ. ಅಲ್ಲದೇ ಭೂಮಿಯು ಅನೇಕ ವರ್ಷಗಳಿಂದ ತನ್ನ ವೇಗವನ್ನು ತಗ್ಗಿಸುತ್ತ ಬಂದಿದೆ; ಆದರೂ ಈಗ ಪುನಃ ಭೂಮಿ ತನ್ನ ವೇಗವನ್ನು ಹೆಚ್ಚಿಸಿರುವುದೆಂದೂ ಉತ್ತರವು ದೊರೆಯಿತು. ಪರಂತು, ಭೂಮಿಯ ವೇಗವು ಹೆಚ್ಚಿದುದರಿಂದ ಯಾವ ಮಹತ್ವದ ಬದಲಾವಣೆಗಳೂ ನಡೆಯಲಾರವೆಂದು ಹೇಳಿದರು.

ವಿಭಜನೆಗೆ ಹೊಣೆಯಾರು?

ಭಾರತದ ವಿಭಜನೆಗೆ ಪಂಡಿತ ನೆಹರೂರವರೇ ಕಾರಣವೆಂಬ ಮೌಲಾನಾ ಅಜಾದರ ಆತ್ಮಕಥೆಯ ಕುರಿತು ಪ್ರಧಾನಿ ನೆಹರೂರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು: ರಾಷ್ಟ್ರೀಯ ಕಾಗದ ಪತ್ರಗಳ ಭಂಡಾರದಲ್ಲಿ ಮೊಹರ ಮಾಡಿ ಇಡಲ್ಪಟ್ಟ ಮೂವತ್ತು ಪುಟಗಳ ಹೊರತು ಉಳಿದ ಭಾಗವನ್ನು ತಾನು ಓದಿರುವದಾಗಿಯೂ ತಮಗೆ ಸಂಬಂಧಿಸಿದ ಭಾಗಗಳ ಪ್ರಕಟಣೆ ಬಿಟ್ಟುಕೊಡಬೇಕೆಂಬ ಸೂಚನೆಯನ್ನು ತಾವು ತಿರಸ್ಕರಿಸಿದುದಾಗಿಯೂ ಅವರು ಹೇಳಿದರು. ಭಂಡಾರದಲ್ಲಿ ಜತನವಾಗಿಟ್ಟಿರುವ ಮೂವತ್ತು ಪುಟಗಳಲ್ಲಿ ಈಗಿನ ಮುಂದಾಳುಗಳ ಗುಣ ದೋಷಗಳ ವಿಮರ್ಶೆಯಿರುವುದರಿಂದ ಅವನ್ನು ಮೂವತ್ತು ವರುಷಗಳ ನಂತರ ಪ್ರಸಿದ್ಧಿಸಬೇಕೆಂದು ಮೌಲಾನಾ ವಿಧಿಸಿದ್ದಾರೆ.

ಈ ವಿಷಯ ಈಗಾಗಲೇ ವಾತಾವರಣವನ್ನು ಕದಡಿರುವುದರಿಂದ ಪಾರ್ಲಿಮೆಂಟಿನ ಕೆಲ ಸದಸ್ಯರು ಆ ಹಾಳೆಗಳನ್ನು ಈಗಲೇ ಪ್ರಸಿದ್ಧಿಸುವಂತೆ ಒತ್ತಾಯ ಮಾಡಲಿರುವರೆಂದು ತಿಳಿಯುತ್ತದೆ.

ದೇಶದ ವಿಭಜನೆಯ ನಿರ್ಣಯದ ವಿಷಯದಲ್ಲಿ ಶ್ರೀ ನೆಹರೂ ಕಾಂಗ್ರೆಸ್ ಪಕ್ಷವು ವಿಭಜನೆಗೆ ಒಪ್ಪಲು ಕಾರಣವಾದ ವಿವಿಧ ಸಂಗತಿಗಳನ್ನು ನಿವೇದಿಸಿದರು. ಮೌಲಾನಾ ಅಜಾದರು ವೈಯಕ್ತಿಕವಾಗಿ ವಿಚಾರ ಮಾಡುತ್ತಿದ್ದರೆಂದೂ ಅವರು ಕಾರ್ಯಾಚರಣೆಯಲ್ಲಿರುವ ಐತಿಹಾಸಿಕ ಶಕ್ತಿಗಳನ್ನು ಗಣನೆಗೆ ತಂದುಕೊಳ್ಳುತ್ತಿರಲಿಲ್ಲವೆಂದೂ ಹೇಳಿದರು. ತಾತ್ಪೂರ್ತಿಕ ಸರಕಾರದ ದಿನಗಳಲ್ಲಿ ಮುಸ್ಲಿಂ ಲೀಗಿನ ಎಳೆದಾಟದಿಂದ ತಂಟೆ ಹಾಗೂ ಒಡಕಿನ ಮನೋಭಾವನೆಯುಂಟಾಯಿತು. ವಿಭಜನೆಯನ್ನು ತಪ್ಪಿಸಲು ಯಾವುದೇ ಏರ್ಪಾಟನ್ನು ಮಾಡಿದರೂ ಈ ತಂಟೆ ಹಾಗೂ ಒಡಕಿನ ಮನೋಭಾವನೆ ಮುಂದುವರಿಯುವುದು ಖಂಡಿತವೆಂದು ನಮಗನಿಸಿತು. ಇದು ಆರ್ಥಿಕ ಹಾಗೂ ಇತರ ರಂಗಗಳಲ್ಲಿಯ ಯೋಜನಾಬದ್ಧ ಪ್ರಗತಿ

ಅಲ್ಲಲ್ಲಿಯ ಸುದ್ದಿ ಸಾರ

ಗೇರು ವ್ಯವಸಾಯ ಸ್ಪೇಶಲ್ ಆಫೀಸರರ ಫೆಬ್ರವರಿ ತಿಂಗಳ ಸಂಚಾರ ಕಾರ್ಯಕ್ರಮ—ದ. ಕ. ಜಿಲ್ಲೆಯ ಗೇರು ವ್ಯವಸಾಯದ ಸ್ಪೆಶಲ್ ಆಫೀಸರ್ ಶ್ರೀ ಕೆ. ಆರ್. ಸೆಟ್ಟರು ಈ ಕೆಳಗಿನ ಸ್ಥಳಗಳಲ್ಲಿ ಮೊಕ್ಕಾಂ ಮಾಡುವರು. ಗೇರು ವ್ಯವಸಾಯಕ್ಕೆ ಭೂಮಿಯನ್ನು ದರ್ಖಾಸ್ತು ಪಡೆಯಲಪೇಕ್ಷಿಸುವವರು ಅವರನ್ನು ಆಯಾಯ ಮೊಕ್ಕಾಮಿನಲ್ಲಿ ಕಾಣಬಹುದು.

ಫೆಬ್ರವರಿ ತಾ. 14ರಿಂದ 17ರ ತನಕ ಸುಳ್ಯ, 18ರಿಂದ 21ರ ತನಕ ವಿಠಲ, 22ರಿಂದ 23ರ ತನಕ ಮಂಗಳೂರು. 24ರಂದು ಕಾರ್ಕಳ, 25ರಿಂದ 28ರ ತನಕ ಕುಂದಾಪುರ.

ಆರ್ಥಿಕ ಸಾಮಾಜಿಕ ಸಂಶೋಧನೆ—ಉಡುಪಿಯ ಎಂ. ಜಿ. ಎಂ. ಕಾಲೇಜಿನ ಅರ್ಥಶಾಸ್ತ್ರ ಮತ್ತು ಇತಿಹಾಸ ಸಂಘದ ಆಶ್ರಯದಲ್ಲಿ ಪೂನಾದ ಗೋಖಲೆ ಅರ್ಥಸಂಸ್ಥೆಯವರು ಮಲ್ಪೆಯ ಬಡಗಣದಲ್ಲಿರುವ ಪಡುತೋನ್ಸೆ ಗ್ರಾಮದಲ್ಲಿ ನಡೆಸುತ್ತಿರುವ ಆರ್ಥಿಕ ಸಾಮಾಜಿಕ ಸಂಶೋಧನೆಯ ಕುರಿತು ಆ ಬಗ್ಗೆ ಸಂಸ್ಥೆಯ ಸಂಶೋಧಕರಾದ ಶ್ರೀ ಎ. ಆರ್. ರಾಜಪುರೋಹಿತರು ಉಪನ್ಯಾಸವಿತ್ತರು. ಗ್ರಾಮಜೀವನದ ಮೇಲೆ ಪಟ್ಟಣಗಳ ದೆಸೆಯಿಂದ ಉಂಟಾಗುವ ಪರಿಣಾಮಗಳ ವಿಷಯ ತಾವು ಸಂಶೋಧನೆಯನ್ನು ಈಗ ಆರು ತಿಂಗಳಿಂದ ಕೈಗೊಂಡಿದ್ದು ಇನ್ನು ಕೆಲವೇ ತಿಂಗಳೊಳಗೆ ತಮ್ಮ ಅಂಕೆ ಸಂಖ್ಯೆಗಳನ್ನೂ ವರದಿಯನ್ನೂ ತಮ್ಮ ಕೇಂದ್ರ ಸಂಸ್ಥೆಗೆ ಒಪ್ಪಿಸುವುದಾಗಿ ಅವರು ನುಡಿದರು. ಅಧ್ಯಕ್ಷಸ್ಥಾನದಿಂದ ಶ್ರೀ ಕು. ಶಿ. ಹರಿದಾಸ ಭಟ್ಟರು ದೇಶದ ಯೋಜನೆಗಳನ್ನು ರೂಪಿಸುವಲ್ಲಿ ಸತ್ಯಾಂಶವನ್ನು ಹೊರಗೆಡಹುವ ಇಂಥ ಸಂಶೋಧನೆಗಳು ಸರ್ವತ್ರ ನಡೆಯುತ್ತಿರುವುದೇ ಒಂದು ಮಾಯೋದ್ಯಮವಾಗಬೇಕೆಂದೂ ಯೋಜನೆಯು ಊಹೆ ಮತ್ತು ಅಂದಾಜು ಗುಂಡಿನ ಲೋಕದಿಂದ ವಾಸ್ತವಿಕತೆಗಿಳಿಯಬೇಕಾದರೆ ಇಂಥ ಸಂಶೋಧನೆಗಳು ಅತ್ಯಾವಶ್ಯಕವೆಂದೂ ನುಡಿದರು. ಕಾರ್ಯದರ್ಶಿ ಶ್ರೀ ಕೃಷ್ಣ ಶರ್ಮರು ವಂದನೆಯನ್ನರ್ಪಿಸಿದರು.

ಗೆ ಅನಂತರದಲ್ಲಿ ಅಡ್ಡಿಯಾಗಬಹುದಿತ್ತು. ಎರಡನೆಯದಾಗಿ ಫೆಡರಲ್ ವ್ಯವಸ್ಥೆಯಲ್ಲಿ ಘಟಕಗಳಿಗೆ ಹೆಚ್ಚಿನ ಅಧಿಕಾರ ದೊರೆತು ಕೇಂದ್ರವು ದುರ್ಬಲವಾಗಬಹುದಿತ್ತು. ಇವುಗಳಿಂದಾಗಿ ನಾವು ವಿಭಜನೆಗೆ ಒಪ್ಪಿದೆವು—ಎಂದು ಶ್ರೀ ಪಂಡಿತ ನೆಹರೂರವರು ಹೇಳಿದರು.

ಕಾಂಗ್ರೆಸ್ ಅಧ್ಯಕ್ಷೆ ಇಂದಿರಾಗಾಂಧಿ

ಹೊಸತಾಗಿ ಕಾಂಗ್ರೆಸ್ ಅಧ್ಯಕ್ಷ ಪಟ್ಟಕ್ಕೆ ಆಯ್ಕೆಗೊಂಡ ಶ್ರೀಮತಿ ಇಂದಿರಾ ಗಾಂಧಿಯವರು ತಾ. ೨ರಂದು ಅಧಿಕಾರ ಗ್ರಹಣ ಮಾಡಿದರು. ಇನ್ನು ಒಂದು ವಾರದೊಳಗೆ ತನ್ನ ಕಾರ್ಯಕಾರೀ ಸಮಿತಿಯ ಸದಸ್ಯರನ್ನು ಆರಿಸಿ ಅವರ ಹೆಸರನ್ನು ಪ್ರಕಟಿಸುವದಾಗಿಯೂ ಕಾರ್ಯದರ್ಶಿಯ ಸ್ಥಾನಗಳಲ್ಲಿ ಒಂದಕ್ಕೆ ಒರ್ವ ಮಹಿಳೆಯನ್ನೇ ಆರಿಸುವುದಾಗಿಯೂ ಅವರು ಪತ್ರಿಕಾ ಪರಿಷತ್ತೊಂದರಲ್ಲಿ ಹೇಳಿದರು. ಕಾಂಗ್ರೆಸನ್ನು ಬಲಪಡಿಸಿ, ಕಾಂಗ್ರೆಸಿಗರಲ್ಲಿ ಐಕಮತ್ಯವನ್ನು ಸ್ಥಾಪಿಸುವುದು ಇಂದು ಅಗತ್ಯವೆಂದು ತಾವು ಮನಗಂಡಿರುವುದಾಗಿಯೂ ಅದಕ್ಕಾಗಿ ಪ್ರಯತ್ನಿಸುವುದಾಗಿಯೂ ಅವರು ಆಡಿದರು. ತನ್ನ ಆಯ್ಕೆಯ ಕುರಿತಾಗಿ ಅವರು ಹೇಳುತ್ತ, ತಾನು ಮಹಿಳಾವಾದಿಯಲ್ಲವೆಂದೂ ಮಹಿಳೆಯರನ್ನು ಈ ಹುದ್ದೆಗಳಿಗೆ ಆರಿಸಲೇ ಬೇಕೆನ್ನುವವಳು ತಾನಲ್ಲವೆಂದೂ ಆದರೆ, ಯೋಗ್ಯತೆಯುಳ್ಳ ಮಹಿಳೆಗೆ ಅವಳು ಮಹಿಳೆಯೆಂಬ ಒಂದೇ ಕಾರಣವು ಮುಂದೆ ಅಡ್ಡ ಬರಬಾರದೆಂದೂ ಅಭಿಪ್ರಾಯಪಟ್ಟರು. ಕಾಂಗ್ರೆಸ್ ಸಂಘಟನೆಗಾಗಿ ಶ್ರೀಮತಿ ನೆಹರೂ ಭಾರತದಾದ್ಯಂತ ಸಂಚಾರ ಮಾಡುವ, ಕಳೆದುಕೊಂಡ ಕೇರಳವನ್ನು ಕಮ್ಯುನಿಸ್ಟರ ಕಪಿಮುಷ್ಟಿಯಿಂದ ಬಿಡಿಸಲು ಅಲ್ಲಿನ ಕಾಂಗ್ರೆಸಿಗರೊಡನೆ ಪರ್ಯಾಲೋಚನೆ ನಡೆಸುವ, ಮೊಟ್ಟ ಸದಸ್ಯರು ನಿರ್ಮಾಣವಾಗದಂತೆ ಮಾಡುವ ಮಂಡಲ ಕಾಂಗ್ರೆಸ್ ಸಮಿತಿಗಳನ್ನು ಬಲಪಡಿಸುವ ತಮ್ಮ ಅಭಿಲಾಷೆಗಳನ್ನು ಅವರು ತಿಳಿಸಿದರು.

ಮೈಲಿಗೆ ಬೇನೆ—ಉಡುಪಿಯಲ್ಲಿ ಈಚೆಗೆ ಮೈಲಿಗೆ ಬೇನೆಯಾದ ವರದಿಯಾಗಿದೆ. ಮುನಿಸಿಪಲ್ ಆರೋಗ್ಯ ಇಲಾಖೆಯವರು ಈ ಬೇನೆಯು ಹಬ್ಬದಂತೆ ಸೂಕ್ತ ಮುಂಜಾಗ್ರತೆಯನ್ನು ವಹಿಸಿದ್ದಾರೆ.

ಕೆನರಾ ಬೇಂಕಿನ ಆಡಳಿತ ಕಚೇರಿಯ ಶಂಕು ಸ್ಥಾಪನಾ ಕಾರ್ಯವನ್ನು ರಾಷ್ಟ್ರಾಧ್ಯಕ್ಷ ಡಾ| ರಾಜೇಂದ್ರ ಪ್ರಸಾದರವರು ತಾ. 2ರಂದು ಬೆಂಗಳೂರಲ್ಲಿ ನೆರವೇರಿಸುತ್ತಾ ಕಳೆದ 50 ವರ್ಷಗಳಲ್ಲಿ ಕೆನರಾ ಬ್ಯಾಂಕ್ ಸಾಧಿಸಿದ ಪ್ರಗತಿಯನ್ನು ಪ್ರಶಂಸಿಸಿದರು.

ಬೈರಂಜೆ—ಶ್ರೀ ಶಾರದಾ ಎಯಿಡೆಡ್ ಎಲಿಮೆಂಟರಿ ಶಾಲೆಯ ವರ್ಧಂತಿಯುತ್ಸವವು ಕಳೆದ ತಾ. 21ರಂದು ಕಾರ್ಕಳ ರೇಂಜಿನ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ಎಚ್ ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಎಲ್. ಐ. ಸಿ. ಫೀಲ್ಡ್ ಆಫೀಸರ್ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರು ಬಹುಮಾನ ವಿತರಣೆ ಮಾಡಿದರು ನಂತರ ವಿವಿಧ ವಿನೋದಾವಳಿಗಳಾದುವು.

ಮಣಿಪಾಲ—ಎಕೆಡೆಮಿ ಸಂಗೀತ ಮತ್ತು ಲಲಿತ ಕಲಾ ಶಾಲೆಯ ಪ್ರಥಮ ವರ್ಧಂತ್ಯುತ್ಸವವು ಉಡುಪಿಯ ಶ್ರೀ ನರೇಂದ್ರ ಕಲಾ ಮಂದಿರದಲ್ಲಿ ಎಕೆಡೆಮಿಯ ರಿಜಿಸ್ಟ್ರಾರರಾದ ಡಾ| ಟಿ. ಮಾಧವ ಪೈಯವರ ಅಧ್ಯಕ್ಷತೆಯಲ್ಲಿ ತಾ. 6ರಂದು ಜರಗಿತು. ಸ್ವಾಗತ ಭಾಷಣದಲ್ಲಿ ಶ್ರೀಮತಿ ಕೆ. ಕೃಷ್ಣಸ್ವಾಮಿಯವರು ಕಲಾ ಶಾಲೆಯು ಒದಗಿಸುತ್ತಿರುವ ಸವಲತ್ತುಗಳನ್ನು ವಿವರಿಸಿ ಜನತೆಯ ಸಹಕಾರ ಕೋರಿದರು. ಮುಖ್ಯೋಪಾಧ್ಯಾಯರಾದ ಶ್ರೀ ಮಾಧವ ಭಟ್ಟರು ಶಾಲಾ ವರದಿಯನ್ನೊಪ್ಪಿಸಿದರು. ಪ್ರಾಥಮಿಕ ಭಾಗ ಒಂದರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ಮತ್ತು ಸ್ಪರ್ಧೆಯಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಅಧ್ಯಕ್ಷರು ವಿತರಣೆ ಮಾಡಿದರು. ಅಧ್ಯಕ್ಷಸ್ಥಾನದಿಂದ ಡಾ. ಪೈಯವರು ಉಡುಪಿಯು ಆಶಿಸುತ್ತಿದ್ದ ಸಂಗೀತ ಮತ್ತು ಲಲಿತ ಕಲಾ ಶಾಲೆಯನ್ನು ಎಕೆಡೆಮಿಯು ಒದಗಿಸಿದ್ದು ಮಾಸಿಕ ಶುಲ್ಕವು ಅತಿ ಕಡಿಮೆಯಿದ್ದು ಸರ್ವರೂ ಇದರ ಪ್ರಯೋಜನ ಪಡೆಯಲೆಂದು ಹಾರೈಸಿದರು. ಶ್ರೀ ರಾಮದಾಸ ಕಿಣಿಯವರು ವಂದನಾರ್ಪಣೆಯನ್ನರ್ಪಿಸಿದ ಬಳಿಕ ವಿದ್ಯಾರ್ಥಿಗಳಿಂದ ಸಂಗೀತ ಮತ್ತು ನೃತ್ಯ ಪ್ರದರ್ಶನಗಳಾದುವು. ಸಭಾಂತ್ಯದಲ್ಲಿ ಶ್ರೀಮತಿ ಫೆರ್ನಾಂಡಿಸರು ವಂದನೆಗಳನ್ನರ್ಪಿಸಿದರು.

ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. 7ರಂದು ಬಾಸೆಲ್ ಮಿಶ್ಯನಿನ ಫೀಲ್ಡ್ ಸೆಕ್ರೆಟರಿಗಳಾದ ರೆ| ಜೆ. ರೋಸೆಲ್‌ರವರ ಅಧ್ಯಕ್ಷತೆಯಲ್ಲಿ ಜರಗಿತು.

ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎ. ಜೋಕುಮಾರವರು ಶಾಲೆಯ ವರದಿಯನ್ನೋದಿದರು. ಅಲ್ಲದೆ ಶಾಲೆಯ ಮುಂದಿನ ವರ್ಷ ವಜ್ರಮಹೋತ್ಸವವನ್ನಾಚರಿಸಲಿಕ್ಕಿದ್ದು ಇದಕ್ಕೆ ಹಳೆಯ ವಿದ್ಯಾರ್ಥಿಗಳೂ ಮಕ್ಕಳ ಹಿರಿಯರೂ ಸಾರ್ವಜನಿಕರೂ ನೆರವು ನೀಡಬೇಕೆಂದು ಕೇಳಿಕೊಂಡರು. ಶ್ರೀ ಶ್ರೀಶ ಬಲ್ಲಾಳರು ಸ್ವಸ್ತಿವಾಚನ ಮಾಡಿದರು. ಶ್ರೀ ಜೆ. ಡಿ. ಕುಂಪರ್‌ರವರು ಸಮಾರಂಭಕ್ಕೆ ಶುಭವನ್ನು ಕೋರಿ ಬಂದಿರುವ ಸಂದೇಶಗಳನ್ನೋದಿದರು. ಅಧ್ಯಕ್ಷರು ಶಾಲೋಚಿತ ಮಾತುಗಳನ್ನಾಡಿ ಬಣ್ಣದ ಚಲಚ್ಚಿತ್ರದ ಪ್ರತಿಯೊಂದನ್ನು ಶಾಲೆಗೆ ಕಾಣಿಕೆಯಾಗಿ ಒಪ್ಪಿಸಿದರು. ವಿವಿಧ ಪಂದ್ಯಾಟ ಹಾಗೂ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಡಾ| ಎಸ್. ಆರ್. ಪೈಗಳು ಉತ್ತಮ ನಾಟಕಕಾರರಿಗೆ ಬಹುಮಾನವನ್ನು ಹಂಚಿದರು. ಶ್ರೀ ಎ. ಸುಬ್ರಾಯ ಆಚಾರ್ಯರು ಧನ್ಯವಾದವಿತ್ತರು.

ಮಂಗಳೂರಲ್ಲಿ ಕೈಮಗ್ಗ ವಸ್ತ್ರಗಳ ಪ್ರದರ್ಶನ—ಆರನೇ ಅಖಿಲ ಭಾರತ ಕೈಮಗ್ಗ ಸಪ್ತಾಹವು ಮಂಗಳೂರಲ್ಲಿ ತಾ. 8ರಂದು ಸಂಜೆ ಎಸ್. ಕೆ. ಸಿ. ಸಿ. ಬೇಂಕಿನ ಸಭಾ ಭವನದಲ್ಲಿ ಮಂಗಳೂರು ಬಾರ್ ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾಧಿಕಾರಿ ಶ್ರೀ ವ್ಯಾ. ಸಿ. ಹೊಂಬಾಳಯ್ಯನವರು ಈ ಸಪ್ತಾಹವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅಲ್ಲಿಯೇ ಏರ್ಪಡಿಸಲಾದ ಕೈಮಗ್ಗ ವಸ್ತ್ರಗಳ ಪ್ರದರ್ಶನವನ್ನು ಜಿಲ್ಲಾಧಿಕಾರಿಗಳು ಉದ್ಘಾಟಿಸಿದರು.

ಕೋಓಪರೇಟಿವ್ ಸಬ್ ರಿಜಿಸ್ಟ್ರಾರ್ ಶ್ರೀ ಎಸ್. ವೀರಶೇಖರ, ಇವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಎಂ. ಆರ್. ಶಾಸ್ತ್ರಿ ಮತ್ತು ಜಿ. ಬಿ. ಡಿ. ಸೋಜರು ಭಾಷಣವಿತ್ತರು. ಕೋಓಪರೇಟಿವ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಟಿ. ಕೆ. ಶ್ರೀನಿವಾಸ ಅಯ್ಯಂಗಾರರು ಧನ್ಯವಾದವಿತ್ತರು. ಕೊನೆಯಲ್ಲಿ ಚಲಚ್ಚಿತ್ರ ಪ್ರದರ್ಶನವೂ ಇತ್ತು.

ನೇತ್ರ ಚಿಕಿತ್ಸಾ ಕೇಂದ್ರ—ಮಣಿಪಾಲದ ಮೆಡಿಕಲ್ ರಿಲೀಫ್ ಸೊಸೈಟಿಯವರ ವತಿಯಿಂದ ನಡೆಯುವ ಧರ್ಮಾರ್ಥ ನೇತ್ರ ಚಿಕಿತ್ಸೆಯ ನಾಲ್ಕನೇ ಕೇಂದ್ರವು ಕಳೆದ ತಾ. 25ರಂದು ಹಿರಿಯಡ್ಕದಲ್ಲಿ ಜರಗಿತು. ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ರೀಡರುಗಳಾದ ಡಾ| ಸುಬ್ರಹ್ಮಣ್ಯಂ ಮತ್ತು ಡಾ| ಕೆ. ಪಿ. ಪ್ರಭು—ಇವರು 138 ರೋಗಿಗಳನ್ನು ಪರೀಕ್ಷಿಸಿ ವಿವಿಧ ಚಿಕಿತ್ಸೆಯನ್ನು ಸೂಚಿಸಿದರು. ಕಣ್ಣಿನ ಪರೆಯ ಓಪರೇಶನನ್ನು ಮಣಿಪಾಲದ ಆಸ್ಪತ್ರೆಯಲ್ಲಿ ಡಾ| ಸುಬ್ರಹ್ಮಣ್ಯಂರವರು ನೆರವೇರಿಸಿದರು.

ಈ ಹಿಂದೆ ಕಾಪು, ಕಟಪಾಡಿ, ಮಲ್ಪೆಗಳಲ್ಲಿ ಕೇಂದ್ರವನ್ನು ನಡೆಸಿದ್ದು ಪ್ರತಿಯೊಂದು ಕೇಂದ್ರದಲ್ಲಿಯೂ ನೇತ್ರರೋಗ ಪೀಡಿತರು ಸಾಲುಗಟ್ಟಿ ನಿಂತಿರುವ ಹೃದಯ ದೃಶ್ಯವನ್ನು ಕಾಣಬಹುದು. ನೇತ್ರದಾನದ ಸೇವಾಕಾರ್ಯವನ್ನು ಕೈಗೊಂಡ ಡಾ| ಸುಬ್ರಹ್ಮಣ್ಯಂ ಮತ್ತು ಡಾ| ಪ್ರಭುಗಳು ಜನಾನುರಾಗ ಪಡೆಯುತ್ತಿದ್ದು ಅಭಿನಂದನಾರ್ಹರಾಗಿರುವರು. ಈ ಸೇವೆಯ ಸದುಪಯೋಗವನ್ನು ಪಡೆಯಬೇಕೆಂದು ಮೆಡಿಕಲ್ ರಿಲೀಫ್ ಸೊಸೈಟಿಯ ಗೌರವ ಕಾರ್ಯದರ್ಶಿಯವರು ವಿನಂತಿಸುತ್ತಾರೆ.

ಉಡುಪಿ ತಾಲೂಕು ಪ್ರೈಮರಿ ಶಾಲೆಗಳ ಉಪಾಧ್ಯಾಯರ ಸೆಮಿನಾರ್—ತಾ. 18ರಿಂದ 31ರ ವರೆಗೆ ಕಟಪಾಡಿ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗುವುದು. ಎಮ್. ಜಿ. ಎಮ್. ಕಾಲೇಜ್ ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸೆಮಿನಾರನ್ನು ಉದ್ಘಾಟಿಸುವರು. ಡಾ| ಯು. ಸುಂದರರಾಮ ಪೈಗಳು ಸಭಾಧ್ಯಕ್ಷತೆ ವಹಿಸುವರು. ಶ್ರೀಗಳಾದ ಕೆ. ವಿಠಲ ಶೆಣೈ, ಎನ್. ವಿಶ್ವನಾಥ್, ಓ ಕೃಷ್ಣರಾವ್, ವೈ. ಗೋಪಾಲ್ ಎಸ್. ಮುಕುಂದರಾವ್, ಎಂ. ಎಲ್. ಸಿ. ಮೊದಲಾದವರು ಭಾಗವಹಿಸಿರುವರು.

ಬೊಂಬಾಯಿ—ಪ್ರಜಾಪ್ರಭುತ್ವ ಸಮಾರಂಭದ ನಿಮಿತ್ತ ಬೊಂಬಾಯಿಯ ಜೈಹಿಂದ್ ಕಾಲೇಜು ಕನ್ನಡ ಸಂಘದ ಆಶ್ರಯದಲ್ಲಿ ಮುಂಬಯಿಯ ಯಕ್ಷಗಾನ ಮಂಡಳಿಯವರು "ಸುಭದ್ರಾ ಪರಿಣಯ"ವೆಂಬ ಯಕ್ಷಗಾನ ತಾಳಮದ್ದಳೆ ಸಮಾರಂಭವನ್ನು ಯಶಸ್ವಿಯಾಗಿ ನೆರವೇರಿಸಿದರು. ಶ್ರೀಗಳಾದ ವಿಶ್ವನಾಥ ಶೆಟ್ಟಿ, ವಿಠಲ ಬೋರಣ, ತ್ರಿವಿಕ್ರಮ ಶೆಣೈ, ಕಲ್ಮಾಡಿ ಶ್ರೀಧರ, ಈಶ್ವರ ಭಟ್, ಸುರೇಂದ್ರ ಉಚ್ಚಿಲ್, ಜಯರಾಮ ಕಾರಂತ, ಮಾರಪ್ಪ ಶೆಟ್ಟಿ, ಎಸ್. ಕೆ. ಕೋಟ್ಯಾನ್ ಎಸ್. ಎನ್. ಸೆಟ್ಟಿ ಮೊದಲಾದವರು ಪ್ರಮುಖ ಭಾಗವಹಿಸಿದ್ದರು.

ಕಾರ್ಕಳ—ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲಿನ ಈ ವರ್ಷದ ಪುರಸ್ಕಾರ ವಿತರಣಾ ಸಮಾರಂಭವು ಕಳೆದ ತಾ. 31ರಂದು ಸ್ಥಳೀಯ ಸರಕಾರಿ ಆಸ್ಪತ್ರೆಯ ಪ್ರಧಾನ ವೈದ್ಯಾಧಿಕಾರಿ ಡಾ| ಏಮ್. ಯಸ್. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಮಂದಾರ್ತಿ—ಶ್ರೀ ಚಂಡಿಕಾ ದುರ್ಗಾ ಪರಮೇಶ್ವರಿ ದೇವಸ್ಥಾನದ ವರ್ಷಾವಧಿ ರಥೋತ್ಸವ ಕಾರ್ಯಕ್ರಮಗಳು ಇದೇ ತಾ. 10ರಂದು ಪ್ರಾರಂಭವಾಗಿ ತಾ. 13ರಂದು ಶ್ರೀ ಮನ್ಮಹಾರಥೋತ್ಸವ ಜರಗಿ ತಾ. 15ರಂದು ಸಂಪ್ರೋಕ್ಷಣೆಯೊಂದಿಗೆ ಸಾಂಗವಾಗಲಿರುವುದೆಂದು ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಬಿ. ಉಮೇಶರಾಯರು ತಿಳಿಸುತ್ತಾರೆ.

ಕಲಾ ಸಂಘಗಳು ಒಂದಾಗಿ ದುಡಿಯಬೇಕು—ಕಲೆಯ ಪ್ರಗತಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವು ಚಿಕ್ಕ ದೊಡ್ಡ ಕಲಾ ಸಂಘಗಳು ದುಡಿಯುತ್ತಿರುವುದು ಬಹಳ ಸಂತೋಷ. ಕಲೆಯ ಏಳಿಗೆಯನ್ನೇ ತಮ್ಮ ತಮ್ಮ ಮುಖ್ಯ ಗುರಿಯನ್ನಾಗಿಟ್ಟುಕೊಂಡು ಈ ಕಲಾ ಸಂಘಗಳು ತಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಗೆ ಆಸ್ಪದ ನೀಡದೆ ಸಂಘಟಿತರಾಗಿ ದುಡಿಯಬೇಕು ಎಂದು ತಾ. 7ರಂದು ಮಂಗಳೂರಿನ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠ ಶಾಲೆಯ ವೆಂಕಟೇಶ ಪೈ ಕಲಾಮಂಟಪದಲ್ಲಿ ಕಲಾ ನಿಕೇತನ ಮಂಗಳೂರು, ಇದರ ಕಲಾ ಶಾಖೆಯ ಸಹಾಯಾರ್ಥವಾಗಿ ಮೂರು ದಿವಸಗಳ ವರೆಗೆ ಜರಗಲಿರುವ ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಡೆಪ್ಯೂಟಿ ಕಮಿಶನರರಾದ ಶ್ರೀ ವ್ಯಾ. ಸಿ. ಹೊಂಬಾಳಯ್ಯ ಇವರು ಕಲಾಸಂಘಗಳಿಗೆ ಕರೆ ಇತ್ತಿದ್ದಾರೆ.

ಆರಂಭದಲ್ಲಿ ಕಲಾನಿಕೇತನದ ಅಧ್ಯಕ್ಷರಾದ ಶ್ರೀ ಕೆ. ಬಾಲಕೃಷ್ಣ ರಾವ್, ಎಂ. ಎಲ್. ಸಿ.ಯವರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ರಾಧಾ ಎಲ್. ರಾಯರು ವಾರ್ಷಿಕ ವರದಿಯನ್ನು ಓದಿದರು. ನೃತ್ಯ ಹಾಗೂ ಸಂಗೀತ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಶ್ರೀ ಹೊಂಬಾಳಯ್ಯನವರು ಬಹುಮಾನ ವಿತರಣೆ ಮಾಡಿದರು. ಕೊನೆಯಲ್ಲಿ ಶ್ರೀ ಶ್ರೀನಿವಾಸ ಉಡುಪರು ಧನ್ಯವಾದವಿತ್ತರು. ಬಳಿಕ ಸಂಗೀತ ನೃತ್ಯಗಳೂ ಶ್ರೀ ಕೆ. ಬಾಲಕೃಷ್ಣ ರಾವ್ ಮತ್ತು ಬಳಗದವರಿಂದ "ಭೀಷ್ಮಪರ್ವ"ವೆಂಬ ಯಕ್ಷಗಾನ ಕೂಟವೂ ಜರಗಿದುವು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. S. 170/58 in R. I. A. 1996/58
ಶಿವಣ್ಣಗೌಡ ವಾದಿ (ಅರ್ಜಿದಾರ.)
ಸಂಕಪ್ಪ ರೈ ಪ್ರತಿವಾದಿ (ಯೆದ್ರಿ.)

ಸಂಕಪ್ಪ ರೈ, ಬಿಳಿಂಜ ಕರಿಯಪ್ಪ ರೈಗಳ ಮಗ ವ, ದೇಲಂಪಾಡಿ ಸಂಕಯ್ಯ ಬಂಟರ ಅಳಿಯ – ಪುತ್ತೂರು ತಾಲ್ಲೂ ಕೊಳ್ತಿಗೆ ಗ್ರಾಮದ್ದು ಉಮಿರ್ ಎಂಬಲ್ಲಿ, ಪೋಸ್ಟು ಪೆರ್ಲಂಪಾಡಿ. (ದ. ಕ.)

ಸದ್ರಿ ಪ್ರತಿವಾದಿ (ಯೆದ್ರಿ)ಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಯು ಈ ಕೋರ್ಟು O. S. 170/58ನೇ ದಾವೆಯಲ್ಲಿ ಪಡೆದ ಡಿಕ್ರಿಯಲ್ಲಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ದಾಖಲು ಮಾಡಿದ ಈ ಕೋರ್ಟು R.I.A. 1996/58ನೇ ಅರ್ಜಿಯು ನಿಮ್ಮ ಹಾಜರಾತಿ ಬಗ್ಗೆ ತಾರೀಕು 24-2-59ಕ್ಕೆ ಇಟ್ಟಿರುತ್ತದೆ. ಆ ದಿನ ಬೆಳಿಗ್ಗೆ 11 ಗಂಟೆಗೆ ನೀವು ಹಾಜರಾಗದಿದ್ದಲ್ಲಿ ಅದನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

(By order of the Court.

ಪುತ್ತೂರು
31-1-59
K. R. Chamayya,
Advocate for Petitioner.

ADVERTISE IN
NAVAYUGA

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ)

ಮಲ್ಲಿಗೆ ನಗುತಾವೆ—(ಜನಪದ ಗೀತೆಗಳು) ಸಂಗ್ರಹಿಸಿದವರು: ಕೆ.ರಾ.ಕೃ. ಪ್ರಕಾಶಕರು ಕಾವ್ಯೋದಯ ಪ್ರಕಾಶನ, 'ವಿದ್ಯಾಶ್ರಮ', ಸರಸ್ವತೀಪುರಂ, ಮೈಸೂರು. ಪುಟಗಳು: ೧೬೦. ಬೆಲೆ, ಸಾಧಾರಣ ಪ್ರತಿ: ರೂ. ೨-೦೦; ಉತ್ತಮ ಪ್ರತಿ: ರೂ. ೨.೫೦; ಕ್ಯಾಲಿಕೋ ಪ್ರತಿ: ರೂ. ೩-೦೦.

"ಜೇನ ಹನಿಗಳು", "ಜನಪದ ಪ್ರೇಮ ಗೀತೆಗಳು" ಮತ್ತು "ಅಂಬಿಗರ ಗಂಗ" ಎಂಬ ಮೂರು ಜನಪದ ಗೀತೆಗಳ ಸಂಕಲನವನ್ನು ಪ್ರಯಾಸ ಪರಿಶ್ರಮಪೂರ್ವಕ ಸಂಗ್ರಹಿಸಿ, ಅಚ್ಚುಹಾಕಿಸಿ, ಕನ್ನಡಿಗರಿಗೆ ತಮ್ಮ ನಾಡಿನಲ್ಲಿನ ಗ್ರಾಮಾಂತರ ಪ್ರದೇಶೀಯ ಜನತೆ ದಿನನಿತ್ಯವೂ ಹಾಡಿ, ಆನಂದಿಸಿ ನಲಿಯುವ ಈ ಜನಪದ ಗೀತೆಗಳ ಪರಿಚಯವನ್ನು ಮಾಡಿಕೊಟ್ಟಿದ್ದು, ಈಗ ಅವೆಲ್ಲವುಗಳಿಗಿಂತಲೂ ಹಿರಿದಾದ ಇನ್ನೊಂದು ಜನಪದ ನೊಗ್ಗನ್ನು ಅರಳಿಸಿದ್ದಾರೆ. ಜನಪದ ಗೀತ ಮಲ್ಲಿಕೆಯು ನಗುನಗುತ್ತ ಕನ್ನಡಿಗರ ಕೈಸೇರುವಂತೆ ಪ್ರಯಾಸಪಟ್ಟಿದ್ದಾರೆ.

ಮಲ್ಲಿಗೆಯ ಹೆಸರು ತ್ರ್ಯಕ್ಷರವಾದರೂ ತ್ರ್ಯಂಬಕನಿಗಿರುವಷ್ಟೇ ಶಕ್ತಿಯು ಇಲ್ಲಿನ ಮಲ್ಲಿಗೆಗಳಿಗಿವೆ. ಈ ಮಲ್ಲಿಗೆಗಳು ಮುಗುಳ್ನಗುತ್ತ ಒಂದು ಸೂತ್ರದಲ್ಲಿ ಕೋದಿರುವಂತೆ ಪೋಣಿಸಿದ ಸಂಗ್ರಹಣಕಾರರ ಪರಿಶ್ರಮವನ್ನು ಶ್ಲಾಘಿಸಲೇ ಬೇಕು. ಈ ಸಂಗ್ರಹದಲ್ಲಿ ತುಮಕೂರು, ಬೆಳ್ಳೂರು, ತುರುವೇಕೆರೆ, ತೀರ್ಥಹಳ್ಳಿ, ಕಡೂರು, ಮರಳವಾಡಿ ಮತ್ತು ಕನಕಪುರ ಹಾಗೂ ಇನ್ನಿತರ ಕೆಲವೆಡೆಗಳಲ್ಲಿ ಪ್ರಚಾರದಲ್ಲಿರುವ ಹಾಡುಗಳಿವೆಯೆಂದು ಶ್ರೀ ಕರಾಕೃ ಸೂಚನೆಯಿತ್ತಿದ್ದಾರೆ.

ಪ್ರಕೃತದ ಸಂಕಲನವನ್ನು ಪ್ರಾರ್ಥನೆ, ಕುಟುಂಬ, ಪ್ರೇಮಪೂಜೆ, ಕೋಲು ಮಲ್ಲಿಗೆ ಕೋಲೆ, ರಣಕಹಳೆ ಮತ್ತು ಬಿಡಿ ಹೂ ಎಂಬ ಆರು ದಳಗಳಾಗಿ ವಿಂಗಡಿಸಿದ್ದು, ಒಟ್ಟು ಐವತ್ತೇಳು ಗೀತೆಗಳು ಇಲ್ಲಿ ಅವಕಾಶ ಪಡೆದಿವೆ. ಆಯಾ ವಿಭಾಗದಲ್ಲಿ ಅದರ ಹೆಸರಿಗೊಪ್ಪುವ ಔಚಿತ್ಯಪೂರ್ಣವಾದ ಗೀತೆಗಳನ್ನೂ ಒಂದೆಡೆ ಕಲೆಹಾಕಲಾಗಿದೆ

ಮೊದಲನೆಯ ದಳ "ಪ್ರಾರ್ಥನೆ"ಯಲ್ಲಿ ವಿವಿಧ ದೇವಿಯರ ಪ್ರಾರ್ಥನಾ ಪದ್ಯಗಳು ಕೂಡಿವೆ. ಸರಸ್ವತಿ, ಕೆಂಪವ್ವ, ಮಾರವ್ವ, ಹುಚ್ಚಮ್ಮ ಮೊದಲಾದ ದೇವಿಯರು ತಮ್ಮ ಮನೆಗೆ ಬರುವ ವೈಖರಿಯನ್ನು ಕಣ್ಣಿಗೆ ಕಟ್ಟುವಂತೆ ಇಲ್ಲಿ ಚಿತ್ರಿಸಲಾಗಿದೆ. ಹುಟ್ಟೆ ಮಾರಿಯ ಕುರಿತು "ಅಡ್ಡ ಕುಂಕುಮಾದೋಳೆ ಹಸಿರು ಕಚ್ಚದೋಳೆ! ದೊಡ್ಡೋರ ಬೀದೀಲಿ ಮೆರೆಯೋಳೆ! ಮಾರವ್ವ ನಿನಗೆ ದೊರೆಗಳು ಕೈ ಎತ್ತಿ ಮುಗಿದಾರು!" ಎಂಬಲ್ಲಿಗೆ ಆಕೆಯ ಅಲಂಕಾರಗಳು, ವೇಷ-ಭೂಷಣಗಳು ಹಾಗೂ ಸಂಚಾರಮಾರ್ಗ ಮತ್ತು ಘನತೆಗಳು ವ್ಯಕ್ತಪಡುತ್ತವೆ. ದೀಪಾವಳಿಯ ಸಮಯದಲ್ಲಿ ಹಾಡುವ,

ಬಾಗಿಲ ತೆಗೀರಮ್ಮ ಭಾಗ್ಯಳ್ಳ ಲಕ್ಷ್ಮಮ್ಮ
ಜ್ಯೋತೀಯನೊಳಗೆ ಕರೆಕೊಳ್ಳಿ! ನೀವು
ಜ್ಯೋತಿಯನೊಳಗೆ ಕರೆಕೊಳ್ಳಿ

ಎಂಬ ಗೀತೆಯು ದೀಪಾವಳಿಯ ಭಾಗ್ಯಲಕ್ಷ್ಮಿಯನ್ನು ಆದರಿಸಬೇಕೆಂದು ಅರುಹುತ್ತದೆ. "ನಾರಾಯಣ ಸ್ವಾಮಿಯ ಹಾಡು"ಗಳಲ್ಲಿ ಭಕ್ತನು ಪರಮಾತ್ಮ ಪಾದವನ್ನು ಕಾಣಲು ತೊಳಲಾಡುತ್ತಿರುವ ಪರಿನೋಡಿರಿ:

ಪಕ್ಷಿಯಂಗರೆಚೀದೆ ಪಕ್ಷಿಯಂಗೆ ತಿರುಗೀದೆ
ಗಿಡುಗನಾಗಿ ಗಿರಿಯ ಬಳಸೀದೆ | ನಾರಾಯಣ ಸ್ವಾಮಿ
ನಿಮ್ಮ ಪಾದಾವ ಕಾಣಾದೆ ಅಳುತಿದ್ದೆ ||

ಎರಡನೆಯ ದಳ "ಕುಟುಂಬ." ಕುಟುಂಬದಲ್ಲಿ ಮಗಳು ಎರಡು ಕುಲಗಳನ್ನೂ ಉದ್ಧರಿಸುವವಳು ಎಂತಲೇ ಆಕೆಗೆ ಪ್ರಥಮ ಸ್ಥಾನ. ಮಗಳಿಗೆ ತವರ್ಮನೆ ನೆನಪಿಗೆ ಹುಟ್ಟಿದರೆ, ಅತ್ತ ತನ್ನ ಮನೆಯನ್ನೂ ಮರೆಯಲು ಸಾಧ್ಯವಿಲ್ಲ ಧರ್ಮಸಂಕಟಕ್ಕೆ ಬೀಳುತ್ತಾಳೆ. ಆಕೆ.

ಮಳೆ ಬಿಟ್ಟಾರು ಮಳೆ ಹನಿ ಬಿಡದು ತಾಯವ್ವ
ನೀ ಬಿಟ್ಟಾರು ನನ್ನ ಮನ ಬಿಡದು | ಹೆತ್ತವ್ವ
ಎಂದೂ ನಿನ್ನಾಸೆ ನನ್ನ ಬಿಡದಲ್ಲೆ ||
ಹೆಣ್ಣಿಗೆ ತವರೂರು ರಸಬಾಳೆ ಹಣ್ಣಂತೆ.
ಮಲೆನಾಡು ತುಡುಬೆ ಜೇನಂತೆ! ತಾಯಿನಾಯ
ಎದೆ ಹಾಲು ರುಚಿಯ ಸವಿದಂತೆ ||

ತಾಯ್ಮನೆಯ ಪ್ರೇಮದಿಂದ ಮಗಳು ಹರಸುತ್ತಾಳೆ:

ಅತ್ತೆ ಅತ್ತಿತ್ತ ಅಳಿಯದೀರು ಹೆಚ್ಚಾಲಿ
ಮುತ್ತಿನ ವನದಲ್ಲಿ ಗಿಳಿಯಿಂದು |
ಹೆಚ್ಚಿದಂಗೆ ಹೆಚ್ಚಾಲಿ ನನ್ನ ತೌರೂರು ||

ಹಾಗೆಯೇ ತೌರೂರು ಹಣ್ಣು ಹಾಲಿಗಿಂತ ಬೆಣ್ಣೆ ತುಪ್ಪಕ್ಕಿಂತ ಚೆನ್ನಾಗಿ ಕಳಿತ ರಸಬಾಳೆ ಹಣ್ಣಿಗಿಂತ ಚೆನ್ನ. ತವರೂರ ದಾರೀಲಿ ಕಲ್ಲಿಲ್ಲ ಮುಳ್ಳಿಲ್ಲ ಸಾಸುವೆಯಷ್ಟು ಮರಳಿಲ್ಲ. ಹೆಚ್ಚೇನು? ಬಾನಲಿ ಬಿಸಲೀನ ಬೇಗೆ ಸುಡಲಿಲ್ಲ! ಆಷ್ಟೂ ಉತ್ಸಾಹ!

ಇನ್ನು ತನ್ನ ಪತಿಗೃಹವನ್ನು ತ್ಯಜಿಸುವ ಆಕೆಯ ಬವಣೆ ವಿಪರೀತ. ಅಣ್ಣ ತಂಗಿಯನ್ನು ತೌರಿಗೆ ಕರೆಯಲು ಬರುತ್ತಾನೆ–ಅವಸರ ಅವಸರವಾಗಿಯೇ ಹೋಗಬೇಕಾಗಿದೆ ಅದಕ್ಕೆ "ಊರಲಿ ಉಂಡು ಬಂದೆ, ಗಂಗೇಲಿ ಮಿಂದು ಬಂದೆ, ತಂಗ್ಯಮ್ಮ ನೀನು ಬೇಗ ತೌರಿಗೆ ಬಾರೇ" ಎಂದು ಕರೆದಾಗ, ಪಾಪ, ತಂಗಿ ಹಿಡಿದ ಕೈಯಿಂದ ಹೇಗೆ ಹೊರಡಬೇಕು?

ತೌರೀಗೆ ಬರುವಾಗೆ ನಾನು ಒಬ್ಬಳಲ್ಲಾ

ಎಂಟೆಮ್ಮ ಎಂಟು ಕರುವೆಂಟು | ಮರಿಯುಂಟು ನಾನೆಂಗೆ ಬರಲಿ ಅಣ್ಣ ತಾರೀಗೆ?|| ಎಂದು ಕೇಳುತ್ತಾಳೆ. ಬಿಸಿ ತುಪ್ಪವನ್ನು ಬಾಯಿಗೆ ಸುರಿದುಕೊಂಡಂತಾಳೆಗಾಗುತ್ತದೆ!–ಇಂತಹ ಕುಟುಂಬ ಜೀವನವನ್ನು ವರ್ಣಿಸುವ ಪದ್ಯಗಳು ಇಲ್ಲಿವೆ.

"ಪ್ರೇಮ ಪೂಜೆ" ಎಂಬುದು ಮೂರನೆಯ ದಳ. ಪ್ರೇಮ–ಪ್ರೇಮಿಗಳಿಗೆ ಸಂಬಂಧಿಸಿದ ಪದ್ಯಗಳು ಇಲ್ಲಿವೆ. ನಾಲ್ಕನೆಯದಾದ "ಕೋಲು ಮಲ್ಲಿಗೆ ಕೋಲು" ಕೆಲವು ಕೋಲಾಟದ ಪದ್ಯಗಳಿಂದ ಕೂಡಿದ ದಳ. ಐದನೆಯದು 'ರಣಕಹಳೆ.' ಕನ್ನಡದ ಕೆಚ್ಚೆದೆಯ ವೀರರ ಕಥನಗೀತೆಗಳು. ವೀರ ಚಿತ್ರದುರ್ಗದ ಮದಕರಿ ನಾಯಕನಿಗೆ ಉತ್ಸಾಹ ತುಂಬುವ ಈ ಪದ್ಯವೊಂದೇ "ರಣಕಹಳೆಯ" ಸಾರಾಂಶ ಮತ್ತು ಘನತೆಯನ್ನು ಪ್ರದರ್ಶಿಸಬಲ್ಲುದು.

ಗುಂಡು ಬರುತಾವೆಂದು ಅಂಜದೀರು ಜಂಪಣ್ಣ
ನೀನು ಅಳುಕದೀರು ಜಂಪಣ್ಣ
ಗುಂಡಲ್ಲಾ ಗುಂಗಾರಿ ಹುಳುವು
ಅವು ಗುಂಡಲ್ಲಾ ಗುಂಗಾರಿ ಹುಳವು ||

ಎಂತಹ ಕೆಚ್ಚೆದೆಯ ಸಾಹಸವನ್ನು ತುಂಬುತ್ತಿದೆ ಇದು!

ಕೊನೆಯದಾದ 'ಬಿಡಿ ಹೂ'ಗಳು ಬಿಡಿ ಗೀತೆಗಳ ತೊಂಗಲು. ಇಲ್ಲಿ ಆಯಾ ಕಾಲದ ಸಮಾಜದ ಸ್ಥಿತಿಗತಿಗಳು ತೋರುತ್ತವೆ. ಇಂತಹ ಪದ್ಯಗಳಲ್ಲಿ

ಮಲೆ ಸೀಮೆ ಹೆಣ್ಣೀನ ಮಾತೊಂದು ಚೆಲುವೀಗೆ
ಮಾತಾದರೇನು ಗುಣವಿಲ್ಲ ! ಗುಂಡೀಯ ನೀರು
ತಿಳಿಯಾದರೇನು ರುಚಿಯಿಲ್ಲಾ ||

ಇತ್ಯಾದಿ ಗೀತೆಗಳು ಮನೋಹರವಿವೆ.

ಹೀಗೆ ಸರ್ವದೃಷ್ಟಿಯಿಂದ ಶಬ್ದಾರ್ಥಗಳು ಮಾತ್ರವಲ್ಲದೇ ಅಲಂಕಾರಗಳು, ರೀತಿಗುಣಗಳು ಜತೆಗೆ ರಸಮಯವಾಗಿರುವ ಈ ಜಾನಪದ ಗೀತೆಗಳು ಕಾವ್ಯತ್ವವನ್ನು ಪಡೆಯಲು ಯೋಗ್ಯವಾಗಿಯೇ ಇರುವುವು. ಇಂತಹ ತುಂಡು ಕಾವ್ಯಗಳನ್ನು ಸಂಗ್ರಹಿಸಿತ್ತ ಕರಾಕೃರವರ ಪರಿಶ್ರಮಕ್ಕೆ ತಕ್ಕ ಗೌರವವನ್ನು ಕನ್ನಡಿಗರು ಈಯಬೇಕು.

ಇಲ್ಲಿನ ಗೀತೆಗಳಲ್ಲಿ ಒಂದನ್ನೊಂದು ಹೋಲುವ ಪದ್ಯಗಳು ಹಾಗೂ ಅಸ್ಪಷ್ಟ, ಅಪೂರ್ಣ ಸ್ಥಿತಿಯಲ್ಲಿರುವ ಚರಣಗಳೂ ಇವೆ. ಆದರೆ, ಜನತೆಯ ನಾಲಗೆಯಿಂದ ನಾಲಗೆಗೆ ಹರಿಬಂದ ಗೀತೆಗಳನ್ನು ಸಂಗ್ರಹಿಸುವಾಗ, ಈ ತೆರದ ಲೋಪದೋಷಗಳು ಎದ್ದು ತೋರುವುದು ಸ್ವಾಭಾವಿಕವೇ ಆಗಿದೆ. ತೀರ ಗ್ರಾಮ್ಯಪದಗಳ ಸರಳ ಕನ್ನಡ ಅರ್ಥವನ್ನೂ, ವಿವಿಧ ಗೀತೆಗಳು ಹೆಚ್ಚು ಪ್ರಚಾರದಲ್ಲಿರುವ ಊರು ಮತ್ತು ಅಲ್ಲಿನವರ ಸಂಕ್ಷಿಪ್ತ ಜೀವನ ವಿಧಾನವನ್ನೂ ತಿಳಿಸುತಿದ್ದರೆ, ವಾಚಕರಿಗೆ ಬಹಳ ಪ್ರಯೋಜನವಾಗುತಿತ್ತು. ಜನಪದ ಗೀತೆಗಳ ಜೇನನ್ನು ಎಲ್ಲರೂ ದ್ರಾಕ್ಷಾಪಾಕದಂತೆ ಸವಿಯಬಹುದಾಗಿತ್ತು.

ಈ ಬೃಹತ್ಸಂಕಲನವನ್ನು ಮಾಜಿ ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರಿಗೆ ಅರ್ಪಿಸಲಾಗಿದೆ. ಮುದ್ರಣ, ಕಾಗದಗಳು ಉತ್ತಮವಿವೆ. ಅಲ್ಲಲ್ಲಿ ಚಿತ್ರಗಳನ್ನೂ ಬಿಡಿಸಿ ಗೀತೆಗಳನ್ನು ಸಮವಾಯಗೊಳಿಸಿರುವುದು ಒಳ್ಳೆಯದೆ ಆಗಿದೆ. ಅಂತೂ "ಮಲ್ಲಿಗೆಯು ನಗುತಾವೆ"ಯಲ್ಲಿನ ಜನಪದ ಗೀತೆಗಳು ಬೇಕು ಎಂದರೆ ದೊರೆಯಲಾರವು. ಆದುದರಿಂದಲೇ ಎಲ್ಲರ ಮನೆಯಲ್ಲೂ ಈ "ಮಲ್ಲಿಗೆ ನಗುತಾವೆ" ಎನಿಸುವಂತಾಗಬೇಕು.

—ಗೋರಾ.

ನೆರೆಹೊರೆ

(೫ನೇ ಪುಟದಿಂದ)

ಯತ್ತ ತಲಪಿದಳು. ಅಡಿಕೆ ಮರದ ನೆರಳನ್ನು ಕಂಡು ಆಕರ್ಷಿತಳಾಗಿ ಆಕೆ ಆಯಾಸಗೊಂಡಿದ್ದರೂ ಅತ್ತ ಸಾಗಿದಳು. ಆ ಮರವನ್ನು ಮುಟ್ಟಿದೊಡನೆಯೇ ಆಕೆಯ ಪ್ರಾಣಪಕ್ಷಿಯೂ ಹಾರಿಹೋಯಿತು. ಆಕೆಯ ಶವವು ವೀಳ್ಯದೆಲೆಯ ಬಳ್ಳಿಯಾಕಾರವನ್ನು ತಾಳಿತು. ಅಡಿಕೆ ಮರ—ವೀಳ್ಯದ ಬಳ್ಳಿಗಳು ಆ ದಿನ್ನೆಯಲ್ಲಿ ವಿಪುಲವಾಗಿ ಬೆಳೆದು ಫಲವಿತ್ತುವು. ಒಂದು ಬಾರಿ ದೇಶದಲ್ಲಿ ಅನಾವೃಷ್ಟಿಯಿಂದಾಗಿ ಭಯಂಕರ ಬಿಸಿಲು ಬಿತ್ತು. ಹಸುರೆಲೆಯ ಹೆಸರೇ ಅಳಿದು ಹೋಯಿತು. ನೆರಳ ಆಸರೆಯನ್ನರಸುತ್ತ ಊರ ರಾಜನು ಬಂದು, ಆ ದಿನ್ನೆಯಲ್ಲಿ ಒಪ್ಪು ನೆರಳಿರುವುದನ್ನು ಕಂಡು ವಿಸ್ಮಿತನಾದನು. ಆವನು ತನ್ನ ಆಳನ್ನು ಕರೆದು ಎಲೆಕೊಯ್ಯಲು ಮತ್ತು ಅಡಿಕೆ ಇಳಿಸಲು ಆಜ್ಞಾಪಿಸಿದನು. ಅವನ್ನವನು ತಿಂದಾಗ ಬಹಳ ಸ್ವಾದಿಷ್ಟವಾಗಿ ಪರಿಣಮಿಸಿತು. ಕ್ಷಾಮವೂ ದೂರವಾಯಿತು (?) ಅಂದಿನಿಂದ ತನ್ನ ರಾಜ್ಯದಲ್ಲಿ ಎಲ್ಲ ಶುಭ ಸಂದರ್ಭಗಳಲ್ಲಿಯೂ ವೀಳ್ಯದೆಲೆ ಅಡಿಕೆಗಳನ್ನು ಬಳಸುವ ಆದೇಶವು ನೀಡಲಾಯಿತು. ಇದಿಂದು ಶುಭ ಮಿಲನ ಮತ್ತು ಉತ್ತಮ ಪ್ರೀತಿಯ ದ್ಯೋತಕವಾಗಿ ಪರಿಣಮಿಸಿದೆ.

(ಆಧಾರ—"ಸತ್ಯ ಪ್ರಕಾಶ")

ನವಯುಗ

(ರಾಷ್ಟ್ರೀಯ ಕನ್ನಡ ವಾರಪತ್ರಿಕೆ)

ವಿನಂತಿ

ಪ್ರಿಯ ಚಂದಾದಾರರೇ,

ಕನ್ನಡದಲ್ಲಿ ವಾರಪತ್ರಿಕೆಗಳೇ ಇಲ್ಲದ ಆ ಕಾಲದಲ್ಲಿ ಕನ್ನಡಿಗರಲ್ಲಿ ರಾಷ್ಟ್ರೀಯ ಭಾವನೆಯನ್ನು ಪಸರಿಸಿ ನವಯುಗದ ಸಂದೇಶವನ್ನೂ ಅವರೆಲ್ಲರಿಗೆ ತಲುಪಿಸಿ ರಾಷ್ಟ್ರೋದ್ಧಾರಕ್ಕಾಗಿ ಕಳೆದ ೩೮ ವರ್ಷಗಳಿಂದಲೂ ದುಡಿಯುತ್ತಿರುವ ಪತ್ರಿಕೆ, ನವಯುಗ. ಕಾಲಕಾಲಕ್ಕೆ ಬದಲಾಗುತ್ತಿರುವ ಸನ್ನಿವೇಶಗಳಿಗೆ ತಕ್ಕಂತೆ, ಜನಮನೋರಂಜಕವಾದ ವಿಷಯಗಳಿಂದಲೂ ವಿಷಯ ಪರಿಪ್ಲುತ ಲೇಖನಾದಿಗಳಿಂದಲೂ ಅಡಕವಾಗಿದ್ದು ಪ್ರತಿವಾರವೂ ನಿಶ್ಚಿತ ದಿನದಂದು ಪ್ರಕಟವಾಗಿ ನಿಮ್ಮ ಕೈ ತಪ್ಪದೆ ಸೇರುತ್ತದೆ.

ಸಾಮಾನ್ಯವಾಗಿ ಎಲ್ಲ ಕನ್ನಡ ವಾರಪತ್ರಿಕೆಗಳಂತೆಯೇ ನವಯುಗದ ಚಂದಾದಾರರ ಸಂಖ್ಯೆಯೂ ಹೆಚ್ಚೆಂದು ಹೇಳುವಹಾಗಿಲ್ಲ. ಪತ್ರಿಕೆಗಳು ಸ್ವಾವಲಂಬಿಯಾಗಿರಬೇಕಾದರೆ, ಚಂದಾದಾರರ ಸಂಖ್ಯೆ ಹೆಚ್ಚಿರಬೇಕಲ್ಲದೇ, ಇವರೆಲ್ಲರೂ ತಮ್ಮ ಚಂದಾಹಣವನ್ನು ಸಕಾಲದಲ್ಲಿ ರವಾನಿಸುತ್ತಿರಬೇಕು. ನಮ್ಮ ಕೆಲವು ಚಂದಾದಾರರು ತಮ್ಮ ಚಂದಾಹಣವನ್ನು ಇನ್ನೂ ಕಳಿಸಿಕೊಡಲಿಲ್ಲವೆಂದು ದುಃಖದಿಂದ ಹೇಳಲೇಬೇಕಾಗಿದೆ. ಇದರಿಂದಾಗಿ ತುಂಬ ನಷ್ಟವನ್ನು ನಾವು ತಡೆದುಕೊಳ್ಳಬೇಕಾಗಿದೆ. ಪತ್ರಿಕೋದ್ಯಮವೇ ಕಷ್ಟಮಯವಾಗಿ ಪರಿಣಮಿಸುತ್ತಿರುವ ಈ ಸಮಯದಲ್ಲಿ ಚಂದಾದಾರರೆಲ್ಲರೂ ತಮ್ಮ ಬಾಕಿ ಚಂದಾವನ್ನು ಈ ಕೂಡಲೇ ಮನಿ ಆರ್ಡರ್ ಮೂಲಕವಾಗಿಯಾಗಲಿ, 'ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್'ನ ಯಾವ ಶಾಖೆಯಲ್ಲಾದರೂ ನವಯುಗನ ಖಾತೆಗೆ ತುಂಬುವುದರ ಮೂಲಕವಾಗಲಿ ಕಳಿಸಿ ನೆರವಾಗಬೇಕು.

ಹಾಗೆಯೇ ತಮ್ಮ ಚಂದಾವನ್ನು ಕ್ರಮವಾಗಿ ಮುಂದುವರಿಸಿಕೊಂಡು ಹೋಗುವುದಲ್ಲದೆ, ತಮ್ಮ ಮಿತ್ರರು, ಬಂಧುಗಳಲ್ಲಿಯೂ ನವಯುಗದ ವಿಶಾಲವಾದ ರಾಷ್ಟ್ರೀಯ ಗುರಿಯನ್ನು ವಿವರಿಸಿ ಅವರನ್ನೂ ಚಂದಾದಾರರಾಗುವಂತೆ ಪ್ರೇರೇಪಿಸಿ ಈ ಪ್ರೇರಣೆಯು ಸಫಲವಾಗುವಂತೆ ನೋಡಬೇಕು. ನವಯುಗವು ನಿಮ್ಮದೇ ಪತ್ರಿಕೆಯಾದುದರಿಂದ ಅದರಲ್ಲಿ ಪ್ರಕಟವಾಗುವ ಲೇಖನಾದಿಗಳ ಬಗ್ಗೆ ಆಗಾಗ್ಗೆ ತಮ್ಮ ಅಭಿಪ್ರಾಯಗಳನ್ನೂ ಸಲಹೆ ಸೂಚನೆಗಳನ್ನೂ ಕೊಟ್ಟರೆ, ತಕ್ಕ ಕಾರ್ಯಕ್ರಮ ಕೈಗೊಳ್ಳಲು ಅನುಕೂಲವಾಗುವುದು.

ಚಂದಾದಾರರೇ ಒಂದು ಪತ್ರಿಕೆಯ ನಿಜವಾದ ಆಸ್ತಿ. ಚಂದಾದಾರರು ಕ್ರಮವಾಗಿ ತಮ್ಮ ಹಣವನ್ನು ತೆರುತ್ತ ಬಂದರೆ, ಇವರ ಸಂಖ್ಯೆಯು ಹೆಚ್ಚುತ್ತ ಬಂದರೆ, ಆಗ, ಪತ್ರಿಕೆಯೂ ನಿರ್ಭೀತವಾಗಿದ್ದು, ಸ್ವತಂತ್ರವಾಗಿದ್ದು ಬೆಳೆದು ಬರಲು ಅನುಕೂಲವಾಗುವುದು. ನೀವು ನಮ್ಮ ಈ ನಮ್ರ ವಿನಂತಿಯನ್ನ ಸಹೃದಯತೆಯಿಂದ ಮನ್ನಿಸಿ ತಮ್ಮ ಬಾಕಿ ಚಂದಾಹಣವನ್ನು ಇನ್ನೂ ತಡಮಾಡದೆ ಕೂಡಲೇ ಕಳುಹಿಸಿ ಕೊಡಬೇಕಾಗಿ ವಿನಂತಿಸುತ್ತೇವೆ

ನಮ್ಮ ಈ ವಿನಂತಿಯು ನಿಮ್ಮ ಗಮನವನ್ನು ಈಕ್ಷಣವೇ ಸೆಳೆಯುವುದೆಂದು ನಂಬುತ್ತೇವೆ.

ಇಂತು ತಮ್ಮ ವಿಶ್ವಾಸಿ,
ವ್ಯವಸ್ಥಾಪಕ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ

ಅದ್ಭುತ ಸಾಧನೆ

(ನಾಲ್ಕನೆಯ ಪುಟದಿಂದ)

ನೆಯಾದ ಥೋರಿಯಂ ಕೇಂದ್ರ ಅಣುಶಕ್ತಿಯ ತಯಾರಿಕೆಗೆ ಅತ್ಯಾವಶ್ಯಕವಾದ ಕಚ್ಚಾವಸ್ತುವನ್ನು ಒದಗಿಸುವ ಕಾರ್ಯದಲ್ಲಿ ನಿರತವಾಗಿದೆ. ಈ ಕಾರ್ಖಾನೆಯಿಂದ ಮುನ್ನೂರು ಟನ್ನುಗಳಿಗೂ ಹೆಚ್ಚಿನ ಥೋರಿಯಂ ಮತ್ತು ಕೆಲವು ಟನ್ನುಗಳಷ್ಟು ಯುರೇನಿಯಂ ಪ್ರತಿ ವರ್ಷ ಸರಬರಾಜಾಗುತ್ತಿದೆ. ಇದು ೧೦,೦೦೦ ಟನ್ನುಗಳಷ್ಟು ಕಲ್ಲಿದ್ದಲಿಗೆ ಸಮ, ಭಾರತದಲ್ಲಿ ಪ್ರತಿವರ್ಷ ದೊರಕುವ ಕಲ್ಲಿದ್ದಲಿನ ಉತ್ಪನ್ನಕ್ಕೆ ೩೦ರಷ್ಟು ಹೆಚ್ಚು.

ಈ ಕಾರ್ಖಾನೆಯನ್ನು ಭಾರತೀಯ ವಿಜ್ಞಾನಿಗಳು ಮತ್ತು ಎಂಜಿನೀಯರುಗಳೇ ಮುಖ್ಯವಾಗಿ ಕಟ್ಟಿದರು. ಕಳೆದ ವರ್ಷ ಇದರ ಉತ್ಪಾದನಾ ಶಕ್ತಿ ಆರುಪಟ್ಟು ಹೆಚ್ಚಾಯಿತು ಥೋರಿಯಂ ನೈಟ್ರೈಟ್ ಉತ್ಪಾದನೆ ಕಾರ್ಯದಲ್ಲಿ ಪ್ರಪಂಚದಲ್ಲಿಯೇ ಇದಕ್ಕೆ ಅತ್ಯುನ್ನತ ಸ್ಥಾನವಿದೆ. ಗ್ಯಾಸ್ ಮ್ಯಾಂಟಲ್ ಕೈಗಾರಿಕೆ ವಿಷಯದಲ್ಲಿ ಇಡೀ ಏಷ್ಯಾದ ಅಗತ್ಯಗಳನ್ನೂ ಇದು ಪೂರೈಸುತ್ತದೆಯಲ್ಲದೆ ಯುರೋಪ್ ಮತ್ತು ಅಮೇರಿಕಾಗಳಿಗೂ ಇಲ್ಲಿಯ ತಯಾರಿಕೆ ಸಾಕಾಗುತ್ತದೆ. ಭಾರತ ಇದರಿಂದಾಗಿ ಗಳಿಸುವ ವಿದೇಶಿ ಧನವಿನಿಮಯ ಸೌಕರ್ಯ ಅಪಾರವಾದುದು. ಇಲ್ಲಿಯ ತಯಾರಿಕೋತ್ಪನ್ನವನ್ನು ಭಾರತದ ಭಾವಿ ಅಗತ್ಯಗಳಿಗೂ ಶೇಖರಿಸಿಡಲಾಗುತ್ತಿದೆ

ಯುರೇನಿಯಂ ಲೋಹದ ಕೈಗಾರಿಕೆ

ಅಣುಶಕ್ತಿಯ ಯೋಜನೆ ಸ್ವಾವಲಂಬಿಯಾಗಬೇಕಾದರೆ ಯುರೇನಿಯಂ ಪೂರೈಕೆ ಸಹ ಸಾಕಷ್ಟು ಪ್ರಮಾಣದಲ್ಲಿ ಅತ್ಯಾವಶ್ಯಕ. ಅದನ್ನು ಗಮನಿಸಿಯೇ ಟ್ರಾಂಬೆಯಲ್ಲಿ ಯುರೇನಿಯಂ ಘನವಸ್ತುವನ್ನು ರಿಯಾಕ್ಟರ್ ಶ್ರೇಣಿಯ ಯುರೇನಿಯಂ ಲೋಹವಾಗಿ ಪರಿವರ್ತಿಸುವ ಕಾರ್ಯ ಸಹ ಆರಂಭವಾಗಿದೆ.

ಭಾರತದ ರಿಯಾಕ್ಟರುಗಳಿಗೆ ಅತ್ಯಾವಶ್ಯಕವಾದ "ಫ್ಯೂಯಲ್ ಎಲಿಮೆಂಟ್" ತಯಾರಿಸುವ ಕಾರ್ಯ ಸಹ ಇಲ್ಲಿ ನಡೆಯಲಿದೆ ಎಂಬುದು ಗಮನಾರ್ಹ.

ಅಣುವಿಜ್ಞಾನ ಪ್ರಗತಿಯ ಪಥದಲ್ಲಿ ಭಾರತ ಇಡುತ್ತಿರುವ ಈ ರೀತಿಯ ಪ್ರಮುಖ ಹೆಜ್ಜೆ ಜಗತ್ತಿನ ಇತರ ರಾಷ್ಟ್ರಗಳನ್ನು ನಿಜಕ್ಕೂ ಅಚ್ಚರಿಗೊಳಿಸುವುದರಲ್ಲಿ ಆಶ್ಚರ್ಯವೇನಿಲ್ಲ.

ರೊಡೇಸಿಯಾದಲ್ಲಿ ಜಾಂಬೆಜಿ ನದಿಗೆ ಹಾಕಿದ ಕಾರ್ಬಿಯಾ ಅಣೆಕಟ್ಟು. ಇದು ೧೯೬೦ರಲ್ಲಿ ಪೂರ್ಣವಾಗಲಿದ್ದು ತನ್ನಿರ್ಮಿತ ಜೋಗವು ವಿಕ್ಟೋರಿಯಾ ಜೋಗವನ್ನೂ ಮೀರಿಸಿ ವಿದ್ಯುತ್ತು ತಯಾರಿಸುವುದು. ಒಟ್ಟು ವೆಚ್ಚ ೮೦ ಮಿಲಿಯ ಪೌಂಡುಗಳಷ್ಟಾಗುವುದು.

ಅನುಭವಾಮೃತ

ಪಾನ ಪ್ರತಿಬಂಧದ ಭವ್ಯ ಹಿನ್ನೆಲೆ

ನಮ್ಮ ಸರಕಾರ ಪಾನಪ್ರತಿಬಂಧ ಕಾಯದೆಯನ್ನು ಮುರಿಯ ಲೆಳಸುತ್ತಿದೆಯೇ?

ಇತ್ತಲಾಗಿ ನಮ್ಮ ಪ್ರಾಂತದಲ್ಲಿ ಪಾನ ಪ್ರತಿಬಂಧ ಸಪ್ತಾಹವಾಗಿತ್ತು. ಅಂದು ಜಿಲ್ಲಾಧಿಕಾರಿಗಳೊಬ್ಬರು ಭಾಷಣ ಮಾಡುತ್ತಾ ಅಂಕಿ–ಸಂಖ್ಯೆಗಳೊಂದಿಗೆ— "ನವಭಾರತದಲ್ಲಿ— ಅದರಲ್ಲೂ ನಮ್ಮ ಪ್ರಾಂತದಲ್ಲಿ ಇಂದು ಪಾನಪ್ರತಿಬಂಧ ಯೋಜನೆ ಯಶಸ್ವಿಯಾಗಿದೆ— ೨೦೦೦೦ ಸರಾಯಿ ಭಟ್ಟಿಗಳನ್ನೂ ೫೦೦೦ ತಯಾರಿಸುವವರನ್ನೂ—೫೦೦೦೦ ಕುಡಿಯುತಿದ್ದವರನ್ನೂ ೫೦೦೦ ನಮ್ಮ ಪೋಲೀ–ಸ–ರು–ಗಳ— ಸಹಾಯದಿಂದ ಹಿಡಿಯಲಾಗಿದೆ ಇದೀಗ ಪ್ರಾಂತದಾದ್ಯಂತ ಕುಡಿಯುವವರ ಸಂಖ್ಯೆ ಹುಡುಕಿದರೂ ಸಿಗುವದು ದುರ್ಲಭ" ಎನ್ನುತ್ತಾ ಮಾರುದ್ದ ಭಾಷಣ ಕಾರ್ಯ ನಡೆಯಿತು.

ಕಾಲ್ಬೆರಳುಗಳ ಮೇಲೆ ನಿಂತು ಭಾಷಣ ಕೇಳುವವರಲ್ಲಿ ನಾನೂ ಒಬ್ಬನಾಗಿದ್ದೆ. ಅಬ್ಬ! ಅಂದರೆ! ನಿಯೋಜಿತ ಪೋಲೀ(ಸರುಗಳು ನಮ್ಮ ಹಳ್ಳಿಯನ್ನು ನೋಡಲೇ ಇಲ್ಲವೇ— ಇವರು ಒಂದಾದರೂ ಕೋಳಿ ಪಡೆ- (ಕೋಳಿ-ಕಾದಾಟ ಸ್ಥಳ) ನೋಡಲೇ ಇಲ್ಲವೇ'! ಅಥವಾ ಈಗ ತಾನೇ ಕಿವಿಯಿಂದ ಕೇಳಿದ ಭಾಷಣ ಅಸತ್ಯವೇ!? ಇದನ್ನು ಇತ್ಯರ್ಥ ಮಾಡಿಕೊಳ್ಳುವ ಆತುರ ನನ್ನಲ್ಲಿ ಉಂಟಾಯಿತು— ಊರಿನಕಡೆಗೆ ಉದ್ವಿಗ್ನನಾಗಿ ಹೊರಟೆ

ಅಂದು ಸಾಯಂಕಾಲ ನಮ್ಮ ತರುಣ ಮಂಡಳಿಯಲ್ಲಿ ನನ್ನ ಪ್ರಶ್ನೆಯು ಬಗೆಹರಿಯಿತು ನಮ್ಮೂರಿನ ಹಳ್ಳಿಗರನ್ನು ಹೊಗಳಲೇ? ಪರಿಸ್ಥಿತಿ ಹೀಗಿತ್ತು' ಕಳ್ಳು–ಸರಾಯಿ ತಯಾರಿಕೆ ದಿನದಿನವೂ ನಡೆದೇ ಇದೆ— ಆದರೊಡನೆ ಸರಕಾರದಿಂದ ನಿಯುಕ್ತ ಪೋಲೀಸರೂ ಹಳ್ಳಿಗ ಭೆಟ್ಟಿಯನ್ನೀಯುತ್ತಲೂ, ಕಳ್ಳು ಸರಾಯಿ ಕುಡುಕರನ್ನು ಹಿಡಿಯುತ್ತಲೂ ಇದ್ದಾರೆ. ಇನ್ನೂ ವಿಸ್ತಾರವಾಗಿ ಹೇಳುವುದಾದಲ್ಲಿ– ನಿಯುಕ್ತರಾದ ಪೋಲೀ(ಸರು) ಗಳಿಗೆ ಮಾಮೂಲಾಗಿ ಹಳ್ಳಿಗೆ ಬಂದ ದಿನ(೧೫ ದಿನಕ್ಕೊಂದಾವರ್ತಿ) ಕೋಳಿತುಕಡಿ ಹಾಕಿ ಮೇಲಿಂದ ಕುಡಿಯಲು ಕಳ್ಳು, ಸರಾಯಿ ವಗೈರೆ ಪೂರೈಸಿ ಅಷ್ಟೂ ಅಲ್ಲದೆ ಕಳ್ಳು ಸಹಿತ ಒಂದು ಕೇಸನ್ನೂ ಪೂರೈಸಬೇಕು" ಅವರು ಬಂದ ದಿನ ಮೋಜಿಗೆ ಮೋಜಾಯಿತು ಬಂದ ಕೆಲಸವೂ ಆಯಿತು. "ಅಜ್ಜಿ ಸುಟ್ಟಂತಾಯ್ತು ಚಳಿ ಕಾಯಿಸಿಕೊಂಡಂತಾಯ್ತು" "ಕಳ್ಳು ಸರಾಯಿಗಾರರು ತಮ್ಮದೇ ಆದ ಒಂದು ಸಂಘ ಮಾಡಿ ಮೊದಲು ನೀರಾ ತಯಾರಿಸಲು (ತೆಂಗಿನ ಮರಕ್ಕೆ ಗಡಿಗೆ ಕಟ್ಟಲು) ಮತ್ತು ಬೇರೆ—ಅನಾಯಾಸದಿಂದ ಸರಕಾರದಿಂದ ಆಜ್ಞೆ ಪಡೆದು ಆ ನಂತರ ಈ ನವೀನ ಬುದ್ಧಿ ಮತ್ತೆಯಿಂದ ನಿರ್ಭಯರಾಗಿ ಕಳ್ಳು—ಸರಾಯಿ ತಯಾರಿಸುವದು, ಮಾರಾಟ, ಹಾಗೂ ಮನಃಪೂರ್ತಿ ಕುಡಿಯಲು ಸುಲಭ ದಾರಿ ಕಲ್ಪಿಸಿಕೊಂಡಿದ್ದಾರೆ. ಇದನ್ನು ಅದೆಷ್ಟು ಜನ ಅಧಿಕಾರಿಗಳು ಅರಿತಿದ್ದಾರೆ? ಪಾನ ಪ್ರತಿಬಂಧಕ್ಕೆ ನಿಯಮಿತ ಅಧಿಕಾರಿಗಳಿಗೂ ಕುಡಿಯಲು ಬೇಕಲ್ಲವೆ? ಬೇಲಿಯೇ ಹೊಲಮೇದ್ದಲ್ಲಿ ನಮ್ಮ ಭಾಷಣಕಾರರ ರಿಪೋರ್ಟಿನಲ್ಲಿದ್ದುದು ಬರೇ ಅಂಕಿಸಂಖೆ ಎಂಬುದು ಎಷ್ಟು ಜನಕ್ಕೆ ಗೊತ್ತು!!

—ಶ್ರೀಪತಿ

ಕವಿತಾವಿತಾನ

"ಬ್ರಹ್ಮಗಂಟು ಹೇಗಿತ್ತು?"

'ಮಮವ' ಎಂದು ಹಂಬಲಿಸುತ್ತಿದ್ದ ಆತನಿಗೆ ತನ್ನ ಭಾರ್ಯೆ ಮನೆಗೆ ಬಂದಾಗ ಸಡಗರವಾಗಿತ್ತು. ಆದರೆ ಮುಂದೆ ಆ ಚಂಪಿಯ ವರ್ತನೆ ಏನು ಮಾಡಿತ್ತು?

'ನವ್ಯತೆಯು, ಭವ್ಯತೆಯು ಆಸೆ ಗುಡಿ ಚಿಗುರಿತ್ತು'
ಮಧುವೊಂದು ಸಿಗದೆಂದು ಮನನೊಂದು ಕುಂದಿತ್ತು,
ಯುಗವಾಗಿ ಸಂದಿತ್ತು! ನಿಶಿಯೊಂದು, ಹಗಲೊಂದು,
ಗಳಿಗೆ ಗಳಿಗೆಗೂ ಚಿಂತೆ ಮುಸುಕಿರಲು, ತುಂಬಿರಲು—
ಕನ್ನೆ ಬಂದಳು, ಭಾರ್ಯೆಬಂದಳು; ಸೊಬಗರಾಶಿಯ ಹೊತ್ತು ತಂದಳೆ—
ನ್ನಮನ ಮುಟ್ಟಿದ ಕೊಳೆಯ ಕರ್ದಮ ತೊಳೆಯ ಬಂದಳು ಸ—
ಡಗರವೇ ಎಂದುಲಿಯುತ ಉದ್ಯಮವೊಂದ ಪೇಳ್ದೆನು ಮಾಡಲ್ಕೆ'
ವಾದವೆದ್ದಿತು, ಕಲಹಬೆಳೆಯಿತು, "ಮಾಡೆನಾನದನೆಂ"ದಳು.
"ರಜಸ್ಸು, ಮಕರಂದರಹಿತ ವಿದೆಂ"ದೆನುತಲಿ,
"ಪತ್ನಿ, ನೀ ತೊಲಗಾಚೆಯಿಂದೀ ಮನೆಯಿಂದೆ'ಯೆಂದೆ.
'ತ್ರಿಮೂರುತಿಯೇ ತಾ ಬರಲಿ! ನಾ ತೊಲಗೆ!" ಎಂದು ಚಂಡಿಚಂಗಿಹಿಡಿಯೆ,
ಕೆರಳಿದ ಕೇಸರಿಯಂತಿರೆ ಹಾರುತ ಹಿಡಿದೆನು ಬಿಗಿಯಲಿ ಜುಟ್ಟನವಳ,
"ಉಸಿರದು ಯೆನಗೂ ಇಲ್ಲವೆ?" ಯೆನುತ ಮೇಲುವಸೆ ಬಿಗಿಯುತ—
ಡಂಗೆಮನೆಯಿಂ ಧಾವಿಸುತ್ತೈದಿದಳು ಮಾತೆಯು ಕುಂಟುತ್ತ ...!
"ಪಿತಾಮಹಾ!" ಯೆನ್ನುತ ಮುಯಿಲನಿಟ್ಟೆ "ಬೊಮ್ಮಗಂಟು" ಸರಿಯೆನುತ.

—ಕೆ. ರಮೇಶ ಪೈ, ಉಡುಪಿ.

The Moolky Bank, Ltd

NOTICE.

The 2[illegible]th Annual General Meeting of the Bank will be held at the Registered Office of the Bank on Friday the 6th March, 1959, at 2-30 P M

The Register of Members and Transfer Books of the Bank will be closed from 23—2—1959 to 9—3—1959 (both days inclusive)

(*Sd*) M R H Punja,
Manager.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗಳ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40
ಸ್ಟಾಕಿಸ್ಟರು ಷಾ ಕಂಪೆನಿ, ಮಂಗಳೂರು—1.

ಪವಿತ್ರ ಸ್ಥಳ

ಅಪೂರ್ವ ಕಲಾಕೇಂದ್ರ ಹೊಸ ಹೊಳಲು

ಲಕ್ಷ್ಮೀನಾರಾಯಣ, ಗಣಪತಿ ಮತ್ತು ಮಹಿಷಾಸುರ ಮರ್ದಿನಿಯರ ಆತ್ಮಾಕರ್ಷಕ ವಿಗ್ರಹಗಳೂ, ಅತ್ಯುನ್ನತ ಶಿಲ್ಪಕಲೆಯೂ ಇಲ್ಲಿವೆ

ಹೊಸ ಹೊಳಲು ಮೈಸೂರಿನಿಂದ ಸುಮಾರು ಮೂವತ್ತೊಂಬತ್ತು ಮೈಲು ದೂರವಿರುವ ಕೃಷ್ಣರಾಜ ಪೇಟೆಯ ಸಮೀಪದ ಒಂದು ಪುಟ್ಟ ಗ್ರಾಮ. ಈ ಹಳ್ಳಿಯಲ್ಲಿಯೇ ಶ್ರೀ ಲಕ್ಷ್ಮೀನಾರಾಯಣ ದೇವಾಲಯವಿದೆ.

ಈ ದೇವಸ್ಥಾನದ ಗರ್ಭ ಗುಡಿಯು ಹೊಯ್ಸಳ ಶಿಲ್ಪ ಶೈಲಿಯಲ್ಲಿ ಸುಮಾರು ನಾಲ್ಕೂವರೆ ಅಡಿ ಎತ್ತರದ ಶಿಲೆಯ ವೇದಿಕೆಯ ಮೇಲೆ ಕಟ್ಟಲ್ಪಟ್ಟಿದೆ. ಗುಡಿಯ ಹೊರ ಮಗ್ಗುಲಿನ ಶಿಲೆಯ ಗೋಡೆಯಲ್ಲಿ ತುಂಬ ಕೆತ್ತನೆಯ ಕೆಲಸಗಳು ತುಂಬಿವೆ. ಬುಡದಿಂದ ಪ್ರಾರಂಭವಾಗುವ ಈ ಕಸೂರಿಯ ಕೆಲಸದಲ್ಲಿ ಆನೆಯನ್ನು ಕೆತ್ತಲಾಗಿದೆ. ಅಲ್ಲಲ್ಲಿ ನಡುನಡುವೆ ಭಯಂಕರ ದಾಡೆಗಳುಳ್ಳ ಆನೆಯೊಡನೆ ಮಾನವನು ಹೋರಾಡುತ್ತಿರುವ ಚಿತ್ರವೂ ಕೆತ್ತಲ್ಪಟ್ಟಿದೆ. ಇನ್ನೊಂದೆಡೆಯಲ್ಲಿ ಹಿಂದೂ ಪುರಾಣ ಕಥೆಯನ್ನೂ ಚಿತ್ರಿಸಿದ್ದಾರೆ, "ಸಮುದ್ರ ಮಥನ"ದ ಕಥೆಯಿಂದಾರಂಭಿಸಿ, ರಾಮಾಯಣ, ಮಹಾ ಭಾರತ ಮತ್ತು ಭಾಗವತಗಳ ಪ್ರಧಾನ ದೃಶ್ಯಗಳು ಇಲ್ಲಿ ಸ್ಥಾನಪಡೆದಿವೆ. ಇನ್ನೊಂದೆಡೆಯಲ್ಲಿ ಹಂಸಗಳ ಕುಣಿದಾಟವನ್ನೂ ಅವು ತಮ್ಮನ್ನೂ ತಮ್ಮ ಮಕ್ಕಳನ್ನೂ ಉಣ್ಣಿಸುವುದನ್ನೂ ಚಿತ್ರಿಸಲಾಗಿದೆ. ಮಧ್ಯೆ ಅಡಿಯೆತ್ತರದ ವಿಗ್ರಹಗಳನ್ನೇ ಅಲ್ಲಿ ಕೆತ್ತಲಾಗಿದ್ದು ಇವು ಪ್ರಮಾಣೀಕೃತವಾಗಿದ್ದು ಆಕರ್ಷಕವಾಗಿವೆ.

ದೇವಾಲಯಕ್ಕೆ ಕೇವಲ ಒಂದೇ ಒಂದು ಗೋಪುರವಿದ್ದು, ಇದು ಗರ್ಭಗೃಹದ ಮೇಲಿದೆ. ಕಟ್ಟಡವು ಹದಿನಾರು ಅರಗಳ ನಕ್ಷತ್ರದಂತೆ ಕಟ್ಟಲ್ಪಟ್ಟಿದ್ದು, ಶಿಖರ, ಕಲಶ ಮೊದಲಾದುವುಗಳಿಂದ ಕೂಡಿದೆ. "ನವರಂಗ'ದ ಪ್ರಧಾನ ಚಾವಡಿಯಲ್ಲಿರುವ ಕಂಬಗಳು ಸಾಮಾನ್ಯ ವೃತ್ತಾಕಾರದವಾಗಿದ್ದು ಚಕುಂಚಮತ್ಕರದ ಕೆಲಸಗಳಿಂದ ಸಹಿತವಾಗಿವೆ. ಈ ಕಂಬಗಳಲ್ಲಿ ಹೆಚ್ಚಿನವುಗಳಲ್ಲಿ ನರ್ತನಮಾಡುವವರ ಗುಂಪು ಮತ್ತು ಅವರ ಹಿಮ್ಮೇಳದವರನ್ನು ತೋರಿಸುವ ಚಿತ್ರಗಳನ್ನೇ ಕೆತ್ತಲಾಗಿದೆ. ಈ ನೃತ್ಯ ಭಂಗಿಗಳಲ್ಲಿ ಬೇಲೂರಿನ "ಮದನಿಕಾ" ಭಂಗಿಯಂತೆ ಕೆಲವು ಅತ್ಯಂತಾಕರ್ಷಕವಿವೆ. ಇವುಗಳ ಕೆಳಗಡೆ ನಾಜೂಕಾದ ಅಲಂಕಾರಿಕ ಕರ್ಮವು ದೃಗ್ಗೋಚರವಾಗುತ್ತದೆ.

ಪ್ರಧಾನ ಚಾವಡಿಯ ಮೂರು ಪಕ್ಕಗಳಲ್ಲಿ ಗರ್ಭಗೃಹಗಳಿವೆ. ಪಶ್ಚಿಮದ ಗರ್ಭಗೃಹದ ಮಧ್ಯದಲ್ಲಿ ನಾಲ್ಕೂವರೆ ಅಡಿ ಎತ್ತರದ ಲಕ್ಷ್ಮೀನಾರಾಯಣನ ಅತ್ಯಾಕರ್ಷಕ ವಿಗ್ರಹವಿದೆ. ಈ ಪ್ರತಿಮೆಯ ಅಕ್ಕ ಪಕ್ಕಗಳಲ್ಲಿ ಮತ್ತೆರಡು ಮೂರ್ತಿಗಳಿವೆ. ದಕ್ಷಿಣ ಪಾರ್ಶ್ವದಲ್ಲಿ ಗಣಪತಿ ಮತ್ತು ಉತ್ತರ ಪಾರ್ಶ್ವದಲ್ಲಿ ಮಹಿಷಾಸುರ ಮರ್ದಿನಿಯರ ವಿಗ್ರಹಗಳನ್ನು ಸ್ಥಾಪಿಸಿದ್ದಾನೆ. ದಕ್ಷಿಣದ ಗರ್ಭ ಗುಡಿಯಲ್ಲಿ ವೇಣು ಗೋಪಾಲನ ಮೂಲ ವಿಗ್ರಹವಿತ್ತೆಂದೂ ಅದನ್ನು ಕೆಲವು ವರ್ಷಗಳಿಗೆ ಹಿಂದೆ ಅಲ್ಲಿಂದ ಕಿತ್ತು ಎಲ್ಲಿಯೋ ಅನ್ಯ ಪ್ರದೇಶಕ್ಕೆ ಸಾಗಿಸಿದ್ದಾರೆಂದೂ ಹೇಳುತ್ತಾರೆ. ಉತ್ತರದ ಗರ್ಭಗೃಹವು ದಕ್ಷಿಣದ ಗರ್ಭಗುಡಿಯಂತೆಯೇ ಇದ್ದು ಇಲ್ಲಿ ಲಕ್ಷ್ಮೀನರಸಿಂಹನ ವಿಗ್ರಹವಿದೆ. ಈ ವಿಗ್ರಹಗಳಲ್ಲಿ ಚಾತುರ್ಯಪೂರ್ಣ ಶಿಲ್ಪವು ಅಡಗಿರುವುದು ಒಂದು ವೈಶಿಷ್ಟ್ಯ.

ಹೊಸ ಹೊಳಲು ಎಂದರೆ, ಹೊಸ ಪಟ್ಟಣವೆಂದರ್ಥ. ಇಲ್ಲಿನ ಲಕ್ಷ್ಮೀನಾರಾಯಣನ ದೇವಾಲಯದಿಂದಾಗಿ ನಿಜವಾಗಿಯೂ ಇದೊಂದು ಹೊಸ ಹೊಳಲುವೇ ಆಗಿದೆ. ಇಲ್ಲಿನ ಶಿಲ್ಪ ಕಲೆಯು ಯಾವ ವಿಧದಲ್ಲೂ ಬೇಲೂರು ಹಳೆ ಬೀಡುಗಳ ಶಿಲ್ಪಕ್ಕಿಂತ ತೀರ ತುಚ್ಛವಾಗಿಲ್ಲದೆ, ಅವನ್ನು ಸ್ಪರ್ಧಿಸುವಂತೆಯೇ ಇದೆ ಎನ್ನಬಹುದು. ಆದರೆ, ಇದೊಂದು ಗ್ರಾಮವಾದ ಕಾರಣದಿಂದ, ಸಂಚಾರಾನುಕೂಲತೆಗಳ ಅಭಾವದಿಂದ ಸ್ವಲ್ಪ ಮರೆಯಾಗಿದೆ. ಹೊಯ್ಸಳ ಶೈಲಿಯಲ್ಲಿಯೇ ಕಟ್ಟಲ್ಪಟ್ಟಿರುವ ಈ ದೇವಾಲಯವು ವಿಷ್ಣುವರ್ಧನನ ಕಾಲದಲ್ಲಿ ಅಥವಾ ಅನಂತರವೇ ನಿರ್ಮಿತವಾಗಿದೆಯೆಂಬುದು ನಿರ್ವಿವಾದ. ಮೊದಲು ಜೈನನಾಗಿದ್ದ ವಿಷ್ಣುವರ್ಧನನ ಮೇಲೆ ಶ್ರೀ ರಾಮಾನುಜಾಚಾರ್ಯರ ಪ್ರಭಾವ ಬಿದ್ದಿರುವುದನ್ನು ಮರೆಯುವುದು ಸಾಧ್ಯವಿಲ್ಲ.

ಅಂತೂ ಹೊಸ ಹೊಳಲು ಕನ್ನಡ ನಾಡಿನ ಒಂದು ಕಲಾ ಕೇಂದ್ರವಾಗಿದೆ. ಅಲ್ಲಿನ ಶಿಲ್ಪಕಲೆಯು ಕಲಾವಿದರ ಮನಸ್ಸಿಗೆ ಆನಂದವೀಯುವುದೂ ಚಿರಸತ್ಯವಾಗಿದೆ.

ವಿನೋದ ವಿಹಾರ

ಓದಿದರೆ ನಕ್ಕು ನಲಿಯಬಹುದು!

ವೈದ್ಯರ ಸಲಹೆ

ರಾಮು ಮತ್ತು ಶ್ಯಾಮರು ತಮ್ಮ ರೋಗಗ್ರಸ್ತೆ ಸೋದರಿಯ ಕುರಿತಾಗಿ ಆಡಿಕೊಳ್ಳುತಿದ್ದರು.

ರಾಮು—ಶ್ಯಾಮೂ, ನೀನು ಈಕೆಯ ಕೈಗಳನ್ನು ಹಿಡಿ; ನಾನು ಕಾಲುಗಳನ್ನು ಹಿಡಿಯುವೆನು. ಇಬ್ಬರೂ ಒಟ್ಟು ಸೇರಿ ಈಕೆಯನ್ನು ಅಲುಗಾಡಿಸಿ ಬಿಡೋಣ; ಔಷಧಿ ಕೊಡುವ ವೇಳೆ ಆಯಿತು.

ಶ್ಯಾಮು—ಅದೇಕೆ ಹಾಗೆ?

ರಾಮು—ಮದ್ದನ್ನು ಕುಡಿಸುವುದಕ್ಕೆ ಮೊದಲು ಚೆನ್ನಾಗಿ ಅಲುಗಾಡಿಸಿ ಆ ಮೇಲೆ ಕೊಡಬೇಕೆಂದು ವೈದ್ಯರು ಹೇಳಿದ್ದಾರೆ.

ದೇವರ ದಯೆಯಿದ್ದರೆ……

ಒರ್ವ ಮಿತ್ರ ರುಗ್ಣಶಯ್ಯೆಯಲ್ಲಿ ಮಲಗಿದ್ದ ಸ್ನೇಹಿತನನ್ನು ನೋಡಲು ಹೋದನು.

"ಹೇಗಿದೆ ಈಗ?"

"ಜ್ವರ ಬರುತ್ತಿತ್ತು; ಈಗ ಅದು ದೂರವಾಗಿದೆ. ಆದರೆ, ಏನೋ, ದೇಹದೊಳಗೆ ಒಂದು ತರಹದ ಅವ್ಯಕ್ತ ವೇದನೆಯಾಗುತ್ತಿದೆ."

ಈತ ತೃಪ್ತಿಸೂಚಕ ನಗು ಬೀರಿಸಿ ಹೇಳಿದ: "ಮರುಗಬೇಡ, ದೇವರ ದಯೆಯೊಂದಿದ್ದರೆ, ದೇಹವೂ ದೂರ ಹೋದೀತು."

ನೀವೆಂದಂತೆಯೇ ..

ಒರ್ವ ಮಾಲಿಕನಲ್ಲಿಗೆ ಕೆಲಸವರಸುತ್ತ ಒಬ್ಬ ನಿರುದ್ಯೋಗಿ ಬಂದು, ಉದ್ಯೋಗಾವಕಾಶ ಬೇಡಿದನು. ಮಾಲಿಕ ದರ್ಪದಿಂದ ಕೇಳಿದ: ನಿನ್ನ ಹೆಸರೇನು?

ನಿರುದ್ಯೋಗಿ—ಸೀತಾರಾಮು

ಮಾಲಿಕ—ಛೀ, ನಿನಗೆ ಹೇಗೆ ಮಾತಾಡಬೇಕೆಂದೇ ಗೊತ್ತಿಲ್ಲ. ಮೊದಲು ಸ್ವಾಮಿ ಎಂದು ಹೇಳಬೇಕು. ನೋಡೋಣ, ನಿನ್ನ ಹೆಸರೇನೆಂದು ಇನ್ನೊಮ್ಮೆ ಹೇಳು.

ನಿರುದ್ಯೋಗಿ—ಸ್ವಾಮಿ ಸೀತಾರಾಮು.

ಸರಿಯಾದ ಕಾರಣ

ನರೇಂದ್ರ—ಕಮಲಾ, ನೀನು ಯಾರಿಗೀ ಪತ್ರವನ್ನು ಬರೆಯುತ್ತಿರುವೆ?

ಕಮಲ—ನನ್ನ ತಾಯಿಗೆ.

ನರೇಂದ್ರ—ಅದೇನು ಬರೇ ನಿಧಾನವಾಗಿ ಬರೆಯುತ್ತಿರುವೆ?

ಕಮಲ—ನನ್ನ ತಾಯಿಯೂ ಮೆಲ್ಲನೇ ಓದಬೇಕೆಂದು.

ಸೊಂಟಕಟ್ಟಿ ಓದಬೇಕಂತೆ

ತನ್ನ ಮಗಳು ಸೊಂಟದಲ್ಲಿ ಹಗ್ಗ ಕಟ್ಟಿಕೊಂಡಿರುವುದನ್ನು ಕಂಡು ಆಶ್ಚರ್ಯಚಕಿತಳಾಗಿ ಕೇಳಿದಳು: ಮಗಳೆ, ನೀನೇಕೆ ಸೊಂಟದಲ್ಲಿ ಹಗ್ಗ ಬಿಗಿದು ಕೊಂಡಿರುವೆ?

ಮಗಳು ಸಂತೋಷದಿಂದ ಹೇಳಿದಳು: ಅಲ್ಲಮ್ಮಾ, ನಾಳೆದು ಶಾಲೆಯಲ್ಲಿ ಪರೀಕ್ಷೆ ಬಂತು. ಅದರಲ್ಲಿ ತೇರ್ಗಡೆ ಹೊಂದ ಬೇಕಾದರೆ ಸೊಂಟಕಟ್ಟಿ ಓದಬೇಕೆಂದು ಅಧ್ಯಾಪಕರು ಹೇಳಿದ್ದಾರೆ. ಅದಕ್ಕೇನೇ...

ನಿಮಗೆ ಗೊತ್ತಿಲ್ಲ!

ಶಾಲೆಯಲ್ಲಿ ದಡ್ಡಿಯಾದ ಡಾಕ್ಟರರೊಬ್ಬರ ಮಗಳನ್ನು ಅಧ್ಯಾಪಕರು ಗದರಿಸುತಿದ್ದರು: ಈ ದಿನ ಕಲಿಸಿಕೊಟ್ಟುದನ್ನು ಕಲಿತುಕೊಂಡು ನಾಳೆ ಬಾರದೆ ಹೋದನೆ, ನಿನ್ನ ತಂದೆಯನ್ನೇ ಇಲ್ಲಿಗೆ ಕರೆ ತರುತ್ತೇನೆ.

ಹುಡುಗಿ—ಸರ್, ನಮ್ಮ ತಂದೆ ಒಂದೆಡೆಗೆ ಬರಬೇಕಾದರೆ, ಐದು ರೂಪಾಯಿ ಫೀಸ್ ತೆಗೊಳ್ಳುತ್ತಾರೆ. ಅದು ನಿಮಗೆ ಗೊತ್ತಿಲ್ಲವೆ?

ಗೊಬ್ಬರ ತುಂಬಿದೆ!

ಸತೀಶ—ವಸಂತಿ, ನಿನ್ನ ತಲೆಯಲ್ಲಿ ಗೊಬ್ಬರವೇ ತುಂಬಿಕೊಂಡಿದೆ.

ವಸಂತಿ—ಆದುದರಿಂದಲೇ ಅದು ಸಮೃದ್ಧವಾಗಿದೆ.

ಯೋಗ್ಯ ಅಧ್ಯಾಪಕರು

ಅಧ್ಯಾಪಕ—ನೀನೊಬ್ಬ ಬರೀ ಕತ್ತೆ. ನಿನ್ನ ಪ್ರಾಯದಲ್ಲಿ ನಾನು ಚೆನ್ನಾಗಿ ಓದುತಿದ್ದೆ.

ವಿದ್ಯಾರ್ಥಿ—ಪ್ರಾಯಃ ನಿಮಗೆ ಒಳ್ಳೆಯ ಅಧ್ಯಾಪಕರು ದೊರಕಿರಬೇಕು; ಆ ಭಾಗ್ಯ ನನಗೆ ಮಾತ್ರ……

—ಬೇಕಾಗಿದ್ದಾರೆ—

ಮೋಹನ್‌ರವರ ಜನಪ್ರಿಯ ತಯಾರಿಕೆಗಳಾದ ಹೇರ್‌ಆಯಿಲ್ ಬ್ರಿಲಿಯಂಟೈನ್, ಫೌಂಟನ್‌ಪೆನ್ ಮಸಿ, ರಬ್ಬರ್‌ಸ್ಟಾಂಪಮಸಿ ಮತ್ತು ದತ್ತಭಜನಾವಳಿಗಳನ್ನು ಧಾರಾಳವಾದ ಕಮೀಷನ್ ಮೇಲೆ ಮಾರಾಟಮಾಡತಕ್ಕ ಏಜಂಟರೂ, ವ್ಯಾಪಾರಸ್ಥರೂ ಬೇಕಾಗಿದ್ದಾರೆ. ಏಜನ್ಸಿ ಮತ್ತು ವ್ಯಾಪಾರದ ನಿಯಮಗಳಿಗಾಗಿ ೧೫ ಪೈಸೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಕುಲಕರ್ಣಿ ಅಂಡ್ ಸನ್ಸ್
90, ಗಾಂಧಿ ಬಜಾರ
ಬೆಂಗಳೂರು 4

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ಎರಡು. ಎರಡು ರೂಪಾಯಿ ೪೫ ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಲಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಥಾ ವಿಹಾರ

(೨ನೇ ಪುಟದಿಂದ)

"ಮನು! ನನಗಾಗಿರುವ ದುಃಖ ನಾನು ತೀರುವ ವರೆಗೆ ಮರೆಯಲಾರದು. ಇದೋ ನೋಡು ಈ ಚಿತ್ರದ ಬರೆಹವನ್ನು..."

ಆ ಚಿತ್ರ ಬರೆಹ...."

ಒಂದು ಬೆಕ್ಕಿನ ಮರಿಯು ಸತ್ತು ಭೂಮಿಯಲ್ಲಿ ಬಿದ್ದಿದೆ. ಇನ್ನೊಂದು ಬೆಕ್ಕಿನ ಮರಿಯು ಅದರ ಸಮೀಪಕ್ಕೆ ಕುಳಿತು ಕಣ್ಣೀರು ಸುರಿಸುತ್ತಿದೆ. ಅದರ ಕೆಳಗೆ "ಜಾನ್, ಯಾಕೆ ಹೋದೆ. ಈ ಮನೆಯ ಮಾಲಿಕನ ಬೆಣ್ಣೆಯು ನಿನಗೆ ರುಚಿಯಿಸ್ಲಿವೆ. ಈ ಮನೆಗಿಂತ ಆ ಮನೆಯು ಉತ್ತಮ ಇದೆಯೇ? ಅಯ್ಯೋ! ದೇವಾ ಇಂತಹ ಬಡ ಪ್ರಾಣಿಯನ್ನು ಕರೆದು ಕೊಂಡು ಹೋಗುವದೇ ಬಲಿಷ್ಠರಾದ ಮಾನವರಿರುತ್ತಿರಲು ಬಡ ಪ್ರಾಣಿಯ ಜೀವ ನಿನಗೆ ಬೇಕಾಯಿತೇ?" ಎಂದು ಬರೆದಿತ್ತು.

"ಪ್ರಭು ಆ ಮರಿ ಎಲ್ಲಿಗೆ ಹೋಗಿವೆ?" ಎಂದು ಮನುವಿನ ಪ್ರಶ್ನೆಗೆ—

"ಅದೊಂದು ಕತ್ತಲೆಯ ರಾಜ್ಯವಂತೆ ಎಲ್ಲಿಯೋ ತಾರೆಗಳು ಮುಗಿಲಿನಲ್ಲಿ ಮಿನುಗುತ್ತಿವೆಯಂತೆ. ಅಲ್ಲಿ ಚಂದ್ರನು ಇಲ್ಲವಂತೆ. ಅಲ್ಲಿ ಸತ್ತವರೆಲ್ಲರೂ ಕೂಡಿರುವರಂತೆ" ಎಂದು ಪ್ರಭು ಹೇಳಿದ. ಮನು ಅತ್ತ ಲಕ್ಷ್ಯ ಕೊಡದೇ "ಇರಲಿ ಮನೆಗೆ ನಡೆ" ಎಂದು ಪ್ರಭುವನ್ನು ಕರೆದುಕೊಂಡು ಹೋದಳು.

ಅದೊಂದು ಶುಭ ದಿನವು.

೩

ಶಾಲೆಯ ಕರೆಯು ಕರೆಯುತ್ತಲಿದೆ. ಪ್ರಭು ಮೋಟರದಿಂದ ಇಳಿದು "ಮನು, ಬೇಗ ಬಂದು ಬಿಡುತ್ತೇನೆ" ಎಂದು ಕಾರಿನತ್ತ ಓಡುತ್ತಿದ್ದಾನೆ. ಮನು ಅವನನ್ನು ಕಳಿಸಿ ಮನಸ್ಸಿಲ್ಲದೆ ತರಗತಿಗೆ ಹೋದಳು. ಕಳಿಸಲು ಬಂದ ಕಾರು ಮರಳಿ ಮನೆಗೆ ಹೋಯಿತು. ದುರ್ದೈವಕ್ಕೆ ಓಡುತ್ತಿದ್ದ ಪ್ರಭು ಮರಣವನ್ನಪ್ಪಿಕೊಂಡ. ಯಾಕಂದರೆ ಓರ್ವ ಮಹಾಶಯರ ಕಾರು ಅವನನ್ನು ತುಳಿದು ಬಿಟ್ಟಿತ್ತು. ಅದಕ್ಕೆಲ್ಲಿ ಕಣ್ಣು ಕಾಣಬೇಕು. ಈ ಬಡ ಹುಡುಗನ ದೇಹ. ಪ್ರಭು ಕೊನೆಯುಸುರಿನಲ್ಲಿ "ಮನು, ಬೇಗ ಬಂದು ಬಿಡುವೆ. ದೇವನು ಅದೇಕೋ ನನ್ನನ್ನು ಕರೆದು ತಾ ಎಂದು ಈ ಮಹಾಶಯರಿಗೆ ಹೇಳಿದ್ದಾನೆ. ಇವರೆಷ್ಟು ಉತ್ತಮರು! ಆ ದೇವನ ಮನೆಯನ್ನು ನೋಡಬೇಕೆಂದು ಬಹಳ ದಿನಗಳಿಂದ ದಾರಿಕಾಯುತ್ತಿದ್ದೆ. ಮನು, ಆ ಮನೆಯು ವಿಶಾಲವಾಗಿದೆಯಂತೆ. ಅಲ್ಲಿ ನಿನಗೆ ಯಾವ ವಸ್ತುಗಳು ಬೇಕೋ ಅವನ್ನು ಆರಿಸಿ ಇಡುವೆ. ನೀನು ಬೇಗ ಬಂದರೆ ಉತ್ತಮ. ಮನು, ಈ ಮನುಷ್ಯರಂತೆ ಅಲ್ಲದೇ ಕುದುರೆ, ಆನೆ, ಮಂಗನ ಮುಖದವರು ಅಲ್ಲಿರುವರಂತೆ. ಅವರನ್ನು ಕಂಡು ನಿನಗೆ ನಗೆಯು ಬರುತ್ತಿದೆ. ಬಾ, ಅಲ್ಲಿ ಆಟ ಆಡೋಣ, ಬರುವಿ ಎಂದು ನಂಬಿದ್ದೇನೆ..." ಎಂದು ಹೇಳಿದ್ದ.

ಮನು ಶಾಲೆ ಬಿಟ್ಟನಂತರ ಪ್ರಭುವಿಗಾಗಿ ಕಾಯುತ್ತ ನಿಂತಳು. ಮತ್ತು ಕಾರನ್ನು ತಂದ ಶಂಕರಜ್ಜನಿಗೆ "ನಾವು ನಡೆದು ಬರುತ್ತೇವೆ. ನೀನು ಮನೆಗೆ ಹೋಗು" ಎಂದು ಕಳಿಸಿದಳು. ಸೂರ್ಯನು ಈ ಲೋಕದಿಂದ ಪಾರಾಗಿ ಶಾಂತಲೋಕವನ್ನು ಸೇರಿದ್ದ. ಕತ್ತಲೆ ಹರಡಿತು. ಗಿಡದಲ್ಲಿ ಒಂದು ಕೋಗಿಲೆಯು ಅದಾರನ್ನೋ ತನ್ನ ಮಧುರ ಸ್ವರದಿಂದ ಕೂಗಿ ಕರೆಯುತ್ತಿದೆ. ಅದು ಬಹಳ ಕೂಗುತ್ತಿದೆ. ಮತ್ತೆ ಕೆಲವು ಮರಿ ಹಕ್ಕಿಗಳು ಚಿಲಿಪಿಲಿ ಎಂದು ಧ್ವನಿಗೈಯುತ್ತಿವೆ. ಅರುಂಧತಿ (ತಾರೆ) ಹೀನ ಕಳೆಯುಳ್ಳವಳಾಗ ಮಿನುಗುತ್ತಾಳೆ. ಅವಳು ವಸಿಷ್ಠನ ದಾರಿಯನ್ನು ಕಾಯುತ್ತಿರಬಹುದು. ಆಕಾಶದಲ್ಲಿ ಒಂದು ಪ್ರಕಾಶಮಾನವಾದ ನಕ್ಷತ್ರವು ಭೂಮಿಗೆ ಧುಮಿಸಿ ಮರೆಯಾಯಿತು. ಆ ರಸ್ತೆಯಲ್ಲಿ ಜನಸಂದಣಿಯು ಕಡಿಮೆಯಾಗುತ್ತಾ ಬಂತು. ಆದರೂ ಮನು ಪ್ರಭುವಿಗಾಗಿ ದಾರಿಕಾಯುತ್ತಿದ್ದಾಳೆ. ಹಾಗೂ ಅತ್ತ ಹೋಗುವವರಿಗೆ "ಕೂಡು ರಸ್ತೆಯಲ್ಲಿ ಒಂದು ಹುಡುಗಿ ಕೇಳುತ್ತ ನಿಂತಿದೆ. ಹುಡುಗಾ ಬೇಗ ಹೋಗು" ಎಂದು ಹೇಳಲು ಕೇಳಿಕೊಳ್ಳುತ್ತಾಳೆ. ಆಶಾಪೂರ್ಣ ಕಣ್ಣುಗಳು ಪ್ರಭುವಿನತ್ತ ನೋಡುತ್ತಿವೆ. ಕೆಲವು ವೇಳೆಯ ನಂತರ-

-"ಮನು ಇಲ್ಲೇಕೆ?" ಎಂದು ಮನುವಿನ ತಂದೆ ಪ್ರಶ್ನೆಮಾಡಿದರು.

"ಪ್ರಭು ಬರಲಿಲ್ಲ ಅಪ್ಪ! ಅದಕ್ಕಾಗಿ ನಿಂತೆ!"

"ಪ್ರಭು ಮನೆಯಲ್ಲಿ ಮಲಗಿದ್ದಾನಮ್ಮ" ಎಂದು ದುಃಖದಿಂದ ಹೇಳಿದರು.

"ಅಪ್ಪಾ! ಇದೇನು ಹೇಳುತ್ತೀ! ಅವನು ನನ್ನನ್ನು ಇಲ್ಲಿ ಬಿಟ್ಟುಹೋದನೇ? ನಾನು ಇಲ್ಲಿ ಕಾಯುತ್ತೇನೆಂಬುದು ಅವನಿಗೆ ಗೊತ್ತಿಲ್ಲವೇ? ಅವನು ಅಷ್ಟು ಕೃತಘ್ನನೇ? ನನ್ನ ನೆನಪು ಅವನಿಗೆ ಇಷ್ಟು ಬೇಗ ಹಾರಿತೇನು? ನನ್ನನ್ನು ಬಿಟ್ಟು ಹೋಗುವದಿಲ್ಲವೆಂದು ಆಣೆ ಮಾಡಿ ಹೇಳುತ್ತಿದ್ದ. ತಡೆಯಪ್ಪ ಅವನನ್ನು ಬಲವಾಗಿ ಗುದ್ದಿ ಇನ್ನೊಮ್ಮೆ ಹೀಗೆ ಮಾಡಬೇಡವೆಂದು ಹೇಳುತ್ತೇನೆ. ಎಲ್ಲಿ ಮಲಗಿದ್ದಾನಪ್ಪ? ನಿದ್ದೆ ಹತ್ತಿತ್ತೇನು?" ಎಂದು ಮನು ಕೇಳಿದಳು.

"ನಿದ್ದೆ ಹತ್ತಿತ್ತಮ್ಮ, ಬಲು ದೀರ್ಘ ನಿದ್ದೆ ಹತ್ತಿತ್ತು. ಅವನು ನಿನ್ನನ್ನು ಬಿಟ್ಟು ಹೋಗಿದ್ದಾನೆ. ಬೇಕಾದ ಶಿಕ್ಷೆ ಅವನಿಗೆ ಕೊಡುವಿಯಂತೆ ಮನೆಗೆ ನಡೆಯಮ್ಮ!".

ಮನೆಯನ್ನು ಸೇರಿದ ಬಳಿಕ ಮಲಗಿದ ಪ್ರಭುವನ್ನು ಕಂಡು "ಅಯ್ಯೋ! ಮಲಗಿದ್ದಾನೆ. ಹೊಡೆಯುವದು ಹೇಗೆ? ಹ್ಞಾಂ" ಎಂದು ಸಾವಕಾಶ ಗುದ್ದಿದಳು. ಅವನ ಮುಖದ ಮೇಲೆ ಹೊದೆಯಿಸಿದ್ದ ಅರಿವೆಯನ್ನು ತೆಗೆದು 'ಪ್ರಭು! ಪ್ರಭು!!' ಎಂದು ಕೂಗಿದಳು. ನಿದ್ದೆಯಲ್ಲಿದ್ದ ಪ್ರಭು ಏಳುವಂತಿಲ್ಲ. ಆಗವಳು "ಆಗಲಿ ಪ್ರಭು ಬಹಳ ದಣಿದಂತೆ ಕಂಡುಬರುತ್ತಿದೆ. ಗುರುಗಳು ಬಹಳ ಅಭ್ಯಾಸ ಹೇಳಿದ್ದರೇ? ಮನುವಿನ ಪ್ರಭು ಎಂಬುದು ಅವರಿಗೆ ಗೊತ್ತಿರಲಿಲ್ಲವೇ? ಅಪ್ಪಾ ಗುರುಗಳಿಗೆ ಹೇಳು ಪ್ರಭುವಿಗೆ ಹೆಚ್ಚು ಓದಲು ಹೇಳಬೇಡವೆಂದು. ಮಲಗು ಪ್ರಭು ನಿನಗೆ ಹಾಲು ಕಾಯಿಸಿ ತರುವೆ." ಎಂದು ಅರಿವೆಯನ್ನು ಹೊದಿಸಿ "ಅಪ್ಪಾ ನಿಮ್ಮ ಕಣ್ಣಲ್ಲಿ ಏಕೆ ನೀರು? ನೀವೇಕೆ ಸುಮ್ಮನಿರುವಿರಿ? ಹ್ಞಾಂ! ಹೌದು ನೀವು ಮಾತಾಡಿದರೆ ನನ್ನ ಪ್ರಭುವಿಗೆ ಎಚ್ಚರವಾಗುತ್ತಿದೆ. ಎಷ್ಟು ನಿಷ್ಕರುಣಿ ಗುರುಗಳು ಅವರು! ನಡೆಯಪ್ಪ ಹಾಲು ಎಲ್ಲಿದೆ? ಆಕಳನ್ನು ಹಿಂಡು ನಡಿಯಮ್ಮ" ಮನು ಹಾರುತ್ತಾ ಒಳಗೆ ಹೋದಳು. ಪ್ರಭು ಮಲಗಿದ್ದ.

೪

"ಅದೇ ಮನು ಇಂದು ತನ್ನ ಹಿಂದಿನ ನೆನಪಿನಿಂದ ಈ ಕೂಡು ರಸ್ತೆಯಲ್ಲಿ ತನ್ನ ಮೋಟರ ನಡೆಯಿಸುವ ಚಾಲಕನಿಗೆ ಕೇಳುತ್ತಿರುತ್ತಾಳೆ."

"ನಾನೆಷ್ಟೋ ಸಾರೆ ಈ ರಸ್ತೆಯಲ್ಲಿ ಹಾಯುವಾಗ ಮನು ಭೆಟ್ಟಿಯಾಗುತ್ತಾಳೆ. ಮದುವೆಯೂ ಆಗಿದೆ. ಯಾವಾಗಲಾದರೂ ಮದುವೆಯ ಬಗೆಗೆ ಮಾತು ತೆಗೆದರೆ "ನನ್ನ ಪ್ರಭು ಬರುತ್ತಾನೆ ಬಾಬೂಜೀ!" ಎಂದು ಹೇಳುತ್ತಾಳೆ. ಅವಳ ಅತೃಪ್ತಿ ಜೀವನವನ್ನು ಕಂಡು ಆಕೆಯ ಗಂಡ ಎಷ್ಟೋ ಸಾರೆ ಕಣ್ಣೀರು ಸುರಿಸುತ್ತ "ಇವಳು ಮಹಾ ಸಾಧ್ವಿ ನನ್ನಂತಹ ಪಾಪಿಯನ್ನು ಏಕೆ ಮದುವೆಯಾದಳು?" ಎಂದು ಹೇಳುವರು. ಇದೊಂದು ಘಟನೆ ನನ್ನ ಮನಃ ಪಟಲದ ಮೇಲೆ ಅಚ್ಚಳಿಯದೇ ನಿಂತಿದೆ."

ಎಂದು ಕಣ್ಣೀರು ಸುರಿಸುತ್ತ ವಿನಯ ಬಾಬುರವರು ಮೊಂಟೇಸರಿ ಶಿಕ್ಷಣ ಕೇಂದ್ರದ ಸುವರ್ಣ ಮಹೋತ್ಸವ ಅಧ್ಯಕ್ಷ ಸ್ಥಾನದಿಂದ ಎಂದರು. ಮನುವಿನ ತಂದೆ ಆ ಶಿಕ್ಷಣ ಕೇಂದ್ರವನ್ನು ಕಟ್ಟಲಿಕ್ಕೆ ಐವತ್ತು ಸಾವಿರ ರೂಪಾಯಿ ಕೊಟ್ಟಿದ್ದರು.

—ಎಫ್. ಡಿ. ಸಾಲಿ, ಧಾರವಾಡ.



ನವದೆಹಲಿಯಲ್ಲಿ ಕಟ್ಟಿಸಲಾದ ಅಮೆರಿಕನ್ ರಾಯಭಾರಿಯ ನೂತನ ಕಛೇರಿ. ಇದರಲ್ಲಿ ಅಮೆರಿಕ ಮತ್ತು ಭಾರತಗಳ ಗೃಹನಿರ್ಮಾಣ ಶೈಲಿಗಳೆರಡನ್ನೂ ಅನುಕರಿಸಲಾಗಿದೆ.

ಮದುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ;
'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!
ಜೀವನದ ಬೇರೆ ಘಟನೆಗಳನ್ನು ಹೃದಯ
ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು
ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

JUST PUBLISHED!
A NEW BOOK WITHIN THE REACH OF EVERYBODY
"LETTER WRITING MADE EASY"
(75 EVERY DAY LETTERS)
Written by An Experienced Teacher.
Useful to one and all, the teacher, he student and the layman.
Price: Rs. 1 = 25 (Postage extra)
If Rs. 1 = 50 is sent by M. O. one copy will be sent by Bookpost.
Copies can be had from the Publishers:
Navayuga Enterprise Ltd.
Navayuga Press,
Udipi.
and also from:
M/s Indian Industrials & Agencies, Mangalore-1.
M/s Navabharat Book Depot, Udipi.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

NAVAYUGA
REGD. NO. M. 3619

UDIPI, THURSDAY
12-2-1959

LICENSE NO. 31
Licensed to Post without Prepayment

ವಿಚಿತ್ರ ಸತ್ಯ

"ಭಾನುವಾರ ಗೊತ್ತುವಳಿ" ಯ ಹಾವಳಿ ನಿಮಗಿಲ್ಲವೆ?

ನನ್ನ ಅನುಭವಗಳನ್ನು ಓದಿ, ನಿಮ್ಮವಕ್ಕೆ ತುಲನೆ ಮಾಡಿರಿ

ಬ್ರಿಟಿಷರು ಕ್ರೈಸ್ತರಾದುದರಿಂದ, ಕ್ರೈಸ್ತರಿಗೆ ಭಾನುವಾರ ಪವಿತ್ರ ದಿನವಾದುದರಿಂದ ಭಾರತದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಆ ದಿನ ರಜಾದಿನವಾಗಿ ಘೋಷಿಸಲ್ಪಟ್ಟಿತು. ಇಂದು ಭಾರತವು ಸ್ವತಂತ್ರವಾಗಿರುವುದಾದರೂ ರವಿವಾರದ ರಜೆ ಮಾತ್ರ ಪರಿವರ್ತನೆ ಹೊಂದಲಿಲ್ಲ, ಎಂತಲೇ ನಾವೆಲ್ಲರೂ ಇಂದು ರವಿವಾರವನ್ನು ಎದುರು ನೋಡುತ್ತೇವೆ. ವಾರದ ಆರು ದಿನಗಳಲ್ಲಿಯೂ ನಮ್ಮ ನಮ್ಮ ಕೆಲಸವನ್ನು ಯಾಂತ್ರಿಕವಾಗಿ ಮಾಡಿ ಭಾರವಾದ ಮನಸ್ಸನ್ನು ಹೊತ್ತುಕೊಳ್ಳುತ್ತೇವೆ; ಆದರೆ, ಆದಿತ್ಯವಾರವೆಂದರೆ, ಬೆಳಗ್ಗೆ ಏಳುವುದರಿಂದ ಹಿಡಿದು ತಿನ್ನುವುದು, ಉಣ್ಣುವುದು, ತಿರುಗಾಡುವುದು, ಮಲಗುವುದು ಮೊದಲಾದ ಎಲ್ಲ ಕೆಲಸಗಳಲ್ಲಿಯೂ ಒಂದು ತರದ ನಿಧಾನತೆಯು ಗೋಚರವಾಗುತ್ತದೆ— ಇದು ಸ್ವಾನುಭವ.

ಶನಿವಾರ ದಿನ ರಾತ್ರಿ ನಿದ್ರಿಸಲು ತೆರಳುವಾಗ, ನಾಳೆ ಭಾನುವಾರ ಆಫೀಸಿಗೆ ರಜೆ; ಮಕ್ಕಳನ್ನು ಹೊತ್ತಿಗೆ ಸರಿಯಾಗಿ ಉಣ್ಣಿಸಿ ಶಾಲೆಗೆ ಕಳಿಸುವ, ತನ್ನ ಹೊಟ್ಟೆ ತುಂಬಿಸಿ ನಿತ್ಯ ಕರ್ತವ್ಯಕ್ಕೆ ತೆರಳುವ ಅಗತ್ಯವಿಲ್ಲವಾದುದರಿಂದ ಸಂತೃಪ್ತನಾಗುವಷ್ಟು ಹೊತ್ತು ಮಲಗಬಹುದೆಂದು ತೃಪ್ತಿಪಟ್ಟುಕೊಂಡೇ ಮಲಗುತ್ತೇನೆ. ಆದರೆ, ಆ ದಿನದ ಅವಸ್ಥೆಯೇನು? ಬೇಡ ಬೇಡವೆಂದರೂ ಇತರ ದಿನವೇಳುವ ಹೊತ್ತಿಗೇ ಅಭ್ಯಾಸಬಲದಿಂದ ಎದ್ದು ಬಿಡುತ್ತೇನೆ; ವರ್ತಮಾನ ಪತ್ರಿಕೆ ಮಾರುವವನೋ ಹಾಲಿನವನೋ ಬಾಗಿಲಲ್ಲಿ ಕೂಗಿಯೇ ಕೂಗುತ್ತಾನೆ, ಹೊತ್ತಿಗೆ ಸರಿಯಾಗಿ. ಆ ಮೇಲೆ ಮಲಗಲು ಯತ್ನಿಸಿದರೂ ನಿದ್ದೆಯು ಬಾರದೆ ಹೊರಳಾಡಿ ಬೇಸತ್ತು ಏಳಲೇಬೇಕಾಗುತ್ತದೆ.

ಭಾನುವಾರ ಬಿಡುವಿನ ದಿನವಾದುದರಿಂದ ಯಾವುದೇ ಕೆಲಸ ಅಂದು ಮಾಡಲಾಗುವುದಿಲ್ಲ. ಜಲಪಾನಕ್ಕೆ ಎಂದಿಗಿಂತಲೂ ವಿಶೇಷವಾದ ತಿನಿಸನ್ನೇ ಎಲ್ಲರೂ ಅಂದು ಬಯಸುತ್ತಾರೆ. ಉಗ್ರಾಣಕ್ಕೆ ಕೈ ಹಾಕಿದಾಗ, ಸ್ವಾದಿಷ್ಟವೆನಿಸುವ, ಅತಿ ಸುಲಭ ಮತ್ತು ಅಲ್ಪವೇಳೆಯಲ್ಲಿ ತಯಾರಿಸಲಾಗುವ ತಿಂಡಿಯನ್ನೇ ಸಿದ್ಧಪಡಿಸಲು ತೊಡಗುತ್ತೇನೆ. ಅಂತಹುದನ್ನು ತಯಾರಿಸಲು ತೊಡಗಿದಾಗ ಮನೆಯಲ್ಲಿ ಏನಾದರೂ ಆವಶ್ಯಕ ಪದಾರ್ಥಗಳ ಕೊರತೆ ಕಂಡುಬಂದರೆ, ಆಳನ್ನು ಪೇಟೆಗಟ್ಟಬೇಕಾಗುತ್ತದೆ ಆದರೆ, ಅದು ರಜಾದಿನವಾದುದರಿಂದ ನೆರೆಮನೆಯವರಂಗೇನೇ ಶರಣು ಹೊಡೆಯುವ ಪ್ರಸಂಗವೂ ಬರುತ್ತದೆ. ಎಲ್ಲರ ಮನೆಯ ಅವಸ್ಥೆಯೂ ಇದೇ ಆಗಿರುವುದರಿಂದ, ನನ್ನ ಪತಿದೇವರು ಏನು ಬೇಕಾಗಿದೆ ಎಂದು ಕೇಳಿ ತಿಳಿದುಕೊಂಡು, ನನ್ನ ದೂರಾಲೋಚನೆಗೆ ಗೋಣಾಗ ತೊಡಗುತ್ತಾರೆ. ಇಷ್ಟರಲ್ಲಿಯೇ ತಾಸು ಒಂಭತ್ತಾಗಿ ಎಂದಿನ ಉಪಾಹಾರದ ವೇಳೆಯು ದಾಟಿಹೋಗುತ್ತದೆ. ಅಲ್ಲದೇ ಆ ಹೊತ್ತಿಗೆ ಸರಿಯಾಗಿ ಹಸಿವೆ ಅತೀವವಾದುದರಿಂದ, ಮಕ್ಕಳು ಮಂಗಗಳೂ ಕೂಗತೊಡಗುವುದರಿಂದ, ಆಕರ್ಷಕ ತಿಂಡಿಯ ಮಾತು ದೂರ ಸರಿದು ಕೈಗೆ ಸಿಕ್ಕಿದ್ದನ್ನು ತಿಂದುಬಿಡುವ ಎಂದು ಮನಸ್ಸು ಆಡತೊಡಗುತ್ತದೆ.

ಪತಿದೇವರು ಆ ಹಿಂದಿನ ಆರು ದಿನಗಳಲ್ಲಿ ನನ್ನ ಹಲವಾರು ಕೇಳಿಕೆಗಳನ್ನು ಸಹಾನುಭೂತಿಪರರಾಗಿ ಕೇಳಿ ಅವನ್ನೆಲ್ಲಾ ಭಾನುವಾರ ಪೂರೈಸುವ ಭರವಸೆಯನ್ನು ನಮ್ಮ ಮಂತ್ರಿಗಳಂತೆಯೇ ಕೊಟ್ಟಿರುತ್ತಾರೆ. ಮಕ್ಕಳೊಂದಿಗೆ ಸಿನಿಮಾಕ್ಕೆ ಹೋಗುವುದು, ಕೆಟ್ಟ ವಿದ್ಯುದ್ದೀಪಗಳನ್ನು ಸರಿಪಡಿಸುವುದು, ರೇಡಿಯೋವನ್ನು ಬಿಚ್ಚಿ, ಅದನ್ನು ಶುದ್ಧಗೈದು, ಅದಕ್ಕೆ ಏನು ಬಾಧೆ ಎಂದು ನೋಡುವುದು ಇತ್ಯಾದಿಗಳೇ ನನ್ನ ಕೇಳಿಕೆಗಳು. ಆದರೆ, ಅವಾವುವೂ ಕಾರ್ಯರೂಪಕ್ಕೆ ಬರುವಂತಿಲ್ಲ. ಅವರಿಗೆ ವಾರಪತ್ರಿಕೆಗಳನ್ನು ಮುಗುಚಿ ಹಾಕುವುದಕ್ಕೇನೇ ಸಾಕಷ್ಟು ವೇಳೆ ಸಿಗುವುದಿಲ್ಲ. ಅವರನ್ನು ಮತ್ತೂ ವತ್ತಾಯ ಮಾಡ ತೊಡಗಿದರೆ, ಅವರು ನಸು ಮುನಿಸಿನಿಂದಲೇ ಹೇಳುತ್ತಾರೆ— ‘‘ಏನು, ಆದಿತ್ಯವಾರ ಈಗಲೇ ಮುಗಿದು ಹೋಯಿತೆ? ಅಷ್ಟು ಅವಸರದ ತಲೆ ಹೋಗುವ ಕೆಲಸವೇನು’’ ಎಂದು. ಆದರೂ ಇನ್ನಷ್ಟು ಪ್ರೇರೇಪಣೆ ಯಾಯುವ ದೃಷ್ಟಿಯಿಂದ, ನಾನು ರೇಡಿಯೋವನ್ನು ಮುಂದೆ ತಂದಿಟ್ಟು ಸ್ಕ್ರೂ ಡ್ರೈವರನ್ನು ತಂದು ಆಣಿ ಮಾಡುತ್ತಿರುವಷ್ಟರಲ್ಲಿಯೇ ಮಡಿವಾಳನು ಬಾಗಿಲಲ್ಲಿ ಬಂದು ಕೂಗುತ್ತಾನೆ.

ಅವನೊಡನೆ ಕಡಿಮೆಯೆಂದರೆ, ಒಂದು ತಾಸು ವ್ಯಯಿಸಲೇ ಬೇಕಾಗುತ್ತದೆ. ಕಳೆದು ಹೋದ ಮತ್ತು ಕೆಟ್ಟು ಹೋದ ಬಟ್ಟೆಗಳ ವಿಚಾರವೇ ಚರ್ಚಿಸಲ್ಪಡುತ್ತದೆ. ಖಾತ್ರಿ ಬಣ್ಣದ ಬಟ್ಟೆಗಳು ರಂಗುಬಿಡುವುದು, ಹೊಸತಾಗಿ ಹೊಲಿಸಿದವುಗಳು ಹರಿದು ಹೋಗುವುದು, ನಮ್ಮ ಹೆಸರು ಬರೆದ ಕರವಸ್ತ್ರಗಳು ಬೇರೆಯವರ ಕೈಸೇರುವುದು — ಮೊದಲಾದ ಅದ್ಭುತಗಳನ್ನು ಮಾಡುವಂತೆ ಆತನಲ್ಲಿ ಕರಗತವಾಗಿರುವ ಇಂದ್ರಜಾಲ ಶಕ್ತಿಯ ಪ್ರಭಾವವೇ ಅಧಿಕವಾಗುವುದು. ಆತ ಇವೆಲ್ಲಕ್ಕೂ ಸಮಾಧಾನವನ್ನು ಹೇಳಿ, ಮುಂದೆ ಸರಿಯಾದ ಕೆಲಸ ಮಾಡಿಕೊಡುವ ಭರವಸೆಯನ್ನಿತ್ತು ಬಟ್ಟೆಗಳನ್ನು ಪುನಃ ಕೊಂಡುಹೋಗುತ್ತಾನೆ. ಇದು ಪ್ರತಿ ಭಾನುವಾರ ನಡೆಯುವ ಕಾರ್ಯಕ್ರಮ.

ಒಂದು ತಾಸಿನ ಪರಿಶ್ರಮದಿಂದ, ನನ್ನ ಪತಿಯು ರೇಡಿಯೊವನ್ನು ದೂರಕ್ಕೆ ತಳ್ಳಿ ತೃಪ್ತಿಯ ನಗೆಯೊಂದನ್ನು ಸೂಸುತ್ತ ಓಪರೇಶನ್ ಸಫಲವಾಯಿತು; ಆದರೆ, ರೋಗಿಯು ಜೀವ ಹಾರಿ ಹೋಯಿತು" ಎಂದು ನಿಟ್ಟುಸಿರು ಬಿಡುತ್ತಾರೆ. ಮೊದಲು ಏನನ್ನಾದರೂ ಕಿರುಚುತ್ತಿದ್ದ ರೇಡಿಯೋ ಈಗ ಸಂಪೂರ್ಣ ಮೌನ ತಾಳುತ್ತದೆ. "ಇದನ್ನು ಹೊತ್ತು ಯಾರಾದರೂ ರೇಡಿಯೋ ರಿಪೇರಿಯವರಲ್ಲಿ ಒಯ್ದು, ಇನನ್ನು ಸರಿಮಾಡಿಸಿ ತರುತ್ತೇನೆ ಎಂದವರು ಉದ್ಗರಿಸುವರು. ನಾನು ಅದನ್ನು ಮೌನವಾಗಿ ಸಮ್ಮತಿಸುತ್ತೇನೆ.

ಅಷ್ಟರಲ್ಲಿ ಮಕ್ಕಳೆಲ್ಲರನ್ನೂ ಕರೆದು, ಅವರನ್ನು ಸುಂದರ ವಸ್ತ್ರಗಳಿಂದ ಅಲಂಕರಿಸಿ ನಮ್ಮನ್ನೂ ಶೃಂಗರಿಸಿಕೊಂಡು ಹೊರಗಡೆ ಹೊರಡಬೇಕೆಂದು ತಯಾರಾಗುತ್ತಿರುವಷ್ಟರಲ್ಲಿಯೇ ನಾವು ಹಲವಾರು ತಿಂಗಳುಗಳಿಂದ ಭೇಟಿಯಾಗದ ಗೆಳೆಯರು ಮನೆ ಬಾಗಿಲಿಗೆ ಬರುತ್ತಾರೆ. ಹೀಗಾಗಿ ನಾವು ಅವರನ್ನು ಮನಃಪೂರ್ವಕವಾಗಿ ಸ್ವಾಗತಿಸಿ, ಉಪಚರಿಸಲೇ ಬೇಕಾಗಿ ಪರಿಣಮಿಸುತ್ತದೆ. ಅವರನ್ನು ಕಳಿಸುವಷ್ಟರಲ್ಲಿ ಸಂಧ್ಯಾಸಮಯವು ಕಳೆದು ಕತ್ತಲು ಹರಡುತ್ತದೆ. ಮಕ್ಕಳ ಬಯಕೆಗಳಿಗೆಲ್ಲಾ ಮಂಜು ಮುಸುಕುತ್ತದೆ. ತಿರುಗಾಟ, ನದೀ ವಿಹಾರ, ಸಿನೆಮಾ ಎಲ್ಲವೂ ಮಣ್ಣುಪಾಲಾಗುತ್ತದೆ. ಎರಡನೆಯ ದೇಖಾವೆಗೆ ತೆರಳೋಣವೆಂದರೆ, ಮರುದಿನ ಭಾನುವಾರವಲ್ಲ, ಸೋಮವಾರ! ಅವರಿಗೆ ಎಂದಿನಂತೆ ಆಫೀಸಿಗೆ ತೆರಳಬೇಕಾಗುತ್ತದೆ!

ಅಷ್ಟು ಹೊತ್ತಿಗೆ, ರವಿವಾರ ಮುಗಿದಂತಾಯಿತು ಈ ಆದಿತ್ಯವಾರವು ಸಂಪೂರ್ಣ ವ್ಯರ್ಥವಾಗಿ ಹೋಯಿತು ಎಂದು ತಿಳಿದುಕೊಳ್ಳಬೇಕಾಗುತ್ತದೆ. ಆದರೂ ಒಂದು ಸಮಾಧಾನದ ಮಾತು ಭಾನುವಾರವು ಮುಂದಿನವಾರವೂ ಬಂದೇ ತೀರುತ್ತದೆ; ಅಂದಿನ ದಿನವಾದರೂ ಇವೆಲ್ಲಾ ನಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬಹುದೆಂದು ತೃಪ್ತಿಪಟ್ಟುಕೊಳ್ಳುತ್ತೇವೆ.

ಈ ರೀತಿಯಾಗಿ ಭಾನುವಾರದ ಗೊತ್ತುವಳಿಗಳು ಒಂದೂ ಕಾರ್ಯರೂಪಕ್ಕೆ ಬಾರದೆ ಕೇವಲ ಗೊತ್ತುವಳಿಯ ರೂಪದಲ್ಲೇ ನಿಲ್ಲುತ್ತವೆ. ಈ ರೀತಿಯಲ್ಲಿಯೇ ಈ ವರೆಗಿನ ಭಾನುವಾರಗಳು ಸಂದುಹೋಗಿವೆ; ಅಲ್ಲದೇ ಇದೇ ರೀತಿಯಲ್ಲಿ ಮುಂದೆಯೂ ಕಳೆದು ಹೋಗುತ್ತವೆ ಎಂಬುದು ಸುಳ್ಳಲ್ಲ.

—ಗೋರಾ.

ಅಭಿಪ್ರಾಯ

(೧ನೇ ಪುಟದಿಂದ)

ರಾ ಗಾಂಧಿಯವರನ್ನೇ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಆರಿಸಿದುದರಿಂದ, ಕಾಂಗ್ರೆಸ್ ಸಂಸ್ಥೆಯಲ್ಲಿ ಬಾಹ್ಯಾಭಿಪ್ರಾಯಕ್ಕೆ ಮನ್ನಣೆ ದೊರೆಯುವ ಮಾತಂತೂ ದೂರ. ತಂದೆಮಗಳ ಕಾರ್ಯಾಚರಣೆಗಳನ್ನೇ ಭಾರತ ಸರಕಾರ ಎದುರು ನೋಡಬೇಕಾಗುತ್ತದೆ. ಹಾಗಾಗಿ, ಇದುವರೆಗೆ ಎಲ್ಲರಿಗೂ ಮುಕ್ತದ್ವಾರವಾಗಿದ್ದ ಕಾಂಗ್ರೆಸ್ ಸಂಸ್ಥೆ ಈಗ "ಪಂಡಿತ ನೆಹರು ಪ್ರೈವೇಟ್" ಸಂಸ್ಥೆಯಾಯಿತು ಎಂದು ಊಹಿಸಿದರೆ ತಪ್ಪಾಗಲಾರದು ತಂದೆ ಮಗಳಿಗೆ ಕಲಿಸಿ ಕೊಡಲಿಕ್ಕೂ ಸಾಕು. ಅಂತೂ ನೆಹರೂ ಮತ್ತವರ ಮಗಳ ನಡುವೆ ಸಾಕಷ್ಟು ಹೊಂದಾಣಿಕೆಯಿರುವುದರಿಂದ ನೆಹರೂರವರ ಕಟ್ಟುನಿಟ್ಟಿನ ಸಮಾಜವಾದವನ್ನು ಕಾರ್ಯಾಚರಣೆಗಿಳಿಸಲು ಇದೊಂದೇ ಸಾಧನವೆಂದು ಮನದಂದು, ಅನ್ಯರಿಂದ ಬರಬಹುದಾದ ವಿರೋಧಗಳನ್ನು ಪರಿಹರಿಸಿ, ಸಮಾಜವಾದ ಮಾದರಿಯ ಸಮಾಜವನ್ನು ಸಂಸ್ಥಾಪಿಸುವ ವೀರ ಪ್ರತಿಜ್ಞೆಯನ್ನು ಪೂರ್ತಿಗೈಯಲು ಇದೇ ಹೆದ್ದಾರಿ ಎಂದು ತಿಳಿದು ಪ್ರಧಾನಿ ನೆಹರೂ ತನ್ನ ಮೌನ ಸಮ್ಮತಿಯಿತ್ತರೆಂದು ತಿಳಿಯಬೇಕೆ?

ಆದರೂ ಕಲ್ಯಾಣ ದೃಷ್ಟಿಯಿಂದ, ಕಾಂಗ್ರೆಸ್ಸಿನ ಪ್ರತಿಷ್ಠೆ ಹಾಗೂ ಜನಬೆಂಬಲದ ದೃಷ್ಟಿಯಿಂದ ಸದ್ಯದ ಈ ಆಯ್ಕೆಯು ಅಕಾಲಿಕವಾದುದೇ ಆಗಿದೆ. ಯೋಗ್ಯತೆಯಲ್ಲಿ ಶ್ರೀಮತಿ ಗಾಂಧಿಯವರಿಗಿಂತ ಯೋಗ್ಯರಾದವರೂ, ಸಮರ್ಥರಾದವರೂ ಕಾಂಗ್ರೆಸ್ಸಿನಲ್ಲಿ ಹಲವಾರು ವ್ಯಕ್ತಿಗಳಿರುವರು. ಆದರೆ, ಅವರನ್ನು ತನ್ನ ಸಮಾಜವಾದದ ಕಡೆಗೆ ದೃಢವಾಗಿ ಅಂಟಿಸಿಕೊಳ್ಳುವುದು ಪ್ರಯಾಸವೆಂತಲೇ ಈ ಆಯ್ಕೆಗೆ ಅವ್ಯಕ್ತ ಪ್ರೋತ್ಸಾಹ ನಡೆಯಿತು. ಕಾಂಗ್ರೆಸ್‌ನಲ್ಲಿ ನೆಹರೂರವರ ವ್ಯಕ್ತಿತ್ವದ ಪ್ರಭಾವವೆಷ್ಟಿದೆ ಎಂಬುದಕ್ಕೆ ಇದೊಂದು ನಿದರ್ಶನವಾಯಿತು.

ಆಯ್ಕೆಯಂತೂ ನಡೆಯಿತು. ಇನ್ನು ಮುಂದಾದರೂ ಕಾಂಗ್ರೆಸ್ ಎದುರಿಸುತ್ತಿರುವ ಪ್ರತಿಗಾಮಿ ಶಕ್ತಿಗಳನ್ನು ತಡೆದು, ತನ್ನ ಆದರ್ಶಗಳತ್ತ ಕಾಂಗ್ರೆಸಿಗರನ್ನೂ ದೇಶದ ಸಾಮಾನ್ಯ ಜನತೆಯನ್ನೂ ಆಕರ್ಷಿಸಿ ಸಂಸ್ಥೆಯನ್ನು ಭದ್ರವಾಗಿಸಿ ಕಲ್ಯಾಣರಾಷ್ಟ್ರ ಕಟ್ಟುವಲ್ಲಿ ಯಶಸ್ವಿಯಾಗಲಿ ಆದರೆ, ಇದೇ ರೀತಿಯ ಅಕಾಲಿಕ ಆಯ್ಕೆ ಮುಂದೆಂದೂ ನಡೆಯಗೊಡದಿರಲಿ.

—ರಾಶಿ.

ಕ್ಯುಮ್ಯುಲೆಟಿವ್ ಠೇವಣಾತಿಗಳು

ರೂಪಾಯಿ ಐದು ಅಥವಾ ಅದರ ಗುಣಕಗಳಲ್ಲಿ ಸಂಗ್ರಹಿಸಿಡಲು ಉತ್ತಮ ಸಾಧನ. ಮಾಸಿಕ ವೇತನ ಪಡೆಯುವ ಮಂದಿಗೆ ಅನುಕೂಲ ಹಾಗೂ ಆಕರ್ಷಕವಾಗಿವೆ. ಹೆಚ್ಚಿನ ವಿವರಗಳಿಗೆ ಸಿಂಡಿಕೇಟ್ ಬೇಂಕಿಗೆ ಬನ್ನಿರಿ ಅಥವಾ ಬರೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್
ಸಿಂಡಿಕೇಟ್ ಲಿಮಿಟೆಡ್.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೨೩. 19-2-1959 Vol. 38. No. 23.

ಪಿಸುನುಡಿ

ಆಂಧ್ರದಲ್ಲಿ ಪ್ರಗತಿಶೀಲ ಪಕ್ಷ-ನೇಪಾಲದಲ್ಲಿ ಪ್ರಜಾಪ್ರಭುತ್ವ ಮಾದರಿ

ವಾರದ ಮಹತ್ವದ ಘಟನೆಗಳು

ಆಂಧ್ರ ಪ್ರದೇಶದ ವಿಧಾನಸಭೆಯ ಕಾಂಗ್ರೆಸ್ ಸದಸ್ಯರಲ್ಲಿ ಕೆಲವರು ಕಾಂಗ್ರೆಸ್ಸಿನಿಂದ ಹೊರಬಂದು, ಪ್ರತ್ಯೇಕ ವಿರೋಧೀ ಪಕ್ಷವನ್ನು ಕಟ್ಟಿಕೊಳ್ಳುವ ನಿರ್ಧಾರವನ್ನು ಮಾಡಿದ್ದಾರೆ. ಪ್ರೊ। ಎನ್. ಜಿ. ರಂಗರು ಈ ವಿರೋಧೀ ಪಕ್ಷದ ನಾಯಕರಾಗಿದ್ದಾರೆ. ಇವರನ್ನು ಹಿಂಬಾಲಿಸಿ ಸುಮಾರು ೨೦ ಜನ ವಿಧಾನಸಭೆಯ ಸದಸ್ಯರು ಹೊರನಡೆದಿದ್ದಾರೆ.

ಅಸಂತುಷ್ಟ ಕಾಂಗ್ರೆಸಿಗರು ಎಲ್ಲ ವಿಧದ ಪ್ರಗತಿಶೀಲ ಕಾರ್ಯಕ್ರಮಗಳನ್ನು ಬೆಂಬಲಿಸುವರು. ಕಾಂಗ್ರೆಸ್ಸಿನಿಂದ ದೂರ ಸರಿಯುವ ಈ ನಿರ್ಧಾರವನ್ನು ತಾವೂ ಹಿತವಾಗಿ ಮಾಡಿರುವರು. ಭೂಸುಧಾರಣೆ ಮತ್ತು ಸಹಕಾರಿ ವ್ಯವಸಾಯ ಪದ್ಧತಿಯ ಸಂಬಂಧದಲ್ಲಿ ನಾಗಪುರ ಕಾಂಗ್ರೆಸ್ ಸಮ್ಮೇಳನದಲ್ಲಿ ಕೈಗೊಳ್ಳಲಾದ ದೃಢ ನಿರ್ಧಾರವನ್ನು ತಾವು ಸರ್ವಥಾ ಒಪ್ಪದೆ, ಇದಕ್ಕೆ ವಿರುದ್ಧವಾಗಿ ಕಾಂಗ್ರೆಸ್ಸಿನಿಂದ ದೂರ ಸರಿಯುತ್ತಿರುವರೆಂದು ಹೇಳಲಾಗಿದೆ. ತಾವು ಕೇವಲ ಪ್ರಾಂತೀಯ ಕಾಂಗ್ರೆಸ್ಸನ್ನು ವಿರೋಧಿಸುವುದಲ್ಲದೇ ರಾಜ್ಯದಲ್ಲಿನ ಸರ್ವವಿಧದ ಧ್ವಂಸಕಾರಿ ತತ್ವಗಳನ್ನು ವಿರೋಧಿಸುವರು. ಆಂಧ್ರ ಪ್ರದೇಶವನ್ನು ಕೇರಳದ ಮಾರ್ಗದಲ್ಲಿ ನಡೆಯಗೊಡದಿರಲು ತಾವು ಈ ರೀತಿ ನಿರ್ಧರಿಸಿರುವೆವೆಂದು ಡಾ। ಚೆನ್ನಾರೆಡ್ಡಿಯವರು ಹೇಳಿರುವರು.

ಆಂಧ್ರದ ವಿಧಾನಸಭೆಯ ಮುಂದೆ ತ್ವರಲ್ಲೇ ಬರಲಿರುವ ಭೂಸುಧಾರಣಾ ವಿಧೇಯಕವನ್ನು ಮುಖ್ಯಮಂತ್ರಿ ಶ್ರೀ ಸಂಜೀವ ರೆಡ್ಡಿಯವರು ತಯಾರಿಸಿರುವರೆಂಬ ಕಾರಣದಿಂದ ತಾವು ವಿರೋಧಿಸುವುದಲ್ಲವೆಂದೂ ವಿರೋಧಕ್ಕಾಗಿ ತಾವೆಂದೂ ವಿರೋಧಿಸುವವರಲ್ಲವೆಂದೂ ಅವರು ಆಡಿದರು. ಆಂಧ್ರ ಪ್ರದೇಶದ ಎಲ್ಲ ರಾಜಕೀಯ ಪಕ್ಷಗಳು ಮುಂದೆ ತರಬಹುದಾದ ಪ್ರಗತಿಶೀಲ ಕಾರ್ಯಕ್ರಮಗಳನ್ನು ತಾವು ಬೆಂಬಲಿಸುವುದಾಗಿ ಘೋಷಿಸಲಾಗಿದೆ.

ಅಸಂತುಷ್ಟ ಕಾಂಗ್ರೆಸಿಗರ ಪ್ರಗತಿಶೀಲ ಪಕ್ಷವನ್ನು ಇತರ ರಾಜಕೀಯ ಪಕ್ಷಗಳೂ ಬೆಂಬಲಿಸಿವೆ ಆಂಧ್ರ ಪ್ರದೇಶದಲ್ಲಿ ಪ್ರಮುಖ ವಿರೋಧೀಪಕ್ಷವಾದ ಕಮ್ಯೂನಿಸ್ಟ್ ಪಕ್ಷಕ್ಕೆದುರಾಗಿ ಈ ಅತೃಪ್ತ ಕಾಂಗ್ರೆಸಿಗರು ಮತ್ತು ಸಮಾಜವಾದಿಗಳು ಹಾಗೂ ಇನ್ನು ಕೆಲವು ಗೊತ್ತು-ಗುರಿಯಿಲ್ಲದವರು ಸೇರಿಕೊಂಡು ಬಂದು ಸಂಯುಕ್ತರಂಗವನ್ನು ಸ್ಥಾಪಿಸಹೊರಟರೆ, ಆಗ, ಕಮ್ಯೂನಿಸ್ಟ್ ಪಕ್ಷವು ಎರಡನೆಯ ಪ್ರಬಲ ವಿರೋಧೀ ಪಕ್ಷವಾಗುವುದು.

ತನ್ನ ೨೦ ಜನ ಸದಸ್ಯರನ್ನು ಕಳೆದುಕೊಂಡ ಕಾಂಗ್ರೆಸ್ ಅತೀವ ಚಿಂತೆಗೀಡಾಗಿದೆ. ಮಂತ್ರಿಮಂಡಳಿಯು ಭದ್ರವಾಗಿರುವುದಾದರೂ ಈ ಬೇರ್ಪಡೆಯಿಂದ ಕಾಂಗ್ರೆಸಿನ ಶಕ್ತಿಯ ಮೇಲೆ ವಿಪರೀತ ಪ್ರಭಾವ ಬೀರುವುದಂತೂ ನಿಶ್ಚಯ. ತಾ. ೩೦ ರಂದು ಪ್ರಾರಂಭವಾಗುವ ರಾಜ್ಯದ ಮುಂಗಡ ಪತ್ರದ ಅಧಿವೇಶದಲ್ಲಿ ಈ ಪ್ರತ್ಯೇಕತೆಯ ಪರಿಣಾಮವು ವ್ಯಕ್ತವಾಗದಿರದು.

ಕೆಲವು ವರ್ಷಗಳಿಗೆ ಮೊದಲು ಇದೇ ರೀತಿಯಲ್ಲಿ ಆಚಾರ್ಯ ಕೃಪಲಾನಿಯವರ ನಾಯಕತ್ವದಲ್ಲಿ ಒಂದು ಅತೃಪ್ತ ಕಾಂಗ್ರೆಸಿಗರ ತಂಡ ಸಿಡಿದು ಪ್ರಜಾಪಕ್ಷ ಸ್ಥಾಪಿಸಿದುದನ್ನು ಮರೆಯಬಾರದು. ಇಂದು ಆಂಧ್ರದಲ್ಲಿ ಭೂಸುಧಾರಣೆ ಮತ್ತು ಸಹಕಾರಿ ವ್ಯವಸಾಯ ಪದ್ಧತಿಗಳನ್ನು ವಿರೋಧಿಸಿ ಹೊರಹೋದ ಈ ಅತೃಪ್ತರ ಸಾಲಿಗೆ ಉಳಿದ ರಾಜ್ಯಗಳ ಪ್ರತಿನಿಧಿಗಳೂ ಬಂದು ಸೇರಲಾರರೆಂದು ನಂಬುವುದು ಸಾಧ್ಯವೆ? ಹೀಗೆಯೇ ಕಾಂಗ್ರೆಸ್ಸು "ನಿಮ್ನವರ್ಗದ ಬೆಂಬಲವನ್ನು ಮೊದಲೇ ಕಳೆದುಕೊಂಡಿದೆ; ಇದೀಗ ಬಂಡವಳದಾರರ ಬೆಂಬಲಕ್ಕೂ ಎರವಾಗುತ್ತಿದೆ" ಎಂಬುದು ನಿಜವಾದರೆ, ಅದಕ್ಕೆ ನೂತನ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿಯವರು ಯಾವ ಪರಿಹಾರ ಕಂಡು ಹಿಡಿಯಲು ಸಮರ್ಥರಾದಾರೆಂದು ಕಾದೇ ಕಾಣಬೇಕಾಗಿದೆ.

೦೦ ೦೦ ೦೦

ಭಾರತದ ಪೂರ್ವ ಪಶ್ಚಿಮಗಳ ಭೂಭಾಗದಲ್ಲಿ ವ್ಯಾಪಿಸಿರುವ ಪಾಕಿಸ್ತಾನವು ತನಗೆ ಪ್ರಜಾಪ್ರಭುತ್ವವನ್ನು ಅರಗಿಸಿಕೊಳ್ಳಲು ಅಸಾಧ್ಯವಾದುದರ ಪರಿಣಾಮವಾಗಿ ಸರ್ವಾಧಿಕಾರಿ ಆಡಳಿತೆಯನ್ನು ಘೋಷಿಸಿಕೊಂಡರೆ, ಉತ್ತರದ ರಾಜಪ್ರಭುತ್ವವಾದ ನೇಪಾಲವು ಪ್ರಜಾಪ್ರಭುತ್ವ ಮಾದರಿಯತ್ತ ಒಲಿದಿರುವುದು ಮಹತ್ವದ ಸಂಗತಿ. ರಾಜ ಪ್ರಭುತ್ವಗಳ ಒಡೆಯರು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುವುದನ್ನು ಬಿಟ್ಟು ಪ್ರಜೆಗಳ ಹಿತಚಿಂತನೆಯನ್ನು ಮಾಡತೊಡಗಿದುದು ಇತಿಹಾಸದ ಪುಟಗಳಲ್ಲಿ ಮಹತ್ವಪೂರ್ಣ ಸ್ಥಾನವನ್ನು ಪಡೆಯುವುದು. ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ಜನತೆಯೇ ರಾಜಸತ್ತೆಗೆ ವಿರುದ್ಧ ಎದ್ದುನಿಂತು ಸಾಂಕುಶ ಪ್ರಭುತ್ವವನ್ನೋ ಪ್ರಜಾಪ್ರಭುತ್ವವನ್ನೋ ಸ್ಥಾಪಿಸಿಕೊಂಡಿರಬಹುದು; ಕೆಲವೊಮ್ಮೆ ಅವು ಸರ್ವಾಧಿಕಾರಿ ಪ್ರಭುತ್ವವಾಗಿಯೂ ಪರಿಣಮಿಸಿರಬಹುದು, ಆದರೆ, ನೇಪಾಲದ ಪರಿಸ್ಥಿತಿ ಇದಕ್ಕೆ ಭಿನ್ನವಾಗಿದೆ.

(೨ನೇ ಪುಟ ನೋಡಿರಿ)



ದಿಹಲಿಯ ಚಾಣಕ್ಯಪುರಿಯಲ್ಲಿನ ಅಮೇರಿಕೆಯ ರಾಯಭಾರಿ ಕಛೇರಿಯ ಉದ್ಘಾಟನೆಯ ಸಂದರ್ಭದಲ್ಲಿ ಅಮೇರಿಕೆಯ ವಿದೇಶ ರಾಯಭಾರಿ ಶ್ರೀ ಎಲ್‌ಸ್‌ವರ್ತ್ ಬಂಕರರು ಪ್ರಧಾನಿ ನೆಹರೂ ಮತ್ತು ಶ್ರೀಮತಿ ಇಂದಿರಾ ಗಾಂಧಿಯವರಿಗೆ ಈ ಭವನವನ್ನು ಪರಿಚಯ ಮಾಡಿಕೊಡುತ್ತಿರುವ ಚಿತ್ರ.

Our Humble Tributes to All
Those past and present, who
laboured to make this Bank
what it is to-day.

THE VIJAYA BANK, LTD.
(A SCHEDULED BANK)

Head Office:
"Vijaya Bank Building"
MANGALORE-3.
ESTD: 1931.

NAVAYUGA WEEKLY, UDIPI, S. India.

ಕಥಾ ವಿಹಾರ

ಬಡ ಮಾಸ್ತರರೂ ಡಾಕ್ಟರರಾದರು!

ಆಶ್ಚರ್ಯದಿಂದ ಕಣ್ಣುಬಿಟ್ಟು ಕೂರಬೇಡಿ, ಮಾಸ್ತರರ ಪರಿಶ್ರಮದ ಕಥೆ ಕೇಳಿರಿ.

"ಅಪ್ಪಾ, ಊಟಕ್ಕೆ ಬರಬೇಕಂತೆ."

"ನೀವು ಹೋಗಿ ಊಟ ಮಾಡಿ ಮಲಗಿಕೊಳ್ಳಿ."

"ಬರಲು ಹೇಳಿದಳು ಅಜ್ಜಿ."

"ನಾನಿನ್ನೂ ಮಿಂದಿಲ್ಲ. ಮಿಂದು ಸಾವಕಾಶವಾಗಿ ಬರುತ್ತೇನೆಂದು ಹೇಳು" ಎಂದರು ನಿಟ್ಟುಸಿರುಬಿಡುತ್ತಾ ಮಾಸ್ತರರು.

ಕೆಲವು ವರ್ಷಗಳ ಹಿಂದಿನ ಮಾತು. ಅಂದು ಉಪಾಧ್ಯಾಯ ರಾಮ ಭಟ್ಟರು ಸದಾ ನಗುಮೊಗದಿಂದಲೂ ಚುರುಕಾಗಿಯೂ ಇದ್ದರು. ಅಧ್ಯಾಪಕ ವೃತ್ತಿಯಿಂದ ದೊರಕುವ ಸಂಪಾದನೆಯು ಕಡಿಮೆಯಾಗಿದ್ದರೂ ಹಿರಿಯರ ಔದಾರ್ಯದಿಂದಾಗಿ ತನ್ನ ಪಾಲಿಗೆ ಬಂದ ಜಮೀನನ್ನು ಕೃಷಿ ಮಾಡುವುದರಿಂದಾಗಿ, ತಾಯಿ, ಹೆಂಡತಿ ಮತ್ತಿಬ್ಬರು ಸಹೋದರಿಯರಿಂದ ಕೂಡಿದ ಮಾಸ್ತರರ ಬಳಗವು ಸಂತೃಪ್ತಿಯನ್ನು ಕಾಣುತ್ತಿತ್ತು. ರಾಧೆಯು ಗಂಡು ಮಗುವೊಂದನ್ನು ಪಡೆದಾಗಲಂತೂ ಮಾಸ್ತರರ ಜೀವನವು ಬೇಸಿಗೆಯ ಬೆಳ್ದಿಂಗಳಂತಾಯಿತು. ರಾಧೆಯು ಮರುವರ್ಷವೂ ಹೆತ್ತಳು.. ಮತ್ತೂ, ಮತ್ತೂ; ಮಕ್ಕಳು ನಾಲ್ವರು. ಪ್ರಾಯ ಹೋದ ತಾಯಿ, ವಯಸ್ಸು ಮೀರಿ ಮೈನೆರೆದು ನಿಂತ ಸಹೋದರಿಯರು. ಜೀವನವು ಆಟ ತಿಂಗಳ ಅಮಾವಾಸ್ಯೆಯಾಗಿ ಮಾರ್ಪಟ್ಟಿತ್ತು.

ರಾಜ್ಯದ ಮಂತ್ರಿಮಂಡಲದಲ್ಲಿ ಹಲವಾರು ಬದಲಾವಣೆಗಳಾದುವು. ಎಲ್ಲಾ ರಾಜಕೀಯ ಪಕ್ಷಗಳೂ ಸರತಿಯಂತೆ ಆ ಸ್ಥಾನಕ್ಕೆ ಬಂದುಹೋದುವಲ್ಲದೆ ಒಂದೇ ಪಕ್ಷದ ಹಲವಾರು ಗುಂಪುಗಳೂ ಅಧಿಕಾರವನ್ನು ಪಡೆದೂ ಬಿಟ್ಟೂ ಆಯಿತು. ಎಲ್ಲರೂ ಅಧ್ಯಾಪಕರ ಸ್ಥಿತಿಯನ್ನು ಸುಧಾರಿಸಲು ಕೈಲಾದಷ್ಟು ಸುಧಾರಣೆಗಳನ್ನು ಮಾಡಿದರೂ ರಾಧೆಯ ಉತ್ಪಾದನಾ ಶಕ್ತಿಯ ಪ್ರಮಾಣಕ್ಕನುಸಾರವಾಗಿ ಮಾಸ್ತರರ ಸಂಪಾದನೆಯು ಹೆಚ್ಚಾಗಲಿಲ್ಲ.

ಜಿನಿಜಿನಿಯಾಗಿ ಮಳೆ ಸುರಿಯುತ್ತಿದ್ದ ಒಂದು ಸಂಜೆ ಮನಸ್ಸೂ ದೇಹವೂ ದಣಿದ ಮಾಸ್ತರರು ಮನೆಯನ್ನು ಸೇರಿದರು. ಮನೆಯ ವಾತಾವರಣವು ನಿಶ್ಶಬ್ದವಾಗಿತ್ತು. ಒಂದು ವಿಧದ ಸ್ಮಶಾನ ಶಾಂತಿಯು ಮನೆಯನ್ನು ವ್ಯಾಪಿಸಿತ್ತು. ಮಕ್ಕಳು ನಾಲ್ವರನ್ನೂ ಕಂಡಾಗ ಸ್ವಲ್ಪ ಮನಸ್ಸು ಹಗುರವಾಯಿತು. ಸಹೋದರಿಯರೂ ಕ್ಷೇಮವಾಗಿಯೇ ಕಾಣಲ್ಪಟ್ಟರು. ಹೆಂಡತಿ ರಾಧೆ....? ಅವಳು ಐದನೆಯ ಕೂಸೊಂದರಕ್ಕಾಗಿ ಮೂಲೆಯ ಕೋಣೆಯೊಂದರಲ್ಲಿ ಪ್ರಸವವೇದನೆಯನ್ನು ಅನುಭವಿಸುತ್ತಿರುವಳು. ಮಾಸ್ತರರು ಊಟಕ್ಕೆ ಕರೆಯಲು ಬಂದ ಮಕ್ಕಳನ್ನು ಕಳುಹಿಸಿಕೊಟ್ಟು ಜಗಲಿಯ ದಿಣ್ಣೆಯ ಮೇಲೆ ಕೈಯನ್ನು ತಲೆಯಡಿಗಿರಿಸಿ ಮಲಗಿಕೊಂಡರು. ಚಿಂತಿಸತೊಡಗಿದರು. ಸುತ್ತಲೂ ಕಾರ್ಗತ್ತಲೆಯು ಕವಿದಿದೆ. "ಮೂವತ್ತೆರಡು ವರ್ಷಗಳ ಕಾಲ ಈ ಮಹತ್ತಾದ ಜೀವನವನ್ನೂ ಹದಿನಾಲ್ಕು ವರ್ಷಗಳ ಕಾಲ ಈ ಪೂಜ್ಯವಾದ ಅಧ್ಯಾಪಕ ವೃತ್ತಿಯನ್ನೂ ಸಾಗಿಸಲಾಯಿತು. ಸಂಪಾದಿಸಲಾದುದು ಕೆಲವು ಸಾವಿರಗಳ ಸಾಲ ಮತ್ತು ನಾಲ್ಕು ಮಕ್ಕಳನ್ನು ಮಾತ್ರ. ಆ ಸಂಖ್ಯೆಯೂ ಇನ್ನು ಕೆಲವೇ ತಾಸುಗಳಲ್ಲಿ ಐದಾಗಲಿರುವುದು. ಮುಂದೆ ಅದು ಆರು, ಏಳು, ಎಂಟು, ಒಂಭತ್ತು ಹತ್ತನ್ನೂ ಮೀರಬಹುದು." ಅಷ್ಟರಲ್ಲಿ,

"ಇದೇನಣ್ಣಾ ಊಟ ಮಾಡಬೇಡವೇ' ಸರೋಜಿನಿಯ ಪ್ರಶ್ನೆ.

"ಹಸಿವಿಲ್ಲ"

"ಹೂಂ"

"ಅಣ್ಣಾ, ಅತ್ತಿಗೆಗೆ...."

"ಏನು ತ್ರಾಸ ಇದೆಯೇ?"

"ಡಾಕ್ಟರ್ ಶೇಖರಯ್ಯನವರನ್ನೊಮ್ಮೆ ಕರೆಯುತ್ತಿದ್ದರೆ....?"

"ಕರೆ ತರುತ್ತೇನೆ. ಸಾಧ್ಯವಾದರೆ" ಕಣ್ಣೀರ ಧಾರೆಯೊಂದಿಗೆ ಮಾಸ್ತರರ ಉತ್ತರ ಹಾಗೆಯೇ ಎದ್ದು ಮನೆಯಿಂದ ಹೊರಬಂದರು.

* * *

ಏಳು ದಿನಗಳ ಬಾಣಂತಿಯ ಮದ್ದಿನ ಕಟ್ಟಿನೊಂದಿಗೆ ಮಾಸ್ತರರು ಬರುತ್ತಿದ್ದಾಗ. ಸಂತೆಯಲ್ಲಿ ಜನರು ಕಿಕ್ಕಿರಿದು ನೆರೆದಿರುವರು. ಅಲ್ಲೇ ಪಕ್ಕದಲ್ಲಿ ಜನರ ತಂಡವೊಂದು ನೆರೆದಿದೆ. ಅದರ ನಡುವಿನಿಂದೊಂದು ಸ್ವರ; "ಅಪೂರ್ವ ಸಂಜೀವಿನಿ, ಮನುಷ್ಯನಿಗೆ ಸಾಮಾನ್ಯವಾಗಿ ಉಂಟಾಗಬಹುದಾದ ಎಲ್ಲಾ ರೋಗಗಳಿಗೂ ಪ್ರಯೋಗಿಸಬಲ್ಲ ಏಕಮಾತ್ರ ದಿವ್ಯೌಷಧಿ." ದಿನದ ಕೆಲಸ ಮುಗಿಸಿ ಮನೆಗೆ ಹೋಗುವ ಕೂಲಿಕಾರರು, ಸಂತೆಗೆ ತರಕಾರಿ ಕೊಳ್ಳಲು ಬಂದ "ಊರ ಮಹನೀಯರು"- ಇವರೆಲ್ಲರೂ ಕಿಸೆಯಿಂದ ಹಣ ತೆತ್ತು ಮದ್ದಿನ ಪ್ಯಾಕೇಟುಗಳನ್ನು ಕೊಂಡುಕೊಳ್ಳುತ್ತಿದ್ದರು. ಮಾಸ್ತರರ ಕೈಯೂ ಕಿಸೆಯೊಳಗೆ ಹೋಯಿತು. ಉಳಿದಿದ್ದ ನಾಲ್ಕಾಣೆ ಪಾವಲಿಯೊಂದಿಗೆ ಹೊರಬಂತು. ಅವರೂ ಕೊಂಡರು ಪ್ಯಾಕೇಟೊಂದನ್ನು. ಔಷಧದ ಮೇಲಿನ ವಿಶ್ವಾಸದಿಂದಲ್ಲ, ಜೀವನ ಸಂಗ್ರಾಮದಲ್ಲಿ ಅಸಹಾಯನಾಗಿ ಹೋರಾಡುವ ಮಾಸ್ತರರಂತಹ ಮಾನವನೊಬ್ಬನಿಗೆ ಜೀವಿಸುವುದಕ್ಕಾಗಿ ತಾನು ಮಾಡಬಹುದಾದ ಒಂದು ಅಲ್ಪ ಸಹಾಯವೆಂಬ ಕೃತಾರ್ಥತೆಯಿಂದ ಮಾತ್ರ.

ಅಂದು ರಾತ್ರೆ ಸುಮಾರು ಗಂಟೆ ಹನ್ನೆರಡಾಗಿರಬಹುದು ಮಾಸ್ತರರು ಕೂತು ಶ್ರದ್ಧಾಪೂರ್ವಕ ಬರೆಯುತ್ತಿರುವರು. ಏನೋ ಒಂದು ಬಗೆಯ ಉತ್ಸಾಹ ಅವರಿಗೆ ಅದನ್ನು ಬರೆಯುವುದರಲ್ಲಿ.

ಆ ಪ್ರಕಟಣೆಯು ಪತ್ರಿಕೆಯಲ್ಲಿ ಬಂದ ದಿನ ಮಾಸ್ತರರ ಉತ್ಸಾಹಕ್ಕೆಣೆಯಿರಲಿಲ್ಲ. 'ಡಾಕ್ಟರ್ ಆರ್. ಬಿ. ಹೇಟ್'ರವರ ದಿವ್ಯೌಷಧ. "ಸೌಭಾಗ್ಯ ಸಂಜೀವಿನಿ"ಯು ಹಲವಾರು ವರ್ಷಗಳ ಅವರ ವೈದ್ಯಕೀಯ ಅನುಭವದ ಉತ್ತಮ ಫಲವಾಗಿದೆ. ವಾತ, ಪಿತ್ಥ, ಸಿಹಿಮೂತ್ರ, ಪ್ರಮೇಹ ಮೊದಲಾದ ಮಹಾರೋಗಗಳಿಗೆ ರಾಮಬಾಣ. ಕೇವಲ ಹನ್ನೆರಡು ದಿನಗಳಲ್ಲಿ ರೋಗ ವಾಸಿಯಾಗುವುದು. ಒಮ್ಮೆ ಪ್ರಯೋಗಿಸಿ ನೋಡಿರಿ ಬೆಲೆ ರೂ. 2-50 ಮಾತ್ರ. ವಿಳಾಸ ಡಾ| ಆರ್.ಬಿ. ಹೇಟ್, ಕೋಣೆ ಮೂಲೆ. P. O"

ಒಂದು, ಎರಡು, ಮೂರು, ನಾಲ್ಕು- ಏಳು ದಿನಗಳು ಕಳೆದುವು. ಪ್ರತಿ ದಿನವೂ ಪತ್ರಿಕೆಯ ಮೊದಲನೆಯ ಪುಟದಲ್ಲಿ ಕಣ್ಣು ಕುಕ್ಕುವ ದಪ್ಪವಾದ ಅಕ್ಷರಗಳಲ್ಲಿ ಪ್ರಕಟಣೆಯು ಕಂಡುಬರುತ್ತಿತ್ತು. ಡಾ. ಹೇಟ್'ರ ವಿಳಾಸಕ್ಕೆ ಕೋಣೆಮೂಲೆ ಅಂಚೆಕಟ್ಟೆಯಲ್ಲಿ ಪತ್ರಗಳೊಂದೂ ಬಂದುದು ಕಾಣಲಿಲ್ಲ. ಮಾಸ್ತರರ ಉತ್ಸಾಹವು ಕ್ಷಯಿಸತೊಡಗಿತು. ಯಾವ ಮಹಾ ನಿರೀಕ್ಷೆಯಿಂದ ಮಾಸ್ತರರು ಪ್ರೊವಿಡೆಂಟ್ ಫಂಡಿನಿಂದ ಹೆಂಡತಿಯ ಬಾಣಂತಿತನದ ನೆವದಿಂದ ಪಡೆದ ಇನ್ನೂರು ರೂಪಾಯಿಗಳ ಸಾಲದ ಹಣವನ್ನು ಪ್ರಕಟಣೆಗಾಗಿ ವಿನಿಯೋಗಿಸಿದ್ದರೋ ಆ ತನ್ನ ಕನಸಿನ ಮಹಲು ಒಮ್ಮಿಂದೊಮ್ಮೆಗೆ ಕುಸಿದು ಬೀಳುವುದು ಅವರ ಮನಸ್ಸಿನ ಸ್ವಸ್ಥತೆಯನ್ನು ಕೆಡಿಸಿತು. ಸಾಲಿಗರ ಉಪಟಳದಿಂದ ತಲೆ ಹೊರ ಹಾಕುವುದು ಅಸಾಧ್ಯವಾಯಿತು. ದಿನಕ್ಕೊಮ್ಮೆ ಅಂಚೆ ಜವಾನ ಅಣ್ಣಪ್ಪನನ್ನು ಮಾತ್ರ ಗುಟ್ಟಾಗಿ ಕಾಣದೆ ನಿರ್ವಾಹವಿರಲಿಲ್ಲ. ಬೇಸಿಗೆಯ ರಜಾಕಾಲವಾದುದರಿಂದ ಶಾಲೆಗೂ ಹೋಗಬೇಕೆಂದಿರಲಿಲ್ಲ. ಹೀಗೆಯೇ ಕಳೆದುವು ದಿನಗಳು ಹದಿನೈದು.

ಒಂದು ದಿನ ಅಂಚೆ ಜವಾನನನ್ನು ಭೇಟಿಯಾಗಿ ಹಿಂದಿರುಗುವಾಗ ಮಾಸ್ತರರ ಕೈಯಲ್ಲಿ ಕೆಲವು ಕಾಗದದ ಕಟ್ಟುಗಳೂ ಒಂದೆರಡು ಖಾಲಿ ಬಾಟ್ಲಿಗಳೂ ಇರುವುದನ್ನು ಕಂಡ ಮನೆಯವರು ಬೆರಗಾದರು. ಇತ್ತೀಚೆಗೆ ಕೆಲವು ದಿನಗಳಿಂದ ಮೂಕತೆಯನ್ನವಲಂಬಿಸಿ 'ಮೂಲೆಯ ಕೋಣೆ'ಯಲ್ಲಿ ಬಾಗಿಲು ಹಾಕಿ ಚಿಂತಿಸುತ್ತ ಕುಳಿತಿರುತಿದ್ದ ಮಾಸ್ತರರ ಪ್ರಕೃತಿಯನ್ನು ಕಂಡ ಅವರ ತಾಯಿ, ಸಹೋದರಿಯರೂ ಹೆಂಡತಿ ಮಕ್ಕಳೂ ಭಯಭೀತರಾಗಿದ್ದರು. ಮಾತೆತ್ತಿದರೆ ಕೋಪಗೊಳ್ಳುವುದಂತೂ ಈಗವರ ಅಭ್ಯಾಸವಾಗಿರುವುದರಿಂದ ಅವರನ್ನು ವಿಚಾರಿಸುವ ಗೊಡವೆಗೆ ಯಾರೂ ಹೋಗುತ್ತಿರಲಿಲ್ಲ. ಮಾಸ್ತರರು ನೇರವಾಗಿ ಹೋದುದು ಅಡಿಗೆ ಕೋಣೆಗೆ. ಅಲ್ಲಿದ್ದ ತನ್ನ ಸಹೋದರಿಯನ್ನು ಕರೆದು ಕಿವಿಯಲ್ಲಿ ಏನನ್ನೋ ಹೇಳಿದ ಬಳಿಕ ಬಾಗಿಲು ಮುಚ್ಚಿಕೊಂಡರು. ತಾವು ತಂದಿದ್ದ ಔಷಧಿಯಿಂದ ಕಷಾಯವೊಂದನ್ನು ತಯಾರಿಸಿ ಎರಡು ಬಾಟ್ಲಿಗಳನ್ನು ತುಂಬಿಸಿ ಹೊರಬಂದ ಮಾಸ್ತರರನ್ನು ಕಂಡು ಅವರ ಬಳಗಕ್ಕೆ ಆಶ್ಚರ್ಯವಾಗದಿರಲಿಲ್ಲ.

ದಿನಗಳು ಹಾಗೆಯೇ ಉರುಳಿದುವು. ಮಾಸ್ತರರ ಆರ್ಥಿಕ ಸ್ಥಿತಿ ತನ್ನಿಂದ ತಾನಾಗಿ ಸುಧಾರಿಸಿತು. ತನ್ನ ಹೊಸ ಉದ್ಯಮದಲ್ಲಿ ಪ್ರಗತಿಯನ್ನು ಕಂಡು ಅವರಿಗೆ ಸಂತೋಷವೇನೂ ಉಂಟಾಯಿತಾದರೂ ಸಂಶಯವೂ ಹೆಚ್ಚಿತು. ಆ ಒಂದು ದಿನ ತನ್ನ ಪ್ರಥಮ ರೋಗಿಯ ಪತ್ರವೊಂದು ಕೈಸೇರಿದಾಗ, ಅವರೆದೆ ಬಡಿತದ ವೇಗ

(೧೧ನೇ ಪುಟ ನೋಡಿರಿ)

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ
ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

Quality Air Cushion
Rubber Stamps
Crown
RUBBER STAMP CO.
PHONE 203
ESTD 1927
BALMATTA ROAD, MANGALORE

ಕ್ರೀಡಾಂಗಣ

ನಿಮ್ಮ ಮೆಚ್ಚಿನ, ಇಂಗ್ಲೆಂಡದ ರಾಷ್ಟ್ರೀಯ ಕ್ರೀಡೆ-ಕ್ರಿಕೆಟ್

ಭಾರತದಲ್ಲಿ ಅದರ ಜನ್ಮ ಮತ್ತು ಬೆಳವಣಿಗೆ ಜತೆಗೆ ಸಾಹಸವೂ ಅತ್ಯದ್ಭುತ!

ಮಾನವನು ತನ್ನ ದೇಹದಾರ್ಢ್ಯವನ್ನು ರಕ್ಷಿಸಿ ಮುನ್ನಡೆಯಬೇಕಾದರೆ, ಅವನಿಗೆ ವ್ಯಾಯಾಮದ ಆವಶ್ಯಕತೆಯಿದೆ ಎಂದು ಎಲ್ಲರೂ ತಿಳಿದಿದ್ದಾರೆ. ಈ ವ್ಯಾಯಾಮವು ಮಾನಸಿಕವಾಗಿಯೂ ಶಾರೀರಿಕವಾಗಿಯೂ ಇರುವುದು. ಮುಖ್ಯವಾಗಿ ಮಾನಸಿಕವಾಗಿ ಯಾವ ಚಿಂತೆಯೂ ಇಲ್ಲದೆ, ಶಾರೀರಿಕ ವ್ಯಾಯಾಮವನ್ನು ಮಾಡದೆ ಹೋದರೆ, ಇದರಿಂದ ದೇಹವು ಸಾಕಷ್ಟು ಬೆಳೆಯಲಾರದು. 'ಚಿಂತೆಯೇ ಮುಪ್ಪು, ಸಂತೋಷವೇ ಯೌವನ" ಎಂಬ ನಾಣ್ಣುಡಿಯಿದೆ. ಕ್ರೀಡಾಂಗಣದಲ್ಲಿ ನಾವು ಆಡುತ್ತಿರುವಾಗ, ನಮ್ಮ ದುಃಖಗಳೆಲ್ಲಾ ಬದಿಗಿಟ್ಟೇ ಬಂದು ಸೇರುತ್ತೇವೆ. ಈ ವ್ಯಾಯಾಮದಲ್ಲಿ ಅಂಗಾಂಗ ಚಲನೆ ಮಾತ್ರದ ಅಭ್ಯಾಸ ಹಾಗೂ ಓಟಾದಿ ಮತ್ತು ಆಟಗಳೂ ಸೇರುತ್ತವೆ. ಆಟವೆಂಬುದು ಪಾಠಕ್ಕಿಂತಲೂ ಮಕ್ಕಳ ಮನಸ್ಸೆಳೆಯುವ ಸಾಧನವಾಗಿದೆ. ಬೇರೆ ಬೇರೆಡೆಯಲ್ಲಿ ಮ್ಯಾಚುಗಳು ನಡೆಯುತ್ತಿರುವಾಗ, ಅವುಗಳ ಪರಿಣಾಮ ತಿಳಿಯುವ ಕುತೂಹಲ ಎಷ್ಟು ಜನರಿಗಿಲ್ಲ? ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮ್ಯಾಚುಗಳಾದರೆ, ಅವುಗಳ "ಕಮೆಂಟ್ರಿ" ಕೇಳಲು "ರೇಡಿಯೋ" ಆಲಿಸುವವರ ಸಂಖ್ಯೆಯೇನು ಕಡಿಮೆಯೆ?

ಬ್ರಿಟಿಷ ಆಡಳಿತೆಯು ಪ್ರಾರಂಭವಾದಂದಿನಿಂದ, ಅದು ವರೆಗೆ ಭಾರತದಲ್ಲಿ ಪ್ರಚಲಿತವಿದ್ದ ಭಾರತೀಯ ಕ್ರೀಡೆಗಳು ಮೂಲೆ ಪಾಲಾಗಿ, ವಿವಿಧ ಪಾಶ್ಚಾತ್ಯ ಕ್ರೀಡಗಳು ಜನಪ್ರಿಯವಾಗ ತೊಡಗಿದುವು, ಹೀಗೆ ಜನಮನಾಕರ್ಷಕವಾದ ಆಟಗಳಲ್ಲಿ "ಕ್ರಿಕೆಟ್" ಒಂದಾಗಿದ್ದು, ಎಲ್ಲ ಶಾಲೆ ಕಾಲೇಜುಗಳಲ್ಲಿ ಇದ ಶಾಸ್ತ್ರೀಯವಾಗಿ ಈಗ ಕಲಿಸಲ್ಪಡುತ್ತದೆ.

ಕ್ರಿಕೆಟ್ ಇಂಗ್ಲೆಂಡಿನ ರಾಷ್ಟ್ರೀಯ ಕ್ರೀಡೆ. ಚೆಂಡು ಮತ್ತು ಚಪ್ಪಟೆ ಕೋಲು (ಬೇಟ್)ಗಳ ಸಹಾಯದಿಂದದಿಂದ ಎರಡು ಪಂಗಡಗಳ ನಡುವೆ ಆಡಲ್ಪಡುವ ಆಟವಿದು. ಪ್ರತಿ ಸಂಗಡದಲ್ಲಿಯೂ ೧೧ ಆಟಗಾರರಿರುತ್ತಾರೆ ಆಡುವ ಮೈದಾನವು ೫೦೫ ಅಡಿ ಅಗಲ ಮತ್ತು ೫೫೦ ಅಡಿ ಉದ್ದವಿದ್ದು, ಈ ವಿಸ್ತೀರ್ಣದಲ್ಲಿ ಸಣ್ಣ ಮಟ್ಟದ ಹುಲ್ಲು ಬೆಳೆದಿರುವುದು ಕ್ಷೇಮಕರ.

ಕ್ರಿಕೆಟನ್ನು ಇಂಗ್ಲೆಂಡಿನಲ್ಲಿ ಮಧ್ಯಕಾಲೀನ ಯುಗದಿಂದಲೂ ಆಡುತ್ತಿದ್ದಾರೆ. 'ಲಂಡನ್ ಕ್ರಿಕೆಟ್ ಕ್ಲಬ್" ಎಂಬುದು ೧೭೪೪ರಲ್ಲಿ ಈ ಆಟದ ಅಧಿಕೃತ ನಿಯಮಗಳನ್ನು ಮೊದಲ ಬಾರಿಗೆ ರಚಿಸಿತು. ಈ ಆಟದ ಸಂಚಾಲನೆಯನ್ನು 'ಮೇರಿಲ್ ಬೋನ್ ಕ್ರಿಕೆಟ್ ಕ್ಲಬ್" ಮಾಡುತ್ತಿದೆ

ಈ ಕ್ರೀಡೆಯು ಭಾರತದಲ್ಲಿ ಎಂದು ಪ್ರಾರಂಭವಾಯಿತೆಂಬುದಕ್ಕೆ ಅಧಿಕೃತ ಆಧಾರಗಳು ದೊರೆತಿಲ್ಲ. "ಕಲಕತ್ತಾ ಕ್ರಿಕೆಟ್ ಕ್ಲಬ್" ೧೭೯೨ರಲ್ಲಿ ಸ್ಥಾಪನೆಯಾಗಿತ್ತು. ಆದರೆ, ಇದರ ಸದಸ್ಯರೆಲ್ಲರೂ ಯುರೋಪಿಯನರೇ ಆಗಿದ್ದರು. ಇದಕ್ಕಿಂತ ಮೊದಲೇ ಈ ಯುರೋಪಿಯನರು ಭಾರತದಲ್ಲಿ ಕ್ರಿಕೆಟ್ ಆಡಿರಬಹುದು. ಆದರೂ ಬ್ರಿಟಿಷ 'ಯೂನಿಯನ್ ಜಾಕ್" ಧ್ವಜವು ಇಲ್ಲಿ ಹಾರಾಡತೊಡಗಿದ ನಂತರವೇ ಭಾರತದಲ್ಲಿ "ಕ್ರಿಕೆಟ್" ಆಟವು ಪಾದಾರ್ಪಣ ಮಾಡಿತೆಂಬುದಂತೂ ಸತ್ಯ. ಇಂದಿಗೂ ಕೆಲವು ಕಟ್ಟಾ ದೇಶಪ್ರೇಮಿಗಳು ಇದನ್ನು ದಾಸ್ಯದ ಸ್ಮಾರಕವೆಂದು ಕರೆದು, ಈ ಆಟದ ವಿರುದ್ಧ ಚಳವಳಿಯೆಬ್ಬಿಸುತ್ತಿದ್ದಾರೆ

೧೮೪೮ರಲ್ಲಿ ಪಾರ್ಸಿಯರು ಕ್ರಿಕೆಟನ್ನು ಕಲಿತು, ಬೊಂಬಾಯಿಯಲ್ಲಿ ಓರಿಯಂಟಲ್ ಕ್ಲಬ್ಬನ್ನು ಸ್ಥಾಪಿಸಿಕೊಂಡರು. ಆದುದರಿಂದ ಭಾರತೀಯ ಕ್ರಿಕೆಟ್ ಬೊಂಬಾಯಿಯಲ್ಲಿ ಜನ್ಮಿಸಿತು ಎನ್ನಬಹುದು. ಏಕೆಂದರೆ, ಈ ಕ್ಲಬ್ಬು, ಭಾರತೀಯರಿಂದಲೇ ಸ್ಥಾಪಿಸಲ್ಪಟ್ಟದ್ದು. ಅನೇಕ ಭಾರತೀಯರ ಬೆಂಬಲದಿಂದ ಮೂರೇ ವರ್ಷದೊಳಗೆ ಎರಡು ಬಾರಿ ಇಂಗ್ಲೆಂಡಿನೊಡನೆ ಸ್ಪರ್ಧಿಸಲು ತನ್ನ ಪಂಗಡವನ್ನು ಈ ಕ್ಲಬ್ಬು ಕಳಿಸಿತು! ಕಳೆದ ಶತಮಾನದ ಉತ್ತರಾರ್ಧದಲ್ಲಿ ಇಗ್ಲೆಂಡಿನವರೇ ಭಾರತ ಯಾತ್ರೆಯನ್ನು ಮಾಡಿದರು.

ಕೆಲ ಸಮಯದ ನಂತರ, ಒರ್ವ ಭಾರತೀಯ ರಾಜಕುಮಾರನಾದ ಶ್ರೀ ರಣಜಿತಸಿಂಹನು ಕ್ರಿಕೆಟ್ ಆಟದಲ್ಲಿ ಅಭಿರುಚಿ ತೋರಿಸಿದನು ಅವನಿಗೋಸ್ಕರ, 'ಲಾರ್ಡ್ಸ್ ಗ್ರೌಂಡ್" ಭವನದ ಮೈದಾನದ ನಿರ್ಮಾಣವಾಯಿತು. ಅವನು ಕ್ರಿಕೆಟ್ ಪ್ರೇಮಿಗಳ "ಬಾದಶಹ"ನಾದನು, ಈ ಕ್ರೀಡಾಪಟುವನ್ನು ಉಳಿದವರು 'ರಣಜೀ' ಎಂದು ಆದರಿಸಿ ಕರೆಯುತ್ತಿದ್ದರು

ಕೆಲವು ವರ್ಷ ಕಳೆದಾಗ, ರಣಜಿತಸಿಂಹನ ಭಾವ ಮತ್ತು ಪಟೋಡದ ನವಾಬರು ಕುಶಲ ಕ್ರೀಡಾಪಟುಗಳಾದರು. ಒಂದು ಬಾರಿ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗಳ ನಡುವೆ ಸ್ಪರ್ಧೆ ಬಿದ್ದಾಗ, ಇವರಿಬ್ಬರೂ ಇಂಗ್ಲೆಂಡಿನ ಕಡೆಯಿಂದ ಆಡಿ, ಶತಕ'ಗಳನ್ನು ಗಳಿಸಿ ದಿಗ್ವಿಜಯಗೈದರು!

೧೯೧೧ರಲ್ಲಿ ಪಟಿಯಾಲದ ಮಹಾರಾಜರ ನೇತೃತ್ವದಲ್ಲಿ ಒಂದು ದಳವು ಇಂಗ್ಲೆಂಡಿಗೆ ಹೋಯಿತು. ಆಂಗ್ಲೇಯರು ಈ ದಳವು "ರಣಜೀ"ಯ ದೇಶ ಭಾರತದಿಂದ ಬಂದುದರಿಂದ ಮೊದಲು ಸ್ವಲ್ಪ ಹೆದರಿ ಹೋದರು; ಆದರೆ, ಈ ದಳವು ಅಲ್ಲಿ ೧೫ ಮ್ಯಾಚ್‌ಗಳಲ್ಲಿ ಸೋಲುಂಡು ೬ರಲ್ಲಿ ಮಾತ್ರ ಜಯಶೀಲವಾಯಿತು ಆದರೂ ಇದರಿಂದ ಭಾರತದಲ್ಲಿ ಕ್ರಿಕೆಟ್‌ನ ಅಸ್ತಿವಾರವು ಮತ್ತಷ್ಟು ದೃಢವಾಗಿ, ಪ್ರಗತಿಪಥವನ್ನೆ ನಡೆಯತೊಡಗಿತು.

೧೯೨೬-೨೭ರಲ್ಲಿ ಪ್ರಸಿದ್ಧ ಮತ್ತು ಚತುರ ಕ್ರೀಡಾಪಟುಗಳಿರುವ ದಳವೊಂದು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂ. ಸಿ. ಸಿ.)ನಿಂದ ಭಾರತಕ್ಕೆ ಕಳುಹಿಸಿಕೊಡಲ್ಪಟ್ಟಿತು. ಇವರಿಲ್ಲಿ ೩೪ ಮ್ಯಾಚುಗಳನ್ನು ಆಡಿ, ಅವುಗಳಲ್ಲಿ ಕೇವಲ ೧೦ರಲ್ಲಿ ಗೆದ್ದು, ಉಳಿದವುಗಳಲ್ಲಿ ಸೋತು ಸ್ವದೇಶಕ್ಕೆ ಹಿಂದಿರುಗಿದರು. ಈ ಸಂದರ್ಭದ ಆಟಗಳಲ್ಲಿ ಶ್ರೀ ಸಿ. ಕೆ. ನಾಯುಡುರವರು ನೋಡುವವರಿಗೆ ತನ್ನ ಆಶ್ಚರ್ಯಜನಕ ಕ್ರೀಡಾವಿಧಾನವನ್ನು ತೋರಿಸಿಕೊಟ್ಟರು.

ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ೧೯೨೮ ಮಹತ್ವದ ವರ್ಷವಾಗಿದೆ ಆ ವರ್ಷ ಶ್ರೀ ಎ ಎಸ್. ಡಿಮೆಲ್ಲೊ ಮತ್ತು ಶ್ರೀ ಆರ್. ಇ ಗ್ರಾಂಡ್‌ಗೋವನ್‌ರ ಪರಿಶ್ರಮದಿಂದ 'ಭಾರತೀಯ ಕ್ರಿಕೆಟ್ ಕಂಟ್ರೋಲ್ ಬೋರ್ಡ್" ಸ್ಥಾಪಿತವಾಯಿತು. ಆ ವರ್ಷವೇ ಭಾರತವು "ಇಂಪೀರಿಯಲ್ ಟೆಸ್ಟ್ ಕಾನ್‌ಫರೆನ್ಸ್" ನಿಂದ ಮಾನ್ಯತೆಯನ್ನು ಪಡೆದುದರಿಂದ ಅದಕ್ಕೆ 'ಟೆಸ್ಟ್'ಸ್ತರವು ಪ್ರಾಪ್ತವಾಯಿತು.

ಎಂ. ಸಿ. ಸಿ ಯ ಕಾರ್ಯಾಲಯದ ಸಂಗ್ರಹಾಲಯದಲ್ಲಿ ಕ್ರಿಕೆಟ್‌ಗೆ ಸಂಬಂಧಿಸಿದ ಅನೇಕ ಐತಿಹಾಸಿಕ ಚಿತ್ರ ಮತ್ತು ಪುಸ್ತಕಗಳಿವೆ. ಕ್ರಿಕೆಟ್ ಆಟದ ಕುರಿತಾದ ಸುಮಾರು ಆರು ಸಾವಿರ ಪುಸ್ತಕಗಳಿವೆಯಂತೆ' ಇವುಗಳಲ್ಲಿ 'ಭಾರತದಲ್ಲಿ ಕ್ರಿಕೆಟ್‌ನ ವಿಕಾಸದ ಕುರಿತಾಗಿಯೂ ಬರೆದ ಕೆಲವಾದರೂ ಪುಸ್ತಕಗಳಿಲ್ಲದೆ ಹೋದೀತೆ?

(ಸಂಗ್ರಹಿತ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: ಮಾರ್ಚ 12, 1906)
ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಅನುಭವಾಮೃತ

ಶಾಂತಿ-ಹರಕೆಗಳಲ್ಲಿ ನಿಮಗೆ ವಿಶ್ವಾಸವಿದೆಯೆ?

ಅಂಧವಿಶ್ವಾಸವನ್ನು ದೂರೀಕರಿಸುವುದು ಅತ್ಯಂತಾವಶ್ಯಕವಲ್ಲವೆ?

ನಮ್ಮ ಹೈಸ್ಕೂಲು ವಾರ್ಷಿಕ ಪರೀಕ್ಷೆ ಕಳೆದ ನಂತರ ರಜೆಯಲ್ಲಿ ಅಕ್ಕನ ಮನೆಗೆ ಹೊರಟೆ. ೩೦ ಮೈಲಿಯ ಪ್ರವಾಸದಿಂದಲೋ ಅಥವಾ ಹವಾಮಾನದ ಬದಲಾವಣೆಯಿಂದಲೋ ಅಲ್ಲಿಗೆ ತಲ್ಪಿದ ಮರುದಿನವೇ ನನಗೆ ಜ್ವರ ಬಂದು ಹಾಸಿಗೆ ಹಿಡಿದೆ. ಅದೊಂದು ಹಳ್ಳಿ ಸ್ಥಳ. ಅಲ್ಲಿಯ ಜನರೂ ಸಹ ಹುಂಭ ಜನರು—ನನ್ನಕ್ಕನ ಮನೆಯವರಂತೂ—ಎಲ್ಲಿಯೋ ಅಂಜಿರಬೇಕು! ಗಾಡಿಗನನ್ನು ಕರೆಯಿಸಿ "ನೋಟ" ನೋಡಿಸುವದೆಂದು ತೀರ್ಮಾನಿಸಿದರು! ಸರಿ ಅವರ ಮಾತನ್ನು ಧಿಕ್ಕರಿಸುವ ಧೈರ್ಯ ಆ ಮನೆಯಲ್ಲಿ ಯಾರಿಗೂ ಇರಲಿಲ್ಲ. ಭಾವಯ್ಯನೂ ಸುಮ್ಮನಾದ. ನಾನು ಮೈಕಾಯ್ದು ಮಲಗಿ ಬಿಟ್ಟಿದ್ದೆ—

ಆ ರಾತ್ರಿ-ಗಾಡಿಗನೊಬ್ಬನು ಬಂದು "ನೋಟ" ನೋಡಿದ್ದಾಯಿತು ನಾಲ್ಕಾರು ಸಲ ನೆಲ ಬಡಿದು ಎಸೆ ಬಡಿದುದಾದ ನಂತರ-೪-೫ ಬಾರಿ ಕೂಗಿ ತನ್ನ ನಿರ್ಣಯ ಹೇಳಿದ! "ಗಂಡುಗೋಲಿ"ಯೊಂದು ಕೇತು ರಾಹುವಿನೊಡನೆ ಸೇರಿ ನಿನ್ನೆಯಿಂದ ಉಪದ್ರವ ಕೊಡುತ್ತಿದೆ ಕೋಳಿಯೊಂದನ್ನು ರಾಹುವಿಗೆ ಕೂಡಲೇ ಕೊಟ್ಟಲ್ಲಿ ನಸುಕು ಹರಿಯುವದರೊಳಗೆ "ಸಣ್ಣೊಡೆಯರ"ನ್ನು (ನನಗೆ "ಸಣ್ಣ-ಒಡೆಯ"ರೆಂದು ಕರೆಯುತ್ತಿದ್ದರು) "ಬಿಟ್ಟು ತೆರಳುವೆನೆಂದು ಹೇಳುತ್ತಿದೆ". ಸರಿ ಸಮೀಪದಲ್ಲೆಂದೊಂದು ಕೋಳಿಯನ್ನೂ ತಂದು ಕೊಟ್ಟದ್ದಾಯಿತು. ಗಾಡಿಗನು ಕೋಳಿಯ ಕುತ್ತಿಗೆ ಮುರಿದು ಇನ್ನೆರಡು ಬಾರಿ ಕೂಗಿ ಗಟಗಟ ರಕ್ತ ಕುಡಿದುದೂ ಆಯಿತು—ಅಯ್ಯೋ!! ಪ್ರಾರಬ್ಧವೇ ನನ್ನ ಶರೀರ ಪ್ರಕೃತಿ, ಹವಾಮಾನ—ಪ್ರವಾಸದಿಂದಾಗಿ ಬಂದ ಜ್ವರಕ್ಕೆ ನಿರುಪದ್ರವಿ ಪ್ರಾಣಿಯೊಂದರ ಬಲಿದಾನವೇ!! ಆದರೆ ನನ್ನನ್ನು ಕೇಳುವವರಾರು!!

ಮರುದಿನವೂ ಆಯಿತು!' ನಾಲ್ಕು ದಿನ ಕಳೆದರೂ ನನ್ನ ಜ್ವರ ಒಂದೇ ರೀತಿಯಲ್ಲಿತ್ತು!! ನನಗೆ ಅನ್ನದ ರುಚಿ ಪೂರಾ ಕೆಟ್ಟುಹೋಗಿತ್ತು!! ಅದೇನೋ ಪಥ್ಯದಿಂದ ಇದ್ದೆ—ನಾಲ್ಕು ದಿನವಾದರೂ ಕಡಿಮೆಯಾಗದ ಸೀಕೆಂದು ಮನೆಗೆ ಸುದ್ದಿ ಮುಟ್ಟಿದಕೂಡಲೇ ತಂದೆಯವರೂ ಬಂದರು!! ನಾನು ಮನೆಗೆ ಸುದ್ದಿ ತಿಳಿಸಬಾರದೆಂದಿದ್ದರೂ ಅಕ್ಕನವರು ತಿಳಿಸಿದ್ದರು. ತಂದೆಯವರು ಬಂದೊಡನೆ ಅವರೂ ಸಹ ಆ ಹಳ್ಳಿಯ ಜನದಂತೆ ಆಗಿಬಿಟ್ಟರು. ಆ ಊರಿನ ದೇವಾಲಯದಲ್ಲಿ ಒಂದು ಹರಕೆ ಹಾಕಿ ಕೊಂಡರು ಎರಡು ದಿನದಲ್ಲಿ ನನಗೆ ಸೀಕು ಗುಣವಾಗಬೇಕೆಂಬುದೇ ಶರ್ತ—ಮೂರನೇ ದಿನ ಹರಕೆ ನಡೆದುಕೊಳ್ಳುವುದಾಗಿ ನಿರ್ಣಯವಾಗಿತ್ತು! ನಾನೆಂದೆ "ಏನಪ್ಪಾ ಇದು. ಕೆಟ್ಟ ದೇವನಿಗೆ ಕಾಯ್ದು ಕೊಡಲು ತಿಳಿಯದೇ? ಆ ಬಗ್ಗೆ ಹರಕೆ ಬೇರೆ "ಲಂಚ" ಬೇಕ! ತಂದೆಯ

(೧೦ನೇ ಪುಟ ನೋಡಿರಿ)

ಪಿಸುನುಡಿ

(೧ನೇ ಪುಟದಿಂದ)

ತನಗಿಂತಲೂ ತನ್ನ ಉತ್ಕರ್ಷಕ್ಕಿಂತಲೂ ತನ್ನ ಪ್ರಜಾಜನಹಿತವೇ ಪ್ರಧಾನವೆಂದು ಮನಗಂಡು ನೇಪಾಲದ ರಾಜರಾದ ಮಹೇಂದ್ರರು ತನ್ನ ದೇಶಕ್ಕೊಂದು ಪ್ರಜಾಪ್ರಭುತ್ವ ಮಾದರಿಯ ಘಟನೆಯನ್ನು ಘೋಷಿಸಿದ್ದಾರೆ. ಇದರನ್ವಯ ವಯಸ್ಕರ ಮತದಾನ ಪದ್ಧತಿಯಿಂದ ಆರಿಸಲಾದ ೧೦೯ ಸದಸ್ಯರಿರುವ ಒಂದು ಸಾಮಾನ್ಯ ಸಭೆಯು ಜನತೆಯನ್ನು ಪ್ರತಿನಿಧೀಕರಿಸುತ್ತದೆ. ೧೪ ಸದಸ್ಯರಿಗೆ ಮೀರದಂತೆ ಸದಸ್ಯರುಳ್ಳ ಒಂದು ಮಂತ್ರಿ ಸಂಪುಟವು ಈ ಸಭೆಗೆ ಉತ್ತರದಾಯಿಯಾಗಿ, ರಾಜ್ಯ ಸೂತ್ರಗಳನ್ನು ನೋಡಿಕೊಳ್ಳುವುದು. ಈ ಸಭೆಯ ನಾಯಕನೇ ಪ್ರಧಾನಿಯಾಗಿದ್ದು, ಅವನನ್ನು ರಾಜರು ನಾಮಕರಣ ಮಾಡುವರು. ಆದರೆ, ಅವನು ಬಹುಮತ ಸದಸ್ಯರ ಬೆಂಬಲವನ್ನು ಪಡೆದಿರಬೇಕು; ಮಂತ್ರಿಗಳನ್ನು ಆತನೇ ಆರಿಸುವನು.

ಈ ಸಾಮಾನ್ಯ ಸಭೆಯಿಂದ ಆರಿಸಲ್ಪಟ್ಟ ೧೮ ಜನ ಸದಸ್ಯರು ಮತ್ತು ಮಹಾರಾಜರಿಂದ ನಿರ್ದೇಶಿಸಲ್ಪಟ್ಟ ೧೮ ಜನರುಳ್ಳ ಒಟ್ಟು ೩೬ ಸದಸ್ಯರ ಪ್ರೀವಿ ಕೌನ್ಸಿಲ್ ಒಂದು ಸ್ಥಾಪಿತವಾಗುವುದು. ವಿಶೇಷ ಸಂದರ್ಭಗಳನ್ನು ಬಿಟ್ಟು, ಉಳಿದ ಹೆಚ್ಚಿನ ಸಂದರ್ಭಗಳಲ್ಲಿ ಸಾಮಾನ್ಯ ಸಭೆಗೆ ಅಧಿಕಾರವು ಹೆಚ್ಚಾಗಿರುವುದು. ಘಟನೆಗೆ ತಿದ್ದುಪಡಿಯಾಗಬೇಕಾದರೆ, ಎರಡು ಸಭೆಗಳಲ್ಲೂ ಮೂರರಲ್ಲೆರಡಂಶ ಮತ ದೊರೆಯಬೇಕು. ಅಲ್ಲದೆ ಇದಕ್ಕೂ ಇನ್ನಿತರ ಕಾಯದೆ ಕಾನೂನುಗಳಿಗೂ ರಾಜರ ಅನುಮತಿ ಅಗತ್ಯವಿದೆ.

ಕಾನೂನಿನ ದೃಷ್ಟಿಯಿಂದ ಅವಕಾಶ, ಆರಾಧನೆ, ವಾಕ್, ಧರ್ಮಗಳಲ್ಲಿ ಸಂಪೂರ್ಣ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ನೇಪಾಲೀ ಜನತೆಗೀ ಘಟನೆಯಿತ್ತಿದೆ. ಭಾರತದ ವಿಶಾಲ ಮನೋವೃತ್ತಿಯ ಘಟನೆಯೂ ಇದರ ಮೇಲೆ ಪ್ರಭಾವ ಬೀರಿದೆ. ಹೀಗೆ ಉನ್ನತ ಮಟ್ಟದ ಪ್ರಜಾಪ್ರಭುತ್ವ ಮಾದರಿಯ ರಾಜ್ಯವನ್ನು ಕಟ್ಟಲು ಪ್ರಯತ್ನಿಸಿ, ತನ್ನ ಹಲವಾರು ಯೋಜನೆಗಳು ನಿರುಪಯುಕ್ತವಾದುದನ್ನು ಗಮನಿಸಿ ಪ್ರಕೃತದ ನೂತನ ಸಂವಿಧಾನ ಘೋಷಣೆಯನ್ನು ಅರಸು ಮಹೇಂದ್ರರು ಮಾಡಿದ್ದಾರೆ. ಜನತೆಯೂ ಈ ಸಂವಿಧಾನವನ್ನು ಸಾದರಾತಿಶಯ ಪ್ರಸನ್ನತೆಯಿಂದ ಸ್ವೀಕರಿಸಿ ಹರ್ಷೋದ್ಗಾರವನ್ನು ಮಾಡಿದೆ.

ಪ್ರಪಂಚದಲ್ಲಿ ಹಿಂದೂರಾಜನಿರುವ ಏಕಮೇವ ರಾಜ್ಯವೆಂದರೆ, ಇಂದು ನೇಪಾಲ. ನೇಪಾಲವು ಭಾರತಕ್ಕಿಂತಲೂ ಹಿಂದುಳಿದ ದೇಶವಾಗಿದ್ದು, ಯಾವ ಅನುಕೂಲತೆಯನ್ನೂ ಕಾಣದ ನಾಡಾಗಿದೆ. ಭಾರತವೇ ಮೊದಲಾದ ರಾಷ್ಟ್ರಗಳ ಸಹಕಾರದಿಂದ ಇಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಮಹಾರಾಜರ ಉದಾರತೆ ಹಾಗೂ ಅಗಾಧ ಪರಿಶ್ರಮದ ಬಲದಿಂದ ಈ ರಾಜ್ಯವೂ ಪ್ರಗತಿ ಪಥದತ್ತ ದಿಟ್ಟಡಿಯನ್ನಾದರೂ ಇಟ್ಟು ಮುನ್ನಡೆಯುವುದೆಂದು ನಂಬಬಹುದು.

ಪರಿಚಯ

ಸಾಹಸೀ ವ್ಯಕ್ತಿತ್ವ ಪ್ರತೀಕ ಇಂದಿರಾ ಪ್ರಿಯದರ್ಶಿನೀ

ಇವರ ಆಯ್ಕೆಯಿಂದಾಗಿ ಕಾಂಗ್ರೆಸ್ ಸಬಲವೂ ಸುಚಾಲಿತವೂ ಸಶಕ್ತವೂ ಆದೀತೆ?

"ನೀನು ಸಾಹಸಿಯಾದರೆ, ಆಗ ಸಾಫಲ್ಯವು ನಿನ್ನನ್ನು ಹಿಂಬಾಲಿಸಿಕೊಂಡು ಬರುವುದು" ಎಂಬ ಅಮರ ವಾಕ್ಯವನ್ನು ಕಾರಾಗೃಹದೊಳಗಿಂದಲೇ ತಂದೆಯು ತನ್ನ ಮಗಳ ಜನ್ಮದಿನೋತ್ಸವದ ತನ್ನ ಶುಭಾಕಾಂಕ್ಷೆಯಾಗಿ ಬರೆದು ಕಳಿಸಿದ್ದನು. ಅಲ್ಲದೆ ಈ ನುಡಿಮುತ್ತನ್ನಾಕೆ ಎಂದೂ ಮರೆಯಲಿಲ್ಲ.

ಇಂದಿರಾಗಾಂಧಿಯವರಲ್ಲಿ ಬಾಲ್ಯಕಾಲದಿಂದಲೂ ಸಾಹಸ ಅಥವಾ ನಿರ್ಭಯತೆ ಮನೆಮಾಡಿಕೊಂಡಿತ್ತು. ಅಜ್ಜ ಮೋತಿಲಾಲ ನೆಹರೂರವರ ಮೇಲೆ ದೇಶದ್ರೋಹದ ಅಪವಾದನೆ ನಡೆಯುತಿತ್ತು; ಶಸ್ತ್ರಧಾರಿ ಆಂಗ್ಲ ಪೋಲೀಸರು ಅವರನ್ನು ಸುತ್ತುವರಿದಿದ್ದರು. ಆಗ ನಾಲ್ಕಾರು ವರ್ಷದ ಇಂದಿರಾ ಪೋಲೀಸರ ಪಂಕ್ತಿಯನ್ನು ಭೇದಿಸಿ ನಡುವೆ ಹೋಗಿದ್ದಳು. ಇದೇ ರೀತಿಯ ಘಟನೆಗಳು ಇಂದಿರಾಗಾಂಧಿಯವರ ಬಾಲ್ಯ ಕಾಲದಿಂದಲೂ ಎಡತಾಕುತಿದ್ದುವು.

ವಾನರ ಸೇನಾ ನಾಯಕಿ

ತರುಣಾವಸ್ಥೆಯಲ್ಲಿಯೇ ಆಕೆ ಅಲ್ಲಹಾಬಾದದಲ್ಲಿ ಬಾಲಕರ "ವಾನರ ಸೇನೆ" ಎಂಬ ಸಂಸ್ಥೆಯ ನಾಯಕಿಯಾದಳು. ಆಕೆಯು ತನ್ನ ವಿದ್ಯಾರ್ಥಿ ಜೀವನದಲ್ಲಿರುವಾಗ ಭಾರತದಲ್ಲಿಯೂ ಇಂಗ್ಲೆಂಡಿನಲ್ಲಿಯೂ ಭಾರತದ ಸ್ವಾತಂತ್ರ್ಯಾಂದೋಲನದಲ್ಲಿ ಸಕ್ರಿಯವಾಗಿ ಭಾಗ ವಹಿಸುತಿದ್ದಳು. ಅಲ್ಲದೆ ತನಗೆ ೨೦ ವರ್ಷಗಳ ವಯಸ್ಸು ತುಂಬುವುದರೊಳಗೇನೇ ಆಕೆಯು ೧೩ ಮಾಸಗಳ ಕಾರಾಗೃಹ ವಾಸದ ಶಿಕ್ಷೆಯನ್ನೂ ಅನುಭವಿಸಬೇಕಾಗಿ ಬಂತು. ೧೯೪೨ರಲ್ಲಿ ಭಾರತದಿಂದ ತೊಲಗಿರಿ ಸತ್ಯಾಗ್ರಹದ ವೇಳೆಯಲ್ಲಿ ತನ್ನ ವಿವಾಹವು ಆಗ ತಾನೇ ನೆರವೇರಿದ್ದರೂ ಆಕೆಯು ತನ್ನ ಪತಿಯೊಡನೆ ಪುನಃ ಇದರಲ್ಲಿ ದುಮುಕಿ ಸೆರೆಮನೆ ವಾಸವನ್ನು ಪತಿಯೊಡ ಅನುಭವಿಸಿದಳು.

೧೯೪೭ರಲ್ಲಿ

೧೯೪೭ರಲ್ಲಿ ದೇಶವು ಸಾಂಪ್ರದಾಯಿಕತೆಯ ಅಗ್ನಿಯಲ್ಲಿ ಸುಡುತ್ತಿರುವಾಗ, ಉತ್ತೇಜಿತ ಉಪದ್ರವಿಯನ್ನು ತಡೆಯಲೆಳಸುವವನ ಜೀವವೇ ಕಲ್ಲೋಲಮಯ ವಾತಾವರಣದಲ್ಲಿರುವಾಗ, ಶ್ರೀಮತಿ ಇಂದಿರಾ ಗಾಂಧಿಯು ಬಾಪುವಿನ ಮಾರ್ಗದರ್ಶನದಲ್ಲಿ ದಿಲ್ಲಿ ಮತ್ತಿತರ ಪ್ರದೇಶಗಳಲ್ಲಿ ಉಪದ್ರವಿಗಳನ್ನು ಶಾಂತಗೊಳಿಸುವ ಮತ್ತು ಸಂತ್ರಸ್ತರನ್ನು ರಕ್ಷಿಸುವ ಗುರುತರ ಕಾರ್ಯವನ್ನು ಕೈಗೊಂಡಳು. ಆ ದಿನಗಳಲ್ಲಿ ಆಕೆಯು ತನ್ನ ಪ್ರಾಣವನ್ನು ಜೋಕಾಲಿಯ ಮೇಲಿಟ್ಟು ಉಪದ್ರವಿಗಳ ಗುಂಪನ್ನು ಶಾಂತಮಾಡಿದಳು. ರಾಜಧಾನಿಯ ಕೆಲವು ಕ್ಷೇತ್ರಗಳಲ್ಲಿ ಪಾಕಿಸ್ತಾನದ ಸ್ಥಾನ ಪಲ್ಲಟರು ಬಂದು ನೆಲೆಯೂರಿದಾಗ, ಶ್ರೀಮತಿ ಗಾಂಧಿ ಅವರಿಗೆ ಅನುಕೂಲತೆಗಳನ್ನೊದಗಿಸಿದಳು. ಅಂದಿನಿಂದ ಶ್ರೀಮತಿ ಗಾಂಧಿ 'ಪಂಡಿತ ನೆಹರೂರವರ ಪುತ್ರಿ' ಎಂಬ ಹೆಸರಿನಿಂದ ಖ್ಯಾತಳಾದಳು.

ವ್ಯಸ್ತ ಜೀವನ

ಇದೇ ರೀತಿಯ ಅನ್ಯಾನ್ಯ ಕಾರ್ಯಗಳಲ್ಲಿ ಶ್ರೀಮತಿ ಗಾಂಧಿ ಯಾವಾಗಲೂ ತಲ್ಲೀನರಾಗಿದ್ದಾರೆ. ಪರಿಷತ್ತು, ಬಾಲಭವನ, ಬಾಲಸಹಯೋಗ ಮತ್ತು ಕಮಲಾ ನೆಹರೂ ವಿದ್ಯಾಲಯ ಮೊದಲಾದ ಹಲವಾರು ಸಂಸ್ಥೆಗಳ ಅಧ್ಯಕ್ಷೆಯಾಗಿದ್ದಾರೆ; ಕೇಂದ್ರೀಯ ಸಮಾಜ ಕಲ್ಯಾಣ ಸಮಿತಿ ಮೊದಲಾದ ಹಲವಾರು ಸಂಸ್ಥೆಗಳ ಕರ್ಮಠ ಸದಸ್ಯೆಯರೂ ಆಗಿದ್ದಾರೆ.

ಕಾಂಗ್ರೆಸ್ ಮತ್ತು ಇಂದಿರಾಗಾಂಧಿಯವರ ನಡುವೆ ತೀವ್ರವಾದ ಸಂಬಂಧವಿದೆ. ಕಾಂಗ್ರೆಸಿನ ಅಪ್ರತಿಮ ನೇತಾರರೂ ಸೇವಕರೂ ಆಗಿರುವ ಪಂಡಿತ ಮೋತೀಲಾಲರ ಮೊಮ್ಮಗಳು, ಜವಾಹರಲಾಲರ ಮಗಳು ಮತ್ತು ವಿಜಯಲಕ್ಷ್ಮೀ ಪಂಡಿತರ ನಿಕಟ ಸಂಬಂಧಿಯಾದ ಈಕೆಯ ರಕ್ತದ ಪ್ರತಿಯೊಂದು ಕಣದಲ್ಲಿಯೂ ಕಾಂಗ್ರೆಸ್ ತತ್ವಗಳು ಮನೆ ಮಾಡಿವೆ. ೧೯೫೫ರಿಂದ ಈಕೆ ಕಾಂಗ್ರೆಸ್ ಕಾರ್ಯಕಾರಣಿ ಮತ್ತು ಕೇಂದ್ರೀಯ ಚುನಾವಣಾ ಸಮಿತಿಯ ಕಾರ್ಯಕುಶಲೆ, ಮಹತ್ವಪೂರ್ಣ ಸದಸ್ಯೆಯಾಗಿದ್ದಾರೆ. ಅಖಿಲ ಭಾರತ ಕಾಂಗ್ರೆಸ್‌ನ ಮಹಿಳಾ ವಿಭಾಗವು ಉತ್ಕರ್ಷ ಸಾಧಿಸಿರುವುದಾದರೆ, ಅದಕ್ಕೆ ಕಾರಣ ಶ್ರೀಮತಿ ಗಾಂಧಿ. ಕಳೆದ ವರ್ಷದಿಂದ ಕಾಂಗ್ರೆಸ್ಸಿನ ಯುವಕ ವಿಭಾಗವನ್ನೂ ಇವರೇ ನೋಡಿಕೊಳ್ಳುತಿದ್ದಾರೆ.

ಕಾಂಗ್ರೆಸ್ ಸಂಘಟನೆಯಲ್ಲಿ ಆಕೆಯ ಅಸ್ತಿತ್ವವು ಅವರ ವ್ಯಕ್ತಿತ್ವದಿಂದಲೇ ಬಂದಿರುವುದಲ್ಲದೇ ಆಕೆ ಪ್ರಧಾನ ಮಂತ್ರಿಯವರ ಮಗಳೆಂಬ ಕಾರಣದಿಂದಲ್ಲ.

ಇಂದಿರಾ ಗಾಂಧಿ.

* *

ಸ್ವಾಭಿಮಾನೀ ವ್ಯಕ್ತಿತ್ವ

ಆಕೆಯು ಕಾಂಗ್ರೆಸ್ ನೇತಾರರೊಡನೆ ಹಲವು ಬಾರಿ ಭಿನ್ನಾಭಿಪ್ರಾಯಗಳನ್ನೂ ಪ್ರಕಟಿಸಿದ್ದರು. ಕಾಂಗ್ರೆಸ್‌ನ ಅಮೃತಸರ ಅಧಿವೇಶನದಲ್ಲಿ ಆಹಾರ ಪದಾರ್ಥಗಳ ಆಯಾತ ಸಂಬಂಧದಲ್ಲಿ ಈಕೆ ಅತ್ಯುಗ್ರ ದೃಷ್ಟಿಕೋಣವನ್ನು ಇಟ್ಟುಕೊಂಡಿದ್ದರು. ಪ್ರಧಾನ ಮಂತ್ರಿಯ ನಿವಾಸಸ್ಥಾನದಲ್ಲಿ ಕಾಂಗ್ರೆಸ್‌ನ ರಾಷ್ಟ್ರೀಯ ಪರಿಷತ್ತು ಸಭೆ ಸೇರಿದಾಗಲೂ ಈಕೆ ತನ್ನ ಸ್ಪಷ್ಟಾಭಿಪ್ರಾಯವನ್ನೊಮ್ಮೆ ಪ್ರಕಟಿಸಿದ್ದರು. ಶ್ರೀಮತಿ ಗಾಂಧಿ ತನ್ನ ಅಜ್ಜ, ತಾತರಂತೆಯೇ ಸ್ಪಷ್ಟ ವಾಕ್ಸರಣಿಯಲ್ಲಿಯೇ ಆಡುವವರು.

ಶ್ರೀಮತಿಯವರೇ ಒಂದು ಬಾರಿ, "ನಾನು ಆಗಾಗ ಭಿನ್ನಮತ ತಾಳುತ್ತೇನೆ; ತನ್ನ ವಿಚಾರವನ್ನು ಶುದ್ಧವಾಗಿಡಲು ಪ್ರಯತ್ನಿಸುತ್ತೇನೆ. ಅನುಶಾಸನ ಮತ್ತು ಪಕ್ಷಭಾವನೆಗಳು ಎಂದೂ ದೃಷ್ಟಿಯಿಂದ ಮರೆಯಾಗಲು ಬಯಸುವುದಿಲ್ಲ" ಎಂದಿದ್ದಾರೆ. ಇಂದಿರಾ ಗಾಂಧಿಯವರೊಡನೆ ಪರಿಚಿತರಾದವರು ಅವರ ವ್ಯಕ್ತಿತ್ವವನ್ನರಿತುಕೊಂಡಿದ್ದಾರೆ. ಎಂತಲೇ ನಾಗಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಈ ಬಾರಿ ದಕ್ಷಿಣ ಭಾರತದಿಂದೊಬ್ಬನನ್ನು ಅಧ್ಯಕ್ಷನನ್ನಾಗಿ ಆರಿಸಬೇಕೆಂಬ ಮಾತು ಗುಜುಗುಜುಗುಟ್ಟುತ್ತಿರುವಾಗ, ದಕ್ಷಿಣ ಭಾರತೀಯರಿಂದಲೇ ಶ್ರೀಮತಿ ಗಾಂಧಿಯವರ ಹೆಸರು ಮುಂದೆ ಬಂತು.

ಪ್ರಧಾನ ಮಂತ್ರಿಯವರ ಮಗಳಾಗಿರುವುದರಿಂದಲೇ ಆಕೆಗೆ ಈಪಟ್ಟ ದೊರೆಯಿತು ಎಂದು ಜನ ಆಡಿಕೊಳ್ಳತೊಡಗಿದ್ದಾರೆ. ಲಾಹೋರ್ ಕಾಂಗ್ರೆಸಿನಲ್ಲಿ ಅಧ್ಯಕ್ಷರಾಗಿದ್ದ ೪೦ ವರ್ಷದ ಜವಾಹರರನ್ನು ಈ ಸ್ಥಾನಕ್ಕೆ ಆರಿಸುವಾಗ, ಮೋತಿಲಾಲರ ಮಗನೆಂದು ಈ ಅಲ್ಪಾಯುವನ್ನು ಆರಿಸಲಾಗಿದೆ ಎಂದು ಜನರೆಂದಿದ್ದರು. ಆದರೆ, ಮುಂದೆ, ಆ ಸಮಯದಲ್ಲಿ ಅವರನ್ನು ಅಧ್ಯಕ್ಷರೆಂದು ಆಯ್ಕೆ ಮಾಡಿದುದರಿಂದ ಏನುಪಯೋಗವೆಂದು ಇತಿಹಾಸ ತಿಳಿಸಿತು. ಶ್ರೀಮತಿ ಗಾಂಧಿಯವರೂ ತನ್ನ ತಂದೆಯಂತೆಯೇ ಎಳೆಪ್ರಾಯದಲ್ಲಿಯೇ ಅಧ್ಯಕ್ಷೆಯಾಗಿ ಆಯ್ಕೆಗೊಂಡಿದ್ದಾರೆ. ಈ ಆಯ್ಕೆಯ ಉಪಯೋಗವನ್ನು ಸಮಯವು ಸಿದ್ಧಪಡಿಸಬಹುದು.

ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಸ್ವೀಕರಿಸಿದ ಗಳಿಗೆಯಿಂದಲೇ ತನ್ನ ಕಾರ್ಯದಲ್ಲಿ ತತ್ಪರತೆಯಿಂದ ದುಡಿದ ತಳೆ

(೯ನೇ ಪುಟ ನೋಡಿರಿ)

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ, ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೋ, ಉಡುಪಿ.

ಪರಿಶುದ್ಧ ವಸ್ತು

ವ್ಯವಸಾಯೋತ್ಪನ್ನಗಳಲ್ಲಿ ಆಗ್ ಗುರುತಿದೆಯೆ?

ವಸ್ತುಗಳ ಪರಿಶುದ್ಧತೆ ಮತ್ತು ಪ್ರಮಾಣೀಕರಣಕ್ಕೆ ಸರಕಾರದ ತೀವ್ರಾಸಕ್ತಿ

ಮಾರುಕಟ್ಟೆಯಲ್ಲೊಮ್ಮೆ ಹಾಗೆಯೇ ದೃಷ್ಟಿ ಹಾಯಿಸಿದಾಗ ಕಣ್ಣಿಗೆ ಬೀಳುವ ವಿಧವಿಧದ ವಸ್ತುಗಳ ಪೈಕಿ ಯಾವುದು ಒಳ್ಳೆಯ ವಸ್ತು ಮತ್ತು ಯಾವುದು ಕೀಳು ಎಂಬುದನ್ನು ತಿಳಿಯುವುದೇ ಯಾರಿಗಾಗಲಿ ಕಷ್ಟವಾಗುತ್ತದೆ. "ನಾವು ತೆರುವ ಹಣ ದುರ್ವ್ಯಯವಾಗದಿದ್ದರೆ ಸಾಕು" ಎಂದು ಗೃಹಿಣಿಯಾದವಳು ಸ್ವಾಭಾವಿಕವಾಗಿ ಯೋಚಿಸುತ್ತಾಳೆ

ಹೀಗೆ ಯೋಚಿಸುವ ಗೃಹಿಣಿಗೆ ಸಮಾಧಾನ ಹೇಳಿ ತನ್ನ ವಸ್ತು ಉತ್ತಮ ದರ್ಜೆಯದು ಎಂದು ಖಾತ್ರಿ ಮಾಡಿಕೊಡುವ ಕಾರ್ಯ ಸತ್ಸಂಪ್ರದಾಯದ ವ್ಯಾಪಾರಿಗೆ ಸಹ ತುಂಬಾ ಕಷ್ಟವಾಗುತ್ತದೆ; ಅವನು ಎದುರಿಸಬೇಕಾಗಿರುವ ವಿನಾಶಕಾರಿ ಪೈಪೋಟಿ ಅಂತಹದು. ಒಳ್ಳೆಯ ವಸ್ತುವಿನ ತಲೆಯ ಮೇಲೆ ಹೊಡೆಯುವ ರೀತಿಯಲ್ಲಿ ಬಾಹ್ಯಕ್ಕೆ ಕಾಣುವ ವಸ್ತುವಿನ ಬೆಲೆ ತುಂಬಾ ಕಡಿಮೆ ಇರುವಾಗ ಪ್ರಮಾಣಿಕ ವ್ಯಾಪಾರಿಯ ಅವಸ್ಥೆ ಏನಾಗಬೇಕು?

ಇಂತಹ ಇಕ್ಕಟ್ಟಿನ ಪರಿಸ್ಥಿತಿಯಿಂದ ಪ್ರಾಮಾಣಿಕ ವ್ಯಾಪಾರಿಗಳನ್ನು ಪಾರು ಮಾಡಲು ಮತ್ತು ಕೊಳ್ಳುವವರ ಹಿತವನ್ನೂ ರಕ್ಷಿಸಲು ಕೈಗೊಳ್ಳಬೇಕಾದ ಕಾರ್ಯ ತುಂಬಾ ಅಗತ್ಯ. ಬೇಸಾಯೋತ್ಪನ್ನಗಳ ವಿಷಯದಲ್ಲಿಯಂತೂ ಇದರ ಅವಶ್ಯಕತೆ ವಿಶೇಷವಾಗಿದೆಯೆಂದೇ ಈ ಸಂಬಂಧದಲ್ಲಿ ಸರ್ಕಾರ ಪ್ರತ್ಯೇಕ ಒಂದು ಶಾಸನವನ್ನೇ ಅಂಗೀಕರಿಸಿದ್ದು (ಅಗ್ರಿಕಲ್ಚರಲ್ ಪ್ರಾಡ್ಯೂಸ್–ಗ್ರೇಡಿಂಗ್ ಎಂಡ್ ಮಾರ್ಕೆಟಿಂಗ್-ಆಕ್ಟ್) ಅದರ ಪ್ರಕಾರ ಬೇಸಾಯೋತ್ಪನ್ನಗಳನ್ನು ಹಲವು ದರ್ಜೆಗಳಾಗಿ ವಿಂಗಡಿಸಿ ಅವುಗಳ ಪ್ರಮಾಣೀಕರಣ ಕಾರ್ಯವನ್ನು ಕೈಗೊಂಡಿರುತ್ತದೆ.

ಇಂದು ಈ ಕಾರ್ಯ ಒಟ್ಟು ೧೧೫ ಬೇಸಾಯೋತ್ಪನ್ನಗಳ ಮಟ್ಟಿಗೆ ಸಾಧ್ಯವಾಗಿದೆ. ತುಪ್ಪ, ಬೆಣ್ಣೆ, ಅಡಿಗೆಗೆ ಉಪಯೋಗಿಸುವ ಎಣ್ಣೆ, ಮೊಟ್ಟೆಗಳು, ಅಕ್ಕಿ, ಗೋಧಿಹಿಟ್ಟು, ಹಣ್ಣುಹಂಪಲು, ಹತ್ತಿ, ಉಣ್ಣೆ, ಗಂಧದ ತಕ್ಕೆ, ಹೊಗೆಸೊಪ್ಪು–ಇತ್ಯಾದಿಗಳು ಈ ಪಟ್ಟಿಯಲ್ಲಿ ಸೇರಿವೆ.

ನಮ್ಮ ದೇಶದಲ್ಲಿಯೇ ಮಾರಾಟವಾಗುವ ಈ ಹಲವಾರು ವಸ್ತುಗಳ ಬಗ್ಗೆ ಅವುಗಳ ಗುಣಕ್ಕನುಗುಣವಾಗಿ ದರ್ಜೆ ಗೊತ್ತುಮಾಡುವುದು ಅಪೇಕ್ಷಣೀಯವಾಗಿದ್ದು ಉತ್ಪಾದಕರು ಮತ್ತು ಮಾರಾಟಗಾರರು ಈ ಅಗತ್ಯದ ಕಡೆಗೆ ಗಮನ ಕೊಡುತ್ತಿರುವುದು. ಹೊರಗಡೆ ನಿರ್ಯಾತವಾಗುವ ವಸ್ತುಗಳ ಮಟ್ಟಿಗಂತೂ ಪ್ರಮಾಣೀಕರಣ ಕಡ್ಡಾಯವಾಗಿ ನಡೆಯಲೇಬೇಕು. ಇಲ್ಲವಾದರೆ ಅವುಗಳ ನಿರ್ಯಾತವನ್ನು ಪ್ರತಿಬಂಧಿಸಲು ಶಾಸನದ ಬಲವಿದೆ.

'ಆಗ್ ಮಾರ್ಕ್' ಗುರುತಿಲ್ಲದ ವಸ್ತು ನಿರ್ಯಾತವಾಗುವ ಸಂಭವವೇ ಇಲ್ಲ.

ತುಪ್ಪ ಮತ್ತು ವನಸ್ಪತಿ ಎಣ್ಣೆಗಳ ವಿಷಯದಲ್ಲಂತೂ ಪ್ರತಿಯೊಂದು ರಾಸಾಯನಿಕ ಪರೀಕ್ಷೆಗೆ ಗುರಿಯಾಗಿಯೇ ತೀರಬೇಕು. ಇದಕ್ಕಾಗಿ ದೇಶದ ನಾನಾ ಕಡೆ ಪರೀಕ್ಷಾ ಕೇಂದ್ರಗಳಿದ್ದು ಅಲ್ಲಿಗೆ "ಸ್ಯಾಂಪಲ್ಲು"ಗಳನ್ನು ಕಳುಹಿಸಿ ಅವುಗಳ ದರ್ಜೆ ಬಗ್ಗೆ ಮಾಹಿತಿ ಪಡೆಯಬೇಕಾಗುತ್ತದೆ.

ನಿರ್ದಿಷ್ಟ ಪ್ರಮಾಣೀಕರಣಕ್ಕೆ ಹೊಂದಿಕೊಂಡಿದ್ದರೆ ಮಾತ್ರ 'ಆಗ್ ಮಾರ್ಕ್' ಗುರುತನ್ನು ತಮ್ಮ ತಯಾರಿಕೆಗಳಿಗೆ ಹಚ್ಚಲು ಸಾಧ್ಯ. ಈ ರೀತಿ 'ಗುರ್ತು' ಹಚ್ಚಿದ ಮೇಲೂ ಅಶುದ್ಧ ವಸ್ತು ಮಾರಾಟವಾಗದಂತೆ ನೋಡಿಕೊಳ್ಳಲು "ಚೆಕ್ ಸ್ಯಾಂಪಲ್ಲು"ಗಳನ್ನು ಪ್ರಯೋಗಶಾಲೆಗಳಿಗೆ ಕಳುಹಿಸುವ ವ್ಯವಸ್ಥೆಯೂ ಇದೆ; ಇದರಲ್ಲಿ ದೋಷ ಕಂಡುಬಂದರೆ ಇಡೀ 'ಸ್ಟಾಕಿ'ನ ಮೇಲೆ ಪ್ರತಿಬಂಧಕ ಹಾಕುವದಲ್ಲದೆ ನಿರ್ಯಾತವಾದ ವಸ್ತುವನ್ನು ವಾಪಸ್ಸು ತರಿಸಿಕೊಳ್ಳಲಾಗುವುದು.

ಪ್ರಮಾಣೀಕರಣ ಕಾರ್ಯದ ವ್ಯಾಪ್ತಿ ಬೆಳೆಯುತ್ತಿರುವುದರಿಂದ ಒಂದೊಂದು ವಿಭಾಗದಲ್ಲೂ ಪ್ರಯೋಗಶಾಲೆಗಳ ಸ್ಥಾಪನೆಯ ಅಗತ್ಯ ಕಂಡುಬರುತ್ತಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆ ಪ್ರಕಾರ ಪ್ರಾದೇಶಿಕವಾಗಿ ಎಂಟು ಪ್ರಯೋಗಶಾಲೆಗಳನ್ನು–ಕಾನ್‌ಪುರ, ರಾಜಕೋಟೆ, ಕೊಚಿನ್, ಕಲ್ಕತ್ತ, ಮದರಾಸ್, ಗುಂಟೂರ್ ಮತ್ತು ಅಮೃತಸರಗಳಲ್ಲಿ ಸ್ಥಾಪಿಸಲಾಗುತ್ತಿದೆ. ನಾಗಪುರದಲ್ಲಿ "ಮಾರ್ಕೆಟಿಂಗ್ ಎಂಡ್ ಇನ್ಸ್‌ಪೆಕ್ಷನ್" ಮುಖ್ಯಾಧಿಕಾರಿಗಳ ಕಚೇರಿ ಇರುವುದಲ್ಲದೆ, ಇಲ್ಲೇ ಕೇಂದ್ರ ಪ್ರಯೋಗ ಶಾಲೆಯೂ ಇದೆ. ದೇಶದಲ್ಲಿ ತಯಾರಾಗುವ ಉತ್ಪನ್ನಗಳ ದರ್ಜೆಯನ್ನು ಗೊತ್ತುಹಚ್ಚಿ ಉತ್ತಮ ವಸ್ತುವೇ ಮಾರಾಟವಾಗುವುದಕ್ಕೆ ಅವಕಾಶ ಕಲ್ಪಿಸುವುದು ಈ ಕಚೇರಿಯ ಕೆಲಸವಾಗಿದೆ.

ಅಂತೆಯೇ 'ಆಗ್ ಮಾರ್ಕ್' ಗುರುತು ಪರಿಶುದ್ಧತೆ ಹಾಗೂ ಉತ್ತಮ ವರ್ಜೆಯ ಗುರುತಾಗಿ ಪರಿಣಮಿಸುತ್ತಿದೆ.

ನಮ್ಮ ಭಾರತ

ಭಾರತದ ವೈಶಿಷ್ಟ್ಯ-ಹೊರಳಾಡುವ ನೀರಮಹಿಷ

ನಾವು ಬೆವರಿನಿಂದ ತೊಯ್ದುಹೋದಾಗ, ಅವು ಕೆಸರು ನೀರಲ್ಲಿ ಮುಳುಗೇಳುತ್ತವೆ!

ಭಾರತದಲ್ಲಿ ಎಲ್ಲಕ್ಕಿಂತ ಗೌರವಾರ್ಹ ಪ್ರಾಣಿ ಯಾವುದು ಎಂದು ನನ್ನೊಡನೆ ಯಾರಾದರೂ ಕೇಳಿದರೆ, ನಾನಾಗ 'ಹುಲಿ' ಎಂದು ಉತ್ತರಿಸಲೇ ಬೇಕು. ಏಕೆಂದರೆ, ಆಟ ಮತ್ತು ಕಾಲ್ಪನಿಕ ಕ್ಷೇತ್ರವೆರಡರಲ್ಲಿಯೂ ಭಾರತದ ನಿಕಟ ಸಂಬಂಧವಿರುವುದು ಈ ಹುಲಿಯೊಡನೆಯೇ. ನಾನು ಪಾವಿತ್ರ್ಯ ಪೂರ್ಣವಾದ ದನವನ್ನೂ ಹೆಸರಿಸಬಹುದು. ಆದರೆ, ಈ ದನವು ಎಲ್ಲೆಲ್ಲಿಯೂ ಕಾಣ ಸಿಗುತ್ತದೆ—ಮೈದಾನಗಳಲ್ಲಿ ಮಾತ್ರವಲ್ಲ– ಜನದಟ್ಟಣೆಯಿರುವ ಮಾರ್ಗಗಳಲ್ಲಿ, ಕಿರಾಣಿ ಅಂಗಡಿಗಾರನ ಅಂಗಡಿಯಲ್ಲಿ, ಅಲ್ಲದೇ ಬೇಂಕುಗಳಲ್ಲಿ ಕೂಡಾ ದನಗಳಿರುವುದುಂಟು. ವೈಯಕ್ತಿಕ ದೃಷ್ಟಿಕೋಣದಿಂದ ಉತ್ತರಿಸಬಹುದಾದರೆ, ಶೀರ ಸಾಮಾನ್ಯವಾದ ಮಾರ್ಗ ಪ್ರತಿಬಂಧಕವಾಗಿರುವ ನೀರ್ಕೋಣಗಳು ನಿಜವಾಗಿಯೂ ಭಾರತದ ದೃಶ್ಯಗಳಲ್ಲಿ ವಿಶಿಷ್ಟವಾಗಿವೆ.

ಭಾರತದ ಸೃಷ್ಟಿ ಸೌಂದರ್ಯದ ನೋಟಗಳನ್ನು ಎರವಲು ತೆಗೆದುಕೊಳ್ಳುವುದರಲ್ಲಿ ಹುಲಿ ಅಥವಾ ದನಕ್ಕಿಂತ ಪ್ರತಿಬಂಧಕವೂ ಅನಿವಾರ್ಯವೂ ಆದ ಕೋಣವೇ ಮುಂದಾಗಿದೆ. ಒಂದು ಅಥವಾ ಎರಡು ಮೂರು ಕೋಣಗಳು ಮಳೆಗಾಲದ ಕೆಸರು ನೀರಲ್ಲಿ ನೀರಾಟವಾಡುವುದನ್ನು, ಹುಲ್ಲ ಮೈದಾನಿನಲ್ಲಿ ಮೇಯುತ್ತಾ ತುಳುಕಾಡುವುದನ್ನು ಕಾಣುವಾಗ, ಸುತ್ತಲ ಹುಚ್ಚು ಜೀವನದ ಆವರ್ತವು ದೃಷ್ಟಿಗೋಚರವಾಗುವುದು. ಕೋಣವು ನಿಮ್ಮನ್ನು ನಿದ್ರಿಸಿಕೊಂಡೇ ಕಾಯಬಲ್ಲುದು; ತನ್ನ ಕಿವಿಯ ಹಿಂಭಾಗದಲ್ಲಿ ಕಾಗೆ ಕಡಿಯುತ್ತಿದ್ದರೂ ಅದನ್ನು ಸಹನೆಯಿಂದ ತಡೆದುಕೊಳ್ಳಬಲ್ಲುದು. ಅದು ಆ ಸಮಯವೆಲ್ಲಾ ಆಲೋಚನೆ ಮಾಡುತ್ತಿರುವುದೆ, ಅಥವಾ ನಾವು ಬೆವರಿನಿಂದ ತೊಯ್ದು ಹೋಗುತ್ತಿರುವಾಗ, ತಾನು ತನ್ನ ಕೆಸರು ನೀರಾಟದ ಆನಂದ ಸುಖೆಯನ್ನು ಸ್ಮರಿಸುತ್ತ ಬಹ್ಮಾನಂದವನ್ನು ಪಡೆಯುತ್ತಿರುವುದೆ? ಈ ಮಹಾಪ್ರಾಣಿಗೆ ಆಲೋಚನೆ ಎಂಬುದು ಬಹುದೂರದ ಮಾತು. ಕುತ್ತಿಗೆಯವರೆಗೆ ಮುಳುಗು ಹಾಕಿಕೊಂಡಿರುವುದೇ ಈ ಪ್ರಾಣಿಯ ಜೀವನದ ಧ್ಯೇಯೋದ್ದೇಶವಾಗಿದೆ. ಅದು ಮುಂಜಾನೆ ಮತ್ತು ಸಂಜೆ ಮಾತ್ರ ಆಹಾರವನ್ನು ಸೇವಿಸಿ, ಇಡಿ ದಿನವನ್ನು ನಿದ್ರೆಗಾಗಿಯೇ ವಿನಿಯೋಗಿಸುತ್ತದೆ.

ಕೋಣದ ಕೊಂಬುಗಳು ಮೇಲಕ್ಕೆ ಮತ್ತು ಹಿಂಗಡೆಗೆ ಕಪಾಲದ ಪಕ್ಕದಲ್ಲಿ ಬಗ್ಗಿಕೊಂಡು, ಸಾಧಾರಣವಾಗಿ ತುದಿಯಲ್ಲಿ ಒಂದನ್ನೊಂದು ಮುಟ್ಟುತ್ತವೆ. ಪ್ರಾಯಶಃ ಬ್ರಿಟಿಷ ವಸ್ತು ಸಂಗ್ರಹಾಲಯದಲ್ಲಿರುವ ಆರಡಿ ಐದಿಂಚು ಉದ್ದದ ಕೊಂಬೇ ಕೋಣಗಳ ಕೊಂಬುಗಳಲ್ಲಿ ಬಹು ಉದ್ದವಾದುದಾಗಿರಬೇಕು. ಇನ್ನು ಕೆಲವಕ್ಕೆ ಆರು ಅಡಿ ಉದ್ದದ ಕೊಂಬುಗಳಿರುವುದೂ ಇದೆ; ಆದರೆ, ಇಂದು ಮಾತ್ರ ಅಂತಹ ಕೊಂಬುಗಳಿರುವ ಕೋಣಗಳು ಕಾಣ ಸಿಗುವುದು ಅಪರೂಪ. ಕೋಣಗಳು ಸಣ್ಣವಿರುವಾಗ, ಒರಟಾದ ರೋಮಗಳಿರುತ್ತವೆ; ಅವು ದೊಡ್ಡವಾಗುತ್ತ ಹೋದಂತೆ ರೋಮಗಳೆಲ್ಲ ಉದುರಿ ಹೋಗುವುದು. ಮುದಿಯಾಗುತ್ತ ಬಂದಂತೆ ರೋಮರಹಿತವಾಗುತ್ತ ಬಂದು ನೀರನ್ನು ಹೆಚ್ಚಾಗಿ ಪ್ರೀತಿಸಲು ತೊಡಗುತ್ತವೆ.

ಆಫ್ರಿಕದ ಕೋಣವು ಇದಕ್ಕಿಂತ ಭಯಾನಕವಿದೆ; ಆಕಾರದಲ್ಲೂ ದೊಡ್ಡದಾಗಿದೆ; ಶಕ್ತಿಶಾಲಿಯಾಗಿದೆ. ಕ್ರುದ್ಧವಾಗಿದ್ದರೆ ಅಥವಾ ಗಾಯಗೊಂಡರೆ, ಇದಕ್ಕಿಂತ ಭಯಂಕರವಾದ ಪ್ರಾಣಿಯು ಆಫ್ರಿಕದಲ್ಲಿ ಬೇರೆ ಇಲ್ಲ ಎನ್ನುತ್ತಾರೆ. ಭಾರತದಲ್ಲಿ ಕಾಡು ಕೋಣವು ಹಳೆಯ ಮಾತಾಗುತ್ತ ಬಂದಿದೆ. ಪೂರ್ವದ ದೇಶಗಳಲ್ಲಿ ಇದು ಸಂಪೂರ್ಣ ನಿರ್ನಾಮವಾಗಿ ಹೋಗಿ, ಕೇವಲ ಮನೆಯುಪಯೋಗಕ್ಕೆ ಬೀಳುವ ಕೋಣಗಳು ಮಾತ್ರ ಉಳಿದಿವೆ.

ಆದರೆ ನೀರುಕೋಣಗಳು ಇಲ್ಲಿವೆ. ಇವುಗಳು ಪ್ರಜೋತ್ಪಾದಕವಲ್ಲವಾದರೂ (ಅವು ಶರತ್ಕಾಲದಲ್ಲಿ ಗರ್ಭಧಾರಣೆ ಮಾಡಿ, ಗ್ರೀಷ್ಮಕಾಲದಲ್ಲಿ ಸಾಮಾನ್ಯವಾಗಿ ಎರಡು ಕರುಗಳನ್ನು ಹಾಕುತ್ತವೆ) ಅವುಗಳ ವಿವಿಧ ಕ್ರೀಡೆಗಳೇ ಬಹುಕಾಲ ಬಾಳುವಂತೆ ಮಾಡಿವೆ.

ಅವುಗಳು ಯಾವಾಗಲೂ ಕಾಯಲು ಯೋಗ್ಯವಾಗಿವೆ. ಅವು ಸೋಮಾರಿಗಳ ರಾಜರಾಗಿದ್ದು, ಯಾರಿಂದಲೂ ತೋರವಾದ ಬೆತ್ತ ಅಥವಾ ಕೊಂಬು ಕಹಳೆಗಳಿಂದಲೂ ಅತ್ತಿತ್ತ ಚಲಿಸಲಾರವು. ಭೂಮಿಯ ಪುತ್ರರೆಂದರೆ, ಇವುಗಳೇ ಸರಿ. ಬೆಚ್ಚಗಿನ ದಿನಗಳಲ್ಲಿ ತಣ್ಣಗಿನ ಕೆಸರೇ ಇವುಗಳಿಗೆ ಹೂವಿನ ಹಾಸಿಗೆ. ಯಾರೊಬ್ಬನಿಂದಲೂ ಅವನ್ನು ತಮ್ಮ ಆ ವಾಸಸ್ಥಾನದ ವಾಸವನ್ನು ತೃಪ್ತಿಯಿಂದ ತ್ಯಜಿಸುವಂತೆ ಮಾಡುವುದು ಅಸಾಧ್ಯ. ಎಂತಲೇ ಭಾರತದ ವೈಶಿಷ್ಟ್ಯವೆಂದರೆ, ನನ್ನ ದೃಷ್ಟಿಯಲ್ಲಿ ಈ ಆಲಸಿ ನೀರ ಮಹಿಷಗಳು.

—ಯೋಜನಾ.

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತರ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ| ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

> ಭೋಗವು ಜೀವನದ ಉದ್ದೇಶಗಳಲ್ಲಿ ಒಂದಾದರೂ ಅದುವೇ ಚರಮೋದ್ದೇಶವಲ್ಲ; ಮಾನವ ಮಾತ್ರನಿಗೆ ತ್ಯಾಗಮಯ ಉದಾರತೆಯೇ ಆತನ ಜೀವನದ ಅಂತಿಮ ಧ್ಯೇಯವಾಗಿದೆ; ಹೀಗೆ ಬದುಕಿದವನೇ ಇಹದಲ್ಲೂ ಪರದಲ್ಲೂ ಮಾನ್ಯನಾಗುವನೆಂಬುದರಲ್ಲಿ ಸಂದೇಹವಿಲ್ಲ

NAVAYUGA
Founder —
A B SHETTY,
Former Minister for Public Health
Govt of Madras & Govt of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೯-೨-’೫೯	೨೩

ಸಮಸ್ಯಾ ಕಾರಣ

ಭಾರತವು ಪ್ರಗತಿಪಥದತ್ತ ಧಾವಿಸುತ್ತಿದೆ. ಅನೇಕಾನೇಕ ಅಭಿವೃದ್ಧಿ ಯೋಜನೆಗಳು ಕಾರ್ಯಾಚರಣೆಗೆ ಬರುತ್ತಿವೆ ಆದರೆ, ಈ ಯೋಜನೆಗಳಲ್ಲಿ ಕೆಲವಾದರೂ ಫಲಪ್ರದವಾಗಿ ಪರಿಣಮಿಸಿರುವುವಾದರೂ ಜನರ ಜೀವನ ಮಟ್ಟವನ್ನು ಮಾತ್ರ ಏರಿಸಿದಂತೆ ಕಾಣುವುದಿಲ್ಲ ಅಂಕೆಸಂಖ್ಯೆಗಳಿಗನುಸಾರವಾಗಿ ದೇಶದ ರಾಷ್ಟ್ರೀಯ ಆದಾಯ ಹೆಚ್ಚಿರಬಹುದು ಏತತ್ಕಾರಣದಿಂದ, ಸರಾಸರಿ ವೈಯಕ್ತಿಕ ಆದಾಯವೂ ಅಧಿಕವಾಗಿರಬಹುದು. ಆದರೆ, ಜನತೆಯು ಬಾಳುತ್ತಿರುವ ಸಂಕಷ್ಟವನ್ನು ಗಮನಿಸುವಾಗ, ಈ ಯೋಜನಾ ಫಲಶ್ರುತಿಯು ಇಂದ್ರಜಾಲವೆಂದೇ ಭಾವಿಸಬೇಕಾಗುತ್ತದೆ ಅಶನ, ವಸನ ಮತ್ತು ವಸತಿಯ ಪ್ರಶ್ನೆಯನ್ನು ನಾವು ಇನ್ನೂ ಸಮಸ್ಯೆಯಾಗಿಯೇ ಕಾಣುತ್ತಿದ್ದೇವಲ್ಲದೆ, ದೇಶದಿಂದ ಈ ಸಮಸ್ಯೆಯನ್ನು ದೂರವಾಗಿಸುವ ಪ್ರಯತ್ನ ಸಾಕಷ್ಟು ಯಶಸ್ವಿಯಾಗಿ ನಡೆಯುತ್ತಿದೆ ಎಂದು ಹೇಳುವಂತಿಲ್ಲ ಹಾಗೆ ಅನ್ನಬಹುದಾದರೆ, ಜನಜೀವನ ಕಠಿಣವೆನಿಸುತ್ತಿರಲಿಲ್ಲ.

ದೇಶದಲ್ಲಿ ಆದಾಯದ ಬಾಬುಗಳು ಹೆಚ್ಚಿವೆ, ಉದ್ಯೋಗಾವಕಾಶಗಳು ಹೆಚ್ಚಿವೆ; ಹಿಂದಿಗಿಂತ ಬಹುಪಾಲಿಗೆ ರಾಷ್ಟ್ರ ಪ್ರಗತಿಹೊಂದಿದೆ, ಎಲ್ಲರ ಆದಾಯವೂ ಏರಿದೆ —ಇದು ಅಂಕೆಗಳ ಸಾರಾಂಶ ಆದರೆ, ನಮ್ಮ ಸ್ವತಂತ್ರದೃಷ್ಟಿಯನ್ನು ಬೀರುವಾಗ, ನಿರುದ್ಯೋಗಸಮಸ್ಯೆ ಪೆಡಂಭೂತವಾಗಿ ಕಾಡುತ್ತಿರುವುದು, ಸಾಮಾನ್ಯ ಜನರು ಮರ್ಯಾದೆಯ ಜೀವನವನ್ನು ಅಹೋರಾತ್ರಿ ದುಡಿದರೂ ಬಾಳಲು ಅಸಮರ್ಥರಾಗುತ್ತಿರುವುದು, ಜನತೆಯ ನಿತ್ಯೋಪಯೋಗಿ ಪದಾರ್ಥಗಳ ಬೆಲೆಯು ದಿನೇ ದಿನೇ ಅಧಿಕವಾಗುತ್ತ ಹೋಗುವುದು ಇವರಿಂದ ದರಿದ್ರತನ ಬೆಳೆಯುವುದು ಕಂಡು ಬಾರದಿರದು ಹಾಗಿರುವಾಗ, ನಮ್ಮ ಯೋಜನೆಯ ಫಲವೆಲ್ಲಿ ಅಡಗಿತು ಎಂದರೆ, ಅದಕ್ಕೆ ಒಂದೇ ಒಂದು ಪ್ರಬಲ ಆಹಾರ—ಬೆಳೆಯುತ್ತಿರುವ ನಮ್ಮ ಜನಸಂಖ್ಯೆ!

ರಾಷ್ಟ್ರದ ಜನಸಂಖ್ಯೆಯನ್ನು ಕಡಿಮೆ ಮಾಡುವುದೇ ನಮ್ಮ ಯೋಜನೆಯು ಯಶಸ್ವಿಯಾಗಲು ಹೇತುವಾಗುವುದು. ಅರ್ಥಾತ್ ಜನನ ನಿಯಂತ್ರಣವನ್ನು ವ್ಯವಹಾರಕ್ಕೆ ತರುವುದರಿಂದಲೇ ದೇಶದ ಸ್ಥಿತಿಯು ಸುಧಾರಿಸುವುದು—ಎಂದು ಅಭಿಪ್ರಾಯ ಪಡಲಾಗುತ್ತಿದೆ ಆದರೆ ಜನನ ನಿಯಂತ್ರಣ ಮತ್ತು ಜೀವಿತ ಮಾನವರ ಹತ್ಯೆ ಎರಡೂ ಒಂದೇ ವಿಧವೆಂಬ ಭಾವನೆಯು ನಮ್ಮಲ್ಲಿದೆ, ಮಕ್ಕಳೆಂದರೆ ದೇವರಿತ್ತ ಆಶೀರ್ವಾದ ಎಂಬವರೂ ಇದ್ದಾರೆ ಆದರೆ, ಜೀವಿಸಿರುವ ಪ್ರಾಣಿಯನ್ನು ಜೀವಾಂತ್ಯಗೊಳಿಸುವುದಕ್ಕಿಂತ ಹುಟ್ಟುವುದಕ್ಕೆ ಮೊದಲೇ ತಡೆಹಿಡಿಯುವುದು ಶ್ರೇಯಸ್ಕರವೆಂದೇ ಹೇಳಬಹುದು ಅಮೇರಿಕೆ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸರಕಾರಗಳು ಈ ಸಂತತಿನಿರೋಧನನ್ನು ಅಧಿಕೃತವಾಗಿ ಸ್ವೀಕರಿಸಿ ಪ್ರಚಾರ ಮಾಡದೆ ಹೋದರೂ, ತಮ್ಮ ಆಯ-ವ್ಯಯಗಳನ್ನು ಹೊಂದಿಸಿಕೊಂಡು ಹೋಗುವಷ್ಟು ಜ್ಞಾನವುಳ್ಳವರಾದುದರಿಂದ, ಅಲ್ಲಿನವರು ಸ್ವೇಚ್ಛೆಯಿಂದ ಜನನ ನಿಯಂತ್ರಣವನ್ನು ಅವಲಂಬಿಸಿಕೊಳ್ಳುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ, ಅವರಿಗೆ ಈ ನಿಯಂತ್ರಣದಿಂದ ತಮಗೂ ತಮ್ಮ ರಾಷ್ಟ್ರಕ್ಕೂ ಯಾವ ಪರಿಯ ಲಾಭಗಳಿವೆ ಎಂದು ಕಂಡುಕೊಂಡಿದ್ದಾರೆ ಅಲ್ಲಿಯವರು ಸುಶಿಕ್ಷಿತರಾದುದರಿಂದಲೇ ಇವೆಲ್ಲವನ್ನೂ ತಿಳಿಯಲು ಅವರು ಶಕ್ಯರಾಗಿದ್ದಾರೆ ಆದರೆ ನಮ್ಮ ದೇಶದ ಸ್ಥಿತಿಯು ಹೀಗಿದೆಯೆ?

ಆದುದರಿಂದಲೇ ಭಾರತ ಸರಕಾರವೇ ಜನತೆಯಲ್ಲಿ ಸಂತತಿ ನಿರೋಧದ ಕಡೆಗೆ ಸದಭಿಪ್ರಾಯವನ್ನು ಮೂಡಿಸಬೇಕಾಗಿದೆ ನಮ್ಮ ಪ್ರಧಾನ ನೇತಾರರೆಲ್ಲರೂ ಸಂದರ್ಭ ಸಾಧಿಸಿ ಜನಸಂಖ್ಯೆಯ ಉಲ್ಬಣಾವಸ್ಥೆ ಮತ್ತು ಅದರಿಂದ ಒದಗುತ್ತಿರುವ ಹಾನ್ಯಾದಿಗಳನ್ನು ಪ್ರಸ್ತಾಪಿಸಿ ನಮ್ಮ ಸಮಸ್ಯೆಗಳ ಪರಿಹಾರಕ್ಕೆ ಇದೊಂದೇ ತಾರಕವೆಂದ ಉದ್ದುದ್ದ ಭಾಷಣ ಬಿಗಿಯುತ್ತಾರೆ ಪ್ರಚಾರ ಮಾಡುತ್ತಾರೆ ದೇಶದ ವಿವಿಧ ಪತ್ರಿಕೆಗಳೂ ಈ ಬಗ್ಗೆ ಸದಭಿಪ್ರಾಯದಿಂದ ಜನನ ನಿಯಂತ್ರಣದ ಆವಶ್ಯಕತೆಯನ್ನು ಪ್ರತಿಬಿಂಬಿಸುತ್ತವೆ ಆದರೆ ಅವುಗಳಿಂದ ಒದಗಿಬಂದ ಪ್ರಯೋಜನದ ಪರಿಮಾಣವೆಷ್ಟು? ನಮ್ಮ ದೇಶದಲ್ಲಿ ಸಂತತಿ ನಿರೋಧವನ್ನು ಕೈಗೊಳ್ಳಲು ಬಂದ ಸಂಸಾರಗಳೆಷ್ಟು? ದೇಶದ ಕೋಟಿಗಟ್ಟಲೆ ಹೆಚ್ಚುವ ಜನಸಂಖ್ಯೆಯ ಏರಿಕೆಯ ಪ್ರಮಾಣ ಕಡಿಮೆಯಾಯಿತೆ? ಎಂದು ನಾವು ಪ್ರಶ್ನಿಸುವಾಗ ನಮಗೆ ಸಮಾಧಾನಕಾರಕವಾದ ಉತ್ತರವು ಹೊಳೆಯುವು! ಇಲ್ಲ ಎಂದರೆ ಈ ವಿಧದ ಪ್ರಚಾರವು ಸಾಕಷ್ಟು ನಡೆದಿಲ್ಲವೆಂದೋ ನಡೆದ ಪ್ರಚಾರವು ಪರಿಣಾಮಕಾರಕವಾಗಿ ಜರಗಲಿಲ್ಲವೆಂದೋ ಹೇಳಬಹುದು. ಆದರೆ, ಒಂದು ಮಾತಂತೂ ನಿಜ, ನಮ್ಮ ದೇಶದಲ್ಲಿ ಅಕ್ಷರಸ್ಥರು, ಪತ್ರಿಕೆಗಳನ್ನು ಓದಿ ಅರ್ಥಮಾಡಿಕೊಳ್ಳಬಲ್ಲವರು ಹಾಗೂ ಉಪನ್ಯಾಸಾದಿಗಳನ್ನು ಕೇಳಿ, ಅದರ ಸಾರವನ್ನು ಗ್ರಹಿಸಬಲ್ಲವರು ಎಷ್ಟು ಜನ? ನೂರಕ್ಕೆ ಸುಮಾರು ಎಂಭತ್ತು ಎಂಭತ್ತೈದರಷ್ಟು ಜನರು ಅಶಿಕ್ಷಿತರೂ ಅಲ್ಪಶಿಕ್ಷಿತರೂ ಇರುವ ಭಾರತದಲ್ಲಿ ಸೇಕಡಾ ತೊಂಭತ್ತಕ್ಕಿಂತಲೂ ಹೆಚ್ಚಿನ ಜನರಿಗೆ ತಮ್ಮ ಹೊಟ್ಟೆ ಹೊರೆಯುವುದೇ ಕಠಿಣವಾಗಿ ಪರಿಣಮಿಸುವವರಿರುವ ಭಾರತದಲ್ಲಿ ಇವುಗಳಿಂದ ಶೀಘ್ರ ಫಲ ದೊರೆಯುವುದಾದರೂ ಹೇಗೆ?

ಒತ್ತಾಯದಿಂದ ಇಂತಹ ಒಂದು ಚಳವಳಿಯನ್ನು ಮೂಡಿಸುವುದು ಕ್ಷೇಮಕರವೂ ಅಲ್ಲ, ಸುಲಭ ಸಾಧ್ಯವೂ ಅಲ್ಲ ಜನತೆಯ ಮನ ಒಲಿಸಿಯೇ ಇದನ್ನು ವ್ಯವಹಾರಕ್ಕೆ ತರಬೇಕೆಂಬುದು ಸ್ವಯಂಸಿದ್ಧ ಆದರೆ ಜನತೆಯು ಸುಶಿಕ್ಷಿತವೂ ಸಜ್ಞಾನ ಸಹಿತವೂ ಆಗಿರದೆ ಹೋದರೆ, ಇವುಗಳ ಉಪಕಾರಾದಿಗಳನ್ನು ಕೇವಲ ಪ್ರಚಾರದಿಂದ ಮಾತ್ರ ತಿಳಿದುಕೊಳ್ಳಲಾರರು, ತಿಳಿದುಕೊಂಡರೂ ಅವುಗಳನ್ನು ಸ್ವೇಚ್ಛೆಯಿಂದ ಕಾರ್ಯಾನ್ವಿತಗೊಳಿಸಲು ಮುಂದಾಗಲಾರರು ಆದುದರಿಂದ ಆಡಂಬರ ಪೂರ್ಣ ಪ್ರಚಾರಾದಿಗಳಿಗೆ ಅನಾವ್ಯಯ ಮಾಡುವ ಹಣವನ್ನು ಜನತೆಯ ಜ್ಞಾನವರ್ಧನಕ್ಕೆ ಉಪಯೋಗಿಸಿದರೆ, ಸದ್ಯಕ್ಕಲ್ಲವಾದರೂ ಕ್ರಮೇಣ ಪ್ರಯೋಜನವು ದೊರೆತೀತು ಜೀವನದಲ್ಲಿ ಒಂದು ಶಿಸ್ತು ಅಥವಾ ಕ್ರಮಬದ್ಧತೆಯು ಬಂದಾಗ ಸಂಯಮನ ಶಕ್ತಿಯೂ ತಾನೇ ತಾನಾಗಿ ಬರುವುದು ಇದಕ್ಕಾಗಿ, ‘ಸಂತತಿ ನಿರೋಧ’ವನ್ನು ಉಚಿತ ರೀತಿಯಲ್ಲಿ ಜನಪ್ರಿಯಗೊಳಿಸುವುದರೊಡನೆಯೇ ಜನತೆಯ ಆದಾಯವನ್ನು ಪ್ರತ್ಯಕ್ಷವಾಗಿ ಹೆಚ್ಚಿಸುವ, ಎಲ್ಲರನ್ನೂ ಪ್ರಶಿಕ್ಷಿತರನ್ನಾಗಿಸುವ ಕ್ರಮಗಳನ್ನೂ ಅಧಿಕಾಧಿಕವಾಗಿ ಕೈಗೊಳ್ಳಬೇಕು ಇಲ್ಲವಾದರೆ, ವ್ಯರ್ಥ ಪ್ರಚಾರದಿಂದ ಹಣವು ಮಾತ್ರ ವ್ಯಯವಾಗುವುದಲ್ಲದೇ ಪ್ರಯೋಜನ ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ದೊರೆಯಲಾರದೆಂಬುದು ನಿಸ್ಸಂದೇಹ

ಡಾ। ಕೆ. ಎಲ್. ಐತಾಳರು

ಉಡುಪಿ ನಗರ ಸಭೆಯ ಅಧ್ಯಕ್ಷರಾಗಿ ಡಾ॥ ಕೆ. ಎಲ್ ಐತಾಳರ ಅವಿರೋಧನಾಗಿ ಆಯ್ಕೆಯಾದ ವರ್ತಮಾನವು ನಿಜವಾಗಿಯೂ ಸ್ವಾಗತಾರ್ಹವಾಗಿದೆ ಡಾ| ಐತಾಳರು ನಿಷ್ಕಲ್ಮಶ ಪ್ರೇಮ, ಸರಳ ಜೀವನ ಹಾಗೂ ಉದಾರತೆಗಳಿಂದ ಜನಪ್ರೀತರಾದವರಿದ್ದಾರೆ ಉಡುಪಿಯ ಸರ್ವ ನಾಗರಿಕರ ಪ್ರೀತ್ಯಾದರಗಳನ್ನು ಗಳಿಸಿರುವ ಡಾ। ಐತಾಳರು ಉಡುಪಿ ನಗರ ಸಭೆಯಲ್ಲಿ ಈ ಹಿಂದೆಯೂ ಸದಸ್ಯರಾಗಿ ದುಡಿದು ನುರಿತವರು, ಸ್ಥಳೀಯ ಸಂಸ್ಥೆಗಳ ಆಡಳಿತೆಯಲ್ಲಿ ಅನುಭವವಿರುವವರು ಈ ಬಾರಿ ಅವರು ಸೆಂಟ್ರಲ್ ವಾರ್ಡಿನಿಂದ ಕಾಂಗ್ರೆಸ್ ಪಕ್ಷದ ಬೆಂಬಲದಿಂದ ಆರಿಸಿ ಬಂದಿದ್ದಾರೆ ಅವರು ಉಡುಪಿಯ ಯಾವುದೇ ವಾರ್ಡಿನಲ್ಲಿ ನಿಂತರೂ ಗೆದ್ದು ಬರುವಷ್ಟು ಜನಪ್ರಿಯರಾದವರು, ಅಲ್ಲದೆ, ನಿಷ್ಠಾವಂತ ಕಾಂಗ್ರೆಸಿಗರೂ ಹೌದು ಡಾ| ಐತಾಳರಂತಹ ಹಿರಿಯ ಅನುಭವಿಯನ್ನು ಉಡುಪಿ ನಗರ ಸಭೆಯ ಅಧ್ಯಕ್ಷರನ್ನಾಗಿ ಆರಿಸಿ, ಜನತೆಯು ಅವರು ಸಲ್ಲಿಸಿದ ಸೇವೆಗೆ ತಕ್ಕ ತಮ್ಮ ಗೌರವವನ್ನು ಅರ್ಪಿಸಿದೆ, ಡಾ। ಐತಾಳರೂ ಅದನ್ನು ಕೃತಜ್ಞತಾಪೂರ್ವಕ ಸ್ವೀಕರಿಸಿ, ಕಡಿಮೆ ಆದಾಯವಿರುವುದಾದರೂ ಅಧಿಕ ವೆಚ್ಚ ಪ್ರದವಾಗಿರುವ ನಗರ ಸಭೆಯ ಆಡಳಿತೆಯನ್ನು ಉತ್ತಮೀಕರಿಸಿ ಸುಯೋಗ್ಯ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗಿ, ಸರ್ವರ ಅನುರಾಗಕ್ಕೆ ಪಾತ್ರರಾಗುವಂತಾಗಬೇಕು. ಉಡುಪಿ ನಗರ ಸಭೆಯು ತನ್ನಂತಹ ಇತರ ನಗರ ಸಭೆಗಳಿಗೆ ಮಾರ್ಗದರ್ಶನ ಮಾಡುವಂತಾಗಬೇಕು. ಡಾ| ಐತಾಳರಿಂದ ಉಡುಪಿಯ ಜನತೆ ಅದನ್ನೇ ನಿರೀಕ್ಷಿಸಿ ತನ್ನ ಶುಭಾಕಾಂಕ್ಷೆ ಸಲ್ಲಿಸುತ್ತದೆ

ಸಂಕ್ಷಿಪ್ತ ಸುದ್ದಿಗಳು

ಯೋಗ್ಯತೆಗೆ ಪ್ರಾಶಸ್ತ್ಯ

ಅಮೇರಿಕೆಯ ವಿಶ್ವವಿದ್ಯಾಲಯಗಳಿಗೆ ಕೇವಲ ಅರ್ಹತೆಯ ಮೇಲೆ ಪ್ರವೇಶ ದೊರೆಯುತ್ತವೆ ಎಸ್. ಎಸ್ ಸಿ ಪರೀಕ್ಷೆಗೆ ನಾಲ್ಕಾರು ತಿಂಗಳು ಮುಂಚಿತವಾಗಿಯೇ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು ತಮ್ಮ ಅಧೀನದಲ್ಲಿರುವ ಪ್ರದೇಶಗಳಲ್ಲಿರುವ ಹೈಸ್ಕೂಲುಗಳಿಗೆ ಭೇಟಿಯಿತ್ತು ವಿದ್ಯಾರ್ಥಿಗಳನ್ನು ಸಂದರ್ಶಿಸಿ ಅವರ ಪ್ರಗತಿ ಪತ್ರಿಕೆಗಳಿಂದ ಅವರ ಯೋಗ್ಯತೆಯನ್ನು ನಿರ್ಧರಿಸಿ ವಿಶ್ವವಿದ್ಯಾಲಯಗಳಿಗೆ ಯೋಗ್ಯರಿಗೆ ಪ್ರವೇಶ ನೀಡುತ್ತಾರೆ ಅಲ್ಲಿ ಬಂದನಂತರ, ಜಾಣ ವಿದ್ಯಾರ್ಥಿಗಳಿಗೆ ಅವರಿಗೆ ಅಗತ್ಯವಿರುವಷ್ಟು ಹಣದ ಶಿಷ್ಯವೃತ್ತಿ ದೊರೆಯುತ್ತದೆ. ಸಾಮಾನ್ಯ ವಿದ್ಯಾರ್ಥಿಗಳಿಗೆ ಕೆಲಸ ಮಾಡಿ ಶಿಕ್ಷಣಕ್ಕೆ ಬೇಕಾದ ಹಣ ಒದಗಿಸಿಕೊಳ್ಳಲು ಏರ್ಪಾಡು ಮಾಡಿಕೊಡುತ್ತಾರೆ ಅಲ್ಲಿ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರು ಕೇವಲ ಭಾಷಣ ಬಿಗಿಯುವುದಕ್ಕಿಂತ ವಿದ್ಯಾರ್ಥಿಗಳ ಚಿಕ್ಕ ಗುಂಪುಗಳನ್ನು ಕಟ್ಟಿಕೊಂಡು ಅವರೊಡನೆ ವಿಷಯವನ್ನು ಚರ್ಚಿಸಿ ಅವರ ಬುದ್ಧಿಯ ವಿಕಸನಕ್ಕೆ ನೆರವಾಗುತ್ತಾರೆ. ಆದುದರಿಂದ ಅಲ್ಲಿ ವಿಶ್ವವಿದ್ಯಾಲಯ ಪ್ರವೇಶಿಸುವ ವಿದ್ಯಾರ್ಥಿಗಳಲ್ಲಿ ನೂರಕ್ಕೆ ೯೯ ಜನರು ಉತ್ತೀರ್ಣರಾಗಿ ತಮ್ಮ ದೇಶ ಸೇವೆಗೆ ಅಣಿಯಾಗುತ್ತಾರೆ

ಆದರೆ, ನಮ್ಮಲ್ಲಿ ಬುದ್ಧಿಶಕ್ತಿಯ ಪರೀಕ್ಷೆ ನಡೆಯುವುದಿಲ್ಲ, ಸ್ಮರಣ ಶಕ್ತಿಯ ಪರೀಕ್ಷೆ ನಡೆಯುತ್ತಿದೆ ಪ್ರಾಧ್ಯಾಪಕರು—ವಿದ್ಯಾರ್ಥಿಗಳಲ್ಲಿ ನಿಕಟ ಸಂಪರ್ಕವಿರುವುದಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಸ್ಮರಣ ಶಕ್ತಿಯ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಾರೆ ನಮ್ಮ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳನ್ನು ಹೊರಗೆ ತಳ್ಳಿ ಹಾಕುತ್ತ ಹೋಗುವ ಪದ್ಧತಿ ಇರುವುದರಿಂದ ೧೦೦ ಎಸ್ ಎಸ್ ಸಿ ವಿದ್ಯಾರ್ಥಿಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆದು ಹೊರ ಬೀಳುವವರು ಐದೋ ಹತ್ತೋ ಜನರು ಈ ಪದ್ಧತಿ ಬದಲಾಗಬೇಕು, ಅಂದರೇನೇ ನಮಗೆ ತಾರಕ ಅಮೇರಿಕೆಯವರ ಶಿಕ್ಷಣ ಪದ್ಧತಿಯಲ್ಲಿ ಕುಂದುಗಳೂ ಇವೆ ಆದರೆ, ಅದರಲ್ಲಿರುವ ಉತ್ತಮಾಂಶಗಳನ್ನು ನಾವು ಅನುಸರಿಸಿ ನಮ್ಮ ಶಿಕ್ಷಣ ಕ್ಷೇತ್ರದಲ್ಲಿಯೂ ಸುಧಾರಣೆ ಮಾಡಿಕೊಳ್ಳಬೇಕು.

ಎಂದು ಶ್ರೀ ವಿ. ಕೃ. ಗೋಕಾಕರವರು ವಿದ್ಯಾ ಪ್ರೇಮಿಗಳಿಗೆ ಕರೆ ಕೊಟ್ಟಿದ್ದಾರೆ.

ಭಾರತ-ರಶ್ಯಾ ವ್ಯಾಪಾರ

ಸೋವಿಯತ್ ಕಮ್ಯುನಿಷ್ಟ ೨೧ನೆಯ ಸಮ್ಮೇಳನದಲ್ಲಿ ಭಾಗವಹಿಸಲು ರಶ್ಯಕ್ಕೆ ತೆರಳಿರುವ ಕೇರಳದ ಮುಖ್ಯ ಮಂತ್ರಿ ನಂಬೂದರಿ ಪಾದರು ಸ್ವದೇಶಕ್ಕೆ ಮರಳಿ ಬಂದರು. ರಶ್ಯ ಮತ್ತು ಭಾರತಗಳ ನಡುವೆ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ನಡೆಯುವುದು ಸಾಧ್ಯವಿದೆಯೆಂದೂ ಭಾರತವು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡಪಕ್ಷದಲ್ಲಿ ಅದು ತನ್ನ ಮೂರನೆ ಮತ್ತು ನಾಲ್ಕನೆಯ ಪಂಚವಾರ್ಷಿಕ ಯೋಜನೆಗಳನ್ನು ಗಣನೀಯ ಪ್ರಮಾಣದಲ್ಲಿ ಮುಂದುವರಿಸಲು ಅನುಕೂಲವಾಗುವುದೆಂದೂ ಅವರು ಮಾತನಾಡುತ್ತ ದೆಹಲಿಯಲ್ಲಿ ಹೇಳಿದರು. ತಾನು ಈ ವಿಚಾರವನ್ನು ಪ್ರಧಾನಿ ನೆಹರೂರವರೊಡನೆಯೂ ರಾಷ್ಟ್ರೀಯ ಅಭಿವೃದ್ಧಿ ಮಂಡಳದೊಡನೆಯೂ ಸೂಚಿಸುವುದಾಗಿಯೂ ಬಹಿರಂಗ ಪಡಿಸಿದ್ದಾರೆ.

ಭೂಕಂದಾಯ ಏರಲಿ

ತೃತೀಯ ಯೋಜನೆಗೆ ಆವಶ್ಯಕವಾದ ಬಂಡವಳವನ್ನು ಸಂಪಾದಿಸುವ ಕಾರ್ಯಕ್ರಮದಲ್ಲಿ ಸಹಕಾರಿಯಾಗುವಂತೆ ಹಾಗೂ ಯೋಜನೆಯ ಮೂಲಭೂತ ಧೋರಣೆಗಳ ಬಗ್ಗೆ ಯೋಜನಾ ಆಯೋಗದ ಸದಸ್ಯರಾದ ಶ್ರೀ ಮನ್ನಾರಾಯಣರು ಆರ್ಥಿಕಾಭಿವೃದ್ಧಿಗಾಗಿ ಆಂತರಿಕ ಸಾಧನ ಸಂಪತ್ತಿಯನ್ನು ಹೆಚ್ಚಿಸಲು ಒಕ್ಕಲಿಗರಿಂದ ಹೆಚ್ಚು ಕರವಸೂಲಿ ಮತ್ತು ಕಡ್ಡಾಯ ವಿಮೆಯ ಮೂಲಕ ಉಳಿತಾಯ ಸಾಧಿಸುವುದು ಮತ್ತು ಅಭಿವೃದ್ಧ್ಯೇತರ ವೆಚ್ಚವನ್ನು ಆದಷ್ಟು ಕನಿಷ್ಠ ಪ್ರಮಾಣಕ್ಕೆ ತರುವುದು ಇತ್ಯಾದಿ ಮಾರ್ಗಗಳನ್ನು ಸೂಚಿಸಿದ್ದಾರೆ. ಅಲ್ಪಾವಧಿಯಲ್ಲಿ ಫಲಪ್ರದವಾಗಬಹುದಾದ ಯೋಜನೆಗಳಿಗೆ ಸಾಲವೆತ್ತಬಹುದಾದರೂ ದೀರ್ಘಾವಧಿಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೊರತೆ ಧನವನ್ನು ವಿನಿಯೋಗಿಸುವುದು ಸರಿಯಲ್ಲವೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಪಶುಪಾಲಕ ಸಮ್ಮೇಳನ

೧೧ನೆಯ ಅಖಿಲ ಭಾರತ ಪಶುಪಾಲಕರ ಸಮ್ಮೇಳನವು ಫೆಬ್ರವರಿ ೨೨ರಂದು ಬೆಂಗಳೂರಲ್ಲಿ ನಡೆಯಲಿರುವುದು. ಭಾರತದ ವಿವಿಧೆಡೆಗಳಿಂದ ಸುಮಾರು ೬೦೦ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿರುವರು. ನಮ್ಮ ಸಮಸ್ಯೆಗಳನ್ನು ಚರ್ಚಿಸಲು ಸಾಮಾನ್ಯ ವಾತಾವರಣವನ್ನು ನಿರ್ಮಿಸುವುದೇ ಈ ಸಮ್ಮೇಳನದ ಉದ್ದೇಶವಾಗಿದೆ. ಫೆಬ್ರವರಿ ೨೨ರಂದು ಕೇಂದ್ರ ವಾಣಿಜ್ಯ ಮತ್ತು ಔದ್ಯಮಿಕ ಮಂತ್ರಿ ಶ್ರೀ ಲಾಲ ಬಹದೂರ ಶಾಸ್ತ್ರಿಗಳು ಈ ಸಮ್ಮೇಳನದ ಅಂಗವಾಗಿ ಏರ್ಪಡಿಸಲಾದ ಪಶುಪ್ರದರ್ಶನವನ್ನು ಉದ್ಘಾಟಿಸುವರು. ಇದರಲ್ಲಿ ಸುಮಾರು ೧೧೦೦೦ ಪಶುಗಳು ಪ್ರದರ್ಶಿಸಲ್ಪಡುವ ನಿರೀಕ್ಷೆಯಿದೆ. ಪಶುಗಳಿಗಾಗಿ ೧೪೮ ಸ್ಪರ್ಧೆಗಳನ್ನೂ ಏರ್ಪಡಿಸಲಾಗಿದೆ. ಅಮೇರಿಕೆ, ಘಾನಾ, ಸ್ವಿಜರ್‌ಲೇಂಡ್ ಮತ್ತು ಬಲ್ಗೇರಿಯಾ ಮೊದಲಾದ ದೇಶಗಳೂ ಇದರಲ್ಲಿ ಭಾಗವಹಿಸುವುವು.

ಫ್ಲೂಗೆ ಶುಂಠಿ ದಿವ್ಯೌಷಧಿ.

ಇನ್‌ಫ್ಲ್ಯೂಯೆಂಜವನ್ನು ಗುಣಪಡಿಸುವ ಶಕ್ತಿ ಶುಂಠಿಯಲ್ಲಿದೆ. ಚೀನೀಯರು ೪೭೦೦ ವರ್ಷಗಳಿಂದಲೂ ಇದನ್ನು ಅರಿತುಕೊಂಡಿದ್ದಾರೆ. ಈ ರಹಸ್ಯವನ್ನು ಕಾಂಫ್ರ್ಯಾಯ ಲೋಯಲಾ ಕಾಲೇಜಿನ ಇತಿಹಾಸದ ಪ್ರಾಧ್ಯಾಪಕರಾದ ಫ್ರಾನ್ಸಿಸ್ ಶೇ ಅವರು ಲೋಸ್ ಎಂಜಲಿಸ್‌ನಲ್ಲಿ ಬಹಿರಂಗಗೊಳಿಸಿದರಲ್ಲದೆ, ಕೆಲಸಮಯದ ಹಿಂದೆ ತನಗೆ ಫ್ಲೂ ಅಂಟಿಕೊಂಡಾಗಲೂ ತಾವು ಈ ಔಷಧಿಯನ್ನೇ ಸೇವಿಸಿ ಗುಣಮುಖನಾಗಿರುವೆನೆಂದು ಅನುಭವವನ್ನು ವಿವರಿಸಿದರು. ಫ್ಲೂ ಬರುವುದಕ್ಕೆ ಮೊದಲು ಮೈ ಕೈ ಚುಚ್ಚ ಹತ್ತಿದೊಡನೆಯೇ ಶುಂಠಿ ಕಷಾಯವನ್ನು ಬಿಸಿ ಬಿಸಿಯಾಗಿರುವಾಗಲೇ ಕುಡಿಯಬೇಕು. ನೀರಲ್ಲಿ ಶುಂಠಿ ಹಾಕಿ ಆ ನೀರು ಮರಳಿಸುತ್ತ ಮೋರೆಗೆ ಮುಸುಕು ಹಾಕಿಕೊಂಡು ಆ ಉಗಿಯನ್ನು ಉಸಿರಾಡಿಸಬೇಕು. ಹೀಗೆ ಮಾಡಿದರೆ ಬೇಗನೇ ಗುಣವು ಕಂಡು ಬರುವುದು.

ಅಲ್ಲಲ್ಲಿಯ ಸುದ್ದಿಸಾರ

ಕವಿಪಾರ್ತಿ ಸುಬ್ಬ ಜಯಂತಿಯು ಮಂಗಳೂರು ಗವರ್ನಮೆಂಟ್ ಆರ್ಟ್ಸ ಕಾಲೇಜಿನ ಕನ್ನಡ ಮಹಾಸಭೆಯ ಆಶ್ರಯದಲ್ಲಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಆರ್. ಆರ್. ಉಮರ್ಜಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಬಾಲಕೃಷ್ಣರಾಯರು ಪಾರ್ತಿ ಸುಬ್ಬನ ಕವಿತಾ ಮಹಿಮೆಯನ್ನು ಕೊಂಡಾಡಿ ಭಾಷಣವಿತ್ತರು. ಶ್ರೀ ಡಿ. ಕೃಷ್ಣಾನಂದ ಚೌಟರು ಧನ್ಯವಾದವಿತ್ತರು. ಶ್ರೀ ಬಾಲಕೃಷ್ಣರಾವ್ ಮತ್ತು ಪಾರ್ಟಿಯವರಿಂದ ವಾಲಿವಧೆ ಯಕ್ಷಗಾನ ನಡೆಯಿತು.

ಎಕೆಡೆಮಿ ಸಂಗೀತ ಕಲಾಶಾಲೆಯ ವರ್ಧಂತಿಯು ಉಡುಪಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಎಕೆಡೆಮಿ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಕೆ. ಕೃಷ್ಣಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯರಾದ ಶ್ರೀ ಮಾಧವ ಭಟ್ಟರು ಶಾಲಾ ವರದಿಯನ್ನೋದಿದರು. ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ಬಹುಮಾನಗಳನ್ನು ವಿತರಣೆ ಮಾಡಿ ಈ ಕಲಾ ಶಾಲೆಯ ಪ್ರಯೋಜನವನ್ನು ಎಲ್ಲರೂ ಪಡೆಯಬೇಕೆಂದರು.

ಬ್ರಹ್ಮಾವರದಲ್ಲಿ ಶಾಲಾ ವರ್ಧಂತಿ ಇಲ್ಲಿಯ ಎಸ್. ಎಮ್. ಎಸ್. ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 10ರಂದು ಶ್ರೀ ಬಿ. ಜಗಜ್ಜೀವನದಾಸ ಸೆಟ್ಟಿ, ಎಮ್.ಎಲ್.ಎ.ರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ರೆ| ಫಾ| ಕೆ. ಕೆ. ಕುರಿಯಾಕೋಸ್‌ರವರು ಸ್ವಾಗತ ಭಾಷಣಮಾಡಿದರು. ವಿದ್ಯಾರ್ಥಿ ಮುಖಂಡ ಶ್ರೀ ಎಚ್. ನಾರಾಯಣ ಐತಾಳರು ಶಾಲಾ ಸಮಿತಿ ವರದಿಯನ್ನೋದಿದರು. ಶಾಲಾ ಹೆಡ್ಮಾಸ್ತರ್ ಶ್ರೀ ಕೆ. ಆರ್. ಹಂದೆಯವರು ಶಾಲೆಯ ಪ್ರಗತಿಪರ ವರದಿಯನ್ನೋದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ವಿದ್ಯಾಸಂಸ್ಥೆಯು ಸುತ್ತುಮುತ್ತಲಿನ 26,000 ಮಂದಿ ಹಳ್ಳಿಗರಿಗೆ ಹಿರಿಯ ವಿದ್ಯಾ ಸೌಲಭ್ಯವನ್ನು ನೀಡಿ ವಿದ್ಯಾ ಪ್ರಚಾರ ಕಾರ್ಯದಲ್ಲಿ ಮುನ್ನಡೆಯಲೆಂದು ಆಶಿಸಿದರು. ಶ್ರೀ ಓ. ಕೆ. ವಿಠಲರಾಯರು ಧನ್ಯವಾದಗಳನ್ನರ್ಪಿಸಿದರು. ನಂತರ ವಿವಿಧ ವಿನೋದಾವಳಿಗಳಾದುವು.

ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ—ತಾ. 8ರಂದು ದ. ಕ. ಜಿಲ್ಲಾ ಕೋಟ ಗ್ರಾಮದ ಪ್ರಖ್ಯಾತ ಕಲಾವಿದರಾದ ಅಮೃತೇಶ್ವರಿ ಮೇಳದವರಿಂದ ಲವಕುಶ ಎಂಬ ಪ್ರಸಂಗವು ಯಕ್ಷಗಾನ ರೂಪದಿಂದ ಪ್ರದರ್ಶಿಸಲ್ಪಟ್ಟಿತು. ರಾಜಸೇವಾಸಕ್ತ ಶ್ರೀ ಡಿ. ಪಿ. ಸುಬ್ಬರಾಯಪ್ಪನವರು ಅಧ್ಯಕ್ಷತೆ ವಹಿಸಿದ್ದರು ಪ್ರಾರಂಭದಲ್ಲಿ ಶ್ರೀ ಕೆ. ಗೋಪಾಲ ಕೃಷ್ಣರಾಯರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಪಿ. ನಾರಾಯಣನವರು ಯಕ್ಷಗಾನ ಪಾತ್ರದವರ ಪರಿಚಯ ಮಾಡಿಕೊಟ್ಟರು. ಪರಿಷತ್ತಿನ ಕಾರ್ಯದರ್ಶಿಗಳು ಸರ್ವರಿಗೂ ವಂದನೆಗಳನ್ನರ್ಪಿಸಿದರು.

ಉಡುಪಿ ಸಿಸಿಲಿ ಹೈಸ್ಕೂಲಿನ ವಾರ್ಷಿಕೋತ್ಸವವು—ತಾ. 9ರಂದು ಎಲೋಸಿಯಸ್ ಕಾಲೇಜಿನ ರೆಕ್ಟರ್ ಪ್ರಿನ್ಸಿಪಾಲರಾದ ರೆ| ಫಾ| ಎ ಸಾಲ್ಡಾನಾ, ಎಸ್. ಜೆ. ಅವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ನೆರವೇರಿತು. ಐನೂರಕ್ಕೆ ಮಿಕ್ಕಿ ವಿದ್ಯಾರ್ಥಿಗಳಿಗೆ ವಿದ್ಯಾದಾನನೀಯುತ್ತಿರುವ ಪ್ರಗತಿಪರ ಸಂಸ್ಥೆಯ ವರದಿಯನ್ನು ಶ್ರೀ ಎಲ್. ರೇಗೋ ಅವರು ಮುಂದಿಟ್ಟರು. ಹೆಂಗಸರಿಗೆ ಜೀವನಕ್ಕೆ ದಾರಿ ತೋರಬಲ್ಲ ಕಸೂತಿ ಜೊತೆಗೆ ತರಗತಿಗಳನ್ನು ಈಗ ವಿಶೇಷವಾಗಿ ನಡೆಸಲ್ಪಡುತ್ತಿರುವವರನ್ನು ಅಭ್ಯಾಸ ಹೊಂದಿದ ವಿದ್ಯಾರ್ಥಿಗಳು ಲೋವರ್ ಮತ್ತು ಹಾಯರ್ ಪರೀಕ್ಷೆಗಳಿಗೆ ಕುಳಿತುಕೊಳ್ಳಬಹುದೆಂದೂ, ಸಾರ್ವಜನಿಕರ ಮನವಿಯೊಳಗೆ ಇಂಗ್ಲಿಷ್ ತರಗತಿಗಳನ್ನು ತೆರೆಯಲಾಗಿದೆಯೆಂದೂ ವರದಿಯಲ್ಲಿ ನಮೂದಿಸಲ್ಪಟ್ಟಿತ್ತು. ತರಗತಿಗಳಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿರುವ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ಅಧ್ಯಕ್ಷರು ಹಂಚಿದ ತರುವಾಯ ಬದಲಾಗುತ್ತಿರುವ ಶಿಕ್ಷಣ ಕ್ರಮದಲ್ಲಿ ತಲೆಯೆತ್ತುತ್ತಿರುವ ಅನೇಕ ಸಮಸ್ಯೆಗಳನ್ನು ಚರ್ಚಿಸಿ ಈ ವಿದ್ಯಾಸಂಸ್ಥೆಯು ಶಿಕ್ಷಣ ವಿಧಾನದಲ್ಲಿ ಆದರ್ಶ ಸಂಸ್ಥೆಯಾಗಿ ಮೆರೆಯಲೆಂದು ಆಶೀರ್ವದಿಸಿ ಭಾಷಣವಿತ್ತರು. ಕನ್ನಡ, ಹಿಂದೀ, ಇಂಗ್ಲಿಷ್ ನಾಟಕಗಳು ಮತ್ತು ವಿವಿಧ ನೃತ್ಯಾದಿಗಳಾದ ಬಳಿಕ ಸಮಾರಂಭ ಕೊನೆಗೊಂಡಿತು.

ಕುಡುಮಲ್ಲಿಗೆ ಸರ್ವೋದಯ ಮಂಡಳಿ—ಯ ನೇತೃತ್ವದಲ್ಲಿ ಕಳೆದ ತಾ. 30ರಿಂದ ಸರ್ವೋದಯ ಪಕ್ಷಾಚರಣೆ ಆಚರಿಸಲ್ಪಟ್ಟಿತು. ಶ್ರೀ ಭವಾನಿ ರಾಮ ಪರ್ಮರರವರು ಸಭಾಧ್ಯಕ್ಷತೆ ವಹಿಸಿದ್ದರು. ಪ್ರತಿದಿನ ಶಾಂತಿಸೇವಕ ಶ್ರೀ ಬಿ. ಎಚ್. ಕೃಷ್ಣಪ್ಪನವರೇ ಮೊದಲಾದ ಮಂಡಳಿಯವರಿಂದ ಭಜನೆ, ವಿಚಾರಗೋಷ್ಠಿ ಮೊದಲಾದ ಕಾರ್ಯಕ್ರಮಗಳಾದುವು. ಕೊನೆಯ ದಿನವಾದ ತಾ 12ರಂದು ಶ್ರೀ ಮುದ್ರಾಡಿ ಕೃಷ್ಣಯ್ಯ ಸೆಟ್ಟರು ಧ್ವಜಾರೋಹಣ ಮಾಡಿದರು. ಅಂದು ರಾತ್ರೆ ಸರ್ವೋದಯ ಮಂಡಳಿಯ ಕಲಾವಿದರಿಂದ 'ಕೋಟಿ ಚೆನ್ನಯ್ಯ' ಯಕ್ಷಗಾನ ನಾಟಕವು ಶ್ರೀ ಟಿ. ಎಲ್. ಕಲ್ಲಯ್ಯ, ಎಡ್ವೊಕೇಟ್, ಶಿವಮೊಗ್ಗ ಅವರ ಅಧ್ಯಕ್ಷತೆಯಲ್ಲಿ ಅಭಿನಯಿಸಲ್ಪಟ್ಟಿತು. ಮಂಡಳಿಯ ಅಧ್ಯಕ್ಷ ಡಾ| ಯು. ಚಂದ್ರಶೇಖರನವರು ಸ್ವಾಗತಭಾಷಣಮಾಡಿದರು. ಕಾರ್ಯದರ್ಶಿ ಶ್ರೀ ಜಿ. ಎ. ಗುರಪ್ಪನವರು ವರದಿ ವಾಚನ ಮಾಡಿದರು. ಶ್ರೀ ಟಿ. ಅಚ್ಚಣ್ಣಸೆಟ್ಟರು ಧನ್ಯವಾದಗಳನ್ನಿತ್ತರು. ಪಕ್ಷಾಚರಣೆ ಸಂದರ್ಭದಲ್ಲಿ ಅರುವತ್ತೆರಡು ಅಡಿ ಸೂತ್ರಾಂಜಲಿ ಸಂಗ್ರಹವಾಗಿತ್ತು.

ಮಂಗಳೂರಲ್ಲಿ ರಾಷ್ಟ್ರೀಯ ಉಳಿತಾಯ ಪಕ್ಷವನ್ನು—ತಾ. 16ರಂದು ಸಂಜೆ ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ಸಭಾ ಭವನದಲ್ಲಿ ಶ್ರೀ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ.ಯವರು ಉದ್ಘಾಟಿಸುತ್ತಾ, ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸುವುದೊಂದೇ ನಮ್ಮ ಮುಖ್ಯ ಧ್ಯೇಯವಾಗಿರಬಾರದು. ಗಳಿಸಿದ ರಾಜಕೀಯ ಸ್ವಾತಂತ್ರ್ಯ ಯಶಸ್ವಿಗೊಳಿಸಲು ಜನತೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸಬೇಕಾದುದು ಅತೀ ಅಗತ್ಯ. ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ಉಳಿತಾಯ ಮನೋಭಾವನೆ ಜನರಲ್ಲಿ ಬೆಳೆಯಬೇಕಾದುದು ಅವಶ್ಯವೆಂದು ತಿಳಿಸಿದರು.

ಆರಂಭದಲ್ಲಿ ಜಿಲ್ಲೆಯ ಮಹಿಳಾ ಉಳಿತಾಯ ಚಳವಳದ ಅಧ್ಯಕ್ಷೆಯಾದ ಶ್ರೀಮತಿ ಶಾಂತೇರಿ ಪ್ರಭುಗಳು ಸ್ವಾಗತ ಭಾಷಣ ಮಾಡಿದರು. ಮೈಸೂರು ವಲಯದ ರಾಷ್ಟ್ರೀಯ ಉಳಿತಾಯ ಅಧಿಕಾರಿಯಾದ ಶ್ರೀ ಎಚ್. ನರಸಿಂಹನವರು ಉಳಿತಾಯ ಕ್ಷೇತ್ರದಲ್ಲಾದ ಪ್ರಗತಿಯನ್ನು ವಿವರಿಸಿ ಮಾತನಾಡಿದರು. ಅಸಿಸ್ಟೆಂಟ್ ನೇಶನಲ್ ಸೇವಿಂಗ್ಸ್ ಆಫೀಸರ್ ಶ್ರೀ ಜಿ ಎಸ್. ಪೌಲ್‌ರವರು ಧನ್ಯವಾದವಿತ್ತರು.

ಸಾಂಸ್ಕೃತಿಕ ಕಾರ್ಯಕ್ರಮ—ಆರನೆಯ ಕೈ ಮಗ್ಗ ಸಪ್ತಾಹದ ಅಂಗವಾಗಿ ತಾ. 15ರಂದು ಗವರ್ನಮೆಂಟ್ ಕಾಲೇಜಿನ ಸಭಾಭವನದಲ್ಲಿ ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಾದುವು. ಆರಂಭದಲ್ಲಿ ಕೋಆಪರೇಟಿವ್ ಅಸಿಸ್ಟಾಂಟ್ ರಿಜಿಸ್ಟ್ರಾರ್ ಶ್ರೀ ಜಿ ಕೆ. ಶ್ರೀನಿವಾಸ ಅಯ್ಯಂಗಾರರು ಸ್ವಾಗತ ಭಾಷಣಮಾಡಿದರು.

ಉಡುಪಿ ನಗರ ಸಭಾಪತಿಗಳಾಗಿ ಡಾ| ಐತಾಳರ ಆಯ್ಕೆ—ತಾ. 17ನೇ ಸಂಜೆ ಉಡುಪಿ ನಗರ ಸಭೆಯ ಅಧ್ಯಕ್ಷ ಚುನಾವಣೆಯು ಕುಂದಾಪುರ ಡಿವಿಜನಿನ ಅ| ಕಮಿಷನರ್ ಶ್ರೀ ವಿ. ಎಮ್. ಕಾಮತರ ನೇತೃತ್ವದಲ್ಲಿ ನೆರವೇರಿತು. ಹೊಸ ಸದಸ್ಯರು ಪ್ರಮಾಣವಚನ ಸ್ವೀಕರಿಸಿದನಂತರ ಡಾ| ಕೆ. ಎಲ್. ಐತಾಳರ ಹೆಸರನ್ನು ಶ್ರೀ ಅನಂತ ಶೆಣೈಯವರು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದರು. ಶ್ರೀ ಅಮ್ಮುಂಜೆ ನಾರಾಯಣ ನಾಯಕರಿಂದ ಅನುಮೋದಿಸಲ್ಪಟ್ಟು ಡಾ| ಐತಾಳರು ಸರ್ವಾನುಮತದಲ್ಲಿ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಅನಂತರ ಹೊಸ ಸಭಾಪತಿಗಳನ್ನು ಅಭಿನಂದಿಸಿ ಭಾಷಣಗಳಾದುವು. ಡಾ| ಐತಾಳರು ನಿಷ್ಪಕ್ಷಪಾತದಿಂದ ನಗರದ ಸೇವೆ ಸಲ್ಲಿಸುವುದಾಗಿಯೂ ಹೇಳಿದರು.

ಸಾರ್ವಜನಿಕ ಸಭೆ—ಹೊಸ ನಗರ ಸಭಾಪತಿಗಳಾಗಿ ಆರಿಸಲ್ಪಟ್ಟ ಡಾ| ಕೆ. ಎಲ್. ಐತಾಳರನ್ನು ಅಭಿನಂದಿಸಲು ತಾ. 17ನೇ ಸಂಜೆ ರಥಬೀದಿಯಲ್ಲಿ ಡಾ| ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಶ್ರೀ ಪಿ. ಶೀನ ಸೆಟ್ಟಿ ಮೊದಲಾದವರ ಅಭಿನಂದನಾ ಭಾಷಣಗಳಾದ ಮೇಲೆ ಡಾ| ಐತಾಳರು ಉತ್ತರವಿತ್ತರು. ಅಧ್ಯಕ್ಷ ಭಾಷಣವಾದ ಮೇಲೆ ಶ್ರೀ ಎ. ಜೆ. ಅನ್ವೆಯವರು ಧನ್ಯವಾದವಿತ್ತರು.

ವಾರ್ಷಿಕೋತ್ಸವ—ಮಂಗಳೂರಿನ ಸರಕಾರಿ ಬುನಾದಿ ತರಬೇತಿ ಶಾಲೆಯ ವಾರ್ಷಿಕೋತ್ಸವವು ತಾ. 14ರಂದು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಶ್ರೀನಿವಾಸ ಆಚಾರ್ಯರಿಂದ ಸ್ವಾಗತಭಾಷಣವಾದ ಬಳಿಕ ಮುಖ್ಯೋಪಾಧ್ಯಾಯರಾದ ಶ್ರೀ ದೇಜು ಉಚ್ಚಿಲ ಅವರು ಶಾಲಾ ವರದಿಯನ್ನೋದಿದರು. ಶ್ರೀ ಕೆ. ಜಿನರಾಜನವರು ಶಾಲಾ ಸ್ವಸ್ತಿವಾಚನ ಮಾಡಿದರು. ಉತ್ಸವದ ಅಂಗವಾಗಿ ನಾಟಕಾದಿ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದುವು.

ಉಡುಪಿಯಲ್ಲಿ ಪಬ್ಲಿಕ್ ರಿಲೇಶನ್ಸ್ ಆಫೀಸರರು—ಲೈಫ್ ಇನ್ಶೂರೆನ್ಸ್ ಕೊರ್ಪರೇಶನ್ ಬೊಂಬಾಯಿ ಸೆಂಟ್ರಲ್ ಆಫೀಸಿನ ಪಬ್ಲಿಕ್ ರಿಲೇಶನ್ಸ್ ಆಫೀಸರ್ ಶ್ರೀ ಪಿ. ಯು. ಛಬ್ಬರ್‌ರವರು ತಾ 11ರಂದು ಉಡುಪಿ ಡಿವಿಜನಲ್ ಆಫೀಸಿಗೆ ಭೇಟಿಯಿತ್ತರು. ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರು ಚಹಾಸತ್ಕಾರವಿತ್ತು ಗೌರವಿಸಿದರು. ಅ| ಡಿ| ಮೆನೇಜರ್ ಶ್ರೀ ಇ. ಯು. ಜಕೋಬರು ಸ್ವಾಗತ ಭಾಷಣಮಾಡಿದರು. ಇನ್ಶೂರೆನ್ಸ್ ಪಾಲಿಸಿಗಳ ಮೇಲಣ ಬೋನಸ್ ಮೊದಲಾದ ವಿಚಾರಗಳನ್ನು ಬೇಗನೆ ಕಾರ್ಯರೂಪಕ್ಕೆ ತರಲು ಕಾರ್ಪೊರೇಶನ್ ಸಿದ್ಧತೆಗಳನ್ನು ಮಾಡುತ್ತಿದೆ ಎಂದು ಹೇಳಿ, ಈ ಡಿವಿಜನಿನಲ್ಲಿ ಶ್ರೀ ಕೆ. ಆರ್. ಕೆ. ಭಟ್ಟರ ನೇತೃತ್ವದಲ್ಲಿ ವಿಮಾ ಕಾರ್ಯವು ಸಾಂಗವಾಗಿ ನಡೆಯುತ್ತಿರುವ ಬಗ್ಗೆ ಸಂತೋಷಪಟ್ಟರು. ಕೊನೆಯಲ್ಲಿ ಶ್ರೀ ಕೆ. ಆರ್. ಕೆ. ಭಟ್ಟರು ಧನ್ಯವಾದಗಳನ್ನಿತ್ತರು.

ರಾವ್‌ಸಾಹೇಬ್ ಕೃಷ್ಣಯ್ಯನವರ ನಿಧನ.

ರಿಟಾಯರ್ಡ್ ಡಿಪ್ಯುಟಿ ಕಲೆಕ್ಟರರೂ ಮಾಜಿ ಗೌರವ I ಕ್ಲಾಸ್ ಮೇಜಿಸ್ಟ್ರೇಟರೂ ಆಗಿದ್ದ ರಾವ್‌ಸಾಹೇಬ್ ಕೆ. ಕೃಷ್ಣಯ್ಯನವರು ಇದೇ ತಾ. 17ನೇ ಸಂಜೆ ಬರೇ ೩-೪ ದಿನಗಳ ಅಸ್ವಸ್ಥದಿಂದ ತನ್ನ 72ನೇ ವಯಸ್ಸಿನಲ್ಲಿ ಅನಿರೀಕ್ಷಿತ ಮರಣಹೊಂದಿದುದು ಅತ್ಯಂತ ವಿಷಾದಕರವಾಗಿದೆ. ದಿವಂಗತರು ದಕ್ಷ ಅಧಿಕಾರಿಗಳಾಗಿ ಜಿಲ್ಲೆಯಲ್ಲಿಯೂ ಹೊರ ಜಿಲ್ಲೆಗಳಲ್ಲಿಯೂ ಹೆಸರುವಾಸಿಯಾಗಿ ಜನಪ್ರಿಯತೆ ಗಳಿಸಿದ್ದರು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ಸೌದಾಮಿನಿ-(ಪತ್ತೇದಾರಿ ಕಾದಂಬರಿ) ಬರೆದವರು. ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ. ಎ. ಪ್ರಕಾಶಕರು. ನವನೀತನ ಪ್ರಕಟನಾಲಯ, ನಂ. ೪೩, ಎರಡನೆಯ ರಸ್ತೆ, ಬಸವನಗುಡಿ, ಬೆಂಗಳೂರು-೪. ಪುಟಗಳು: ೩೩೯ ಬೆಲೆ: ರೂ ೩-೦೦

ಪತ್ತೇದಾರಿ ಕಾದಂಬರಿ ಎಂದೊಡನೆಯೇ ಅದ್ಭುತ ರಮ್ಯ ಕಥಾನಕ ಹಾಗೂ ಅಸ್ವಾಭಾವಿಕವಾದ ಘಟನಾವಳಿಗಳ ಸ್ಮರಣೆ ಬರುವುದು ಸ್ವಾಭಾವಿಕವಾದರೂ ಈ ಕಾದಂಬರಿಯಲ್ಲಿ ಸ್ವಾಭಾವಿಕತೆಗೆ ಪ್ರಾಶಸ್ತ್ಯವನ್ನಿತ್ತಿರುವುದು ಗಮನಕ್ಕೆ ಬರುತ್ತಿದೆ. ಕೊಲೆ-ಪತ್ತೇದಾರರಿಲ್ಲವಾದರೆ, ಇದೊಂದು ಸಾಮಾನ್ಯ ಸಾಮಾಜಿಕ ಕಾದಂಬರಿಯೇ ಆಗುತಿತ್ತು. ಇಲ್ಲಿನ ಕಥಾಭಾಗವೂ ಮನೋಹರವಾಗಿದ್ದು, ಪತ್ತೇದಾರಿ ಕಥೆಗಳಲ್ಲಿ ಒಂದು ಅಪೂರ್ವ ಸ್ಥಾನವನ್ನು ಈ ಪುಸ್ತಕವು ಪಡೆಯಲು ಕಾರಣವಾಗಿದೆ.

ಬೊಂಬಾಯಿಯಲ್ಲಿ ಸ್ತ್ರೀ ಲಂಪಟನಾಗಿದ್ದ ಯಶವಂತಸಿಂಹರನ್ನು ಪ್ರೀತಿಸಿ, ತನ್ನನ್ನು ಮಾತ್ರ ಅವರು ನೆಮ್ಮಿಕೊಳ್ಳತಿರಲು ತಿರಸ್ಕರಿಸಿದಾಗ, ಅವರನ್ನು ಕೊಂದು, ಆ ಕೊಲೆಯ ಅಪರಾಧವನ್ನು ಅವರ ಪಾಪ ರಹಿತ ಪತಿವ್ರತಾ ಶಿರೋಮಣಿ ಪತ್ನಿ ಸರ್ವಮಂಗಳೆಯ ಮೇಲೆ ಹೊರಿಸಿದ್ದ ಒರ್ವ ಸ್ತ್ರೀ ಸೌದಾಮಿನಿಯು ನವದೆಹಲಿಗಾಗಮಿಸಿ, ಅಲ್ಲಿಯ ಸ್ತ್ರೀ ಕಾಮಿಯಾಗಿದ್ದ ಮಧು ಮೋಹನನನ್ನೂ ವಧಿಸಿ, ಅದರ ಆರೋಪವನ್ನು ತನ್ನ ತಲೆಯಿಂದ ದೂರೀಕರಿಸುವ ಮಹಾ ಕಾರ್ಯದಲ್ಲಿ ತಲ್ಲೀನಳಾಗುತ್ತಾಳೆ. ಮಧು ಮೋಹನನ ಧರ್ಮಪತ್ನಿ ನಿರ್ಮಲಾ, ಆತನ ಪ್ರೇಮ ಭಿಕ್ಷೆಯನ್ನು ಬೇಡಿ ಬಂದ ಮೋಹಿನಿ ಮತ್ತು ಸುನೇತ್ರ ಹಾಗೂ ಯಶವಂತಸಿಂಹರ ಮಡದಿ ಸರ್ವಮಂಗಳೆ ಇವರಲ್ಲಿ ಯಾರ ಮೇಲಾದರೂ ಅಪರಾಧ ಹೊರಿಸಲು ಪ್ರಯತ್ನ ನಡೆಸುತ್ತಾಳೆ ಈ ಭರದಲ್ಲಿ ಸರ್ವಮಂಗಳೆಯು ಸಿಕ್ಕಿಬಿದ್ದು, ಪಡಬಾರದ ಪಾಡನ್ನು ಪಡುತ್ತಾಳೆ. ಪತ್ತೇದಾರ ರಮೇಶ್ ಮತ್ತು ಯಶವಂತಸಿಂಹ ಕೊಲೆಯ ಸಂಶೋಧಕ, ಮಧುಸೂದನ್ ಮತ್ತು ಇನ್ಸ್‌ಪೆಕ್ಟರ್ ಮುರಾರಿಲಾಲ್ ಮೊದಲಾದವರ ಸತತ ಪ್ರಯತ್ನ, ಪ್ರಯಾಸಗಳ ಫಲ-ರೂಪವಾಗಿ ಕೊನೆಗೂ ಸೌದಾಮಿನಿಯೂ ಆಕೆಗೆ ಸಹಾಯಕನಾಗಿದ್ದ ಹೋಟೆಲ್ ಮ್ಯಾನೇಜರ ರಾಬರ್ಟ್ಸನೂ ಸೆರೆ ಸಿಕ್ಕುತ್ತಾರೆ; ತಂತಮ್ಮ ಅಪರಾಧವನ್ನೊಪ್ಪಿಕೊಳ್ಳುತ್ತಾರೆ ಅಂತ್ಯದಲ್ಲಿ ಅಪರಾಧಿಗಳಿಗೆ ಶಿಕ್ಷೆಯೂ ಕೊಡಲ್ಪಟ್ಟು ರಮೇಶ್—ಸರ್ವಮಂಗಳಾ; ಮಧುಸೂದನ್—ಸುನೇತ್ರಾ ಮತ್ತು ಸುನೇತ್ರಾಳ ಅಣ್ಣ ರೇವತೀಪ್ರಸಾದ—ಮೋಹಿನಿಯವರ ವಿವಾಹ ನಡೆಯುವುದು.

ಸಾಮಾನ್ಯವಾಗಿ ಕಥಾನಕವಿರುವುದಾದರೂ ಅದನ್ನು ಮುಂದುವರಿಸಿಕೊಂಡು ಹೋದ ಪ್ರಕಾರವು ಆಕರ್ಷಕವಾಗಿದೆ ಓದುಗರ ಮನಸ್ಸನ್ನು ತನ್ನಲ್ಲಿಯೇ ತಲ್ಲೀನವಾಗಿಸಿಕೊಳ್ಳುವ ಅಪೂರ್ವ ಶಕ್ತಿ ಕಾದಂಬರಿಯ ಓಟದಲ್ಲೂ ಶೈಲಿಯಲ್ಲೂ ಕಂಡುಬರುತ್ತಿದೆ. ಎಂತಹೇ ಇದೊಂದು ಉತ್ಕೃಷ್ಟ ಮಟ್ಟದ ಪತ್ತೇದಾರಿ ಕಾದಂಬರಿ ಸಾಮಾನ್ಯವಾಗಿ ಅಸ್ವಾಭಾವಿಕತೆ ತುಂಬಿ ತುಳುಕಾಡುವ "ಪತ್ತೇದಾರಿ" ಕಾದಂಬರಿಗಳ ಸಾಲಿಗೆ "ಸೌದಾಮಿನಿ"ಯು ಸೇರದೆ, ಸ್ವಾಭಾವಿಕ ವರ್ಣನೆಯ ಸ್ಥಾನ ಪಡೆಯುತ್ತದೆ. ನಿರ್ಮಲಾ, ಸರ್ವಮಂಗಳಾ ಮತ್ತು ರಮೇಶ್‌ರವರ ಪಾತ್ರವು ಸುಂದರವಾಗಿ ಚಿತ್ರಿಸಲ್ಪಟ್ಟಿದೆ ಸೌದಾಮಿನಿಯು ನಿಜವಾಗಿ ಯಶವಂತಸಿಂಹ ಮತ್ತು ಮಧು ಮೋಹನರನ್ನು ಪ್ರೀತಿಸಿರಬಹುದಾದರೂ ತಾನವರ ಪ್ರೀತಿಗೆ ಎರವಾದನಂತರ ಅವರಿಬ್ಬರ ಮೇಲೆಯೂ ಸೇಡು ತೀರಿಸುವ ಉದ್ದೇಶದಿಂದ ಮತ್ತು ಆ ಮೇಲೆ, ಅವರ ಅಪಾರ ಸಂಪತ್ತನ್ನು ವಶಪಡಿಸುವ ಯೋಚನೆಯಿಂದ ಎರಡು ಕೊಲೆಗಳನ್ನು ಮಾಡಿ, ಅನ್ಯರ ಮೇಲೆ ಅಪವಾದ ಹೊರಿಸಲೆಳಸಿದಳಾದರೂ, ಅಂತ್ಯದಲ್ಲಿ ತನ್ನ ಬಣ್ಣವೆಲ್ಲವೂ ಬಯಲಾಗತೊಡಗಿದಾಗ ಒಂದು ಆದರ್ಶವನ್ನು ಹರಡುತ್ತಾಳೆ. "ಸ್ತ್ರೀಲಂಪಟರಾದ ಅವರಿಬ್ಬರೂ ನರಕದಲ್ಲಿ ಬಿದ್ದು ಕೊಳೆಯಬೇಕಾದ ಹುಳುಗಳು ಅಲ್ಲವೆ ಇಂತಹ ನಾರಕೀಯ ಕೀಟಗಳನ್ನು ನಾಶಗೊಳಿಸುವುದರಿಂದ ನಾನು ಸಮಾಜಕ್ಕೆ ಹಿರಿಯ ಉಪಕಾರವನ್ನೇ ಮಾಡುತ್ತಿರುವೆನೆಂಬ ನಿಶ್ಚಲ ನಂಬಿಕೆಯನ್ನು ತಾಳಿದ್ದೆ-ಈಗಲೂ ತಾಳಿದ್ದೇನೆ . ಇನ್ನು ಮುಂದಾದರೂ ಸರಕಾರವೂ ಸಮಾಜವೂ ಕಣ್ತೆರೆದು ಸ್ತ್ರೀಲೋಲ ಕಾಮುಕರ—ಪೈಶಾಚಿಕ ಸ್ವರೂಪದ ಮಾನಹೀನ ಮಾಯಾವೀ ಪುರುಷರ—ಮದ್ವಿಪತ್ಕಾರಕ ಮಾಯಾಜಾಲದಲ್ಲಿ ಮೋಸದಿಂದ ಸಿಕ್ಕಿಬಿದ್ದ ಮಾನಿನೀಗಣವು ತಪಿಸಿ ತಲ್ಲಣಿಸದಿರುವಂತೆ ಸೂಕ್ತ ವ್ಯವಸ್ಥೆಗಳನ್ನು ಕೈಗೊಳ್ಳಬಹುದೇ ಎಂಬ ಆಶೆಯನ್ನು ವ್ಯಕ್ತಗೊಳಿಸಿ .ಆ ಆಶೆಯ ಸಾಧನೆಗಾಗಿ ನನ್ನ ಪ್ರಾಣವನ್ನು ಬಲಿಪೀಠದಲ್ಲಿ ಅರ್ಪಣೆ ಮಾಡಲು ಸಿದ್ಧಗೊಂಡಿದ್ದೇನೆ"—ಈ ಉದ್ದೇಶವು ಪೂರ್ಣವಾಗುವತ್ತ ಕಾರ್ಯ ಕೈಗೊಳ್ಳುವುದು ಅತ್ಯಂತಾವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ. ಈ ಉಚ್ಚ ಆದರ್ಶದ ಪಂಚಾಂಗದ ಮೇಲೆ ನಿಪುಣವಾಗಿ ಹರಡಿರುವ ಈ ಕಾದಂಬರಿಯು ಶ್ರೀ ಮಹಾದೇವ್ ಕಪೂರ್ ಅವರ "ಗುಲಾಬ್ ಕೀ ಕಾಲಿಯಾಂ" ಎಂಬ ಹಿಂದಿ ಉಪನ್ಯಾಸದ ಆಧಾರದ ಮೇಲೆ ವಿಸ್ತಾರವಾಗಿ ಹೆಣೆಯಲ್ಪಟ್ಟಿದೆ. ಈ ಪತ್ತೇದಾರಿ ಕಾದಂಬರಿಯು ನಿಜವಾಗಿಯೂ ಸ್ವಾಗತಾರ್ಹವಾಗಿದೆ.

ಕಥಾಸಂಕಲನ— (ಸವ್ಯಸಾಚಿ ಪ್ರಕಟಣೆ—೩). ಲೇಖಕರು: ಬೇರೆ ಬೇರೆಯವರು. ಸಂಪಾದಕ ಮಂಡಳಿ: ಶ್ರೀಗಳಾದ ಉ. ವೆಂ. ಪುತ್ರಾಯ, ಆರ್. ನರಸಿಂಹಾಚಾರ್ಯ, ಕೆ. ಎನ್ ಸುಬ್ರಹ್ಮಣ್ಯ ಉಪಾಧ್ಯಾಯ. ಪ್ರಕಾಶಕರು ಕಲಾವೃಂದ (ರಿ) ಉಡುಪಿ, ದ. ಕ. ಪುಟಗಳು: ೧೩೫ ಬೆಲೆ: ರೂ ೦-೭೫

ಕಳೆದ ಎರಡು ವರ್ಷಗಳಲ್ಲಿ "ಸವ್ಯಸಾಚಿ" ಎಂಬ ತಮ್ಮ ಹಸ್ತಲಿಖಿತ ಪತ್ರಿಕೆಯ ವಾರ್ಷಿಕಾಂಕಕ್ಕೆ ಮುದ್ರಣದ ರೂಪವನ್ನಿತ್ತು, ಅದು ಪ್ರಾಯಃ ಸರ್ವ ವಿಧದಲ್ಲಿಯೂ ನಿಷ್ಪ್ರಯೋಜಕವೆಂಬ ಅಭಿಪ್ರಾಯಕ್ಕೆ ಬಂದು ಈ ವರ್ಷ ಬೇರೆ ಬೇರೆ ಲೇಖಕರ ಕಥೆಗಳನ್ನು ಸಂಕಲನದ ರೂಪದಲ್ಲಿ ಅದನ್ನು ಹೊರತಂದಿರುತ್ತಾರೆ.

ಈ ಸಂಕಲನದಲ್ಲಿ ಒಟ್ಟು ೧೩ ಕಥೆಗಳಿವೆ. ತನ್ನ ಮೊಂಡುತನದಿಂದ ಬೇಸತ್ತು ಮದುವೆಯಾದ ತಂದೆಯು ಪರೆಯದ ಹೆಂಡತಿ ಪದ್ಮಾವತಿಯನ್ನು ತಂದೆ ತೀರಿ ಹೋದ ಮೇಲೆ ದ್ವೇಷಿಸಿದ ಪದ್ಮನಾಭಯ್ಯ ಮತ್ತು ರೊಚ್ಚಿಗೆದ್ದ ಪದ್ಮಾವತಿ ದುರ್ಗೆಯಾಗಿ ಅವರೆದುರು ಸೊಂಟ ಕಟ್ಟಿ, ಅವರ ಶೀಲ ಭಂಗ ಮಾಡಿದ ಕಥೆಯನ್ನು ಶ್ರೀ ಎಸ್ ವೆಂಕಟರಾಜರ 'ಶೀಲ ಭಂಗ' ಕಥೆಯಲ್ಲಿ ಹೇಳಲಾಗಿದೆ "ಹೆಣ್ಣಿಗೆ ಉದ್ದ ಸ್ವ ಕಲೆಗೂದಲು; ಆದರೆ ಅಷ್ಟೆ ಗಿಡ್ಡವಾದ ಮಿದುಳು' ಎಂಬ ದೃಢಾಭಿಪ್ರಾಯಕ್ಕೆ ಬಂದ ಸುಶೀಲನಿಗೆ ವಿಧೀಜಳು ಆತನ ಪೂರ್ವಾಭಿಪ್ರಾಯವನ್ನು ದೂರೀಕರಿಸಿದಬಗೆ ಶ್ರೀ ಎಸ್. ಕೆ ವಿ. ಯವರ "ಹೆಂಗಸಿನ ಬುದ್ಧಿ ಮೊಳಕಾಲ ಕೆಳಗೆ"ಯಲ್ಲಿ; ತಾನು ಬಯಸದ ತಾಂಡಾಲನಿಂದ ತಪ್ಪಿಸಿ, ತನ್ನೊಲವಿನ ಕರಿಯನೊಡನೆ ಊರು ಬಿಟ್ಟ ಬಿಟ್ಟಿ ರಂಗಿಯ ಕಥೆ ಶ್ರೀ ಜಿ. ಸುಬ್ಬರಾಯರ 'ಅವಳಿಗಾಗಿ"ನಲ್ಲಿ; ಸ್ವಾತಂತ್ರ್ಯ ಎಲ್ಲಿದೆ ಎಲ್ಲಿದೆ ಎಂಬುದನ್ನು ಅರಸಿ ಅದನ್ನೆಲ್ಲಿಯೂ ಕಾಣದೆ ಹೋದ ಕಥೆಯು ಬಳ್ಕೂರು ಸುಬ್ರಾಯ ಅಡಿಗರ 'ಸ್ವಾತಂತ್ರ್ಯಶೋಧ"ದಲ್ಲಿ, ಸ್ತ್ರೀ ಕಾಮುಕ ರಾಯರಿಗೆ ಬುದ್ಧಿ ಕಲಿಸಿದ ಬುದ್ಧಿವಂತನ ಜಾಣ್ಮೆಯು ಶ್ರೀ ಎಸ್ಸೆಲ್‌ರವರ "ಮದ್ರಾಸು ಹುಡುಗಿ" ಯಲ್ಲಿ, ಬ್ರಹ್ಮಚರ್ಯ ಪ್ರತಿಜ್ಞಾಬದ್ಧರೊ 'ಕಲಾವತಿ'ಯಿಂದ ವಂಚಿತರಾದ ಬಗೆಯು ಶ್ರೀ ಪದ್ಯಾಣ ವೆಂಕಟೇಶ್ವರ ಭಟ್ಟರ 'ಬ್ರಹ್ಮಚರ್ಯ'ದಲ್ಲಿ, ಹರತಾಳಗಳಿಂದ ಯಶಸ್ಸನ್ನು ಸಂಪಾದಿಸುವುದು ಸಾಧ್ಯವಾದರೂ ಅದಕ್ಕೆ ಮುಂದಾಲೋಚನೆ ಆವಶ್ಯವೆಂಬುದು ಶ್ರೀ ಎಸ್. ಗೋಪೀಚಂದರಾವ್ ಅವರ 'ಹರತಾಳದಲ್ಲಿ ಪರಿದಾಟ'ವಲ್ಲಿ, ವೇಶ್ಯೆಯ ಮಗಳ, ಲೀಲಾ ಮರ್ಯಾದೆಯಿಂದ ಜೀವಿಸ ಬಯಸಿ ಅದರಲ್ಲಿ ಅಸಫಲಳಾಗಿ ಕೊನೆಗೆ ವೇಶ್ಯೆಯೇ ಆದ ಕರುಣಾಜನಕ ಕಥೆಯು ಶ್ರೀನಿವಾಸ ರಾವ್ ಅವರ 'ಕಾಮದ ಕಣ್ಣು" ನಲ್ಲಿ; ರುಚಿಯಾ ಮತ್ತು ಕೌಶಿಕರ ರಾಮ-ಸೀತೆಯರ ನಾಟಕವನ್ನು ಪುನಃ ನೋಡಲೆಳಸಿದ ರಾಜ ಪ್ರಥಮ ಬಾರಿ ಅತಿ ರಾಕ್ಷಸನಾಗಿದ್ದ; ಈಗ ಮಾತ್ರ ಅಲ್ಲ ಸ ವರ್ಣನೆ ಶ್ರೀ ಯಾದವೇಂದ್ರರ "ಪುನರಾವೃತ್ತಿ"ಯಲ್ಲಿ, ಧನಿಯ ಋಣದಲ್ಲಿ ಬಿದ್ದು ಸತ್ತ ನಿಂಗನುರು ಜನ್ಮದಲ್ಲಿ ಅವರ ಕುದುರೆಯಾಗಿ ಜನ್ಮಿಸಿ, ಅವರ ಜೀವವುಳಿಸಿ ತಾನು ಸಾವಿಗೀಡಾದ ಹೃದಯ ವಿದ್ರಾವಕ ಕಥೆಯು ಸ್ವಾಮಿಯವರ "ಜನ್ಮಾಂತರ"ದಲ್ಲಿ; ಸೂರವರು ಶುಭಕಾರ್ಯಕ್ಕೆ ಹೋಗುವುದು ಅಶುಭವೆಂದು ಮನದಂದು ನಾಲ್ಕನೆಯವನನ್ನು ಅರ್ಧದಾರಿಯಲ್ಲಿ ಕರೆದುಕೊಂಡು ಹೋಗಿ ಅಲ್ಲಿ ತನ್ನ ಕಾರ್ಯವು ಸಿದ್ಧಿಸದೆ ಹೋಗಿ ನಿರಾಶರಾದಾಗ "ವಿಂದನು 'ಮೂರೇ ವಾಸಿ" ಎಂದ ಕಾರಣವನ್ನು ಶ್ರೀ ಪುತ್ರಾಯರ "ಮೂರೇವಾಸಿ"ಯಲ್ಲಿ, ತನ್ನ ಪತಿ ಸೀತಾರಾಮನು ಎಳೆ ಹರೆಯದಲ್ಲಿಯೇ ಕಾಲವಾಗಲು, ಆತನ ಅಂತ್ಯ ವಚನದಂತೆ ಸಂಸಾರ ಸಂದಿಗ್ಧಗಳಾಗಿ ಬಾಳಿದ ಕಮಲಿನಿಯು ದಿಟ್ಟ ಕಥೆ ಶ್ರೀ ಬನ್ನಂಜೆ ಗೋವಿಂದಾಚಾರ್ಯರ "ನಾನು ದಾರಿ ತಪ್ಪಿದೆನೆ?" ಯಲ್ಲಿ ಮತ್ತು ತನ್ನ ಏಕಮಾತ್ರ ಸಂತಾನ ಕಾವೇರಿಯು ಪತಿ ಗೋಪಾಲ ಸಾಧ್ವಮತ ಸ್ವೀಕರಿಸುವುದನ್ನು ವಿರೋಧಿಸಿದ ಮಹಾಬಲ ಭಟ್ಟರೇ ಮುಂದೆ ಮಾಧ್ವರಾದ ಘಟನೆಯು ಶ್ರೀ ಬನ್ನಂಜೆ ರಾಮಾಚಾರ್ಯರ 'ಹೊಸ ಹುಟ್ಟು'ವಿನಲ್ಲಿ ವಿವರಿಸಲಾಗಿವೆ

ಈ ಕಥೆಗಳಲ್ಲಿ ನಾನಾ ವೈವಿಧ್ಯಗಳಿರುವುದೂ ಕಥಾ ವಸ್ತುಗಳು ಆಕರ್ಷಕವಾಗಿ ಬೆಳೆಸಿಕೊಂಡಿರುವುದೂ ಕೆಲವು ಕತೆಗಳಲ್ಲಿ ಕಾಣಬರುದು. ಶೀಲಭಂಗ, ಹರತಾಳದಲ್ಲಿ ಹರಿದಾಟ, ಕಾಮದ ಕಣ್ಣು, ಪುನರಾವೃತ್ತಿ ಜನ್ಮಾಂತರ, ಮೂರೇವಾಸಿ ಮತ್ತು ನಾನು ದಾರಿ ತಪ್ಪಿದೆನೆ?—ಇವು ಸಂಕಲನದ ಉತ್ತಮ ಕಥೆಗಳು ಉಳಿದುವು ಸಾಮಾನ್ಯವಾದುವೆಂದೇ ಹೇಳಬೇಕು.

'ಕಥಾ ಸಂಕಲನ''ವೆಂದೇ ಈ ಪುಸ್ತಕದ ನಾಮಧೇಯವಿಡಲಾಗಿದೆ ಆದರೆ ಮೂರು ಜನ ಸಂಪಾದಕರಿದ್ದುಕೊಂಡು, ಸಂಕಲನಕ್ಕೊಂದು ಉಚಿತ ನಾಮಕರಣ ಮಾಡಲಾರದೆ ಹೋದುದೂ, ಅಚ್ಚಿನ ದೋಷಗಳನ್ನು ವಿಮರ್ಶಕವಾಗಿ ನೋಡದೆ ಬಿಟ್ಟುದೂ ಇಲ್ಲಿನ ಪ್ರತಿಭಾವಂತ ಲೇಖಕರ'ಯೋಗ್ಯ'ಕೃತಿಗಳನ್ನು ಸಂಪಾದಿಸದೆ ಬಿಟ್ಟುದೂ ಬೇಸರದ ಸಂಗತಿ. ಇವನ್ನು ಇನ್ನು ಮುಂದಾದರೂ ಗಮನಿಸುವುದು ಅವಶ್ಯ. ಕಥಾ ಸಂಗ್ರಹ ಒಮ್ಮೆ ಓದಬಹುದಾದಂತಹುದು.

—ಗೋರಾ

ಸಾದರ ಸ್ವೀಕಾರ.

ದಶಮಾನ ಪದ್ಧತಿ—(ತೂಕಗಳು-ಅಳತೆಗಳು) ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ-೮ ಪುಟಗಳು: ೨೪. ಬೆಲೆ: ರೂ. ೦-೩೭.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 697/1958

O. S 128/52

ಮೂಕಾಂಬಿಕೆ ಶೆಡ್ತಿ ಅರ್ಜಿದಾರಳು.

Vs.

ದೋಣಪ್ಪ ಶೆಟ್ಟಿ (ಪ್ರೊ೩) ಸಹಾ ಎದ್ರಿರು.

ಉಡುಪಿ ತಾಲ್ಲೂಕು ಶಿರಿಯಾರ ಗ್ರಾಮ ದಲ್ಲಿರುವ ಲಕ್ಷ್ಮಿ ಶೆಡ್ತಿ ರ ಮಗ 18ನೇ ಎದ್ರಿ ಮಹಾಬಲ ಶೆಟ್ಟಿ 1, ಆಂತಮ್ಮ ಶೆಡ್ತಿ ರ ಮಕ್ಕಳು, 19ನೇ ಎದ್ರಿ ಸಂಜೀವ ಶೆಟ್ಟಿ 1, 20ನೇ ಎದ್ರಿಳು ಕಮಲ ಶೆಡ್ತಿ 1, ಲಿಂಗಮ್ಮ ಶೆಡ್ತಿ ಮಗ 22ನೇ ಎದ್ರಿ ತೇಜಪ್ಪ ಹೆಗ್ಡೆ 1 ಕೂಡಾ 4 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲೆ ಹೇಳಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವಳಾದ ಅರ್ಜಿದಾರಳು ಸ್ಥಿರ ಆಸ್ತಿಗಳ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾಳೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1959ನೇ ಇಸವಿ ಮಾರ್ಚ ತಿಂಗಳು 6ನೇ ತಾರೀಕು ನಿಶ್ಚಯಿಸೋಣಾಗಿಯದೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

Coondapoor, 12-2-59 B. S. Shetty, B A., B. L
Vakil for Petitioner.

ಮನೆಯೊಂದಾದಲ್ಲಿ ಇರಬೇಕಾದ ಪುಸ್ತಕ
ಮನೆ ಮದ್ದು
(HOME REMEDIES)
ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ ಒಂದೂವರೆ ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಕ್ಕಳ ಮಗ್ಗಿ ಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ

ಜನ ಜೀವನ

ಕ್ಷೋಭೆಕಾಣದ ನಿಕೋಬಾರಿಗಳು

ಪ್ರಶಾಂತ ಪ್ರದೇಶದಲ್ಲಿ ಪ್ರಶಾಂತರಾಗಿಯೇ ಜೀವಿಸುತ್ತಾರೆ; ಅನ್ಯರ ಮುಖ ನೋಡುವವರಿವರಲ್ಲ.

ಈ ವಿಚಿತ್ರವನ್ನು ನೀವು ಕೇಳಿರಲಾರಿರಿ. ಇಲ್ಲಿಯ ಜನರಿಗೆ ತಮ್ಮದೆಂಬ ಆಸ್ತಿಪಾಸ್ತಿಗಳೇ ಇಲ್ಲ; ಅವರಿಗೆ ಅದರ ಅಗತ್ಯವೂ ಇಲ್ಲ! ಮತ್ತು, ಶಾಸನವನ್ನುಲ್ಲಂಘಿಸುವವರೇ ಇಲ್ಲದಿರುವಾಗ ಇಲ್ಲಿಯ ಪೋಲೀಸಿನವ ಉಪಾಧ್ಯಾಯನಾದರೂ ಆದೀತು!

ಬಂಗಾಳಾ ಕೊಲ್ಲಿಯುಲ್ಲಿರುವ ಭಾರತಕ್ಕೆ ಸೇರಿದ ಈ ೧೯ ದ್ವೀಪಗಳ ಸಮೂಹ ಹಿಂದೊಮ್ಮೆ 'ನಕಾವರಮ್' ಅಥವಾ 'ನಗ್ನ ಜನರ ದ್ವೀಪ'ವೆಂದು ಹೆಸರುವಾಸಿಯಾಗಿತ್ತು. ಆದರಿಂದ ಇಲ್ಲಿ ಪಾದರಕ್ಷೆ ಇಲ್ಲದೆ ತಿರುಗಾಡುವ ಜನ ಕಣ್ಣಿಗೆ ಬೀಳುವುದು ಸಹ ದುಸ್ಸಾಧ್ಯವಾದೀತು.

ನಿಕೋಬಾರ್—ಇದು ತುಂಬಾ ಪರಿಚಿತವಾದ ಹೆಸರು. ಇಲ್ಲಿಯ ೧೨ ಸಾವಿರ ಜನ ನಿವಾಸಿಗಳ ಪೈಕಿ ಮಹಿಳೆಯರು ಸಾಮಾನ್ಯವಾಗಿ ಬರ್ಮಾ ಮಹಿಳೆಯರಂತೆ ಉಡುಪು ಧರಿಸುತ್ತಾರೆ—ಸಾರಂಗ್ ಮತ್ತು 'ಬ್ಲೌಸ್'. ಪುರುಷರು ಷರಾಯಿ, 'ವಾಸ್ಕಟ್' ಧರಿಸುತ್ತಾರೆ. ಕಣ್ಣು ಕೋರೈಸುವ ಬಣ್ಣಗಳು ಮಾತ್ರ ಇಲ್ಲ.

ಇಲ್ಲಿಯ ಹವಾಗುಣ ಕೂಡ ಅದೇ ರೀತಿ. ತುಂಬಾ ಸೋಮಾರಿ ಎನ್ನಬಹುದು. ನಿದ್ದೆ ಬರಿಸುತ್ತದೆ. ಹಾಗೆಯೇ ಹಾಯಾಗಿ ಬಿದ್ದಿರೋಣ ಎನಿಸುತ್ತದೆ. ಸಮುದ್ರದ ಅಲೆಗಳೂ ಅಷ್ಟೇ ಸುಸ್ತು. ದಡಕ್ಕೆ ಅಪ್ಪಳಿಸುವಾಗ ಮೃದುವಾಗಿ ಮರಳ ದಂಡೆಯನ್ನು ಚುಂಬಿಸಿ ಹೋಗುತ್ತವೆಯೇ ಹೊರತು ಭೋರ್ಗರೆಯುತ್ತಾ ಅಪ್ಪಳಿಸುವುದಿಲ್ಲ. ಜನ ಮಾತನಾಡುವುದನ್ನು ನೀವು ಕೇಳಿದಾಗಲೂ ನಿಮಗೆ ಅಚ್ಚರಿಯಾದೀತು. ಎಲ್ಲೋ ಗವಿಯೊಳಗಿಂದ ಮಾತನಾಡುತ್ತಿರುವರೇನೋ ಎನಿಸುವಷ್ಟು ಮೆಲುದನಿಯಲ್ಲಿ ಸುಪ್ತಾವಸ್ಥೆಯಲ್ಲಿ ಮಾತನಾಡುತ್ತಿರುತ್ತಾರೆ ಜಗಳಗಂಟಿಗಳಿಲ್ಲದ ಕಾರಣ ಈ ರೀತಿ ಇರಬೇಕು! ಅವರ ಜಗಳದ ಪ್ರಮೇಯವಾದರೂ ಎಲ್ಲಿ ಬರಬೇಕು?

ತಾವು ಚಿಕ್ಕವರು ದೊಡ್ಡವರೆಂಬ ಭೇದಭಾವವೇ ಅವರಲ್ಲಿ ಇಲ್ಲ. ಜೀವನದ ಹೋರಾಟವೇ ಅವರಲ್ಲಿಲ್ಲ. ತೆಂಗಿನ ಕಾಯಿಯೇ ಇಲ್ಲಿಯ ಜನರಿಗೆ ಮುಖ್ಯ ಆಧಾರ. ಇದರ ಕೊರತೆ ಎಂಬುದೇ ಇಲ್ಲ. ಸಣ್ಣ ಪುಟ್ಟ ಮಕ್ಕಳೂ ಸಹ ನಿರಾಯಾಸವಾಗಿ ಮರ ಹತ್ತಿ ತಮ್ಮ ಹೊಟ್ಟೆ ತುಂಬಿಕೊಳ್ಳುತ್ತಾರೆ!

ತೆಂಗಿನ ತೋಟಗಳನ್ನು ಜನ ಪ್ರತ್ಯೇಕ ಪ್ರತ್ಯೇಕವಾಗಿ ನೋಡಿಕೊಳ್ಳುತ್ತಿರಬಹುದಾದರೂ ಅವು ಅವರಿಗೆ ಸೇರಿದ ಸ್ವತ್ತಲ್ಲ. ಅವು ಏನಿದ್ದರೂ ಇಡೀ ಗ್ರಾಮಕ್ಕೆ ಸೇರಿದ ಸ್ವತ್ತು. ಅಲ್ಲದೆ ಅವುಗಳ ವಿಷಯವಾಗಿ ಗ್ರಾಮದ ಮುಖಂಡನ ಮಾತೇ ಕೊನೆಯದು; ಅವನನ್ನು ಅವರು 'ಮುಹ್' ಎಂದು ಕರೆಯುತ್ತಾರೆ. ಅವನು ಹಾಕಿದ ಗೆರೆಯನ್ನು ಯಾರೂ ದಾಟುವಂತಿಲ್ಲ; ಅವನದೇ ವೇದವಾಕ್ಯ.

ಗ್ರಾಮದಲ್ಲಿ ಪ್ರತಿಯೊಬ್ಬನ ಹಿತರಕ್ಷಣೆ ಅವನ ಪಾಲಿನ ಹೊಣೆಗಾರಿಕೆ. ತನ್ನ ವ್ಯಕ್ತಿತ್ವದ ಪ್ರಭಾವ ಗ್ರಾಮಸ್ಥರ ಮೇಲೆ ಅಷ್ಟರ ಮಟ್ಟಿಗೆ ಇರುತ್ತದೆ. ಇವರಲ್ಲಿ ಬಲವಂತದ ಅಥವಾ ಕಟ್ಟುಪಾಡಿನ ಮಾತಿಲ್ಲ. ಆದರೆ ವಿಶ್ವಾಸದಿಂದಲೇ ಎಲ್ಲರೂ ತನ್ನ ಮಾತಿನಂತೆ ನಡೆಯುವಂತೆ ಮಾಡುತ್ತಾನೆ. ಅವನ ಮಾತನ್ನು ಅಲಕ್ಷಿಸಿ ನಡೆಯುವ ನಿದರ್ಶನಗಳೇ ದುರ್ಲಭ.

ಜನಸಾಮುದಾಯಿಕ ಶಿಸ್ತಿಗೆ ತುಂಬಾ ಬೆಲೆ ಕೊಡುತ್ತಾರೆ. ಅಂತೆಯೇ ಜನಾಭಿಪ್ರಾಯ ಅವರಿಗೆ ಬಹಳ ಮುಖ್ಯವಾಗುತ್ತದೆ. ಆದರೆ ಜೀವನ ಕ್ರಮ ಮಾತ್ರ ಅವರವರವೇ ರೀತಿಯಲ್ಲಿ ಸಾಗುತ್ತದೆ. ಭೂಮಾತೆಯನ್ನು ಆಶ್ರಯಿಸಿ ನಿಲ್ಲುತ್ತಾರೆ. ಉತ್ತು ಬಿತ್ತು ಬೆಳೆ ತೆಗೆಯುತ್ತಾರೆ. ಹಾಗೆ ತೆಗೆದ ಬೆಳೆಯನ್ನು ತಮ್ಮ ಸಹಕಾರ ಸಂಘಕ್ಕೆ ತಾವೇ ಕೊಂಡೊಯ್ಯುತ್ತಾರೆ. ಒಂದೊಂದು ಗ್ರಾಮಕ್ಕೂ ಒಂದು ಸಹಕಾರ ಸಂಘವಿದೆ. ಅಲ್ಲಿ ದವಸಧಾನ್ಯ ಕೊಟ್ಟು ತಮಗೆ ಬೇಕಾದ ಬಟ್ಟೆಬರೆ ಇತ್ಯಾದಿ ಕೊಳ್ಳುತ್ತಾರೆ.

ಅವರು ವಾಸಿಸುವ ಗುಡಿಸಲುಗಳು ಪ್ರತ್ಯೇಕ ಪ್ರತ್ಯೇಕವಾಗಿರುತ್ತವೆ. ಮತ್ತು ಏಳೆಂಟು ಅಡಿಗಳ ಎತ್ತರವಿರುತ್ತವೆ. ಆಗಾಗ ತಮ್ಮ ನೆಂಟರಿಷ್ಟರೊಡಗೂಡಿ ಹಬ್ಬ ಹುಣ್ಣಿಮೆಗಳನ್ನು ಆಚರಿಸುವುದುಂಟು ಅಲ್ಲದೆ ಇಡೀ ಗ್ರಾಮದ ಮನೋರಂಜನೆಗಳಾದ ಕುಸ್ತಿ, ನೌಕಾ ವಿಹಾರ, ಸಾಮೂಹಿಕ ನೃತ್ಯ ಇತ್ಯಾದಿ ಆನಂದೋತ್ಸವಗಳಲ್ಲೂ ಭಾಗವಹಿಸಬಹುದು.

ವಿವಾಹ ಅಥವಾ ವಿವಾಹ ವಿಚ್ಛೇದನ ಅವರವರ ವೈಯಕ್ತಿಕ ವಿಷಯ. ಒಬ್ಬ ಹುಡುಗಿಯನ್ನು ಮದುವೆಯಾಗ ಬೇಕೆನಿಸಿದಾಗ ಅವನು ಅವಳ ಬಂಧುಗಳ ಸ್ನೇಹವನ್ನು ಮೊದಲಿಗೆ ಗಳಿಸುತ್ತಾನೆ ಮತ್ತು ಹುಡುಗಿಯನ್ನು ಆ ಮೂಲಕ ಆಕರ್ಷಿಸುತ್ತಾನೆ. ಹುಡುಗಿಯ ಬಂಧುಗಳ ಸ್ನೇಹ ಬೆಳೆದ ಹಾಗೆ ಹುಡುಗಿಯ ಒಲವನ್ನೂ ಆತ ಸಂಪಾದಿಸಿಕೊಂಡರೆ ವಿವಾಹ ತುಂಬಾ ಸುಲಭ ಸಾಧ್ಯ. ವಿವಾಹ ವಿಚ್ಛೇದನದ ವಿಷಯವೂ ಇಷ್ಟೇ ವೈಯಕ್ತಿಕ; ಬಹಿರಂಗ ವಿಚಾರಣೆಯಾಗಲಿ ನಿರ್ದಿಷ್ಟ ಕ್ರಮವಾಗಲಿ ಇಲ್ಲ. ಪರಸ್ಪರ ಹೊಂದಾಣಿಕೆ ಆಗದೆ ಹೋದರೆ ವಿಚ್ಛೇದನ ಜಾರಿಗೆ ತಾನಾಗಿ ಬಂದುಕೊಳ್ಳಬಹುದು. ಯಾರ ಜೊತೆಗೆ ಹೆಚ್ಚು ಹೊಂದಿಕೊಂಡಿರುತ್ತಾರೆಯೋ ಆ ಕಡೆಗೆ ಮಕ್ಕಳೂ ಹೋಗುತ್ತಾರೆ. ತಂದೆಯ ಜೊತೆಗೇ ಹೋಗಬೇಕು ಅಥವಾ ತಾಯಿಯ ಜೊತೆಗೆ ಹೋಗಬೇಕುಎಂಬ ನಿರ್ಬಂಧವಿಲ್ಲ.

ಮಹಿಳೆಯರ ಸ್ಥಾನಮಾನಗಳು ಪುರುಷರ ಸ್ಥಾನಮಾನಗಳಿಗೆ ಯಾವ ವಿಧದಲ್ಲೂ ಕಡಿಮೆ ಇಲ್ಲ. ಸಾರ್ವಜನಿಕ ಅಭಿಪ್ರಾಯವನ್ನು ರೂಪುಗೊಳಿಸಲು ಮತ್ತು ಇಡೀ ಗ್ರಾಮಕ್ಕೆ ಸಂಬಂಧಿಸಿದ ವಿಷಯವನ್ನು ಚರ್ಚಿಸಲು ಅವರಿಗೆ ಸರಿಸಮಾನ ಹಕ್ಕು ಬಾಧ್ಯತೆಗಳಿವೆ. ಯಾವುದೇ ತೀರ್ಮಾನಕ್ಕೆ ಸ್ತ್ರೀಯರ ಅಭಿಪ್ರಾಯವೂ ಪುರುಷರಷ್ಟೇ ಸಹಕಾರಿ.

ನಿತ್ಯ ಕೆಲಸದಲ್ಲೂ ಪುರುಷರೊಡನೆ ಹೆಗಲಿಗೆ ಹೆಗಲು ಕೊಟ್ಟು ಸ್ತ್ರೀಯರು ಸಹಕರಿಸುತ್ತಾರೆ. ಹಂದಿಗಳನ್ನು ಸಾಕುವುದರಲ್ಲಾಗಲಿ ನಾವೆಗಳನ್ನು ನಡೆಸುವುದರಲ್ಲಾಗಲಿ ಅವರು ಪುರುಷರಷ್ಟೇ ಸಮರ್ಥರು. ನೆಲವನ್ನು ಉಳುವುದರಲ್ಲಿಯೂ ತೋಟಗಾರಿಕೆಯಲ್ಲಿಯೂ ಅವರು ಸಮಾನಸ್ಕಂಧರಾಗಿ ನಿಂತು ಸಹಕರಿಸುತ್ತಾರೆ.

ನಿಕೋಬಾರಿನ ಜನ ಯಾವ ಮತಸ್ಥರು? ಮುಖ್ಯ ದ್ವೀಪವಾದ ಕಾರ್ ನಿಕೋಬಾರ್‌ನಲ್ಲಿರುವ ೬೦೦ ಜನರಷ್ಟು ಕ್ರೈಸ್ತ ಮತೀಯರನ್ನು ಬಿಟ್ಟರೆ ಇನ್ನುಳಿದ ಈ ದ್ವೀಪಗಳ ನಿವಾಸಿಗಳು ಪ್ರತಿಯೊಂದು ಜೀವಿಯಲ್ಲಿಯೂ ಆತ್ಮವೆಂಬುದೊಂದಿದೆ ಎಂಬ ವಿಶ್ವಾಸವುಳ್ಳವರು. ಇವರಲ್ಲಿ ಮೂಢನಂಬಿಕೆಗಳಿಗೂ ಕೊರತೆ ಇಲ್ಲ. ದುಷ್ಟಶಕ್ತಿಗಳನ್ನು ಓಡಿಸಲು ಶವವನ್ನು ಮೂರು ನಾಲ್ಕು ದಿನಗಳ ಮಟ್ಟಿಗೆ ಸಮುದ್ರದ ಬದಿಯಲ್ಲಿಟ್ಟದ್ದು ಅನಂತರ ಹೂಳುವುದುಂಟು! ಹೀಗೆ ಇನ್ನೂ ಅನೇಕ ರೀತಿಯ ನಂಬಿಕೆಗಳಿವೆ.

ಅವುಗಳೇನೇ ಇರಲಿ, ಅವರು ಸ್ವಭಾವತಃ ಆತ್ಮ ವಿಶ್ವಾಸಿಗಳು. ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಅವರು ಸರ್ಕಾರದ ಸಹಾಯಕ್ಕೆ ಕೈಯೊಡ್ಡಿ ಕೂರುವವರಲ್ಲ. ರಸ್ತೆಗಳ ನಿರ್ಮಾಣ, ಸಹಕಾರ ಸಂಘಗಳ ಸ್ಥಾಪನೆ, ಇತ್ಯಾದಿಗಳನ್ನೆಲ್ಲಾ ಅವರೇ ಖುದ್ದಾಗಿ ನಿರ್ವಹಿಸಿ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಾರೆ; ಹೊರಗಿನ ಸಹಾಯಕ್ಕವರು ಕಾಯುವುದಿಲ್ಲ. ಭಾರತದ ಇತರ ಕಡೆಗಳಿಗೆ ಈ ಮನೋಭಾವ ಮಾದರಿಯಾಗಬೇಕು.

ಈ ದ್ವೀಪದ ಮುಖ್ಯ ಆವಶ್ಯಕತೆ ಎಂದರೆ ವಿದ್ಯಾಭ್ಯಾಸ ಸೌಕರ್ಯ—ಉಪಾಧ್ಯಾಯರು ಮತ್ತು ಪುಸ್ತಕಗಳು. ಆದರೆ ಇಷ್ಟು ನಿಜ. ತಮ್ಮ ಜೀವನಕ್ರಮದ ಶಾಂತಿಯನ್ನು ಹಾಳುಮಾಡುವ 'ಟೂತ್ ಬ್ರಷ್' ಮತ್ತು 'ಟಾಲ್ಕಮ್ ಪೌಡರ್' ಇತ್ಯಾದಿ ನವ ನಾಗರೀಕತೆಯ ಬಾಹ್ಯಾಡಂಬರವನ್ನು ಮಾತ್ರ ಅವರು ಯಾವತ್ತೂ ಬಯಸುವುದಿಲ್ಲ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಪರಿಚಯ

(೮ನೇ ಪುಟದಿಂದ)

ಯಿಂದ ಕಾಂಗ್ರೆಸ್ ಸಂಘಟನೆಯು ಶೀಘ್ರವಾಗಿ ನಡೆಯಬಹುದೆಂದು ತಿಳಿಯಬಹುದು. ವಾರ್ಷಿಕ ಷಾಣ್ಮಾಸಿಕ ಮತ್ತು ತ್ರೈಮಾಸಿಕ ಕಾರ್ಯ ಕ್ರಮಗಳನ್ನಾಕೆ ರೂಪಿಸುತ್ತಿರುವರು. ಇವುಗಳನ್ನು ಮಂಡಲ ಇಲ್ಲವೇ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಪೂರ್ಣಗೊಳಿಸಬೇಕಾಗುವುದು. ಅಧ್ಯಕ್ಷೆಯು ಪ್ರಧಾನ ಮಂತ್ರಿಯ ನಿವಾಸವನ್ನು ಬಿಟ್ಟು ದೂರ ವಾಸಿಸುವರು. ಕಾಂಗ್ರೆಸ್ಸಿನ ಓರ್ವ ಕಾರ್ಯದರ್ಶಿಯ ಮಾತಿನಲ್ಲಿ— "ಕಾಂಗ್ರೆಸಿನ ಪದವಿಯಲ್ಲಿ ಕಾರ್ಯಶೀಲನಾಗದಿರುವವರು ವಿರಾಜಿಸದಿರುವ" ಕಾಲ ಬಂತು.

ಇಂದಿರಾಗಾಂಧಿ ನಿಷ್ಕ್ರಿಯ ಹಾಗೂ ಸಿಡಿದು ಹೋದ ಕಾಂಗ್ರೆಸಿಗರನ್ನು ಒಳತರಲು ಮಾಡಿದ ಘೋಷಣೆಯು ಸಂಸ್ಥೆಯನ್ನು ಬಲಶಾಲಿಯನ್ನಾಗಿಸಬಹುದು. ತರುಣರಿಗೆ ಪ್ರತಿಶಿಕ್ಷಣವೀಯುವ ಮತ್ತು ಮಹಿಳೆಯರಿಗೆ ಪ್ರೋತ್ಸಾಹ ನೀಡುವ ಅವರ ಯೋಜನೆಗಳು ಕಾಂಗ್ರೆಸ್ಸನ್ನು ಪುನಃ ಸುಸಂಚಾಲಿತ ಮತ್ತು ಸಶಕ್ತವಾಗಿಸಲು ಸಹಾಯಕವಾಗುವುವು.

ಪ್ರಿಯದರ್ಶಿನೀ

೧೯೪೨ರ ಪೂರ್ವದಲ್ಲಿ ರಾಷ್ಟ್ರದಲ್ಲಿ ಪ್ರತಿಷ್ಠಿತೆಯಾಗಿದ್ದ ಶ್ರೀಮತಿ ಇಂದಿರಾ ಪ್ರಿಯದರ್ಶಿನಿ ಗಾಂಧಿಯೇ ಈಗ ಇಂದಿರಾ ಗಾಂಧಿಯಾಗಿದ್ದಾರೆಂದು ಹೆಚ್ಚಿನವರಿಗೆ ತಿಳಿಯದು. ಆದರೆ, ಈಗ ಪುನಃ ಆಕೆಯು ಭಾರತ ಜನಗಣದ ಕಣ್ಣಿಗೆ ಹಾಗೂ ಮನಸ್ಸಿಗೆ ಪ್ರಿಯದರ್ಶಿನಿಯಾಗಿಯೇ ಕಾಣುವ ಕಾಲವೊದಗಿ ಬಂದಿದೆ. ಈ ತನ್ನ ಅಧ್ಯಕ್ಷ ಪದವಿಯ ಕಾಲದಲ್ಲಿ ಕಾಂಗ್ರೆಸ್ಸನ್ನು ಸಚೇತನಗೊಳಿಸಿ, ಸಶಕ್ತವಾಗಿಸಿ ರಾಷ್ಟ್ರದ ಪ್ರಜೆಗಳಿಗೆಲ್ಲಾ ಪ್ರಿಯದರ್ಶಿನಿಯಾಗಿ ಪರಿಣಮಿಸಲು ಈ ಮಹಿಳೆಯು ಹಿಂಜರಿಯುವರೆಂಬುದರಲ್ಲಿ ತಥ್ಯಾಂಶವಿಲ್ಲ.

(ಮೂಲ: ನವಭಾರತ ಟೈಮ್ಸ್)

—ಗೋರಾ.

ಗೋವಿಜಯ
(ಗೋವಿನಕಥೆ)
ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.
ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.
60 ಪುಟಗಳು: ಬೆಲೆ 0—8—0
ನವಯುಗ ಪ್ರೆಸ್, ಉಡುಪಿ.

ನುಡಿಚಿತ್ರ

ಶ್ರೀ ಗೋಪಾಲ ಕೃಷ್ಣ ಗೋಖಲೆಯವರು

ವಿದೇಶದಲ್ಲಿ ಸಾಯಲಾರೆನೆಂದು ಸ್ವದೇಶಕ್ಕಾಗಮಿಸಿ ಇಲ್ಲಿ ಮೃತ್ಯುವನ್ನಪ್ಪಿದ ಸ್ವದೇಶಪ್ರೇಮಿ

ತಮ್ಮ ಕಾರ್ಯಕಲಾಪಗಳ ಮೂಲಕ ಭಾರತದ ಇತಿಹಾಸ ಮಹತ್ವವನ್ನು ಹೆಚ್ಚಿಸುವಂತಹ ಹಲವು ಮಹಾಪುರುಷರು ಮಹಾರಾಷ್ಟ್ರದಲ್ಲಿ ಆಗ್ಗಾಗ್ಗೆ ಹುಟ್ಟಿದರು. ಛತ್ರಪತಿ ಶಿವಾಜಿ ಮಹಾರಾಜ, ಲೋಕಮಾನ್ಯ ತಿಳಕ್, ನ್ಯಾಯಮೂರ್ತಿ ರಾನಡೆ ಹಾಗೂ ಭಾರತದ ಸೇವಕ ಗೋಖಲೆ—ಇವರೆಲ್ಲಾ ಇದೇ ತರಗತಿಯ ಮುಖಂಡರಾಗಿದ್ದರು.

ಗೋಖಲೆಯವರು ೧೮೬೬ನೇ ಮೇ ೯ರಲ್ಲು ಒಂದು ಬಡ ಕುಟುಂಬದಲ್ಲಿ ಜನಿಸಿದರು. ಬಾಲ್ಯದಲ್ಲೇ ಇವರಿಗೆ ತನ್ನ ಪಿತೃವಿಯೋಗ ಸಹಿಸಬೇಕಾಗಿ ಬಂತು. ಪ್ರತಿಕೂಲ ಅವಸ್ಥೆಯಲ್ಲಿ ಕೂಡಾ ಇವರು ತನ್ನ ಅಧ್ಯಯನವನ್ನು ನಿಲ್ಲಿಸದೆ, ಮುಂದರಿಸಿ ಬಿ. ಎ. ಪಾಸು ಮಾಡಿದರು. ಪೂನಾದ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯಲ್ಲಿ ಗೋಖಲೆಯವರು ಆಗರ್‌ಕರ್‌ರೊಡನೆ ಸೇರಿ ಅಧ್ಯಾಪಕ ವೃತ್ತಿಯನ್ನು ಕೈಗೊಂಡರು. ಈ ಸಂಸ್ಥೆಯ ಉನ್ನತಿಗೋಸ್ಕರ ತನ್ನಿಂದಾದಷ್ಟು ಸಹಾಯ ಮಾಡಿ ಅದನ್ನು ಉದ್ಧಾರ ಮಾಡುವುದು ತನ್ನ ಕರ್ತವ್ಯವೆಂದು ತಿಳಿದರು. ಗೋಖಲೆಯವರ ದಕ್ಷತೆ, ಕಾರ್ಯನಿಷ್ಠೆ ಹಾಗೂ ಅನುಶಾಸನದ ಕುರಿತು ಪ್ರೇಮ—ಇವುಗಳಿಗೆ ಮಾರುಹೋದ ಆಗರ್‌ಕರ್‌ರವರು ಇವರಿಗೆ ರಾನಡೆಯವರ ಪರಿಚಯ ಮಾಡಿಕೊಟ್ಟರು. ಈ ಭೇಟಿ ಗುರು-ಶಿಷ್ಯರ ಅವಿಸ್ಮರಣೀಯ ಭೇಟಿ ಎಂದು ಸಿದ್ಧವಾಯಿತು. ರಾನಡೆಯವರಿಗೆ ತನಗೊಬ್ಬ ಉತ್ತಮ ಶಿಷ್ಯ ದೊರಕಿದನೆಂಬ ಸಂತೋಷವಾದರೆ, ಗೋಖಲೆಯವರಿಗೆ ತನಗೊಬ್ಬ ಅನುಪಮ ಗುರು ದೊರಕಿದರಲ್ಲಾ ಎಂಬ ಆನಂದ.

ಕೊನೆಗೆ ಗೋಖಲೆಯವರು ಆಗರ್‌ಕರ್‌ರ ಮೂಲಕ ಪ್ರಕಟಿಸಲ್ಪಡುತ್ತಿದ್ದ "ಸುಧಾರಕ" ಎಂಬ ಮರಾಠಿ ಸಾಪ್ತಾಹಿಕದಲ್ಲಿ ಲೇಖನ ಬರೆಯಲು ತೊಡಗಿದರು. ೧೮೯೭ರಲ್ಲಿ ವೆಲ್‌ಬೀ ಕಮಿಷನ್ನಿನ ಎದುರು ತಿಲಕರು ತನ್ನ ದೂರದರ್ಶಿತ್ವ ಹಾಗೂ ಕುಶಲ ಬುದ್ಧಿಯನ್ನು ಪ್ರಕಟಿಸಿದಾಗಲೇ ಭಾರತವಾಸಿಗಳಿಗೆ ಗೋಖಲೆಯವರ ಪೂರ್ಣ ಪರಿಚಯವಾದುದು. ಭಾರತೀಯ ಶಾಸನ ವಿಧಾನದ ವಿಶೇಷಜ್ಞರೆಂದು ತಿಳಿಯಲ್ಪಡುತ್ತಿದ್ದ ದಾದಾಭಾಯೀ ನೌರೋಜಿಯವರಿಗೆ ಕೂಡಾ ವೆಲ್‌ಬೀ ಕಮಿಷನ್‌ನ ಪ್ರಶ್ನೆಗಳಿಗೆ ಉತ್ತರ ಕೊಡಲಾಗಲಿಲ್ಲ. ಆದರೆ ಗೋಖಲೆಯವರು ತನ್ನ ಹೇಳಿಕೆಯ ಸಮಯ ಯಾವ ಸಮಸ್ಯೆಯನ್ನುಂಟು ಮಾಡಿದರೋ, ಅದನ್ನು ಕಂಡು ಕಮಿಷನ್‌ನ ಮುಖಂಡರಾದ ವೆಲ್‌ಬೀ ಕೂಡಾ ಆಶ್ಚರ್ಯಚಕಿತರಾದರು. ಕೊನೆಗೆ ವೆಲ್‌ಬೀ ಸಾಹೇಬರು ಗೋಖಲೆಯವರ ಕೈ ಕುಲುಕಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು. ಈ ಘಟನೆಯ ನಂತರ ಭಾರತೀಯರು ಗೋಖಲೆಯವರನ್ನು ಓರ್ವ ಯೋಗ್ಯ ಮುಖಂಡರ ಸಂಬಂಧದಂತೆ ನೋಡತೊಡಗಿದರು.

ಗೋಖಲೆಯವರ ಕಾರ್ಯಪಟುತ್ವದ ವಿಜಯದ ಭೇರಿ ಬಾರಿಸುತ್ತಾ-ಅವರಿಗೆ ದೊಡ್ಡ ಒಂದು ವಿಪತ್ತನ್ನು ಎದುರಿಸಬೇಕಾಗಿ ಬಂತು. ಪೂನಾದ ಕಲೆಕ್ಟರ್ ರ್‍ಯಾಂಡರ್ ಹತ್ಯೆ ಹಾಗೂ ಪೂನಾದ ಪ್ಲೇಗಿನ ವಿಷಯ ಇವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಯಾವ ಭಾಷಣ ಮಾಡಿದ್ದರೋ, ಅದರಲ್ಲಿ ಕೆಲವು ಮಾತು ಪೂರ್ಣ ಸತ್ಯವಾಗಿರಲಿಲ್ಲ. ಇದೇ ಸಮಯ ಭಾರತದಿಂದ ಕೆಲವು ಜನರು ಅವರಿಗೆ ಪತ್ರಿಕೆಗಳ ಕತ್ತರಿಸಿದ ತುಂಡು ಹಾಗೂ ಅನ್ಯ ಉಪಯೋಗೀ ವಿಷಯಗಳನ್ನು ಕಳುಹಿಸಿದರು. ಅವೆಲ್ಲಾ ಅರ್ಧ ಸತ್ಯವಾಗಿದ್ದುವು. ಈ ಸಮಸ್ಯೆಯನ್ನೆತ್ತಿಕೊಂಡು ಗೋಖಲೆಯವರ ವಿರುದ್ಧವಾಗಿ ಪಾರ್ಲಿಮೆಂಟಿನಲ್ಲಿ ಘೋರವಾದ ಚರ್ಚೆ ನಡೆಯಿತು. ಗೋಖಲೆಯವರು ಸತ್ಯಪ್ರಿಯರಾಗಿದ್ದರು. ತನ್ನ ತಪ್ಪನ್ನು ಒಪ್ಪಿಕೊಳ್ಳುವ ಸಾಹಸ ಕೂಡಾ ಅವರಲ್ಲಿತ್ತು. ತಿಲಕ್ ಪಕ್ಷದ ಜನರು ಇವರನ್ನು ದೇಶದ ಶತ್ರು ಎಂದು ಸಂಬೋಧಿಸಿದರೂ, ತನ್ನ ಸತ್ಯಪಾಲನೆಗಾಗಿ ಇವರು ಸರಕಾರಕ್ಕೆ ಕ್ಷಮಾಯಾಚನೆಯ ಪತ್ರವನ್ನು ಕಳುಹಿಸಿದರು. ಹೆಚ್ಚು ಕಡಮೆ ಇದೇ ಸಮಯ ತಿಲಕರು ರಾಜದ್ರೋಹದ ಆರೋಪದ ಮೇಲೆ ಜೈಲಿಗೆ ಕಳುಹಿಸಲ್ಪಟ್ಟರು. ತಿಲಕರ ಕಾರಾಗೃಹವಾಸದೊಡನೆ ಗೋಖಲೆಯವರ ಮಾಫೀ ಪತ್ರದ ತುಲನೆಮಾಡಿ, ಜನರು ಗೋಖಲೆಯವರನ್ನು ಪ್ರತಿಗಾಮಿ ಎಂದು ಕರೆದು ಅವರಿಗೆ ಅನ್ಯಾಯ ಮಾಡಿದರು.

ತನ್ನ ಗುರು ರಾನಡೆಯವರ ಪ್ರೇರಣೆಯಂತೆ ಕೆಲ ದಿನಗಳ ನಂತರ ಗೋಖಲೆಯವರು ಸಾಮಾಜಿಕ ಕ್ಷೇತ್ರಕ್ಕೆ ಕಾಲಿಟ್ಟರು. ಅವರು ಭಾರತೀಯ ವಿಧಾನ ಸಭೆಯ ಸದಸ್ಯರಾಗಿ ಚುನಾಯಿಸಲ್ಪಟ್ಟರು. ಅಲ್ಲಿ ಇವರು ಬ್ರಿಟಿಷ್ ರಾಜ್ಯದಲ್ಲಿರುವ ಭಾರತೀಯರ ಸ್ಥಿತಿಯ ಚಿತ್ರವನ್ನು ವಿವರಿಸಿದಾಗ ಪಾರ್ಲಿಮೆಂಟಿನ ಸದಸ್ಯರು ಕೂಡಾ ಆಶ್ಚರ್ಯಪಟ್ಟರು. ಇಂಗ್ಲೆಂಡಿನ ತತ್ಕಾಲೀನ ಸೇನಾಪತಿ ಲಾರ್ಡ್ ಕಿಚ್‌ನೇರನು ಗೋಖಲೆಯವರ ಕುರಿತು ಮಾತನಾಡುತ್ತಾ, "ತುಪಾಕಿಗಳ ಎದುರು ನಿಂತರೂ ಹೆದರಲಾರೆ. ಆದರೆ ಗೋಖಲೆಯವರ ಶಬ್ದ ಬಾಣಗಳಿಗೆ ಹೆದರುತ್ತೇನೆ" ಎಂದು ಹೇಳಿದನು. ಲಾರ್ಡ್ ಕರ್ಜನನು ಕೂಡಾ ಕಠೋರ ವ್ಯಕ್ತಿಯಾಗಿದ್ದನು. ಆದರೆ ಗೋಖಲೆಯವರ ವಿವಾದಪಟುತ್ವಕ್ಕೆ ಆತನೂ ಹೆದರುತ್ತಿದ್ದ. ಗೋಖಲೆಯವರ ನಿರ್ಭೀತತೆ, ಶಿಷ್ಟಾಚಾರ ಹಾಗೂ ಸತ್ಯಪ್ರಿಯತೆಯಿಂದ ಲಾರ್ಡ್ ಮಿಂಟೋ, ಹಾರ್ಡಿಂಜ್, ವಿಲ್ಸನ್—ಮೊದಲಾದ ವೈಸ್‌ರಾಯರು ಅವರನ್ನು ತಮ್ಮ ಮಿತ್ರನಂತೆ ಒಪ್ಪತೊಡಗಿದ್ದರು. ಅವರು ತನ್ನ ಯುಗದ ಓರ್ವ ಈಡಿಲ್ಲದ-ಅಸದೃಶ-ಮುಖಂಡರಾಗಿದ್ದರು.

ಗೋಖಲೆಯವರ ಸತ್ಯಪ್ರಿಯತೆ, ವಿನಮ್ರತೆ ಹಾಗೂ ಶಿಷ್ಟಾಚಾರದಿಂದ ಗಾಂಧೀಜಿಯವರು ಕೂಡಾ ಪ್ರಭಾವಿತರಾದರು. ಗಾಂಧೀಜೀಯವರೊಡನೆ ಅವರ ಮೊದಲ ಭೇಟಿ ೧೮೯೬ರಲ್ಲಾಯಿತು. ಬಳಿಕ ದಕ್ಷಿಣ ಆಫ್ರಿಕಾದ ಭಾರತೀಯರ ಪರಿಸ್ಥಿತಿಗಳನ್ನು ಸುಧಾರಿಸಲೂ ಹಾಗೂ ತತ್ಸಂಬಂಧ ಪ್ರಚಾರಕ್ಕಾಗಿ ಗಾಂಧೀಜೀ ಪೂನಾಕ್ಕೆ ಹೋದರು. ಅವರ ಕಾರ್ಯನಿಷ್ಠೆ ಹಾಗೂ ಸಾಧನೆಯನ್ನು ಕಂಡು ಪ್ರಸನ್ನರಾದ ಗೋಖಲೆಯವರು ಹೀಗೆ ಹೇಳಿದರು: ಮಣ್ಣಿನೊಳಗಿಂದ ಲೋಹ ಪುರುಷನನ್ನು ಹುಟ್ಟಿಸಬಲ್ಲಂತಹ ಕರ್ತೃತ್ವಶಕ್ತಿ ಗಾಂಧೀಜೀಯವರಲ್ಲಿದೆ."

ಗೋಖಲೆಯವರು ದೂರದರ್ಶಿ ಎಂಬುದನ್ನು ಮೊದಲೇ ಹೇಳಿಯಾಗಿದೆ. ರಾಷ್ಟ್ರದ ಭವಿಷ್ಯವನ್ನು ಉಜ್ವಲಗೊಳಿಸುವುದಕ್ಕಾಗಿ ಆದರ್ಶ ಕಾರ್ಯಕರ್ತರನ್ನು ತಯಾರು ಮಾಡುವ ಕುರಿತು ಅವರು ಯಾವಾಗಲೂ ಚಿಂತೆ ಮಾಡುತ್ತಿದ್ದರು. ೧೯೦೫ರಲ್ಲಿ ಅವರು 'ಭಾರತ ಸೇವಕ ಸಮಾಜ'ದಂತಹ ಶ್ರೇಷ್ಠ ಸಂಸ್ಥೆಗೆ ತಳಪಾಯ ಹಾಕಿದರು. ಇಂದು ೬೦ ವರ್ಷಗಳ ಬಳಿಕ ಅದೇ ಸಂಸ್ಥೆಯ ಅಸ್ತಿತ್ವ ಭಾರತದ ವಿಕಾಸಕ್ಕೆ ಉಪಯುಕ್ತವಾಗಿದೆ ಎಂಬುದಕ್ಕೆ ಸಾಕ್ಷಿಯಾಗುತ್ತಿದೆ. ಆದರೆ ಇದನ್ನು ನೋಡಲು ಅವರಿಲ್ಲದಿರುವುದೇ ಬಹಳ ಖೇದದ ಸಂಗತಿ. ಅದೃಷ್ಟವಶಾತ್ ಅವರು ನಮ್ಮ ನಡುವೆ ಇರುತ್ತಿದ್ದರೆ ಈ ರಚನಾತ್ಮಕ ಸ್ಮಾರಕವನ್ನು ನೋಡಿ ಕೃತಾರ್ಥರಾಗುತ್ತಿದ್ದರು.

ಗೋಖಲೆಯವರು ಓರ್ವ ರಾಜನೈತಿಕ ಯೋಗಿಯಾಗಿದ್ದರು. ಅವರಿಗೆ ತನ್ನ ಅಂತಿಮ ಕಾಲದ ವಿಷಯ ಮೊದಲೇ ತಿಳಿದಿತ್ತು. ಇಂಗ್ಲೆಂಡಿನಲ್ಲಿದ್ದಾಗಲೇ ಇವರ ಆರೋಗ್ಯ ಕೆಡತೊಡಗಿತ್ತು. ಡಾಕ್ಟರ್ ಹೇಳಿದರು: "ಗೋಖಲೆಯವರು ಇನ್ನು ಭಾರತ ಭೂಮಿಯ ದರ್ಶನ ಮಾಡಲಾರರು!" ಆಚಕ್ಕತ್ತರವಾಗಿ ಗೋಖಲೆಯವರು "ನಾನು ವಿದೇಶದಲ್ಲಿ ಎಂದಿಗೂ ಸಾಯಲಾರೆ" ಎಂದು ಹೇಳಿದರು.

೧೯ನೇ ಫೆಬ್ರವರಿ ೧೯೧೫ರಂದು ಗೋಖಲೆಯವರು ಸ್ವದೇಶಕ್ಕೆ ಮರಳಿ ಬಂದ ಆರು ದಿನಗಳ ಬಳಿಕ ಸ್ವರ್ಗಸ್ಥರಾದರು.

[ಆಧಾರ]

— ಸಿ. ನಾರಾಯಣ ಬಲ್ಲಾಳ,

ಅನುಭವಾಮೃತ

(೬ನೇ ಪುಟದಿಂದ)

ವರು ನನ್ನನ್ನು ಗದರಿಸಿ "ನಿನಗೇನು ಗೊತ್ತು ಈ ಹಳ್ಳಿಯೆಂದರೆ ದೇವತೆಗಳು ವಾಸ ಸ್ಥಳವಿರಬೇಕು" ಎಂದರು.

ಇನ್ನೂ ನಾಲ್ಕು ದಿನ ಕಳೆಯಿತು. ನನ್ನ ಜ್ವರ ಎಂದಿನಂತೆ ದಿನಕ್ಕೆರಡಾವರ್ತಿ ಬರುತ್ತ ಬಿಡುತ್ತಲಿತ್ತು! ಹಾಸಿಗೆಯಲ್ಲಿಯೇ ಮಲಗಿರುವಂತಾಗಿತ್ತು! ಅಲ್ಲಿಯ ಜೋತಿಷಿಗಳೊಬ್ಬರು ಅನೇ ದಿನ ನನ್ನ ಪರಿಸ್ಥಿತಿ ತಿಳಿದು ಈ "ಹುಡುಗ ಹೆದರಿದ್ದಾನೆ" ಗೋಳಿಕಟ್ಟೆ ಬಬ್ಬ ದೇವರ ಕೀಳುದೃಷ್ಟಿಯನ್ನಾರಿಸಲು ಶಾಂತಿ ಹೋಮವಾದಲ್ಲಿ ಇಂದೇ ಸಾಯಂಕಾಲದೊಳಗೆ ಗುಣಹೊಂದುವನೆಂದರು. ಸರಿ ತಂದೆಯವರು ಶಾಂತಿಗೆ ಬೇಕಾದ ಸಾಧನ ಸಾಮಗ್ರಿಗಳನ್ನು ಒದಗಿಸಿದರು. ಅಂದೇ ಮಧ್ಯಾಹ್ನ "ಶಾಂತಿ' ಕಾರ್ಯವೂ ಯಶಸ್ವಿಯಾಗಿ ನಡೆಯಿತೇ ವಿನಃ ನನ್ನ ಶೀಕಿನಲ್ಲಿ ಯಾವ ಬದಲಾವಣೆಯೂ ಇಲ್ಲ!!

ಇನ್ನೂ ನಾಲ್ಕು ದಿನ ಕಳೆಯಿತು. ತನ್ನಿಂದ ತಾನೇ ಜ್ವರವು ಇಳಿಮುಖವಾಯಿತು! ಈ ವೇಳೆಗಾಗಲೇ ಎಲ್ಲ ಹುಚ್ಚನ್ನೂ ಬಿಟ್ಟು ನನ್ನ ತಂದೆಯವರು ನನ್ನ ಆರೋಗ್ಯ ಆಹಾರದ ಬಗ್ಗೆ ಲಕ್ಷ್ಯ ತೆಗೆದುಕೊಳ್ಳುತ್ತಿದ್ದರು-ಹಾಗಾಗಿಯೇ ಇಳಿಮುಖವಾದ ಜ್ವರವೂ ಮೂರನೇ ವಾರದಲ್ಲಿ ಸಂಪೂರ್ಣ ಮಾಯವಾಯಿತು-ಸುಮ್ಮ ಸುಮ್ಮನೆ ಅಸಂಬದ್ಧವಾಗಿ - ಕೋಳಿಯೊಂದನ್ನು ಬಲಿಗೊಟ್ಟಿದ್ದಕ್ಕೂ "ಶಾಂತಿ"ಹೋಮದ ಹೆಸರಿನಲ್ಲಿ ಜೋತಿಷಿಗಾರ ಬ್ರಾಹ್ಮಣನಿಗೆ ಹಣವಿತ್ತದ್ದಕ್ಕೂ ನಾನು – ಪರಿತಪಿಸಿದೆ! ಅಂಥ ವಿಶ್ವಾಸಿಗಳನ್ನು ಬಹಿರ್ಮುಖಿಗಳನ್ನಾಗಿ ಮಾಡುವದು ಕಠಿಣ ಸಾಧ್ಯ.

— ಸಿರಿಪತಿ

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ ಬಿ ಎಸ್.)
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕುಮಾರಿ ಚಿಕ್ರೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗಳ ಅತ್ಯುತ್ತಮ ಔಷಧಿ. ಬೆಲೆ ರೂ. ೫/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA-40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

—ಬೇಕಾಗಿದ್ದಾರೆ—
ಮೋಹನ್‌ರವರ ಜನಪ್ರಿಯ ತಯಾರಿಕೆಗಳಾದ ಹೇರ್‌ಆಯಿಲ್ ಬ್ರಿಲಿಯನ್‌ಟೈನ್, ಫೌಂಟನ್‌ಪೆನ್ ಮಸಿ, ರಬ್ಬರ್‌ಸ್ಟಾಂಪ ಮಸಿ ಮತ್ತು ದತ್ತ ಭಜನಾವಳಿಗಳನ್ನು ಧಾರಾಳವಾದ ಕಮಿಶನ್ ಮೇಲೆ ಮಾರಾಟಮಾಡತಕ್ಕ ಏಜಂಟರೂ, ವ್ಯಾಪಾರಸ್ಥರೂ ಬೇಕಾಗಿದ್ದಾರೆ. ಏಜನ್ಸಿ ಮತ್ತು ವ್ಯಾಪಾರದ ನಿಯಮಗಳಿಗಾಗಿ ೧೫ ಪೈಸೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ—
ಕುಲಕರ್ಣಿ ಅಂಡ್ ಸನ್ಸ್
೨೦, ಗಾಂಧಿ ಬಜಾರ
ಬೆಂಗಳೂರು 4

ಕಥಾ ವಿಹಾರ

(೨ನೇ ಪುಟದಿಂದ)

ತ್ರಿ ಇಮ್ಮಡಿಸಿತು. ನಡುಗುವ ಕೈಯಿಂದ 'ಮೂಲೆಯ ಕೋಣೆ'ಯನ್ನು ಸೇರಿ ಓದಿದನು. 'ಡಾಕ್ಟರ್ ಮಹಾಶಯರೇ, ತಮ್ಮ ಉಪಕಾರವನ್ನು ಈ ಜನ್ಮದಲ್ಲಿ ಮರೆಯಲಾರೆ. ಆರು ವರ್ಷಗಳಿಂದ ನನ್ನನ್ನು ಪೀಡಿಸುತ್ತಿದ್ದ ನನ್ನ ರೋಗವು ತಮ್ಮ 'ಸೌಭಾಗ್ಯ ಚಿಂತಾಮಣಿ'ಯ ಸೇವನೆಯಿಂದ ಗುಣಮುಖವಾಗುತ್ತಿದೆಯೆಂದು ತಿಳಿಸಲು ಸಂತೋಷವಾಗುತ್ತದೆ. ಬೇಗನೆ ಇನ್ನೂ ಎಂಟು ಬಾಟ್ಲಿಗಳ ಪಾರ್ಸೆಲೊಂದನ್ನು ಕಳುಹಿಸಿಕೊಡಬೇಕಾಗಿ ಅಪೇಕ್ಷೆ. ಮದ್ದಿನ ಕ್ರಯ, ಅಂಚೆವೆಚ್ಚ ಹಾಗೂ ಪುರಸ್ಕಾರ ಸಮೇತ ಐವತ್ತು ರೂಪಾಯಿಗಳನ್ನು ಇಂದೇ ಕಳುಹಿಸಿದ್ದೇನೆ.' ಪತ್ರವನ್ನೋದಿ ಮುಗಿಸುವುದೂ ಹಲವಾರು ಮನಿಯಾರ್ಡರುಗಳ ಸಮೇತ ಅಣ್ಣಪ್ಪನು ಮೂಲೆ ಕೋಣೆಯನ್ನು ಪ್ರವೇಶಿಸುವುದೂ ಸರಿಯಾಯಿತು.

ಕವಿರಾಜ ಡಾ| ಆರ್. ಬಿ. ಹೇಟರ ದರ್ಶನಕ್ಕಾಗಿ ರೋಗಿಗಳ ತಂಡವೇ ಅವರ ಮನೆಬಾಗಿಲಲ್ಲಿ ಬಂದು ಸೇರುತ್ತಿದ್ದಿತಾದರೂ 'ಡಾಕ್ಟರರು ದೂರದ ಹಳ್ಳಿಯ ರೋಗಿಯೊಬ್ಬನನ್ನು ಕಾಣಲು ಹೋಗಿರುವರು. ರಾತ್ರಿಯಲ್ಲದೆ ಬರುವಂತಿಲ್ಲ' ಎಂಬ ಡಾಕ್ಟರರ ವೈಯಕ್ತಿಕ ಕಾರ್ಯದರ್ಶಿಣಿ ಹಾಗೂ ಕಂಪೌಂಡರ್ ಸರೋಜಿನಿ ದೇವಿಯವರ ವಾಣಿಯನ್ನು ಕೇಳಿ, ತಮ್ಮ ವಿಳಾಸ, ರೋಗದ ಲಕ್ಷಣಗಳನ್ನು ಬರೆದಿಟ್ಟು ಹಿಂತಿರುಗುವುದಲ್ಲದೆ ಯಾರಿಗೂ ಡಾಕ್ಟರರ ದರ್ಶನ ಭಾಗ್ಯವು ದೊರೆಯುತ್ತಿದ್ದಿಲ್ಲ. ಮಾಸ್ತರರು ಮಾತ್ರ ಮೂಲೆಯ ಕೋಣೆಯಲ್ಲಿ ಒಲೆಯ ಮುಂದೆ ಕುಳಿತು ಕಷಾಯವನ್ನು ತಯಾರಿಸುತ್ತಿದ್ದರು-

ಮಾಸ್ತರರ ಮನೆಯ ಸ್ಥಿತಿಯೀಗ ತುಂಬ ಸುಧಾರಿಸಲ್ಪಟ್ಟಿದೆ. ಮಕ್ಕಳು ಮೈದುಂಬಿ ಬೆಳೆಯುತ್ತಿದ್ದಾರೆ. ಸಹೋದರಿಯರು ಆಭರಣ, ವಸ್ತ್ರಾದಿಗಳನ್ನು ತೊಟ್ಟು ಮೆರೆಯುತ್ತಿದ್ದಾರೆ. ತನ್ನ ಐವರು ಮಕ್ಕಳ ಲಾಲನೆ ಪಾಲನೆಯಲ್ಲಿಯೇ ರಾಧೆಯೂ ಮಗ್ನಳಾಗಿರುವುದರಿಂದ ಹಿಂದಿನಂತೆ ಉತ್ಪಾದನೆಯನ್ನು ಹೆಚ್ಚಿಸುವುದರ ಕಡೆಗೆ ಅವಳು ಹೆಚ್ಚು ಗಮನಿಸುತ್ತಿರಲಿಲ್ಲವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಕಾರಣ ಇಂದು ಮಾಸ್ತರರೂ ದಿನವಿಡೀ ತನ್ನ ಉತ್ಪಾದನೆಯನ್ನು ಬೆಳೆಸುವುದರಲ್ಲಿ ಮಗ್ನವಾಗಿಯೇ ಇರುತ್ತಿದ್ದರು.

ಮಾಸ್ತರರು ಉದ್ಯೋಗಕ್ಕೆ ರಾಜೀಯಿತ್ತಿರುವರೆಂದೂ ಯಾವುದೋ ಗುಪ್ತವಾದ ಉದ್ಯಮದಲ್ಲಿ ತೊಡಗಿರುವರೆಂದೂ ಊರಲ್ಲೆಲ್ಲಾ ಸುದ್ದಿ ಹರಡಲು ಹೆಚ್ಚು ಸಮಯವು ಬೇಕಾಗಲಿಲ್ಲ. ಪಟ್ಟಣದ ಕಡೆಯಿಂದ ಪ್ರತಿ ದಿನವೂ ಹಲವಾರು ಜನರು ಮನೆಗೆ ಬರುತ್ತಿರುವರೆಂದೂ, ಮನೆಯ ಕಡೆಯಿಂದ ದೇವದಾರು ಪೆಟ್ಟಿಗೆಗಳಲ್ಲಿ ಭದ್ರವಾಗಿರಿಸಿದ ಏನೋ ಪಕ್ಕದ ಹಳ್ಳಿಯ ಅಂಚೆ ಕಟ್ಟೆಯೆಡೆ ಸಾಗುತ್ತಿರುವುದು ಸತ್ಯವೆಂದೂ ಮಾಸ್ತರರ ಚಟುವಟಿಕೆಗಳಲ್ಲಿ ದೃಷ್ಟಿಯಿಟ್ಟು ವರದಿಯೊಪ್ಪಿಸಲು 'ಊರ ಮಹನೀಯ'ರಿಂದ ನಿಯುಕ್ತವಾದ ನಿರುದ್ಯೋಗಿಗಳಾದ ಯುವಕರ ಅಧಿಕೃತ ಸಮಿತಿಯು ಕಂಡು ಹಿಡಿಯಿತು. ಅಷ್ಟರಲ್ಲಿಯೇ ವಯಸ್ಸು ಮೀರಿದ ಮಾಸ್ತರರ ಸಹೋದರಿಯರಿಗೂ ಪಟ್ಟಣದ ಕಡೆಯ 'ಒಳ್ಳೆಯ ಕುಳುವಾರಿ'ನಿಂದ ವರರು ದೊರೆತುದೂ ಮಾಸ್ತರರ ಮಗ ರಾಮಕೃಷ್ಣನಿಗೆ ಮದರಾಸಿನ ಮೆಡಿಕಲ್ ಕಾಲೇಜಿನಲ್ಲಿ ಸೀಟು ದೊರೆತುದೂ 'ಊರ ಮಹನೀಯರ'ನ್ನು ಮತ್ತಷ್ಟು ಕೆರಳಿಸಿತು. ಒಂದು ಶುಕ್ರವಾರ ಸಂಜೆ ಸಂತೆ ಕಟ್ಟೆಯ ಬಳಿ ನೆರೆದ 'ಊರ ಮಹನೀಯ'ರ ಸಭೆಯಲ್ಲಿ ಡಾ| ಆರ್. ಬಿ. ಹೇಟರ ಕುರಿತಾದ ಬಿರುಸಿನ ಚರ್ಚೆಯು ಡಾ| ಶೇಖರಯ್ಯನವರಿಂದ ಉದ್ಘಾಟಿಸಲ್ಪಟ್ಟಿತು. 'ಡಾಕ್ಟರರೆಂಬ ಸೋಗು ಹಾಕಿ ವೈದ್ಯಕೀಯದ ಜ್ಞಾನವಿಲ್ಲದ ಬಡ ಮಾಸ್ತರನೋರ್ವನು ಅಜ್ಞಾನಿಗಳಾದ ಊರವರನ್ನು ಸುಲಿಯುವುದು' ಸುಜ್ಞಾನಿಗಳಾದ ಕೆಲವರಿಗೆ ಸರಿದೋರಲಿಲ್ಲ. ಸಾಮೂಹಿಕ ಸಹಿ ಸಂಗ್ರಹವನ್ನು ಮಾಡಿ ಜಿಲ್ಲಾ ಕಲೆಕ್ಟರರಿಗೆ ಮನವಿಯನ್ನರ್ಪಿಸಲಾಯಿತಾದರೂ ಹಲವು ತಿಂಗಳುಗಳ ಕಾಲ ಕಾದರೂ ಉತ್ತರ ದೊರೆಯಲಿಲ್ಲ; ಡಾ| ಹೇಟರ ದಿವ್ಯೌಷಧಿಯ ಪ್ರಕಟಣೆಯು 'ನಂದಾದೀಪ'ದ ಮೊದಲ ಪುಟವನ್ನು ಬಿಟ್ಟು ಕದಲಲಿಲ್ಲ.

'ಮಾಸ್ತರರು ಅಧಿಕಾರಿಗಳನ್ನು ಲಂಚಕೊಟ್ಟು ವಶಪಡಿಸಿರುವರೆಂ'ದ ಕೆಲವರಾಡಿಕೊಳ್ಳಲು ತೊಡಗಿದರು. 'ಯಾವುದೋ ದೇವತೆಯು ಕನಸಿನಲ್ಲಿ ಬಂದು ವೈದ್ಯಕೀಯದ ಮಹಾವರವನ್ನು ಮಾಸ್ತರರಿಗಿತ್ತಿರುವಳು" ಎಂಬ ವದಂತಿಯೂ ಕೆಲಮಂದಿ ಮಹಿಳಾ ಮಹನೀಯರ ಮುಖಾಂತರ ಪ್ರಚಾರವಾಗತೊಡಗಿತು. ಹಲ್ಲು ಕಿತ್ತ ಹಾವಿನಂತಾದ ಶೇಖರಯ್ಯನವರ ಸಂಗಡವು 'ಅಧಿಕಾರಿಗಳಿಂದ ನಮಗೆ ನ್ಯಾಯ ದೊರೆಯದು, ನಮ್ಮ ಕಣ್ಣ ಮುಂದೆ ಇಂತಹ ಹಗಲುದರೋಡೆಯು ನಡೆಯುತ್ತಿರುವಾಗ ನಾವದನ್ನು ನಡೆಯಗೊಡುವುದೇ? ನಾವೇ ಕೆಲವರು ಮಾಸ್ತರರನ್ನು ನೇರವಾಗಿ ಕಂಡು ಈ ಕೃತ್ಯವನ್ನು ನಿಲ್ಲಿಸುವಂತೆ ಎಚ್ಚರಿಸಬೇಕು' ಎಂದು ತೀರ್ಮಾನಿಸಿತು. ಬಹಳ ಪ್ರಯಾಸಪಟ್ಟ ಮೇಲೆ ಡಾ| ಹೇಟರು ಅವರಿಗೆ ತನ್ನ ನಿವಾಸದಲ್ಲಿ ಭೇಟಿಯನ್ನೀಯಲು ಸಮ್ಮತಿಯಿತ್ತರು ಮಾತು ಸ್ವಲ್ಪ ಬಿರುಸಾಗಿಯೇ ಸಾಗಿತು. "ಕೇವಲ ಉಪಾಧ್ಯಾಯರಾಗಿದ್ದ ನೀವು ಇಷ್ಟೊಂದು ಸಂಪಾದನೆಯನ್ನು ಮಾಡಿದ ಬಗೆ ನಮಗೆಲ್ಲ ತಿಳಿದಿದೆ"

"ಬಹಳ ಸಂತೋಷ. ನೀವೆಲ್ಲ ಅದನ್ನು ತಿಳಿದುಕೊಂಡುದರಿಂದಲೇ 'ನನ್ನ ದಿವ್ಯೌಷಧಿ ಪ್ರಚಾರವು ಹೆಚ್ಚಾಗಿ ಸಂಪಾದನೆಯು ಇನ್ನಷ್ಟು ಹೆಚ್ಚುತ್ತಿರುವುದು' ಎಂದು ನಾನು ತಿಳಿದಿದ್ದೇನೆ. ಅದಕ್ಕಾಗಿ ಧನ್ಯವಾದಗಳು."

ಶೇಖರಯ್ಯನವರ ಉತ್ಸಾಹದ ಚಿಗುರಿಗೆ ಬಿಸಿನೀರೆರೆದಂತಾಯಿತು. "ನೀವು ಈ ರೀತಿಯ ವಂಚನೆಯನ್ನು ಇನ್ನಾದರೂ ನಿಲ್ಲಿಸಬೇಕೆಂದು ನಿಮ್ಮನ್ನು ಎಚ್ಚರಿಸಲಿಕ್ಕಾಗಿ ನಾವು ಬಂದಿರುತ್ತೇವೆ" ಊರ ನಿರುದ್ಯೋಗಿ ಸಂಘದ ಅಧ್ಯಕ್ಷ ಸೋಮಪ್ಪನ ಗಡುಸಿನ ಧ್ವನಿ.

"ಬೋಧಿಸುವ ಜನರಿಗೇನೂ ನಮ್ಮೂರಲ್ಲಿ ಕೊರತೆಯಿಲ್ಲವೆಂದು ನಾನು ತಿಳಿದೇ ಇದ್ದೇನೆ. ಅದರಿಂದಾಗಿಯೇ ನಾನು ನನ್ನ ದಿವ್ಯೌಷಧಿಯ ಉಪಯೋಗದ ಕುರಿತು ನಿಮ್ಮಂತಹವರಿಗೆ ಬೋಧಿಸಲು ಬರುತ್ತಿಲ್ಲ."

"ಒಳ್ಳೆಯ ಮಾತಿನಂತೆ ನೀವು ಈ ರೀತಿಯ ವಂಚನೆಯ ಕೆಲಸವನ್ನು ಕೊನೆಗಾಣಿಸದಿದ್ದಲ್ಲಿ 'ಊರ ಮಹನೀಯರಾ'ದ ನಾವು ಮುಂದಿನ ಹೆಜ್ಜೆಯಿಡಬೇಕಾಗುತ್ತದೆ."

"ಹಾಗಾಗಲಿ! ಪ್ರತಿ ಶುಕ್ರವಾರವೂ ಸಂತೆಕಟ್ಟೆಯಲ್ಲಿ ನೆರೆಯುವ ಜನರಿಗೆ 'ಅಪೂರ್ವ ಸಂಜೀವಿನಿ'ಯನ್ನು ಕೊಟ್ಟು ನಿರಾಯಾಸವಾಗಿ ಹಣವನ್ನು ಸಂಪಾದಿಸುತ್ತಿರುವ ಆ ವೈದ್ಯ ಭೂಷಣನನ್ನು ಎಷ್ಟು ವರ್ಷಗಳಿಂದ ನೀವು ಕಾಣುತ್ತಿರುವಿರಿ? ಅವನಲ್ಲಿ ನಿಮ್ಮ ಬೇಳೆಯನ್ನು ಮೊದಲು ಬೇಯಿಸಿ ಆ ಬಳಿಕ ಇಲ್ಲಿಗೆ ಬನ್ನಿರಿ" ಎಂದರು ಸಂಭಾಷಣೆಯ ಉಪಸಂಹಾರವಾಗಿ ಮಾಸ್ತರ್ ಡಾಕ್ಟರರು.

* * *

ಆದಿನ ಸಂತೆಗೆ ಬರುವ ಹೋಗುವ ಜನರೆಲ್ಲ ಮಾಸ್ತರರ ಹೊಸ ಮನೆಯ ಮಾಳಿಗೆಯ ಕಡೆಗೇ ನೋಡುತ್ತಿದ್ದರು. 'ಡಾ| R. B. HAT'ರ 'ರಾಮಕೃಷ್ಣ ಫಾರ್ಮಸಿ' ಎಂದಲ್ಲಿ ತೂಗಾಡುತ್ತಿದ್ದ ಬೋರ್ಡು ಜನರಿಗೆ ಕೂಗಿ ಹೇಳುತಿತ್ತು. ಕೆಳಗಿನ ಜಗಲಿಯಲ್ಲಿ ಮೀಸೆ ತಿರುವುತ್ತ ನಿಂತಿದ್ದ ಮಾಸ್ತರರು ಪರಿಚಿತರಾದವರನ್ನೆಲ್ಲಾ ಕರೆದು ನನ್ನ ಮಗ 'Ramakinshua B· HATನು ಮೆಡಿಕಲ್ ಪರೀಕ್ಷೆ ಪಾಸಾಗಿ ಈ ಊರಲ್ಲಿ ಆಸ್ಪತ್ರೆಯನ್ನು ತೆರೆದ ಸುದ್ದಿಯನ್ನು ಎಲ್ಲರೂ ಕೇಳಲೆಂದೇ ಗಟ್ಟಿಯಾಗಿ ಹೇಳುತ್ತಿದ್ದರು.

(ಮಲೆಯಾಳಿ ಕತೆಯೊಂದರ ಆಧಾರದಿಂದ)

—ಎಂ. ಶಂಕರನ್ ನಂಬಿಯಾರ್,
ಬೇಕಲ.

ಮದುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ;

'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು ಸ್ಪೆಶಲ್ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

Camp:Udipi

O· P. No· 882/1958

ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀ ಪಾದಂಗಳವರ ಜನರಲ್ ಏಜಂಟ್ ಶ್ರೀ M. ನಾರಾಯಣ ಆಚಾರ್ಯ-ಅರ್ಜಿದಾರರು

ಮತ್ತು

ತೇಜಪ್ಪ ಶೆಟ್ಟಿ-ಎದ್ರಿರು

ಇವರೊಳಗೆ

ಉಡುಪಿ ತಾಲೂಕು ಕಾವಡಿ ಗ್ರಾಮದಲ್ಲಿರುವ ಸುಬ್ಬಕ್ಕ ಶೆಡ್ತಿರ ಮಗ ತೇಜಪ್ಪ ಶೆಟ್ರಿಗೆ:-

ಅರ್ಜಿದಾರರು ನಿಮ್ಮ ಮೇಲೆ ಬಾಳಗೇಣಿ ಆಸ್ತಿ ಸ್ವಾಧೀನತೆಗೆ ಮಾಡಿದ ಮೇಲ್ಕಾಣಿಸಿದ ನಂಬ್ರವು ತಾ27-2-59ಕ್ಕೆ ಹಗಲು ಗಂಟೆ 11ಕ್ಕೆ ತನ್ಸಿಗೆ ಇಟ್ಟಿದೆ. ಆದ್ದರಿಂದ ಆ ದಿವಸ ನೀವು ಸ್ವತಃ ಅಥವಾ ವಕೀಲರ ಮುಖಾಂತ್ರ ಹಾಜ್ರಾಗಿ ಆಕ್ಷೇಪಣೆ ಇದ್ದರೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ನಂಬ್ರ ನಿಮ್ಮ ವಿರುದ್ಧ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಪಿ. ರಾಮಚಂದ್ರರಾವ್ B A;B.L,
ಎಡ್ವಕೇಟ್.

ಉಡುಪಿ, 11-2-59

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 466 N/50 date 2-12-1950 of the Director of public Instruction, Madras·

ಎಸ್.ಆರ್.
ಅತ್ಯುತ್ತಮ ಬೀಡಿಗಳು

NAVAYUGA
REGD. NO. M. 3619

UDIPI, THURSDAY
19–2–1959

LICENSE NO. 31
Licensed to Post without Prepayment

ಶಬ್ದಕೋಶಗಳು

ಕನ್ನಡದ ಉನ್ನತ ಶಬ್ದಕೋಶಗಳು

ಇವುಗಳಲ್ಲಿ ದೇಶಿ, ಸಂಸ್ಕೃತ, ಸಮ ಸಂಸ್ಕೃತ ಮತ್ತು ತದ್ಭವ ಪದಗಳ ಅರ್ಥಗಳು ಹೇಳಲ್ಪಟ್ಟಿವೆ.

೪ ಮಂಗರಾಜನ ನಿಘಂಟು.

ಇದನ್ನು ಎರಡನೆಯ ಮಂಗರಸ (ಕ್ರಿ. ಶ.೧೩೯೮)ನು ಅಭಿನವ ನಿಘಂಟು ಅಥವಾ ಕವಿಮಂಗಾಭಿಧಾನವೆಂಬ ಹೆಸರಿನಿಂದ ಬರೆದಿದ್ದಾನೆ. 'ಅಭಿನವ ಮಂಗನುಸಿರ್ದ ಸತ್ಕವಿತೆಯಂ ಬಟೆವರಾರ್ ಮಟೆವರಾರ್' 'ಅಭಿನವ ಬಾಲಸರಸ್ವತಿ' ಎಂದು ಕವಿಯು ತನ್ನನ್ನು ಹೊಗಳಿಕೊಂಡಿದ್ದಾನೆ. ಇದು ವಾರ್ಧಕ ಷಟ್ಪದಿಯಲ್ಲಿದೆ ಈ ಕವಿಯು ನಾಗವರ್ಮನ ವಸ್ತುಕೋಶದ ಆಧಾರದಿಂದ ತನ್ನ ಕೋಶದಲ್ಲೂ ಸ್ವರ್ಗ, ಭೂ, ಪಾತಾಳ, ಸಾಮಾನ್ಯ, ನಾನಾರ್ಥವೆಂಬ ಐದು ಕಾಂಡಗಳಾಗಿ ವಿಭಾಗಿಸಿದ್ದಾನೆ. ಪ್ರತಿ ಕಾಂಡದಲ್ಲೂ ವರ್ಗಗಳಿವೆ. ಇದು ಸಮ ಸಂಸ್ಕೃತ ಕೋಶ; ದೇಶೀಯ ಪದಗಳೂ ಇವೆ.

|| ವಾ । ಷ ||
ಕೇಂಕೃತಂ ಪಕ್ಷಿಯೊಳಗೀಂಕೃತಂ ದಾಶನೊಳು
ಝೇಂಕೃತಂ ತುಂಬಿಯೊಳು ಚೀತ್ಕೃತಂ ರಥಗಳೊಳು
ಛೀಂಕೃತಂ ಬಾಣದೊಳು ಫೀಟ್ಕೃತಂ
ಕಲಭದೊಳು ಬೃಂಹಿತಂ ಮದಗಜದೊಳು ||
ಟಂಕೃತಂ ಬಿಲ್ಲಿನೊಳು ಸೀತ್ಕೃತಂ ಸುರತದೊಳು
ಹೂಂಕೃತಂ ಧೀರರೊಳು ಮಾಂಕೃತಂ ಪರ್ಣೆಯೊಳು
ಝುಂಕೃತಂ ಕಟಕದೊಳು ಹೇಷಾಕೃತಂ ವಾಜಿತತಿಯಲ್ಲಿ ವರ್ತಿಸಿಕ್ಕುಂ ||

೫ ಕರ್ಣಾಟಕ ಶಬ್ದಸಾರ

ಇದು ಪ್ರಥಮ ಗದ್ಯಕೋಶ. ಹಳಗನ್ನಡ ನಿಘಂಟುಗಳಿಗೆ ಇದು ಮೂಲವಿರಬಹುದು. ಮಿ| ಕಿಟ್ಟೆಲ್ ಸಾಹೇಬರು ಇದರ ಕಾಲ ಸು ಕ್ರಿ. ಶ. ೧೪೦೦ ಎನ್ನುತ್ತಾರೆ. ಇದನ್ನು ಬರೆದವರಾರೋ ಗೊತ್ತಿಲ್ಲ. ಇದರಲ್ಲಿ ೬೩೬ ಪದಗಳಿಗೆ ಹಲವು ಸಮಾನಾರ್ಥಕ ಪದಗಳಿವೆ. ಇದನ್ನು 'ಎಣ್ಮಂಗ'ನೆಂದು ಶಿವನ ಹೆಸರಿನಿಂದ ಆರಂಭಿಸಿರುವುದರಿಂದ ಈ ಕವಿಯು ಸ್ಮಾರ್ತ ಅಥವಾ ವೀರಶೈವನಿರಬಹುದು.

ಇದರ ಗದ್ಯಕ್ಕೆ ಉದಾ:—
೩೫. ಕಳಲೆಂದುದಧಿ.
೬೪೩ ಕಲ್ಲಿಯಿತ್ತನೆಂದು ವಿದ್ಯಾಶಿಕ್ಷಣಂ.
೩೪೪ ಚಚ್ಚಳಾಯ್ತನೆಂದು ಪರಿಚಾರಕಂ.

೬ ಕರ್ಣಾಟಕ ನಿಘಂಟು.

ಇದರ ಕಾಲ ಕ್ರಿ. ಶ. ಸು. ೧೪೦೦ ರಚಿಸಿದ ಕವಿಯಾರೆಂದು ತಿಳಿಯದು. ಕವಿಯು ತನ್ನ ನಿಘಂಟಿಗೆ ಕಬ್ಬಿಗರ ಕೈಪಿಡಿಯೆಂದು ಹೆಸರಿಟ್ಟಿದ್ದಾನೆ. ಆದರೆ ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿಯು ಪ್ರಚಾರದಲ್ಲಿರುವುದರಿಂದ ಇದು ಕರ್ಣಾಟಕ ನಿಘಂಟೆಂದೇ ಕರೆಯಲ್ಪಡುತ್ತಿದೆ. ಈ ನಿಘಂಟು 'ಪೊನ್ನೆಟಿಯ ತಿಸುಳಿಗೆಳೆಯಂ' ಎಂದೇ ಆರಂಭವಾಗಿದೆ. ಇದರಲ್ಲಿ ಕಂದವೃತ್ತಗಳು ಕೂಡಿರ್ದ ಪದ್ಯಗಳಿರುವುದರಿಂದ ಪ್ರಾರಂಭದ ಒಂದೋ ಕೆಲವೋ ಪದ್ಯಗಳು ಬಿಟ್ಟುಹೋದಂತೆ ತೋರುತ್ತದೆ. ಕವಿಯು ಹೀಗೆಯೇ ಆರಂಭಿಸಿದ್ದರೆ ಅವನು ದಟ್ಟ ದರಿದ್ರನಿರಬಹುದು. ಇದರ ಅಂತ್ಯ ಪದ್ಯದಿಂದ ಇವನು ಕನ್ನಡದಲ್ಲಿ ಅಭಿಮಾನವುಳ್ಳವನೆಂದು ತೋರುವುದು. ಇದರಲ್ಲಿ ಹಳೆಗನ್ನಡ ರಳ ಕಾರವನ್ನು ಉಪಯೋಗಿಸಿದ್ದಾನೆ ಈ ಕವಿಯ ಕಂದ ವೃತ್ತಗಳಲ್ಲಿ ಒಂದು ಸೊಬಗಿದೆ. ಕವಿ ಸಮರ್ಥನು. ಇದು ಹಳಗನ್ನಡದ ಅಪೂರ್ವ ನಿಘಂಟು.

|| ವೃತ್ತ ||
ನೆಯ್ದಿಲ್ಗೆಳೆಯಂ ವಿದು ಬೆಳ್ಗದಿರಂ
ನೆಯ್ದಿಲ್ವಗೆಯಂ ರವಿ ಕೆಂಗದಿರಂ ||
ನೆಯ್ದಿಲ್ಗೊಳಪ್ಪಳ ಕೋವಳೆಗಳ್
ಬಾಯ್ದಾರೆಗಳೆಂಬ ಸಿದಾರೆಗಳೊಳ್ ||

೭ ಚತುರಾಸ್ಯ ನಿಘಂಟು.

'ಮನೋ ಮುದಮಂ ಹಂಪೆಯಾಳ್ದ ನೀಗನವರತಂ' ಎನ್ನುವುದರಿಂದ ಈ ಕವಿಯು ಹಂಪೆಯ ವಿರೂಪಾಕ್ಷನ ಭಕ್ತ; ಶೈವ ಕವಿ.

|| ಕಂದ ||
ನೆಲದಮರ್ದುಣಿಗಗನಾನ್ವಯ
ತಿಲಕಂ ಹಂಪರಸ ಸೂನುತಿಪ್ಪರಸಂವೇ ||
ಳೆಲೆ ಚತುರಾನನ ಎನಲಾಂ
ಫಳಲನ್ಕೆ ಕರ್ಣಾಟಕಾಭಿಧಾನವನುಸಿರ್ದೆಂ ||

ಕವಿಯು ಹೀಗೆನ್ನುವುದರಿಂದ ಇದು ತಿಪ್ಪರಸನ ಹೇಳಿಕೆಯ ಮೇರೆಗೆ ಬರೆಯಲ್ಪಟ್ಟಿತೆಂದು ತೋರುತ್ತದೆ. ಇದಕ್ಕೆ ಕರ್ಣಾಟಕಾಭಿಧಾನವೆಂದು ಕವಿ ಇಟ್ಟ ಹೆಸರು. ಆದರೆ ಪ್ರತಿ ಕಂದ ಪದ್ಯದ ಅಂತ್ಯವೂ ಚತುರಾಸ್ಯವೆಂದೇ ಮುಗಿಯುವುದರಿಂದ ಇದನ್ನು ಚತುರಾಸ್ಯ ನಿಘಂಟೆನ್ನುತ್ತಾರೆ. ಕವಿಯ ಹೆಸರೂ ಚತುರಾಸ್ಯನೆಂದೇ.

ಇದನ್ನು ಚತುರಾಸ್ಯ ಬೊಮ್ಮರಸನು ಬರೆದನು. ಇದರಲ್ಲಿ ಕಂದ ಪದ್ಯಗಳು ೧೩೦ ಇವೆ. ಈ ಕಂದಗಳಲ್ಲೂ ಒಂದು ಸೊಗಸಿದೆ.

|| ಕಂದ ||
ಪೊಂಬಸಿರಂ ಪಡಿವೆಣಾ
ಣ್ಮಂ ಬೊಮ್ಮಂ ಜೇದಬಿಜ್ಜೆಗಂ ತಾವರೆಗಂ ||
ದಂ ಬಿದಿನಾಲ್ಮೊಗನಜನೆಂ
ದೆಂಬ ಪೆಸರ್ ತಿಳಿಗೆ ಕೋವಿದರ್ ಚತುರಾಸ್ಯ ||

೮ ಧನ್ವಂತರೀಯ ನಿಘಂಟು

ಇದೊಂದು ವೈದ್ಯ ನಿಘಂಟು. ಕಾಲ ಸು. ಕ್ರಿ. ಶ. ೧೫೦೦. ಸಂಸ್ಕೃತ ಮೂಲಿಕೆಗಳಿಗೆ ಕನ್ನಡದ ಹೆಸರನ್ನು ಕೊಟ್ಟಿದೆ. ಕವಿಯ ಹೆಸರು ಗೊತ್ತಿಲ್ಲ. ಇದಿನ್ನೂ ಮುದ್ರಣವಾಗಿಲ್ಲ.

೯ ಕಬ್ಬಿಗರ ಕೈಪಿಡಿ

ಇದನ್ನು ಲಿಂಗನೆನ್ನುವ ಕವಿ (ಕ್ರಿ. ಶ. ೧೫೩೦); ವಾರ್ಧಕ ಷಟ್ಪದಿಯಲ್ಲಿ ಬರೆದನು. ಇವನು ವೀರ ಶೈವ. ವಿರೂಪಾಕ್ಷನ ಮಗ. ರಾಯಭೂವರನಲ್ಲಿ ಮಂತ್ರಿಯಾಗಿದ್ದ. ವಿದ್ವಾಂಸರ ಪ್ರಾರ್ಥನೆಯ ಮೇರೆಗೆ ಈ ನಿಘಂಟನ್ನು ಒರೆದನು. ಇದರಲ್ಲಿ ೧೦೦ ವಾರ್ಧಕ ಷಟ್ಪದಿಗಳಿವೆ. ಈ ನಿಘಂಟಿಗೆ ಶ್ರೀ ಹೆಸರು ಘಟ್ಟದ ಹೊನ್ನಪ್ಪನವರು ವಿಬುಧ ಚಕೋರ ಚಂದ್ರಿಕೆ ಎಂಬ ಅಮೂಲ್ಯ ಟೀಕೆ ಬರೆದು ಇದರ ಬೆಲೆಯನ್ನು ಹೆಚ್ಚಿಸಿದ್ದಾರೆ.

|| ವಾ । ಷ ||
ಜೊಲ್ಲೆಯುವೆನಲ್ ತರುಂಬಿನ ಕೊನೆಗೆ ಪೆಸರಕ್ಕು
ಚಲ್ಲೆಯನೆ ನಿಡಿಮ ಬಾಜನೆಯೆ ವಾಚನೆಯಕ್ಕು
ಕೊಲ್ಲಣಿಗೆಯೆಂದೊಡಾಡುವುದಕ್ಕು
ಮಲುಬೆಂದು ಕರ್ಚೆಂದು ತೊಳೆವುದಕ್ಕು ||
ಮೆಲ್ಲನೆ ಕಿಲುಂಬೆಂದು ಕಾಳಿಕೆಗೆ ನಾಮ ಮ
ತ್ತಲ್ಲಿ ಸರವೆನೆ ಬೇಂಟೆಯೆನೆ ಸರವಿ ಕರ್ಕಶತೆ
ಗುಲ್ಲಸದಿರುಂಬೊಡೆನಿಕ್ಕು ಸೂಸಾಟಿಕೆ ಸಿರುಂಬಳಂಪಕ್ಕು ನಾಮಂ ||

೧೦. ಕರ್ನಾಟಕ ಶಬ್ದ ಮಂಜರಿ.

ಇದನ್ನು ವಿರಕ್ತ ತೋಂಟದಾರನು (ಕ್ರಿ. ಶ. ೧೫೬೦) ಬರೆದನು ಇದೂ ವಾರ್ಧಕ ಷಟ್ಪದಿ. ಇದರಿಂದ ಹಳಗನ್ನಡ ಕಾವ್ಯವಾಚನಕ್ಕೆ ತುಂಬಾ ಪ್ರಯೋಜನವಿದೆ. ಇದರಲ್ಲಿ ಕವಿ ತನ್ನನ್ನು 'ಶಿವಗುರು ನಿರಂಜನ ಲಿಂಗ ಚರಣ ಸರಸಿರುಹ ಸೌರಭ ಮಧುಕರ ತೋಂಟದಾರ್ಯ'ನೆಂದು ಕೊಂಡಿದ್ದಾನೆ. ಇದರಲ್ಲಿ ೧೨೦ ವಾರ್ಧಕಗಳಿದ್ದು ಎರಡು ಪದ್ಯಗಳಲ್ಲಿ ತನ್ನ ಕುರಿತೂ, ೭೫ ಪದ್ಯಗಳಲ್ಲಿ ಹಳಗನ್ನಡದ ಪ್ರಕಾರ್ಥಪದಗಳನ್ನೂ ಹೇ', ಆ ಮೇಲೆ ದರ್ಪಣಕಾರನು ತತ್ಸಮ ಪದಗಳಿಗೆ ಹೇಳಿದ ಮಣಿ, ಮಂಚ, ಪಟ್ಟ ಮೊದಲಾದ ಇಪ್ಪತ್ತಮೂರು ತತ್ಸಮ ಪದಗಳನ್ನು ಒಂದು ಪದ್ಯದಲ್ಲಿ ಹೇಳಿ, ಆ ಮೇಲೆ ಒಂದು ಪದ್ಯದಲ್ಲಿ ಕನ್ನಡದ ಅವ್ಯಯಗಳ ಕುರಿತು ಕಾಣಿಸಿ ಕೊನೆಯ ಒಂದು ಪದ್ಯದಲ್ಲಿ 'ನಾಮಂಗಳೊಳ್ದೇಶೀಯ ಪಲವು ತೆರನಂತವು ಮಹಾಶೇಷಗಂ ತಿಳಿಯಲಳವಲ್ಲ' ಎಂದು ದೇಶೀಯ ಪದಗಳ ವೈಶಾಲ್ಯವನ್ನು ಹೇಳಿ ಮುಗಿಸಿದ್ದಾನೆ ಇದು ತತ್ಸಮ, ತದ್ಭವ, ದೇಶಿಯ ಪದಗಳ ಉತ್ತಮ ಪದ್ಯಕೋಶ. ಇದಕ್ಕೂ ವ್ಯಾಖ್ಯಾನವಿದೆ.

|| ವಾ । ಷ ||
ಸರಿಮಿಂಡಿಯೆನೆ ಪ್ರಥಮ ಋತುವಾಗದವಳಕ್ಕು
ತುರುಮುಂಡಿಯೆನೆ ನೆರೆದ ಪೆಣ್ಣಕ್ಕು ಪತಿವ್ರತೆಗೆ
ನೆರೆ ಹದಿಬದೆಯನಿಕ್ಕು, ಸುವಾಸಿನಿಗೆ
ಯೈದೆ ಪೆಸರಪ್ಪುದಳಿ ಪೆಣ್ಣೆಂದೆನೆ ||
ಉರೆಯುಲ್ಪತರುಣಿ, ಬಿತಿಗೆ ಪೆಣ್ಣೆನಲ್ ಪ್ರೌಢೆ
ನಿರುಗೆಯಿಂ ಪಚ್ಚೆವೆಣ್ ಬಂಜೆಯೆನಿಸುಗು ಮತ್ತ
ಮಂಚಲ್ಲಗಾರ್ತಿಯೆನೆ ಪರಸವತಿ ಹುರುಡಿವಾಸತಿಯೆ ಕೂಡೆಗಾರ್ತಿಯಕ್ಕುಂ ||

೧೧. ಭಾರತ ನಿಘಂಟು

ಇದರ ಕವಿ ಯಾರೋ ತಿಳಿದಿಲ್ಲ.

|| ಕಂದ ||
ಭಾರತದೊಳ್ಕವಿರಾಜ ಕು
ಮಾರ ವ್ಯಾಸಂ ಪೊಗಳ್ದವಾಂತಿಗರ್ಥಮ (?) ||
ನಾರ್ಕೈದುಪರ್ವ ನಿಜದಿಂ
ಧೀರರಿದಂ ಮೆಚ್ಚನರಿದು ಪೊಗಳ್ವುದು ಮುದದಿಂ ||

ಇದು ಆರಂಭದ ಪದ್ಯ. ಈ ಕವಿಯು ಕುಮಾರ ವ್ಯಾಸನು ಉಪಯೋಗಿಸಿದ ದೇಶ್ಯ ಪದಗಳ ಅರ್ಥವನ್ನು ೬೭ ಕಂದಗಳಲ್ಲಿ ಹೇಳಿದ್ದಾನೆ.

ದಿಟವೆನೆ ಸತ್ಯದ ಪೆಸರು
ಬ್ಬಟೆಯೆನೆ ಶೌರ್ಯಾತಿರೇಕ ಮೊಡ್ಡನೆ ಮೊತ್ತಂ ||
ಆಟಮಟವೆನೆ ಕಪಟಂ ಚಾ
ಪಟೆಯರೆನಲ್ ಜಾಲರೆಂದು ತಿಳಿಗೆ ಬುಧರ್ಗಳ್ ||

(ಮುಂದುವರಿಯುವುದು.)

—ಯು. ನಾ. ಉಡುಪ, ವಿದ್ವಾನ್.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಿಶಾಲವಾಗಿ ಹಬ್ಬುತ್ತಿರುವ
"ಸಿಂಡಿಕೇಟ್" ಬ್ಯಾಂಕಿನ
ನೂರಹದಿನೇಳನೆಯ ಶಾಖೆಯು
ಕಾಕಿನಾಡ (ಪೂರ್ವ ಗೋದಾವರಿ, ಆಂಧ್ರ)ದಲ್ಲಿ
ಸದ್ಯದಲ್ಲಿಯೇ ತೆರೆಯಲ್ಪಡುವುದು.

ಒಟ್ಟು ವ್ಯವಹಾರ ಸಂಪತ್ತು ರೂ. **17** ಕೋಟಿಗೂ ಮಿಕ್ಕಿದೆ.

ಡಾ| ಟಿ. ಯಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

ಟಿ ಎ. ಪೈ,
ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ

ವರುಷ ೩೮. ವಾರ ೨೪. 26-2-1959 Vol. 38. No. 24.

ಕಿಸುನುಡಿ

ಹಾಸನ-ಮಂಗಳೂರು ರೈಲುಮಾರ್ಗವಿಲ್ಲ!

ದಾಕ್ಷಿಣಾತ್ಯರು ಕೇಂದ್ರದಲ್ಲಿ ಬಾಯ್ಮುಚ್ಚಿಕೊಂಡಿದ್ದಾರೆ

ಶ್ರೀ ಜಗಜ್ಜೀವನ ರಾಮರು ಲೋಕ ಸಭೆಯಲ್ಲಿ ಮಂಡಿಸಿದ ರೇಲ್ವೆ ಶಾಖೆಯ ಮುಂಗಡ ಪತ್ರವನ್ನು (೧೯೫೯—೬೦ನೆ ವರ್ಷಕ್ಕೆ ಸಂಬಂಧಿಸಿದುದು) ಸದಸ್ಯರು ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ಹರ್ಷೋದ್ಗಾರಗಳನ್ನು ಮಾಡಿ ಸ್ವಾಗತಿಸಿರುವರು. ಎಂದರೆ, ಎಲ್ಲ ಖರ್ಚುಗಳೂ ಕಳೆದು ಸುಮಾರು ರೂ. ೨೧ ಕೋಟಿಗಳ ನಿಕ್ಕಿ ಆದಾಯವು ಈ ಶಾಖೆಗೆ ಮುಂದಿನ ವರ್ಷದಲ್ಲಿ ದೊರೆಯುವುದೆಂದು ಅಂದಾಜು ಮಾಡಲಾಗಿದೆ. ಈ ಆದಾಯವು ಹಿಂದಿನ ವರ್ಷ ಕೇವಲ ಹದಿನಾರು ಕೋಟಿಯಷ್ಟು ಮಾತ್ರ ಇತ್ತು. ಅಲ್ಲದೇ ಈ ಅಂದಾಜಿನಂತೆ ಕೇಂದ್ರ ಸರಕಾರದ ಆದಾಯಕ್ಕೆ ಸುಮಾರು ೫೫ ಕೋಟಿ ರೂಪಾಯಿಗಳು ಜಮೆಯಾಗುವ ನಿರೀಕ್ಷೆಯಿದೆ.

ಮೊತ್ತದಲ್ಲಿ ರೇಲ್ವೆ ಮುಂಗಡಪತ್ರವು ಲಾಭಕರವಾಗಿಯೇ ಇದೆ. ಮಾನ್ಯ ಮಂತ್ರಿವರ್ಯರು ಮುಂಗಡಪತ್ರವನ್ನು ಮಂಡಿಸುತ್ತ, ಪ್ರಯಾಣಿಕರ ಮೂಲಕ ಆದಾಯವು ಕಡಿಮೆಯಾಗಿ ಸರಕುಗಳ ಸಾಗಾಟದಿಂದಲೇ ಇದು ಬಂದಿದೆ ಎಂದು ಹೇಳಿ, ಸರಕುಗಳಲ್ಲಿಯೂ ಅತಿ ಲಾಭದಾಯಕವಾದ ಸಕ್ಕರೆ, ಮೊದಲಾದುವುಗಳನ್ನು ಟ್ರಕ್ಕುಗಳ ಮೂಲಕ ಸಾಗಿಸುವುದಲ್ಲದೆ ಹೋದರೆ, ರೇಲ್ವೆ ವಿಭಾಗದ ಆದಾಯವು ಮತ್ತಷ್ಟು ಹೆಚ್ಚುತಿತ್ತು ಎಂದು ಅಭಿಪ್ರಾಯಪಟ್ಟರು. ಮುಂದಿನ ವರ್ಷದಲ್ಲಿ ಕೈಗೊಳ್ಳಲಾಗುವ ಹೊಸ ರೈಲು ದಾರಿಗಳ ಹೆಸರುಗಳನ್ನು ಸೂಚಿಸಿದರು. ಇತ್ತೀಚೆಗೆ ರೇಲ್ವೆ ಅಪಘಾತಗಳ ಸಂಖ್ಯೆಯಲ್ಲಿಯೂ ಭಯಂಕರತೆಯಲ್ಲಿಯೂ ಹೆಚ್ಚುತ್ತಿರುವುದನ್ನೂ ಉಲ್ಲೇಖಿಸಿ, ಈ ಬಗ್ಗೆ ಸಾಕಷ್ಟು ಎಚ್ಚರಿಕೆಗಳನ್ನೀಯಲಾಗುತ್ತಿದೆ ಎಂದರು ಆದರೆ, ಲಂಚ ನಿರೋಧದ ಬಗ್ಗೆ ಕೈಗೊಳ್ಳಲಾದ ಕಾರ್ಯಕ್ರಮ ಬಹಿರಂಗಗೊಂಡಿಲ್ಲ.

ಪ್ರಯಾಣಿಕರಿಂದ ಒದಗುವ ಆದಾಯದ ಕ್ಷೀಣಿತವಾಗುವುದಕ್ಕೆ ಕಾರಣವೇನೆಂಬುದನ್ನು ಮಾತ್ರ ಮಂತ್ರಿಗಳು ವಿವರಿಸಲಿಲ್ಲ. ರೇಲ್ವೆ ಪ್ರಯಾಣಿಕರ ಮೇಲೆ ಸರ್ ಚಾರ್ಜ್ ಹೇಳುವುದೂ ದಿನೇ ದಿನೇ ರೇಲ್ವೆ ಅಪಘಾತಗಳು ನಡೆದು ಅನೇಕ ಪ್ರವಾಸಿಗಳ ಜೀವಕ್ಕೆ, ಆರೋಗ್ಯಕ್ಕೆ ಭಂಗ ಬರುವುದೂ ಇದಕ್ಕೆ ಕಾರಣವೆಂದು ಹೇಳಬಹುದಾದರೆ, ಅಪಘಾತಗಳನ್ನು ತಡೆಹಿಡಿಯಲು ಆವಶ್ಯಕ ಗಮನವೀಯಬೇಕು ಕೇವಲ ಕೆಳಗೇಡಿಗಳಿಂದ ಮಾತ್ರ ಇಂತಹ ಅಪಘಾತಗಳು ನಡೆಯದೆ, ಸ್ವಾಭಾವಿಕವಾಗಿ ಹಳಿ ಹಳತಾದುದರಿಂದ, ಸಂಕ ಸೇತುವೆಗಳು ದುರ್ಬಲವಾದುದರಿಂದಲೂ ಇವು ಸಂಭವಿಸಬಲ್ಲುವು ಅಲ್ಲದೇ ಈಗೀಗ ಸರಕುಗಳನ್ನು ಹೊತ್ತ ಗಾಡಿಗಳು ವಿಪರೀತವಾದ ಭಾರದೊಡನೆ ಹಳಿಯನ್ನು ಮೆಟ್ಟಿ ಹೋಗುವುದೂ ಇದಕ್ಕೊಂದು ಕಾರಣವಾಗಿದೆ ಎನ್ನಬಹುದು. ಈ ದಿಸೆಯಲ್ಲಿ ಉಚಿತ ಕಾರ್ಯವನ್ನು ಆಚರಣೆಗೆ ತರುವುದನ್ನು ಮರೆತರೆ ಪ್ರಯೋಜನವಿಲ್ಲ

ಟ್ರಕ್ಕು ಮತ್ತು ರೇಲು ಸಾರಿಗೆಗಳ ನಡುವೆ ತೀವ್ರವಾದ ಸ್ಪರ್ಧೆಯಿಂದಾಗಿ ರೇಲ್ವೆಯ ಆದಾಯ ತಗ್ಗುತ್ತದೆ ಎಂಬ ದೂರು ಕೇಳಿ ಬರುತ್ತಿವೆ. ರೇಲ್ವೆಗಳಿರುವಲ್ಲೆಲ್ಲಾ ರೇಲ್ವೇ ಸಾರಿಗೆಯ ಮೂಲಕವೇ ಸಾಮಾನು ಸರಂಜಾಮುಗಳು ಸಾಗಾಗಬೇಕೆಂದೂ ಉಳಿದೆಡೆ ಟ್ರಕ್ಕುಗಳ ಉಪಯೋಗ ಸಾಗಲಿ ಎಂದು ಹೇಳಲಾಗುತ್ತದೆ. ಆದರೆ, ಇಂದಿನ ಅನುಭವದಂತೆ ರೇಲ್ವೆಗಳ ಮೂಲಕ ರವಾನಿಸಲಾದ ಸರಕುಗಳು ಅವುಗಳ ಮಾಲಿಕರಿಗೆ ಸಕಾಲದಲ್ಲಿ ಸಿಗುವುದಿಲ್ಲ; ರೇಲ್ವೆ ಅಧಿಕಾರಿಗಳು ಈ ದಿಸೆಯಲ್ಲಿ ಸಾಕಷ್ಟು ಗಮನ ಹರಿಸದೆ ಇರುವುದರಿಂದ ಟ್ರಕ್ಕುಗಳ ಸೌಕರ್ಯವಿರುವಲ್ಲಿಯಾದರೂ ಈ ಅನಾನುಕೂಲತೆಯನ್ನು ದೂರೀಕರಿಸುವ ಸಲುವಾಗಿ ಅವುಗಳನ್ನೇ ಮರೆಹೋಗುತ್ತಾರೆ. ಒಂದು ವೇಳೆ ರೇಲ್ವೆಗಳು ತಮ್ಮ ಕಾರ್ಯದಕ್ಷತೆಯನ್ನು ಹೆಚ್ಚಿಸಿದ ಪಕ್ಷದಲ್ಲಿ ಹೀಗಾಗಲಾರದೆಂದು ನಂಬಬಹುದು



ಸೆಂಟ್ರಲ್ ಇಲೆಕ್ಟ್ರೋಕೆಮಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ ಒರ್ವ ಸಂಶೋಧಕನು ತನ್ನ ಕೆಲಸದಲ್ಲಿಯೇ ತತ್ಪರನಾಗಿದ್ದಾನೆ ಈ ಕೇಂದ್ರವು ಮದ್ರಾಸಿನ ಕರೈಕುಡಿಯಲ್ಲಿದೆ.

ರೈಲುದಾರಿಗಳನ್ನು ದುರಸ್ತಿಯು ಅತ್ಯಂತ ಭರದಿಂದ ಮುಂದುವರಿಸಲಾಗುತಿದ್ದು ಇವಕ್ಕಾಗಿ ತೆಗೆದುಕೊಂಡ ೧೯೫೮ ಮೈಲುಗಳಲ್ಲಿ ೫೨೫ ಮೈಲಿಗಳ ಕೆಲಸವನ್ನು ಕೈಗೊಳ್ಳಲಾಗುತ್ತಿದೆ (೪೨೩ ಮೈಲು ಈಗಾಗಲೇ ಪೂರ್ಣವಾಗಿದೆ.) ರೇಲ್ವೆ ಮಾರ್ಗ ರಚನೆಗೆ ಬೇಕಾದ ಹಳಿ, ಸ್ಲೀಪರುಗಳು ಯಥೇಚ್ಛವಾಗಿ ಸಿಗುವುದರಿಂದ ಈ ಕಾರ್ಯವು ಈ ವರ್ಷ ಕೊನೆಗೊಳ್ಳಬಹುದು ಎಂದಿದ್ದಾರೆ ಮಂತ್ರಿಗಳು. ಸುಮಾರು ೫೦ ಕೋಟಿ ರೂಪಾಯಿಗಳ ವೆಚ್ಚದಿಂದ ತಯಾರಿಸಲಾಗುವ ಸುಮಾರು ೬೦೦ ಮೈಲುಗಳಷ್ಟು ಹೊಸ ರೈಲು ಮಾರ್ಗಗಳನ್ನು ತಯಾರಿಸುವ ಯೋಜನೆಯಿದ್ದರೂ ಆದರಲ್ಲಿ ದಕ್ಷಿಣ ಭಾರತದ ಪಾಲು ಏನಿಲ್ಲ, ಅದರಲ್ಲೂ ಮೈಸೂರು ರಾಜ್ಯದಲ್ಲಿ ಒಂದಿಂಚು ರೈಲುದಾರಿಯೂ ಬೀಳುವಂತಿಲ್ಲ. ಮಂಗಳೂರು— ಹಾಸನ ಮಾರ್ಗವು ಒಂದೆರಡು ವರ್ಷಗಳಿಗೆ ಮೊದಲು ಪರಿಶೀಲನೆಯಲ್ಲಿದ್ದುದು ಇಂದು ತೀವ್ರ ಪರಿಶೀಲನೆಯ ಮಟ್ಟಕ್ಕೆ ಬಂದಿದೆ ರಾಜ್ಯ ಸರಕಾರದ ಇಚ್ಛೆಯಂತೆ ಸದ್ಯವೇ ಸರ್ವಋತು ಬಂದರವಾಗಿ ಪರಿಣಮಿಸುವ ಮೈಸೂರು, ಈಗಾಗಲೇ ಔದ್ಯಮಿಕ ನಗರವಾಗಿ ರೂಪಿಸಲ್ಪಡುತ್ತಿರುವ ದಾಂಡೇಲಿ ಸದ್ಯವೇ ಈ ಮಾದರಿಯಾಗಲಿರುವ ಕಾರವಾರ— ಇವುಗಳನ್ನು ರಾಜ್ಯದ ವಿವಿಧ ಮುಖ್ಯ ನಗರಗಳಿಗೆ ಜೋಡಿಸುವುದು ಅಗತ್ಯವೆಂಬ ಅಭಿಪ್ರಾಯ ಈ ಮೊದಲೇ ಪಡಲಾಗಿತ್ತು ಆದರೆ, ನಮ್ಮ ಮೈಸೂರಿನ ಅಗ್ರೇಸರರಿಂದ ಇವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅಸಾಧ್ಯವಾಗಿಯೇ ಉಳಿದಿದೆ.

(೯ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ –
ಮಂಗಳೂರು—3.
ಸ್ಥಾಪನೆ:–
1931

ಕಾಯಂ ಠೇವಣಾತಿ ಬಡ್ಡಿ ದರ
1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%
ರೂಪಾಯಿ 10,000/- ವ, ಮೇಲ್ಪಟ್ಟ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ. ಇತ್ಯಾದಿ..

NAVAYUGA WEEKLY, UDIPI, S, India.

ಕಥಾ ವಿಹಾರ

ಮುನಿದ ಮಾರಿಯು ಶಾಂತಳಾಯಿತು

ಕಳ್ಳರು ತಪ್ಪೊಪ್ಪಿಕೊಂಡರು, ನ್ಯಾಯಾಲಯದಲ್ಲಿ ಇದು ಸಿದ್ಧವಾಗಲಿಲ್ಲ; ಆದರೆ ಊರಲ್ಲಿ ಮುಂದೆ ಕಳ್ಳತನ ಮಾತ್ರ ಮುಂದುವರಿಯಲಿಲ್ಲ; ಇದೇಕೆ?

ಕೆರೆಯಿಂದ ಸೇದಿ ನೀರುಣಿಸಿದ್ದ ಬಾಯಾರಿದ ಗದ್ದೆಯು ಹಚ್ಚನೆ ಹಸುರಿನಿಂದ ಕೂಡಿ ಆನಂದದಿಂದ ಕುಣಿದಾಡುತಿತ್ತು. ಅದರೊಡನೆಯೇ ಆ ಗದ್ದೆಗೆ ತನ್ನ ರಕ್ತ ಮತ್ತು ಬೆವರುಗಳನ್ನು ಒಂದಾಗಿಸಿ ದಿನ ರಾತ್ರಿಯೆನ್ನದೆ ನೀರುಣಿಸಿದ ಆದರ ಸ್ವಾಮಿಯ ಮನಸ್ಸೂ ಪ್ರಫುಲ್ಲಿತವಾಗಿತ್ತು. ಅಲ್ಲದೇ ತಾನು ಮಗುವಿನಂತೆ ಸಾಕಿ ಬೆಳೆಸಿದ ಪೈರಗದ್ದೆಯನ್ನು ಕಂಡು ಆತನ ಹೃದಯವೂ ನರ್ತಿಸಲಾರಂಭವಾಗುತಿತ್ತು. ಮಂಗಲನು ಪ್ರಸನ್ನನಾಗಿದ್ದನು. ಅವನ ಗದ್ದೆಯು ತನ್ನ ಪರಿಶ್ರಮಕ್ಕೆ ಸರಿಯಾದ ಉತ್ಪಾದನೆಯನ್ನೀಯಲು ಸಿದ್ಧವಾಗತಿತ್ತು. ತನ್ನ ಪರಿಶ್ರಮವು ಸಾರ್ಥಕಗೊಂಡು, ಬಂದ ಫಲದಿಂದ ತನ್ನ ಮನೆತುಂಬ ತುಂಬಿಸಿಕೊಂಡನೆಂದರೆ, ಮಂಗಲನು ನಿಶ್ಚಿಂತೆಯಿಂದ ಹಬ್ಬವನ್ನಾಚರಿಸಬಲ್ಲನು ಮಂಗಲ, ಅವನ ಪತ್ನಿ, ಮಕ್ಕಳು ಎಲ್ಲರೂ ಸಂತುಷ್ಟರಾಗಿಯೇ ಇದ್ದರು.

ಎಂದಿನಂತೆ ನಸುಕಿನ ಹೊತ್ತಿನಲ್ಲಿ ಮಂಗಳ ತನ್ನ ಗದ್ದೆಯತ್ತ ನೋಡಿಕೊಂಡು ಹೊರಟನು. ಮನೆಯ ಜಗಲಿಯನ್ನಿಳಿಯುತ್ತಿರುವಾಗಲೇ ಆತನ ಪತ್ನಿ ಮಾಲತಿ ಕರೆದಳು. ತನ್ನ ಮನದನ್ನೆಯ ಕರೆಯನ್ನು ನಿರಾಕರಿಸಲಾರದೆ ಮಂಗಳನು ಹಿಂದಕ್ಕೆ ಹೋಗಿ, ಆಕೆಯನ್ನು ವಿಚಾರಿಸಿದನು. ಮಗುವಿಗೆ ಸ್ವಲ್ಪಸ್ವಲ್ಪ ಜ್ವರ ಕಾದಿತ್ತು. ಮೂರು ಹೆಣ್ಣುಮಕ್ಕಳ ಮೇಲೆ ಹುಟ್ಟಿದ ಈ ಗಂಡು ಮಗುವಿಗೆ ಎಲ್ಲಿಯಾದರೂ ದುರ್ದೈವದಿಂದ ಹಾನಿ ತಟ್ಟೀತೆಂದಾಕೆ ಹೆದರಿದ್ದಳು. ಹೆದರಿ ಬೆಚ್ಚಿಬೀತಳಾದ ಮಾಲತಿಯನ್ನು ಸಮಾಧಾನಪಡಿಸಿ, ತಾನು ಹಿಂತಿರುಗಿ ಬರುವಾಗ ವೈದ್ಯರ ಭೇಟಿ ಮಾಡುವೆನೆಂದು ಭರವಸೆಯಿತ್ತು ತನ್ನ ದಾರಿ ಹಿಡಿದನು ಮಂಗಳ.

ದಾರಿಯನ್ನು ಕ್ರಮಿಸುತ್ತಿದ್ದಂತೆಯೇ ಮಂಗಳನ ಮನಸ್ಸು ಬೇರೊಂದೆಡೆಗಾತ [illegible] ತನ್ನ ಬಡತನದ ಸಂಸಾರ, ಮನೆಯ ಮಾಲತಿಯ ಗೃಹಿಣೀತ್ವ, [illegible] ಮಕ್ಕಳು [illegible] ಮೊದಲ [illegible]! ಅವುಗಳ ಮದುವೆಗಾಗಿ [illegible] ಬೇಕಾದ ಬವಣೆಗಳ [illegible] ಪರಂಪರೆಯಂತೆ [illegible] ಮುಂದುವರಿಯಿತು. ಇವನ್ನು ಯೋಚಿಸುತ್ತಿದ್ದಂತೆಯೇ ಆತನ [illegible] ಕಣ್ಣು ಕತ್ತಲೆ ಬಂದಂತಾಯಿತು, ಎಡ ತೋಳು ಕಂಪಿಸತೊಡಗಿತು; ಎಡಗಣ್ಣು ಅದುರಿತು! ಸ್ವಲ್ಪ ಹೊತ್ತು ಮುಂದುವರಿದಂತೆ, ಆತನು ತನ್ನ ಗದ್ದೆಯ ಸಮೀಪಕ್ಕೆ ಬಂದು ನಿಂತು ಬಿಟ್ಟನು.

ಪಾಪ, ನಳನಳಿಸಿ ಕುಣಿದಾಡಿ ಒಲಿಯುತ್ತಿದ್ದ ಭತ್ತದ ಸಸಿಗಳು ಇಂದು ನೆಲಸಮವಾಗಿ ಹೋಗಿವೆ! ಗದ್ದೆಯ ಪೈರು ನಾಶವಾಗಿ ಬಿಟ್ಟಿದೆ! ಯಾವುದೋ ಕ್ರೂರ ವನ್ಯ ಮೃಗಗಳ ಸಂಕುಲವೇ ಮಂಗಳನ ಗದ್ದೆಗೆ ದಾಳಿಯಿಟ್ಟು ಪೈರನ್ನು ಕಬಳಿಸಿರಬೇಕು ಅಥವಾ ಯಾರೋ ಕಳ್ಳರು ಪೈರನ್ನು ಕೊಯ್ದುಕೊಂಡು ಹೋಗಿರಬೇಕು! ಎಂತಹ ಆಪತ್ತು! ತಾನು ಎದ್ದ ಗಳಿಗೆಯೇ ಅಶುಭವೆಂದು, ಎಡ ಪಕ್ಕದಿಂದ ಎದ್ದಿರಬೇಕೆಂದು, ತನ್ನ ಮಡದಿ ತಾನು ಹೊರಟ ಮೇಲೆ ಹಿಂತಿರುಗಿ ಬರುವಂತೆ ಕೇಳಿಕೊಂಡಳೆಂದು-ಹಾಗೂ ಮುಂದಿನ ತನ್ನ ಅಶುಭಲಕ್ಷಣಗಳೆಂದು ಆತನ ಮನಸ್ಸು ಆಲೋಲ ಕಲ್ಲೋಲವಾಯಿತು! ತಾನು ಇದುವರೆಗೆ ಪ್ರಯಾಸ ಬಿಟ್ಟು, ಅಹರ್ನಿಶಿ ದುಡಿದು ಬೆಳೆಸಿದ ಕೃಷಿ ಕೈಗೆ ಬರುವ ಹೊತ್ತಿನಲ್ಲಿ ವಿಧಿಯ ಅಕೃಪೆಯಿಂದಾಗಿ ನಾಶವಾಗಲು ಪ್ರಾರಂಭವಾಗಿತ್ತು! ಇನ್ನೂ ಇದೇ ರೀತಿ ಹಾಳಾಗುತ್ತ ಬಂದರೆ, ಮುಂದಿನ ಮಳೆಗಾಲ ದಿನದೂಡುವುದೆಂತು?

ಈ ಪ್ರಶ್ನೆಗೆ ತಕ್ಕ ಉತ್ತರ ಸಿದ್ಧವಾಗಿರಲಿಲ್ಲ ಮಂಗಳ ಏನೇನನ್ನೋ ಕಲ್ಪಿಸಿ, ಯೋಚಿಸಿ ಮನೆಗೆ ಹಿಂತಿರುಗಿದ. ತಾನು ಮಡದಿಗೆ ಇತ್ತ ಮಾತೂ ಅವನ ಸ್ಮರಣೆಗೆ ನಿಲುಕಲಿಲ್ಲ

ಕೆಲ ದಿನಗಳು ಸಂದುವು ಮಂಗಳನ ಹಾಗೂ ಅವನ ಸುತ್ತಮುತ್ತಲಿನ ಗದ್ದೆಗಳಲ್ಲಿ ಪೈರು ಕಾಣೆಯಾಗುತ್ತ ಬರುತಿತ್ತು; ಊರಲ್ಲಿ ರಾತ್ರಿಯ ಕಾಲದಲ್ಲಿ ಜನಪಾದದ ಸಪ್ಪಳ, ಪಿಸುಪಿಸು ಮಾತು ಕೇಳಬರತೊಡಗಿತ್ತು ಅಜ್ಞಾನಾಂಧಕಾರದಲ್ಲಿ ಮುಳುಗಿದ್ದ ಜನತೆಯ ಮನಃಪಟಲದಲ್ಲಿ ಅಲ್ಲಸಲ್ಲದ ಕಲ್ಪನೆಗಳು ಹಾಯ್ದು ಹೋದುವು ಭೂತ ಪ್ರೇತ ಪಿಶಾಚಗಳು ಗ್ರಾಮದಲ್ಲಿ ಸಂಚಾರ ಮಾಡತೊಡಗಿವೆಯೆಂದೂ, ಅವುಗಳನ್ನು ತೃಪ್ತಿಪಡಿಸುವುದು ಅಗತ್ಯವೆಂದೂ ಭಾವಿಸಿ, ಊರ ಮಹಾಮೇಧಾವಿ ವೃದ್ಧರು ಹಗಲು ಹೊತ್ತಿನಲ್ಲಿ ಮನೆಮನ ತಿರುಗಾಡಿ, ಮನೆಯೊಡತಿಯರಲ್ಲಿ ವಿನಂತಿ ವಿಜ್ಞಾಪನೆಗಳನ್ನು ಮಾಡತೊಡಗಿದರು.

ಈ ಮುದುಕರ ಊಹೆಗೂ ಕಾರಣವಿಲ್ಲದಿಲ್ಲ ಊರ ಮಾರಿಗೆ ವರ್ಷಂಪ್ರತಿ ಒಂದು ದಿನ ಮಾಂಸಾಹಾರ ನೀಯುವುದು ಊರ ಪದ್ಧತಿಯಾಗಿತ್ತು. ಅಂದು ಕೋಳಿ, ಕುರಿಗಳಿಂದ ಹಿಡಿದು ಕೋಣಗಳವರೆಗೂ ಮಾರಿದೇವಿಯ ಪ್ರೀತ್ಯರ್ಥವಾಗಿ ಬಲಿಯೂಡಲ್ಪಡುತಿದ್ದುವು. ಆದರೆ, ಈಗ್ಗೆ ಒಂದೆರಡು ವರ್ಷಗಳಿಂದ ಪ್ರಾಣಿಗಳನ್ನು ಬಲಿಕೊಡುವುದು ಸರಿಯಲ್ಲ, ಅದರಿಂದ ದೇವದೇವತೆಗಳಿಗೆ ತೃಪ್ತಿಯಾಗಲಾರದು ಎಂಬ ಅಭಿಪ್ರಾಯ ತುಂಬಿದ ನವಯುವಕರಲ್ಲಿ ಕೆಲವರ ಬಲಾತ್ಕಾರ ಹಾಗೂ ಸುಧಾರಣೆಯ ನೆವದಲ್ಲಿ ಈ ಬಲಿಯು ನಿಂತು ಹೋಗಿತ್ತು. ಇದರಿಂದಲೇ ಕುಪಿತಗೊಂಡ ಮಾರಿಯು ಗ್ರಾಮವಾಸಿಗಳಿಂದ ತನ್ನ ಪಾಲನ್ನು ಪಡೆಯುವ ಹಂಚಿಕೆಯನ್ನು ಮಾಡುತಿದ್ದಾಳೆಂದೂ, ತಪ್ಪುಗೈದ ಊರವರನ್ನು ಈ ರೀತಿ ಶಿಕ್ಷಿಸುತ್ತಿರುವಳೆಂದೂ ಗೋಪಾಳ ಬಿಡತೊಡಗಿದರು. ಅವರಿಗೆ ಕೆಲವರ ಸಂದೇಹ ಪೂರ್ಣ ಸಹಾನುಭೂತಿಯೂ ದೊರೆಯದೆ ಇರಲಿಲ್ಲ.

ಕೆಲವು ದಿನಗಳು ಕಳೆಯುತ್ತ ಬಂದುವು. ಗದ್ದೆಗಳಲ್ಲಿನ ಪೈರು ಮಾತ್ರವಲ್ಲದೆ ಊರವರ ಸೊತ್ತುಗಳೂ ಅದೃಶ್ಯವಾಗತೊಡಗಿದುವು. ರಾಟೆ, ಅದರ ಹಗ್ಗದಿಂದ ಪ್ರಾರಂಭವಾದ ಈ ಇಂದ್ರಜಾಲ ಕೊಟ್ಟಿಗೆಯ ದನಕರುಗಳು ಹೊರಗಿಟ್ಟ ಪಾತ್ರೆ ಪರಡಿ, ವಸ್ತ್ರ ಮೊದಲಾದುವುಗಳಿಗೂ ಸೋಂಕಿತ್ತು. ಅತ್ತ ಗದ್ದೆಯ ಪೈರಿನ ರಕ್ಷಣೆ, ಇತ್ತ ಮನೆಮಾರುಗಳ ಭದ್ರತೆ—ಇವುಗಳೆರಡನ್ನೂ ಸುಧಾರಿಸಿಕೊಳ್ಳುವುದು ಸಾಮಾನ್ಯ ಜನರಿಂದ ಅಸಾಧ್ಯವಾಗಿ ಪರಿಣಮಿಸಿತ್ತು. ಮನೆಕಾಯಲು ನಿಂತರೆ ಗದ್ದೆಯ ಪೈರು ಕಾಣೆಯಾಗುತಿತ್ತು; ಹಾಗೆಂದು ಗದ್ದೆಯಲ್ಲಿಯೇ ಉಳಿದು ಬಿಟ್ಟರೆ, ಮನೆಯ ಗತಿ ದೇವರಿಗೇ ಗೊತ್ತು!

ಗ್ರಾಮಸ್ಥರೆಲ್ಲರೂ ಧರ್ಮಸಂಕಟದಲ್ಲಿ ತೊಳಲಾಡುತ್ತಿರುವಾಗ, ಮಾರಿಯಮ್ಮನನ್ನು ಶಾಂತಗೊಳಿಸುವ ಪ್ರಯತ್ನವೂ ಎಲ್ಲದ ಸಾಗಿತು. ಅಂಧವಿಶ್ವಾಸಿಗಳಲ್ಲಿ ಹೆಚ್ಚಿನವರು ಈ ನವೀನೋಪದ್ರವವನ್ನು ಕಡೆಗಾಣಿಸಲು ಒಪ್ಪಿಗೆಯಿತ್ತರು ಹಿರಿಯರೆಲ್ಲರೂ ಮಾರಿಗುಡಿಯ ಮುಂದೆ ಸೇರಿ ತಮ್ಮ ಅಕ್ಷಮ್ಯಾಪರಾಧವನ್ನು ಮನ್ನಿಸಿ ಉದ್ಧರಿಸಬೇಕೆಂದೂ ತಾವು ಮನಃಪೂರ್ವಕವಾಗಿ ದೇವಿಗೆ ದ್ರೋಹ ಬಗೆಯಲಿಲ್ಲವೆಂದೂ ಆದುದರಿಂದ ತನ್ನ ಮಕ್ಕಳನ್ನು ಈ ರೀತಿಯಲ್ಲಿ ಉಗ್ರವಾಗಿ ಶಿಕ್ಷಿಸುವುದು ದೇವಿಗೆ ಉಚಿತವಲ್ಲವೆಂದೂ, ತಾವು ಮಾಡಿದ ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಒಂದು ವಾರದೊಳಗೆ ಮಾಡುವುದಾಗಿಯೂ ದೇವಿಗೆ ಭರವಸೆಯಿತ್ತು ಕೈ ಮುಗಿದು ವಿನಮ್ರರಾಗಿ ನಮಸ್ಕರಿಸಿ ದೇವಿಯ ಕಾಲಿಗೆರಗಿ ಪ್ರಾರ್ಥಿಸಿಕೊಂಡು, ಹಸನ್ಮುಖದಿಂದ ಮನೆಗಳಿಗೆ ತೆರಳಿದರು. ಆದರೆ, ಈ ವಿಶ್ವಾಸದಾನದಿಂದ ದೇವಿ ಮಾತ್ರ ಒಲಿದಂತೆ ತೋರಲಿಲ್ಲ. ಆ ದಿನ ರಾತ್ರೆ, ಈ ಪ್ರಾರ್ಥನೆ ಸಲ್ಲಿಸಿದವರ ನಾಯಕಮಣಿಯೊಬ್ಬನ ಗದ್ದೆ – ಅದು ಆದುವರೆಗೆ 'ದೇವಿ'ಗೆ ಆಹುತಿಯಾಗಿರಲಿಲ್ಲ— "ದೇವಿ"ಪ್ರವೇಶ ಮಾಡಿದಳು, ಜತೆಗೆ ಅಂಗಳದಲ್ಲಿ ಕಟ್ಟಿದ್ದ ಎತ್ತುಗಳ ಜೋಡಿಯೂ ಮಾಯವಾಗಿತ್ತು!

ದಿನೇ ದಿನೇ ದೇವಿಯ ಕೀಟಲೆ ಏರುತ್ತ ಹೋಯಿತೇ ವಿನಹ ಕಡಿಮೆಯಾಗಲಿಲ್ಲ ಆರುದಿನ ಸಂದು ಏಳನೆಯ ಸೂರ್ಯೋದಯವಾಯಿತು ಮಾರಿಗುಡಿಯಲ್ಲಿ ವೈಭವದ ಪೂಜೆ, ಪುರಸ್ಕಾರ— ಜತೆಗೆ ಮಹತ್ತರ ಬಲಿ. ಊರವರು ಶತ ಪ್ರಯತ್ನ ನಡೆಸಿ ಕೊಬ್ಬಿದ ಕೋಣಗಳನ್ನೂ ದೇವಿಯ ಪ್ರೀತ್ಯರ್ಥವಾಗಿ ಬಲಿಯೂಡಲು ತಂದಿದ್ದರು. ಅಂದು ಮಧ್ಯ ರಾತ್ರಿಯ ಸಮಯಕ್ಕೆ ಬಲಿಗಂಬದತ್ತ ಮೆರವಣಿಗೆಯು ಹೊರಡಲಿತ್ತು ಇದಕ್ಕಾಗಿ ಆವಶ್ಯಕವಾದ ಪೂರ್ವ ಸಿದ್ಧತೆಗಳು ಭರದಿಂದ ಸಾಗತೊಡಗಿದ್ದವು ಪುರುಷರೆಲ್ಲರೂ ಗುಡಿಯ ಸುತ್ತ ತಂತಮ್ಮ ಕಿರಿಯ ಕಾಣಿಕೆಗಳೊಡನೆ ಜಮೆಯಾಗುತಿದ್ದರು.

ಮಂಗಳನಿಗೂ ಈ ಬಲಿಯು ಯೋಚನೆ ನ್ಯಾಯವೆಂದು ಕಾಣದೆ ಹೋದರೂ ಹಲವು ಪ್ರಯತ್ನದಲ್ಲಿ ಒಂದೆಂಬ ಭಾವನೆ ಉಂಟಾಗಿತ್ತು ಆತ ನಿತ್ಯವೂ ಹಗಲು ಗದ್ದೆಗೆ ನೀರೆಯುತಿದ್ದ; ರಾತ್ರೆ ಮನೆಯಲ್ಲಿ ಉಂಡು, ತಾನು ಗದ್ದೆ ಕಾಯಲು ತೆರಳುತಿದ್ದ. ಮನೆಯಲ್ಲಾದರೋ ದನಕರುಗಳನ್ನು ಭದ್ರವಾಗಿ ಕೊಟ್ಟಿಗೆಯಲ್ಲಿ ಕಟ್ಟಿ ಪಾತ್ರೆ ಪರಡಿಯೊಂದೂ ಹೊರಗುಳಿಯದಂತೆ ಮಾಡಿ, ಮಡದಿಗೆ ಧೈರ್ಯ ಹೇಳುತಿದ್ದ. ಮಾಲತಿಯೂ ಎಲ್ಲಿಲ್ಲದ ಧೈರ್ಯವನ್ನು ತಂದು ಜಾಗರಣೆಯಿಂದಿರುತಿದ್ದಳು ಆಗಾಗ ಪಾದದ ಸಪ್ಪಳ, ನಾಯಿಗಳ ಕೂಗು, ಹುಲಿ, ಕಾಡು ಹಂದಿಗಳ ಆರ್ಭಟೆಗಳು ಕೇಳಬರುತಿದ್ದುವು. ಅವನ್ನು ಆಲಿಸಿದೊಡನೆಯೇ ಮಾಲತಿ ಒಮ್ಮೆಗೆ ಹೆದರಿಬಿಡುತಿದ್ದಳು ಮರುಕ್ಷಣದಲ್ಲಿ ಕತ್ತಿ ಕೊಡಲಿ, ದೊಣ್ಣೆಗಳನ್ನು ಎದುರಲ್ಲಿಟ್ಟು ತನ್ನ ಮಕ್ಕಳನ್ನೂ ಪಶು ಪ್ರಾಣಿಗಳನ್ನೂ ಕಾದುಕೂತುಕೊಳ್ಳುತಿದ್ದಳು. ಹೀಗೆ ಏರ್ಪಾಟು ನಡೆದ ದಿನದಿಂದ ಮಂಗಳನ ಗದ್ದೆಯಲ್ಲಾಗಲೀ ಮನೆಯಲ್ಲಾಗಲೀ ಯಾವುದೇ ಹಾನಿ ಒದಗುತಿದ್ದಿಲ್ಲ ಇದರಿಂದಾಗಿ ಮಾಲತಿಗೂ ಮಂಗಳನಿಗೂ ಈ "ಮಾರಿಯ ಆಟ"ದ ಕುರಿತು ಕೊಂಚ ಅಶ್ರದ್ಧೆಯೂ ಹುಟ್ಟತೊಡಗಿತ್ತು. ಆದರೆ, ಊರವರ ಒತ್ತಾಯದಿಂದಾಗಿ ಅವರೂ ಈ ಮಹೋತ್ಸವದಲ್ಲಿ ತಮ್ಮ ಪಾಲಿನ ದೇಣಿಗೆಯನ್ನು ಆವಶ್ಯ ಸಲ್ಲಿಸಬೇಕಾಗಿತ್ತು. ಆದಕ್ಕಾಗಿ ಎಲ್ಲಿಂ

(೧೧ನೇ ಪುಟ ನೋಡಿರಿ)

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಿಮಗೆ ಒಂದು ಕ್ಯಾಬಿನೆಟ್ ಅಗತ್ಯ ಕಳ್ಳರ, ಮಳೆಹುಪ್ಪಟೆಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು. ೩ ಸೈಜುಗಳಿವೆ, ಮಜ್ಬೂಟ್, ಪಾಪ್ಯುಲರ್, ಯುಟಿಲಿಟಿ ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು ಮತ್ತು ಭದ್ರವಾದ ಬೀಗವುಳ್ಳ ಬಳಕೋಣೆಗಳು.

ಅಲ್ಲದೆ
ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್,
ಡೆಸ್ಕುಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು,
ವಿ. ಕೆ. ರಾಜ್ ಇಂಡಸ್ಟ್ರೀಸ್, ಅಲಿಘರ್ ಇವರ
ಉತ್ತಮ ಬೀಗಗಳು
ಇವೆಲ್ಲ ಸ್ಟಾಕಿನೆ.

ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.
7 ಲಿವರ್‌ಗಳ ಬೀಗ ಆದರದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆರೆಯಲಸಾಧ್ಯ.
ಶೋ ರೂಮನ್ನು ಸಂದರ್ಶಿಸಿ:

ಶಾಸ್ತ್ರೀ ಆಂಡ್ ಕಂಪೆನಿ
ಹಂಪನಕಟ್ಟೆ — — ಮಂಗಳೂರು

ಜನ ಜೀವನ

ಸಮೃದ್ಧವಾದ ಪರ್ಶಿಯಾ ಅಥವಾ ಇರಾನ

ಇಲ್ಲಿ ಸಂಭಾವಿತರು ಮಾತ್ರವಿರುವುದಲ್ಲ, ದರೋಡೆಗೋರರೂ ಹೆಚ್ಚಿದ್ದಾರೆ.

ಪರ್ಶಿಯ ಎಂಬುದೊಂದು ಗತಕಾಲದ ವೈಭವದ ರಾಷ್ಟ್ರವಾಗಿರುವದು. ಕೈರಸ್ ಮತ್ತು ಅವನ ವಂಶದವರ ಆಳ್ವಿಕೆಯಲ್ಲಿ ಪರ್ಶಿಯವು ವಿಸ್ತಾರವಾದ ಬಲಿಷ್ಟ ಸಾಮ್ರಾಜ್ಯವಾಯಿತು. ಅಲೆಕ್ಸಾಂಡರನು ಅದನ್ನು ಗ್ರೀಕ್ ಸಾಮ್ರಾಜ್ಯದ ಒಂದು ಪ್ರಾಂತವನ್ನಾಗಿ ಮಾಡಿಬಿಟ್ಟನು. ಪರ್ಶಿಯವು ತಾನು ಹೀಗೆ ಕಳೆದುಕೊಂಡ ಸ್ಥಾನವನ್ನು ಸಸ್ಸಾನೀಯನ್ ರಾಜರ ಕಾಲದಲ್ಲಿ ಪುನಃ ಪಡೆಯಿತು. ಅರಬ್ಬರು ಇವರನ್ನು ಸೋಲಿಸಿ ಪರ್ಶಿಯವನ್ನು ತಮ್ಮ ವಶ ಮಾಡಿಕೊಳ್ಳುವ ವರೆಗೆ ಇವರು ಝೋರೋ ಆಸ್ಟರ್ ಮತವನ್ನು ಅವಲಂಬಿಸಿದ್ದರು ಅಂದಿನಿಂದ ಇವರು ಮಹಮ್ಮದೀಯರಾದರು. ಕೆಲವು ಕಾಲದ ನಂತರ ಮೋಂಗೋಲಿಯಿಂದ ಝೆಂಘಿಸ್ ಖಾನನೆಂಬವನು ದಿಗ್ವಿಜಯಕ್ಕೆ ಹೊರಟವನು ಈ ರಾಜ್ಯಕ್ಕೆ ದಂಡೆತ್ತಿ ಬಂದು ಕೊಳ್ಳೆ ಹೊಡೆದನು ಆ ನಂತರ ಸ್ವಲ್ಪ ಕಾಲದ ಮೇಲೆ ಕುಂಟ ತೈಮೂರನು ಈ ರಾಷ್ಟ್ರಕ್ಕೆ ದಂಡೆತ್ತಿ ಬಂದು ಪುನಃ ಕೊಳ್ಳೆ ಹೊಡೆದನು ವಿಸ್ತೀರ್ಣದಲ್ಲಿ ಈ ದೇಶವು ಫ್ರೆಂಚ್ ದೇಶದ ಮೂರರಷ್ಟು ಇರುವುದಾದರೂ ಜನಸಂಖ್ಯೆಯು ಮಾತ್ರ ಹದಿನೈದೇ ಮಿಲಿಯದಷ್ಟಿರುವದು. ಜನ ವಿರಳವಾದ ವಿಸ್ತಾರವಾದ ಭೂಮಿಯು ತುಂಬಾ ಇರುವುದು. ದಕ್ಷಿಣ ಪರ್ಶಿಯವು ಬರೇ ಬೋಳು ಮರುಭೂಮಿ. ಇಲ್ಲಿ ಮರಗಳಿಲ್ಲ, ಹಣ್ಣುಗಳಿಲ್ಲ. ಇಲ್ಲಿಯ ನೀರು ಸಹ ಕಹಿಯೆಂದು ಮಾರ್ಕೊ ಪೋಲನೇ ಹೇಳಿರುವನು.

ಪರ್ಶಿಯದಲ್ಲಿ ದ್ರಾಕ್ಷೆಹಣ್ಣು ಕರಿಗುಂಜಿ ಸಮೃದ್ಧಿಯಾಗಿವೆ. ಮತ್ತು ಲಿಲಾಕ್, ನಾರ್ಸಿಸಸ್, ಸ್ಪಿನಾಕ್ ಮತ್ತು ಪೀಚ್ ವಗೈರೆ ಫಲಪುಷ್ಪಗಳಿಗೆ ಮೂಲಸ್ಥಾನವಾದ್ದರಿಂದ ಲೋಕದಲ್ಲಿ ಪರ್ಶಿಯಾ ಭಾಷೆಯು ತಮ್ಮ ಹೆಸರನ್ನೇ ಪಡೆದಿವೆ. ರತ್ನಗಂಬಳಿ, ಕಂಬಳಿ ಮತ್ತು ಜಮುಖಾನೆಗಳಿಗೆ ಪರ್ಶಿಯವು ಪ್ರಸಿದ್ಧಿಹೊಂದಿರುವುದು. ಕಂಬಳಿ ವ್ಯಾಪಾರಕ್ಕೆಂದು ಹೋದವನು ಅವಸರದಿಂದ ವ್ಯಾಪಾರ ಮಾಡುವದಾದರೆ, ಗಿರಾಕಿಗಳನ್ನು ಸಾಹುಕಾರನು ನೋಕಪಡಿಸುವನು. ಗಿರಾಕಿ ಬಹುಮಾತುಗಳನ್ನಾಡಬೇಕು. ತನ್ನ ವಾಕ್ಚಾತುರ್ಯವನ್ನು ತೋರಿಸಿ ಸಾಹುಕಾರನು ಕೊಟ್ಟ ಕಾಫಿ ಸಿಗರೇಟು ವಗೈರೆ ಅತಿಥಿ ಸ್ವೀಕರಿಸಿದ ನಂತರ ವ್ಯಾಪಾರವಾಗುವದಾಗಿದೆ. ಗಿರಾಕಿಯೂ ಮತ್ತು ವ್ಯಾಪಾರಿಯೂ ಇಬ್ಬರೂ ಪರ್ಶಿಯನವರೇ ಆದರೆ ವ್ಯಾಪಾರವು ಹೊಂದಿಕೆಯಾಗಲು ಕೆಲವು ದಿವಸಗಳು ಬೇಕಾಗುವದಂತೆ.

ಪರ್ಶಿಯದವರು ಕಂಬಳಿ ಮಾಡುವುದಲ್ಲದೆ ರೇಶ್ಮೆ ಬಟ್ಟೆಯನ್ನೂ ತಯಾರಿಸುವರು, ಪಾತ್ರೆಗಳು ಮತ್ತು ಲೋಹದ ಸಾಮಾನುಗಳನ್ನು ಸಹಾ ಮಾಡುವರು. ಆ ದೇಶದ ಮುಖ್ಯ ಉತ್ಪನ್ನವು ಎಣ್ಣೆಯಾದರೂ ಇದರ ಉತ್ಪತ್ತಿಯನ್ನು ತೆಗೆಯುವವರು ವಿದೇಶೀಯರು. ಲಾಭವನ್ನು ಪೂರ್ಣ ವಿದೇಶೀಯರೇ ಪಡೆದು ಒಡೆತನದ ಬಗ್ಗೆ ಇವರಿಗೆ ಮೊದಲಾಗಿ ನಿಶ್ಚೈಸಿದ ಮೊಬಲಗನ್ನು ಕೊಡುವರು. ಪರ್ಶಿಯದ ಕೊಲ್ಲಿಯಲ್ಲಿ ಮುತ್ತುಗಳು ಇವೆ. ಮುತ್ತುಗಳಿಂದ ತುಂಬಾ ಸಂಪಾದನೆಯು ಆ ರಾಷ್ಟ್ರಕ್ಕಿದೆ.

ಪರ್ಶಿಯದ ರೈತರು ಒಡೆಯನ ಭೂಮಿಯನ್ನು ಉಂಬಳಿಯಾಗಿ ಉತ್ತು ಆತನ ಸೇವೆಯನ್ನು ಮಾಡುವರು. ಒಡೆಯನು ತನ್ನ ಒಕ್ಕಲುಗಳಿಗೆ ದಯಾಳುವಾಗಿರುವನು. ಜನಸಂಖ್ಯೆಯು ಕಡಮೆಯಾದ ಕಾರಣ ಕೂಲಿ ಜನರು ಸಿಕ್ಕದಿರುವುದರಿಂದ ತನ್ನ ಒಕ್ಕಲುಗಳಲ್ಲಿ ತುಂಬಾ ಆದರ ತೋರಿಸಿ ತನ್ನ ಕಾರ್ಯವನ್ನು ಒಕ್ಕಲುಗಳಿಂದಲೇ ಮಾಡಿಸಿಕೊಳ್ಳುವನು.

ಪಶುಪಾಲನೆಗಾಗಿ ಸಂಚಾರ ವಾಸಿಗಳಾದ ಜನರು ಆ ದೇಶದೊಳಗೆ ಅನೇಕರಿರುವರು. ಈ ಜನರಿಗೆ ಕಾಯಂ ವಾಸ್ತವ್ಯದ ಮನೆಯೇ ಇಲ್ಲ. ಇವರು ಆಡಿನ ಚರ್ಮದ ಗೂಡಾರ ಬೀಡನ್ನು ಬಿಟ್ಟು ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಕುರಿಗಳ ಮತ್ತು ಪಶುಗಳ ಮೇವಿಗಾಗಿ ಪರಿಗಾಮಿಯಾಗಿ ನಿಂತು ತಮ್ಮ ಗುಡಾರವನ್ನು ಕಿತ್ತುಕೊಂಡು ಬೇರೆ ಕಡೆಗೆ ಹೋಗುವ ಸಮಯೀ ಬಂದಾಗ ಹೊರಟುಹೋಗುವರು ಇಂಥಾ ಜನರ ಗುಣನಡತೆಯು ಯೋಗ್ಯತರವಲ್ಲ. ಇವರು ಹಳ್ಳಿಗಳಲ್ಲಿ ದರೋಡೆ ಮಾಡುವರು. ವ್ಯಾಪಾರಸ್ಥರ, ಯಾತ್ರಸ್ಥರ ಮತ್ತು ಪ್ರವಾಸಿಕರ ಬಂಡಿಗಳನ್ನು ಲೂಟಿಮಾಡಿ ಕೊಳ್ಳೆಹೊಡೆಯುವರು

ಪರ್ಶಿಯದಲ್ಲಿ ಹೆಂಗಸರಿಗಿಂತ ಗಂಡಸರಿಗೆ ಉಚ್ಚ ಸ್ಥಾನವಿದ್ದಕಾರಣ ಗಂಡಸರಿಗೆ ಮೇಲ್ಮೆ ಹೆಚ್ಚಿದೆ ಒಂದು ಹುಡುಗನು ಹುಟ್ಟಿದರೆ ಆ ಶಿಶುವಿನ ತಂದೆ ತಾಯಿಗಳ ಸ್ನೇಹಿತರು ಮತ್ತು ನೆಂಟರಿಷ್ಟರು ಅಭಿನಂದನೆಗಳನ್ನು ಕಳುಹಿಸುವರು. ದೃಷ್ಟಿದೋಷ ನಿವಾರಣೆಗಾಗಿ ಶಿಶುವಿನ ಕುತ್ತಿಗೆಗೆ ಯಂತ್ರ ಅಥವಾ ತಾಯಿತವನ್ನು ಕಟ್ಟುವರು. ಹುಡುಗನಿರುವ ಕೋಣೆಯೊಳಗೆ ಯಾವತರದ ಗ್ಲಾಸುಗಳನ್ನು ತರುವದಿಲ್ಲ ಗ್ಲಾಸಿನ ಪ್ರಭೆಯಿಂದ ಶಿಶುವಿಗೆ ಮೆಳ್ಳಗಣ್ಣಾಗುವದೆಂಬ ಕುರುಡು ನಂಬಿಕೆ ಅವರಲ್ಲಿರುವದಾದುದರಿಂದ ಹೀಗೆ ಪ್ರತಿಬಂಧಕವಿದ್ದುದು ಕಾರಣ. ಇಷ್ಟು ಮಾತ್ರವಲ್ಲ ಗ್ಲಾಸ್ ಎಂಬ ಶಬ್ದವನ್ನೆ ಮಗುವಿರುವ ಕೋಣೆಯೊಳಗೆ ಉಚ್ಚರಿಸಕೂಡದೆಂದು ಕಟ್ಟಿರುವದು. ಮಗುವಿರುವ ಕೋಣೆಯೊಳಗೆ ಕಪ್ಪು ಬಣ್ಣದ ದುಸ್ತನ್ನು ಹಾಕಿದವರು ಹೋಗಲೇಕೂಡದೆಂಬ ನಿರ್ಬಂಧವಿದೆ. ಶಿಶುವನ್ನು ತುಂಬಾ ವಸ್ತ್ರದಿಂದ ಸುತ್ತುವರು. ಮಗುವನ್ನು ಗಾಳಿ ಸಂಚಾರಕ್ಕೆ ಹೊರಗೆ ಕೊಂಡ ಹೋಗುವಾಗ ದೊರಗು ಬಟ್ಟೆಯನ್ನು ದೃಷ್ಟಿದೋಷದ ನಿವಾರಣೆಗಾಗಿ ಹಾಕಿಕೊಂಡು ಹೋಗುವರು. ಇಷ್ಟಮಿತ್ರರು ಮಕ್ಕಳನ್ನು ದೃಷ್ಟಿಮಾಡದೆ ಮುದ್ದಾಡಿಸಿ ಆನಂದಿಸಬಹುದು ಮತ್ತು ಮಕ್ಕಳನ್ನು ಹೊಗಳಲೂ ಬಹುದು. ಈ ರೀತಿ ಮಾಡುವಾಗ ''ಮಾಶಲ್ಲ" ಅಲ್ಲನು ಇಚ್ಛಿಸಿದಂತಾಗಲಿ ಎಂದು ಹೇಳಿದರೆ ಸರಿ.

ಹಿಂದಿನ ಕಾಲದಲ್ಲಿ ಮಗುವಿಗೆ ಎಂಟು ವರ್ಷಗಳಾದೊಡನೆಯೇ ಮಗುವನ್ನು ಒಬ್ಬ ಸೇವಕನ ಮತ್ತು ಮುಲ್ಲಾನ ವಶ ಬಿಟ್ಟುಕೊಡತಕ್ಕ ಸಾಂಪ್ರದಾಯ. ಮುಲ್ಲನು ಮಗುವಿಗೆ ವಿದ್ಯೆಕಲಿಸುವನು. ವಿದ್ಯೆಯೆಂದರೆ ಬರೇ ಓದು-ಬರಹವನ್ನು ಕಲಿಯುವುದು ಮಾತ್ರವಾಗಿದೆ ಕುರಾನಿನ ಶ್ಲೋಕಗಳನ್ನು ಪರ್ಶಿಯಾ ಭಾಷೆಯಲ್ಲಿ ಅಕ್ಷರಶಃ ಬಾಯಿಪಾಠ ಮಾಡುವದಾಗಿದೆ. ಅರಬ್ಬಿ ಭಾಷೆಯಲ್ಲಿ ಅವುಗಳ ಅರ್ಥವನ್ನು ಹೇಳಿಕೊಡುವರು. ಗಿಳಿಗಳಂತೆ ಬಾಯಿಪಾಠ ಮಾಡಿಸುವುದಾದ್ದರಿಂದ ಮಕ್ಕಳಿಗೆ ಪರ್ಶಿಯ ಭಾಷೆಯಾಗಲೀ ಅರಬ್ಬಿ ಭಾಷೆಯಾಗಲೀ ತಿಳಿಯುವುದಿಲ್ಲ. ಹುಡುಗನು ದಡ್ಡನಾದರೆ ಆತನ ಕಾಲನ್ನು ಒಂದು ಕಂಭಕ್ಕೆ ಕಟ್ಟಿ ಬೆತ್ತದಿಂದ ಅಂಗಾಲಿಗೆ ಹೊಡೆಯುವರು ಈ ತರದ ಶಿಕ್ಷೆಗೆ ಬೆಸ್ಟಿನಾಡೊ ಎನ್ನುವರು ಉತ್ಸಾಹದ ಚಟುವಟಿಕೆಯನ್ನು ಹುಡುಗರು ತೋರಿಸಬಾರದೆನ್ನುವರು. ಓಡುವದು, ಹಾರುವದು ಅಭಿಮಾನಕ್ಕೆ ಕಡಮೆಯೆಂದು ಅವರ ಅಭಿಪ್ರಾಯ. ಚಿಕ್ಕ ಹುಡುಗರು ಪ್ರಾಯಬಂದ ಗಂಡಸಿನಂತೆ ಪೋಷಾಕು ಧರಿಸಬೇಕು. ಉದ್ದದ ಅಂಗಿಯನ್ನು ಹಾಕಿ ಕುಲ್ಲಾ ಎಂಬ ಆಸ್ಟ್ರಖಾನ್ ಟೋಪಿಯನ್ನು ಹಾಕುವನು. ಪರ್ಶಿಯದವರ ರಿವಾಜಿನಂತೆ ಸ್ನೇಹಿತರು ಎದುರಾದಾಗ "ನಿನ್ನ ಮೂಗು ಬೆಳೆಯಲಿ" "ನಿನ್ನ ನೆರಳು ಸಣ್ಣದಾಗದಿರಲಿ" ಎಂಬಿವೇ ಮೊದಲಾದ ರೀತಿಯಲ್ಲಿ ಗಂಡಸರಂತೆ ಹರಸುವನು.

ಹುಡುಗನಿಗೆ ಹದಿನಾರು ವರುಷ ಪ್ರಾಯವಾದಾಗ ಆತನ ತಾಯಿಯು ಸೋದರಿಕೆಯ ಸಂಬಂಧವನ್ನು ಹುಡುಗನಿಗಾಗಿ ಗೊತ್ತು ಮಾಡುವಳು. ಹೆಂಗಸರು ಮನೆಯೊಳಗೆ ಇರುವವರಾದ್ದರಿಂದ ಮತ್ತು ಹೊರಗೆ ಹೋಗುವಾಗ ಮುಸುಕು ಹಾಕಿ ಹೋಗುವವರಾದ್ದರಿಂದ ಹುಡುಗನು ಹುಡುಗಿಯನ್ನು ಬಾಲ್ಯದಿಂದ ನೋಡದೆಯೂ ಇರಬಹುದು. ಮದುವೆ ಕಾಲದಲ್ಲಿ ವರನೂ ಮತ್ತು ವಧುವೂ ಒಬ್ಬರನೆ ಒಬ್ಬರು ಎವೆ ಮುಚ್ಚದೆ ಕನ್ನಡಿಯೊಳಗಿನ ಪ್ರತಿಬಿಂಬವನ್ನು ಆಸಕ್ತಿಯಿಂದ ನೋಡಬಹುದಾಗಿದೆ. ಆ ಮೇಲೆ ವಧುವನ್ನು ವರನ ಮನೆಗೆ ಸಂಭ್ರಮದಿಂದ ಕರೆದುಕೊಂಡು ಹೋಗಿ ರೊಟ್ಟಿ, ಬೋವಾ ಮತ್ತು ಉಪ್ಪು ತಿನ್ನುವದು ಇವುಗಳನ್ನು ವಧುವಿನ ಮನೆಯಿಂದ ಕೊಂಡು ಹೋಗಬೇಕು. ವರನೊಟ್ಟಿಗೆ ಸಂಸಾರ ನಡೆಸಲು ವಧುವನ್ನು ಅಲ್ಲಿಯೇ ಬಿಟ್ಟು ವಧುವಿನ ತಾಯಿ-ತಂದೆಗಳು ತಮ್ಮ ಮನೆಗೆ ಹೋಗುವರು. ಈ ಪದ್ಧತಿ ಈಗಲೂ ಪರ್ಶಿಯ ಹಳ್ಳಿಗಳಲ್ಲಿ ಕೆಲವೆಡೆಯಿದೆ. ಈ ಕಾಲದಲ್ಲಿ ಹುಡುಗರೂ ಹುಡುಗಿಯರೂ ಒಂದೇ ಶಾಲೆಗೆ ಹೋಗುವರು.

ಮಹಮ್ಮದೀಯ ರಾಜ್ಯಗಳಲ್ಲಿ ಹೆಂಗಸರ ಸ್ಥಾನವು ಕೆಳಮಟ್ಟದಲ್ಲಿದೆ. ಕುರಾನಿನಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ತಕ್ಕ ಸಲಹೆ ಕೊಡಲಿಲ್ಲ. ನಾನಾ ತರದ ಪ್ರತಿಬಂಧಕವನು ಅವರ ಮೇಲೆ ಹೇರಿಯದೆ. ಉದ್ದವಾದ ಮತ್ತು ಅಗಲವಾದ ನಿಲುವಂಗಿ ಹತ್ತಾದ ಮುಸುಕು ಅವರದ್ದಾಗಿವೆ. ಶ್ರೀಮಂತ ಕುಟುಂಬದಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ವಸತಿ ಸ್ಥಳವಿದೆ. ಪರ್ಶಿಯದಲ್ಲಿ ಆ ಸ್ಥಳಕ್ಕೆ ಅಂಡಾರಮ್ ಎನ್ನುವರು. ಅಲ್ಲಿ ಸಮೀಪದ ಸಂಬಂಧಿಕರ ಶಿವಾಯಿ ಅನ್ಯರಿಗೆ ಪ್ರವೇಶವಿಲ್ಲ. ಈ ಪದ್ಧತಿಯನ್ನು ತುರ್ಕಿಯರು ಮೊದಲು ರದ್ದು ಮಾಡಿದರು. ಪರ್ಶಿಯವು ಅದೇ ದಾರಿ ಅನುಸರಿಸಿಯದೆ. ಈಗ ಸ್ತ್ರೀಯರು ಮುಸುಕು ಹಾಕದೆ ನಾಟಕ ಸಿನೇಮಗಳಿಗೆ ಹೋಗುವರು ಪಾಶ್ಚಾತ್ಯ ಸ್ತ್ರೀಯರಂತೆ ದುಸ್ತು ಹಾಕುವರು.

ಪರ್ಶಿಯದ ಸಂಚಾರ ವಾಸಿ ಜನರು ತಮ್ಮ ಕೈಯ ಮಣಿಗಂಟಿನ ಮೇಲೆ ಹದ್ದನ್ನು ಕೂಡ್ರಿಸಿಕೊಂಡು ಹೋಗುವರು. ಈ ಹದ್ದುಗಳು ಅವರಿಗೆ ಬೇಟೆಯಾಡಲು ಉಪಯೋಗವಾಗುವವು. ಬಹು ಸೂಕ್ಷ್ಮ ದೃಷ್ಟಿಯುವುಗಳಾದುದರಿಂದ ಯಾವದಾದರೊಂದು ಸಣ್ಣ ಜೀವಾತ್ಮವನ್ನು ಕಂಡೊಡನೆಯೇ ಅವುಗಳ ಮೇಲೇರಿ ಎರಗುವವು ಇವರು ಕತ್ತೆ ಮತ್ತು ಒಂಟೆಗಳ ಮೇಲೆ ಹೊರೆ ಹೇರುವರು. ಧಾನ್ಯಗಳನ್ನು ಉರುಟಾದ ಕಲ್ಲಿನ ಗಾಣದಲ್ಲಿ ಬೀಸುವರು. ಸಂಚರಿಸುವ ಸಂಗೀತಗಾರರು ಕೊಳಲು, ತಂಬೂರಿ, ಟಮಟೆಗಳ ಶಬ್ದದೊಡನೆ ಗಾಯನ ಮಾಡುತ್ತಾ ಹೋಗುವರು. ಹೊಗೆ ಸೊಪ್ಪನ್ನು ಸೇದುವರೆ "ಕಲಿಯನ್" ಎಂಬ ನಳ್ಳಿಗೆಯು ನಾರು ತುಂಬಿದ ಗುಡುಗುಡಿ ಅಥವಾ ಹುಕ್ಕಾವನ್ನು ಬಹು ಅಂದವಾಗಿ ಮಾಡಬಲ್ಲರು. ಉಕ್ಕಿನಲ್ಲಿ ಚಿನ್ನ ಬೆಳ್ಳಿಯ ಕೆತ್ತನ ಕೆಲಸ ಮಾಡಬಲ್ಲರು

ಶ್ರೀ ಸಿ. ಎಚ್. ಶೆಟ್ಟಿ, ಬೈಂದೂರು

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No 466 N/50 date 2-12-1950 of the Director of public Instruction, Madras·

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋಪೋರೇಶನ್ ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಸೃಷ್ಟಿ ವೈಚಿತ್ರ್ಯ

ಋತುರಾಜ ವಸಂತ ಋತು

ನಮ್ಮ ಬವಣೆಯನ್ನು ದೂರಮಾಡಿ ಒಂದು ಕ್ಷಣಕ್ಕೆ ಲೋಕೋತ್ತರಾನಂದವನ್ನೊದಗಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಋತುಗಳಿಗೆ ಮಹತ್ವಪೂರ್ಣ ಸ್ಥಾನವಿದೆ. ಋತುಗಳು ನಮ್ಮ ಸಂಸ್ಕೃತಿಯ ಒಂದು ಅಂಗವಾಗಿವೆ. ವರ್ಷ, ಶರದ, ಶಿಶಿರ, ವಸಂತ, ಹೇಮಂತ ಮತ್ತು ಗ್ರೀಷ್ಮವೆಂಬ ಆರು ಋತುಗಳಿವೆ. ಇವುಗಳಲ್ಲಿ ಕೇವಲ ಶರದ, ಗ್ರೀಷ್ಮ ಮತ್ತು ವರ್ಷಋತುಗಳು ಮುಖ್ಯವಾಗಿವೆ. ಶರದೃತುವಿನಲ್ಲಿ ನಾವು ಉತ್ತಮ ರೀತಿಯಲ್ಲಿ ಆರೋಗ್ಯವಂತರಾಗಿರುತ್ತೇವೆ ಬೇಸಗೆಯ ದಿನಗಳಲ್ಲಿ ನಾವೆಲ್ಲ ರೋಗಗಳಿಂದಲೂ ದೂರವಾಗಿದ್ದು, ಶರೀರವನ್ನು ಪುಷ್ಟಿದಾಯಕವಾಗಿರಿಸಲು ವಿವಿಧ ವ್ಯಾಯಾಮಗಳನ್ನು ಮಾಡುತ್ತೇವೆ. ಶರದೃತುವಿನ ಆನಂದ ಸುಧೆಯನ್ನು ಸವಿದ ನಂತರ ಗ್ರೀಷ್ಮವು ನಮ್ಮನ್ನು ಸ್ವಾಗತಿಸುತ್ತದೆ. ಗ್ರೀಷ್ಮದ ಬಿಸಿಲಿನಿಂದ ನಾವು ತೃಪ್ತರಾಗುವಾಗ ವರ್ಷವು ತನ್ನ ಅಮೃತಮಯ ಬಿಂದುವಿನಿಂದ ನಮ್ಮನ್ನು ತಣಿಸುತ್ತದೆ. ಸ್ವರ್ಗೀಯ ಆನಂದವನ್ನು ನಮಗೆ ಒದಗಿಸುತ್ತದೆ. ಇದೇ ರೀತಿಯಲ್ಲಿ ಎಲ್ಲ ಕಾಲಗಳಿಗೂ ತಮ್ಮದೇ ಆದ ಮಹತ್ವಪೂರ್ಣ ಸ್ಥಾನವಿದೆ.

ಎಷ್ಟಾದರೂ ವಸಂತನನ್ನು ಋತುರಾಜನೆಂದು ಕರೆಯುತ್ತಾರೆ. ಇದಕ್ಕೇನು ಕಾರಣ? ಉಳಿದ ಋತುಗಳನ್ನು ಈ ಪದವಿಗೇರಿಸದೆ ವಸಂತನನ್ನೇ ಏಕೆ ಅಡರುವಂತೆ ಮಾಡಿದರು? ಇದಕ್ಕೆ ಕೇವಲ ಒಂದೆರಡಲ್ಲ; ಅನೇಕಾನೇಕ ಕಾರಣಗಳಿವೆ.

ವಸಂತ ಅತ್ಯಂತ ಮನೋಹರವಾದ ಋತು. ವಸಂತ ಋತುವಿನಲ್ಲಿ ನಾನಾ ಬಗೆಯ ಹೂಗಳು ಅರಳುತ್ತವೆ. ಇವುಗಳಲ್ಲಿ ಹೆಚ್ಚಿನವು ಹಳದಿ ವರ್ಣದವುಗಳಾಗಿರುವುದರಿಂದ, ವಸಂತ ಋತುವಿನ ವರ್ಣವನ್ನು ಹಳದಿ ಎಂದು ಹೇಳುತ್ತಾರೆ. ಸ್ತ್ರೀಯರು ಮತ್ತು ಮಕ್ಕಳು ಹಳದಿ ಬಟ್ಟೆಗಳನ್ನು ಧರಿಸಿ ವಸಂತಋತುವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ. ವಸಂತವಾದರೋ ಕೆರೆ ತಟಾಕಗಳ ಹಳದಿ ಪುಷ್ಪಗಳ ಸುಂದರ ವೇಷವನ್ನು ಧರಿಸಿ ಅವರ ಸ್ವಾಗತವನ್ನು ಸ್ವೀಕರಿಸುತ್ತದೆ.

ವಸಂತ ಋತುವಿನ ವಾತಾವರಣವು ಪ್ರಿಯವಾಗಿದ್ದು, ಆದರಿಂದ ಮಾನವ ಹೃದಯವು ಅತ್ಯಂತ ಆಹ್ಲಾದಿತವಾಗುತ್ತದೆ. ಹೃದಯದಲ್ಲಿ ಬಗೆ ಬಗೆಯ ಭಾವನೆಗಳು ಉದ್ಭವಿಸಿ, ಅಂತಃಕರಣವು ಲೋಕೋತ್ತರಾನಂದದ ಅನುಭವವನ್ನು ಪಡೆಯುತ್ತದೆ. ಭ್ರಮರ ಮತ್ತು ಕೋಗಿಲೆಗಳು ತಮ್ಮ ಸುಮಧುರ ಸ್ವರದಿಂದ ಈ ಆನಂದಾನುಭವದ ಸವಿಯನ್ನು ಮತ್ತಷ್ಟು ಹೆಚ್ಚಿಸುತ್ತವೆ. ಮಾನವನಿಗೆ ಕ್ಷಣಭಂಗುರವಾದ ಪ್ರಪಂಚದ ಸ್ಥಿತಿಯನ್ನು ತಿಳಿಸುತ್ತಿರುವಂತೆ ಈ ವಸಂತಾಗಮದಲ್ಲಿ ಹಾಡಿ ಮುಂದೆ ಮೂಗುವಟ್ಟು ಮಾಯವಾಗುತ್ತದೆ. ಹೀಗೆ ತನ್ನ ಸುತ್ತುಮುತ್ತಲೂ ಆಕರ್ಷಣೀಯವಾಗಿ ಪುಷ್ಪಫಲಗಳನ್ನು ಕಾಣುವುದಲ್ಲದೆ ಭ್ರಮರಾದಿಗಳ ಗೀತೆಗಳಿಂದ ಹರ್ಷಪುಲಕಿತಗಾತ್ರರಾಗಿ ನಾವು ವಸಂತಕಾಲದಲ್ಲಿ ನಮ್ಮನ್ನೇ ಮರೆಯುತ್ತೇವೆ.

ಸಂಸ್ಕೃತ ಮಾರ್ಗಾನುಸಾರವಾಗಿ ಬರೆದಿರುವ ಕಾವ್ಯಗಳ ಕರ್ತೃಗಳು ಎಲ್ಲರೂ ಋತುಗಳೆಲ್ಲವನ್ನೂ ಅವಕಾಶ ಕಲ್ಪಿಸಿಕೊಂಡು ತಮ್ಮ ಕಾವ್ಯಗಳಲ್ಲಿ ವರ್ಣಿಸಿದ್ದಾರೆ. ಏಕೆಂದರೆ, ಮಾರ್ಗ ಪದ್ಧತಿಯಲ್ಲಿ ಈ ಋತುಗಳ ವರ್ಣನೆಯೊಂದು ಅವಿಭಾಜ್ಯ ಅಂಗವಾಗಿದೆ ಸಂಸ್ಕೃತದ ಕವಿಗಳಲ್ಲಿ ಕಾಳಿದಾಸನು ತೀರ ಮುಂದುವರಿದಿರುವಂತೆ ಅವನು ಋತುವರ್ಣನೆಯಲ್ಲಿಯೂ ಬಹಳ ಮುಂದೆ ಸಾಗಿದ್ದಾನೆ. ಎಂತಲೇ ಅವನು ಎಲ್ಲಾ ಋತುಗಳ ವರ್ಣನೆಯನ್ನು ತನ್ನ ಕಾವ್ಯದಲ್ಲಿ ವಿಸ್ತಾರವಾಗಿ ಮಾಡಿದ್ದಾನೆ. ಹಾಗೆಯೇ ಈತನು ನಿರೂಪಿಸಿದ ವಸಂತಋತುವಿನ ವರ್ಣನೆಯು ವಿಸ್ತಾರವಾಗಿಯೂ ಮನೋಹರವಾಗಿಯೂ ಇರುವುದು. ವಸಂತನು ತನ್ನ ಆಳ್ವಿಕೆಯನ್ನು ಪ್ರಪಂಚದಲ್ಲಿ ಯಾವ ಪ್ರಕಾರದಲ್ಲಿ ಪ್ರಾರಂಭಿಸಿ ಹೇಗೆ ಭದ್ರಪಡಿಸುತ್ತಾನೆ ಎಂಬುದನ್ನು ಹೃದಯಂಗಮವಾಗಿ ವಿವರಿಸಿದ್ದಾನೆ

ಮೊತ್ತಮೊದಲಿಗೆ ವಸಂತವು ಪುಷ್ಪಗಳನ್ನು ಉತ್ಪಾದಿಸುತ್ತದೆ. ಆ ಮೇಲೆ, ನವನವ ಪಲ್ಲವಗಳನ್ನು ಜನಿಸುತ್ತದೆ. ತದನಂತರ ಭ್ರಮರ ಗುಂಜಾರವವನ್ನೂ ಕೋಗಿಲೆಗಳ ಕುಕಿಲನ್ನೂ ಪ್ರಾರಂಭಿಸಲು ಉತ್ತೇಜಿಸುತ್ತದೆ. ಹೀಗೆ ವಸಂತ ಋತು ಕ್ರಮಾನುಗುಣವಾಗಿ ಪ್ರಪಂಚಕ್ಕಿಳಿದು, ತನ್ನ ನಿಜರೂಪವನ್ನು ಪ್ರದರ್ಶಿಸುತ್ತ ಜನತೆಯ ಮನವನ್ನು ಆನಂದಭರಿತವಾಗಿಸುತ್ತದೆ.

“ಕುಸುಮ ಜನ್ಮ ತತೋ ನವಪಲ್ಲವಾಸ್ತದನು ಷಟ್ಪದ ಕೋಕಿಲ ಕೂಜಿತಮ್ । ಇತಿ ಯಥಾಕ್ರಮ ಮಾವಿರ ಭೂನ್ಮಧು ದ್ರುಮವತೀಮವತೀರ್ಯ ವನಸ್ಥಲೀಮ್ ||” ಎಂಬುದು ಮೇಲಿನರ್ಥವನ್ನು ಸೂಚಿಸುತ್ತದೆ.

ಕಾಮದೇವ ಮತ್ತು ಋತುರಾಜ ವಸಂತರ ನಡುವಿರುವ ಸ್ನೇಹ ಅಚಲವಾದುದು. ಇವರಿಬ್ಬರೂ ಬಂದು ಸೇರಿದರೆಂದರೆ, ಅವರಿಗೆ ಎದುರು ನಿಲ್ಲುವ ಧೈರ್ಯ ಯಾರೊಬ್ಬನಿಗೂ ಇಲ್ಲ. ಮಧು ಇಲ್ಲವೇ ವಸಂತನು ಕಾಮನ ಸೇನಾಪತಿ ಎನ್ನಬಹುದು. ಮಲಯಾನಿಲಾದಿ ಸಹಾಯಕರಿಂದ ಕಾಮದೇವನ ಬರವನ್ನು ವಸಂತನು ಡಂಗುರ ಹೊಯಿಸುತ್ತಾನೆ. ಅನಲಾನಿಲ ಸಂಯೋಗದಂತೆ ಮಧುಕಾಮರ ಸಂಘಟನವಾದರೆ ಅವರಿಗೆದುರಾರೂ ಇಲ್ಲ. ಯಾರಾದರೊಬ್ಬನು ಪ್ರಪಂಚ ಸುಖವನ್ನು ಹೇಯವೆಂದು ತಿಳಿದು ಏನಾದರೂ

(೯ನೇ ಪುಟ ನೋಡಿರಿ)

LIFE INSURANCE CORPORATION OF INDIA

ಇದು ನಿಮಗೆ ಕೊಡುತ್ತಿರುವ ಭರವಸೆ

ನಿಮ್ಮ ಜೀವ ವಿಮೆಯ ಹಣವನ್ನು ದೇಶದ ಅತಿ ಶ್ರೇಷ್ಠ ಸಂಸ್ಥೆ—ಭಾರತ ಸರಕಾರ ಕಾಪಾಡುತ್ತದೆ. “ಎರಡು ಹಸ್ತಗಳ” ಚಿಹ್ನೆ ನಿಮಗೆ ಈ ಬಗ್ಗೆ ಭರವಸೆ ಕೊಡುತ್ತದೆ.

ಅದಲ್ಲದೆ ಇದು ಯಾವಾಗಲೂ ನಿಮ್ಮ ಆವಶ್ಯಕತೆಗಳಿಗೆ ಗಮನ ಕೊಡುತ್ತದೆ. ಮತ್ತು ನಿಮಗೆ ಜೀವ ವಿಮೆಯ ಹಣ ಸಲ್ಲಿಸ ಬೇಕಾದ ಸಮಯ ಬಂದಾಗ, 1956 ರಲ್ಲಿ ಜಾರಿಗೆ ತಂದ ಲೈಫ್ ಇನ್ಷೂರನ್ಸ್ ಕಾರ್ಪೊರೇಷನಿನ ಕಾಯಿದೆಯ ಪ್ರಕಾರ ತ್ವರೆಯಾಗಿ ನಿಮಗೆ ನಗದು ಹಣ ಸಲ್ಲುವಂತೆ ನೋಡುತ್ತದೆ.

“ಎರಡು ಹಸ್ತಗಳು” ಭರವಸೆ ಮತ್ತು ಸಂರಕ್ಷಣೆಯ ಚಿಹ್ನೆ.

ಲೈಫ್ ಇನ್ಸೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
ಸೆಂಟ್ರಲ್ ಆಫೀಸು “ಜೀವನ ಕೇಂದ್ರ”, ಜಮ್‌ಷೆಡ್ಜಿ ಟಾಟಾ ರೋಡ್, ಮುಂಬಯಿ-೧

Life Insurance Corporation of India

ಜೋನಲ್ ಆಫೀಸುಗಳು. ಬೊಂಬಾಯಿ • ಹೊಸದೆಹಲಿ • ಕಲ್ಕತ್ತ • ಮದ್ರಾಸು • ಕಾನ್ಪೂರ್,
ಡಿವಿಜನಲ್ ಮತ್ತು ಬ್ರಾಂಚ್ ಆಫೀಸುಗಳು ಭಾರತದ ಎಲ್ಲಾ ಕಡೆಗಳಲ್ಲಿಯೂ ಇವೆ.

ASP/LIC-9

ಅನುಭವಾಮೃತ

ಅನುಭವವಿರುವಲ್ಲಿ ಅಮೃತವಿದೆ!

ಜೀವಿಗಳೂ.... ವನಸ್ಪತಿಗಳೂ....

ದೈವದತ್ತವಾಗಿ ಕೆಲ ಸ್ತ್ರೀಯರು ವರ್ಷಕ್ಕೊಮ್ಮೆಯೂ ಮಗುವನ್ನು ಹಡೆಯುವರು!! ಅಂತೆಯೇ ಕೆಲ ಹೆಣ್ಣು ಪಶುಗಳು ವರ್ಷಗಂದಿಯಾಗಿವೆ!! ಕೆಲವು ಎರಡು ವರ್ಷಕ್ಕೊಮ್ಮೆ ಸಂತಾನ ಭಾಗ್ಯವನ್ನು ಹೊಂದುವದೂ ಇದೆ!!

ವನಸ್ಪತಿಗಳಲ್ಲಿಯೂ ಕೆಲವು ಮರಗಳು ವರ್ಷಕ್ಕೊಮ್ಮೆ ಫಲಕೊಡುವವೂ ಕೆಲವು ಎರಡು ವರ್ಷಗಳಿಗೊಮ್ಮೆ!! ಕೆಲ ಮರಗಳ ಕೆಲವು ಟೊಂಗೆಗಳು ವರ್ಷ ಬಿಟ್ಟು ವರ್ಷಕ್ಕೆ ಒಂದಾವರ್ತಿ ಫಲ ಕೊಡುವವು.

ಪ್ರಾಣಿ ಜನ್ಮಕ್ಕೂ ವನಸ್ಪತಿ ಜನ್ಮಕ್ಕೂ ಒಂದು ತೆರನಾದ ಸಾಮ್ಯತೆ ಕಂಡುಬರುತ್ತಿದೆ. ಪ್ರಾಣಿಗಳಲ್ಲಿದ್ದಂತೆ ವನಸ್ಪತಿಗಳಲ್ಲಿಯೂ ಬಂಜೆತನವಿದೆ!.

○○ ○○

ಮದ್ದು

"ಮದ್ದು" ಈ ಶಬ್ದ "ಮಧು"ವಿನಿಂದ ಬಂದಿರಬೇಕು. (ಮದ್ದು (ತ್ಭ)=ಮಧು (ತ್ಸ) ಎಂತೆಣಿಸಬೇಕು.) ಪೂರ್ವಕಾಲದಲ್ಲಿ "ಮಧು"ವೇ, ನಿಸರ್ಗದಲ್ಲಿ ದೊರೆಯಬಹುದಾದ ಔಷಧ (ಮದ್ದು) ಇರಬೇಕು. ಅಷ್ಟೊ ಅಲ್ಲದೆ "ಮಧು" (ಜೇನುತುಪ್ಪ) ದಲ್ಲಿ ಎಲ್ಲ ಮದ್ದಿನ ಸಾರ ಅಡಕವಾಗಿದೆ. ಅದರಿಂದಾಗಿ "ಮದ್ದು" ಎಂಬ ಶಬ್ದ (ಗುಣ) ನಮ್ಮ ವಾಙ್ಮಯದಲ್ಲಿ ಉದ್ಭವಿಸಿತು!

ನಿಸರ್ಗದ ವನಸ್ಪತಿಗಳ ಹೂಗಳಲ್ಲಿ ಅದೆಷ್ಟೊ ರೋಗ ನಿವಾರಕ ಗುಣವಿದ್ದ ಪುಷ್ಪರಸವಿದೆ. ಜೇನು ಹುಳಗಳು ಶ್ರಮದಿಂದ ಅವನ್ನು ಮಾನವನಿಗೆ ಶೇಖರಿಸಿಕೊಡುತ್ತಿವೆ. ನಿಸರ್ಗದಲ್ಲಿ ದೊರೆಯಬಹುದಾದ ಉತ್ಕೃಷ್ಟವಾದ ಮದ್ದು — ಮಧು — ವೇ ಆಗಿದೆ.

○○ ○○

ಚಟ

ಚಟಗಳೆಂದ ಮಾತ್ರಕ್ಕೆ ದುಶ್ಚಟಗಳೆಂದು ಎಲ್ಲರೂ ಸುಲಭವಾಗಿ ಅರ್ಥ ಮಾಡುವದು ಸ್ವಾಭಾವಿಕ! ಈ ಚಟಗಳಿಂದ ಮನುಷ್ಯನಿಗೆ ಕೆಲವು ಪ್ರಯೋಜನವೂ ಇವೆಯೆನ್ನಲೇಬೇಕು. ಕೆಲವರು ಬೀಡಿ ಸೇದುವರು. ಬೀಡಿ ಯಾ ಸಿಗಾರೇಟ ಇಲ್ಲದಿದ್ದಲ್ಲಿ ಅವರ ಬುದ್ಧಿ ಶಕ್ತಿಯೇ ಕುಂದುವದು! ಅವರ ಮಿದುಳು—ಜ್ಞಾನ ತಂತು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ಮಾಡಲಾರವು

ಕೆಲವರು ನಶ್ಯವಿಲ್ಲದಿದ್ದರೆ—ಚಹ—ಕಾಫಿ ಇಲ್ಲದಿದ್ದರೆ ತಲೆ ಸಿಡಿತದ ಅನುಭವ ಹೊಂದುವದೂ ಇದೆ! ಇವೆಲ್ಲವುಗಳ ಹೊರ್ತು ಇನ್ನೊಂದು ತರದ ಚಟವಿದೆ!! ಉಗುರು ಕಡಿಯುವದು—ಕೈ ಬೆರಳು ತಿರುಗಾಡಿಸುವದು—ಕಾಲು ಅಲ್ಲಾಡಿಸುತ್ತಲಿರುವದು—ಕಣ್ಣು ರೆಪ್ಪೆಗಳನ್ನು ಪಟಪಟು ಹಲವಾರು ಸರ್ತಿ ಬಡಿಯುತ್ತಲಿರುವದು—ತಲೆ ತುರಿಸುವದು—ಕಿವಿ ಯಾ ಮೂಗು ತಿಕ್ಕುವದು ವಗೈರೆ.

ಮೇಲಿನ ನೈಸರ್ಗಿಕ ಚಟಗಳ ಜೊತೆಗೆ ಮಾತ್ರ ಕೆಲವು ಜನರು—ಯಾಕೆ ಹಲವರು ತಮ್ಮ ನಿಜ ಆಲೋಚನೆ ಮಾಡಬಲ್ಲರು...ಅಯಾ ಚಟಗಳಿಗೆ ಅಪ್ಪದವಿಲ್ಲದಿದ್ದಲ್ಲಿ ಅವರಿಂದ ಯಾವ ವಿಚಾರದಲ್ಲಿಯೂ ಯಶಸ್ಸು ಪಡೆಯಲಾಗುವಂತಿಲ್ಲವೆಂಬ ಗಮನಾರ್ಹ ವಿಷಯ.

○○ ○○ ○○

ಭರ್ಪ ಸೇವನೆ

ಬಿಸಿಲು ಕಾಲದಲ್ಲಿ ಭರ್ಪ ಸೇವನೆ ಮಾಡುವದನ್ನು—ನಾವು ನೋಡುತ್ತೇವೆ. ಶಹರಗಳಲ್ಲಂತೂ 75% ಜನ ಭರ್ಪದ ಪೇಯವನ್ನು ಸೇವಿಸುವರು. ತಾತ್ಪೂರ್ತಿಕವಾಗಿ ಭರ್ಪದಿಂದಾಗುವ ತಂಪಿಗೆ ಮರುಳಾಗಿ ಸೇವಿಸಬೇಕೇ ವಿನಃ ವಸ್ತುಸ್ಥಿತಿ ಹಾಗಿಲ್ಲ!!

ಭರ್ಪದಿಂದ ಶರೀರದಲ್ಲಿ ಇನ್ನೂ ಉಷ್ಣತೆ ಜಾಸ್ತಿಯಾಗುವದು. ಹೊಟ್ಟೆಯೊಳಗಿನ ಉಷ್ಣತೆ ಭರ್ಪ ಸೇವನೆಯಿಂದ ಒಮ್ಮೆ ಕಡಿಮೆಯಾದಂತಾಗಿ ತಂಪನ್ನಿಸಿದರೂ ಸಮತ್ವವನ್ನು ಹೊಂದಲು ಹೊರ ವಾತಾವರಣದಿಂದ ಶರೀರದಲ್ಲಿ ಸೇರುವ ಉಷ್ಣತೆಯಿಂದಾಗಿ ಭರ್ಪ ಸೇವನೆಯ ನಂತರ ಒಂದೆರಡು ನಿಮಿಷಗಳಲ್ಲಿಯೇ ಮೈಯಲ್ಲಿಯ ಉಷ್ಣತೆ ಹೆಚ್ಚುವದು. ಅಲ್ಲದೆ --ಬಾಯಾರಿಕೆ ಇನ್ನೂ ಹೆಚ್ಚಾಗುವದು-ಪುಪ್ಪುಸ ಕಾರ್ಯವು ಭರ್ಪ ಸೇವನೆಯಿಂದ ಕಡಿಮೆಯಾಗುವದು. ಅಧಿಕ ಬರ್ಪಸೇವನೆಯಿಂದ "ರಕ್ತಕೋಶದಲ್ಲಿಯ ಕ್ರಿಯೆ ಯು ಅನಿಯಮಿತವಾಗುವದು! ಅಲ್ಲದೆ ನೈಸರ್ಗಿಕ ಶರೀರದಲ್ಲಿಯ ನಾಡಿಗಳ ಕಾರ್ಯ ಸಹ ತಡವರಿಸುವದು!! ಬರ್ಪದ ಪೇಯಗಳಿಗಿಂತ ಮಣ್ಣಿನ ಹೂಜೆಗಳಲ್ಲಿ ಪೂರ್ವೋಚಿತ ತುಂಬಿರಿಸಿ ತಣ್ಣಗಾದ ಸ್ವಚ್ಛ ನೀರೇ ಆರೋಗ್ಯಕರವೆಂಬುದನ್ನು ಶಹರವಾಸಿಗಳು ತಿಳಿಯಬೇಕು.

— ಸಿರಿಪತಿ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್
ಮುನ್ಸಿಫ್ ಕೋರ್ಟಿನಲ್ಲಿ
S. C. S. No. 651/1958.
ಎನ್. ಚೆಲುವಯ್ಯ ಶೆಟ್ಟಿ—ವಾದಿ
ಮತ್ತು
ಎಮ್. ರಮೇಶ ಪೈ—ಪ್ರತಿವಾದಿ
ಇವರೊಳಗೆ,

ಎಮ್. ರಮೇಶ ಪೈ, ಮುಂಡಾಶಿ ವಾಸುದೇವ ಪೈಗಳ ಮಗ, ಉಡುಪಿ ಕಸಬೆ ನಂಬ್ರ 76ನೆ ಬಡಗಬೆಟ್ಟು ಗ್ರಾಮದ ಭಂಡಾರಿ ಓಣಿಯಲ್ಲಿರುವವರು — ಪ್ರತಿವಾದಿ

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯು ವಾದಿಯ ಅಂಗಡಿಯಲ್ಲಿ ನಡೆಸಿದ ಲೇವಾದೇವಿ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಬೇಕಾದ ಅಸಲು ಬಾಕಿ ರೂ. 115.25 ಮತ್ತು ಬಡ್ಡಿ ರೂ. 4.92 ಕೂಡಾ ಒಟ್ಟು ರೂ. 120.17ನ್ನು ಬರಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಗೆ ಅಖೈರಿ ನೋಟೀಸಿನ ಬಗ್ಗೆ ತಾ. 4—3—1959ಕ್ಕೆ ಇಡೋಣಾಗಿಯದೆ. ಪ್ರತಿವಾದಿಯು ತನುಬಿ ದಿನ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳದಿದ್ದರೆ ಆತನ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

(By Order of the Court)

ಉಡುಪಿ } K. Varadaraya Pai
ತಾ. 20-2-59 } *Advocate for Plaintiff*

ಆಕಾಶವಾಣಿ

ಭಾರತದ ಗ್ರಾಮಸ್ಥರಿಗಾಗಿ ಆಕಾಶವಾಣಿ ಪ್ರಸಾರ

ಹೆಚ್ಚು ಭಾಷೆಗಳಲ್ಲಿ ಪ್ರಸಾರಕಾರ್ಯ ನಡೆದಿದೆ.

ನಮ್ಮ ದೇಶದಲ್ಲಿ ಒಟ್ಟು ೨೮ ಆಕಾಶವಾಣಿ ಕೇಂದ್ರಗಳೂ ೫೫ ಟ್ರಾನ್ಸ್‌ಮಿಟರ್ ಯಂತ್ರಗಳೂ ಇವೆ. ಇವು ದೇಶದ ಎಲ್ಲ ಭಾಷೆಗಳಲ್ಲಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಸಹಾಯಕವಾಗಿವೆ. ಒಟ್ಟು ದೇಶದ ಮೂರನೆಯ ಎರಡು ಭಾಗ ಈ ಕೇಂದ್ರಗಳ ಪ್ರಸಾರ ವ್ಯಾಪ್ತಿಗೊಳಪಟ್ಟಿದೆ.

ಆಕಾಶವಾಣಿ ೧೯೫೭ರ ಅಕ್ಟೋಬರ್ ೩ರಿಂದ "ವಿವಿಧ" ಭಾರತಿ ಎಂಬ ಮನರಂಜನಾ ಕಾರ್ಯಕ್ರಮವನ್ನು ಆರಂಭಿಸಿದೆ. ವಿವಿಧ ಭಾರತಿ ಕಾರ್ಯಕ್ರಮದಲ್ಲಿ ಸುಗಮ ಸಂಗೀತ, ಕಿರುನಾಟಕಗಳು, ಹರಟೆಗಳು ಮುಂತಾದುವನ್ನು ಪ್ರತಿನಿತ್ಯವೂ ಆರು ಗಂಟೆ ೪೫ ನಿಮಿಷಗಳ ಕಾಲ ಶ್ರೋತೃಗಳಿಗಾಗಿ ಪ್ರಸಾರ ಮಾಡಲಾಗುತ್ತಿದೆ. ಭಾನುವಾರ ಮತ್ತಿತರ ಪ್ರಮುಖ ರಜಾದಿನಗಳಲ್ಲಿ ವಿವಿಧ ಭಾರತಿ ಕಾರ್ಯಕ್ರಮವನ್ನು ಒಂಭತ್ತು ಗಂಟೆ ೪೫ ನಿಮಿಷಗಳ ಕಾಲ ಪ್ರಸಾರ ಮಾಡಲಾಗುತ್ತಿದೆ. ಪ್ರತಿನಿತ್ಯ ೯೦ ನಿಮಿಷಗಳ ವರೆಗೆ ಕರ್ನಾಟಕ ಸಂಗೀತ ಬೇರೆ ಪ್ರಸಾರವಾಗುತ್ತದೆ.

ಆಕಾಶವಾಣಿಯು ಒಳ ದೇಶದ ಪ್ರಸಾರ ಸೇವೆಯಲ್ಲಿ ೧೬ ಪ್ರಮುಖ ಭಾರತೀಯ ಭಾಷೆಗಳು, ೪೮ ಭಾಷಾರೂಪಗಳು ಮತ್ತು ೨೯ ಬುಡಕಟ್ಟಿನ ಭಾಷೆಗಳಲ್ಲಿ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ.

ಒಳ ದೇಶದ ಪ್ರಸಾರ ಸೇವೆಯಲ್ಲಿ, ಆಕಾಶವಾಣಿಯು ೧೬ ಪ್ರಮುಖ ಭಾರತೀಯ ಭಾಷೆಗಳಲ್ಲಿ ೪೭ ಸಮಾಚಾರ ಬುಲೆಟಿನ್‌ಗಳನ್ನೂ ಪ್ರಸಾರಮಾಡುತ್ತಿದೆ. ಒಟ್ಟು ಒಂಭತ್ತು ಗಂಟೆ ೩೦ ನಿಮಿಷಗಳ ವರೆಗೆ ಈ ಸಮಾಚಾರ ಬುಲೆಟಿನ್‌ಗಳ ಪ್ರಸಾರವಾಗುತ್ತಿದೆ. ವಿದೇಶಿ ಪ್ರಸಾರ ಸೇವೆಯಲ್ಲಿ ೧೬ ಭಾಷೆಗಳಲ್ಲಿ ೩೦ ಸಮಾಚಾರ ಬುಲೆಟಿನ್‌ಗಳು ನಾಲ್ಕು ಗಂಟೆ ೫೪ ನಿಮಿಷಗಳ ವರೆಗೆ ಪ್ರಸಾರವಾಗುತ್ತಿವೆ.

ಗ್ರಾಮವಾಸಿಗಳು ರೇಡಿಯೋ ಕಾರ್ಯಕ್ರಮಗಳನ್ನು ಆಲಿಸುವುದನ್ನು ಪ್ರೋತ್ಸಾಹಿಸುವುದಕ್ಕಾಗಿ ನೂರಕ್ಕೆ ೫೦ರಷ್ಟು ಸಹಾಯಧನದ ಆಧಾರದ ಮೇಲೆ ರಾಜ್ಯ ಸರ್ಕಾರಗಳಿಗೆ ಆಕಾಶವಾಣಿ ರೇಡಿಯೋ ಸೆಟ್‌ಗಳನ್ನು ಪೂರೈಸಿದೆ. ೧೯೫೮ರ ಡಿಸೆಂಬರ್ ವರೆಗೆ ೪೧,೭೩೭ ಸೆಟ್‌ಗಳನ್ನು ಪೂರೈಸಲಾಗಿತ್ತು. ೧೯೫೯ರ ಮಾರ್ಚ್ ವೇಳೆಗೆ ೪೭,೭೭೭ ಸೆಟ್‌ಗಳನ್ನು ಎಲ್ಲ ರಾಜ್ಯಗಳಿಗೂ ಪೂರೈಸಲಾಗುವುದು.

ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಇಲ್ಲಿಯವರೆಗೆ ೩೪ ನಾಟಕಗಳು, ೧೫ ಸಂಗೀತ ನಾಟಕಗಳು, ೨೦ ರೂಪಕಗಳು ಪ್ರಸಾರ ಮಾಡಲ್ಪಟ್ಟಿವೆ. ರಾಷ್ಟ್ರೀಯ ಭಾಷಣಗಳ ಕಾರ್ಯಕ್ರಮವನ್ನು ಪ್ರತಿ ಬುಧವಾರವೂ ಸಂಗೀತ ಕಾರ್ಯಕ್ರಮವನ್ನು ಪ್ರತಿ ಶನಿವಾರವೂ ಪ್ರಸಾರಮಾಡಲಾಗುವುದು. ಒಂದು ಭಾಷೆಯಲ್ಲಿ ಬರೆಯಲ್ಪಟ್ಟ ಅತ್ಯುತ್ತಮ ನಾಟಕ ಅಥವಾ ರೂಪಕವನ್ನು ಉಳಿದ ಎಲ್ಲಾ ಪ್ರಾದೇಶಿಕ ಭಾಷೆಗಳಿಗೂ ತರ್ಜುಮೆ ಮಾಡಿ ಇದನ್ನು ವಿವಿಧ ಕೇಂದ್ರಗಳಿಂದ ಏಕಕಾಲದಲ್ಲಿ ಪ್ರಸಾರ ಮಾಡಲಾಗುವುದು.

ಆಕಾಶವಾಣಿ ತನ್ನದೇ ಆದ ವಾದ್ಯವೃಂದವನ್ನು ಪಡೆದಿದೆ. ಆಕಾಶವಾಣಿ ವಾದ್ಯವೃಂದದಲ್ಲಿ ೨೭ ವಾದ್ಯಗಳಿವೆ. ಕಾಳಿದಾಸನ "ಶಾಕುಂತಲ" ಮತ್ತು "ಮೇಘದೂತ"ಗಳಂತಹ ಅಮರ ಕೃತಿಗಳನ್ನು ವಾದ್ಯವೃಂದದ ರೂಪಕ್ಕೆ ತರುವ ಬಗ್ಗೆ ಪ್ರಯೋಗಗಳು ನಡೆಯುತ್ತಿವೆ.

ಆಕಾಶವಾಣಿಯು ಸಂಗೀತ, ನಾಟಕ, ಸಾಹಿತ್ಯ ಮುಂತಾದವನ್ನು ಪೋಷಿಸುವ ಬಗ್ಗೆ ಮಹತ್ವಪೂರ್ಣ ಪಾತ್ರ ವಹಿಸುತ್ತಿದೆ. ಪ್ರತಿವರ್ಷವೂ ಆಕಾಶವಾಣಿ ವ್ಯವಸ್ಥೆಗೊಳಿಸುತ್ತಿರುವ ಸಮಾರಂಭಗಳೇ ಇದಕ್ಕೆ ದೃಷ್ಟಾಂತವಾಗಿವೆ. ಸಂಗೀತ ಸಮ್ಮೇಳನ, ರಾಷ್ಟ್ರೀಯ ಕವಿಗೋಷ್ಠಿ, ಸಾಹಿತ್ಯೋತ್ಸವಸಮಾರೋಹ, ಸರ್ದಾರ್ ಪಟೇಲ್ ಸ್ಮಾರಕ ಉಪನ್ಯಾಸಗಳು, ಅಂತರ್‌ವಿಶ್ವವಿದ್ಯಾನಿಲಯ ರೇಡಿಯೋ ಚರ್ಚಾ ಸ್ಪರ್ಧೆಗಳು ಮತ್ತು ಆಕಾಶವಾಣಿ ಸಪ್ತಾಹ ಈ ಮುಂತಾದವನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ದೇಶದ ವಿವಿಧ ಭಾಗಗಳಲ್ಲಿ ನಡೆಯುವ ಪ್ರಮುಖ ಸಂಗೀತ ಸಮ್ಮೇಳನಗಳನ್ನು ಆಕಾಶವಾಣಿ ಪುನಃ ಪ್ರಸಾರ ಮಾಡುತ್ತಿದೆ.

ಬೊಂಬಾಯಿ ನಗರದಲ್ಲಿ ಒಂದು ಹೆಚ್ಚಿನ ಶಾಖೆ
ನಮ್ಮ 69ನೆಯ ಶಾಖೆ
— ಬೊಂಬಾಯಿ ನಗರದಲ್ಲಿ 11ನೆಯ ಶಾಖೆ —
ಬೈಕುಲ್ಲಾ ಶಾಖೆ
28ನೆಯ ಫೆಬ್ರವರಿ, 1959, ಶನಿವಾರ
ವಿಕ್ಟೋರಿಯಾ ಗಾರ್ಡನ್ಸ್ ರೋಡು,
ಬೈಕುಲ್ಲಾ ರೈಲ್ವೆ ಸ್ಟೇಶನ್ ಎದುರು,
ತೆರೆಯಲ್ಪಡುವುದು.
* * * * *
ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪನೆ: 1906)

ನೀರಲ್ಲಿ ಮುಳುಗೇಳುತ್ತಿರುವವನಿಗೆ ನೀವೂ ಅವನೊಡನೆ ಮುಳುಗಿ ಬಿಡುವುದು ಸಹಾನುಭೂತಿ ಎನಿಸಲಾರದು; ನೀವೂ ಮುಳುಗಿ, ಅವನನ್ನು ನೀರಿನಿಂದ ಎತ್ತಿ ಹೊರಗೆ ತರಲು ಪ್ರಯತ್ನಿಸಿದರೆ, ಅದಕ್ಕಿಂತ ಮಹತ್ತಮವಾದ ಸಹಾನುತಾಪವಾಗಲೀ ಸಹಾಯವಾಗಲೀ ಬೇರಿಲ್ಲ

NAVAYUGA
Founder—
A. B. SHETTY,
Former Minister for Public Health
Govt. of Madras & Govt. of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨೬-೨-'೫೯	೨೪

ಎರಡು ವಿಷಯಗಳು

ವಿಶ್ವವಿದ್ಯಾಲಯ ಸಹಾಯಧನಾಯೋಗವು ತನ್ನ ೧೯೫೭-೫೮ರ ಒಂದು ವರ್ಷದ ವರದಿಯನ್ನು ಇದೀಗ ಪ್ರಕಟಿಸಿದೆ. ಈ ವರದಿಯನ್ನು ಅವಲೋಕಿಸುವಾಗ ಮುಖ್ಯವಾಗಿ 'ಶಿಕ್ಷಣ ಮಾಧ್ಯಮ' ಮತ್ತು "ವಿದ್ಯಾರ್ಥಿಗಳಲ್ಲಿ ಶಿಸ್ತು" ನಮ್ಮ ಗಮನವನ್ನೆಳೆಯುತ್ತದೆ. ಮಾಧ್ಯಮಿಕ ಶಿಕ್ಷಣದ ವರೆಗೆ ಮಾತೃಭಾಷೆಯಲ್ಲಿಯೇ ಶಿಕ್ಷಣ ನಡೆಯುತ್ತಿರುವುದು ಎಲ್ಲೆಲ್ಲಿಯೂ ಪ್ರಚಲಿತವಾದ ವಿಷಯ. ಇನ್ನು, ಮುಂದಿನ ವಿಶ್ವವಿದ್ಯಾಲಯದ ಶಿಕ್ಷಣದ ಮಾಧ್ಯಮವು ಯಾವುದಾಗಿರಬೇಕು ಎಂಬುದು ಬೃಹತ್ಸಮಸ್ಯೆಯಾಗಿದೆ. ಬ್ರಿಟಿಷ ಸತ್ತಾಧಿಕಾರಿಗಳ ಆಳಿಕೆಯಲ್ಲಿ ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿದ್ದು, ಆ ಪದ್ಧತಿಯೇ ಇಂದಿಗೂ ಬಹುತೇಕ ಮುಂದುವರಿಯುತ್ತಿದೆ. ಸೌಗರ ವಿಶ್ವವಿದ್ಯಾಲಯವೊಂದು ಮಾತ್ರ ಹಿಂದಿ ಭಾಷೆಯನ್ನು ತನ್ನ ಶಿಕ್ಷಣ ಮಾಧ್ಯಮವನ್ನಾಗಿ ಸ್ವೀಕರಿಸಿದ್ದು, ಉಳಿದವು ಯಾವುದೇ ದೃಢನಿರ್ಧಾರದ ಹೆಜ್ಜೆಯನ್ನಿಟ್ಟಿಲ್ಲ. ಆಗ್ರ, ಅಲ್ಲಹಬಾದ, ಬನಾರಸ್, ಬರೋಡ, ಬಿಹಾರ, ಡಿಲ್ಲಿ, ಲಕ್ನೋ, ನಾಗಪುರ, ಉಸ್ಮಾನಿಯಾ, ರಾಜಸ್ಥಾನ ವಿಶ್ವವಿದ್ಯಾಲಯಗಳು ಮತ್ತು ಸರದಾರ ವಿದ್ಯಾಪೀಠಗಳು ಪದವಿ ಮತ್ತು ಕೆಲವು ಸಂದರ್ಭಗಳಲ್ಲಿ ಸ್ನಾತಕೋತ್ತರ ಅಭ್ಯಾಸದವರೆಗೂ ಹಂತಹಂತವಾಗಿ ಹಿಂದಿಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಲು ನಿಶ್ಚಯಿಸಿವೆ. ೧೯೬೫ರಿಂದ ಪಾಟ್ನ ವಿಶ್ವವಿದ್ಯಾಲಯವು ಭಾಷೇತರ ವಿಷಯಗಳಿಗೆ ಹಿಂದಿಯನ್ನು ಮಾಧ್ಯಮವನ್ನಾಗಿ ಸ್ವೀಕರಿಸುವುದೆಂದು ವಿಶ್ವವಿದ್ಯಾಲಯ ಸಹಾಯಧನಾಯೋಗಕ್ಕೆ ಸೂಚಿಸಿದೆ. ಹಾಗೆಯೇ ಅಹಿಂದೀ ಭಾಷಾ ಪ್ರದೇಶಗಳಲ್ಲಿ ತಮ್ಮ ರಾಜ್ಯದ ಭಾಷೆಯನ್ನೇ ಮಾಧ್ಯಮವನ್ನಾಗಿ ಮಾಡುವ ವಿಚಾರವನ್ನು ಪರ್ಯಾಲೋಚಿಸಲಾಗುತ್ತಿದೆ. ಆದರೂ ಯಾವುದೇ ವಿಶ್ವವಿದ್ಯಾಲಯವು ಇದಮಿತ್ಥಂ ಎಂಬಂತೆ ಇದುವರೆಗೆ ವರ್ತಿಸಿಲ್ಲ.

ಶಿಕ್ಷಣವು ಯಶಸ್ವಿಯಾಗಬೇಕಾದರೆ, ವಿದ್ಯಾರ್ಥಿಗಳ ಮಾತೃಭಾಷೆಯೇ ಬೋಧನಾಭಾಷೆಯಾಗಿರಬೇಕೆಂದು ಪ್ರಾಜ್ಞರು ಅಭಿಪ್ರಾಯ ಪಡುತ್ತಾರೆ. ಆದರೆ, ಮುಖ್ಯವಾಗಿ ಅಭ್ಯಸನೀಯ ಆಧುನಿಕ ವಿಜ್ಞಾನಾದಿ ಶಾಸ್ತ್ರಾಭ್ಯಾಸಕ್ಕೆ ಆಯಾ ಮಾತೃಭಾಷೆಯಲ್ಲಿ ಸಹಾಯಕವಾದ ಉದ್ಗ್ರಂಥಗಳು ಇನ್ನೂ ಉದ್ಭವಿಸದಿರುವುದರಿಂದ ಮತ್ತು ಪ್ರಪ್ರಂಚದ ಭಾಷೆಯಾದ ಆಂಗ್ಲದಲ್ಲಿಯೇ ಇಂತಹ ವೈಜ್ಞಾನಿಕ ಹಾಗೂ ತಾಂತ್ರಿಕಾದಿ ಗ್ರಂಥಗಳಿರುವುದರಿಂದ ನಮಗೆ ಅವನ್ನೂ ಅಭ್ಯಾಸಮಾಡದೆ ಗತ್ಯಂತರವಿಲ್ಲ- ಹಾಗಿರುವಾಗ, ಆಂಗ್ಲ ಭಾಷೆಯೇ ಶಿಕ್ಷಣ ಮಾಧ್ಯಮವಾಗಿ ಏಕೆ ಉಳಿಯಬಾರದು, ಎನ್ನುವವರೂ ಇದ್ದಾರೆ. ಆದರೂ ಶಿಕ್ಷಣವು ಯಶಸ್ವಿಯಾಗಬೇಕಾದರೆ ಮತ್ತು ವಿದ್ಯಾರ್ಥಿಗಳಿಗೆ ಕೊಡಬೇಕಾದ ಶಿಕ್ಷಣವು ಫಲಕಾರಿಯಾಗಬೇಕಾದರೆ, ಶಿಕ್ಷಣ ಮಾಧ್ಯಮವು ಮಾತೃಭಾಷೆಯೇ ಆಗಿರಬೇಕೆಂಬುದು ನಿರ್ವಿವಾದ. ರಾಷ್ಟ್ರೀಯ ಧುರೀಣರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಆದರೆ, ಈ ವಿಷಯದಲ್ಲಿ ಗಡಿಬಿಡಿಯ ಹೆಜ್ಜೆಯನ್ನಿಡುವುದು ಮಾತ್ರ ಸೂಕ್ತವಲ್ಲ. ಎಲ್ಲವನ್ನೂ ಹಂತಹಂತವಾಗಿ ಕಾರ್ಯಾಚರಣೆಗೆ ತರಬೇಕಾದುದು ಮಾತ್ರ ಅವಶ್ಯ. ಇದೇ ಅಭಿಪ್ರಾಯವನ್ನು ಆಯೋಗದ ವರದಿಯೂ ದೃಢಪಡಿಸುತ್ತದೆ. ಆದರೆ, ಒಂದು ಮಾತು ಮಾತ್ರ ಚಿರಸತ್ಯ. ವಿಶ್ವವಿದ್ಯಾಲಯಗಳಲ್ಲಿಯೂ ಶಿಕ್ಷಣ ಮಾಧ್ಯಮವು ಮಾತೃಭಾಷೆಯೇ ಆಗಬೇಕು. ಆದರೆ, ಅದಕ್ಕೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡಬೇಕಾಗಿದೆ.

ದಿನೇ ದಿನೇ ವಿಶ್ವವಿದ್ಯಾಲಯಗಳಲ್ಲಿ ಅಶಾಂತ ವಾತಾವರಣವು ಬೆಳೆಯುತಿದ್ದು, ಇದಕ್ಕೆ ವಿದ್ಯಾರ್ಥಿಗಳಲ್ಲಿ ಅಶಿಸ್ತು ಅಧಿಕವಾಗುತ್ತಿರುವುದೇ ಕಾರಣವಾಗಿದೆ ಎಂದು ಜನಾಭಿಪ್ರಾಯವಿದೆ. ಈ ತರದ ಅಶಿಸ್ತಿನ ಪರಿಣಾಮವಾಗಿ ಕೆಲವೊಮ್ಮೆ ತೀರ ಅನಪೇಕ್ಷಿತ ಮತ್ತು ಅನಿಷ್ಟಕರವಾದ ಪರಿಸ್ಥಿತಿಗಳು ತಲೆದೋರಿವೆ. ಇದರಿಂದ ವಿದ್ಯಾಭ್ಯಾಸದ ಪ್ರಮುಖೋದ್ದೇಶವು ಈಡೇರದೆ ವ್ಯರ್ಥವಾಗಿ ಪರಿಣಮಿಸುವುದು. "ಶಿಕ್ಷಣ ಶುಲ್ಕವನ್ನು ಏರಿಸಿದುದೇ ಮೊದಲಾದ ಕ್ಷುಲ್ಲಕ ವಿಷಯಗಳನ್ನು ಮುಂದಿಟ್ಟು ಅವನ್ನು ವಿರೋಧಿಸಿ ಗುಲ್ಲೆಬ್ಬಿಸುವುದು ವಿದ್ಯಾರ್ಥಿಗಳ ಹೆತ್ತವರಿಗೆ ಅಥವಾ ರಕ್ಷಕರಿಗೆ ಜ್ಞಾತವಾಗಿರುವುದಿಲ್ಲವೆಂಬುದನ್ನು ನಾವು ನಂಬಲಾರೆವು ಎಂದು ವಿಶ್ವವಿದ್ಯಾಲಯದ ಸಹಾಯಧನಾಯೋಗದ ವರದಿಯು ಹೇಳುತ್ತ ಇಂತಹ ವಿದ್ರೋಹದ ಭಾವನೆಯು ವಿದ್ಯಾರ್ಥಿಗಳಲ್ಲಿ ಹುಟ್ಟಲು ಅವರ ಹೆತ್ತವರೂ ರಕ್ಷಕರೂ ಸುತ್ತುಮುತ್ತಲಿನ ಕೆಲವು ದುಷ್ಟ ಶಕ್ತಿಗಳೂ ರಾಜಕೀಯಪಕ್ಷ ಒಳಪಕ್ಷಗಳೇ ಕಾರಣವೆಂದು ಅದು ಅಭಿಪ್ರಾಯಪಡುತ್ತದೆ. ಇದನ್ನು ಎಂದಿಗೂ ಅಲ್ಲಗಳೆಯುವುದು ಸಾಧ್ಯವಿಲ್ಲ. ವಿದ್ಯಾಕ್ಷೇತ್ರವನ್ನು ರಾಜಕೀಯದೊಡನೆ ಪ್ರತ್ಯಕ್ಷವಾಗಿ ಇಲ್ಲವಾದರೂ ಅಪ್ರತ್ಯಕ್ಷವಾಗಿ ಜೋಡಿಸಿದುದರ ದುಷ್ಪರಿಣಾಮವಾಗಿಯೇ ರಾಜಕೀಯದಲ್ಲಿ ಹೆಜ್ಜೆ ಹೆಜ್ಜೆಗೂ ಎದ್ದು ತೋರುವ ಚತುರಂಗದಾಟವೇ ಶಿಕ್ಷಣ ಕ್ಷೇತ್ರದಲ್ಲಿಯೂ ಉದ್ಭವಿಸುತ್ತದೆ. ಶಿಕ್ಷಣ ವಿಭಾಗದಲ್ಲಿ ಸ್ಥಿರತೆ ಹಾಗೂ ಸ್ವಾಯತ್ತತೆ ಅಲ್ಲದೆ ಸ್ವಯಂ ಪ್ರಭುತ್ವವಿದ್ದರೆ, ಆಗ ರಾಜಕಾರಣದ ಇಲ್ಲವೇ ಇತರ ವಿಧಾನದ ದುಷ್ಟಶಕ್ತಿಗಳ ಪ್ರಭಾವವು ಎಂದಿಗೂ ಇದರತ್ತ ಸುಳಿದು ನೋಡಲಾರದು, ಎಂತಲೇ ವಿದ್ಯಾರ್ಥಿಗಳು ಸಂಯಮಿತ ಜೀವನವನ್ನು ಬಾಳಿ, ತನ್ಮೂಲಕ ತಾವು ಅಭ್ಯಸಿಸಿದ ಸಕಲ ವಿಷಯಗಳನ್ನೂ ಅರಗಿಸಿ, ದುಷ್ಟ ಶಕ್ತಿಗಳಿಂದ ದೂರವಿದ್ದು ತಮ್ಮ ಜ್ಞಾನ ಹಾಗೂ ಶಕ್ತಿಯ ಉಪಯೋಗವನ್ನು ರಾಷ್ಟ್ರಕ್ಕೆ ನೀಡುವಂತಾಗಬೇಕಾದರೆ, ರಾಜಕೀಯ ಪಕ್ಷಗಳೂ, ಸರಕಾರವೂ ಇತ್ತಕಡೆಗೆ ತಮ್ಮ ತೀವ್ರಗಮನವನ್ನು ಈ ದುಷ್ಪರಿಣಾಮಗಳತ್ತ ಹರಿಸಿ, ಈ ದುಶ್ಶಕ್ತಿಗಳನ್ನು ನಿಯಂತ್ರಿಸಲು ವಿಶ್ವವಿದ್ಯಾಲಯಗಳೊಡನೆ ಸಹಕರಿಸಬೇಕು ರಾಜಕಾರಣ — ಶಿಕ್ಷಣ ವಿಭಾಗಗಳು ಬೇರೆ ಬೇರೆಯಾಗಿಯೇ ರೂಪುಗೊಳ್ಳಬೇಕು.

ಧ್ರುವ ಸಂಗಮ

ಪ್ರಪಂಚದ "ಹಿರಿಯ ರಾಷ್ಟ್ರ"ಗಳು ಎಂದರೆ ಸೃಷ್ಟಿಕರ್ತನ ನಾಲ್ಕು ಮುಖಗಳಂತೆ. ಈ ನಾಲ್ಕರಲ್ಲಿ ಯಾರಾದರೊಬ್ಬನು ಮೂರನ್ನು ಒಂದು ಬಾರಿ ನೋಡಬಹುದಾದರೂ ನಾಲ್ಕನೆಯದು ದೃಷ್ಟಿಗೋಚರವಾಗುವುದೇ ಇಲ್ಲ ಎಂಬುದು ಅನುಭವವೇದ್ಯವಾದುದು, ಆದರೆ, ಈಗ ಈ ನಿಯಮದಲ್ಲಿ ಕೊಂಚ ಪರಿವರ್ತನೆಯಾಗುವ ಲಕ್ಷಣ ಎದ್ದು ತೋರುತ್ತಿದೆ. ಪ್ರಪಂಚವನ್ನು ಬಿಟ್ಟು ಮಾನವ ಚಂದ್ರಲೋಕ, ಸೂರ್ಯಲೋಕಾದಿಗಳನ್ನು ಸಂದರ್ಶಿಸಲು ಹೊರಡುವ ಉತ್ಸಾಹಭರಿತನಾಗಿರುವಾಗ, ಇದೇನೂ ಆಶ್ಚರ್ಯಕಾರಕವೆಂದು ಹೇಳ ಬರುವುದಿಲ್ಲ. "ಬಂಡವಳಶಾಹಿ" ಬ್ರಿಟಿಷ ಪ್ರಧಾನಿ ಶ್ರೀ ಹೆರಾಲ್ಡ್ ಮ್ಯಾಕ್ ಮಿಲನರು "ಸಾಮ್ಯವಾದಿ" ಸೋವಿಯತ್ ರಶ್ಯದ ಸಂಚಾರಕ್ಕೆ ಹೊರಟು ಪ್ರಧಾನಿ ಶ್ರೀ ನಿಕಿಟು ಕ್ರುಶೇವರನ್ನು ಭೇಟಿಯಾದರು ಎಂಬುದು ಬಿಳಿ ಮತ್ತು ಕರಿ ನಾಯಿಗಳು ಒಂದೆಡೆ ಸೇರಿದಂತೆಯೇ ಎನ್ನಬಹುದು. ಅಥವಾ ಗಂಗಾ ಮತ್ತು ಯಮುನಾ ಪ್ರವಾಹಗಳ ಸಂಗಮವಾದಂತೆ ಎಂದು ಉತ್ಪ್ರೇಕ್ಷಿಸಬಹುದು. ಎಂತಲೇ ಈ ಪ್ರಧಾನಿದ್ವಯರ ಭೇಟಿಯು ಪ್ರಪಂಚದ ದೃಷ್ಟಿಯಿಂದ ಸೂರ್ಯನತ್ತ ರಾಕೆಟ್ ಹಾರಿಸಿದಷ್ಟೇ ಕುತೂಹಲಜನಕವಾಗಿದೆ. ಈ ಸಂದರ್ಶನದಿಂದ ಎರಡು ಮಹಾರಾಷ್ಟ್ರಗಳ ನಡುವೆ ಇರಬಹುದಾದ ಬಿರುಕು, ವೈಮನಸ್ಸು ಮತ್ತು ತಪ್ಪು ತಿಳುವಳಿಕೆಗಳು ದೂರವಾಗಿ, ಇಂದಿಗಿಂತಲೂ ಮಿತ್ರತಮ ರಾಷ್ಟ್ರಗಳಾಗಿ ಅವು ಪರಿಣಮಿಸಿದರೆ, ಅದರಿಂದ ಅವುಗಳಿಗೆ ಮಾತ್ರವಲ್ಲದೇ ಪ್ರಪಂಚದ ಎಲ್ಲ ರಾಷ್ಟ್ರಗಳಿಗೂ ಶುಭಕರ, ಎಂತಲೇ ಎಲ್ಲರ ದೃಷ್ಟಿಯೂ ಈ ಭೇಟಿಯ ಫಲಶ್ರುತಿಯತ್ತ ಕೇಂದ್ರೀಕೃತವಾಗಿದೆ. ಹಾಗೆಯೇ ಇದೇ ರೀತಿಯಲ್ಲಿ ಅಮೆರಿಕೆಯ ಐಸನ್ ಹಾವರರ ಸಂದರ್ಶನದ ವರ್ತಮಾನವೂ ಕಾರ್ಯರೂಪದಲ್ಲಿ ಪರಿಣಾಮ ಹೊಂದಿದರೆ, ಆಗ, ಪ್ರಪಂಚದ ಭವಿಷ್ಯವು ಆಶಾದಾಯಕವಾದೀತೆಂದು ಊಹಿಸಿದರೆ, ತಪ್ಪಾಗಲಾರದು. ವಿಜ್ಞಾನದ ಪರಾಕಾಷ್ಠೆಯ ಅವಧಿಯಲ್ಲಿರುವ ನಮ್ಮ ಕಾಲದಲ್ಲಿ ಇದೂ ಅಸಂಭವವೆನಿಸಲಾರದೆಂದೂ ಅಂತಹ ಸುದಿನವು ತೀರ ಬೇಗನೆ ಬರಲೆಂದೂ ಪ್ರಪಂಚದ ಜನತೆ ನಿರೀಕ್ಷಿಸುತ್ತದೆ

ಸಂಕ್ಷಿಪ್ತ ಸುದ್ದಿಗಳು

ಒಡಿಸಾ ಸರಕಾರಕ್ಕೆ ಸೋಲು

"ಒಡಿಸಾ ನಗರಸಭಾ ಚುನಾವಣೆ ಕ್ರಮಬದ್ಧತಾ ವಿಧೇಯಕ"ವನ್ನು ಮಂಡಿಸಲಿದ್ದ ಒಡಿಸಾ ಸರಕಾರದ ಪ್ರಯತ್ನವು ಮುರಿದು ಹೋಗಿ, ಸರಕಾರವು ಸೋಲನ್ನುಣ್ಣಬೇಕಾಗಿ ಬಂತು. ಕಾಂಗ್ರೆಸ್ ಪಕ್ಷದ ಅನೇಕ ಸದಸ್ಯರು ಮತದಾನ ನಡೆದ ಸಮಯದಲ್ಲಿ ಗೈರುಹಾಜರಿಯಾಗಿದ್ದರೆಂದೂ ತತ್ಪರಿಣಾಮವಾಗಿ ಸೋಲನ್ನು ಅನುಭವಿಸಬೇಕಾಗಿ ಬಂದಿತೆಂದೂ ಮುಖ್ಯ ಮಂತ್ರಿ ಶ್ರೀ ಮೆಹತಾಬರು ಹೇಳಿದ್ದಾರೆ. ಆದರೂ, ಸರಕಾರಿ ವಿಧೇಯಕವು ಬಿದ್ದುಹೋಗಿ ಅದಕ್ಕೆ ಉಂಟಾದ ಸೋಲು ಸರಕಾರೀ ಪಕ್ಷದ ಸೋಲೆಂದೇ ವಿರೋಧೀ ಪಕ್ಷದವರು ತಿಳಿಯುವ ಪಕ್ಷದಲ್ಲಿ ಶ್ರೀ ಮೆಹತಾಬರು ಮಂತ್ರಿಮಂಡಳಿಯ ರಾಜಿನಾಮೆಯನ್ನೀಯಲು ಸಿದ್ಧರಾಗಿರುವರು. ಆದರೆ, ವಿರೋಧೀ ಪಕ್ಷದ ನಿಲುಮೆ ಮಾತ್ರ ತಿಳಿದುಬಂದಿಲ್ಲ.

ಗೃಧ್ರಜಂಬೂಕ ಸಂವಾದ

ಬಗದಾದ ಒಪ್ಪಂದದ ರಾಷ್ಟ್ರತ್ರಯ ಪಾಕಿಸ್ತಾನ, ಪರ್ಷಿಯಾ ಮತ್ತು ತುರ್ಕಿಗಳು ಅಮೆರಿಕೆಯೊಡನೆ ದ್ವಿಪಕ್ಷೀಯ ಸೈನಿಕ ಒಪ್ಪಂದಗಳನ್ನು ಮಾಡಿಕೊಳ್ಳಲಿವೆ. ತಮ್ಮ ಜಾಗ್ರತೆಗಾಗಿ ಮಾತ್ರ ತಾವೀರೀತಿ ಮಾಡುವುದೆಂದೂ ತಮ್ಮ ರಾಷ್ಟ್ರಗಳಲ್ಲಿ ಸೇನಾ ಠಾಣೆಯನ್ನು ಸ್ಥಾಪಿಸಲು ಎಂದಿಗೂ ಅವಕಾಶವನ್ನು ಅಮೆರಿಕೆಗೆ ಕೊಡಲಾಗುವುದಿಲ್ಲವೆಂದೂ ಹೇಳಲಾಗುತ್ತಿದೆ. ಅಮೆರಿಕೆಯೊಡನೆ ಈ ರೀತಿಯ ಒಪ್ಪಂದವನ್ನು ಮಾಡಿಕೊಂಡಲ್ಲಿ ಪರ್ಷಿಯವು ರಶ್ಯದ ವೈರಿಯಾಗುವುದೆಂದೂ, ಆದುದರಿಂದ ಪರ್ಷಿಯಾವನ್ನು ಯಾವಕಾಲದಲ್ಲೂ ಅದು ಆಕ್ರಮಿಸಬಹುದೆಂದು ರಶ್ಯ ಗದರಿಸಿದರೆ, ರಶ್ಯದ ಒರ್ವ ಸೈನಿಕನು ಪರ್ಷಿಯದಲ್ಲಿ ಪಾದಾರ್ಪಣ ಮಾಡಿದರೆ, ತಾನು ಸಹಾಯಕ್ಕೆ ಸೈನ್ಯವನ್ನು ರವಾನಿಸುವೆನೆಂದು ಅಮೆರಿಕೆ ಹೇಳುತ್ತಿದೆ ಅಂತೂ ಈ ಗೃಧ್ರಜಂಬೂಕರಲ್ಲಿ ಕಾಯುವ ಹೊಕ್ಕೆ ಜೀವದಾನವಾಗುವುದೇ ಇಲ್ಲವೇ ನೋಡಬೇಕಾಗಿದೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಇಂದಿರಾಗಾಂಧಿಯವರು ತನ್ನ ಕಾರ್ಯಕಾರಿ ಸಮಿತಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸಿದರು. ಸದ್ಯ ಪ್ರಕಾಶಪಡಿಸಲಾದ ೧೭ ಹೆಸರುಗಳಲ್ಲಿ ಕರ್ನಾಟಕದ ಶ್ರೀ ಎಸ್. ನಿಜಲಿಂಗಪ್ಪನವರೂ ಇರುವರು. ಆದರೆ, ಹಲವಾರು ಕಾಲದಿಂದ ಕಾಯಂ ಸದಸ್ಯರಂತೆ ಇದ್ದ ಪ್ರಧಾನಿ ನೆಹರೂರವರು ಈ ಬಾರಿ ಇರುವುದಿಲ್ಲ. ಅಲ್ಲದೇ ಕರ್ನಾಟಕದ ಪ್ರತಿನಿಧಿಯಾಗಿದ್ದ ಶ್ರೀ ಯು. ಶ್ರೀನಿವಾಸ ಮಲ್ಯರೂ ಇಲ್ಲ. ಪ್ರಧಾನಿ ನೆಹರೂರವರು ಸದಸ್ಯರಲ್ಲದೆ ಹೋದರೂ ಕಾಯಂ ಆಮಂತ್ರಿತರಾಗುವುದರಿಂದ, ಹೆಚ್ಚಿನ ಪರಿವರ್ತನೆಗಳಾವುವೂ ಇಲ್ಲವೆಂದೇ ಹೇಳಬಹುದು. ಸದ್ಯದ ಸಮಿತಿಯಲ್ಲಿ ಐದು ಜನರು ಹೊಸಬರಿದ್ದು, ಇನ್ನು ಮೂರು ಜನರನ್ನು ಸೇರಿಸಿಕೊಳ್ಳಲಿದೆ. ಈಗ ಕಾರ್ಯದರ್ಶಿಗಳಾಗಿರುವ ಶ್ರೀಗಳಾದ ಸಾದಿಕ ಅಲಿ ಮತ್ತು ಶಖ್ಖಮಲ್ ಜೈನ ಹಾಗೂ ಎ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿಯ ಎಂ. ಜಿ. ಎಂ. ಕಾಲೇಜು ವರ್ಧಂತಿಯು ಭಾರತದ ಮಾಜಿ ಸೇನಾನಿ ಜ| ಕೆ. ಎಂ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ತಾ. 23ರಲ್ಲಿ ಆಚರಿಸಲ್ಪಟ್ಟಿತು. ಕುಮಾರಿ ಯಶೋದರಿಂದ ಪ್ರಾರ್ಥನೆಯಾದ ಬಳಿಕ ಕಾಲೇಜು ಕರೆಸ್ಪೋಂಡೆಂಟ್ ಶ್ರೀ ಟಿ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತ ಕಾಲೇಜಿನ ಹಿಂದಿನ ಮತ್ತು ಇಂದಿನ ಸ್ಥಿತಿಯನ್ನು ವಿವರಿಸಿ ಮುಂದಿನ ಅಭಿವೃದ್ಧಿ ಯೋಜನೆಯನ್ನು ವಿಶದಗೊಳಿಸಿದರು. ಮಿಸ್ ಯು. ಎನ್. ಶಾಲಿನಿಯವರು ಸಂದೇಶಗಳನ್ನು ಓದಿದರು. ಶ್ರೀ ಎಂ. ಅಮೀರ್ ಮಹಮದರು, ಅವರು ಸ್ವಸ್ತಿವಾಚನ ಮಾಡಿದರು. ಶ್ರೀ ಶ್ರೀಶ ಬಲ್ಲಾಳರು ಉತ್ತರಿಸಿದರು.

ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಕಾಲೇಜ್ ವರದಿಯನ್ನೋದಿದ ಬಳಿಕ ಶ್ರೀ ಕಾರ್ಯಪ್ಪನವರು ಸ್ಪರ್ಧೆಗಳಲ್ಲಿ ಜಯಶೀಲರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆ ಮಾಡಿದರು.

ಅಮೆರಿಕದ ಪ್ಲಿಸ್ನರ್ ದಂಪತಿಗಳು ಸಭೆಗೆ ಆಗಮಿಸಿದ್ದರು. ಶ್ರೀ ಪ್ಲಿಸ್ನರರು ಅಮೆರಿಕದ ಜನತೆಯು ಭಾರತದ ಜನತೆಯೊಂದಿಗೆ ಭ್ರಾತೃಭಾವದಿಂದಿರಲು ಹಾರ್ದಿಕವಾಗಿ ಅಪೇಕ್ಷಿಸುವುದೆಂದು ತಮ್ಮ ಭಾಷಣದಲ್ಲಿ ಹೇಳಿದರು; ಮತ್ತು ಭಾರತದ ಬೇರೆಬೇರೆ ಅಭಿವೃದ್ಧಿ ಹೊಂದದ ಭಾಗಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳು ನಡೆಯುವುದನ್ನು ಅಭಿನಂದಿಸಿದರು.

ಬಳಿಕ ಶ್ರೀ ಕಾರ್ಯಪ್ಪನವರು ಭಾರತದ ಮುಂದಿನ ಜನಾಂಗವನ್ನು ಪ್ರಪಂಚಕ್ಕೆ ಆದರ್ಶಪ್ರಾಯವಾಗಿ ನಿರ್ಮಿಸಲು ವಿದ್ಯಾರ್ಥಿಗಳಿಗೆ ಕರೆಯಿತ್ತರು. ಪ್ರಾಚೀನ ಕಾಲದಿಂದಲೂ ನಾವು ರಕ್ಷಿಸಿಕೊಂಡು ಬಂದ ನೈತಿಕ ಮಟ್ಟವನ್ನು ಪಾಲಿಸಿಕೊಂಡು ಬರಬೇಕಾದುದು ನಮ್ಮ ಕರ್ತವ್ಯ. ನೈತಿಕ ವಿಚಾರಗಳಲ್ಲಿ ಹೀನವಾದ ರಾಷ್ಟ್ರವು ಬೇರಾವ ವಿಧದಲ್ಲಿ ಉನ್ನತಿ ಹೊಂದಿದರೂ ವಿಶಾಲ ಜೀವನದ ಸರ್ವತೋಮುಖ ದೃಷ್ಟಿಯಲ್ಲಿ ದೋಷಪೂರ್ಣವೇ ಆಗಿದೆ. ಮತ್ತು ವಿದ್ಯಾರ್ಜನೆಯೊಂದಿಗೆ ವಿದ್ಯಾರ್ಥಿಗಳು ವ್ಯಾಯಾಮಕ್ಕೆ ಪ್ರಧಾನತೆಯನ್ನಿತ್ತು ದೈಹಿಕ ಹಾಗೂ ಮಾನಸಿಕ ಉನ್ನತಿಯನ್ನು ಹೊಂದಬೇಕು. ಇಂದು ನಾವು ಎಲ್ಲಾ ವಿಧದ ಸಂಕುಚಿತ ಭಾವನೆಗಳನ್ನು ಬದಿಗೊತ್ತಿ ಪ್ರಪಂಚ ಮಾನವರಾಗಬೇಕು ಎಂದು ಅವರು ಹೇಳಿದರು. ಬಳಿಕ ಪ್ರೊ. ಕು. ಶಿ. ಹರಿದಾಸ ಭಟ್ಟರು ಧನ್ಯವಾದವಿತ್ತರು ಕಡೆಯ ಅಂಗವಾಗಿ ಅಧ್ಯಾಪಕರಿಂದಲೂ ವಿದ್ಯಾರ್ಥಿಗಳಿಂದಲೂ ನಾಟಕಾದಿ ಮನರಂಜನೆ ಕಾರ್ಯಕ್ರಮಗಳಾದುವು.

ಎಸ್ ರಾಜಾರವರು ತಮ್ಮ ಹುದ್ದೆಯಲ್ಲಿಯೇ ಮುಂದುವರಿಯುವ ನಿರೀಕ್ಷೆಯಿರುವುದಲ್ಲದೆ, ಅವರೊಡನೆ ಸ್ತ್ರೀ ಕಾರ್ಯದರ್ಶಿನಿಯೊರ್ವಳನ್ನೂ ನೇಮಿಸುವ ಸಂಭವವಿದೆ ಈ ಪದವಿಗೆ ಶ್ರೀಮತಿ ಸುಜೇತಾ ಕೃಪಲಾನಿಯವರು ಬರುವುದು ಸಂಭವನೀಯ.

ಸಂಗೊಳ್ಳಿ ರಾಯಣ್ಣ

ಸುಮಾರು ೧೩೦ ವರ್ಷಗಳ ಪೂರ್ವದಲ್ಲಿ ಬ್ರಿಟಿಷ ಆಡಳಿತೆಗೆ ವಿರೋಧವಾಗಿ ಹೋರಾಡಿದ ನೇತಾರ ಸಂಗೊಳ್ಳಿ ರಾಯಣ್ಣನ ಪೂರ್ಣ ಪ್ರತಿಮೆಯನ್ನು ಮೈಸೂರು ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಬೆಳಗಾವಿಯಲ್ಲಿ ಅನಾವರಣ ಮಾಡಿದರು. ಕಿತ್ತೂರು ಸಂಸ್ಥಾನವನ್ನು ಬ್ರಿಟಿಷರು ತಮ್ಮ ಕೈವಶಮಾಡಿಕೊಳ್ಳಲು ಅದನ್ನು ಅವರಿಂದ ಮರಳಿ ಪಡೆದು, ಕಿತ್ತೂರನ್ನು ಸ್ವತಂತ್ರವನ್ನಾಗಿಸಲು ತನ್ನ ಕೆಲವೇ ಸಹಾಯಕರ ನೆರವಿನಿಂದ ಧೀರತನದಿಂದ ಹೋರಾಡಿದ ಸಂಗೊಳ್ಳಿ ರಾಯಣ್ಣನನ್ನು ಸ್ಮರಿಸುವುದು ಅಗತ್ಯವೆಂದು ಅವರು ಹೇಳಿದರು. ಕಿತ್ತೂರನ್ನು ಸ್ವಾಧೀನಪಡಿಸಲು ರಣಕಹಳೆಯೂದಿದ ಇವನನ್ನು ಬ್ರಿಟಿಷರು ೧೨ ಅನುಯಾಯಿಗಳೊಡನೆ ಹಿಡಿದು, ಫಾಸಿ ಶಿಕ್ಷೆಗೆ ಗುರಿಮಾಡಿದರೆಂದು ಶ್ರೀ ಜಿ. ಎಸ್. ಬೀಲಾಪಡಿಯವರು ಹೇಳಿದರು.

ಎಂ. ಜಿ. ಯಂ. ಕಾಲೇಜು ಯೂನಿಯನ್ ಡೇ-ಯು ತಾ. 22ರಲ್ಲಿ ಪ್ರೊ| ವಿ. ಎಂ. ಇನಾಂದಾರರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು.

ಯೂನಿಯನ್ ಪ್ರೆಸಿಡೆಂಟ್ ಶ್ರೀ ಶಂಕರ ಶೆಟ್ಟರು ಸ್ವಾಗತ ಭಾಷಣಮಾಡಿದರು. ಕಾಲೇಜಿನ ವಿವಿಧ ಸಂಘಗಳ ಕಾರ್ಯದರ್ಶಿಗಳು ತಮ್ಮ ವರ್ಷಾವಧಿಯ ವರದಿವಾಚನ ಮಾಡಿದರು ಶ್ರೀ ಎಂ. ಜಿ. ಪರಶುರಾಮ II B Sc ಇವರು ತಮ್ಮ ಹಿರಿಯ ಸಹಪಾಠಿಗಳನ್ನುದ್ದೇಶಿಸಿ ಸ್ವಸ್ತಿವಾಚನ ಮಾಡಿದರು. ಅದನ್ನುತ್ತರಿಸುತ್ತಾ ಶ್ರೀ ಎನ್ ತಿರುಮಲೇಶ್ವರ ಭಟ್ಟ IV B. A., ಕಿರಿಯ ವಿದ್ಯಾರ್ಥಿಗಳ ಮುಂದಿನ ಶ್ರೇಯೋಭಿವೃದ್ಧಿಯನ್ನು ಕೋರಿದರು.

ಪ್ರೊ| ಇನಾಂದಾರರು ಸಾಹಿತ್ಯದ ಮೌಲ್ಯಗಳು ಎಂಬ ಕುರಿತು ವಿಚಾರಪ್ರಚೋದಕ ಭಾಷಣಮಾಡುತ್ತ ಜಾಗತಿಕ ಸಾಹಿತ್ಯದ ಸಿಂಹಾವಲೋಕನದೊಂದಿಗೆ, ಹಿಂದಿನ ಸಾಹಿತ್ಯ ಪರಂಪರೆಯು ವರ್ತಮಾನ ಹಾಗೂ ಭವಿಷ್ಯದ ಸಾಹಿತ್ಯ ಸೃಷ್ಟಿಗೆ ಎಷ್ಟರಮಟ್ಟಿಗೆ ಕಾರಣವೆಂದು ವಿವರಿಸಿದರು

ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಇನಾಂದಾರರವರ ವಿಚಾರಗಳನ್ನು ಸಮರ್ಥಿಸಿ ಮುಂದಿನ ಜನಾಂಗವು ಆದರ್ಶ ಮಾನವತೆಯ ನಿರ್ಮಾಣಕ್ಕಾಗಿ ಸಾಹಿತ್ಯ ಕ್ಷೇತ್ರದಲ್ಲಿ ತರಬೇಕಾದ ಅಭಿವೃದ್ಧಿಗಳ ಕಡೆ ಸಂಕೇತಮಾಡಿದರು ಯೂನಿಯನ್ ಸೆಕ್ರೆಟರಿ ಶ್ರೀ ದಾಮೋದರ ಹೆಗ್ಡೆಯವರು ಧನ್ಯವಾದ ಸಮರ್ಪಣೆ ಮಾಡಿದರು.

ರಾತ್ರಿ ಎಂ ಜಿ ಯಂ ನಾಟಕರಂಗದಲ್ಲಿ ಜಂಬದ ಜಾನಕಿ ನಾಟಕವು ಹುಡುಗಿಯರಿಂದಲೂ 'ಮಾಂಗಲ್ಯ ಭಾಗ್ಯ' ನಾಟಕವು ಹುಡುಗರಿಂದಲೂ ಆಡಿತೋರಿಸಲ್ಪಟ್ಟುವು.

ತಾ. 15ರಲ್ಲಿ ಕಾಲೇಜಿನ ವಾರ್ಷಿಕ ಪಂದ್ಯಾಟ ಸ್ಪರ್ಧೆಗಳು ಜರಗಿ ಬಹುಮಾನ ವಿತರಣಾ ಸಮಾರಂಭವು ಮೈಸೂರು ಡಿವಿಜನಲ್ ಕಮಿಶನರ್ ಶ್ರೀ ಶಾಸಿ ದಾಶರಥರವರ ಅಧ್ಯಕ್ಷತೆಯಲ್ಲಿ ನೆರವೇರಿತು

ಕರ್ನಾಟಕ ಹಾಯಸ್ಕೂಲಿನ ಚಟುವಟಿಕೆ—ಬೊಂಬಾಯಿಯ ಕರ್ನಾಟಕ ಹೈಸ್ಕೂಲಿನ ಎತ್ಲೆಟಿಕ್ ಪಂದ್ಯಾಟವು ತಾ. 22ರಂದು ಬ್ರೆಬೋರ್ನ ಸ್ಟೇಡಿಯಂ ಸಿ. ಸಿ. ಐ. ಇಲ್ಲಿ ವಿಜೃಂಭಣೆಯಿಂದ ನೆರವೇರಿತು ನಗರದ ಪ್ರಮುಖ ರಾತ್ರಿ ಶಾಲೆಯ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು

ಶ್ರೀ ಐರೋಡಿ ರಾಮದಾಸ ಪೈಗಳ ನಿಧನಕ್ಕಾಗಿ ದುಃಖ ಸೂಚನೆ—ಉಡುಪಿಯ ನಿಷ್ಠಾವಂತ ಕಾಂಗ್ರೆಸಿಗರಲ್ಲೊಬ್ಬರೂ ಸತ್ಯಾಗ್ರಹ ಚಳವಳದಲ್ಲಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದವರೂ ಅಚಲ ದೇಶಭಕ್ತರೂ ಆಗಿದ್ದ ಶ್ರೀ ಐರೋಡಿ ರಾಮದಾಸ ಪೈಗಳು ತಾ. 20ರಲ್ಲು ಅಕಾಲ ಮೃತ್ಯುವಿಗೆ ತುತ್ತಾದುದರಿಂದ ತಾ. 22ರಲ್ಲಿ ತಾಲೂಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ದುಃಖ ಸೂಚಕ ಸಭೆಯು ಜರಗಿತು. ಶ್ರೀಗಳಾದ ಎ ಜಿ. ಆಲ್ಸೆ, ರಾಘುವೇಂದ್ರ ಭಟ್, ಪಿ. ಶೀನ ಶೆಟ್ಟಿ ಮೊದಲಾದವರು ಮೃತರ ದೇಶಭಕ್ತಿಯನ್ನು ಕೊಂಡಾಡಿದರು ಅಧ್ಯಕ್ಷರ ಭಾಷಣವಾದ ಮೇಲೆ ದುಃಖಸೂಚಕ ನಿರ್ಣಯವಾಯಿತು.

ಉಜಿರೆ ಕೆ. ಪಿ. ಹಾಸ್ಕೂಲಿನ ವರ್ಧಂತಿ—ಸಮಾರಂಭವು ತಾ. 22ರಲ್ಲು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸ್ವಾಗತ, ಮತ್ತು ಅಧ್ಯಕ್ಷರ ಪರಿಚಯವಾದ ಮೇಲೆ ಹೆಡ್ಮಾಸ್ತರ್ ಶ್ರೀ ಭಿಡೆಯವರು ಶಾಲೆಯ ಪ್ರಗತಿಪರವಾದ ವರದಿಯನ್ನೋದಿದರು. ಅನಂತರ ಅಧ್ಯಕ್ಷರು ಬಹುಮಾನ ವಿತರಣೆಮಾಡಿ ಹಳ್ಳಿಗಲಯದಲ್ಲಿ ಉತ್ತಮ ರೀತಿಯಲ್ಲಿ ನಡೆಯುತ್ತಿರುವ ಈ ಹಾಸ್ಕೂಲಿನ ಉನ್ನತಿಗಾಗಿ ತನ್ನ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಇರುವ ಕುಂದುಕೊರತೆ, ಆಗಬೇಕಾದ ಸುಧಾರಣೆಗಳ ಕುರಿತು ವಿಚಾರಪ್ರಚೋದಕ ಭಾಷಣಮಾಡಿದರು ಬಳಿಕ ನಾಟಕಾದಿ ವಿವಿಧ ವಿನೋದಾವಳಿಗಳು ಯಶಸ್ವಿಯಾಗಿ ಜರಗಿದವು.

ಶ್ರೀ ಟಿ. ಎ. ಪೈಗಳು ಉಜಿರೆಗೆ ಹೋಗುವ ಪೂರ್ವದಲ್ಲಿ ನಾವೂರಿಗೆ ತೆರಳಿ ಬಂಜರಾಗಿದ್ದ ನಾವೂರು ಎಸ್ಟೇಟಿನಲ್ಲಿ ಶ್ರೀ ಬಿ. ನಾರಾಯಣ ಶೇಕರು ಮಾಡಿರುವ ನೀರಾವರಿ ಯೋಜನೆ ಕೃಷಿ ಕ್ಷೇತ್ರ ಮೊದಲಾದುವನ್ನು ಕಂಡು ತುಂಬಾ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು

ಉಡುಪಿ ಲಾ ಕಾಲೇಜಿನಲ್ಲಿ ಡಾ| ಪೈಗಳ ಭಾವಚಿತ್ರ ಅನಾವರಣ—ತಾ. 24ನೇ ಬೆಳಿಗ್ಗೆ ಎಕೆಡೆಮಿಯ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಗಳ ಭಾವಚಿತ್ರವನ್ನು ಜನರಲ್ ಕೆ. ಎಂ. ಕಾರ್ಯಪ್ಪನವರು ಅನಾವರಣ ಮಾಡುತ್ತಾ ದೇಶದ ಇಂದಿನ ಹಲವಾರು ಸಮಸ್ಯೆಗಳನ್ನೂ, ಶಿಸ್ತು, ಪ್ರಾಮಾಣಿಕತೆ ಪರಸ್ಪರ ಸೌಹಾರ್ದಭಾವ ಮೊದಲಾದ ಸದ್ಗುಣಗಳ ಪ್ರಾಮುಖ್ಯತೆಯನ್ನೂ ವಿವರಿಸಿ ವಿಚಾರಪರಿಪ್ಲುತ ಭಾಷಣಮಾಡಿ ಡಾ| ಪೈಗಳು ಮಾಡಿರುವ ಕೆಲಸಗಳನ್ನು ಕೊಂಡಾಡಿದರು ಆರಂಭದಲ್ಲಿ ಪ್ರಿನ್ಸಿಪಾಲ್ ಶ್ರೀ ಬಿ. ಎಲ್. ಎನ್. ರೈಗಳು ಸ್ವಾಗತ ಭಾಷಣ ಮಾಡಿದರು ಸಮಾರಂಭದ ಅಧ್ಯಕ್ಷತೆಯನ್ನು ವಕೀಲ್ ಪಿ. ಪದ್ಮನಾಭರಾಯರು ವಹಿಸಿದ್ದರು. ಶ್ರೀ ಎನ್. ವಿ. ಕಾಮತರು ಧನ್ಯವಾದಗಳನ್ನರ್ಪಿಸಿದರು

ಹೈಸ್ಕೂಲ್ ವರ್ಧಂತಿ—ಕಟಪಾಡಿಯ ಯಸ್. ವಿ. ಯಸ್. ಹೈಸ್ಕೂಲಿನ ವರ್ಧಂತಿಯು ತಾ. 20ರಲ್ಲಿ ಶ್ರೀ ಎಸ್. ಮುಕುಂದರಾವ್, ಎಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಸಚ್ಚಿದಾನಂದ ಹೆಗ್ಡೆಯವರಿಂದ ಸ್ವಸ್ತಿ ವಾಚನವಾದ ಮೇಲೆ ಹೆಡ್ಮಾಸ್ತರ್ ಶ್ರೀ ಪಿ. ರಾಮದಾಸ ನಾಯಕರು ವರದಿಯನ್ನೋದಿದರು ಅಧ್ಯಕ್ಷರು ವಿದ್ಯಾಕ್ಷೇತ್ರದಲ್ಲಿ ಆಗಿರುವ ಮಾರ್ಪಾಟು, ರಕ್ಷಕರ ಜವಾಬ್ದಾರಿ ಮೊದಲಾದುವುಗಳ ಕುರಿತು ಭಾಷಣವಿತ್ತರು ಬಹುಮಾನವಿತರಣೆಯಾದ ಮೇಲೆ ಶ್ರೀ ಕೆ. ಆರ್. ಶೆಣೈಯವರು ಆಭಾರ ಸೂಚಿಸಿದರು ಕೊನೆಗೆ ನಾಟಕಾದಿ ಮನರಂಜನೆಯ ಕಾರ್ಯಕ್ರಮಗಳಾದುವು

ಕನ್ನಡ ಸಂಘದ ವಾರ್ಷಿಕೋತ್ಸವ ಮುಂಬಯಿ ಮಾತುಂಗದಲ್ಲಿನ ರೂಪರೆಲ್ ಕಾಲೇಜ್ ಕನ್ನಡ ಸಂಘದ 6ನೇ ವಾರ್ಷಿಕೋತ್ಸವವು ದಿನಾಂಕ 8—2—1959ರಲ್ಲಿ ಶಿವಾಜಿ ಪಾರ್ಕ್ ಭಾರತ ಸ್ಕೌಟ್ ಹೋಲ್‌ನಲ್ಲಿ ಬಲು ವಿಜೃಂಭಣೆಯಿಂದ ಜರಗಿತು ಶ್ರೀ ಎಂ. ವಿ. ಕಾಮತರವರು ಅಂದಿನ ಮುಖ್ಯ ಅತಿಥಿಗಳಾಗಿದ್ದರು ಪ್ರಾಧ್ಯಾಪಕ ಚಿದಂಬರ ದೀಕ್ಷಿತರು ಸ್ವಾಗತ ಭಾಷಣ ಮಾಡಿದಬಳಿಕ ಸಂಘದ ಕಾರ್ಯದರ್ಶಿ ಶ್ರೀಯುತ ಜಗನ್ನಾಥ ಶೆಟ್ಟರು ವಾರ್ಷಿಕ ವರದಿಯನ್ನು ಓದಿದರು ಬಹುಮಾನ ವಿತರಣೆ ಯಾದನಂತರ ಶ್ರೀಯುತ ಕಾಮತರು, ಭಾಷಾವಾರು ಪ್ರಾಂತ್ಯಗಳ ನಿರ್ಮಾಣದಿಂದಾಗಿ ಉಂಟಾದ ಯಾವತ್ತೂ ಬಿಕ್ಕಟ್ಟಿಗೆ ವಿದ್ಯಾರ್ಥಿಗಳು ಹೆಚ್ಚಿನ ಗಮನ ಹಾಗೂ ಮಹತ್ವವನ್ನ ಕೊಡದೆ ಭಾರತ ಎತ್ತ ಸಾಗಿದರೂ ಭಾರತೀಯರೆಂಬ ಭಾವನೆಯಿಂದ ದುಡಿಯುವುದು ಅಗತ್ಯವೆಂದು ಉಪದೇಶ ಕೊಟ್ಟರು.

ಮೂಲ್ಕಿಯಲ್ಲಿ ವಿಚಾರ ಗೋಷ್ಠಿ—ಇದೇ ತಾ. 15ರಂದು ಮಂಗಳೂರಿನ ಸೋಶಿಯಲ್ ಸ್ಟಡಿ ಸರ್ಕಲಿನ ಸದಸ್ಯರು ಮತ್ತು ಸ್ಯೆಂಟ್ ಆಗ್ನೇಸ್ ಕೊನ್ವೆಂಟ್ ಮಂಗಳೂರು ಇವರ ಸಮಾಜ ಅಧ್ಯಯನ ಶಿಕ್ಷಣ ಕೇಂದ್ರದ ವಿದ್ಯಾರ್ಥಿನಿಯರು ಮೂಲ್ಕಿಯ ಕಾರ್ನಾಡ್ ಸದಾಶಿವರಾವ್ ಸ್ಮಾರಕ ಸೇವಾಶ್ರಮವನ್ನು ಸಂದರ್ಶಿಸಿ ಹಳ್ಳಿಯ ಸಮಸ್ಯೆ, ಶಿಕ್ಷಿತ ತರುಣರ ನಿರುದ್ಯೋಗ ಎಂಬುದರ ಕುರಿತು ವಿಚಾರ ಗೋಷ್ಠಿಯನ್ನು ನಡೆಸಿದರು ಈ ವಿಚಾರ ಸಂಕೀರ್ಣವನ್ನು ಮೂಲ್ಕಿ ಗವರ್ನ್‌ಮೆಂಟ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ವಿಠಲ ಶೆಣೈಯವರು ಉದ್ಘಾಟಿಸಿದರು. ಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ ಮ. ರಾಜೀವ ಇವರು ವಹಿಸಿದ್ದರು. ಚರ್ಚೆಯಲ್ಲಿ ಹಲವರು ಭಾಗವಹಿಸಿದರು.

ಅಪರಾಹ್ನ ಸಾರ್ವಜನಿಕ ಸಭೆಯು ಮಿಸ್ ಫ್ರಾನ್ಸಿಸ್ ಮೇರಿಯಾ ಯೂನಸ್, ಡೈರೆಕ್ಟರ್ ಸೋಶಿಯಲ್ ಸರ್ವಿಸ್ ಇನ್ಸ್ಟಿಟ್ಯೂಟ್ ಬೆಂದೂರು ಇವರ ಅಧ್ಯಕ್ಷತೆಯಲ್ಲಿ ಜರಗಿತು ಸೇವಾಶ್ರಮದ ಕಾರ್ಯದರ್ಶಿ ಡಾ ಸಂಜೀವನಾಥರು ಸ್ವಾಗತ ಭಾಷಣ ಮಾಡಿ ವಿಚಾರ ಗೋಷ್ಠಿಯ ಉದ್ದೇಶಾದಿಗಳನ್ನು ವಿವರಿಸಿದರು. ಮ. ರಾಜೀವನವರು ಭಾಷಣವಿತ್ತ ಮೇಲೆ ವಿವಿಧ ವಿನೋದಾವಳಿಗಳು ನೆರವೇರಿದುವು.

ಅರೂರಲ್ಲಿ ಶಂಕು ಸ್ಥಾಪನೆ—ಅರೂರು ಹೊಳೆಅಣೆಕಟ್ಟು ಹಾಕಿ ಉಪ್ಪು ನೀರನ್ನು ಪ್ರತ್ಯೇಕಿಸಿ ಸಿಹಿನೀರನ್ನೊದಗಿಸುವ ನೀರಾವರಿ ಯೋಜನೆಯ ಅಸ್ತಿವಾರ ಸಮಾರಂಭವು ತಾ. 18ರಲ್ಲಿ ಶ್ರೀ ಯು. ಎಸ್. ನಾಯಕ್, ಎಂ. ಎಲ್. ಎ. ಇವರಿಂದ ನೆರವೇರಿಸಲ್ಪಟ್ಟಿತು. ಸುಪರಿಂಟೆಂಡ್ ಇಂಜಿನಿಯರ್ ಶ್ರೀ ಎ ಎಸ್. ಅಚ್ಚೆಯವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಎಕೆಡೆಮಿಯ ವಿಶಿಷ್ಟ ಪದವಿದಾನ ಸಮಾರಂಭ—ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿಗೆ ಸುಮಾರು 10 ಟನ್ ಲೈಬ್ರರಿ ಪುಸ್ತಕಗಳನ್ನು ಅಮೇರಿಕದಿಂದ ಸಂಗ್ರಹಿಸಿ ಕಳುಹಿಸಿದ ಶ್ರೀ ಹೇರಿ ಪ್ಲಿಸ್ನರ್, ನಿಯೂಮ್ರ, U S A ಇವರಿಗೆ ಎಕೆಡೆಮಿಯ ಗೌರವ 'ಫೆಲೋ' ಪದವಿ'ಯನ್ನು ಕೊಡುವ ಸಮಾರಂಭವು ತಾ. 24ನೇ ಸಂಜೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾಭವನದಲ್ಲಿ ವೈಭವಪೂರ್ಣವಾಗಿ ನೆರವೇರಿತು ಉಪಾಹಾರವಾದ ಬಳಿಕ ಸುಪ್ರೀಮ್ ಗವರ್ನಿಂಗ್ ಬೋರ್ಡಿಯ ಸದಸ್ಯರು ಗೌರವಪೂರ್ಣ ಉಡುಗೆ ತೊಡಿಗೆಗಳಿಂದ ಪ್ಲಿಸ್ನರ್ ದಂಪತಿಗಳೊಂದಿಗೆ ಬಿರುದಾವಳಿಯ ಮೆರವಣಿಗೆ ಹೊರಟು ಸಭಾಭವನಕ್ಕೆ ಆಗಮಿಸಿದರು ರಿಜಿಸ್ಟ್ರಾರ್ ಡಾ| ಟಿ. ಎಮ್. ಎ. ಪೈಗಳು ಸ್ವಾಗತಿಸುತ್ತ ಎಕೆಡೆಮಿಯ ಸೂಕ್ಷ್ಮ ಪರಿಚಯ ಮಾಡಿ ಈ ಗೌರವದಿಂದ ಎರಡು ರಾಷ್ಟ್ರಗಳೊಳಗಿನ ಬಾಂಧವ್ಯವು ಬೆಳೆಯುವಂತಾಗಲೆಂದು ಹಾರೈಸಿದರು. ಎಕೆಡೆಮಿಯ ಅಧ್ಯಕ್ಷ ಶ್ರೀ ವಿ. ಎಸ್. ಕುಡುವರು ಪ್ಲಿಸ್ನರರಿಗೆ ಫೆಲೋ ಪದವಿಯನ್ನು ಅರ್ಪಿಸಿದರು ಶ್ರೀ ಟಿ. ರಮೇಶ ಪೈಗಳು ಶಿವಳ್ಳಿ ಪಂಚಾಯತಿನ ಕಡೆಯಿಂದ ಪ್ಲಿಸ್ನರ್ ದಂಪತಿಗಳಿಗೆ ಮಾನಪತ್ರವನ್ನು ಅರ್ಪಿಸಿದರು. ಹೆರಿ ಪ್ಲಿಸ್ನರರು ತಮ್ಮನ್ನು ಅಭೂತ ಪೂರ್ವ ರೀತಿಯಲ್ಲಿ ಗೌರವಿಸಿದ ಬಗ್ಗೆ ಕೃತಜ್ಞತೆಯನ್ನು ಅರ್ಪಿಸಿ ಎಕೆಡೆಮಿಯ ಮುಖ್ಯವಾಗಿ ಡಾ| ಪೈಗಳ ಕಾರ್ಯದಕ್ಷತೆಯನ್ನು ಪ್ರಸ್ತಾಪಿಸಿ ತಾನೂ ಭಾರತೀಯನಾಗಬೇಕಿತ್ತೆಂಬ ಆಶೆಯ ವ್ಯಕ್ತಿ ಪಡಿಸಿದರು ಉಪಾಧ್ಯಕ್ಷ ಶ್ರೀ ಕೆ. ಪಿ. ಮುಕುಂದ ಪ್ರಭುಗಳು ಧನ್ಯವಾದಗಳನ್ನರ್ಪಿಸಿದ ಮೇಲೆ ಎಕೆಡೆಮಿ ಸಂಗೀತ ಮತ್ತು ಲಲಿತಕಲೆಗಳ ಶಾಲೆಗಳ ವಿದ್ಯಾರ್ಥಿ ಮತ್ತು ಅಧ್ಯಾಪಕ ವೃಂದದವರಿಂದ ಸಂಗೀತ ನರ್ತನಾದಿ ಮನರಂಜನಾ ಕಾರ್ಯಕ್ರಮಗಳು ನೆರವೇರಿದುವು ಅನಂತರ ಪ್ಲಿಸ್ನರ್ ದಂಪತಿಗಳು ಉಡುಪಿಗೆ ಆಗಮಿಸಿ ಉಡುಪಿ ನಗರಸಭೆಯ ಮಾನಪತ್ರವನ್ನು ಸ್ವೀಕರಿಸಿದರು.

ಅತ್ಯುತ್ತಮ ಮೆಡಿಕಲ್ ಕಾಲೇಜುಗಳಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜು ಒಂದಾಗಿದೆ—ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಾರ್ಷಿಕೋತ್ಸವವು ತಾ. 19ರಲ್ಲಿ ಬೊಂಬಾಯಿಯ ಡಾ| ಎ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿದಾಗ ಕಾಲೇಜಿನ ಕ್ಷಿಪ್ರ ಪ್ರಗತಿಯನ್ನು ಅವರು ಕೊಂಡಾಡಿದ್ದಲ್ಲದೆ ಈ ಕಾಲೇಜು ತಾನು ನೋಡಿದ ಉತ್ತಮ ಮೆಡಿಕಲ್ ಕಾಲೇಜುಗಳಲ್ಲಿ ಒಂದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ಮೆಡಿಕಲ್ ವಿದ್ಯಾರ್ಥಿಗಳಿಗೆ ಹಲವು ಹಿತೋಪದೇಶಗಳನ್ನು ಕೊಟ್ಟರು.

ಶಾಲಾ ದಿನಾಚರಣೆ—ಕಲ್ಯಾಣಪುರದ ಮೊಡೆರ್ನ್ ಸ್ಕೂಲ್ ಆಫ್ ಕೋಮರ್ಸಿನ ಶಾಲಾ ದಿನಾಚರಣೆಯು ತಾ. 15ರಂದು ಕಲ್ಯಾಣಪುರದ ಹುಡುಗಿಯರ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ಸ.)

ಕಥಾ ಕೌಮುದಿ—(ಕಥಾ ಸಂಕಲನ)

ಲೇಖಕರು ಎಸ್. ಗೋಪೀನಾಥ ರಾವ್ ಪ್ರಕಾಶಕರು ನವಯುಗ ಎಂಟರ್ ಪ್ರೈಸ್, ಉಡುಪಿ. ಪುಟಗಳು: ೩೨ ಬೆಲೆ ರೂ ೧ ೫೦

ಚಿಕ್ಕ ಕತೆಗಳ ಸಂಖ್ಯೆ ನಮ್ಮ ಸಾಹಿತ್ಯದಲ್ಲಿ ಈಗ ಬಹು ಬೆಳೆಯುತ್ತಿದೆ. ಅವು ಬಲು ಬಳೆವರೂ, ಅದರಲ್ಲಿ, ಬೆಲೆಬಾಳುವ ಕೃತಿಗಳು ಮಾತ್ರ ಅಳಿವನ್ನು ಕಾಣಲಾರವು ಚಿಕ್ಕ ಕತೆಗಳು ಓದುಗರನ್ನು ಉತ್ತೇಜಿಸುವಂತಿರಬೇಕು. ಕತೆಯ ಕೊನೆಯನ್ನು ಭಾವನಾತ್ಮಕವಾಗಿ ಮಾಡಿ ವಾಚಕರ ಮನಸ್ಸಿನಲ್ಲಿ ಆ ಘಟನೆ ಮಾಸಿಹೋಗದಂತೆ ಮಾಡಬೇಕು ವಾಚಕನು ಮುಂದೆ ಅಂತಹ ಸಂದರ್ಭದಲ್ಲಿ ಸಿಲುಕಿಕೊಂಡರೆ ಆದರಿಂದ ಪಾರಾಗುವ ವಿಧಾನವನ್ನು ಅತ ತಿಳಿದುಕೊಳ್ಳುವಂತಾಗಬೇಕು. ಈ ರೀತಿ ಮಾನವ ಮನಸ್ಸನ್ನು ಚುಚ್ಚುವ ಕತೆಗಳು ಇದೀಗ ಸ್ವಾಗತಾರ್ಹವಾಗಿವೆ.

ಈ ದಿಶೆಯಲ್ಲಿ ಶ್ರೀ ಗೋಪೀನಾಥರಾಯರ ಹೆಜ್ಜೆ ಶ್ಲಾಘನೀಯವಾಗಿದೆ. ಅವರ ಈ ಕಥಾ ಸಂಕಲನದಲ್ಲಿ ಒಟ್ಟು ೧೩ ಕತೆಗಳಿವೆ. ಅವುಗಳಲ್ಲಿ ೨ ಅವರ ಸ್ವಂತ ಕೃತಿಗಳಾಗಿವೆ. ಮತ್ತೊಂದು ಶ್ರೀ ನಿತ್ಯರವರ ಆಂಗ್ಲ ಕತೆಯ ಅನುವಾದವಾಗಿದೆ. ಉಳಿದವು 'ಯೋಜನಾ' ಪತ್ರಿಕೆಯಲ್ಲಿ ಪ್ರಕಟವಾದ ಕತೆಗಳ ಅನುವಾದಿತರೂಪವಾಗಿದೆ:

‹ಬಗ್ಗಿದವನಿಗೊಂದು ಗುದ್ದು› ಎಂಬ ಅವರು ಬರೆದ ಮೊದಲ ಕತೆ ವಾಚಕರ ಮನಸ್ಸಿಗೆ ಪರಿಣಾಮಕಾರಿಯಾಗಿದೆ. ಈಗ ನಮ್ಮಲ್ಲಿರುವ ನಿರುದ್ಯೋಗ ಸಮಸ್ಯೆ, ಕೆಲಸದ ಆಸೆ ತೋರಿಸಿ ಮೋಸಮಾಡುವ ಮೋಸಗಾರರ ವಿಷಯ ಇಲ್ಲಿ ಚೆನ್ನಾಗಿ ಚಿತ್ರಿತವಾಗಿದೆ. ಕತೆ ಕೊನೆಗೊಂಡಾಗ ವಾಚಕರು ಭಾವನಾಮಯ ಜಗತ್ತಿನಲ್ಲಿ ವಿಹರಿಸುತ್ತಾರೆ. ‹ಎಂತಹ ವಿಲಕ್ಷಣ ಪುರುಷ› ಎಂಬ ಇನ್ನೊಂದು ಅವರು ಬರೆದ ಕತೆಯೂ ಕೂಡಾ, ‹ಇಂದಿನ ಶಿಕ್ಷಣ ಕ್ರಮದಲ್ಲಿ ಬದಲಾವಣೆ ಅಗತ್ಯ› ಎಂಬ ವಿಚಾರವನ್ನು ಪುಷ್ಟೀಕರಿಸುತ್ತದೆ. ಮಕ್ಕಳು ವಾತಾವರಣಕ್ಕನುಗುಣವಾಗಿ ನಡೆದುಕೊಳ್ಳುವರೆಂಬ ಕಟು ಸತ್ಯವನ್ನು ಅವರಿಲ್ಲಿ ಎತ್ತಿ ತೋರಿಸಿದ್ದಾರೆ.

ಇನ್ನುಳಿದ ಕತೆಗಳಲ್ಲಿ ಹೆಚ್ಚಿನವು ‹ಯೋಜನಾ› ಪತ್ರಿಕೆಯಲ್ಲಿ ಪ್ರಕಟವಾದವುಗಳಾಗಿವೆ. ಆ ಪತ್ರಿಕೆಯಲ್ಲಿ ‹ಯೋಜನೆ›ಗೆ ಸಂಬಂಧಪಟ್ಟ ವಿಚಾರಗಳೇ ಹೆಚ್ಚಾಗಿ ಪ್ರಕಟಗೊಳ್ಳುತ್ತವೆ. ‹ಅನಾಹುತದ ಸುಳಿಯಿಂದ› ಈ ಕತೆಯಲ್ಲಿ ಅವನು ಮತ್ತು ಅವನ ಪ್ರೀತಿಯ ದನ ನೆರೆಯಿಂದ ಪಾರಾಗಿ ಬದುಕಿಬರಹುದೆಂದು ವಾಚಕರು ಮೊದಲು ಎಣಿಸಲಾರರು ಅವರು ಬದುಕಿ ಬಂದ ವಿಚಾರ ವಾಚಕರ ಕಳವಳಗೊಂಡ ಹೃದಯಕ್ಕೆ ತಂಪನ್ನು ತಂದೀಯುತ್ತದೆ ಈ ಲೋಕ ದೊಡ್ಡ ಪರಿಗಾಗಿದೆ ಎಂಬ ಮಾತನ್ನು ಬಡಜನರು ಹೇಳುವುದು ಸರಿಯೆಂದು ‹ಈ ಲೋಕ ಯಾರದ›ೆಂಬ ಕತೆಯನ್ನೋದಿದಾಗ ತಿಳಿಯುತ್ತದೆ. ಸುಶಿಕ್ಷಿತರು ಬೇಸಾಯ ಮೊದಲಾದ ಗ್ರಾಮೀಣ ಕಾರ್ಯಗಳನ್ನು ‹‹ಬೇಡವಾದ ಕಸುಬು›› ಎಂದು ಭಾವಿಸುತ್ತಾರೆ. ಆದರೆ ಆದರಿಂದಲೇ, ಸುಶಿಕ್ಷಿತ ತರುಣನು ತನ್ನ ಜೀವನವನ್ನು ಸುಗಮವಾಗಿ ಸಾಗಿಸಬಹುದೆಂಬ ವಿಚಾರವನ್ನು ನಾವು ‹ಬೇಡವಾದ ಕಸುಬು› ಎಂಬ ಕತೆಯಿಂದ ತಿಳಿಯುತ್ತೇವೆ ‹ನಾಲ್ಕನೆಯ ಹೆಂಡತಿ› ಇದೊಂದು ಓದುಗರನ್ನು ಉಲ್ಲಸಿತರನ್ನಾಗಿ ಮಾಡುವ ಹಾಸ್ಯಕತೆಯೂ ಆಗಿದೆ ಮೂರು ಹೆಂಡಂದಿರು ಶಂಕರನಿಂದ ವಿದಾಯವನ್ನು ಬಯಸಿದರೂ ಈತನಿಗೆ ನಾಲ್ಕನೆಯ ಹೆಂಡತಿ ಕೊನೆಯವಳಾದಳೆಂದಾಗ ನಮ್ಮ ಮನಸ್ಸು ಹರ್ಷಗೊಳ್ಳುತ್ತದೆ ಶ್ರೀ ನಿತ್ಯರವರ ಆಂಗ್ಲ ಕತೆಯು ಅತ್ಯುತ್ತಮವಾಗಿದೆ ಉಳಿದ ಕತೆಗಳು ಚೆನ್ನಾಗಿವೆ. ಅನುವಾದಕ್ಕೆ ಆರಿಸಿದ ಕತೆಗಳು ಉತ್ತಮವಾಗಿವೆ.

‹ಬಗ್ಗಿದವನಿಗೊಂದು ಗುದ್ದು› ‹ಅನಾಹುತದ ಸುಳಿಯಿಂದ›, ‹ನಾಲ್ಕನೆ ಹೆಂಡತಿ›, ‹ಬೇಡವಾದ ಕಸುಬು›, ‹‹ಮಾಂಗಲ್ಯದ ಮಹತ್ವ›› ಸಂಕಲನದ ಅತ್ಯುತ್ತಮ ಕತೆಗಳಾಗಿವೆ ಉಳಿದವು ಚೆನ್ನಾಗಿವೆ. ಲೇಖಕರ ಸ್ವಶೈಲಿ ಹಾಗೂ ಅನುವಾದನ ಶೈಲಿಯು ಹೃದಯಸ್ಪರ್ಶಿಯಾಗಿದ್ದರೂ ಸರಳವಾಗಿವೆ.

ಪ್ರಣಯಕತೆಗಳ ಸುರಿಮಳೆ ಸುರಿಯುತ್ತಿರುವಾಗ ಇಂತಹ, ವಾಚಕರನ್ನು ಸರಿದಾರಿಗೊಯ್ಯಲು ಸಮರ್ಥವಾದ ನೀತಿಬೋಧಕ ಕಥಾಸಂಕಲನವನ್ನು ಕನ್ನಡಿಗರು ತುಂಬಿದ ಹೃದಯದಿಂದ ಸ್ವಾಗತಿಸಿ ಇವಕ್ಕಿಂತಲೂ ಹೆಚ್ಚಿನ ಬರವಣಿಗೆಗಳನ್ನು ಅವರಿಂದ ನಿರೀಕ್ಷಿಸಬಹುದಾಗಿದೆ. ——ಕುಂತಲಾಪ್ರಿಯ.

ಶ್ರೀಭಾಷ್ಯ ಪ್ರಕಾಶಿಕಾ-(ಶ್ರೀ ಶ್ರೀನಿವಾಸಾಚಾರ್ಯ ವಿರಚಿತ) ಸಂಪಾದಕರು: ಶ್ರೀ ಟಿ. ಚಂದ್ರಶೇಖರನ್, ಎಂ. ಎ , ಎಲ್. ಟಿ, ಕ್ಯೂರೇಟರ್, ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರ, ಮದ್ರಾಸು ಪುಟಗಳು XXVI + ೨೯ + VII + ೩೧೧. ಬೆಲೆ: ರೂ. ೬—೮—೦.

ಬ್ರಹ್ಮಸೂತ್ರಕ್ಕೆ ಅದ್ವೈತಿಗಳು, ವಿಶಿಷ್ಟಾದ್ವೈತಿಗಳು ಮತ್ತು ದ್ವೈತಿಗಳು ತಂತಮ್ಮ ಶಾಸ್ತ್ರಾನುಸಾರವಾಗಿ ವ್ಯಾಖ್ಯಾನ ಬರೆದಿದ್ದು ಅವಕ್ಕೆ ಬ್ರಹ್ಮಸೂತ್ರ ಭಾಷ್ಯವೆಂದು ಹೇಳುತ್ತೇವೆ. ಇವುಗಳಲ್ಲಿ ಶ್ರೀ ರಾಮಾನುಜಾಚಾರ್ಯರು ತಮ್ಮ ವಿಶಿಷ್ಟಾದ್ವೈತ ಶಾಸ್ತ್ರಕ್ಕನುಗುಣವಾಗಿ ಬರೆದಿರುವ ಬ್ರಹ್ಮಸೂತ್ರ ಭಾಷ್ಯಕ್ಕೆ ‹‹ಶ್ರೀ ಭಾಷ್ಯ››ವೆಂದು ಹೆಸರು. ಇಲ್ಲಿ ‹‹ಶ್ರೀ›› ಎಂಬುದಕ್ಕೆ ಸತ್ಯಜ್ಞಾನ, ಸರ್ವೋತ್ಕೃಷ್ಟತೆ, ಮತ್ತು ಅಂತಿಮ ಗುರಿ ಎಂದು ಅರ್ಥ. ಬ್ರಹ್ಮಸೂತ್ರಕ್ಕೆ ಬರೆದಿರುವ ಭಾಷ್ಯವು ಸತ್ಯವನ್ನೂ ಸರ್ವಶ್ರೇಷ್ಠನನ್ನೂ ಜೀವನದ ಪರಮೋದ್ದೇಶವನ್ನೂ ತಿಳಿದುಕೊಳ್ಳಲು ಸಹಾಯಕವಾದುದರಿಂದ ಇದಕ್ಕೆ ‹‹ಶ್ರೀ ಭಾಷ್ಯ››ವೆಂಬ ನಾಮಧೇಯವು ಬಂದಿದೆ.

‹‹ಶ್ರೀ ಭಾಷ್ಯ ಪ್ರಕಾಶಿಕಾ›› ಎಂಬುದು ‹‹ಶ್ರೀ ಭಾಷ್ಯ›› ಮತ್ತದರ ವ್ಯಾಖ್ಯಾನಗಳಲ್ಲಿ ಅಧಿಕರಣಗಳ ಸಾರಾಂಶವನ್ನು ತಿಳಿಸುವ ಗ್ರಂಥ. ಇದರ ಶೈಲಿಯೂ ಸರಳವಿದೆ. ‹ಶ್ರೀ ಭಾಷ್ಯ›ದ ಮೂಲವನ್ನು ಅಭ್ಯಾಸ ಮಾಡಿದವರಿಗೂ ಅದರ ಪರಿಚಯವಿಲ್ಲದಿರುವವರಿಗೂ ಈ ಪ್ರಕಾಶಿಕೆಯು ಉಪಯೋಗಿಯಾಗಬಲ್ಲದು ಅಲ್ಲದೆ ಶ್ರೀ ಭಾಷ್ಯವನ್ನು ಅಭ್ಯಸಿಸಲು ಆತುರದಿಂದಿರುವವರು ಆದರ ಸಾರರೂಪದ ಈ ಗ್ರಂಥವನ್ನು ಮೊದಲಾಗಿ ಅಭ್ಯಾಸಮಾಡಿಕೊಂಡರೆ, ಮುಂದಿನ ತಿಳುವಳಿಕೆಗೆ ಇದು ಪಂಚಾಂಗವಾಗಿ ಪರಿಣಮಿಸುತ್ತದೆ

ಈ ಶ್ರೀ ಭಾಷ್ಯ ಪ್ರಕಾಶಿಕೆಯು ಮುಖ್ಯವಾಗಿ ನಾಲ್ಕು ಅಧ್ಯಾಯಗಳಾಗಿ ವಿಂಗಡಿತವಾಗಿದ್ದು ಈ ಅಧ್ಯಾಯಗಳು ಪುನಃ ನಾಲ್ಕು ನಾಲ್ಕು ಪಾದಗಳಾಗಿ ವಿಭಾಜಿತವಾಗಿವೆ, ಈ ಪಾದಗಳೂ ಅಧಿಕರಣಗಳಾಗಿ ವಿಭಾಗ ಹೊಂದಿ, ಒಟ್ಟು ೧೫೬ ಅಧಿಕರಣಗಳು ಇಲ್ಲಿವೆ. ೫೪೫ ಸೂತ್ರಗಳನ್ನು ನಿರ್ದೇಶಿಸಿ, ಅವುಗಳ ವೃತ್ತಿ ಭಾಷ್ಯ, ಪೂರ್ವಪಕ್ಷ ಮತ್ತು ಸಮಾಧಾನ ಹಾಗೂ ಸಿದ್ಧಾಂತಗಳನ್ನು ಯಥೋಚಿತವಾಗಿ, ಸಂಕ್ಷಿಪ್ತವಾಗಿ ಇಲ್ಲಿ ಕೊಡಲಾಗಿದೆ. ಸಿದ್ಧಾಂತಾದಿಗಳನ್ನು ಮಾಡುವಾಗ ತನ್ನ ಪೂರ್ವಜರ ಆಧಾರಗಳನ್ನೂ ಉಪನಿಷತ್ತು ಮೊದಲಾದುವುಗಳ ಅವತರಣಿಕೆಗಳನ್ನೂ ಅಲ್ಲಲ್ಲಿ ಎತ್ತಿಕೊಳ್ಳಲಾಗಿದೆ.

ಈ ಗ್ರಂಥದ ಕರ್ತೃವು ಶ್ರೀ ನೃಸಿಂಹ ಎಂಬವನ ಪುತ್ರನೆಂದೂ ವಾಧೂಲಲಕ್ಷ್ಮಣಾಚಾರ್ಯನ ಶಿಷ್ಯನೆಂದೂ ಗ್ರಂಥಾಧಾರದಿಂದ ತಿಳಿಯಬಹುದು. ಈತನು ಶ್ರೀಭಾಷ್ಯ ಪ್ರಕಾಶಿಕಾವನ್ನಲ್ಲದೇ ಆರುಣಾಧಿಕರಣ ಸಿದ್ಧಾಂತ ಪ್ರಕಾಶಿಕಾ. ದಾಶರಥಿ ವಿಜಯ ಮತ್ತು ಭಕ್ತಿಸಾರ ಅಷ್ಟೋತ್ತರ ಶತನಾಮಾವಲಿ ಎಂಬಿತರ ಗ್ರಂಥಗಳನ್ನೂ ಬರೆದಿರುವಂತೆ ತಿಳಿದು ಬರುವುದು ಅಲ್ಲದೇ ಶ್ರೀ ಭಾಷ್ಯ ಪ್ರಕಾಶಿಕಾಕಾರನು ಕಾಂಚೀಪುರದ ಸಮೀಪದ ತಿರುಮಳಿಸೈ ಎಂಬ ಹಳ್ಳಿಯಲ್ಲಿ ಕ್ರಿ. ಶ. ೧೭೭೭ರಲ್ಲಿ ಜನಿಸಿದನೆಂದು ತಿಳಿಯುತ್ತದೆ. ತನ್ನ ತಂದೆಯ ಮುಖದಿಂದಲೇ ಶ್ರೀ ಭಾಷ್ಯವನ್ನು ಅಭ್ಯಸಿಸಿದನೆಂದೂ ಸುಮಾರು ೭೩ ವರ್ಷಗಳ ಕಾಲ ಬದುಕಿದ್ದನೆಂದೂ ಈ ಸಂಬಂಧದ ಒಂದು ಪತ್ರದಿಂದ ತಿಳಿಯುತ್ತದೆಂದೂ ಸಂಪಾದಕರು ಮುನ್ನುಡಿಯಲ್ಲಿ ಬರೆದಿದ್ದಾರೆ

ಗ್ರಂಥಾದಿಯಲ್ಲಿ ವಿಶಿಷ್ಟಾದ್ವೈತ ಧರ್ಮಗ್ರಂಥಕರ್ತೃಗಳ ಹಾಗೂ ಅವರ ಧಾರ್ಮಿಕ ಕೃತಿಗಳ ಸಂಕ್ಷೇಪ್ತೇತಿಹಾಸವನ್ನೂ ಈ ಗ್ರಂಥ ಮತ್ತು ಕವಿಯ ಕುರಿತಾದ ಸ್ಥೂಲ ವಿವರವನ್ನೂ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಕೊಡಲಾಗಿದೆ. ಈ ಗ್ರಂಥ ಸಂಪಾದನೆಯ ಕುರಿತು ಬರೆಯುತ್ತ, ಮಾನ್ಯ ಸಂಪಾದಕರು, ‹ ಸರಕಾರಿ ಪ್ರಾಚ್ಯ ಹಸ್ತಪ್ರತಿಗಳ ಭಂಡಾರದಲ್ಲಿರುವ ಒಂದೇ ಒಂದು ಕಾಗದದ ಹಸ್ತಪ್ರತಿಯ ಆಧಾರದಿಂದ ತಯಾರಿಸಲಾಗಿದೆ, ಇದು ಪೂರ್ಣವಿದ್ದು, ಅಶುದ್ಧಗಳಿಂದ ದೂರವಿದೆ. ಅಲ್ಲಲ್ಲಿ ಗ್ರಂಥಪಾತವಿದ್ದುದರಿಂದ ಅಲ್ಲಿನ ಪೂರಕಗಳನ್ನು ಆವರಣಗಳೊಳಗೆ ಕೊಡಲಾಗಿದೆ. ಇದಕ್ಕೆ ಇನ್ನೊಂದು ಹಸ್ತಪ್ರತಿಯ ಆವಶ್ಯಕವಿದ್ದುದರಿಂದ, ಈ ಪೂರಕಗಳನ್ನು ಸಂಭಾವ್ಯವೆಂದು ತಿಳಿಯಬಹುದು›› ಎಂದು ಬರೆದಿರುತ್ತಾರೆ ಹಾಗೆಯೇ ತಿರುಪತಿಯ ವೆಂಕಟೇಶ್ವರ ಪ್ರಾಚ್ಯ ಸಂಸ್ಥೆಯಲ್ಲಿ ಶ್ರೀ ಭಾಷ್ಯಪ್ರಕಾಶದ ಎರಡು ಪ್ರತಿಗಳಿದ್ದು, ಅವುಗಳಲ್ಲಿ ಅಪೂರ್ಣ ಪ್ರತಿಯೊಂದನ್ನು ತಮಗೆ ತಡವಾಗಿ ಕಳಿಸಿಕೊಡಲಾಯಿತೆಂದೂ ಹೇಳಿ, ಅದಕ್ಕೂ ಮದ್ರಾಸ ಪ್ರತಿಗೂ ಇರುವ ಅಂತರಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ ಎಂದೂ ಹೇಳಿರುತ್ತಾರೆ. ಆದರೆ ಇಂತಹ ಹಳೆಯ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸುವಾಗ ಅವಸರವಮಾಡುವುದರಿಂದ ಸಂಪೂರ್ಣಸರಿಯಾದಪಾಠಾಂತರಗಳು ಸಿಗದೆ ಹೋಗಿ ಪ್ರಕಾಶನದ ಉದ್ದೇಶವು ಅಪೂರ್ಣವಾಗುಳಿಯುತ್ತದೆ. ಅಲ್ಲದೇ, ಇಂತಹ ಅಮೂಲ್ಯ ಗ್ರಂಥಗಳನ್ನು ಪ್ರಕಾಶಿಸಲು ಮುಂದೆ ಬಂದಿರುವಾಗ, ಅವುಗಳ ಹಸ್ತಪ್ರತಿಗಳಿದ್ದ ಮಾನನೀಯ ಸಂಸ್ಥೆಗಳೂ ಸಂಪಾದಕರೊಡನೆ ಸಹಕರಿಸಿ, ಜನತೆಗೆ ಹೆಚ್ಚಿನ ಉಪಕಾರವಾಗುವಂತೆ ನೋಡಿಕೊಳ್ಳುವುದು ಅಗತ್ಯ.

ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರದವರು ಈ ಗ್ರಂಥವನ್ನು ಪ್ರಕಟಿಸಲು ಮುಂದೆ ಬಂದಿರುವುದು ಸಂತೋಷದ ಸಮಾಚಾರ. ವಿಶಿಷ್ಟಾದ್ವೈತ ಭಾಷ್ಯವುಳ್ಳ ಶ್ರೀಭಾಷ್ಯವನ್ನು ಅಭ್ಯಸಿಸಲು ಅಸಾಧ್ಯವಾದವರು ಅದನ್ನು ಕಡೆದು ನವನೀತವನ್ನು ತೆಗೆದು ತಯಾರಿಸಿದ ನವಘೃತದಂತಿರುವ ಈ ‹‹ಶ್ರೀ ಭಾಷ್ಯ ಪ್ರಕಾಶಿಕೆ››ಯನ್ನು ಧ್ಯಾನಪೂರ್ವಕವಾಗಿ ಮನನಮಾಡಿಕೊಂಡರೆ, ಅವರ ಉದ್ದೇಶವು ಪೂರ್ತಿಯಾಗುವುದರಲ್ಲಿ ಸಂದೇಹವಿಲ್ಲ. —ಗೋಪಾ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O S No. 12/1958 R I A No 1260/1958 R I.A No 1' 2/1959.

ಪರಮೇಶ್ವರಿ ಯಾನೆ ಗಿರಿಜಾ ಶೇರ್ವೆಗಾರ್ತಿ ಅರ್ಜಿದಾರಳು

ಮತ್ತು

ಚೆನ್ನಪ್ಪ ಶೇರ್ವೆಗಾರ ಕೂಡಾ ಎದ್ರಿರು, ಇವರೊಳಗೆ.

1) ಚೆನ್ನಪ್ಪ ಶೇರ್ವೆಗಾರ—ಇವರು ಸ್ವತಹ ವ ಇವರ ಮ್ಯಾನರ್ ಮಕ್ಕಂದಿರು 6ನೆ ಎದ್ರಿ ಶ್ರೀನಿವಾಸ 7ನೆ ಎದ್ರಿ ನಾರಾಯಣ ಇವರ ಗಾರ್ಡಿಯನ್ ಆಗಿ ಸಹಾ—

3) ಸುಬ್ಬಣ್ಣ ಶೇರ್ವೆಗಾರ, 4) ಶಂಕರ ಶೇರ್ವೆಗಾರ, 5) ರಾಮನಾಥ ಶೇರ್ವೆಗಾರ— ಕಲ್ಯಾಣಪುರ ನಾಗಪ್ಪ ಶೇರ್ವೆಗಾರರ ಮಕ್ಕಂದಿರು, ಉಡುಪಿ ತಾಲೂಕು ಉಪ್ಪೂರು ಗ್ರಾಮದ ಜಾತಬೆಟ್ಟು ಎಂಬಲ್ಲಿರುವವರು —

1 ಮತ್ತು 3ರಿಂದ 7ನೆ ವರೆಗಿನ ಎದ್ರಿರು

ಸದ್ರಿ ಅರ್ಜಿಯ 1 ಮತ್ತು 3ರಿಂದ 7ನೆ ವರೆಗಿನ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಅರ್ಜಿದಾರಳು ಮೇಲ್ಕಂಡ ವ್ಯಾಜ್ಯದಲ್ಲಿ ಎದ್ರಿರ ಮೇಲೆ ಪಡೆದ ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡಬೇಕಾಗಿ ಕೊಟ್ಟ ಅರ್ಜಿಯು ಎದ್ರಿರಿಗೆ ಆಖೈರಿ ನೋಟೀಸಿನ ಬಗ್ಗೆ [illegible]—[illegible]—1959ಕ್ಕೆ ಇಡಲಾಗಿರುವುದು. ಆ ದಿವಸ ಎದ್ರಿರವರು ಆಕ್ಷೇಪ ಹೇಳುವುದಿದ್ದರೆ ಸದ್ರಿ ದಿವಸ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

(By order of the Court)

ಉಡುಪಿ } K Varadaraya Pai
ತಾ. 2[illegible] } *Advocate for Petitioner*



ನೋವುಗಳ ಅತ್ಯುತ್ತಮ ಸಂಹಾರಿಣಿ
ಅಮೃತಾಂಜನ

ಉಡ್ಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O. S. 74/1955, R. I. A. 782/1957;
R. E P. 754/1958

ರುದ್ರಮ್ಮ ಹೆಗ್ಗಡ್ತಿ — ಅರ್ಜಿದಾರಳು

ಮತ್ತು

ಪದ್ಮಕ್ಕ ಯಾನೆ ಪದ್ಮಾವತಿ ಹೆಗ್ಗಡ್ತಿ, ಚಂದಯ್ಯ ಕುರ್ಲ ಹೆಗ್ಡೆರ ಸೊಸೆ–ಉಡ್ಪಿ ತಾಲೂಕು ಶಿರ್ವ ಗ್ರಾಮ — 2ನೇ ಎದ್ರಿ,

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಮೇಲ್ಕಂಡ ಅಮಲ್ದಾರಿಯಲ್ಲಿ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವರೆ ತಾರೀಕು 4-3-1959ಕ್ಕೆ ಇಟ್ಟಿರುವದ್ರಿಂದ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಣೆಯಿದ್ದರೆ ಜಾಹೀರು ಮಾಡಿಕೊಳ್ಳಬಹುದು.

K Ramakrishna Rao,
Vakil for Petitioner.
Udipi, Dated 23—2—1959

ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

R. I. A 1558/1958
O S. No 228/1957

ಭೂಮಿ ಅಮ್ಮ — ಅರ್ಜಿದಾರಳು,

ವ್ಯಾಸ ರಾವ್ ಸಹಾ — ಎದ್ರಿರು.

1. ಶ್ರೀ ವ್ಯಾಸ ರಾವ್, ವಿಶ್ವನಾಥಯ್ಯನವರ ಮಗ, ಉಡ್ಪಿ ತಾಲ್ಲೂಕು ಪಲಿಮಾರು ಗ್ರಾಮದಲ್ಲಿರುವವ—

1ನೇ ಎದ್ರಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ-

ಸದ್ರಿ ದಾವೆಯು ತಾ. 7-10-57ಲ್ಲಿ ವಾದಿಳ ಗುಣಕ್ಕಾದ ಪ್ರಿಲಿಮಿನರಿ ಡಿಕ್ರಿ ವಿಧಿ ಪ್ರಕಾರ ಬಹಾ ಆಮೇಜನ್ನು ವಸೂಲಿ ಬಗ್ಗೆ ಆಸ್ತಿ ಏಲಂ ಮಾಡಿಸುವರೆ ಅರ್ಜಿದಾರಳ ಗುಣಕ್ಕೆ ಫೈನಲಿ ಡಿಕ್ರಿ ಕೊಡಿಸಬೇಕಾಗಿ ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ 28-2 1959ಕ್ಕೆ ನಿಮಾಗೆ ಆಖೈರಿ ನೋಟೀಸಿಗೆ ಇಟ್ಟಿದೆ ಆಕ್ಷೇಪವಿದ್ರೆ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಾಹರಣೆ ಕೊಡತಕ್ಕದ್ದು ಎಂತ ಕೋರ್ಟಿನ ಹುಕುಂ ಪ್ರಕಾರ ತಿಳಿಸಿಯದೆ.

K. V Kamath,
Advocate for Petitioner
Karkal, 22—2—59

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP Co.
BALMATTA ROAD, MANGALORE

ಹಿತಚಿಂತನೆ

ಪರಿಶ್ರಮದ ಆವಶ್ಯಕತೆ ಕಡಿಮೆಯಾದುದರಿಂದ ವಿದ್ಯಾರ್ಥಿಗಳಲ್ಲಿ ಅಶಿಸ್ತು ಹೆಚ್ಚು!

ಇದನ್ನು ಸರಕಾರವೂ ರಾಜಕೀಯ ಪಕ್ಷಗಳೂ ಧುರೀಣರೂ ಅವಶ್ಯ ಗಮನಿಸಬೇಕು.

ಕೆಲವು ವಿಶ್ವವಿದ್ಯಾಲಯಗಳಲ್ಲಿ ಶಿಸ್ತಿನ ಸಮಸ್ಯೆಯ ಬಗ್ಗೆ ನಮ್ಮ ಹಿಂದಿನ ವಂದಿಯಲ್ಲಿಯೇ ಗಮನ ಹರಿಸಿದ್ದೇವೆ. ಈ ಸಮಸ್ಯೆಯೂ ಹೆಚ್ಚಿನ ಪ್ರಮಾಣದಲ್ಲಿ ಉಲ್ಬಣಿಸಿ,ಕೆಲವು ಸಂದರ್ಭಗಳಲ್ಲಿ ಕಾರ್ಯಕಲಾಪಗಳಿಗೂ ಬಲವಾದ ತಡೆಯನ್ನು ಹಾಕಿ ಅಪ್ರಿಯ ಘಟನೆಗಳಿಗೆ ಕಾರಣವಾಗಿದೆ. ವಿಶ್ವವಿದ್ಯಾಲಯಗಳಲ್ಲಿ "ಅಶಿಸ್ತು" ಎಂಬುದು ಹೆಚ್ಚಾಗಿ ಸಾರ್ವಜನಿಕ ಜೀವನದಲ್ಲಿನ ಬೇಶಿಸ್ತಿನ ಪ್ರತಿಫಲನವೇ ಆಗಿರುತ್ತದೆ. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಬಾಹ್ಯಪ್ರಭಾವಗಳಿಂದಲೂ ಈ ಅಶಿಸ್ತಿಗೆ ಅವಕಾಶ ದೊರೆಯಬಹುದು.

ಶಿಕ್ಷಣ ಶುಲ್ಕವನ್ನು ಏರಿಸುವುದು ಮೊದಲಾದ ವಿಷಯಗಳ ಮೇಲೆ ಹೆತ್ತವರ ಮತ್ತಿತರರ ತಿಳುವಳಿಕೆ ಮತ್ತು ಅನುಮತಿಯಿಲ್ಲದೆಯೇ ವಿದ್ಯಾರ್ಥಿಗಳ ವಿರೋಧ ಪ್ರದರ್ಶನ ನಡೆಯುತ್ತದೆ ಎಂಬಿತ್ಯಾದಿಗಳನ್ನು ನಾವು ನಂಬಲಾರೆವು. ನಾವು ವಿದ್ಯಾರ್ಥಿಗಳ ಹೆತ್ತವರನ್ನು ವಿಶ್ವವಿದ್ಯಾಲಯಗಳ ಅಧಿಕಾರಿಗಳೊಡನೆ ಶಿಸ್ತನ್ನು ರಕ್ಷಿಸಿಕೊಳ್ಳುವ ವಿಷಯದಲ್ಲಿ ಸಹಕರಿಸಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇವೆ ಮತ್ತು ರಾಜಕೀಯ ಪಕ್ಷಗಳುವಿಶ್ವವಿದ್ಯಾಲಯ ಸಂಬಂಧದಲ್ಲಿ ನಡುವೆ ಪ್ರವೇಶಿಸಬಾರದೆಂದು ಪ್ರಾರ್ಥಿಸುತ್ತೇವೆ.

ವಿದ್ಯಾರ್ಥಿಗಳಿಗೆ ಶಾಲಾದಿನದಂದು ಅಭ್ಯಾಸ ಸಂಬಂಧದಲ್ಲಿ ಹೆಚ್ಚಿನ ಕೆಲಸವನ್ನು ಕೊಡುವುದು, ಬಿಡುಸಮಯದಲ್ಲಿ ಉತ್ತಮವಾದ ಚಟುವಟಿಕೆಗಳಿಗೆ ಅವಕಾಶವನ್ನು ಕಲ್ಪಿಸಿಕೊಡುವುದು – ಇವುಗಳಿಂದ ಇಂದು ಕಾಣುತ್ತಿರುವ ಪರಿಸ್ಥಿತಿಯನ್ನು ಸುಧಾರಿಸಬಹುದು. ವಿಶ್ವವಿದ್ಯಾಲಯ ಮತ್ತು ಕಾಲೇಜುಗಳು ಅಭ್ಯಾಸ ಮತ್ತು ಅಭ್ಯಸನದ ಕೆಲಸವನ್ನು ಹೆಚ್ಚಿಸಲು ಮತ್ತು ತಮ್ಮ ಅಧ್ಯಾಪನ ಮತ್ತು ಪರೀಕ್ಷಣಗಳ ಪದ್ಧತಿಗಳನ್ನು ಪರಿವರ್ತಿಸಲು ಇನ್ನೂ ತಡಮಾಡದೆ ಮುಂದೆ ಬರುವುವೆಂದು ಆಶಿಸುತ್ತೇವೆ. ಇದು ಅಷ್ಟೇನೂ ಸುಲಭವಾದ ಕೆಲಸವಲ್ಲ. ವೈಷಯಿಕ ಉಪದ್ರವಗಳಲ್ಲದೆ ಮಾನಸಿಕ ಕೀಟಲೆಗಳೊ ಇಲ್ಲಿ ಮುಂದೆ ಬಂದು, ಅತ್ಯಂತ ಪ್ರಯಾಸವನ್ನು ಸಹಿಸಿಕೊಳ್ಳಬೇಕಾಗುವುದು.

ವಿದ್ಯಾರ್ಥಿಗಳಲ್ಲಿ ಬೇಶಿಸ್ತು ಹುಟ್ಟಿಕೊಂಡಿರುವುದಕ್ಕೆ ಅಂಶತಃ ನಮ್ಮ ಅಧ್ಯಾಪನ ಮತ್ತು ಪರೀಕ್ಷಾ ಪ್ರಣಾಳಿಯೇ ಕಾರಣವಾಗಿದೆ. ಇದರಿಂದಾಗಿಯೇ ವಿದ್ಯಾರ್ಥಿಗಳಿಗೆ ಸಾಕಷ್ಟು ಧಾರಾಳವೆನಿಸುವಷ್ಟು ಬಿಡುವು ಸಮಯವು ದೊರೆಯುವಂತಾಗಿದೆ. ವರ್ಷದ ಎಲ್ಲ ದಿನದಲ್ಲಿಯೂ ಓದುವ ಮತ್ತು ಬರೆಯುವ ಕೆಲಸಗಳಿಗೆ ಒಂದು ಕ್ರಮಪತ್ತಾದ ತಲ್ಲೀನತೆಯಿಲ್ಲದಿರುವುದರಿಂದ, ಮತ್ತು ಅಧ್ಯಾಪನ ಇಲ್ಲವೇ ಸೆಮಿನಾರ್ ತರಗತಿಗಳ ಸಂಖ್ಯೆ ತೀರ ಅಲ್ಪವಾದುದರಿಂದ, ಹೆಚ್ಚಿನ ವಿದ್ಯಾರ್ಥಿಗಳು ತೀವ್ರವಾದ ಕೆಲಸಗಳೆಲ್ಲವನ್ನೂ ವರ್ಷಾವಧಿ ಪರೀಕ್ಷೆಗೆ ಮೊದಲಿನ ನಾಲ್ಕಾರು ವಾರಗಳಲ್ಲಿ ಮಾಡುವುವೆಂದು ದೃಢ ನಿಶ್ಚಯ ಮಾಡುತ್ತಾರೆ. ಹಾಗಾಗಿ ವರ್ಷದ ಉಳಿದ ಸಮಯದಲ್ಲಿ ಆಲಸಿಗಳಾಗಿರಲು ಅವಕಾಶವಿರುವುದರಿಂದಲೇ ಅವರು ತುಂಟತನಕ್ಕೆ ಬಲಿಬೀಳಲು ಸಹಾಯಕವಾಗುವುದು.

ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ತಿಳಿದು ಬಂದ ವಾತಾವರಣವು ಬೇಶಿಸ್ತು ಮತ್ತು ಅಮರ್ಯಾದೆಯ ಕಡೆಗೆ ವಿದ್ಯಾರ್ಥಿಗಳನ್ನು ದೂಡುವಂತಿರುವುವಾದರೂ ನಮ್ಮಿಂದ ಮತ್ತಿತರ ಅಧಿಕಾರಿಗಳಿಂದ ಕೈಗೊಳ್ಳಲ್ಪಟ್ಟ ಕಾರ್ಯಕ್ರಮಗಳು ಕ್ರಮೇಣ ಪರಿಸ್ಥಿತಿಯನ್ನು ಸುಧಾರಿಸಬಹುದು. ಸರಳ ಮಾರ್ಗಗಾಮಿಗಳಾದ ವಿದ್ಯಾರ್ಥಿಗಳು ವಿವೇಚನೆಯ ಪರಿಸ್ಥಿತಿಯನ್ನು ಮುಂದಕ್ಕೆ ಬೆಳೆಯುವಂತೆ ನೋಡಿಕೊಳ್ಳಲು ಮುಂದಾಗುವರೆಂದು ಆಶಿಸುತ್ತೇವೆ. ತನ್ನ ಕೆಲಸವನ್ನು ವಿಶೇಷವಾಗಿ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಯಾವುದೇ ವಿಧದ ವಿರಸವುಂಟಾಗದಂತಿರುವ ವಾತಾವರಣವನ್ನು ನಿರ್ಮಿಸಲು ಸಹಕರಿಸಬೇಕು.

ಆದರೆ, ಈ ಪರಿಸ್ಥಿತಿಯನ್ನು ಗಂಭೀರವೆಂದು ಗಮನಿಸಿ, ಸಾಮಾನ್ಯ ಸ್ತಿಮಿತ ವಾತಾವರಣವನ್ನು ನಿರ್ಮಿಸಲು ವಿಶ್ವವಿದ್ಯಾಲಯದ ಅಧಿಕಾರಿಗಳೊಡನೆ ಸರಕಾರ ಮತ್ತು ರಾಷ್ಟ್ರೀಯ ನಾಯಕರು ಹಾಗೂ ರಾಜಕೀಯ ಪಕ್ಷಗಳು ಮುಂದೆ ಬರುವುದು ಅವಶ್ಯವಾಗಿದೆ. ರಾಷ್ಟ್ರಾಭಿವೃದ್ಧಿಯ ಮಾರ್ಗದಲ್ಲಿ ನಮ್ಮ ದೇಶದ ಉಚ್ಚ ವಿದ್ಯಾಭ್ಯಾಸದ ಸ್ಥಾನವು ಸಾಕಷ್ಟು ಪ್ರಶಂಸೆಗೆ ಗುರಿಯಾಗಿಲ್ಲ. ವಿಶ್ವವಿದ್ಯಾಲಯದ ಶಿಕ್ಷಣದ ಬಗ್ಗೆ ವಿಶೇಷ ಗೌರವವನ್ನು ಕಾಪಾಡಿಕೊಂಡು ಬರುವಂತೆಯೇ ನವ ಗೌರವವನ್ನು ವಿಶ್ವವಿದ್ಯಾಲಯಗಳಿಗೆ ತಂದುಕೊಳ್ಳುವುದು ಅವಶ್ಯ. ಈ ವಿಷಯದಲ್ಲಿ ವಿಶ್ವವಿದ್ಯಾಲಯಗಳಿಗೆ ಸಾರ್ವಜನಿಕರ ಸಹಕಾರ ಮತ್ತು ಸಹಾಯವೂ ಅಧ್ಯಾಪಕರಲ್ಲಿ ತಮ್ಮ ಕರ್ತವ್ಯಜ್ಞಾನವೂ ಸಾಕಷ್ಟು ಹೆಚ್ಚಬೇಕು.

(ವಿಶ್ವವಿದ್ಯಾಲಯ ಸಹಾಯಧನ ಆಯೋಗದ ವರದಿಯಿಂದ)

ಕಿಸುಮುಡಿ

(೧ನೇ ಪುಟದಿಂದ)

ಕೇಂದ್ರ ಸರಕಾರವು ಅಖಂಡ ಭಾರತದ ದೃಷ್ಟಿಕೋಣವನ್ನಿಟ್ಟುಕೊಂಡು ಮುಂದುವರಿಯ ಬೇಕೆಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ನಿಜವಾಗಿಯೂ ಹಾಗೆಯೇ ಆಗಬೇಕು.ಆದರೆ, ಇಂದು ಭಾರತದ ಕೇಂದ್ರ ಸರಕಾರ ದಕ್ಷಿಣ ಭಾರತವನ್ನು ನೋಡುವ ದೃಷ್ಟಿಯು ಯಾವ ರೀತಿಯದ್ದು? ಉತ್ತರ ಭಾರತಕ್ಕೆ ಕೊಡುವಷ್ಟು ಪ್ರಾಶಸ್ತ್ಯ, ಮನ್ನಣೆ, ಸೌಲಭ್ಯ, ಅವಕಾಶಗಳನ್ನು ದಕ್ಷಿಣಕ್ಕೆ ಈಯುತ್ತಿದೆಯೆ? ದಕ್ಷಿಣ ಭಾರತದಲ್ಲಿ ಕಳೆದ ವರ್ಷ, ಅದರ ಹಿಂದಿನ ವರ್ಷ ಎಷ್ಟು ಮೈಲು ರೈಲು ಮಾರ್ಗಗಳು ನಿರ್ಮಾಣವಾದುವು?—ಇವನ್ನೆಲ್ಲಾ ಗಮನಿಸುವಾಗ ನಿಜವಾಗಿಯೂ ಕೇಂದ್ರ ಸರಕಾರದಲ್ಲಿ ದಾಕ್ಷಿಣಾತ್ಯರಿಗೆ ಸಾಕಷ್ಟು ಧ್ವನಿಯಿಲ್ಲ, ಎಂತಲೇ ನಮ್ಮ ಮೈಸೂರಿನ ನಾಯಕರೂ ಕೈಕಟ್ಟಿ ಕುಳಿತಿರುವಂತಾಯಿತು.

ಔದ್ಯಮಿಕ ನಗರಗಳು ರೂಪಿಸಲ್ಪಟ್ಟು ಅಲ್ಲಿಗೆ ನಾಡಿನ ಕೇಂದ್ರ ಸ್ಥಳಗಳಿಗೆ ರೈಲ್ವೆ ಸಂಬಂಧವಿರುವುದಾದರೆ, ಆಗ ಸಾಮಾನು ಸರಂಜಾಮುಗಳನ್ನು ಸಾಗಿಸಲು ಸುಲಭವಾಗುವುದು.ಭಿಲೈ, ರೂರ್ಕೇಲಾ ಮೊದಲಾದ ಕೇಂದ್ರಗಳಿಗೆ ರೈಲ್ವೆ ಸೌಕರ್ಯಗಳು ಯೋಜಿಸಲ್ಪಟ್ಟವೆ. ಆದರೆ, ಅಂತಹ ಯೋಜನೆ ದಾಂಡೇಲಿಗೆ ಮಾತ್ರ ಬೇಡ! ಇದೀಗ ನಮ್ಮ ಪ್ರಾತಿನಿಧ್ಯದ ಮಹಿಮೆ. ನಮ್ಮ ನಾಯಕರು ಕೇಂದ್ರ ಸರಕಾರದ ಮೇಲೆ ಒತ್ತಾಯ ಬರುವಂತೆ ಈ ವಿಷಯದಲ್ಲಿ ಆಡಬೇಕು; ಕೇವಲ ಪರಿಶೀಲನೆಯಿಂದಲೇ ರೇಲುದಾರಿ ನಿರ್ಮಾಣಮಾಡಲಾಗುವುದಿಲ್ಲವೆಂಬುದನ್ನು ಅರಿತುಕೊಳ್ಳಬೇಕು. ಶರಾವತಿ ಯೋಜನೆಯನ್ನು ದ್ವಿತೀಯ ಯೋಜನೆಯ ಸಾರದಲ್ಲಿ ಸೇರಿಸಿಕೊಳ್ಳಬೇಕೆಂಬ ಗೊತ್ತುವಳಿಯು ಮೈಸೂರು ವಿಧಾನ ಸಭೆಯಲ್ಲಿ ಮಂಜೂರಾದ ಮೇಲೆಯಾದರೂ, ಕೇಂದ್ರ ಸರಕಾರವೂ ಅಷ್ಟುಮಟ್ಟಿನ ಕೃಪೆ ತೋರಿಸಿರುವುದನ್ನು ಮರೆಯಬಾರದು. ನಮ್ಮ ಕೊರತೆಗಳೆಲ್ಲವನ್ನೂ ಒಂದೇ ವರ್ಷದೊಳಗೆ ನೀಗಿಸಬೇಕೆಂದು ಹೇಳುವುದು ಸಮಂಜಸವಲ್ಲ; ಆದರೂ ಅಲ್ಪಸ್ವಲ್ಪವಾದರೂ ನಮ್ಮ ದುಸ್ಥಿತಿಯು ಸುಧಾರಿಸದೆ ಇರುವುದನ್ನು ನೋಡಿ ಕಣ್ಮುಚ್ಚುವುದೆಂತು?

—ರಾಶಿ

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1=50)
ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಸೃಷ್ಟಿ ವೈಚಿತ್ರ್ಯ

(೪ನೇ ಪುಟದಿಂದ)

ಮಹತ್ವದ ಬಯಕೆಯನ್ನು ಮುಂದಿಟ್ಟು ತಪಸ್ಸನ್ನು ಆಚರಿಸಿದರೆ, ವ್ರತ ನಿಯಮಾದಿಗಳಿಂದ ಬಂಧಿತರಾಗಿದ್ದರೆ, ಅವರನ್ನು ಬಗ್ಗುಬಡೆಯುವುದು ಪಂಚಶಸ್ತ್ರನ ಮಹಾಕರ್ತವ್ಯಗಳಲ್ಲಿ ಒಂದು. ಕಾಮನು ಇದಕ್ಕಾಗಿ ತನ್ನ ಅನುಯಾಯಿ ವಸಂತನ ಸಂಪೂರ್ಣ ಸಹಾಯವನ್ನು ಪಡೆದು ಅಂತಹ ಕಲ್ಮನಸ್ಸಿನ ಗೊರವರ ಎದೆಯನ್ನು ಚೂತಪಾರಿಜಾತಾದಿ ಸುಮನ ಬಾಣಗಳಿಂದ ನೋಯಿಸಿ, ಅವರ ತಪಾದಿಗಳನ್ನು ಭಂಗೀಕರಿಸಿ ಪ್ರಾಪಂಚಿಕ ಸುಖಕ್ಕೊಲಿಯುವಂತೆಸಗುತ್ತಾನೆ.

ಅರುಣರಾಗನಿಷೇಧಿಭಿರಂಶುಕೈಃ
ಶ್ರವಣ ಲಬ್ಧಪದೈಶ್ಚ ಯವಾಂಕುರೈಃ
ಪರಭೃತಾವಿರುತೈಶ್ಚ ವಿಲಾಸಿನಃ
ಸ್ಮರ ಬಲೈರಬಲೈಕರಸಾಃ ಕೃತಾಃ ||

ಫಲಪುಷ್ಪ ವಿಕಸನ ಕೋಕಿಲ ಮಧುರ ನಿಸ್ವನಾದಿಗಳಿಂದ ಕೂಡಿದ ವಾತಾವರಣವು ವಿಲಾಸೀಪುರುಷರನ್ನು ಕಾಮಿನೀಜನರ ಕೈಗೊಂಬೆಗಳನ್ನಾಗಿ ಮಾಡಿ ಬಿಡುತ್ತದೆ ಎಂದು ಕಾಲಿದಾಸ ಹೇಳಿದ್ದಾನೆ.

ವಸಂತ ಋತ್ವಾರಂಭದಲ್ಲಿ ಮಲಯಗಿರಿಯಿಂದ ಬರುವ ಗಾಳಿಯು ಎಲ್ಲೆಡೆಯನ್ನೂ ತನ್ನ ಅಪ್ರತಿಮ ಸುಗಂಧದಿಂದ ಭರಿಸಿಬಿಡುತ್ತದೆ. ಸರೋವರಗಳೆಲ್ಲವೂ ಬಗೆಬಗೆ ಪಕ್ಷಿಗಳ ಕಲರವದ ಪರಿಣಾಮವಾಗಿ ಮುಖರಾಯಮಾಣವಾಗಿ ಪರಿಣಮಿಸುತ್ತವೆ. ಅವುಗಳಲ್ಲಿ ವರ್ಣ ವಿವರ್ಣದ ಕಮಲ ಪುಷ್ಪಗಳು ಅರಳಿಕೊಂಡಿರುತ್ತವೆ. ದೀರ್ಘಿಕೆಗಳು ತಮ್ಮ ಸೌಂದರ್ಯದಿಂದ ಸ್ತ್ರೀಯರ ಸುಂದರತೆಯನ್ನು ಉಪಹಾಸಮಾಡುವಂತಿವೆ.

ಶುಶುಭಿರೇ ಸ್ಮಿತಚಾರು ತರಾನನಾಃ
ಸ್ತ್ರಿಯ ಇವಶ್ಲಥ ಶಿಂಜಿತ ಮೇಖಲಾಃ
ವಿಕಚತಾಮರಸಾಃ ಗೃಹದೀರ್ಘಿಕಾ
ಮದಕಲೋದಕ ಲೋಲ
ವಿಹಂಗಮಾಃ ||

ಈ ಪ್ರಕಾರವಾಗಿ ವಸಂತ ಋತುವಿನ ಮಾದಕತೆಯು ಪ್ರಾಣಿಗಳನ್ನು ಉನ್ಮತ್ತರನ್ನಾಗಿಸುತ್ತದೆ. ಮೃತ ಭೂಮಂಡಲದಲ್ಲಿಯೂ ಜೀವಸಂಚಾರವಾಗುವಂತೆಸಗುವ ಇಂದ್ರಜಾಲ ಈ ವಸಂತದಲ್ಲಿದೆ. 'ವಸಂತ' ಉತ್ಸವವು ಕೊಂಚ ವೇಳೆಯವರೆಗಾದರೂ ತನ್ನ ಪ್ರಭಾವವನ್ನು ಬೀರಿ ಮಾನವಾಂತಃಕರಣದ ದುಃಖವೆಲ್ಲವನ್ನೂ ದೂರೀಕರಿಸಿ, ಅಲೌಕಿಕಾನಂದವನ್ನು ಈಯುತ್ತದೆ.ಆದರೆ, ಅದನ್ನು ವರ್ಣಿಸಲು ಮಾತ್ರ ಅಶಕ್ಯವಾಗಿದೆ.

"ವೃಕ್ಷಗಳಾದರೋ ತುಂಬಿದ ತಿಂತಿಣಿ ಹೂಗಳೆಂಬ ಸ್ತನಗಳಿಂದ. ಶೋಭಿಸುವ ಕೆಂದಳಿರ ತುಟಿಗಳಿಂದ ಕೂಡಿ ಮನೋಹರರಾದ ಲತಾ ನಾರಿಯರಿಂದ ಬಾಗಿರುವ ತಮ್ಮ ಕೊಂಬೆಗಳೆಂಬ ಭುಜಗಳಲ್ಲಿ ಆಲಿಂಗನ ಮಾಡಿಕೊಳ್ಳಲ್ಪಟ್ಟುವು" ಎಂಬಾಗ ಸಚೇತನರ ಆನಂದೋದ್ರೇಕಗಳನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಎಂತಲೇ ಋತುಗಳಲ್ಲಿ ವಸಂತನೇ ರಾಜ. ಅವನ ಆಡಳಿತೆಯು ಸರ್ವಾಧಿಕಾರಿಯ ಆಡಳಿತೆಯಂತೆ. ಅವನ ಆಜ್ಞೆಗೆ ಎದುರಾಡುವ ಅಥವಾ ಎದುರು ನಿಲ್ಲುವ ಶಕ್ತಿ ಯಾರಿಗೂ ಇಲ್ಲ.

ಶುದ್ಧ ಹರಟೆ

ಜಗತ್ ಸರ್ವಮ್ ಸೇವಾ ಮಯಮ್

ಇಂದಿನ ಸೇವಾಕಾಲದಲ್ಲಿ ಸೇವೆ ಮಾಡಲಾಗದೆ ಹೋದರೂ ಸೇವೆ ಎಂಬ ಪದವನ್ನಾದರೂ ಉಚ್ಚರಿಸಿರಿ

"ಜಗತ್ ಸರ್ವಂ ಸೇವಾಮಯಂ" ಎಂಬೊಂದು ಶ್ಲೋಕವನ್ನೇ ಕಲ್ಪಿಸಬೇಕಾಯ್ತು, ಈ ಸೇವಾಮಯವಾದ ಪ್ರಪಂಚವನ್ನು ಕಂಡು. "ಜಗತ್ ಸರ್ವಂ ಈಶ್ವರಾಧೀನಂ" ಎಂಬ ವೇದವಾಕ್ಯ ಎಷ್ಟು ಸತ್ಯವೋ ಬಲ್ಲವರಿಲ್ಲ! ಆದರೆ ಈಗ-ಜಗತ್ತೆಲ್ಲವೂ ಸೇವೆ ಮಾಡುವವರ ಅಧೀನ.—ಇದು ಸತ್ಯವೆಂಬುದನ್ನು ಈಗ ಜೀವದಲ್ಲಿರುವವರೆಲ್ಲರೂ ತಿಳಿದಿದ್ದಾರೆ! ಎಲ್ಲಿ ನೋಡಿದರೂ ಸೊಂಟಕಟ್ಟಿದ ಜನವೇ ಹೆಚ್ಚು. ಎಲ್ಲಿ ನೋಡಿದರೂ ಸೇವೆಗಾಗಿ ತಮ್ಮ ಬದುಕನ್ನೇ ಒತ್ತೆ ಇಟ್ಟು ಹೊರಟವರು! ಎಲ್ಲಿ ನೋಡಿದರೂ ಸೇವೆಯ ಸುದ್ದಿಯಲ್ಲೇ ಮಾತಿಗೆ ಮುಂದಾಗುವವರು! ಎಲ್ಲಿ ನೋಡಿದರೂ ಸೇವೆ ಮಾಡಿ ಮಹಾತ್ಮರೆನ್ನಿಸಿಕೊಂಡ ಮಹಾ ಪುರುಷರ ಆದರ್ಶವನ್ನೇ ಉದಾಹರಿಸಿಕೊಂಡು ಗಂಟೆಗಟ್ಟಲೆ ಭಾಷಣ ಬಿಗಿಯುವವರು!....ದೇಶ ಸೇವೆಗಾಗಿ ಸರ್ವತ್ಯಾಗ ಮಾಡಬೇಕೆನ್ನುವ ನಿಸ್ವಾರ್ಥ ಪ್ರೇಮಿಗಳೇ ನಮ್ಮಾ ಸೇವಾ ಪ್ರಪಂಚದ ಮಹಾವ್ಯಕ್ತಿಗಳು! ಕುರುಕ್ಷೇತ್ರದಲ್ಲಿ ಶ್ರೀಕೃಷ್ಣನು ಗೀತೆಯನ್ನು ಬೋಧಿಸಿ ಅರ್ಜುನನ ಜೀವನವನ್ನು ಸಾರ್ಥಕಗೊಳಿಸಿದಂತೆ—ಇಂದಿನ ಸೇವಾ ಪ್ರಪಂಚದಲ್ಲಿ ಸೇವೆಗಾಗಿ ಸೊಂಟಕಟ್ಟಿದ ಧುರೀಣರು ದಿನಕ್ಕೆ ನೂರೈವತ್ತು ಸಭೆಗಳಲ್ಲಿ ಭಾಗವಹಿಸಿ ಭಾಷಣ ಬಿಗಿಯುತ್ತ ಸೇವೆಯಿಂದ ಸಿಗುವ ಘನವಾದ ಪುಣ್ಯವೆಷ್ಟೆಂಬುದನ್ನು ಹೇಳುವ ಉಪದೇಶಾಮೃತವನ್ನು ಕೇಳಿಕೊಂಡೇ ಜನತೆ ಸಂತೃಪ್ತಿಗೊಳ್ಳಬೇಕು! ಯಾಕೆಂದರೆ - ಅಧಿಕಾರದಲ್ಲಿದ್ದುಕೊಂಡು ಅವರು ಅಷ್ಟು ಮಾತುಗಳನ್ನಾದರೂ ಧರ್ಮಾರ್ಥವಾಗಿ ನಮಗೆ ಹೇಳುವುದೆಂದರೆ ಅದೂ ಒಂದು ಸೇವೆಯಲ್ಲವೆ? ಯಾವ ಸಭೆ-ಸಮಾರಂಭಕ್ಕೆ ಬೇಕಾದರೆ ಹೋಗಿ,—ಯಾವ ಅಧಿಕಾರಿಯೇ ಆದರೂ ಹೇಳುವ ಮಾತುಗಳನ್ನು ಕೇಳಿ,—"ಜನತೆಯ ಸೇವೆ ಮಾಡುವುದಕ್ಕಾಗಿಯೇ ನಾವು ಬದುಕಿರುವುದು... ನಿಮ್ಮನ್ನು ಉದ್ಧಾರ ಮಾಡುವುದೇ ನಮ್ಮ ಉದ್ದೇಶ...ಜನತೆಯ ಉದ್ಧಾರಕ್ಕಾಗಿ—ಸಮಾಜದ ಏಳಿಗೆಗಾಗಿ...ದೇಶದ ಉನ್ನತಿಗಾಗಿ ನೀವೆಲ್ಲರೂ ನಿಮ್ಮಿಂದ ಸಾಧ್ಯವಿರುವಷ್ಟು ಅಳಿಲ ಸೇವೆಯನ್ನಾದರೂ ಮಾಡಿ ಲೋಕವನ್ನು ಉದ್ಧಾರ ಮಾಡಿರೆಂದು ಹೇಳುವ ದೇಶ ದ್ರೋಹಿಗಳು ನಮ್ಮಲ್ಲಿ ಹೆಜ್ಜೆ ಗೊಬ್ಬರಂತೆ ಕಾಣಸಿಗುತ್ತಾರೆ! ಉಪಹಾರ ಮಂದಿರದಿಂದ ಹಿಡಿದು ಎಸೆಂಬ್ಲಿ ಭವನದ ವರೆಗೂ ಈ ಸೇವೆಯ ಕೂಗನ್ನು ಕೇಳುವ ಭಾಗ್ಯ ನಮ್ಮದಾಗಿರುವಾಗ ಇನ್ನೂ ಶೇಷವಾಗಿ ಉಳಿದಿರುವ ಸುಖ-ಸೌಕರ್ಯ ಬಾಕಿಯಾಗಿರಬಹುದೆಂದು ನಮ್ಮ ಬೇಡಿಕೆಗಳೇ? ದೇಶದಲ್ಲಿ ಅಧಿಕ ಪ್ರಮಾಣದಲ್ಲಿರುವ ಜನಸಾಮಾನ್ಯರಿಗೆಲ್ಲ ಸ್ವರ್ಗಸುಖವನ್ನೇ ಒದಗಿಸಿ ಕೊಡಬೇಕೆಂಬ ಇಚ್ಛೆಯಿಂದಿರುವಾಗ...ಅದನ್ನೇ ದಿನಕ್ಕೆ ನೂರುಬಾರಿ ಮಾತಿನಲ್ಲಿ ಸ್ಪಷ್ಟವಾಗಿ ಹೇಳುತ್ತಿರುವಾಗ—ಮೇಲಿಂದ ಮೇಲೆ ನಮ್ಮ ಕೇಳಿಕೆಗಳನ್ನು ಮಂತ್ರಿ ಮುಖ್ಯರ ಮುಂದಿಟ್ಟರೆ ಅದಕ್ಕೆ ಮನ್ನಣೆ ದೊರೆಯುವುದಾದರೂ ಎಂತು? ಮಾತಿನಲ್ಲಿ ಹೇಳಿದಷ್ಟು ಸುಲಭವಾಗಿ ಕಾರ್ಯದಲ್ಲಿ ಮಾಡಲಾಗುವುದಿಲ್ಲವೆಂಬುದನ್ನು ನಾವೇನು ತಿಳಿದಿದ್ದೇವೆ? ಹಾಗೆಲ್ಲಾ ನಮಗೆ ಬೇಕಾದ ಕೆಲಸ-ಕಾರ್ಯಗಳನ್ನೂ, ಸುಧಾರಣೆ ಅಭಿವೃದ್ಧಿಗಳನ್ನೂ ತೀವ್ರವಾಗಿ ಮಾಡಿ ಮುಗಿಸಿದರೆ ಮುಂದಿನ ಚುನಾವಣೆಯಲ್ಲಿ ನಮಗವರ ಹಂಗು ಏನೂ ಇರಲಾರದೆಂಬ ಭಯ ಕೂಡಾ ನಮ್ಮ ಪ್ರತಿನಿಧಿಗಳಿಗೆ ಇದ್ದೇ ಇದೆ. ಅಥವಾ ಹೇಳಿದ್ದನ್ನೆಲ್ಲಾ ಕಾರ್ಯತಃ ಮಾಡಿ ಮುಗಿಸಿದರೆ ಮರುದಿನ ಸಭೆ-ಸಮಾರಂಭಗಳಲ್ಲಿ ಹೇಳಲಿರುವ ಆಶ್ವಾಸನೆಗೆ ವಿಷಯಗಳೇ ಇಲ್ಲದಂತಾಗಿ-ಮಾಡಲಿರುವವೆಂದು ಹೇಳುವ ಸೇವೆಗೆ ಮೂಲ ಹೆಸರೇ ಸಿಕ್ಕದೆ ಹೋಗಿ—ಅವರು ಪೇಚಾಡಬಹುದೇನೋ ಎಂಬ ಭಯವೂ ಒಂದಾಗಿದೆ. ಷೇಕ್ಸ್‌ಪೀಯರ್ ಮಹಾಕವಿ ಹೇಳಿದಂತೆ— "ಆಡಿದಂತೆ ಮಾಡಿದರೆ, ನುಡಿದಂತೆ ನಡೆದರೆ ಹೋಟೇಲುಗಳೆಲ್ಲ ದೇವಾಲಯವಾಗಬಹುದಂತೆ."

"ನಿಮ್ಮ ಸೇವೆಗಾಗಿಯೇ ತೆರೆದ ನಮ್ಮ ಈ ಉಪಾಹಾರ ಗೃಹಕ್ಕೆ ಅವಶ್ಯ ಭೇಟಿ ಕೊಡಿರೆಂದು" ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟು ತನ್ಮೂಲಕ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಬೇಕೆಂಬ ಉದ್ದೇಶವನ್ನಿಟ್ಟುಕೊಂಡ— ಹೋಟೇಲು ವ್ಯಾಪಾರಿಯ ಬಳಿಗೆ ಗಾಸಿಲ್ಲದೆ ಕಾಫಿ ಕುಡಿಯಲು ಬಂದವರಿಗೆಷ್ಟು ಉಪಕಾರವಾದೀತೋ ಅಷ್ಟೇ ಉಪಕಾರ ಈ ಸೇವಾಧುರೀಣರಿಂದ ನಮಗಾದೀತು! ಹೀಗಾಗಿ ಈ ಸೇವೆಯ ಸೋಗಿನಿಂದ ಏನೇನು ಅನರ್ಥ ಲಭ್ಯವೋ ತಿಳಿಯದು!

"ಪರೋಪಕಾರಾರ್ಥಮಿದಂ ಶರೀರಮ್" ಎಂದು ಸುಭಾಷಿತಕಾರ ಎಷ್ಟು ಸುಲಭವಾಗಿ ಅಂದುಬಿಟ್ಟನೋ ಅಷ್ಟೇ ಸುಲಭವಾಗಿ— "ಪರೋಪದೇಶಾತ್ ಸ್ವಾರ್ಥಸಿದ್ಧಿಃ" ಎಂಬುದನ್ನು ಈಗಿನ ಮುಖಂಡರೆಲ್ಲ ಪ್ರತ್ಯಕ್ಷವಾಗಿ ಮಾಡಿ ತೋರಿಸುತ್ತಿದ್ದಾರೆ.

"....ಪುಷ್ಪಾಣಾಂ ಮನುಷಂಗೇಣ ಸೂತ್ರಂ ಶಿರಸಿ ಧಾರ್ಯತೇ" ಹೂವನ್ನು ಪೋಣಿಸಿದ ದಾರವೂ ತಲೆಯನ್ನೇರಿ ಮೆರೆಯುವಂತೆ... ಈಗಿನ ಸುಧಾರಕರೆಲ್ಲ ಮಹಾತ್ಮರ ಹೆಸರನ್ನೇ ಹೇಳಿ— ಮಹಾ ಮಹಾ ತತ್ವ ನೀತಿಗಳನ್ನೇ ಸಾರಿ, ಪರೋಕ್ಷವಾಗಿ ತಮ್ಮ ಸ್ವಾರ್ಥವನ್ನೇ ಸಾಧಿಸಿಕೊಂಡು 'ಸೇವಕ'ರೆನ್ನುವ ಮಹಾ ಬಿರುದನ್ನು ಪಡೆದು ಮೆರೆಯುವವರಾಗಿದ್ದಾರೆ.

ದೇಶಸೇವೆಯ ಹಿನ್ನೆಲೆಯಲ್ಲಿ ಮೋಸ ಸೇವೆ! ಜನಸೇವೆಯ ಸೋಗಿನಿಂದ ಧನ ಸೇವೆ, ಈಶಸೇವೆಯ ಮರೆಯಲ್ಲೂ ಆಶಾ ಸೇವೆ... ಇದೆಲ್ಲ-ದೇವರ ಹೆಸರೆತ್ತಿ ಭಿಕ್ಷೆ ಬೇಡುವ ಭಿಕಾರಿಯ ವೇಷವೇ ಆಗಿದೆ. ಜನಕ್ಕೆಲ್ಲ ಸೇವೆಯ ಹುಚ್ಚೋ ಹುಚ್ಚು. ಶಾಲೆಗಳಲ್ಲಿ ಅಧ್ಯಾಪಕರ ಪಾಠಪ್ರವಚನದಿಂದ ಹಿಡಿದು ಡಿಲ್ಲಿಯ ಪಾರ್ಲಿಮೆಂಟ್ ಭವನದ ವರೆಗೂ ಈ ಸೇವೆಯ ಪೂಜಾ ಮಂತ್ರವೇ ಮಂತ್ರ. ಇನ್ನೂ ಸಭೆ ಸಮಾರಂಭಗಳಲ್ಲಂತೂ ಪ್ರಾರಂಭದ ಪ್ರಾರ್ಥನಾಗೀತೆಯಿಂದ ಕೊನೆಯ ಜನಗಣ ಮುದ್ದಕ್ಕೂ ಸೇವೆಯ ಕೂಗನ್ನು ಕೇಳಿ ಕೇಳಿ ಸಾಕಾಯ್ತು! ಸರ್ವವನ್ನೂ ಮಾತಿನಲ್ಲೇ ತ್ಯಾಗ ಮಾಡಿ ಬಿಡುವ ದೇಶೋದ್ಧಾರಕರು ಚುನಾವಣೆಯ ಕಾಲ ಸಾವಿರಗಟ್ಟಲೆ ಹಣ ವ್ಯಯ ಮಾಡುವುದಾದರೂ ಏಕೆನ್ನುತ್ತೀರಿ? ... ತಾವು ಮುಂದೆ ಜನಸೇವೆ, ಸಮಾಜಸೇವೆ, ದೇಶಸೇವೆ ಮುಂತಾದ ಹಲವಾರು ಬಗೆಯ ಸೇವೆ ಮಾಡಬೇಕೆಂಬುದೇ ಅವರ ಉದ್ದೇಶ! ... ಚುನಾವಣೆ ಮುಗಿಯುವ ವರೆಗಂತೂ ಎಲ್ಲೆಲ್ಲೂ ಒಂದೇ ಕೂಗು—"ಸೇವೆ" ಆ ಸಮಯ ಬೀಸುವ ಗಾಳಿಯೂ "ಸುಯ್" ಯೆಂದು ಈ ಸೇವೆಯ ಸಂದೇಶವನ್ನು ಸಾರುತ್ತಿದೆ. ಸೇವೆ ಮಾಡಬೇಕೆಂದಿರುವವರು ಮುಂದಾಗಿ ಚುನಾವಣೆಗೆ ನಿಲ್ಲಬೇಕು... ಮಾಡುವ ಸೇವೆಯು ಪೂರ್ಣ ಸಾರ್ಥಕವಾಗಬೇಕಿದ್ದರೆ ಆತ ಯಾವ ತಂತ್ರವನ್ನಾದರೂ ಹೂಡಿ ಮಂತ್ರಿಯಾಗಬೇಕು!—ಕೊನೆಗೆ ಸೇವೆ ಮಾಡುವುದರಿಂದ ಪ್ರಾಪ್ತಿಯಾಗುವ ಪುಣ್ಯದ ಫಲವನ್ನು 'ನೀವೆ ತಿನ್ನಿರೆಂದು' ಹೇಳುವ ಉದಾರತೆಯೂ ಅವನಲ್ಲಿರಬೇಕು. ಅನಂತರ ತಾನು ಚುನಾಯಿಸಿ ಬರುವ ಮೊದಲು ಮತದಾರರಿಗೆ ಕೊಟ್ಟಿರುವ ಆಶ್ವಾಸನೆಯ ವಿಚಾರಗಳನ್ನು ಪೂರ್ಣವಾಗಿ ಮರೆತು ಬಿಡಲು ಅಭ್ಯಾಸ ಮಾಡಬೇಕು! ಹಾಗೆಲ್ಲ ಮಾಡಿದರೆ ಭಾರೀ ಪ್ರಯೋಜನವಾಗುವಂತಹ ಒಂದು ಸೇವೆಯನ್ನು ಬಹುಸುಲಭವಾಗಿ ಮಾಡಬಹುದು. ಅದೇ—"ಸ್ವಾರ್ಥ ಸೇವೆ"—ಸ್ವಾರ್ಥ ಸೇವೆ ಮಾಡಿಕೊಳ್ಳುವುದು ತಪ್ಪೇನಲ್ಲ! ಯಾಕೆಂದರೆ—"ತಾನು ಒಳ್ಳೆಯದಾದರೆ ಲೋಕವೇ ಒಳ್ಳೇದಾದಂತೆ" ಎಂಬುದು ಅಂಥವರು ಹೇಳುವ ಸ್ವಕಲ್ಪಿತ ಗಾದೆ. ಅದಕ್ಕಾಗಿಯೇ ಮೊದಲಾಗಿ ಅವರು ತಮ್ಮ ಉದ್ಧಾರವನ್ನು ಮಾಡಿಕೊಳ್ಳುತ್ತಾರೆ. "ಗಾಳಿ ಬಂದಾಗ ತೂರಿಕೊಳ್ಳಯ್ಯ" ಎಂದು ದಾಸರೇ ಹಾಡಿದ್ದಾರಂತೆ. ಹಾಗಿರುವಾಗ ಸಮಯ ಬಂದಾಗ ಸಾಧಿಸಿಕೊಳ್ಳುವುದೇ ಚಾಣಕ್ಯ ನೀತಿ ಎಂಬುದನ್ನರಿತ ರಾಜಕಾರಣಿ ತನ್ನ ನಂತರ ಮನೆಮಂದಿ ಸುಖವಾಗಿರುವುದಕ್ಕಾಗಿ ಬೇಕಾದಷ್ಟನ್ನು ಸಂಪಾದಿಸಿಡಬೇಕಾದುದೂ ತನ್ನವರಿಗೆ ಮಾಡಬೇಕಾದ ಒಂದು ವಿಧದ ಸೇವೆಯೇ ಆಗಿದೆ.—ಸೇವೆ ಮಾಡದವನೊಬ್ಬ ಮಾನವನಲ್ಲ! ಕೊನೆಗೆ —"ಸೇವೆ ಸೇವೆ" ಎಂದೇ ನಾಲ್ಕು ಮಾತನ್ನಾದರೂ ಆಡದವ ಕರ್ಮ ಚಂಡಾಲ! ಅವನ ಬಾಯಿ "ಬಿಲದ ಬಾಯಿ" ಎಂದರೆ ತಪ್ಪೇನು? ಸೇವೆಗಾಗಿಯೇ ಜೀವನ-ಜೀವನಕ್ಕಾಗಿಯೇ ಸೇವೆಯ ಕೂಗು, ಹಾಗೆ ಒಂದಕ್ಕೊಂದು ಹೊಂದಿಕೊಂಡಿರಬೇಕು. ಆಗಲೇ ಬಾಳಿನ ಸಾರ್ಥಕತೆ! ತನಗೆ ಹೊಟ್ಟೆ ತುಂಬಿದಾಗ ಹಸಿದವನಿಗೆ ಉಪದೇಶದ ಸವಿಯನ್ನಾದರೂ ನೀಡುವುದು ಒಂದು ಸೇವೆ! - ಒಂದು ಸ್ಥಾನಕ್ಕೆ ಇಪ್ಪತ್ತೈದು ಮಂದಿಯ ಹೋರಾಟವಾದರೂ ಏಕೆಂದು ತಿಳಿದಿರಿ? ದೇಶಕ್ಕಾಗಿ-ಜನರಿಗಾಗಿ ಸೇವೆ ಮಾತಬೇಕೆಂಬುದೇ ಆ ಹೋರಾಟ—

ತನ್ನನ್ನು ಬಿಟ್ಟು—ಉಳಿದವರಲ್ಲಿ—"ಇದ್ದವರು ಇಲ್ಲದವರಿಗೆ ದಾನಮಾಡಿರಿ, ಸಹಾಯ ನೀಡಿರಿ"ಎಂದು ಹೇಳುವುದೇ ಒಂದು ಮಹಾಸೇವೆ! ಎಲ್ಲರೂ ಸೇವೆ ಮಾಡಲು ಕಲಿಯಬೇಕು. ಕಾರ್ಯತಃ ಮಾಡುವುದು ಅಸಾಧ್ಯವಾದರೆ ಸೇವೆಯ ಕುರಿತು ನಾಲ್ಕು ಮಾತುಗಳನ್ನಾದರೂ ಹೇಳಲು ಮರೆಯಬೇಡಿರಿ! ಹೀಗಿದ್ದರೆ ಮಾತ್ರ, ಈ ಸೇವಾಮಯವಾದ ಪ್ರಪಂಚದಲ್ಲಿ ಸುಖವಾಗಿ ಬಾಳಬಹುದು.!

—ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ.

ದಿ। ಕಿಲ್ಲೆಯವರ ಮೂರು ಪುಸ್ತಕಗಳು
ಪ್ರಾಚೀನ ತುಳುನಾಡು
(ಎಸ್, ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ ಬೆಲೆ: ರೂ. 2-00.
ಭಾರತದ ಕರ್ಣ
"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ.ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6 - 0.
ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ಕಥಾ ವಿಹಾರ

(೨ನೇ ಪುಟದಿಂದ)

ದಲ್ಲೋ ಬಂದು ಬೆಳೆದು ನಿಂತಿದ್ದ ಹುಂಜವೊಂದನ್ನು ಆರಿಸಿ ತಂದಿದ್ದನವನು.

ಆದಿನ ಕತ್ತಲ ಸಮಯ ಮಂಗಳನು ತನ್ನ ಮನೆಯಲ್ಲಿ ಕುರುಡು ದೀಪದ ಮಂದ ಪ್ರಕಾಶದಲ್ಲಿ ಉಂಡು ಕೈತೊಳೆದು ಸೊಂಟಕ್ಕೆ ಗೋಣಿ ಬಟ್ಟೆಯನ್ನು ಕಟ್ಟಿ, ತಲೆಗೆ ಉದ್ದನ್ನೆಯ ರುಮಾಲು ಸುತ್ತಿ ತನ್ನ ಕಬ್ಬಿಣದ ಕಟ್ಟು ಹಾಕಿಸಿದ ಬಲವಾದ ದಂಟೆಯೊಂದನ್ನು ಅದರ ಶಕ್ತಿಯನ್ನಳೆಯುವವನಂತೆ, ವಾಡಿಕೆಯಂತೆ ನೆಲಕ್ಕೊಮ್ಮೆ ಬಡೆದು ಹೆಂಡತಿಗೆ ತನ್ನ ನಿರ್ಗಮನದ ಸೂಚನೆಯನ್ನು ಕೊಟ್ಟನು. ಮಾಲತಿ ಕೂಡಲೆ ಅವನೆದುರು ಕಾಣಿಸಿಕೊಂಡಳು.

"ಮಾಲತಿ ನಾನು ಹೋಗಿಬರುತ್ತೇನೆ."

ಮಾಲತಿಗೆ ಬಲಿಯ ನೆನಪು ಬೇಡವೆಂದರೂ ಮರೆತು ಬಿಡಲಾಗುತ್ತದೆಯೆ? ಅವಳೆಂದಳು: "ಇಂದು ಗುಡಿಗೆ ಹೋಗಬೇಕಲ್ಲ?"

"ಹೌದು, ಆದರೆ, ನನಗೆ ಹೋಗಲಾಗುವುದಿಲ್ಲ. ನಾನತ್ತ ಹೋದರೆ, ಗದ್ದೆಯಿಡಿ ನಾಶವಾದರೆ...?

"ಮತ್ತೆ ನಾನು ಹೋಗುವುದೆ? ಈ ಮಕ್ಕಳುಮರಿಗಳನ್ನು ಬಿಟ್ಟು...?

"ಬೇರೇನೂ ಹೊಳೆಯುವುದಿಲ್ಲ. ಬಲಿನಡೆಯಲು ಸಮಯವಾದೊಡನೆಯೇ ಒಂದು ಗಳಿಗೆಯಮಟ್ಟಿಗೆ ಹೋಗಿ ಬಾ. ಮಕ್ಕಳನ್ನು ಮೊದಲೇ ಮಲಗಿಸಿಬಿಡು."

"ನಾನು ಹಿಂತಿರುಗಿ ಬರುವವೇಳೆಗೆ ಮಾರಿ ಮುನಿದುಬಿಟ್ಟರೆ....ಆಗ....?"

"ಅಯ್ಯೋ, ಪೆದ್ದಿ, ಮಾರಿಯ ಸೇವೆಗೆ ಹೋದಾಗ, ಮಾರಿ ಮುನಿಯುತ್ತಾಳೆಯೆ? ನನಗೂ ಹೋಗಬಹುದಿತ್ತು. ಆದರೆ, ನೋಡು, ಪೈರು ಪೂರ್ಣ ಹಣ್ಣಾಗಿದೆ. ಇನ್ನು ನಾಳೆ ನಾಡದು ಎಂಬಷ್ಟರಲ್ಲಿ ಕೊಯ್ದು ಹಾಕಬಹುದು. ಹಾಗಿರುವಾಗ, ಹಂದಿಯೋ ಕೋಣವೋ ಇಳಿದು ಬಂದರೆ, ವ್ಯರ್ಥ ನೋಡು...."

ಮಂಗಳನು ತನ್ನ ಅಸಹಾಯಕತನವನ್ನು ವಿವರಿಸಿ ಮಾಲತಿಗೆ ತಿಳಿಯಲೆಳಸಿದ.

ಆದರೆ, ಇದರಿಂದ ಮಾಲತಿಗೆ ಎಷ್ಟು ಸಾಂತ್ವನ ದೊರೆಯಿತೋ! ಪತಿಗೆ ಹೊರಡಲು ಅನುಮತಿಯಿತ್ತು, ತಾನು ಮಕ್ಕಳನ್ನುಣಿಸಲು ತೊಡಗಿದಳು.

ರಾತ್ರಿ ಹತ್ತು, ಹನ್ನೊಂದು ಕಳೆದಿರಬಹುದು. ಮಾರಿಗುಡಿಯಲ್ಲಿ ಬೇಂಡು ವಾಲಗಗಳಿಂದ ಎದ್ದ ನಾದವು ಪ್ರತಿಧ್ವನಿಸಿ ಕಿವಿಯಲ್ಲಿ ಗುಯ್‌ಗುಡುತಿತ್ತು. ಸಾಮಾನ್ಯವಾಗಿ ಊರ ಹೆಚ್ಚಿನವರು ಅಲ್ಲಿ ಮನೆಗೊಬ್ಬರಂತೆ ಸೇರಿದ್ದಾರೆ. ಇನ್ನು ಕೆಲವೇ ಗಳಿಗೆಯಲ್ಲಿ ಮಾರಿಯ ಪ್ರೀತ್ಯರ್ಥವಾಗಿ ಬಲಿದಾನ ಪ್ರಾರಂಭವಾಗಲಿದೆ. ಮಾಲತಿಯೂ ತನ್ನ ಮುದ್ದು ಮಕ್ಕಳೆಲ್ಲರನ್ನೂ ಉಣಿಸಿ ಮಲಗಿಸಿದಳು. ಕಿರಿಯ ಮಗು ಬಚ್ಚ ಮಾತ್ರ ನಿದ್ದೆ ಮಾಡಲೇ ಕೋ ಹಿಂದುಳಿದಿದ್ದನು. ತೊಟ್ಟಿಲಲ್ಲಿಟ್ಟು ತೂಗಿಯೂಯಿತು, ಕಾಲುಗಳಲ್ಲಿ ಮಲಗಿಸಿ ಬೆನ್ನು ತಟ್ಟಿಯೂಯಿತು, ಚಾಪೆಯಲ್ಲಿ ಮಲಗಿಸಿ ಮೊಲೆ ಹಾಲು ಕುಡಿಸಿಯೂಯಿತು. ಏನು ಮಾಡಿದರೂ ಮಗು ಮಾತ್ರ ಮಲಗುವುದನ್ನು ಬಿಟ್ಟು ಅಳಲು ಪ್ರಾರಂಭಿಸಿದೆ. ಮಾಲತಿಯ ಗಟ್ಟಿ ಎದೆಗೂ ಅದನ್ನು ಸಹಿಸಿಕೊಳ್ಳುವುದು ಅಸಾಧ್ಯವಾಗಿತ್ತು. ತಡಮಾಡಿದರೆ, ಬಲಿಯ ಹೊತ್ತು ಕಳೆದು ಹೋಗುತಿತ್ತು. ಮಾರಿಯ ಅಪಕೃಪೆಗೆ ಪಾತ್ರಳಾಗಬೇಕಾದ ಸಂಭವವೂ ಬರಬಹುದಾಗಿತ್ತು. ಆದರೆ, ಮಗುವನ್ನು ಜತೆಯಲ್ಲಿ ಕರೆದೊಯ್ಯುವುದು ಆಕೆಗ ಸರಿಬರಲಿಲ್ಲ. ಬಿಟ್ಟು ಹೋಗುವುದೂ ಅಸಾಧ್ಯವಾಗಿತ್ತು. ಆಗ ಮಾರಿಯ ಪ್ರತೀಕದೆದುರು ಬಲಿಯಾಯಲ್ಪಡುವ ನೂರಾರು ಪ್ರಾಣಿಗಳ ನೇತ್ತರೋಕುಳಿ—ಆ ಭಯಾನಕ ದೃಶ್ಯವನ್ನು ಕಂಡು ಮಗು ಹೆದರಿ ಹೋದರೆ........! ಅಲ್ಲದೆ ಹಾಲುಹಸುಳೆಯನ್ನತ್ತ ಒಯ್ಯುವುದು ಪ್ರಮಾದವಾಗಿ ಪರಿಣಮಿಸಿದರೆ....!! ತನ್ಮೂಲಕ ಬಯಸಿ ಬಸಿರಲಿ ಪಡೆದ ಮಗುವನ್ನೂ ಕೈಬಿಡಬೇಕಾಗಿ ಬಂದರೆ...ಹೀಗೆ ನಾನಾ ಯೋಚನೆಗಳಿಂದ ಆಕೆ ಚಿಂತಾಕ್ರಾಂತಳಾದಳು. ಆಕೆಯ ಮನಸ್ಸು ಕವಲುದಾರಿಯ ಮೊದಲಲ್ಲಿ ನಿಂತಿತು.

ಹೀಗೆ ಅದೆಷ್ಟು ಸಮಯ ನಿಂತಿದ್ದಳೋ ಆಕೆಗೇ ತಿಳಿದಿರಲಾರದು. ಮಾರಿಗುಡಿಯು ಸ್ಮಶಾನ ಮೌನವಾಗಿತ್ತು. ತನ್ನ ಮನೆಯ ಪಕ್ಕದ ಗುಡ್ಡದ ತಪ್ಪಲಲ್ಲಿ ಕಾಲಸಪ್ಪಳ ಕೇಳತೊಡಗಿತು. ಕೆಲನಿಮಿಷಗಳಲ್ಲೇ ಅದು ಸ್ಪಷ್ಟವಾಗಿ ಪರಿಣಮಿಸಿತ್ತು. ಮಾಲತಿಯ ಹೃದಯ ಕಂಗಾಲಾಗತೊಡಗಿತು. ಅಷ್ಟರಲ್ಲಿ ಒಂದು ಕಾಡು ಹಂದಿಯ ಕೂಗು! ಎಲ್ಲಿಯೋ ದೂರದಲ್ಲಿ ಹುಲಿಯ ಆರ್ಭಟ! ಕೆಲನಿಮಿಷಗಳಲ್ಲಿಯೋ ತಾನು ಉಳಿದುಕೊಂಡಿದ್ದ ಮನೆಯ ಭಾಗದಲ್ಲಿಯೇ ಜೋಡಿಸಲಾದ ಹಟ್ಟಿಯ ಬಾಗಿಲು ಬಡಿವ ಸದ್ದು! ಗೋಡೆಗಳನ್ನು ಪರಚುವ ಶಬ್ದ! ಮಣ್ಣು ಉದುರುವ ಮೆತ್ತಗಿನ ಧ್ವನಿ....! ಮಾಲತಿ ಸಂಪೂರ್ಣ ಧೈರ್ಯಗುಂದಿದಳು. ತಾನು ಅಥವಾ ತನ್ನ ಪತಿಯು ಮಾರಿಗುಡಿಗೆ ತೆರಳದೆ ಹೋದುದರಿಂದ ತನ್ನ ಮೇಲೆ ಮಾರಿಯು ಮುನಿದಿಂಬೇಕು! ತನ್ನ ಮೇಲೆ ಈಗ ಮಾರಿ ಯಾವ ರೂಪದಲ್ಲಿ ಬಂದು ಎರಗುವಳೋ? ಇಲ್ಲಿ ತನ್ನ ಮಕ್ಕಳನ್ನು ಎಂತು ಹಿಂಸಿಸುವಳೋ? ಅಲ್ಲಿ ಗದ್ದೆಯಲ್ಲಿ ಏಕಾಕಿಯಾದ ಪತಿಗೆ ಎಂತಹ ಪೀಡೆಯನ್ನು ಒದಗಿಸುವಳೊ ಎಂಬಿತ್ಯಾದಿಯಾಗಿ ಚಿಂತೆಯಿಂದ ಭಯದಿಂದ ಥರ ಥರನೆ ನಡುಗತೊಡಗಿದಳು. ಆದರೆ, ಆಕೆಯ ಆತ್ಮ ಹೇಳುತಿತ್ತು—ಪತಿಯು ಈ ಕರ್ತವ್ಯವನ್ನು ತನಗೊಪ್ಪಿಸಿ ಹೋಗಿದ್ದಾನೆ. ಆದುದರಿಂದ ನ್ಯಾಯಪಕ್ಷಪಾತಿಯಾದ "ಮಾರಿದೇವಿ" ಅವರನ್ನು ಯಾತನೆಗೀಡುಮಾಡದೆ ತನ್ನೆಡೆಗೇನೇ ಬಂದಿದೆ. ತಾನು ತನ್ನ ಕರ್ತವ್ಯ ಭಂಗವನ್ನು ಉದ್ದೇಶಪೂರ್ವಕವಾಗಿ ಮಾಡಿಲ್ಲ. ತನ್ನ ಮಗುವು ನಿದ್ರಿಸದಿರುವಾಗ ಮಾತೃ ಹೃದಯವು ಅದನ್ನು ಹಾಗೆಯೇ ಬಿಟ್ಟು ಹೇಗೆ ತೊರೆದಬಹುದು! ಆದುದರಿಂದ ದೈವದ ದೃಷ್ಟಿಯಿಂದಲೂ ತಾನು ಅಪರಾಧಿಯಲ್ಲ.

ಕೆಲವೊಮ್ಮೆ 'ದೇವಿ' ಅನ್ಯಾಯ ಮಾರ್ಗವನ್ನು ಅವಲಂಬಿಸುವುದಿದೆ. ಅಲ್ಲದೇ ಊರವರೆಲ್ಲರೂ ಕಳೆದೆರಡು ವರ್ಷಗಳಲ್ಲಿ ತಾವೆಸಗಿದ ಅಪರಾಧವನ್ನು ತಿಳಿದು, ಅದನ್ನು ಪರಿಹರಿಸಿಕೊಳ್ಳಲು ಮುಂದಾಗಿರುವಾಗ, ನಾನು ಮಾತ್ರ ಅದರಿಂದ ಚ್ಯುತಳಾಗಿರುವುದು ನ್ಯಾಯವೇ ಎಂದು ಪ್ರಶ್ನಿಸುತ್ತದೆ ಮನಸ್ಸು ಆದರೆ, ಇದಕ್ಕೆ ಯಾವ ಹೊಸ ಉತ್ತರವೂ ಆಕೆಯಲ್ಲಿರಲಿಲ್ಲ.

ಸದ್ಯ ದೇವಿಯ ಅಪಕೃಪೆಗೆ ಗುರಿಯಾಗಲೇ ಬೇಕಾಗಿತ್ತು. ತನ್ನ ಮತ್ತು ತನ್ನ ಮಕ್ಕಳ ಹಾಗೂ ದನಕರುಗಳ ರಕ್ಷಣೆಯನ್ನೂ ಮಾಡಬೇಕಿತ್ತು. ದೇವಿಯನ್ನು ಮನಸ್ಸಿನಲ್ಲಿ ಪರಿಪರಿಯಾಗಿ ಸ್ತುತಿಸುತ್ತ ತಾನು ನಿರಪರಾಧಿನಿಯೆಂದೂ ತನಗೆ ಕೇಟಲೆ ಕೊಡದೆ ದೂರ ಹೋಗಬೇಕೆಂದೂ ಪ್ರಾರ್ಥಿಸಿದಳು. ಆದರೆ, ದೇವಿ ಈ ಮೊರೆಯನ್ನು ಕೇಳಿದಂತೆ ಕಂಡುಬರಲಿಲ್ಲ. ಗೋಡೆಯಿಂದ ಒಂದೇ ಸವನೆ ಮಣ್ಣು ಉದುರುತಿತ್ತು. ಕಾಡು ಹಂದಿ ತನ್ನ ಕೊಂಬುಗಳಿಂದ ಗೋಡೆಯಲ್ಲಿ ತೂತು ಕೊರೆಯುತ್ತಿದೆಯೆಂದು ಆಕೆ ತಿಳಿದುಕೊಂಡಳು. ಅಷ್ಟರಲ್ಲಿಯೇ ಗೋಡೆಯ ನಡುವೆ ಒಂದು ತೂತು ಕಾಣಿಸಿತು. ಚಿಮಣಿ ದೀಪದ ಅಲ್ಪ ಬೆಳಕಿನಲ್ಲಿಯೇ ಇದು ದೃಷ್ಟಿ ಗೋಚರವಾಯಿತು. ಬರಬರುತ್ತ ತೂತು ದೊಡ್ಡದಾಗುತ್ತ ಬಂತು. ತಾನು ಈ ರೀತಿ ದೈನ್ಯಳಾಗಿ ಬೇಡಿಕೊಳ್ಳುತಿದ್ದರೂ ತನ್ನಲ್ಲಿ ಲವಲೇಶಾಪರಾಧವಿಲ್ಲದೆ ಹೋದರೂ ದೇವಿಯು ತನ್ನನ್ನು ಶಿಕ್ಷಿಸುವುದೆಂದರೆ, ಆಕೆ ದೇವಿಯೇ ಅಲ್ಲ. ಅದು ಯಾವುದೋ ಪಿಶಾಚಿಯಿರಬೇಕೆಂದು ನಿಶ್ಚಯಿಸಿ, ಎಲ್ಲಿಲ್ಲದ ಧೈರ್ಯ ತಂದುಕೊಂಡಳು ಮಾಲತಿ. ಆಕೆಯ ಅಂಗಾಂಗಗಳಲ್ಲಿ ವಿದ್ಯುತ್ ಸಂಚಾರವಾದಂತೆ ಭಾಸವಾಯಿತು. ಅಷ್ಟರಲ್ಲಿಯೆ ಆ ಗೋಡೆಯ ತೂತಿನೊಳಗಣಿಂದ ಒಂದು ಕಾಲಿನಂತಿರುವ ವಸ್ತು ಒಳಬರತೊಡಗಿತು. ಮಾಲತಿ ಸಮೀಪದಲ್ಲಿದ್ದ, ತನ್ನ ಪತಿ ಕೊಟ್ಟು ಹೋಗಿದ್ದ ಬಲವಾದ ಉದ್ದನೆಯ ದೊಣ್ಣೆಯೊಂದನ್ನು ಹಿಡಿದು ಗೋಡೆಯ ಪಕ್ಕಕ್ಕೆ ತೆರಳಿ, ದೇವಿಯನ್ನು ನೆನೆದು ಅದಕ್ಕೆ ಒಂದು ಬಲವಾದ ಏಟುಕೊಟ್ಟಳು. ಏಟು ಬಿದ್ದುದೇ ತಡ, 'ಅಯ್ಯಯ್ಯೋ' ಎಂಬ ಚೀರಾಟದೊಡನೆ ಆ ಕಾಲು ತೀವ್ರವಾಗಿ ಹೊರಗೆ ಹೋಯಿತು. ಮನೆಯ ಹೊರಮಗ್ಗುಲಲ್ಲಿ ಅನೇಕ ಕಾಲ ಸಪ್ಪಳಗಳು ಓಡುತ್ತಿರುವುದರ ಕಲ್ಪನೆಯನ್ನು ಕೊಡತೊಡಗಿದುವು. ಮಾಲತಿಯು ಮಾನವಸ್ವರವನ್ನು ಕೇಳಿ, ಆಶ್ಚರ್ಯ ಹಾಗೂ ಅಂಜಿಕೆಗಳೊಡನೆ "ಕಳ್ಳ...ಕಳ್ಳ..." ಎಂದು ಗಟ್ಟಿಯಾಗಿ ಚೀರತೊಡಗಿದಳು. ಅನತಿ ದೂರದಲ್ಲೇ ಬಲಿ ತೆತ್ತು ತಂತಮ್ಮ ಮನೆಗಳಿಗೆ ತೆರಳುತಿದ್ದ ಜನರು ಈ ಕೂಗಾಟವನ್ನು ಕೇಳಿ ಧಾವಿಸಿ ಬಂದರು. ಮಾಲತಿ ಬಾಗಿಲು ತೆರೆದು ಚುಟುಕಿನಲ್ಲಿ ನಡೆದ ಘಟನೆಯನ್ನು ವಿವರಿಸಿದಳು.

ಅಷ್ಟರಲ್ಲಿಯೇ ಗುಡಿಯಲ್ಲಿ ಸೇರಿದವರೆಲ್ಲರೂ ಮಂಗಳನ ಮನೆಯಲ್ಲಿ ಕೂಡಿದರು. ಕೆಲವು ಧೈರ್ಯಶಾಲಿಗಳು ಪಂಜಿಗಳನ್ನು ಉರಿಸಿ ಕಳ್ಳರ ಶೋಧನೆಗೆ ಹೊರಟರು. ಸುಮಾರು ಮೂರು ಫರ್ಲಾಂಗ್ ದೂರದ ತೋಡ ಬದಿಯಲ್ಲೊಬ್ಬ ಕಾಲು ಕುಂಟುತ್ತ, ಕೈಯಲ್ಲಿ ಕೋಳಿಯೊಂದನ್ನು ಹಿಡಿದುಕೊಂಡು ಹೋಗುತ್ತಿರುವುದು ಕಂಡು ಬಂತು. ಅವನನ್ನು ಹಿಡಿದು, ಪರೀಕ್ಷಿಸಿದಾಗ, ಆಗ ತಾನೇ ಪೆಟ್ಟು ತಾಗಿದವನೆಂದು ಸಿದ್ಧವಾಗಿ, ಆತನನ್ನು ಮಂಗಳನ ಮನೆಗೆ ಎಳೆದು ತರಲಾಯಿತು. ಅಲ್ಲಿಯೇ ನಡೆದ ವಿಚಾರಣೆಯಿಂದ, ಆ ಗ್ರಾಮದಲ್ಲಿ ಆವರೆಗೆ ನಡೆದ ಕಳವುಗಳಿಗೆ ತಾನೂ ತನ್ನ ಅನುಯಾಯಿಗಳೂ ಕಾರಣರೆಂದು ಬಾಯಿಬಿಟ್ಟನವ. ಇಷ್ಟು ಹೊತ್ತಿಗೆ ನಸುಕು ಹರಿದಿತ್ತು. ಮಂಗಳನೂ ಮನೆಗೆ ಹಿಂತಿರುಗಿದನು. ತನ್ನ ಹೆಂಡತಿಯ ಎದೆಗಾರಿಕೆಯ ಪ್ರಶಂಸೆಯನ್ನು ಊರವರ ಮುಖದಿಂದ ಕೇಳಿ ಉಬ್ಬಿದನು.

ಸೂರ್ಯೋದಯವಾದೊಡನೆಯೇ ಪೋಲೀಸು ಕಛೇರಿಗೆ ದೂರು ಹೋಯಿತು. ಮುಂದಕ್ಕೆ ನಡೆದ ವಿಚಾರಣೆಯಲ್ಲಿ ಕಳ್ಳತನದ ಆರೋಪವು ಸಿದ್ಧವಾಗದೆ. ಹೋಯಿತು. ಆರೋಪಿಗಳ ಬಿಡುಗಡೆಯೂ ಆಯಿತು. ಆದರೆ, ಒಂದು ಮಾತು ಮಾತ್ರ ಸತ್ಯ—ಆ ಮಾರಿಗೆ ಬಲಿ ತೆತ್ತ ದಿನದಿಂದ ಆ ಗ್ರಾಮದಲ್ಲಿ ತಿರುಗಿ ಕಳ್ಳತನವಾದುದರ ಬಗ್ಗೆ ವರದಿಗಳು ಮಾತ್ರ ಬರಲಿಲ್ಲ. ಇದಕ್ಕೆ ಮಾರಿಯ ಕೃಪಾ ಕಟಾಕ್ಷವೇ ಕಾರಣವಾಗಿರಬಹುದು; ಅಥವಾ ಮಾಲತಿಯ ಎದೆಗಾರಿಕೆಯೂ ಕಳ್ಳರಿಗೆ ಬುದ್ಧಿ ಕಲಿಸಿರಬಹುದು!

—ಗೋರಾ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No 8/1959

ಸುಂದರಿಶೆಟ್ತಿ ಕೂಡಾ 3 ಜನರು-ಅರ್ಜಿದಾರರು

ಮತ್ತು

ತುಂಗು ಶೆಟ್ತಿ—ಎದ್ರಿಳು.

ಇವರೊಳಗೆ

ಈ ಮೂಲಕ ಸರ್ವಜನರಿಗೂ ತಿಳಿಸುವದೇನೆಂದ್ರೆ

ಕಾರ್ಕಳ ತಾಲ್ಲೂಕು ಹಿರ್ಗಾನ ಗ್ರಾಮದ ಜೋಗಯ ಮನೆಯಲ್ಲಿರುವ ಮೃತ ಸೂರಪ್ಪ ಶೆಟ್ರ ಬಾಬ್ತು ಬಾಕಿ ಸೊತ್ತುಗಳಿಗೆ ಅರ್ಜಿದಾರ್ರು ಮತ್ತು ಎದ್ರಿಳಿಗೆ ಕೂಡಾ ವಾರಿಸ ಸರ್ಟಿಫಿಕೇಟು ಕೊಡ ಹೇಳಿ ಅರ್ಜಿದಾರ್ರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿ ತಾ:14-3-1959ಕ್ಕೆ ಇಟ್ಟಿದೆ. ಆಕ್ಷೇಪವುಳ್ಳವರು ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ದ್ವಾರಾ ಹಾಜರಾಗಿ ಉಜರ್ರು ಹೇಳತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ಅರ್ಜಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

(By order of the court)

N. M. Adyanthaya,

Advocate for Ptr.

Karkala, 17-2-59.

ಕುಮಾರಿ ಟಿಕ್ಲಿಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿ

NAVAYUGA
REGD. NO. M. 3619

UDIPI, THURSDAY
26-2-1959

LICENSE NO. 31
Licensed to Post without Prepayment

ಶಬ್ದ ಕೋಶಗಳು

ನಡುಗನ್ನಡ ಹೊಸಕನ್ನಡ ಕಾಲದ ಕೋಶಗಳು

ಇಂದಿನ ಮಾದರಿಯ ಶಬ್ದಕೋಶ ೧೯ನೆ ಶತಮಾನಾಂತ್ಯದಲ್ಲಿ ನಿರ್ಮಿತವಾಯಿತು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

೧೨ ಕರ್ನಾಟಕ ಸಂಜೀವನ

ಇದಕ್ಕೆ ರಳಕುಳ ನಿಘಂಟೆಂಬ ಹೆಸರಿದೆ. ಇದನ್ನು 'ಬೊಮ್ಮರಸ ನಾಯಕನ ಸುತನೆನಾಂ ಶೃಂಗಾರ ಕವಿ (ಸು ೧೬೦೦) ರಚಿಸಿದೆಂ" 'ಶೃಂಗಾರ ಕವಿ ನುಡಿದ ನುಡಿ ಕಾಮಿಸಂ| ಕುಳಕೆ ಪುಷ್ಪಾಸ್ತ್ರಮುಂ ಬಂತಕ್ಕುಂ" 'ಕುಳ ಪಾದದೆಡೆಯೊಳ್ ಕ್ಷಳನು ಮಲಂಕಾರದಿಂ ಪ್ರಾಸಮುಂ ಮಾಡೆ ದೋಷಂ' ಕುಳಕ್ಷಳನೆರಡುಂ ಬೆರಸೆ ಸೌಖ್ಯೋದಯಂ' 'ಕ್ಷಳಕುಳನನಿಯುನುಕ್ತ್ರೆ ರಳನ ಸಂಪಾದಿಸಿದೊಡಶುಭಮಿದುಮಂ ಪರಾಜಾದಿಕರ್ನಾಟಕ ಕವಿರಾಯರ ಮತಂ" ಎಂದಿದ್ದಾನೆ. ಇದರ ಪದ್ಯಗಳೆಲ್ಲಾ ವಾರ್ಧಕ ಷಟ್ಪದಿಯಲ್ಲಿವೆ ಶೃಂಗಾರಕವಿ ಎಂಬುದು ಇವನ ಹೆಸರೋ ಬಿರುದೋ ತಿಳಿಯುವುದಿಲ್ಲ. ರತ್ನಾಕರಾಧೀಶ್ವರ ಶತಕವನ್ನು ಬರೆದ ಶೃಂಗಾರಕವಿ (ಸು. ೧೬೨೦) ಇವನಿಂದ ಭಿನ್ನನು. ಇದರಲ್ಲಿ ಮೂವತ್ತೈದು ವಾರ್ಧಕಗಳಿವೆ. ಈ ಕವಿಯು ರಳ ಕುಳ ಕ್ಷಳಗಳು ಕರ್ನಾಟಕ ಭಾಷೆಯ ಸಂಜೀವನಗಳೆಂಬ ಭಾವನೆಯಿಂದ ತನ್ನ ನಿಘಂಟುವಿಗೂ ಆ ಹೆಸರನ್ನಿಟ್ಟು ಆ ಪದಗಳಲ್ಲಿ ಹಲವನ್ನು ಪ್ರತ್ಯೇಕಿಸಿ ರಳ ಪದಗಳಿಗೆ ಏಕಾರ್ಥಗಳು ಮತ್ತು ಐದು ನಾನಾರ್ಥಗಳ ವರೆಗೆ ಅಲ್ಲದೆ ಕುಳ ಳಕಾರವನ್ನು ಪ್ರತ್ಯೇಕಿಸಿ ಅರ್ಥ ಬರೆದಿದ್ದಾನೆ.

ವೀರಶೈವರಲ್ಲಿ ಪ್ರಬಲನಾದ ಹರಿಹರನು (ಸು ೧೨೩೫) 'ನೋಡುವೊಡೊಂದಕ್ಕರಮದು| ಮಾಡುವ್ರುಚ್ಚರಣೆಗರಿದು ಮೂರುಂ ತೆರನು|| ಕೂಡೆ ಕವಿತತಿ ವಿಚಾರಿಸಿ| ಬೇದಮಂ ರಳಕುಳಕ್ಷಳಂಗಳ ನಿದಪರ್||' ಎಂದು ರಳಕುಳಕ್ಷಳ ಪ್ರಾಸವನ್ನು ಉಲ್ಲಕ್ಷ್ಯಮಾಡಿ, ಅವುಗಳ ಪ್ರಯೋಗ ಆಧಿಕ್ಯವನ್ನು ತಡೆಯಲು ಯತ್ನಿಸಿದನು ಈ ಕವಿಗೂ, ದರ್ಪಣಕಾರನಿಗೂ ಸಮ್ಮತವಾಗದುದರಿಂದ ಅವುಗಳ ಅಮರ ಜೀವನಕ್ಕಾಗಿ ಹೆಣಗಿದರೂ ಮುಂದೆ ಅವರಿಂದ ಅವನ್ನು ಉಳಿಸಿಕೊಳ್ಳಲಾಗಲಿಲ್ಲ. ಇದು ಹಳಗನ್ನಡಕ್ಕೆ ಉಪಯೋಗಕರವಾದ ನಿಘಂಟು

ನಾಲ್ಕರ್ಥಕ್ಕೆ ರಳಕ್ಕೆ ಪ್ರಯೋಗಂ—
|| ವಾ | ಷ ||
ತುರಗವಾಸ್ಯದಲೋಹದೊಳು ಕೆಳಗೆ
ದುಷ್ಕುಲದೊ
ಳೊರೆಗೆಟ್ಟಬಂಗಾರದಲ್ಲಿ ಕೆಳೆನಿ
ಸುಗುಂ
ಕರಿವಲ್ಲಿ ಲೇಪನಂಗೆಂಬಲ್ಲಿ ಬಟ್ಟೆ
ಯೊಳ್ ಪಂಕದೊಳ್ ಪಲ್ಲಕ್ಕಿಯೊ||
ಸ್ವರಭೇದದಲ್ಲಿ ಬಳಯೆನಿಸುಗುಂ
ಫಲಿಯೆನಲ್
ವರವಸ್ತ್ರದಲ್ಲಿ ದೂಷಣದಲ್ಲಿ ಲೋಹ
ಮಂ
ಕರಗಿಸಿದ ಘಟ್ಟಿಯೊಳ್ ಕುನ್ನಿಯುಂ
ಪೊರವಡಿಪ ನುಡಿಯೊಳಂ ವರ್ತಿಸಿರ್ಕುಂ||

೧೩ ಶಬ್ದಾಗಮ

ಇದರ ಕವಿ ಯಾರೆಂದು ತಿಳಿದಿಲ್ಲ. ಇದು ಕಂದ ಪದ್ಯದಲ್ಲಿದೆ. ಇದರಲ್ಲಿ ಸಂಸ್ಕೃತ ಮತ್ತು ದೇಶೀಯ ಪದಗಳೆರಡೂ ಇವೆ. ಕಾಲ ಸು. ಕ್ರಿ ಶ ೧೬೦೦.

|| ಕಂದ ||
ಶ್ರೀಧರಮೆನೆ ಗಿರಿಯಕ್ಕುಂ
ಶ್ರೀಧರಮೆನೆ ಸಿಂಹಮಕ್ಕು
ಸಿಂಗರಮಕ್ಕುಂ ||
ಶ್ರೀಧರಮೆನೆ ಜಲಮಕ್ಕುಂ
ಶ್ರೀಧರನೆನೆ ವಿಷ್ಣುವಕ್ಕು
ಶಬ್ದಾಗಮದೊಳ್ ||

೧೪ ನಾನಾರ್ಥ ರತ್ನಾಕರ

ಇದನ್ನು ದೇವೋತ್ತಮನೆಂಬ ಕವಿಯು (ಸು ೧೬೦೧) ವೃತ್ತರೂಪವಾಗಿ ಬರೆದನು. ಈ ಕವಿಯು ಜೈನನು. ತಾನು "ದ್ವಿಜವಂಶಾರ್ಣವ ಪೂರ್ಣಚಂದ್ರಂ" ಎಂದೂ, ತನ್ನ ಕಾವ್ಯವು 'ಸತ್ಕವಿ ಸಮೂಹಕ್ಕೈದೆ ತಾಯ್ವೀಡು, ವಾಗ್ಮಿಗಳಾನಂದ ರಸಾಧಿವಾಸ" ಎಂದು ಹೊಗಳಿಕೊಂಡಿದ್ದಾನೆ. ಇದರಲ್ಲಿ ೧೪೯ ವೃತ್ತಗಳಿದ್ದು ಸಂಸ್ಕೃತ ಪದಗಳಿಗೆ ನಾನಾರ್ಥವನ್ನು ಕೊಡುವ ಕೋಶವಾಗಿದೆ. ಈ ನಿಘಂಟನ್ನು "ನಿಜಗೋಪಾಲಧನಂಜಯಾಭಿನವ ಮಾಚಂ ಧಾಗುರೀ ನಾಗವ| ರ್ಮಜಯಂತಾಮರ ಶಬ್ದಮಂಜರಿಬಲ,.. ..." ಮೊದಲಾದ ನಿಘಂಟುಗಳ ಆಧಾರದಿಂದ ರಚಿಸಿದ್ದೇನೆಂದು ಹೇಳಿದ್ದಾನೆ. ಇದಕ್ಕೂ ವ್ಯಾಖ್ಯಾನವಿದೆ

|| ವೃತ್ತ ||
ಗೋವಿಂದಜಾಮದಗ್ನಿ ಧವಳಾಸಿತ
ದಾಶರಥಂ ಹಲಾಯುಧಂ
ಕಾಮಿನಿ ಸುಂದರಂ ವಿಮಲವಿಂತಿವು
ರಾಮಮೆನಿಕ್ಕು ವಕ್ರದೊಳ್ ||
ಭಾಮಿನಿಯೊಳ್ ಮನೋಹರದೊಳುಂ
ಪ್ರತಿಕೂಲದೊಳುಂ ಮನೋಜ್ಞೆಯೊಳ್|
ವಾಮದೊಳಯ್ದೆ ವಾಮಮೆನಿಸಿರ್ಕು
ಜಲಾಢ್ಯಪಯಃಪ್ಲುತಾಹ್ವಯಂ ||

೧೫ ನಾನಾರ್ಥ ಕಂದಪದ್ಯ

ಚೆನ್ನಕವಿ (ಸು. ೧೬೨೦), ಇದನ್ನು ಬರೆದನು. ಇವನು ಭಾರದ್ವಾಜಗೋತ್ರದ ಬ್ರಾಹ್ಮಣನು. ಇದು ನಾನಾರ್ಥ ರತ್ನಾಕರದಂತೆ ಸಂಸ್ಕೃತ ಪದಗಳ ನಾನಾರ್ಥವನ್ನು ಕಂದಪದ್ಯಗಳಲ್ಲಿ ತಿಳಿಸುವ ನಿಘಂಟು. ಈತನು ತನ್ನನ್ನು ಕುರಿತು 'ಧೀರದ್ರಾವಿಡನು' 'ರಾಮಚರಿತಂಗಳನೀ ಧಾರುಣಿಗೆ ತೋರ್ಪ ಚನ್ನಕವೀಂದ್ರಂ" ಎಂದು ಹೇಳಿಕೊಂಡಿದ್ದಾನೆ

ಇದರಲ್ಲಿ ೧೬೦ ಕಂದಗಳಿವೆ. ಇದಕ್ಕೆ ಬೆಂಗಳೂರು ತಾಲೂಕಿನ ಉಪ್ಪಾರಹಳ್ಳಿ ಸ್ಕೂಲಿನ ಹೆಡ್‌ಮಾಸ್ತರರಾದ ಶೇಷಪ್ಪನವರ ಸಹಾಯದೊಡನೆ ಅದೇ ಶಾಲೆಯ ಅಧ್ಯಾಪಕರಾದ ಹೆಸರುಘಟ್ಟದ ಹೊನ್ನಪ್ಪನವರು ವಿದ್ವಜ್ಜನಪ್ರಿಯವೆಂಬ ಟೀಕೆಯನ್ನು ಬರೆದಿದ್ದಾರೆ.

|| ಕಂದ ||
ಮತ್ತಗಜಂ ಮರಪರ್ಣಂ
ಕತ್ತಲೆಯುದಕಾಗ್ನಿ ಸೀಸ ಮುಖ್ಯಂ
ಶಂಖಂ ||
ಚಿತ್ತರವಾಗಿಹ ಪೆಸರೋಂ
ಬತ್ತುಂ ನಾಗಾಭಿಧಾನಮೆನಿಕುಂ
ಜಗದೊಳ್ ||

೧೬. ಕವಿ ಕಂಠಹಾರ

ಇದನ್ನು 'ಶ್ರೀ ಸೂರ್ಯಪದಯುಗಾರುಣ| ಬಾಹುಲ ಸರಸಿಜ ಮರಾಳ'ನಾದ ತಿಮ್ಮ ಮಂತ್ರಿಯ ಮಗ ಸೂರ್ಯಕವಿಯು (ಸು. ೧೬೫೦) ಬರೆದನು. ಈ ಕವಿಯು ತಾನು 'ದಿವಾಕರ ಕುಮಾರನು'; ಅಲ್ಲದೆ 'ಉಭಯ ಭಾಷಾ ಕವಿತಾನೂತನ ಪದರಚನಾ ವಿಖ್ಯಾತನು' 'ಪಶುಪತಿಯೆ ನಾಂ' ಎಂದಿದ್ದನೆ ತಾನು 'ಕಾಶ್ಯಪರ ಕಯ್ವಾಡಿಯೆನೆ ಗಾಡಿವಡೆದಿಹ ಗೀರ್ವಾಣ ನಾಡುಂಬೋಲವಾದ ಹೊಯ್ಸಳ ದೇಶದವ'ನೆಂದು ಹೆಮ್ಮೆಪಟ್ಟಿರುವನು. ಇವನು ತನ್ನ ಕೋಶದ ಕೊನೆಯ ಪದ್ಯದಲ್ಲಿ ಐದು ತತ್ಸಮ ಪದಗಳನ್ನು ಮಾತ್ರ ಹೇಳಿದ್ದಾನೆ. ಇದರಲ್ಲಿ ೨೬೦ ಕಂದ ಪದ್ಯ ಮತ್ತು ೧ ವೃತ್ತವಿದೆ ಈ ಕವಿಯು ಅಷ್ಟು ಸಮರ್ಥನಲ್ಲ. ಇವನ ಕಂದ ಪದ್ಯಗಳಲ್ಲಿ ಅಲ್ಲಲ್ಲಿ ಛಂದೋಭಂಗ, ವಿಷಮ ಸ್ಥಾನದಲ್ಲಿ ಜಗಣಪ್ರಯೋಗ ಮೊದಲಾದ ದೋಷಗಳಿವೆ.

|| ಕಂದ ||
ನೆರೆಕನ್ನಡವಕ್ಕಿಯುಮೆಂ
ದುರೆ ಪಂಡಿತವಕ್ಕಿ ಗಿಳಿಯುಮೆನೆ
ಶುಕನಕ್ಕುಂ ||
ಪುರುಳಿ ಶಾರಿಕೆಯೆನಲ್ಕಿವು
ನಿರುತಂ ಪೆಣ್ಗಿಳಿಗೆ ನಾಮಮಕ್ಕುಂ
ಬುಧರಿಂ ||

ವಿಶಾಲವಾಗಿ ಹಬ್ಬುತ್ತಿರುವ
"ಸಿಂಡಿಕೇಟ್" ಬೇಂಕಿನ
ನೂರಹದಿನೇಳನೆಯ ಶಾಖೆಯು
ಕಾಕಿನಾಡ (ಪೂರ್ವ ಗೋದಾವರಿ, ಆಂಧ್ರ)ದಲ್ಲಿ
ಸದ್ಯದಲ್ಲಿಯೇ ತೆರೆಯಲ್ಪಡುವುದು.
ಒಟ್ಟು ವ್ಯವಹಾರ ಸಂಪತ್ತು ರೂ. 17 ಕೋಟಿಗೂ ಮಿಕ್ಕಿದೆ.
ಡಾ| ಟಿ. ಯಂ ಎ. ಪೈ, ಮೆನೇಜಿಂಗ್ ಡೈರೆಕ್ಟರ್.
ಟಿ. ಎ. ಪೈ, ಜನರಲ್ ಮೆನೇಜರ್.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

೧೭. ಅಕ್ಷರಾದಿ ನಿಘಂಟು

ಇದನ್ನು ಶಾಲ್ಯದ ಕೃಷ್ಣರಾಜನು (ಕ್ರಿ. ಶ. ೧೭೪೮) ರಚಿಸಿದ್ದಾನೆ. ಈಗ ಇದರ ಪ್ರತಿಗಳು ದೊರೆಯುವುದಿಲ್ಲ

೧೮. ಅಕಾರಾದಿ ನಿಘಂಟು

ಇದನ್ನು ಲಕ್ಷ್ಮಣ ಪಂಡಿತನು (ಕ್ರಿ. ಶ. ೧೭೭೩) ಬರೆದನು ಇದೊಂದು ವೈದ್ಯ ನಿಘಂಟು.

೧೯. ಶಬ್ದಾರ್ಥ ಮಂಜರಿ

ಇದನ್ನು ಚಂದ್ರಸಾಗರವರ್ಣಿ (ಕ್ರಿ. ಶ. ೧೮೧೦)ಯು ಬರೆದನು. ಇದರ ಪ್ರತಿಗಳು ಈಗ ದೊರೆಯುವುದಿಲ್ಲ.

೨೦. ಶಬ್ದ ಮಂಜರಿ

ಇದನ್ನು ಶ್ರೀರಂಗ ಪಟ್ಟಣದ ಕೃಷ್ಣಮಾಚಾರ್ಯನು (೧೮೩೦) ಬರೆದನು. ಇದರ ಪ್ರತಿಯೂ ಈಗ ದೊರೆಯುವುದಿಲ್ಲ.

೨೧. ಶಬ್ದ ಸಂಗ್ರಹ

ಇದನ್ನು ಗುರುರಾವ್ ವಿರಲ ಮೋಹರಿಯವರು (೧೮೭೪) ಬರೆದರು ಇದು ಇಂದಿನ ನಿಘಂಟುಗಳ ಮಾದರಿಯದು.

೨೨ ಕರ್ನಾಟಕ ಕಲ್ಪದ್ರುಮ

ಇದು ಇಂದಿನ ನಿಘಂಟುಗಳ ಮಾದರಿಯ ಕೋಶ. ಇದು ಕ್ರಿ. ಶ. ೧೮೮೫ರಲ್ಲಿ ಪ್ರಕಾಶವಾಯಿತು. ಇದು ಟ್ರಾನ್ಸ್‌ಲೇಟರ್ ಮ| ರಾ| ರಾಮಸ್ವಾಮಿ ಶಾಸ್ತ್ರಿಗಳಿಂದ ಪ್ರಾರಂಭಿಸಲ್ಪಟ್ಟು, ಶ್ರೀ| ಹೆಸರುಘಟ್ಟದ ಹೊನ್ನಪ್ಪನವರಿಂದ ಪೂರೈಸಲ್ಪಟ್ಟಿತು. ಇದರಲ್ಲಿ "ರಾಜಶೇಖರ ವಿಲಾಸ, ನೃಪಭೇಂದ್ರ ವಿಜಯ, ಗಿರಿಜಾ ಕಲ್ಯಾಣ, ಚೆನ್ನಬಸವ ಪುರಾಣ, ರಾಮಾಯಣ, ಜೈಮಿನಿ, ಅನುಭವಾಮೃತ, ಶಬರ ಶಂಕರ ವಿಳಾಸ........ಇಂತಪ್ಪ ಅನೇಕ ಗ್ರಂಥಗಳೊಳ್ ಪೇಳ್ದ ಶಬ್ದಂಗಳ ಉದಾಹರಣೆಗಳಂ ಪೇಳ್ದಿರ್ಪೆಂ" ಎಂದಿದ್ದರೂ ಇದು ಆ ಕಾವ್ಯಗಳ ವಾಚನಕ್ಕೆ ಸಂಪೂರ್ಣ ನೆರವನ್ನು ಕೊಡುವಷ್ಟು ಶಕ್ತವಾಗಿಲ್ಲ. ಇದರಲ್ಲಿ ಭಾರತ ನಿಘಂಟು,ಶಬ್ದಮಂಜರಿ ಮೊದಲಾದ ಹಳಗನ್ನಡ ನಿಘಂಟುಗಳ ಪದಗಳಿವೆ. ಜೈಮಿನಿ ಮೊದಲಾದ ಕಾವ್ಯಗಳಿಂದಲೂ ಹಲವು ಪದಗಳನ್ನೂ, ಉದಾಹರಣೆಗಳನ್ನೂ ಸಂಗ್ರಹಿಸಿದ್ದಾರೆ. ಇದರಲ್ಲಿ ಪ್ರತಿ ಪದಕ್ಕು ಲಿಂಗ, ಅರ್ಥ ಮುಂತಾದುವುಗಳನ್ನು ಕೊಟ್ಟು ಆಯಾ ಪದಗಳ ಮುಂದೆ ಅವಿದ್ದ ಗ್ರಂಥಗಳ ಉದಾಹರಣೆಗಳನ್ನು ಎತ್ತಿ ತೋರಿಸಿದ್ದಾರೆ. ಇದರಲ್ಲಿ ಪುಟ ೪೧೧ ಇದರಲ್ಲಿ ಸಮ ಸಂಸ್ಕೃತ ಪದಗಳು ಕನ್ನಡ ಪದಗಳಷ್ಟೇ ಇದ್ದಿದ್ದರೆ ಇದರ ಉಪಯೋಗ ಇನ್ನೂ ಹೆಚ್ಚುತ್ತಿತ್ತು.

೧. ಪೊಗರ್-ಕ್ರಿ-ಒಪ್ಪಿಕೊ-ಸ-ನಾ ಪ್ರಕಾಶ.

-ಕ. ಶ. ಮಂ. ಪೊಗರ್ ತೋಳು ಬೆಳಗುಂ, ಪೇಳ್ದುದಂ ಪೊಗರ್ (ಪುಟ ೨೫೭)

೨ ಪೊನಲು--ನ ನಾ—ಪ್ರವಾಹ. ರಾ. ವಿಳಾಸ - ಪೊನಲೊಳ್ ಕರ್ಚಿ (ಪುಟ ೨೫೭)

(ಮುಂದುವರಿಯುವುದು)

-ಶ್ರೀ ಯ. ನಾ. ಉಡುಪ,ವಿದ್ವಾನ್

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ.ಪೈಸೆ

ವರುಷ ೩೮ ವಾರ ೨೫ 5-3-1959 Vol. 38 No. 25.

ಜೀವ ವಿಮೆ

ಜೀವವಿಮಾ ಕಾರ್ಪರೇಶನಿನ ತೃಪ್ತಿಕರ ಪ್ರಗತಿ ಸಾಧನೆ

ಮುಂದಿನ ವರ್ಷಗಳಲ್ಲಿ ಎಲ್ಲರಿಗೂ ವಿಮೆಯ ಸಂದೇಶ ತಲಪಿಸುವ ಯೋಜನೆ

ಜೀವವಿಮಾ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಪಿ. ಎ. ಗೋಪಾಲಕೃಷ್ಣನರು ಕಳದ ವರ್ಷದಲ್ಲಿ ಕಾರ್ಪೊರೇಶನು ಮಾಡಿದ ಪ್ರಗತಿ ಮತ್ತು ಮುಂದಿನ ವರ್ಷದ ಯೋಜನೆಯ ಕುರಿತಾದ ವಿವರಣೆಗಳನ್ನಿತ್ತರು. ಅದರ ಸಾರಾಂಶವನ್ನಿಲ್ಲಿ ಕೊಡಲಾಗಿದೆ ಕಾರ್ಪರೇಶನು ೧೯೫೮ರಲ್ಲಿ ೩೪೪ ೬೮ ಕೋಟಿ ರೂಪಾಯಿಗಳ ಹೊಸ ವ್ಯವಹಾರವನ್ನು ಪೂರ್ತಿ ಮಾಡಿದ್ದು ಇದು, ಕಳೆದ ವರ್ಷದ ವ್ಯವಹಾರಕ್ಕಿಂತ ಸೇಕಡಾ ೨೦ರಷ್ಟು ಹೆಚ್ಚಿದೆ. ಅಲ್ಲದೇ ಭಾರತೀಯ ವಿಮಾ ಪ್ರಪಂಚದಲ್ಲಿ ಇಷ್ಟೊಂದು ಮೊತ್ತದ ವಿಮಾ ವ್ಯವಹಾರವು ಆಗಿಲ್ಲವೆಂದು ತಿಳಿಯುತ್ತದೆ. ಸುಮಾರು ೧೦ ಲಕ್ಷ ಜನರ ಜೀವದ ಮೇಲೆ ಈ ವಿಮಾ ಮೊಬಲಗು ವ್ಯವಹಾರಕ್ಕೆ ಬಂದಿರುತ್ತದೆ.

ಜೀವವಿಮಾ ಕಾರ್ಪರೇಶನು ವಿವಿಧ ರೀತಿಗಳಲ್ಲಿ ೧೯೫೭ರ ಕೊನೆಯಲ್ಲಿ ರೂ. ೩೮೧ ೯೭ ಕೋಟಿಯನ್ನು ತೊಡಗಿಸಿದ್ದರೆ, ಈಗ ಈ ಮೊಬಲಗು ೪೭೪ ೦೨ ಕೋಟಿಗಳಿಗೇರಿದೆ. ಇವುಗಳಲ್ಲಿ ೨೦೧ ಕೋಟಿ ಭಾರತೀಯ ಸರಕಾರಿ ಭದ್ರತಾ ಪತ್ರಗಳಲ್ಲಿಯೂ ೫೫ ಕೋಟಿ ರಾಜ್ಯ ಸರಕಾರಿ ಭದ್ರತಾ ಪತ್ರಗಳಲ್ಲಿಯೂ ೩೯ ಕೋಟಿ ವಿವಿಧ ಉಚಿತ ಭದ್ರತೆಗಳ ಮೇಲೆಯೂ ೭೫ ಕೋಟಿ ಡಿಬೆಂಚರ್ಸ್ ಮತ್ತು ಶೇರುಗಳಲ್ಲಿಯೂ ೧೩ ಕೋಟಿ ಭೂ ಅಡವಿನ ಮೇಲೆಯೂ ೨೧ ಕೋಟಿ ಕಟ್ಟಡಗಳು ಮತ್ತು ಸಾಲಗಳಲ್ಲಿಯೂ ಉಳಿದ ಸುಮಾರು ೧೦ ಕೋಟಿ ವಿದೇಶೀಯ ಭದ್ರತಾ ಪತ್ರಗಳೇ ಮೊದಲಾದುವುಗಳಲ್ಲಿಯೂ ತೊಡಗಿಸಿದೆ. ಕಾರ್ಪರೇಶನು ಈಗೀಗ, ಭೂ ಅಡವಿನ ಮೇಲೆ ಸಾಲವೀಯುವುದನ್ನು ನಿಲ್ಲಿಸಿದೆ.

"ಜನತಾ ಪಾಲಿಸಿ" ಯೋಜನೆಯಲ್ಲಿ ೧೯೫೭ರಲ್ಲಿ ರೂ. ೧೧೭ ಕೋಟಿ ರೂಪಾಯಿಗಳ ವಿಮಾ ವ್ಯವಹಾರವಾಗಿದ್ದರೆ, ಈ ವರ್ಷ ಅದು ೧೬೧ ಕೋಟಿ ರೂಪಾಯಿಗಳಿಗೆ ಏರಿದ್ದು, ಈ ಪ್ರಗತಿಯು ತೃಪ್ತಿಕರವಿದೆ. ಪಾಲಿಸಿದಾರರಿಗೆ ಬೋನಸನ್ನು ಘೋಷಿಸುವ ಬಗ್ಗೆ ಕಾರ್ಯಕ್ರಮವು ತೀವ್ರವಾಗಿ ಕೈಗೊಳ್ಳಲಾಗುತ್ತಿದ್ದು, ಇನ್ನು ಮೂರು ಅಥವಾ ನಾಲ್ಕು ತಿಂಗಳೊಳಗೆ ಈ ಬಗ್ಗೆ ಅಧಿಕೃತ ಘೋಷಣೆಯು ಹೊರಡುವ ನಿರೀಕ್ಷೆಯಿದೆ

ಕಾರ್ಪರೇಶನು ಪಾಕಿಸ್ತಾನ, ಬರ್ಮಾ, ಸಿಲೋನ್ ಮತ್ತು ಇಂಡೊನೇಶಿಯಗಳಲ್ಲಿ ವಿದೇಶ ವಿನಿಮಯ ಪಡೆಯಲಿರುವ ತೊಡಕುಗಳ ಕಾರಣದಿಂದ ಹಾಗೂ ಪರಿಸ್ಥಿತಿ ನೆಮ್ಮದಿಯಲ್ಲಿಲ್ಲದಿರುವುದರಿಂದ ವಿಮಾ ವ್ಯವಹಾರವನ್ನು ಮಾಡುತ್ತಿಲ್ಲ. ಪೂರ್ವ ಆಫ್ರಿಕಾ, ಸಿಂಗಾಪುರ, ಹೊಂಗ್‌ಕೊಂಗ್, ಮಲಯು ಮತ್ತು ಫ್ಯುಜಿ ದ್ವೀಪಗಳಲ್ಲಿ ವಿಮಾ ವ್ಯವಹಾರಗಳನ್ನು ಮಾಡುತ್ತಿದೆ.

ಜೀವ ವಿಮಾ ಕಾರ್ಪೊರೇಶನು ತನ್ನ ನೌಕರರಿಗೆ ವಸತಿಗಳನ್ನು ಕಟ್ಟಿಸುವ ಯೋಜನೆಯೊಂದನ್ನು ಮುಂದಿನ ಐದು ವರ್ಷಗಳಲ್ಲಿ, ಕೈಗೊಳ್ಳಲಿದ್ದು ಅದಕ್ಕಾಗಿ ೧೨ ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟಿದೆ. ಈ ಯೋಜನೆಯಿಂದಾಗಿ ಪ್ರತಿ ವಲಯದ ಸೇಕಡಾ ಐವತ್ತರಷ್ಟು ನೌಕರರಿಗೆ ಲಾಭವಾಗುವ ನಿರೀಕ್ಷೆಯಿದೆ ಹಣ ತೊಡಗಿಸುವ ಬಗ್ಗೆ ಸಹಾಯ ಮಾಡಲು ಒಂದು ಸಂಶೋಧಕ ಮಂಡಳಿಯನ್ನು ರಚಿಸಲಾಗಿದೆ.

ನರ್ಸಿಂಗ್‌ನಲ್ಲಿ ತರಬೇತಿಯನ್ನು ಪಡೆಯುತ್ತಿರುವ ನರ್ಸನ್ನು ಗ್ರಾಮೀಣ ಜನರು ಗೌರವಪೂರ್ವಕವಾಗಿ ಸ್ವಾಗತಿಸುತ್ತಾರೆ

೧೯೫೮ರಲ್ಲಿ ಪೂರ್ಣ ಮಾಡಲಾದ ರೂ. ೩೪೪ ೬೮ ಕೋಟಿ ವ್ಯವಹಾರದಲ್ಲಿ ೫೫ ಕೋಟಿಗಳಷ್ಟು ಭಾರತದಿಂದ ಹೊರಗಡೆ ಪೂರ್ಣಮಾಡಲಾಗಿದೆ. ದೇಶದ ಎಲ್ಲೆಡೆಗಳಲ್ಲೂ ವಿಮಾ ಸಂದೇಶವನ್ನು ಬೀರುವ ಸಲುವಾಗಿ ಕಾರ್ಪರೇಶನು ನಾಲ್ಕು ಮುಖ್ಯ ಹೆಜ್ಜೆಗಳನ್ನಿಡುವುದೆಂದು ಒಂದು ಪತ್ರಿಕಾ ಪ್ರಕಟಣೆ ಹೊರಟಿದೆ.

೧೯೫೮ರಲ್ಲಿ ಹುಟ್ಟಿನ ಮಟ್ಟಿಗೆ ಈ ಮೊದಲು ಯಾವುದೇ ವಿಮಾ ಕಂಪೆನಿಯ ಕಾರ್ಯಾಲಯವಿಲ್ಲದಲ್ಲಿ ೭೪ ನೂತನ ಕಾರ್ಯಾಲಯಗಳನ್ನು ತೆರೆಯಲಾಗಿದೆ. ಇದರಿಂದಾಗಿ ಈಗ ಭಾರತದಲ್ಲಿ ಒಟ್ಟು ೨೩೧ ಶಾಖಾಕಾರ್ಯಾಲಯಗಳು, ೯೯ ಉಪಕಾರ್ಯಾಲಯಗಳು, ೩೩ ವಿಭಾಗ ಕಾರ್ಯಾಲಯಗಳು ಮತ್ತು ಐದು ವಲಯ ಕಾರ್ಯಾಲಯಗಳ ಮೂಲಕ ವ್ಯವಹಾರ ನಡೆಯುತ್ತಿದೆ. ಪಾಲಿಸಿದಾರರಿಗೆ ಶೀಘ್ರ ಸೇವೆ ಸಲ್ಲಿಸುವ ಸಲುವಾಗಿ ಇನ್ನೂ ಕೆಲವು ಕಾರ್ಯಾಲಯಗಳನ್ನು ಕೆಲವೇ ಸಮಯದಲ್ಲಿ ಪ್ರಾರಂಭಿಸುವ ಯೋಜನೆಗಳು ಪೂರ್ಣಗೊಂಡಿವೆ.

೧೯೫೮ರಲ್ಲಿ ಜೀವವಿಮಾ ಕ್ಷೇತ್ರದಲ್ಲಿ ಮೊತ್ತಮೊದಲಿನ ಬಾರಿಗೆ ಗ್ರಾಮೀಣ ಪ್ರದೇಶಗಳಿಂದ ವಿಮಾ ವ್ಯವಹಾರವನ್ನು ಮಾಡಲು ಪ್ರಯತ್ನ ನಡೆದಿದೆ. ರಾಜ್ಯ ಸರಕಾರದ ಸಂಪೂರ್ಣ ಸಹಾಯದಿಂದ ರಾಜಸ್ಥಾನದಲ್ಲಿ ೨೪ ಸಮಾಜ ವಿಕಾಸ ಯೋಜನೆಯ ಕ್ಷೇತ್ರಗಳಲ್ಲಿ ನಾ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3
ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ
1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%
ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ ..ಇತ್ಯಾದಿ ...

NAVAYUGA WEEKLY, UDIPI, S. India.

ಕಥಾ ವಿಹಾರ

ವರ ಚಿಕಿತ್ಸಕ

ಇವನೇ ಅಲ್ಲವೆ?

ನಿಮ್ಮ ಆರ್ಡರನ್ನೇ ಇದಿರು ನೋಡುತ್ತ ನಿಮ್ಮ ಸೇವೆಗೇ ಬದ್ಧಕಂಕಣನಾಗಿವ್ವಾನೆ ಹಾಗಿರುವಾಗ, ನೀವೇಕೆ ಹಿಂಜರಿವಿರಿ?

‘ಕುಟ ಷು ಕಿವುತೆ ಅಂಗ ಹೀನ, ಮುಕ ತವಾ ಉಗ್ಗು ..ಮುಂತಾದ ಪ್ರತ್ಯೇಕ ವ್ಯಾಧಿಗಳಿಗೆ, ಓಂ ನಮೋ ಗೋವಿಂದ ಸಾಹೇ, ಬಿ ಎ ಆಯುರ್ವೇದ ಪಾರಾವಾರಪಾರಿಣ, ಭಿಷಗ್ರತ್ನ ಇವರನ್ನು ನೋಡಿರಿ” ಎಂಬ ಜಾಹೀರಾತು ನಮ್ಮ ಗೋಪಾಲನ ಮನಸ್ಸನ್ನು ಆಕ್ರಮಿಸಿತು. ಕಾಶ್ಮೀರದ ಆಯುರ್ವೇದಾಶ್ರಮದಿಂದ ಅವರು ಶರ್ಕೀಟು ಹೊರಟು ಡಿಲ್ಲೀ, ಕಲ್ಕತ್ತ, ಬೆಜವಾಡ, ಮದರಾಸು...ಹೀಗೆ ಒಂದೊಂದೂರಿನಲ್ಲಿ ಒಂದೆರಡು ದಿನ ಇರುತ್ತಾರೆ ಯಾವ ಊರಿನಲ್ಲಿ ಯಾವಾಗ, ಎಲ್ಲಿ, ಎಷ್ಟು ಗಂಟೆಗೆ ಅವರನ್ನು ನೋಡಬಹುದೆಂಬ ಬಗ್ಗೆ ವಿವರಣೆಯೂ ಆ ಪ್ರಕಟಣೆಯಲ್ಲಿತ್ತು. ಅವರ ಚಿಕಿತ್ಸೆಯಿಂದ ಆಯಾ ರೋಗ ಗುಣಮಾಡಿಕೊಂಡವರು ಬರೆದ ಪ್ರಶಂಸಾ ಪತ್ರಗಳ ಕೆಲವು ಚೂರುಗಳೂ ಪ್ರಕಟವಾಗಿದ್ದುವು. ಕೊಟ್ಟಕೊನೆಗೆ “ನಿಮ್ಮ ಸೇವೆಯೇ ನಮ್ಮ ಕರ್ತವ್ಯ’ ಎಂಬ ಭಂತ ವಾಕ್ಯ.

ಇದನ್ನೆಲ್ಲಾ ಆಕ್ಯಾಸ್ಥೆಯಿಂದ ಒಂದಲ್ಲ, ಮೂರು ಬಾರಿ ಓದಿದ ಗೋಪಾಲ. ರೋಗ ಮಾಲಿಕೆಯಲ್ಲಿ ಉಗ್ಗು ಕೂಡಾ ಸೇರಿರುವುದರಿಂದಲೇ ಗೋಪಾಲನಿಗೆ ಅಷ್ಟೊಂದು ಆಸ್ಥೆ ಬಂದಿತ್ತು. ಆ ಭವ್ಯ ಜಾಹೀರಾತಿನ ವೈಭವವನ್ನು ಊಹಿಸಿಕೊಂಡಂತೆ ಆ ಬಿ ಎ ಭಿಷಗ್ರತ್ನರದೊಂದು ದಿವ್ಯ ಚಿತ್ರವೇ ಗೋಪಾಲನ ಮನಸ್ಸಿನಲ್ಲಿ ಮೂಡಿ ನಿಂತಿತು

ಅವರು ತನ್ನೂರಿಗೆ ಬರುವ ದಿನವನ್ನು ಗುರುತು ಮಾಡಿಕೊಂಡು ಆ ಜಾಹೀರಾತಿನ ತುಂಡನ್ನೂ ಕತ್ತರಿಸಿಟ್ಟುಕೊಂಡ ಗೋಪಾಲ

ಪಾಪ, ಗೋಪಾಲನಿಗೆ ಉಗ್ಗಿನ ಕಾಟ ಅಪನಿಗ, ಅವನ ತಾಯಿಗೆ, ತಾಯಿಯ ತಾಯಿಗೆ, ಅವನ ಮಕ್ಕಳಿಗೆ ಉಗ್ಗು. ಅದನ್ನು ಹೋಗಲಾಡಿಸಿಕೊಳ್ಳಲು ಅವನು ಏನೇನೋ ಪ್ರಯತ್ನ ಮಾಡಿದ್ದರೂ ವ್ಯರ್ಥವಾಗಿತ್ತು. ಅವನ ಮನೆತನಕ್ಕೇ ಹಿಡಿದ ಅಂಟಿನಂತಿತ್ತು ಆ ಉಗ್ಗು

ತನಗಂತೂ ಹೋಗಲಿ, ಆರ್ಧಾಯುಷ್ಯ ಸಂದುಹೋಯ್ತು. ತನ್ನ ಮಗಳು, ಮದುವೆಯ ಈಡುಬಂದ ಹುಡುಗಿ. ತನ್ನ ಮಗ—ಇನ್ನು ಮೇಲೆ ಜೀವನರಂಗಕ್ಕೆ ಪ್ರವೇಶಿಸಲಿರುವ ಬಾಲಕ, ಇವರಿಗಾದರೂ ಉಗ್ಗು ಹೋಗುವುದಾದರೆ, ಬಡ ಗೋಪಾಲ ಹೇಗಾದರೂ ಸತ್ತೂ ಕೆಟ್ಟೂ ಐನೂರು ರೂಪಾಯಿಯಷ್ಟು ಖರ್ಚು ಮಾಡಲಿಕ್ಕಾದರೂ ಸಿದ್ಧನೇ. ಏಕೆಂದರೆ ಉಗ್ಗಿನಿಂದ ಅವನಿಗಾದ ಎಡರುಗಳೆಷ್ಟು! ಕಷ್ಟಗಳೆಷ್ಟು! ಅವಮಾನಗಳೆಷ್ಟು! ಅದನ್ನೆಲ್ಲಾ ನೆನೆಸಿಕೊಂಡರೆ ಈಗಲೂ ಅವನ ಮೈ ನಡುಗುತ್ತದೆ ಮುಂದೆ ಇಂತಹ ಕಷ್ಟಗಳನ್ನು ತನ್ನ ಮಕ್ಕಳೂ ಅನುಭವಿಸಬೇಕಲ್ಲಾ!

ಆ ದಿನ ಬಂತು. ಗೋಪಾಲ ಬೇಗ್ಗ ಬೇಗನೇ ಎದ್ದು ಮಗಳು ಉಷೆಯನ್ನೂ ಮಗ ಮುರಳಿಯನ್ನೂ ಕರೆದುಕೊಂಡು ೭ ಗಂಟೆಯ ಬಸ್ಸು ಹತ್ತಿದನು ೮ ಗಂಟೆಗೆ ಸರಿಯಾಗಿ ಚರ್ಕಫೂಲಿನಲ್ಲಿಳಿದು ದರ್ಬಾರ್ ಲಾಜಿಂಗನ್ನು ವಿಚಾರಿಸಿಕೊಂಡು ಹೋಗಿ, ಅಲ್ಲಿ ಭಿಷಗ್ರತ್ನರು ಇಳಿದುಕೊಂಡಿರುವ ಕೋಣೆಯನ್ನು ಕಂಡುಕೊಂಡು ಆ ದ್ವಾರ ಪ್ರದೇಶವನ್ನು ಸೇರಲಾಗಿ ಬಾಗಿಲು ಹಾಕಿತ್ತು. ಹೊರಗೆ ನಿಂತಿದ್ದ ಶಕಡೀವಾಲಾನು “ಸ್ವಲ್ಪ ನಿಲ್ಲಿ. ಒಳಗಿನವರು ಹೊರಗೆ ಬರಲಿ” ಅಂದ.

ಒಳಗಿನ ಮಾತುಗಳೇನೂ ಸರಿಯಾಗಿ ಕೇಳಿಸದಿದ್ದರೂ ‘ಇಪ್ಪತ್ತನಾಲ್ಕು ರೂಪಾಯಿ’ ಎಂಬ ಒಂದೆರಡು ಶಬ್ದ ಗೋಪಾಲನ ಕಿವಿಗೆ ಬಿತ್ತು. ಅಷ್ಟರಲ್ಲಿ ಇನ್ನೂ ಇಬ್ಬರು ಮೂವರು ‘ಪೇಶೇಂಟುಗಳು ಬಂದರು. ಅವರಲ್ಲಿ ಒಂದು ಕುಟುಂಬವು ಚಿಂದಿಬಟ್ಟೆಗಳನ್ನುಟ್ಟ ಬಡವರು. ಒಬ್ಬಳು ಹುಡುಗಿ ಕುರುಡಿ. ಇನ್ನೊಬ್ಬಳಿಗೆ ಕಿವುಡುತಿ.

ಬಾಗಿಲು ತೆರೆಯಿತು. ಗೋಪಾಲ ತನ್ನ ಮಕ್ಕಳೊಂದಿಗೆ ಒಳ ಹೊಕ್ಕ

ಬಾಗಿಲು ಹಾಕಲ್ಪಟ್ಟಿತು ಓಂ ನಮೋ ಗೋವಿಂದ ಸಾಹೇ ಭಿಷಗ್ರತ್ನರು “ಬೈರೋಜೀ” ಎಂದರು ಹಿಂದಿಯಲ್ಲಿ ಅವರು ಮೂವತ್ತು ವಯಸ್ಸಿನವರಿರಬಹುದು ಗೌರಕಾಯರು. ಶಟು ಧರಿಸಿದ್ದರು ಗೋಪಾಲನು ಮನಸ್ಸಿನಲ್ಲಿ ಚಿತ್ರಿಸಿಕೊಂಡಿದ್ದ ಭಿಷಗ್ರತ್ನರ ಚಿತ್ರವು ಬೇರೆ ರೀತಿಯದಾಗಿತ್ತು.

‘ಏನು ನಿಮಗೆ?” ಇಂಗ್ಲಿಷಿನಲ್ಲಿ ಕೇಳಿದರು.

ಗೋಪಾಲ ತನಗೆ ಬರುವ ಹರಕು ಇಂಗ್ಲಿಷಿನಲ್ಲಿ ಹೇಳಿದ ಭಿಷಗ್ರತ್ನರು, ಪುಸ್ತಕ ಪೆನ್ನಾ ಸಹಿತ ಸಿದ್ಧನಾಗಿ ಕುಳಿತಿದ್ದ ಅವರ ಅಸಿಸ್ಟೆಂಟಿಗೆ ಬರೆದುಕೊಳ್ಳಲು ಹೇಳಿದರು ಅಸಿಸ್ಟೆಂಟ್ ತೆಲುಗಿನಲ್ಲಿ “ನಿಮ್ಮ ಹೆಸರು?” ಎಂದು ಕೇಳಿದ.

“ಟಿ ಗೋಪಾಲ”

“ಪೇಶಂಟ್ ಹೆಸರು?”

“ಉಷಾ ಮತ್ತು ಮುರಳಿ.”

“ನಿಮ್ಮ ಕಲಸ?’

“ಕ್ಲಾರ್ಕ...’

“ಸಂಬಳ ...”

‘ ತೊಂಬತ್ತೈದು ನಯಾಪೈಸಾ ಕಡಮೆ ನೂರು”

“ಇಬ್ಬರಿಗೂ ಚಿಕಿತ್ಸೆ ಮಾಡಿಸುವಿರಾ?”

“ಹುಂ”

“ಏನು ರೋಗ?”

“ಉಗ್ಗು”

ಅಸಿಸ್ಟೆಂಟ್ ಭಿಷಗ್ರತ್ನರನ್ನು ನೋಡಿ ಕಿತಪತನೆ ಮಾತಾಡಿ ಓಂ ನಮೋ ಗೋವಿಂದ ಸಾಹೇರು ಗೋಪಾಲನ ಕಡೆಗೆ ಕೈಚಾಚಿ ‘ ಇಬ್ಬರಿಗೆ ಕನ್ಸಲ್ಟಿಂಗ್ ಫೀಸು ನಲುವತ್ತು ರೂಪಾಯಿ ಕೊಡಿರಿ’ ಎನ್ನುತ್ತ ಬೆರಳಾಡಿಸಿದರು

ಗೋಪಾಲ ಗಂಬರಿಪಟ್ಟಾಗಿ. ..... “ಏ ಏ ನು?”

(೧೧ನೇ ಪುಟ ನೋಡಿರಿ)



ಇಂಗ್ಲೆಂಡಿನ ಯೋರ್ಕ್ ಶಯರ್‌ನಲ್ಲಿ ಬ್ರಿಟನಿನಲ್ಲಿ ತಯಾರಾದ ಟ್ರಾಕ್ಟರುಗಳು ಸಾಲಾಗಿ ನಿಂತಿರುವುದನ್ನಿಲ್ಲಿ ಕಾಣಬಹುದು.

The Moolky Bank, Ltd.
MULKI
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ. 1939

ರಾಮತೀರ್ಥ
ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 4—0—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

Quality Air Cushion
Rubber Stamps
Crown
RUBBER STAMP CO.
PHONE 203
ESTD 1926
BALMATTA ROAD MANGALORE



ಬ್ರಿಟನ್ನಿನಲ್ಲಿ ಮೋಟರ್ ಸೈಕಲುಗಳಿಗೆ ಪ್ಲಾಸ್ಟಿಕ್ಕಿನ ಅರಿವೆಯನ್ನು ಹೊದಿಸಿ ಮಾಡುಗಳನ್ನೂ ಕಟ್ಟಲಾಗುತ್ತಿದೆ.

ಶಬ್ದ ಕೋಶಗಳು

ಭಾಷೆಯು ಚೇತರಿಸಲು ಶಬ್ದಕೋಶವೇ ಸಾಧನ

ಸರ್ವಪ್ರಕಾರದ ಕೋಶಗಳು ರೂಪುಗೊಂಡಂತೇ ಕನ್ನಡಕ್ಕೆ ಸುವರ್ಣಯುಗ

(ಕಳೆದ ಸಂಚಿಕೆಯಿಂದ ಮುಂದುವರಿದುದು)

೨೩. ಸಮಯ ಸಂಜೀವಿನಿ.

ಇದನ್ನು ಬರೆದ ಮಂಗಳೂರು ತುಪಾಕಿ ಸುಬ್ಬಣ್ಣಾಚಾರ್ಯರ ಮಗ ರಾಮಾಚಾರ್ಯರು (೧೮೮೯ "ಬಾಲಕರಿಗೋಸುಗ ಈ ಸಮಯ ಸಂಜೀವಿನಿಯನ್ನಾಯಾಸವಿಲ್ಲದೆ ರಚಿಸಿದ್ದೋರಿದೆ" ಎಂದಿದ್ದಾರೆ. ಇದರ ಒಂದನೆಯ ಭಾಗದಲ್ಲಿ ಸಮಾನಾರ್ಥಕ ಶಬ್ದಗಳೂ, ಎರಡನೆಯದರಲ್ಲಿ ನಾನಾರ್ಥ ಶಬ್ದಗಳೂ ಇವೆ. ಇದು ನಿಡಂಬೂರು ರಾಘವೇಂದ್ರ ರಾಯರಿಗೆ ಅರ್ಪಿತವಾಗಿದೆ.

ಒಂದನೆಯ ಭಾಗ.

ಈಶ = ಯಜಮಾನ, ಒಡೆಯ.
ಈರು = ಅಂಟು.
ಈವಾಗ = ಈಗ, ಅಧುನಾ.
ಈಷಣ = ಪ್ರೀತಿ, ಅಭಿಮಾನ.

ಎರಡನೆಯ ಭಾಗ.

ಅರ್ಜುನ = ಶುಭ್ರ, ಮತ್ತಿಮರ, ಪಾರ್ಥ, ತೃಣ.
ಅರುಣ = ಮಯೂಖ, ಕೆಂಪುಬಣ್ಣ, ನದಿ, ಸೂತ್ರ, ರೇಣು, ಸೂರ್ಯ.

೨೪ ಶಬ್ದ ಮಂಜರಿ.

ಇದನ್ನು ಗಂಗಾಧರ ಮಡಿವಾಳೇಶ್ವರರು (೧೮೯೦) ಬರೆದರು, ಇದರಲ್ಲಿ ಸಂಸ್ಕೃತ ಮತ್ತು ಕನ್ನಡ ಪದಗಳಿಗೆ ಕನ್ನಡದಲ್ಲೇ ಅರ್ಥ ಕೊಟ್ಟಿದ್ದಾರೆ.

೨೫ ಕರ್ನಾಟಕ ಭಾಷಾಕರ

ಇದನ್ನು ಜಯರಾಯಾಚಾರ್ಯರು (೧೮೯೧) ಬರೆದರು. ಇದರಲ್ಲಿ ಅಕಾರಾದಿಯಾಗಿ ಪದಗಳನ್ನು ವಿಂಗಡಿಸಿ, ಕನ್ನಡದಲ್ಲೇ ಅರ್ಥವನ್ನು ಕೊಟ್ಟಿದ್ದಾರೆ.

೨೬ ಕಿಟ್ಟೆಲರ ನಿಘಂಟು

ಇದು ರೆವೆರೆಂಡ್ ಕಿಟ್ಟೆಲರ ಕೀರ್ತಿಯನ್ನು ಶಾಶ್ವತವಾಗಿ ನಿಲ್ಲಿಸಿದ ಕೋಶ. ಜರ್ಮನ್ ಪಾದ್ರಿಯೊಬ್ಬರು ಕನ್ನಡ ಸಾಹಿತ್ಯದಲ್ಲಿ ತೋರಿಸಿದ ಅಸಮಸಾಹಸವಿದು. ಈ ಕಾರ್ಯವನ್ನು ಅವರು ಬಾಯ್‌ಬಲನ್ನು ಕನ್ನಡದಲ್ಲಿ ಪ್ರಚಾರ ಮಾಡುವುದಕ್ಕಾಗಿ ಕೈಗೊಂಡದ್ದು ಎನ್ನುವವರೂ ಇದ್ದಾರೆ. ಈ ಮಹಾಕೋಶವನ್ನು ಸಿದ್ಧಗೊಳಿಸುವುದಕ್ಕೆ ಅವರಿಗೆ ಸುಮಾರು ೧೫ ವರ್ಷ ಹಿಡಿಯಿತು. ಇದು ಕಿಟ್ಟೆಲರ ಕನ್ನಡ ಪಾಂಡಿತ್ಯದ ಪ್ರತೀಕ. ಇದು ೧೮೯೪ರಲ್ಲಿ ಪ್ರಕಾಶವಾಯಿತು. ಇದು ಕನ್ನಡ ಭಾಷೆಯ ನಿಷ್ಕೃಷ್ಟವಾದ, ಪ್ರಮಾಣಭೂತವಾದ ಮಹಾ ಶಬ್ದಕೋಶ. ಇಷ್ಟು ಖಚಿತವೂ ಶಾಸ್ತ್ರೀಯವೂ ನಿಯಮಬದ್ಧವೂ ಆದ ನಿಘಂಟು ಭರತಖಂಡದ ಯಾವ ದೇಶಭಾಷೆಗೂ ಇಲ್ಲವೆಂದು ಬಲ್ಲವರು ಹೇಳುತ್ತಾರೆ. ಇದರ ಪ್ರಕಾಶಕ್ಕೆ ಮೂರು ಸಂಸ್ಥಾನಗಳು ಹೆಗಲು ಕೊಟ್ಟುವಂತೆ. ಇದರಲ್ಲಿ ಪುಟ ೧೬೫೨. ಕನ್ನಡ ಪದಗಳಿಗೆ ಇಂಗ್ಲಿಷ್ ಮತ್ತು ಕನ್ನಡ ಅರ್ಥಗಳಿವೆ. ಇದರಲ್ಲಿರುವ ನೀನು ತಾನು — ಇಂತಹ ಪದಗಳನ್ನೆಲ್ಲಾ ಕಳೆದು, ಇಂದು ಪ್ರಚಾರದಲ್ಲಿರುವ ದೇಶೀಯ ಕನ್ನಡ ಪದಗಳನ್ನೆಲ್ಲಾ ಸೇರಿಸಿ, ಕನ್ನಡ ಬಲ್ಲವರಿಗಾಗಿಯೇ ಪ್ರಕಟ ಮಾಡಿದ್ದಾದರೆ ಇಂದಿನ ಇದರ ಪ್ರಮಾಣದ ಅರ್ಧಕ್ಕಿಂತ ಬಹಳ ದೊಡ್ಡದಾಗದೆಂದು ತೋರುತ್ತದೆ. ಡಾ| ಕಿಟ್ಟೆಲರು ಕಾಣದ ಎಷ್ಟೋ ಜೈನ ಕಾವ್ಯಗಳು ಈಗ ರೂಢಿಯಲ್ಲಿರುವುದರಿಂದಲೂ, ಆಗ ರೂಢಿಯಲ್ಲಿದ್ದ ಕಾವ್ಯಗಳ ಎಷ್ಟೋ ಶಬ್ದಗಳ ಅರ್ಥವನ್ನು ಬಿಟ್ಟಿರುವುದರಿಂದಲೂ ಈ ನಿಘಂಟು ಮುಂದಿನ ಕರ್ನಾಟಕಕ್ಕೆ ಸಾಕಷ್ಟು ಸಹಾಯವನ್ನು ನೀಡದು. ಸ್ವಲ್ಪವೂ ಇಂಗ್ಲಿಷ್ ಜ್ಞಾನವಿಲ್ಲದವರು ಇದನ್ನು ತೆರೆದೂ ನೋಡುವಂತಿಲ್ಲ. ಇದರಲ್ಲಿ ಪದಗಳ ಶುದ್ಧರೂಪವನ್ನು ತೋರಿಸುವ ಧೈರ್ಯ ತೋರಿಸಿಲ್ಲ

ಚಲ್ಲಣ callana= ಚಲ್ಲಣ ಚಲ್ಣ, ಚೊಲ್ಲಣ, ಚೊಲ್ಣ, ಚಣ, (ಚಣಕ, ಚಡ್ಡಿ) Drawers or bruches of different length (ಚಣಕ, ಅರ್ಧೋರುಕ Smd II; ಚಲಣ kk. 78; o. r. ಚೊಲ್ಲಣ; ಚಣ್ಣಾತೇ Hla; My; M., T. ಚಲ್ಲಡ; Te. ಚಲ್ಲಡ; ಚಲ್ಲಾಡ, ಜಲ್ಲಡ; Mhr., H ಚೋಳಣಾ) ಪಾದ ಪರಿಯನ್ತ ತೊಟ್ಟ ಚಲ್ಲಣಂ (ಆ ಪ್ರದೀಪ Nr.) see, ಅರೆ—, ಅರೆತೊಡೆ—, ನಿರು—; ssv, 3, 3. 16. 27; of, ಚಲನಕ, ಚಲನಿ.

೨೭ ನಾನಾರ್ಥ ಶಬ್ದಾವಳಿ

ಇದನ್ನು ಕರ್ನಾಟಕ ಬ್ರಾಹ್ಮಣರಾದ ಬೋಳಾರ ರಾಮಕೃಷ್ಣಯ್ಯನವರು (೧೯ನೆಯ ಶತಮಾನ) ಬರೆದರು. ಇದು ೧೮೯೬ರಲ್ಲಿ ಪ್ರಕಾಶವಾಯಿತು. ಇವರು ಮಂಗಳೂರು ಮಿಶ್ಯನ್ ಹೈಸ್ಕೂಲಿನ ಕನ್ನಡ ಪಂಡಿತರಾಗಿದ್ದರು ಇದರಲ್ಲಿ 'ರಾಜಶೇಖರ ವಿಲಾಸ, ಜೈಮಿನಿ ಮೊದಲಾದ ಕರ್ನಾಟಕ ಮಹಾ ಕಾವ್ಯಗಳನ್ನು ಓದಿ ಅರ್ಥ ತಿಳಿಯುವುದಕ್ಕೆ ಅನುಕೂಲವಾಗುವಂತೆ ಈ ನಿಘಂಟನ್ನು ಬರೆದಿದ್ದೇನೆ' ಎಂದಿದ್ದಾರೆ. ಆದರೆ ಇದರಿಂದ ಆ ಮಹಾ ಕಾವ್ಯಗಳ ವಾಚನಕ್ಕೆ ಸಾಕಷ್ಟು ಸಹಾಯ ಸಿಗದು. ಇದರ ಕೊನೆಯಲ್ಲಿ ಕೊಟ್ಟ ಸಂಜ್ಞಾರ್ಥಗಳು ತುಂಬಾ ಪ್ರಯೋಜನಕಾರಿಯಾದುವು. ಸಂಜ್ಞಾರ್ಥ ಕೋಶಗಳಿಗೆ ಕನ್ನಡದಲ್ಲಿ ಇದೇ ಮೊದಲನೆಯದೆಂದು ತೋರುತ್ತದೆ. ಇದರಲ್ಲಿ ಒಂದರಿಂದ ಆರುವತ್ತ ನಾಲ್ಕರ ವರೆಗಿನ ಸಂಜ್ಞಾರ್ಥಗಳಿವೆ. ಇದರಂತೆ ಮೈಸೂರಿನ ಬಾಲಕರ ಬಾಯಿಪಾಠ ಪುಸ್ತಕವೊಂದರಲ್ಲೂ ಈ ಸಂಜ್ಞಾರ್ಥಗಳಿವೆ. ಸಂಸ್ಕೃತ ಮತ್ತು ದೇಶೀಯ ಪದಗಳಿಗೆ ನಾನಾರ್ಥಗಳನ್ನು ತಿಳಿಸುವುದೇ ಈ ಕೋಶದ ಮುಖ್ಯೋದ್ದೇಶ. ಇದರಲ್ಲಿ ಪುಟ ೩೧೦.

ಚಕ್ರವರ್ತಿ—(ಸಂ) ಕುಂಬಾರ; ೨ ಅರಸು; ೩ ಮಾನ್ಯ, ಪೂಜ್ಯ; ೪ ನಾರಾಯಣ; ವಾಸ್ತುಕ.

ಸಂಜ್ಞಾರ್ಥಗಳಿಗೆ-

ಚತುರ್ದಶ ವಿದ್ಯೆಗಳು—೧-೪ ಋಗ್ಯಜು ಸಾಮಾಥರ್ವಣ ವೇದಗಳು; ೫-೧೦ ಛಂದಸ್ಸು, ಕಲ್ಪ, ವ್ಯಾಕರಣ, ಶಿಕ್ಷೆ, ಜ್ಯೋತಿಷ, ನಿರುಕ್ತವೆಂಬ ವೇದಾಂಗಗಳು;—೧೧ ಧರ್ಮ ಶಾಸ್ತ್ರ; ೧೨ ಪುರಾಣ; ೧೩ ಮೀಮಾಂಸ; ೧೪ ತರ್ಕ.

೨೮ ಪ್ರಭಣ್ಣನವರ ನಿಘಂಟು

ಇದನ್ನು ಕ್ರಿ. ಶ. ೧೮೯೮ರಲ್ಲಿ ಪ್ರಭಣ್ಣನವರು ಕಿಟ್ಟೆಲ್ ನಿಘಂಟಿನ ಮಾದರಿಯಲ್ಲೇ ರಚಿಸಿದರು. ಇದು ನಾನಾರ್ಥ ಕಲ್ಪದ್ರುಮದಂತೆ ಪ್ರತಿ ಶಬ್ದಕ್ಕೂ ಹಿಂದಿನ ಕಾವ್ಯಗಳ ಆಧಾರವನ್ನು ಕೊಡುವ ಕೋಶ. ಇದು ಇನ್ನೂ ಹಸ್ತಪ್ರತಿಯಲ್ಲಿದೆ.

೨೯ ಷಟ್ಪದಿ ಕಾವ್ಯಗಳ ನಿಘಂಟು.

೩೦ ಕನ್ನಡ ನಿಘಂಟುಗಳ ನಿಘಂಟು

ಸಾಹಿತ್ಯ ಪರಿಷತ್ತು ಇವೆರಡು ನಿಘಂಟನ್ನೂ ೧೯೩೦ರಲ್ಲಿ ತಯಾರಿಸಿತು. ಇವೆರಡೂ ಕನ್ನಡಿಗರ ದೌರ್ಭಾಗ್ಯದಿಂದ ಹಸ್ತಪ್ರತಿಯಲ್ಲೇ ಇವೆ.

೩೧ ಸಿರಿಗನ್ನಡ ಅರ್ಥಕೋಶ

ಇದರ ಪ್ರಥಮ ಮುದ್ರಣ ೧೯೪೦ರಲ್ಲೂ, ದ್ವಿತೀಯ ಮುದ್ರಣವು ೧೯೪೪ರಲ್ಲೂ ಆಗಿದೆ. ಈಗ ತೃತೀಯ ಮುದ್ರಣವು ಪ್ರಚಾರದಲ್ಲಿದೆ. ಇದರ ಸಂಪಾದಕರು ಶ್ರೀ ಕೋಟ ಶಿವರಾಮ ಕಾರಂತರು, ಬರೆಯಲು ಸಹಾಯಕರಾದವರು ಶ್ರೀ ಬಿ. ಶಂಕರ ನಾರಾಯಣನವರು, ಶ್ರೀ. ಪಾ. ಐ. ಶಿವರಾಮಯ್ಯನವರೇ ಮೊದಲಾದವರು. ಈ ನಿಘಂಟಿನಲ್ಲಿ ಈಗ ಕನ್ನಡದಲ್ಲಿ ಪ್ರಚಾರದಲ್ಲಿರುವ ಹೆಚ್ಚಿನ ಪದಗಳಿಗೆಲ್ಲಾ ಅರ್ಥಕೊಡುವ ಯತ್ನ ನಡೆಸಿದ್ದಾರೆ. ಇದರಲ್ಲಿ ಒಂದು ಹೊಸನಡೆ ಇದೆ. ಇದು ಪ್ರಕಾಶವಾದ ಕಾಲದಲ್ಲಿ ಇಂಥಾ ನಿಘಂಟು ಕನ್ನಡ ಮಾತ್ರ ಬಲ್ಲವರಿಗೆ ಇಲ್ಲವೇ ಆಗಿತ್ತು. ಇದರಲ್ಲಿ ಹಲ ಕೆಲವು ತಪ್ಪುಗಳುಳಿದಿವೆ. ಅಕ್ಷೋಹಿಣಿಗೆ ಕೊಟ್ಟ ಸಂಖ್ಯೆ ತಪ್ಪು. ಈ ಕೋಶಕ್ಕೆ ಇನ್ನೂ ಇಷ್ಟೇ ಅಥವಾ ಅರ್ಧದಷ್ಟಾದರೂ ಪದಗಳನ್ನು ಸೇರಿಸಲೇಬೇಕು. ಎಷ್ಟೋ ಸುಲಭ ಶಬ್ದಗಳೇ ಇದರಲ್ಲಿಲ್ಲ ಉದಾಹರಣೆಗಾಗಿ ಅಕಾರಾದಿ ಪದಗಳಲ್ಲಿ ಕೆಲವನ್ನು ಮಾತ್ರ ಕೊಡುತ್ತೇನೆ— ಈ ದೌರ್ಬಲ್ಯವು ಮುಂದಿನ ಎಲ್ಲಾ ಕೋಶಗಳಲ್ಲೂ ಸಾಮಾನ್ಯವಾಗಿ ಇದ್ದೇ ಇದೆ—

ಅಕಲ್ಪಿತ, ಅಗತೆ, ಅಗಳಿ, ಅಗಾಧ, ಅಗೌರವ, ಅಗಸ್ತ್ಯ, ಅಗ್ನಿಕಣ, ಅಗ್ನಿಕಾರ್ಯ, ಅಗ್ನಿಗರ್ಭ, ಅಗ್ರಜನ್ಮ, ಅಜಸ್ರ, ಅಡ್ಡಿಗೆ, ಅಡಗೊಲಜ್ಜಿ, ಅಡೆಗೊಳು ಅತಂತ್ರ, ಅಧಿರಾಜ, ಅಧೀನ, ಅಧೀರ, ಅಧೈರ್ಯ, ಅಧೋವಾಯು, ಅಧ್ಯಯನ, ಅಧ್ಯಾಯ, ಅನಂಗ, ಅನದ್ಯತನ, ಅನನ್ಯ, ಅನನ್ಯಜ, ಅನರ್ಘ್ಯ, ಅಪಗಂಜಿ, ಅಪರಾಜಿತ...

ಶ್ರೀ ಕಾರಂತರು ನಾಲ್ಕನೆಯ ಆವೃತ್ತಿಯಲ್ಲಾದರೂ ಇಂತಹ ಕೆಲವು ಸಾವಿರ ಪದಗಳನ್ನು ಸೇರಿಸಿ ಕನ್ನಡಿಗರಿಗೆ ಅವರ ಕೋಶವು ಕೈಪಿಡಿಯಾಗುವಂತೆ ಮಾಡಲೆಂದು ಹಾರೈಸುತ್ತೇನೆ. ಈಗ ಇದ್ದ ನಿಘಂಟುಗಳೆಲ್ಲಾ ಇದರ ಸಹಾಯ ಪಡೆದೇ ಪ್ರಚಾರಕ್ಕೆ ಬಂದಿವೆ.

ಚಪ್ಪನ್ನ-ಐವತ್ತಾರು
-ದೇಶ, ಐವತ್ತಾರು ಪ್ರಮುಖ ರಾಷ್ಟ್ರಗಳು, ಅಖಿಲ ಪ್ರಪಂಚ.

೩೨. ಕನ್ನಡ ನಿಘಂಟು

ಇದನ್ನು ಮುಚ್ಚಿಮಲೆ ಶ್ರೀ ಶಂಕರ ನಾರಾಯಣ ರಾಯರು, ಶ್ರೀ ಆರ್. ಎಸ್. ನಾಪೂರ್‌ಕರ್ ಮತ್ತು ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ೧೯೫೫ರಲ್ಲಿ ಪ್ರಕಾಶ ಮಾಡಿದರು. ಇದನ್ನು ಅರ್ಥನೇಮಿ ಪುರಾಣ ಮೊದಲಾದ ೧೪ ಕಾವ್ಯಗಳಿಂದ ಶಬ್ದ ಸಂಗ್ರಹಿಸಿ ಬರೆದಂತೆ ಲೇಖಕರು

(೯ನೇ ಪುಟ ನೋಡಿರಿ)

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋಪೋರೇಶನ್
ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಪರಿಚಯ

ನಿಷ್ಠಾವಂತ ಕಾರ್ಯಕರ್ತ

ಶ್ರೀ ಕನ್ವರ್ ಕೃಷ್ಣಾ'

ಪಂಜಾಬಿನಲ್ಲಿ ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಯಶಸ್ಸಿಗೆ ಇವರೇ ಮೂಲಕಾರಣರು

ಚಪ್ಪಲಿ ಇಲ್ಲದ ಕಾಲು, ಅರ್ಧ ತೋಳಿನ ಅಂಗಿ ಮತ್ತು ಖಾದಿ ಬಟ್ಟೆಯ 'ಟಾಚಾ' ಇವುಗಳೇ ಪ್ರಾಧಾನ್ಯವಾಗಿ ಕಾಣುವ ಸರಳ ವ್ಯಕ್ತಿ ಒಬ್ಬ ಭೂದಾನ ಕಾರ್ಯಕರ್ತ. ೪೧ ವರ್ಷ ವಯಸ್ಸಿನ ಶ್ರೀ ಕನ್ವರ್ ಕೃಷ್ಣಾ ಸಾಮುದಾಯಿಕ ಅಭಿವೃದ್ಧಿ ಚಳುವಳಿಯಲ್ಲಿ ತುಂಬಾ ಆಸಕ್ತಿಯಿಂದ ದುಡಿಯುತ್ತಿರುವ ಒಬ್ಬ ನಿಷ್ಠಾವಂತ ವ್ಯಕ್ತಿ. ಪಂಜಾಬ್ ರಾಜ್ಯದ ಸತ್ಪುರಾ ಗ್ರಾಮಕ್ಕೆ ಸೇರಿದ ಇವರು ಈತನಕ ಸುಮಾರು ೨೦೦ ಗ್ರಾಮಗಳಲ್ಲಿ ಸುತ್ತಾಡಿ ಜನರಲ್ಲಿ ಈ ಚಳುವಳಿ ಬಗ್ಗೆ ವಿಶೇಷ ರೀತಿಯ ಆಸಕ್ತಿ ಕೆರಳುವಂತೆ ಮಾಡಿದ್ದಾರೆ. ಶಾಲೆ ತೆರೆಯಲು ಮುಂದೆ ಬನ್ನಿ, ಕುಶಲ ಕಲೆಗಳ ಕೇಂದ್ರ ತೆರೆಯಲು ಪ್ರಯತ್ನಿಸಿ, ಬಾವಿ ತೋಡಿರಿ, ರಸ್ತೆ ರಿಪೇರಿ ಮಾಡಿಕೊಳ್ಳಿ—ನಿಮ್ಮ ಈ ಕಾರ್ಯಗಳಲ್ಲಿ ಸಾಮುದಾಯಿಕ ಅಭಿವೃದ್ಧಿ ಕೇಂದ್ರದ ಪೂರ್ಣ ಸಹಕಾರವಿದೆ. ಎಂದು ಹೇಳಿ ಹುರುಪು ತುಂಬುವುದೇ ಈ ವ್ಯಕ್ತಿಯ ಮುಖ್ಯ ಕೆಲಸವಾಗಿ ಹೋಗಿದೆ

ಇದರ ಫಲವಾಗಿ ಈ ಕ್ಷೇತ್ರದಲ್ಲಿ ನಡೆದಿರುವ ಕಾರ್ಯದ ಪ್ರಮಾಣ ಅಪಾರ.

ದೆಹಲಿಯಿಂದ ೨೫ ಮೈಲಿಗಳಷ್ಟು ದೂರದಲ್ಲಿದೆ ಸತ್ಪುರಾ ಎಂಬ ಈ ಗ್ರಾಮ. ತುಂಬಾ ಸಣ್ಣ ಹಳ್ಳಿ; ಆರ್ಥಿಕವಾಗಿಯೂ ತುಂಬಾ ಹಿಂದುಳಿದ ಪ್ರದೇಶ. ಆದರೂ ಕನ್ವರ್ ಕೃಷ್ಣಾರವರ ಪ್ರಯತ್ನದ ಫಲವಾಗಿ ಅನೇಕ ರೀತಿಯ ವಿಶಿಷ್ಟ ಸೌಲಭ್ಯಗಳನ್ನು ಪಡೆದಿದೆ

ಹಿಂದೆ ಈ ಗ್ರಾಮಕ್ಕೆ ಶಾಲೆಯ ಸೌಲಭ್ಯವೇ ಇರಲಿಲ್ಲ. ಆದರೆ ಇಂದು ಗ್ರಾಮಸ್ಥರು ಕೂಡಿಸಿದ ನಿಧಿಯಿಂದ ಕಟ್ಟಲ್ಪಟ್ಟ ಶಾಲೆಗೆ ಸ್ವಂತ ಕಟ್ಟಡವೇ ಒಂದಿದೆ. ಇದನ್ನು ಕಟ್ಟಲು ವಿನಿಯೋಗವಾದ ಶ್ರಮದಾನದಲ್ಲಿ ಗ್ರಾಮದ ಪ್ರತಿಯೊಬ್ಬರೂ ಭಾಗಿಗಳಾಗಿದ್ದರು. ಸಾಮುದಾಯಿಕ ಅಭಿವೃದ್ಧಿ ಕೇಂದ್ರವು ಒದಗಿಸಿದ ಹಣ ಹಾಗೂ ಇತರ ಸೌಲಭ್ಯಗಳ ಪರಿಣಾಮವಾಗಿ ಗ್ರಾಮದ ರಸ್ತೆಗಳು ಹದಗೊಂಡಿವೆ. ಎರಡು ಹೊಸ ಬಾವಿಗಳು ತೋಡಲ್ಪಟ್ಟಿವೆ, ಮೂರು ಬಾವಿಗಳು ರಿಪೇರಿಯಾಗಿವೆ.

ಅಷ್ಟೇ ಅಲ್ಲ ಹಿಂದೆ ಕತ್ತಲು ಕೊಂಪೆಯಾಗಿದ್ದ ಈ ಪ್ರದೇಶದಲ್ಲೀಗ ವಿದ್ಯುತ್ ಸೌಲಭ್ಯ ದೊರಕಿತು ದೀಪಗಳು ಬೇರೆ ಬಂದಿವೆ; ಮನೆ ಮನೆಯಲ್ಲೂ ಬೆಳಕೋ ಬೆಳಕು! ನೀರಾವರಿ ಸೌಲಭ್ಯಕ್ಕಾಗಿ ಕೊಳವೆ ಬಾವಿಗಳು ಬೇರೆ ನಿರ್ಮಿತವಾಗಿವೆ. ಗ್ರಾಮಸ್ಥರ ಜೀವನದಲ್ಲಿ, ಈ ಎಲ್ಲ ಪರಿವರ್ತನೆಗಳಿಂದಾಗಿ ಒಂದು ಹೊಸ ಅಧ್ಯಾಯವೇ ಆರಂಭವಾಗಿದೆ.

ಗ್ರಾಮಸ್ಥರನ್ನು ಶ್ರಮದಾನಕ್ಕಾಗಿ ಸಂಘಟಿಸಿರುವ ಕಾರ್ಯವನ್ನು ನೋಡಬೇಕಾದರೆ ಇಲ್ಲಿ ನೋಡಬೇಕು. ಫರೀದಾಬಾದ್ ಪ್ರವಾಸಿ ಮಂದಿರದಿಂದ ತಾಯಿಗಾಂ ವರೆಗಿನ ಆರು ಮೈಲಿಗಳ ರಸ್ತೆಯನ್ನು ಗ್ರಾಮಸ್ಥರೇ ನಿರ್ಮಿಸಿದ್ದಾರೆ. ನಿಮ್ಕಾ ಗ್ರಾಮದಿಂದ ತಾಯಿಗಾಂ ಗ್ರಾಮದ ವರೆಗಿನ ಮೂರು ಮೈಲಿಗಳ ರಸ್ತೆಯನ್ನೂ ಗ್ರಾಮಸ್ಥರು ನಿರ್ಮಿಸಿದ್ದಾರೆ; ಈ ರಸ್ತೆಯ ನಿರ್ಮಾಣ ಕಾರ್ಯದಲ್ಲಿ ಸಾಮುದಾಯಿಕ ಅಭಿವೃದ್ಧಿ ಕೇಂದ್ರವೂ ಸಹ ಭಾಗಿಯಾಗಿದೆ. ಆದರೆ ಮುಖ್ಯ ನಾಯಕತ್ವ ವಹಿಸಿದ ಕೀರ್ತಿ ಮಾತ್ರ ಶ್ರೀ ಕನ್ವರ್ ಕೃಷ್ಣಾ ಅವರಿಗೆ ಸಲ್ಲುತ್ತದೆ

ಸಹಕಾರ ಚಳುವಳಿಯ ಬೆಳವಣಿಗೆ

ಈ ಪ್ರದೇಶದಲ್ಲಿ ಸಹಕಾರ ಚಳುವಳಿ ಯಶಸ್ವಿಯಾಗಿ ಬೆಳೆಯುತ್ತಿರುವುದು ಗಮನಾರ್ಹ. ನಿಮ್ಕಾ ಗ್ರಾಮದಲ್ಲಿ ಸ್ಥಾಪಿತವಾಗಿರುವ ಸಹಕಾರ ಸಂಘ ಗ್ರಾಮಸ್ಥರಿಗೆ ಸಾಲದ ಸೌಲಭ್ಯವನ್ನೂ ಉಳಿತಾಯ ಸೌಕರ್ಯವನ್ನೂ ಒದಗಿಸುತ್ತಿದೆ. ಚರ್ಮದ ತಯಾರಿಕೆಗಳಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಇದಕ್ಕೆ ಸಂಬಂಧಿಸಿದ ಹಾಗೆ ಇನ್ನೊಂದು ಸಹಕಾರ ಸಂಸ್ಥೆಯ ಸ್ಥಾಪನೆ ಸಹ ನಡೆದಿದೆ.

ಇಷ್ಟೆಲ್ಲ ಸಾಧನೆಗಳು ನಡೆದಿದ್ದರೂ ಸಹ ಇನ್ನೂ ಕನ್ವರ್ ಕೃಷ್ಣಾ ಅವರ ಮನದ ಬಯಕೆಯೊಂದು ಈಡೇರದೆ ಹಾಗೆಯೇ ಉಳಿದಿದೆ. ಮಾರ್ಚಿ ತಿಂಗಳಲ್ಲಿ ಈ ಪ್ರದೇಶಕ್ಕೆ 'ಪಾದಯಾತ್ರೆ'ಯಾಗಿ ಬರುವ ವಿನೋಬಾ ಭಾವೆಯವರಿಗೆ ಇಡೀ ಒಂದು ಗ್ರಾಮವನ್ನೇ ದಾನವಾಗಿ ಕೊಡುವಂತೆ ಮಾಡಬೇಕು! ಕಟೇಸರ್ ಗ್ರಾಮಕ್ಕೆ ಸೇರಿದ ೧,೦೩೭ ಎಕರೆಗಳ ಪೈಕಿ ೧೧೭ ಎಕರೆಗಳಷ್ಟು ಭೂಮಿ ಈಗಾಗಲೇ ಕನ್ವರ್ ಕೃಷ್ಣಾರವರ ಹಿರಿಯ ಉದ್ದೇಶ ಸಾಧನೆಗಾಗಿ ದಾನವಾಗಿ ಲಭಿಸಿದೆ ಎಂದೂ ವರದಿಯಾಗಿದೆ. ಹೀಗೆ ತಮ್ಮ ಜಮೀನಿನ ಒಡೆತನವನ್ನೂ ಬಿಟ್ಟುಕೊಡಲು ಇನ್ನೂ ಅನೇಕರು ಮುಂದೆ ಬರಬಹುದು.

ತನ್ನ ಪ್ರಯತ್ನದಿಂದ ದಾನವಾಗಿ ಕೊಡಲ್ಪಡುವ ಗ್ರಾಮ ಭೂದಾನ ಚಳುವಳಿಯ ಸಫಲತೆಯನ್ನು ಸಾರುವ ಒಂದು ಮಾದರಿ ಗ್ರಾಮವಾಗಬೇಕೆಂಬುದು ಕನ್ವರ್ ಕೃಷ್ಣಾರವರ ಮನೋದ್ದೇಶವಾಗಿದೆ. ಗ್ರಾಮ ಸ್ವಯಂಪರಿಪೂರ್ಣವಾಗಬೇಕು, ಹಣವಂತರು ನಡೆಸುವ ಸುಲಿಗೆಗೆ ಒಂದಿಷ್ಟೂ ಅವಕಾಶವೀಯಬಾರದು, ಈ ಪ್ರದೇಶದ ಪ್ರತಿಯೊಂದು ಗ್ರಾಮಕ್ಕೂ ಅಗತ್ಯ ಬೀಳುವ ಸಂದರ್ಭಗಳಲ್ಲಿ ಗ್ರಾಮಸ್ಥರಿಗೆ ಹಣದ ಸೌಲಭ್ಯವನ್ನು ಒದಗಿಸಿ ನೆರವು ನೀಡುವ ಸಹಕಾರ ಸಂಘವಿರಬೇಕು ಅಲ್ಲದೆ ಪ್ರತಿಯೊಂದು ಗ್ರಾಮದ ಕುಶಲ ಕಲೆಗಾರರ ಹಾಗೂ ಕೈ ಕಸಬುಗಳ ಉತ್ತೇಜನಕ್ಕೆ ಪೂರ್ಣ ಅವಕಾಶವಿರಬೇಕು—ಇದು ಮುಖ್ಯ ಗುರಿಯಾಗಿದೆ.

ಕನ್ವರ್ ಕೃಷ್ಣಾ ಅವರ ವ್ಯಕ್ತಿತ್ವ ಬಹಳ ಸ್ವಾರಸ್ಯವಾಗಿದೆ. ನಾಡಿಗೆ ಸ್ವಾತಂತ್ರ್ಯ ಬರುವವರೆಗೂ ಖಾದಿಯನ್ನು ಬಿಟ್ಟು ಬೇರೆ ಉಡುಪು ಧರಿಸುವುದಿಲ್ಲ ಎಂದು ಶಪಥ ಮಾಡಿದ್ದ ಇವರು ಸಾಮ್ರಾಜ್ಯಶಾಹಿ ಆಡಳಿತ ವರ್ಗದ ಆಕ್ರೋಶಕ್ಕೆ ಗುರಿಯಾಗಿ ಸೆರೆಮನೆಯನ್ನೂ ನೋಡಬೇಕಾಯಿತು. ಆದರೆ ಒಂದು ವರ್ಷದ ತುರಂಗವಾಸ ಈ ವ್ಯಕ್ತಿಯ ದೇಶಪ್ರೇಮವನ್ನೂ ಕುಗ್ಗಿಸಲು ಸಮರ್ಥವಾಗಲಿಲ್ಲ. ಇದೀಗ ಇವರು ಪಂಜಾಬ್ ಭೂದಾನ ಚಳುವಳಿಯ ಒಬ್ಬ ಮುಖ್ಯ ಕಾರ್ಯಕರ್ತರು.

ಸ್ವಾತಂತ್ರ್ಯ ಬಂದ ತರುವಾಯವೇ ಬೇರೆ ಉಡುಪು—ಅದೂ ಪ್ರಾರಂಭದಲ್ಲಿ ತಿಳಿಸಿದಂತಹ ಸಾಧಾರಣ ಉಡುಪು—ಧರಿಸತೊಡಗಿದ ಕನ್ವರ್ ಕೃಷ್ಣಾರವರು ಗ್ರಾಮಾಂತರ ಪ್ರದೇಶದ ಸೇವೆಯಲ್ಲಿ ತುಂಬಾ ಆಸಕ್ತಿಯಿಟ್ಟು ಕೆಲಸಮಾಡುತ್ತಿದ್ದಾರೆ.

ಚಪ್ಪಲಿ ಇಲ್ಲದೆ ಮೈಲಿ ಮೈಲಿಗಟ್ಟಲೆ ಊರಿಂದೂರಿಗೆ ತಿರುಗುತ್ತಾ ಗ್ರಾಮಸ್ಥರಲ್ಲಿ ಹೊಸ ಚೈತನ್ಯವನ್ನು ತುಂಬುತ್ತಾ ಈ ಪ್ರದೇಶದಲ್ಲಿ ಸಾಮುದಾಯಿಕ ಅಭಿವೃದ್ಧಿ ಯೋಜನೆ ಕಾರ್ಯದ ಜೀವನಾಡಿಯಂತೆ ಕೆಲಸಮಾಡುತ್ತಿರುವ ಈ ವ್ಯಕ್ತಿಯ ಬಡತನವಾಗಲಿ, ಸರಳ ಸ್ವಭಾವವಾಗಲಿ ಜನರು ಆತನಲ್ಲಿ ತೋರುವ ಭಕ್ತಿ ವಿಶ್ವಾಸಗಳಿಗೆ ಕುಂದು ತಂದಿಲ್ಲ. ಗ್ರಾಮಸ್ಥರು ಆತನನ್ನು ತಮ್ಮ ಪಾಲಿನ ದೇವರೆಂದೇ ಭಾವಿಸುತ್ತಾರೆ; ನಿಜ, ಅವರು ಆಶೋತ್ತರಗಳ ಸುಂದರ ಕನಸನ್ನು ನನಸುಮಾಡಲು ಹೋರಾಡಿರುವ ನವಚೇತನದ ಸಂಕೇತ, ಶ್ರೀ ಕನ್ವರ್ ಕೃಷ್ಣಾ.

ಅಮೇರಿಕೆಯು ಭಾರತಕ್ಕೆ ಮೀನು ಹಿಡಿಯುವ ಆಧುನಿಕ ನೌಕೆಯೊಂದನ್ನು ಕೊಟ್ಟಿದ್ದು ಅದನ್ನು ಫೆಬ್ರವರಿ ಎರಡು ಅಮೇರಿಕೆಯ ತಾಂತ್ರಿಕ ಆಯೋಗದ ಧುರೀಣ ಶ್ರೀ ಹವಾರ್ಡ್ ಹಟ್ಸನರು ಒಪ್ಪಿಸಿದರು.

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ ಬೆಲೆ: ರೂ. 2 00.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕವಿತಾ ವಿತಾನ

ಹೃದಯ ವೀಣೆ

ಪ್ರೀತಿ ನಿನ್ನ ಮಡಿಲಿಗೆ।
ಪ್ರೇಮ ಸುಧೆಯು ಕಡಲಿಗೆ ॥
ಒಡಲು ತುಂಬಿ ತುಳುಕುತಿಹುದು।
ಒಲವು ಸ್ನೇಹ ಕರೆಯುತಿಹುದು।
ನೆನೆವೆ ನಿನ್ನ ನನುದಿನಾ।
ಏಕೆ ಎಂಬು ದರಿಯೆನಾ ॥ ೧ ॥

ಆದಿ ಅಂತ್ಯವಿಲ್ಲದಂತೆ।
ಮನವು ನಿನ್ನ ಕರೆವುದು।
ಚೆಲುವಡೊಲವ ತಿಳಿಯೆನದನು।
ಎನ್ನ ಹೃದಯ ತಣಿವುದು।
ವಿರಸಭಾವ ವೇರಿದೆ।
ನಿನ್ನ ಬಯಕೆ ಹೆಚ್ಚಿದೆ ॥ ೨ ॥

ಎಂತು ನಿನ್ನ ನೋಡುವೆ।
ಎಂದು ಕೂಡಿ ಪಾಡುವೆ।
ನಿನ್ನ ಪ್ರೇಮರಾಗಲಹರಿ
ಕೇಳಿಸಹುದು ದೂರದಿ।
ಬಾರ ದೂರ ಸರಿಯುವೆ।
ಏತಕೆಂತು ತೋರುವೆ ॥ ೩ ॥

ಹೃದಯದಂತರಾಳದಲ್ಲಿ।
ಮನದ ಮರೆಯ ಮುಸುಕಿಲಿ।
ನಿನ್ನ ರೂಪ ಕಾಣುತಿರುವೆ।
ಸ್ವಪ್ನ ಸುಖದೊಳಾಡುವೆ।
……………… …. ..
ಪ್ರೇಮದೂರತೆ ಹರಿಯಲಿ।
ದಿವ್ಯ ಪ್ರೇಮ ದೊರೆಯಲಿ।

—ಕೆ. ಬಾಬು ಗೌಡ.

ಅನುಭವ ಕಥನ

ಅನುಭವವಿರುವಲ್ಲಿ ಅನ್ಮೃತವಿಲ್ಲದಿರುವುದೆ?

" ಬ್ರಾಹ್ಮಣ "

"ದೈವಾಧೀನಂ ಜಗತ್ಸರ್ವಂ. ಮಂತ್ರಾಧೀನಂತು ದೈವತಾತನ್ಮಂತ್ರಂ ಬ್ರಾಹ್ಮಣಾಧೀನಂ — ಬ್ರಾಹ್ಮಣೋ ಮಮ ದೈವತಃ"

"ಬ್ರಾಹ್ಮಣ"ನೆಂದರಾರು? ಹಿಂದಿನ ಕಾಲದಲ್ಲಿ ಬ್ರಾಹ್ಮಣರೆಂದರೆ ದೈವಸಮಾನರೆಂದು ತಿಳಿಯುತ್ತಿದ್ದರು. ಯಾಕೆಂದರೆ ಪೂರ್ವ ಕಾಲದ ಬ್ರಾಹ್ಮಣರಿಗೆ ದೈವಚಿಂತನೆ, ಮಂತ್ರಪಠನ–ಪ್ರಯೋಗ–ಸಿದ್ಧಿ–ದಾನ ಇವು ಕರ್ಮವಾಗಿತ್ತು. ಅವರು ತಮ್ಮ ಅನನ್ಯ–ಕಠಿಣ ಹಾಗೂ ಏಕ ಚಿತ್ತ ಸಾಧನದಿಂದ ಅಪೂರ್ವ ಶ್ರದ್ಧಾಭಕ್ತಿಗಳಿಂದ ದೇವರನ್ನು ಮಂತ್ರ–ಶಕ್ತಿಗಳಿಂದ ಭಜಿಸಿ ಒಲಿಸಿಕೊಂಡಿದ್ದರು."

"ಜಗತ್ತು ದೇವರ ವಶ, ದೇವತೆಗಳು ಮಂತ್ರಮುಗ್ಧರು–ಮಂತ್ರಗಳು ಬ್ರಾಹ್ಮಣಾಧೀನ. ಆದುದರಿಂದ ಬ್ರಾಹ್ಮಣನೇ ದೇವರು" ಎಂಬುದಾಗಿ ಪೂರ್ವಜರು ಬ್ರಾಹ್ಮಣರಲ್ಲಿ ದೇವರಷ್ಟೇ ಶ್ರದ್ಧಾಭಕ್ತಿಯನ್ನಿಟ್ಟಿದ್ದರು".

ಆದರಿಂದು "ಹೊರಗೆ ಡೊಳ್ಳು–ಒಳಗೆ ಪೊಳ್ಳಾಗಿದೆ". ಆ ಕಾಲದ ತ್ರಿಕಾಲ ಜ್ಞಾನಿಬ್ರಾಹ್ಮಣರೂ ಇಲ್ಲ. "ಇಂದಿನ ಜನರಲ್ಲಿ ಬ್ರಾಹ್ಮಣರೆಂಬ ಶ್ರದ್ಧೆ-ವಿಶ್ವಾಸವೂ ಇಲ್ಲ". ದೇವರೂ ವೇದ ನಿರ್ಮಿತ ಮಂತ್ರಗಳೂ ನಾಮ ಮಾತ್ರದಲ್ಲಿ ಉಳಿದಿವೆ. ಹೃದಯಂಗತವಾಗಿ ದೇವರನ್ನೂ, ಮಂತ್ರಗಳನ್ನೂ, ಬ್ರಾಹ್ಮಣರನ್ನೂ ನಂಬುವ ಜನರೆಷ್ಟಿದ್ದಾರೆ? ಮಂತ್ರವು ಪಠ್ಯಪುಸ್ತಕವಾಗಿದೆ! ಆದರದನ್ನು ಶ್ರೇಷ್ಠ ಪ್ರಾಣಸಬದ್ಧವಾಗಿ ಏಕಾಗ್ರಚಿತ್ತದಿಂದ ದೇವರಲ್ಲಿ ಭಕ್ತಿ, ಶ್ರದ್ಧೆ—ಗಳಿಂದ ಪಠಿಸಿ, ಧ್ಯಾನಿಸಿ, ಒಲಿಸಿಕೊಂಡು ತಮ್ಮ ಆತ್ಮಶಕ್ತಿಯಿಂದಲೂ ದೈವೀಕೃಪೆಯಿಂದಲೂ ಅವನ್ನು ಪ್ರಯೋಗಿಸುವವರಾರಿದ್ದಾರೆ?

" ಬ್ರಹ್ಮವಿದ್ಬ್ರಾಹ್ಮಣಃ ಸ್ಮೃತಃ " (ಬ್ರಹ್ಮಜ್ಞಾನವನ್ನು ತಿಳಿದವನೇ ಬ್ರಾಹ್ಮಣನು, ಇಂದಿನ ಕಾಲದಲ್ಲಿ "ಜನಿವಾರ" ಹಾಕಿ ಬ್ರಾಹ್ಮಣರೆಷ್ಟೋ ಹೆಚ್ಚಿದ್ದಾರೆ! ಆದರೆ ಅವರೆಲ್ಲರಿಗೆ—ಬ್ರಹ್ಮಜ್ಞಾನವಿದೆ? ಕೆಲ ಬ್ರಾಹ್ಮಣರಂತೂ ಗಿಳಿ ಪಾಠಮಾಡಿದ ಮಂತ್ರಗಳನ್ನು ಹೇಳಿ ದಕ್ಷಿಣೆ ಸೊಂಟಕ್ಕೆ ಸೇರಿಸುವುದೇ ತಮ್ಮ ಬ್ರಾಹ್ಮಣ ವರ್ಗದವರ ಕೆಲಸವೆಂದು ತಿಳಿದಿದ್ದಾರೆ! ಪಾಪ, ಅವರಿಗೆ ತಾವು ಉಚ್ಚರಿಸುತ್ತಿರುವ ಮಂತ್ರದ ನಿಜ ಅರ್ಥವಾದರೂ ತಿಳಿದಿದೆಯೋ?

ಭಟ್ಟರಿಲ್ಲದ "ಗಂಧಾಕ್ಷತೆ"

ನಮ್ಮ ಪುರೋಹಿತ ಭಟ್ಟರು ಇಂದು ಮೊದಲಿನಂತೆ ಇಲ್ಲ! ಅವರದೊಂದು ಜಿನಸಿನ ಅಂಗಡಿಯಾಗಿದೆ. ಅವರ ಹುಡುಗರಿಬ್ಬರು ಕಾಲೇಜ ವ್ಯಾಸಂಗದಲ್ಲಿದ್ದಾರೆ.

ನಮ್ಮಲ್ಲಿಯ ಸಂಪ್ರದಾಯದಂತೆ ಶ್ರಾದ್ಧದ ಬ್ರಾಹ್ಮಣರಿಗೆ ೧ ರೂಪಾಯಿ ದಕ್ಷಿಣೆ, ೨ ಕಾಯಿ, ೨ ಸೇರು ಅಕ್ಕಿ, ೨ ಪಂಚೆ–ಊಟದ ಜೊತೆಗೆ ಕೊಡುವ ವಾಡಿಕೆ. "ಗಂಧಾಕ್ಷತೆ"ಗಾದರೆ ೧ ಕಾಯಿ, ೧ ಸೇರು ಅಕ್ಕಿ ಜೊತೆಗೆ ೮ ಆಣೆ ದಕ್ಷಿಣೆ ಸಿಗುವುದು.

ಅಂದು ನಮ್ಮಲ್ಲಿ ಗಂಧಾಕ್ಷತೆಗೆ ಭಟ್ಟರನ್ನು ಹುಡುಕಿದರೂ ಸಿಗಲಿಲ್ಲ! ನಮ್ಮ ಭಟ್ಟರು (ಪುರೋಹಿತರು) ಬರಲಿಲ್ಲ! ಯಾಕೆಂದರೆ ಗಂಧಾಕ್ಷತೆಗೆ ಬಂದು ದೊರಕಿಸುವ ೩ ಪಾಲು ಹಣ ಅವರ ಅಂಗಡಿಯ ವ್ಯಾಪಾರದಲ್ಲಿಯೇ ದೊರೆಯುವುದು. ಧಾರ್ಮಿಕ ಭಾವನೆಯಿಂದ ತಲೆತಲಾಂತರ ಬಂದ ಪುರೋಹಿತರೂ ಲಾಭ ಬಿಡಲು ತಯಾರಿಲ್ಲ! ಅಂತೂ ದೇವರಿಗೆ ನಮಸ್ಕರಿಸಿ ಗಂಧಾಕ್ಷತೆ ಮಾಡಲಾಯಿತು.

" ಎಚ್ಚರಿಕೆ "

"ಜನ್ಮ ದುಃಖಂ, ಜರಾ ದುಃಖಂ,
ಜಾಯಾ ದುಃಖಮ್ ಪುನಃ ಪುನಃ,
ಸಂಸಾರ ಸಾಗರಮತಿ ದುಃಖಂ,
ತಸ್ಮಾತ್ ಜಾಗೃತ ಜಾಗೃತ!"

ನಿಜವಾಗಿ ನೋಡಿದರೆ ಮನುಷ್ಯನ ಜೀವನವಿಡೀ ದುಃಖಮಯವಾದದ್ದು! ಕ್ಷಣಿಕವಾದ ಸುಖದ ಹಿಂದೆ ಹಾಗೂ ಮುಂದೆ ದುಃಖವಿದ್ದೇ ಇದೆ. ಬಾಲ್ಯದಲ್ಲಿ ತಂದೆ-ತಾಯಿ, ಗುರು–ಹಿರಿಯರ ಅಂಕಿತದಲ್ಲಿದ್ದು ತನ್ನ ಸ್ವೇಚ್ಛೆಯಂತೆ ವರ್ತಿಸಲಾರದಂತಾಗುವನು. ತನಗೆ ಬೇಕಾದ ವಸ್ತು, ತನಗೆ ತಿಳಿದಂತೆ ವರ್ತನೆ–ತನ್ನ ಮನದಿಚ್ಛೆ ಪೂರ್ತಿಗೊಳ್ಳಲು ಕಷ್ಟವೆಷ್ಟನ್ನೋ ಬಾಲ್ಯದಲ್ಲಿ ಅನುಭವಿಸಬೇಕು.

ಗೃಹಸ್ಥಾಶ್ರಮದಲ್ಲಿಯೂ ಇದೇ ಗೋಳು. ಮನೆಯ ಆಡಳಿತೆ-ಸಮಾಜದಲ್ಲಿ ಪ್ರತಿಷ್ಠೆ–ಮಡದಿ ಮಕ್ಕಳ ಪೋಷಣೆ–ವ್ಯವಹಾರ—ಇವೆಷ್ಟೋ ತಲೆಯಲ್ಲಿ ಕ್ಲೇಶೆಯನ್ನೆಬ್ಬಿಸಿ ದುಃಖದ ಮೊತ್ತವೇ ವ್ಯಯೊಡ್ಡುವುದು.

ಮುಪ್ಪಿನ ಕಾಲದಲ್ಲಿ ಮಕ್ಕಳ ರಕ್ಷಣೆ—ಮನೆತನ ರಕ್ಷಣೆ–ಮಕ್ಕಳು ಮೊಮ್ಮಕ್ಕಳ ಯೋಗಕ್ಷೇಮ, ತನ್ನ ಅಳಿಗಾಲ, ಇಲ್ಲದ ರೋಗದಿಂದ ಪೀಡೆ—ಅನಾರೋಗ್ಯ–ಗೃಹ ಕಲಹ–ಸಮಾಜದಲ್ಲಿ ವೈಷಮ್ಯವೇ ಮೊದಲಾದ ಅದೆಷ್ಟೋ ವಿಷಯಗಳು ಮಾನವನನ್ನು ಘಾಸಿ ಮಾಡುವುವು. ಮಾನವನು ಬಹು ಎಚ್ಚರಿಕೆಯಿಂದಿರಬೇಕು.

—ಸಿರಿಪತಿ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವ್ಯಕ್ತಿತ್ವ ಪ್ರದರ್ಶನ

ನೀವೂ ನಿಮ್ಮ ವ್ಯಕ್ತಿತ್ವವನ್ನು ನಿರೂಪಿಸಬಲ್ಲಿರಿ

ಎಂದಾದರೂ ಏನಾದರೂ ನೀವು ಗೀಚುತ್ತಿದ್ದರೆ, ಅದೇ ನಿಮ್ಮ ಬಗ್ಗೆ ವಿವರಗಳನ್ನೀಯಬಲ್ಲುದು!

ಸೀರೊ ಬಾದಶಹರ ದರ್ಬಾರಿಗೊಬ್ಬನು ಬಂದು— ತನಗೊಂದು ತಮ್ಮಲ್ಲಿ ಕೆಲಸಕೊಡಬೇಕೆಂದು ಪ್ರಾರ್ಥಿಸಿದನು. ಆತನಿಗೆ ಬಾದಷಹನು ಅನೇಕ ಪ್ರಶ್ನೆಗಳನ್ನು ಕೇಳಿದನು. ಮತ್ತು ಅವರ ಮಧ್ಯದಲ್ಲಿ ಆತನ ಹಸ್ತಲಿಪಿಯನ್ನು ನೋಡಿದನು. ಕೊನೆಗೆ ಬಾದಷಹನು ಗಂಭೀರವದನನಾಗಿ—"ನಾನು ನಿನ್ನನ್ನು ನಂಬಲಾರೆ. ನಿನ್ನ ಬರವಣಿಗೆಯಿಂದ ನೀನು ನಂಬಿಗಸ್ತನಲ್ಲವೆಂದು ತಿಳಿಯುವುದು" ಎಂದನು.

ಕೈಬರಹದಿಂದ ನಾವು ಮನುಷ್ಯರ ವಿಚಾರಗಳನ್ನು ಅವರಿಂದ ಸಂಭವಿಸತಕ್ಕ ಕೆಲಸಗಳನ್ನು ಕಂಡುಕೊಳ್ಳಬಹುದು. ರೋಗಿಯ ಅಂತಃಪ್ರವೃತ್ತಿಗಳೆಂತಿವೆ? ಅವುಗಳ ಸ್ವಭಾವವೆಂತಹದು? ಎಂಬಿತ್ಯಾದಿಗಳನ್ನು ನಾವು ರೋಗಿಯ ಕೈಬರಹದ ಪರೀಕ್ಷೆಯ ಮೂಲಕ ತಿಳಿಯಲು ಸಾಧ್ಯವಿದೆ. ಮಾನವನ ಸ್ವಭಾವ ಬಹುಕಠಿಣವಾಗಿದೆ. ಅದನ್ನು ನಾವು ತಿಳಿದುಕೊಳ್ಳಲು ಅನೇಕ ಉಪಾಯಗಳನ್ನು ಕಂಡುಕೊಳ್ಳಬೇಕಾಗಿದೆ. ಅನೇಕ ಬಾರಿ ಅವನು ತನ್ನ ಅನೇಕ ಸ್ವಭಾವಗಳ ಪೂರ್ಣ ಪರಿಚಯವಾಗುವಂತೆ ಅನೇಕ ಸಾಧನಗಳಿವೆ. ಅಂತಹವುಗಳಲ್ಲೊಂದು ಲೇಖನಿಯಾಗಿದೆ. ಲೇಖನಿಯ ತುದಿಯಿಂದ ಮಾನವನ ಅಂತಃಪ್ರವೃತ್ತಿಗಳನ್ನು ಅರಿತುಕೊಳ್ಳಲು ಸಾಧ್ಯವಿದೆ.

ಮನೋವೇಗಕ್ಕನುಸಾರವಾಗಿ ಕೆಲಸ ಮಾಡುವ ವ್ಯಕ್ತಿಗಳು ಅನೇಕರು ನಮ್ಮಲ್ಲಿರುವರು. ಅಂತಹರು ತಾವೆಂದೂ ಬಯಸದ ಕೆಲಸಗಳನ್ನು ಕೆಲಬಾರಿ ಮಾಡುವರು. ಅವರ ಮನಸ್ಸಿನಲ್ಲಿ ದಿನವಿಡಿ ಏರಿಳಿತಗಳು ಉಂಟಾಗುತ್ತಿರುತ್ತವೆ. ಕೆಲವೊಮ್ಮೆ ಪ್ರಸನ್ನರಾಗಿಯೂ ಕೆಲವೊಮ್ಮೆ ನಿರಾಶರಾಗಿಯೂ ಅವರು ಇರುತ್ತಾರೆ. ತಮ್ಮಲ್ಲಿ ಸ್ವಭಾವಕ್ಕೆ ವಿರುದ್ಧವಾದ ಅಭಿಪ್ರಾಯಗಳನ್ನು ಅವರು ತಮ್ಮಲ್ಲಿಟ್ಟುಕೊಂಡಿರುತ್ತಾರೆ.

ಗಂಭೀರ ವಿಚಾರಶೀಲ ಮತ್ತು ಸೌಮ್ಯರೆಂದು ತಿಳಿದುಕೊಳ್ಳಬಹುದಾದ ಅನೇಕರು ನಮಗೆ ಕಾಣ ಸಿಗುವರು, ಆದರೆ ಅವರ ಮನಸ್ಸಿನಲ್ಲಿ ಮನೋವೇಗದ ಜ್ವಾಲಾಮುಖಿ ಏಳುತ್ತಿರುತ್ತದೆ. ಅದು ಕೆಲ ದಿನ, ವಾರಗಳ ತನಕ ಅಚ್ಚಳಿಯದೆ ಉಳಿದಿರುತ್ತದೆ. ಅವರ ಮನೋವೇಗದ ಜ್ವಾಲಾಮುಖಿಯು ಅವಕಾಶ ಸಿಕ್ಕಿದೊಡನೆಯೆ ಬಹು ಉಪದ್ರಕಾರಿಯಾಗಿ ಸ್ಫೋಟನವಾಗುತ್ತದೆ. ಕೈಬರಹದ ಪರೀಕ್ಷಕನು ಇದನ್ನೆಲ್ಲಾ ಬಹುಸೂಕ್ಷ್ಮವಾಗಿ ತಿಳಿದುಕೊಳ್ಳುತ್ತಾನೆ.

ವ್ಯಕ್ತಿಗಳ ಹಸ್ತಲಿಪಿಯನ್ನು ನೋಡಿ ಅವರ ಶೀಲ, ಸ್ವಭಾವದ ಮೂಲವನ್ನು ತಿಳಿದುಕೊಳ್ಳಲು ಸಾಧ್ಯವಿದೆ. ಇದರ ವಿಚಾರವಾಗಿ ಪಾಶ್ಚಾತ್ಯರು ಅಧ್ಯಯನವನ್ನು ಮಾಡುತ್ತಾರೆ. ಮನುಷ್ಯನು ಕೈಯಲ್ಲಿ ಪೆನ್ಸಿಲನ್ನು ಹಿಡಿದುಕೊಂಡು ಕಾಗದದ ಮೇಲೆ ಬರೆಯಲಾರಂಭಿಸುತ್ತಾನೆ. ಕಾಗದದಲ್ಲಿ ಆತನು ತನ್ನ ಹೆಸರೋ ಅಥವಾ ತನ್ನ ಚಿರಪರಿಚಿತರ ಹೆಸರನ್ನೋ ಯಾ ಚಿತ್ರಗಳನ್ನೋ ಆಕೃತಿಗಳನ್ನೋ ಬಿಡಿಸುತ್ತಾನೆ. ಇದು ನಮಗೆ ಉದ್ದೇಶವಿಹೀನವಾಗಿ ಕಂಡರೂ, ಇದರ ಹಿಂದೆ ಬಲವಂತವಾದ ಉದ್ದೇಶಾದ್ದೇಯಿರುತ್ತದೆ. ಬಲವಂತವಾದ ಪ್ರೇರಣೆಯು ಪ್ರವೃತ್ತಿಗಳು ಅದರಲ್ಲಿ ಅಡಗಿರುತ್ತವೆ. ಮುಚ್ಚಿದ್ದ ಭಾವನೆಗಳನ್ನು ಮಾನವನು ಈ ರೀತಿಯಾಗಿ ತಿಳಿಯಪಡಿಸುತ್ತಾನೆ

ಪಂಡಿತ ಜವಾಹಿರಲಾಲ್ ನೆಹರುರವರು ಬೇರೆಯವರೊಡನೆ ಮಾತನಾಡುತ್ತಿದ್ದಾಗ ತಮ್ಮೆದುರಿದ್ದ ಕಾಗದಗಳಲ್ಲಿ ಮನಬಂದಂತೆ ಬರೆಯುತ್ತಿರುತ್ತಾರೆ. ಅವರು ಕಾಗದದಲ್ಲಿ ನಾನಾ ಆಕೃತಿಗಳನ್ನು ಬಿಡಿಸುತ್ತಾರೆ. ಒಂದುಸಲ 'ನೇಶನಲ್ ಹೆರಾಲ್ಡ್" ಪತ್ರಿಕೆಯಲ್ಲಿ ಅವರ ಕೈಬರಹದ ಪ್ರತಿ ಅಚ್ಚಾಗಿತ್ತು. ಅವರು ಇಷ್ಟರ (ಮಿತ್ರರ) ಹೆಸರುಗಳನ್ನು ಅದರಲ್ಲಿ ಓರೆಕೋರೆಯಾಗಿ ಬರೆದಿದ್ದರು ಪಶು, ಪಕ್ಷಿ, ಮಾನವರ ಆಕೃತಿ ಅದರಲ್ಲಿ ಚಿತ್ರಿತವಾಗಿತ್ತು.

ವಿಶ್ವಕವಿ ರವೀಂದ್ರರಲ್ಲೂ ಈ ರೀತಿ ಪ್ರವೃತ್ತಿಯಿತ್ತು. ಲೇಖನಿಯಿಂದ ಅವರು ಗೀಚುತ್ತಿದ್ದರು. ಬಣ್ಣ ಬಣ್ಣದ ಪೆನ್ಸಿಲಿನಿಂದ ವರ್ಣ—ವಿವರ್ಣ ಆಕೃತಿಗಳನ್ನು ಕೂಡಾ ಅವರು ಬಿಡಿಸುತ್ತಿದ್ದರು. ಅವರ ಶಿಷ್ಯರು ಅವರ ಈ ವರ್ಣ—ವಿವರ್ಣದ ಚಿತ್ರಗಳನ್ನು ಒಂದುಬಾರಿ ಪ್ರದರ್ಶನಕ್ಕಿಟ್ಟಿದ್ದರು. ಪ್ರಪಂಚದ ವಿಖ್ಯಾತ ಕಲಾಕಾರರು ಅವನ್ನು ಮುಕ್ತಕಂಠದಿಂದ ಪ್ರಶಂಸಿಸಿರುವರು. ಆದರ ಅನಂತರವೆ ಅವರು ವಿಖ್ಯಾತ ಚಿತ್ರಕಾರರಾದರು.

ಆಯಿನ್‌ಸ್ಟೀನರ ಉದಾಹರಣೆಯು ಬಹು ಸ್ವಾರಸ್ಯವಾಗಿದೆ. ಒಬ್ಬ ಪ್ರಸಿದ್ಧ ಅಮೇರಿಕನ್ ಪ್ರಕಾಶಕನು ಅವರ ಮನೆಗೆ ನಿತ್ಯವೂ ಹೋಗುತ್ತಿದ್ದನು. ಅವನು 'ಒಂದು ಪುಸ್ತಕ ಬರೆದು ತನಗೆ ಕೊಡಬೇಕೆಂ'ದು ಅವರನ್ನು ಒತ್ತಾಯಿಸುತ್ತಿದ್ದನು. ಅವನು ಆಯಿನ್‌ಸ್ಟೀನ್‌ರ ಪುಸ್ತಕವನ್ನು ಅಚ್ಚುಹಾಕಿಸಿದರೆ ತನ್ನ ಗೌರವ ಹೆಚ್ಚುವುದೆಂದು ತಿಳಿದಿದ್ದನು. ಕೊನೆಗೊಂದು ದಿನ ಅವನು ಅವರದೊಂದು ಪುಸ್ತಕವನ್ನು ಪ್ರಕಾಶಿಸಿದನು. ಎಲ್ಲಾ ಕಡೆಯಿಂದಲೂ ಪ್ರತಿಗಳಿಗಾಗಿ ಪತ್ರಗಳು ಬಂದು

(ಆನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

> ನಾವು ಪಡೆದ ವಿಜಯದ ಪರಿಣಾಮವಾಗಿ, ನಮ್ಮಲ್ಲಿ ಅಹಂಕಾರವು ಉತ್ಪನ್ನವಾದರೆ, ಅದು ವಿಜಯವಲ್ಲ; ಅಪಜಯವಾಗಿದೆ. ಆದರೆ, ನಾವು ಪರಾಜಯವನ್ನುಂಡರೂ ನಮ್ಮನ್ನು ನಿರಾಶರಾಗಿಸದಿದ್ದರೆ ಅದೇ ನಮ್ಮ ಮಹಾಜಯವಾಗಬಲ್ಲುದು.

NAVAYUGA
Founder:—
A. B SHETTY,
Former Minister for Public Health
Govt. of Madras & Govt. of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೫-೩-'೫೯	೨೫

ಆರ್ಥಿಕ ಸ್ಥಿತಿ ಸುಧಾರಣೆ

ಭಾರತೀಯ ಅರ್ಥಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ತಾವೀಗ ಗದ್ದುಗೆಯನ್ನೇರಿದನಂತರ ಪ್ರಪ್ರಥಮ ಮುಂಗಡಪತ್ರವನ್ನು ಲೋಕಸಭೆಯಲ್ಲಿ ಮಂಡಿಸಿದ್ದು, ಸದಸ್ಯರೂ ಪ್ರೇಕ್ಷಕರೂ ಹರ್ಷೋದ್ಗಾರಗಳಿಂದ ಅದನ್ನು ಸ್ವಾಗತಿಸಿದರೆಂದು ವರದಿಗಳು ಬಂದಿವೆ. ಕಳೆದ ನಾಲ್ಕಾರು ವರ್ಷಗಳಿಂದ ಅಧಿಕಾಧಿಕ ಕೊರತೆಯ ಮುಂಗಡಪತ್ರವನ್ನೇ ಕಂಡಿದ್ದವರು ಇದೀಗ ಅಲ್ಪ ಕೊರತೆಯದೊಂದನ್ನು ನೋಡುವಾಗ, ಹರ್ಷಿತರಾಗದುಳಿಯುವುದು ಸಾಧ್ಯವಿಲ್ಲ. ೧೯೫೬-೧೯೫೭ರಿಂದ ವಿಶೇಷವಾಗಿ ಹೊಸಹೊಸ ಕರಭಾರಗಳನ್ನು ಹೊತ್ತು ದಣಿದ ಜನರು ಈ ಮುಂಗಡಪತ್ರದಲ್ಲಿ ಅಂತಹ ಭಾರಿ ಪ್ರಮಾಣದ ಕರಭಾರವಿರದಿರುವುದನ್ನು ಕಂಡೇ ಈ ರೀತಿ ಅದನ್ನು ಸ್ವಾಗತಿಸಲು ಕಾರಣವೆಂದು ಹೇಳಬಹುದು.

೧೯೫೯—೬೦ರ ವರ್ಷದಲ್ಲಿ ಸುಮಾರು ರೂ [illegible] ಲಕ್ಷ ಆದಾಯ ಬರುವುದೆಂದೂ, ಸುಮಾರು [illegible] ಲಕ್ಷ ರೂಪಾಯಿಗಳು ವೆಚ್ಚವಾಗುವುದೆಂದೂ ಇದರಿಂದಾಗಿ ೮೨ ಕೋಟಿ ರೂಪಾಯಿಗಳಷ್ಟು ಕೊರತೆಯಾಗುವುದೆಂದೂ ಅರ್ಥಮಂತ್ರಿಗಳು ಮುಂಗಡ ಪತ್ರದಲ್ಲಿ ನಮೂದಿಸಿದ್ದಾರೆ. ಅಭಿವೃದ್ಧಿ ಪಥದಲ್ಲಿ ದಿಟ್ಟತನದ ಅಡಿಗಳನ್ನಿಡುತ್ತ ಭಾರತವು ಸಾಗುತ್ತಿರುವ ಈ ಕಾಲದಲ್ಲಿ ಇಂತಹ ಕೊರತೆಯು ಎದ್ದು ತೋರುವುದು ಆಶ್ಚರ್ಯವೇನಲ್ಲ. ಆದರೂ ೧೯೫೭ರಂತೆ ಈಗ ತೋರಿಬಂದ ಕೊರತೆಯೆಲ್ಲವನ್ನೂ ತುಂಬಿಸಿಕೊಳ್ಳುವ ಸಲುವಾಗಿ ವಿಶೇಷ ತರದ ಕರಗಳನ್ನು ಹೇರದಿರುವುದೇ ಒಂದು ಸಮಾಧಾನದ ಸಂಗತಿ. ಇದಕ್ಕೆ ಕಾರಣವೂ ಇಲ್ಲದೆ ಇಲ್ಲ. ಮಾನ್ಯ ದೇಸಾಯಿಯವರು ಕೆಲವೊಂದು ಕರಗಳನ್ನು ಏರಿಸಿದ್ದು ಇದರಿಂದ ಸುಮಾರು ೨,೩೩೫ ಲಕ್ಷ ರೂಪಾಯಿಗಳ ನಿಕ್ಕಿ ಆದಾಯವು ಒದಗಲಿದೆ. ಆಗ, ಒಟ್ಟು ಕೊರತೆಯು ಕೇವಲ ರೂ. ೫೬೩೨ ಲಕ್ಷಕ್ಕೆ ಇಳಿಯುವುದು. ೧೯೫೮-೫೯ರ ಪುನರ್ವಿಮರ್ಶಿತ ಅಂದಾಜಿನಂತೆ ಆ ವರ್ಷದ ಕೊರತೆಯು ರೂ. ೫,೯೯೫ ಲಕ್ಷವಿರುವಾಗ, ಈ ಮುಂಗಡ ಪತ್ರವು ಆಶಾದಾಯಕವಾಗಿದೆ ಎನ್ನಬಹುದು. ದೇಶವು ಆರ್ಥಿಕ ಮುಗ್ಗಟ್ಟಿನಿಂದ ವ್ಯಥಿತವಾಗಿದ್ದರೂ ತನ್ನ ಸಂಕಷ್ಟಮಯ ಪರಿಸ್ಥಿತಿಯಿಂದ ಈಗೀಗ ಸುಧಾರಿಸತೊಡಗಿದೆ ಎನ್ನುವುದಕ್ಕೆ ಇದು ಸ್ವಲ್ಪಮಟ್ಟಿನ ಸಮರ್ಥನೆಯನ್ನೀಯುವುದು. ಶ್ರೀ ದೇಸಾಯಿಯವರೇ ಅನ್ನುವಂತೆ, ನಾವು ಕಂಟಕಾಕೀರ್ಣ ಪರಿಸ್ಥಿತಿಯನ್ನು ದಾಟಿದ್ದೇವೆ ಎನ್ನಬಹುದು. ನಮ್ಮ ಪ್ರಥಮ ಮತ್ತು ದ್ವಿತೀಯ ಯೋಜನೆಗಳಲ್ಲಿ ಕೈಗೊಂಡಿರುವ ಕೆಲವಾರು ಯೋಜನೆಗಳು ಈಗಾಗಲೇ ಫಲವೀಯತೊಡಗಿದ್ದು, ಇನ್ನೆರಡು ಮೂರು ವರ್ಷಗಳಲ್ಲಿ ಸಂಪೂರ್ಣ ಉತ್ಪಾದನೆಯನ್ನು ಹೆಚ್ಚಿಸಬಹುದಾದುದರಿಂದ ರಾಷ್ಟ್ರದ ಸಂಪತ್ತೂ ಏರುವುದು. ಒಂದು ರಾಷ್ಟ್ರದ ಸಂಪತ್ತನ್ನೇ ಹೊಂದಿಕೊಂಡು ಆದೇಶವಾಸಿಗಳ ಕರಕೊಡುವ ಸಾಮರ್ಥ್ಯವಿರುವ ಪ್ರಯುಕ್ತ ಆಗ ಹೆಚ್ಚಿನ ಕರಾಕರಣೆ ಮಾಡಿದರೂ, ಜನತೆಯು ಅದನ್ನು ತೆರುವುದಕ್ಕೂ ಶಕ್ತವಾಗುವುದು. ಆದುದರಿಂದ ಭಾರತದ ಅರ್ಥ ವ್ಯವಸ್ಥೆಯ ಅಸ್ಥಿರತೆಯು ದೂರವಾಯಿತೆಂಬುದರ ಮುನ್ಸೂಚನೆಯೇ ಸದ್ಯದ ಮುಂಗಡ ಪತ್ರವೆನ್ನಬಹುದು.

ಆದರೆ, ಹೊಸದಾಗಿ ಏರಿಸಿದ ಕರಗಳಲ್ಲಿ ಕೆಲವು ಜನಸಾಮಾನ್ಯರ ಮೇಲೆ ತಮ್ಮ ಪ್ರಭಾವವನ್ನು ಬೀರುವುದು ನಿಜ, ಆದುದರಿಂದ, ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಜನತೆ ಅಧಿಕವೆಚ್ಚ ಮಾಡಬೇಕಾದ ಪ್ರಮೇಯ ಬರುತ್ತದೆ. ಮೋಟಾರು ಟಯರು, ಖಂಡಸಾರಿ ಸಕ್ಕರೆ, ಮತ್ತು ವನಸ್ಪತಿ ವಸ್ತುಗಳ ಮೇಲೆ ಇದ್ದ ಕರವನ್ನು ಏರಿಸಿರುವುದರಿಂದ, ಅವುಗಳ ಕ್ರಯವು ಏರಿ, ಈ ಏರಿಕೆಯನ್ನು ಜನತೆ ಸಹಿಸಬೇಕಾಗುತ್ತದೆ. ಸುಮಾರು ಎರಡುನೂರು ಕೋಟಿ ರೂಪಾಯಿಗಳಷ್ಟು ಕೊರತೆ ಧನ ವಿನಿಯೋಗವಾಗಲಿದ್ದು ಮುನ್ನೂರು ಕೋಟಿ ರೂಪಾಯಿಗಳಷ್ಟು ವಿದೇಶ ಸಹಾಯ ಬರುವ ನಿರೀಕ್ಷೆಯಿದೆ. ಸಣ್ಣ ಉಳಿತಾಯ ಯೋಜನೆಯ ಮೂಲಕ ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗುವುದು. ವೆಚ್ಚದ ಮೇಲೆ ತೆರುವ ಕರದ ಬಗ್ಗೆ ಇದ್ದ ಕೆಲವು ಸವಲತ್ತುಗಳನ್ನು ಕಿತ್ತು ಹಾಕಿ, ಕಂಪೆನಿಗಳ ಸಂಪತ್ತಿಕರ ಮತ್ತು ಅಧಿಕ ಲಾಭಾಂಶ ಕರಗಳನ್ನೂ ತೆಗೆದು ಹಾಕಲಾಗಿದೆ. ಚಹಾ ನಿರ್ಯಾತದ ಬಗ್ಗೆ ಇದ್ದ ನಿಯಮಗಳನ್ನು ಸಡಿಲು ಬಿಡಲಾಗಿದೆ. ಕೃತಕರೇಶ್ಮೆ, ರೇಯಾನ್ ನೂಲುಗಳ ಮೇಲೆ ಕರ ಹೆಚ್ಚುವುದು.

ಈ ವರ್ಷ, ೮೪೩ ಕೋಟಿ ರೂಪಾಯಿಗಳನ್ನು (೧೫೦ ಕೋಟಿ ಆದಾಯದ ಬಾಬಿಗೂ, ೬೯೩ ಕೋಟಿ ಬಂಡವಾಳ ಬಾಬಿಗೂ) ಯೋಜನೆಗಾಗಿ ತೆಗೆದಿರಿಸಿದ್ದು, ಇದಕ್ಕೆ ರೇಲ್ವೆ ಶಾಖೆಯು ೩೯ ಕೋಟಿ ಮತ್ತು ರಾಜ್ಯ ಸರಕಾರಗಳು ೨೩೯ ಕೋಟಿ ರೂಪಾಯಿಗಳನ್ನು ಸೇರಿಸಲಿರುವುವು. ಆಗ ಯೋಜನೆಯನ್ನು ಪೂರ್ತಿಗೊಳಿಸಲು ೧೯೫೯—೬೦ರಲ್ಲಿ ೧೧೨೧ ಕೋಟಿ ರೂಪಾಯಿಗಳು ದೊರೆಯುವಂತಾಗುವುವು.

ಮುಂಗಡ ಪತ್ರದ ಒಂದು ವೈಶಿಷ್ಟ್ಯವೆಂದರೆ, ರಕ್ಷಣಾ ವೆಚ್ಚದಲ್ಲಿ ಮಾಡಿದ ಇಳಿತ. ಹಿಂದಿನ ವರ್ಷಕ್ಕಿಂತ ಈ ಬಾಬಿನಲ್ಲಿ ಸುಮಾರು ೨೫ ಕೋಟಿ ರೂಪಾಯಿ ಕಡಿಮೆಯಾಯಿತೆಂದರೆ, ನಮ್ಮ ರಕ್ಷಣಾ ಬಲವು ಶಕ್ತಿಗುಂದುತ್ತಿರುವುದರ ದ್ಯೋತಕವಲ್ಲವೆಂದೂ ನಮಗೆ ಬೇಕಾದ ಆಯುಧಾದಿಗಳನ್ನು ನಮ್ಮಲ್ಲಿಯೇ ಈಗ ಸ್ವಲ್ಪ ಮಟ್ಟಿಗೆ ತಯಾರಿಸುತ್ತಿರುವುದರಿಂದ, ಅವಕ್ಕಾಗಿ ವೆಚ್ಚಮಾಡಬೇಕಾದ ಪ್ರಮೇಯವಿಲ್ಲವೆಂದೂ ಹೇಳಬಹುದು. ಹಾಗಿರುವಾಗ, ಇದೊಂದು ನಮ್ಮ ಪ್ರಗತಿಯ ಪ್ರತೀಕವೇ ಆಗಿದೆ ಆದರೆ, ಜನಸಾಮಾನ್ಯರ ಜೀವನ ವೆಚ್ಚದಲ್ಲಿ ತುಸು ಏರಿಕೆಯಾಗುವುದಂತೂ ಈ ವರ್ಷ ಖಂಡಿತ. ಆದುದರಿಂದ, ಈ ದಿಸೆಯಲ್ಲಿ ಸಾಮಾನ್ಯ ಜನತೆಗೆ ಯಾವ ಭಂಗವೂ ಉಂಟಾಗದಂತೆ, ಜೀವನೋಪಯೋಗಿ ಪದಾರ್ಥಗಳ ಬೆಲೆಯೇರದಂತೆ ಆವಶ್ಯಕ ಮುಂಜಾಗ್ರತೆಗಳನ್ನು ವಹಿಸುವುದು ತೀರ ಅವಶ್ಯ. ಅಂತೂ ಈ ವರ್ಷದ ಮುಂಗಡ ಪತ್ರವು ಭಾರತದ ಪ್ರಗತಿಗಳು ಫಲಪ್ರದವಾಗುತ್ತಿರುವುದರ ಮುನ್ಸೂಚನೆಯೆಂದೂ, ಇದೇ ರೀತಿಯಲ್ಲಿ ಆಹಾರ ಕ್ಷೇತ್ರದಲ್ಲಿ ಸಫಲತೆ ಪ್ರಾಪ್ತಿಯಾಗುವಂತೆ ನೋಡಿಕೊಳ್ಳುವುದು ಅವಶ್ಯವೆಂದೂ ಹೇಳಬಹುದು.

ಕಾರ್ಯಕ್ಷಮತೆ ಹೆಚ್ಚಲಿ

ಮೈಸೂರು ವಿಧಾನ ಸಭೆ ಹಾಗೂ ವಿಧಾನ ಮಂಡಳಿಗಳ ಮುಂಗಡ ಪತ್ರ ಅಧಿವೇಶನವನ್ನು ಪ್ರಾರಂಭಿಸುತ್ತ ರಾಜ್ಯಪಾಲರು ಮಾಡಿದ ಭಾಷಣವು ಸರಕಾರದ ಧ್ಯೇಯ ಧೋರಣೆಗಳಲ್ಲಿ ನಿರೂಪಿಸುತ್ತದೆ. ಶರಾವತಿ ಯೋಜನೆಯು ದ್ವಿತೀಯ ಯೋಜನೆಯ ತಿರುಳಲ್ಲಿ ಸೇರಿಸಲ್ಪಡದೆ ಹೋದರೂ ಅದನ್ನು ಕೈಗೊಳ್ಳುವ ಪ್ರಯಾಸವು ನಡೆಯುತ್ತಿದೆ ಎಂಬ ಸಮಾಚಾರ ಸ್ವಾಗತಾರ್ಹವೇ. ಆದರೆ, ಅದು ಶೀಘ್ರದಲ್ಲಿ ಸಂಪೂರ್ಣವಾಗುವಂತೆ ನೋಡಿಕೊಳ್ಳುವುದು ರಾಜ್ಯ ಸರಕಾರದ ಕರ್ತವ್ಯವೆಂದು ಸೂಚಿಸಬಹುದು. ಇನ್ನೆರಡು ವರ್ಷಗಳಲ್ಲಿ ರಾಜ್ಯದಲ್ಲಿ ಒಂದು ಮೈಲು ಸುತ್ತಳತೆಯಲ್ಲಿ ಒಂದು ಶಾಲೆಯನ್ನು ಸ್ಥಾಪಿಸುವ ಉದ್ದೇಶವನ್ನು ಸರಕಾರವು ಇಟ್ಟುಕೊಂಡಿರುವುದು, ಇದಕ್ಕಾಗಿ ಈ ವರ್ಷ ಪುನಃ ಸುಮಾರು ೬೦೦ ಶಾಲೆಗಳನ್ನು ತೆರೆಯಲಿರುವ ಯೋಜನೆಯು ಅನಕ್ಷರತೆಯ ದೂರೀಕರಣದ ಮಹತ್ವದ ಹಂತ. ಹೀಗೆ ಈಗಾಗಲೇ ತೆರೆಯಲ್ಪಟ್ಟ ಮತ್ತು ತೆರೆಯಲಾಗುವ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಯೋಗ್ಯ ರೀತಿಯ ವಿದ್ಯಾಭ್ಯಾಸವು ದೊರೆಯುವ ವ್ಯವಸ್ಥೆ ಅವಶ್ಯ ಒದಗಬೇಕು. ಹೆಸರಿಗೆ ಮಾತ್ರ ಶಾಲೆಗಳನ್ನು ತೆರೆದರೆ, ಅಷ್ಟರಿಂದಲೇ ಸುಶಿಕ್ಷಿತ ಜನಾಂಗ ರೂಪುಗೊಳ್ಳದು. ಈಗಿರುವ, ಇಂತಹ ಕೆಲವು ಶಾಲೆಗಳನ್ನು ಕಂಡು, ಇಂತಹ ಶಾಲೆಗಳ ಸಂಖ್ಯೆ ಏರಿಸುವುದು ಪ್ರಯೋಜನಕರವೇ ಎಂದು ಸಂದೇಹ ಹುಟ್ಟುವುದರಿಂದ, ಹೊಸತಾಗಿ ತೆರೆಯಬಹುದಾದ ಶಾಲೆಗಳ ಮಟ್ಟವನ್ನೂ ಕಾಯ್ದು ಬರುವಂತೆ ಸಾಕಷ್ಟು ಸಿಬ್ಬಂದಿ, ಸಲಕರಣೆ, ಕಟ್ಟಡಗಳನ್ನೂ ಒದಗಿಸುವುದು ಅಗತ್ಯವಿದೆ. ಗಾಂಧಿ ತತ್ವಗಳ ತಳಹದಿಯಲ್ಲಿ ಮುನ್ನಡೆಯುತ್ತಿರುವ ಭಾರತದ ಪ್ರಗತಿ ಪಥದಲ್ಲಿ ಪಾನಪ್ರತಿಬಂಧವೂ ಒಂದಾಗಿದ್ದು, ಈ ವರ್ಷ ಬೀದರ ಜಿಲ್ಲೆ ಹಾಗೂ ಹಾಸನ ಜಿಲ್ಲೆಯ ಒಂದು ಭಾಗಕ್ಕೆ ಈ ಯೋಜನೆಯನ್ನು ಮುಂದುವರಿಸಲಾಗುತ್ತಿದೆ. ಈ ಪಾನ ಪ್ರತಿಬಂಧ ಕಾಯಿದೆಯು ವ್ಯವಹಾರದಲ್ಲಿರುವ ಮದ್ರಾಸು ಮತ್ತು ಬೊಂಬಾಯಿ, ಕರ್ನಾಟಕ ಪ್ರದೇಶಗಳಲ್ಲಿಯೂ ಇನ್ನಿತರೆಡೆಯಲ್ಲಿಯೂ ಸಾಕಷ್ಟು ಫಲಕಾರಿಯಾಗಿಲ್ಲದಿರುವುದರಿಂದ, ಪುನಃ ಇಟ್ಟಿರುವ ಹೆಜ್ಜೆಯು ದಾಷ್ಟ್ರ್ಯತನದ್ದೆಂದು ಕಂಡುಬಂದರೂ ಕಾಂಗ್ರೆಸ್ ಸರಕಾರದ ಖಚಿತ ನೀತಿಯನ್ನು ಪ್ರತಿಬಿಂಬಿಸುತ್ತದೆ. ಈ ಪಾನ ಪ್ರತಿಬಂಧವನ್ನು ಸಾಕಷ್ಟು ಬಿಗಿಗೊಳಿಸಿ, ಕಾಯಿದೆಯನ್ನು ಸಂಪೂರ್ಣ ಯಶಸ್ವಿಯಾಗಿಸುವತ್ತ ಸರಕಾರದ ಗಮನ ಹರಿಯುವುದು ಅವಶ್ಯ. ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿತವಾದ ಇನ್ನಿತರ ವಿಷಯಗಳು ಸಾಮಾನ್ಯ ಸ್ವರೂಪದ್ದಿವೆ. ಅವೆಲ್ಲವೂ ಉಚಿತ ರೀತಿಯಲ್ಲಿ ಕಾರ್ಯಕಾರಿಯಾಗುವಂತೆ ಮಾಡುವುದು ಸರಕಾರದ ಹೊಣೆ. ಸರಕಾರ ದಕ್ಷವಾಗಿದ್ದರೆ, ರಾಜ್ಯದ ಅಭಿವೃದ್ಧಿಯು ಆಗಿಯೇ ಆಗುವುದು. ಆದರೆ, ಆಲಸಿಗಳಂತೆ ಕಾರ್ಯಕ್ಷಮತೆಯನ್ನು ತೋರಿಸದೆ ಯೋಜನೆಗಳನ್ನು ರೂಪಿಸಿದ ಮಾತ್ರಕ್ಕೆ ಅದು ಫಲಕಾರಿಯಾಗಲಾರದು. ಸರಕಾರ ಈ ದೆಸೆಯಲ್ಲಿರುವ ತನ್ನ ಲೋಪದೋಷಗಳನ್ನು ಅವಶ್ಯ ತಿದ್ದಿಕೊಳ್ಳಬೇಕು.

ಸಂಕ್ಷಿಪ್ತ ಸುದ್ದಿಗಳು

ಮಿರ್ಜಾರಿಗೆ ಗೌರವಾರ್ಪಣೆ

ಮೈಸೂರು ವಿಧಾನಸಭಾಧಿವೇಶನದಲ್ಲಿ ಹಳೆಯ ಮೈಸೂರಿನ ದಿವಾನರಾಗಿದ್ದು, ಅದರ ಸರ್ವಾಂಗೀಣ ಪ್ರಗತಿಯ ಕಾರಣ ಪುರುಷರಲ್ಲೊಬ್ಬರಾದ ಇಸ್ಮಾಯಿಲ ಮಿರ್ಜಾರವರ ಅಗಲಿಕೆಗಾಗಿ ಒಂದು ದುಃಖ ಸೂಚಕ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ೧೯೨೬ರಿಂದ ೧೯೪೧ರ ವರೆಗೆ ಅವರು ತನ್ನ ಹುದ್ದೆಯಲ್ಲಿದ್ದು, ಆ ಮೇಲೆ ಜಯಪುರದಲ್ಲಿ ೪ ವರ್ಷ ದಿವಾನರಾಗಿ ಮುಂದೆ ಕೆಲಸಮಯ ಹೈದರಾಬಾದಿನ ಮುಖ್ಯಮಂತ್ರಿಯೂ ಆದರು. ಸರಕಾರವೇ ಉದ್ದಿಮೆಗಳನ್ನು ಸ್ಥಾಪಿಸುವುದಕ್ಕಿಂತ ಖಾಸಗಿ ಜನರಿಗೆ ಸೌಕರ್ಯಗಳನ್ನು ಒದಗಿಸಿಕೊಡುವುದು ಒಳ್ಳೆಯದೆಂದವರು ಬಗೆದು ಈ ದಿಸೆಯಲ್ಲವರು ಕಾರ್ಯ ಪ್ರವೃತ್ತರಾದರು. ಈ ಔದ್ಯಮಿಕ ಕೆಲಸಗಳಂತೆಯೇ ಸಾಮಾಜಿಕವಾಗಿಯೂ ಶ್ರೀ ಮಿರ್ಜಾರು ದುಡಿದು ಉತ್ತಮ ಆಡಳಿತಗಾರರೆಂದು ಕೀರ್ತಿ ಗಳಿಸಿರುವರು. ಈಗ ಬೃಹನ್ಮೈಸೂರು ಇಲ್ಲವೇ ಕರ್ನಾಟಕವಾದರೂ ಅದರ ಅರ್ಧೊಂದು ಭಾಗ ಹಳೆಯ ಮೈಸೂರೇ ಆಗಿರುವುದರಿಂದ, ಈ ಭಾಗದ ಏಳಿಗೆಗಾಗಿ ದುಡಿದ ದಿವಂಗತ ಮಿರ್ಜಾರ ಮೃತ್ಯುವಿನ ಬಗ್ಗೆ ಮೈಸೂರಿಗರು ವ್ಯಥಿಸುವುದು ನ್ಯಾಯೋಚಿತವಿದೆ.

ಇದೇನು ಹೀಗಾಯಿತು?

ಸೊಂಡೂರು ಕ್ಷೇತ್ರದಿಂದ ಮೈಸೂರು ವಿಧಾನ ಸಭೆಗೆ ನಡೆದ ಉಪಚುನಾವಣೆಯಲ್ಲಿ ಸೊಂಡೂರಿನ ರಾಜವಂಶದ ಶ್ರೀ ಎಂ. ವೈ. ಘೋರ್ಪಡೆಯವರು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದು ಆ ಕಾಲದಲ್ಲಿ ಈ ಬಗ್ಗೆ ವಿವಿಧ ರೀತಿಯ ಭಿನ್ನಾಭಿಪ್ರಾಯಗಳು ಪ್ರಕಟವಾಗಿದ್ದುವು, ಪ್ರಾದೇಶಿಕ ಕಾಂಗ್ರೆಸ್ ಸಮಿತಿಯೂ ಇ

ನನ್ನು ಶಿಫಾರಸು ಮಾಡಲಿಲ್ಲ ಆದರೆ, ಕೇಂದ್ರ ಕಾಂಗ್ರೆಸ್ ಪರಿಷತ್ತಿನಿಂದ ಇವರ ಆಯ್ಕೆಯಾದ ಮೇಲೆ, ಜನತೆಯಲ್ಲಿ ತೀವ್ರ ಭಿನ್ನಾಭಿಪ್ರಾಯವೆದ್ದಿತ್ತು. ಇದು ಜನಾಭಿಪ್ರಾಯದ ಕುರುಹೆಂದು ತಿಳಿಯುವುದಾದರೆ, ಶ್ರೀಯುತರು ಸೋತು ಹೋಗಲೇಬೇಕಿತ್ತು. ಆದರೆ, ಹಾಗಾಗಲಿಲ್ಲ. ಜನತೆ ಕಾಂಗ್ರೆಸ್ ಪಕ್ಷದ ಮೇಲೆ ಅಭಿಮಾನವಿಟ್ಟು ವ್ಯಕ್ತಿಯನ್ನು ನಿರ್ಲಕ್ಷಿಸಿ ನಾಲ್ಕರಲ್ಲಿ ಮೂರು ಪಾಲು ಮತಗಳನ್ನಿತ್ತು ಇವರನ್ನು ಆರಿಸಿತೇ, ಅಥವಾ ಶ್ರೀ ಫೋರ್ಬಡೆಯವರು ಏನಾದರೂ 'ದೈವೀ ಪ್ರಭಾವ'ವನ್ನು ಬೀರಿ ತನ್ನ ಬೇಳೆಯನ್ನು ಬೇಯಿಸಿ ಕೊಂಡರೇ ಎಂದೀಗ ಹೇಳುವುದು ಸಾಧ್ಯವಿಲ್ಲ.

ಶಾಂತಿಯನ್ನು ಕೆಡಿಸಬೇಡಿರಿ

ದೇಶದಲ್ಲಿನ ಔದ್ಯಮಿಕ ಅರ್ಥ ವ್ಯವಸ್ಥೆಯ ಕಾಲ್ಪನಿಕ ಪ್ರವೃತ್ತಿಗಳಿಂದ ಸಂರಕ್ಷಿಸಿ ಇನ್ನಿತರ ಕ್ಷೇತ್ರಗಳಲ್ಲಿಯ ನಾಗರಿಕರ ಹಾಗೆ ಸಮಾನ ಹಕ್ಕುಗಳನ್ನು ಪಡೆಯಲು ಹೆಣಗುತ್ತಿರುವ ಬೇಸಾಯಗಾರರ ಸ್ವಾಯತ್ತ ಹಾಗೂ ಸ್ವತಂತ್ರ ಜೀವನದ ಸ್ಥಾನಮಾನಗಳ ಸಂರಕ್ಷಣೆಗಾಗಿ ಇಡೀ ಭಾರತದ ರೈತರು ಮತ್ತು ಸಾಗುವಳಿದಾರರು ಜಾಗೃತರಾಗಬೇಕು" ಎಂದು ಅಖಿಲ ಮೈಸೂರು ಭೂಸ್ವಾಮಿ ಪರಿಷತ್ತು ದೇಶದ ಹಿಡುವಳಿದಾರರನ್ನು ವಿನಂತಿಸುವ ಗೊತ್ತುವಳಿಯೊಂದನ್ನು ಸ್ವೀಕರಿಸಿದೆ. ದೇಶದಲ್ಲಿ ನೂರಕ್ಕೆ ಲಶಿರಷ್ಟು ಇರುವ ಒಕ್ಕಲಿಗರ ಮೇಲೆ ಸರಕಾರದ ಹಿಡಿತವಿರಿಸಿಕೊಳ್ಳುವ ದೃಷ್ಟಿಯಿಂದ ಒಕ್ಕಲಿಗರ ಸ್ವಯಂಜಯುಕ್ತಿಯನ್ನು ನಷ್ಟ ಪಡಿಸುವಂತಹ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿಯ ಭೂಸುಧಾರಣೆಯ ಧೋರಣಾ ನಿರೂಪಕ ಗೊತ್ತುವಳಿಯು ದೇಶದಲ್ಲಿ ಕಮ್ಯುನಿಸ್ಟ್ ಸರಕಾರವನ್ನು ನಿರ್ಮಿಸುವ ಯೋಜನೆಯಾಗಿದೆ. ಕಲ್ಯಾಣರಾಜ್ಯದಲ್ಲಿ ಪರಮಾವಧಿ ಹಿಡುವಳಿಯನ್ನು ನಿರ್ಧರಿಸಲು ಒತ್ತಾಯ ಮಾಡುವುದು ಅಪ್ರಸ್ತುತ. ಸದ್ಯದ ಶಾಂತ ಜೀವನವನ್ನು ಕದಡಿಸದೆ ಅಧಿಕ ಉತ್ಪಾದನೆಗಾಗಿ ಹೆಚ್ಚಿನ ಆರ್ಥಿಕ ಹಾಗೂ ತಾಂತ್ರಿಕ ನೆರವು ನೀಡುವುದು ಆವಶ್ಯವಾಗಿದೆ. ಸದ್ಯದ ತುಂಡು ಭೂಮಿಗಳಿರುವ ಪರಿಸ್ಥಿತಿಯಲ್ಲಿ ಪರಮಾವಧಿ ಹಿಡುವಳಿಯ ಬದಲು ಕನಿಷ್ಠ ಮಿತಿಯನ್ನು ನಿರ್ಧರಿಸಿ ಮಿತವ್ಯಯಕಾರಿಯಾದ ಘಟಕಗಳನ್ನು ನಿರ್ಮಿಸಬೇಕು. ಸರಕಾರದ ಹಸ್ತಕ್ಷೇಪವಿಲ್ಲದೆ ನೆರೆಯ ಭೂಮಿಯನ್ನು ಕೊಂಡುಕೊಳ್ಳಲು ಪ್ರೋತ್ಸಾಹ ಮತ್ತು ಸಹಾಯ ನೀಡಬೇಕು. ಭೂಮಿಗಳನ್ನು ಗ್ರಾಮ ಪಂಚಾಯತಗಳ ಅಧಿಕಾರಕ್ಕೆ ಒಳಪಡಿಸಿ ಸಂಯುಕ್ತ ಸಹಕಾರಿ ಬೇಸಾಯ ಸಂಘಗಳಿಂದ ಸಾಗುವಳಿ ಮಾಡಿಸುವುದು ಅಷ್ಟೊಂದು ಲಾಭದಾಯಕವೆನಿಸುವುದಿಲ್ಲ. ಇದರಿಂದ ರಾಜಕೀಯ ಒತ್ತಾಯದ ಪ್ರಭುತ್ವವು ಹೆಚ್ಚುವುದು. ಸಾಗುವಳಿದಾರರು ತಮ್ಮ ಪರಿಶ್ರಮಕ್ಕೆ ಸಾಕಷ್ಟು ಪ್ರತಿಫಲ ಪಡೆಯುವುದಾಗಿ ಆಶ್ವಾಸನ ಕೊಡಬೇಕು ಬೇಸಾಯಗಾರ ಕರ್ತೃತ್ವ ಶಕ್ತಿ, ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುವ ಸಾಹಸಗಳಿಗೆ ಸಾಕಷ್ಟು ಅವಕಾಶ ಕೊಡಬೇಕು—ಎಂದು ಈ ಗೊತ್ತುವಳಿಯಲ್ಲಿ ನಿರೂಪಿತವಾಗಿದ್ದು, ಅದು ಸ್ವೀಕಾರವಾಗಿದೆ.

ಅಲ್ಲಲ್ಲಿಯ ಸುದ್ದಿ ಸಾರ

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ತಾ. ೧೮ರಂದು ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ವಿ. ಗುರುರಾಜ ಭಟ್ಟರು ಶಾಲೆಯ ಪ್ರಗತಿಪರವಾದ ವರದಿಯನ್ನು ಓದಿ ಹೇಳಿದರು. ಹಳೆಯ ವಿದ್ಯಾರ್ಥಿ ಶ್ರೀ ಎಚ್. ದಯಾನಂದ ಬಲ್ಲಾಳರು ಸ್ವಸ್ತಿಯನ್ನು ಬಯಸಿ ಮಾತಾಡಿದರು. ಅಧ್ಯಕ್ಷರು ಶಾಲೆಯ ಪ್ರಗತಿ ಹಾಗೂ ಮಟ್ಟವನ್ನು ಕೊಂಡಾಡಿ, ಶಾಲೆಯು ಪ್ರವರ್ಧಮಾನವಾಗಲೆಂದು ಹಾರೈಸಿದ ಮೇಲೆ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ 'ಜಲಂಧರ' ಪೌರಾಣಿಕ ನಾಟಕವು ಅಭಿನಯಿಸಲ್ಪಟ್ಟಿತು. ಅಂದು ಪೂರ್ವಾಹ್ನ ಶ್ರೀ ಕೆ. ವಿ. ಸುಬ್ಬರಾವ್ ಇವರು ಧ್ವಜವನ್ನೇರಿಸಿದ್ದರು. ಶಾಲಾ ಮಕ್ಕಳಿಗೆ ಸಿಹಿ ತಿಂಡಿಯನ್ನೂ ಹಂಚಲಾಗಿತ್ತು.

ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. ೨ರಂದು ಜರಗಿತು. ಶ್ರೀ ಪಿ. ಎಸ್. ಕೃಷ್ಣಮೂರ್ತಿರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಪ್ರಮುಖ ಕಾರ್ಯದರ್ಶಿಯಾದ ಶ್ರೀ ಎಸ್. ಗೋಪೀಚಂದರಾವ್ ಅವರು ಅಧ್ಯಕ್ಷರನ್ನೂ ಮಿತ್ರರನ್ನೂ ಸ್ವಾಗತಿಸಿ, ಶಾಲಾ ಕಟ್ಟಡದ ವಿದ್ಯುತ್ತೀಕರಣ, ರಾತ್ರಿ ಶಾಲೆ, ವಾಚನಾಲಯ ಹಾಗೂ ಶಾಶ್ವತ ರಂಗ ಮಂಟಪ ಮತ್ತು ಸಭಾಭವನಗಳ ನಿರ್ಮಾಣ ಕಾರ್ಯಗಳನ್ನು ಕೈಗೊಂಡಿದ್ದು ಸಾಧಿಸಿದ ಪ್ರಗತಿಯನ್ನು ವಿವರಿಸುವ ವರದಿಯನ್ನು ಓದಿಹೇಳಿ ಸಭಾಭವನ ನಿರ್ಮಾಣಕ್ಕೆ ಸಾರ್ವಜನಿಕರ ಸಹಾಯ ಸಹಕಾರಗಳನ್ನು ಯಾಚಿಸಿದರು. ಶ್ರೀ ಪಾ. ಲಾ. ನಾ. ಉಪಾಧ್ಯಾಯರು ಸಭಿಕರ ಪರವಾಗಿ ಆ ದಿನ ಮೇಲೆ, ಅಧ್ಯಕ್ಷರು ಶಾಲೆಯ ಏಳಿಗೆಗಾಗಿ ದುಡಿಯುವ ಸಂಘವನ್ನು ಪ್ರಶಂಸಿಸಿ, ಹಳೆಯ ವಿದ್ಯಾರ್ಥಿಗಳೆಲ್ಲರೂ ಈ ಕಾರ್ಯದಲ್ಲಿ ಸಹಕರಿಸುವಂತೆ ಕೇಳಿ ಕೊಂಡರು. ಕೊನೆಗೆ ,,ಏಚ್ಚಮ ನಾಯಕ" ಎಂಬ ಐತಿಹಾಸಿಕ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು.

ಶಿರ್ವಾ ಹಿಂದೂ ಹೈಸ್ಕೂಲಿನ ವರ್ಧಂತ್ಯುತ್ಸವವು-ಕಳೆದ ತಾ. 22ರಲ್ಲಿ ಡಾ| ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಕರೆಸ್ಪೋಂಡೆಂಟ್ ಶ್ರೀ ಯಸ್. ಅಣ್ಣಯ್ಯ ಹೆಗ್ಡೆಯವರು ಸ್ವಾಗತ ಭಾಷಣಮಾಡಿದ ಮೇಲೆ ಹೆಡ್ಮಾಸ್ತರ್ ಶ್ರೀ ಬಿ. ಜಯರಾಮ ಶೆಟ್ಟರು ವರದಿಯನ್ನೋದಿದರು. ಶ್ರೀ ವಿ. ವೆಂಕಟರಾಜ ಉಪಾಧ್ಯಾಯರು ಸ್ವಸ್ತಿವಾಚನ ಮಾಡಿದರು. ಶ್ರೀ ದತ್ತಾತ್ರೇಯ ಶೆಣೈಗಳು ಉತ್ತರವಿತ್ತರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಶಾಲೆಯ ಅಭಿವೃದ್ಧಿಗಾಗಿ ಜನತೆಯ ಸಹಕಾರ ಕೋರಿ ಭಾಷಣವಿತ್ತರು. ಕೊನೆಗೆ ನಾಟಕಾದಿ ವಿವಿಧ ವಿನೋದಾವಳಿಗಳಾದುವು.

ಮರುದಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಡಾ. ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು.

ಮಂಗಳೂರು ಬಿ. ಎಂ. ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 1ರಲ್ಲಿ ಜಿಲ್ಲಾ ಸೆಶ್ಶನ್ಸ್ ಜಡ್ಜರಾದ ಶ್ರೀ ಎನ್. ಎಸ್. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಡಾ| ಬಿ. ಆರ್. ಹೆಗ್ಡೆಯವರಿಂದ ಸ್ವಾಗತ ಭಾಷಣವೂ ಕಾರ್ಯದರ್ಶಿ ಶ್ರೀ ಬೇಲಗಡ್ಡೆ ಅಪ್ಪಯ್ಯನವರಿಂದ ವರದಿ ವಾಚನವೂ ಆದ ಬಳಿಕ ಅಧ್ಯಕ್ಷರು ವಿದ್ಯಾರ್ಥಿ ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿ ಭಾಷಣವಿತ್ತರು. ಕೊನೆಗೆ ನಾಟಕಾಭಿನಯವಿತ್ತು.

ಉಡುಪಿ ಲಾ ಕಾಲೇಜು ವರ್ಧಂತಿಯು ತಾ. 1ರಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಡಾ. ಟಿ. ಯಂ. ಎ. ಪೈಗಳು ಸ್ವಾಗತ ಭಾಷಣಮಾಡುತ್ತ ಕಾಲೇಜಿನ ಇತಿಹಾಸವನ್ನು ಪ್ರಸ್ತಾಪಿಸಿ ಎರಡೇ ವರ್ಷಗಳಲ್ಲಿ ಅದು ಪಡೆದ ಉನ್ನತ ಮಟ್ಟವನ್ನೂ, ವಿದ್ಯಾರ್ಥಿಗಳ ನೈಪುಣ್ಯವನ್ನೂ ದಕ್ಷಿಣ ಕನ್ನಡಿಗರ ದಕ್ಷತೆಯನ್ನೂ ಪ್ರಸ್ತಾಪಿಸಿದರು. ಪ್ರಿನ್ಸಿಪಾಲ್ ಶ್ರೀ ಬಿ. ಎಲ್. ಎನ್. ರೈಗಳು ಉತ್ತಮ ಪರೀಕ್ಷಾ ಫಲಿತಾಂಶ, ವಿದ್ಯಾರ್ಥಿಗಳ ಚಟುವಟಿಕೆ ರಜಿಸ್ಟ್ರಾರ್ ಡಾ| ಪೈಗಳ ಅಮಿತ ಸಾಹಸಾದಿಗಳನ್ನೊಳಗೊಂಡ ಪ್ರಗತಿಪರ ವರದಿಯನ್ನು ಓದಿದರು. ಅಧ್ಯಕ್ಷರು ಬಹುಮಾನ ವಿತರಣೆಮಾಡಿ ವಕೀಲರ ಸ್ಥಾನಮಾನ, ಅವರು ಪ್ರಾಮಾಣಿಕತನದಿಂದ ದುಡಿಯುವ ಆವಶ್ಯಕತೆ ಮೊದಲಾದುವನ್ನು ಪ್ರಸ್ತಾಪಿಸಿ ಕಾಲೇಜನ್ನು ಸ್ಥಾಪಿಸಿದ ಡಾ. ಪೈಗಳ ದೂರದರ್ಶಿತ್ವ ಹಾಗೂ ಕಾರ್ಯಪಟುತ್ವಗಳನ್ನು ಕೊಂಡಾಡಿದರು. ಶ್ರೀ ಸಿ. ಚಂದ್ರಶೇಖರ ರಾಯರು ಧನ್ಯವಾದಗಳನ್ನರ್ಪಿಸಿದರು. ಪ್ರಿನ್ಸಿಪಾಲ್ ಬಿ. ಎಲ್. ಎನ್. ರೈಗಳು ಸಮಾರಂಭಕ್ಕೆ ನೆರವಾದವರೆಲ್ಲರ ಸಹಕಾರವನ್ನು ಸ್ಮರಿಸಿದರು. ಕೊನೆಗೆ ಸಂಗೀತ ನಾಟಕಾದಿ ವಿವಿಧ ವಿನೋದಾವಳಿಗಳಾದುವು.

ಉಡುಪಿ ನಗರ ಸಭೆಯ ಉಪಾಧ್ಯಕ್ಷರಾಗಿ—ಶ್ರೀ ಪಿ. ರಂಗನಾಥ ಶೆಣೈಯವರು ತಾ. 2ರಲ್ಲಿ ಜರಗಿದ ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯಲ್ಲಿ ಬಹುಮತದಿಂದ ಚುನಾಯಿಸಲ್ಪಟ್ಟಿದ್ದಾರೆ.

ಕರ್ನಾಟಕ ಯುನಿವರ್ಸಿಟಿಯ— ಬೋರ್ಡ್ ಆಫ್ ಸ್ಟಡೀಸ್ ಫೋರ್ ಲೋ ಇದರ ಸದಸ್ಯರಾಗಿ ಸ್ಥಳೀಯ ಲಾ ಕಾಲೇಜಿನ ಲೆಕ್ಚರರಾದ ಎಡ್ವಕೇಟ್ ಶ್ರೀ ಎನ್. ವಿ. ಕಾಮತರು ಆರಿಸಲ್ಪಟ್ಟಿದ್ದಾರೆ.

ಪೊಳಲಿ ಜಾತ್ರೆ—ಭರತ ಖಂಡದಲ್ಲಿ ಸುರಥ ಮಹಾರಾಜನಿಂದ ಪ್ರತಿಷ್ಠೆ ಮಾಡಲ್ಪಟ್ಟ ಕರ್ನಾಟಕದ ಪಂಚಶಕ್ತಿ ಪೀಠಗಳಲ್ಲಿ ಆದಿ ಪೀಠವಾದ ಪೊಳಲಿ ಶ್ರೀ. ರಾಜರಾಜೇಶ್ವರೀ ಅಮ್ಮನವರ ಕಾಲಾವಧಿ ಉತ್ಸವದ ಬಗ್ಗೆ ಕಳೆದ ವರ್ಷ ಭಜಕರಾದ ಬಿಲ್ಲವರ ಸಮಾಜದವರು ಸುಮಾರು ರೂಪಾಯಿ ೧೦ ಸಾವಿರಕ್ಕೂ ಮಿಕ್ಕಿ ಖರ್ಚುಮಾಡಿ ಶ್ರೀ ದೇವಿಗೊಪ್ಪಿಸಿದ ಕಂಚಿನ ಕವಚದ ಧ್ವಜಸ್ತಂಭಕ್ಕೆ ಧ್ವಜಾರೋಹಣವು ಇದೇ ಮಾರ್ಚ ತಾ. 14ನೇ ಶನಿವಾರ ಮೀನ ಸಂಕ್ರಮಣ ದಿವಸ ರಾತ್ರೆ ಜರಗುವುದು. ಆ ನಂತರ ಐವೈದು ದಿನಗಳಿಗೆ ದಂಡಮಾಲೋತ್ಸವವಾಗಿ ಇಡೀ ತಿಂಗಳು ಮಹೋತ್ಸವವೂ ಕಡೆಗೆ ೫ ದಿನ ಚೆಂಡಿನ ಉತ್ಸವವೂ ಜರಗುವುದು. ಭಕ್ತಾದಿಗಳು ದೇವಿ ದರುಶನ ಮಾಡಬೇಕಾಗಿ ವಿನಂತಿ ಇದೆ.

ನೂತನ ಕಾರ್ಯಕ್ರಮ–ನಗರ ಸಭೆ ಮತ್ತು ತೆರಿಗೆದಾರರೊಳಗೆ ಉತ್ತಮ ಸೌಹಾರ್ದ ಸಂಪರ್ಕ ಬೆಳೆಸುವುದಕ್ಕೂ, ಆಯಾಯ ವಾರ್ಡಿನ ತೆರಿಗೆದಾರರ ಆವಶ್ಯಕತೆಗಳೇನೆಂಬುದನ್ನು ತಿಳಿದುಕೊಳ್ಳುವುದಕ್ಕೂ ಉಡುಪಿ ನಗರ ಸಭಾಧ್ಯಕ್ಷರು ಮಿತ್ರರೊಂದಿಗೆ ಇದೇ ತಾ. 8ರಿಂದ ಪ್ರತಿ ಆದಿತ್ಯವಾರ ಸಂಜೆ ಬೇರೆ ಬೇರೆ ವಾರ್ಡಿಗೆ ಸಂದರ್ಶಿಸುವ ನೂತನ ಕಾರ್ಯಕ್ರಮವೊಂದನ್ನು ಏರ್ಪಡಿಸಿ ಕೊಂಡಿರುವರು. ಇದೇ ತಾ. 8ನೇ ಸಂಜೆ ೬ ಗಂಟೆಗೆ ಗುಂಡಿಬೈಲು ವಾರ್ಡಿನ ಪಾಡಿಗಾರು ಮಠ, ತಾ. 15ಕ್ಕೆ ಕಡಿಯಾಳಿಯ ಹಾಯರ್ ಎಲಿಮೆಂಟರಿ ಶಾಲೆ, ತಾ 22ಕ್ಕೆ ಕುಂಜಿಬೆಟ್ಟಿನ ಶ್ರೀ ಕೆ. ಕೆ. ಪೈಗಳ ಮನೆ ತಾ 29ಕ್ಕೆ ಟಿಂಬರ್ ವಾರ್ಡಿನ ಸೋದೆಮಠ, (ಉಳಿದ ಸ್ಥಳಗಳನ್ನು ಹಿಂದಿನಿಂದ ಕೊಡಲಾಗುವುದು.) ತೆರಿಗೆದಾರರು ಸಂದರ್ಶನ ಸ್ಥಳಕ್ಕೆ ಬಂದು ಸಹಕರಿಸಬೇಕಾಗಿ ನಗರಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರು ಅಪೇಕ್ಷಿಸುತ್ತಾರೆ.

ಸರಕಾರಿ ಮೂಲ ಶಿಕ್ಷಣ ತರಬೇತಿ ಶಾಲೆಯ ವರ್ಧಂತ್ಯುತ್ಸವವು ತಾ. 2ರಂದು ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಜಿ. ಎಂ. ನಾಗಮೂರ್ತಿಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಮುಖ್ಯೋಪಾಧ್ಯಾಯ ಶ್ರೀ ಟಿ. ಶೀನಪ್ಪ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ವರದಿ ಮತ್ತು ಸ್ವಸ್ತಿವಾಚನಗಳಾದ ಮೇಲೆ ಬಹುಮಾನ ವಿತರಣೆಯಾಗಿ ಅಧ್ಯಕ್ಷರ ವಿಚಾರ ಪೂರ್ಣ ಹಾಗೂ ಸಂದರ್ಭೋಚಿತ ಭಾಷಣವಾಯಿತು. ಬಳಿಕ ವಿವಿಧ ವಿನೋದಾವಳಿಗಳಾದುವು.

ಉಡುಪಿ ನಗರ ಸಭೆಯ ವಿಶಿಷ್ಟ ಸಭೆಗಳೆರಡು ತಾ. 3ರಲ್ಲಿ ನಗರ ಸಭಾಧ್ಯಕ್ಷ ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿ, ಕಂಟ್ರಾಕ್ಟ್ ಕಮಿಟಿಗೆ ಶ್ರೀ ಓ. ಮೈಕಲರವರೂ, ಎಪ್ಪೋಂಟ್‌ಮೆಂಟ್ ಕಮಿಟಿಗೆ ಶ್ರೀ ಪಿ. ಎಸ್. ಕೃಷ್ಣಮೂರ್ತಿ ರಾಯರೂ ಆರಿಸಲ್ಪಟ್ಟರು.

ನಿಟ್ಟೂರು—ಇದೇ ತಾ. 1ರಂದು ಪರೋಡಿ ರಾಮದಾಸ ಪೈಗಳ ನಿಧನದ ಬಗ್ಗೆ ಸಂತಾಪ ಸೂಚಕ ಸಭೆಯೊಂದು ಶ್ರೀ ಎ. ಜೆ. ಆಳ್ವೆಯವರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತರ ಸ್ಮಾರಕ ನಿಧಿಯೊಂದನ್ನು ಸಂಗ್ರಹಿಸಿ ಅವರ ಕುಟುಂಬದವರಿಗೆ ಅರ್ಪಿಸುವ ಬಗ್ಗೆ ಶ್ರೀ ಎನ್. ವಿಠಲ ಶೆಟ್ಟರು ಅಧ್ಯಕ್ಷರಾಗಿರುವ ಒಂದು ಸಮಿತಿಯನ್ನು ನೇಮಿಸಲಾಯಿತು. ಹಣ ಸಹಾಯ ಮಾಡುವವರು ಕಾರ್ಯದರ್ಶಿ ಹಾಗೂ ಖಜಾಂಚಿ ಶ್ರೀ ವೆಂಕಟೇಶ ಪೈ ನಿಟ್ಟೂರು ಇವರಿಗೆ ಕಳುಹಿಸಬಹುದು.

ಮೈಸೂರು ಪ್ರಾಂತೀಯ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನಿನ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಬೆಂಗಳೂರಿನ ವಿಧಾನ ಸೌಧದಲ್ಲಿ ಕಳೆದ ತಾ. 26ರಂದು ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿಯ ಮೆಡಿಕಲ್ ಆಫೀಸರರಾದ ಡಾ| ಯು. ಸುಂದರರಾಯ ಸೇಟರು ಎಸೋಸಿಯೇಶನಿನ ಗೌರವ ಕಾರ್ಯದರ್ಶಿಗಳಾಗಿ ಶ್ರೀ ಡಿ. ಪ್ರಹಲ್ಲಾದ ರಾಯರು ಗೌ| ಸಹಾಯಕ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಮದ್ರಾಸು ದಾಸಪ್ರಸಾದದಲ್ಲಿ ಮಧ್ವನವಮಿ ಮಹೋತ್ಸವವು—ಕಳೆದ ತಾ. 17 ಮತ್ತು 18ರಲ್ಲಿ ಎಂದಿನಂತೆ ಬಹಳ ವಿಜೃಂಭಣೆಯಿಂದ ಜರಗಿತು. ಅನೇಕ ವಿದ್ವಾಂಸರುಗಳಿಂದ ಭಾಷಣಗಳು ನಡೆದುವು. ತಾ. 20ರಲ್ಲಿ ಶ್ರೀ ಕೆ. ಸೀತಾರಾಮರಾಯರು ದಾಸಪ್ರಕಾಶದಲ್ಲಿ ಸುಮಾರು ನಾಲ್ಕು ಸಾವಿರ ಬಡಬಗ್ಗರಿಗೆ ಮೃಷ್ಟಾನ್ನದಾನವಿತ್ತರು.

ಡಾ| ಕೆ. ಎಲ್. ಐತಾಳರಿಗೆ ಸತ್ಕಾರ ಉಡುಪಿ ನಗರ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ಡಾ| ಕೆ. ಎಲ್. ಐತಾಳರಿಗೆ ವಿಕ್ಟೋರಿಯ ಜ್ಯುಬಿಲಿ ಕ್ಲಬ್‌ನವರು ಕಳೆದ ತಿಂಗಳಲ್ಲಿ ಭೋಜನ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಭೋಜನಾನಂತರ ಡಾ| ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀಗಳಾದ ಟಿ. ಎ. ಪೈ, ಕೆ. ಆರ್. ಕೆ. ಭಟ್, ನರಹರಿ ಕಾಮತ್, ಎ. ಜೆ. ಆಳ್ವ, ಪಿ. ಶೀನ ಶೆಟ್ಟಿ, ಡಾ| ಬಿ. ದಿ. ಶೆಟ್ಟಿ, ಡಾ| ಪಿ. ಆರ್. ನಾಯಕ್, ಕೆ. ಪಿ. ಗೋಪಿನಾಥ ರಾವ್, ಕವಿರಾಜ್ ಎಂ. ಜಿ. ಶೆಣೈ, ಮೊದಲಾದವರು ನೂತನ ಅಧ್ಯಕ್ಷರಿಗೆ ಶುಭ ಕೋರಿ ನಗರ ಸಭೆಯಿಂದ ಆಗತಕ್ಕ ಪ್ರಾಮುಖ್ಯ ಕೆಲಸಗಳನ್ನು ವಿವರಿಸಿದರು. ಡಾ| ಐತಾಳರು ತನಗಿತ್ತ ಸತ್ಕಾರಕ್ಕಾಗಿ ಆಭಾರ ಸೂಚಿಸಿ ಮಾತನಾಡಿದ ಮೇಲೆ ಶ್ರೀ ಎಸ್. ಎಲ್. ನಾರಾಯಣ ಭಟ್ಟರು ಕೃತಜ್ಞತೆಯರ್ಪಿಸಿದರು.

GOLDEN JUBILEE— Bunt alias Nadavara Sangha.

The Jubilee will be celebrated shortly. The appeal for funds has met with fairly generous response in many quarters in this district as well as outside. More donations are expected to be received so as to reach the target of Rs. 1 lakh deducting oil-painting and other expenses. Medals and certificates of merit will be awarded on the occasion of the Jubilee for proficiency in Agriculture, Yakshagana, Literary work in Kannada, Public Speaking in Kannada etc. as already announced. It is proposed to have a small exhibition in regard to new developments in Agriculture, Rearing of better poultry breeds, Modern methods af Housekeeping and Sanitation. A variety entertainment will be provided on two evenings and those who can give a good display of their talents may communicate with the Secretary of the Committee.

ವ್ಯಕ್ತಿತ್ವ ಪ್ರದರ್ಶನ

(೫ನೇ ಪುಟದಿಂದ)

ವು. ಎಲ್ಲಾ ದೇಶದ ಎಲ್ಲಾ ಪತ್ರಿಕೆಗಳು ಅವರ ಪುಸ್ತಕವನ್ನು ಹೊಗಳಿ ವಿಮರ್ಶಿಸಿದವು. ಆದರೆ ಅವರ ಮಡದಿ ಮಾತ್ರ ಅದನ್ನು ದೂರಲಾರಂಭಿಸಿದಳು. ನಿಜವಾಗಿಯೂ ಅವರೊಂದು ಪುಸ್ತಕ ಬರೆದಿರಲಿಲ್ಲ ಗೀಚಿದ ಅನೇಕ ಕಾಗದಗಳನ್ನು ಸಂಗ್ರಹಿಸಿ ಪ್ರಕಾಶಕನ ಕೈಗೆ ಅವರಿತ್ತಿದ್ದರು. ಅವುಗಳಲ್ಲಿ ಅವರು ಗಣಿತದ ಸಮಸ್ಯೆಗಳನ್ನು ಬರೆದಿದ್ದರು ಅದನ್ನು ಯಾರೂ ಅರ್ಥಮಾಡಿಕೊಳ್ಳದುದರಿಂದಲೇ ಅದಕ್ಕೆ ಅಂತಹ ವ್ಯಾಪಕ ಸ್ವಾಗತ ದೊರೆಯಿತು. ನಿಜವಾಗಿಯೂ ಇಂತಹ ಗೀಚುವ ಗುಣ ನಮ್ಮ ಜೀವನಾರಂಭದಿಂದಲೇ ಮೊದಲಾಗುತ್ತದೆ. ಎಲ್ಲಾ ಸಮಸ್ಯೆಯ ಯೋಚನೆಯ ಕಾಲದಲ್ಲಿ ಮೊದಲು ಮಾನವನು ತನ್ನ ಕಾಲಿನ ತೋರ್ಬೆರಳಿನಿಂದ ಕೆರೆಯುವುದಿದೆ ಈ ಗೀಚುವಿಕೆಯು ಅಚೇತನ ಅಥವಾ ಅರ್ಧಚೇತನ ರೂಪದಲ್ಲಿ ವ್ಯಕ್ತಿಯ ಮಾನಸಿಕ ಸ್ಥಿತಿ ಮತ್ತು ಅದರ ಪ್ರತಿಕ್ರಿಯೆಯ ಪರಿಣಾಮದಿಂದುಂಟಾಗುತ್ತದೆ.

ನ್ಯೂಯೋರ್ಕಿನೋರ್ವ ಮನೋವಿಶ್ಲೇಷಕನ ಹೇಳಿಕೆ ಹೀಗಿದೆ— "ಯಾರು ತಮ್ಮ ಆಂತರಿಕ ಆಕಾಂಕ್ಷೆಯಿಂದ ಮತ್ತು ತಮ್ಮ ಮನೋವಿಕಾರಗಳ ಆಕಾರದಿಂದ ಗಾಬರಿಯಾಗುತ್ತಾರೊ ಅವರು ಗೀಚುವ ವ್ಯಕ್ತಿಗಳಾಗಿರುತ್ತಾರೆ. ಹೆಚ್ಚಾಗಿ ಗೀಚುವ ವ್ಯಕ್ತಿಗಳು ಮನೋವಿಕಾರಿಗಳಾಗಿರುತ್ತಾರೆ. ಮನೋವಿಕಾರ ವಿಶೇಷಜ್ಞ, ಲೂವಿಸ್ ಗೂಲ್‌ಬರ್ಗನು ಹೀಗೆಂದಿರುವನು— 'ಗೀಚುವ ಮನುಷ್ಯರನ್ನು ವಿವಿಧವಾಗಿ ವಿಂಗಡಿಸಬಹುದು. ಟೆಲಿಫೋನಿನಲ್ಲಿ ಮಾತನಾಡುವಾಗ ತಡೆತಡೆದು ಮಾತನಾಡುವಾಗ ಗೀಚುವವರು ಮೊದಲನೆ ಪಂಗಡದವರು ಅವರು ಇನ್ನೊಬ್ಬರನ್ನು ಕಣಕುವುದರಲ್ಲಿ ಮತ್ತು ಚಿಣಕಿಸುವುದರಲ್ಲಿ ಆನಂದ ಪಡೆಯುತ್ತಾರೆ. ಇನ್ನೊಂದು ಪಂಗಡದವರು ತಮ್ಮ ಮನಸ್ಸು ಚಂಚಲವಾದಾಗ ಗೀಚುತ್ತಾರೆ. ಇಂತವರು ಆ ಸಮಯದಲ್ಲಿ ಯಾರ ಸಂಗವೂ ತಮ್ಮ ಜೀವನದ ರಹಸ್ಯವನ್ನ ಹೇಳಿಬಿಡುತ್ತಾರೆ. ಈ ರೀತಿ ನಾವು ನಮ್ಮ ಗೀಚುವಿಕೆಯನ್ನು ಮಾನಸಿಕ ಪ್ರತೀಕವೆನ್ನಬಹುದು.

'ವೇಯುಡರ್' ಎಂಬೊಬ್ಬನಿಗೆ ಸಂಯುಕ್ತ ರಾಷ್ಟ್ರಸಂಘದ ಕಾರ್ಯಾಲಯದಲ್ಲಿ ಒಂದು ಗೀಚಿದ ಪತ್ರ ಸಿಕ್ಕಿತು. ಅದನ್ನು ಕಂಡು ಆತನು ಈ ರೀತಿಯಾಗಿ ಹೇಳಿದನು—"ಇಲ್ಲಿ ಗೀಚಿದ ವ್ಯಕ್ತಿ ಸಾಮಾನ್ಯನಲ್ಲ. ಆತನೊಬ್ಬ ಅಂತಾರಾಷ್ಟ್ರೀಯ ವ್ಯಕ್ತಿಯಾಗಿದ್ದಾನೆ. ಅವನು ದೊಡ್ಡ ಕಲ್ಪನಾಶೀಲ ಭಾವುಕನಾಗಿದ್ದಾನೆ ಜನರು ಆತನ ಮಾತುಗಳನ್ನ ಅರ್ಥಮಾಡಿಕೊಳ್ಳುವುದಿಲ್ಲವಾದುದರಿಂದ ಆತನ ಒಹ. ಖಿನ್ನನಾಗಿದ್ದಾನೆ."

ಈ ಗೀಚಿದ ಕಾಗದವು ಸಂಯುಕ್ತ ರಾಷ್ಟ್ರ ಸಂಘದ ಒರ್ವ ಪ್ರತಿನಿಧಿಯದಾಗಿತ್ತು.

(ಸಂಗ್ರಹಿತ)

— ಕೆ. ದಾಮೋದರ ಐತಾಳ.

ತಿದ್ದುಪಡಿ — ತಾ. ೬.೨.೧೯೫೫ ಸಂಚಿಕೆಯ ಹತ್ತನೇ ಪುಟದಲ್ಲಿ ಪುಷ್ಪ ಸರಣಿ ಎಂಬ ತಲೆಬರಹದ "ಆಹಾರ ತಯಾರಕರು ಯಾರು ಗೊತ್ತೆ? ಎಂಬ ಲೇಖನವು ಪ್ರಕಟವಾಗಿತ್ತು. ಅದನ್ನು ಬರೆದವರು "ನವಗಿರಿನಂದ"ರು ಪ್ರಮಾದವಶಾತ್ ಲೇಖಕರ ಹೆಸರು ಬಿಟ್ಟು ಹೋಗಿರುವುದಕ್ಕೆ ವಿಷಾದಿಸುತ್ತೇವೆ —ಸಂ, ನ.

ಭೂ ಸುಧಾರಣೆ

ಹೊಸ ಕಾಯದೆಗಳು ಸುಖಕ್ಕೆ ಅಡ್ಡಿಯಾಗದಿರಲಿ

ಬೆಳಗಾವಿ ಭೂ ಮಾಲಿಕರ ಸಮ್ಮೇಳನದಲ್ಲಿ ಶ್ರೀ ಕೆ. ಬಾಲಕೃಷ್ಣರಾಯರ ಕಳಕಳಿಯ ವಿನಂತಿ

ಭೂ ಸುಧಾರಣೆ ಸಂಬಂಧದ ಕಾಯಿದೆ ಮಾಡುವದಕ್ಕೆ ಯಾರೇ ಆಗಲಿ ವಿರುದ್ಧ ಇಲ್ಲ. ಆದರೆ ಯಾವ ರೂಪರೇಷೆಗಳ ಮೇಲೆ ಆ ಕಾಯದೆ ಆಗಬೇಕೆಂಬುದೇ ಪ್ರಶ್ನೆಯಿದೆ. ಜಗತ್ತು ದಿನದಿನಕ್ಕೆ ಬದಲಾವಣೆ ಹೊಂದುತ್ತ ನಡೆದಿದ್ದು ಎಲ್ಲ ಕಡೆಗೆ ಜೀವನದ ಪ್ರತಿಯೊಂದು ಬಗೆಯಲ್ಲಿ ಸುಧಾರಣೆಗಳು ನಡೆದಿವೆ. ಜನರು ಈ ಬದಲಾವಣೆಗಳಲ್ಲಿ ಕೆಲವನ್ನು ಸ್ವಸಂತೋಷದಿಂದ ಸ್ವೀಕರಿಸುವರು. ಯಾವದೇ ಸಮಾಜವು ಪ್ರಗತಿ ಹೊಂದಬೇಕಾದರೆ ಅದಕ್ಕೆ ಉಪಜೀವನದ ಸಾಕಷ್ಟು ಸೌಲಭ್ಯಗಳನ್ನು—ಸಮಾನ ಸೌಲಭ್ಯಗಳನ್ನಲ್ಲ—ಲಭ್ಯ ಮಾಡಿಕೊಡಬೇಕು. ಇದು ಮೂಲಭೂತ ತತ್ವವಾಗಿದೆ. ಅಂದರೆ ಮಾತ್ರ ತನ್ನ ಜೀವನ ನಿರ್ವಹಿಸಿಕೊಳ್ಳಬಲ್ಲನು. ಯಾವದೇ ಬದಲಾವಣೆ ಮಾಡಬೇಕಾದರೆ ಅದು ಮಾನವೀಯ ಸಹಾನುಭೂತಿ ಹಾಗು ನೈಸರ್ಗಿಕ ನ್ಯಾಯದಿಂದ ಯುಕ್ತವಾಗಿರಬೇಕು.

ಭೂಸುಧಾರಣೆ ಕಾಯದೆಯ ಮುಖ್ಯ ಉದ್ದೇಶಗಳೆಂದರೆ ಆಹಾರ ಉತ್ಪತ್ತಿಯನ್ನು ಹೆಚ್ಚಿಸುವದು ಹಾಗು ಸಾಮಾಜಿಕ ನ್ಯಾಯ ಒದಗಿಸುವದು ಎಂದು ಹೇಳಲಾಗುತ್ತದೆ ಈ ಬಗ್ಗೆ ಅನುಸರಿಸಲಾದ ಮುಖ್ಯ ತತ್ವಗಳೆಂದರೆ ಮಧ್ಯಸ್ಥರನ್ನು ತೆಗೆದೊಗೆಯುವದು, ಭೂಹಿಡುವಳಿಯನ್ನು ಪರಿಮಿತಿಗೊಳಿಸುವದು, ಒಕ್ಕಲತನ ಭೂಮಿಗಳ ಹಸ್ತಾಂತರ ಮೇಲೆ ನಿರ್ಬಂಧ ಹಾಕುವದು, ಸಹಕಾರಿ ಫಾರ್ಮುಗಳನ್ನು ರಚಿಸುವದು ಆಗಿರುವವು ಆದರೆ ಇವುಗಳಿಂದ ಉದ್ದೇಶ ಸಾಧಿಸುವುದೇ ಎಂಬುದನ್ನು ವಿಚಾರ ಮಾಡಬೇಕು. ದೊಡ್ಡ ಹಿಡುವಳಿಗಳನ್ನು ಸಣ್ಣ ಹಿಡುವಳಿಗಳಲ್ಲಿ ಮಾರ್ಪಡಿಸಿ ಸಾಧ್ಯವಿದ್ದಷ್ಟು ಜನರನ್ನು ಅವುಗಳ ಒಡೆಯರನ್ನಾಗಿ ಮಾಡಿದರೆ ಆಹಾರ ಉತ್ಪತ್ತಿಯು ಹೆಚ್ಚಾಗುವದೇನು? ಆಹಾರ ಉತ್ಪತ್ತಿಯು ಒಡೆತನದ ಮೇಲೆ ಅವಲಂಬಿಸಿರುವದೇ ಹೇ ? ಅದು ಬೀಳು ಭೂಮಿಯನ್ನು ಫಲವತ್ತಾಗಿ ಮಾಡುವಲ್ಲಿ ಒಡೆಯನಲ್ಲಿರುವ ಸಾಧನ ಸಲಕರಣೆಗಳು, ನೀರಾವರಿ ಮೊದಲಾದವುಗಳ ಮೇಲೆ ಅವಲಂಬಿಸಿಲ್ಲವೇ? ಹಿಡುವಳಿಯು ಸಣ್ಣದಾದಲ್ಲಿ ಉತ್ಪನ್ನವೂ ಕಡಿಮೆ ಬರುವದು. ಆದ್ದರಿಂದ ಒಡೆಯರಿಗೆ ನೀರಿನ ಪಂಪು, ಬುಲಡೋಜರ, ಕೊಳಾಯಿ ಬಾವಿಗಳಲ್ಲಿ ಹಣ ತೊಡಗಿಸಲು ಸಾಧ್ಯವಾಗುವದಿಲ್ಲ. ಹೀಗಾಗಿ ಉತ್ಪತ್ತಿಯು ಕಡಿಮೆಯಾಗುತ್ತ ಹೋಗುವದು. ಆಹಾರ ಉತ್ಪತ್ತಿ ಹೆಚ್ಚಿಸಬೇಕಾಗಿದ್ದರೆ ಹೆಚ್ಚಿನ ನೀರಾವರಿ ಸೌಕರ್ಯ ಒದಗಿಸಬೇಕು. ಬೀಳು ಭೂಮಿಗಳನ್ನು ಸಾಗುವಳಿ ಭೂಮಿಗಳನ್ನಾಗಿ ಪರಿವರ್ತಿಸಬೇಕು. ಹಾಗು ಸಾಗುವಳಿದಾರನಿಗೆ ಇತರ ಸೌಕರ್ಯಗಳನ್ನು ಈಯಬೇಕು.

ಸಾಗುವಳಿದಾರನ ವ್ಯಾಖ್ಯೆ

ಒಬ್ಬನಿಂದ ಭೂಮಿಯನ್ನು ಕಸಿದುಕೊಂಡು ಇನ್ನೊಬ್ಬನಿಗೆ ಕೊಡುವದು ಸಾಮಾಜಿಕ ನ್ಯಾಯವೆನಿಸದು. ಪ್ರತಿಯೊಬ್ಬನಿಗೆ ಆಸ್ತಿಯ ಸ್ವಾಮಿತ್ವದ ಹಾಗು ಆದರ ಸ್ವಾಧೀನತೆಯ ಹಕ್ಕಿದೆ ತನ್ನ ಸ್ವಂತ ಶ್ರಮದಿಂದ ಸಾಗುವಳಿ ಮಾಡುವವನಷ್ಟೇ ಸಾಗುವಳಿದಾರನಲ್ಲ. ಮಹಾತ್ಮಾ ಗಾಂಧಿಯವರ ಶಬ್ದದಲ್ಲಿ ಹೇಳಬೇಕಾದರೆ ಹಣ ಹಾಗು ಬುದ್ಧಿಯನ್ನು ಪೂರೈಸುವವನೂ ಸಾಗುವಳಿದಾರನೆನಿಸುವನು ಆದ್ದರಿಂದ ಪ್ರತಿಯೊಬ್ಬನಿಗೆ ಭೂಮಿಯ ಉಳುವವನಾಗಲು ಹಾಗು ಒಡೆಯನಾಗಲು ಹಕ್ಕಿರುವದು. ಭೂಮಿಯ ಒಡೆತನ ಸಂಬಂಧದಲ್ಲಿ ಈ ರೀತಿ ಭೇದ ಮಾಡುವದು ನೈಸರ್ಗಿಕ ನ್ಯಾಯವಾಗದು ಸ್ಥಾವರ ಆಸ್ತಿಯಲ್ಲಿ ಹಣ ತೊಡಗಿಸುವದು ಪೂರ್ವ ಕಾಲದಿಂದಲೂ ಭದ್ರವಾದುದೆಂದು ತಿಳಿಯಲಾಗುತ್ತ ಬಂದಿದ್ದು ಪೂರ್ವಜರು ಮಿತದಿಂದ ಜೀವನ ಸಾಗಿಸಿ ತಮ್ಮ ಮುಂದಿನವರ ಕಲ್ಯಾಣಕ್ಕಾಗಿ ಮಾಡಿಟ್ಟ ಭೂ ಆಸ್ತಿಯನ್ನು ಹೀಗೆ ಹರಣ ಮಾಡುವದು ಕ್ರೂರವಾಗಿರುವದು. ಭೂ ಒಡೆಯನಿಂದ ಭೂಮಿ ಕಸಿದುಕೊಂಡು ಸಾಗುವಳಿದಾರನಿಗೆ ಕೊಟ್ಟರೂ ಶೇತಕಿ ಮಜದೂರರ ಪ್ರಶ್ನೆ ಉಳಿಯುವದು. ಪ್ರತ್ಯಕ್ಷವಾಗಿ ಶ್ರಮಿಸುವವರೆಂದರೆ ಮಜದೂರರೇ ಆಗಿದ್ದರಿಂದ ಅವರೇ ಒಡೆಯರಾಗಬೇಕು ಆದರೆ ಯೋಜಿತ ಕಾಯದೆಯಲ್ಲಿ ಆ ರೀತಿ ಇರುವದಿಲ್ಲ ಆದ್ದರಿಂದ ಸಾಮಾಜಿಕ ನ್ಯಾಯದ ಕೂಗು ವ್ಯರ್ಥವಿರುವದು.

ಕೇವಲ ಭೂಹಿಡುವಳಿ ಮೇಲೆ ಮಿತಿ ಹಾಕುವದು ಸಮಂಜಸವಾಗದು ಯಾಕೆಂದರೆ ಭೂಒಡೆಯನಿಗೂ ಉತ್ಕರ್ಷೆಯ ಇಚ್ಛೆ ಇರುವದು. ಪ್ರಗತಿಯೇ ಜೀವನದ ಲಕ್ಷಣವಾಗಿದೆ ಪ್ರಗತಿಯಿಲ್ಲದವನು ಸತ್ತಂತೆಯೇ ಸರಿ. ಮೇಲಾಗಿ ನಾಗರಿಕ ಸಂಪತ್ತಿನ ಮೇಲೆ ಮಿತಿ ಹಾಕಲಾಗಿಲ್ಲ. ಉದ್ದಿಮೆದಾರರು. ವಕೀಲರು, ಡಾಕ್ಟರರು, ಸಂಬಳಿಗರು ಮೊದಲಾದವರನ್ನು ಹಾಗೆಯೆ ಬಿಡಲಾಗಿದೆ ಅವರು ಬೇಕಾದಷ್ಟು ಗಳಿಸಬಹುದು ಆದರೆ ಬಡ ಭೂಒಡೆಯನ ಮೇಲೆ ಮಾತ್ರ ಗಧೆ ತರಲಾಗಿದೆ ಭೂಮಿಗಳ ಹಸ್ತಾಂತರಕ್ಕೆ ನಿರ್ಬಂಧ ಹಾಕಿದ್ದುದೂ ನಿಸರ್ಗಕ್ಕೆ ವಿರುದ್ಧವಾಗಿರುವದು. ಯಾಕೆಂದರೆ ಯಾವದೇ ಸಂಪತ್ತು ಯಾವಾಗಲೂ ಒಂದೇ ಕಡೆ ಹಾಗು ಒಬ್ಬನಲ್ಲಿಯೇ ಉಳಿಯುವದಿಲ್ಲ ಲಕ್ಷ್ಮಿಯು ಚಂಚಲಳೆಂದು ಪ್ರಸಿದ್ಧವಿದೆ. ಹೀಗೆ ನಿಸರ್ಗದ ವಿರುರುದ್ಧ ಹೋಗುವುದು ಘಾತಕವಾಗಿವುದು

ಸಹಕಾರಿ ಒಕ್ಕಲತನ ಮಟ್ಟಿಗೆ ಹೇಳುವದಾದರೆ ಈ ವರೆಗೆ ಸಹಕಾರ ಫಾರ್ಮುಗಳು ಎಲ್ಲಿಯೂ ಯಶಸ್ವಿಯಾಗಿಲ್ಲ. ನಮ್ಮ ಪ್ರಧಾನ ಮಂತ್ರಿಗಳು ಸಹ ಸಹಕಾರಿ ಫಾರ್ಮುಗಳನ್ನು ಒತ್ತಾಯದಿಂದ ಹೇರಲಾಗುವದಿಲ್ಲವಾಗಿ ಹೇಳಿದ್ದಾರೆ ಆದ್ದರಿಂದ ಈ ವಿಷಯವಾಗಿ ಹೆಚ್ಚು ಹೇಳದೆ ಅವು ಅಯಶಸ್ವಿಯಾಗಿದ್ದಾಗಿ ಅನುಭವದಿಂದ ಕಂಡುಬಂದಿರುವದಾಗಿ ಹೇಳಿದರೆ ಸಾಕು. ಅವುಗಳಿಂದ ಉತ್ಪತ್ತಿ ಹೆಚ್ಚಾದುದಿಲ್ಲ. ಹೀಗಾಗಿ ಸಂದೇಹವಿದ್ದುದನ್ನು ಬಿಟ್ಟು ಬಿಡುವದೇ ಜಾಣತನದ ಮಾರ್ಗವಾಗಿದೆ.

ಕೆಲವು ಸೂಚನೆಗಳು

ಇನ್ನು ಈ ಸಂಬಂಧದಲ್ಲಿ ಕೆಲವು ಸೂಚನೆಗಳನ್ನು ಮಾಡಬಯಸುವೆನು. ನಾವು ದೇವಭೀರು ಸ್ವಭಾವದವರು. ದೇವಸ್ಥಾನಗಳು ಮಠಗಳು ಹಾಗೂ ಇತರ ವಿವಿಧ ರೀತಿಯ ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳು ನಮ್ಮ ಧಾರ್ಮಿಕ ಭಾವನೆಗಳನ್ನು ಪೋಷಿಸಿಕೊಂಡು ಬಂದಿವೆ ಸರಕಾರದವರೂ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಹೇರಳ ಹಣ ವೆಚ್ಚಮಾಡುತ್ತಿರುವರು. ಹೀಗಿರುವಾಗ ಮಠ ಹಾಗೂ ದೇವಸ್ಥಾನಗಳ ಆಸ್ತಿಗಳನ್ನು ಸರಕಾರವು ತನ್ನ ಕಡೆಗೆ ತೆಗೆದುಕೊಂಡು ಸಂಬಂಧಿಸಿದವರಿಗೆ ವಾರ್ಷಿಕ ಬಡ್ಡಿ ಕೊಡುತ್ತಾ ಹೋಗುವದು, ವಿವೇಕಕ್ಕೆ ಸರಿ ಹೋಗುವದೇ ವಿಚಾರಿಸಬೇಕು ಇದಲ್ಲದೆ ಆಸ್ತಿಯನ್ನು ತಗದುಕೊಂಡಾಗ ಅದಕ್ಕೆ ಮಾರ್ಕೆಟ ಬೆಲೆಯಂತೆ ಯೋಗ್ಯ ಪರಿಹಾರ ಕೊಡುವದೇ ನ್ಯಾಯವಲ್ಲವೆ? ಸರಕಾರಿ ಬಾಂಡುಗಳ ರೂಪದಲ್ಲಿ ಪರಿಹಾರ ಕೊಡದೆ ರೋಖ ಕೊಡಬೇಕೆಂದು ಕೇಳಿದರೆ ಅದರಲ್ಲಿ ತಪ್ಪೇನು? ಬಾಂಡೆಂದರೆ ಕೊಡುವವನಿಗೂ ಸ್ವೀಕರಿಸುವವನಿಗೂ ಉರುಳಿನಂತಿರುವದು. ಯಾಕೆಂದರೆ ಕೊಡುವವನು ಅದನ್ನು ಕೊಡುವದು ಅಸಾಧ್ಯವೆಂದು ಕಂಡುಬಂದರೆ ತಪ್ಪಿಸುವ ಹಾಗೂ ವಿಲಂಬಿಸುವ ಮಾರ್ಗ ಹುಡುಕುವನು. ಬಾಂಡಿನಂತೆ ಒಡೆಯನಿಗೆ ಹಣ ಸಿಗದೆ ಹೋದರೆ, ಸಂಪೂರ್ಣವಾಗಿ ಅವನು ನಾಶ ಹೊಂದುವನು. ಆದ್ದರಿಂದ ಬಾಂಡುಗಳ ರೂಪದಲ್ಲಿ ಪರಿಹಾರವೀಯದೆ ರೋಖ ಕೊಡಬೇಕು.

ಸ್ವಂತ ಸಾಗುವಳಿಗಾಗಿ ಭೂಮಿ ಪಡೆಯುವಲ್ಲಿ ಮೈಸೂರು ಭೂಸುಧಾರಣೆ ವಿಧೇಯಕದಲ್ಲಿ ಅನೇಕ ಅಡೆತಡೆಗಳು ಇರುವವು ಅವುಗಳನ್ನು ತೆಗೆದುಹಾಕಬೇಕು ವಕೀಲರು, ಡಾಕ್ಟರರು ಸರಕಾರಿ ನೌಕರರು, ಶಿಕ್ಷಕರು ಹಾಗು ತತ್ಸಮ ಉದ್ಯೋಗಿಗಳನ್ನು ಆವಶ್ಯಕ ನೌಕರದಾರರೆಂದು ಪರಿಗಣಿಸಿ ಅವರಿಗೂ ಭೂಒಡೆತನದ ಅವಕಾಶವೀಯಬೇಕು ಭೂಮಿಯ ಪ್ರಶ್ನೆಯು ಭೂಒಡೆಯನಿಗೆ ಜೀವನ ಮರಣದ ಪ್ರಶ್ನೆಯಾಗಿದ್ದರಿಂದ ಆ ಸಂಬಂಧದ ತಂಟೆಗಳನ್ನು ಟ್ರಿಬ್ಯೂನಲಗಳ ಸಮರಿ ವಿಚಾರಣೆಗೆ ಒಪ್ಪಿಸದೆ ಸಿವ್ಹಿಲ ಕೋರ್ಟುಗಳಿಗೆ ಒಪ್ಪಿಸಬೇಕು.

ಬ್ರಿಟಿಷ ಆಳಿಕೆಯಲ್ಲಿ ಸಾಕಷ್ಟು ಸಂಕಷ್ಟಗಳನ್ನು ಅನುಭವಿಸಿದ್ದಾಯಿತು. ಆ ಕಾಲವು ಇನ್ನಾದರೂ ಹಿಂದಾಗಲಿ. ನಮ್ಮ ಹೊಸ ಕಾಯದೆಗಳು ಸುಖಕ್ಕೆ ಅಡ್ಡಿಯಾಗದಿರಲಿ. ಹಾಗ ದೇಶದಲ್ಲಿ ಗೊಂದಲದ ಪರಿಸ್ಥಿತಿ ಉಂಟುಮಾಡದಿರಲಿ ಸಾಗುವಳಿದಾರನಿಗೆ ಸಾಗುವಳಿ ಭದ್ರತೆ ಕೊಡುವದನ್ನು ಹಾಗು ಯೋಗ್ಯ ಲಾವಣಿ ನಿರ್ಧರಿಸುವದನ್ನು ಕೈಕೊಂಡಲ್ಲಿ ಸದ್ಯದ ಅನಿಷ್ಟಗಳನ್ನು ಹೋಗಲಾಡಿಸಬಹುದು.

ಹೊಸ ಪಕ್ಷಕಟ್ಟಿ ಈ ವಿಷಯದ ಬಗ್ಗೆ ಹೋರಾಟ ನಡೆಸುವದಕ್ಕಿಂತ ಕಾಂಗ್ರೆಸದಲ್ಲಿಯೇ ಇದ್ದು ಹೋರಾಟ ನಡೆಸುವದು ಒಳ್ಳೆಯದು ಈ ಬಗ್ಗೆ ನಾನು ಕಾಂಗ್ರೆಸ ಪಕ್ಷದ ಸಭೆಯಲ್ಲಿ ವಿಷಯ ಮುಂದಿಸಿ ಪ್ರಯತ್ನಿಸುವೆನು ಸತ್ಯ ಸಂಗತಿಯನ್ನು ನಿರ್ಭಯವಾಗಿ ಹೇಳುವಲ್ಲಿ ತೊಂದರೆಯಿಲ್ಲ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

ಶಬ್ದ ಕೋಶಗಳು

(೪ನೇ ಪುಟದಿಂದ)

ಹೇಳುತ್ತಾರೆ. ಇದರಲ್ಲಿ ಕೊನೆಗೆ ಕೆಲವು ಸಂಕೇತಾರ್ಥಗಳಿವೆ. ಪುಸ್ತಕದ ಗಾತ್ರವು ಆದಷ್ಟು ಕಿರಿದಾಗಿಯೂ, ಉಪಯೋಗವು ಆದಷ್ಟು ಹಿರಿದಾಗಬೇಕಾಗಿಯೂ ಇರಬೇಕೆಂಬುದೇ ಈ ನಿಘಂಟುವಿನ ಲೇಖಕರ ಉದ್ದೇಶವೆಂದು ತೋರುತ್ತದೆ. ಆದರೆ ಇಂಗ್ಲಿಷ್ ಜೆಮ್ ಡಿಕ್ಷ್ನರಿಯ ಪ್ರಮಾಣದಲ್ಲಿದ್ದರೆ ಇನ್ನೂ ಉತ್ತಮವಾಗುತಿತ್ತು.

ಅರುಣ ಪಂ. ಕೆಂಪು; ಸೂರ್ಯನ ಮುಂಬೆಳಕು; ೨ ಹಳದಿ ೩ ಸೂರ್ಯನ ಸಾರಥಿ.

ಅರುಸು ಕ. ಪ್ರೀತಿ; ಪ್ರೇಮ; ಮುದ್ದು ೩ ಹುಡುಗಾಟಿಕೆ.

೩೩. ಕನ್ನಡ ಕನ್ನಡ ಶಬ್ದಕೋಶ

ಇದನ್ನು ಶ್ರೀ ಎಚ್. ವಿ. ರಮಾಕಾಂತ ರಾವ್, ಬಿ. ಎ. (ಆನರ್ಸ್) ದ್ವಾರಕೋಟಿ— ಇವರು ೧೯೫೨ರಲ್ಲಿ ಪ್ರಕಾಶ ಮಾಡಿದರು. ಇದನ್ನು ಕಿಟ್ಟೆಲ್, ಬುಚರ್, ಕಾರಂತರು, ಝೀಗಲರ್, ತೂರಮರಿ, ಅಪ್ಪೆ, ಕೃಷ್ಣಭಟ್ಟರ ನಿಘಂಟುಗಳ ಆಧಾರದಿಂದ ಬರೆದಂತೆ ತೋರುತ್ತದೆ.

ಪೇಂಕುಳಿ (ಹ. ಗ. ನಾ) ೧ ರಾಕ್ಷಸ, ಪಿಶಾಚಿ ೨ ಆವೇಶ, ಅತಿ ಸಿಟ್ಟು.

ಪೇಚಕ (ಸಂ. ನಾ) ೧ ಗೂಗೆ(ಬೆ), ಹೇನು. ೨ ಮಂಚ ೩ ಮುಗಿಲು, ಆಕಾಶ.

೩೪. ಕನ್ನಡ ಕನ್ನಡ ಕಸ್ತೂರೀ ಕೋಶ

ಇದನ್ನು ಶ್ರೀ ಪಂಡಿತ ಜೆ. ಎ. ಶವಲಿಯವರು ಬರೆದು ೧೯೫೭ರಲ್ಲಿ ಪ್ರಕಾಶ ಮಾಡಿದರು. ಇದು ಸಚಿತ್ರ ನಿಘಂಟು. ಇವರು ಕನ್ನಡದಲ್ಲಿ ತುಂಬಾ ಅಭಿಮಾನಿಗಳು. ಇಂಗ್ಲಿಷಿನ Market, Pond, Vulgure, Bare ಪದಗಳು ಕನ್ನಡದ ಮಾರ್ಕಟ್ಟೆ, ಪೊಂಡ, ಹೊಲೆಗೇರಿ, ಬರೇ ಶಬ್ದಗಳಿಂದ ಹುಟ್ಟಿರಬಹುದೇ ಎಂದು ಸಂದೇಹ ಪಡುತ್ತಾರೆ. ಇದು ಹಿಂದಿನ ಕೋಶಗಳನ್ನು ಹೀರಿ ಜನನ ಹೊಂದಿದ ಚಿಕ್ಕ ಕೋಶ.

ಡೊಂಕಣಿ—(ಕ)ನಾ. ಡೊಂಕಳಿ, ಈಟಿ, ಬರ್ಚಿ, ಕುಂತ, ಸಬಳ.

ಡೊಂಕು—(ಕ)ನಾ. ಸೊಟ್ಟತನ, ವಕ್ರತೆ, ಕೊಂಕುಕೊರಕೆ, ಕಾಟಿಲ್ಯ, ಮೋಸ, ತಲೆಬಾಗುವಿಕೆ, ವಶನಾಗುವಿಕೆ, ಅಂಕಡೊಂಕ.

ಈ ನಿಘಂಟುಗಳಲ್ಲದೆ ಪಂಪಭಾರತ, ಪಂಪರಾಮಾಯಣದ ನಿಘಂಟುಗಳೂ ಸಾಹಿತ್ಯ ಪರಿಷತ್ತಿನಿಂದ ಪ್ರಕಾಶಿತವಾಗಿವೆ. ಈಗ ಸಾಹಿತ್ಯ ಪರಿಷತ್ತು ಒಂದು ಬೃಹತ್ ಕೋಶವನ್ನು ಬರೆಸುತ್ತಾ ಇದೆ. ಇದು ಆದರ್ಶ ನಿಘಂಟಾಗುವುದರಲ್ಲಿ ಸಂದೇಹವಿಲ್ಲ. ಆದರೆ ಇದು ಹೊರಬರುವ ಮುಹೂರ್ತ ಯಾವುದೆಂದು ಇನ್ನೂ ತಿಳಿದಿಲ್ಲ.

೩೫. ತದ್ಭವ — ಸಂಸ್ಕೃತ ಕೋಶ

ಇದನ್ನು ಶ್ರೀ ಡಿ. ವಿಷ್ಣುಮೂರ್ತಿ ಹೊಳ್ಳರು ಬರೆದು ೧೯೫೮ರಲ್ಲಿ ಪ್ರಕಾಶಮಾಡಿದರು. ಇದರಲ್ಲಿ 'ಈ ಚಿಕ್ಕ ಕೋಶದಲ್ಲಿ ಶಬ್ದಮಣಿದರ್ಪಣ, ಶಬ್ದಾನುಶಾಸನ ಮೊದಲಾದ ಗ್ರಂಥಗಳಲ್ಲಿರುವ ಸಾವಿರಾರು ತದ್ಭವ (ಅಥವಾ ಅಪಭ್ರಂಶ) ಪದಗಳ ಸಂಗ್ರಹವಿದೆ. ಇದರಲ್ಲಿ ಆ ತದ್ಭವಗಳ ಮುಂದೆ, ಅವಕ್ಕೊಪ್ಪುವ ಸಂಸ್ಕೃತ ಪದಗಳನ್ನೂ ಕ್ಲಿಷ್ಟಪದಗಳ ಅರ್ಥವನ್ನೂ ಕೊಟ್ಟಿದೆ....' ಎಂದು ಸಂಪಾದಕರಾದ ಹೊಳ್ಳರೇ ಹೇಳಿದ್ದಾರೆ.

ತದ್ಭವ	ಸಂಸ್ಕೃತ
ಚಟ್ಟಿ (ಚಿಟ್ಟಿ)	ಶ್ರೇಷ್ಠ-ಮುಖ್ಯ ವ್ಯಾಪಾರಿ.
ಚಟ್ಟ	ಛಾತ್ರ-ಶಿಷ್ಯ, ವಿದ್ಯಾರ್ಥಿ

ಇವರು ಸಂಜ್ಞಾರ್ಥಕೋಶವೊಂದನ್ನು ಬರೆದಿದ್ದಾರೆ. ಇದೂ ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತವಾದ ಕೋಶ. ಇದರಲ್ಲಿ ಒಂದರಿಂದ ನೂರೆಂಟರ ವರೆಗಿನ ಸಂಖ್ಯಾನಿಷ್ಠ ಸಂಜ್ಞೆಗಳನ್ನು ಸಂಗ್ರಹಿಸಿದ್ದಾರೆ.

ಕೈ. ವಾ. ಪಿರೋಡಿ ಶಿವರಾಮಯ್ಯನವರು ಸು. ೨೦ ವರ್ಷಗಳ ಹಿಂದೆ ಈಗ ದಿವಂಗತರಾದ ಉಡುಪಿಯ ಪುಸ್ತಕ ವ್ಯಾಪಾರಿಗಳು ವಿ. ಲಕ್ಷ್ಮಣ ರಾಯರಿಗೆ ಕಿಟ್ಟೆಲ್ ನಿಘಂಟುವಿನ ಪರಿಮಾಣವನ್ನು ಮೀರಿದ ಒಂದು ಬೃಹತ್ ಕೋಶವನ್ನು ದಿನಕ್ಕೆ ೧೨ ತಾಸುಗಳಿಗೆ ಕಡಿಮೆಯಿಲ್ಲದಷ್ಟು ಸುಮಾರು ಎರಡು ವರ್ಷಗಳ ವರೆಗೆ ಎಡೆಬಿಡದೆ ಬರೆದು ಕೊಟ್ಟುದನ್ನು ನಾನೇ ಕಂಡಿದ್ದೇನೆ. ಅಲ್ಲದೆ ಆ ಕಾಲದಲ್ಲಿ ಶಿವರಾಮಯ್ಯನವರಿಗೆ ನಿಘಂಟುವಿನ ಪ್ರತಿ ತೆಗೆಯುವ ಕೆಲಸದಲ್ಲಿ ನಾನೇ ತುಂಬ ಸಹಾಯ ಮಾಡಿದ್ದೆ. ಇನ್ನೂ ಶ್ರೀ ಲಕ್ಷ್ಮಣರಾಯರ ಮಗ ಶ್ರೀ ಗಣೇಶ ಸುಂದರರಾಯರು ಹಣದ ಅಭಾವದಿಂದೆಂದು ತೋರುತ್ತದೆ—ಈ ಕೋಶವನ್ನು ಪ್ರಕಾಶ ಮಾಡಿಲ್ಲ. ಕರ್ನಾಟಕದ ಉದಾರ ಮನಸ್ಸಿನ ಮಹನೀಯರು ಈ ಕೋಶದ ಪ್ರಕಟಣೆಗೆ ಮುಂದೆಬಂದು ಪ್ರಕಾಶಮಾಡಿದರೆ ಕನ್ನಡಿಗರಿಗೆ ಮಹೋಪಕಾರವಾದೀತಲ್ಲದೆ ಬರೆದವರ ಆತ್ಮಕ್ಕೂ ತೃಪ್ತಿಯಾದೀತು. ಶಿಲಾಯುಗ ಲೋಹಯುಗದಲ್ಲಿದ್ದ ಕನ್ನಡಿಗರೇ, ಗ್ರಂಥಯುಗವು ಕನ್ನಡ ನಾಡಿನಲ್ಲಿ ಆರಂಭವಾಗಲಿ.

ಕನ್ನಡ ಉದ್ಗ್ರಂಥಗಳ ವಾಚನವು ಮೂಲೆಸೇರಿದುದಕ್ಕೆ ಕನ್ನಡದಲ್ಲಿ ಬೃಹತ್ ಶಬ್ದಕೋಶಗಳ ಅಭಾವವೇ ಕಾರಣ. ಕನ್ನಡ ಪುನಃ ಚೇತರಿಸಬೇಕಾದರೆ ಉತ್ತಮ ಶಬ್ದಕೋಶಗಳ ಅವಶ್ಯಕತೆ ತುಂಬಾ ಇದೆ. ಇದು ಹಸ್ತದೊಳಗೆ ಅಡಗುವ ಪರಿಮಾಣದಿಂದಾರಂಭಿಸಿ, ತಲೆ ಹೊರೆಯಲ್ಲಿ ಹೊರುವಂಥಾ ವಿರಾಟ್ ಶಬ್ದಕೋಶಗಳೂ ಪ್ರಚಾರಕ್ಕೆ ಬರಬೇಕು. ಅಂದೇ ಕನ್ನಡ ನುಡಿಗೆ ಕೃತಯುಗ—ಸುವರ್ಣಯುಗ!

-ಯು. ನಾ. ಉಡುಪ, ವಿದ್ವಾನ್.

(ಸಂಪೂರ್ಣ)

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು!

ಊಹೆ ನಿಜ!

ಒರ್ವ ವ್ಯಕ್ತಿ ಇನ್ನೊಬ್ಬನೊಡನೆ ಪ್ರಚಲಿತ ಸಮಾಚಾರಗಳ ಕುರಿತು ಚರ್ಚೆಗೆ ಮೊದಲು ಮಾಡಿದನು: ಈಗೀಗ ಕಾಗದದ ಕ್ರಯ ಅತ್ಯಧಿಕವಾಗಿ ಏರಲು ಕಾರಣವೇನು?

ಉತ್ತರ: ಏನು ಹೇಳುತ್ತೀಯ? ಲೇಖಕರ ಸಂಖ್ಯೆಯು ದಿನೇ ದಿನೇ ಏರುತ್ತ ಹೋಗುತ್ತಿದೆ; ನೋಡು; ಅದರಿಂದಲೇ ಬೆಲೆ ಏರಿರಬೇಕು.

ಸಮರ್ಪಕೋತ್ತರ

ಅಧ್ಯಾಪಕ: ವಾಸ್ಕೋಡಿಗಾಮನು ಭಾರತಕ್ಕೆ ಮೊದಲು ಪಾದಾರ್ಪಣ ಮಾಡಿದ ಮೇಲೆ ಏನು ಮಾಡಿದನು?

ವಿದ್ಯಾರ್ಥಿ— ಇನ್ನೊಂದು ಪಾದವನ್ನೂ ಅರ್ಪಣೆ ಮಾಡಿದನು.

ಇದು ಸುಳ್ಳೆ?

ಇತಿಹಾಸದ ಅಧ್ಯಾಪಕರು: ಜಲಾಲುದ್ದೀನ್‌ನು ಮೃತ್ಯುಮುಖನಾದ ವೇಳೆ ಅತನ ಸಾಮ್ರಾಜ್ಯದಲ್ಲಿ ಏನಾಯಿತು?

ವಿದ್ಯಾರ್ಥಿ— ಅವನ ಅಂತಿಮ ಸಂಸ್ಕಾರವು ವೈಭವಪೂರ್ಣವಾಗಿ ನೆರವೇರಿತು.

ಕ್ಷೌರಿಕರ ಸತ್ಯಾಗ್ರಹದಿಂದ....

ಅಶೋಕ ಮತ್ತು ಮದನರು ಭಾರಿಯ ಸಮಸ್ಯೆಗಳಿಂದ ಒದಗಬಹುದಾದ ಗಂಭೀರ ಪರಿಸ್ಥಿತಿಗಳ ಪರಿಣಾಮಗಳನ್ನು ಚಿಂತಿಸುತ್ತ ಬರುತಿದ್ದರು.

ಅಶೋಕ—ಒಂದು ವೇಳೆ ಎಲ್ಲ ಕ್ಷೌರಿಕರೂ ಸತ್ಯಾಗ್ರಹ ಮಾಡತೊಡಗಿದರೆ ಆಗ....?

ಮದನ – ಅಯ್ಯೋ ಬೆಪ್ಪೆ, ಅದಕ್ಕೇಕೆ ಚಿಂತೆ?

ಅಶೋಕ — ಏನಪ್ಪಾ....?

ಮದನ— ತಿಂಗಳಿಗೆ ಒಂದೆಂಟಾಣೆ ಉಳಿಯಿತು!

ವಿನೀತ ಸುಪುತ್ರ

ತಂದೆ-ಮಗೂ, ನಾಳೆ ನಾನು ಮಂಗಳೂರಿಗೆ ಹೋಗಲಿದ್ದೇನೆ. ನಿನಗೆ ಅಲ್ಲಿಂದ ಏನು ತರಬೇಕು.

ಮಗು—ಸಮೀಪದಲ್ಲಿ ಹೇಳಬೇಕೋ ಬೇಡವೋ ಎಂದು ಚಿಂತಿಸುತ್ತ ನಿಂತ. ತಂದೆಗೆ ತನ್ನ ಮಗನ ವಿನೀತಭಾವ, ಭಯಭಕ್ತಿಗಳನ್ನು ಕಂಡು ಮೈಯೆಲ್ಲ ಹರ್ಷಪುಲಕಿತವಾಯಿತು. ಎಂತಲೇ ಅವನನ್ನು ಕೈಹಿಡಿದು ಕುಳ್ಳಿರಿಸಿ ಮೈದಡವಿ ಕೇಳಿದರು: ನೋಡಪ್ಪ, ಏನು ತರಬೇಕು? ಹೆದರಬೇಡ, ಹೇಳು.

ಮಗು—ಎಲ್ಲಿಲ್ಲದ ಧೈರ್ಯ ತಂದುಕೊಂಡು ಹೇಳಿದ—ಅಪ್ಪಾ....

ಅಪ್ಪ—ಏನು ಮಗೂ....ಹೇಳು....ಹೇಳು....

ಮಗ— ನಿನ್ನೆ....ನನ್ನ ಪತಂಗ ಹಗ್ಗ ಕಡಿದು ತಪ್ಪಿಸಿಕೊಂಡು ಹೋಗಿತ್ತು. ಅದೆಲ್ಲಿಯಾದರೂ ಕಾಣಸಿಕ್ಕಿದರೆ, ಹಿಡಿದುಕೊಂಡು ಬಾಪ್ಪ.

ತಂದೆ—ವಿಸ್ಮಿತರಾಗಿ ಕುಳಿತುಬಿಟ್ಟರು.

ಮದುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ;
'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!
ಜೀವನದ ಚೀರಿ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. ೧-೨೫ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

Statement about ownership and other particulars about Newspaper: NAVAYUGA.
FORM IV (Rule 8)

1. *Place of Publication* ... UDIPI
2. *Periodicity of its Publication* ... WEEKLY
3. *Printers' Name* ... K. H. SHETTY
Nationality ... INDIAN
Address ... Navayuga Presss, Palukote, Udipi, (S. K.)
4. *Publishers' Name* ... K. H. SHETTY
Nationality ... INDIAN
Address ... Palukote, Udipi (S. K.)
5. *Editor's Name* ... K. H. SHETTY
Nationality ... INDIAN
Address .. Palukote, Udipi (S. K.)
6. *Names and addresses of individuals who own the news-paper and partners or shareholders holding more than one per cent of the total capital.* K. H. SHETTY Palukote, Udipi (S. K.)

I, K. H. Shetty, hereby declare that the particulars given above are true to the best of my knowledge and belief.

(Sd.) K. H. SHETTY,
Signature of Publisher

Date. 5—3—1959.

ಸಲಹೆ

ಕೂತಲ್ಲಿಗೆ ಹಣ ಬರಿಸುವ ಅತಿ ಸರಳ ವಿಧಾನ

ನೀವು ಶ್ರೀಮಂತರೇ ಇರಿ, ದರಿದ್ರರೇ ಇರಿ, ನಿಮ್ಮ ಆದಾಯವನ್ನು ಇನ್ನೂ ಹೆಚ್ಚಿಸಬಾರದೇಕೆ?

ಇಂದಿನ ಕಷ್ಟಮಯವಾದ ಈ ಪರಿಸ್ಥಿತಿಯಲ್ಲಿ ನೀವು ಕುಳಿತುಕೊಂಡಲ್ಲೇ ಮರ್ಯಾದೆಯ ಜೀವನವನ್ನು ಬಾಳಬಲ್ಲಿರೆಂದು ಹೇಳಿದರೆ, ಮೊದಲಿಗದನ್ನು ನೀವೆಂದೂ ನಂಬಲಾರಿರಿ. ಹಾಗೂ ಉಂಟೆ? ಎಂದು ನೀವು ಅವಶ್ಯವಾಗಿ ಪ್ರಶ್ನಿಸುತ್ತೀರಿ. ಈ ಉಪಾಯವನ್ನು ತಾನು ಹೇಳಿಕೊಡುವೆನೆಂದು ಯಾರಾದರೂ ಆಡಿದರೆ, ಅದರಲ್ಲಿ ಸತ್ಯಾಂಶವೇ ಇಲ್ಲ ಎಂಬ ದೃಷ್ಟಿಯಿಂದ ನೀವು ಅಂತಹರ ಕಡೆಗೆ ಎಳ್ಳಷ್ಟೂ ಗಮನವೀಯಲಾರಿರಿ. ನಿಮಗಾಗಿ ಹಲವಾರು ಜೀವಿಗಳನ್ನು ದಿನರಾತ್ರಿ ದುಡಿಸಿ ಅದರಿಂದ ನೀವು ಬಾಳಬಹುದೆಂದಾಡಿದರೆ, ಆಗ ಈ ಸರ್ವ ಸಮಾನತೆಯ ಯುಗದಲ್ಲಿ ಪ್ರಜಾಪ್ರಭುತ್ವದಲ್ಲಿ ರಾಕ್ಷಸ ಕೃತ್ಯವಿದು ಎಂದು ಉದ್ಗರಿಸುವಷ್ಟು ಮುಂದುವರಿಯುತ್ತೀರಿ. ಹಾಗೂ ಅಲ್ಲದೆ, ನಿಮಗಾಗಿ ದುಡಿಯುವ ಆ ಹಲವರು ಅನೇಕಾನೇಕರನ್ನು ಅಹರ್ನಿಶಿ ಉಪಹರಿಸುವಂತೆ ಮಾಡುವುದರಿಂದಲೇ ನಿಮಗೆ ಕೂತಲ್ಲೆ ಉಂಡು ತಿಂದು ಆರಾಮವಾಗಿರಬಹುದೆಂದರೆ, ಆಗ ನೀವು ಸಂಭಾವಿತರಾಗಿರುವುದರಿಂದ ಅತ್ತ ಬೆರಳೆತ್ತಿಯೂ ಗಮನವೀಯಲಾರಿರಿ. ಆದರೆ, ಇದೆಲ್ಲವೂ ಸತ್ಯ. ವಂಚನೆ, ಸೇವಕರನ್ನು ದುಡಿಸುವುದು ಇವುಗಳಿಂದಲೇ ನೀವು ಜೇನನ್ನೇ ಕುಡಿಯಬಲ್ಲಿರಿ! ಏನಿದು ಆಶ್ಚರ್ಯವೆನ್ನುತ್ತೀರಾ?

ಹೇಳಿಸಿಕೊಳ್ಳುವಷ್ಟು ತರಬೇತಿ ಹಾಗೂ ಬಂಡವಾಳಗಳಿಲ್ಲದೆ ಕೈಗೊಳ್ಳಬಹುದಾದ ಕೆಲಸ ಜೇನುಸಾಕಣೆ ಎನ್ನುತ್ತಾರೆ. ಇವಕ್ಕೆ ಅತ್ಯಲ್ಪ ಪರಿಶ್ರಮ ಸಾಕು. ರಾಜಸ್ಥಾನದ ಬೆಟ್ಟದೂರು ಅಬುವಿನಲ್ಲಿ ತೆಂಗಿನ ಜಾತಿಯ ಮರಗಳ ಎಲೆಗಳಲ್ಲಿ ಹಾಗೂ ವಿವಿಧ ಸಂಸ್ಥೆಗಳ ಕಟ್ಟಡಗಳಲ್ಲಿ ಜೇನಿನ ಗೂಡುಗಳಿರುವುದು ದೃಷ್ಟಿಗೋಚರವಾಗುವುದು. ಈ ಪೆಟ್ಟಿಗೆಗಳು ಒಬ್ಬರದ್ದೇ ಅಲ್ಲ; ಅನೇಕ ವ್ಯಕ್ತಿ ಮತ್ತು ಸಂಘ ಸಂಸ್ಥೆಗಳಿಗೆ ಸೇರಿವೆ.

ಈ ಉದ್ಯೋಗದಿಂದ ಅಬು ಬೆಟ್ಟಗಳಲ್ಲಿ ಸುಮಾರು ೪೦ ವ್ಯಕ್ತಿಗಳು ಬಿಡು ಸಮಯದಲ್ಲಿ ದುಡಿದು ಜೀವಿಸುತ್ತಿದ್ದಾರೆ. ಇವರಲ್ಲಿ ಗಂಡಸರೂ ಹೆಂಗಸರೂ ಸೇರಿದ್ದಾರೆ; ಜೀವನದ ವಿವಿಧ ರಂಗಗಳಲ್ಲಿ ಸಂಪಾದಿಸುವವರೂ ಇದ್ದಾರೆ. ಇವರಲ್ಲಿ ಸ್ಥಳೀಯ ವಿದ್ಯುಚ್ಛಕ್ತಿ ಮನೆಯ 'ಗಣಕ' (ಅಕೌಂಟೆಂಟ್)ನೂ ಓರ್ವನು.

ಇವನಿಗೆ ವೈಯಕ್ತಿಕವಾಗಿರುವಷ್ಟು ಜೇನು ಗೂಡುಗಳು ಅಬುವಿನಲ್ಲಿ ಬೇರಾರಿಗೂ ಇಲ್ಲ. ಅವನ ವಶ ೩೦ ಜೇನು ಗೂಡುಗಳಿದ್ದು ಅವುಗಳು ಆತನ ಸ್ನೇಹಿತರು ಅಥವಾ ಬಂಧುಗಳು ಗಮನವಿಟ್ಟು ನೋಡಬಹುದಾದ ಬೇರೆ ಬೇರೆ ಎಡೆಗಳಲ್ಲಿ ಇಡಲ್ಪಟ್ಟಿವೆ. ಈತನು ಮೊದಲಿಗೆ ಎರಡೇ ಗೂಡುಗಳಿಂದ ಈ ಉದ್ಯೋಗವನ್ನು ಪ್ರಾರಂಭಿಸಿದರೂ ಕೇವಲ ಮೂರೇ ವರ್ಷಗಳಲ್ಲಿ ಅವುಗಳ ಸಂಖ್ಯೆಯನ್ನು ಇಪ್ಪತ್ತಕ್ಕೆ ಏರಿಸಲು ಶಕ್ತನಾಗಿದ್ದಾನೆ. ಅಲ್ಲಿನ ಸರಕಾರಿ ಪ್ರಾಥಶಾಲೆಯೊಂದರ ಮುಖ್ಯೋಪಾಧ್ಯಾಯರ ಮಾತಿನಂತೆ ಈ ದಂಧೆಗೆ ಕೈಹಾಕಿದ್ದನು. ಆ ಮೇಲೆ ಅವನು ಈ ವೃತ್ತಿಯಲ್ಲಿ ಆಸಕ್ತನಾಗಿ ನಾಲ್ಕು ತಿಂಗಳ ಕಾಲ ಪ್ರತಿದಿನ ಒಂದು ತಾಸಿನಷ್ಟು ಹೊತ್ತು ಸರಕಾರಿ ಮಧುಮಕ್ಷಿಕಾ ಗೃಹಕ್ಕೆ ತೆರಳಿ, ಅಲ್ಲಿಂದ ಜೇನು ಸಾಕುವುದರಲ್ಲಿ ಒಂದು ಪ್ರಶಸ್ತಿ ಪತ್ರವನ್ನೂ ಸಂಪಾದಿಸಿಕೊಂಡನು

ಈತನ ಪತ್ನಿಗೂ ಇಂತಹುದೇ ಪ್ರಶಸ್ತಿ ಪತ್ರವಿದೆ. ಅಲ್ಲದೇ ಆಕೆಯು ಸರಕಾರಿ ಮಧುಮಕ್ಷಿಕಾ ಗೃಹದಲ್ಲಿ ಸೇವೆಸಲ್ಲಿಸಿದ್ದು, ತನ್ನ ಸೇವೆಯಲ್ಲಿ ಉನ್ನತ ಪ್ರಶಸ್ತಿಯನ್ನೂ ನಿಪುಣತೆಯನ್ನೂ ಪಡೆದಿದ್ದಾಳೆ. ಹೀಗಾಗಿ ಈ ದಂಪತಿಗಳಿಗೆ ಮಧುಮಕ್ಷಿಕ ಪಾಲನೆಯೆಂಬುದು ಕೌಟುಂಬಿಕ ವ್ಯಾಪಾರ ಮತ್ತು ವಿರಾಮಕಾಲದ ಆದಾಯ ತರುವ ಉದ್ಯಮವಾಗಿ ಪರಿಣಮಿಸಿದೆ. ಇವರ ಹಿರಿಯ ಮಗನೀಗ, ಎಸ್. ಎಸ್. ಸಿ. ಉತ್ತೀರ್ಣನಾಗಿದ್ದು, ಅವನೂ ಈ ಕೈಗಾರಿಕೆಯಲ್ಲಿ ಕೌಶಲಗಳಿಸಿದ್ದು, ತಂದೆತಾಯಂದಿರೊಡನೆ ಸಹಕರಿಸುತ್ತಾನೆ.

ನೀವೂ ಈ ಗೃಹ ಉದ್ಯೋಗವನ್ನು ಕೈಗೊಳ್ಳುವಿರಾದರೆ, ಈ ವಿದ್ಯೆಯಲ್ಲಿ ಪರಿಣತರಾದವರ ಕೆಲವೇ ಸೂಚನೆಗಳ ಮನನ ಸಾಕು. ಈ ಗೂಡುಗಳಲ್ಲಿ ಮನೆಕಟ್ಟಲು ಅಲಸದೆ ದುಡಿಯುತ್ತಿರುವ ಜೇನು ನೊಣಗಳ ಆರೈಕೆಯೆಂದರೆ, ಸಂಜೆ ಸಮಯಕ್ಕೆ "ಹೇಗೆ. ಸೌಖ್ಯವೆ?" ಎಂದು ನಮ್ಮ ಸ್ನೇಹಿತರೊಡನೆ ಎಲ್ಲಿಯಾದರೂ ಸಿಕ್ಕಿದರೆ, ಕೇಳುವುದಿಲ್ಲವೆ? ಅಷ್ಟೆ.

ಅಬೂ ಬೆಟ್ಟಗಳಲ್ಲಿರುವ ನೊಣಗಳು ಎತ್ತರವಾದ ಕಲ್ಲುಗಳೆಡೆ ಬೆಳೆದು ನಿಂತ ಕಾಡಿನ ಮರಗಳ ಹೂವುಗಳಿಂದಲೇ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತವೆ. ಸಾಕಷ್ಟು ಹೂಗಳ ಕೊರತೆಯಿಂದಾಗಿ ಇಲ್ಲಿನ ಜೇನುಗೂಡುಗಳು ಸಾಮಾನ್ಯವಾಗಿ ಚಳಿ ಮತ್ತು ಬೇಸಗೆ ಕಾಲಗಳಲ್ಲಿ ಮಾತ್ರ ಉತ್ಪತ್ತಿ ತರುತ್ತವೆ. ನಮ್ಮ ಈ ದಂಪತಿಗಳು ಒಂದು ಗೂಡಿನಿಂದ ಸಾಮಾನ್ಯವಾಗಿ ೨೦ ರಾತಲುಗಳಷ್ಟು ಜೇನು ಪಡೆಯುತ್ತಾರೆ. ಈ ಉತ್ಪಾದನೆಯು ತೀರ ಸಾಮಾನ್ಯವಾದುದು. ಅಬೂವಿನಲ್ಲಿ ಒಂದು ರಾತಲು ಜೇನಿಗೆ ಮೂರು ರೂಪಾಯಿ ಬೆಲೆಯಿದೆ. ಆಗ ಆತನು ಈ ಜೇನುಗೂಡುಗಳಿಂದ ವರ್ಷಕ್ಕೆ ರೂ. ೧,೨೦೦ ಅಥವಾ ತಿಂಗಳಿಗೆ ರೂ. ೧೦೦ ಗಳಿಸುತ್ತಾನೆ. ಅವನಿಗೆ ಮಾರುಕಟ್ಟೆಯ ಅಭಾವವೂ ಇದುವರೆಗೆ ಕಾಣಿಸಿಕೊಳ್ಳಲಿಲ್ಲ. ಶುದ್ಧ ಜೇನಿಗಾಗಿ ಗಿರಾಕಿಗಳು ಮನೆಬಾಗಿಲಿಗೇನೇ ಬರುತ್ತಾರೆ ಕೆಲವೊಮ್ಮೆ ಅವರು ನಿರಾಶರಾಗಿ ಹಿಂತೆರಳಬೇಕಾದ ಪ್ರಮೇಯವೂ ಬರುವುದುಂಟು.

ಸ್ವಯಂ ಮನೆಯಲ್ಲಿಯೇ ಜೇನಿನ ವ್ಯವಸಾಯವಿದ್ದರೂ ಅವನಿಗೆ ಕೆಲವೊಮ್ಮೆ ಪೇಟೆಯಿಂದಲೇ ಜೇನನ್ನು ಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಅಶುದ್ಧ, ಇನ್ನು ಕೆಲವೊಮ್ಮೆ ಮೋಸದ ಜೇನನ್ನೂ ಆತ ಕೊಂಡು ಹೋಗಿದ್ದಾನೆ. ಒಂದು ಬಾರಿ ಬೆಟ್ಟಗಳ ಕಾಡಿನಲ್ಲಿ ವಾಸುತಿದ್ದವನಿಂದ ಜೇನನ್ನು ಕ್ರಯಕ್ಕೆ ತಂದಿದ್ದನು ಅವನು ಅದು ಶುದ್ಧವೆಂದು ಪ್ರಮಾಣವನ್ನೂ ಮಾಡಿದ್ದನು ಆದರೆ, ಅದನ್ನಿನ್ನೊಂದು ಕುಪ್ಪಿಗೆ ಹೊಯ್ದಾಗ ಅಡಿಭಾಗದಲ್ಲಿ ಬೆಲ್ಲವು ನಿಂತಿರುವುದು ಕಂಡುಬಂದಿತು! ಜೇನು ನೂರಾರು ಉಪಯೋಗಕ್ಕೆ ಬರುತ್ತದೆ. ಮುಖ್ಯವಾಗಿ ಔಷಧಿಗಳಿಗಿದು ಅಗತ್ಯ. ಬಾಹ್ಯವಾಗಿ ಇದನ್ನು ಬಳಸಬಹುದು. ಅಂತರಿಕಕ್ಕೆ ಸೇವಿಸಬಹುದು. ನೊಂದ ಕಣ್ಣುಗಳಿಗಿದು ದಿವ್ಯೌಷಧಿ. ಶಕ್ತಿವರ್ಧಕವಾಗಿ ಇದನ್ನು ಉಪಯೋಗಿಸಬಹುದು. ಸಿಹಿ ಮೂತ್ರದವರಲ್ಲಿ ಸಕ್ಕರೆ ಹೆಚ್ಚಿದ್ದರೆ ಜೇನು ಕುಡಿದಗೆ ಕಡಿಮೆಯಾಗುವುದು. ಸಂಧಿವಾತವಿದ್ದರೆ, ಅದಕ್ಕೆ ಈ ನೊಣಗಳು ವಿಚಿತ್ರ ಚಿಕಿತ್ಸೆ ಮಾಡಬಲ್ಲುವು. ಮೊದಲ ದಿನ ಎರಡು, ಎರಡನೆ ದಿನ ನಾಲ್ಕು ಹೀಗೆ ಎಂಟರ ವರೆಗೆ ಏರಿಸಿ, ಹಾಗೆಯೇ ಇಳಿಸಿ, ಅಷ್ಟು ಬಾರಿ ಜೇನು ನೊಣಗಳಿಂದ ಕಡಿಸಿದರೆ, ಆಗ ಸಂಧಿವಾತವು ಗುಣಮುಖವಾಗುತ್ತದೆ ಎಂದು ಹೇಳಲಾಗುತ್ತದೆ.

ಮಧುವು ಒಂದು ಆರ್ಥಿಕ ಲಾಭವೂ ಹೌದು. ನೊಣಗಳ ರಾಣಿಯನ್ನು ತಂದು ಅದಕ್ಕೊಂದು ಗೂಡನ್ನು ಬಿಟ್ಟುಕೊಟ್ಟರೆ, ಅದುವೇ ಅರಮನೆಯಾಗಿ ಮಾರ್ಪಡಿಸುತ್ತದೆ. ಅವು ಬೆಳೆಯುತ್ತಲೇ ಹೋಗುತ್ತವೆ. ನೀವೊಂದು ನೆರಳೀಯುವಂತೆ ಸಣ್ಣ ಆಶ್ರಯವನ್ನೊದಗಿಸಿದರೆ, ಅವು ನಿಮಗೆ ಕೆಲವುಬಾರಿ ನೂರು ರಾತಲುಗಳಿಗೂ ಮಿಕ್ಕಿದ ಎಂದರೆ, ರೂ. ಮುನ್ನೂರನ್ನು ಸಂಪಾದಿಸಿಕೊಡುವುವು. ಆದರೆ, ನೀವಿದಕ್ಕೆ ಮಾಡಬೇಕಾದ ವೆಚ್ಚ ಕೇವಲ ಮೊತ್ತ ಮೊದಲಿಗೆ ಇಪ್ಪತ್ತೆರಡು ರೂಪಾಯಿ.

ಹಾಗಿರುವಾಗ, ನೀವು ಹಾಕುವ ಬಂಡವಾಳಕ್ಕೆ ರೂ. ೩೦೦ ಬೇಡ, ೧೦೦ರೇ ಇರಲಿ, ಲಾಭ ದೊರೆತರೆ, ನೀವು ಹೇರುವ ಬಡ್ಡಿದರ ಎಷ್ಟು? ಇದೇ ಬಡ್ಡಿಯನ್ನು ಅನ್ಯ ಮಾರ್ಗಗಳಲ್ಲಿ ಹೇರಿದರೆ, ಆಗ ಅದು ಸಮಾಜ ದ್ರೋಹ, ದೇಶ ದ್ರೋಹವಾಗುತ್ತದೆ. ಆದರೆ, ಜೇನು ನೊಣಗಳ ಸಾಕಣೆಯಿಂದ, ದೇಶಕ್ಕೂ ಸಮಾಜಕ್ಕೂ ಉಪಕಾರವಾಗುತ್ತದೆ; ನಿಮ್ಮ ಕಿಸೆಯೂ ತುಂಬುತ್ತದೆ.

ಆದುದರಿಂದ, ನೀವೇಕೆ ಇತ್ತ ಮನಸ್ಸು ಹರಿಸಬಾರದು?

(ಸಾಧಾರ)

Notice

ಉಡುಪಿ ತಾಲೂಕು ಎಲ್ಲೂರು ಗ್ರಾಮದ [illegible] ವಿಶ್ವನಾಥ ಪ್ರಭುಗಳ ವಿಧವೆ ರಂಗಮ್ಮ ಮತ್ತು ಸದ್ರಿಯವರ ಸೊಸೆ ನೀಲಮ್ಮ ಕೂಡಾ ೨ ಜನರು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದು ಏನೆಂದರೆ ನಮ್ಮ ಪೈಕಿ ಒಂದನೇಯವಳ ಗಂಡ, ೨ ಎರಡನೇಯವಳ ಮಾವ ಸದ್ರಿ ವಿಶ್ವನಾಥ ಪ್ರಭುಗಳು ಕಳೆದ ತಾರೀಕು 7.10.1953ರಲ್ಲಿ ಮೃತಪಟ್ಟಿರುತ್ತಾರೆ. ಸದ್ರಿ ಅವರಿಗೆ ಇದ್ದ ಒಬ್ಬನೇ [illegible] ಪುತ್ರ, ನಮ್ಮಲ್ಲಿ ೨ನೇಯವಳ ಗಂಡ [illegible] ಪ್ರಭುವು ಈ ಮೊದಲೇ ಮೃತಪಟ್ಟಿರುವುದರಿಂದ ಈಗಿನ Hindu women's widow property act ಪ್ರಕಾರ ಅನಾಥರಾದ ನಾವು ಇಬ್ಬರು ವಿಧವೆಯರು ಸದ್ರಿ ವಿಶ್ವನಾಥ ಪ್ರಭುರ ಸರ್ವ ಸ್ಥಿರ, ಚರ ಆಸ್ತಿ ಸೊತ್ತುಗಳಿಗೆ ನಾವೇ ಸರ್ವ ಹಕ್ಕುದಾರರಾಗಿರುತ್ತೇವೆ ಸರ್ವ ಸ್ವತಂತ್ರವೂ ನಮಗೆ ಇರುವುದು. ಹೀಗಿರುವಲ್ಲಿ ಸದ್ರಿ ವಿಶ್ವನಾಥ ಪ್ರಭುಗಳ ಅಣ್ಣನ ಮಗ ಶಿವರಾಯ ಪ್ರಭುವು ನಮ್ಮಿಂದ ಆಸ್ತಿಯನ್ನು ಅಪಹರಿಸುವುದಕ್ಕಾಗಿ ತಾನೇ ಹಕ್ಕುದಾರನೆಂದು ದುಸ್ವಾರ್ಥದಿಂದ ನಮ್ಮನ್ನು ವಂಚಿಸುವುದಕ್ಕಾಗಿ ಸದ್ರಿ ಆಸ್ತಿಗಳ ಮೇಲೆ ಯಾವ ಒಂದು ತರದ ರಿಕಾರ್ಡು ಮಾಡಿದರೂ ಅದು ಸಿಂಧುವಾಗತಕ್ಕದ್ದಲ್ಲ ಎಂದು ನಾವು ಈ ಮೂಲಕ ತಿಳಿಯಪಡಿಸುತ್ತೇವೆ.

||| ಈ ಮೂರು ಗೆರೆ ರಂಗಮ್ಮನ ರುಜು.
||| ಈ ಮೂರು ಗೆರೆ ನೀಲಮ್ಮನ ರುಜು.
ತಾ 27.2.59.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ
ಮನೆ ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆಂಗೆ ವಿಧಾನ ಸವಿಸ್ತಾರವಾಗ ವಿವರಿಸಲ್ಪಟ್ಟಿದೆ.
ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಕಥಾ ವಿಹಾರ

(೩ನೇ ಪುಟದಿಂದ)

ಅಸಿಸ್ಟೆಂಟ್ ತೆಲುಗು ತಮಿಳುಗಳನ್ನು ಬೆರಕೆಮಾಡಿಕೊಂಡು—"ಒಬ್ಬೊಬ್ಬರಿಗೆ ಕನ್ಸಲ್ಟಿಂಗ್ ಫೀಸು ಇಪ್ಪತ್ತೈದು ರೂಪಾಯಿ. ಈಗ ಒಬ್ಬರಿಗೆ ಮಾಡಬೇಕೋ ಇಬ್ಬರಿಗೆ ಮಾಡಬೇಕೋ ಬೇಗ ಹೇಳಿ."

ಗೋಪಾಲ ತಬ್ಬಿಬ್ಬಾದ. ಎರಡು ಕ್ಷಣದಲ್ಲಿ ಸುಧಾರಿಸಿಕೊಂಡು "ನಾನೇನೂ ಅಷ್ಟು ಹಣ ತರಲಿಲ್ಲ. ಬಡವ......"

ಮುಂದೆ ಮಾತಿಗೆ ಅವಕಾಶ ಕೊಡದೆ" ಎಷ್ಟು ಹಣ ತಂದಿದ್ದೀರಿ? ಒಬ್ಬರಿಗಾದರೆ ಇಪ್ಪತ್ತೈದು. ಇಬ್ಬರಿಗೊಟ್ಟಾದರೆ ಹತ್ತು ಕಡಮೆ ಬೀಳುತ್ತೆ. ನಲುವತ್ತು" ಎಂದರು. ಭಿಷಗ್ರತ್ನರು.

"ಹಣತರಬೇಕಂತ ನೀವು ಕೊಟ್ಟ ಜಾಹೀರಾತಿನಲ್ಲಿರಲಿಲ್ಲ. ನಿಮ್ಮ ಸೇವೆಯೇ ನಮ್ಮ ಕರ್ತವ್ಯ ಅಂತ ಬರೆದಿದ್ದೀರಿ." ಗೋಪಾಲ ಜೇಬಿನಿಂದ ಪತ್ರಿಕೆಯಲ್ಲಿ ಬಂದ ಜಾಹೀರಾತಿನ ಕಟ್ಟಿಂಗನ್ನು ತೆಗೆದ.

"ಹೌದು. ನಾನು ಈ ಸೇವೆಗಾಗೇ ಹೊರಟಿದ್ದೇನೆ. ಜನರು ದುಡ್ಡಿಲ್ಲದೆ ಕೆಲಸವಾಗುವುದೆಂದು ತಿಳಿಯುವಷ್ಟು ಮೂಢರಿರುತ್ತಾರೆಂದು ನಾವು ಭಾವಿಸಲಿಲ್ಲ. ಸರಿ. ಹೆಚ್ಚು ಮಾತಿಗೆ ಸಮಯವಿಲ್ಲ. ಏನು ಹೇಳುತ್ತೀರಿ?' ಕೇಳಿದರು ಭಿಷಗ್ರತ್ನರು.

ಗೋಪಾಲ ಮಗಳ ಮುಖ ನೋಡಿದ

"ಏನೂ ಬೇಡಪ್ಪ. ಹೋಗೋಣ" ಎಂದಳು ಉಷಾ.

"ಓ! ನೀವು ಕನ್ನಡದವರೋ? ಅಟ್ಲೆಟ್ಟೇ ಕನ್ನಡದಲ್ಲೇ ಪೇಶುಂಗೋ-ಎನಕ್ಕು ಕನ್ನಡಾನೂ ತೆಲುಸು' ಎಂದನಾ ಅಸಿಸ್ಟೆಂಟ್.

ಹಾ! ನನ್ನಿಂದಾಗಿ ಭಿಷಗ್ರತ್ನರ ಅತ್ಯಮೂಲ್ಯ ಸಮಯವು ಹಾಳಾಗುತ್ತಿದೆ. ಹೊರಗೆ ಎಷ್ಟೋ ಜೀವಾತ್ಮಗಳು ಇವರ ಘನ ಸೇವೆಗೆ ಕಾದಿದ್ದಾವೆ. ಕ್ಷಣ ಮಾತ್ರದೊಳಗೆ ತೀರ್ಮಾನವಾಗ ಬೇಕಾಗಿದೆ.

"ನನ್ನ ಮಗಳಿಗೆ ಚಿಕಿತ್ಸೆಯಾಗಲಿ. ಆದರೆ ಔಷಧಕ್ಕೆ ಎಷ್ಟಾಗುವುದೆಂದು ತಿಳಿದರೆ......" ಎಂದ ಗೋಪಾಲ.

"ಪರೀಕ್ಷೆ ಮಾಡದೆ ಔಷಧದ ಗತಿ ತಿಳಿಸುವುದು ಹೇಗೆ?"

ಗೋಪಾಲ ಕೂಡಲೇ ಕೈಯನ್ನು ಜೇಬಿಗೆ ಹಾಕಿ.. ಸರ್ಪಯಾಗದಲ್ಲಿ ಸರ್ಪಗಳು ಬಲವಂತವಾಗಿ ಎಳೆಯಲ್ಪಟ್ಟು ಯಜ್ಞಕುಂಡಕ್ಕೆ ಬಿದ್ದ ಹಾಗೆ ಇಪ್ಪತ್ತೈದು ರೂಪಾಯಿ ನೋಟುಗಳು ಅವನ ಕೈಯಿಂದ ಭಿಷಗ್ರತ್ನರ ಕೈಗೆ ಬಿದ್ದುವು.

"ಥ್ಯಾಂಕ್ಸ್" ಎಂದಾ ನೋಟುಗಳನ್ನು ತಮ್ಮ ಜೇಬಿಗಿಳಿಸಿಕೊಂಡರು ಭಿಷಗ್ರತ್ನರು ಪಟಕ್ಕನೆ ಉಷೆಯ ಕಡೆಗೆ ತಿರುಗಿ ಅವಳ ಪರೀಕ್ಷೆಗೆ ಪ್ರಾರಂಭ ಮಾಡಿದರು.

"ಯಾವ ಭಾಷೆಯನ್ನು ಓದಬಲ್ಲೆಯಮ್ಮ?'

"ಹಿಂದೀ ಓದಬಲ್ಲೆ" ಎಂದಳು.

"ಓ! ಹಿಂದೀ ಗೊತ್ತೇ? ಕಲಿತಿರುವಿಯಾ?'—ಹಿಂದಿಯಲ್ಲೇ ಕೇಳಿದರು.

"ಹೌದು. ರಾಷ್ಟ್ರಭಾಷಾ ಆಗಿದೆ" ಎಂದಳು ಉಷೆ.

ಭಿಷಗ್ರತ್ನರು ಚಿಕ್ಕ ಪುಸ್ತಕವೊಂದನ್ನು ಅವಳಿಗೆ ಕೊಟ್ಟು 'ಓದು' ಎಂದರು. ಅವಳು ಓದುವಾಗ ಯಾವಾವ ಅಕ್ಷರ ಉಗ್ಗಿದಳೋ ಆ ಅಕ್ಷರಗಳನ್ನೆಲ್ಲಾ ಬರೆದುಕೊಳ್ಳುವಂತೆ ತಮ್ಮ ಅಸಿಸ್ಟೆಂಟಿಗೆ ಹೇಳಿದರು. ನಾಲ್ಕು ನಿಮಿಷದಲ್ಲಿ ಈ ವಾಚನ ಕ್ರಮ ಮುಗಿಯಿತು. ನಂತರ ಅವಳ ಬಾಯಿಯೊಳಗೆ ಟಾರ್ಚ್ ಲೈಟು ಹಾಕಿದರು. ಅವಳೊಡನೆ ಹಿಂದಿಯಲ್ಲಿ "ನಿನಗೆ ಮೊದಲೇನಾದರೂ ರೋಗವಿತ್ತೇ? ಶಾಖಾಹಾರವೋ ಮಾಂಸಾಹಾರವೋ" ಎಂಬಂತಹ ವಿಚಿತ್ರ ಪ್ರಶ್ನೆಗಳನ್ನು ಕೇಳಿದರು.

ಅನಂತರ ಅಸಿಸ್ಟೆಂಟ್, ಅವರ ಶಾಸ್ತ್ರೀರ ಔಷಧಾಲಯದ ವಿಳಾಸವನ್ನೂ ಒಂದು ನಂಬರನ್ನೂ ಗೋಪಾಲನಿಗೆ ಕೊಟ್ಟು—"ನೀವು ಈ ನಂಬರನ್ನು ಗುರುತು ಮಾಡಿ, ರೂಪಾ, ಹತ್ತು ಈ ವಿಳಾಸಕ್ಕೆ ಕಳುಹಿಸಿರಿ. ಹದಿನೈದು ರೂಪಾಯಿಗೆ ನಿಮಗೊಂದು ವಿ. ಪಿ. ಯಾಗಿ ಔಷಧಿ ಬರುತ್ತೆ. ಅನುಪಾನ ವಿಧಿ ಕೂಡಾ ಅದರೊಂದಿಗಿರುತ್ತೆ" ಎಂದ.

"ಅಯ್ಯಯ್ಯೋ! ಔಷಧಕ್ಕೆ ಅಷ್ಟು ಬೆಲೆಯೆ?—"

"ಹೌದು. ಬಹಳ ಸುಲಭ ಬೆಲೆಯ ಶ್ರೇಷ್ಠವಾದ ಔಷಧಿ ನಮ್ಮದು"

"ಹೀಗೆಷ್ಟು ತಿಂಗಳು ಔಷಧ?"

"ನಾಲ್ಕು ತಿಂಗಳು ತೆಗೆದುಕೊಳ್ಳಬೇಕು"

"ಖಂಡಿತ ಗುಣವಾದೀತೆ?"

"ನಮ್ಮ ಅನುಭವಪ್ರಕಾರ ಗುಣವಾಗಲೇ ಬೇಕು. ಗುಣವಾಗದಿದ್ದರೆ ಮೇಲೊಂದು ನಾಲ್ಕು ತಿಂಗಳು ಔಷಧ ಸೇವನೆ ಮಾಡಿದರೆ ಸಾಕು"

"ಸರಿ, ತುಂಬಾ ಥ್ಯಾಂಕ್ಸ್"

ಗೋಪಾಲ ಮಕ್ಕಳನ್ನು ಕರೆದುಕೊಂಡು ಅಲ್ಲಿಂದ ಹೊರಟನು.

o o o o

ಆ ಮೇಲೆ ಶುರುವಾಯಿತು ಗೋಪಾಲನ ಮಾನಸಿಕ ಮಥನ. ಆ ಔಷಧ ತೆಗೆದುಕೊಳ್ಳಬೇಕೇ ಬೇಡವೆ? "ಬೇಡವೇ ಬೇಡಪ್ಪ. ಅವರು ಕೇವಲ ರೂಪಾಯಿ ಸುಲಿಯುವ ವೈದ್ಯರು" ಎಂದು ಉಷಾ ಖಂಡಿತವಾಗಿ ಹೇಳಿಬಿಟ್ಟಳು.

ಅಮೆರಿಕೆಯ ಅತ್ಯುತ್ತಮ ಮಹಿಳಾ ಕ್ರೀಡಾಪಟು ಅಲ್ತಿಯಾ ಗಿಬ್ಸನರನ್ನು ಗೌರವಿಸುತ್ತಿರುವುದನ್ನಿಲ್ಲಿ ಕಾಣಬಹುದು.

"ಹಾಗನ್ನಬಾರದು ಒಮ್ಮೆಗೇ. ಯಾರಿಂದಲೂ ಗುಣವಾಗದ ಹುಟ್ಟು ರೋಗಗಳಿಗಾಗಿ ಚಿಕಿತ್ಸೆಮಾಡುವ ಪ್ರತ್ಯೇಕ ವೈದ್ಯರಲ್ಲವೆ? ಊರೂರಿಗೆ ತಿರುಗಾಡಬೇಕಾದರೆ ಅವರಿಗೆ ಖರ್ಚಿಲ್ಲವೆ? ಅಂತೆಯೇ ಹಣದ ವಿಷಯದಲ್ಲಿ ಅಷ್ಟು ಖಂಡಿತರಾಗಿದ್ದಾರೆ. ಇಕೋ ನೋಡು, ಅವರಿಗೆ ಎಷ್ಟೊಂದು ಮಂದಿ ಪ್ರಶಂಸಾ ಪತ್ರ ಬರೆದಿದ್ದಾರೆ" ಎಂದ ಗೋಪಾಲ.

ಪ್ರಶಂಸಾ ಪತ್ರ ಬರೆದವರಲ್ಲಿ ಈ ಪ್ರಾಂತದವರು ಯಾರಾದರೂ ಇದ್ದಾರೋ ಎಂದು ಅವರ ಕ್ಯಾಟಲಾಗನ್ನು ಹುಡುಕಿದನು ಗೋಪಾಲ. ಅದೇ ನಗರದ ಒಂದು ವಿಳಾಸವು ಅವನ ಕಣ್ ಸೆಳೆಯಿತು. ಎಸ್. ನಾರಾಯಣ ಮೇನನ್, ಬಿ. ಎಸ್‌ಸಿ. ೩೦೪. ನಾರಾಯಣ ಪಿಳ್ಳೇ ಸ್ಟ್ರೀಟ್, ಭೀಮರಾಜ ನಗರಮ್, ಎಂಬವರು ಅವರ ಮಗಳಿಗೆ ಕಿವುಡು ಗುಣವಾದುದಕ್ಕೆ ಹೊಗಳಿ ಬರೆದಿದ್ದರು.

ಗೋಪಾಲ ಕೂಡಲೇ ಬಸ್ಸು ಹತ್ತಿ ಭೀಮರಾಜಪುರದ ಕಡೆಗೆ ಧಾವಿಸಿದನು. ಅಲ್ಲಿ ನಾರಾಯಣ ಪಿಳ್ಳೇ ಸ್ಟ್ರೀಟನಲ್ಲಿ ಹುಡುಕಿದಾಗ ಆ ವಿಳಾಸದಾರರೇ ಈಗಲೂ ಇಲ್ಲ ಹಿಂದೆಯೂ ಇರಲಿಲ್ಲ ಎಂಬಂಶ ತಿಳಿದು ಬಂತು. ಇಷ್ಟೆಲ್ಲ ತಿಳಿದುಕೊಂಡು ಬರುವಾಗ ಗೋಪಾಲನಿಗೆ ರೂಪಾಯಿ ನಾಲ್ಕು ಪುಡಿ.

"........ಮಣಿಮಂತ್ರಾದ್ಯೌಷಧಂ ಗುಣದ ಭ್ರಾಂತಿಯು ತೋರ್ಪುದೈ ಹರಹರಾ ಶ್ರೀ ಚೆನ್ನ ಸೋಮೇಶ್ವರಾ' ಎಂಬ ಕವಿವಾಕ್ಯವನ್ನು ಗಟ್ಟಿಯಾಗಿ ಹೇಳಿಕೊಳ್ಳುತ್ತಾ ಗೋಪಾಲ ಮನೆ ಸೇರಿದ.

ಈಗವನ ಹೃದಯ ತುಂಬ ಸಮಾಧಾನ ಪಡೆಯಿತು. ಈ ಉಗ್ಗು ತನ್ನ ಮನೆತನಕ್ಕೆ-ದೇವರು ಕೊಟ್ಟ ವರ, ಅಥವಾ ಶಾಪ. ದೇವರು ಕೊಟ್ಟದ್ದು ಸಿಹಿಯೋ ಕಹಿಯೋ ಅನುಭವಿಸಿಯೇ ತೀರಬೇಕು. ಪ್ರತಿಭಟಿಸಲೆತ್ನಿಸಿದರೆ, ಈ ಮನೋಭಾವವನ್ನೆ ಹೊಂಚುಹಾಕಿಕೊಳ್ಳುವವರಿಂದ ಇಂಥ ಪೆಟ್ಟು ಬೀಳುವುದು ನಿಜವೆಂದು ಗೋಪಾಲನಿಗೆ ಗೊತ್ತಾಯಿತು.

ಮೂರು ತಿಂಗಳ ಮೇಲೆ ಶಾಸ್ತ್ರೀರದ ಆ ಔಷಧಾಲಯದಿಂದ ಅವನಿಗೊಂದು ಪತ್ರ ಬಂತು.

"ನೀವು ನಿಮ್ಮ ಮಗಳನ್ನು ಪರೀಕ್ಷೆ ಮಾಡಿಸಿ ಔಷಧ ಮಾಡಿಕೊಳ್ಳಲು ಹಿಂಜರಿದುದನ್ನು ನೋಡಿ ವ್ಯಸನಪಡುತ್ತೇವೆ. ನಮ್ಮ ಅಮೋಘವಾದ ಔಷಧಕ್ಕೆನಾವಿಟ್ಟ ಬೆಲೆ ತೀರ ಕಡಿಮೆ. ನಿಮ್ಮಂತಹರ ಸೇವೆಯೇ ನಮಗೆ ಮುಖ್ಯವಲ್ಲದೆ ಹಣವಲ್ಲ. ನೀವು ಹತ್ತೇ ರೂಪಾಯಿಯನ್ನು ಅಡ್ವಾನ್ಸು ಕಳಿಸಿದರೆ ನೂರು ರೂಪಾಯಿ ಔಷಧವು ಬರೇ ಇಪ್ಪತ್ತೈದೇ ರೂಪಾಯಿಗೆ ನಿಮಗೆ ರವಾನಿಸುತ್ತೇವೆ. ಇಷ್ಟೊಂದಕ್ಕೆ ಅಧೈರ್ಯಪಟ್ಟು ನಿಮ್ಮ ವಂಶಪರಂಪರೆಯ ರೋಗವನ್ನು ಹಾಗೇ ಉಳಿಸಿಕೊಳ್ಳಬೇಡಿ

ನಿಮ್ಮ ಆರ್ಡರನ್ನೆ ಇದಿರು ನೋಡುತ್ತ
ನಿಮ್ಮ ಸೇವೆಗೇ ಬದ್ಧಕಂಕಣರಾಗಿರುವ-
—ಆಯುರ್ವೇದ ಪಾರಾವಾರ ಪಾರೀಣ ಭಿಷಗ್ರತ್ನ,
ಓಂ ನಮೋ ಗೋವಿಂದ ಸಾಹೇ, ಬಿ. ಎ.

—"ನವಗಿರಿ ನಂದ".

ಧೂಮ್ರಪಾನದ ಸಹಜವಾದ
ಆನಂದಕ್ಕಾಗಿ
ಸೇದಿರಿ
ಎಸ್. ಆರ್
ಬೀಡಿಗಳನ್ನು
SR
REGD.
ಎಲ್ಲಾಕಡೆಗಳಲ್ಲಿಯೂ
ಮಾರಲ್ಪಡುತ್ತವೆ
S.R. BEEDI WORKS
UDIPI, S. K.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

NAVAYUGA
REGD. NO. M. 3619

UDIPI, THURSDAY
5-3-1959

LICENSE NO. 31
Licensed to Post without Prepayment

ಜೀವ ವಿಮೆ

(೧ನೇ ಪುಟದಿಂದ)

ಕಷ್ಟ ಪ್ರಚಾರ ಕಾರ್ಯವನ್ನು ಕೈಗೊಂಡು, ಸುಮಾರು ಒಂದು ಕೋಟಿ ರೂಪಾಯಿಗಳ ವ್ಯವಹಾರವನ್ನು ಪೂರ್ಣಮಾಡಲು ಸಾಧ್ಯವೆನಿಸಿದೆ. ೧೯೫೯ರಲ್ಲಿ ರಾಜಸ್ಥಾನದಲ್ಲಿ ಇನ್ನೂ ಹೆಚ್ಚಿನ ಪ್ರದೇಶಗಳನ್ನು ಈ ಯೋಜನೆಗೆ ಒಳಪಡಿಸಿಕೊಳ್ಳುವುದಲ್ಲದೇ ಈ ದಿಸೆಯಲ್ಲಿ ಸಹಾಯ ನೀಡಲು ಬಿಹಾರ ಕೇರಳ ಮೊದಲಾದ ರಾಜ್ಯ ಸರಕಾರಗಳು ಮುಂದೆ ಬಂದಿವೆ.

ಮೂರನೆಯದಾಗಿ, ಎಲ್ಲ ವಲಯಗಳ ಪ್ರಧಾನ ಕಾರ್ಯಾಲಯಗಳಲ್ಲಿ ನೌಕರರನ್ನು ಸೇವೆ ಮತ್ತು ಮಾರಾಟಗಳಲ್ಲಿ ತರಬೇತಿ ಮಾಡಿಸಲು ತಕ್ಕ ಏರ್ಪಾಡು ಮಾಡಲಾಗುವುದು. ಆರಿಸಿದ ವಲಯ ಕಾರ್ಯಾಲಯಗಳಲ್ಲಿ ಇತರ ವಿಷಯಗಳ ಬಗ್ಗೆಯೂ ತರಬೇತಿ ಕೇಂದ್ರಗಳನ್ನು ತೆಗೆಯಲು ಯೋಜನೆಗಳನ್ನು ತಯಾರಿಸಲಾಗುವುದು.

ವೇತನಾ ಉಳಿತಾಯ ಯೋಜನೆಯೇ ಮೊದಲಾದ ವಿಮಾ ಯೋಜನೆಗಳನ್ನು ಇನ್ನೂ ಜನಪ್ರಿಯಗೊಳಿಸಲು ಕಾರ್ಯಕ್ರಮಗಳನ್ನು ಮುಂದುವರಿಸಲಾಗುತ್ತಿದೆ. ಹಲವಾರು ಉದ್ದಿಮೆಗಳ ಮಾಲಿಕರು ಇದಕ್ಕೆ ಮುಂದೆಬಂದಿದ್ದು ತಮ್ಮ ನೌಕರರ ವೇತನದಿಂದ ಅವರ ವಿಮಾ ಕಂತನ್ನು ತೆರಲು ಸಮ್ಮತಿಯಿತ್ತಿದ್ದಾರೆ. ಈ ಬಗ್ಗೆ ವೇತನ ತೆರುವ ಬಗ್ಗೆ ಶಾಸನ ಹಾಗೂ ಕನಿಷ್ಠ ವೇತನ ಮಸೂದೆಗಳು ಸಹಾಯವಾಗಿವೆ

ವಿವಿಧ ವಲಯಗಳಲ್ಲಿ ದಕ್ಷಿಣ ವಲಯವು ೧೯೫೮ರಲ್ಲಿ ೪೦ ಕೋಟಿ ರೂಪಾಯಿಗಳ ವ್ಯವಹಾರವನ್ನು ಮಾಡಿದ್ದು, ಇದು ಉಳಿದ ಎಲ್ಲ ವಲಯಗಳಿಗಿಂತಲೂ ಅಧಿಕ ವ್ಯವಹಾರ ಮಾಡಿದ ಕೀರ್ತಿಗೆ ಭಾಜನವಾಗಿದೆ ಅಲ್ಲದೆ ಮಾರಿದ ಪಾಲಿಸಿಗಳ ಸಂಖ್ಯೆಯೂ ಹೆಚ್ಚಾಗಿದ್ದು, ಪ್ರತಿ ಪಾಲಿಸಿಯು ಸರಾಸರಿ ೩,೭೦೦ ರೂಪಾಯಿಗಳದ್ದಾಗಿದೆ, ಕಳೆದ, ೫೭ಕ್ಕಿಂತ ೫೮ರಲ್ಲಿ ಮಾಡಿದ ಈ ವ್ಯವಹಾರವು ಸೇಕಡಾ ೩೩ ಹೆಚ್ಚಳವನ್ನು ಸೂಚಿಸುತ್ತದೆ.

ರಾಷ್ಟ್ರೀಯ ಉಳಿತಾಯ ಮಟ್ಟವನ್ನು ಜೀವ ವಿಮೆಯ ಮೂಲಕ ಏರಿಸುವ ಸಲುವಾಗಿ ಕಾರ್ಪೋರೇಶನು ಒಂದು ಐದು ವರ್ಷಗಳ ಯೋಜನೆಯನ್ನು ರೂಪಿಸಬೇಕಾಗಿದೆ ಈ ಯೋಜನೆಯು ಈಗ ರೂಪುಗೊಂಡಿಲ್ಲ ಮತ್ತು ಅಂತಿಮವಾಗಿ ನಿರ್ದೇಶವಾಗಿಲ್ಲ ಆದರೂ ಈ ಯೋಜನೆಯಂತೆ, ಯೋಜನೆಯ ಅಂತಿಮ ವರ್ಷದಲ್ಲಿ ರೂ ೧,೦೦೦ ಕೋಟಿಗಳ ವ್ಯವಹಾರವನ್ನು ಪೂರ್ಣಮಾಡುವ ಗುರಿಯನ್ನಿಟ್ಟುಕೊಳ್ಳಬೇಕಾಗಿದೆ. ಅಧಿಕ ಸಂಖ್ಯೆಯ ಶಾಖೆ ಮತ್ತು ಉಪಕಾರ್ಯಾಲಯಗಳನ್ನು ತೆರೆಯುವ ಅವಕಾಶವೂ ಇದೆ. ಇತ್ಯಧಿಕ ಸೇವೆಯನ್ನು ಸಲ್ಲಿಸಲು, ಅವಶ್ಯವಿದ್ದೆಡೆ ನೂತನ ವಿಭಾಗ ಕಾರ್ಯಾಲಯಗಳನ್ನೂ ತೆರೆಯಬಹುದು. ದೇಶದ ಪ್ರತಿಯೊಬ್ಬನಿಗೂ ಜೀವವಿಮೆಯ ಫಲವನ್ನು ಪಡೆಯುವಂತೆ ಮಾಡಬೇಕೆಂಬ ಕಾರ್ಪೊರೇಶನಿನ ಚರಮ ಧ್ಯೇಯವು ಆದಷ್ಟು ಬೇಗನೇ ಪೂರ್ಣವಾಗುವುದೆಂಬು ನಂಬಬಹುದು.

ಕ್ರೀಡಾಂಗಣ

ವಿಚಿತ್ರ ರೀತಿಯಿಂದ ಆರಂಭವಾದ ಕಾಲ್ಚೆಂಡು

ಇದರ ಜನ್ಮಕಥೆಗಳು ಜನಪದ ಕಥೆಗಳಿಗಿಂತಲೂ ವಿಚಿತ್ರವಾಗಿವೆ

ಕಾಲ್ಚೆಂಡಾಟ ಇಲ್ಲವೇ 'ಫುಟ ಬಾಲ್' ಆಟವನ್ನು ಆಡದೆ ಇರುವವರು ಕೆಲವರಿರಬಹುದಾದರೂ ನೋಡದಿರುವವರು ಮಾತ್ರ ಇಲ್ಲವೇ ಇಲ್ಲವೆನ್ನಬಹುದು 'ಫೂಟ್ ಬಾಲ್" ಆಟವು ಎರಡು ದಳಗಳ ನಡುವೆ ನಡೆಯುವುದೆಂದು ನಾವು ತಿಳಿದಿದ್ದೇವೆ. ಪ್ರತಿ ಪಂಗಡದಲ್ಲಿಯೂ ೧೧ ಜನರಿರುತ್ತಾರೆ. ಇದಕ್ಕೆ ಮೈದಾನು ಸಮತಟ್ಟಾಗಿದ್ದು ಒಂದು ನೂರು ಗಜ ಉದ್ದ ಮತ್ತು ೫೩ ೩ ಗಜಗಳಷ್ಟು ಅಗಲವಿರಬೇಕು.

"ಫುಟ್ ಬಾಲ್" ಆಟವು ಮೊತ್ತ ಮೊದಲು ಯಾವ ದೇಶದಲ್ಲಿ ಪ್ರಾರಂಭವಾಯಿತು ಎಂಬ ವಿಷಯದಲ್ಲಿ ವಿವಿಧ ದೇಶಗಳ ತಜ್ಞರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರು ಇಂಗ್ಲೆಂಡಿನಲ್ಲಿ ಹುಟ್ಟಿತೆಂದು ಹೇಳಿದರೆ, ಮತ್ತು ಕೆಲವರು ಚೀನದಲ್ಲಿ ಈ ಆಟ ಜನ್ಮಪಡೆಯಿತೆಂದು ಅನ್ನುತ್ತಾರೆ. ಚೀನದೇಶದಲ್ಲಿ ಒರ್ವ ರಾಜನು ಕಬ್ಬಿಣದ ಚೆಂಡನ್ನು ಒದೆದ ದಿನದಿಂದ ಈ ಕಾಲ್ಚೆಂಡಾಟವು ಪ್ರಾರಂಭವಾಯಿತೆಂದು ಇವರ ಅಭಿಪ್ರಾಯ.

ರೋಮದಲ್ಲಿ ಈ ಆಟವು ಮೊದಲಾಯಿತೆಂದು ಇತಿಹಾಸ ಹೇಳುತ್ತದೆ. ರೋಮದ ಪ್ರಭುವು ರಣಗಳಲ್ಲಿ ಜಯಶೀಲನಾದಾಗ, ಆತನು ತನ್ನ ಶತ್ರುಗಳ ರುಂಡಗಳನ್ನು ಕಾಲಿನಿಂದ ಚೆಲ್ಲಾಡುತ್ತ ಹಸಿದಿರುವ ತೋಳಗಳ ಬಳಿಗೆ ಕೊಂಡುಹೋಗುತಿದ್ದನು ಇದೇ ಕಾಲ್ಚೆಂಡಾಟದ ಮೂಲವೆಂದಿವರೆನ್ನುತ್ತಾರೆ.

ಕ್ರಿಸ್ತನ ಕಾಲಕ್ಕಿಂತ ಸುಮಾರು ೫೦೦ ವರ್ಷಗಳಿಗೆ ಪೂರ್ವದಿಂದಲೇ ಈ ಆಟವನ್ನು ಆಡುತಿದ್ದರೆಂದು ತಿಳಿಯುತ್ತದೆ. ಸ್ಪಾರ್ಟದ ಯುನಾನಿಗಳು "ಹಾರ ಪಾಸ್ಟನ್" ಎಂದು ಈ ಆಟವನ್ನು ಕರೆಯುತಿದ್ದರು ಈ ಆಟದಲ್ಲಿ ಎರಡು ಪಂಗಡಗಳು ಇರುವುವಾದರೂ ಆಟಗಾರರ ಸಂಖ್ಯೆಯು ಮಾತ್ರ ಅನಿಶ್ಚಿತವಾಗಿತ್ತು. ಆದರೆ, ಈ ಸಂಖ್ಯೆಯನ್ನು ಆಯಾ ಪಂಗಡಗಳ ಮುಖಂಡರು ನಿರ್ಣಯಿಸಿಕೊಳ್ಳಬೇಕು.

ಇದೇ ಆಟವನ್ನು ಹೋಲುವ ಒಂದು ಆಟವನ್ನು ಚೆಸ್ಟರ್ ಮತ್ತು ಡರ್ಬಿ ನಗರಗಳಲ್ಲಿ ಕ್ರಿ. ಶ. ೨೧೭ರಲ್ಲಿ ಆಡುತಿದ್ದರೆಂದು ತಿಳಿಯುತ್ತದೆ. ರೋಮನರು ಈ ಕ್ರೀಡೆಯನ್ನು ಕೆಲವಾರು ಶತಕಗಳ ನಂತರ ಅರಿತುಕೊಂಡರು. ಯುನಾನಿ ಮತ್ತು ರೋಮನರು ತಂತಮ್ಮೊಳಗೆ ಹೆಚ್ಚಾಗಿ ಈ ಆಟವನ್ನಾಡಿಕೊಳ್ಳತೊಡಗಿದರು. ರೋಮನ್ ಅರಸರು ಇದನ್ನು ೧೪ನೆಯ ಶತಮಾನಗಳ ವರೆಗೆ ಪ್ರೋತ್ಸಾಹಿಸುತಿದ್ದರು

ಇನ್ನು ಕೆಲವರ ಅಭಿಪ್ರಾಯದಂತೆ "ಫುಟ್ ಬಾಲ್" ಇಂಗ್ಲೆಂಡಿನಲ್ಲಿ ಜನ್ಮತಾಳಿತು ಡೇನರು ಕೆಲವು ಸಮಯದ ವರೆಗೆ ಇಂಗ್ಲೆಂಡಿನ ಮೇಲೆ ತಮ್ಮ ಅಧಿಕಾರವನ್ನು ನಡೆಯಿಸಿದ್ದರು. ಅವರಲ್ಲಿಂದ ಕಾಲ್ಕಿತ್ತ ನಂತರ ಕೆಲವು ಆಂಗ್ಲ ಮಜೂರರು ಯುದ್ಧರಂಗವನ್ನು ಅಗೆಯುತಿದ್ದರು. ಅಗೆಯುತ್ತ ಹೋದಂತೆ, ಅವರಿಗೆ ಒಂದು ಕಪಾಲ ದೊರಕಿತು ಆ ಮಜೂರನು ಅದನ್ನು ಡೇನ ಸೈನಿಕನ ತಲೆಬುರುಡೆಯೆಂದು ತಿಳಿದು, ಅದನ್ನು ಕಾಲಿನಿಂದ ಒದೆಯತೊಡಗಿದರೆ, ಅಂದಿನಿಂದ ಈ ಆಟವು ಮೊದಲುಗೊಂಡಿತು ಎನ್ನುತ್ತಾರೆ, ಇವರು.

ಇವೆಲ್ಲ ಕಥೆಗಳನ್ನು ನಂಬುವುದು ಕಷ್ಟ. ಮಾನವನ ತಲೆ ಬುರುಡೆ, ರುಂಡಗಳು ಚೆಂಡನ್ನು ಹೋಲುವುದರಿಂದ ಇಂತಹ ಆಖ್ಯಾಯಿಕೆಗಳು ಹುಟ್ಟಿಕೊಂಡಿರಬಹುದು. ಆದರೆ, ಲೋಹದ ಚೆಂಡನ್ನು ಮಾಡಿ ಕಾಲಿನಿಂದ ತುಳಿಯತೊಡಗಿದ ಚೀನಾದೇಶದ ಕಥೆಯು ಉಳಿದುವಕ್ಕಿಂತ ಸರಿಯೆನ್ನಬಹುದು ಲೋಹದ ಚೆಂಡನ್ನು ತಯಾರಿಸುವುದೆಂದರೆ, ಅದೊಂದು ಸಂಶೋಧನೆ ಎನ್ನಬೇಕು. ಅದನ್ನು ಮಾಡಿದವನೇ ಇಂದಿನ ಕಾಲ್ಚೆಂಡಿನ ಮೂಲಕರ್ತೃ ಎಂದು ಏಕೆ ತಿಳಿಯಬಾರದು?

ವಿಜಯಿಗಳಾದ ರೋಮನರು ಬ್ರಿಟನ್ನಿನಲ್ಲಿ ಕಾಲ್ಚೆಂಡಾಟದ ಪ್ರಚಾರ ಮಾಡಿದರೆನ್ನುವುದನ್ನು ನಿರ್ವಿವಾದವಾಗಿ ಒಪ್ಪಬಹುದು. ಮುಂದಕ್ಕೆ ರೋಮನರು ಕಾಲ್ಕಿತ್ತರೂ ಕಾಲ್ಚೆಂಡು ಭದ್ರವಾಗಿ ನೆಲೆಯೂರಿತು ಎರಡನೆಯ ಹೆನ್ರಿಯು ತನ್ನ ಆಡಳಿತಾವಧಿಯಲ್ಲಿ ಈ ಆಟವನ್ನು ದನುರ್ವಿದ್ಯೆಗೆ ಅಪಮಾನಕಾರಕವೆಂದು ತಿಳಿದು, ತಡೆಹಿಡಿದನು. ಆದರೆ, ಬಾಣದ ಸ್ಥಾನವನ್ನು ತೋಪುಗಳು ಪಡೆದ ಮೇಲೆ, ಮೊದಲನೆಯ ಜೇಮ್ಸನ ಸಮಯದಲ್ಲಿ, ಎಂದರೆ, ೧೬೦೩ರಲ್ಲಿ ಪುನಃ ಈ ಆಟವು ಪ್ರಾರಂಭವಾಯಿತು.

ಇದರ ನಂತರ ರಗ್ಬೀಯಲ್ಲಿ ವಿದ್ಯಾರ್ಥಿಯಾಗಿದ್ದ ವಿಲಿಯಂ ವಿಲಿಮನ್ನು ೧೮೨೩ರಲ್ಲಿ 'ರಗ್ಬೀ ಫುಟ್ ಬಾಲ್" ಎಂಬುದನ್ನು ಪ್ರಾರಂಭಿಸಿದನು ಎಲ್ಲೆಲ್ಲಿಯೂ ಇದು ಜನಪ್ರಿಯತೆಯನ್ನು ಗಳಿಸಿದುದರಿಂದ, ಅದಕ್ಕೊಂದು ನಿಯಮ ಮಾಡುವುದು ಅವಶ್ಯಕವೆಂದು ಕಂಡುಬಂತು. ಬ್ರಿಟನಿನ ನಾಲ್ಕು ಭಾಗಗಳಲ್ಲಿ ನಾಲ್ಕು ಫುಟ್ ಬಾಲ್ ಯೂನಿಯನ್ನುಗಳು ಸ್ಥಾಪಿತವಾದುವು.

೧೮೬೩ರಲ್ಲಿ ಇಂಗ್ಲೆಂಡಿನಲ್ಲಿ "ಫುಟ್ ಬಾಲ್ ಎಸೋಸಿಯೇಶನಾ" ರಚನೆಯಾಯಿತು. ಇದರಲ್ಲಿ ಆ ಕಾಲದ ಇಂಗ್ಲೆಂಡಿನ ಎಲ್ಲ "ಟೀಮು"ಗಳೂ ಸಮ್ಮಿಳಿತವಾದುವು ಒಂದು 'ಕಪ್'ನ್ನು ಕೊಂಡುಕೊಂಡು, ಅದನ್ನು ಗೆಲ್ಲುವುದಕ್ಕೆ ಮೇಲಾಟವು ೧೮೭೧—೭೨ರಲ್ಲಿ ಮೊದಲಾಯಿತು.

ಆಂಗ್ಲೇಯರೊಡನೆ 'ಫುಟ್ ಬಾಲ್" ಕೂಡಾ ಭಾರತಕ್ಕೆ ಆಗಮಿಸಿತು ದೊಡ್ಡ ದೊಡ್ಡ ಪಟ್ಟಣಗಳಾದ ಬೊಂಬಾಯಿ, ಕಲ್ಕತ್ತಾ, ಕರಾಚಿ, ಸಿಮ್ಲಾ ಮೊದಲಾದೆಡೆಗಳಲ್ಲಿ ೧೭ನೇ ಶತಮಾನೋತ್ತರಾರ್ಧದಲ್ಲಿ ಇದು ಆಡಲ್ಪಡುತಿತ್ತು. ಮೊತ್ತ ಮೊದಲಿನ ಮೇಲಾಟ ಬೊಂಬಾಯಿಯ ಸೇನೆ ಮತ್ತಿತರ ನಾಗರಿಕರ ನಡುವೆ ೧೮೩೧ರಲ್ಲಿ ನಡೆಯಿತು ಇದಕ್ಕೂ ಮೊದಲು ಕಲಕತ್ತೆಯಲ್ಲಿ ಇದನ್ನು ಆಡುತಿದ್ದರು

೧೯ನೆಯ ಶತಮಾನದಿಂದ ಪ್ರಯಾಗವನ್ನು 'ಫುಟ್ ಬಾಲ್'ನ ಪ್ರಮುಖ ಕೇಂದ್ರವನ್ನಾಗಿ ತಿಳಿಯಲಾಯಿತು, ಅಲ್ಲಿಗೆ ದೇಶದ ಬೇರೆ ಬೇರೆ ಟೀಮುಗಳು ಬರತೊಡಗಿದುವು ವಾಸ್ತವಿಕವಾಗಿ ಈ ಆಟದ ಉದಯ ಹಾಗೂ ವಿಕಾಸ ಕಲಕತ್ತೆಯಲ್ಲಾಯಿತು. ಮೊದಲಿಗೆ ಡಾಲ್ ಹೌಸ್ ಕ್ಲಬ್ ಸ್ಥಾಪಿತವಾಗಿತ್ತು. ಭಾರತೀಯ ಸಿವಿಲ್ ಸರ್ವಿಸ್‌ನ ಅಧಿಕಾರಿಗಳ ಪ್ರೇರಣೆಯಿಂದ ಕಲಕತ್ತೆಯ ವ್ಯಾಪಾರಿಗಳು ೧೮೭೮ರಲ್ಲಿ ದಿ ಟ್ರೇಡರ್ಸ ಕ್ಲಬ್ಬನ್ನು ನಿರ್ಮಿಸಿಕೊಂಡರು. ೧೮೭೨ರಲ್ಲಿ ಯುರೋಪಿಯನರ ಕಲಕತ್ತಾ ಫುಟ್ ಬಾಲ್ ಕ್ಲಬ್ ನಿರ್ಮಾಣಗೊಂಡಿತು, ೧೮೮೮ರಲ್ಲಿ ಎಂಜಲ್ಸ್ ಕ್ಲಬ್ ರೂಪುಗೊಂಡಿತು

೧೮೮೩—೮೮ರಲ್ಲಿ ಈ ಆಟವು ಕಲಕತ್ತೆಯ ಕಾಲೇಜಿನ ವಿದ್ಯಾರ್ಥಿಗಳಲ್ಲಿಗೂ ಮುಟ್ಟಿತು ಇವರ ಪ್ರಯಾಸದಿಂದ ವೆಲ್ಲಿಂಗ್ ಟನ್ ಕ್ಲಬ್ ಗೆ ಪಂಚಾಂಗ ಬಿದ್ದಿತು. ಆ ಮೇಲೆ, ಕೇನಾಲ್ ಕ್ಲಬ್, ಶೋಭಾ ಬಜಾರ್ ಎಸೋಸಿಯೇಶನ್, ಹಾಯನಾ, ಮೋಹನ್ ಬಗಾನ್ ಕುಂಮಾರ ಟೋಲಿ, ಆರ್ಯನ್ಸ್ ಮೊದಲಾದುವುಗಳು ರಚಿತವಾದುವು

೧೮೯೩ರಲ್ಲಿ ಭಾರತೀಯ ಫುಟ್ ಬಾಲ್ ಸಂಘವು ರೂಪಿತವಾಯಿತು. ಟ್ರೇಡರ್ಸ್ ಕ್ಲಬ್ ನ ರೀತಿಯಲ್ಲಿಯೇ ಇದರಿಂದ ಆರು ತಿಂಗಳು ಮೊದಲು 'ಡುರಂಡ ಕಪ್' ಎಂಬುದು ಶಾಶ್ವತವಾಯಿತು. ಆದರೆ, ಇದರ ಸ್ಪರ್ಧೆಗಳಲ್ಲಿ ಕೇವಲ ಸೈನಿಕರು ಭಾಗವಹಿಸುತಿದ್ದರು. ೧೮೯೩ರಲ್ಲಿ ಭಾರತೀಯ ಫುಟ್ ಬಾಲ್ ಸಂಘದ ಗುರಾಣಿ ಶಾಶ್ವತಗೊಂಡಮೇಲೆ, ಟ್ರೇಡರ್ಸ್ ಕಪ್ಪಿನ ಮಹತ್ವ ಕಡಿಮೆಯಾಗತೊಡಗಿತು.

ಆಂಧ್ರ ಪ್ರಾಂತ್ಯದಲ್ಲಿ ಇನ್ನೊಂದು ಶಾಖೆ

ನಮ್ಮ **117**ನೇ ಶಾಖೆಯನ್ನು

16/7748 ತಿಲಕ್ ಬೀದಿ
(TILAK STREET)
ಕಾಕಿನಾಡದಲ್ಲಿ

ತೆರೆಯಲಾಗುವುದು.
— ಇದು ಆಂಧ್ರ ಪ್ರಾಂತ್ಯದಲ್ಲಿ ನಮ್ಮ
16ನೇ ಶಾಖೆಯಾಗಿರುವುದು —

**ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್
ಸಿಂಡಿಕೇಟ್ ಲಿ., ಉಡುಪಿ, ದ. ಕ.**
THE CANARA INDUSTRIAL & BANKING
SYNDICATE LTD, UDIPI.

Edited, Printed & Published by K. H. Shetty, at the Navayuga Press, Udipi, S. India,

ನವಯುಗ

ವಾ ಚಂದಾ ರೂ 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ.ಪೈಸೆ

ವರುಷ ೩೮. ವಾರ ೨೬ 12-3-1959 Vol 38 No. 26.

ನುಡಿಮುತ್ತು

ಸರಕಾರಿ ಒಕ್ಕಲತನ

* *

ಪಾಕ್ ಶಸ್ತ್ರಾಸ್ತ್ರ ಒಪ್ಪಂದ

* *

ವರದಕ್ಷಿಣಾ ನಿಷೇಧ

* *

ಪಂಡಿತ ನೆಹರೂ ಭಾರತದ ಅವಿಚಲ ಶಕ್ತಿಯಿರುವಂತೆಯೇ ಅವರ ಮನಸ್ಸೂ ಅವಿಚಲವಾದುದು. ಒಂದು ಬಾರಿ ಅವರಿಗೆ ಒಂದು ವಿಷಯ ಒಪ್ಪಿಗೆಯಾಯಿತೆಂದರೆ, ಅದಕ್ಕೆ ದೃಢವಾಗಿ ಅಂಟಿಕೊಂಡಿರುವ ಅಭ್ಯಾಸ ಅವರಿಗಿದೆ ಇಂತಹುದೇ ಪ್ರಸಂಗ ಈಗ ಸಹಕಾರಿ ವ್ಯವಸಾಯದ ಬಗ್ಗೆಯೂ ನಡೆದಿದೆ.

ನಾಗಪುರ ಕಾಂಗ್ರೆಸ್ಸಿನಲ್ಲಿ ಸರಕಾರಿ ವ್ಯವಸಾಯ ಪದ್ಧತಿಯನ್ನು ಪ್ರೋತ್ಸಾಹಿಸಿ ತನ್ಮೂಲಕ ಅಧಿಕ ಆಹಾರೋತ್ಪಾದನೆ ಮಾಡುವುದು ಹಾಗೂ ಭೂಸುಧಾರಣೆಯ ಸಂಬಂಧದ ವಿಧೇಯಕವನ್ನು ರಚಿಸುವುದೆಂದು ಗೊತ್ತಾಗಿದೆಯಷ್ಟೆ? ಹಿಡುವಳಿಯ ಮೇಲೆ ಮಿತಿ ಹಾಕುವುದರಿಂದಾಗಲೀ ಸಹಕಾರಿ ವ್ಯವಸಾಯದಿಂದಾಗಲೀ ಉದ್ದೇಶವು ಈಡೇರಲಾರದೆಂದು ಅಭಿಪ್ರಾಯಗಳು ಅಲ್ಲಲ್ಲಿ ವ್ಯಕ್ತವಾಗುತ್ತಾ ಇವೆ ಉತ್ತರ ಪ್ರದೇಶದ ಮಾಜಿ ರಾಜ್ಯಪಾಲ ಶ್ರೀ ಕೆ. ಎಂ. ಮುನ್ಶಿ ಹಾಗೂ ಭಾರತೀಯ ಮಾಜಿ ಗವರ್ನರ ಜನರಲ್ ಚಕ್ರವರ್ತಿ ರಾಜಗೋಪಾಲಾಚಾರಿ—ಈ ಪಟ್ಟಿಯಲ್ಲಿ ಅಗ್ರಗಣ್ಯರು. ಶ್ರೀ ನೆಹರು ಇವರನ್ನು ಟೀಕಿಸಿ, ಪ್ರತಿಗಾಮಿ ಶಕ್ತಿಗಳನ್ನು ಪ್ರೋತ್ಸಾಹಿಸಬಾರದೆಂದೂ ಪ್ರತಿಗಾಮಿ ಶಕ್ತಿಗಳನ್ನು ನಿರ್ಮೂಲಿಸಬೇಕೆಂದೂ ಕರೆಯಿತ್ತು ಸಹಕಾರಿ ಪದ್ಧತಿಗೆ ಸೇರಲೇ ಬೇಕೆಂಬ ಒತ್ತಾಯವನ್ನು ಹೇರಲಾಗುವುದಿಲ್ಲವೆಂದೂ ಭರವಸೆಯಿತ್ತಿದ್ದರು ಆದರೂ ಸಹಕಾರೀ ವ್ಯವಸಾಯದಿಂದಲೇ ಅಧಿಕ ಆಹಾರೋತ್ಪಾದನೆ, ಕಲ್ಯಾಣರಾಷ್ಟ್ರ ನಿರ್ಮಾಣವು ಸಾಧ್ಯವೆಂಬ ತಮ್ಮ ಅಭಿಪ್ರಾಯವನ್ನು ಬದಲಾಯಿಸಲಿಲ್ಲ

"ಜನರು ಕೃಷಿ ಸಹಕಾರವನ್ನು ಸಂದೇಹದ ದೃಷ್ಟಿಯಿಂದ ನೋಡುತಿದ್ದಾರೆ. ಭಾರತೀಯ ಕೃಷಿಕರಲ್ಲಿ ಹೆಚ್ಚಿನವರೊಡನೆ ಒಂದೆರಡು ಎಕ್ರೆಗಳಷ್ಟೂ ಭೂಮಿಯಿರುವುದಿಲ್ಲ ಇವರೆಲ್ಲರನ್ನೂ ಉದ್ಧರಿಸಬಲ್ಲ ಜ್ಯೋತಿಯೆಂದರೆ ಸಹಕಾರೀ ವ್ಯವಸಾಯವೇ ಆಗಿದೆ. ಸಹಕಾರೀ ಪದ್ಧತಿಯಿಂದ ಮೊದಮೊದಲು ಸಮೂಹೀಕರಣವಾಗುವುದೆಂದೂ ದೇ ಮುಂದುವರಿದು ಕೊನೆಗೆ ಸಾಮ್ಯವಾದದಲ್ಲಿ ಪರ್ಯವಸಾನಹೊಂದುವುದೆಂದೂ ಜನರು ಆಡಿಕೊಳ್ಳುತಿದ್ದಾರೆ. ಆದರೆ, ಈ ಮಾತನ್ನು ನಾನು ಎಂದೆಂದಿಗೂ ಒಪ್ಪುವುದಿಲ್ಲ ಸಾಮೂಹೀಕರಣವಾದ ಮೇಲೆ ಸಾಮ್ಯವಾದವೇ ಬೇಕಾಗಿಲ್ಲ. ಆದರೂ ಒಂದು ವೇಳೆ ಸಾಮ್ಯವಾದವೇ ರೂಪಿತವಾಗುವುದಾದರೆ, ಆಗಿ ಬಿಡಲಿ, ದೇಶದಲ್ಲಿ ನೂರಾರು ಕ್ರಾಂತಿಗಳಾಗಬೇಕೆಂದು ನಾನು ಬಯಸುತ್ತೇನೆ, ಆದರೆ ಕೋಟಿಗಟ್ಟಲೆಯ ಜನರು ಹಸಿದ ಹೊಟ್ಟೆಯಿಂದ ನಿಸ್ತೇಜವದನರಾಗಿರಬೇಕೆಂದು ಬಯಸುವುದಿಲ್ಲ.'

ವಿಜ್ಞಾನಮಂದಿರದ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹೀಗೆ ಆಡಿದ ನೆಹರೂ ಮತ್ತು ಸಹಕಾರಿ ಒಕ್ಕಲತನಗಳ ನಡುವೆ ಇರುವ ಮೈತ್ರಿಯು ದೃಢವಾಗಿರುವುದನ್ನು ಕಾಣಬಹುದು

° ° °

ಪಾಕಿಸ್ತಾನಕ್ಕೆ ಅಮೆರಿಕೆಯು ಯುದ್ಧಾಸ್ತ್ರಾದಿಗಳನ್ನು ನೀಡಬಹುದಾದ ಒಂದು ಒಪ್ಪಂದವು ಸಾಕಷ್ಟು ಮುಂದುವರಿದಿದ್ದು ಈ ಬಗ್ಗೆ ಭಾರತವು ವಿವಂಚನೆಗೀಡಾಗಬೇಕಾಗಿ ಬಂದಿದ ಇಂತಹ ಸಮಯದಲ್ಲಿ ಅಮೆರಿಕೆಯ ವಿದೇಶ ಖಾತೆಯ ವಕ್ತಾರನು ಕೇವಲ ಭಾರತದ ಮೇಲೆ ಎರಡು ಸಂದರ್ಭಗಳಲ್ಲಿ ಮಾತ್ರ ತಲವೀಯುವ ಸಹಾಯದಿಂದ ಪಾಕಿಸ್ತಾನವು ಮೇಲೆ ಬೀಳಬಹುದು ಎಂದು ತಿಳಿಸಿದ್ದಾನೆ.

ಮೊದಲನೆಯದಾಗಿ, ಭಾರತವು ಅಂತಾರಾಷ್ಟ್ರೀಯ ಕಮ್ಯೂನಿಜಂ ಕಡೆ ಸ್ವರಾಷ್ಟ್ರವಾದರೆ ಮತ್ತೆ ಎರಡನೆಯದಾಗಿ, ಯಾವುದೇ [illegible] ಕಾರಣದಿಂದ ಪಾಕಿಸ್ತಾನದ ಮೇಲೆ ಆಕ್ರಮಣ ಮಾಡಿದ ರಾಷ್ಟ್ರವೆಂದು ತಿಳಿಯಲ್ಪಟ್ಟರೆ ಇಂತಹ ಸಹಾಯ ಸಿಗುವುದು ಭಾರತದಲ್ಲಿ ಈ ಎರಡರ ಕಡೆಗೂ ಒಲವು ಇಲ್ಲದೆ ಇರುವುದರಿಂದ ಈ ಸಹಾಯಕ ಒಪ್ಪಂದದ ಬಗ್ಗೆ ಭಾರತವು ಕಳವಳಗೊಳ್ಳಬೇಕಾದ ಪ್ರಮೇಯ ಬಂದಿಲ್ಲ

ತೋರ್ಪಡಿಕೆಯ ದೃಷ್ಟಿಯಲ್ಲಿ ಈ ವಕ್ತಾರನು ತಪ್ಪು ನುಡಿದಿಲ್ಲ ಆದರೂ ಮೂರ್ಖ ನೆರೆಹೊರೆಯವನು ಸರ್ಪವನ್ನಿಟ್ಟುಕೊಂಡಿದ್ದರೆ, ಅದರಿಂದ ಅಪಾಯ ಬರಲಾರದೆಂದು ಧೈರ್ಯದಿಂದಿರುವುದು ಸಾಧ್ಯವೆ? ಭಾವಿ ವರ್ಷದ ಮುಂಗಡ ಪತ್ರದಲ್ಲಿಯೂ ರಕ್ಷಣಾ ವೆಚ್ಚವನ್ನು ಕಡಿಮೆ ಮಾಡಿಕೊಂಡಿರುವ ಭಾರತಕ್ಕೆ ಪಾಕಿಸ್ತಾನದ ವಿರುದ್ಧ ಯಾವುದೇ ಕಾರಣದಿಂದ ಯುದ್ಧ ಘೋಷಿಸುವ ಅಭಿಲಾಷೆಯೇನೂ ಇರುವುದಿಲ್ಲ; ಅಂತೆಯೇ ವಿಶ್ವದಲ್ಲಿ ಎಲ್ಲೆಲ್ಲಿಯೂ ಸರ್ವಾಧಿಕಾರಗಳು ಉದಯಿಸುತ್ತಿರುವಾಗ, ಅವರೆಲ್ಲರ ಮಧ್ಯೆ ನಿಂತುಕೊಂಡು ಅತೀವ ಪ್ರಯಾಸದಿಂದಾದರೂ ಪ್ರಜಾಪ್ರಭುತ್ವವನ್ನು ಸಂಪೂರ್ಣ ಯಶಸ್ವಿಯಾಗಿಸಲು ಅಹರ್ನಿಶಿ ಹೋರಾಡುತ್ತಿರುವ ಭಾರತ ಕಮ್ಯೂನಿಜಂನತ್ತ ಒಲಿಯುವುದು ದುಸ್ತರವೇ. ಆದರೂ ಪಾಕಿಸ್ತಾನದ ಕುರುಡು ರಾಜಕಾರಣದಿಂದ ಈಗಾಗಲೇ ಮುಂದುವರಿಯುತ್ತಿರುವ ಗಡಿಪ್ರದೇಶದ ಹಾವಳಿಗಳು ಮತ್ತೂ ಹೆಚ್ಚಾಗತೊಡಗಿದರೆ, ಆಗ ಭಾರತವು ಏನು ಮಾಡಬೇಕು? ಇಂದಿನಂತೆಯೇ ಶಾಂತಿ ಮಂತ್ರವನ್ನೆ ಪಠಿಸಿ ಕೂರಬೇಕೆ? ಪಾಕಿಸ್ತಾನದ ಮೇಲೆ ಆಕ್ರ

(೧೦ನೇ ಪುಟ ನೋಡಿರಿ)

ವಾಯು ಜಲಪರಡರಲ್ಲೂ ತಂಗಬಲ್ಲ ಅಮೆರಿಕನ್ ಆಧುನಿಕ ವಿಮಾನ

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ –
ಮಂಗಳೂರು—3

ಸ್ಥಾಪನೆ –
1931

ಕಾಯಂ ರೇವಣಾತಿ ಬಡ್ಡಿ ದರ

1	ತಿಂಗಳಿಂದ	5	ತಿಂಗಳ ವರೆಗೆ	4¼%
6	,,	12	,,	4½%
13	,,	24	,,	4¾%

ರೂಪಾಯಿ 10,000/- ವ, ಹೆಚ್ಚಿನ ರೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ ಇತ್ಯಾದಿ .

NAVAYUGA WEEKLY, UDIPI, S. India.

ಕಥಾ ವಿಹಾರ

ಮಾರಕವಾದ ಮಾಧುರ್ಯ

ತನಗೆ ಮಧುರವೆನಿಸಿದುದೇ ಮುಂದಕ್ಕೆ ಮಾರಕವಾಗಿ ಪರಿಣಮಿಸಿತು!

ಸುವರ್ಣಖೇಟವೆಂಬ ನಗರದಲ್ಲಿ ಶರಭದ್ರನೆಂಬ ಕರಣಿಕನಿದ್ದನು ಆತನಿಗೆ ಆ ನಗರದ ಕೋಶಾಗಾರದ ಗಣಕಾಲಯದಲ್ಲಿ ಉದ್ಯೋಗ ಆತ ಯಾವುದೋ ಒಂದು ಗ್ರಾಮದಲ್ಲಿ ಹುಟ್ಟಿ ಬೆಳೆದು ಉದ್ಯೋಗಕ್ಕಾಗಿ ಊರೂರು ಅಲೆದು ಕಟ್ಟಕಡೆಗೆ ಈ ಉದ್ಯೋಗವನ್ನು ಸಂಪಾದಿಸಿಕೊಂಡಿದ್ದನು. ಆತನಿಗೆ ಹದಿನೈದು ವರಹ ಸಂಬಳ ಆದುದರಿಂದ ಆತನು ತೀರ ಬಡವನೂ ಅಲ್ಲ, ಶ್ರೀಮಂತನೂ ಅಲ್ಲ. ಮಧ್ಯಮ ತರಗತಿಯವನು.

ಆತನು ತನ್ನ ವಾಸಕ್ಕೆ ಕೋಟಾ ಸಾಹುಕಾರರ ತೋಟದಲ್ಲಿ ಬಾಡಿಗೆ ಮನೆ ವಹಿಸಿಕೊಂಡಿದ್ದನು. ಉದ್ಯೋಗ ಸಿಕ್ಕಿದ ನಂತರ ಆವನಿಗೆ ಮದುವೆಯಾಗಿತ್ತು. ಮಕ್ಕಳಾಗಿತ್ತು ಬಾಡಿಗೆ ಮನೆಯ ಜೀವನವೂ ನಿರಾತಂಕವಾಗಿ ಸಾಗುತ್ತಲೂ ಇತ್ತು.

ಹಿಂದೆ ಒಮ್ಮೆಯೊಮ್ಮೆ ಆತ ಯಾರೋ ಕೊಟ್ಟಿದ್ದ ಉತ್ತಮ ಜಾತಿಯ ಒಂದು ಮಾವಿನ ಹಣ್ಣನ್ನು ಅದೇ ಮನೆಯಲ್ಲಿ ತಿಂದಿದ್ದನು. ತಿಂದುಳಿದ ಹಣ್ಣಿನ ಗೊರಟನ್ನು ತನಗೆ ತಿಳಿಯದಂತೆಯೇ ಜಗಲಿಯ ಬುಡದಲ್ಲೇ ಹಾಕಿದ್ದನೆಂದು ಕಾಣುತ್ತದೆ. ಆ ಸ್ಥಳದಲ್ಲೇ ಒಂದು ಮಾವಿನ ಗಿಡವು ಮೊಳೆದಿತ್ತು ಆ ಗಿಡವು ಕಿಟಕಿಯ ಎತ್ತರದಷ್ಟು ಮೀರಿ ದೊಡ್ಡದಾದಾಗ ಬಾಡಿಗೆದಾರನಾದ ಕೋಟಾ ಸಾಹುಕಾರನು ಅದನ್ನು ನೋಡಿದನು "ಓ, ಶರಭದ್ರ! ಮನೆಯ ಬದಿಯಲ್ಲಿ ಮರ ಬೆಳೆಸಬಾರದೋಯ್ ಕಿತ್ತು ಬಿಸುಟುಬಿಡು." ಅಂದ.

"ಬಿಸುಡುವುದೆಷ್ಟು ಹೊತ್ತು ಸ್ವಾಮಿ. ಇದ್ದುಕೊಂಡು ಹೋಗಲಿ ಸಧ್ಯ. ಇದರಿಂದೇನೂ ಅಪಾಯವಾಗದು", ಎಂದು ಶರಭದ್ರ ಹಾರಿಸಿ ಹೇಳಿಬಿಟ್ಟ. ಅದಕ್ಕೆ ಕೋಟಾ ಸಾಹುಕಾರ ನಗಾಡಿಕೊಂಡೇ ಹೋದನು

ಆರೇಳು ವರ್ಷಗಳಲ್ಲಿ ಆ ಗಿಡವು ಮರವಾಯಿತು ಆ ಮಾವಿನ ಮರದಿಂದ ಶರಭದ್ರನಿಗೆ ಸೊಗಸಾಯಿತೇ ಹೊರತು ತೊಂದರೆಯಾಗಲಿಲ್ಲ ನೆರಳಿಗೂ ಗಾಳಿಗೂ ಅದೊಂದು ಒಳ್ಳೆಯ ಸಾಧನವಾಯಿತು.

ಫಲ ಬಿಟ್ಟಿತು ಮಾವಿನ ಮರ. ಸಿಕ್ಕಿದ ಕೆಲವು ಹಣ್ಣುಗಳನ್ನು ಶರಭದ್ರ ಆ ಸ್ಥಳದ ಒಡೆಯನಿಗೂ ಮುಟ್ಟಿಸಿದ ಹಣ್ಣುಗಳು ಬಹಳ ರುಚಿಯಾಗಿದ್ದುವು ಕೊಟ್ಟುದನ್ನು ಸುಮ್ಮನೆ ಸ್ವೀಕರಿಸಿಕೊಂಡನೇ ಹೊರತು ಕೋಟಾ ಸಾಹುಕಾರನು ಏನೂ ಹೇಳಲಿಲ್ಲ. ತಿಂದ ಮೇಲೆ ಅದರ ರುಚಿಯನ್ನು ಕುರಿತೂ ಚಕಾರ ನುಡಿಯಲಿಲ್ಲ

ಅಲ್ಲಿಂದ ಪ್ರತಿ ವರ್ಷವೂ ಆ ಮರದಲ್ಲಿ ಹಣ್ಣುಗಳಾದುವು. ತನಗೆ ಬೇಕಾದಷ್ಟಿಟ್ಟುಕೊಂಡು ಉಳಿದ ಹಣ್ಣುಗಳನ್ನು ಮಾರಿ ಶರಭದ್ರನು ಸ್ವಲ್ಪ ದುಡ್ಡೂ ಗಳಿಸಿಕೊಂಡನು.

ಹೀಗೆ ಮಧುರ ವರ್ಷಗಳು ಸಾಗುತ್ತಿರಲು ಒಂದು ವರ್ಷವು ಬಹಳ ಗಂಡಾಂತರಕಾರಿಯಾಯಿತು. ಆ ವರ್ಷ ಭಾರಿಯ ಮಳೆ ಬಿರುಗಾಳಿ ಬೀಸಿತು ಮಾವಿನ ಮರದ ಅರ್ಧಭಾಗವು ಧಡೀರನೆ ಮುರಿದು ಮನೆಯ ಮೇಲೆ ಬಿತ್ತು. ಒಂದು ಭಾಗದ ಹಂಚುಗಳೂ ಗೋಡೆಯೂ ಭೂಮಿಗಿಳಿದು ಬಿದ್ದುವು.

ಪುಣ್ಯಕಾಲ. ಶರಭದ್ರನು ಸ್ವಲ್ಪ ಎಚ್ಚರಿಕೆ ವಹಿಸಿಕೊಂಡೇ ಇದ್ದುದರಿಂದ ತಾನೂ ತನ್ನ ಮಕ್ಕಳೂ ಜೀವದಿಂದುಳಿಯುವಂತಾಯಿತು. ಗಾಳಿಯ ಅಬ್ಬರವನ್ನು ನೋಡಿ ಆ ಮರವು ಬೀಳುವುದೇನೋ ಎಂಬ ಭಯ ಮೊದಲೇ ಉಂಟಾಗಿತ್ತು. ಆತ ಕೋಟಾ ಸಾಹುಕಾರ ಬಳಿಗೆ ಓಡಿ ಆ ಮಾವಿನ ಮರದ ಅಪಾಯವನ್ನು ಕುರಿತು ತಿಳಿಸಿದನು "ಈಗ ಈ ಮಳೆಯಲ್ಲಿ ಏನು ಮಾಡಲಿಕ್ಕಾದೀತು? ಮೊದಲೇ ಎಚ್ಚರಿಕೆ ಬೇಕಿತ್ತು ನಾನು ಹೇಳಿಲ್ಲವೆ? ಮನೆಯ ಹತ್ತಿರ ಮರವಿರುವುದು ಅಪಾಯವೆಂದು? ಈಗ ,ಈ ಜಡಿಮಳೆಗೆ ಯಾರು ಬಂದಾರು? ಹೇಗೆ ಮರ ಹತ್ತಿಯಾರು? ಏನೂ ಆಗಲಾರದು ಧೈರ್ಯವಾಗಿರು"ಎಂದು ಕೋಟಾ ಸಾಹುಕಾರ ಸಮಾಧಾನ ಹೇಳಿದನು.ಶರಭದ್ರನು ಸಾಮಾನು ಸರಂಜಾಮುಗಳನ್ನು ಆ ಭಾಗದಿಂದ ಬೇರೆ ಕೋಣೆಗೆ ತೆಗೆದುಕೊಂಡುದರಿಂದ ವಿಶೇಷ ನಷ್ಟಕ್ಕೂ ಆತ ಗುರಿಯಾಗಲಿಲ್ಲ.

ಈಗ ಬಿದ್ದು ಹೋದ ಮನೆಯ ಭಾಗವನ್ನು ದುರಸ್ತಿ ಮಾಡಿಸಬೇಕಾದುದು ಯಾರು? ಮನೆಯೇನೊ ಪೂರಾ ಹಳೆಯದು. ದುರಸ್ತಿ ಮಾಡಿಸಿದರೆ ಆ ಭಾಗವು ಹೊಸದಾಗಿ ಹೋಗುತ್ತದೆ. ಶರಭದ್ರನಿಗೆ ಅದೇನೋ ಬಾಡಿಗೆ ಮನೆ ಶರಭದ್ರನೇ ದುರಸ್ತಿ ಮಾಡಿಸಿದರೆ ಕೋಟಾ ಸಾಹುಕಾರನಿಗೆ ಅಷ್ಟು ಭಾಗ ಕೂತಲ್ಲೇ ಹೊಸದಾದ ಹಾಗಾಯಿತು. ಈ ವಿಷಯವಾಗಿ ಶರಭದ್ರನು ಕೋಟಾ ಸಾಹುಕಾರನನ್ನು ಕುರಿತು– "ಬಾಡಿಗೆದಾರನಾದ ನಾನು ಮನೆ ದುರಸ್ತಿ ಮಾಡಿಸುವುದು ನ್ಯಾಯವಲ್ಲ. ಮೊದಲೇ ಅದು ಅಬಲವಾದ ಮನೆ. ಗೋಡೆ ಮಾಡುಗಳು ಅಲ್ಲಲ್ಲಿ ಶಿಥಿಲವಾಗಿವೆ. ಸೋರುವ ಮನೆ ಈಗ ನೀವು ಆದಷ್ಟು ಬೇಗ ಆ ಭಾಗವನ್ನು ದುರಸ್ತಿ ಮಾಡಿಕೊಡಬೇಕು" ಎಂದನು

ಅದನ್ನು ನೀನೇ ಮಾಡಿಸಿಕೊಳ್ಳಬೇಕಾದ್ದು ಹೊರತು ನಾನಲ್ಲ ಮಾವಿನಮರ ಬೀಳದಿದ್ದರೆ ಆ ಮನೆ ಇನ್ನೂ ಇಪ್ಪತ್ತು ವರ್ಷ ಬಾಳಿಕೆ ಬರುತಿತ್ತು. ಮರ ಬೆಳೆಯುವಾಗಲೇ ನಾನು ಹೇಳಿದ್ದೆ, ಮನೆಯ ಬದಿಯಲ್ಲಿ ಮರ ಬೆಳೆಸಬೇಡವೆಂದು. ನೀನು ಮರ ಬೆಳೆಸಿ ಮನೆಗೆ ಅಪಾಯವುಂಟುಮಾಡಿರುತ್ತೀ. ಈಗ ಇದರ ನಿವೃತ್ತಿಗೆ ನೀನೇ ಬಾಧ್ಯನು" ಎಂದ ಕೋಟಾ ಸಾಹುಕಾರ.

‘‘ಸರಿ, ತಗಾದೆ ಬೇಡ; ಅರ್ಧ ಖರ್ಚು ನಾನು ಕೊಡುವೆನು" ಎಂದ ಶರಭದ್ರ.

(೧೦ನೇ ಪುಟ ನೋಡಿರಿ)

ಈ ಹಸ್ತಗಳು ನಿಮ್ಮನ್ನು ರಕ್ಷಿಸಲಿ

ಈ ಹಸ್ತಗಳು ಜೀವವಿಮೆಯ—ಅತಿಶ್ರೇಷ್ಠ ರಕ್ಷಣೆಯು ಎಷ್ಟು ಸಾಧ್ಯವೋ ಅಂತಹ ರಕ್ಷಣೆಯ—ಚಿಹ್ನೆಯಾಗಿವೆ ಇವು ನಿಮಗೆ ಅನೇಕ ವಿಷಯಗಳನ್ನು ಸೂಚಿಸುತ್ತವೆ—ನಿಮ್ಮ ವೃದ್ಧಾಪ್ಯದಲ್ಲಿ ಒಂದು ವರಮಾನ, ನಿಮ್ಮನ್ನು ಕಳೆದು ಕೊಂಡರೆ ನಿಮ್ಮ ಕುಟುಂಬಕ್ಕೆ ಒಂದು ಆಶ್ರಯ, ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ನಿಧಿ, ಮದುವೆಯ ಖರ್ಚುಗಳನ್ನು ಕಳೆಯುವ ದಾರಿ ಇದಕ್ಕಿಂತ ಮಿಗಿಲಾಗಿ ಈ ಹಸ್ತಗಳು ರಕ್ಷಣೆಯ ಕುರುಹಾಗಿವೆ—ಎಲ್ಲ ರೀತಿಯಲ್ಲಿ ನಿಮ್ಮ ಹಣವು ಭದ್ರವಾಗಿದೆ ಮತ್ತು ನಿಮ್ಮ ಸಹಾಯಕ್ಕಾಗಿ ಕೆಲಸ ಮಾಡುತ್ತಿರುವವರಿಂದ ನಿಮ್ಮ ಮೇಲ್ಮೆಯು ಸಂರಕ್ಷಿಸಲ್ಪಟ್ಟಿದೆ ಎಂಬ ಧೈರ್ಯದ ಕುರುಹಾಗಿದೆ.

ಲೈಫ್ ಇನ್ಸೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
ಸೆಂಟ್ರಲ್ ಆಫೀಸು ‘ಜೀವನ ಕೇಂದ್ರ’, ಜಮ್‌ಷೆಡ್ಜಿ ಟಾಟಾ ರೋಡ್, ಮುಂಬಯಿ–1
Life Insurance Corporation of India
ಜೋನಲ್ ಆಫೀಸುಗಳು
ಬೊಂಬಾಯಿ • ಹೊಸ ದೆಹಲಿ • ಕಲ್ಕತ್ತ • ಮದ್ರಾಸು • ಕಾನ್‌ಪೂರ್.
ಡಿವಿಜನಲ್ ಮತ್ತು ಬ್ರಾಂಚ್ ಆಫೀಸುಗಳು ಭಾರತದ ಎಲ್ಲಾ ಕಡೆಯಲ್ಲಿಯೂ ಇವೆ.
ASP/LIC-8

ಯಮಲೋಕ

ಯಮಲೋಕದಿಂದ ಮರಳಿ ಬರಬಹುದೆ?

ಹಾಗೆ ಬಂದವರ ಅನುಭವ ಹೇಗಿದೆ ನೋಡಿ; ಯಮಲೋಕವೆಂದರೇನು ಹೇಳಬಲ್ಲಿರಾ?

ಪೇರಿಸಿನ ಸಮೀಪದ ಒಂದು ಊರಲ್ಲಿ ನಡೆದ ಘಟನೆಯಿದು. ನೆರೆಕರೆಯವರು ಬಾಗಿಲು ತೆರೆದಾಗ, ಶ್ರೀಮತಿ ಲೇಜಲಿಯವರು ಮೃತಾವಸ್ಥೆಯನ್ನು ಮುಟ್ಟಿದ್ದರು. ಅವರನ್ನು ಆ ಕೂಡಲೇ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆಕೆಯ ಮೃತ್ಯುವು ಹೃದಯ ಚಾಲನೆಯು ತಡೆಯಲ್ಪಟ್ಟುದರಿಂದ ಆಗಿತ್ತು. ಶವವು ಆಸ್ಪತ್ರೆಯಲ್ಲಿಯೇ ಬಿದ್ದುಕೊಂಡಿತ್ತು. ಕೆಲ ಸಮಯಾನಂತರ ಆಕೆಯ ಶವವನ್ನು ಮರಣೋತ್ತರ ಶಸ್ತ್ರಕ್ರಿಯೆಗೆ ಡಾಕ್ಟರರು ಗುಂಪಡಿಸಿದರು. ಅವರು ಹೆಣವನ್ನು ಪರೀಕ್ಷಿಸುತ್ತಿರುವಾಗ, ರಕ್ತವು ಬೆಚ್ಚಗಿರುವುದು ಅನುಭವಕ್ಕೆ ಬಂತು. ಕೂಡಲೇ ಹೃದ್ರೋಗತಜ್ಞರನ್ನೂ ಕರೆದರು, ಅವರೂ ಪರೀಕ್ಷಿಸಿದರು. ಮೃತಳು ಪುನಃ ಜೀವನಕ್ಕಿಳಿದು ಬರುವ ಸೂಚನೆಗಳು ಕಂಡು ಬಂದುವು. ಆಕೆಯ ಹೃದಯದ ಪಕ್ಕಕ್ಕೊಂದು ಸೂಜಿ ಮದ್ದನ್ನು ಚುಚ್ಚಿದರು. ಸ್ವಲ್ಪ ಹೊತ್ತಾದೊಡನೆಯೇ ಶ್ರೀಮತಿ ಲೇಜಲಿಯವರು ಕಣ್ಣು ತೆರೆದರು. ಅವಳು ಕಣ್ಣರಳಿಸಿ ನಾಲ್ಕೂ ಕಡೆಗೆ ನೋಡುತ್ತ, “ನಾನೆಲ್ಲಿದ್ದೇನೆ? ಏನಾಯಿತು?” ಎಂದು ಕೇಳಿದರು. ಡಾಕ್ಟರರು ಆಕೆಯ ಮಾತುಗಳನ್ನು ಕೇಳಲು ಉತ್ಸುಕರಾಗಿದ್ದರು. ಏಕೆಂದರೆ, ಆಕೆ ಯಮಲೋಕಕ್ಕೆ ಹೋಗಿ ತಿರುಗಿ ಬಂದಿರುವಳಷ್ಟೆ?

“ಸ್ವಲ್ಪ ತಮ್ಮ ಕೈಯನ್ನಿತ್ತಕೊಡಿರಿ. ತಾವು ನಿಜವಾಗಿಯೂ ಜೀವಿತ ವ್ಯಕ್ತಿ ಹೌದೇ ಅಲ್ಲವೇ ಎಂಬುದನ್ನು ಕಂಡುಕೊಳ್ಳುವೆನು. ಅಲ್ಲಿ, ಯಾರೂ ಜೀವಂತರಾಗಿಲ್ಲ” ಎಂದು ಶ್ರೀಮತಿ ಲೇಜಲಿ ಭಯಾತುರ ಸ್ವರದಿಂದ ಹೇಳಿ ಒಂದು ದೀರ್ಘ ಶ್ವಾಸವನ್ನು ಬಿಟ್ಟರು.

ಶ್ರೀಮತಿಯವರಿಗೆ ಅವರೆಲ್ಲರೂ ಈ ಪ್ರಪಂಚದಲ್ಲಿಯೇ ಇರುವವರೆಂದು ಪೂರ್ಣವಿಶ್ವಾಸವು ಹುಟ್ಟಿದಮೇಲೆ, ಡಾಕ್ಟರರ ಆಗ್ರಹದ ಕಾರಣದಿಂದ, ತನ್ನ ಅನುಭವವನ್ನು ಹೇಳತೊಡಗಿದರು. ನನಗೆ ಗಟ್ಟಿಯಾಗಿ ಭಣ ಭಣ ಶಬ್ದ ಕೇಳಿಸಿತು. ನನ್ನ ಸುತ್ತಲೂ ವರ್ಣವಿವರ್ಣದ ನೆಳಲುಗಳು ಆವರಿಸಿದುವು. ಅವುಗಳಲ್ಲಿ ಒಂದು ವಿಲಕ್ಷಣ ಪ್ರಕಾಶವು ಹೊರಬಂದು ಸುಳಿದಾಡುತ್ತಿತ್ತು. ಪ್ರಾಯಃ ಅದರ ಸಂಚಾರದಿಂದಲೇ ಸ್ವರವು ಜನಿಸಿರಬೇಕು. ಕೆಲ ಸಮಯಾನಂತರ, ನಾನು ಒಂದು ಸುರಂಗ ಮಾರ್ಗದಲ್ಲಿ ಹೋಗುತ್ತಿರುವಂತೆ ಭಾಸವಾಯಿತು. ಆ ಸುರಂಗವು ಮೊದಮೊದಲು ಸಂಕುಚಿತವಾಗಿರುವಂತೆ ಬಂದರೂ ಕ್ರಮೇಣ ಅದು ವಿಶಾಲವಾಗುತ್ತ ಬಂದಿತು. ನಾನು ಸುರಂಗದಲ್ಲಿ ನಡೆದಿರುವಷ್ಟು ಸಮಯ ಆ ನೆರಳುಗಳೂ ನನ್ನನ್ನು ಹಿಂಬಾಲಿಸುತ್ತಿದ್ದುವು. ಅನಂತರ ಒಮ್ಮೆಲೇ ಅವು ಪ್ರಕಾಶಮಾನವಾಗಿ ಬೆಳಗಿದುವು. ಮುಂದುಗಡೆ ಒಂದು ವಿಸ್ತಾರವಾದ ಮೈದಾನವು ಇತ್ತು. ನೆರಳುಗಳು ಪ್ರಕಾಶಿಸಿದೊಡನೆಯೇ ನನ್ನ ಕಾಲುಗಳು ಹೇಗಿಯೋ ಮಾಯವಾಗತೊಡಗಿದುವು. ಇಲ್ಲ....ಇಲ್ಲ....” ಶ್ರೀಮತಿ ಲೇಜಲಿಯವರು ಸ್ವಲ್ಪ ಆಲೋಚಿಸಿ ಹೇಳಿದಳು; “ನನ್ನ ಶರೀರದ ಆಕಾರವು ಏನೋ ಇನ್ನೊಂದು ತರದ ಪ್ರಾಣಿಯಂತಾಯಿತು. ಅದು ಹೇಗಿತ್ತೆಂದು ನನಗೆ ಜ್ಞಾಪಕವಿಲ್ಲ. ನಾನು ಸುಮ್ಮಸುಮ್ಮನೆ ಮುಂದುವರಿದೆ ಆ ಮೇಲೆ ಯಾರೋ ನನ್ನ ಹೆಸರನ್ನು ಕರೆದರು. ವಿಗತ ಜೀವನದಲ್ಲಿ ನಾನು ಅಂತಹ ಸ್ವರವನ್ನು ಆಲಿಸಿದ್ದೆ. ಈ ಸ್ವರವು ಕೆಲವು ವರ್ಷಗಳಿಗೆ ಮೊದಲು ಮಡಿದುಹೋದ ಒರ್ವ ವ್ಯಕ್ತಿಯದಾಗಿತ್ತು. ಆ ಮೇಲೆ, ಏನೋ ಸದ್ದು ಕೇಳಿಬರತೊಡಗಿತು. ನನ್ನ ಹಿಂದುಗಡೆ ಯಾರೋ ಬರುತ್ತಿರುವಂತೆ ಭಾಸವಾಯಿತು. ಆ ಪರಿಚಿತ ಧ್ವನಿ ಬಹುಕಾಲದವರೆಗೆ ನನಗೆ ಕೇಳಿಬರುತ್ತಿತ್ತು. ಆ ಮೇಲೆ ಯಾರೋ ನನ್ನನ್ನು ಹಿಡಿದುಬಿಟ್ಟರು. ನಾನು ತಡೆದೆನು. ಪ್ರಕಾಶಮಾನವಾದ ನೆರಳುಗಳು ಕೊನೆಯ ಬಾರಿಗೆ ಬೆಳಗಿದುವು. ನನ್ನ ಬಲಪಕ್ಕವು ನೋಯುತ್ತಿರುವ ಅನುಭವವಾಯಿತು. ಆದರೆ, ನನಗೆ ಹೃದಯ ಇಲ್ಲವೇ ಮೆದುಳು ಇದ್ದಂತೆ ತಿಳಿಯಲಿಲ್ಲ ಆದರೂ ನನ್ನ ಶರೀರವು ಎರಡು ಭಾಗಗಳಾಗಿ ಒಡೆದಿರುವಂತೆ ತಿಳಿದು ಬಂದಿತು. ಆ ಮೇಲೆ ನಾನು ನಿಮ್ಮೆಲ್ಲರ ಮಾತುಕತೆಗಳನ್ನು ಕೇಳತೊಡಗಿದೆ.”

ಒರ್ವನನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ವೈದ್ಯರ ಹೇಳಿಕೆಯಂತೆ ಆವನು ಮರಣವನ್ನಪ್ಪಿದ್ದ. ಆದರೆ, ಆವನು ಪುನಃ ಎದ್ದ ಅನಂತರ ಹೇಳಿದ ಹೇಳಿಕೆಯೂ ಕುತೂಹಲದಾಯಕವಿದೆ. “ನಾನು ಕ್ರಮೇಣ ಒಳಗಡೆ ಪ್ರವೇಶಿಸುತ್ತಿರುವಂತೆ ಭಾಸವಾಯಿತು ನನ್ನ ಸುತ್ತಲೂ ಒಂದು ವಿಧದ ಕತ್ತಲು ಹರಡಿತು. ಆದರೆ ಎಳ್ಳಷ್ಟೂ ಅಂಜಿಕೆ ನನಗಾಗಲಿಲ್ಲ. ನನ್ನೊಳಗಡೆ ಏನೋ ವಿಚಿತ್ರ ವಸ್ತು ಹರಡಿಕೊಂಡಿರುವಂತೆ ಅನುಭವವಾಯಿತು. ಆಲಸ್ಯ ತುಂಬತೊಡಗಿತು. ಆ ಮೇಲೆ ನಾನು ಕೆಳಗಡೆಗೆ ವೇಗವಾಗಿ ಸಾಗುತ್ತಿರುವ ತೊಟ್ಟಿಲೊಂದರಲ್ಲಿ ಕೂತೆನು. ಬಹಳ ಕಾಲ ತೊಟ್ಟಿಲು ಕೆಳಹೋದ ಮೇಲೆ, ಒಂದು ಕ್ಷಣ ಅದು ಸ್ತಬ್ಧವಾಯಿತು; ಮತ್ತೆ ತಿರುಗಿ ಇಳಿಯತೊಡಗಿತು. ಕೆಳಗಿಳಿಯುತ್ತಿದ್ದಂತೆ ಸೆಖೆ ಹೆಚ್ಚಾಯಿತು. ಆಕಸ್ಮಾತ್ ತೊಟ್ಟಿಲು ತಡೆಯಲ್ಪಟ್ಟಿತು. ಆ ಸಮಯದಲ್ಲಿ ಒಂದು ನೆರಳು ನನ್ನ ಎದುರು ನಿಂತಿತ್ತು. ನಾನದನ್ನು ಹಿಂಬಾಲಿಸಿದೆನು. ಕೊಂಚ ದೂರ ಹೋದ ಮೇಲೆ ಒಂದು ನೀಲ ಪ್ರವಾಹಕ್ಕೆ ಸೇತು ಹಾಕಿರುವುದು ತೋರಿ ಬಂತು. ನಾವಿಬ್ಬರೂ ಅದನ್ನು ದಾಟಿದೆವು. ನಾನು ಆ ಪ್ರವಾಹವನ್ನು ನೋಡಲು ಆತುರನಾಗಿದ್ದರೂ ಆ ನೆರಳು ನನ್ನನ್ನೆಳೆದು ಕರೆದುಕೊಂಡು ಹೋಯಿತು. ಆ ಆಕೃತಿಯು ರಾಕ್ಷಸನಂತಿತ್ತು. ಅದಕ್ಕೆ ಬಾಯಿ ಮತ್ತು ಕಣ್ಣುಗಳಿರಲಿಲ್ಲ. ಕೆಲವು ಸಮಯಾನಂತರ ಆ ಆಕೃತಿಯು ಅದೃಶ್ಯವಾಯಿತು. ಆ ಮೇಲೆ ಏನಾಯಿತೋ ನನಗೆ ತಿಳಿಯದು.”

ಪೇರಿಸಿನಲ್ಲಿ ನಡೆದ ಚಿಕಿತ್ಸಕರ ಸಮ್ಮೇಳನದಲ್ಲಿ ಫ್ರೆಂಚ ಡಾಕ್ಟರ ಚೆಮಾಸು ಎಂಬವರು ತನಗೆ ಪುನರ್ಜೀವನ ಪ್ರಾಪ್ತವಾದ ವಿಷಯವನ್ನು ಪ್ರಸ್ತಾಪಿಸುತ್ತ, ಒಂದರ್ಧ ತಾಸು ಮೃತನ ರೂಪದಲ್ಲಿದ್ದ ಮೇಲೆ ಪುನಃ ಜೀವಂತನಾದೆನು ಎಂದು, ಮೃತ್ಯುವಿನ ಅನಂತರದ ಜಗತ್ತಿನ ವಿಚಾರವಾಗಿ, “ಶಾಂತಿ ಮತ್ತು ನೀರವತೆಗಳನ್ನು ಬಿಟ್ಟು ಉಳಿದುದಾವುದೂ ನನಗೆ ಅನುಭವಕ್ಕೆ ಬರಲಿಲ್ಲ” ಎಂದು ಅಂದರು.

ನ್ಯೂಯೋರ್ಕ್ ನಗರದ ಒಬ್ಬ ಫೋರ್‌ಮೆನ್ ಜಾನ್ ಫೋರ್ಥನು ಪುನರ್ಜೀವಿತನಾಗಿ ಎದ್ದ ಮೇಲೆ ತನ್ನ ಅನುಭವವನ್ನು ಹೀಗೆ ಕಥಿಸಿದನು: “ನನ್ನ ರುಂಡವನ್ನು ಕಪ್ಪು ಉಣ್ಣೆಯ ಬಟ್ಟೆಯಿಂದ ಆವರಿಸಿದಂತೆ ಭಾಸವಾಯಿತು. ಎಲ್ಲೆಲ್ಲಿಯೂ ಉಣ್ಣೆಯೇ ಕಾಣಿಸತೊಡಗಿತು. ನಾನು ಅದರ ಮೇಲೆ ಓಡುತಿದ್ದೆ. ನನ್ನ ತಲೆಯಲ್ಲಿದ್ದ ಪ್ರಕಾಶಕ ಜ್ಯೋತಿಯು ಆಕಸ್ಮಾತ್ತಾಗಿ ನೊಂದಿ ಹೋಯಿತು. ಆ ವೇಳೆ ಪುನಃ ನನ್ನನ್ನು ಉಣ್ಣೆಯಿಂದ ಮುಚ್ಚಿದಂತಾಯಿತು. ಕ್ರಮೇಣ ಈ ಕಪ್ಪು ಬಣ್ಣವು ನಾರಂಗಿ ಬಣ್ಣವಾಗಿ ಬೆಳಗತೊಡಗಿತು. ಪ್ರಾಯಃ ಹೊದಿಕೆಯೂ ದೂರವಾಗಿರಬೇಕು.” ಈತನ ಮೃತ್ಯು ವಿದ್ಯುತ್ಪ್ರವಾಹ ಬಡಿದದರಿಂದಾದುದರಿಂದ ಅವನ ಹೇಳಿಕೆಯಲ್ಲಿ ಯಾವ ಆಶ್ಚರ್ಯವೂ ಇಲ್ಲ. ಡಾಕ್ಟರರು ಆವನಿಗೆ ಕಂಬಳಿಯನ್ನು ಹೊದಿಸಿದ್ದರು. ಜಾನ್ ಫಾರ್ಥನು ಪೂರ್ಣರೂಪದಲ್ಲಿ ಮಡಿದಿರಲಿಲ್ಲವೆಂದು ತಿಳಿಯಬಹುದು. ಆದರೂ ಅವನು ಮಾತ್ರ ತಾನು ಸತ್ತೇ ಹೋಗಿದ್ದೇನೆಂದು ಖಂಡಿತ ಮಾಡಿಕೊಂಡಿದ್ದನು. ಮತ್ತು ತಿರುಗಿ ಬಂದಿದ್ದೇನೆಂದೇ ಕಲ್ಪಿಸಿದ್ದನು. ಡಾಕ್ಟರರ ಅಭಿಪ್ರಾಯದಂತೆ ಅವನು ಮೃತ್ಯುವಿನ ದವಡೆಯಲ್ಲಿದ್ದನೇನೋ ಹೌದು.

ಪರ್ವತವನ್ನು ಹತ್ತುವಾಗ, ಮೇಲಿಂದ ಕೆಳಕ್ಕೆ ಜಾರಿಬಿದ್ದವನು ಕೆಳಗೆ ಉರುಳುತ್ತಿರುವಾಗ ತನಗೆ ಯಾವುದೇ ಕಷ್ಟವುಂಟಾಗಲಿಲ್ಲ ಎಂದು ಪ್ರಕಟಿಸಿದ್ದಾನೆ. ಒಂದು ಸಿಂಹವನ್ನು ಬೇಟೆಯಾಡುತ್ತಿದ್ದ ಸುಪ್ರಸಿದ್ಧ ಯಾತ್ರಿಕ ಲಿವಿಂಗ್‌ಸ್ಟನ್ನನ, “ನನ್ನನ್ನು ಸಿಂಹವು ನೋಚಿಕುತ್ತ ತಿನ್ನುತ್ತಿದೆ, ಎಂದೂ ಆದರೂ ನಾನೊಂದು ಸ್ವಪ್ನ ಕಾಣುತ್ತಿರುವೆನೆಂದೂ ಅನುಭವಕ್ಕೆ ಬಂತು. ನನಗೆ ಹೆದರಿಕೆಯಾಗಲಿ ಕಷ್ಟವಾಗಲಿ ಗೊತ್ತಾಗಲೇ ಇಲ್ಲ”. ಎಂದಿದ್ದಾನೆ ಈ ಮಧ್ಯೆ ಉಳಿದ ಬೇಟೆಗಾರರು ಸಿಂಹಕ್ಕೆ ಗುರಿಯಿಡದೆ ಹೋಗಿದ್ದರೆ, ಲಿವಿಂಗ್‌ಸ್ಟನನನ್ನು ಸಿಂಹವು ಹಿಡಿದುಕೊಂಡು, ಚೂರು ಚೂರಾಗಿಸುತಿತ್ತು.

ತಮಗೆ ದೊರೆತ ಅನುಭವಗಳಿಂದ ಶರೀರವೇತ್ತರು ಮೃತರಾದವರು ಕತ್ತಲೆಯನ್ನು ಎದುರಿಸಬೇಕು; ವಿಭಿನ್ನ ವರ್ಣಗಳ ಛಾಯಾಕಾರದಲ್ಲಿ ಪ್ರಕಾಶವು ದೃಗ್ಗೋಚರವಾಗುತ್ತದೆ—ಎಂದು ತಿಳಿಯಬೇಕಾಗುವುದು. ಅಲ್ಲದೇ ಸಾಯುವ ಸಮಯದಲ್ಲಿ ಯಾವುದೇ ಕಷ್ಟದ ಪರಿಜ್ಞಾನವೇ ಆಗುವುದಿಲ್ಲ ಎಂದೂ ಗೊತ್ತಾಗಿದೆ. ಮೃತ್ಯುಮುಖರಾದ ಮೇಲೆ ಮಾನವನು ಹೋಗಬೇಕಾದ ಲೋಕವು ಶೂನ್ಯ ಮತ್ತು ಶಾಂತವಾಗಿರುವುದೆಂದೂ ಸತ್ತನಂತರ ಕೊಂಚ ದೂರ ಈ ಶೂನ್ಯದಲ್ಲಿಯೇ ಮುಂದುವರಿಯಬೇಕೆಂದೂ ಹೇಳುವಲ್ಲಿ ಆತಂಕವಿಲ್ಲ.

ಕಳೆದ ಶತಮಾನದಲ್ಲಿ ಅನೇಕಾನೇಕ ಮನೋರಂಜಕವಾದ ಕಲ್ಪನಾತ್ಮಕ ವಿಷಯಗಳನ್ನು ಇದಕ್ಕೆ ಜೋಡಿಸಲಾಗುತಿತ್ತು. ಆದರೆ, ಅವನ್ನು ಯಥಾರ್ಥವೆನ ಬರುವಂತಿರಲಿಲ್ಲ. ಯಮಲೋಕ ಮತ್ತು ಮೃತ್ಯುಗಳ ಸಂಬಂಧದಲ್ಲಿ ಪ್ರಕಾಶಕ್ಕೆ ಬಂದಿರುವ ವಿಷಯಗಳಿಂದ, ಮಾನವನ ಆದಿಕಾಲದಿಂದಲೂ ಮೃತ್ಯುವಿನ ರಹಸ್ಯವನ್ನು ತಿಳಿಯಬೇಕೆಂಬ ಉತ್ಕಂಠತೆಯು ಪೂರ್ಣವಾಗಿ ಪೂರೈಸಲ್ಪಟ್ಟಿಲ್ಲ. ಬಹುಕಾಲದಿಂದ ಎದುರು ನಿಲ್ಲುತ್ತಿರುವ ಪ್ರಶ್ನಾರ್ಥಕ ಚಿಹ್ನೆಯೇ ಇಂದೂ ಅವರೆದುರು ಅಭೇದ್ಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಆದರೂ ಈ ರಹಸ್ಯವನ್ನು ಭೇದಿಸದೆ ಇರುವುದು ಸರಿಯೆ?

(ವಿವಿಧ ಮೂಲಗಳಿಂದ)

—ಗೋರಾ.

‘ಖೀರಾ’ ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಿಮಗೆ ಒಂದು ಕ್ಯಾಬಿನೆಟ್ ಆಗತ್ಯ. ಕಳ್ಳರ, ಹುಳಹುಪ್ಪಟೆಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು. 3 ನಮೂನೆಗಳಿವೆ; ಮಿಜೆಟ್, ಪಾಪ್ಯುಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು ಮತ್ತು ಭದ್ರವಾದ ಬೀಗವುಳ್ಳ ಒಳಕೋಣೆಗಳಿವೆ.

ಅಲ್ಲದೆ
ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್,
ಡೆಸ್ಕ್‌ಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು,
ವಿ. ಕೆ. ರಾಜ್ ಇಂಡಸ್ಟ್ರೀಸ್, ಅಲಿಘರ್ ಇವರ
ಉತ್ತಮ ಬೀಗಗಳು
ಇವೆಲ್ಲ ಸ್ಟಾಕಿವೆ.
ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.
7 ಲಿವರ್‌ಗಳ ಬೀಗ. ಆದರದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.
ಶೋ ರೂಮನ್ನು ಸಂದರ್ಶಿಸಿ:
ಶಾಸ್ತ್ರೀ ಅಂಡ್ ಕಂಪೆನಿ
ಹಂಪನಕಟ್ಟೆ — — ಮಂಗಳೂರು

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಸ್ವಾವಲಂಬನೆ

ಉದ್ಧರೇದಾತ್ಮನಾ ತ್ಮಾನಂ ನಾತ್ಮಾನಮವಸಾದಯೇತ್

ನಮಗೆ ಬೇಕಾದುದನ್ನು ನಾವೇ ಸಾಧಿಸಿಕೊಳ್ಳಬಾರದೇಕೆ?

ಭಾರತದಲ್ಲಿ ಮಳೆಗಳಿಗೂ ಬೆಳೆಗಳಿಗೂ ಅನಾದಿಕಾಲದಿಂದಲೂ ನಿಕಟ ಸಂಬಂಧ. ಅಕಾಲದಲ್ಲಿ ಮಳೆಬಾರದಿದ್ದರೆ ಅಥವಾ ಅತಿವೃಷ್ಟಿಯಾಗಿ ಬೆಳೆದು ನಿಂತ ಪೈರು ಕೊಚ್ಚಿ ಹೋದರೂ ಆಯಿತು, ಮಳೆಗಳನ್ನು ಶಪಿಸುತ್ತಾ ಭಾರತೀಯ ರೈತ ಕೊರಗಬೇಕಾಗುತ್ತದೆ. ಆದುದರಿಂದಲೇ ಹುಚ್ಚು ಹೊಳೆಗಳಿಗೆ ಅಣೆಕಟ್ಟು ಕಟ್ಟಿ ಅವುಗಳ ಪ್ರವಾಹ ಸದ್ವಿನಿಯೋಗವಾಗುವಂತೆ ನೋಡಿಕೊಳ್ಳಲು ರಾಷ್ಟ್ರೀಯ ಪ್ರಯತ್ನ ನಡೆಯುತ್ತಿದೆ. ಆದರೆ ಅಂತಹ ಕಾರ್ಯ ನಡೆದು ಉತ್ತಮ ನೀರಾವರಿ ವ್ಯವಸ್ಥೆ ನಡೆಯುವ ತನಕವಾದರೂ ಭಾರತೀಯ ರೈತ ತನ್ನ ವೈಯಕ್ತಿಕ ಆಸಕ್ತಿ ಹಾಗೂ ಕ್ರಿಯಾಶಕ್ತಿಗಳ ಮೂಲಕ ಒಂದಲ್ಲ ಒಂದು ರೀತಿಯಲ್ಲಿ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸಬೇಕಾಗುತ್ತದೆ.

ಮಧ್ಯ ಪ್ರದೇಶದ ಕಾತಲ್‌ಮಾಹಿ ಗ್ರಾಮದ ಅಮೃತ್‌ಪಟೇಲ್ ಎಂಬ ರೈತ ಮಾಡಿದುದಾದರೂ ಅದನ್ನೇ. ನೀರಾವರಿ ಸೌಕರ್ಯ ಪೂರೈಸಿಕೊಳ್ಳುವ ಉದ್ದೇಶದಿಂದ ಅತ ನೀರನ್ನು ಶೇಖರಿಸಲು ಪ್ರಯತ್ನ ನಡೆಯಬೇಕಾದುದು ಅತ್ಯಾವಶ್ಯಕವೆಂದು ವಾದಮಾಡಿ ಗ್ರಾಮಸ್ಥರನ್ನು ಆ ಕಾರ್ಯಕ್ಕೆ ಸಂಘಟಿಸಲು ಪ್ರಯತ್ನಿಸಿದರು. ಅವರು ತಮ್ಮ ಸಾಧನೆಗಳ ಬಗ್ಗೆ ಈ ರೀತಿ ಹೇಳುತ್ತಾರೆ 'ಕಳೆದ ವರ್ಷ ನಮ್ಮ ಊರಿನ ಒಳ ಇರುವ ನಾಲೆಗೆ ಅಡ್ಡಬಾಗಿನಾವೊಂದು ಗೋಡೆ ಕಟ್ಟಿ ನೀರು ಅಲ್ಲೇ ಶೇಖರವಾಗುವಂತೆ ವ್ಯವಸ್ಥೆ ಮಾಡಿದೆವು. ಇದರಿಂದ ನಮ್ಮ ಜಮೀನುಗಳಿಗೆ ನೀರು ಒದಗಿ ಒಂದು ಒಳ್ಳೆ ಬೆಳೆ ತೆಗೆಯಲು ಇದರಿಂದ ನಮಗೆ ಸಾಧ್ಯವಾಗಿ ಇದೀಗ ಹಾಯಾಗಿದ್ದೇವೆ." ಇದು ಹೇಳಲೆಷ್ಟು ಸುಲಭವೇ ಎನ್ನುವಿರೇನೋ!

ಆದರೆ ಅಷ್ಟೆ ಗ್ರಾಮಸ್ಥರಿಗೆ ಇದು ಸುಲಭವೇ ಎನಿಸಿರಬೇಕು; ಸುತ್ತುಮುತ್ತಿನ ಗ್ರಾಮಸ್ಥರೂ ಸಹ ಅಮೃತ್‌ಪಟೇಲ್ ಹಾಕಿ ತೋರಿಸಿದ ಮೇಲ್ಪಂಕ್ತಿಯನ್ನೇ ಅನುಸರಿಸತೊಡಗಿದರು. ಉತ್ಸಾಹ ಸುತ್ತುಮುತ್ತಿನ ಪ್ರದೇಶದಲ್ಲಿ ಎಷ್ಟು ಪ್ರಬಲವಾಗಿತ್ತೆಂದರೆ, ಒಂದೊಂದು ವಾರದಲ್ಲೂ ಇಂತಹ ಒಂದೊಂದು "ಅಣೆಕಟ್ಟು ಯೋಜನೆ" ಕಾರ್ಯಗತವಾಗತೊಡಗಿತು. ಹಿಂದೆ ಈ ಪ್ರದೇಶದಲ್ಲಿ ನೀರಾವರಿ ಸೌಕರ್ಯವೆಂಬುದೇ ಇರಲಿಲ್ಲ. ಆದರಿಂದು ಈ ಪ್ರದೇಶದ 4,000 ಎಕರೆಗಳಷ್ಟು ಭೂಮಿ ನೀರಾವರಿ ಸೌಕರ್ಯಕ್ಕೊಳಗಾಗಿದೆ.

ರಾಜಾಸ್ಥಾನದ ಒಂದು ಗ್ರಾಮದಲ್ಲಿ

ಕೆಲವು ವೇಳೆ ಹೀಗೂ ಆಗುವುದುಂಟು. ಇಡೀ ಗ್ರಾಮದ ಆಸರೆಯಾಗಿರುವ ಬಾವಿಯೋ ಕೆರೆಯೋ ಬತ್ತಿ ಹೋಗುತ್ತದೆ. ದೀರ್ಘಕಾಲದ ಅನಾದರಣೆಯೇ ಇದಕ್ಕೆ ಕಾರಣವಾಗಿರಬಹುದು. ಗ್ರಾಮಸ್ಥರು ಸ್ವಲ್ಪ ಶ್ರಮ ವಹಿಸಿದರೆ ಸಾಕು ಮತ್ತೆ ಅವುಗಳಲ್ಲಿ ನೀರು ಚಿಮ್ಮುತ್ತವೆ

ರಾಜಾಸ್ಥಾನದ ಲಖಾವಾ ಎಂಬ ಗ್ರಾಮದಲ್ಲಿ ಇದೇ ರೀತಿಯ ಒಂದು ಪ್ರಸಂಗ ಕಂಡು ಬಂತು. ಗ್ರಾಮಕ್ಕೆ ದೊಡ್ಡ ಆಸರೆಯಾಗಿದ್ದ ಒಂದು ಕೆರೆ ಎಷ್ಟೋ ವರ್ಷಗಳಿಂದ ನಿಷ್ಪ್ರಯೋಜಕವಾಗಿ ಉಳಿದಿತ್ತು; ಅಂತೆಯೇ ಸುತ್ತುಮುತ್ತಲ ಜಮೀನುಗಳು ಫಸಲು ಕಾಣದೆ ಬರಡು ಬರಡಾಗಿ ಕಾಣುತ್ತಿದ್ದುವು. ಗ್ರಾಮಸ್ಥರೆಲ್ಲ ಒಟ್ಟುಗೂಡಿ ಮಾಡಿದ ಒಂದಿಷ್ಟು ದುರಸ್ತು ಕಾರ್ಯ ಕರೆ ಮತ್ತೆ ತುಂಬಿಕೊಂಡು ಸುತ್ತುಮುತ್ತಲ ೫೦೦ ಎಕರೆಗಳಷ್ಟು ಭೂಮಿ ಮತ್ತೆ ಹಸನ್ಮುಖವಾಗಲು ಕಾರಣವಾಯಿತು. ಎಲ್ಲೆಲ್ಲೂ ಹಸಿರು ಕಾಣಿಸಿಕೊಳ್ಳತೊಡಗಿತು.

ಈ ಗ್ರಾಮಸ್ಥರ ಸಾಹಸ ಅಷ್ಟಕ್ಕೇ ಮುಗಿಯಲಿಲ್ಲ. ಹೆದ್ದಾರಿಗೆ ಸಂಪರ್ಕ ಕೊಡುವ ಒಂದು ರಸ್ತೆಯನ್ನೇ ಅವರು ನಿರ್ಮಿಸುವ ಸಾಹಸ ಮಾಡಿದರು. ಹಣ ಸುರಿದು ಈ ಕೆಲಸ ಮಾಡಿಸಿದ್ದರೆ ೧೦,೦೦೦ ರೂ.ಗಳಷ್ಟು ವೆಚ್ಚವಾಗುತ್ತಿತ್ತು ಎಂದು ಅಂದಾಜು ಮಾಡಲಾಗಿದೆ. ಇದೀಗ ಲಖಾವಾ ಗ್ರಾಮದ ಆ ಕೆರೆ ಈ ಪ್ರದೇಶದ ಗ್ರಾಮಸ್ಥರಿಗೆ ಉತ್ತಮ ಭವಿಷ್ಯದ ಸಂಕೇತವಾಗಿ ಪರಿಣಮಿಸಿದೆ.

ಆಧುನಿಕ ಬೇಸಾಯ ಪದ್ಧತಿ ಪರಿಣಾಮ

ಮಧ್ಯ ಪ್ರದೇಶ ಮತ್ತು ರಾಜಾಸ್ಥಾನಗಳ ಕಥೆ ಆ ರೀತಿಯದಾದರೆ, ನಮಗೆ ಹತ್ತಿರದಲ್ಲೇ ಇರುವ ಕೊಯಮತ್ತೂರು ಜಿಲ್ಲೆಯ ಒಂದು ಕಥೆ ಹೀಗಿದೆ.

ಸೆಮ್ಮಿಪಾಳ್ಯಂ ಗ್ರಾಮದ ರೈತ ಎಸ್. ಪಿ. ಪಳನಿ ಸ್ವಾಮಿ ಆಧುನಿಕ ಬೇಸಾಯ ಮಾರ್ಗಗಳನ್ನು ಅನುಸರಿಸಿ ತನ್ನ ಭವಿಷ್ಯವನ್ನು ಉತ್ತಮಪಡಿಸಿಕೊಂಡಿದ್ದೇ ಅಲ್ಲದೆ ಇತರರಿಗೆ ಮಾರ್ಗದರ್ಶಕನಾದ. ಹೊಸ ವಿಧಾನಗಳನ್ನು ಅನುಸರಿಸಬೇಕೆಂಬ ತತ್ವವನ್ನು ಮಾನ್ಯಮಾಡಿ ಈ ಬಗ್ಗೆ ನಡೆಸಿ ನೋಡಬೇಕೆಂಬ ಉತ್ಸಾಹವೇ ಈ ಪರಿವರ್ತನೆಗೆ ಬಹುಮಟ್ಟಿಗೆ ಕಾರಣವಾಯಿತೆಂದು ಹೇಳಬಹುದು ಆತನಿಗೆ ತನ್ನದೆಂಬ ೩೦ ಎಕರೆ ಭೂಮಿ ಇದ್ದಿತು. ಇದು ಎಷ್ಟೋ ಆಯಿತು! ಆದರೆ ವಿಸ್ತಾರ ಕಟ್ಟಿಕೊಂಡು ಮಾಡುವುದಾದರೂ ಏನು? ಅಂತಹ ಫಲವತ್ತಾದ ಭೂಮಿಯಲ್ಲ. ಜೊತೆಗೆ ಅದು ಗದ್ದೆಯಲ್ಲ, ಹೊಲ. ಜೋಳ, ಬಾಜ್ರಾ ಇವುಗಳನ್ನು ಮಾತ್ರ ಬೆಳೆಯಬಹುದಿತ್ತು. ಆಧುನಿಕ ಬೇಸಾಯ ಮಾರ್ಗಗಳನ್ನು ಅನುಸರಿಸುವಂತೆ ಮಾಡಿದ ಸಲಹೆ ಆತನ ಮನಸ್ಸಿನ ಮೇಲೆ ಪರಿಣಾಮಕಾರಿಯಾಯಿತು. ಕೂಡಲೇ 'ಬುಲ್‌ಡೋಸರ್' ತರಿಸಿ ತನ್ನ ಭೂಮಿಯನ್ನು ಆತ ಹದಕ್ಕೆ ತರಲು ಪ್ರಯತ್ನಿಸಿದ. ಮುಂದೆ 'ಟ್ರಾಕ್ಟರ್' ಸಹ ಬಂತು. ನೆಲವೆಲ್ಲ ಸಮವಾಯಿತು. ಮತ್ತೆ ಬೇಸಾಯಕ್ಕೆ ಇದೊಂದು ಯೋಗ್ಯ ಭೂಮಿಯಾಯಿತು. ಈ ವಿಶೇಷ ಕ್ರಮಗಳ ಫಲವಾಗಿ ಹಿಂದೆ ಎಕರೆಯೊಂದಕ್ಕೆ ೨೮೫ ರೂ ಗಳಷ್ಟು ಬೆಲೆಯ ಉತ್ಪನ್ನವಿದ್ದ ಕಡೆ ಇದೀಗ ೬೭೦ ರೂ.ಗಳಷ್ಟು ಬೆಲೆ ಬಾಳುವ ಬೆಳೆಯಾಗುತ್ತಿದೆ. ಇನ್ನೂ ಸುಧಾರಣೆಗಳು ನಡೆಯುತ್ತಿದ್ದು ಬೆಳೆ ಪ್ರಮಾಣ ಇನ್ನೂ ಹೆಚ್ಚುವ ನಿರೀಕ್ಷೆ ಇದೆ.

ಪರಸ್ಪರ ಸಹಕಾರದ ಮೂಲಕ ಉನ್ನತಿ

ಈಗ ಉತ್ತರದ ಇನ್ನೊಂದು ಗ್ರಾಮದ ಕಡೆ ನೋಡೋಣ. ಶೇಲಾದ್ ಕೇವಲ ೩00 ಜನರಿರುವ ಗ್ರಾಮ. ಆದರೂ ಪರಸ್ಪರ ಸಹಕಾರ ತತ್ವವನ್ನು ಯಶಸ್ವಿಯಾಗಿ ಆಚರಣೆಗೆ ತಂದ ಪರಿಣಾಮವಾಗಿ ಈ ಗ್ರಾಮ ಇಂದು ಸುಖಸಂತೋಷಗಳಿಂದ ನಲಿಯುತ್ತಿದೆ ಇಲ್ಲಿರುವ ಒಂದು ಬಾಲಕಮಂದಿರ, ಎರಡು ಕೋಣೆಗಳ ಅಂದವಾದ ಒಂದು ಶಾಲೆ ಮತ್ತು ಆರುಫರ್ಲಾಂಗುಗಳ ಒಂದು ಉತ್ತಮ ರಸ್ತೆ—ಇವುಗಳನ್ನು ನೋಡುವುದಕ್ಕೇ ಒಂದು ಆನಂದ. ಈ ಪರಿವರ್ತನೆಗೆ ಕಾರಣನಾದ ಸಾಹಸಿ ರೈತ ಶಿಜೋಲ್ ನಾಯಕತ್ವದಲ್ಲಿ ಒಂದು ಸಹಕಾರ ಸಂಘ ಗ್ರಾಮಸ್ಥರಿಗೆ ಒಂದು ಉತ್ತಮ ನೆರವಾಗಿ ಸೇವೆ ಸಲ್ಲಿಸುತ್ತಿದೆ. ಈ ಜನಸೇವಕನಲ್ಲಿ ನಾಯಕನಿಗೆ ಇರಬೇಕಾದ ಎಲ್ಲಾ ಗುಣಗಳೂ ಇವೆಯೆಂದೇ ಇಷ್ಟೆಲ್ಲ ಸಾಧನೆ ಸಾಧ್ಯವಾಗಿದೆ.

ನಿವೃತ್ತ ಅಂಚೆ ನೌಕರನೊಬ್ಬನ ಸಾಹಸ

ಮಾನವನ ಕ್ರಿಯಾಶಕ್ತಿಯನ್ನು ನೋಡಲು ಹೀಗೆ ಹಳ್ಳಿ ಹಳ್ಳಿಯ ಮೂಲೆಗೇ ಹೋಗಬೇಕೆಂಬುದಿಲ್ಲ, ಮುಂಬಯಿ ಶಹರಿನ ಬಡಾವಣೆ ಘಾಟ್ಕೋಪರ್‌ನಲ್ಲೂ ಇಂತಹ ಸಾಧಾರಣ, ಆದರೆ ತುಂಬಾ ಸಾಹಸಿ ಜನರನ್ನು ನೋಡಬಹುದು ಠಾಕುರ್‌ನಂದ್ ಕಿಶೋರ್ ಸಿಂಗನ ಹೆಸರು ತುಂಬ ದೊಡ್ಡದಾದರೂ ಅವನೊಬ್ಬ ಸಾಧಾರಣ ಮನುಷ್ಯ. ನಿವೃತ್ತ ಅಂಚೆ ನೌಕರ. ವಿದ್ಯಾವಂತನಾಗುವ ಭಾಗ್ಯ ಅವನ ಪಾಲಿಗಿರಲಿಲ್ಲವಾದರೂ ಆತನಿಂದು ಘಾಟ್ಕೋಪರ್ ಬಡಾವಣೆಯಲ್ಲಿ ಬಡಜನರ ಮಕ್ಕಳಿಗಾಗಿ ಶಾಲೆ ಸ್ಥಾಪಿಸಲು ದೃಢ ಸಂಕಲ್ಪ ಮಾಡಿಕೊಂಡ. ಮನೆಮನೆಗೆ ಹೋಗಿ ಚಂದಾ ಎತ್ತಿದ. ಅದೇ ಬಡಾವಣೆಯಲ್ಲಿ ಅವನು 'ಪೋಸ್ಟ್‌ಮನ್' ಆಗಿ ಕೆಲಸಮಾಡಿದ್ದುದರಿಂದ ಜನರ ಪರಿಚಯ ಸಹ ಇತ್ತು.

೧೯೩೪ರಲ್ಲಿ ಒಂದು ಸಣ್ಣ ಶಾಲೆಯೇನೋ ಆರಂಭವಾಯಿತು. ಹನ್ನೆರಡು ಬಾಲಕರು ಬರುತ್ತಿದ್ದರೆ ಹೆಚ್ಚು. ಇದರಿಂದ ನಂದಕಿಶೋರನ ಮನಸ್ಸಿಗೆ ತೃಪ್ತಿಯಾಗಲಿಲ್ಲ. ಎಂಟು ವರ್ಷಗಳ ಸತತ ಪ್ರಯತ್ನದ ಫಲವಾಗಿ ಶಾಲೆಯ ಕಟ್ಟಡಕ್ಕಾಗಿ ಆತನೊಂದು ನಿವೇಶನಕೊಳ್ಳಲು ಸಮರ್ಥನಾದ. ೧೯೪೭ರಲ್ಲಿ ಆ ನಿವೇಶನದಲ್ಲಿ ಮೈವೆತ್ತುನಿಂತ ಶಾಲೆಯ ಭವನ ೧,೫೦೦ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಿತು! ಜನ್ಮದ ಸಾರ್ಥಕತೆಗೆ ಇನ್ನೇನು ಬೇಕು? ಆದರೆ ನಂದ ಕಿಶೋರ್ ಇಷ್ಟರಿಂದಲೇ ತೃಪ್ತಿಪಟ್ಟುಕೊಳ್ಳಲಿಲ್ಲ. ಘಾಟ್ಕೋಪರ್‌ನಲ್ಲಿ ಒಂದು ಹಿಂದಿ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬುದು ಈ ಮಹಾಸಾಹಸಿ ಇದೀಗ ಪ್ರಯತ್ನಿಸುತ್ತಿದ್ದಾನೆ. ಇದಕ್ಕಾಗಿ ಎಷ್ಟು ಶ್ರಮಪಡಬೇಕೆಂಬುದು ಆತನಿಗೆ ತಿಳಿಯದ ವಿಷಯವಲ್ಲ. ಆದರೂ ಆತನ ಸಂಕಲ್ಪಕ್ಕೆ ಅದು ಚ್ಯುತಿ ತಂದಿಲ್ಲ. ಆತನೊಬ್ಬ ಆಶಾವಾದಿ; ನಿಜವಾದ ಮಾನವ ಶಕ್ತಿಯ ಪ್ರತೀಕ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No 466 N/50 date 2-12-1950 of the Director of public Instruction, Madras·

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್· ಐ· ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ· ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೋವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ·

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಜನಗಣನೆ

೧೯೬೧ರ ಜನಗಣನೆಯಲ್ಲಿ ನಿಜ ವಿವರವನ್ನು ಕೊಡಿರಿ

ಯಾವ ದುರುದ್ದೇಶದಿಂದಲೂ ನಿಮ್ಮನ್ನಾಗ ಪ್ರಶ್ನಿಸಲಾಗುವುದಿಲ್ಲ; ನೀವೂ ಮುಚ್ಚು ಮರೆಯಿಲ್ಲದೆ ಅವನ್ನು ಉತ್ತರಿಸಿರಿ.

ಆತನು ಹಾಲಿನವನೂ ಅಲ್ಲ, ಅಂಚೆಯವನೂ ಅಲ್ಲ—ಆದರೆ ಜನಗಣತಿ ವಿಭಾಗದ ಗಣಕ. ಆತನೇನೊ ತನ್ನ ಸರದಿ ಬರುವ ಮುನ್ನವೇ ಬಂದಿದ್ದಾನೆ. ೧೯೬೧ರ ಆರಂಭದಲ್ಲಿ ಆತನು ಅಧಿಕೃತವಾಗಿ ಬಂದಾಗ, ಆತನ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಪಡೆಯುವ ಬಗೆಗೆ ಭರವಸೆ ಪಡೆಯುವುದಕ್ಕಾಗಿ ಆತನೀಗ ಬಂದಿದ್ದಾನೆ.

ತನ್ನ ಪ್ರಶ್ನೆಗಳು ಸರಿಯೇ ಎಂಬುದನ್ನು ಆತ ಖಚಿತಪಡಿಸಿಕೊಳ್ಳುತ್ತಿದ್ದಾನೆ. ಏಕೆಂದರೆ, ತನ್ನ ಪ್ರಶ್ನೆಗಳ ಗುಣಾಂಶ, ಸ್ವರೂಪ ಮುಂತಾದುವನ್ನು ಪರೀಕ್ಷೆಗೆ ಗುರಿಪಡಿಸಿಕೊಳ್ಳುವ ಸಮಯಾವಕಾಶವಿದು.

ಎಂಥೆಂಥ ಪ್ರಶ್ನೆಗಳು?

ಉದಾಹರಣೆಗೆ: ಒಬ್ಬಾತ ಅಥವಾ ಒಬ್ಬಾಕೆಯ ಮದುವೆಯ ವಿಷಯ, ಹುಟ್ಟಿದ ಸ್ಥಳ, ಮತ, ಮಾತೃಭಾಷೆ, ಶಿಕ್ಷಣ, ಉದ್ಯೋಗ ಅಥವಾ ಕಾರ್ಯಕ್ಷೇತ್ರ ಇವುಗಳನ್ನು ಕುರಿತ ವಿಷಯಗಳನ್ನು ಜನಗಣತಿ ವಿಭಾಗದ ಗಣಕನು ಪಡೆಯಲಿಚ್ಛಿಸುತ್ತಾನೆ. ಮನೆಯ ಯಜಮಾನ ತನ್ನ ಸಂಸಾರದಲ್ಲಿರುವ ಜನರ ಸಂಖ್ಯೆ, ಆತನ ವಶದಲ್ಲಿರುವ ಭೂಮಿ ಕಾಣಿಯ ವಿಸ್ತೀರ್ಣ, ಆತನು ನಡೆಸುತ್ತಿರುವ ಕೈಗಾರಿಕೋದ್ಯಮ ಅಥವಾ ವ್ಯವಹಾರ—ಇವುಗಳ ಬಗೆಗೆ ಬಿಚ್ಚು ಮನಸ್ಸಿನಿಂದ ಉತ್ತರವನ್ನು ಹೇಳಬಲ್ಲನೆ? ಈ ವಿವಿಧ ಚೂರು ಚೂರು ವಿಷಯಗಳನ್ನೆಲ್ಲಾ ಸಂಗ್ರಹಿಸಿ ಅವುಗಳಿಂದ ಒಂದು ಗ್ರಾಮದ ಮುಖ್ಯ ಲಕ್ಷಣಗಳನ್ನು ಅಂದರೆ, ಅಲ್ಲಿ ಪಕ್ಕಾ ಅಥವಾ ಕಟ್ಟಡಗಳಿರುವವೇ, ಅಲ್ಲಿ ಮುಖ್ಯವಾಗಿ ಉದ್ಯೋಗಿಗಳಿರುವರೇ, ನಿರುದ್ಯೋಗಿಗಳಿರುವರೇ, ಅಲ್ಲಿ ಉತ್ಪಾದನೆಯಾಗುವ ವಸ್ತುಗಳು, ಅವುಗಳ ಮಾರಾಟ ವ್ಯವಸ್ಥೆ ಹೇಗಿವೆ? ಎಂಬಿತ್ಯಾದಿಗಳನ್ನು ವಿಶ್ಲೇಷಿಸಬಹುದು.

ಆ ಗಣಕನ ಪ್ರಶ್ನೆಗಳು ಸರಳವಾಗಿರುವುವು; ಅಂತೆಯೇ ಆತನ ಭಾಷೆಯೂ. ಆದರೆ, ಬಹುಶಃ, ಆತನು ಉತ್ತರ ಪಡೆಯಲಪೇಕ್ಷಿಸುವ ಪ್ರಶ್ನೆಗೆ ಅನುಗುಣವಾದ ನಿಖರವಾದ ಉತ್ತರವೀಯಲು ಆಗದಿರಬಹುದು. ಅಥವಾ, ಕೆಲವರಿಗೆ ಈ ಪ್ರಶ್ನೆಗಳು ಹಿಡಿಸದಿರಬಹುದು.

ಕೆಲವು ಸ್ಥಳಗಳಲ್ಲಿ ಇದು ವಾಸ್ತವವಾಗಿ ನಡೆದಿದೆ. ಪಂಜಾಬಿನ ಗ್ರಾಮವೊಂದರಲ್ಲಿ ವಯೋವೃದ್ಧ ರೈತನೊಬ್ಬನು, "ನಿಮ್ಮಲ್ಲಿ ಬ್ಯಾಟರಿ ಟಾರ್ಚ್ ಲೈಟ್ ಇದೆಯೇ?" ಎಂಬ ಪ್ರಶ್ನೆಗೆ ವಿರೋಧವನ್ನು ವ್ಯಕ್ತಪಡಿಸಿದ. ಆತನ ಗ್ರಾಮದಲ್ಲಿ, ಟಾರ್ಚನ್ನು 'ಕಳ್ಳರದೀಪ' ಎಂದು ಕರೆಯಲಾಗುತ್ತಿತ್ತು. ಕಳ್ಳರು ಅಂತಹ ದೀಪವನ್ನು ರಾತ್ರಿ ವೇಳೆಯಲ್ಲಿ ತಮ್ಮ ಧಂದೆಗಳಿಗಾಗಿ ಉಪಯೋಗಿಸುತ್ತಿದ್ದರು.

ಮತ್ತೊಂದು ಸ್ಥಳದಲ್ಲಿ ಕೆಲವು ಸಂದೇಹವಾದಿಗಳಿದ್ದರು. ಅವರು ಸಮಾಜವಾದಿ ಧ್ಯೇಯವನ್ನು ಕೈಗೊಂಡಿರುವ ದೇಶದಲ್ಲಿ 'ಮತ' ಎಂಬ ಕಲಮು ಇರಬೇಕೇ ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಇನ್ನೊಂದೆಡೆಯಲ್ಲಿ 'ಮನೆ' ಎಂಬ ಪದದ ಮೇಲೆ ವಿವಾದ ನಡೆಯಿತು.

ಉತ್ತರಗಳಲ್ಲಿ ಆತ್ಮ ವಿಶ್ವಾಸ

ಜನತೆಯು ತಮ್ಮ ಉತ್ತರಗಳಲ್ಲಿ ನೇರವಾಗಿಯೂ ಸ್ಪಷ್ಟವಾಗಿಯೂ ಇರುವರು. ಏಕೆಂದರೆ, ತಾವು ಕೊಡುವ ವಿಷಯವು, ಅಂತಿಮವಾಗಿ, ತಮ್ಮ ಹಿತರಕ್ಷಣೆಗೆ ಅನುಕೂಲವಾಗುವುದೆಂಬುದು ಅವರಿಗೆ ಗೊತ್ತು. ಈ ಗಣತಿಯಲ್ಲಿ ದೊರೆತ ದತ್ತಾಂಶಗಳನ್ನು ಉತ್ತಮ ಆರ್ಥಿಕ ವ್ಯವಸ್ಥೆ ಹಾಗೂ ಸಾಮಾಜಿಕ ಜೀವನವನ್ನು ನಿಯೋಜಿಸುವ ಸಲುವಾಗಿ ಉಪಯೋಗಿಸಲಾಗುವುದು. ಯಾವುದೇ ಪ್ರಸಂಗದಲ್ಲಿಯಾದರೂ ಈ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳಲ್ಲಿರುವ ವಿಷಯಗಳನ್ನು ವರಮಾನ ತೆರಿಗೆ, ಭೂಗಂದಾಯ ಅಥವಾ ಕೋರ್ಟಿನ ವಿಷಯಗಳಿಗೆ ತೆಗೆದುಕೊಳ್ಳಲಾಗುವುದಿಲ್ಲ.

ವಿವಿಧ ಜನರು ವಿವಿಧ ಕಡೆಗಳಲ್ಲಿ ಎತ್ತುವ ಎಲ್ಲಾ ಅಂಶಗಳೂ ಒಂದು ರೀತಿಯ ಸಹಾಯವನ್ನುಂಟುಮಾಡುತ್ತವೆ. ಏಕೆಂದರೆ, ಈ ಪ್ರಶ್ನೆಗಳ ರೂಪವನ್ನು ಸುಧಾರಿಸಬಹುದು, ಪುನಃ ರೂಪಿಸಬಹುದು. ಈ ಪ್ರಶ್ನೆಗಳನ್ನು ದೇಶವ್ಯಾಪಿಯಾದಂತಹ ಪ್ರಶ್ನೆಗಳನ್ನಾಗಿ ಸಿದ್ಧಗೊಳಿಸಲು, ಇವೆಲ್ಲ ಅನುಕೂಲವಾಗುತ್ತವೆ.

ಇದರ ಪರಿಣಾಮವಾಗಿ ೧೯೬೧ರಲ್ಲಿ ಪ್ರಶ್ನೆಯೂ ಅನುಮಾನಕ್ಕೆ ಎಡೆಗೊಡುವುದಿಲ್ಲ. ಅವುಗಳಿಗೆ ಉತ್ತರನೀಡಲು ಯಾರೂ ಹಿಂಜರಿಯಬೇಕಾಗಿಲ್ಲ. ಈ ಪ್ರಶ್ನೆಗಳಿಗೆ ದೊರೆತ ಉತ್ತರಗಳು ಸ್ತ್ರೀ ಪುರುಷರ ಸಂಖ್ಯೆಯನ್ನಷ್ಟೇ ಅಲ್ಲದೆ, ಅವರು ಸಾಧಿಸಿರುವ ಸಾಮಾಜಿಕ, ಆರ್ಥಿಕ, ಆರೋಗ್ಯ ಹಾಗೂ ಲೌಕಿಕ ಪ್ರಗತಿಯನ್ನೂ ಕ್ರೋಢೀಕರಿಸುತ್ತವೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 99/41 R-E.P.687/58

ಅರ್ಜಿದಾರ ಲಾರೆನ್ಸ್ ಅಂದ್ರಾದ ಲೋರೆ ಕೂಡಾ

ಯದ್ರಿರು ಸುಳ್ಯ ಮರಕಾಲ ಲೋರೆ ಕೂಡಾ

2. ನಾರನ ಮರಕಾಲ

3. ಎಚ್ಚ ಮರಕಾಲ

ಸದ್ರಿ ಅರ್ಜಿದಾರನು ಜ್ಯಾಹೀರು ಮಾಡುವ ದೇನಂದ್ರೆ

ಮೇಲಿನ ಅಮ್ಲಜ್ಯಾರಿಯಲ್ಲಿ ಯದ್ರಿಗೆ ಬಾಬ್ತು ಸ್ಥಿರ ಆಸ್ತಿಯನ್ನು ಯೇಲಂಮ್ಮಿಗೆ ಅಪೇಕ್ಷಿಸಿ ಸದ್ರಿ ಯಿಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವುದಕ್ಕೆ ತಾ17-3-59ಕ್ಕೆ ಯಿಟ್ಟದೆ. ಅ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಯದ್ರಿಗೆ ತಿಳಿಸೋಣಾಗಿಯದೆ.

ವ್ಯಾ. ತೇಜಪ್ಪ ಶೆಟ್ಟಿ,
ಅರ್ಜಿದಾರನ ಕಡೆ ಯಡ್ವೋಕೇಟ್,
ಕುಂದಾಪುರ

ಲೋಕ ಸಭೆಯಲ್ಲಿ

ಬೇಸಾಯಗಾರ-ಸರಕಾರಿ ನೌಕರರಲ್ಲಿ ಭೇದವೇಕೆ?

ಸರಕಾರಿ ನೌಕರರ ವೇತನವನ್ನು ಏರಿಸುವುದರಿಂದ ಆರ್ಥಿಕ ಸ್ಥಿತಿ ಅಡಿಮೇಲಾಗುವುದು.

"ಬೇಸಾಯಗಾರನ ವಾರ್ಷಿಕ ಉತ್ಪನ್ನವು ರೂ. ೩,೨೦೦ಕ್ಕೆ ಮಿಗಬಾರದೆಂಬ ಮಿತಿಹಾಕಲು ನಿರ್ಧಾರವಾಗುತ್ತಿರುವಾಗ ತಿಂಗಳಿಗೆ ರೂ ೩೫೦ಕ್ಕಿಂತಲೂ ಹೆಚ್ಚು ಸಂಬಳ ಪಡೆಯುವ ಸರಕಾರೀ ನೌಕರರ ಸಂಬಳವನ್ನು ಮತ್ತೂ ಏರಿಸುವ ಬಗ್ಗೆ ಅವಸರವೇಕೆ?" ಎಂದು ಶ್ರೀ ಕೆ. ಆರ್. ಆಚಾರ್ ಅವರು ಕಳೆದ ವಾರ ಲೋಕ ಸಭೆಯಲ್ಲಿ ಸಂಬಳ ಆಯೋಗ ಸಮಿತಿಯ ವರದಿ ಸಿದ್ಧವಾಗುವುದಕ್ಕೆ ಮೊದಲು ನೌಕರರಿಗೆ ತಾತ್ಕಾಲಿಕ ಪರಿಹಾರ ಕೊಡಬೇಕೆಂಬ ಅನಧಿಕೃತ ನಿರ್ಣಯವನ್ನು ವಿರೋಧಿಸಿ ಭಾಷಣವಿತ್ತರು.

ಶ್ರೀ ಆಚಾರ್ ಅವರ ಭಾಷಣದ ಮುಖ್ಯಾಂಶ ಇಂತಿದೆ:

ಈ ನಿರ್ಣಯದ ಪರವಾಗಿ ವಿರೋಧ ಪಕ್ಷದ ಹಲವು ಮಂದಿ ಮಾತನಾಡಿದರು ಆದರೆ ಈ ನಿರ್ಣಯದಂತೆ ಪರಿಹಾರ ಕೊಟ್ಟಲ್ಲಿ ಆಯವ್ಯಯದ ಮೇಲೆ ಅದರ ಪರಿಣಾಮವೇನಾಗುವುದೆಂಬುದನ್ನು ಪರಿಶೀಲಿಸಬೇಕು ಮುಂಗಡ ಪತ್ರವನ್ನು ಒಂದು ಸರಕಾರದ ಜವಾಬ್ದಾರಿ ಅರಿತ ವ್ಯಕ್ತಿಗಳು ರಚಿಸುವಾಗ, ಆಯವ್ಯಯಗಳ ನೆಲೆ ನಿರ್ಧರಿಸಿಕೊಂಡು ರಚಿಸುವರು. ಮುಂದಿನ ತಿಂಗಳುಗಳ ಬಗ್ಗೆ ಮಾತ್ರವಲ್ಲ ಗತ ತಿಂಗಳುಗಳ ಬಗ್ಗೆಯೂ ಅಲ್ಪ ಭತ್ತಿಯನ್ನೇ ಕೊಡುವುದಾದರೂ ಮುಂಗಡ ಪತ್ರದ ಮೇಲೆ ದೊಡ್ಡ ಪರಿಣಾಮವಾಗುವುದು.

ಸಂಬಳ ಆಯೋಗವು ತನ್ನ ವರದಿ ಪ್ರಕಟಣೆಯಲ್ಲಿ ವಿಳಂಬ ಮಾಡುತ್ತಿದೆ ಆದರೆ ಸಮಿತಿಯ ಹೊಣೆ ವಿಶಾಲವಾಗಿದೆ ಎಂಬುದನ್ನು ಮರೆಯಬಾರದು. ಅವರು ಕೇಂದ್ರ ಸರಕಾರದ ನಾಕರರ ಸಂಬಳವನ್ನು ಮಾತ್ರ ಗಮನಿಸಿದರೆ ಸಾಲದು, ರಾಜ್ಯ ಸರಕಾರದ ನೌಕರರ ಸಂಬಳವನ್ನೂ, ಸ್ಥಳೀಯ ಸಂಸ್ಥೆಯ ನೌಕರರು ಹಾಗೂ ಏಡೆಡ್ ಶಾಲೆಗಳ ಅಧ್ಯಾಪಕರ ಸಂಬಳವನ್ನೂ ಗಮನಿಸಬೇಕಾಗುತ್ತದೆ. ಹೀಗಾಗಿ ಕೇಂದ್ರ ಸರಕಾರೀ ನೌಕರರಿಗೆ ಮಾತ್ರ ಪರಿಹಾರ ನೀಡುವುದು ಸಾಧ್ಯವಿಲ್ಲ ಹೀಗಾಗಿ ಸಮಿತಿಯು ನೌಕರರಿಗೆ ಹೆಚ್ಚಿನ ರಿಯಾಯತಿ ತೋರಿಸಬಹುದೆಂಬ ಊಹನೆಯಿಂದ ತಾತ್ಕಾಲಿಕ ಪರಿಹಾರ ಈಗಲೇ ಕೊಡುವುದು ಸರಿಯೂಗದು. ಅದು ಆಯವ್ಯಯದ ಮೇಲೆ ದೊಡ್ಡ ಪರಿಣಾಮ ತರುವುದು ಅದರಲ್ಲೂ ರಿಯಾಯತಿಗಳು ಗತ ಕಾಲಕ್ಕೆ ಎಂದೂ ಅನ್ವಯಿಸಬಾರದು. ಹಾಗಾದಲ್ಲಿ ಆರ್ಥಿಕ ಸ್ಥಿತಿ ಅಡಿಮೇಲಾಗುವುದು.

ಇನ್ನು ಬೆಲೆಯ ಹೆಚ್ಚಳದಿಂದಾಗಿ ಈ ಪರಿಹಾರ ಅಗತ್ಯ ಎಂದು ವಾದಿಸಲಾಗುತ್ತಿದೆ. ಆದರೆ ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿದಲ್ಲಿ ಈ ವಾದ ಸರಿಯಲ್ಲ ಎಂಬುದು ಸ್ಪಷ್ಟ.

ನಿರ್ಣಯದಂತೆ, ಮಾಸಿಕ ವೇತನದ ಕನಿಷ್ಠ ಮಿತಿ ರೂ. ೩೫೦ ಎಂದರೆ ಇದು ವರ್ಷಕ್ಕೆ ರೂ. ೪೦೦೦ಕ್ಕೂ ಮೀರುವುದು. ಆದರೆ ಓರ್ವ ರೈತನ ವಾರ್ಷಿಕ ಉತ್ಪನ್ನದ ಗರಿಷ್ಠ ಮಿತಿಯೇ ವರ್ಷಕ್ಕೆ ರೂ. ೩,೨೦೦ ಎಂದು ಪರಿಗಣಿಸಲಾಗಿದೆ. ದೇಶದ ಜನಸಂಖ್ಯೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ಬೇಸಾಯಗಾರರಿಗೆ ಈ ಪರಮ ಮಿತಿ ತಿಂಗಳಿಗೆ ರೂ. ೨೫೦ರಷ್ಟಾಗುವಾಗ ಸರಕಾರಿ ನೌಕರರ ಕನಿಷ್ಠ ಮಿತಿಯೇ ರೂ. ೩೫೦ ಆಗುವುದು ಯಾವ ನ್ಯಾಯ? (ಆಗ ಸದಸ್ಯರೊಬ್ಬರು, ಭೂಮಿಯ ಹಿಡುವಳಿ ಮೇಲೆ ಮಿತಿ ಹಾಕುವುದಲ್ಲದೆ ಉತ್ಪಾದನೆಯ ಮೇಲೆ ಅಲ್ಲ ಎಂದರು) ಮೈಸೂರು ರಾಜ್ಯದ ನಿಯೋಜಿತ ಭೂಸುಧಾರಣಾ ಮಸೂದೆಯಂತೆ ಉತ್ಪತ್ತಿಯ ಮೇಲೆಯೇ ಮಿತಿ ಹಾಕುವ ಸೂಚನೆಯಿದೆ. ಈ ಎಲ್ಲ ಕಾರಣಗಳಿಂದ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ರೂ. ೧೦೦ ಅಥವಾ ಅದಕ್ಕೂ ಕಡಿಮೆ ವೇತನವಿರುವವರ ವಿಚಾರ ಬೇರೆ ಆದರೆ, ಅವರ ವಿಚಾರವೇ ನಿರ್ಣಯದಲ್ಲಿಲ್ಲ. ನಮ್ಮ ರೈತನೊಬ್ಬನ ಮಾಸಿಕ ಸಂಪಾದನೆಯೇನು? ನಮ್ಮ ಹಳ್ಳಿಗಳಲ್ಲಿ ದೇಶದ ಅಧಿಕ ಸಂಖ್ಯಾತರಾಗಿರುವ ಈ ಬೇಸಾಯಗಾರರ ಉತ್ಪತ್ತಿ ಹೆಚ್ಚುವ ಯಾವ ಕಾರ್ಯಕ್ರಮ ಕೈಕೊಳ್ಳಲಾಗುವುದು? ಹಳ್ಳಿಯಲ್ಲಿ ಸರಾಸರಿ ಉತ್ಪನ್ನವೂ ತಿಂಗಳಿಗೆ ರೂ. ೧೦೦ಕ್ಕೆ ತಲುಪದಿರುವಾಗ ರೂ. ೩೫೦ ಮಾಸಿಕ ವೇತನ ಪಡೆಯುವವರಿಗೆ ತಾತ್ಕಾಲಿಕ ಪರಿಹಾರ ಕೊಡಬೇಕೆನ್ನುವುದು ಯಾವ ನ್ಯಾಯ?

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಮಕ್ಕಳ ಮಗ್ಗಿ ಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

> ಅಜ್ಞಾನದಿಂದಲಾದರೂ ದುರ್ಮಾರ್ಗದ ಕಡೆಗೆ ಪಾದಾರ್ಪಣೆ ಮಾಡಿದರೆ, ತನ್ನ ಗೈಮೆಯ ಕೆಡುಕನ್ನು ತಿಳಿದುಕೊಂಡೊಡನೆಯೇ ಕ್ಷಣ ಹೊತ್ತು ತೆಗೆಯದೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಎಳೆದುಕೊಳ್ಳುವವನನ್ನು ವಿವೇಕಿಯೆಂದು ಹೇಳುತ್ತಾರೆ ಹೀಗೆ ಮಾಡದವನೇ ಅವಿವೇಕಿ ಮತ್ತು ಹಠವಾದಿ ಅವನನ್ನು ಯಾರೂ ಗೌರವಿಸಲಾರರು.

NAVAYUGA

Founder —

A B SHETTY,

Former Minister for Public Health
Govt of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೨-೩-'೫೯	೨೬

ರಸಹೀನರ ರಹಸ್ಯ

ಮೊನ್ನೆ ಮೊನ್ನೆ ಮಾರ್ಚ್ ೫ನೆಯ ದಿನಾಂಕ ಅಂಕಾರಾದಲ್ಲಿ ಪಾಕಿಸ್ತಾನ ಮತ್ತು ಅಮೇರಿಕಾ ಸಂಯುಕ್ತ ರಾಷ್ಟ್ರಗಳ ನಡುವೆ ಒಂದು ಸೈನಿಕ ಒಡಂಬಡಿಕೆಯು ಆಗಿದ್ದು, ಅದಕ್ಕೆ ಇಕ್ಕಡೆಯವರ ಅನುಮತಿ ಸ್ವೀಕಾರಗಳ ಪ್ರತೀಕವಾಗಿ ಸಹಿಯೂ ಬಿದ್ದಿರುತ್ತದೆ ಈ ಒಪ್ಪಂದದ ಮಾತುಕತೆಗಳು ಪ್ರಾರಂಭವಾದ ಗಣನೆಯನ್ನು ಎಣಿಸಿದರೆ, ಇದಕ್ಕೆ ಕೆಲವು ದಿನ ಪೂರ್ವದಲ್ಲಿಯೇ ಅಂಕಿತ ಬೀಳಬೇಕಾಗಿತ್ತು ಆದರೆ, ಈ ನಡುವೆ ಪಾಕಿಸ್ತಾನವು ಅಮೇರಿಕೆಯಿಂದ ಕೆಲವೊಂದು ಸ್ಪಷ್ಟೀಕರಣವನ್ನು ಕೇಳಿತೆಂದೂ ಅದು ದೊರೆತ ಮೇಲೆ ಸಹಿಯು ಬಿದ್ದಿತೆಂದೂ ತಿಳಿಯುತ್ತದೆ ಪಾಕ್ ಸರಕಾರದ ಪರವಾಗಿ ಸಹಿಹಾಕಿದ ವಿದೇಶೀಯ ಕಾರ್ಯದರ್ಶಿ ಶ್ರೀ ಎಸ್ ಎ ಬೇಗರು ಈ ಒಪ್ಪಂದವು ಕೇವಲ ಕಮ್ಯೂನಿಜಂನ 'ಆಕ್ರಮಣ ಮಾತ್ರಕ್ಕೆ ಸೀಮಿತವಾಗಿರದೆ, ಯಾವುದೇ ಭಾಗದಿಂದ ಒದಗುವ ಆಕ್ರಮಣಕ್ಕೂ ಅನ್ವಯಿಸುವುದೆಂದು ಬಹಿರಂಗಪಡಿಸಿದ್ದಾರೆ ಇದರಿಂದ ಪಾಕಿಸ್ತಾನದ ನೆರೆಯ ರಾಷ್ಟ್ರಗಳಲ್ಲಿ ಅಫಘಾನಿಸ್ತಾನ, ಇರಾನ್‌ಗಳಿಗಿಂತ ಭಾರತವೇ ಹೆಚ್ಚಿನ ಮಟ್ಟಿಗೆ ಚಿಂತಿತವಾಗಬೇಕಾಗಿ ಬಂದಿದೆ

ಈ ಸಹಾಯಕ ಒಪ್ಪಂದವು ಐಸನ್‌ಹಾವರರ ಮಧ್ಯಪೂರ್ವ ತಾತ್ವಿಕ ಯೋಜನೆಯ ಸ್ವಯಂ ಕಾರ್ಯರೂಪದಲ್ಲಿರುವುದಾದರೂ ಪಾಕಿಸ್ತಾನವು ಅರ್ಥ ಮಾಡಿಕೊಂಡಷ್ಟು ಸಹಾಯವು ಅದಕ್ಕೆ ದೊರೆಯುವಂತಿಲ್ಲ ಪಾಕ್ ವಿದೇಶಾಂಗ ಕಾರ್ಯದರ್ಶಿಯ ಉದ್ಗಾರವನ್ನು ಲಕ್ಷಿಸಿ, ಅಮೆರಿಕನ್ ರಾಯಭಾರಿಯೊಡನೆ ವಿಚಾರಿಸಿದಾಗ, ಅಮೇರಿಕೆಯು ಈ ಮೊದಲೇ ಇತ್ತಿರುವುದಕ್ಕಿಂತ ಹೆಚ್ಚಿನ ಸಹಾಯವನ್ನು ಪಾಕಿಸ್ತಾನಕ್ಕೆ ಕೊಡಲಾರದೆಂದೂ ಭಾರತಕ್ಕೆ ಇದರಿಂದ ವಿಪಂಚನೆಯುಂಟಾಗುವ ಸಂಭವ ಅನವಶ್ಯವೆಂದೂ ತಿಳಿದು ಬಂದಿದೆ ಆದರೆ, ಇಲ್ಲಿ "ಅನ್ಯ ರಾಷ್ಟ್ರಗಳಿಂದ ಆಕ್ರಮಣ" ಎಂದಾಗ ನಿಜವಾಗಿಯೂ ನಾವು ಹೆದರಬೇಕಾಗಿದೆ—ಎಂದರೆ ಭಾರತವು ಪಾಕಿಸ್ತಾನವನ್ನು ಆಕ್ರಮಿಸಿದ ಅಥವಾ ಆಕ್ರಮಿಸಲು ಬಯಸುತ್ತಿದೆಎಂದರ್ಥವಲ್ಲ ವಿಭಜನೆಗೊಂಡ ಪಾಕಿಸ್ತಾನವು ಪ್ರತ್ಯೇಕ ರಾಜ್ಯವೆಂದು ಅದರ ಸರಕಾರವನ್ನು ಭಾರತವು ಕಾಲಕಾಲಕ್ಕೆ ಮನ್ನಿಸುತ್ತ ಬಂದಿದೆ, ತನ್ನಂತೆಯೇ ಅದೂ ಅಭಿವೃದ್ಧಿಯಾಗಬೇಕೆಂದು ಬಯಸುತ್ತಿದೆ ಆದರೆ, ಪಾಕಿಸ್ತಾನದ ಪಿಕಲಾಟದಿಂದ ಭಾರತಕ್ಕೆ ಹೆದರಿಕೆ ಇರುವುದನ್ನು ಅಲ್ಲಗಳೆಯುವಂತಿಲ್ಲ

ಅಮೇರಿಕೆ ಮತ್ತು ಪಾಕಿಸ್ತಾನಗಳ ಅಂತರ್ಯವನ್ನು ಕೆದಕಿ ನೋಡಲು ಸಾಧ್ಯವಿಲ್ಲ ಕೇವಲ ಕಮ್ಯುನಿಜಂನ ವಿರುದ್ಧವಾಗಿ ಈ ಒಪ್ಪಂದವಿರುವುದಾದರೆ, ಅದೇನೂ ಹೊಸ ಮಾತಲ್ಲ,ಹಳೆಯದೇ ಎಂದು ಸುಮ್ಮನಿರಬಹುದು, ಆದರೆ ಇನ್ನೊಂದು ಕುಂಟುಪಟ್ಟಿಯನ್ನು ಸೇರಿಸಿದುದೇಕೆ? ಹೀಗೆ ಸೇರಿಸಿರುವುದು ವಾಸ್ತವಿಕವೇ ಎಂದು ತಿಳಿಯುವಂತಿಲ್ಲ ಸಾಮಾನ್ಯವಾಗಿ ಸೈನಿಕ ಆಡಳಿತೆಯಲ್ಲಿ ಮುನ್ನಡೆಯುತ್ತಿರುವ ಪಾಕಿಸ್ತಾನಕ್ಕೆ ಸ್ವದೇಶದ ಆಡಳಿತೆಯನ್ನು ಸುಗಮಗೊಳಿಸಲು ಈ ಸಹಾಯ ಬೇಕಾಗಿರಲೂ ಬಹುದು ಆದರೆ, ಅದೇ ಸರಿ ಎಂದ ಸುಮ್ಮನಿರುವುದು ಸಾಧ್ಯವಿಲ್ಲ. ಭಾರತದ ಮೇಲೆ ಪದೇ ಪದೇ ನಂಜುಕಾರುತ್ತಿರುವ ಪಾಕಿಸ್ತಾನವನ್ನು ನಂಬುವುದೂ ದುಸ್ತರವಾಗಿರುವಾಗ ಅಮೇರಿಕೆ—ಪಾಕಿಸ್ತಾನಗಳ ನಡುವಿನ ಈ ಸೈನಿಕ ಒಪ್ಪಂದದ ರಹಸ್ಯವು ರಹಸ್ಯವಾಗಿಯೇ ಉಳಿದಿದೆ ಇದನ್ನು ಸ್ಫೋಟಗೊಳಿಸುವುದು ಅವಶ್ಯ 'ಕಮ್ಯುನಿಜಂ"ನ್ನೊಂದನ್ನು ಬಿಟ್ಟರೆ, ಇನ್ನೊಂದು ನೆವನದಿಂದ ಭಾರತ-ಪಾಕಿಸ್ತಾನಗಳ ನಡುವೆ ಇರುವ ಗಡಿವಿವಾದಗಳು,ಸೀಮಾಪ್ರದೇಶದಲ್ಲಿ ಪ್ರತಿದಿನ ಎಂಬಂತೆ ನಡೆಯುತ್ತಿರುವ ಗುಂಡುಗಳ ಸುರಿಮಳೆ ಆಗುತ್ತಿರುವ ಆಕ್ರಮಣ,ಹೊಂದುತ್ತಿರುವ ಜೀವ ನಷ್ಟ—ಇವುಗಳನ್ನು ಉಲ್ಬಣಾವಸ್ಥೆಗೇರಿಸಿ, ಭಾರತವನ್ನು ಆಕ್ರಮಣ ಕರ್ತೃವೆಂದು ಸಾರಿ ಅಮೇರಿಕೆಯು ಇತ್ತ ಸಹಾಯವನ್ನು ದುರುಪಯೋಗಪಡಿಸುವ ದುರಾಲೋಚನೆಯಿಂದಲೇ ಈ ಒಪ್ಪಂದವು ಆಗಿದೆ ಎಂದು ತಿಳಿಯುವುದಕ್ಕೂ ಅವಕಾಶವಿಲ್ಲದಿಲ್ಲ ಹಾಗಾದರೆ, ಕಮ್ಯುನಿಸ್ಟ್ ರಶ್ಯದ ಆಕ್ರಮಣದ ಭಯಕ್ಕಿಂತಲೂ ಭಾರತದೊಡನೆ ಹೋರಾಡುವ ಉದ್ದೇಶವೇ ಪಾಕಿಸ್ತಾನಕ್ಕೆ ಹೆಚ್ಚಿರುವುದೆಂದು ತಿಳಿಯಬೇಕಾಗುತ್ತದೆ ಇದಕ್ಕಾಗಿ ಬಗದಾದ ಕೂಟದಲ್ಲೂ ತನ್ನ ಬೇಳೆಯನ್ನದು ಬೇಯಿಸಿಕೊಂಡಿದೆ ಎನ್ನಬೇಕು

ಪ್ರಧಾನಿ ನೆಹರೂ ಈ ವಿಷಯವನ್ನು ಕೂಲಂಕಷವಾಗಿ ತಿಳಿದುಕೊಳ್ಳತೊಡಗಿದ್ದಾರೆ. ಅವರಿಗಿನ್ನೂ ಅಂತರ್ಯದ ರಹಸ್ಯ ತಿಳಿದಿಲ್ಲ ಪಾಕಿಸ್ತಾನವಾದರೂ ಭಾರತವೇ ತನ್ನ ಪ್ರಥಮ ಶತ್ರುವೆಂದು ಘೋಷಿಸುವಷ್ಟು ಧೈರ್ಯವನ್ನು ಇದುವರೆಗೆ ತಾಳಿಲ್ಲವೆಂಬುದು ಸುದೈವದ ಸಂಗತಿ. ರಾಜ್ಯ ಸಭೆಯಲ್ಲಿ ಪ್ರಧಾನಿ ನೆಹರೂ ಅಮೇರಿಕೆಯಿಂದ ಶ್ರೀ ಬೇಗರ ಉದ್ಗಾರದ ಕುರಿತಾಗಿ ಸ್ಪಷ್ಟೀಕರಣವನ್ನು ಕೇಳುವರೆಂದು ಭರವಸೆಯಿತ್ತಿರುವುದು ಸ್ವಾಗತಾರ್ಹ ಹಾಗೂ ಈ ಸ್ಪಷ್ಟೀಕರಣದಿಂದ ಭಾರತದ ಅಂಜಿಕೆ ದೂರವಾಗುವುದೆಂದ ನಂಬಬಹುದು ಅಲ್ಲದೇ ಅಮೇರಿಕೆಯೂ ಕಮ್ಯುನಿಜಂನ್ನು ತಡೆಗಟ್ಟಲು ಹೆಣಗುತ್ತಿರುವ ಭಾರತದೊಡನೆ ವೈಮನಸ್ಯವನ್ನು ಕಟ್ಟಿಕೊಳ್ಳಲು ಬಯಸಲಾರದೆಂದೂ ಪಾಕೀಸ್ತಾನಕ್ಕೆ ತಾವಿತ್ತ ನೆರವು ಈ ಮೊದಲಿನದಕ್ಕಿಂತ ಯಾವುದೇ ದೃಷ್ಟಿಯಲ್ಲಿ ವ್ಯಾಪಕವಾಗಿರುವುದಿಲ್ಲವೆಂದೂ ಸ್ಪಷ್ಟೀಕರಿಸಿದರೆ, ನಮ್ಮ ಶಂಕೆ ತಗ್ಗದಿರದು.

ಸಂಕ್ಷಿಪ್ತ ಸುದ್ದಿಗಳು

ಮದ್ರಾಸದಲ್ಲಿ ಅಣುಶಕ್ತಿ ಕೇಂದ್ರ

ಮದ್ರಾಸ ಸರಕಾರವು ತನ್ನ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಲ್ಲ ಅಣುಶಕ್ತಿ ಕೇಂದ್ರವೊಂದನ್ನು ಸ್ಥಾಪಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಿದೆ ರಾಜ್ಯವು ತನ್ನ ಪ್ರಾಕೃತಿಕ ಸಂಪತ್ತೆಲ್ಲವನ್ನೂ ಬಳಸಿಕೊಂಡಿದ್ದು, ಅದರ ಮುಂದಿನ ಅಭಿವೃದ್ಧಿಗಾಗಿ ಅಣುಶಕ್ತಿಯು ಆವಶ್ಯಕವಾಗಿದೆ ಇದರಿಂದಲೇ ಮದ್ರಾಸದಲ್ಲಿ ಈ ಕೇಂದ್ರ ಸ್ಥಾಪನೆಗಾಗಿ ಒತ್ತಾಯ ನಡೆದಿದೆ ಈ ವಿಚಾರವು ದಕ್ಷಿಣ ವಲಯದ ಸಭೆಯಲ್ಲಿ ಮಾತ್ರ ಚರ್ಚಿಸಲ್ಪಟ್ಟಿರುವುದಲ್ಲದೇ ಮದ್ರಾಸ ಸರಕಾರವೇ ನೇರವಾಗಿ ಕೇಂದ್ರ ಸರಕಾರವನ್ನು ವಿನಂತಿಸಿಕೊಂಡಿದೆ ಕನ್ಯಾಕುಮಾರಿ ಜಿಲ್ಲೆಯಲ್ಲಿ ಅಣುಶಕ್ತ್ಯುತ್ಪಾದನೆಗೆ ಆವಶ್ಯಕವಾದ ಥೇರಿಯಂ ಮೊದಲಾದ ಪದಾರ್ಥಗಳು ದೊರೆಯುತ್ತಿದೆ. ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ಅಣುಶಕ್ತಿ ಆಯೋಗವು ಈ ಪ್ರಶ್ನೆಯನ್ನು ಪರ್ಯಾಲೋಚಿಸುವುದರಲ್ಲಿ ಸಂದೇಹವಿಲ್ಲ ಎಂದು ಮದ್ರಾಸದ ವಿದ್ಯುತ್ ಶಾಖೆಯ ಮಂತ್ರಿ ಶ್ರೀ ವಿ ರಾಮಯ್ಯ ವಿಧಾನ ಸಭೆಯಲ್ಲಿ ತಿಳಿಸಿದ್ದಾರೆ

ಸ್ತುತ್ಯ ಉಪಕ್ರಮ

ಉಡುಪಿ ನಗರ ಸಭೆಯ ಅಧ್ಯಕ್ಷರಾದ ಡಾ| ಕೆ ಎಲ್. ಐತಾಳರು ನಗರದ ವಿವಿಧ ವಾರ್ಡುಗಳಲ್ಲಿರುವ ತೆರಿಗೆದಾರರ ಸಂಕಷ್ಟಗಳನ್ನು ಅರಿತುಕೊಳ್ಳುವ ಸದುದ್ದೇಶದಿಂದ ಪ್ರತಿ ಭಾನುವಾರ ಒಂದೊಂದು ವಾರ್ಡಿನ ಒಂದೊಂದು ಕೇಂದ್ರದಲ್ಲಿ ತೆರಿಗೆದಾರರನ್ನು ಭೇಟಿಯಾಗುವ ಕಾರ್ಯಕ್ರಮವನ್ನಿಟ್ಟು ಕೊಂಡಿದ್ದಾರೆ ಈ ಸಂದರ್ಭದಲ್ಲಿ ಆಯಾ ವಾರ್ಡಿನ ತೆರಿಗೆದಾರರು ನಿಶ್ಚಿತದಿನದಂದು ನಿಯಮಿತ ಸ್ಥಳದಲ್ಲಿ ಅಧ್ಯಕ್ಷರನ್ನು ಕಂಡು, ತಮ್ಮ ವಾರ್ಡಿನ ಕೊರತೆಗಳತ್ತ ಅವರ ಗಮನವನ್ನು ಸೆಳೆಯಬೇಕಾದುದು ಅವಶ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ತೆರಿಗೆದಾರರನ್ನು ಪ್ರತ್ಯಕ್ಷವಾಗಿ ಈ ರೀತಿ ನಗರ ಸಭಾಧ್ಯಕ್ಷರು ಮುಖತಃ ಕಂಡು ವಿಚಾರ ವಿನಿಮಯ ನಡೆಸುವುದು ಉಡುಪಿ ನಗರ ಸಭೆಯ ಜನ ಹಿತಚಿಂತನೆಯ ಕಾರ್ಯಕ್ರಮಗಳಲ್ಲಿ ಮಹತ್ವಪೂರ್ಣವಾದುದೆಂದು ಹೇಳಬಹುದು ಜನತೆಯ ಹಾಲಿಹವಾಲೆಗಳನ್ನು ತಿಳಿದುಕೊಳ್ಳುವುದರಲ್ಲಿ ಮಾತ್ರವಲ್ಲ ಅವನ್ನು ಹೋಗಲಾಡಿಸುವುದರಲ್ಲೂ ಆಸಕ್ತಿ ವಹಿಸುವುದರಲ್ಲಿ ಡಾ| ಐತಾಳರೂ ನಗರಸಭೆಯೂ ಹಿಂದುಳಿಯಲಾರರೆಂದು ಆಶಿಸುತ್ತೇವೆ. ನಗರ ಸಭಾಧ್ಯಕ್ಷರ ಈ ನೂತನ ಕಾರ್ಯಕ್ರಮದ ಸಂಪೂರ್ಣ ಸದುಪಯೋಗವನ್ನು ನಗರದ ಎಲ್ಲ ತೆರಿಗದಾರರೂ ಪಡೆದುಕೊಂಡು, ನಗರಾಭಿವೃದ್ಧಿಗೆ ಸಹಾಯಕರಾಗುವರೆಂದೂ ನಂಬುತ್ತೇವೆ ಡಾ| ಐತಾಳರ ಈ ಯೋಜನೆಯು ಉಳಿದ ನಗರ ಸಭೆಗಳಿಗೆ ಆದರ್ಶವಾಗಿ ಪರಿಣಮಿಸಲಿ

ನೂತನ ಮಹಾಭಾರತ ಯುದ್ಧ

ನಾವು ನಮ್ಮ ಪೂರ್ವಜರ ಶೌರ್ಯ ಧೈರ್ಯಗಳನ್ನು ಅಳವಡಿಸಿಕೊಂಡು ತೀರ ಬೇಕಿಯಾದ ಮತ್ತು ಹಿಂದೆಂದೂ ನಡೆಯದಂತಹ ದಾರಿದ್ರ್ಯವನ್ನೆದುರಿಸುವ ಯುದ್ಧವನ್ನು ಮಾಡುವುದು ಅವಶ್ಯ ಪ್ರಗತಿ ಪರವಾಗಿ ತೀವ್ರ ಗತಿಯಿಂದ ಬದಲಿಸುತ್ತಿರುವ ಜಗತ್ತು ಭಾರತಕ್ಕೆ ಇತ್ತ ಆಹ್ವಾನವನ್ನು ಸ್ವೀಕರಿಸಿ ಈ ಹೋರಾಟದಲ್ಲಿ ಭಾರತವು ಜಯಶೀಲವಾಗಬೇಕಾಗಿದೆ ಜನತೆಯು ಪರಿಶ್ರಮಪೂರ್ವಕವಾಗಿ ದುಡಿಯಬೇಕು ಎಂದು ಪ್ರಧಾನಿ ನೆಹರೂ ಕರೆಯಿತ್ತಿದ್ದಾರೆ ಭಾರತವು ದಾರಿದ್ರ್ಯದ ವಿರುದ್ಧ ಹೂಡಬೇಕಾದ ಯುದ್ಧವನ್ನು ಅವರು ಕುರುಕ್ಷೇತ್ರದ ಕದನಕ್ಕೆ ಹೋಲಿಸಿ, ಜನತೆಯ ಅವಶ್ಯಕತೆಗಳನ್ನು ದೊರಕಿಸುವ ಈ ಹೋರಾಟದಲ್ಲಿ ಸ್ತ್ರೀ ಪುರುಷ ಬಾಲಕರೆಲ್ಲರೂ ಮುಂದೆ ಬರಬೇಕೆಂದು ಇಲ್ಲಿ ಖಡ್ಗದ ಬದಲಿಗೆ ಪರಿಶ್ರಮದಿಂದ ದುಡಿಯುವುದು ಮತ್ತು ತ್ಯಾಗಜೀವನಗಳು ಅತ್ಯವಶ್ಯವೆಂದೂ ತಿಳಿಸಿದರು

ಮೈಸೂರು ಮುಂಗಡಪತ್ರ

ಮೈಸೂರು ರಾಜ್ಯದ ಮುಂಗಡ ಪತ್ರವನ್ನು ಕಳೆದ ಬುಧವಾರ ವಿಧಾನ ಸಭೆಯಲ್ಲಿ ಅರ್ಥ ಮಂತ್ರಿ ಶ್ರೀ ಟಿ ಮರಿಯಪ್ಪನವರು ಮಂಡಿಸಿದರು. ಇದರಲ್ಲಿ ೧೯೫೯—೬೦ರ ವರ್ಷದಲ್ಲಿ ರೂ. ೫೫೬೮ ೯೮ ಲಕ್ಷ ಆದಾಯವೆಂದೂ ರೂ ೫೫೨೧ ೫೮ ವ್ಯಯವೆಂದೂ ಒಟ್ಟು ರೂ ೪೭.೪೦ ಉಳಿತಾಯವೆಂದೂ ತೋರಿಸಲಾಗಿದೆ. ರಾಜ್ಯ ಪುನರ್ಘಟನೆಯ ಕಾರಣದಿಂದ ಉಂಟಾಗಿರುವ ಸಮಸ್ಯೆಗಳನ್ನು ಎದುರಿಸಲಾಗಿದ್ದು, ಆರ್ಥಿಕ ಸಮೀಕರಣದ ಪರಿಣಾಮವಾಗಿ ರಾಜ್ಯಕ್ಕೆ ಕರಗಳಲ್ಲಿ ಅಧಿಕ ಪಾಲು ಹಾಗೂ ೭ ಕೋಟಿ ರೂಪಾಯಿಗಳ ವಾರ್ಷಿಕ ಸಹಾಯ ದೊರೆಯುತ್ತಿರುವುದರಿಂದ ನಮ್ಮ ಕೊರತೆಗಳೆಲ್ಲವನ್ನೂ ನಿವಾರಿಸಿಕೊಂಡು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಭದ್ರಗೊಳಿಸಬಹುದು ಎಂದು ಮಾನ್ಯ ಮಂತ್ರಿವರ್ಯರು ಹೇಳಿ, ವಿದ್ಯುಚ್ಛಕ್ತಿಯ ಮೇಲಿನ ಸರ್ ಚಾರ್ಜನ್ನು ಏಕರೂಪಕ್ಕೆ ತರುವುದು, ಶಿಕ್ಷಣ ಕರ, ಆರೋಗ್ಯ ಕರ ಮೊದಲಾದ ಅನೇಕ ಕರಗಳಲ್ಲಿ ಏಕರೂಪತೆ ಸಾಧಿಸುವುದು ಮೊದಲಾದುವುಗಳನ್ನು ಪರ್ಯಾಲೋಚಿಸಲಾಗುತ್ತಿದೆ ಎಂದೂ ಅಂದರು.

೧೯೫೯-೬೦ರ ಮುಂಗಡ ಪತ್ರದಲ್ಲಿ ವ್ಯಯವಾಗುವುದೆಂದು ಗೊತ್ತಾದರೂ ೫೫೨೦ ೫೮ ಲಕ್ಷಗಳ ವಿತರಣೆಯು ಈ ರೀತಿಯಾಗಿದೆ: ಶಿಕ್ಷಣ—ರೂ. ೧೧೩೨.೪೬ ಲಕ್ಷ; ವೈದ್ಯಕ ಸಾರ್ವಜನಿಕ ಆರೋಗ್ಯ—ರೂ ೫೦೬.೪೦ ಲಕ್ಷ, ಒಕ್ಕಲುತನ ೨೭೩ ೧೦ ಲಕ್ಷ, ಗ್ರಾಮೋದ್ಧಾರ—ರೂ ೧೫೬.೩೨ ಲಕ್ಷ, ಪಶು ಸಂಗೋಪನ-ರೂ ೧೦೩ ೪೦ ಲಕ್ಷ, ಸಹಕಾರ-ರೂ ೭೩ ೫೧ ಲಕ್ಷ, ಉದ್ದಿಮೆ ಪೂರೈಕೆ-ರೂ ೧೯೨ ೦೦ ಲಕ್ಷ; ನೀರಾವರಿ— ರೂ ೬೮೧ ೦೩ ಲಕ್ಷ.

ಸೌಹಾರ್ದಮಯ ಸಂದರ್ಶನ

ರಶ್ಯದ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರು ಚೀನದ ಪ್ರಮುಖ ವ್ಯಕ್ತಿಯೋರ್ವರೊಂದಿಗೆ ಕೈರೋ ನಗರವನ್ನು ಸದ್ಯದಲ್ಲಿಯೇ ಸಂದರ್ಶಿಸಲಿರುವರೆಂದು ತಿಳಿಯುತ್ತದೆ ಅಂತೆಯೇ ಸಂಯುಕ್ತ ಅರಬ ಪು

ಜಾರಾಜ್ಯದ ಅಧ್ಯಕ್ಷ ಶ್ರೀ ನಸ್ಸೇರರು ಈ ವರ್ಷದ ಕೊನೆಯಭಾಗದಲ್ಲಿ ಭಾರತವನ್ನು ಸಂದರ್ಶಿಸುವರೆಂದೂ ವದಂತಿಯಿದೆ. ಈ ಎರಡು ಸಂದರ್ಶನಗಳೂ ಮಹತ್ವಪೂರ್ಣವಾಗಿವೆಯೆಂದು ತಿಳಿಯಲಾಗುತ್ತಿದೆ.

ಕರೀಮಗಂಜದ ಕೀಟಲೆ

ಪಾಕಿಸ್ತಾನಿ ಸೈನಿಕರು ಫೆಬ್ರವರಿ ೬ನೆ ದಿನಾಂಕದಿಂದಾರಂಭಿಸಿ ಅವ್ಯಾಹತವಾಗಿ ನಡೆಸಿಕೊಂಡು ಬರುತಿದ್ದ ಗುಂಡಿನ ದಾಳಿಯನ್ನು ಪೂರ್ವ ಪಾಕಿಸ್ತಾನ—ಭಾರತಗಳ ಗಡಿಯಲ್ಲಿ ನಿಲ್ಲಿಸುವ ಒಪ್ಪಂದವೊಂದನ್ನು ಮಾರ್ಚ ೮ರಂದು ವ್ಯವಹಾರಕ್ಕೆ ತರಲಾಯಿತು. ಈ ಒಪ್ಪಂದವು ಎಂಟನೆಯದಾಗಿದೆ. ಕರೀಮಗಂಜ ಭಾಗದಲ್ಲಿಯ ೫೦ ಮೈಲು ಗಡಿ ಪ್ರದೇಶದಲ್ಲಿ ಈ ಒಪ್ಪಂದವನ್ನು ಅನುಸರಿಸಲಾಗಿದೆ. ಪಾಕಿಸ್ತಾನಿ ಸೈನಿಕರು ಇಲ್ಲಿ ಸುಮಾರು ೭೫೦ ತಾಸುಗಳ ಕಾಲ ಗುಂಡೆಸೆಯುತ್ತಿದ್ದರೆಂದೂ ತಿಳಿದು ಬಂದಿದೆ. ಈಗ ಈ ಪ್ರದೇಶದಲ್ಲಿ ದಾಳಿಯು ಸಂಪೂರ್ಣ ನಿಂತಿದೆ ಎಂದೂ ಹೇಳಲಾಗುತ್ತದೆ.

ಹೊಸ ರೀತಿಯ ಮಣ್ಣಿನ ಗಾರೆ

ಮಳೆಗಾಲದಲ್ಲಿ ಹಳ್ಳಿಗಳಲ್ಲಿನ ಮನೆಯ ಮಣ್ಣಿನ ಗೋಡೆಗಳು ಮಳೆಯ ನೀರಿನಿಂದ ಹಾಗೂ ನೀರ ತೇವದಿಂದ ಉಬ್ಬುವುದು, ಬಿರುಕು ಬಿಡುವುದು ಹಾಗೂ ಉರುಳುವುದು ಮೊದಲಾದುವನ್ನು ತಡೆಹಿಡಿಯಲು ರೂರ್ಕಿಯಲ್ಲಿರುವ ಕಟ್ಟಡ ಸಂಶೋಧನಾ ಸಂಸ್ಥೆಯು ಒಂದು ಬಗೆಯ ನೀರು ಒಳಹೋಗಗೊಡದ ಗಾರೆಯನ್ನು ಸಿದ್ಧಪಡಿಸಿರುತ್ತದೆ. ಈ ವಿಶಿಷ್ಟವಾದ ಗಾರೆಯನ್ನು ಮೊದಲು ಪ್ರಾಯೋಗಿಕವಾಗಿ ಬಳಸಿಕೊಂಡು, ಅವು ಯಶಸ್ವಿ ಕಾರ್ಯ ನೆರವೇರಿಸುವುವೆಂದು ಕಂಡುಬಂದ ಮೇಲೆ, ಅದನ್ನು ಹೆಚ್ಚೆಚ್ಚು ತಯಾರಿಸಲಾಗುವುದೆಂದು ವಸತಿ ಶಾಖೆಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ ರಾಜ್ಯಸಭೆಯಲ್ಲಿ ಮಾತಾಡುತ್ತ ಹೇಳಿದ್ದಾರೆ.

ಅಡಿಕೆ ಬೇಸಾಯ ಸಂಶೋಧನಾ ಕೇಂದ್ರ

ನಮ್ಮ ಸಂಸ್ಕೃತಿ ಹಾಗೂ ಸಾಮಾಜಿಕ ಜೀವನದಲ್ಲಿ ಅಡಿಕೆಯು ಮುಖ್ಯ ಪಾತ್ರವನ್ನು ವಹಿಸುತ್ತದೆ. ಆದರೆ ನಮ್ಮ ದೇಶದಲ್ಲಿ ಅಡಿಕೆಯ ಉತ್ಪನ್ನದ ಕೊರತೆ ಇದೆ. ನಮಗೆ ಬೇಕಾದಷ್ಟು ಅಡಕೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೊರ ದೇಶಗಳಿಂದ ಪ್ರತಿವರ್ಷ ಸುಮಾರು ೧೦ ಲಕ್ಷ ಮಣಗಳಷ್ಟು ಅಡಿಕೆಯನ್ನು ತರಿಸಿಕೊಳ್ಳಲು ೫ರಿಂದ ೬ ಕೋಟಿ ರೂಗಳಷ್ಟು ಹಣ ವೆಚ್ಚವಾಗುತ್ತದೆ. ಭಾರತವು ಅಡಿಕೆಯ ಉತ್ಪಾದನೆಯ ವಿಷಯದಲ್ಲಿ ಸ್ವಪರಿಪೂರ್ಣತೆಯನ್ನು ಸಾಧಿಸಲು ಅನುಕೂಲಪ್ರದವಾದ ವ್ಯವಸ್ಥೆಯನ್ನು ಅನುಗೊಳಿಸುವ ಸಲುವಾಗಿ ೧೯೪೯ರಲ್ಲಿ ಭಾರತೀಯ ಕೇಂದ್ರ ಅಡಿಕೆ ಸಮಿತಿಯನ್ನು ಸ್ಥಾಪಿಸಲಾಯಿತು. ಅಡಿಕೆಯ ವಿಷಯದಲ್ಲಿ ಸ್ವಪರಿಪೂರ್ಣತೆ ಸಾಧಿಸಲು, ಎಕರೆಯೊಂದಕ್ಕೆ ಹೆಚ್ಚು ಬೆಳೆ ತೆಗೆಯಲು ಸಾಧ್ಯವಾಗುವಂತಹ ಸಂಶೋಧನೆಗಳು ನಡೆಯಬೇಕಾಗಿದೆ ಎಂದು ಭಾರತ ಸರ್ಕಾರದ ಬೇಸಾಯ ಶಾಖೆಯ ಉಪಮಂತ್ರಿಗಳಾದ ಶ್ರೀ ಎಂ. ವಿ. ಕೃಷ್ಣಪ್ಪನವರು ತುಮಕೂರು ಜಿಲ್ಲೆಯ ಹಿರೇಹಳ್ಳಿಯಲ್ಲಿ ಪ್ರಾದೇಶಿಕ ಅಡಿಕೆ ಬೇಸಾಯ ಸಂಶೋಧನಾ ಕೇಂದ್ರವೊಂದನ್ನು ಉದ್ಘಾಟಿಸುತ್ತಾ ತಿಳಿಸಿದರು.

ಮೈಸೂರು ರಾಜ್ಯದ ಆಹಾರ ಹಾಗೂ ಬೇಸಾಯ ಶಾಖೆಯ ಮಂತ್ರಿಗಳಾದ ಶ್ರೀ ಕೆ. ಎಫ್. ಪಾಟೀಲ್‌ರವರು ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಅವರು ತಮ್ಮ ಭಾಷಣದಲ್ಲಿ ಅಡಿಕೆಯ ಬೇಸಾಯಗಾರರು ಆಧುನಿಕ ಬೇಸಾಯ ವಿಧಾನಗಳನ್ನು ಅನುಸರಿಸುವುದರಿಂದ ಹೆಚ್ಚು ಅಡಿಕೆಯನ್ನು ಬೆಳೆಯಲು ಸಾಧ್ಯ ಎಂದೂ ತಿಳಿಸಿದರು. ಅಡಿಕೆಯ ಬೆಳೆಯಲ್ಲಿ ಕೇರಳ ಪ್ರಥಮ ಸ್ಥಾನವನ್ನು ಗಳಿಸಿದರೆ ಮೈಸೂರು ಎರಡನೆಯ ಸ್ಥಾನವನ್ನು ಗಳಿಸಿದೆಯೆಂದೂ ಅರಕಲಗೂಡಿನಲ್ಲಿರುವ ಅಡಿಕೆ ಮಾರಾಟ ಸಂಘವು ಉತ್ತಮ ಕೆಲಸ ನಡೆಸುತ್ತಿದೆಯೆಂದೂ, ಅಂತಹ ಇನ್ನೊಂದು ಸಂಘವನ್ನು ತುಮಕೂರಿನಲ್ಲಿ ಸ್ಥಾಪಿಸಲಾಗುವುದೆಂದೂ ತಿಳಿಸಿದರು.

ಅಲ್ಲಲ್ಲಿಯ ಸುದ್ದಿ ಸಾರ

ನಗರ ಸಭಾಧ್ಯಕ್ಷರ ಕರ್ತವ್ಯ— ಇದೇ ತಾ. ೫ರಲ್ಲಿ ಉಡುಪಿ ಸಹಕಾರಿ ಟೌನ್ ಬೇಂಕಿನ ಆಡಳಿತ ಸಮಿತಿಯವರು ಉಡುಪಿ ನಗರ ಸಭಾಪತಿಗಳಾಗಿ ಆರಿಸಲ್ಪಟ್ಟ ಡಾ| ಕೆ. ಎಲ್. ಐತಾಳರಿಗೂ ಸದಸ್ಯರಾಗಿ ಆರಿಸಲ್ಪಟ್ಟ ಶ್ರೀ ಪಿ. ಎನ್. ಕೃಷ್ಣಮೂರ್ತಿರಾಯರಿಗೂ ಡಾ| ಟಿ. ಎಂ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿದರು. ಆರಂಭದಲ್ಲಿ ಬೇಂಕಿನ ಅಧ್ಯಕ್ಷ ಶ್ರೀ ಕಲ್ಯಾಡಿ ಗುರುರಾಜ ರಾಯರು ಸ್ವಾಗತ ಭಾಷಣ ಮಾಡಿದರು. ತರುವಾಯ ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾವ್, ಟಿ. ರಮೇಶ ಪೈ, ಡಾ| ಯು. ಸುಂದರರಾಮ ಪೈ ಮೊದಲಾದವರು ಸಂದರ್ಭೋಚಿತ ಭಾಷಣವನ್ನಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ಡಾ| ಐತಾಳರು ನಗರ ಸಭೆಯವರು ಮಾಡಬೇಕಾಗಿರುವ ಕೆಲಸಗಳನ್ನು ವಿವರಿಸಿದರು. ಶ್ರೀ ಎಮ್. ವಾಮನ ಭಟ್ಟರು ಆಭಾರ ಸೂಚಿಸಿದರು.

ಶಾಲಾ ವರ್ಧಂತಿ- ಆತ್ರಾಡಿ ಶಾಲಾ ವರ್ಧಂತಿಯು ಕಳೆದ ತಾ ೨೩ರಲ್ಲಿ ಶ್ರೀ ಯು. ಎಸ್. ನಾಯಕ್, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾತಃಕಾಲ ಹಿರೆಬೆಟ್ಟು ಪಟೇಲ್ ಶ್ರೀ ಎಚ್. ತಿಮ್ಮಪ್ಪ ಹೆಗಡೆಯವರು ಧ್ವಜವನ್ನರಳಿಸಿ ಸಿಹಿ ತಿಂಡಿಯನ್ನು ಹಂಚಿದರು. ಸಂಜೆ ಶಾಲಾ ಸಮಿತಿಯ ಅಧ್ಯಕ್ಷ ಎ. ಸಂಜೀವ ಹೆಗಡೆಯವರು ಸ್ವಾಗತ ಭಾಷಣ ಮಾಡಿದರು. ಮುಖ್ಯೋಪಾಧ್ಯಾಯರು ವರದಿಯನ್ನೋದಿದರು. ಪರ್ಕಳ ಪಂಚಾಯತ್ ಬೋರ್ಡಿನ ಅಧ್ಯಕ್ಷ ಶ್ರೀ ರಾಮಚಂದ್ರ ಹೆಗಡೆಯವರು ಬಹುಮಾನ ವಿತರಣೆ ಮಾಡಿದರು. ಬಳಿಕ ಶ್ರೀಗಳಾದ ಎ. ಸತೀಶ ಹೆಗಡೆ, ಮುದ್ರಾಡಿ ಕೃಷ್ಣಯ್ಯ ಶೆಟ್ಟಿ, ಕೆ. ಹಿರಿಯಣ್ಣ ಶೆಟ್ಟಿ, ಎನ್. ಕೃಷ್ಣಯ್ಯ ಶೆಟ್ಟಿ, ಇವರು ಶಾಲಾ ಏಳಿಗೆಯನ್ನು ಕೊಂಡಾಡಿ ಮಾತನಾಡಿದರು. ಬಳಿಕ ಅಧ್ಯಕ್ಷ ಯು. ಎಸ್ ನಾಯಕರು ಶಾಲೆ ಮತ್ತು ಊರಿನ ಅಭಿವೃದ್ಧಿಗಾಗಿ ಸಲಹೆಗಳನ್ನಿತ್ತು ತನ್ನ ಸಹಕಾರದ ಭರವಸೆಯನ್ನಿತ್ತರು. ತರುವಾಯ ನಾಟಕಾದಿ ವಿಧವಿಧ ವಿನೋದಾವಳಿಗಳು ಜರಗಿದವು.

ಸುರತ್ಕಲ್— ವಿದ್ಯಾದಾಯಿನೀ ಹೈಸ್ಕೂಲಿನ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ಇದೇ ತಾ. 4ರಂದು ಶ್ರೀ ಕೊಡೆತ್ತೂರು ಅನಂತ ಪದ್ಮನಾಭ ಉಡುಪರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಎಮ್ ವಾಸುದೇವರಾಯರಿಂದ ಪರಿಚಯ ಭಾಷಣವೂ ಶಾಲಾ ವಿದ್ಯಾರ್ಥಿ ನಾಯಕರಿಂದ ವರದಿ ವಾಚನವೂ ಆದ ಮೇಲೆ ಅಧ್ಯಕ್ಷರ ಭಾಷಣ, ವಿದ್ಯಾರ್ಥಿಗಳ ಸಾಹಿತ್ಯದ ಚಟುವಟಿಕೆಗಳು ನೆರವೇರಿದವು

ಶಾಲಾ ವಾರ್ಷಿಕೋತ್ಸವ— ಮೂಲ್ಕಿಯ ಯು. ಬಿ. ಎಂ. ಸಿ. ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು 23—2—1959ರಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಕೇಶವ ರಾಯರು ಸ್ವಾಗತಿಸಿದರು. ಶ್ರೀ ಯನ್. ರಮಾನಂದ ಶೆಟ್ಟಿಯವರು ಶಾಲಾ ಸ್ವಸ್ತಿ ವಾಚನ ಮಾಡಿದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಜಯರಾಮ ಹೆಗ್ಡೆಯವರು ಶಾಲಾ ವರದಿ ವಾಚನ ಮಾಡಿದರು. ಶ್ರೀಮತಿ ಕುಡ್ವರಿಂದ ಬಹುಮಾನ ವಿತರಣೆಯಾದ ಬಳಿಕ, ಶ್ರೀ ವಿ. ಎಸ್. ಕುಡ್ವರು ಅನೇಕ ಹಿತ ಸೂಚನೆಗಳೊಂದಿಗೆ ತನ್ನ ಅಧ್ಯಕ್ಷ ಭಾಷಣವನ್ನು ಮುಗಿಸಿದರು.

ಅಂದು ಬೆಳಿಗ್ಗೆ ಗಂಟೆ 9ಕ್ಕೆ ಡಾ. ಕೆ. ಪಿ. ಮಧ್ಯಸ್ಥರು ಧ್ವಜಾರೋಹಣ ಮಾಡಲು, ಶಾಲಾ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು.

ಈ ಕಾರ್ಯಕ್ರಮದ ಅಂಗವಾಗಿ ಶಾಲಾ ಬಾಲಕಿಯರಿಂದ 'ವೀರ ಮಾತೆ' ಎಂಬ ಐತಿಹಾಸಿಕ ನಾಟಕವನ್ನೂ, ಶಾಲಾ ಬಾಲಕರಿಂದ “ವಿದ್ಯೆದ ತಾದಿ” ಎಂಬ ತುಳು ಸಾಮಾಜಿಕ ನಾಟಕವನ್ನೂ ಅತ್ಯಂತ ಯಶಸ್ವಿಯಾಗಿ ಆಡಿತೋರಿಸಲಾಯಿತು. ಶ್ರೀ ಪಿ. ಬಾಬ ಶೆಟ್ಟರು ಧನ್ಯವಾದಗಳನ್ನು ಸಮರ್ಪಿಸಿದರು.

ಕೊಡಗಿನ ಪಾರಾಣೆ ಮೂಲ ಶಿಕ್ಷಣ ಶಾಲಾ ವಾರ್ಷಿಕೋತ್ಸವವು— ಕಳೆದ ತಾ 1ರಂದು ಶ್ರೀ ಸಿ. ಯಂ. ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನಾ ನಂತರ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಶ್ರೀಪತಿರಾವ್ ಪಳಿಮಾರ್ಕರರು ವರದಿಯನ್ನು ಓದಿದರು.

ಮಡಿಕೇರಿ ವಲಯದ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಕೆ. ಎ. ಸೋಮಣ್ಣನವರು “ಮಕ್ಕಳ ಪೋಷಣೆಯಲ್ಲಿ ಹೆತ್ತವರ ಹೊಣೆಗಾರಿಕೆ” ಎಂಬ ವಿಚಾರದಲ್ಲಿ ಬೋಧಪ್ರದವಾದ ಭಾಷಣವನ್ನಿತ್ತರು. ಬಳಿಕ ಅಧ್ಯಕ್ಷ ಶ್ರೀ ಸಿ. ಯಂ. ತಿಮ್ಮಯ್ಯನವರು ಕಡ್ಡಾಯ ಶಿಕ್ಷಣ, ಪೋಷಕ ಬೋಧಕ ಸಂಘಗಳ ಆವಶ್ಯಕತೆ, ಮಹಿಳೆಯರ ಶಿಕ್ಷಣದ ಮಹತ್ವಗಳ ಬಗ್ಗೆ ಪ್ರಸ್ತಾಪಿಸಿ ಶಾಲೆಯ ಸರ್ವತೋಮುಖವಾದ ಅಭಿವೃದ್ಧಿಗೆ ಸಂತೋಷ ಸೂಚಿಸಿ ಅಧ್ಯಾಪಕ ವೃಂದವನ್ನು ಅಭಿನಂದಿಸಿದರು. ಶ್ರೀ ಶ್ರೀಪತಿರಾವ್ ಪಳಿಮಾರ್ಕರರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು.

ರಾತ್ರಿ ಶಾಲಾ ಬಾಲಕ ಬಾಲಕಿಯರಿಂದ ನಾಟಕ, ನೃತ್ಯ ಸಂಗೀತಾದಿ ಕಲಾಕಾರ್ಯಕ್ರಮಗಳು ಪ್ರದರ್ಶಿಸಲ್ಪಟ್ಟವು. ಸೋಜರ್ ಬಿ. ಎಸ್. ಕಾಳಪ್ಪನವರು ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಬಹುಮಾನ ವಿನಿಯೋಗ ಮಾಡಿದರು.

ಬೆಳ್ಳಾರೆ— ಸ್ಥಳೀಯ ಲೋಕಲ್‌ಫಂಡ್ ಆಸ್ಪತ್ರೆಯ ವಾರ್ಷಿಕೋತ್ಸವವು ಇತ್ತೀಚೆಗೆ ಪುತ್ತೂರಿನ ಅಸಿಸ್ಟಾಂಟ್ ಕಮಿಷನರಾದ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಬಿ. ಕಿಟ್ಟಣ್ಣ ರೈಗಳು ಸ್ವಾಗತಿಸಿದ ಮೇಲೆ ಡಾ| ಎಂ. ಪಿ. ಕಲ್ಲೂರರು ವರದಿಯನ್ನು ಓದಿದರು. ಡಾ. ಬಿ. ಕೃಷ್ಣ ಭಟ್ಟರು ಶಿಶು ಪ್ರದರ್ಶನವನ್ನು ಉದ್ಘಾಟಿಸಿ ಬಹುಮಾನ ವಿತರಣೆ ಗೈದರು. ಅಧ್ಯಕ್ಷರ ಭಾಷಣವಾದ ಮೇಲೆ ವಿವಿಧ ವಿನೋದಾವಳಿಗಳಾದುವು.

ಮುಂಬಯಿಯ ಕನ್ನಡಿಗರ ಡೈರೆಕ್ಟರಿ— ಬಹು ವಿಸ್ತೀರ್ಣವಾದ ಮುಂಬಯಿ ನಗರದಲ್ಲಿ ಲಕ್ಷ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕನ್ನಡಿಗರೆಲ್ಲರ ಪರಿಚಯವನ್ನು ಮಾಡಿಕೊಡುವ ಕಾರ್ಯವು ಅತ್ಯಂತ ಸಾಹಸದ್ದೂ ಮತ್ತು ಬಹಳ ಪ್ರಯಾಸದ್ದೂ ಆಗಿರುವುದೆಂಬುದು ಎಲ್ಲರೂ ತಿಳಿದ ವಿಷಯ. ಹೀಗಿದ್ದರೂ ಇಲ್ಲಿಯ “ಕರ್ನಾಟಕ ಸಂಘ”ವು ಅತಿ ಬಿಕ್ಕಟ್ಟಿನದಾದ ಈ ಕೆಲಸವನ್ನು ಕಳೆದ ವರ್ಷ ಪ್ರಾರಂಭಿಸಿತು.

ಈ ವರೆಗೆ ಕಲೆಹಾಕಿದ ಸಂಗತಿಗಳ ಮೇಲಿಂದ ಈ ಪಟ್ಟಣದ ಕನ್ನಡಿಗರ ಸಂಖ್ಯೆಯು ಮೂರು ಲಕ್ಷಕ್ಕೆ ಮಿಕ್ಕಿರುವದು ತಿಳಿದು ಬಂದಿರುವದಲ್ಲದೆ ಈ ನಗರದ ಎಲ್ಲ ಉದ್ಯೋಗ, ವ್ಯವಹಾರ, ವ್ಯವಸಾಯ ಕೆಲಸಗಳಲ್ಲಿ ಕನ್ನಡಿಗರು ಕಂಡು ಬರುತ್ತಾರೆ. ಕೆಲವರು ಉಚ್ಚ ಶ್ರೇಣಿಯ ಉದ್ಯೋಗಸ್ಥರೆಂದು ಹೆಸರು ಗಳಿಸಿದ್ದಾರೆ; ಮತ್ತೆ ಕೆಲವರು ವಕೀಲಿ, ವೈದ್ಯಕಿ, ಕಲೆ ಮುಂತಾದ ಸುಶಿಕ್ಷಿತ ವ್ಯವಸಾಯಗಳಲ್ಲಿ ಎತ್ತಿದ ಕೈಯವರಾಗಿದ್ದಾರೆ. ಇನ್ನುಳಿದವರು ಮೇಲ್ತರಗತಿಯ ಉದ್ದೇದಾರರೂ ಆಡಳಿತಗಾರರೂ ಆಗಿದ್ದಾರೆ.

ಮುಂಬಯಿಯಲ್ಲಿದ್ದಷ್ಟು ಕನ್ನಡ ಜನವಸತಿಯು ಭಾರತದ ಬೇರಾವ ಪಟ್ಟಣದಲ್ಲಿಯೂ ಇಲ್ಲ. ಈ ದೊಡ್ಡ ಸಂಖ್ಯೆಯೇ ಅವರಿಗೆ ಒಂದು ಮಧ್ಯಮ ತರಗತಿಯ ಜಿಲ್ಲೆಯ ಸ್ಥಾನವನ್ನು ಕೊಡಲಿದೆಎಂದೂ ಹೇಳಬಹುದು.

ಈ ಡೈರೆಕ್ಟರಿಯಲ್ಲಿ ಕರ್ನಾಟಕದ ಧಾರ್ಮಿಕ ಪರಂಪರೆ, ಕನ್ನಡ ಸಾಹಿತ್ಯದ ವಿಕಾಸ, ಔದ್ಯೋಗಿಕ ಬೆಳವಣಿಗೆ, ನಿಸರ್ಗದ ಕಾಣಿಕೆಗಳು—ಈ ಮುಂತಾದ ಸೂಕ್ತ ವಿಷಯಗಳ ಸೇರ್ಪಡೆಯಾದರೆ ಅದರ ವೈಶಾಲ್ಯ-ಉಪಯುಕ್ತತೆಗಳು ಹೆಚ್ಚುವದರಲ್ಲಿ ಸಂಶಯವಿಲ್ಲ.

ಈ ಸಂಗತಿಗಳನ್ನು ಕಲೆ ಹಾಕುವದಕ್ಕಾಗಿ ಕರ್ನಾಟಕದ ಉದ್ಯೋಗ, ವ್ಯವಹಾರಸ್ಥರ ಸಹಕಾರ ಸಹಾಯಗಳನ್ನು ಯಾಚಿಸುವುದಕ್ಕಾಗಿ ಡೈರೆಕ್ಟರಿ ಕಮಿಟಿ ಸದಸ್ಯರೂ ಮತ್ತು ಇಲ್ಲಿಯ ಕನ್ನಡ ವ್ಯಾಪಾರಸ್ಥರಾದ ಸರ್ವಶ್ರೀ ಎಸ್. ಟಿ. ಖಟಾವಕರ, ಸಿ. ಕೆ. ಮಾಲಾಪುರ, ಜಿ. ವಿ. ನಾಡಿಗ ಮತ್ತು ಆರ್. ವ್ಹಿ. ಕವಡಿ—ಇವರು ಮೈಸೂರ ರಾಜ್ಯದ ಪ್ರಮುಖ ಔದ್ಯೋಗಿಕ ಕೇಂದ್ರಗಳಿಗೆ ತೀವ್ರವೇ ಬರಲಿದ್ದಾರೆ.

ಮದರಾಸ್ “ದಾಸಪ್ರಸಾದ”ದಲ್ಲಿ ಸತ್ಕಾರ ಕೂಟ— ಇದೇ ವಾರದಲ್ಲಿ ಮದರಾಸು ಪರಶುವಾಕಂನಲ್ಲಿರುವ ದಾಸಪ್ರಕಾಶ್ ಹೋಟೇಲ್ ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ತಮ್ಮ “ದಾಸಪ್ರಸಾದ”ದಲ್ಲಿ ಯು. ಪಿ. ಗವರ್ನರ್ ಶ್ರೀ ವಿ. ವಿ. ಗಿರಿಯವರಿಗೆ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಅನೇಕ ಗಣ್ಯ ಮಹನೀಯರು ಆಹ್ವಾನಿತರಾಗಿದ್ದರು.

ತಿದ್ದುಪಡಿ- ಈ ಸಂಚಿಕೆಯ ಮೊದಲನೆಯ ಪುಟದಲ್ಲಿ “ನುಡಿ ಮುತ್ತು” ಪ್ರಧಾನ ಶೀರ್ಷಿಕೆಯಡಿಯಲ್ಲಿ ಮೊದಲನೆಯ ತಲೆಬರಹ “ಸರಕಾರಿ ಒಕ್ಕಲತನ”ವೆಂದು ತಪ್ಪಾಗಿ ಅಚ್ಚಾಗಿದೆ. ಅಲ್ಲನ್ನು “ಸಹಕಾರಿ ಒಕ್ಕಲತನ” ವೆಂದು ತಿದ್ದಿ ಓದಬೇಕಾಗಿ ವಿನಂತಿಸುತ್ತೇವೆ.

—ಸಂ. ನ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ
ಭಾವಾರ್ಚನೆ
ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.
ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು.
ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ವಿಧಿ ವಿಲಾಸ— ಲೇಖಿಕೆ: ತಪಸ್ವಿನಿ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ; ಮಾರಾಟಗಾರರು: ಸಮಾಜ ಪುಸ್ತಕಾಲಯ, ಭಗತಸಿಂಗ ಬೀದಿ, ಧಾರವಾಡ. ಪುಟಗಳು: ೪೦೪. ಬೆಲೆ: ರೂ ೪.

"ಹೆಣ್ಣಿನ ದುರಂತ ಜೀವನವನ್ನು, ಹೆಣ್ಣು ಹೆತ್ತವರ ಕರುಳಿನನೋವುಗಳನ್ನು ಮನೋವೇಧಕವಾಗಿ ಚಿತ್ರಿಸಿರುವ "ವಿಧಿ ವಿಲಾಸ ಎಂದು ಸಂಪಾದಕರು ಈ ಕಾದಂಬರಿಯನ್ನು ಪ್ರಶಂಸಿಸಿದ್ದಾರೆ. ಹಾಗೆಯೇ 'ಈ ಕಾದಂಬರಿ ತುಂಬಾ ಸಮುಸ್ಕ್ಯಾತ್ಮಕವಾಗಿದೆ. ಇದರ ಕಥಾವಸ್ತು ನಿಜವಾಗಿಯೂ ಜೀವಂತವಸ್ತು.... ನನ್ನ ಕಣ್ಣೆದುರಿಗೆ ನಡೆದ ಜೀವಂತ ದೃಶ್ಯ" ಎಂದು ಮುಂತಾಗಿ ಲೇಖಿಕೆಯವರೂ ಗ್ರಂಥಾದಿಯಲ್ಲಿ ತಮ್ಮ ನುಡಿಗಳನ್ನು ಲಿಖಿಸಿದ್ದಾರೆ.

ನಾಣಿ-ಗೋಪಿಯರು ರಂಗಮ್ಮನ ಮಕ್ಕಳು. ಹಾಲು ಜೇನು ಒಂದುಗೂಡಿದಂತೆ ಬಾಳುತಿದ್ದರು. ಸೂರಪ್ಪ ಸುಶೀಲಮ್ಮರು ತಮ್ಮ ಮೊದಲ ಮಗಳ ಬಾಳು ದುರಂತವಾಗಿ ಪರಿಣಮಿಸಿದುದನ್ನು ಕಂಡು, ಎರಡನೆಯ ಮಗಳು ಶಾಂತಳಿಗೆ ವಿವಾಹವೆಸಗುವುದಿಲ್ಲವೆಂದುಕೊಂಡಿದ್ದರೂ ವಿಧಿವಿಲಾಸದಿಂದ ಗೋಪಿಯ ಕೈಹಿಡಿಸಿಕೊಡುತ್ತಾರೆ, ಪುರೋಹಿತ ಭಟ್ಟರ ಆಗ್ರಹ, ಅನುಗ್ರಹಗಳ ಪರಿಣಾಮವಾಗಿ. ದಿವಾಳಿಖೋರ ಸೀತಾರಾಮನು ಈ ನಡುವೆ ಪ್ರವೇಶಿಸಿ ಸಂಸಾರ ಸುಖಕ್ಕೆ ಹುಳಿಹಿಂಡಿ, ಗೋಪಿಯನ್ನು ತನ್ನ ವಶಕ್ಕೆ ತಂದು ನಾಟಕ ಆಡುತ್ತಾನೆ. ಇದರಿಂದ ಕಠೋರನಾಗುತ್ತ ಬಂದ ಗೋಪಿಗೆ ಸೌಮ್ಯನಾದ ನಾಣಿಯೊಡನೆ ವೈಮನಸ್ಯ ಬೆಳೆಯುತ್ತದೆ ಯಾರು ಏನೇ ಮಾಡಿದರೂ ಅಣ್ಣತಮ್ಮಂದಿರು ಪಾಲಾಗಿ ಬೇರೆಯಾಗುತ್ತಾರೆ.

ಇತ್ತ ಶಾಂತ-ನಾಣಿಯರ ಸಂಬಂಧ ನಡೆದಿದೆ ಎಂಬ ಮಿಥ್ಯಾಪವಾದವನ್ನು ಹೊರಿಸಿ ಸೀತಾರಾಮನು ಗೋಪಿಯಲ್ಲಿ ಸಂದೇಹ ಭೂತ ಸವಾರಿ ಮಾಡುವಂತೆಸಗಿದ್ದ. ಶಾಂತಳ ಕಡೆಗೆ ಗೋಪಿಯ ಮನಸ್ಸು ದಿನೇದಿನೇ ಒರಟಾಗುತ್ತ ಬಂತು. ತಮ್ಮ, ತಾಯಿ, ಮಾವ, ಭಟ್ಟರು— ಯಾರ ಮಾತೂ ಪಥ್ಯವಾಗಲಿಲ್ಲ ಆತನಿಗೆ ಇದರಿಂದ ಆಕೆಯ ಜೀವನ ದಾರುಣವಾಯಿತು. ಕಾಲಕ್ರಮದಲ್ಲಿ ಕುರುಡಿನ ಮೇಲೆ ಬೊಕ್ಕೆ ಎದ್ದಂತೆ ನಾಣಿಯ ಮೂಕ ಲಕ್ಷಣದ ಮಗುವೊಂದು ಶಾಂತಳಿಗೆ ವಿಧಿವಿಲಾಸದಿಂದ ಜನಿಸಿತು; ಆಕೆಯ ಹಾಗೂ ಮಗುವಿನ ಬಾಳು ಸ್ಮಶಾನ ಸದೃಶವಾಗ ತೊಡಗಿತು.

ಶಾಂತಳ ತಾಯಿ ಸುಶೀಲಮ್ಮ ಮಗಳಿಂದ ದಿಟ್ಟರ ಕತೆಯು ಈ ರೀತಿ ಗೋಳು ಹೊಯ್ಯುವಂತಾದುದಕ್ಕೆ ಮಮ್ಮಲ ಮರುಗುತ್ತಾರೆ; ಆವರಿಗೆ ಬುದ್ಧಿಭ್ರಮಣೆಯಾಗುತ್ತದೆ; ತಮ್ಮ ಮನೆ ತಿಳಿಯದ ಹೆಣ್ಣು ಮಗುವನ್ನು ಆಕೆ ಕುತ್ತಿಗೆ ಹಿಸುಕಿ ಕೊಲ್ಲುತ್ತಾಳೆ ಅತ್ತ ಆಕೆಯ ಬಾಳೂ ನಿರ್ದಯವಾಗುತ್ತದೆ. ಆಕೆಯ ಪ್ರಾಣಪಕ್ಷಿಯೂ ನಿಸ್ಸಾನದಿಂದ ಹಾರಿ ಅನಂತಾಕಾಶದಲ್ಲಿ ಲೀನವಾಗುತ್ತದೆ. ಶಾಂತಳ ತಂದೆ ಸೂರಪ್ಪನವರೂ ದೇಶಾಂತರ ಹೋಗುತ್ತಾರೆ

ಗೋಪಿಯ ಸಂಸಾರವನ್ನು ಬೆಳೆಯಲು ಹಾರಿದ ಪ್ರಯತ್ನ ವ್ಯರ್ಥವಾಗುತ್ತಿರುವಷ್ಟರಲ್ಲಿ ಶಾಂತ ಪುನಃ ಗರ್ಭಿಣಿಯಾಗುತ್ತಾಳೆ. ಭಟ್ಟರು ಮತ್ತು ರಂಗಮ್ಮ ಆಕೆಯನ್ನು ಆಸ್ಪತ್ರೆಗೆ ಸೇರಿಸುತ್ತಾರೆ. ಅತ್ತ ನಾಣಿಗೂ ಗೋಪಿಯಂತಹ ರೂಪುಳ್ಳ ಮಗು ಹುಟ್ಟುತ್ತದೆ. ಸೀತಾರಾಮನು ಸಿಕ್ಕಿದವರಿಗೆ ಕೈಕೊಟ್ಟು ಪರಾರಿಯಾಗುತ್ತಾನೆ ಗೋಪಿಯ ಮನಸ್ಸು ಚಂಚಲವಾಗುತ್ತದೆ. ಭಟ್ಟರ ರಂಗಮ್ಮನ ಉಪದೇಶ ಫಲಕಾರಿಯಾಗತೊಡಗುತ್ತದೆ. ಆದರೆ ಎಚ್ಚರ ಬರುವುದಕ್ಕೆ ಮೊದಲೇ, ಗಾಣ ಮುರಿದುಹೋಗುತ್ತದೆ. ಶಾಂತ ಇಹಲೋಕ ಯಾತ್ರೆ ಮುಗಿಸುತ್ತಾಳೆ. ತನ್ನ ತಪ್ಪು ಅರಿವಾಗಿ ಸಹೋದರನ ಮೇಲೆ ವ್ಯರ್ಥ ಕೋಪಿಸಿ ಮನೆಬಿಡಿಸಿದ್ದನ್ನು ಕಂಡ ಪಾಪಿ ಗೋಪಿ, ತನ್ನ ತಪ್ಪನ್ನೊಪ್ಪಿಕೊಳ್ಳುತ್ತಾನೆ.

ಹೆಣ್ಣಿನ ಬಾಳು ದುರಂತಮಯವಾಗಿರುವುದೆಂಬುದನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ ಆದರೆ ಈ ಹೆಮ್ಮಕ್ಕಳ ಪಾತ್ರ ಚಿತ್ರಣ ಸಮಂಜಸವಾಗಿ ಬಂದಿಲ್ಲ. ಪುರುಷ ಪಾತ್ರಗಳಲ್ಲಿ ಭಟ್ಟರು ತಮ್ಮ ಮಾತನ್ನು ಕೊನೆಯತನಕ ನಡೆಸಿಕೊಡಲು ಬದ್ಧ ಕಂಕಣರಾದ ಮತ್ತು ನಾಣಿಯ ನಿಷ್ಕಲ್ಮಷ ಮನಸ್ಸಿನ ಚಿತ್ರ ತೃಪ್ತಿಕರವಾಗಿ ಮೂಡಿದೆ. ಸುಶೀಲಮ್ಮನ ಹೆಮ್ಮಕ್ಕಳನ್ನು ಗಂಡು ಮಕ್ಕಳಂತೆಯೇ ಕೊನೆಯ ತನಕವೂ ಸಾಕಬೇಕೆಂಬ ಮಾತು ಭಾವಿ ಶತಮಾನಕ್ಕೆ ಸರಿಹೋಗಬಹುದೋ ಏನೋ. ಮರ್ಯಾದಸ್ಥ ಮನೆತನದವರಿಂದ ಇಂತಹ ಮಾತು ಕೇಳಲಾರದು. ಒಂದು ವೇಳೆ ಬಂದಿದ್ದರೆ; ಆಗಲೇ ಆಕೆಗೆ ಮರುಳು ಬಡಿದಿರಬೇಕು. ಸ್ತ್ರೀಹೃದಯ ಕೋಮಲ ಹಾಗೂ ಮೃದುಲವಾಗಿರುವುದೆಂದು ಪ್ರತೀತಿಯಿರುವಾಗ, ಸುಶೀಲಮ್ಮ ತನ್ನ ಹೊಟ್ಟೆಯ ಮಗುವನ್ನು ಕತ್ತು ಹಿಸುಕಿದುದು ಅಸಾಮಾನ್ಯ ಸ್ತ್ರೀತ್ವವನ್ನೂ ಶ್ರೀಕಂಠನ ಪಾತ್ರ ಅಸಾಮಾನ್ಯ ಕಾರುಣ್ಯತ್ವವನ್ನೂ ಪ್ರತಿಬಿಂಬಿಸುತ್ತದೆ ಉಳಿದ ರಂಗಮ್ಮ, ಶಾಂತ, ವಿಶಾಲಾಕ್ಷಮ್ಮ, ಸರಸು ಮೊದಲಾದವರ ಪಾತ್ರಗಳು ಸಾಮಾನ್ಯವೇ ಆಗಿವೆ.

ಲೇಖಿಕೆ 'ತಪಸ್ವಿನಿ'ಯವರ ಚೊಚ್ಚಲ ಕೃತಿ ಈ ಬೃಹತ್ಕಾದಂಬರಿ "ವಿಧಿವಿಲಾಸ". ಇವರ ಶೈಲಿಯಲ್ಲಿ ಕಸುವಿದೆ. ಆದರೆ, ಈ ನಾಲ್ಕು ನೂರರ ಸನಿಹಕ್ಕೆ ಬಂದಿರುವ ಪುಟಗಳಷ್ಟನ್ನು ಅರ್ಧದಷ್ಟು ಇಳಿಸಿ, ಚಿತ್ರಿಸಲ್ಪಟ್ಟಿರುವ ಕಥೆಯನ್ನು ಹೇಳಬಹುದಿತ್ತೇನೋ ಎನಿಸುತ್ತದೆ. ಕೆಲವು ಕಡೆ ಅನಾವಶ್ಯಕವೆನಿಸಿದ ವಿವರಣೆಗಳು ಓದುಗರಿಗೆ ಬೇಸರವನ್ನುಂಟುಮಾಡುತ್ತವೆ. "ವಿಧಿವಿಲಾಸ"ದ ಕಥೆಯು ಮುಖ್ಯವಾಗಿ, ಹೆಣ್ಣಿನ ದುರಂತ ಜೀವನವನ್ನು ಚಿತ್ರಿಸಲು ಹೊರಟಿರುವುದು. ಅದರಲ್ಲಿ ಅಸ್ವಾಭಾವಿಕತೆ, ಅತಿರಂಜನೆ ಕೂಡಿಕೊಂಡಿರುವುದು. ಇದು ಒಂದು ಸಾಮಾನ್ಯ ತರಗತಿಯ ಕಾದಂಬರಿಯಾದರೂ ಲೇಖಿಕೆಯವರು ಇದಕ್ಕಿಂತ ಉತ್ತಮವಾದ ಕೃತಿಗಳನ್ನು ರಚಿಸುವ ಶಕ್ತಿಶಾಲಿನಿಯರೆಂದು ತಿಳಿಯಬಹುದು. ಅವರಿಂದ ಆದರ್ಶ ಹಾಗೂ ಉದಾತ್ತ ಕೃತಿಗಳನ್ನು ನಿರೀಕ್ಷಿಸಿದರೆ ತಪ್ಪಾಗಲಾರದು.

ಏಳಿಗೆಯ ಹಾದಿ — ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗದ ಪ್ರಕಟಣೆ, ದೆಹಲಿ, ೮ ಪುಟಗಳು: ೮೦. ಬೆಲೆ: ರೂ. ೦—೭೫.

ಭಾರತವು ತನ್ನ ಅಭಿವೃದ್ಧಿಯ ಸಲುವಾಗಿ ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡಿರುವುದು ಸರ್ವಶ್ರುತವಿದೆ. ಈಗಾಗಲೇ ಮುಗಿದ ಮೊದಲನೆಯ ಪಂಚವಾರ್ಷಿಕ ಯೋಜನೆಗೆ ಮೊದಲು ಭಾರತದ ಸ್ಥಿತಿಗತಿಗಳು ಯಾವ ರೀತಿಯಲ್ಲಿದ್ದುವು, ಈ ಯೋಜನೆ ಹಾಗೂ ಎರಡನೆಯ ಯೋಜನೆಗಳಿಂದ ದೇಶದ ಸಂಪತ್ಸಮೃದ್ಧಿಯೆಷ್ಟಾಯಿತು; ಯಾವ ಯಾವ ಪ್ರಧಾನ ಉದ್ಯಮ ಕೇಂದ್ರಗಳು, ವಿದ್ಯುದಾಗಾರಗಳು, ಅಣೆಕಟ್ಟು — ಕಾಲುವೆಗಳು ರಚಿತವಾದುವು, ಇವುಗಳಿಂದ ರಾಷ್ಟ್ರಕ್ಕೆ ಏನು ಪ್ರಯೋಜನವು ಒದಗಿದೆ ಎಂದು ಮುಂತಾಗಿ, ದೇಶದ ಏಳಿಗೆಯ ದಾರಿಯ ಮೈಲಿಕಲ್ಲುಗಳನ್ನು ಗುರುತಿಸಿ, ನಾವು ಹಿಂದುಳಿಯದೆ ಮುಂದುವರಿಯಬೇಕಾದರೆ, ಇತರ ರಾಷ್ಟ್ರಗಳಂತೆನಾವೂ ಸ್ವಾವಲಂಬಿಗಳಾಗಿ ಉದ್ಯಮಶೀಲರಾಗಿ ಮೆರೆಯ ಬಯಸುವುದಾದರೆ, ಯಾವ ದಾರಿಯಲ್ಲಿ ನಡೆಯಬೇಕೆಂಬುದನ್ನೂ ಈ ಪುಸ್ತಕವು ತಿಳಿಸುತ್ತದೆ. ಅಲ್ಲಲ್ಲಿ ತತ್ಸಂಬಂಧಿತ ಚಿತ್ರಗಳಿಂದ ಅಡಕವಾಗಿದ್ದು ಪುಸ್ತಕವು ಉಪಯುಕ್ತವಾಗಿದೆ. ಕಾಗದ— ಮುದ್ರಣಗಳು ಉಚ್ಚ ವರ್ಗಗಳದ್ದಿವೆ. ಭಾರತದ ಪ್ರಗತಿಗಾಗಿ ದುಡಿಯ ಬಯಸುವವರೆಲ್ಲರೂ ಈ ಚಿಕ್ಕ ಹೊತ್ತಗೆಯನ್ನೊಂದು ಬಾರಿ ಓದಿಕೊಳ್ಳುವುದು ಅಗತ್ಯ.

ವಿಕಾರಿ ಸಂವತ್ಸರದ ಶಾಸ್ತ್ರಸಿದ್ಧ ಶ್ರೀಕೃಷ್ಣ ಪಂಚಾಂಗ — ಸಂಪಾದಕರು: ಕರಿಂಕ ಕೃಷ್ಣ ಬನ್ನಿಂತಾಯ ಮತ್ತು ಮರಕೂರು ರಾಮಚಂದ್ರಾಚಾರ್ಯ. ಪರಿಶೋಧಕರು: ಶ್ರೀ|| ವೇ|| ಮೂ|| ಯರ್ಮುಂಜ ಶಂಕರ ಜೋಯಿಸರು. ದೊರೆಯುವ ಸ್ಥಳ: ಕರಿಂಕ ಕೃಷ್ಣ ಬನ್ನಿಂತಾಯ ವಿಟ್ಲ. ಪುಟಗಳು: ೬೦. ಬೆಲೆ: ರೂ. ೦—೪೪.

ಶಾಲಿವಾಹನ ಶಕ ೧೮೮೧ಕ್ಕೆ ಸಲುವ ವಿಕಾರಿ ನಾಮ ಸಂವತ್ಸರದ ಈ ಪಂಚಾಂಗವು ವಿದ್ವನ್ಮಣಿಯರಿಂದ ಸಂಪಾದಿಸಲ್ಪಟ್ಟು, ದೈವಜ್ಞರತ್ನ ಜ್ಯೋತಿರ್ವಿದ್ಯಾ ಮಾರ್ತಾಂಡ ವೇ|| ಮೂ|| ಶಂಕರ ಜೋಯಿಸರಿಂದ ಪರಿಶೋಧಿಸಲ್ಪಟ್ಟಿದೆ. ಕ್ರಿಸ್ತ, ಸೌರಮಾನ, ಚಾಂದ್ರಮಾನ ಮಾಸಾದಿಗಳಿಗೆ ಸರಿಯಾದ ತಾರೀಕುಗಳನ್ನೂ ದೈನಂದಿನ ಪಂಚಾಂಗವನ್ನೂ ಒಳಗೊಂಡಿರುವುದಲ್ಲದೆ, ಭಾರತದ ವಿವಿಧ ಪಂಚಾಂಗಗಳಲ್ಲಿನ ಕೊರತೆಯನ್ನು ದೂರಮಾಡಲು ತಯಾರಿಸಿದ ಹೊಸ ರಾಷ್ಟ್ರೀಯ ಪಂಚಾಂಗಾಂಶವನ್ನೂ ಕೂಡಿಕೊಂಡಿದೆ. ಸಂವತ್ಸರಫಲ, ಮುಹೂರ್ತಗಳು, ರಾಶಿ ಭವಿಷ್ಯ ಹಾಗೂ ಆವಶ್ಯಕ ಜ್ಯೋತಿಷ ವಿಷಯಗಳಿಂದ ಒಳಗೊಂಡು ಎಲ್ಲರಿಗೂ ಉಪಯೋಗಿಯಾಗಿದೆ. ಸೂಕ್ಷ್ಮ ದೃಕ್ ಸಿದ್ಧಾಂತ ರೀತ್ಯಾ ಈ ಪಂಚಾಂಗವು ತಯಾರಿಸಲ್ಪಟ್ಟಿರುವುದರಿಂದ ಲೋಪದೋಷಗಳಿಲ್ಲವೆಂದೇ ಹೇಳಬಹುದು

—ಗೋರಾ.

ಸಾದರ ಸ್ವೀಕಾರ

೧. ಪದ್ಮನಾಭಾಚಾರ್ಯ ವಿರಚಿತ **ಪಂಚದೀಪಿಕಾ** (ಆತ್ಮಸ್ವರೂಪನ 'ಪ್ರಬೋಧ ಪರಿಶೋಧಿನೀ', ವಿಜ್ಞಾನಾತ್ಮನ 'ತಾತ್ಪರ್ಯಾರ್ಥದ್ಯೋತಿನೀ' ಪ್ರಕಾಶಾತ್ಮನ 'ಪಂಚಪಾದಿಕಾ ವಿವರಣ,' ಚಿತ್ಸುಖಾಚಾರ್ಯನ 'ತಾತ್ಪರ್ಯ ದೀಪಿಕಾ' ಮತ್ತು ನೃಸಿಂಹಾಶ್ರಮನ ಭಾವ ಪ್ರಕಾಶಿಕಾ' ಸಹಿತ) ಸಂಪಾದಕರು: ಶಾಸ್ತ್ರರತ್ನಾಕರ ಪೊಲಗಮ್ ಎಸ್. ಶ್ರೀರಾಮ ಶಾಸ್ತ್ರಿ ಮತ್ತು ಶ್ರೀ ಎಸ್. ಆರ್. ಕೃಷ್ಣಮೂರ್ತಿ ಶಾಸ್ತ್ರಿ. ಪ್ರಕಾಶಕರು, ಮದ್ರಾಸು ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಂಡಾರ, ಮದ್ರಾಸು ಪುಟಗಳು: XX + ೧೪೬ + ೭೮ + ೬೯೩. ಬೆಲೆ: ರೂ ೨೮ ೭೫

೨. **ಮದುವೆ ಸೀರೆ**-(ಕಥಾ ಸಂಕಲನ) ಬರೆದವರು: ಶ್ರೀ ಎಸ್. ಎಲ್. ಸುಬ್ರಹ್ಮಣ್ಯಂ. ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ ಪುಟಗಳು: ೧೦೦. ಬೆಲೆ: ರೂ. ೧

೩ **ಸುರಪುರದ ಶ್ರೀ ಭುವನೇಶ್ವರೀ ಪಂಚಾಂಗ**— ಕರ್ತರು—ಜ್ಯೋತಿರ್ವಿದ್ವಾನ್ ಶ್ರೀ ಶೇಷ ಶಾಸ್ತ್ರೀ. ಪ್ರಕಾಶಕರು: ಆರ್ಯವೈಶ್ಯ ಸಂಘ, ೮೦ ಗಂಪೇಟೆ (ಸುರಪುರ) ಬೆಲೆ: ೦—೧೨—೦

೪. **ಶ್ರೀರಾಮಕೃಷ್ಣ ಭಜನನಾಮಾವಳಿ** — ಲೇಖಿಕೆ: ಶ್ರೀಮತಿ ಕೆ. ಕಮಲಮ್ಮ. ಪ್ರಕಾಶಕರು: ಕೆ. ವ್ಯಾಸಕೃಷ್ಣ ಉಪಾಧ್ಯಾಯ, ಕಾರ್ಕಳ. ಬೆಲೆ: ೦—೫೦.

ಲೈಬ್ರೆರಿಗಳಿಗೆ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳೆಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ. ಬರೆದವರು: ಡಾಕ್ಟರ ಜೇಮ್ಸ್ ಬಿ. ಕೊನೇಂಟ್ ಅನುವಾದಕ: ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೧೪೦ ಬೆಲೆ: ರೂ. ೧.೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ. ಮಾಡಿರದ ಅಪರಾಧಗಳಿಗಾಗಿ ಏಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ. ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು.ಶಿ.ಹರಿದಾಸ ಭಟ್ಟರು. ಪುಟ: ೩೦೮ ಬೆಲೆ: ರೂ. ೩.೫೦.

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು: ಕೆ. ಬಿ. ರಾಮಕೃಷ್ಣರಾಯ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ. ಪುಟ: ೨೫೦. ಬೆಲೆ: ರೂ ೨.೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ. ಪ್ರಜಾತಂತ್ರಾತ್ಮಕ ಸರಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುವನ್ನು ವಿಮರ್ಶಿಸುವ ಅಪೂರ್ವ ಗ್ರಂಥ ಅನುವಾದಕ: ಕು. ಶಿ. ಹರಿದಾಸ ಭಟ್ಟ. ಪುಟ: ೨೫೦. ಬೆಲೆ: ರೂ. ೨.

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಬಳಗಿಸುವ ದಿಕ್ಕಿನಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಭತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ' ವರ್ಣಿಸಲಾಗಿದೆ. ಬರೆದವರು: ಯು. ರಾಘವೇಂದ್ರಾಚಾರ್ಯ. ಪುಟ: ೯೦. ಬೆಲೆ: ರೂ. ೧.೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆ ಒಂದು ಸ್ವತಂತ್ರ ರಚನೆ. ಬರೆದವರು: ಕು. ಶಿ. ಹರಿದಾಸ ಭಟ್ಟ ವಿ. ಸೀತಾರಾಮಯ್ಯನವರ ಮುನ್ನುಡಿ ಇದೆ. ಪುಟ: ೧೫೦. ಬೆಲೆ: ರೂ. ೨.

ಫಂಟೆಮಾರಾ

ಇಗ್ನೇಜಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫ್ಯಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ. ಅನುವಾದಕರು: ಕು ಶಿ. ಹರಿದಾಸ ಭಟ್ಟ. ಪುಟ: ೨೦೦. ಬೆಲೆ: ರೂ. ೨.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಚಂದಾಹಣ ಬಾಕಿ ಇರುವವರು
ದಯಮಾಡಿ ಕಳುಹಿಸಿಕೊಡ
ಬೇಕಾಗಿ ವಿನಂತಿ.

ಬಜೆಟ್ ಪದ್ಧತಿ

ಸಂವಿಧಾನದ ಮಹತ್ವ ಪೂರ್ಣಾಂಶ

ಬಜೆಟನ ಬಗೆಗೆ ನಿಮಗೆ ತಿಳಿಯ ಬೇಕೆಂದಿದೆಯೆ?

ಭಾರತೀಯ ಸಂವಿಧಾನದಲ್ಲಿ ನಿರೂಪಿಸಲ್ಪಟ್ಟ ನಿಯಮಗಳಿಗನುಸಾರವಾಗಿ, ಕೇಂದ್ರ ಸರಕಾರದ ಆರ್ಥಿಕ ಮಂತ್ರಿಯು ಫೆಬ್ರುವರಿ ತಿಂಗಳ ಕೊನೆಯ ದಿನದಲ್ಲಿ ಮುಂದಿನ ವರ್ಷದ ಆಯವ್ಯಯಗಳ ಅಂದಾಜು ಪಟ್ಟಿ ಇಲ್ಲವೇ ಮುಂಗಡ ಪತ್ರವನ್ನು ಲೋಕಸಭೆಯ ಮುಂದೆ ಮಂಡಿಸಬೇಕಾಗುತ್ತದೆ. ಅಂತೆಯೇ ರಾಜ್ಯಗಳಲ್ಲಿಯೂ ತಮ್ಮ ಕಾಲ ಸಂದರ್ಭಗಳಿಗನುಸಾರವಾಗಿ ಇದೇ ರೀತಿಯ ಮುಂಗಡ ಪತ್ರಗಳನ್ನು ವಿಧಾನ ಸಭೆಗಳಲ್ಲಿ ಸಾದರಪಡಿಸಬೇಕಾಗುತ್ತದೆ. ಈ ಮುಂಗಡ ಪತ್ರವನ್ನೇ ಇಂಗ್ಲಿಷ್ ಭಾಷೆಯಲ್ಲಿ ಬಜೆಟ್ ಎನ್ನುತ್ತಾರೆ.

ಈ ವಾರ್ಷಿಕ ಆರ್ಥಿಕ ಪಟ್ಟಿಯನ್ನು ಸಾಮಾನ್ಯವಾಗಿ ಬಜೆಟ್ ಎಂದು ಹೆಸರಿಸುತ್ತಾರೆ. ಇದು ಮುಂದಿನ ವರ್ಷದ ಅಂದಾಜು ಆದಾಯ ಮತ್ತು ಸರಕಾರದ ವೆಚ್ಚಗಳನ್ನು ಸೂಚಿಸುವುದಲ್ಲದೇ ಕರಾಕರಣೆಯ ಪದ್ಧತಿಯಲ್ಲಿ ಏನಾದರೂ ಪರಿವರ್ತನೆಗಳಿದ್ದರೂ ಗೊತ್ತುಪಡಿಸುತ್ತದೆ. ಈ ಸಂದರ್ಭದಲ್ಲಿ ಮೂರು ಬಗೆಯ ಲೆಕ್ಕ ಪತ್ರಗಳನ್ನು ಸಭೆಯ ಮುಂದೆ ತರಲಾಗುತ್ತದೆ. ಆ ದಿನಕ್ಕೆ ಹನ್ನೊಂದು ತಿಂಗಳು ಮೊದಲು ಕಳೆದು ಹೋದ ಆರ್ಥಿಕ ವರ್ಷದ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳು; ಮುಗಿಯಲು ಇನ್ನೂ ಒಂದು ತಿಂಗಳು ಬಾಕಿಯಿರುವ ವರ್ಷದ ಪುನರ್ವಿಮರ್ಶಿತ ಆಯವ್ಯಯಗಳ ಅಂದಾಜು ಪಟ್ಟಿ; ಮತ್ತು ಕೊನೆಯದಾಗಿ, ಭಾವಿ ಆರ್ಥಿಕ ವರ್ಷದ ಮುಂಗಡ ಪತ್ರಗಳು ಲೋಕಸಭೆಯ ಮುಂದೆ ಬರುತ್ತವೆ.

ಪ್ರಜಾಪ್ರಭುತ್ವ ಸಂವಿಧಾನವು ವ್ಯವಹಾರವಿರುವ ಕಡೆಗಳಲ್ಲಿ ಸರಕಾರಿ ಅಧಿಕಾರಿಗಳು ಕರಾಕರಣೆ, ಸಾಲತೆಗೆಯುವುದು ಅಥವಾ ಇನ್ನಿತರ ವಿಧಾನಗಳಲ್ಲಿ ಹಣವನ್ನು ಸಂಪಾದಿಸಲೂ ಆದೇರೀತಿಯಲ್ಲಿ ಅದನ್ನು ವ್ಯಯಿಸಲೂ ಲೋಕಸಭೆಯ ಅನುಮತಿಯನ್ನು ಪಡೆದೇ ತೀರಬೇಕಾಗಿದೆ. ಹೊಸ ಕರಗಳನ್ನು ಹೊರಿಸಲು ಅಥವಾ ಕರಗಳನ್ನು ಏರಿಸಲು, ಸಾರ್ವಜನಿಕ ಹಣವನ್ನು ವೆಚ್ಚಮಾಡಲು ಸಾರ್ವಜನಿಕ ಸಾಲವನ್ನು ಪಡೆಯಲು ಮುಂದಾಗಿ ಈ ಪ್ರತಿನಿಧಿ ಸಭೆಗಳ ಮಂಜೂರಾತಿ ಅವಶ್ಯವಾಗಿದೆ. ಮುಂಗಡ ಪತ್ರದಲ್ಲಿ ನ್ಯಾಯೋಚಿತವಾಗಿ ಹಣವು ವೆಚ್ಚವಾಗಬಹುದಾದ ಉದ್ದೇಶಗಳನ್ನೂ ಆಯಾ ಉದ್ದೇಶಗಳಿಗೆ ವೆಚ್ಚವಾಗುವ ಹಣದ ಮಿತಿಯನ್ನೂ ತೋರಿಸುತ್ತದೆ. ಆದುದರಿಂದ, ಈ ಮುಂಗಡ ಪತ್ರವು ಸಾರ್ವಜನಿಕಾಭಿವೃದ್ಧಿ ದ್ಯೋತಕವಾದ ಒಂದು ಕ್ರಮಬದ್ಧ ನಿರೂಪಣೆಯೆನ್ನಬಹುದು.

ಈ ಮುಂಗಡ ಪತ್ರವು ನ್ಯಾಯೋಚಿತ ಆರ್ಥ ವ್ಯವಸ್ಥೆಯ ಪ್ರಾಮುಖ್ಯ ಪದನ್ಯಾಸವಾಗಿರುವುದಲ್ಲದೇ ಇಂದು ಸಾಮಾಜಿಕ ಧ್ಯೇಯಧೋರಣೆಯ ನಿರೂಪಣೆಯೂ ಆಗಿ ಪರಿಣಮಿಸಿದೆ. ಸರಕಾರವು ಉತ್ಪಾದನೆಯಲ್ಲಿ ಸಾಧಿಸುವ ಹೆಚ್ಚಳ, ಅಸಮಾನತೆಯ ದೂರೀಕರಣ, ಸಂಪತ್ತಿನ ವಿನಿಯೋಗ ಮತ್ತು ಇಟ್ಟುಕೊಳ್ಳುವ ನೌಕರರಾದಿ ವಿಷಯಗಳಲ್ಲಿ ಕೈಗೊಳ್ಳುವ ಯೋಜನೆಗಳನ್ನು ಸಾರ್ವಜನಿಕರಿಗೆ ಸೂಕ್ಷ್ಮವಾಗಿಯೂ ಈ ಮುಂಗಡಪತ್ರವು ತಿಳಿಸುತ್ತದೆ.

ಇದು ಮಂಜೂರಾಗುವುದಕ್ಕೆ ಮೊದಲು ಐದು ಹಂತಗಳಲ್ಲಿ ಸಂಚರಿಸುತ್ತದೆ. ಲೋಕಸಭೆಯಲ್ಲಿ ಮಂಡನೆ, ತತ್ವಗಳ ಪ್ರಶ್ನೆಗಳ ಮೇಲೆ ಸಾಮಾನ್ಯ ಚರ್ಚೆ, ಬೇಡಿಕೆಗಳ ಬಗ್ಗೆ ಮತದಾನ, ಯಥಾಯೋಗ್ಯ ಮಸೂದೆಯ ಪರಿಶೀಲನೆ, ಮತ್ತು ಕರಾಕರಣೆ ಹಾಗೂ ಸಾಲವೆತ್ತುವ ಸೂಚನೆಗಳ ಪರಿಶೀಲನೆಗಳೇ ಈ ಹಂತಗಳು. ಕರಾಕರಣೆಯ ಸೂಚನೆಗಳೆಲ್ಲವೂ "ಆರ್ಥಿಕ ಮಸೂದೆ" ಎಂಬುದರಲ್ಲಿ ಅಡಕವಾಗಿದ್ದು, ಮುಂಗಡ ಪತ್ರದೊಡನೆಯೇ ಇದನ್ನೂ ಸಭೆಯ ಮುಂದಿಡಲಾಗುತ್ತದೆ.

ಇದರಿಂದ ಸುಂಕ ಮತ್ತು ಎಕ್ಸೈಸ್ ಡ್ಯೂಟಿಗಳಲ್ಲಿಯೂ ಆದಾಯ ಕರದಲ್ಲಿಯೂ ಯಾವುದೇ ಶಾಸನವು ಸಿದ್ಧವಾಗುವುದಕ್ಕೆ ಪೂರ್ವಭಾವಿಯಾಗಿಯೇ ಪರಿವರ್ತನೆಗಳನ್ನು ಮಾಡಲು ಸಾಧ್ಯವಾಗುತ್ತದೆ. ಎಂತಲೇ ಈ ಕ್ರಮದಿಂದ ಶಾಸನವು ಮಂಜೂರಾಗುವ ಮತ್ತು ಮುಂಗಡ ಪತ್ರವು ಸ್ವೀಕಾರವಾಗುವ ನಡುವಿನ ಅವಧಿಯಲ್ಲಿ ಸರಕಾರಕ್ಕೆ ಒದಗಬಹುದಾದ ನಷ್ಟವು ತಡೆಯಲ್ಪಡುತ್ತದೆ.

ಮುಂಗಡ ಪತ್ರಕ್ಕೆ ಮತದಾನಮಾಡುವುದೆಂದರೆ, ಅಧಿಕಾರಿಗಳಿಗೆ ಸರಕಾರದ ವೆಚ್ಚ, ಕರಾಕರಣೆ ಹಾಗೂ ಸಾಲವೆತ್ತುವುದು ಮೊದಲಾದುವುಗಳಿಗೆ ಅಪ್ಪಣೆಯೀಯುವುದು. ಲೋಕಸಭೆಯು ಒಂದು ಬಾರಿ ಅನುಮತಿಯನ್ನಿತ್ತರೂ ಎಸ್ಟಿಮೇಟ್ ಕಮಿಟಿ ಮತ್ತು ಪಬ್ಲಿಕ್ ಎಕೌಂಟ್ ಕಮಿಟಿಗಳ ಮೂಲಕ ತನ್ನ ಹತೋಟಿಯನ್ನಿಟ್ಟುಕೊಳ್ಳುತ್ತದೆ. ಎಸ್ಟಿಮೇಟ್ ಕಮಿಟಿಯು ಪಾರ್ಲಿಮೆಂಟಿನಿಂದ ಮಂಜೂರಾದ ಅಂದಾಜುಗಳ ಧ್ಯೇಯಧೋರಣೆಗಳಲ್ಲಿ ಮಿತವ್ಯಯ ರೂಪಿಸುವುದರಲ್ಲಿ ತಲ್ಲೀನವಾದರೆ, ಸಾರ್ವಜನಿಕ ಲೆಕ್ಕಗಳಲ್ಲಿ ಆಗುವ ವೆಚ್ಚದ ಕ್ರಮಬದ್ಧತೆಯನ್ನು ಎರಡನೆಯದು ನೋಡಿಕೊಳ್ಳುತ್ತದೆ.

ಫ್ರಾನ್ಸ್, ಜರ್ಮನಿ, ಸ್ವಿಜರ್‌ಲೇಂಡ್ ಮೊದಲಾದ ಕೆಲವು ದೇಶಗಳಲ್ಲಿರುವಂತೆ ನಮ್ಮ ಭಾರತದಲ್ಲಿಯೂ ರೇಲ್ವೆ ಮುಂಗಡ ಪತ್ರವು ಸಾಮಾನ್ಯ ಮುಂಗಡ ಪತ್ರದಿಂದ ಹಲವಾರು ವರ್ಷಗಳಿಂದ ಪ್ರತ್ಯೇಕಿಸಲ್ಪಟ್ಟಿದೆ. ರೇಲ್ವೆಗಳ ಧ್ಯೇಯ ಮತ್ತು ರೇಲ್ವೆ ಆಡಳಿತೆಯು ರಾಜಕೀಯ ಪ್ರಭಾವದಿಂದ ದೂರವಿರಬೇಕು. ರಾಜ್ಯಕ್ಕೆ ತನ್ನ ಪಾಲಿನ ಸಹಾಯವನ್ನು ಕೊಟ್ಟ ಮೇಲೆ ಉಳಿದ ಉಳಿತಾಯದ ಹಣವನ್ನು ರೇಲ್ವೆಗಳ ಅಭಿವೃದ್ಧಿಗಾಗಿ ವ್ಯಯಿಸಲು ಇದು ಸ್ವತಂತ್ರವಿರಬೇಕು ಎಂಬ ಉದ್ದೇಶದಿಂದ ಈ ರೀತಿ ಮಾಡಲಾಗುತ್ತಿದೆ.

ಆಂಗ್ಲ ಶಬ್ದ "ಬಜೆಟ್" ಎಂಬುದು ಫ್ರೆಂಚ ಪದ "ಬೊಗೆಟ್ಟೆ" ಯಿಂದ ಬಂದಿದೆ. ಫ್ರೆಂಚ ಭಾಷೆಯಲ್ಲಿ ಇದರ ಅರ್ಥ "ಚರ್ಮದ ಸಣ್ಣ ಚೀಲ" ಎಂದು. "ಚೀಲ" ಎಂಬುದರಿಂದ ಅರ್ಥವು "ಅದರೊಳಗಿರುವ ಕಾಗದ ಪತ್ರ"ಗಳ ಕಡೆಗೆ ವ್ಯಾಪಕವಾಗಿ ಹರಿಯಿತು "ಬಜೆಟರಿ ಪದ್ಧತಿ"ಯು ಮೂಲತಃ ಈಗ ನಮಗೆ ತಿಳಿದಿರುವಂತೆ ಬ್ರಿಟಿಷರದ್ದಾಗಿದ್ದು, ಸಾಮಾನ್ಯ ವಿಶ್ವದ ಎಲ್ಲ ರಾಷ್ಟ್ರಗಳಿಂದಲೂ ಸ್ವೀಕೃತವಾಗಿದೆ. ಪಾರ್ಲಿಮೆಂಟರಿ, ಪ್ರೆಸಿಡೆಂಶಿಯಲ್ ಅಥವಾ ಆಟೋಕ್ರೇಟಿಕ್ ಆಡಳಿತ ವಿಧಾನವೇ ಇರಲಿ ಪ್ರಪಂಚದಲ್ಲೆಲ್ಲ ಈ "ಬಜೆಟ್" ಎಂಬುದು ವ್ಯವಹಾರದಲ್ಲಿದೆ. ಪಾರ್ಲಿಮೆಂಟರಿ ಪದ್ಧತಿಯ ರಾಷ್ಟ್ರಗಳಲ್ಲಿ ಸರಕಾರವು ಜನತೆಗೆ ತನ್ನ ಸೇವೆಯನ್ನು ಸಲ್ಲಿಸುವ ಹೊಣೆಗಾರಿಕೆಯನ್ನು ಸಲ್ಲಿಸಲು ಸಾಧನವೆಂದು ತಿಳಿಯಲ್ಪಟ್ಟ ಈ ಮುಂಗಡ ಪತ್ರವು ತನ್ನ ಅಪೇಕ್ಷೆಯಂತೆ, ತನಗೆ ಅವಶ್ಯಕವೆನಿಸಿದಂತೆ, ಪಾರ್ಲಿಮೆಂಟಿನಿಂದ ಸ್ವೀಕರಿಸಲ್ಪಡದೆ ಹೋದರೆ ಸರಕಾರವು ರಾಜೀನಾಮೆಯನ್ನೀಯುತ್ತದೆ ನಮ್ಮ ಭಾರತದಲ್ಲಿ ಈ ಪದ್ಧತಿಯೇ ವ್ಯವಹೃತವಾಗಿದೆ.

ಭಾರತ, ಬ್ರಿಟನ್, ದಕ್ಷಿಣ ಆಫ್ರಿಕ, ನ್ಯೂಜಿಲೇಂಡ್, ಕೆನೆಡ, ಜರ್ಮನಿ, ಗ್ರೀಸ್ ಮತ್ತು ಜಪಾನುಗಳಲ್ಲಿ ಎಪ್ರಿಲ್‌ನಿಂದ ಮಾರ್ಚಿಯ ವರೆಗೆ ಆರ್ಥಿಕ ವರ್ಷದ ಗಣನೆಯಿರುವುದು. ಫ್ರಾನ್ಸ್, ಅರ್ಜೆಂಟೀನ, ಆಸ್ಟ್ರಿಯಾ, ಬೆಲ್ಜಿಯಂ, ಜೆಕೊಸ್ಲೊವಾಕಿಯಾ, ನೆದರ್‌ಲೇಂಡ್ಸ್ ಮತ್ತು ಪೋಲೇಂಡ್‌ಗಳಲ್ಲಿ ಕ್ಯಾಲೆಂಡರ್ ವರ್ಷವನ್ನೇ ಆರ್ಥಿಕ ವರ್ಷವೆಂದು ಪರಿಗಣಿಸುತ್ತಾರೆ. ಆಸ್ಟ್ರೇಲಿಯಾ, ಹಂಗೇರಿ, ಇಟಲಿ, ಸ್ವೀಡನ್ ಮತ್ತು ಅಮೆರಿಕೆಯ ಸಂಯುಕ್ತ ರಾಷ್ಟ್ರಗಳು ಜುಲೈಯಿಂದ ಜೂನಿನ ವರೆಗೆ ಎಣಿಸುತ್ತಾರೆ. ಹಾಗೆಯೇ ಉಳಿದ ದೇಶಗಳಲ್ಲಿಯೂ ಕೆಲವೊಂದು ಬದಲಾವಣೆಗಳೊಂದಿಗೆ ಈ ವರ್ಷವನ್ನು ಲೆಕ್ಕಿಸುತ್ತಾರೆ.

ಬಜೆಟ್ ಎಂಬುದು ಒಂದು ರಾಷ್ಟ್ರದ ಹಿಂದಿನ ವರ್ಷಗಳಲ್ಲಿ ಅನುಭವಕ್ಕೆ ಬಂದ ಆರ್ಥಿಕ ಸಂಬಂಧಿ ವ್ಯವಹರಣೆಗಳನ್ನು ವಿಮರ್ಶಿಸಿ, ಮುಂದಿನ ವರ್ಷಕ್ಕೆ ತನ್ನ ಆರ್ಥಿಕ ಧ್ಯೇಯಧೋರಣೆಗಳನ್ನು ರೂಪಿಸುವ ಮತ್ತು ಘೋಷಿಸುವ ಒಂದು ಸಾಧನವಾಗಿದೆ. ಎಂತಲೇ ಇದನ್ನು ಎಲ್ಲರೂ ಆತುರದಿಂದ ಪ್ರತೀಕ್ಷಿಸುತಿದ್ದಾರೆ.

ದಿ. ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ(ದ.ಕ)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸಲು ವ ಬಡ್ಡಿಯನ್ನು ಈ ವರೆಗೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಇನ್ನೂ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕೆಲವರು ಮೃತಪಟ್ಟಿರುವರೆಂಬುದಾಗಿಯೂ, ಕೆಲವರು ವಾಸಸ್ಥಾನದಲ್ಲಿ ಇಲ್ಲನೆಂಬುದಾಗಿಯೂ ನಮಗೇನೇ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ತಾರೀಕು 27-3-1959ನೇ ಶುಕ್ರವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ, ಯಾ ಬೇಂಕಿಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31-12-58ರ ವರೆಗೆ ಬಡ್ಡಿ ಸೇರಿ ಮೊಬಲಗು
433/56	ಶ್ರೀ ವೀರಣ್ಣ ಸೆಟ್ಟಿ, ತುಂಗಮ್ಮ ಶೆಡ್ತಿ ಮಗ, ಕೆರೆಕೊಡ್ಲು, ಆಲೂರು ಗ್ರಾಮ, ಪೋಸ್ಟು ಆಲೂರು.	ರೂ.-ನ.ಪೈ 161-35
558/56	ಶ್ರೀ ವೈ. ಮಂಜಯ ಶೆಟ್ಟಿ, ದಾರಪ್ಪ ಶೆಟ್ರ ಅಳಿಯ, ಎರುಕೋಣೆ ದೊಡ್ಡಮನೆ, ಪೋಸ್ಟು ನಾವುಂದ	51-90
647/56	ಶ್ರೀ ಶೇಕ್ ದಯಾತ್ ಸಾಹೇಬ್, ಶೇಕ್ ಬುಡಾನ್ ಸಾಹೇಬರ ಮಗ ಕಾರ್ವಿಕೇರಿ, ಪೋಸ್ಟ್ ಕುಂದಾಪುರ.	32-95
710/56	ಶ್ರೀ ವೀರಣ್ಣ ಸೆಟ್ಟಿ, ತುಂಗಮ್ಮ ಶೆಡ್ತಿ ಮಗ, ಕೆರೆಕೊಡ್ಲು ಆಲೂರು ಗ್ರಾಮ, ಪೋಸ್ಟು ಆಲೂರು.	54-40

Office of the Vijaya Bank Ltd.
COONDAPUR, S. K.
Dated 6th March, 1959.

B. R Adyanthaya,
Agent,

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%
6 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;

'ಮದುವೆ ಸೀರೆ'

ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ತ್ರೀ ಸಮಾಜ

ಸ್ತ್ರೀಯರಿಗೆ ಪ್ರಾಧಾನ್ಯ ಬರಲು ಕಾರಣವೇನು?

ಪುರುಷರ ಜೀವನದಲ್ಲಿ ಇವರು ತಮ್ಮ ಪ್ರಭಾವವನ್ನು ಎರಕ ಹೊಯ್ದು ಅದನ್ನು ನಾಡನ್ನೋ ಕಾಡನ್ನೋ ಆಗಿ ಮಾರ್ಪಡಿಸಬಲ್ಲಳು

ಅಮೇರಿಕೆಯ ಪ್ರಖ್ಯಾತ ರಾಷ್ಟ್ರಪತಿ ಲಿಂಕನರು ತನ್ನ ಮಿತ್ರ ಸ್ಯಾಮುವಲ್ ಮಾರ್ಶಲ್‌ರಿಗೆ ತನ್ನ ವಿವಾಹಾನಂತರ ಒಂದು ಪತ್ರವನ್ನು ಬರೆದನು ಆ ಕಾಗದವು ಇದು ತನಕವೂ 'ಚಿಕಾಗೋ'ವಿನ 'ಹಿಸ್ಟೋರಿಕಲ್ ಸೊಸೈಟಿ'ಯಲ್ಲಿ ಸುರಕ್ಷಿತವಾಗಿದೆ ಅದರಲ್ಲಿ ವಿಶೇಷ ವಿಚಾರವೇನೂ ಇಲ್ಲ—"ಕೇವಲ ನನಗೆ ಮದುವೆಯಾಗಿದೆಯೆಂಬುದೆ ದೊಡ್ಡ ಸುದ್ದಿಯಾಗಿದೆ ಈ "ವಿಷಯವು ನನ್ನನ್ನು ಆಶ್ಚರ್ಯ ಚಕಿತನನ್ನಾಗಿ ಮಾಡಿದ." ಹೀಗೆ ಆ ಪತ್ರದಲ್ಲಿ ಬರೆದಿದೆ

ಮತ್ತು ಅದರನಂತರದ ಎಲ್ಲಾ ಕತೆಗಳನ್ನು ಲಿಂಕನರ ವಕೀಲರಾದ ವಿಲಿಯಮ್ ಹರ್ನ್‌ಡನ್‌ರು ಈ ಕೆಳಗಿನ ವಾಕ್ಯದಲ್ಲಿ ಸಂಕ್ಷೇಪಿಸಿರುವರು. ಲಿಂಕನರು ತಮ್ಮ ೨೦ ವರ್ಷದ ವೈವಾಹಿಕ ಜೀವನದಲ್ಲಿ ಒಂದು ದಿನವಾದರೂ ಪ್ರಸನ್ನರಾಗಿರಲಿಲ್ಲ

ಲಿಂಕನರ ವಕೀಲರ ಹತ್ತಿರ ಈ ಹೇಳಿಕೆಗೆ ಬೇಕಾದಷ್ಟು ಪ್ರಮಾಣಗಳೂ ಇದ್ದುವು. ವಕೀಲರಿಗೆ ಲಿಂಕನರೊಂದು ಪತ್ರವನ್ನು ಬರೆದುದರಲ್ಲಿ ಹೀಗಿದೆ— ನಾನು ಎಲ್ಲರಿಗಿಂತಲೂ ಹೆಚ್ಚು ದುಃಖಿಯಾಗಿರುವೆನೆಂದು ಯೋಚಿಸುತ್ತೇನೆ ನನ್ನ ದುಃಖದ ಕೋಟಿಯಲ್ಲೊಂದು ಅಂಶವು ಕೂಡಾ ಒಬ್ಬ ಮನುಷ್ಯನಿಗೆ ಸಿಗಲಾರದು ಪ್ರಪಂಚದಲ್ಲಿ ಪ್ರಸನ್ನವದನರು ಯಾರು ಇರದೆ ಹೋದರೂ ನಾನು ಈಗಿರುವ ರೂಪದಲ್ಲಿ ಬದುಕುವುದೇ ಕಷ್ಟವಾಗಿದೆ. ಈ ರೀತಿಯಲ್ಲಿ ಬದುಕಿರುವುದಕ್ಕಿಂತ ಸಾಯುವುದೆ ಸುಖವೆಂದು ನನಗೆ ತೋರುತ್ತಿದೆ

ಅವರ ಮಾತು ಸರ್ವಥಾ ಸರಿಯಾದುದಾಗಿದೆ. ಲಿಂಕನ ಮತ್ತು ಅವರ ಹೆಂಡತಿಯರ ಜಗಳವು ವಿವಾಹಾರಂಭದ ದಿನದಿಂದ ಮೊದಲ್ಗೊಂಡಿತ್ತು ಲಿಂಕನರ ಜೀವನ ಚರಿತ್ರೆಯನ್ನು ಬರೆದ ಲೇಖಕ ಜಿಪೊ ಮಾಯಿಲ್ಸ್‌ನು—'ಒಂದು ಸಲ ಶ್ರೀಮತಿ ಲಿಂಕನರು ತನ್ನ ಪತಿದೇವನಿಗೆ ಸತ್ಕಾರವನ್ನೀಯುತ್ತಾ, ಅತಿಥಿಗಳೆದುರು ಅವರ ಮೇಲೆ ಬಿಸಿಯಾದ ಚಾ'ದ ಕಟ್ಟೆಯನ್ನಸೆದರು" ಎಂದಿರುವರು

ಸೆನೇಟಿನ ತತ್ಕಾಲಿಕ ಸದಸ್ಯರಾದ ಶ್ರೀ ವಿಊವರೇಜರ್ ಒಂದು ಕಡೆ ಬರೆಯುತ್ತಾ "ಗಂಡ ಹೆಂಡಿರಿಬ್ಬರಲ್ಲೂ ಬಹಳ ಜೋರಾಗಿ ಜಗಳವಾಗುತಿತ್ತು ಈ ತಮಾಷೆಯನ್ನು ರಸ್ತೆಯಲ್ಲಿ ಅಡ್ಡಾಡುವ ಜನರು ನೋಡಿ ಅಲ್ಲೆ ಸ್ತಗಿತರಾಗುತ್ತಿದ್ದರೂ ನನ್ನ ತಿಳಿವಳಿಕೆ ಮಟ್ಟಿಗೆ ಹೇಳುವುದಾದರೆ ಲಿಂಕನರು ಒಂದು ದಿನವಾದರೂ ಸುಖವಾಗಿ ನಿದ್ರಿಸಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ" ಎಂದು ಬರೆದಿರುವರು.

○○ ○○

ವಿಶ್ವವಿಖ್ಯಾತರಾದ ಟಾಲ್‌ಸ್ಟಾಯ್ ದಂಪತಿಗಳು 'ಕೂಡಾ ಲಿಂಕನರಂತೆ ಜೀವನ ಕಳದವರಾಗಿದ್ದರು ಟಾಲ್‌ಸ್ಟಾಯರು ತಮ್ಮ ವೈವಾಹಿಕ ಜೀವನದಲ್ಲಿ ಅಸಹ್ಯ ವೇದನ ಪಟ್ಟಿರುವರು

ಒಂದು ದಿನ ಪ್ರಾತಃಕಾಲ ಟಾಲ್‌ಸ್ಟಾಯರು ಗಾರ್ಕಿಯವರನ್ನು ಭೇಟಿಯಾದರು ತಮ್ಮ ಸಂತಪ್ತ ದಾಂಪತ್ಯ ಜೀವನದ ಎಲ್ಲಾ ದುಃಖವನ್ನವರು ಒಂದೆ ವಾಕ್ಯದಲ್ಲಿ ಗಾರ್ಕಿಯವರೆದುರು ತೋಡಿಕೊಂಡರು—"ಭೂಕಂಪದಿಂದ ಮನುಷ್ಯನ ಉದ್ಧಾರವಾಗುತ್ತದೆ ಕಾಹಿಲೆಯಿಂದ ಮುಕ್ತಿ ಪ್ರಾಪ್ತವಾಗುತ್ತದೆ ಮನುಷ್ಯನು ಆತ್ಮಪೀಡೆಯಿಂದ ತನ್ನನ್ನು ಉಳಿಸಿಕೊಳ್ಳಬಹುದು ಹೆಂಡತಿಯ ಅತ್ಯಾಚಾರಗಳಿಂದ ಗಂಡನು ತನ್ನನ್ನು ತಾನು ಉಳಿಸಿಕೊಳ್ಳುವುದು ಭೂತ-ಭವಿಷ್ಯ ವರ್ತಮಾನ ಕಾಲದಲ್ಲೂ (ತ್ರಿಕಾಲ) ಕೂಡಾ ಅಸಾಧ್ಯ.'

ಮಡದಿಯ ದುರ್ವ್ಯವಹಾರವು ಟಾಲ್‌ಸ್ಟಾಯ್‌ರಿಗೆ ಸ್ತ್ರೀಯರ ಮೇಲಿದ್ದ ಎಲ್ಲಾ ದೃಷ್ಟಿಕೋನವನ್ನು ಬದಲಾಯಿಸಿಬಿಟ್ಟಿತು ಸ್ತ್ರೀಯರ ಮೇಲಿದ್ದ ಒಳಿಯಾಗ ಅವರ ದೃಷ್ಟಿ ಒಂದು ಬಗೆಯ ಕ್ರೂರ ದೃಷ್ಟಿಗೆ ಪರಿವರ್ತಿತವಾಗಲು ಕಾರಣ ಅವರ ಮಡದಿಯಾಗಿದ್ದಳು.

ಗಾರ್ಕಿಯು ತನ್ನೊಂದು ಸಂಸ್ಮರಣದಲ್ಲಿ ಟಾಲ್‌ಸ್ಟಾಯ್‌ಯವರ ಈ ದೃಷ್ಟಿಕೋನದ ಮಾರ್ಮಿಕ ಚಿತ್ರವನ್ನು ಮಾಡುತ್ತ—"ಒಂದು ಬಾರಿ ನಡೆದ ವಿಷಯ ನನಗೀಗ ನೆನಪರಿಕೆಯಾಗುತ್ತಿದೆ. ಗೆಳೆಯರೊಂದಿಗೆ ಟಾಲ್‌ಸ್ಟಾಯ್‌ರು ಕುಳಿತಿದ್ದರು ಹೆಂಗಸರ ವಿಷಯದಲ್ಲಿ ಚರ್ಚೆಯಾಗುತ್ತಿತ್ತು ಬಹಳ ಹೊತ್ತಿನ ತನಕ ಟಾಲ್‌ಸ್ಟಾಯ್ ಸುಮ್ಮನಿದ್ದರು. ಆದರೆ ಕೊನೆಗೆ ಅವರು ತನ್ನ ಮೌನವನ್ನು ಭೇದಿಸಿ ಹೇಳಿದರು—"ನಾನು ಗೋರಿಯ ಮೇಲೆ ಕಾಲಿಟ್ಟು ನಂತರವೆ ಸ್ತ್ರೀಯರ ವಿಷಯದಲ್ಲಿ ಮಾತನಾಡುವೆನು ನನ್ನ ಮಾತುಗಳು ಮುಗಿಯುವಾಗ ನನ್ನ ಗೋರಿಯನ್ನು ಕೂಡಲೇ ಮಾಡಿಬಿಡಬೇಕು" ಎಂದರು ಅವರ ತುಂಟತನ ತುಂಬಿದ ಕಣ್ಣುಗಳನ್ನು ಕಂಡು ನಾವೆಲ್ಲರ ಸ್ತಬ್ಧರಾದೆವು" ಈ ರೀತಿಯಾಗಿ ಬರೆದಿರುವರು ಗಾರ್ಕಿಯವರು

ಅವರು ತಮ್ಮ ಈ ಸಾಂಸಾರಿಕ ಜಗಳಗಳ ಕಾರಣದಿಂದಾಗಿ ತನ್ನ ಮೃತಪತ್ರವನ್ನು ಬದಲಾಯಿಸಿದರು. ಇದರಿಂದಾಗಿ ಕೋಪಗೊಂಡ ಅವರ ಪತ್ನಿಯು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲನುವಾದಳು ಅದರ ಪರಿಣಾಮವಾಗಿ ಟಾಲ್‌ಸ್ಟಾಯ್‌ರು ಸಹಿಸಲಸಾಧ್ಯವಾದ ಕಾಯಿಲೆಯಿಂದಾಗಿ, ಮನೆಯಿಂದ ಹೊರಬಂದು, ರಸ್ತೆಯಲ್ಲಿ ಬಿದ್ದು ಸತ್ತುಹೋದರು. ಜಗದ್ವಿಖ್ಯಾತ ಟಾಲ್‌ಸ್ಟಾಯರ ಗತಿ ಅವರ ಹೆಂಡತಿಯಿಂದಾಗಿ ಈ ರೀತಿಯಾಯಿತೆಂದಾಗ ನಿಮಗೆ ಬೇಸರವಾಗುವುದಿಲ್ಲವೆ

○ ○ ○ ○ ○ ○

ಇನ್ನು ಮುಂದಿನೊಂದು ಉದಾಹರಣೆಯಿಂದ ನಾರಿಯ ಸ್ಪರ್ಶಮಾತ್ರದಿಂದ, ಮನೆಯೆಂಬ ಮರುಭೂಮಿಯು ಪೈರು ಪಚ್ಚೆಗಳಿಂದ ತುಂಬಿಬಿಡುವುದೆಂದು ನಿಮಗೆ ತಿಳಿಯುವುದು.

ಕಸ್ತೂರಿ ಬಾ ರವರನ್ನು ಕುರಿತು ಹೇಳುತ್ತಾ, ಗಾಂಧೀಜಿಯವರು— ಅವಳಲ್ಲಿರುವ ಎಲ್ಲಾ ಸದ್ಗುಣಗಳು ಬಂದೋಬಸ್ತಿನಿಂದೇನೂ ಬಂದುದಲ್ಲ ಆದರೆ ಅನುಕೂಲ ಸಮಯದಲ್ಲಿ 'ಬಾ"ನೊಳಗಿನ ಈ ಗುಣಗಳು ವಿಕಾಸ ಹೊಂದಿದುವು ಆಕೆ ಮದುವೆ ಸಮಯದಲ್ಲಿ ಬಹು ಹಠಶೀಲಳಾಗಿದ್ದಳು ಆಗ ನಮ್ಮಲ್ಲಿ ತಿಕ್ಕಾಟವುಂಟಾಗುತಿತ್ತು. ನನ್ನ ಸಾರ್ವಜನಿಕ ಕೆಲಸಗಳು ಉಜ್ವಲವಾದಂತೆ ಆಕೆಯ ವ್ಯಕ್ತಿತ್ವವೂ ಕೂಡಾ ವಿಕಾಸಹೊಂದುತ್ತಾ ಹೋಯಿತು ಅವಳು ಮತ್ತು ಬೆಳೆದ ವಿಚಾರಗಳಿಂದ ನನ್ನಲ್ಲಿ ಕೂಡಿಕೊಂಡಳು; ನನ್ನ ಕಾರ್ಯಗಳಲ್ಲಿ ಭಾಗವಹಿಸಿದಳು.

—ಕೆ. ದಾಮೋದರ ಐತಾಳ

ಕಥಾ ವಿಹಾರ

(೨ನೇ ಪುಟದಿಂದ)

ಕೋಟಾ ಸಾಹುಕಾರ ಒಪ್ಪಲೇ ಇಲ್ಲ.

ಶರಭದ್ರನು ಮನೆ ದುರಸ್ತಿಯನ್ನೂ ಮಾಡಲಿಲ್ಲ ಮನೆ ಬಿಡಲೂ ಇಲ್ಲ. ಅರ್ಧ ಭಾಗದ ಮನೆಯಲ್ಲಿಯೇ ಕಾಲ ತಳ್ಳುತ್ತಾ ಬಂದನು

ಕೋಟಾ ಸಾಹುಕಾರನು ಶರಭದ್ರನ ಮೇಲೆ ಫಿರ್ಯಾದು ಮಾಡಿದನು.

ಶರಭದ್ರನೂ ಎದುರುವಾದ ಹೂಡಿದನು. ಕೋಟಾ ಸಾಹುಕಾರನೇ ಆ ಮನೆಯ ದುರಸ್ತಿಮಾಡತಕ್ಕವನೆಂದು ನ್ಯಾಯಾಧಿಪತಿ ತೀರ್ಪಿತ್ತನು. ಮಾವಿನ ಮರ ಮನೆಯ ಬದಿಯಲ್ಲಿರುವುದು ಒಳ್ಳೆಯದಲ್ಲವೆಂದಷ್ಟೇ ಹೇಳಿ ಸುಮ್ಮನಿದ್ದನು ಸಾಹುಕಾರ. ಶರಭದ್ರನು ಕೊಟ್ಟ ಆ ಮರದ ಹಣ್ಣುಗಳನ್ನೂ ಆತ ಸ್ವೀಕರಿಸಿಕೊಂಡಿದ್ದಾನೆ ಆದುದರಿಂದ ಆ ಮರ ಬೆಳೆಯುವುದನ್ನು ಆತ ಒಪ್ಪಿಕೊಂಡಂತೇ ಆಯಿತು. ಅಲ್ಲದಿದ್ದರೆ ಒಡೆಯನಾದಾತನ ತನ್ನ ಮನೆಗೆ ಮಾರಕವಾದ ಆ ಮರವನ್ನು ಮೊದಲೇ ಕಡಿಸುವ ಅಥವಾ ಕಡಿಯುವ ಸ್ವತಂತ್ರವುಳ್ಳವನಾಗಿದ್ದಾನೆ ಒಂದು ವೇಳೆ ಹಾಗೇನಾದರೂ ಮಾರಕವಾಗಿ ಮನೆಗೆ ಕೇಡಾದರೆ, ಬಾಡಿಗೆಗಿರುವ ಶರಭದ್ರನಿಂದಲೇ ಅದರ ದುರಸ್ತಿ ಮಾಡಿಸಬಹುದೆಂಬ ದೂರಾಲೋಚನೆಯಿಂದಲೇ ಸಾಹುಕಾರನು ಸುಮ್ಮನಿದ್ದನೆಂದು ವಿಚಾರಣೆಯ ಸಮಯದಲ್ಲಿ ಬಹಿರಂಗವಾಯಿತು ನ್ಯಾಯಸ್ಥಾನಕ್ಕೆ ಬಾರದೆ ಮೊದಲೇ ಒಪ್ಪಿಕೊಂಡಿರುತ್ತಿದ್ದರೆ, ಅರ್ಧ ಖರ್ಚಾದರೂ ಶರಭದ್ರ ಕೊಡುತ್ತಿದ್ದನೆಂದು ಕೋಟಾ ಸಾಹುಕಾರನಿಗೆ ಬಹಳ ಪಶ್ಚಾತ್ತಾಪವಾಯಿತು

—ನವಗಿರಿನಂದ

ನೋಟೀಸು

ಉಡುಪಿ ಡಿ ಮು ಕೋರ್ಟಿನಲ್ಲಿ

S C S No 37/1959

ಕೆ ಶ್ರೀನಿವಾಸ ಶೆಣೈ—ವಾದಿ

ಮತ್ತು

C ರಘುರಾಮ ಶೆಟ್ಟಿ—ಪ್ರತಿವಾದಿ

ಇವರೊಳಗೆ

(ರಘುರಾಮ ಶೆಟ್ಟಿ, ಬಾಳಪ್ಪು ಶೀನಪ್ಪ ಶೆಟ್ರ ಮಗ, ಜವುಳಿ ವ್ಯಾಪಾರಿ, ಉಡುಪಿ ತಾಲೂಕು ಬೇಕ್ಕಾಡಿ ಗ್ರಾಮ ವಪೇತ್ರಿಯಲ್ಲಿರುವವರು ಪ್ರತಿವಾದಿ.

ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನೆಂದರೆ—

ಪ್ರತಿವಾದಿಯು ವಾದಿಯ ಅಂಗಡಿಯಲ್ಲಿ ಸಲಿಸಿದ ಲೆ ಪ್ಪಾದ್ ವಿ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಬೇಕಾದ ಹಣವನ್ನು ಬಲವಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಗೆ ಜಪ್ತಿ ನೋಟೀಸಿನ ಬಗ್ಗೆ ತಾ23-3-59ಕ್ಕೆ ಇಡೋಣಾಗಿಯದೆ ಸದ್ರಿ ತನಖಿ ದಿನ ಹಗಲು ಗಂಟೆ 11ಕ್ಕೆ ಪ್ರತಿವಾದಿಯು ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜ್ವಾಬೀರು ಮಾಡಿಕೊಳ್ಳದಿದ್ದರೆ ಸದ್ರಿ ವ್ಯಾಜ್ಯವನ್ನು ಅವನ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು

(By order of the Court)

K Varadaraya Pai,
Advocate for Plaintiff

ಉಡುಪಿ, ತಾ4 3-1959.

ಪ್ರಕಟಣೆ

ಉಡುಪಿ ಡಿ. ಮು ಕೋರ್ಟಿನಲ್ಲಿ

S C 227/58 R E P 529 58

ಯು. ಸುಬ್ಬಣ್ಣ ಉಪಾಧ್ಯ—ಅರ್ಜಿದಾರ

ಮತ್ತು

ಲಿಂಗಂಮ ಸೆಟ್ಟಿ ಕೂಡಾ—ಎದ್ರಿರು

ಇವರೊಳಗೆ—

2ನೆ ಎದ್ರಿಳು- ಕಾವೇರಿಸೆಡ್ತಿ – ಗಿರಿಯಂಮ ಸೆಡ್ತಿ ಮಗಳು–ಉಡ್ಪಿ ತಾಲ್ಲೂಕ ಉಪ್ಪೂರ ಗ್ರಾಮ—ಯಿವರಿಗೆ ತಿಳಿಸುವದೇನಂದ್ರೆ—

ಮೇಲ್ಕಂಡ ಅಮಲಜಾರಿಯಲ್ಲಿ ಜಗ್ತಾ ಸ್ಥಿರಾಸ್ತಿ ವಿಕ್ರಯದ ಕುರಿತು ಹಾಜ್ರು ಪಡ್ಸಿದ ಯೇಲಂ ಯಿಸ್ತಾರು ಯೇಲಂ ಶರ್ತ ನಿರ್ಣಯಿಸುವರೆ ತಾ26-3-59ಕ್ಕೆ ಯಿಡೋಣಾಯದೆಂತ ಸದ್ರಿ 2ನೆ ಯದ್ರಿಗೆ ಯಾಮೂಲ್ಕ ತಿಳಿಸೋಣಾಗಿಯದೆ —

V R. Kidiyoor
(Advocate for Petitioner)

ಉಡ್ಪಿ 5-3-1959.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು. ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ. ರೂ ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಇತಿಹಾಸ

ಅಕಬರನ ಕಾಲದ ಭಾರತ

ಹಿಂದೂ ದೇಶವನ್ನು ಹಿಂದುಗಳ ಸಹಾಯದಿಂದಲೇ ಆಳಬೇಕೆಂದು ಮನಗಂಡಿದ್ದ ಮೇಧಾವಿ ಅಕಬರ

ಶ್ರೀರಾಮ, ಶ್ರೀಕೃಷ್ಣ, ಹರಿಶ್ಚಂದ್ರಾದಿ ಭೂವರರಿಂದ ಪಾಲಿಸಲ್ಪಟ್ಟ ಭಾರತೀಯರಿಗೆ ಅಕಬರನೂ ಒಬ್ಬ ಮಹಾ ಪುರುಷನಾದನೆ? ಅಶೋಕ, ಹರ್ಷ, ವಿಕ್ರಮಾದಿತ್ಯ ಮೊದಲಾದ ರಾಜಾಧಿರಾಜರಿಂದ ಆಳಲ್ಪಟ್ಟ ಭಾರತ ಮಾತ್ರೆಗೆ ಅಕಬರನ ಕಾಲದ ಭಾರತವನ್ನೂ ಓದುವ ಪ್ರಸಂಗ ಬಂತೆ? ಅಕಬರನು ಪ್ರಾಚೀನ ಕಾಲದ ರಾಜವರೇಣ್ಯರಂತೆ ಕ್ಷತ್ರಿಯ ಕುಲೋತ್ತಂಸನೆ? ಅಥವಾ ಚತುರ್ವರ್ಣಗಳಲ್ಲಿ ಇವನು ಯಾವ ಉಚ್ಚವರ್ಣದವನು? ಮ್ಲೇಂಛ ರಾಜನೊಬ್ಬನನ್ನು ಮಹಾ ಪುರುಷನೆನ್ನುವುದು ಭಾರತೀಯರಿಗೊಂದು ಭೂಷಣವಲ್ಲ—ಇಂತಹ ಆಕ್ಷೇಪಕರವಾದ ಎಷ್ಟೋ ವಿಷಯಗಳು ವಾಚಕರ ಮನಸ್ಸಿನಲ್ಲಿ ಮೂಡದಿರದು. ಆದರೆ ಪುರಾಣ ಪುರುಷರನ್ನು ಪರ ಪುರುಷಾಭಿರುಚಿಯುಳ್ಳ ವ್ಯಾಸವಾಲ್ಮೀಕಿಗಳು ಎತ್ತಿ ಹಿಡಿದರು ಅವರಲ್ಲಿ ಮನುಷ್ಯ ಸ್ವಭಾವದ ಕಲಂಕವು ಸ್ವಲ್ಪವಾದರೂ ಇದ್ದಿರಬಹುದು. ಇತಿಹಾಸದಲ್ಲಿ ಹೆಸರ್ಗೊಂಡ ಮಹಾರಾಜರಲ್ಲಿಯೂ ಕುಂದುಕೊರತೆಗಳು ಸ್ವಲ್ಪವಾದರೂ ಇಲ್ಲದಿರಲಿಲ್ಲ. ಹಾಗೆಯೇ ಅಕಬರನೂ ಒಬ್ಬ ಮನುಷ್ಯನೇ. ಅವನಲ್ಲಿ ಕೆಲವು ಕುಂದುಕೊರತೆಗಳು ಬಲವಾಗಿದ್ದುವು. ಅಂತೆಯೇ ಪ್ರಜಾರಂಜಕವಾದ ಗುಣಗಳೂ ಹಲವಿದ್ದುವು. ಅವನು ಉತ್ತರ ಭಾರತವನ್ನು ಆ ಕಾಲದಲ್ಲಿ ಆಳದಿದ್ದರೆ ಜನರ ಶಾಂತ ಜೀವನವು ಕಲಕಿ ನುಚ್ಚುನೂರಾಗಿ ಧೂಳೆದ್ದು ಆಕಾಶದಲ್ಲಿ ಹಾರಿ ಕೇಲಿ ಮಾಯವಾಗುತ್ತಿತ್ತು. ಅಕಬರನ ಜನ್ಮಕಾಲದಲ್ಲೇ ಉತ್ತರ ಭಾರತದಲ್ಲಿ ಒಬ್ಬ ಪ್ರಬಲನಾದ ರಾಜನಿರಲಿಲ್ಲ. ದಕ್ಷಿಣದಲ್ಲಿ ವಿಜಯ ನಗರ ಸಾಮ್ರಾಜ್ಯವೂ, ಬಹಮನಿ ರಾಜ್ಯಗಳೂ ಪ್ರಬಲವಾಗಿದ್ದುವು. ಆದರೆ ಈ ರಾಜ್ಯಗಳು ಉತ್ತರ ಭಾರತದ ಮೇಲೆ ಕೈಮಾಡುವಷ್ಟು ಬಲಿಷ್ಠವಾಗಿರಲಿಲ್ಲ. ಭಾರತವು ಇಂತಹ ಅರಾಜಕವಾದ ಕಾಲದಲ್ಲಿ ಜನ್ಮವೆತ್ತಿ ಆರ್ಯಾವರ್ತ ಬ್ರಹ್ಮಾವರ್ತಗಳನ್ನು ತನ್ನ ನಕ್ರದ ನೆರಳಿನಲ್ಲಿ ತಂದುಕೊಂಡುದಲ್ಲದೆ ಪ್ರಜೆಗಳ ಮನಸ್ಸಿಗೆ ಹಿತವಾಗುವಂತೆ ರಾಜ್ಯಭಾರ ಮಾಡಿದುದೊಂದು ಅತನ ವೈಶಿಷ್ಟ್ಯ. ಮುಸ್ಲಿಮರ ಸ್ವಮತಾಭಿಮಾನವು ಅವನಲ್ಲಿ ಎಳ್ಳಷ್ಟೂ ಇರಲಿಲ್ಲ; ವಿದ್ವಾಂಸನಲ್ಲದಿದ್ದರೂ ವಿದ್ಯಾಪಕ್ಷಪಾತಿಯಾಗಿದ್ದನು; ತತ್ವಜ್ಞಾನಿಯಾಗಿದ್ದನು; ಮಹಾಮೇಧಾವಿಯೂ, ಪರಾಕ್ರಮಿಯೂ ಆಗಿದ್ದನು. ಮೊಗಲ್ ಸೈನಿಕರಿಗೆ ಯುದ್ಧರಂಗದಲ್ಲಿ ಎದೆ ನಡುಕವುಂಟಾದರೆ ತಾನೇ ಯುದ್ಧರಂಗದಲ್ಲಿ ಮುಂದೆನಿಂತು ಶತ್ರುಗಳ ಕುತ್ತಿಗೆಯನ್ನು ಖಡ್ಗದಿಂದ ಚೆಂಡಾಡುತ್ತಿದ್ದನು. ಭಯವೆಂಬುದನ್ನು ಅವನು ಜನ್ಮಕಾಲದಿಂದಲೇ ತಿಳಿಯನು. ಸಾರಾಂಶ—ಅಕಬರ ಚಕ್ರವರ್ತಿಗೆ ಸಂಪೂರ್ಣ ದೈವಬಲವಿತ್ತು. ಅವನೊಬ್ಬ ಮಹಾ ಪುರುಷನೆಂಬುದರಲ್ಲಿ ಸಂದೇಹವಿಲ್ಲ.

ಅಕಬರನ ರಾಜ್ಯಭಾರದ ಆರಂಭಕಾಲದಲ್ಲಿ ಉತ್ತರ ಭಾರತದಲ್ಲಿ ನೆಮ್ಮದಿ ಇರಲಿಲ್ಲ. ಆಗ ಪ್ರಜಾರಂಜನೆಯು ಪುಸ್ತಕದ ಮಾತಾಗಿತ್ತು; ಪ್ರಜಾಪ್ರಭುತ್ವವು ಕನಸಿನ ವಿಚಾರವಾಗಿತ್ತು. ಪ್ರತಿಯೊಬ್ಬ ಮನುಷ್ಯನೂ ಯಾವಾಗ ಸರದಾರನೊಬ್ಬನ ಖಡ್ಗಕ್ಕೆ ಬಲಿಯಾಗುವನು ಎನ್ನಲು ಬಾರದಿತ್ತು. ಆಗ ಜೀವನವು ನೀರ ಮೇಲಿನ ಗುಳ್ಳೆಯೆಂಬ ದಾಸರ ಮಾತಿಗೆ ಹೊಂದಿಕೆಯಾಗಿತ್ತು. ಹಿಂದೂ ಅರಸರೂ ಅಫಗಾನ ಅರಸರಿಗಿಂತ ಹಿಂಸೆಯಲ್ಲಿ ಕಡಿಮೆಯಾಗಿರಲಿಲ್ಲ. ಆಗ ತಿನ್ನುವುದು, ಕುಡಿಯುವುದು ಸ್ತ್ರೀಲೋಲನಾಗುವುದು ಮನುಷ್ಯನ ಬಾಳ್ವೆಯ ತಿರುಳಾಗಿತ್ತು. ಕಣ್ಣು ಮೂಗು ಶುದ್ಧ ಇದ್ದ ಸ್ತ್ರೀಯರು ಕೊನೆಯ ವರೆಗೆ ಪತಿಗಳ ಸಹಧರ್ಮಿಣಿಯರಾಗಿಯೇ ಬಾಳುತ್ತಾರೆನ್ನಲು ಬಾರದು. ಯಾವಾಗಲೂ ಶ್ರೀಮಂತರೂ—ಸವಾರ ವರ್ಗದವರೂ—ರಾಜರೂ—ನವಾಬರೂ ಆಕೆಯನ್ನು ಅಪಹಾರ ಮಾಡಿಯೋ, ಬಲತ್ಕಾರದಿಂದ ಎಳೆದುಕೊಂಡೋ, ಪುಸಲಾಯಿಸಿಯೋ ಕೊಂಡು ಹೋಗಬಹುದಿತ್ತು. ಪುರುಷತ್ವ ಅಧಿಕ ಸಂಖ್ಯೆಯ ವಿವಾಹವನ್ನು ಹೊಂದಿಕೊಂಡಿತ್ತು. ಇಂತಹ ದುರ್ದೈವೀ ಕಾಲದಲ್ಲಿ ಅಕಬರನು ಜನ್ಮವೆತ್ತಿ ಪ್ರಜಾರಂಜನೆ ಶಾಂತಜೀವನದ ಕಡೆಗೆ ಗಮನಕೊಟ್ಟದ್ದರಿಂದ ಪ್ರಜೆಗಳಿಗೆ ಸ್ವೇಚ್ಛೆಯಿಂದ ಉಸಿರಾಡಲು ಶಕ್ಯವಾಯಿತು. ಆಗ 'ರಾಜಾ ಪ್ರತ್ಯಕ್ಷದೇವತಾ' ಎಂಬುದು ಪ್ರಜಾರಂಜಕನಾದ ಅರಸನಿಗೆ ಮಾತ್ರ ಹೊಂದಿಕೆಯಾದದ್ದೆಂದು ಜನರು ಮಾತಾಡತೊಡಗಿದರು. ರಾಜನೇ ಕಾಲಕ್ಕೆ ಕಾರಣನೆಂಬುದು ಎಲ್ಲರಿಗೂ ಪ್ರತ್ಯಕ್ಷವಾಯಿತು. ಅಕಬರನ ರಾಜ್ಯಭಾರದ ಆರಂಭ ಕಾಲವು ಬೈರಾಮಖಾನನ ಆಳಿಕೆಗೆ ಒಳಪಟ್ಟಿತ್ತು. ಅಂದಿನ ವರೆಗೆ ಮೊಗಲ್ ರಾಜ್ಯವು ಹಿಂದೂ ದೇಶದಲ್ಲಿ ನೆಲೆಗೊಳ್ಳಲು ಹಿಂದೂ ಜನರ ಸಹಾಯ ಅಗತ್ಯವೆಂಬುದು ಯಾವ ಮುಸ್ಲಿಂ ಸರದಾರ—ಸುಲ್ತಾನನಿಗೂ ಹೊಳೆದಿರಲಿಲ್ಲ. ಬಾಬರನಿಗೂ ಈ ಗುಟ್ಟು ತಿಳಿದಿರಲಿಲ್ಲ. ಚಾಣಾಕ್ಷನಾದ ಅಕ್ಬರನು ಮಾತ್ರ ಇದನ್ನು ಮೊದಲಿಂದಲೇ ತಿಳಿದಿದ್ದನು. ಇದರಿಂದ ಅವನು ಹಿಂದುಗಳಿಗೆ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಟ್ಟೋ, ಅವರೊಡನೆ ಸಂಬಂಧ ಬೆಳಸಿಯೋ ಅವರ ಹಾರ್ದಿಕ ವಿಶ್ವಾಸವನ್ನು ಸಂಪಾದಿಸಿಕೊಂಡನು. ಈ ತತ್ವದ ತಳಗಟ್ಟಿನ ಮೇಲೆ ಮೊಗಲ್ ಸಾಮ್ರಾಜ್ಯವು ಭದ್ರವಾಗಿ ಕಟ್ಟಲ್ಪಟ್ಟಿತು.

ಮಹಾತ್ಮರ ವ್ಯಕ್ತಿತ್ವವನ್ನು ಪವಾಡಗಳಿಂದ ಚಿತ್ರಿಸುವುದು ಅನಾದಿಕಾಲದಿಂದಲೂ ಬಂದ ಒಂದು ಕೀಳು ಪದ್ಧತಿ. ಇದು ಅಕಬರನ ಜೀವನ ಚರಿತ್ರೆಯನ್ನೂ ಸಂಪೂರ್ಣ ಬಿಟ್ಟಿಲ್ಲ. ಪವಾಡಗಳ ಪ್ರಚಾರವಾಗದಿದ್ದರೆ ಅವನೊಬ್ಬ ಮಹಾಪುರುಷನೆನ್ನಿಸಿಕೊಳ್ಳಲಾರನೆಂಬ ವಿಶ್ವಾಸವು ಅಕಬರನ ಕಾಲದಲ್ಲೂ ಇದ್ದಿತ್ತು. ಅಕಬರನು ಏಳು ತಿಂಗಳ ಕೂಸಾಗಿರುವಾಗ ಅವನ ದಾಯಿ (ಮೊಲೆ ಕುಡಿಸುವವಳು) ಯಲ್ಲೊಬ್ಬಳಾದ ಜೀಜೀ ಅನಗ ಅಬುಲ್ ಫಾಜಲ್ಲನೊಡನೆ—ಶಿಶುವಾಗಿರುವಾಗ ಅಕಬರನು ತನಗೆ ಹಿರಿಯರಂತೆ ಸಮಾಧಾನ ಹೇಳಿದನು, ಅಲ್ಲದೆ ತನ್ನ ದೇವಾಂಶವನ್ನು ಹೊರಗೆಡವಬಾರದೆಂದು ತನಗೆ ಆಜ್ಞೆ ಮಾಡಿದ್ದಾನೆ ಎಂದಿದ್ದಳು. ಅಬುಲ್ ಫಾಜಲ್ಲನು ಮಾತ್ರ ಆ ಮಾತಿಗೆ ಬೆಲೆಕೊಟ್ಟಂತೆ ಕಾಣುವುದಿಲ್ಲ.

ನಮಗೆ ಅಕಬರನ ಸಂಪೂರ್ಣ ಇತಿಹಾಸವು ದೊರೆಯುತ್ತದೆ. ಇವನ ಆಸ್ಥಾನ ವಿದ್ವಾಂಸರಾದ ಅಬುಲ್ ಫಾಜಲ್ಲನ ಆಯಿನ್-ಅಕ್ಬರಿ, ನಿಜಾಮುದ್ದೀನ ಅಹಮ್ಮದನ ತಬಾಖತ್—ಈ—ಅಕಬರೀ (ಅಕಬರನ ಆಳಿಕೆಯ ವರ್ಣನೆ), ಅಬ್ದುಲ್ ಕಾದಿರ್ ಬಡೌನಿಯ ತರೀಖ-ಈ-ಬಡೌನಿ ಇವೆಲ್ಲಾ ಅಕಬರನ ಜೀವನೇತಿಹಾಸಗಳು. ಬಡೌನಿಯು ಅಕಬರನು ಬದುಕಿರುವಾಗ ತನ್ನ ಗ್ರಂಥವನ್ನು ಹೊರತೆಗೆಯಲಿಲ್ಲ. ಅವನ ಕ್ರಿ. ಶ. ೧೬೦೫ರಲ್ಲಿ ತೀರಿಹೋದ ಬಳಿಕ ಜಹಂಗೀರನ ಆಳ್ವಿಕೆಯಲ್ಲಿ ಅದು ಹೊರಗೆ ಬಂತು. ಇದರಲ್ಲಿ ಅಕಬರನ ಮತದ ವಿಚಾರದಲ್ಲಿ ಎಷ್ಟೋ ಕಡೆ ಬಡೌನಿಯು ಖಂಡಿಸಿದ್ದಾನೆ. ಬಡೌನಿಯು ಹಲವು ಇತಿಹಾಸಕಾರರಂತೆ ಅಕಬರನ ಚರಿತ್ರೆಯಲ್ಲಿ ವಂದಿಮಾಗಧರ ಕೆಲಸವನ್ನು ಮಾಡಿಲ್ಲ.

ಅಕಬರನು ಪಟ್ಟವೇರಿದಾಗ ಆಗ್ರಾದಲ್ಲಿ ಒಂದು ಮುರುಕು ಕೋಟೆ ಮಾತ್ರ ಇತ್ತು. ಕ್ರಿ. ಶ. ೧೫೬೫ರಲ್ಲಿ ಅಕಬರ ಬಾದಶಹನು ಕಾಶಿಮ್ ಖಾನನೆಂಬ ಸರದಾರನಿಗೆ ಆಗ್ರಾ ಪಟ್ಟಣದ ಕೋಟೆಯನ್ನು ಕಟ್ಟಲು ಅಪ್ಪಣೆ ಮಾಡಿದನು. ಈ ಕೆಲಸ ಎಂಟು ವರ್ಷಗಳ ವರೆಗೆ ನಡೆಯಿತು. ಈ ಕಾರ್ಯಕ್ಕೆ ಒಟ್ಟು ೩೫ ಲಕ್ಷ ರೂಗಳ ವೆಚ್ಚ ತಗಲಿತು. ಈಗಲೂ ಆಗ್ರಾದಲ್ಲಿ ಮರಳು ಕಲ್ಲಿನಿಂದ ಕಟ್ಟಿದ ಆ ಕೋಟೆಯನ್ನು ನಾವು ನೋಡಬಹುದು.

ರಾಜ್ಯವನ್ನು ಬೆಳೆಸಲು ಪರಾಕ್ರಮವೂ ರಾಜ್ಯವನ್ನು ನೆಲೆಗೊಳಿಸಲು ಪ್ರಜಾರಂಜನವೂ ಅಗತ್ಯ. ಈ ಎರಡೂ ಸುಗುಣಗಳನ್ನು ಅಕಬರನು ಜನ್ಮತಃ ಪಡೆದು ಬಂದಿದ್ದನು. ಅವನ ಸಾಮ್ರಾಜ್ಯವನ್ನು ಮುಖ್ಯವಾಗಿ ಹಿಂದುಗಳೇ ಬಳೆಸಿದ್ದರು. ಜಯಪುರದ ಅರಸನ ಮಗನಾದ ಭಗವಾನ್ ದಾಸನು ಪಂಜಾಬಿನ ಸುಭೇದಾರನಾಗಿದ್ದನು. ಭಗವಾನ್‌ದಾಸನ ತಮ್ಮನ ಮಗನಾದ ರಾಜಾ ಮಾನಸಿಂಗನು ಕಾಬೂಲಿನಿಂದ ಒರಿಸ್ಸಾದ ವರೆಗೆ ದಿಗ್ವಿಜಯ ಮಾಡಿ ಅಕಬರನ ಕೀರ್ತಿಯನ್ನು ಹೆಚ್ಚಿಸಿದನು. ತೋಡರ ಮಲ್ಲರಾಜನು ಅಕಬರನ ರಾಜ್ಯದ ಕಂದಾಯ ಪದ್ಧತಿಯನ್ನು ಕ್ರಮಪಡಿಸಿದನು. ಆಗ ೧೪೫ ಮಂದಿ ಮನಸಬ್ದಾರರ (ಸವಾರರ ಮೇಲಧಿಕಾರಿಗಳು)ಲ್ಲಿ ೫೧ ಮಂದಿ ಹಿಂದೂ ಜನರಾಗಿದ್ದರು!

ಅಕಬರನು ಆಗಿನ ಭಾರತೀಯರ ವಿಶ್ವಾಸದ ಪ್ರತೀಕನೇ ಆಗಿದ್ದನು. ಅವನಿಗೆ ಸಾಧು ದರ್ಶನ ಹರಕೆಹೊರುವುದರಲ್ಲಿ ತುಂಬಾ ನಂಬಿಕೆ ಇತ್ತು. ಹುಮಾಯೂನನ್ನು ತನ್ನ ತಂದೆಯು ಹರಕೆ ಪ್ರಾರ್ಥನೆಗಳಿಂದ ಹೇಗೆ ಬದುಕಿಸಿದ್ದನೆಂಬುದು ಅವನ ಬಾಲ್ಯದ ರಕ್ಷಕರು ಅತನಿಗೆ ಕಥೆಯಾಗಿ ಹೇಳಿದ್ದರು. ಅವನು ಅಜಮೀರದಲ್ಲಿದ್ದ ಸಿಜಸ್ಥಾನದ ಮಯಿನುದ್ದೀನನೆಂಬ ಸಾಧುವಿನಗೋರಿಯ ದರ್ಶನ ತೆಗೆದುಕೊಂಡು ಮರಳಿ ಆಗ್ರಾಕ್ಕೆ ಬಂದನು. ಜೋಧಬಾಯಿಗೆ ಸುಖಪ್ರಸವವಾದರೆ ತಾನು ಶುಕ್ರವಾರ ಬೇಟೆಗೆ ಹೋಗುವುದಿಲ್ಲವೆಂದು ಅಕಬರನು ಹರಕೆ ಹೊತ್ತಿದ್ದನು. ಮುಂದೆ ಸಲೀಮನ ಜನನವಾದ ಮೇಲೆ ಅವನು ತನ್ನ ಮಾತನ್ನು ಮರೆಯಲಿಲ್ಲ. ಆ ಮೇಲೆ ಅವನೆಂದೂ ಶುಕ್ರವಾರ ಬೇಟೆಗೆ ಹೋಗಲಿಲ್ಲ. ಫತ್ತೇಪುರ ಸಿಕ್ರಿಯು ಅವನ ಭಕ್ತಿಯನ್ನು ಇಂದೂ ಸಾರುತ್ತಿದೆ. ಅಕಬರನಿಗೆ ಮೊದಲೆರಡು ಅವಳಿ ಮಕ್ಕಳು ಹುಟ್ಟಿ ಚಿಕ್ಕಂದಿನಲ್ಲೇ ಮಡಿದರು. ಆಗ ಅವನು ಸಿಕ್ರಿಯಲ್ಲಿದ್ದ ಶೇಖ ಸಲೀಮ ಕ್ರಿಸ್ತಿಯೆಂಬ ಸಾಧುವಿನ ದರ್ಶನಕ್ಕೆ ಹೋದನು. ಆ ಸಾಧು ಅಕಬರನಿಗೆ—'ನಿನಗೆ ಆಯುಷ್ಯವುಳ್ಳ ಮೂರು ಮಂದಿ ಗಂಡು ಮಕ್ಕಳು ಹುಟ್ಟುವರು' ಎಂದು ಹರಸಿದನು. ಮುಂದೆ ಸಾಧುವಿನ ವಚನ ಸತ್ಯವಾಯಿತು.

ಬಾದಶಹನು ತುಂಬ ಬಸುರಿದ್ದ ಜೋಧಬಾಯಿಯನ್ನು ಹಡೆಯಲು ಆ ಸಾಧುವಿನ ಸಾನ್ನಿಧ್ಯಕ್ಕೆ ಕಳುಹಿಸಿದನು. ಇದರಿಂದ ಅಲ್ಲೊಂದು ಅರಮನೆಯನ್ನು ಕಟ್ಟಿಸಬೇಕಾಯಿತು. ಕ್ರಮೇಣ ಸಿಕ್ರಿಯೊಂದು ಪಟ್ಟಣವೇ ಆಯಿತು. ಭಾಗ್ಯಶಾಲಿಯಾದ ಬಾದಶಹನು ಒಲಿದ ಮೇಲೆ ಹಳ್ಳಿಯು ದಿಲ್ಲಿಯಾಗುವುದೇನಾಶ್ಚರ್ಯ ಅದೇ ಕಾಲದಲ್ಲಿ ಗುಜರಾತಿನ ಮೇಲೆ ಸಾಗಿದ್ದ ಅಕಬರನ ಸೇನಾಪತಿಗಳು ಜಯಶಾಲಿಗಳಾಗಿ ಹಿಂತಿರುಗಿದರು. ಇದರ ಸ್ಮಾರಕವಾಗಿ ಸಿಕ್ರಿ ಪಟ್ಟಣಕ್ಕೆ ಬಾದಶಹನೇ ಫತ್ತೇಪುರವೆಂದು ಹೆಸರಿಟ್ಟನು. ಅಂದಿನಿಂದ ಸಿಕ್ರಿಯು ಫತ್ತೇಪುರ ಸಿಕ್ರಿಯಾಯಿತು.

(ಮುಂದುವರಿಯುವುದು)

—ಯು. ನಾ. ಉಡುಪ, ವಿದ್ವಾನ್.

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.



ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3619
UDIPI, THURSDAY
12-3-1959
LICENSE NO. 31
Licensed to Post without Prepayment

ನಮ್ಮ ಭಾರತ

ಪಾನಿಪತದ ನಾಲ್ಕನೆಯ ಯುದ್ಧದ ಘೋಷಣೆ!

ನಾವು ನಿಜವಾಗಿಯೂ ಅದೃಷ್ಟಶಾಲಿಗಳಾಗಿದ್ದೆವು ಇಲ್ಲವಾದರೆ ......!

ದೆಹಲಿಯ ಸಮೀಪದ ಪಾನಿಪತದಲ್ಲಿ ಮೂರು ಮಹಾ ಸಂಗ್ರಾಮಗಳು ನಡೆದುವೆಂದು ಇತಿಹಾಸ ಸಾರಿ ಹೇಳುತ್ತದೆ ಆದರೆ, ಇದೀಗ ಹೊಸತಾಗಿ ನಾಲ್ಕನೆಯ ಪಾನಿಪತ ಕದನದ ಮಾತನ್ನು ನಾನು ಕಿವಿಯಾರೆ ಕೇಳಿಯೇ ಬಿಡಬೇಕಾಯಿತು. ಅಲ್ಲದೇ ನನ್ನ ಅದೃಷ್ಟ ಸ್ವಲ್ಪ ವಕ್ರವಾಗಿದ್ದು ಬಿಡುತಿದ್ದರೆ, ನಾನೇ ಅದರಲ್ಲಿ ಉರುಳಿ ಬಿಡಬೇಕಾಗಿತ್ತು.

೧೯೫೮ರ ಜೂಲೈ ೩೦ನೆಯ ದಿನ ನಾನು ನನ್ನ ಪತಿ ಮತ್ತು ನಾಲ್ಕು ವರ್ಷದ ಹುಡುಗರೊಡನೆ ಸಿಮ್ಲಾದಿಂದ ದೆಹಲಿಕೆ ಮರಳಿ ಬರುವವಳಿದ್ದೆ. ಕಲ್ಕಾದ ವರೆಗಿನ ನಮ್ಮ ಇಂಟರ್ ವರ್ಗದ ರೈಲ್ವೆ ಪ್ರಯಾಣವು ಯಾವುದೇ ವಿಶೇಷ ಘಟನೆಗಳಿಲ್ಲದೆ ನಿರಾತಂಕವಾಗಿ ಸಾಗಿತ್ತು. ಜಾಹೀರಾತುಗಳಲ್ಲಿ ರೇಲ್ವೆಯು ನಮ್ಮ ಸೊತ್ತು ಎಂದು ಘೋಷಿಸುತ್ತಿರುವ ರೈಲ್ವೆ ಅಧಿಕಾರಿಗಳ ಪ್ರಾಮಾಣೀಕತೆಯನ್ನು ಪ್ರಶಂಸಿಸುತ್ತ ಬಂದಿದ್ದೆ. ಒಂಭತ್ತು ಜನರಿಗೆ ಸ್ಥಳಾವಕಾಶವಿರುವ ಆ ಗಾಡಿಯೊಂದರಲ್ಲಿ ನಾವು ಹದಿನೈದು ಯಾತ್ರಿಕರಿದ್ದೆವು. ನಮ್ಮಲ್ಲಿ ಹತ್ತು ಮಂದಿ ಪುಕ್ಕಟೆಯಾಗಿ ಪ್ರಯಾಣಿಸುತಿದ್ದೆವು. ಆ ಜನರು ರೇಲ್ವೆಗಾಗಿ ಕೆಲಸ ಮಾಡುತ್ತಿದ್ದುದರಿಂದ ಧರ್ಮಾರ್ಥ ಸಂಚಾರ ಮಾಡಬಹುದಾಗಿತ್ತು.

ಕಲ್ಕದಲ್ಲಿ ನಮಗೊಂದು ಸಣ್ಣ ಗಾಡಿ ದೃಗ್ಗೋಚರವಾಯಿತು ಆಗಾಗಲೇ ಅದರಲ್ಲಿ ಮೂವರು ಪ್ರಯಾಣಿಕರಿದ್ದರು. ಕಲ್ಕ—ಹೌರಾ ಮೇಲ್ ಗಾಡಿಯು ತನಗೆ ಜೋಡಿಸಿರುವ ಸಣ್ಣ ಗಾಡಿಯೊಂದರಲ್ಲಿ ಮುಸಾಫಿರರಾದ ಆರು ಜನರನ್ನು ಹೊತ್ತುಕೊಂಡು ಮುಂದುವರಿಯಿತು.

ಮಧ್ಯ ರಾತ್ರಿಯ ಸಮಯ ಗಾಡಿಯು ವೇಗವಾಗಿ ಓಡುತ್ತಿರುವುದಾದರೂ ಬಾಗಿಲು ಗಟ್ಟಿಯಾಗಿ ಬಡೆದ ಶಬ್ದವನ್ನು ನಾನು ಕೇಳಿದೆನು. ಬಾಗಿಲ ಕೆಳಗೆ ಪಾದಫಲಕದಲ್ಲಿ ಒರ್ವ ಚಿಂದಿ ಧರಿಸಿದ್ದ ಬಾಲಕನನ್ನು ನಾನು ಕಂಡೆನು

ನಮ್ಮ ಸಹಪ್ರಯಾಣಿಕನೊಬ್ಬನು ತಾನು ಕುಂಡಿಸಿದ್ದಲ್ಲಿಂದಲೇ ಕೂಗಿ ಹೇಳಿದ- “ಏ, ಇಳಿದು ಹೋಗು” ಎಂದು.

ಗಾಡಿಯು ಅಷ್ಟು ತ್ವರಿತಗತಿಯಲ್ಲಿ ಸಾಗುತ್ತಿರುವಾಗ, ಆ ಹುಡುಗ, ಪಾಪ, ಇಳಿದು ಹೋಗುವುದಾದರೂ ಹೇಗೆ? “ದಯಮಾಡಿ ನನ್ನನ್ನು ಒಳಬಿಡಿರಿ ಮುಂದಿನ ನಿಲ್ದಾಣದಲ್ಲಿ ನಾನು ಅವಶ್ಯ ಇಳಿದು ಹೋಗುವೆನು.” ಆ ಹುಡುಗ ನಮ್ರನಾಗಿ ವಿನಂತಿಸಿಕೊಂಡ.

ಹೆಚ್ಚಿನ ಮಾತು ಮುಂದುವರಿಯಲಿಲ್ಲ. ಹುಡುಗನ್ನು ಒಳಬರಲು ಬಿಡಲಾಯಿತು. ಅವನು ನೆಲದಲ್ಲಿಯೇ ಕೂತುಕೊಂಡು, ಬಾಗಿಲಿಗೆ ತನ್ನ ಬೆನ್ನನ್ನು ಒರಗಿಸಿಕೊಂಡ.

“ಇನ್ನು ಯಾರೂ ಒಳಬರದಂತೆ ನೋಡಿಕೊಂಡಿರು'' ನನ್ನ ಪತಿಯು ಆತನೊಡನೆ ಹೇಳಿದರು. ಹುಡುಗನಾದರೂ ಅದಕ್ಕೆ ಸೈಗುಟ್ಟಿ ಒಪ್ಪಿಕೊಂಡ.

ಹುಡುಗನು ಕಾವಲುಗಾರನಾಗಿ ಕುಳಿತ. ನನಗೆ ಮಾತ್ರ ನಿದ್ದೆ ಬರಲಿಲ್ಲ. ಆ ಕಾವಲುಗಾರ ಹುಡುಗನು ಬೇಲಿಯೇ ಹೊಲವಂಮೇದಂತೆ ನಮ್ಮ ಸಾಮಾನುಗಳಲ್ಲಿಯೇನನ್ನಾದರೂ ಎತ್ತಿ ಹಾಕಿ ಹೊರ ಓಡಿಯಾನು ಎಂಬ ಕಾರಣದಿಂದಲ್ಲ, ಓಡುತ್ತಿರುವ ವಾಹನದಲ್ಲಿ ನಿದ್ರೆ ಮಾಡುವುದು ನನಗೆ ಅಸಾಧ್ಯವಾದುದರಿಂದಲೇ ನಿದ್ರೆ ಬರಲಿಲ್ಲ. ದಾರಿಯುದ್ದಕ್ಕೂ ಆ ಹುಡುಗನು ಹೇಳುತಿದ್ದ, ‘ಇದು ಕಾಯ್ದಿರಿಸಿದ ಗಾಡಿ; ತಾವು ಬೇರೆಲ್ಲಿಯಾದರೂ ಸ್ಥಳವನ್ನು ಕಂಡುಕೊಳ್ಳಿರಿ” ಎಂಬ ಮಾತು ನನ್ನ ಕಿವಿದೆರೆಯನ್ನು ಬಡಿಯುತಿತ್ತು.

ಒಂದೆಡೆ ಗಾಡಿ ನಿಂತಿತು. ನಮ್ಮ ಗಾಡಿಯಲ್ಲಿ ಸಂಪೂರ್ಣ ಮೌನವ್ರತವನ್ನು ಆಚರಿಸಿಕೊಂಡಿದ್ದೆವು. ಪ್ಲೇಟ್‌ಫಾರ್ಮಿನಲ್ಲಿದ್ದ ಗಂಡಸರು ಮತ್ತು ಹೆಂಗಳು ಮೌನವಾಗಿದ್ದರು. ಇಂಜಿನ್ನು ಬಿಗಿಲು ಊದಿದೊಡನೆಯೇ ಗಂಡಸು ಬಾಗಿಲನ್ನು ಗಟ್ಟಿಯಾಗಿ ಬಡೆಯುತ್ತ ಕೂಗಿಕೊಂಡನು: “ಬಾಗಿಲು ತೆಗೆಯಿರಿ; ಇಲ್ಲವಾದರೆ, ಇದೇ ಈ ಮುಂಜಾನೆಯ ಹೊತ್ತಿನಲ್ಲಿ ನಾಲ್ಕನೆಯ ಪಾನಿಪತ ಕದನವು ಪ್ರಾರಂಭವಾದೀತು.”

“ಅಯ್ಯೋ ದೇವರೆ, ಪಾನಿಪತದ ಜನರು ಇನ್ನೂ ರಣ ಕುತೂಹಲಿಗಳಾಗಿರುವರೆ?” ನಾನು ಗೊಣಗುಟ್ಟಿದೆ.

ನಮ್ಮ ಸಹಪ್ರಯಾಣಿಕರಲ್ಲಿ ಒಬ್ಬರು ಆಗ ಕಿಟಕಿಯ ಬಳಿಗೆ ಹೋಗಿ, “ಹೋಗಿರಿ, ಕಾವಲುಗಾರನ ಸಹಾಯ ಪಡೆಯಿರಿ” ಎಂದ.

ಆ ಒರಟು ಮನುಷ್ಯನು ನಮ್ಮತ್ತ ಗರ್ಜಿಸತೊಡಗಿದನು: “ಆ ಕಾವಲುಗಾರನು ಕೈ ಬೀಳಲಿ. ನಾವು ಪಾನಿಪತದವರು ನಮ್ಮ ಶಾರೀರಿಕ ಶಕ್ತಿಯನ್ನೇ ನೆಚ್ಚಿಕೊಂಡಿರುವವರು. ಬಾಗಿಲು ತೆರೆಯಿರಿ. ಇಲ್ಲವಾದರೆ, ನಾನೇ ಬಾಗಿಲನ್ನು ಗುದ್ದಿ ತೆರೆಯುವೆನು.” ಅವನು ಬಾಗಿಲಿಗೆ ಒಂದು ಬಲವಾದ ಹೊಡೆತವನ್ನಿತ್ತನು.

“ಅದನ್ನು ಪುಡಿಮಾಡ ಬೇಡಿರಿ.” ಎಂದು ನನ್ನ ಪತಿಯು ಹೇಳಿದರು. ಮತ್ತು ನಮ್ಮ ‘ಕಾವಲುಗಾರ’ನನ್ನು ತನ್ನತ್ತ ಬಂದು ನಿಲ್ಲಲು ಆಜ್ಞಾಪಿಸಿದರು.

ಅವರ ಗುಂಪು ಒಳಬಂದಿತು. ಗಂಡಸು ನಿಂತುಕೊಂಡು ಕೂರಲು ಸ್ಥಳವನ್ನರಸುತ್ತ ಸುತ್ತಲೂ ಈಕ್ಷಿಸತೊಡಗಿದನು ಹೆಂಗಸು ಮೌನವಾಗಿ ನನ್ನ ಪಕ್ಕದಲ್ಲಿ ಮಂಡಿಸಿದಳು. ಸ್ವಲ್ಪ ಹೊತ್ತಿನಲ್ಲಿಯೇ ಆಕೆ ತನ್ನ ಘೋಷವನ್ನು ಸ್ವಲ್ಪ ಓರೆ ಮಾಡಿದಳು. ನನಗೆ ಆಕೆಯ ಪರಿಚಯವಾಯಿತು. “ಓ, ಚಂಪಾ,” ನಾನು ಆಶ್ಚರ್ಯಚಕಿತನಾಗಿ ಹೇಳಿಬಿಟ್ಟೆ. ಆಕೆ ಕೆಲವು ಸಮಯ ಪೂರ್ವದಲ್ಲಿ ನನ್ನ ಶಾಲೆಯಲ್ಲಿ ವಿದ್ಯಾರ್ಥಿನಿಯಾಗಿದ್ದಳು.

ಆಗ, ಆ ಒರಟು ವ್ಯಕ್ತಿ ಹೇಳಿದ - “ಹಾಗಾದರೆ, ನಾವೀಗ ಮಿತ್ರರಾದೆವು. ನನ್ನ ತಂಗಿ ಚಂಪ ನವ ವಧು ಆಗಿದ್ದಾಳೆ. ನಿನ್ನೆ ಆಕೆಯ ವಿವಾಹ ನೆರವೇರಿತು. ನಾನು ಅಲಿಘರಕ್ಕೆ ಮದುವೆಯ ದಿಬ್ಬಣವನ್ನು ಕರೆದುಕೊಂಡುಹೋಗುತಿದ್ದೇನೆ.’

ಹೀಗೆ ನಾಲ್ಕನೆಯ ಪಾನಿಪತ ಕದನವು ಘೋಷಿಸಲ್ಪಟ್ಟರೂ, ಒಂದು ತಟಕಾದರೂ ರಕ್ತ ಸುರಿಯುವುದಕ್ಕೆ ಮೊದಲೇ ಶಾಂತಿಯು ಸ್ಥಾಪಿಸಲ್ಪಟ್ಟಿತು. ಎಂತಲೇ ನಮ್ಮ ಅದೃಷ್ಟ ಸುಖದವಾಗಿತ್ತು!

—ಯೋಜನಾ

ಹೊಸ ಶಾಖೆ
(ನಮ್ಮ 117ನೇ ಶಾಖೆ)
ವಿಳಾಸ:
16/7748 ತಿಲಕ್ ಬೀದಿ,
ಕಾಕಿನಾಡ.
ಪ್ರಾರಂಭ:
20—3—1959
ಡಾ| ಟಿ. ಎಂ. ಎ. ಪೈ, ಮೆನೇಜಿಂಗ್ ಡೈರೆಕ್ಟರ್.
ಟಿ. ಎ. ಪೈ. ಬಿ. ಕಾಂ. (ಬೊಂ.) ಜನರಲ್ ಮೆನೇಜರ್.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.
ಪ್ರಧಾನ ಕಛೇರಿ: ಉಡುಪಿ.

ನುಡಿಮುತ್ತು

(೧ನೇ ಪುಟದಿಂದ)

ಮಣ ನಡೆಸಬೇಕೆ? ಇದಕ್ಕೆ ಅಮೆರಿಕನ್ ಸಹಾಯ ಪಡೆಯುವ ಪಾಕಿಸ್ತಾನಿಗಳು ಹೇಳುವ ಉತ್ತರಕ್ಕೂ ಅಮೆರಿಕನ್ ಪಾಕ್ ಒಡಂಬಡಿಕೆಗೂ ಗಾಢ ಮೈತ್ರಿಯಿರುವುದಲ್ಲವೆ?

* * *

ಸಮಾಜವನ್ನು ಅಧಃಪತನಗೊಳಿಸುತ್ತಿರುವ ಪ್ರಾಚೀನ ಸಂಪ್ರದಾಯಗಳಲ್ಲಿ ಇಂದು ವರದಕ್ಷಿಣೆಯ ಪ್ರಶ್ನೆಯೊಂದೆಂದು ನಿರ್ವಿವಾದದಿಂದ ಹೇಳಬಹುದು. ಕೆಲವೆಡೆ ಕನ್ಯಾ ಶುಲ್ಕವಿರುವುದಾದರೂ ಅದು ಕೆಲವೇ ಸಂದರ್ಭಗಳ ಮಟ್ಟಿಗೆ ಮಾತ್ರ ಸೀಮಿತವಾಗಿದೆ. ಹೆಣ್ಣು ಹೆತ್ತ ತಾಯ್ತಂದೆಯರು ದೊಡ್ಡ ಮೊತ್ತದ ವರದಕ್ಷಿಣೆಗಾಗಿ ತಮ್ಮ ಸರ್ವಸ್ವವನ್ನೇ ಕಳೆದುಕೊಂಡ ಉದಾಹರಣೆಗಳುಂಟು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ವೇಳೆಯಲ್ಲಿ ಗಾಂಧ್ಯನುಯಾಯಿಗಳು ಕೆಲವರು ವರದಕ್ಷಿಣೆಯನ್ನು ನಿಷೇಧಿಸುವ ಚಳುವಳಿಯನ್ನೂ ಹೂಡಿದ್ದರು. ಆದರೆ, ಅಂದು ಆ ಚಳುವಳಿಯಲ್ಲಿ ಧುರೀಣತ್ವವನ್ನು ವಹಿಸಿದವರೇ ಇಂದು ತಮ್ಮ ಮಕ್ಕಳಿಗಾಗಿಯೋ ಬಂಧುಗಳಿಗಾಗಿಯೋ ಈ ವರದಕ್ಷಿಣೆಯ ಜಾಲದಲ್ಲಿ ತಡಕಡಿಸುವಂತಾಗಿದೆ.

ಸಮಾಜದಲ್ಲಿ ಅಶಾಂತಿಯನ್ನು ಹರಡಿಸಬಲ್ಲ ಈ ವರದಕ್ಷಿಣೆಯನ್ನು ನಿಷೇಧಿಸುವ ಬಗ್ಗೆ ಶ್ರೀ ಜುಗಲ ಕಿಶೋರರು ಒಂದು ಖಾಸಗಿ ಗೊತ್ತುವಳಿಯನ್ನು ಲೋಕಸಭೆಯಲ್ಲಿ ಮಂಡಿಸಿದ್ದರು. ಈ ವಿಧೇಯಕದಂತೆ ವರದಕ್ಷಿಣೆಯನ್ನು ಪ್ರತಿಬಂಧಿಸಿ ಅದನ್ನು ಕೊಡುವ ಇಲ್ಲವೇ ತೆಗೆದುಕೊಳ್ಳುವವರನ್ನು ಶಿಕ್ಷಿಸಲು ಅವಕಾಶ ದೊರೆಯುತ್ತದೆ. ಆದರೆ, ಇದು ಕಾನೂನಿನ ಪ್ರಶ್ನೆಗಿಂತ ನೈತಿಕ ಪ್ರಶ್ನೆಯನ್ನೆ ಹೊಂದಿಕೊಂಡಿರುವುದರಿಂದ, ಆ ಬಗ್ಗೆಯೂ ವಿಚಾರಿಸಿ ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ, ಈ ಬಗ್ಗೆ ಸರಕಾರ ಪರಿಶೀಲಿಸುತ್ತಿದೆ ಎಂದೂ ಕಾಯದೆ ಮಂತ್ರಿ ಶ್ರೀ ಅಶೋಕ ಕುಮಾರ ಸೇನರು ಹೇಳಿದ ನಂತರ ವಿಧೇಯಕವು ಹಿಂತೆಗೆಯಲ್ಪಟ್ಟಿತು.

ಮದ್ಯಪಾನ, ವೇಶ್ಯೆಯರ ನಿರ್ಬಂಧ ಇತ್ಯಾದಿಗಳ ಬಗ್ಗೆ ಕಾನೂನುಗಳು ಆಗಿವೆ. ಆದರೆ, ಸಮಾಜದಲ್ಲಿ ಇಂದು ಮದ್ಯಪಾನಿಗಳಿಗೂ ವೇಶ್ಯೆಯರಿಗೂ ಏನೂ ಕೊರತೆ ಬಂದಿಲ್ಲ. ಹಾಗಿರುವಾಗ, ಕೇವಲ ಕಾಯದೆಯಿಂದ ಕಾರ್ಯವಾಗದು ಎಂಬುದು ನಿರ್ವಿವಾದ. ಜನತೆಯ ನೈತಿಕ ಮಟ್ಟವನ್ನು ಎತ್ತರಿಸಿ, ಅವರಲ್ಲಿ ವರದಕ್ಷಿಣೆಯ ಕ್ರೂರ ಪರಿಣಾಮಗಳನ್ನು ಪ್ರತಿಬಿಂಬಿಸಿ ಆ ಬಗ್ಗೆ ಮನವೊಲಿಯದಂತೆ ಮಾಡುವ ಮಹಾ ಸಾಹಸಕಾರ್ಯವನ್ನು ಯಾರಾದರೂ ಕೈಗೊಳ್ಳಬೇಕು. ಭೂಸ್ವಾಮ್ಯದ ಬಗ್ಗೆ ವಿನೋಬಾ ಹೊರಟಿರುವಂತೆ ಯಾರಾದರೊಬ್ಬ ನಿವೃತ್ತ ಕೇಂದ್ರೀಯ ಮಂತ್ರಿಯು ಇಂತಹ ರಾಷ್ಟ್ರೀಯ ಕಾಯದೆಗಳತ್ತ ಜನತೆಯ ಮನವೊಲಿಸಿ ಅವುಗಳು ಯಶಸ್ವಿಯಾಗುವಂತೇಕೆ ಪಾದಯಾತ್ರೆಯನ್ನೇಕೆ ಮಾಡಬಾರದು? ಆದರೆ, ಎಲ್ಲರಿಗೂ ಇನ್ನೊಂದು ಬಾರಿ ಮಂತ್ರಿಯಾಗಬೇಕೆಂಬ ಲವಲವಿಕೆಯೇ ಮನೆಮಾಡಿರುವುದರಿಂದ ಸದ್ಯ ಅವ್ಯವಹಾರ್ಯವಾದ ಈ ತೆರದ ಕಾಯದೆಗಳನ್ನು ತರಲು ವಾತಾವರಣ ಒದಗಿಬಂದಿಲ್ಲವೆಂದೇ ತಿಳಿಯಬೇಕು.

—ರಾಶಿ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ ಪೈಸೆ.

ವರುಷ ೩೮. ವಾರ ೨೭ 19-3-1959 Vol. 38. No. 27.

ವಿಚಾರ ವರ್ಷ

ನಾಗಪುರ ನಿರ್ಧಾರ

* *

ಮೌಲ್ಯ ವಿಚ್ಛೇದನ

* *

ವಿದೇಶ ಸಂದರ್ಶನ

* *

ವ್ಯಾಪಾರದ ಗುಟ್ಟು

* *

ಕಾಂಗ್ರೆಸ್ಸು ದೇಶದ ಹಿರಿಯ ರಾಜಕೀಯ ಪಕ್ಷವಾಗಿದ್ದು, ಅದು ಸರಕಾರವನ್ನು ರಚಿಸಿ ಶಾಸನವನ್ನು ಮುನ್ನಡೆಸುತ್ತಿದೆ. ಕಾಂಗ್ರೆಸ್ಸು ಸ್ವೀಕರಿಸಿರುವ ಕಲ್ಯಾಣ ರಾಷ್ಟ್ರರಚನೆಯ ಧ್ಯೇಯವನ್ನು ಪೂರ್ತಿಗೊಳಿಸಲು ಹೆಣಗುತ್ತಿದೆ. ದೇಶದ ಪ್ರಮುಖ ಸಮಸ್ಯೆಗಳಲ್ಲಿ ಆಹಾರದ ಸಮಸ್ಯೆಯೂ ಒಂದಾದುದರಿಂದ, ಅಧಿಕ ಆಹಾರೋತ್ಪಾದನಾ ಚಳವಳಿಗಳು ನಡೆದುವು. ಆದರೆ, ಇದರಿಂದ ನಿರೀಕ್ಷಿತ ಫಲ ಪ್ರಾಪ್ತಿಯಾಗುವುದು ದೂರವುಳಿಯಲು ಭೂಸುಧಾರಣೆಯ ತತ್ವಕ್ಕೇನೇ ಕಾಂಗ್ರೆಸ್ಸು ಅಂಟಿ ಕೂರಬೇಕಾಯಿತು. ಉಳುವವನೇ ಹೊಲದೊಡೆಯನೆಂಬ ಶ್ಲೋಕವನ್ನು ಹಾಡಿ, ಅದಕ್ಕನುಗುಣವಾದ ಶಾಸನವನ್ನು ಸಿದ್ಧಗೊಳಿಸಲು ಎಲ್ಲೆಲ್ಲಿಯೂ ಬಿರುಸಿನ ಕೆಲಸ ಸಾಗುತ್ತಿದೆ. ಸಹಕಾರೀ ವ್ಯವಸಾಯ ಲಾಭದಾಯಕ ಪರಿಣಾಮವೀಯುವುದೆಂದು ಹೇಳಲಾಗುತ್ತಿದೆ.

ಮೊನ್ನೆ ಮೊನ್ನೆ ಸೇರಿದ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಈ ಬಗ್ಗೆ ದೃಢೀಕರಣವೀಯಲಾಯಿತು. ಪಂಡಿತ ನೆಹರೂರವರು ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಈ ಬಗ್ಗೆ ಖಚಿತವಾದ ಅಭಿಪ್ರಾಯ ತಿಳಿಸಿದ್ದಾರೆ. ತಾವು ಒಮ್ಮೆ ನೆಚ್ಚಿಕೊಂಡುದನ್ನು ಹಿಂಗಳೆಯುವ ದುರಭ್ಯಾಸಹೀನರಾದ ಪ್ರಧಾನಿವರ್ಯರು ಈ ಬಗ್ಗೆ ಕೆಲವಾರು ಆಕ್ಷೇಪಗಳೂ ಸಮರ್ಥನೆಗಳೂ ಬಂದಿವೆ. ಭಿನ್ನಾಭಿಪ್ರಾಯ ಸಹಜವಾದುದೇ. ಎಲ್ಲರನ್ನೂ ನಮ್ಮಿಂದ ಮೆಚ್ಚಿಸುವುದು ಸಾಧ್ಯವಿಲ್ಲ. ಆದರೂ ಈ ಬಗ್ಗೆ ಕಾಂಗ್ರೆಸ್ ಸ್ವೀಕರಿಸಿದ ಗೊತ್ತುವಳಿಯು ಮಹತ್ವಪೂರ್ಣವಾಗಿದೆ. ಭೂಪರಿಮಿತಿಯನ್ನು ಹೇರುವುದರಿಂದ "ಕ್ರಮೇಣ "ಕಮ್ಯುನಿಜಂ" ಬರುವುದೆಂದು ಕೆಲವರ ಭಯ. ಆದರೆ, ಈ ಭಯವು ನಿರಾಧಾರವಾದುದು. ಸಹಕಾರಿ ಒಕ್ಕಲತನವನ್ನು ಯಾರೂ ಬೇಸಾಯಗಾರರ ಕುತ್ತಿಗೆಗೆ ಒತ್ತಾಯಪೂರ್ವಕವಾಗಿ ಕಟ್ಟುವುದಿಲ್ಲ. ರೈತರು ಸ್ವೇಚ್ಛೆಯಿಂದಲೇ ಇದನ್ನು ಅನುಸರಿಸಬಹುದು. ಆದರೂ ನಾವಿನ್ನು ಎರಡು ಮೂರು ವರ್ಷಗಳೊಳಗೆ ಈ ಬಗ್ಗೆ ಉಚಿತ ಕಾರ್ಯಕ್ರಮ ಕೈಗೊಳ್ಳದೆ ಹೋದರೆ, ತಪ್ಪಿತಸ್ಥರೆನಿಸುತ್ತೇವೆ ಎಂದು ಆಡಿದರು. ಪ್ರಧಾನಿಯವರ ತಲೆಯಲ್ಲಿ ಸಹಕಾರಪದ್ಧತಿಯಿಂದಲೇ ಪ್ರಗತಿ—ಅದು ವ್ಯವಸಾಯವಿರಲಿ, ಉದ್ಯಮವೇ ಇರಲಿ=ಸಾಧ್ಯವೆಂಬ ಆಲೋಚನೆ ಬಲವಾಗಿ ಬೇರುಬಿಟ್ಟಿದೆ. ಅವರ ಈ ಸೂಚನೆ ಕಾಂಗ್ರೆಸ್ ಸಂಸ್ಥೆಯ ದ್ವಾರ ಕಾರ್ಯಕಾರಿಯಾಗುತ್ತದೆ. ಎಂತಲೇ "ನೆಹರೂ ಅಭಿಪ್ರಾಯ" ಎಂದರೆ, "ಒಡುವಿನ ಹಿಡಿತ". ಅದನ್ನು ಅಷ್ಟು ಸುಲಭದಲ್ಲಿ ತಪ್ಪಿಸುವುದು ಸಾಧ್ಯವಿಲ್ಲ. ನಿರ್ಧಾರ ಎಂದರೆ, ಹೀಗೆಯೇ ಇರಬೇಕು ತಾನೆ? ಗಾಳಿ ಬಂದತ್ತ ತೂರಿಕೊಳ್ಳುವ ಚಂಚಲಚಿತ್ತರಾದ ರಾಜಕಾರಣಿಗಳು ನಮ್ಮ ಪ್ರಧಾನಿಯವರಿಂದ ಸ್ಥಿರಚಿತ್ತದ ಪಾಠ ಕಲಿಯಬೇಕು. ಆಗ, ಒಳ್ಳೆಯದಾಗಲಿ, ಕೆಟ್ಟದೇ ಆಗಲಿ, ಏನಾದರೊಂದು ನಿಶ್ಚಿತವಾಗಿ ಆಗೇ ಆಗುವುದು. ಇದರಿಂದ ದುಷ್ಪರಿಣಾಮಗಳು ತೋರಿ ಬಂದರೆ, ಆ ಮೇಲಾದರೂ ತಿದ್ದಿಕೊಳ್ಳಬಹುದು; ಅದರ ಬದಲು ಸದಾ ಡೋಲಾಯಮಾನವಾಗಿಯೇ ಇದ್ದರೆ, ತ್ರಿಶಂಕು ಸ್ವರ್ಗ, ಅಷ್ಟೆ.

೦೦ ೦೦ ೦೦

ಸೋವಿಯತ್ ಪಕ್ಷದಲ್ಲಿ ಸ್ಟೇಲಿನ್‌ಪ್ರಿಯ ಆಯುಧಗಳು ಇನ್ನೂ ಬಳಸಲ್ಪಡುತ್ತಿವೆ, ಸ್ಥಾನಚ್ಯುತ ನಾಯಕರನ್ನು ಚಿತ್ರದಲ್ಲಿ ಗುರುತಿಸಲಾಗಿದೆ.

ಅಮೆರಿಕೆಯ ಸಂಯುಕ್ತ ರಾಷ್ಟ್ರದ ಉಪಮಂತ್ರಿ ಶ್ರೀ ಡಾಗ್ಲಸ್ ಡಿಲನ್ನರ ಹೇಳಿಕೆಯ ಆಧಾರದಿಂದ ೧೦–೧೫ ವರ್ಷಗಳೊಳಗೆ ಭಾರತೀಯ ರೂಪಾಯಿಯು ದುಷ್ಕರ ವಿನಿಮಯವಾಗುವುದೆಂದೂ ರೂಪಾಯಿಯು ಭದ್ರವಿದೆಯೆಂದೂ ಅಲ್ಲಲ್ಲಿ ಹೇಳಲಾಗುತ್ತಿದೆ. ಭಾರತವನ್ನು ಸಂದರ್ಶಿಸಿದ ಅರ್ಥ ಶಾಸ್ತ್ರಜ್ಞರು ಭಾರತದ ಅರ್ಥ ವ್ಯವಸ್ಥೆಯನ್ನು ಪ್ರಶಂಸಿಸಿದ್ದಾರೆ ಆರೆ, ಅಂತಾರಾಷ್ಟ್ರೀಯ ಹಣಕಾಸಿನ ನಿಧಿಯವರು ೧೧ ದುಷ್ಕರ ವಿನಿಮಯಗಳನ್ನು ಮನ್ನಿಸಿದ್ದು, ರೂಪಾಯಿಯನ್ನು ಮೂರನೆಯ ವರ್ಗದ ನಾಣ್ಯಗಳ ಸಾಲಿಗೆ ಸೇರಿಸಿದ್ದಾರೆ. ಇದರಿಂದಲೇ ಭಾರತದ ರೂಪಾಯಿಯು ಭದ್ರವಾಗಿಲ್ಲ ಎಂಬುದು ವ್ಯಕ್ತವಾಗುತ್ತದೆ. ಕೊರತೆಯ ಧನ ವಿನಿಯೋಗದಿಂದ ರೂಪಾಯಿಯ ಮೌಲ್ಯವು ಸ್ವಾಭಾವಿಕವಾಗಿ ಇಳಿಯುತ್ತದೆ. ಹಾಗಿರುವಾಗ, ಇನ್ನೂ ಇನ್ನೂ ಕೊರತೆಯ ಧನವನ್ನು ಬಳಸುವುದು ಭದ್ರತೆಯ ದೃಷ್ಟಿಯಿಂದ ಉತ್ತಮವಲ್ಲ. ರೂಪಾಯಿಯು ಈಗ ಅತಿಪ್ರಸರಣದ ಫಲವನ್ನು ಅನುಭವಿಸುತ್ತಿದೆ ಎಂಬುದು ಸುಸ್ಪಷ್ಟವಿದ್ದು, ಇಂದು ರೂಪಾಯಿಯ ಮೌಲ್ಯವನ್ನು ವಿಚ್ಛೇದಿಸುವುದರಿಂದಲೇ ಭಾರತದ ಅರ್ಥ ವ್ಯವಸ್ಥೆಯು ಸುಗಮವಾಗುವುದು. ಈ ಅಭಿಪ್ರಾಯವನ್ನು ಗುಜರಾಥ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಡಾ। ಬಿ ಆರ್. ಶೆಣೈ ಅವರು ಹೊರಗೆಡಹಿದ್ದಾರೆ. ಫ್ರಾನ್ಸು ತನ್ನ ಫ್ರಾಂಕಿನ ಮೌಲ್ಯವನ್ನು ಯುದ್ಧೋತ್ತರದಲ್ಲಿ ನಾಲ್ಕು ಬಾರಿ ವಿಚ್ಛೇದಿಸಿ ಬಲಶಾಲಿಯಾಗಿದೆ. ಮೌಲ್ಯ ವಿಚ್ಛೇದನದಿಂದ ರೂಪಾಯಿಗೂ ಭಾರತಕ್ಕೂ ಯಾವ ಅಪಮಾನವೂ ಆಗದ, ಅದರ ಬಲವು ಹೆಚ್ಚುವುದು ಎಂದು ಅವರು ಸೂಚಿಸಿದ್ದಾರೆ

ಡಾ॥ ಶೆಣೈಯವರ ವಿಚಾರಸರಣಿಯು ಮೆಚ್ಚುವಂತಹದಿದೆ. ಆದರೆ, ಹೀಗೆ ವಾಸ್ತವಿಕತೆ ಇರುವುದಾದರೆ, ನಮ್ಮ ಇತರ ಅ

(ಎಂಟನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:–
ಮಂಗಳೂರು—3.

ಸ್ಥಾಪನೆ:–
1931

ಕಾಯಂ ಠೇವಣಾತಿ ಬಡ್ಡಿ ದರ

1 ತಿಂಗಳಿಂದ 5 ತಿಂಗಳ ವರೆಗೆ 4¼%
6 „ 12 „ 4½%
13 „ 24 „ 4¾%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ ..ಇತ್ಯಾದಿ ...

ಕಥಾ ವಿಹಾರ

ಗಗನ ಪಾದರಕ್ಷೆಯ ಅನಿಷ್ಟ ಪ್ರದರ್ಶನ

ಜೋತಿಷಿಗಳೂ ವಿಜ್ಞಾನಿಗಳೂ ಭವಿಷ್ಯ ನುಡಿದರು; ಜನತೆಯು ಥರಥರನೆ ನಡುಗಿ ಬಿಟ್ಟಿತು!

ವಸಂತ ಋತು ಪ್ರಾರಂಭವಾಗಿದ್ದರೂ ವೈಶಾಖ ಮಾಸದ ಉರಿಯಿಂದ ಜನ ಜಂಗುಳಿಯು ಉಸುರಾಡಿ ಬಿಟ್ಟ ಬಿಸಿಗಾಳಿಯಿಂದ ವಾತಾವರಣವು ತಣ್ಣಗಾಗಿರಲಿಲ್ಲ. ಗ್ರೀಷ್ಮವಿನ್ನೂ ತಾನೇ ಪಾದಾರ್ಪಣ ಮಾಡಬೇಕಾಗಿದ್ದರೂ ಅದರ ಬೇಗೆ ಈಗಲೇ ಮೊದಲಾಗಿತ್ತು. ಮನೆಯಲ್ಲಿ ರಾತ್ರಿ ಊಟಮಾಡಿ, ತನ್ನ ನೆಚ್ಚಿನ ಪತ್ನಿಯೊಡನೆ ಅನತಿದೂರದ ಮೈದಾನಿನತ್ತ ರಾಮಮೋಹನ ಗಾಳಿ ಸೇವನೆಗಾಗಿ ಹೊರಬಿದ್ದ. ದಾರಿಯಲ್ಲಿ ಆ ಮಾತು ಈ ಮಾತು ನಡೆದೂ ಬಿಟ್ಟಿತ್ತು. ಮೈದಾನವನ್ನು ತಲುಪಿಯೂ ಆಯಿತು.

ರಾಮಮೋಹನನ ಪತ್ನಿ ಸಲುಗೆಯಿಂದಲೇ ಪತಿಯೊಡನೆ ವ್ಯವಹರಿಸಿದ್ದಳು. ಸಾಕಷ್ಟು ವಿದ್ಯಾಗುಣ ಸಂಪನ್ನೆಯಾಗಿದ್ದ ಆಕೆಯೊಡನೆಯೂ ರಾಮಮೋಹನ ಕೆಲವೊಮ್ಮೆ ತನ್ನ ಬುರುಡೆ ಬಿಚ್ಚುತಿದ್ದ. ಹಿಂದೊಮ್ಮೆ ವಿನೋದವಾಡುವ ಉದ್ದೇಶದಿಂದ, ತನ್ನ ಪತ್ನಿಯ ಹಸ್ತ ಸವರಲು, ಆಕೆಯನ್ನು ಸನಿಯ ಕರೆದಾಗ, ಅವಳು ಹಿಂಜರಿಯಲು, ಹಸ್ತಸಾಮುದ್ರಿಕಾ ಲಕ್ಷಣವನ್ನು ತಾನು ಅರಿತಿರುವೆನೆಂದು ಡೋಂಗಿಬಿಟ್ಟು, ಆಕೆಯನ್ನು ಒಲಿಸಿದ್ದ; ಅಲ್ಲದೇ ಪತ್ನಿಯ ಮನಸ್ಸಮಾಧಾನಕ್ಕಾಗಿ ನಾಲ್ಕಾರು ಭವಿಷ್ಯವಾಣಿಯನ್ನೂ ರೇಖೆಗಳ ಆಧಾರದಿಂದ ಉಸುರಿದ. ಪಾಪ, ಜ್ಯೋತಿಷ,— ಭವಿಷ್ಯ ಎಂದರೆ ಪ್ರಾಣಬಿಡಲೂ ಸಿದ್ಧಳಾಗಿದ್ದ ಆಕೆ, ಅವೆಲ್ಲವನ್ನೂ ನಂಬಿದ್ದಳು; ಪತಿದೇವನ ಕಪಟನಾಟಕಕ್ಕೂ ಒಲಿಬಿದ್ದಿದ್ದಳು

ಮೈದಾನದಲ್ಲಿ ತಣ್ಣಗಿನ ಗಾಳಿಗೆ ಮೈಯೊಡ್ಡಿ ಸುರಿಯುತ್ತಿದ್ದ ಬೆವರನ್ನು ಆರಿಸಿಕೊಳ್ಳುವಷ್ಟರಲ್ಲಿ ಪಡುಗಿರಿಯ ಕೋಡುಗಲ್ಲಿನ ಮೇಲೆ ಬಾಲಚಂದ್ರನುದಯಿಸಿ ಬರುವುದು ದೃಗ್ಗೋಚರವಾಯಿತು. ಈ ಸೃಷ್ಟಿಯ ವೈಚಿತ್ರ್ಯವನ್ನೇ ಕಣ್ಣಿದಿರು ನೋಡ ನೋಡುತ್ತಿರುವಷ್ಟರಲ್ಲಿಯೇ ಪತ್ನಿಯ ದೃಷ್ಟಿ ಉತ್ತರದ ಕಡೆಗೆ ಹರಿಯಿತು. ಅಲ್ಲಿ ಸಪ್ತರ್ಷಿ ಮಂಡಲಕ್ಕಿಂತ ಸ್ವಲ್ಪ ಎತ್ತರದಲ್ಲಿ ಒಂದು ನಕ್ಷತ್ರವು ತೋರಿತು. ಬಹುಶಃ ಆಕೆ ಆ ನಕ್ಷತ್ರವನ್ನು ಇದು ವರೆಗೆ ನೋಡಿರಲಿಲ್ಲ; ಎಂತಲೇ ತನ್ನ ಜ್ಯೋತಿಷಿ ಮನಪ್ರಿಯನೊಡನೆ ಕೇಳಿದಳು.

ರಾಮಮೋಹನ ಅದನ್ನು ನೆಟ್ಟ ದೃಷ್ಟಿಯಿಂದೀಕ್ಷಿಸಿದ ಅದ. ನಕ್ಷತ್ರದಂತೆ ಕಂಡು ಬರಲಿಲ್ಲ. ಗ್ರಹವೂ ಅಲ್ಲ. ಏನೋ ಒಂದು ಅದ್ಭುತ ನಕ್ಷತ್ರವು ಆಕಾಶದಲ್ಲಿ ಮೂಡಿ ಬಂದಿರಬೇಕು. ಧೂಮಕೇತು ಮೊದಲಾದ ವಿಸದೃಶಕಗಳ ಕುರಿತು ಆತ ಕೇಳಿದ್ದ. ಆದರೆ, ಇದು ಅವಾವುಗಳಂತೆಯೂ ಇರಲಿಲ್ಲ. ಪುಚ್ಛತಾರಾಕಾರವೂ ಅಲ್ಲ; ನಕ್ಷತ್ರಾಕಾರವೂ ಅಲ್ಲ. ಕೊಂಚ ಉದ್ದಗಲವಾಗಿದ್ದು ವಕ್ರವಾಗಿತ್ತು. ನೋಟಕರಿಗೆ ಅದೊಂದು ಪಾದರಕ್ಷೆಯಂತೆ ಕಂಡು ಬರುತಿತ್ತು. ತಾನು ಜ್ಯೋತಿಷಿಯೆಂದು ನಿರರ್ಥಕವಾಗಿ ಕೊಚ್ಚಿಕೊಂಡ ತಪ್ಪಿಗೆ ಪ್ರಾಯಶ್ಚಿತ್ತ ಈಗ ಆಗಬೇಕಿತ್ತು. ಎಂತಲೇ ಪತ್ನಿಯೊಡನೆ ಹೇಳಿದ, "ನೋಡು, ಧೂಮಕೇತುವಿನ ಕುರಿತು ಕೇಳಿರುವೆಯಲ್ಲ; ಪ್ರಪಂಚಕ್ಕೆ ಅನಿಷ್ಟ ಒದಗುವಾಗ, ಇಂತಹವು ಗೋಚರವಾಗುತ್ತವೆ ಇದು ಅದರಂತಿಲ್ಲ. ಒಂದು ತೇಜೋರಾಶಿಯ ನಡುವೆ ಪಾದರಕ್ಷೆಯ ಆಕಾರದಲ್ಲಿದೆ. ಇದನ್ನು ಗಗನ ಪಾದರಕ್ಷೆಯೆಂದು ಶಾಸ್ತ್ರ ಹೇಳುತ್ತದೆ. ಬ್ರಿಟಿಷರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದಿಳಿಯುವ ಸಂದರ್ಭದಲ್ಲಿ ಒಮ್ಮೆ ಇದು ಗೋಚರವಾಗಿತ್ತಂತೆ. ಈಗ ಪುನಃ ತೋರಿಬರುತ್ತಿದೆ. ಭಾರತಕ್ಕೆ ಇಂದು ಏನೋ ಮಹದ್ವಿಪತ್ತು ಕಾಣಿಸಿಕೊಳ್ಳುವ ಮುನ್ಸೂಚನೆಯಿದು. ಶುಭಕಾರಿಯೆಂದಿಗೂ ಅಲ್ಲ. ಊರಿಗೆ ಬಂದುದನ್ನು ನಾವೂ ಅನುಭವಿಸಲೇ ಬೇಕು. ಅನ್ಯಥಾ ವಿಧಿಯಿಲ್ಲ" ಎಂದು ತಿಳಿಸಿದ. ಇನ್ನೂ ಹೆಚ್ಚು ಹೊತ್ತು ನಿಂತರೆ, ಅದರಿಂದ ರಹಸ್ಯ ಭೇದನೆವಾಗಬಹುದೆಂಬ ಅಂಜಿಕೆಯಿಂದ ಮನೆಗೆ ಪತ್ನಿಯನ್ನು ಕರೆತಂದ.

ರಾಮಮೋಹನನ ಊಹೆ ಸುಳ್ಳಾಗಿರಲಿಲ್ಲ. ಕೆಲವೇ ದಿನಗಳಲ್ಲಿ ವರ್ತಮಾನ ಪತ್ರಿಕೆಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಈ ಗಗನ ಪಾದರಕ್ಷೆ ಗೋಚರವಾದ ಸಂಗತಿಯೂ ಅದರ ಅಶುಭ ಲಕ್ಷಣಗಳೂ ಬೆಳಕು ಕಾಣತೊಡಗಿದುವು, ಭಾರತದಲ್ಲಿನ ಮಹಾಮಹಾ ಜ್ಯೋತಿಷಿಗಳು ಈ ಗಗನ ಪಾದರಕ್ಷೆಯ ಅಸ್ತಿತ್ವ, ಉದಯ, ಅಸ್ತ, ಗಮನಗಳ ಬಗ್ಗೆ ಉದ್ದುದ್ದ ಲೇಖನವನ್ನು ಬರೆದು ಪ್ರಕಾಶಿಸಿದರು. ಸೂರ್ಯ ಮಂಡಳದ ಒಂದಂಶವೇ ಗಗನ ಪಾದರಕ್ಷೆಯೆಂದು ಸೋಪಪತ್ತಿಕವಾಗಿ ಪ್ರತಿಪಾದಿಸಿ, ಅದು ಚಂದ್ರನ ಗುರುತ್ವಾಕರ್ಷಣದಿಂದ ಕೆಳಗಿಳಿಯಿತೆಂದೂ ಹೀಗಾಗಿ ಅದು ಚಂದ್ರಮಂಡಳದಲ್ಲಿ ದೀರ್ಘವರ್ತುಲಾಕಾರವಾಗಿ ಸುತ್ತುವರಿಯ ತೊಡಗುವುದೆಂದೂ ಒಬ್ಬರು ಬರೆದರೆ, ಇನ್ನೊಬ್ಬ ಪ್ರಸಿದ್ಧ ಜ್ಯೋತಿಷಿಯರು, "ಗಗನ ಪಾದರಕ್ಷೆಯೆಂಬುದು ಶುಕ್ರ. ನಕ್ಷತ್ರಕ್ಕಿಂತ ೪ ಕೋಟಿ ಮೈಲು ದೂರವಿರುವ ನಕ್ಷತ್ರ. ಇದು ಸೂರ್ಯನಿಗೆ ೪೦ ಸಾವಿರ ವರ್ಷಗಳಲ್ಲಿ ಒಂದು ಪ್ರದಕ್ಷಿಣೆ ಬರುವುದು. ಆದರೆ, ಸದ್ಯ ಶುಕ್ರ ಗ್ರಹದ ಆಕರ್ಷಣಾ ಶಕ್ತಿಯು ಕುಂಠಿತವಾದುದರ ಪರಿಣಾಮವಾಗಿ ಮತ್ತು ಚಂದ್ರನ ಗುರುತ್ವ ಶಕ್ತಿಯಿಂದದು ಚಂದ್ರನತ್ತ ಧಾವಿಸುತ್ತಿದೆ, ಹಾಗೆ ಓಡುತ್ತಿರುವಾಗ, ಅದು ಭೂಮಿಯ ಮೇಲೂ ಬೀಳಬಹುದು. ಒಂದು ವೇಳೆ, ಹೀಗಾದಲ್ಲಿ ಅದು ಭೂಮಿಗಿಂತ ನಲವತ್ತು ಪಾಲು ದೊಡ್ಡದಿರುವರಿಂದ ಸೃಷ್ಟಿಯೇ ನಾಶವಾಗಿ ಹೋಗುವುದರಲ್ಲಿ ಸಂದೇಹವಿಲ್ಲ" ಎಂದು ಬರೆದರು. ಇದೇ ಬಗೆಯ ಹಲವಾರು ಜ್ಯೋತಿರ್ಮಾರ್ತಾಂಡರು ನಾನಾ ರೀತಿಯಾಗಿ ನೂತನ ಗ್ರಹವನ್ನು ವರ್ಣಿಸಿದರೂ, ಅದು ಪ್ರಪಂಚವನ್ನು ನಾಶಮಾಡಲೋಸುಗವೇ ಉದಯಿಸಿತು ಎಂದು ಅಭಿಪ್ರಾಯಪಟ್ಟರು.

ಅತ್ತ ಅಮೆರಿಕೆಯ ವೇಧಶಾಲೆಯಿಂದ ಬಂದ ಪ್ರಕಟಣೆಯೊಂದು ಈ ರೀತಿಯಿತ್ತು: ಈಗ್ಗೆ ನಾಲ್ಕಾರು ದಿನಗಳಿಂದ ಆಕಾಶದಲ್ಲೊಂದು ಹನ್ನೆರಡನೆಯ ಗ್ರಹಗೋಚರಿಸತೊಡಗಿದೆ ಎಂಬ ಭಾರತೀಯ ವರದಿಯನ್ನು ಪರಿಶೀಲಿಸಲಾಯಿತು. ಅದು ಸತ್ಯವೆಂದೂ ತಿಳಿದು ಬಂದಿದೆ. ಈ ಗಗನ ಪಾದರಕ್ಷೆಯು ಸೂರ್ಯಮಂಡಲದಿಂದ ಸಿಡಿದು ಭೂಮಿಯತ್ತ ಧಾವಿಸುತ್ತಿದೆಯೆಂದೂ ಇದರ ವೇಗವು ತಾಸಿಗೆ ಒಂದು ನೂರು ಸಾವಿರ ಮೈಲುಗಳೆಂದೂ ಅಂದಾಜು ಮಾಡಲಾಗಿದೆ. ಪ್ರಮಾಣದಲ್ಲಿದು ಭೂಮಿಗಿಂತ ೪೦ ಪಾಲು ದೊಡ್ಡದಿದ್ದರೂ ಅದರ ವೇಗವನ್ನು ನೋಡುವಾಗ, ಭಾರವು ಭೂಮಿಯ ಭಾರದ ಕಾಲಂಶದಷ್ಟು ಮಾತ್ರ ಇದೆಯೆಂದು ತಿಳಿಯಲಾಗಿದೆ. ಆದರೂ ಅದು ಈಗ ಭೂಮಿಗಿಂತ ಸುಮಾರು ೮೦ ಕೋಟಿ ಮೈಲು ದೂರದಲ್ಲಿದೆಯೆಂದೂ ಇದೇ ವೇಗದಲ್ಲಿ ಅದು ಉರುಳುತ್ತ ಬಂದರೆ, ಸುಮಾರು ಆರು ತಿಂಗಳು ಎಂಟು ದಿವಸ ಕಳೆಯುವಷ್ಟರಲ್ಲಿ ಭೂಮಿಗೆ ಉರುಳುವುದೆಂದೂ ಅಂದಾಜುಮಾಡಲಾಗಿದೆ. ಆದರೂ ಚಂದ್ರನ ಅಥವಾ ಇತರ ಗ್ರಹಗಳ ಆಕರ್ಷಣ ಶಕ್ತಿಯಿಂದ ನಡುದಾರಿಯಲ್ಲಿಯೇ ತಡೆಯಲ್ಪಟ್ಟರೆ, ಅದು ಉಪಚಂದ್ರನಂತೆ ಚಂದ್ರನಿಗೂ ಇತರ ಗ್ರಹಗಳಿಗೂ ಸುತ್ತುತ್ತ ಇರುವುದು. ಆಗ ಭೂಮಿಯಲ್ಲಿದ್ದವರಿಗೆ ಯಾವ ಅಪಾಯವೂ ಇಲ್ಲ."

ಲಂಡನ್ನಿನ ವೇಧ ಶಾಲೆ ಸಾಮಾನ್ಯವಾಗಿ ಅಮೆರಿಕೆಯನ್ನೇ ಸಮರ್ಥಿಸಿತಾದರೂ, ಚಂದ್ರನ ಆಕರ್ಷಣಕ್ಕೆ ಗುರಿಯಾಗುವ ಸಂಭವವಿಲ್ಲವೆಂದೂ ಅದು ಭೂಮಿಯ ಆಕರ್ಷಣಾ ಶಕ್ತಿಯ ಕ್ಷೇತ್ರಕ್ಕೊಳಪಟ್ಟರೆ, ಆಗ ಭೂಮಿಯ ಮೇಲೆ ಉರುಳುವುದೆಂದೂ ಸಾರಿತು. ಅಲ್ಲದೆ, ತೀರ ಹಗುರವಾದ ಗ್ರಹವಾದುದರಿಂದ, ಅತಿ ವೇಗವಾಗಿ ಬೀಳುತ್ತಿರುವಾಗ ತನ್ನ ಗತಿಯನ್ನೇ ಬದಲಾಯಿಸಬಹುದೆಂದೂ ಆಗ ಅದರಿಂದ ಏನೊಂದೂ ಹಾನಿ ನಮಗಿಲ್ಲವೆಂದೂ ಧೈರ್ಯ ಹೇಳಿತು. ಇದೇ ಮಾದರಿಯಲ್ಲಿ ರಶ್ಯನ್ ವೇಧ ಶಾಲೆಯೊಂದು ಹೇಳಿಕೆಯಿತ್ತು ಅದು ಉರುಳುವುದಾದರೆ, ಉತ್ತರ ಸಮುದ್ರದ ತೀರದಲ್ಲಿ ಎಂದು ಭವಿಷ್ಯ ನುಡಿಯಿತು.

ಹೀಗೆ ಪ್ರಪಂಚದ ನಾನಾ ರಾಷ್ಟ್ರಗಳ ಪ್ರಸಿದ್ಧ ವಿಜ್ಞಾನಿಗಳೆಲ್ಲರೂ ಕಣ್ಣಲ್ಲಿ ಎಣ್ಣೆ ಹೊಯ್ದು ಈ ನೂತನ ಗ್ರಹದ ಚಲನವಲನಗಳನ್ನೇ ಪರಿಶೀಲಿಸುತಿದ್ದರು. ಜಗತ್ತೆಲ್ಲವೂ ಕಣ್ಣಾಗಿ ಈ ಕುರಿತಾದ ವಾರ್ತೆಗಳನ್ನು ಕಲೆ ಹಾಕುತಿದ್ದರು. ಪತ್ರಿಕೆಗಳು "ಗಗನ ಪಾದರಕ್ಷೆ" ಎಂಬ ಹೊಸತೊಂದು ಶೀರ್ಷಿಕೆಯನ್ನೇ ತೆರೆದುವು, ಎಲ್ಲೆಲ್ಲಿಯೂ ಇದೇ ಮಾತುಕಥೆ ನಡೆಯಿತು. ಸಂತೆಕಟ್ಟೆಗಳಲ್ಲಿ, ಹೋಟೇಲುಗಳಲ್ಲಿ ಜೀನಸು ಅಂಗಡಿಗಳಲ್ಲಿ ಬೀಡದವನಲ್ಲಿ ಗಗನ ಪಾದರಕ್ಷೆಯ ಕಥನವೇ ನಡೆಯುತ್ತಿತ್ತು.

ಕೆಲವು ದಿನಗಳು ಗತಿಸಿ ಹೋದುವು. ಅಮೆರಿಕನ್ ವೇಧಶಾಲೆಯು ತನ್ನ ನೂತನ ಪರಿಶೀಲನಾವರದಿಯಲ್ಲಿ "ಗಗನ ಪಾದರಕ್ಷೆಯು ಭೂಮಿಯ ಮೇಲೆ ಇನ್ನು ೪೫ ದಿನಗಳಲ್ಲಿ ಉರುಳುವುದು" ಎಂದು ಘೋಷಿಸಿತು. ಇದುವರೆಗೆ ಮೌನ ತಾಳಿದ್ದ ಸನ್ಯಾಸಿಗಳು, ಪಾದ್ರಿಗಳು, ಮೌಲ್ವಿಗಳು ಎಲ್ಲರೂ ಎಚ್ಚರವಾದರು ತಂತಮ್ಮ ಸಂಪ್ರದಾಯಗಳನ್ನು ಅನುಸರಿಸುವ ತಮ್ಮ ಶಿಷ್ಯರನ್ನು ಅಪಮೃತ್ಯು ಬಂದೊದಗಿದರೂ ನೇರವಾಗಿ ಸ್ವರ್ಗಕ್ಕೆ ಕಳಿಸುವ ಸೇವಾಬುದ್ಧಿಯಿಂದ, ತ್ಯಾಗ, ಸೇವೆ,ಗಳ ಉಪದೇಶವೀಯತೊಡಗಿದರು. ಪರಮಾತ್ಮನನ್ನು ಇದ ವರೆಗೆ ಮರೆತಿದ್ದರೂ ಕೊನೆಯ ಕಾಲದಲ್ಲಿ ಯಾದರೂ ಅವನನ್ನು ಹಾಡಿ ಕೊಂಡಾಡಲು ವಿನಂತಿಸಿದರು. ಕರಪತ್ರಗಳನ್ನು ಹಂಚಿದರು. ಮನೆ ಮಠಗಳು, ಇಗರ್ಜಿಗಳು, ಮಸೀದಿಗಳು, ಆಶ್ರಮಗಳು ಎಲ್ಲೆಲ್ಲಿಯೂ ಜನರು ದೈವ

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ
ಸ್ಕೇಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;
'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!
ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಭೂ ಸುಧಾರಣೆ

ಅನಪೇಕ್ಷಿತ ಭೂ ಸುಧಾರಣೆ

ನಮ್ಮ ಸರಕಾರ ದಾರಿ ತಪ್ಪಿದ ನೀತಿಯನ್ನು ಅನುಸರಿಸುತ್ತಿದೆ

ಭೂ ಸುಧಾರಣೆಯ ವಿಚಾರದಲ್ಲಿ ಬಾಯಿ ತೆರೆದವರೆಲ್ಲ ಭಾಷಣ ಬಿಗಿಯುತ್ತಾರೆ. ಮಂತ್ರಿಗಳಿಂದ ಹಿಡಿದು ಗ್ರಾಮ ಪುಡಾರಿಗಳ ವರೆಗೆ ಎಲ್ಲರೂ ಭೂಸುಧಾರಣೆ ಆಗಬೇಕು; ಉಳುವವನಿಗೆ ಭೂಮಿ ಹಕ್ಕಾಗಬೇಕು, ಎಂಬ ಶ್ಲೋಕಗಳನ್ನು ಹೇಳುತ್ತಾರೆ. ಜನಸಂಖ್ಯೆ ಹೆಚ್ಚಾಗುತ್ತಿದೆ, ವಿದೇಶಿ ವಿನಿಮಯದ ಹಣ ವ್ಯರ್ಥ ಆಹಾರ ಧಾನ್ಯ ತರಿಸಲು ಖರ್ಚಾಗುತ್ತಿದೆ, ದೇಶದ ಜನರ ಆರ್ಥಿಕ ಸ್ಥಿತಿ ಬಹು ನಿಕೃಷ್ಟವಾಗಿದೆ, ಭೂಮಿ ಇಲ್ಲದವರಿಗೆ ಭೂಮಿ ಒದಗಿಸಬೇಕಿದೆ. ಆದ್ದರಿಂದ ಭೂಸುಧಾರಣೆ ಅಗತ್ಯವೆಂದು ಹಲವರು ವಾದಿಸುತ್ತಾರೆ.

ಮೇಲೆ ಹೇಳಿದ ಸಮಸ್ಯೆಗಳು ಭೂಮಿಯನ್ನು ಯಾ ಭೂಸುಧಾರಣೆಯನ್ನು ಹೊಂದಿಕೊಂಡಿಲ್ಲ. ನಿಯೋಜಿತ ಭೂಸುಧಾರಣೆಯಿಂದ ಈ ಸಮಸ್ಯೆಗಳು ಬಗೆಹರಿವಂತೂ ಇಲ್ಲ. ಭೂಹಿಡುವಳಿಗೆ ಮಿತಿಯನ್ನು ಕಲ್ಪಿಸಿ ದೊರೆತ ಭೂಮಿಯನ್ನು ಭೂಮಿ ಇಲ್ಲದವರಿಗೆ ಹಂಚುವದರಿಂದ ಎಲ್ಲರಿಗೂ ಭೂಮಿ ದೊರೆಯುವದೂ ಇಲ್ಲ; ಬೆಳೆ ಹೆಚ್ಚಾಗುವದೂ ಇಲ್ಲ. ಭೂವಿತರಣೆ, ಸಹಕಾರ ಬೇಸಾಯ, ಭೂದಾನ ಎಂಬಿತ್ಯಾದಿಯಾಗಿ ಕಣ್ಣೀರಿಡುವ ಆಚಾರ್ಯ ವಿನೋಬಾ, ನೆಹರೂರವರಿಂದ ಹಿಡಿದು ಗ್ರಾಮೀಣ ಮುಂದಾಳುಗಳ ವರೆಗೆ ಯಾರೂ ಕೂಡ ಭೂ ಸಮಸ್ಯೆಯನ್ನು ಸರಿಯಾಗಿ ಅಭ್ಯಾಸ ಮಾಡಿಲ್ಲ. ಈಗ ಕಾಂಗ್ರೆಸು ಹೇಳುತ್ತಿರುವ ಭೂಸುಧಾರಣೆಯಿಂದ ಜನರ ಬಡತನ ಹಾಗೂ ಹೆಚ್ಚು ಉತ್ಪಾದನೆಯ ಪ್ರಶ್ನೆ ಬಗೆಹರಿಯಲಾರದು.

ಹಿಂದೂ ದೇಶದ ಒಟ್ಟು ಜನಸಂಖ್ಯೆ ೩೬ ಕೋಟಿ. ಹಿಂದೂ ದೇಶದ ಭೂ ವಿಸ್ತೀರ್ಣ (ಜಮ್ಮು, ಕಾಶ್ಮೀರಗಳೂ ಸೇರಿ) ಪರ್ವತ, ಬೆಟ್ಟಗುಡ್ಡ, ನದಿ, ಸರೋವರ ಎಲ್ಲಾ ಸೇರಿ ೮೧ ಕೋಟಿ ಎಕರೆಗಳು. ಇದರಲ್ಲಿ ವ್ಯವಸಾಯ ಮಾಡಲಾಗದ ಬೆಟ್ಟ ಗುಡ್ಡ, ಕೆರೆ ಮೊದಲಾದುವದ್ದು ಕಳೆದರೆ ಉಳಿಯುವದು ೫೦ ಕೋಟಿ ಎಕರೆಗಳು. ಈ ಐವತ್ತು ಕೋಟಿ ಎಕರೆಗಳಲ್ಲಿ ರಿಸರ್ವ್ ಫಾರೆಸ್ಟ್ ಮತ್ತಿತರ ಕಾದಿಟ್ಟ ಸ್ಥಳಗಳನ್ನು ಕಳೆದರೆ ಉಳಿಯುವದು ಕೇವಲ ೩೦ ಕೋಟಿ ಎಕರೆಗಳು. ಅಂದರೆ ತಲಾ ೮೩ ಸೆಂಟುಗಳು ಮಾತ್ರ. ತಲಾ ಮುಕ್ಕಾಲು ಎಕರೆ ಭೂಮಿ ದೊರೆಯುವ ಬಡ ಭಾರತದಲ್ಲಿ ಎಲ್ಲರಿಗೆ ಭೂಮಿ ಹಂಚುವ ಭೂ ಸುಧಾರಣೆ ಬಡತನವನ್ನು ಮಾತ್ರ ಹಂಚಿಕೊಂಡಂತಾಗುವದು.

ಭೂ ಸುಧಾರಣೆಯ ಗುಂಗಿನಲ್ಲಿ ಇತರ ರಾಷ್ಟ್ರಗಳನ್ನು ಅನುಸರಿಸಲು ಹೊರಟಿರುವ ನಮ್ಮ ದೇಶವು ಇತರ ರಾಜ್ಯಗಳಲ್ಲಿರುವ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಂತಿಲ್ಲ. ಚೈನಾದಲ್ಲಿ ೬೦ ಕೋಟಿ ಜನರಿದ್ದಾರೆ ಆದರೆ ಭೂ ವಿಸ್ತೀರ್ಣವು ೨೪೦ ಕೋಟಿ ಎಕರೆ—ಅಂದರೆ ತಲಾ ೪ ಎಕರೆ. ಅಮೇರಿಕಾದ ಜನಸಂಖ್ಯೆ ೧೫ ಕೋಟಿ, ಭೂ ವಿಸ್ತೀರ್ಣ ೧೯೦ ಕೋಟಿ ಎಕರೆ. ಅಂದರೆ ತಲಾ ೧೨.೬ ಎಕರೆಗಳು. ರಷ್ಯಾದ ಜನಸಂಖ್ಯೆ ೧೯ ಕೋಟಿ; ಭೂ ವಿಸ್ತೀರ್ಣ ೫೪೦ ಕೋಟಿ ಎಕರೆ ಅಂದರೆ ತಲಾ ೩೧ ಎಕರೆಗಳು. ಭಾರತೀಯರಾದ ನಾವು ಈ ದೇಶಗಳ ವ್ಯವಸಾಯ ಪದ್ಧತಿಯನ್ನು ಅನುಸರಿಸಲೆತ್ನಿಸುವದಾದರೆ ಅಲ್ಲಿ ರೈತನಿಗೆ ದೊರೆಯುವ ಭೂವಿಸ್ತೀರ್ಣದ ಅಂಶವನ್ನು ಗಮನದಲ್ಲಿಡಬೇಕು.

ಹಿಂದೂ ದೇಶದಲ್ಲಿ ಈಗ ವ್ಯವಸಾಯವಾಗುತ್ತಿರುವ ಭೂಮಿಯ ಬದಲು ಹೆಚ್ಚಿಗೆ ಹೊಸ ಭೂಮಿ ಮಾಡುವ ಸಾಧ್ಯತೆ ಬಹಳ ಕಡಿಮೆ ೧೯೫೧ರ ಖಾನೇಸುಮಾರಿ ಲೆಕ್ಕದಂತೆ ವ್ಯವಸಾಯಕ್ಕೆ ಯೋಗ್ಯವಾದ ನಮ್ಮ ೩೦ ಕೋಟಿ ಎಕರೆ ಭೂಮಿಯಲ್ಲಿ ಕೇವಲ ೬ ಕೋಟಿ ಎಕರೆಯನ್ನು ಮಾತ್ರ ಪಾಳುಬಿಡಲಾಗಿತ್ತು. ಆ ವರ್ಷದ ಖಾನೇಸುಮಾರಿಯಂತೆ ಆಗಿದ್ದ ಭಾರತದ ೩೬ ಕೋಟಿ ಜನಸಂಖ್ಯೆಯಲ್ಲಿ ೨೯.೫ ಕೋಟಿ ಜನರು ಗ್ರಾಮಾಂತರ ಪ್ರದೇಶ ನಿವಾಸಿಗಳಾಗಿದ್ದು ಅವರಲ್ಲಿ ೧೭.೩ ಕೋಟಿ ಜನರು ಸ್ವತಂತ್ರ ಉದ್ಯಮವಿಲ್ಲದೆ ಇತರರನ್ನು ಆಶ್ರಯಿಸಿದವರಾಗಿದ್ದರು.

ಹಿಂದೂ ದೇಶದಲ್ಲಿ ಭೂವ್ಯವಸಾಯ ಮಾಡದ ಭೂಮಾಲಿಕರ ಹಾವಳಿಯೇ ವ್ಯವಸಾಯ ಮಾಡುವವರ ದಾರುಣ ಬಡತನಕ್ಕೆ ಕಾರಣವೆಂಬ ವಾದ ಹುರುಳಿಲ್ಲದ್ದು. ಭೂಮಿಯಲ್ಲಿ ವಾಸ ಇಲ್ಲದ ಭೂಮಾಲಿಕರ ಭೂಮಿಯೇ ಅದನ್ನು ವ್ಯವಸಾಯ ಮಾಡುವ ಜನರಿಗೆ ಉದ್ಯೋಗ ಕಲ್ಪಿಸಿದೆಯೆಂಬುವದನ್ನು ಭಾರತದಂಥಾ ನಿರುದ್ಯೋಗಿಗಳ ದೇಶದಲ್ಲಿ ಮರೆಯಲು ಸಾಧ್ಯವಿಲ್ಲ. ಇಂಥಾ ವ್ಯವಸಾಯಗಾರರನ್ನು ಯಾವ ಸಹಕಾರ ವ್ಯವಸಾಯ ಕ್ರಮದ ಅಧೀನಕ್ಕೆ ತಂದರೂ ಅವರಿಗೆ ಈಗ ದೊರೆಯುತ್ತಿರುವ ಲಾಭ ದೊರೆಯಲಾರದು. ಈಗ ವಾದ ಮಾಡುವವರಿಗೆ ಬೆಳೆಯ ಮುಕ್ಕಾಲು ಭಾಗ ದೊರೆತು ಕಾಲು ಭಾಗ ಮಾತ್ರ ಭೂಮಾಲಕನಿಗೆ ಹೋಗುತ್ತವೆ. ಯಾವ ಸಹಕಾರ, ಸಾಮೂಹಿಕ ವ್ಯವಸಾಯದಲ್ಲಿ ಇದು ಸಾಧ್ಯವಾದೀತು? ಭೂಮಿ ಇಲ್ಲದೆ ಕೇವಲ ಕೆಲಸ ಮಾಡುವ ಇತರರೊಡನೆ ತಮ್ಮ ಸಾಮೂಹಿಕ ಸಹಕಾರ ವ್ಯವಸಾಯದ ಉತ್ಪತ್ತಿಯನ್ನು ಹಂಚಿಕೊಳ್ಳಬೇಕಿರುವದರಿಂದ ಹೆಚ್ಚಿನ ಪ್ರಯೋಜನವಾಗುವಂತಿಲ್ಲ.

ಭೂಮಿಯನ್ನು ಕ್ರಯಕ್ಕೆ ಪಡೆದು ಅದನ್ನು ವಾರಕ್ಕೆ ಕೊಡುವ ಭೂಮಾಲಿಕನಿಗೂ, ಮನೆ ಕಟ್ಟಿ ಮನೆ ಬಾಡಿಗೆಗೆ ಕೊಡುವ, ಇಲ್ಲವೇ ಕಂಪೆನಿಯಲ್ಲಿ ಪಾಲು ಪಡಕೊಂಡವನಿಗೂ ಏನೂ ವ್ಯತ್ಯಾಸವಿಲ್ಲ. ವಾಣಿಜ್ಯದಲ್ಲಿ ಬಂಡವಳವನ್ನು ತೊಡಗಿಸಿ ಲಾಭ ಮಾಡುವವನಿಗೆ ಪರಮಾವಧಿ ಮಿತಿ ನಿಶ್ಚಯಿಸದ ಸರಕಾರ, ಭೂಮಿಗೆ ಬಂಡವಳ ಹಾಕಿ ವಾರ ಪಡೆಯುವವನಿಗೆ ಮಿತಿ ಏಕೆ ಹಾಕಬೇಕು?

ಹಿಂದೂದೇಶದಲ್ಲಿ ಸ್ವಾವಲಂಬನದಿಂದ ಜೀವಿಸುವ ರೈತರ ಸಂಖ್ಯೆ ಕೇವಲ ೭೧೦ ಲಕ್ಷ. ಇವರಲ್ಲಿ ವ್ಯವಸಾಯಮಾಡದೆ ಭೂಮಾಲಿಕತ್ವದಿಂದ ಲಾಭ ಪಡೆಯುವವರ ಸಂಖ್ಯೆ ಕೇವಲ ೧೬ ಲಕ್ಷ. ಅಂದರೆ ಶೇಕಡ ೨-೩ರಂತೆ ಈ ಹದಿನಾರು ಲಕ್ಷ ಭೂ ಒಡೆಯರ ಒಡೆತನವನ್ನು ತೆಗೆದು ಹಾಕಿ ಉಳುವವನಿಗೇ ಭೂಮಿ ಕೊಟ್ಟರೂ ಭಾರತದ ಆಹಾರ ಸ್ಥಿತಿ ಬದಲಾಗುವದು ಹೇಗೆ?

ಆದ್ದರಿಂದ ಹಿಂದೂದೇಶದ ಬಡತನಕ್ಕೆ ಕಾರಣ ಈ ಭೂ ಸ್ವಾಮಿತ್ವ ಯಾ ಹಿಡುವಳಿಗಳ ಪರಿಪಾಠ ಅಲ್ಲ. ಬದಲು ಹಿಂದೂ ದೇಶದ ಜನ ಸಂಖ್ಯೆಯಲ್ಲಿ ಸಂಪಾದನೆ ಮಾಡುವ ಪ್ರತಿಯೊಬ್ಬರಿಗೂ ಮೂರು ಜನ ಸಂಪಾದನೆ ಮಾಡದ ಆಶ್ರಿತರಿದ್ದಾರೆ ನಿರುದ್ಯೋಗಿಗಳಾಗಿರುವ ಇವರಿಗೆ ಕೆಲಸ ಯೋಗ್ಯ ಅವಕಾಶ ಒದಗಿಸಿಕೊಟ್ಟು ಅವರನ್ನು ಸಂಪಾದನೆ ಮಾಡುವಂತೆ ಏರ್ಪಡಿಸುವದು ಜಾಣತನವಲ್ಲದೆ ಇರುವ ಭೂಮಿಯನ್ನು ಎಲ್ಲರಿಗೂ ಚೂರು ಚೂರಾಗಿ ಹಂಚುವದಲ್ಲ.

ರಷ್ಯಾದಲ್ಲಿ ಕಮ್ಯೂನಿಸ್ಟ್ ತತ್ವದ ಜನಕನಾದ ಲೆನಿನನೇ ರೈತರ ಭೂ ಸಹಕಾರ ವ್ಯವಸಾಯ ಸಂಘಗಳನ್ನು ಸ್ಥಾಪಿಸಿದನು. ಆದರೆ ಅವು ಲಾಭದಾಯಕವಾಗಿ ಕೆಲಸ ಮಾಡಲಿಲ್ಲ. ಆದ್ದರಿಂದ ಸಹಕಾರ ಬೇಸಾಯವನ್ನು ಬಿಟ್ಟು ಕಡ್ಡಾಯ ಸಾಮೂಹಿಕ ವ್ಯವಸಾಯವನ್ನು ಅಲ್ಲಿ ಅನುಸರಿಸಬೇಕಾಯಿತು. ಭೂಮಿಯನ್ನೆಲ್ಲಾ ಸರಕಾರದ ವಶಪಡಿಸಿ, ರೈತರ ಮಾಲಿಕತ್ವವನ್ನು ಕೊನೆಗಾಣಿಸಲಾಯಿತು. ರಷ್ಯಾದಲ್ಲಿ ಭೂವ್ಯವಸಾಯ ಮಾಡುವ ಜನಸಂಖ್ಯೆ ಇಂದು ಕೇವಲ ೩ ಕೋಟಿ ಅಂದರೆ ಶೇಕಡ ೧೫ರಷ್ಟು ಮಾತ್ರ. ಆದರೆ ಭಾರತದಲ್ಲಿ ಶೇಕಡ ೭೦ರಷ್ಟು ಭೂಮಿಯನ್ನು ನಂಬಿದ್ದಾರೆ. ಅರ್ಧ ಎಕರೆಯಂತಿರುವ ಭೂಮಿಯಲ್ಲಿ ಯಾವ ರೀತಿಯ ವ್ಯವಸಾಯವನ್ನು ಎಷ್ಟೇ ಶಾಸ್ತ್ರೀಯವಾಗಿ ನಡೆಸಿದರೂ ಪ್ರಯೋಜನವೇನು?

ಚೈನಾದಲ್ಲಿಯೂ ಅದೇ ರೀತಿ ನಡೆಯಿತು. ಯುದ್ಧದ ಅನಂತರ ಕಮ್ಯೂನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದೊಡನೆಯೇ ದೊಡ್ಡ ಭೂಮಾಲಿಕರನ್ನು ನಿರ್ಮೂಲ ಮಾಡಿ ಭೂವಿತರಣೆ ಮಾಡಿ ‘ಬಂದಿದ್ದಲ್ಲಿ ನೂರು ಹೂಗಳು ಅರಳಲಿ” ಎಂದು ಆಶಿಸಲಾಯಿತು. ಆದರೆ ಹಾಗಾಗಲಿಲ್ಲ. ಸರಕಾರ ಬೇಸಾಯ ಪದ್ಧತಿಯನ್ನು ಜಾರಿಯಲ್ಲಿ ತರಲಾಯಿತು. ಅದೂ ಫಲಕಾರಿಯಾಗಿಲ್ಲ. ಆದ್ದರಿಂದ ರೈತರ ಭೂಮಾಲಿಕತ್ವವನ್ನು ರದ್ದುಗೊಳಿಸಿ ರಷ್ಯಾದ ರೀತಿಯ ‘ಕಮ್ಯೂನ್’ಗಳನ್ನು ರಚಿಸಲಾಯಿತು. ಚೈನಾ, ರಷ್ಯಾಗಳಲ್ಲಿ ಮಾಡಿದಂತೆ ಭಾರತದಲ್ಲಿ ಮಾಡಲು ಸಾಧ್ಯವೇ? ಪ್ರಜಾಪ್ರಭುತ್ವದ ಭಾರತ ಸರಕಾರ ಹಾಗೆ ಮಾಡಲು ಶಕ್ಯವೇ? ಅದಿಲ್ಲದಿರುವಾಗ ಈಗಿರುವ ಪದ್ಧತಿಯನ್ನು ಅಡಿಮೇಲು ಮಾಡಿ ದೇಶದಲ್ಲಿ ಅಶಾಂತಿ ಹೆಚ್ಚಿಸುವದರಲ್ಲಿ ದೇಶದ ಉದ್ಧಾರವಾಗಲೀ ಜನತೆಯ ಪ್ರಗತಿಯಾಗಲೀ ಖಂಡಿತಾ ಇಲ್ಲ. ಬಹುಮತವಿರುವ ಭೂರಹಿತರಿಗೆ ಭೂಮಿಯ ಆಶೆ ತೋರಿಸಿ ಓಟುಗಳಿಸುವ ಕೆಲಸವೊಂದು ಇದರಿಂದ ಆಗಬಹುದಲ್ಲದೆ ಬೇರಿಲ್ಲ.

ಭೂವ್ಯವಸಾಯ ಎಲ್ಲರಿಗೆ ಉದ್ಯೋಗ ಒದಗಿಸಲಾರದು. ಬೇರೆ ದೇಶಗಳಲ್ಲಿ ಸೈನ್ಯಗಳು ಬಹು ಜನರಿಗೆ ಉದ್ಯೋಗ ಒದಗಿಸುತ್ತವೆ. ಪಂಚಶೀಲ ಭಾರತದಲ್ಲಿ ಸೈನ್ಯ ಶಕ್ತಿಯೂ ಬೆಳೆಯುವಂತಿಲ್ಲ. ಹಾಗಿರುವಾಗ ಬಹು ಸಂಖ್ಯೆಯಲ್ಲಿ ಬೆಳೆಯುತ್ತಿರುವ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಕೈಗಾರಿಕಾ ಮತ್ತಿತರ ಕಾರ್ಯಕ್ರಮಗಳನ್ನು ಹೆಚ್ಚಿಸದೆ ಭಾರತದ ನಿರುದ್ಯೋಗಿಗಳ ಸಮಸ್ಯೆ ಪರಿಹಾರವಾಗುವಂತಿಲ್ಲ. ಮಾಡಬೇಕಾದುದನ್ನು ಬಿಟ್ಟು ಬರೇ ಭೂಮಿಯ ಹಂಚುವಿಕೆಯಿಂದ ಸರ್ವ ದುಃಖ ಪರಿಹರಿಸುವೆನ್ನುವ ಜನರು ಕನಸಿನ ರಾಜ್ಯದಲ್ಲಿ ಜೀವಿಸುತ್ತಿರುವರೆನ್ನಬೇಕಾಗಿದೆ.

—“ಗುಪ್ತ”, ಮಡಿಕೇರಿ.

(ಕೊಡಗು ಪತ್ರಿಕೆಯ ಸೌಜನ್ಯದಿಂದ)

ನೋವುಗಳ ಅತ್ಯುತ್ತಮ ಸಂಹಾರಿಣಿ.
ಅಮೃತಾಂಜನ

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ; ಉಡುಪಿ (ದ. ಭಾರತ)

Quality Air Cushion
Rubber Stamps
Crown
RUBBER STAMP CO.
PHONE 205
EST.
BALMATTA ROAD, MANGALORE.

ದೇಶ ಪರಿಚಯ

ಐವತ್ತು ನಾಗರಿಕರ ದೇಶ-ಲುಂಡೀ

ಪ್ರಪಂಚದ ಅತಿ ಎಳೆಯ ಆದರೂ ಅತಿ ವಿಚಿತ್ರವಾದ ದೇಶವಿದು.

ಬ್ರಿಟನ ಮುಖ್ಯ ದ್ವೀಪಗಳಿಗೆ ೧೨ ಮೈಲುಗಳ ದೂರದಲ್ಲಿ ಅತ್ಲಾಂತಿಕ ಮಹಾಸಾಗರದ ತೆರೆಗಳು ಬಂದಪ್ಪಳಿಸುವ ಬ್ರಿಸ್ಟಲ್ ಕಾಲುವೆಯ ಬಳಿಯಲ್ಲಿ ಲುಂಡೀ ದ್ವೀಪವೆಂಬ ಸ್ವತಂತ್ರ ರಾಜ್ಯವಿದೆ. ಪ್ರಪಂಚದ ಬಹಳ ಎಳೆಯ ರಾಜ್ಯವೆಂದರೆ ಇದೇ ಈ ಸಾಮ್ರಾಜ್ಯದ ಮಹಾದ್ವೀಪವು ಮೂರು ಮೈಲು ಉದ್ದ, ಒಂದು ಮೈಲು ಅಗಲವಿದೆ. ಇಲ್ಲಿಯ ಜನಸಂಖ್ಯೆ ಅರ್ಧನೂರು. ದ್ವೀಪದ ಬಹಳಾಂಶ ಕೃಷಿಯೋಗ್ಯವಾಗಿದೆ.

ದ್ವೀಪದ ನಾಲೆಡೆಗಳಲ್ಲಿಯೂ ಗ್ರೆನಾಯಿಟ್ ಬಂಡೆಕಲ್ಲುಗಳು ಆವರಿಸಿವೆ. ಸಾಮಾನ್ಯ ನಾಲ್ಕುನೂರೈವತ್ತು ಅಡಿಗಳಷ್ಟು ಇವು ಎತ್ತರವಿವೆ. ಈ ಬಂಡೆಗಳಿಂದಲೇ ದ್ವೀಪದ ಸೌಂದರ್ಯವೂ ಇಮ್ಮಡಿಯಾಗಿವೆ. ನದಿಗೆ ಅಣೆಕಟ್ಟು ಹಾಕುವುದೇ ಮೊದಲಾದ ಕಾರ್ಯಗಳಲ್ಲಿ ಈ ಗ್ರೆನಾಯಿಟ್ ಕಲ್ಲುಗಳು ಬಳಸಲ್ಪಡುವುದರಿಂದ, ಇಂಗ್ಲೆಂಡ್ ಮೊದಲಾದ ಕೆಲವು ದೇಶಗಳಿಗೆ ಈ ಕಲ್ಲನ್ನು ನಿರ್ಯಾತಮಾಡುತ್ತಾರೆ 'ರೆಡ್ ಐಲೆಂಡ್" ಎಂಬಲ್ಲಿ ಬಂಡೆಕಲ್ಲಿನ ನೆರಳಲ್ಲಿ ಒಂದು ಬಗೆಯ ಇಲಿಗಳು ಸಿಗುತ್ತವೆ. ಅದರ ಸಮೀಪದಲ್ಲಿಯೇ ನಾವೆಗಳಿಂದ ಇಳಿಯಲು ಏರಲು ಒಂದು ಸಣ್ಣ ಬಂದರವಿದೆ. ವಾರಕ್ಕೊಂದು ಬಾರಿ ಈ ಬಂದರವು ಕೆಲಸಮಾಡುತ್ತದೆ

ಗ್ರೆನಾಯಿಟ್ ಕಲ್ಲುಗಳಲ್ಲದೆ ಇಂಗ್ಲೆಂಡಿನೊಡನೆ ಲುಂಡಿಗೆ ಯಾವ ವ್ಯಾಪಾರ ಸಂಬಂಧವೂ ಇರುವುದಿಲ್ಲ ಬಾರ್ನ್‌ಸ್ಟೆಪಿಯೊಡನೆ ಟೆಲಿಫೋನ್ ಸಂಬಂಧವಿದೆ ಚಳಿಯ ದಿನಗಳಲ್ಲಿ ಸಮುದ್ರದಲ್ಲಿ ಬಿರುಗಾಳಿಗಳು ಕಾಣಿಸಿಕೊಳ್ಳುವುದರಿಂದ, ನಾವಾ ಚಲನೆಯೂ ಯಥಾರೀತಿಯಲ್ಲಿ ಸಾಗುವುದಿಲ್ಲ. ದ್ವಿತೀಯ ಮಹಾಯುದ್ಧಕ್ಕೆ ಪೂರ್ವದಲ್ಲಿ ಬ್ರಿಟನ್ನಿನ ಬಾರ್ನ್‌ಸ್ಟೆಪಿಯಿಂದ ಇಲ್ಲಿಗೆ ದಿನಂಪ್ರತಿ ನಾವೆ ಹೋಗಿಬರುತಿತ್ತು. ಆದರೆ, ಯುದ್ಧಾರಂಭವಾದ ಮೇಲೆ ಈ ವ್ಯವಸ್ಥೆಯು ನಿಂತು ಹೋಯಿತು. ಅಂದಿನಿಂದ ಇಂದಿನ ವರೆಗೂ ಈ ಏರ್ಪಾಡು ಪುನರಾರಂಭಗೊಳ್ಳಲಿಲ್ಲ.

ಮೀನು ಹಿಡಿಯುವುದು ಮತ್ತು ತೋಟಗಾರಿಕೆಯು ಇಲ್ಲಿನ ೫೦ ಜನರ ಪ್ರಧಾನ ವ್ಯವಸಾಯವಾಗಿದೆ ಇದಲ್ಲದೇ ಇವರು ಸುಮಾರು ಸಾವಿರದಷ್ಟು ಕುರಿ ಆಡುಗಳನ್ನೂ ಸಾಕುತ್ತಾರೆ ಪುಫಿಲ್ ಎಂಬ ಒಂದು ವಿಶೇಷ ಬಗೆಯ ಪಕ್ಷಿಗಳ ಗೂಡುಗಳು ಇಲ್ಲಿ ತುಂಬ ಇವೆ ಇದರಿಂದಲೇ ಲುಂಡಿಗೆ ಪುಫಿಲ್ ದ್ವೀಪವೆಂದೂ ಹೇಳುತ್ತಾರೆ.

ದ್ವೀಪದ ಪಕ್ಕಗಳಲ್ಲಿ ಎರಡು ದೀಪಸ್ತಂಭಗಳಿವೆ. ಲಂಡನ್ನಿನ ಟ್ರಿನಿಟಿ ಹೌಸಿನವರಿವನ್ನು ನಿರ್ಮಿಸಿದರು. ಇವುಗಳಿಗೆ ಬೇಕಾದ ಸ್ಥಳವನ್ನು ದ್ವೀಪದ ಒಡೆಯನಾದ ಹಾರ್ಮನ್ ದಾನವನ್ನಿತ್ತಿದ್ದನು. ಇವನನ್ನು ದ್ವೀಪದ ರಾಜನೆಂದು ಕರೆಯುತ್ತಾರೆ, "ರಾಜ"ನೆಂದೇ ಇವನು ಸುಪ್ರಸಿದ್ಧನಾಗಿದ್ದಾನೆ. ಸರಕಾರದಿಂದ ಇಲ್ಲಿ ಏನೊಂದು ತೆರಲ್ಪಡುವುದೂ ಇಲ್ಲ, ಕೊಡಲ್ಪಡುವುದೂ ಇಲ್ಲ. ಲುಂಡೀ ಮಹಾರಾಜನ ಅನುಮತಿಯಿಲ್ಲದೆ ಇಲ್ಲಿ ಯಾರಾದರೂ ಬಂದಿಳಿಯುವುದು ಸಾಧ್ಯವಿಲ್ಲ ಒರ್ವ ಹಿಂದಿನ ರಾಜನು ಈ ನಿಯಮವನ್ನು ಸ್ವಲ್ಪ ಸಡಿಲುಗೊಳಿಸಿದರೂ ಜನರಿಗದು ಅಪ್ರಿಯವಾಗಲು ಪುನಃ ಆದೇಶವು ಯಥಾರೀತಿಯಾಗಿರಿಸಲಾಯಿತು ಎಂದು ಹೇಳುತ್ತಾರೆ.

ಬೇಸಗೆಯ ದಿನಗಳಲ್ಲಿ ಬ್ರಿಸ್ಟಲ್ ಕಾಲುವೆಯ ನಾಲ್ಕೂ ಮೂಲೆಗಳಲ್ಲಿ ವಿನೋದವಾಡಲು ಬೇರೆ ಬೇರೆ ಕಡೆಗಳಿಂದ ಯಾತ್ರಿಕರು ಬರುತ್ತಾರೆ ಅವರು ಲುಂಡಿಯಲ್ಲೂ ಇಳಿಯುತ್ತಿದ್ದರು ಈ ಯಾತ್ರಿಕರನ್ನು ಸಾಗಿಸುವ ಕೆಲಸವನ್ನು ಎರಡು ಕಂಪೆನಿಗಳು ಮಾಡುತಿದ್ದವು. ಆದರೆ, ಇವುಗಳಿಂದ ತಮ್ಮ ಶಾಂತಿಗೆ ಭಂಗವುಂಟಾಗುವುದೆಂಬ ಭಯವು ದ್ವೀಪವಾಸಿಗಳಿಗೆ ಮೂಡಲು ಕಂಪೆನಿಯವರನ್ನೂ ದ್ವೀಪಕ್ಕೆ ಇಳಿಯಲು ಬಿಡಬಾರದೆಂಬ ಆಜ್ಞೆಯು ಈಗ ಜ್ಯಾರಿಯಲ್ಲಿದೆ.

ಲುಂಡಿನ ಹಿಂದಿನ (ಕಳೆದ) ರಾಜನು ಮೊತ್ತಮೊದಲಿನ ಅಂಚೆಕಛೇರಿಯನ್ನು ಸ್ಥಾಪಿಸಿದನು. ಅವನು ಮುದ್ರಿಸಿದ್ದ ಅಂಚೆ ಚೀಟಿಯಲ್ಲಿ ಇಲ್ಲಿನ ರಾಷ್ಟ್ರೀಯ ಪಕ್ಷಿ ಪಫಿಲ್ ದ ಚಿತ್ರವಿತ್ತು. ಈ ಚೀಟಿಗಳು ದ್ವೀಪ ಮತ್ತು ಮುಖ್ಯ ಭೂಮಿಗಳ ನಡುವೆ ಹೋಗುವ ಪತ್ರಗಳಿಗೆ ಅಂಟಿಸಲ್ಪಡುತಿತ್ತೇ ಹೊರತು, ವಿಶ್ವದ ಇತರ ಭಾಗಗಳೊಡನೆ ಈ ದ್ವೀಪದ ಸಂಬಂಧವಿರಲಿಲ್ಲ.

ಇಲ್ಲಿನ ರಾಜಭವನವು ವಿಸ್ತೃತ ಮೈದಾನವೊಂದರಲ್ಲಿದೆ. ಇಲ್ಲಿಯೇ ಗ್ರೆನಾಯಿಟ್ ಕಲ್ಲುಗಳಿಂದ ಕಟ್ಟಿಸಿದ ಸೆಂಟ್ ಹೆಲೆನ್ ಚರ್ಚ್ ಕೂಡ ಇದೆ

ಹದಿನೇಳನೆಯ ಶತಮಾನದಲ್ಲಿ ಈ ದ್ವೀಪವು ಫ್ರೆಂಚರು ಕೊಳ್ಳೆ ಹೊಡೆಯುವ ಪ್ರದೇಶವಾಗಿತ್ತು. ಬ್ರಿಸ್ಟಲ್ ಕಾಲುವೆಯನ್ನು ಹಾದು ಹೋಗುವ ಹಡಗುಗಳನ್ನು ಇವರು ಲೂಟಿ ಮಾಡುತಿದ್ದರು.

ಇಂಗ್ಲೆಂಡಿನ ಪುನರುಜ್ಜೀವನ ಮತ್ತು ಸುಧಾರಣೆಯ ಯುಗವು ಕಾಣಿಸಿಕೊಂಡಾಗ ಮೊದಲು ಲುಂಡಿಯು ಸಮರ್‌ಸೆಟ್‌ನ ಎಬ್ಬೀ ಆಫ್ ಕ್ಲೀವ್‌ನ ಕೈಕೆಳಗೆ ಬಂತು. ಆದರೆ, ಮಣೆಯ ಅಂತ್ಯವಾದಾಗ, ಈ ಸಂಬಂಧವೂ ಕೊನೆಗೊಂಡಿತು. ಮುನ್ನೂರು ವರ್ಷ ನಂತರ, ೧೯೩೨ರಲ್ಲಿ ರೆಕ್ಟರ್‌ಶಿಪ್ಪು ಪುನಃ ಪ್ರಾರಂಭಿಸಲ್ಪಟ್ಟು, ಡೋವನ್ ಶಯರಿನೊಡನೆ ಸಂಬಂಧಿಸಲ್ಪಟ್ಟಿತು ಇದರ ಬಿಷಪನು ಆಗಾಗ ಲುಂಡಿಗೆ ಸಂದರ್ಶನವೀಯುತ್ತಿದ್ದಾನೆ. ಅಲ್ಲಿನ ನಿವಾಸಿಗಳ ನಾಮಕರಣ, ವಿವಾಹ ಮತ್ತು ಮರಣೋತ್ತರ ಸಂಸ್ಕಾರಾದಿಗಳನ್ನು ನಡೆಸುತ್ತಾನೆ.

ಲುಂಡಿಯ ಜನರು ಶಾಂತಚಿತ್ತರಾಗಿ ಜಗಳಗಳಿಂದ ದೂರವಿದ್ದರೂ ಯುದ್ಧಕಾಲದಲ್ಲಿ ತಮ್ಮ ಸೇವೆ ಸಲ್ಲಿಸಲು ಹಿಂಜರಿಯಲಿಲ್ಲ. ಯುದ್ಧಾನಂತರ ಅವರು ಅಹಂಭಾವದಿಂದಲೇ ತಮ್ಮ ಮನೆಗಳಿಗೆ ತೆರಳಿ ಯಥಾಪ್ರಕಾರ ಮೀನು ಹಿಡಿಯುವುದಕ್ಕೂ ತೋಟ ಪಾಲಿಸುವುದಕ್ಕೂ ತೆರಳಿದರು.

ಲುಂಡಿಯ ಅಕ್ಕಪಕ್ಕಗಳಲ್ಲಿನ ದೀಪಸ್ತಂಭಗಳು ದೂರದಲ್ಲಿ ಸಂಚರಿಸುವ ಹಡಗುಗಳಿಗೆ ದ್ವೀಪವನ್ನು ಆವರಿಸಿದ ಮೋಸಗಾರ ಬಂಡೆಗಲ್ಲುಗಳಿಂದ ದೂರವಿರಿ ಎಂದು ಎಚ್ಚರವೀಯುತ್ತಿವೆ. ಹಿಮದ ಕಾಲದಲ್ಲಿಯೂ ವಿಚಿತ್ರ ಸೀಟಿಯೂ ಗುಂಡುಗಳೂ ಈ ಬಗೆಯ ಎಚ್ಚರಿಕೆ ಕೊಡುತ್ತವೆ ಬ್ರಿಟನ್ನಿನ ಜಲಸೇನೆಯು ಮಾತ್ರ ಈ ಲುಂಡಿಯ ಭೂಮಿಯನ್ನು ಉಪಯೋಗಿಸಬಹುದೆಂದು ಒಂದು ಒಪ್ಪಂದವಾಗಿದೆ. ಉಳಿದವರಿಗೆ ಯಾರಿಗೂ ಇಲ್ಲಿ ತಳವೂರುವ, ಏಕೆ ಕಾಲಿಡುವ ಅಧಿಕಾರವೂ ಇಲ್ಲ.

ನಿಜವಾಗಿಯೂ ವಿಶ್ವದ ಅತಿ ಎಳೆಯ ಈ ಲುಂಡಿ ದ್ವೀಪ ವಿಚಿತ್ರ ರೂಪದಲ್ಲಿಯೇ ಇದೆ.

ನಮ್ಮ ಭಾರತ

ಪುರುಷನ ಪ್ರತಿಸ್ಪರ್ಧಿ ಉದ್ಯೋಗವರಸುವ ಮಹಿಳೆ

ಎಲ್ಲ ಮಹಿಳೆಯರೂ ತಮ್ಮ ಸಹೋದ್ಯೋಗಿ ಪುರುಷರ ವಕ್ರದೃಷ್ಟಿಗೆ ಪಕ್ಕಾಗುವರೆ?

ಕೆಲವು ದಿನಗಳ ಹಿಂದೆ ನನ್ನ ಸ್ನೇಹಿತೆಯೊಬ್ಬಳು ಗುಮಾಸ್ತೆಯ ಕೆಲಸಕ್ಕೆ ರಾಜಿನಾಮೆಯಿತ್ತಳು. ಆಕೆ, ತಾನು ಇನ್ನು ಮೇಲೆ ಪುರುಷ ಕಾರಖೂನರ ಕ್ರೂರ ದೃಷ್ಟಿಯೆದುರು ನಿಲ್ಲಲಾರೆ ಎಂದು ಉದ್ಗರಿಸಿದಳು.

ಉದ್ಯೋಗಾವಲಂಬಿಗಳಾದ ಎಲ್ಲ ಹುಡುಗಿಯರೂ ಇಂತಹ ಕ್ರೂರಾನುಭವಗಳನ್ನು ಮಾಡಿಕೊಳ್ಳುವುದಿಲ್ಲ; ಕರುಣಾಮಯರೂ ಸತ್ಪುರುಷರೂ ಆದ ಎಷ್ಟೋ ಗಂಡು ಸಹೋದ್ಯೋಗಿಗಳಿದ್ದಾರೆ. ಆದರೂ ವಕ್ರ ಪುರುಷ ಕರ್ಮಚಾರಿಗಳ ಸಂಖ್ಯೆಯೇ ಹೆಚ್ಚೆಂಬುದು ಸತ್ಯವಾಗಿಯೇ ಉಳಿದಿದೆ ತಾವು ಕೆಲಸ ಮಾಡುವುದಕ್ಕಿಂತ ಉತ್ತಮವಾಗಿಯೋ ಅಥವಾ ತಮಗೆ ಸರಿಸಮವಾಗಿಯೋ ಸ್ತ್ರೀಯು ಕಾರ್ಯವೆಸಗುವುದನ್ನು ಕಂಡೇ ಹೆಚ್ಚಿನ ಪುರುಷರು ಅದು ತಮಗೆ ಅಪಮಾನಕಾರಕವೆಂದು ಬಗೆಯುತ್ತಾರೆ. ಅಲ್ಲದೇ ಎಲ್ಲಾ ಉದ್ಯೋಗಿ ಸ್ತ್ರೀಯರ (ಮುಖ್ಯವಾಗಿ ಬರವಣಿಗೆಯ ವಿಭಾಗದಲ್ಲಿ) ನೀತಿ ಬಾಹಿರರು ಎಂಬ ಕುರುಡು ನಂಬುಗೆಯೂ ದುಡಿಯದಸ್ತ್ರೀಗೆ ಸಲ್ಲಬಹುದಾದ ಕೃತಜ್ಞತಾ ಮನೋಭಾವನೆಯು ದುಡಿಯುವಾಕೆಗೆ ದೊರೆಯದಂತೆ ತಡೆಯುತ್ತದೆ. ಒಂದು ದಿನ ದುಡಿಯುವ ಸ್ತ್ರೀಯರಾದ ನಾವು ಅನುಭವಗಳನ್ನು ಕಥಿಸಿಕೊಂಡೆವು. ನಾವು ಎಲ್ಲರೂ ಒಂದಲ್ಲ ಒಂದು ಕಾರಣದಿಂದ ನೊಂದಿರುವುದು ಬೆಳಕಿಗೆ ಬಂತು.

ಒಬ್ಬಾಕೆ ಇಪ್ಪತ್ತು ಪುರುಷ ಅಭ್ಯರ್ಥಿಗಳೆದುರಾಗಿ ಒಂದು ಉದ್ಯೋಗಾವಕಾಶಕ್ಕೆ ಸ್ಪರ್ಧಿಸಿದ್ದಳು ಆಕೆಯು ಆರಿಸಲ್ಪಟ್ಟಳು. ಜಯಶೀಲನಾಗದವರಲ್ಲಿ ಅದೇ ವಿಭಾಗದ ಅ ಎಂಬವನೂ ಒಬ್ಬನಿದ್ದನು ಈಕೆ ಕೆಲಸಕ್ಕೆ ಹಾಜರಾದ ದಿನದಿಂದಲೇ ಅನು ದೀರ್ಘಕಾಲೀನ ರಜೆಗೆ ಅರ್ಜಿಸಲ್ಲಿಸಿದನು ಪ್ರಾರಂಭದ ದಿನಗಳಲ್ಲಿ ಆಕೆಗೆ ಅವನ ಸಹಾಯ ಹಾಗೂ ನೆರವು ಬೇಕಾದೀತೆಂಬ ವಿಜ್ಞಾಪನೆಯನ್ನೂ ಆತ ಗಮನಿಸಲಿಲ್ಲ. ಆದರೂ ಅವನ ಈ ಉದ್ದದ ರಜಾದಿನಗಳಲ್ಲಿ ಅವನು ಕಾರ್ಯಾಲಕ್ಕೆ ಬಂದು ಆಕೆಯ ಆಶಂಕೆಗಳನ್ನು ದೂರಮಾಡುವುದು ಮಾತ್ರ ತಪ್ಪಲಿಲ್ಲ ಅವನು "ಇಲ್ಲ" ಎಂದಾಕೆಗೆ ಪ್ರತ್ಯಕ್ಷವಾಗಿ ಆಡಲಿಲ್ಲ ಗೋಡೆಗೆದುರಾಗಿ ಉಳಿದವರೆಲ್ಲರೂ ಕೇಳುವಂತೆಯೇ ಆಡುತಿದ್ದನು. ದೇಶದಲ್ಲಿ ಪ್ರತಿಭೆಯನ್ನು ಗಮನಿಸುವವರೇ ಇಲ್ಲದಿರುವುದು ದುಃಖದಾಯಕ ಸಂಗತಿಯೆನ್ನುತಿದ್ದನವನು ಅಂಡರ್ ಸೆಕ್ರಿಟರಿ ಮತ್ತು ಮಂತ್ರಿಗಳು ಪ್ರತಿ ಹುದ್ದೆಗೂ ತಮ್ಮ ಅಭ್ಯರ್ಥಿಗಳನ್ನೇ ಹೇಗೆ ತರುತ್ತಾರೆಂಬುದಕ್ಕೆ ದೃಷ್ಟಾಂತಗಳನ್ನೀಯುತಿದ್ದನು. ಬಿಡುಗಾಲದ ಸಾಕ್ರಟೀಸನಂತೆ ಆತ ತಾನು ಸ್ತ್ರೀಯಾಗಿ ಉದ್ಯೋಗವರಸುವವಳಾದರೆ ಪರಿಸ್ಥಿತಿ ಸುಲಭವಾಗುತಿತ್ತು ಎನ್ನುತಿದ್ದನು. ಈ ಸಾಮಾನ್ಯ ಟೀಕೆಗಳನ್ನು ಆ ಹುಡುಗಿ ವಿರೋಧಿಸುವಂತಿರಲಿಲ್ಲ ಎಂತಲೇ ಶ್ರೀ ಅ ಮುಂದುವರಿಸುತಿದ್ದನು. ಕೆಲಸ ನೀಡುವವರ ಮೇಲೆ ಒಬ್ಬ ಸ್ತ್ರೀಯು ಯಾವ ರೀತಿ ತನ್ನ ಆಕರ್ಷಣೆಯನ್ನು ಬೀರುತ್ತಾಳೆಂದು ಆತ ವಿವರವನ್ನೀಯತೊಡಗಿದನು. ಅಷ್ಟರಲ್ಲಿ ನನ್ನ ಗೆಳತಿ ಆ ಕೋಣೆಯಿಂದ ಹೊರಬಿದ್ದಳು ಆದರೆ, ಕೋಣೆಯೊಳಗಿಂದ ಹೊರಬಂದ ನಗೆಯಾಟದ ಅಲೆಗಳೇ ಅವನ ಮಾತಿಗೆ ತಕ್ಕ ಪ್ರತಿಕ್ರಿಯೆಯಿತ್ತಿತು.

ಆಕೆ ಹಠ ಹಿಡಿದು, ಆ ಕೆಲಸವನ್ನೇ ಅಂಟಿ ಕುಳಿತಳು. ತನಗೇನೂ ಆಗಲಿಲ್ಲವೆಂಬಂತವಳು ವರ್ತಿಸುತಿದ್ದಳು ಆದರೆ ಶ್ರೀಮಾನ್ ಅರವರ ನಗು ಮಾತ್ರ ತಡೆಯಲಿಲ್ಲ. ಒಂದು ದಿನ ಅವನು ಎಲ್ಲರೊಡನೆಯೂ ತನ್ನ ಪ್ರಾಯವನ್ನು ಕೇಳಿದನು. ಆಕೆಯ ಸರದಿ ಬಂದಾಗ, ಅವನು ತನ್ನ ತೊಡೆಯನ್ನು ತಿಕ್ಕುತ್ತ, ಆಕೆಯದಕ್ಕೆ ಐದು ಸೇರಿಸಿರಿ, ಆಕೆ ಹೆಂಗಸು ಎಂದು ಬಿಟ್ಟ. ಈ ವಿನೋದವು ಸಾಕಷ್ಟು ಪ್ರಶಂಸೆಯನ್ನು ಪಡೆಯಿತು.

ಇನ್ನೊಬ್ಬಾಕೆ ತನ್ನ ಆಫೀಸಿನ ಶ್ರೀಮಾನ್ ಬರವರ ಕುರಿತಾಗಿ ಹೇಳಿದಳು ಆಕೆಯೂ ಪತಿಯೂ ದುಡಿಯುತಿದ್ದರೆ ಒಂದೇ ಮಗುವಿರುವುದು. ಆದುದರಿಂದ, ಇವರು ಸಾಮಾನ್ಯ ಸ್ಥಿತಿವಂ

(೯ನೇ ಪುಟ ನೋಡಿರಿ)

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಓದುವುದಕ್ಕಿಂತ ಹೆಚ್ಚು ಯೋಚಿಸುವುದು ಮತ್ತು ಆಡುವುದಕ್ಕಿಂತ ಹೆಚ್ಚು ಆಲಿಸುವುದು ಬುದ್ಧಿವಂತನೆನಿಸುವವನ ಹುಟ್ಟುಗುಣ. ಇಂತಹ ಬುದ್ಧಿವಂತನಿಂದಲೇ ಸಮಾಜಕ್ಕೆ ಅಪಾರ ಸೇವೆ ಸಲ್ಲುತ್ತದೆ.

NAVAYUGA
Founder:—
A. B. SHETTY,
Former Minister for Public Health
Govt. of Madras & Govt. of Mysore
ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೯–೩–'೫೯	೨೭

ಕರ್ತವ್ಯದಕ್ಷತಾಲೋಪ

ಪೋಲೀಸ ಶಾಖೆಯ ಬೇಡಿಕೆಯ ಬಗ್ಗೆ ವಿಧಾನ ಸಭೆಯಲ್ಲಿ, ಮೈಸೂರ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು, ನಡೆದ ಚರ್ಚೆಗೆ ಉತ್ತರವೀಯುತ್ತ ಪೋಲೀಸ ಶಾಖೆಯು ತೃಪ್ತಿಕರವಾಗಿ ತನ್ನ ಕೆಲಸ ಸಾಗಿಸುತ್ತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ಖಚಿತಾಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು ಅವರು ಅಂಕೆ ಸಂಖ್ಯೆಗಳನ್ನೂ ಮುಂದಿಟ್ಟು, ರಾಜ್ಯದಲ್ಲಿ ಅಪರಾಧಗಳ ಸಂಖ್ಯೆಯು ತಗ್ಗಿದೆಯೆಂದೂ ಉಳಿದ ರಾಜ್ಯಗಳಿಗಿಂತ ಮೈಸೂರಿನ ಪರಿಸ್ಥಿತಿಯು ತೃಪ್ತಿಕರವಿದೆಯೆಂದೂ ತಮ್ಮ ಸಂತೃಪ್ತಿಯನ್ನೂ ಸಮಾಧಾನವನ್ನೂ ತೋರಿಸಿಕೊಂಡರು.

ಮಾನ್ಯ ಮಂತ್ರಿಯವರು ಮೈಸೂರಲ್ಲಿ ಅಪರಾಧಗಳು ಹಿಂದಿನ ದಿನಗಳಿಗಿಂತ ಈಗ ಕಡಿಮೆಯಾಗಿ ನಡೆದಿವೆಯೆಂದು ಶಾಖೆಯ ಲೆಕ್ಕಪತ್ರಗಳಿಂದ ತೋರಿಸಿಕೊಡಬಹುದು. ಆದರೆ, ಈ ಲೆಕ್ಕಪತ್ರಗಳನ್ನು ಎಷ್ಟುಮಟ್ಟಿಗೆ ನಂಬಬಹುದೋ ತಿಳಿಯುವಂತಿಲ್ಲ. 'ರಕ್ಷಣಾ ದಳ'ವಾದ ಈ ಪೋಲೀಸ್ ಶಾಖೆಯ ಸ್ಥಿತಿಯು ನಿಜವಾಗಿಯೂ ಸಮಾಧಾನವನ್ನು ಸೂಚಿಸುವಂತೆ ಮುಂದುವರಿಯುತ್ತಿದೆಯೆ? ಜನತೆಯ ಹಕ್ಕುಗಳನ್ನು ಕ್ರಮವತ್ತಾಗಿ ಪಾಲಿಸಲು ಸಹಾಯಕವಾಗುತ್ತಿದೆಯೆ? ನಿರ್ವಂಚನೆಯಿಂದ ಈ ಶಾಖೆಯು ಕಾರ್ಯಮಗ್ನವಾಗಿದೆಯೆ? ಅಥವಾ ಶಾಖೆಯಲ್ಲಿ ಕಾರ್ಯದಕ್ಷತೆ ತೋರಿ ಬರುತ್ತಿದೆಯೆ? ಎಂಬಿವೇ ಮೊದಲಾದ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆಯಲ್ಲದೆ, ಇವಕ್ಕೆ ಉತ್ತರವೆಂಬುದು ಇದುವರೆಗೆ ಸಮಾಧಾನಕರವಾಗಿ ದೊರೆತಿಲ್ಲ. ಅಪರಾಧಗಳು ನಡೆಯುತಿದ್ದರೂ ಲೆಕ್ಕಕ್ಕೆ ಸಿಗುವವುಗಳೆಷ್ಟು? ಅಥವಾ ನಡೆಯಿತೆಂದು ಹೇಳಲಾದ ಅಪರಾಧಗಳೆಲ್ಲವೂ ಗಣನೆಗೆ ದೊರೆತಿದೆಯೆ? ಪುಸ್ತಕಗಳಲ್ಲಿ ದಾಖಲಾದ ದೂರುಗಳಲ್ಲಿ ಎಲ್ಲವನ್ನೂ ಪೋಲೀಸು ಶಾಖೆ ಪರಿಶೀಲಿಸಿ ಅಪರಾಧಿಗಳನ್ನು ಕಂಡುಹಿಡಿದಿದೆಯೆ? ಎಂಬುದಕ್ಕೆ ಉತ್ತರ ಹೇಳುವುದು ತುಸು ಪ್ರಯಾಸ. ಲಂಚ ಕೊಡುವುದೂ ಅಪರಾಧ; ಕೊಳ್ಳುವುದೂ ಅಪರಾಧವೆಂಬುದು ನಿಜ. ಆದರೆ, ಇಂದು ಈ ಶಾಖೆಯು ಲಂಚ ಕೊಡದೆ ಇದ್ದವರ ದೂರುಗಳನ್ನು ಗಮನಿಸುವ ಸಂದರ್ಭಗಳು ಅಪರೂಪ. ಎಲ್ಲಿಯಾದರೂ ಕೆಲವೊಂದು ಅಧಿಕಾರಿಗಳು ಸಂಭಾವಿತರಿರಬಹುದು. ಆದರೆ ಒಟ್ಟಿನಲ್ಲಿ ಪೋಲೀಸು ಶಾಖೆಯಲ್ಲಿ ದಕ್ಷತೆ ಕಡಿಮೆಯಾಗಿದೆ; ವಂಚಕ ಮನೋವೃತ್ತಿಯೇ ಹೆಚ್ಚಾಗಿದೆ ಎನ್ನಬಹುದು. ಚರ್ಚೆಯ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯ ಶ್ರೀ ಕರಿಯಪ್ಪನವರೇ ದಕ್ಷತೆಯ ಕೊರತೆಯನ್ನು ತೋರಿಸಿ, ದಕ್ಷತೆ ಹೆಚ್ಚುವ ಬಗ್ಗೆ ಯೋಗ್ಯ ಜನರನ್ನೇ ಈ ಶಾಖೆಗೆ ಭರತಿ ಮಾಡಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಇವರಂತೆಯೇ, ಜನತೆಯ ದೃಷ್ಟಿಯಿಂದಲೂ ಪೋಲೀಸು ಶಾಖೆ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂಬುದಕ್ಕೆ ನಮ್ಮ ಜಿಲ್ಲೆಯಲ್ಲಿ ವಿಟ್ಲ ಸಮೀಪದ ಚಿಪ್ಲುಕೋಟೆಯ ಈಶ್ವರ ನಾಯ್ಕ ಮತ್ತವರ ತಾಯಿಯವರ ಹೃದಯ ವಿದ್ರಾವಕ ದುರವಸ್ಥೆಯೊಂದೇ ಉದಾಹರಣೆ ಸಾಕು. ರಕ್ಷಣೆಯನ್ನೀಯಬೇಕಾದ ಈ ಶಾಖೆಯು ತನ್ನ ಕರ್ತವ್ಯವನ್ನು ಮರೆತು ಲಂಚ ಹಾಗೂ ವೈಯಕ್ತಿಕ ಪ್ರಭಾವಗಳಿಗೆ ಮನಸೋತು ವಾಮ ಮಾರ್ಗದಲ್ಲಿಯೇ ನಡೆಯುವುದಾದರೆ, ಇದನ್ನು ಕಾರ್ಯದಕ್ಷತೆಯೆನ್ನಬಹುದೆ? ಬೇಲಿಯೇ ಹೊಲವನ್ನು ಮೇದಂತಾದರೆ, ಜನತೆ ನಿರ್ಭಯದಿಂದ ಇರುವುದಾದರೂ ಹೇಗೆ? ರಾಜ್ಯದಲ್ಲಿ ಶಾಂತಿ ನೆಲಸುವುದಾದರೂ ಎಂತು?

ಪೋಲೀಸು ಶಾಖೆಯಲ್ಲೂ ಕೆಲವರು ಉತ್ತಮ ಕರ್ತವ್ಯದಕ್ಷರಿದ್ದಾರೆ. ಉಳಿದವರ ಕರ್ತವ್ಯ ಲೋಪಕ್ಕೂ ಹಲವಾರು ಕಾರಣಗಳಿವೆ ಎಂಬುದನ್ನು ಒಪ್ಪಬೇಕು. ಈ ಶಾಖೆಯ ನಿಮ್ನ ವರ್ಗದ ವೇತನವು ಸುಧಾರಿಸಿದರೆ, ಅವರ ಜೀವನವೂ ಸುಗಮವಾಗಬಲ್ಲುದು. ಆಗ ಅವರಿಗೂ ತಮ್ಮ ಕರ್ತವ್ಯದ ಕಡೆಗೆ ಗಮನಹರಿಸಲು ಮನಶ್ಶಾಂತಿ ಲಭಿಸಬಲ್ಲುದು. ಮನ ಮನೆಗೆಟ್ಟವನಿಂದ ಯಾವ ಕೆಲಸವೂ ಆಗದು. ದಿನೇ ದಿನೇ ಜೀವನ ವೆಚ್ಚವು ಏರುತ್ತ ಹೋಗುವಾಗ, ಅಲ್ಪ ವೇತನಪಡೆಯುವವರು ವಾಮ ಮಾರ್ಗಕ್ಕಿಳಿಯುವುದಾದರೂ ಸ್ವಾಭಾವಿಕವೇ. ಆದುದರಿಂದ, ಸರಕಾರ ಪೋಲೀಸು ಶಾಖೆಯು ಉತ್ತಮ ಕೆಲಸ ಮಾಡುತ್ತಿದೆ ಎಂದು ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಳ್ಳುವ ಹವ್ಯಾಸಕ್ಕೆ ಹೋಗದೆ, ಇತರ ರಾಜ್ಯಗಳಿಗಿಂತ ನಮ್ಮಲ್ಲಿ ಅಪರಾಧಗಳು ಕಡಿಮೆಯೆಂದು ಹೇಳಿಕೊಂಡು ಆದರಿಂದಲೇ ಸಮಾಧಾನ ಕಂಡುಕೊಳ್ಳದೆ, ಅಪರಾಧವೇ ನಡೆಯದಂತೆ ನೋಡಿಕೊಂಡು ಜನತೆಗೆ ಸಂಪೂರ್ಣ ರಕ್ಷಣೆಯನ್ನೂ ಭದ್ರತೆಯನ್ನೂ ಕೊಡಬೇಕು. ಇದಕ್ಕಾಗಿ ಪೋಲೀಸು ಶಾಖೆಯು ಕಾರ್ಯದಕ್ಷವಾಗುವಂತೆಯೂ ಕರ್ತವ್ಯಚ್ಯುತವಾಗದಂತೆಯೂ ಅಪರಿಮಿತ ಜಾಗ್ರತೆ ವಹಿಸುವುದು ಅವಶ್ಯವಾಗಿದೆ. ಅವಶ್ಯಕ ಸುಧಾರಣೆಯನ್ನು ಕೈಗೊಳ್ಳುವುದೂ ಅಗತ್ಯವೆನಿಸಿದೆ.

ನಿಗೂಢ ರಹಸ್ಯ.

ಗಾಂಧೀಜೀಯವರ ಬಗ್ಗೆ ರಶ್ಯವು ಸಂಪಾದಿಸಿ ಪ್ರಕಟಿಸಿದ ಅತಿ ದೊಡ್ಡ ವಿಶ್ವಕೋಶದ ೧೧ನೆಯ ಸಂಪುಟದಲ್ಲಿ ಕೆಲವೊಂದು ವಿಚಾರಗಳು ಪ್ರಕಟವಾಗಿವೆಯೆಂದೂ ಈ ವಿಚಾರಗಳಿಗೂ ಗಾಂಧೀಜೀಯವರ ಬಗ್ಗೆ ಭಾರತವು ಇಟ್ಟುಕೊಂಡಿರುವ ವಿಚಾರಗಳಿಗೂ ತಂತಿತಾಳ ಕೂಡಿ ಬರುವುದಿಲ್ಲವೆಂದೂ ಲೋಕ ಸಭೆಯ ಕಾರ್ಯಕಲಾಪಗಳಿಂದ ಪ್ರತಿಧ್ವನಿತವಾಗಿವೆ. ಶ್ರೀ ಶಿವನಂಜಪ್ಪನವರ ಮಾತಿನಲ್ಲಾಡುವುದಾದರೆ, ಈ ಸಂಪುಟವು ಮಹಾತ್ಮಾ ಗಾಂಧೀಜಿಯವರ ಬಗ್ಗೆ ನಿಂದಾತ್ಮಕ ಅಭಿಪ್ರಾಯಗಳಿಂದ ಕಡಕವಾಗಿದೆ. ಆದರೆ, ಈ ಸಂಪುಟವು ಪ್ರಕಟವಾಗಿದೆಯೇ ಇಲ್ಲವೇ ಎಂಬುದೂ ರಶ್ಯಾದಲ್ಲಿರುವ ಭಾರತೀಯ ರಾಯಭಾರಿಗೆ ತಿಳಿದಂತಿಲ್ಲ. ತನ್ನ ರಾಷ್ಟ್ರನಾಯಕ ಮಣಿಗಳೆನಿಸಿದವರ ಮೇಲೆಯೂ ಕ್ರೂರನಿಂದನೀಯ ಟೀಕೆಗಳನ್ನು ಮಾಡಿರುವ ಈ ಸೋವಿಯತ್ ರಶ್ಯವು ಭಾರತದ ರಾಷ್ಟ್ರಪಿತನನ್ನೂ ತಮ್ಮ ಟೀಕಾಸ್ತ್ರಕ್ಕೆ ಗುರಿಪಡಿಸುವುದು ವಿಶೇಷವಲ್ಲ. ಆದರೂ ಭಾರತೀಯರಿಗಾಗುವ ಅವಮಾನವನ್ನು ತಡೆಗಟ್ಟಲು ಅವಶ್ಯಕ ಸಾಧ್ಯವೆನಿಸಿದ ಕ್ರಮಗಳನ್ನು ಕೈಗೊಳ್ಳುವುದು ಸಮಂಜಸವೇ ಆಗಿದೆ. 'ಉಕ್ಕಿನ ಪರದೆ'ಯನ್ನು ಬಿಚ್ಚಿ ತನ್ನ ವಿಶಾಲ ಹೃದಯವನ್ನು ತೆರೆದು ತೋರಿಸಿದ ರಶ್ಯ ಈ ರೀತಿ ಈಗ ಏಕೆ ಮಾಡಿತೆಂಬುದು ನಿಗೂಢ ರಹಸ್ಯವಾಗಿಯೇ ಉಳಿದಿದೆ. ಅಥವಾ, ಬಿಚ್ಚಿದ ಉಕ್ಕಿನ ಪರದೆ ಪುನಃ ರಶ್ಯವನ್ನು ಮುಸುಕಿರಲೂ ಬಹುದು!

ಗ್ರಾಮ ಉದ್ಯೋಗಸ್ಥರ ವಿಶೇಷ ನಿರಖು ಪರೀಕ್ಷೆಯು ಇದೇ ಬರುವ ಏಪ್ರಿಲ್ 13 ಮತ್ತು 14ನೇ ತಾರೀಕುಗಳಲ್ಲಿ ಕುಂದಾಪುರ ಮತ್ತು ಪುತ್ತೂರು ಅಸಿಸ್ಟಾಂಟ್ ಕಮಿಶನರ ಆಫೀಸಿನಲ್ಲಿ ಜರಗಿಸಲ್ಪಡುವುದು. ಈ ಕುರಿತಾದ ವಿಶೇಷ ಮಾಹಿತಿಯನ್ನೂ ಅರ್ಜಿಯ ನಮೂನೆಯನ್ನೂ ದ. ಕ. ಜಿಲ್ಲಾ ಡಿಪ್ಯುಟಿ ಕಮಿಶನರ ಆಫೀಸಿನಿಂದ ಪಡೆಯಬಹುದು

ಶ್ರೀ ಬಿ. ಆರ್. ಕರ್ಕೇರರ ನಿಧನ- ಬಿಲ್ಲವ ಸಮಾಜದ ಮುಂದಾಳುಗಳಲ್ಲೊಬ್ಬರೂ, ಮೈಸೂರು ವಿಧಾನ ಸಭೆಯ ಮೆಂಬರರೂ ಆದ ಶ್ರೀ ಬಿ. ಆರ್. ಕರ್ಕೇರರು ಅಲ್ಪಕಾಲದ ಅಸ್ವಸ್ಥದಿಂದ ಇದೇ ತಾ. 14ನೇ ಸಾಯಂಕಾಲ ತನ್ನ 67ನೇ ವಯಸ್ಸಿನಲ್ಲಿ ನಿಧನಗೊಂಡರು. ದಿವಂಗತರು ಮಂಗಳೂರು ನಗರ ಸಭೆಯ ಸದಸ್ಯರಾಗಿಯೂ, ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿಯೂ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾಗಿಯೂ ಜನಸೇವೆ ಸಲ್ಲಿಸಿದವರು. ಇವರು ಮೈಸೂರು ವಿಧಾನ ಸಭೆಗೆ ಮೂಲ್ಕಿ ಮಾಳವಾರ ಕ್ಷೇತ್ರದಿಂದ 1957ರಲ್ಲಿ ಚುನಾಯಿಸಲ್ಪಟ್ಟಿದ್ದರು.

The Moolky Bank, Limited, Mulki.

DIRECTORS' **29TH** ANNUAL REPORT.

1. Your Directors have pleasure in presenting herewith the Audited Balance Sheet and the Profit & Loss Account for the year ended 31st December, 1958, of your Bank, together with their 29th Annual Report.

2. The result of the Bank's working for the period under review is a

Net Profit of:	Rs.	6,460 - 08
Add: Amount brought forward from last year	Rs.	272 - 96
Total Rs.		**6,733 - 04**

The following appropriations have been made or are recommended by your Directors:—

a) To Statutory Reserve Fund	Rs.	2,700 - 00	
b) To Provision for Income Tax	Rs	2,000 - 00	
c) To Dividend (4%)	Rs	1,916 - 40	6,616 - 40
Leaving a balance to be carried forward			**116 - 64**

3. During the year under Report the Reserve Bank of India, has held an Inspection of your Bank under Section 35 of the Banking Companies Act, 1949.

4. We take this opportunity to thank you and the various constituents of the Bank for their increased confidence and patronage. We desire to place on record the appreciation of the work of the Manager and the Members of the Staff.

(By order of the Board)

Office of the Bank,
Mulki,
Date: 26-1-1959.

(Sd.) **N. M. Adyanthaya,**
President.

THE MOOLKY BAN

(INCORPORATED IN INDI

BALANCE SHEET AS AT

r the year 1957 Rs. nP.	CAPITAL & LIABILITIES		Rs. nP.	Rs. nP.
	1. Capital:			
,00,000 - 00	AUTHORISED CAPITAL: 8,000 Shares of Rs. 25/- each			2,00,000 - 00
,00,000 - 00	ISSUED CAPITAL: 4,000 Shares of Rs. 25/- each			1,00,000 - 00
79,850 - 00	SUBSCRIBED CAPITAL: 3,194 Shares of Rs, 25/- each			79,850 - 00
	CALLED-UP AND PAID-UP CAPITAL: 3194 Shares of Rs. 25/- each at Rs. 15/- per Share ...		47,910 - 00	
49,110 - 00	*Add:* Calls in Advance		1,200 - 00	49,110 - 00
	2. Reserve Fund and other Reserves:			
	Statutory Reserve (Under Section 17)		15,000 - 00	
17,013 - 37	Other Reserves		1,600 - 00	16,600 - 00
	3. Deposits and other Accounts:			
,96,133 - 06	Fixed Deposits		1,89,000 - 44	
14,150 - 10	*Savings Bank Deposits*		25,614 - 99	
28,730 - 74	Current Accounts, Contingency Accounts etc.		16,051 - 90	2,30,667 - 33
	4. Borrowings from other Banking Companies, Agents etc:			
14,827 - 57	i) In India		Nil	
Nil	ii) Outside India		Nil	Nil
	Particulars:			
	i) Secured (by Fixed Deposits)...			
	ii) Unsecured			
Nil	5. Bills Payable:			Nil
	6. Bills for collection being Bills Receivable as per contra:			Nil
Nil	i) Payable in India			
Nil	ii) Payable Outside India			
	7. Other Liabilities:			
990 - 57	Unclaimed Dividends		1,167 - 27	
4,844 - 40	Other Liabilities		7,917 - 61	9,084 - 88
Nil	8. Acceptances, Endorsements and other obligations: per contra			Nil
	9. Profit and Loss:			
	As per last Balance Sheet		2,189 - 36	
	Less Appropriations: Dividends		1,916 - 40	
	Bonus to Staff		—	
	Provision for Income-tax		—	
			272 - 96	
	Add: Profit for the year brought from the Profit & Loss A/c		6,460 - 08	
			6,733 - 04	
	Less: Proposed Appropriations:			
	Statutory Reserve Fund	2,700 - 00		
2,189 - 36	Provision for Income-tax...	2,000 - 00	4,700 - 00	2,033 - 04
Nil	10. Contingent Liabilities ...			Nii
27,989 - 17	Total ...			3,07,495 - 25

OFFICE OF THE BANK
MULKI.
Date: 26—1—1959.

(Sd.) M. R. M. PUNJA
„ M. D. ADAPPA
„ P. S. HEGDE

(Sd.) M. SHANKER SHETTY
„ KRISHNA M. SALIAN

(Sd.) K. SANJIVA SHETTY
„ A. DODDANNA SHETT

Dr.

PROFIT AND LOSS ACCOUNT FOR THE

r the year 1957 Rs. nP.	EXPENDITURE	Rs. nP.
7,563 - 34	1. Interest paid on Deposits, Borrowings, etc.	8,372 - 15
3,570 - 00	2. Salaries and Allowances and Provident Fund (including salary of Rs. 2040/- paid to Manager)	4,081 - 00
102 - 60	3. Directors' and Local Committee Members' fees and allowances.	111 - 00
466 - 48	4. Rent, Taxes, Insurance, Lighting, etc.	513 - 38
Nil	5. Law Charges	Nil
194 - 48	6. Postage, Telegrams and Stamps	284 - 47
100 - 00	7. Auditor's Fees	125 - 00
72 - 20	8. Depreciation on and repairs to the Banking Company's property	66 - 05
507 - 38	9. *Stationery, Printing, Advertisements, etc.*	884 - 90
Nil	10. Loss from sale of or dealing with non-Banking Assets	Nil
772 - 46	11. Other expenditure...	881 - 46
6,076 - 49	12. Net Profit...	6,460 - 08
9,424 - 77	Total ...	21,782 - 69

OFFICE OF THE BANK,
MULKI.
Date: 26—1 - 1959.

(Sd.) M. R. M. PUNJA
„ M. D. ADAPPA
„ P. S. HEGDE

(Sd.) M. SHANKER SHETTY
„ KRISHNA M. SALIAN

(Sd.) K. SANJIVA SHETTY
„ A. DODDANNA SHETT

AUDITOR'S

I have audited the annexed Balance Sheet of Moolky Bank. Ltd., as on 31—12—1958 and also the annexed Profit and Loss Account of the Bank for th *necessary for the purpose of my audit and have found them to be satisfactory; (b)* The transactions of the Bank which have come to my notice, have been withi of those books; *(d)* The Bank's Balance Sheet and Profit and Loss Account dealt with by this report are in agreement with the books of account: *(e)* In my opini in the manner so required for Banking Companies and on such basis. the said Balance Sheet gives a true and fair view of the state of affairs of the Bank as on 31

Mangalore,
1—2—1959.

ITED, MULKI.

LIABILITY)

ECEMBER, 1958.

	PROPERTY & ASSETS	Rs. nP.	Rs. nP.
	1 .Cash:		
	In hand and with Reserve Bank and State Bank		26,855 - 14
	2. Balances with other Banks:		
	i) In India— On Current Account... —	17,112 - 87	
	On Fixed Deposits	15,000 - 00	32,112 - 87
	ii) Outside India		Nil
	3. Money at Call and Short Notice... —		Nil
	4. Investments at Cost:		
	i) Securities of the Central and State Govts. and other Trustee Securities of the face value of Rs. 35,500/-	35,348 - 12	
	ii) Shares: Fully paid-up Preference Shares	19,731 - 50	
	iii) Debentures or Bonds. iv) Other Investments. v) Gold.	Nil	55,079 - 62
	5. Advances: (Other than bad and doubtful debts for which provision has been made to the satisfaction of the Auditor)		
	1, Loans, Cash Credits, Overdrafts, etc.		
	i) In India	1,88,145 - 16	
	ii) Outside India	Nil	1,88,145 - 16
	2) Bills Discounted and Purchased: (Excluding Treasury Bills of the Central & State Govt.)		
	i) Payable in India	Nil	
	ii) Payable outside India	Nil	Nil
	Particulars of Advances:		
	i) Debts considered good in respect of which the Banking Company is fully Secured ...	1,72,854 - 57	
	ii) Debts considered good for which the Banking Company holds no other security than the debtor's personal security	Nil	
	iii) Debts considered good secured by the personal liabilities of one or more parties in addition to the personal security of the Debtors.	15,290 - 59	
	iv) Debts considered doubtful or bad not provided for....	Nil	
	v) Debts due by Directors or Officers of the Banking Company or any of them either severally or jointly with any other persons.	10,750 - 91	
	vi) Debts due by Companies or Firms in which the Directors of the Banking Company are interested as Directors, Partners or Managing Agents or in the case of Private Companies as members	Nil	
	vii) Maximum total amount of Advances, including temporary Advances made at any time during the year to Directors or Managers or Officers of the Banking Company or any of them either severally or jointly with any other persons....	10,750 - 91	
	viii) Maximum total amount of Advances including temporary advances granted during the year to the Companies or Firms in which the Directors of the Bank are interested as Directors, Partners or Managing Agents or in the case of Private Companies, as members. ...	Nil	
	ix) Due from Banking Companies.	Nil	
	6. Bills Receivable being Bills for collections, as per contra:		
	i) Payable in India	Nil	
	ii) Payable Outside India	Nil	Nil
	7. Constituents' Liabilities, Acceptances, Endorsements and other obligations: per contra: ...		Nil
	8. Premises less Depreciation:		Nil
	9. Furniture and Fixtures: (at cost)	1,733 - 73	
	Add: Additions during the year	11 - 05	
		1,744 - 78	
	Less: Depreciation:		
	Up to last Balance Sheet ... ... 948 - 73		
·00	During the year ... ... 66 - 05	1,014 - 78	730 - 00
	10. Other Assets (including Silver):		
·60	Interest Receivable	2,397 - 56	
·63	Advance Income-tax	2,174 - 90	4,572 - 46
	11. Non-Banking Assets acquired in satisfaction of claims		Nil
·17	Total ...		3,07,495 - 25

RS.

(Sd.) N. M. ADYANTHAYA,
President.

(Sd.) M. R. H. PUNJA,
Manager.

ENDING 31ST DECEMBER, 1958.

Cr.

nP.	INCOME	Rs. nP.
	(Less provision made during the year for Bad and Doubtful debts and other usual or necessary provision).	
·76	1. Interest and Discount	16,603 - 74
·28	2. Commission, Exchange and Brokerage	3,804 - 49
	3. Rents	Nil
	4. Net Profit on sale of Investments, Gold and Silver, Land, Premises and other Assets (not credited to Reserves, or any particular Fund or account).	Nil
	5. Net Profit on revaluation of Investments, Gold and Silver, Land, Premises and other Assets (not credited to Reserves. or any particular fund or account).	Nil
	6. Income from non-Banking Assets and Profit from sale of or dealing with such Assets	Nil
·73	7. Other Receipts	1,374 - 46
·77	Total ...	21.782 - 69

ORS.

(Sd.) N. M. ADYANTHAYA,
President.

(Sd.) M. R. H. PUNJA,
Manager.

TE.

on that date and I report that; *(a)* I have obtained all the information and explanations which to the best of my knowledge and belief, were
of the Bank; *(c)* In my opinion, proper books of account as required by law have been kept by the Bank so far as appears from my examination
best of my information, and according to the explanations given to me, the said accounts give the information required by the Companies Act 1956
and the Profit and Loss Account gives a true and fair view of the profit for the year ending on that date.

(*Sd.*) V. M. SHETTY,
Chartered Accountant,

ಸಂಕ್ಷಿಪ್ತ ಸುದ್ದಿಗಳು

ಭೂದಾನ ಯಜ್ಞ ವಿಧೇಯಕ

ಆಚಾರ್ಯ ವಿನೋಬಾ ಬಾವೆಯವರ ಭೂದಾನ ಯಜ್ಞಕ್ಕೆ ಭೂಮಿಯನ್ನು ದಾನವಾಗಿ ಕೊಡುವವರಿಗೆ ಅನುಕೂಲ ಮಾಡಿಕೊಡುವ ಸದುದ್ದೇಶದಿಂದ ಭೂಮಿ ಹಸ್ತಾಂತರದ ಕಾಯಿದೆ ಕ್ರಮಗಳನ್ನು ಸುಲಭಗೊಳಿಸಲು ತಯಾರಿಸಿದ ಮೈಸೂರು ಭೂದಾನ ಯಜ್ಞ ವಿಧೇಯಕವು ಪ್ರಕಟಗೊಂಡಿದೆ. ಹೊಸ ವಿಧೇಯಕದನ್ವಯ ಭೂಮಿಯನ್ನು ದಾನವಾಗಿ ಕೊಡಲು ಕಾಯಿದೆಬದ್ಧ ಪಾತ್ರತೆಯಿರುವವನು ಈ ಬಗ್ಗೆ ಒಂದು ದೃಢೀಕರಣವನ್ನು ಕೊಡಬಹುದು. ಸಂಬಂಧಪಟ್ಟ ಅಧಿಕಾರಿಯು ಈ ಬಗ್ಗೆ ಪರಿಶೀಲನೆ ನಡೆಸಿ ಅದನ್ನು ಖಚಿತಪಡಿಸಿದನಂತರ ದಾನವಾದ ಭೂಮಿಯ ಒಡೆತನವು ಭೂದಾನ ಯಜ್ಞಮಂಡಳಕ್ಕೆ ಸೇರುವುದು. ಅವರು ಇಂತಹ ಭೂಮಿಯನ್ನು ಭೂರಹಿತ ಬಡ ಜನರಿಗೆ ಕೊಡುವರು.

ಪೂರ್ಣಾವಧಿಯ ಪಟೇಲ ಶಾನುಭಾಗರು.

ಸದ್ಯ ಆನುವಂಶಿಕವಾಗಿ ನಡೆದುಬರುತ್ತಿರುವ ಪಟೇಲ ಮತ್ತು ಶಾನುಭೋಗ ಹುದ್ದೆಗಳನ್ನು ರದ್ದುಗೊಳಿಸಿ ಅವರಸ್ಥಳದಲ್ಲಿ ವೇತನ ಪಡೆಯುವ ಪಟೇಲ—ಶಾನುಭೋಗರನ್ನು ನೇಮಿಸುವ ಬಗ್ಗೆ ಮೈಸೂರು ಸರಕಾರವು ಆಸಕ್ತಿ ತಾಳುತ್ತಿದೆ. ಹೀಗೆ ನೇಮಿತರಾದವರು ಸರಕಾರದ ಪೂರ್ಣಾವಧಿಯ ನೌಕರರಾಗುವರು. ಅಲ್ಲದೆ ನಿಯಮಿತ ಮಟ್ಟದಲ್ಲಿ ವೇತನವನ್ನೂ ಪಡೆಯುವರು. ಹಳೆಯ. ಮೈಸೂರು ಪ್ರದೇಶದಲ್ಲಿರುವ "ಮಿರಾಸ್" ಕೊಡುವ ಪದ್ಧತಿ (ರೈತರು ಗ್ರಾಮಾಧಿಕಾರಿಗಳಿಗೆ ಕೊಡುವುದು) ಯನ್ನೂ ನಿಲ್ಲಿಸಲು ಸರಕಾರ ಯೋಚಿಸುತ್ತಿದೆ ಎಂದೂ ಅಲ್ಲದೇ ಈ ಬಗ್ಗೆ ಸಾಕಷ್ಟು ಪರಿಶೀಲನೆಗಳೂ ನಡೆಯುತ್ತಿವೆ ಎಂದೂ ತಿಳಿಯುತ್ತದೆ.

ನೋಟೀಸು.

ಕುಂದಾಪುರ ಪಂಚಾಯತ ಬೋರ್ಡ ಕೋರ್ಟಿನಲ್ಲಿ

C. S. No. 97/1958.

ಸಲಾಪ ನರಸಿಂಹ ಸೆರಿಗಾರ ವಾದಿ.

ನರಸಿಂಹ ಶೆಟ್ಟಿ ಪ್ರತಿವಾದಿ.

ಉಡುಪಿ ತಾಲ್ಲೂಕು ಹಾಲಾಡಿ ಗ್ರಾಮದಲ್ಲಿರುವ ಸುಬ್ಬಣ ಸೆಟ್ರ ಅಳಿಯ ಪ್ರತಿವಾದಿ ನರಸಿಂಹ ಶೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿಯು ವಾದಿಗೆ ತಾ 27-12-1956ರಲ್ಲು ರೂಪಾಯಿ 30ಕ್ಕೆ ಬರಕೊಟ್ಟ ದಿಮಾಂಡ್ ನೋಟಿನ ಬಾಬ್ತು ಅಸಲು ಬಡ್ಡಿ ಮೊಬಲಗು ರೂ. 34—9—0ಕ್ಕೆ ಸದ್ರಿ ಕೋರ್ಟಿನಲ್ಲಿ ದಾಖಲು ಮಾಡಿದ ದಾವೆಯು ತಾ. 1-4-59ಕ್ಕೆ ತನಿಖೆಗೆ ಮುಂದೋಡಲಾಗಿಯದೆ. ಈ ಬಾಬಿನಲ್ಲಿ ಆಕ್ಷೇಪಗಳೇನಾದರೂ ಇದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಮಧ್ಯಾಹ್ನ 2½ ಗಂಟೆ ಸಮಯಕ್ಕೆ ಹಾಜರಾಗಬೇಕಾಗಿಯೂ ಈ ಬಾಬಿನಲ್ಲಿ ಆಕ್ಷೇಪಗಳೇನಾದರೂ ಇದ್ದರೆ ಜ್ಯಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ತಿಳಿಯಪಡಿಸಲಾಗಿಯದೆ.

ನರಸಿಂಹ ಸೆರಿಗಾರ
ವಾದಿ.

ತಾ. 6.3 1959
ಮೊಕ್ಕಾಂ: ಕುಂದಾಪುರ.

ಉತ್ತರ ನೈಜೀರಿಯಕ್ಕೆ ಆಂತರಿಕ ಸ್ವರಾಜ್ಯ.

ಮಾರ್ಚ ೧೫ನೆ ದಿನದಂದು ಬ್ರಿಟಿಷ ಆಫ್ರಿಕನ್ ವಸಾಹತುವಾದ ನೈಜೀರಿಯಾದ ಉತ್ತರ ಭಾಗಕ್ಕೆ ಆಂತರಿಕ ಸ್ವಾತಂತ್ರ್ಯವನ್ನು ವಿಧಿಪೂರ್ವಕವಾಗಿ ಕೊಡಲಾಯಿತು. ಇದರ ಪೂರ್ವ ಮತ್ತು ಪಶ್ಚಿಮ ಭಾಗಗಳಿಗೆ ಈ ಮೊದಲೇ ಸ್ವರಾಜ್ಯ ದೊರೆತಿದ್ದು ೧೯೬೦ನೆಯ ಅಕ್ಟೋಬರದಲ್ಲಿ ಉತ್ತರ ಭಾಗಕ್ಕೂ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುವುದಾಗಿ ನಿರ್ಧರಿಸಲಾಗಿದೆ. ಉತ್ತರ ನೈಜೀರಿಯಾದ ಜನಸಂಖ್ಯೆ ೧೭೦ ಲಕ್ಷವಿದೆ. ಸೊಕೊಟೋದ ಸಾರ್ಡಾನರಾದ ಅಲ್ ಹಾಜಿ ಸರ್ ಅಹಮ್ಮದ ಬೆಲ್ಲೊರವರು ಪ್ರಧಾನಿಯಾಗಿದ್ದು, ಪ್ರಾದೇಶಿಕ ಕಾರ್ಯಕಾರಿ ಮಂಡಳದ ಅಧ್ಯಕ್ಷತೆಯನ್ನು ಸ್ವೀಕರಿಸಿದರು.

ಪಾಕ್—ಅಮೇರಿಕನ್ ಒಪ್ಪಂದ.

ಪಾಕಿಸ್ತಾನದ ಪ್ರದೇಶದ ಮೇಲೆ ಯಾವುದೇ ದಿಕ್ಕಿನಿಂದ ದಾಳಿ ನಡೆದರೂ ಮಾತ್ರವಲ್ಲದೆ ಯಾವುದೇ ಒಂದು ರಾಷ್ಟ್ರವು ಆರ್ಥಿಕ ಆಕ್ರಮಣ ನಡೆಸಿದರೂ ಅಮೇರಿಕೆಯು ಪಾಕಿಸ್ತಾನಕ್ಕೆ ನೆರವಾಗಬೇಕೆಂದು ಪಾಕ್—ಅಮೇರಿಕೆಗಳ ದ್ವಿಪಕ್ಷೀಯ ಒಡಂಬಡಿಕೆಯಲ್ಲಿ ಹೇಳಲಾಗಿದೆ ಎಂದು ಪಾಕ್ ವಾಣಿಜ್ಯ ಮಂತ್ರಿ ಶ್ರೀ ಝಡ್. ಎ. ಭುಟ್ಟೋ ಹೊರಗೆಡಹಿದ್ದಾರೆ. ಕಮ್ಯೂನಿಸ್ಟ ಆಕ್ರಮಣದ ವಿರುದ್ಧ ಪಾಕಿಸ್ತಾನಕ್ಕೆ ಅಮೇರಿಕೆಯ ನೆರವು ಸೀಟೊ ಮತ್ತು ಬಗದಾದ ಒಡಂಬಡಿಕೆಗಳಿಂದ ದೊರೆಯುತ್ತದೆ ಎಂದವರು ಹೇಳಿ, ತಟಸ್ಥ ರಾಷ್ಟ್ರಗಳ ಗುಂಪಿನಲ್ಲಿ ಪಾಕಿಸ್ತಾನದ ಅತ್ಯಂತ ಬಲಾಢ್ಯ ಶತ್ರು ಸೇರಿಕೊಂಡಿದ್ದಾನೆ ಎಂದು ಉಲ್ಲೇಖಿಸಿ ಅಮೇರಿಕನ್ ರಾಯಭಾರಿ ಎಲ್ಸ್‌ವರ್ಥ ಬಂಕರರು ಭಾರತಕ್ಕಿತ್ತ ಸ್ಪಷ್ಟೀಕರಣವು ವೈಯಕ್ತಿಕವಿರಬಹುದುಎಂದುಹೇಳಿದರು. ಈ ಹೇಳಿಕೆಯ ಆಧಾರದಿಂದಲೇ ಅಮೇರಿಕೆಯಲ್ಲಿ ಭಾರತದ ರಾಯಭಾರಿಗಳಾಗಿರುವ ಶ್ರೀ ಛಗಲಾರವರು ಅಮೇರಿಕೆಯು ಈ ದ್ವಿಪಕ್ಷೀಯ ಒಪ್ಪಂದವನ್ನು ಮಾಡಿಕೊಂಡು ಭಾರತ ಮತ್ತು ಪಾಕಿಸ್ತಾನಗಳ ಸಂಬಂಧವನ್ನು ಹದಗೆಡಿಸಿದೆ ಎಂದು ಉದ್ಗರಿಸಿದ್ದಾರೆ. ಈ ಒಪ್ಪಂದದ ಬಲದಿಂದಾಗಿ, ಉಭಯ ರಾಷ್ಟ್ರಗಳ ನಡುವಿನ ವಿವಾದಗಳ ಪರಿಹಾರವು ಮತ್ತಷ್ಟು ಜಟಿಲವಾಗುವುದು ಎಂದರು ಅವರು.

ಸೋವಿಯೆತ್ ನಾಯಕರು ಲಂಡನ್ನಿನಲ್ಲಿ

ಸೋವಿಯೆತ್ತಿನ ಉಚ್ಚನಾಯಕ ಶ್ರೀ ಮಿಖೈಲ ಸುಸಲೋವರು ಬರ್ಲಿನ್, ಜರ್ಮನಿ ಸಮಸ್ಯೆ ಮತ್ತಿತರ ಆಂತಾರಾಷ್ಟ್ರೀಯ ಪ್ರಶ್ನೆಗಳನ್ನು ಸೋಶಿಯಲಿಸ್ಟ ರಾಜಕಾರಣಿಗಳೊಡನೆ ಮಾತಾಡಲು ಲಂಡನ್ನಿಗಾಗಮಿಸಿದ್ದಾರೆ. ಶ್ರೀ ಸುಸಲೋವರು ಪ್ರಧಾನಿ ಕ್ರುಶ್ಚೇವರ ನಿಕಟಾನುವರ್ತಿಯಾಗಿರುವರು. ಇವರು ತಮ್ಮ ನಾಲ್ವರು ಸಂಗಾತಿಗಳೊಡನೆ ಖಾಸಗಿಯಾಗಿ ಸಂದರ್ಶನವಿತ್ತಿರುವರು. ಈ ಆಯೋಗದ ಸದಸ್ಯರೆಲ್ಲರೂ ವಿದೇಶೀಯ ವಿಷಯಗಳಲ್ಲಿ ಪರಿಣತರಿರುವರು. ಆದುದರಿಂದ, ಜರ್ಮನ್ ಮತ್ತು ಬರ್ಲಿನ್ ಪ್ರಶ್ನೆಯ ರೂಪ ಬದಲಾಗುವುದೂ ಅಸಾಧ್ಯವೆಂದು ಹೇಳಬರುವುದಿಲ್ಲ.

ಅಲ್ಲಲ್ಲಿಯ ಸುದ್ದಿಸಾರ.

ಸಂಚಾರ ಕಾರ್ಯಕ್ರಮ—ಗೇರು ವ್ಯವಸಾಯದ ಸ್ಪೆಶಲ್ ಆಫೀಸರರಾದ ಶ್ರೀ ಕೆ. ಆರ್. ಶೆಟ್ಟರು ಇದೇ ತಾ. 16ರಿಂದ 19ರ ತನಕ ಪುತ್ತೂರು, 20ರಿಂದ 23ರ ತನಕ ವಿಟ್ಲ, 24ರಿಂದ 27ರ ತನಕ ಬಂಟ್ವಾಳ 28ರಿಂದ 31ರ ತನಕ ಬೆಳ್ತಂಗಡಿ, ಎಪ್ರಿಲ್ 1ರಿಂದ 4ರ ತನಕ ಉಪ್ಪಿನಂಗಡಿ ಪ್ರವಾಸ ಕಾರ್ಯಕ್ರಮವನ್ನಿಟ್ಟುಕೊಂಡಿರುವರು.

ಸರ್ವೋದಯ ಮಂಡಲಿ ಕುಡುಮಲ್ಲಿಗೆ-ತಾ. 9-3-59ರಲ್ಲಿ ಮಂಡಲಿಯ ಉಪಾಧ್ಯಕ್ಷ ಶ್ರೀ ಟಿ. ಅಚ್ಚಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಸರ್ವೋದಯ ಕಾರ್ಯಕರ್ತರ ಸಭೆಯೊಂದು ಜರಗಿತು.

ಈ ಮಂಡಲಿಯ ವತಿಯಿಂದ ಅಜ್ಮೀರದಲ್ಲಿ ಜರಗಿದ ಸರ್ವೋದಯ ಸಮ್ಮೇಳನಕ್ಕೆ ಹೋಗಿ ಬಂದಿದ್ದ ಮಂಡಲಿಯ ಅಧ್ಯಕ್ಷರಾದ ಡಾ| ಯು. ಚಂದ್ರಶೇಖರ್ ಮತ್ತು ಶಾಂತಿ ಸೇವಕ್, ಶ್ರೀ ಬಿ. ಯಚ್. ಕೃಷ್ಣಪ್ಪನವರೂ ಅಜ್ಮೀರದಲ್ಲಿ ಜರಗಿದ ಸಮ್ಮೇಳನದ ಅನೇಕ ವಿಷಯಗಳನ್ನು ವಿವರಿಸಿ ಮಾತಾಡಿದರು. ಮಂಡಲಿಯ ಕಾರ್ಯಕಲಾಪಗಳ ಬಗ್ಗೆ ವಿಚಾರ ವಿನಿಮಯ ನಡೆದ ಬಳಿಕ ಕಾರ್ಯದರ್ಶಿ ಶ್ರೀ ಶ್ರೀ ಎ. ಜಿ. ಗುರುವಪ್ಪನವರ ಧನ್ಯವಾದ, ಪ್ರಾರ್ಥನೆಯೊಂದಿಗೆ ಸಭಾಂತ್ಯವಾಯಿತು.

ಉಡುಪಿ ಬೋರ್ಡ ಹ್ಯಾಸ್ಕೂಲಿನಲ್ಲಿ ಸಾಹಿತ್ಯೋತ್ಸವ—ಇದೇ ತಾ. 12ರಲ್ಲಿ ಶಾಲಾ ಕರ್ನಾಟಕ ಸಂಘದ ಆಶ್ರಯದಲ್ಲಿ ನಗರ ಸಭಾಧ್ಯಕ್ಷ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಶಾಲಾ ಭವನದಲ್ಲಿ ನೆರವೇರಿತು ಪ್ರಾಧ್ಯಾಪಕ ಶ್ರೀ ಬಿ. ಅನಂತಕೃಷ್ಣ ಸಾಮಕರು ಸ್ವಾಗತ ಭಾಷಣ ಮಾಡಿದರು. ಸಂಘದ ಅಧ್ಯಕ್ಷ ಶ್ರೀ ಕೆ. ಶೇಷು ಸೆಟ್ಟರು ಪರಿಚಯ ಭಾಷಣಮಾಡಿದರು. ನಂತರ ಶ್ರೀ ಕೆ. ಬಿ. ರಾಮಕೃಷ್ಣರಾಯರು ಜಗಜ್ಯೋತಿ ಬುದ್ಧ, ಶ್ರೀ ಟಿ. ಶೀನಪ್ಪ ಹೆಗ್ಡೆಯವರು ರತ್ನಾಕರ ವರ್ಣಿ, ಶ್ರೀ ಎಚ್. ಕೆ. ರಾಮಚಂದ್ರ ಮೂರ್ತಿಯವರು ಟಿ. ಪಿ. ಕೈಲಾಸಂ, ಶ್ರೀ ಕೆ ಎಲ್. ಎನ್. ಉಪಾಧ್ಯಾಯರು ಶಂಕರ ಬಾಳದೀಕ್ಷಿತ ಜೋಶಿ ಇವರ (ವಿದ್ಯಾರ್ಥಿಗಳು ದಾನವಿತ್ತ) ತೈಲಚಿತ್ರಗಳನ್ನು ಸಂದರ್ಭೋಚಿತ ಭಾಷಣದೊಂದಿಗೆ ಅನಾವರಣ ಮಾಡಿದರು. ಅಧ್ಯಕ್ಷ ಡಾ. ಐತಾಳರು ಬಹುಮಾನ ವಿತರಣೆ ಮಾಡಿ ಮೈಸೂರಿನ ಕರ್ನಾಟಕ ಸಂಘದ ಕಾರ್ಯಕಲಾಪಗಳನ್ನು ಶ್ಲಾಘಿಸಿ ಮಾತನಾಡಿದರು.

ಮೋಡರ್ನ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು—ತಾ. 14ರಲ್ಲಿ ಮಂಗಳೂರು ನಗರ ಸಭಾಧ್ಯಕ್ಷ ಶ್ರೀ ಮಡೀಲ್ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ನೆರವೇರಿತು ವರ್ಧಂತ್ಯುತ್ಸವ ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡುತ್ತ ಶಿಕ್ಷಣ ಕ್ರಮದಲ್ಲಾಗಬೇಕಾದ ಸುಧಾರಣೆಗಳನ್ನು ಸೂಚಿಸಿದರು. ಮುಖ್ಯೋಪಾಧ್ಯಾಯ ಶ್ರೀ ಎಚ್. ಎಲ್ ಭಟ್ಟರು ವರದಿಯನ್ನೋದಿದರು ಶ್ರೀ ಎನ್. ಶ್ರೀಶ ಬಲ್ಲಾಳರು ಸ್ವಸ್ತಿವಾಚನ ಮಾಡಿದರು. ವಿದ್ಯಾರ್ಥಿನಿ ಪ್ರತಿಮಾರಾಣಿ ಉತ್ತರಿಸಿದರು. ಶ್ರೀಮತಿ ಮನೋರಮಾ ಶ್ರೀನಿವಾಸ ನಾಯ್ಕರು ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷರು ಶಾಲೆಯ ಚಟುವಟಿಕೆಗಳನ್ನು ಕೊಂಡಾಡಿ ಇದು ಮೋಡರ್ನ ಮಾತ್ರವಲ್ಲ ಮೋಡೆಲ್ ಸ್ಕೂಲ್ ಎಂದರು. ಮೇನೇಜರ್ ಶ್ರೀ ಕೆ ಜಗನ್ನಾಥ ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ಮುಂಬಿನ ದಿನ ಡಾ|| ಕೆ ಎಲ್ ಐತಾಳರ ಅಧ್ಯಕ್ಷತೆಯಲ್ಲಿ ಹೆತ್ತವರ ದಿನಾಚರಣೆಯು ಆಚರಿಸಲ್ಪಟ್ಟಿತು. ಶ್ರೀ ಎ. ಜೆ. ಆಳ್ವೆಯವರು ಸ್ವಾಗತ ಭಾಷಣಮಾಡಿದರು ಶ್ರೀ ಸಿ. ರಂಗನಾಥ ಶೆಣೈಯವರು ಬಹುಮಾನ ವಿತರಣೆಗೈದರು.

ತಾ. 15ರಲ್ಲಿ ಹಳೆ ವಿದ್ಯಾರ್ಥಿ ಸಂಘದ ದಿನಾಚರಣೆಯು ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಶ್ರೀ ಜಗನ್ನಾಥ ನಾಯ್ಕರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀಮತಿ ಅಂಬಾ ಪದ್ಮನಾಭ ಪೈಗಳು ಬಹುಮಾನ ಹಂಚಿದರು. ಮೂರು ದಿನವೂ ವಿವಿಧ ವಿನೋದಾವಳಿಗಳೂ ನಾಟಕಾಭಿನಯವೂ ಕಣ್ಮನಾನಂದಕರವಾಗಿ ಜರಗಿತು.

ಉಡುಪಿ ಲಾ ಕಾಲೇಜಿನಲ್ಲಿ—ಮದ್ರಾಸು ಲಾ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ್ ಶ್ರೀ ಕೆ. ಕೃಷ್ಣಮೆನನ್ ಅವರಿಗೆ ಅವರ ಶಿಷ್ಯವೃಂದದವರು ಸತ್ಕಾರ ಕೂಟ ಒಂದನ್ನು ಶ್ರೀ ಬಿ. ಎಲ್. ಎನ್. ರೈಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಏರ್ಪಡಿಸಿದ್ದರು. ಶ್ರೀ ಎನ್. ವಿ. ಕಾಮತರು ಸ್ವಾಗತಿಸಿದರು. ಶ್ರೀ ಮೆನನ್‌ರು ಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಉಪದೇಶವಿತ್ತರಲ್ಲದೆ ಲಾ ಕಾಲೇಜನ್ನು ಸ್ಥಾಪಿಸಿದ ಡಾ| ಟಿ. ಎಮ್. ಎ. ಪೈಗಳನ್ನು ಪ್ರಶಂಸಿಸಿದರು. ಶ್ರೀ ಎಂ. ವಿ. ಕಾಮತರು ಆಭಾರ ಸೂಚಿಸಿದರು.

ಚಾಲ್ತಿ ವರುಷದ ಉಡುಪಿ ಕೋರ್ಟ್ ಧಾರಣೆ.—

ಕಜೆ ಅಕ್ಕಿ	ಮುಡಿ ೧ರ	ರೂ.	18 - 00
ಕೊಳಸಲು ಅಕ್ಕಿ	,,	,,	19 - 00
ಮುಸ್ಕತಿ ಅಕ್ಕಿ	,,	,,	20 - 00
ಅವ್ವಲ್ ಮುಸ್ಕತಿ ಅಕ್ಕಿ	,,	,,	22 - 00
ಬೆಳ್ತಿಗೆ ಅಕ್ಕಿ	,,	,,	20 - 50
ಜೀರಾ ಅಕ್ಕಿ	,,	,,	22 - 00
ಉದ್ದು	,,	,,	20 - 00
ತೆಂಗಿನ ಕಾಯಿ ೧೦೦ರ		,,	22 - 00
ತೆಂಗಿನೆಣ್ಣೆ ಮಣ ೧ರ		,,	38 - 00
ಹುಲ್ಲು ೧೦೦೦ ಉಂಡಿಗೆಗೆ		,,	35 - 00
ಕೋಳಿ ೧ರ		,,	3 - 00
ಹಸುರುವಾಣಿ ಹೊರೆ ೧ರ		,,	1 - 00

ಆಜ್ರಿಹರ—ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಶ್ರೀರಾಮ ಭಜನಾ ಉದ್ಘಾಟನಾ ಸಮಾರಂಭವು ತಾ. 13-3-59ರಂದು ಅಂಬರ್ ಚರಕ ಪರಿಶ್ರಮಾಲಯದ ಶ್ರೀ ಆರ್ ಎಂ. ರಾಜೀವ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಸಿದ್ಧ ಕೀರ್ತನೆಗಾರರಾದ ಶ್ರೀ ಎ. ಜಗನ್ನಾಥ ಹೆಗ್ಡೆಯವರು ಶ್ರೀರಾಮ ಭಜನೆಯನ್ನು ಉದ್ಘಾಟಿಸಿ ಅದರ ಮಹತ್ವದ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣ ಮುಗಿದ ನಂತರ ಮುಖ್ಯೋಪಾಧ್ಯಾಯ ಶ್ರೀ ಕೆ ರಾಮಕೃಷ್ಣ ಅಡಿಗರು ಧನ್ಯವಾದ ಸಮರ್ಪಿಸಿದರು.

ಮುಂಬಾಯಿ—ದೇಶದ ಎಲ್ಲಾ ಭಾಗಗಳಿಂದ ಮುಂಬಾಯಿ ಹೈಕೋರ್ಟಿನ ಬಾರ್ ಕೌನ್ಸಿಲಿನಿಂದ ಎಡ್ವೋಕೇಟ್ ತರಬೇತಿ ಪರೀಕ್ಷೆಗೆ ಬರುವ ಅಭ್ಯಾಸಿಗಳು ಭಾಷಣಗಳಿಂದ ತರಬೇತುಗೊಳಿಸುವ ಹಿರಿಯ ಸದಸ್ಯರನ್ನೊಳಗೊಂಡ ಬಾರ್ ಕೌನ್ಸಿಲ್ ಸ್ಟೂಡೆಂಟ್ಸ್ ಎಸೋಸಿಯೇಶನೊಂದನ್ನು ಇದೇ ತಾ. 13ರಲ್ಲಿ ಸ್ಥಾಪಿಸಿಕೊಂಡಿರುವರು. ಸ್ಥಾಪನಾ ಸಮಾರಂಭಕ್ಕೆ ಜಸ್ಟೀಸ್ ಶ್ರೀ ಕೆ. ಜಿ. ದಾತಾರ್‌ರು ಮುಖ್ಯ ಅತಿಥಿಗಳಾಗಿದ್ದರು. ಈ ಸಂಘ ಸ್ಥಾಪನೆಗೆ ಗೌರವ ಕಾರ್ಯದರ್ಶಿಗಳಾದ ಶ್ರೀ ಯಂ. ಡಿ. ಸೆಟ್ಟರೂ, ಕೋಶಾಧಿಕಾರಿಗಳಾದ ಶ್ರೀ ಕೆ. ಎಸ್. ವಿ. ಮೂರ್ತಿಯವರೂ ಮುಖ್ಯ ಕಾರಣರಾಗಿರುತ್ತಾರೆ. ಶ್ರೀ ವಿ ವಿ ದೇಸಾಯಿಯವರು ಸಂಘದ ಅಧ್ಯಕ್ಷರಾಗಿರುವರು.

ಡಾ| ಕೆ. ವಿ. ಮಲ್ಲಿಯವರು ವಿದೇಶಕ್ಕೆ—ಉಡುಪಿಯಲ್ಲಿ ವೆಟರ್ನರಿ ಅಸಿಸ್ಟಂಟ್ ಸರ್ಜನರಾಗಿದ್ದ ಮತ್ತು ಉತ್ಸಾಹಪೂರ್ವಕ ಕೆಲಸ ನಿರ್ವಹಿಸುತಿದ್ದ ಡಾ| ಕೆ. ವಿ. ಮಲ್ಲಿಯವರು ಅಲ್ಫೋರ್ಟನಲ್ಲಿರುವ ನ್ಯಾಶನಲ್ ವೆಟರಿನರಿ ಇನ್ಸ್ಟಿಟ್ಯೂಟಿನಲ್ಲಿ ಪಶು ವೈದ್ಯದಲ್ಲಿ ಹೆಚ್ಚಿನ ವ್ಯಾಸಂಗ ಪಡೆಯಲು ಇದೇ ತಾ. 12ರಲ್ಲಿ ಮುಂಬಾಯಿಯಿಂದ ಪ್ರಯಾಣ ಬೆಳೆಸಿರುವರು. ಫ್ರೆಂಚ್ ವಿದ್ಯಾರ್ಥಿವೇತನ ಪಡೆದ ಕೆಲವೇ ಮಂದಿಯಲ್ಲಿ ಇವರೊಬ್ಬರಾಗಿರುತ್ತಾರೆ.

ಸತ್ಕಾರ—ಉಡುಪಿ ನಗರ ಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರು ಮಂಗಳೂರು ನಗರ ಸಭಾಧ್ಯಕ್ಷ ಶ್ರೀ ಮಡೀಲ್ ಶ್ರೀನಿವಾಸ ನಾಯ್ಕರಿಗೆ ತಾ 14ರಲ್ಲಿ ನಗರ ಸಭೆಯಲ್ಲಿ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು.

ಶ್ರೀ ಬಿ. ಸೀತಾರಾಮ ರಾಯರ ನಿಧನ—ಉಡುಪಿಯ ಶ್ರೀ ಕೃಷ್ಣಾ ವಾಚ್ ವರ್ಕ್ಸಿನ ಮಾಲಕರೂ ಪ್ರಸಿದ್ಧ ವಾಚ್ ರಿಪೇರರೂ ಜನಪ್ರೀತರೂ ಆಗಿದ್ದ ಶ್ರೀ ಬೋಳಾರ ಸೀತಾರಾಮ ರಾಯರು ಕೆಲವು ದಿನಗಳ ಅಸೌಖ್ಯದಿಂದ ತಾ. 17ನೇ ಬೆಳಿಗ್ಗೆ ನಿಧನರಾದರೆನ್ನಲು ವಿಷಾದವಾಗುತ್ತದೆ.

ನಮ್ಮ ಭಾರತ

(೪ನೇ ಪುಟದಿಂದ)

ತರೆಂದು ಅವನು ತಿಳಿದಿದ್ದನು. ಆರ್ಥಿಕ ವಿವರವನ್ನೂ ಅವನು ಅರಿತಿದ್ದನು. ಹುಡುಗಿಯು ಹೆಚ್ಚಾಗಿ ಹತ್ತಿಯ ಬಟ್ಟೆಯನ್ನೇ ಧರಿಸುತಿದ್ದಳು. ಪ್ರತಿ ತಿಂಗಳ ಮೊದಲರ್ಧದ ಆಕೆಯ ಹೋಟೇಲು ಬಿಲ್ಲು ಅತನಿಗೆ ಅತೀವ ಕುತೂಹಲಕಾರಿಯಾಗಿತ್ತು. ಎಂಟು ಇಡಿ ರೂಪಾಯಿಗಳು! ನೀವು ಹತ್ತು ದಿನಗಳಲ್ಲಿ ಮಧ್ಯಾಹ್ನದೂಟಕ್ಕೆ ತುಪ್ಪ ಹಾಕಿಕೊಳ್ಳುವುದಿಲ್ಲ ಎಂದು ತೋರುತ್ತದೆ. ನಿಮ್ಮ ಬೇಂಕಿನ ಲೆಕ್ಕಕ್ಕೇನೇ ಮತ್ತಷ್ಟು ಜಮೆ ಮಾಡಬೇಕಾಗಿದೆ, ಪಾಪ. ಅಲ್ಲವೆ? ಎನ್ನುತಿದ್ದನು. ಅಲ್ಲದೇ ಆ ಹುಡುಗಿಯು ಒಂದೇ ಮಗುವನ್ನು ಪಡೆಯುವುದಕ್ಕೆ ಅದೆಷ್ಟು ಭಾಗ್ಯಶಾಲಿಯಾಗಿದ್ದಾಳೆಂದು ಆಡಲು ಒದಗಿಬಂದ ಎಲ್ಲ ಅವಕಾಶಗಳನ್ನೂ ಉಪಯೋಗಿಸಿಕೊಳ್ಳುತಿದ್ದನು.

ಇನ್ನೊಂದು ಕಥೆಯ ನಾಯಕ ಶ್ರೀ ಕ ಎಂಬವನು ಇವರಂತಲ್ಲ. ತನ್ನ ಸ್ತ್ರೀ ಸಹೋದ್ಯೋಗಿಗಳತ್ತ ತೃಪ್ತಿಯ ಸೆಳೆನೋಟವನ್ನವ ಬೀರುತಿದ್ದನು. ಪ್ರಕಟಣೆಯ ಕೃಪೆಗಾಗಿ ಆಕೆ ಅವನಿಗೆ ಪಟಗಳನ್ನು ಕಳಸಬೇಕಾಗಿತು. ಒಮ್ಮೆ ಆಕೆಯು ಅವನಿಗೆ ಒಂದೇ ಚಿತ್ರದ ಎರಡು ಪಟಗಳ ಕಳಿಸಿಬಿಟ್ಟಳು. ಅವನು ಆಕೆಯ ಮೇಜಿನ ಸಮೀಪಕ್ಕೆ ಬಂದು ಸುಮ್ಮನೆ ಕೇಳಿದನು— "ಈ ಎರಡನ್ನೂ ಪ್ರಕಟಿಸಲು ಅಜ್ಞೆಯಿತ್ತಿರುವಿರಾ?" ಎಂದು. ಆಕೆ ಅವುಗಳಲ್ಲಿ ಉತ್ತಮವಾದುದೊಂದನ್ನು ಆರಿಸುವಂತೆ ಕೇಳಿಕೊಂಡಳು. "ಆಕೆಯು ಇಷ್ಟನ್ನೂ ಮಾಡಲಾರಳಾದರೆ, ಆವಳಿಗೆ ಸಂಬಳ ಕೊಡುವುದಾದರೂ ಏಕೆ?" ಎಂದು ಗೊಣಗುಟ್ಟುತ್ತ ಮುಳ್ಳುಮೊಗವನ್ನು ಮಾಡಿಕೊಂಡು ಅಲ್ಲಿಂದ ಹೊರಟು ಹೋದನು.

ಇಂತಹ ವಿಷಯಗಳೀಗ ತೀರ ಸಾಮಾನ್ಯವಾಗಿ ಬಿಟ್ಟಿವೆ. ಅಲ್ಲದೆ ದಿನಗಳೆದಂತೆ, ಮಾಸಗಳುರುಳಿದಂತೆ ಇದು ಹೆಚ್ಚುತ್ತ ಬರುತ್ತಿದೆ. ಪುರುಷ ಗುಮಾಸ್ತೆಯರ ಮನಸ್ಸಿನಾಳದಲ್ಲಿ ಇದು ಪ್ರಾಯಃ ಇನ್ನೂ ದಶಕಗಳ ವರೆಗೆ ಮುಂದುವರಿಯುತ್ತ ಹೋಗುವುದು. ಭಾರತದಲ್ಲಿ ನಾವೇನೋ ಕೂಡಿಹಾಕುವ ಸಂಪ್ರದಾಯವಿಟ್ಟುಕೊಂಡಿದ್ದೇವೆ. ಇಲ್ಲಿ ಸಮಯವು ಆರಾಮವಾಗಿ ಹೋಗುವುದು. ಪಂಚವಾರ್ಷಿಕ ಯೋಜನೆಯಾದಿಗಳೂ ಇದರಿಂದ ದೂರವುಳಿಯಲಾರವು.

—ಯೋಜನಾ.

NOTICE

In the Court of the District Munsiff at Puttur.

R. E. P. No. 281/1958.
(O. S. 245/51)

Ishwarappayya. Petitioner.
Shankeranarayana Rao. Respondent.

To,
The respondent:-

Shankeranarayana Rao, son of Kumbat Krishnayya, residing at Koodlu village, Kasaragod Taluk.

Take notice that the petitioner has filed the above execution petition for sale of immovable property and R. E. A. 558/58 for leave to bid at sale and the said execution petition and the bid application stand posted to 26—3—1959 for settling the terms of the proclamation or sale and hearing respectively.

(By order of the Court)

(Sd.) M. Sadashiva Rao,
Vakil for Petitioner.

Puttur, 14-3-1959

ಪತ್ರಗಳ ಸಾರ

ಬಂಟ್ವಾಳ, ಗುರುಪುರ, ಪೊಳಲಿ ರಸ್ತೆ ಮತ್ತು ಕರ್ಪೆ ಅಣೆಕಟ್ಟು

ಬಂಟ್ವಾಳ, ಗುರುಪುರ, ಪೊಳಲಿಗಳ ನಡುವೆ ರಸ್ತೆಯನ್ನು ಸಾರ್ವಜನಿಕರು ಪರಿಶ್ರಮಪೂರ್ವಕ ಕಮ್ಯೂನಿಟಿ ಪ್ರೊಜೆಕ್ಟ್ ಯೋಜನೆಯ ಸಹಾಯದಿಂದ ನಿರ್ಮಿಸಿದ್ದಾರೆಂದೂ, ಆ ರಸ್ತೆಯು ಪ್ರಕೃತ ಸಾಕಷ್ಟು ಉತ್ತಮ ಸ್ಥಿತಿಯಲ್ಲಿಲ್ಲದೆ ವಾಹನ ಸಂಚಾರಕ್ಕೆ ತ್ರಾಸವಾಗುತ್ತಿದೆಯೆಂದೂ, ಪೊಳಲಿಯ ದೇವಿಯವರ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಸುಲಭವಾಗುವಂತೆ ಈ ರಸ್ತೆಯನ್ನು ಉತ್ತಮ ಸ್ತರದಲ್ಲಿರಿಸಬೇಕಾದುದು ಅವಶ್ಯವೆಂದೂ, ಈ ಬಗ್ಗೆ ಅಲ್ಲಿಗೆ ಆಗಮಿಸಿದ ವಿವಿಧ ಅಧಿಕಾರಿಗಳಿಗೆ ಮನವಿಗಳನ್ನು ಸಲ್ಲಿಸಿದ್ದರೂ, ಆ ಮನವಿಗಳು ನಿರುಪಯೋಗಿಯಾಗಿ ಪರಿಣಮಿಸಿರುವುದೆಂದೂ, ಸಂಬಂಧಪಟ್ಟವರು ಈ ಕಡೆಗೆ ಗಮನ ಹರಿಸಬೇಕೆಂದೂ ಪೊಳಲಿಯಿಂದ ಶ್ರೀ ಎನ್. ಎ. ಶೀನಪ್ಪ ಹೆಗ್ಗಡೆಯವರು ಬರೆಯುತ್ತಾರೆ

ಶ್ರೀಯುತ ಹೆಗ್ಗಡೆಯವರು ಮುಂದುವರಿದು ಗುರುಪುರ ಹೊಳೆಗೆ ಕರ್ಪೆ ಎಂಬಲ್ಲಿ ಅಣೆಕಟ್ಟು ಹಾಕಲು ಮತ್ತು ಸುತ್ತಮುತ್ತಲಿನ ೨೭ ಗ್ರಾಮಗಳಿಗೆ ಉಪಯೋಗಕರವಾಗುವಂತೆ ಕಾಲುವೆ ಕಡಿಸಲು ಮದ್ರಾಸು ರಾಜ್ಯದಲ್ಲಿದ್ದಾಗ ಹಣ ಮಂಜೂರಾಗಿದ್ದರೂ ಕೊನೆಯ ಗಳಿಗೆಯಲ್ಲಿ ಪೂರಾ ಹಣವು ಸಿಗದೆ, ಮಣ್ಣಿನ ಕಟ್ಟವನ್ನು ರಚಿಸಲಾಯಿತೆಂದೂ ಕಾಲುವೆಗಳನ್ನು ಅರ್ಧಂಬರ್ಧ ಕಡಿಸಲಾಯಿತೆಂದೂ, ಇವುಗಳಿಂದ ಜನತೆಗೆ ಯಾವ ಪ್ರಯೋಜನವೂ ದೊರೆಯದೆ, ಹಲವಾರು ಅಪಾಯಗಳೇ ಸಂಭವಿಸಿವೆಯೆಂದೂ ಸಂಬಂಧಪಟ್ಟವರಿಗೆ ಈ ವಿಷಯಗಳಲ್ಲಿ ಅನೇಕಾನೇಕ ವಿನಂತಿಗಳನ್ನು ಸಲ್ಲಿಸಿದ್ದರೂ ಅವೆಲ್ಲವೂ ನಿರರ್ಥಕವಾಗಿವೆಯೆಂದೂ ಈ ಕಡೆಗೆ ಗಮನ ಹರಿಸುವುದು ಆವಶ್ಯವೆಂದೂ ಬರೆಯುತ್ತಾರೆ.

ಉಡುಪಿಯಲ್ಲಿ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಲನ ಮತ್ತು ಪ್ರದರ್ಶನ

ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲದ ೨೩ನೇ ಸಮ್ಮೇಲನವನ್ನು ಇದೇ ಎಪ್ರಿಲ್ ತಾ. ೨೬, ೨೭ ಮತ್ತು ೨೮ ಈ ಮೂರು ದಿನಗಳಲ್ಲಿ, ಉಡುಪಿಯಲ್ಲಿ ಜರಗಿಸುವ ಸಿದ್ಧತೆಗಳಾಗುತಿದ್ದು, ಈ ಸಂದರ್ಭದಲ್ಲಿ ತಾ. ೨೬ರಿಂದ ೩೦ರ ವರೆಗೆ ೫ ದಿನಗಳ ಆಯುರ್ವೇದೀಯ ವಸ್ತು ಪ್ರದರ್ಶನವೊಂದನ್ನೂ ಜರಗಿಸಲಾಗುವುದು.

ಜಿಲ್ಲೆಯ ವೈದ್ಯರಿಗೆ ಇತರರಿಗಿಂತ ಅಧಿಕ ತೊಂದರೆಗಳೂ ಸಮಸ್ಯೆಗಳೂ ಇವೆ. ಅವುಗಳನ್ನು ಸ್ಪಷ್ಟೀಕರಿಸಿ, ಅವುಗಳ ನಿವಾರಣೆಗಾಗಿ ಯತ್ನಿಸಿ, ಇತರ ಬಂಧುಗಳ ಜತೆ ಸೇರಿ ಆಯುರ್ವೇದದ ಅಭಿವೃದ್ಧಿಗಾಗಿ ದುಡಿಯುವುದೂ, ಕೆಲ ತಿಂಗಳ ಹಿಂದೆ ಉಡುಪಿಯಲ್ಲಿ ಆರಂಭಿಸಿದ ಆಯುರ್ವೇದ ಕಾಲೇಜಿನ ಶ್ರೇಯೋಭಿವೃದ್ಧಿಗಾಗಿ ಯೋಚಿಸುವುದೂ ಈ ಸಮ್ಮೇಲನದ ಉದ್ದೇಶವಾಗಿದೆ.

ಆಯುರ್ವೇದ ವಸ್ತು ಪ್ರದರ್ಶನವನ್ನು ಅತ್ಯಂತ ಯಶಸ್ವಿಯಾಗಿ ನಡೆಸುವುದಕ್ಕೆ ಈಗಿಂದೀಗಲೇ ತುಂಬ ಶ್ರಮವಹಿಸಲಾಗುತ್ತಿದೆ. ಮೂಲಿಕಾ ವೈವಿಧ್ಯ, ರಸವಾದ ಇವುಗಳನ್ನು ಜನ ಸಾಮಾನ್ಯರೂ ತಿಳಿವಂತೆ ಪ್ರದರ್ಶಿಸಲಾಗುವುದು. ಒರ್ವ ಸಿದ್ಧ ವೈದ್ಯರು ರಸಚಮತ್ಕಾರಗಳನ್ನು ಶಾಸ್ತ್ರೀಯ ಸಿದ್ಧವಾಗಿ, ಯಾವ ರಹಸ್ಯವೂ ಇಲ್ಲದೆ ಪ್ರದರ್ಶಿಸಲು ಒಪ್ಪಿರುವರು. ಇವರ ಕ್ರಿಯಾ ಪ್ರದರ್ಶನವು ಆಕರ್ಷಣೀಯವಾಗುವುದು, ಇತರ ವಿದ್ವಾಂಸರೂ ಬರಲಿರುವರು. ಈ ಸಂಬಂಧದಲ್ಲಿ ಇಲ್ಲಿಯ ಆಯುರ್ವೇದ ಕಾಲೇಜಿನ ಸಹಾಯವನ್ನೂ ಪಡೆಯಲಾಗುತ್ತಿದೆ.

ಧನ ರೂಪವಾಗಿಯೂ ವಸ್ತುಗಳ ರೂಪದಲ್ಲಿಯೂ ಜನತೆಯಿಂದ ಸಹಾಯವನ್ನಪೇಕ್ಷಿಸಿ, ಕೆಲವರನ್ನು ಕಂಡು, ತಕ್ಕಷ್ಟು ಸಂಗ್ರಹವಾಗಿದೆ; ಶ್ರೀ ಧರ್ಮಸ್ಥಳ ರತ್ನವರ್ಮ ಹೆಗ್ಗಡೆ, ಎಂ.ಎಲ್.ಎ.ಯವರು ರೂ. ೧೦೦೧ನ್ನು ಉದಾರ ಮನಸ್ಸಿನಿಂದ ಕೊಟ್ಟುದು ಹೆಮ್ಮೆಯ ವಿಚಾರ. ಉಡುಪಿಯ ಮಠಾಧಿಪತಿಗಳೂ ತ್ರಿಕರಣ ಪೂರ್ವಕ ಸಹಕರಿಸುತ್ತಿರುವುದು ಈ ಸಮ್ಮೇಲನದ ಯಶಸ್ಸಿಗೆ ತುಂಬ ಬಲ ಕೊಟ್ಟಿದೆ. ಆಯುರ್ವೇದಾಭಿವೃದ್ಧಿಯಲ್ಲಿ ಆಸಕ್ತಿಯುಳ್ಳವರೆಲ್ಲರೂ ರೂ. ೫ರಂತೆ ಶುಲ್ಕ ತೆತ್ತು ಸ್ವಾಗತ ಸಮಿತಿಯ ಸದಸ್ಯರಾಗಬೇಕಾಗಿಯೂ, ಹಾಗೆಯೇ ಧನ-ಧಾನ್ಯಗಳ ಸಹಾಯವೀಯಬೇಕೆಂದೂ ಕಾರ್ಯದರ್ಶಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ವಿನಂತಿಸುತ್ತಾರೆ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ಸಮಾಧಿಯ ಸುರಂಗ—ಲೇಖಕರು: ಶ್ರೀ ವಿ. ಜಿ. ಕೃಷ್ಣಮೂರ್ತಿ, ಬಿ.ಎ. ಪ್ರಕಾಶಕರು: ಗಾಯತ್ರಿ ಪ್ರಕಾಶನ, ಚಾಮುಂಡಿಪುರಂ, ಮೈಸೂರು. ಪುಟಗಳು: ೧೫೫. ಬೆಲೆ: ರೂ. ೧

"ಸಮಾಧಿಯ ಗವಿ"ಯ ಬಳಿ ಶಿಲಾದ್ವಾರದೊಳಗೆ ಅಪಾರ ಸಂಪತ್ತನ್ನು ಹೂಳಿಟ್ಟು ಜೇಮ್ಸ್ ಕಾರ್ಡ್‌ವೆಲ್ಲರು ಅದಕ್ಕೆ ಏಳು ಬೀಗದ ಕೈಗಳನ್ನು ಮಾಡಿ, ಅವುಗಳಲ್ಲಿ ಒಂದೊಂದನ್ನು ಒಬ್ಬೊಬ್ಬ ವಿಶ್ವಸ್ಥನಿಗಿತ್ತು, ಮಡಿದರು. ಅಪ್ರಾಯಸ್ಥ ಹುಡುಗ ಟ್ಯೂನಿಸ್ ಕಾರ್ಡ್‌ವೆಲ್ಲನನ್ನು ವಿಶ್ವಸ್ಥರ ಸಲಹೆಯಂತೆ ಫೆರ್ನಾಂಡೊವು ಬುದ್ಧಿಗೆಡಿಸಿ, ಮತಿಹೀನನನ್ನಾಗಿ ಮಾಡಿದನು. ವಕೀಲ ರೆಮಿಂಗ್‌ಟನ್ ಜೋಸೆಫ್ ಸೇರಿಂಗ್, ಲಡ್‌ವಿಗ್ ಬೆಲ್‌ಮ್ಯಾನ್ ಉರುಫ್ ಬೆಂಡಿ ಅವಗ್ರಾಡೊ, ಫೆರ್ನಾಂಡೊ; ವಾಲ್ಟರ್ ಕಾಬ್ ಮತ್ತು ಬೆಲಿಂಡರು ಸೇರಿ ಈ ಸಂಪತ್ತನ್ನು ಹಸ್ತಗತ ಮಾಡುವ ಮತ್ತು ಸಧ್ಯದ ಆದಾಯವನ್ನು ಹಂಚಿಕೊಳ್ಳುವ ಪ್ರಯತ್ನ ನಡೆಸಿ, ಅದಕ್ಕೆ ಬೇಕಾದ ಹಂಚಿಕೆಗಳನ್ನು ಮಾಡುತ್ತಾರೆ. ಆದರೂ, ಸಿಂಗಲ್‌ಟನ್ ಪತ್ತೇದಾರನ ಸಾಹಸದಿಂದ ಈ ಗುಪ್ತ ಕಾರಸ್ಥಾನವು ಬಯಲಾಗಿ ಅವನು ಏಳು ಬೀಗದ ಕೈಗಳನ್ನೂ ಸಂಗ್ರಹಿಸುತ್ತಾನೆ. ಆರೋಪಿಗಳೆಲ್ಲರೂ ಸೆರೆಯಾಗುತ್ತಾರೆ. ಸಂಪತ್ತು ದೂರದ ಸಂಬಂಧಿ ಮಾರ್ಗರೆಟ್ಟಳಿಗೆ ಹೋಗುತ್ತದೆ. ಮಾರ್ಗರೆಟ್-ಸಿಂಗಲ್ಟನ್ನರ ಪ್ರೇಮಲತೆ ಚಿಗುರುತ್ತದೆ

ಈ ಕಥಾಭಾಗವುಳ್ಳ "ಸಮಾಧಿಯ ಸುರಂಗ"ವು ಒಂದು ಪತ್ತೇದಾರಿ ಕಾದಂಬರಿಯಾಗಿದ್ದು, "ದಿ ಡೋರ್ ವಿದ್ ಸೆವೆನ್ ಲಾಕ್ಸ್" ಎಂಬ ಪುಸ್ತಕದ ಆಧಾರಿತವಾಗಿದೆ. ಆಂಗ್ಲ ಸನ್ನಿವೇಶ ಮತ್ತು ವೈಚಿತ್ರ್ಯಗಳಡಕವಾದ ಈ ಕಾದಂಬರಿಯ ಕಥೆಯನ್ನು ಅರ್ಥಮಾಡಿಕೊಳ್ಳಲು ತುಸು ಪ್ರಯಾಸವೆನಿಸಿದರೂ ಓದು ನಿರರ್ಗಳವಾಗಿ ಸಾಗುತ್ತದೆ. ಏಳು ಬೀಗದ ಕೈಗಳ ರಹಸ್ಯ, ವಿಜ್ಞಾನಿ ಫೆರ್ನಾಂಡೋವಿನ ವಿಚಿತ್ರ ಕಾರ್ಯಕಲಾಪ, ಮಾರ್ಗರೆಟ್, ಬೆಸ್ಸಿಗಳ ಸಾಹಸ ಓದುಗರ ಮನಸ್ಸನ್ನು ಸೆರೆ ಹಿಡಿಯುತ್ತವೆ. ಪತ್ತೇದಾರಿ ಕಾದಂಬರಿಗಳನ್ನು ಬರೆಯುತ್ತಿರುವ ಶ್ರೀ ಕೃಷ್ಣಮೂರ್ತಿಯವರಿಂದ ಇನ್ನೂ ಅನೇಕಾನೇಕ ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದು. ಲೇಖಕರ ಶೈಲಿಯು ಮನಮೋಹಕವಿದೆ; ಕಥೆ ನಿರೂಪಿಸುವಲ್ಲಿ ಸಹಜ ಶಕ್ತಿ ಒಡಮೂಡಿದೆ. ಆರಾಮ ಸಮಯದ ಸದುಪಯೋಗಕ್ಕೆ ಈ ಕಾದಂಬರಿಯ ಓದೂ ನೆರವಾಗಬಹುದು.

ಭಾವಾರ್ಚನೆ—(ಕಾದಂಬರಿ). ಲೇಖಕರು: "ನಚಿಕೇತ". ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ಪುಟಗಳು: ೧೧೫. ಬೆಲೆ: ರೂ. ೧-೨೫.

ಸರ್ವ ರಸಗಳಲ್ಲಿಯೂ ಶೃಂಗಾರ ರಸವೇ ಪ್ರಧಾನವಾದರೂ, ಎಲ್ಲ ಸಾಹಿತ್ಯ ಕೃತಿಗಳಲ್ಲಿಯೂ ಶೃಂಗಾರರಸ ತುಂಬಿ ತೊನೆವಾಡುತ್ತಿರುವುದಾದರೂ ಉಳಿದವುಗಳು ರಸಗಳಲ್ಲವೆಂದಾಗಲೀ 'ಶೃಂಗಾರ'ವು ಸಂಪೂರ್ಣ ವ್ಯಕ್ತವಾಗಿಯೇ ತೋರಬೇಕೆಂಬುದಾಗಲೀ ಆಗ್ರಹವಿರಬಾರದು. 'ಸತ್ಯ' ಪ್ರದರ್ಶನವೆಂದು ಬರೆಯ ಹೊರಟವರು 'ಅಶ್ಲೀಲ ಕೃತಿ' ರಚಿಸಿದ್ದಾರೆಂಬ ಅಪವಾದವನ್ನೂ ಹೊರುವಂತಾಗಿದೆ. 'ಭಾವಾರ್ಚನೆ' ಇದಕ್ಕಿಂತ ತುಸು ವೈವಿಧ್ಯಪೂರ್ಣ ಕಾದಂಬರಿ.

ಊರ ಜಾತ್ರೆಯ ಸಂದರ್ಭದಲ್ಲಿ ಅನಂತ ತನ್ನ ಸ್ನೇಹಿತರೊಡನೆ ಚಕ್ಕಂದವಾಡುತ್ತಿರುವಾಗ, ಅವನಿಗೊಬ್ಬಾಕೆ ತಾಯಿಯು ತನ್ನ ಮಗುವನ್ನು ಹಿಡಿದುಕೊಂಡಿದ್ದುದು ತನ್ನ ಸಮೀಪದಲ್ಲೇ ಗೋಚರವಾಯಿತು. ಆಕೆಯು ಕ್ಷೀರ ಸಮುದ್ರದಿಂದ ಆಗತಾನೆ ಎದ್ದು ಬಂದ ಲಕ್ಷ್ಮಿಗಿಂತಲೂ ಮೋಹಕಳಾಗಿರಬೇಕು; ಕಲಾಗಾರನಾದ ಅನಂತ ಅವಳ ಸೌಂದರ್ಯವನ್ನು ಆಸ್ವಾದಿಸಿದ—ಆದರೆ, ಅರ್ಧದಲ್ಲಿಯೇ ರಸಭಂಗವಾಯಿತು. ಆತ "ಆ ಚಿತ್ರ"ವನ್ನು ಬರೆಯ ತೊಡಗಿದ್ದ ಆದರೆ, ಪೂರ್ಣವಾಗಲಿಲ್ಲ, ಕಲ್ಪನೆ ಮುಂದುವರಿಯಲಿಲ್ಲ. ಮಾಡಿದ ಚಿತ್ರ ಸರಿಬರಲಿಲ್ಲ. ಅದೆಷ್ಟೋ ಬಾರಿ ಹರಿದೂ ಎಸೆದಿದ್ದ. ಅಂತೂ ಸ್ನೇಹಿತ ಕೃಷ್ಣಪ್ಪನ ನೆರವಿನಿಂದ ಆ "ಲಕ್ಷ್ಮಿ"ಯ ಪರಿಚಯ ಬೆಳೆಯ ತೊಡಗಿತು, ವಿಶ್ವಾಸ ಕುಡಿಯಿತು.

ಅನಂತ ಭಯಾನಕ ರೋಗದಿಂದ ನರಳುತಿದ್ದ. ಡಾಕ್ಟರರು ಶ್ರಮ ಹೆಚ್ಚಬಾರದೆಂದು ಎಚ್ಚರಿಸಿದರೂ ಕೇಳನಾತ. ಕೊನೆಗಂತೂ ಅವರ ಚಿಕಿತ್ಸಾಲಯಕ್ಕೇ ಹೋಗಬೇಕಾಯಿತು. ಅಲ್ಲಿ ಲಕ್ಷ್ಮಿಯೂ ತನ್ನ ಪಾಲಿನ ಸೇವೆ ಸಲ್ಲಿಸುತಿದ್ದಳು. ಅನಂತ ಗುಣಮುಖನಾದ. ಹಿಂದಿನ ಆಲಸ್ಯವೂ ಅಶಕ್ತತೆಯೂ ದೂರಸರಿದು ಆತನು ಉಲ್ಲಾಸಭರಿತನಾದ. ಲಕ್ಷ್ಮಿಯ ಹಾಗೂ ಮಗುವಿನ ಚಿತ್ರವನ್ನು ಆಕೆಯ ಸಮ್ಮುಖದಲ್ಲಿಯೇ ಬರೆದು ಮುಗಿಸಿದ. ಕಲಾವಿದನ ಬಯಕೆ ಪೂರ್ಣವಾಯಿತು. ತಾನು ಭಾವದಲ್ಲಿಯೇ ಬಹುಕಾಲದಿಂದ ಅರ್ಚಿಸಿದ್ದ ಮೂರ್ತಿ ಈಗ ಸಿದ್ಧವಾಯಿತು. ಆದರೆ, ಸ್ಫೂರ್ತಿಯ ಸೆಲೆ ಲಕ್ಷ್ಮಿ ಯಾರೋ ಒಬ್ಬ ಮಲೆಯಾಳಿಯೊಡನೆ ಓಡಿಹೋದಳೆಂದು ಅನಂತನಿಗೆ ಆ ಮೇಲೆ ತಿಳಿಯಿತು.

ಅನಂತ, ಕೃಷ್ಣಪ್ಪ, ಲಕ್ಷ್ಮಿ ಮತ್ತು ಕಾಮತರ ಮಗಳು ಯಮುನ—ಈ ಕಾದಂಬರಿಯ ಪ್ರಮುಖ ಪಾತ್ರಗಳು. ಅನಂತನ ಅಕ್ಕನ ಪಾತ್ರವು ಪ್ರೇಮಲವಾಗಿ ರೂಪಿಸಲ್ಪಟ್ಟಿದೆ. ಕೃಷ್ಣಪ್ಪನೊಬ್ಬ ನಿಜ ಸ್ನೇಹಿತ. ಅನಂತನನ್ನು ಸಂತುಷ್ಟನಾಗಿಸಲು ಸತತ ಪರಿಶ್ರಮಪಟ್ಟವ. ಯಮುನ ಒಂದು ರೀತಿಯ ಹುಡುಗಿ. ಆಕೆಗೆ ಚಿತ್ತಸ್ವಾಸ್ಥ್ಯವಿಲ್ಲವೆನ್ನುತ್ತಾರೆ, ತಂದೆ. ಆದರೆ, ನಿಜವಾದ ರೋಗವೇನೋ ಪ್ರಾಯಶಃ ಅವರಿಗೂ ಗೊತ್ತಿರಲಾರದು. ಅನಂತನೊಬ್ಬ ಕಲಾಗಾರ—ಭಾವಜೀವಿ—ಈ ದೃಷ್ಟಿಯಿಂದ ಇವನ ಪಾತ್ರಚಿತ್ರಣ ಸಾಮಾನ್ಯ ಯಶಸ್ವಿಯೇ ಆಗಿದೆ. ಲಕ್ಷ್ಮಿಯು ಸುಂದರಿಯೂ ಹೌದು, ಆದರೊಡನೆ ಪಾಪ ಮಾರ್ಗಗಾಮಿನಿಯೂ ಹೌದು. ಉದ್ಯೋಗಕ್ಕೆ ತಕ್ಕ ಕುಶಲತೆ ಆಕೆಯಲ್ಲಿರುವುದು ಸಹಜವೆ.

ಒಟ್ಟಿನಲ್ಲಿ ಪ್ರಮುಖ ಪಾತ್ರಗಳ ಚಿತ್ರಣ ಅಚ್ಚುಕಟ್ಟಾಗಿ ಬಂದಿವೆ. 'ಶೃಂಗಾರ' ರಸಕ್ಕೆ ಸಂಬಂಧಿಸಿದ ಕಥೆಯಾಗಿರುವುದಾದರೂ, ಉದ್ದೇಶ ಮಾತ್ರ ಬೇರೆ. ಕಲಾಗಾರನೊಬ್ಬನು ರಸವನ್ನು ಅರಸಿ ಹೋಗುವನೇ ಹೊರತು ಕೆಸರನ್ನಲ್ಲ. ಈ ರಸವು ಎಲ್ಲಿಯೇ ಇರಲಿ, ಅದು ಕಲಾವಿದನ ಗಮನವನ್ನಾಕರ್ಷಿಸುವುದೆಂದೂ, ತನ್ನ ಉದ್ದೇಶ ಸಫಲವಾದರೆ ಮಾತ್ರ ಆತ ತೃಪ್ತನಾಗುವನೆಂದೂ ಇಲ್ಲಿ ನಿರೂಪಿತವಾಗಿದೆ. ಅನಂತನು ಆ ಉತ್ಸವದಲ್ಲಿ ಕಂಡಾಕೆಯ ಚಿತ್ರ ಬರೆಯಲು ಪ್ರಯತ್ನಿಸಿದರೂ ಅದು ಅಯಶಸ್ವಿಯಾದುದರಿಂದಲೇ ಅವನು ರೋಗಿಯಾದನೆಂದೂ "ಲಕ್ಷ್ಮಿ"ಯ ಚಿತ್ರ ಬರೆಯಲು ಅವಕಾಶ ದೊರೆವುದೆಂದೂ, ಬರೆಯಬಲ್ಲೆನೆಂದು ತಿಳಿದಾಗ ಗುಣಮುಖನಾದನೆಂದೂ ಬರೆದಾದ ನಂತರ ಉತ್ಸಾಹಿತನೆನಿಸಿದನೆಂದೂ ಗಮನಿಸಿದರೆ, 'ಭಾವಾರ್ಚನೆ'ಯೇ ಆತನ ಜೀವನದ ವಿವಿಧ ಘಟನೆಗಳಿಗೆ ಕಾರಣವೆನ್ನಬಹುದು.

ಲೇಖಕರ ಕಥನ ಶೈಲಿಯಲ್ಲಿ ಸುಧಾರಣೆಯಿದೆ. ಹೇಳುವುದರಲ್ಲೂ ನಾವೀನ್ಯ ತೋರಿಬರುತ್ತದೆ. ಕೆಲವೆಡೆ ಅಶುದ್ಧ ಪದ ಪ್ರಯೋಗವೂ ಇಲ್ಲದಿಲ್ಲ; ಆದರೂ ಭಾಷೆಯು ಸರಳವಿದೆ; ಅಂದವಾಗಿದೆ. ವಿಷಯ ಗ್ರಹಣ ಸಾಮಾನ್ಯರಿಗೆ ತುಸು ತ್ರಾಸದಾಯಕವೆನಿಸಿದರೂ ಕಲಾವಿದನ ಕೊರಗು ಮತ್ತು ಮೆರಗನ್ನು ವಿವರಿಸುವ ಈ ಕಾದಂಬರಿಯನ್ನು ಸಾವಧಾನದಿಂದ ಓದುವಾಗ ತಾನಾಗಿಯೇ ಮನದಟ್ಟಾಗುವುದು. ಓದಿ ಮೆಚ್ಚಬಹುದಾದ ಕೃತಿಯಿದು.

— ಗೋರಾ.

ಇತಿಹಾಸ ಪೃಷ್ಠ

ಅಕಬರನ ಕಾಲದ ಭಾರತ

ಸರ್ವಧರ್ಮಸಮನ್ವಯ, ಮತ್ತು ದರೆ ಗುಣಾವಗುಣಗಳು.

ಜೋಧಬಾಯಿಯು ಕ್ರಿಸ್ತಿಯ ಮನೆಯಲ್ಲೇ ಒಂದು ಗಂಡುಮಗುವನ್ನು (೩೦ನೆಯ ಆಗೋಸ್ತು ೧೫೬೯) ಹೆತ್ತಳು. ಬಾದಷಹನು ಆ ಸಾಧುವಿನ ಹರಕೆಯಿಂದ ಹುಟ್ಟಿದ ಮಗುವಿಗೆ ಸಾಧುವಿನ ಹೆಸರಾದ ಸಲೀಮನೆಂದೇ ನಾಮಕರಣ ಮಾಡಿದನು. ಇವನೇ ಮುಂದೆ ಪ್ರಸಿದ್ಧಿಗೆ ಬಂದು ಜಹಂಗೀರ ಬಾದಷಹನಾದನು. ಅಕಬರನಿಗಿದ್ದ ಮೂರು ಮಂದಿ ಹೆಣ್ಣುಮಕ್ಕಳು ಯಾವಾಗಲೂ ರಾಜಕಾರ್ಯದಲ್ಲಿ ಕೈಹಾಕಲಿಲ್ಲ. ಕ್ರಿ. ಶ. ೧೫೬೯ ರಿಂದ ೧೫೮೫ ವರೆಗೆ ಸಿಕ್ರಿಯೇ ಬಾದಷಹನ ರಾಜಧಾನಿಯಾಗಿತ್ತು

ಫತ್ತೇಪುರದಲ್ಲಿ ಬಾದಷಹನು ಇಬಾದತ್ ಖಾನಾ (ಆರಾಧನಾ ಗೃಹ) ಎಂಬ ಧರ್ಮ ವಿಚಾರದ ಭವ್ಯ ಮಂದಿರವೊಂದನ್ನು ಕಟ್ಟಿಸಿದನು. ಇದರ ಪಡಸಾಲೆಯಲ್ಲಿ ಪ್ರಶಸ್ತವಾಗಿ ಮುನ್ನೂರು ಜನರು ಕುಳಿತುಕೊಳ್ಳುತ್ತಿದ್ದರು. ಈ ವಿಶಾಲ ಮಂದಿರದಲ್ಲಿ ನಾಲ್ಕು ವಿಭಾಗಗಳಿದ್ದುವು. ಇದರ ತೆಂಕಣ ವಿಭಾಗದಲ್ಲಿ ಮೌಲ್ವಿಗಳೂ, ಬಡಗಣ ವಿಭಾಗದಲ್ಲಿ ವಿದ್ವಾಂಸರೂ ಸಾಧು ಮೊದಲಾದಜನರೂ, ಪಡುವಣ ವಿಭಾಗದಲ್ಲಿ ಪೈಗಂಬರನ ವಂಶದವರಾದ ಸಯ್ಯದರೂ ಇರುತ್ತಿದ್ದರು. ಈ ಮೂರು ವರ್ಗದ ಜನರೊಡನೆ ಸಂವಾದ ಮಾಡಲಿಚ್ಛಿಸುವ ಸರದಾರರೂ, ಸರಕಾರೀ ಉದ್ಯೋಗಸ್ಥರೂ ಪ್ರಜೆಗಳೂ ಕೂತುಕೊಳ್ಳಲು ಮೂಡಣ ಭಾಗವನ್ನು ಬಾದಷಹನು ಗೊತ್ತುಮಾಡಿದ್ದನು. ಬಾದಶಹನು ಪ್ರತಿ ಶುಕ್ರವಾರ ರಾತ್ರಿಯಲ್ಲಿಯೂ, ಹಬ್ಬದ ದಿನಗಳ ರಾತ್ರಿಯಲ್ಲಿಯೂ, ಈ ಶಾರದಾಸದನಕ್ಕೆ ಬಂದು ಸ್ವಲ್ಪ ಹೊತ್ತು ವಿದ್ವಾಂಸರು ಮತ್ತು ಸಾಧುಗಳೊಡನೆ ಮಾತಾಡಿ, ಅವರಲ್ಲಿ ಯೋಗ್ಯರಾದವರಿಗೆ ದಾನ ಕೊಟ್ಟು ತನ್ನ ಅರಮನೆಗೆ ಹಿಂದಿರುಗುತ್ತಿದ್ದನು.

ಕ್ರಿ. ಶ. ೧೫೭೮ರಲ್ಲಿ ಪಂಜಾಬಿನ ಬೀಡಾ ಎಂಬ ಹಳ್ಳಿಯ ಪಕ್ಕದ ಅರಣ್ಯದಲ್ಲಿ ಬೇಟೆಯಾಡುತ್ತಿದ್ದಾಗ ಬಾದಷಹನಿಗೆ ದಿವ್ಯ ಶಕ್ತಿಯೊಂದರ ಸಾಕ್ಷಾತ್ಕಾರವಾಯಿತಂತೆ! ಅದರ ಪರಿಣಾಮವಾಗಿ ಅವನು ಫತ್ತೇಪುರ ಸಿಕ್ರಿಗೆ ಬಂದೊಡನೆ ಫಕೀರರಿಗೂ ಸಾಧುಗಳಿಗೂ ಒಂದು ಕೋಟಿ ರೂ. ಗಳನ್ನು ದಾನಮಾಡಿದನು. ಆಗ ಮುಸ್ಲಿಮರಲ್ಲೂ ಹಿಂದುಗಳಂತೆ ದಾನಕ್ಕೊಂದು ಪ್ರಶಸ್ತವಾದ ಸ್ಥಾನವಿತ್ತು; ಸಾಧು ಸಜ್ಜನರ ಪೋಷಣೆಯು ಸಮಸ್ತ ಗೃಹಸ್ಥಾಶ್ರಮಿಗಳ ತಲೆಯಮೇಲಿತ್ತು.

ಬಾದಷಹನು ತನ್ನ ತಲೆಯ ಕೂದಲನ್ನು ತೆಗೆದಿದ್ದನು. ಇದರಿಂದ ಎಷ್ಟೋ ಮಂದಿ ಸರದಾರರೂ ಅತನ ಅನುಕರಣವನ್ನೇ ಮಾಡಿದರು ಈ ಸಮಯದಲ್ಲೇ ಬಾದಷಹನು ಗೋವೆಗೆ ಕಳುಹಿಸಿದ ಅಧಿಕಾರಿಯು ಯುರೋಪದಲ್ಲೇ ಆದ ಅಪರೂಪದ ಒಡವೆ ವಸ್ತುಗಳನ್ನೂ ಬಟ್ಟೆಗಳನ್ನೂ ಹಿಡಿದುಕೊಂಡು ಬಂದು ಅರ್ಪಿಸಿದನು. ಇವುಗಳನ್ನು ಕಂಡು ಬಾದಷಹನಿಗೆ ಸಂತೋಷವಾಯಿತು. ದಿನಹೋದಂತೆ ಅವನಿಗೆ ರಾಜ್ಯ ತೃಷ್ಣೆಯು ತಗ್ಗಿತು; ಧರ್ಮತತ್ವಜಿಜ್ಞಾಸಾ ಸಕ್ತಿಯು ಹೆಚ್ಚಿತು. ಅವನು ಕ್ರಿ. ಶ. ೧೫೭೮ ರಿಂದ ೧೫೮೦ರ ವರೆಗೆ ಮೂರು ವರ್ಷ ಧಾರ್ಮಿಕ ವಿಚಾರದಲ್ಲೇ ಹೆಚ್ಚಿನ ವೇಳೆಯನ್ನು ಕಳೆಯುತ್ತಿದ್ದನು. ಆ ಕಾಲದಲ್ಲಿ ಮುಸಲ್ಮಾನರಲ್ಲಿ ಸಿಯಾ, ಸುನ್ನಿ, ಸೂಫಿ ಪಂಥದವರು ಕುರಾಣದ ಅರ್ಥವನ್ನು ಭಿನ್ನ ಭಿನ್ನವಾಗಿ ಮಾಡತೊಡಗಿದುದರಿಂದ, ಬಾದಷಹನಿಗೆ ಮಹಮ್ಮದೀಯ ಧರ್ಮದಲ್ಲೇ ಶ್ರದ್ಧೆ ಕಡಿಮೆಯಾಯಿತು. ಅವನಿಗೆ ನಿಜವಾದ ಧರ್ಮತತ್ವವನ್ನು ತಿಳಿಯುವ ಆಸಕ್ತಿ ಹೆಚ್ಚಿ ಪಾರ್ಸಿ (ಜರೋಷ್ಟ್ರಿಯ) ಧರ್ಮಜ್ಞನಾದ ದಸ್ತೂರ ಮೆಹರಾಜಿ ರಾಣಾ ಎಂಬವನನ್ನು ಸೂರತ್ ಜಿಲ್ಲೆಯ ನವಸರಿ ಎಂಬ ಊರಿನಿಂದ ಕರೆಸಿಕೊಂಡನು. ಈ ದಸ್ತೂರನು ಅಕಬರನೊಡನೆ ಒಂದು ವರ್ಷವಿದ್ದು ತನ್ನ ಧರ್ಮವನ್ನು ಅವನಿಗೆ ಬೋಧಿಸಿ ಮರಳಿ (೧೫೭೯) ತನ್ನ ಊರಿಗೇ ಹೋದನು. ಅವನ ಉಪದೇಶದಿಂದ ಸಂತುಷ್ಟನಾದ ಬಾದಶಹನು ಅರಮನೆಯಲ್ಲಿ ಅಗ್ನಿಯನ್ನಿಡಿಸಿದ್ದನು. ಅವನು ತುಂಬಿದ ಸಭೆಯಲ್ಲೂ ಸೂರ್ಯನಾರಾಯಣನಿಗೂ, ಅಗ್ನಿ ದೇವನಿಗೂ ವಂದಿಸುತ್ತಿದ್ದನು. ಈ ದಸ್ತೂರನಿಗೆ ಬಾದಷಹನು ೩೦ ಕೂರಿಗೆ (೧೨೦ ಎಕರೆ) ಭೂಮಿಯನ್ನು ಇನಾಮಾಗಿ (೧೫೮೦) ಕೊಟ್ಟನು

ಬಾದಷಹನು ತಾನೇ ಧರ್ಮದ ಮುಖ್ಯಸ್ಥನೆಂದು ತಿಳಿಸುವುದಕ್ಕಾಗಿ ಮುಲ್ಲಾನನ್ನು ಬಿಡಿಸಿ ಸ್ವತಃ ಪ್ರಾರ್ಥನೆಯನ್ನು ಪ್ರತಿ ಶುಕ್ರವಾರ ಮಾಡಲಾರಂಭಿಸಿದನು. ಇದರಿಂದ ಮುಸ್ಲಿಂ ಧರ್ಮಾಭಿಮಾನಿಗಳು ಸಿಟ್ಟಿನಿಂದ ಕುದಿಯತೊಡಗಿದರು. ಆದರೆ ಆಗ ಅವರೆಲ್ಲಾ ಒಕ್ಕಟ್ಟಾದರೂ ಬಾದಷಹನನ್ನು ಏನೂ ಮಾಡುವಂತಿರಲಿಲ್ಲ. ಅವನಿಗೆ ರಜಪೂತ ವೀರರ ಬೆಂಬಲ ತುಂಬಾ ಇತ್ತು. ಅದೇ ವರ್ಷ ಕ್ರೈಸ್ತ ಮತದ ತತ್ವವನ್ನು ತಿಳಿಯಬೇಕೆಂದು ಗೋವೆಯಿಂದ ರಿತೊಬೊ ಅಕ್ವೇವಿಯಾ ಎಂಬ ಕ್ರೈಸ್ತ ವಿದ್ವಾಂಸನನ್ನು ಫತ್ತೇಪುರಕ್ಕೆ ಕರೆಸಿಕೊಂಡು ಆ ಮತದ ತತ್ವವನ್ನೂ ತಿಳಿದುಕೊಂಡನು. ಅವನು ತುಂಬಿದ ದರ್ಬಾರಿನಲ್ಲಿ ಕ್ರೈಸ್ತ ಧರ್ಮ ಗ್ರಂಥವಾದ ಬಾಯಿಬಲ್ಲನ್ನು ತನ್ನ ತಲೆಯ ಮೇಲಿಟ್ಟುಕೊಂಡನು. ಇದಲ್ಲದೆ ದರ್ಬಾರಿನ ಚಿತ್ರಗಾರರಿಗೆ ಯೇಸುಕ್ರಿಸ್ತ ಮತ್ತು ಮೇರಿ ಇವರ ಚಿತ್ರವನ್ನು ಬಿಡಿಸುವಂತೆ ಅಪ್ಪಣೆ ಮಾಡಿದನು. ಆಗ ಮುಸ್ಲಿಮರಿಗೆ ಕುರಾಣದಲ್ಲಿ ಸಂದೇಹ ಬಂದಾಗ ಅವನ ತೀರ್ಮಾನವೇ ಕೊನೆಯ ನಿರ್ಣಯವಾಗಿತ್ತು.

ಅಕಬರನ ಕಾಲದಲ್ಲಿ ರಜಪೂತರು ಒಂದು ಪ್ರಮುಖವಾದ ಜನಾಂಗವಾಗಿದ್ದರು. ಸಮಗ್ರ ಭಾರತದಲ್ಲೇ ಅವರಂತಹ ಕ್ಷಾತ್ರ ಜೀವನ ನಡೆಯುತ್ತಿದ್ದವರು ಅಪರೂಪವಾಗಿದ್ದರು. ಅವರಲ್ಲಿ ಸೂರ್ಯ, ಚಂದ್ರ ಮತ್ತು ಅಗ್ನಿ ವಂಶಗಳೆಂದು ಮೂರು ವಿಧವಿತ್ತು. ಸೂರ್ಯ ವಂಶದಲ್ಲಿ ಗುಹಿಲೋಟ್. ರಾಠೋರ ಮತ್ತು ಕಚ್ಛವಾಹೆ ಅಥವಾ ಕೂಶ್ವಾಹೆ ಶಾಖೆಗಳು ಮುಖ್ಯವಾಗಿದ್ದವು. ಶ್ರೀ ರಾಮಚಂದ್ರನ ಮಗ ಲವನ ವಂಶದವರು ಗುಹಿಲೋಟರೆಂದೂ, ಕುಶನ ವಂಶದವರು ರಾಠೋರ ಕಚ್ಛವಾಹನರೆಂದೂ ಆಗ ಪ್ರಚಾರದಲ್ಲಿತ್ತು. ಸೂರ್ಯ ವಂಶದಲ್ಲಿ ಗುಹಿಲೋಟ ವಂಶವೇ ಪ್ರಧಾನವಾಗಿತ್ತು. ಇದರ ಇಪ್ಪತ್ತನಾಲ್ಕು ಒಳಭೇದಗಳಲ್ಲಿ ಶಿಶೋದಿಯ ಮನೆತನವು ಪ್ರಾಮುಖ್ಯವಾಗಿತ್ತು. ಮೇವಾಡದ ಮಹಾರಾಣರು ಈ ಶಿಶೋದಿಯಾ ಮನೆತನದವರು. ಆಗ ಕನೋಜ ಮತ್ತು ಜೋಧಪುರದಲ್ಲಿ ರಾಠೋರರೂ, ಜಯಪುರ ಅಥವಾ ಅಂಬರದಲ್ಲಿ ಕಚ್ಛವಾಹ ಕುಲದವರೂ ಇದ್ದರು. ಆಗ ಚಂದ್ರವಂಶದಲ್ಲಿ ಭಟ್ಟಿ, ತೋಮರ ಮೊದಲಾದ ಶಾಖೆಗಳಿದ್ದವು. ಅಗ್ನಿ ವಂಶದಲ್ಲಿ ಪ್ರಮಾರ, ಪರಿಹಾರ, ಚಾಲುಕ್ಯ ಮತ್ತು ಚೌಹಾಣಗಳೆಂಬ ನಾಲ್ಕು ಮುಖ್ಯ ಶಾಖೆಗಳಿದ್ದವು. ರಜಪೂತರಲ್ಲಿ ಹಲವರು ಕಪ್ಪು ಬಣ್ಣದವರಾಗಿದ್ದರೂ ಗೌರವರ್ಣದವರೂ ಇದ್ದರು. ಕಪ್ಪು ಕೂದಲೂ ವಿಸ್ತಾರವಾದ ಎದೆಯೂ, ವಿಶಾಲವಾದ ಕಣ್ಣುಗಳೂ ರಜಪೂತರ ವೈಶಿಷ್ಟ್ಯಗಳಾಗಿದ್ದವು ರಜಪೂತರ ನೀತಿಶಾಸ್ತ್ರದಲ್ಲಿ ಗುಣಚೋರ (ಕೃತಘ್ನ) ಮತ್ತು ಸತ್‌ಚೋರ (ವಿಶ್ವಾಸಘಾತಕಿ)ರಂತಹ ಪಾತಕಿಗಳು ಬೇರೆ ಯಾರೂ ಇಲ್ಲವೆಂದಿತ್ತು. ಅಂದಿನ ರಜಪೂತರಿಗೆ ಇದರಲ್ಲಿ ತುಂಬಾ ವಿಶ್ವಾಸವಿತ್ತು. ಅತಿಥಿ ಸೇವೆಯೂ, ಆಶ್ರಿತ ಪಾಲನವೂ—ಇವು ಅವರ ಮುಖ್ಯ ಧರ್ಮವಾಗಿತ್ತು. ಪ್ರತಿ ವರುಷ ವಸಂತಾಗಮನದ ಪ್ರಾರಂಭದಲ್ಲಿ ರಾಜಸ್ಥಾನದಲ್ಲಿ ಅಹೇರಿಯಾ ಎಂಬ ಉತ್ಸವನ್ನು ರಜಪೂತರು ಮಹಾವೈಭವದಿಂದ ಜರಗಿಸುತ್ತಿದ್ದರು. ಆ ದಿನದ ಬೇಟೆಯ ಪರಿಣಾಮದಿಂದಲೇ ಆ ವರ್ಷ ತಮ್ಮ ದೇಶದ ಶುಭಾಶುಭಗಳನ್ನು ಗೊತ್ತುಮಾಡುತ್ತಿದ್ದರು. ಆಗ ರಜಪೂತರಲ್ಲಿ ವೀರಧರ್ಮವು ಪ್ರಚೋದನೆಯಾಗವುದಕ್ಕಾಗಿ ಪೂರ್ವದ ವೀರರ ಕೀರ್ತಿಯನ್ನು ಹೊಗಳುತ್ತಾ ಮನೆಮನೆಗೆ ಅಡ್ಡಾಡುವವರನ್ನು ಚಾರಣರೆನ್ನುತ್ತಿದ್ದರು. ಶತ್ರುಗಳು ದಂಡೆತ್ತಿ ಬಂದಾಗ– ಯುದ್ಧವು ವ್ಯಾಪಿಸಿದಾಗ ಈ ಚಾರಣರ ವೀರರಸದ ಪದ್ಯಗಳು ರಜಪೂತರನ್ನು ಉತ್ಸಾಹಗೊಳಿಸುತ್ತಿದ್ದವು. ರಾಜಸ್ಥಾನದ ಆಬಾಲವೃದ್ಧ ವನಿತೆಯರೆಲ್ಲಾ ಈ ಚಾರಣರನ್ನು ಪ್ರೀತಿಸುತ್ತಿದ್ದರು.

ಅಕಬರನ ಕಾಲದಲ್ಲಿ ತೋಫುಗಳು ಅತಿ ವಿರಳವಾಗಿದ್ದವು ಅವನು ಚಿತೋಡವನ್ನು ಜಯಿಸುವಾಗ ಉಪಯೋಗಿಸಿದ ತೋಫಿಗೆ ಅರ್ಧ ಮಣಗುಂಡುಗಳು ಹಿಡಿ

(೧೩ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ 10,000/- ಮತ್ತು ಮೇಲಣ
ಹಣಕ್ಕೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಲೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ದೂಮಪಾನದ ಸಹಜವಾದ
ಆನಂದಕ್ಕಾಗಿ
ಸೇದಿರಿ
ಎಸ್. ಆರ್
ಬೀಡಿಗಳನ್ನು
SR
REGD.
ಎಲ್ಲಾ ಕಡೆಗಳಲ್ಲಿಯೂ
ದೊರಕುತ್ತವೆ
S.R. BEEDI WORKS
UDIPI S.K.

NAVAYUGA WEEKLY is in the list of periodicals and Newspapers approved for use in Secondary Schools as per proceedings Roc· No 466 N/50 date 2-12-1950 of the Director of public Instruction, Madras·

ಕಥಾ ವಿಹಾರ

(೩ನೇ ಪುಟದಿಂದ)

ಭಕ್ತಿಯನ್ನು ಪ್ರದರ್ಶಿಸಿ ಗಗನ ಪಾದರಕ್ಷೆಯಿಂದ ಹತರಾದರೂ ಮೋಕ್ಷವನ್ನು ದಯಪಾಲಿಸುವಂತೆ ಅತೀವ ನಮ್ರರಾಗಿ ಬೇಡಿಕೊಂಡರು. ತಾವು ಇದುವರೆಗೆ ಮಾಡಿದ ಅಪರಾಧಗಳು, ಕಳ್ಳತನ, ಸುಲಿಗೆಗಳನ್ನೂ ಹೇಳಿದ ಸುಳ್ಳುಗಳನ್ನೂ ದೇವರ ಪ್ರತಿನಿಧಿಗಳ ಮುಂದೆ ಚಾಚೂ ತಪ್ಪದೆ ತಮ್ಮ ಅಪರಾಧ ಸರ್ವಸ್ವವನ್ನೂ ಕ್ಷಮಿಸಿ ಬಿಡುವಂತೆ ತಪ್ಪು ಕಾಣಿಕೆ ತೆತ್ತರು. ಪಾಪಗಳನ್ನು ಹೇಳಿ ಕೊಂಡರು.

ಭಾರತದಲ್ಲಿಯಂತೂ ಹೇಳುವುದೇ ಬೇಡ. ಗಂಗಾ ಕಾವೇರೀ ನದಿಗಳಲ್ಲಿ ನೀರು ನಾಲ್ಕು ಅಡಿ ಮೇಲೇರಿತು. ಅಳ ತಾಸೂ ಮುಳುಗಿ ಸ್ನಾನ ಮಾಡುತಿದ್ದವರ ಸಂಖ್ಯೆಯೇ ಅಗಣಿತವಿರುವಾಗ, ಮಿಂದು ಪಾಪ ಪರಿಹಾರ ಮಾಡಿಕೊಂಡವರನ್ನು ಯಾರು ಲೆಕ್ಕ ಹಾಕಬೇಕು? ಕಾಶಿ-ಗೋಕರ್ಣಗಳಲ್ಲಿಯೋ ತಮಗೆ ತಾವೇ ಪಿಂಡ ಹಾಕಿಕೊಳ್ಳಲು ಜನರ ಸಂದಣಿ ನುಗ್ಗ ತೊಡಗಿತು. ಗೋದಾನಾದಿಗಳು ನಡೆದುವು. ಅನ್ನದಾನ, ವಸ್ತ್ರದಾನ ಪಡಕೊಳ್ಳುವವರೇ ಇಲ್ಲದಂತಾಯಿತು. ಎಲ್ಲೆಲ್ಲಿಯೂ ಉಪದೇಶ, ಹರಿಕಥೆ, ಭಾಗವತ, ಭಾರತ, ರಾಮಾಯಣ ಪಠನಗಳು. ಕುರಾನ್, ಬೈಬಲ್ ಗೀತೆಗಳ ಘೋಷ! ಪ್ರಪಂಚದ ಎಲ್ಲ ಪ್ರಜೆಗಳೂ ಅನನ್ಯ ಮನಸ್ಕರಾಗಿ ತಮ್ಮೆಲ್ಲರ ಕೊನೆಯ ಗಳಿಗೆಯನ್ನು ಇದಿರು ನೋಡುತ್ತ, ಮೋಕ್ಷಗಾಮಿಗಳಾಗುವ ಸದುದ್ದೇಶದಿಂದ ಗಗನ ಪಾದರಕ್ಷೆಯ ಹೆದರಿಕೆಯಿಂದ ಕೂಡಿದವರಾಗಿದ್ದರು.

"ಮಾನವಜನ್ಮ ದೊಡ್ಡದು. ಆದುದರಿಂದ, ಬದುಕಲಿರುವ ಕೆಲವೇ ದಿನವಾದರೂ ಸಹೋದರತೆಯಿಂದ ಬಾಳಿರಿ; ಪರೋಪಕಾರವನ್ನು ಮಾಡಿರಿ" ಎಂಬ ಭಿತ್ತಿಪತ್ರಗಳು ಎಲ್ಲೆಲ್ಲಿಯೂ ಕಾಣಿಸಿಕೊಂಡವು ಜಗತ್ತಿನ ಎಲ್ಲ ಭಾಷೆಗಳ ಲಿಪಿಯಲ್ಲಿಯೂ ಇವು ಪ್ರಕಾಶಿತಗೊಂಡಿದ್ದುವು "ಆರಾಮ್ ಹರಾಮ್ ಹೈ" ಇನ್ನು ಮುಂದಾದರೂ ದೇಶಕ್ಕಾಗಿ ದುಡಿಯಿರಿ ಎಂದರು ರಾಷ್ಟ್ರನಾಯಕರು. ಪ್ರಳಯಕಾಲ ಸಮೀಪಿಸುತ್ತ ಬರುತ್ತಿರುವುದರಿಂದ ದೇಶ ದೇಶಗಳ ಎಲ್ಲ ವ್ಯವಹಾರಗಳನ್ನೂ ತೀವ್ರವಾಗಿ ಮುಗಿಸಿಕೊಳ್ಳಬೇಕೆಂದು ಸರಕಾರಗಳ ನಡುವೆ ತಂತಿಗಳು ರವಾನಿಸಲ್ಪಡತೊಡಗಿದುವು. ಅಂಚೆ ತಂತಿ ಕಛೇರಿಗಳು ಗ್ರಾಹಕರಿಂದ ತುಂಬಿಹೋಯಿವು. ಬಟವಾಡೆ ಮಾಡಲು ಜನ ಸಾಲದಾಯಿತು.

ಎಲ್ಲೆಲ್ಲಿಯೂ ನಾನಾ ಬಗೆಯಾಗಿ ದೈವಲೀಲೆಯನ್ನು ವಿವರಿಸುವ ದೇವರ ಸ್ತೋತ್ರಗಳೂ ಜಯಕಾರವೂ ತುಂಬಿ ತುಳುಕಾಡುತಿದ್ದುವು. ಎಲ್ಲರೂ ತಮ್ಮ ಮೇಲೆ "ಗಗನ ಚಪ್ಪಲಿ"ಯು ಬಿದ್ದು ಗರಂಥಾಮವಾಗುವ ಸುದಿನವನ್ನೇ ಇದಿರು ನೋಡುತಿದ್ದರು.

ನಿಶ್ಚಿತ ದಿನಕ್ಕೆ ಇನ್ನು ಒಂದು ವಾರಗಳ ಕಾಲ ಉಳಿದಿದೆ. ಜನತೆ ಉತ್ಸಾಹ ಕ್ಷೋಭೆಗಳಿಂದ ತೃಪ್ತಿ ಅತೃಪ್ತಿ ಸುಖ, ದುಃಖಗಳಲ್ಲಿ ಮುಳುಗಿದ್ದು ಜಯಕಾರ ಹಾಹಾಕಾರಗಳನ್ನು ಮಾಡ ತೊಡಗಿತ್ತು. ಮೊದಲಿದ್ದ ಉತ್ಸಾಹ ಅವರಲ್ಲಿ ಇಂದಿರಲಿಲ್ಲ. ಇಷ್ಟು ಬೇಗ ಪ್ರಳಯವಾಗುವುದನ್ನೂ ಅವರು ಮನಸ್ಸೇ ಒಪ್ಪಲಿಲ್ಲ. ಆದರೆ, ಆಕಾಶವುದುರುವಾಗ, ಕೊಡೆ ರಕ್ಷಿಸದು ಎಂಬಂತೆ, ಅವರೆಲ್ಲರೂ ನಿಸ್ಸಹಾಯರಾಗಿದ್ದರು.

ಎಲ್ಲ ವೇಧಶಾಲೆಗಳಲ್ಲಿಯೂ ಈ ಬಗ್ಗೆ ವರದಿ ಪ್ರಕಟವಾಗುತಿತ್ತು. ರಶ್ಯನ್ ವರದಿಯಲ್ಲಿ ಈ ಗಗನ ಪಾದರಕ್ಷೆಯ ವೇಗ ವೀಗ ಕುಂಟುತ್ತ ನಡೆದಿದೆಯೆಂದು ಸೂಚಿಸಲಾಗಿತ್ತು. ಭಾರತದ ಸುವಿಖ್ಯಾತ ಜ್ಯೋತಿರ್ವಿದ್ಯಾ ಪಾರಂಗತರೊಬ್ಬರು. ಭೂಮಿಯ ಜನ್ಮ ಗ್ರಹಸ್ಫುಟದ ಬಲದಿಂದ, ಭೂಮಿಯ ಆಯುಷ್ಯ ಇನ್ನೂ ಇರುವುದೆಂದೂ, ಆದುದರಿಂದ ಅದು ಭೂಮಿಯ ಮೇಲೆ ಉರುಳಲಾರದೆಂದೂ ಖಡಾಖಂಡಿತವಾಗಿ ಪ್ರಮಾಣಬದ್ಧವಾಗಿ ಸಾಧಿಸಿದರು. ಅಮೆರಿಕದ ವೇಧಶಾಲೆಯು ಗಗನಪಾದರಕ್ಷೆಯು ಭೂಮಿಯ ಗುರುತ್ವಾಕರ್ಷಣ ಶಕ್ತಿಗಿಂತಲೂ ಅತ್ಯಧಿಕ ಶಕ್ತಿಯ ಪ್ರಭಾವದಿಂದ ತನ್ನ ಪಥವನ್ನು ಬದಲಾಯಿಸುವ ಪೂರ್ವಸೂಚನೆಗಳು ತೋರಿಬರುತ್ತವೆ ಎಂದು ವರದಿ ಮಾಡಿತು.

ಒಮ್ಮೆ ತಮ್ಮ ಪ್ರಾಣವನ್ನು ತೊರೆಯಲು ನಿರ್ವಾಹವಿಲ್ಲದೆ ಒಪ್ಪಿ ಸನ್ನದ್ಧರಾಗಿದ್ದವರೆಲ್ಲರೂ ಮತ್ತೆ ಬದುಕುವ ಅವಕಾಶ ಒದಗೀತೆಂದು ಹಾರೈಸಿದರು. ಆದರೆ, ಲಂಡನ್ ವೇಧಶಾಲೆಯು ಭೂಮಿಯ ಕಡೆಗೆ ಬೀಳುತ್ತಿರುವ ಗಗನ ಪಾದರಕ್ಷೆಯ ವೇಗವೀಗ ದ್ವಿಮಡಿಯಾಗಿದೆಯೆಂದೂ ಆದುದರಿಂದ ಇನ್ನು ಮೂರು ದಿನಗಳೊಳಗೆ ಅದು ಭೂಮಿಯ ಮೇಲೆ ಬೀಳುವುದು ನಿಶ್ಚಯವೆಂದೂ ಹೇಳಿದುದನ್ನು ಕಂಡು ಎಲ್ಲರೂ ಬೆದರಿದರು.

ನಿಶ್ಚಿತ ದಿನ ಬಂತು. ಅಂದೂ ಆಕಾಶದಲ್ಲಿ ಗಗನ ಪಾದರಕ್ಷೆ ತೋರಿಬರುತಿತ್ತು. ಭೂಮಿಯ ಮೇಲೆ ಮಾತ್ರ ಬೀಳಲಿಲ್ಲ. ಜನರು ಆಶ್ಚರ್ಯ ಉಲ್ಲಾಸಗಳಿಂದ ಹೊಸ ವರದಿಗಳಿಗಾಗಿ ಕಾಯತೊಡಗಿದರು. ನಾಲ್ಕು ದಿನಗಳ ತರುವಾಯ ವರ್ತಮಾನಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳಲ್ಲಿ ಒಂದು ವಾರ್ತೆ ಪ್ರಕಟವಾಯಿತು".

"ಗಗನ ಪಾದರಕ್ಷೆಯ ಪಥ ಪರಿವರ್ತನೆ! ಭೂಮಿಯು ಗಂಡಾಂತರದಿಂದ ಪಾರಾಯಿತು. ಸೋವಿಯತ್, ಬ್ರಿಟಿಷ್ ಮತ್ತು ಅಮೆರಿಕನ್ ವೇಧ ಶಾಲೆಯ ಪ್ರಧಾನರ ಜಂಟಿ ಹೇಳಿಕೆ".

ಕಾತರಪೂರ್ಣ ಜನತೆ ದೀರ್ಘವಾದ ನಿಟ್ಟುಸುರೊಂದನ್ನು ಬಿಟ್ಟು ಹಾಯೆಂದುಕೊಂಡಿತು. ಮರುದಿನದಿಂದ ಎಲ್ಲರೂ ತಂತಮ್ಮ ಉದ್ಯೋಗಗಳಿಗೆ ನಿಶ್ಚಿಂತರಾಗಿ ತೆರಳಿದರು.

ರಾಮಮೋಹನನೊಡನೆ ಅತನ ಪತ್ನಿ ಕೇಳಿದಳು—"ಅಲ್ಲ, ನೀವೊಬ್ಬ ಪ್ರಸಿದ್ಧ ಜ್ಯೋತಿಷಿಯಂತೆ ಲೋಕಕ್ಕೆ ಅನಿಷ್ಟಸೂಚಕವಾಗಿಯೇ ಈ ಗಗನ ಪಾದರಕ್ಷೆ ಕಾಣಿಸಿಕೊಳ್ಳುತ್ತಿದೆ ಎಂದಿರಲ್ಲಾ?"

"ಹೌದು"

"ಈಗ ಕೆಲದಿನಗಳಿಂದ ಕಾಣಿಸಿಕೊಂಡ ಈ ಗ್ರಹದಿಂದ ಏನಾಯಿತು? ಇಲ್ಲದ ಕಥೆಗಳನ್ನು ಕಟ್ಟಿ, ವಿಜ್ಞಾನಿಗಳೂ, ಜ್ಯೋತಿಷಿಗಳೂ ಹಾರಾಡಿದರಷ್ಟೆ? ಅನಿಷ್ಟವೆಲ್ಲಿ ಬಂತು?"

"ಅಯ್ಯೋ ಪೆದ್ದಿ, ಯಾವುದು ಸುಳ್ಳಾದರೂ ಜ್ಯೋತಿಷ ಸುಳ್ಳಾಗದೆಂಬುದು ನಿನಗಿನ್ನೂ ಗೊತ್ತಾಗಲಿಲ್ಲವೆ?"

"ಈಗ ಅದೂ ಸುಳ್ಳಾಗಿಹೋಯಿತಲ್ಲ; ನಿಮ್ಮಂತಹ ಸುಪ್ರಸಿದ್ಧ ಜ್ಯೋತಿಷಿಗಳಿಂದ!"

"ನಿನಗಿನ್ನೂ ಗೊತ್ತಾಗಿಲ್ಲ ನೋಡು, ಈ ಗಗನ ಪಾದರಕ್ಷೆಯಿಂದ ಲೋಕಕ್ಕೆ ಹಾನಿಯೊದಗಲಿಲ್ಲವೆ?"

"ಎಲ್ಲಿ, ಎಲ್ಲಾ ಸುಳ್ಳಾಗಿ ಹೋಯಿತಲ್ಲಾ!"

"ನೋಡು, ನೀನೇ ಎಷ್ಟು ಹೆದರಿದ್ದೆ?"

"ಹೆದರಿದ್ದೇನೋ ಹೌದು; ಆದರೆ ಈಗ......"

"ಅದೇ ನೋಡು, ಲೋಕದಲ್ಲಿರುವ ಎಲ್ಲ ಜನರೂ ಆರು ತಿಂಗಳುಗಳ ಕಾಲ ಮರಣ ಭಯದಿಂದ ಥರಥರ ನಡುಗುವುದಕ್ಕಿಂತಲೂ ಹೆಚ್ಚಿನ ಅನಿಷ್ಟ ಬೇರೇನಿದೆ?"

ಪತ್ನಿಯು ಬಾಯಿ ಮುಚ್ಚಿಸಿ ರಾಮಮೋಹನ ಗೆದ್ದವನಂತೆ ತೋರಿಸಿಕೊಂಡ.

(ಹಿಂದಿ ಕಥೆಯೊಂದರ ಆಧಾರದಿಂದ)

— ಗೋರಾ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. S. No 282/58.
ಕೇಶವ ಹೆಬ್ಬಾರ—ವಾದಿ.
ಮಹಾದೇವ ಭಟ್ಟ ಕೂಡಾ—ಪ್ರತಿವಾದಿರು.

2ನೇ ಪ್ರತಿವಾದಿ ಗಣಪತಿ ಅನಂತ ಖಾರೆ-ಖಾರೆ ಅನಂತ ಭಟ್ರಮಗ-ಗೋಕರ್ಣ ಕ್ಷೇತ್ರ-ಉತ್ತರ ಕನ್ನಡ ಜಿಲ್ಲೆ-Post Gokarna ಇವರಿಗೆ_

ವಾದಿಯು ನಷ್ಟದ ಬಗ್ಗೆ ದಾವಾ ಮಾಡಿದ ಮೇಲ್ತೋರಿರುವ ವ್ಯಾಜ್ಯವು ತಾ31-3-59ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವದ್ರಿಂದ ಆ ದಿನ್ನ ಬೆಳಿಗ್ಗೆ 11 ಘಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಈ ಕೋರ್ಟಿನ ಮುಂದೆ ಹಾಜರಾಗಿ ಉದಸರಿಸದಿದ್ದರೆ ನಿಮ್ಮನ್ನು [illegible] ಮಾಡಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವದು. —

(By order of the Court.)
Sripati Rao B.
Advocate for plaintiff.
ಪುತ್ತೂರು 9-3-59.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ
ಮನೆ ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

The Moolky Bank Ltd.,
Mulki
NOTICE

It is reported that Share Certificate numbering 773 & 774 Standing in the name of U Vasudeva Janardhan & Bros, Udipi, in the Books of the Bank, are lost and Sri. U. Krishna Kini, Asst. Senior Officer, Life Insurance Corporation of India, Udipi, has applied for the issue of duplicate Share Certificates.

Duplicate Share Certificates will be issued unless objection, if, any, is filed by 31—3—1959.

(Sd.) M. R. H. Punja,
Manager.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಪಿತಾಳೆ. ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಇತಿಹಾಸ ಪೃಷ್ಠ

(೧೦ನೇ ಪುಟದಿಂದ)

ಯುತ್ತಿದ್ದುವು. ಆಗ ಬಂದೂಕು ಪ್ರಚಾರದಲ್ಲಿತ್ತು. ಅಕಬರನು ಚಿತೋಡದ ಸೇನಾಪತಿ ಜಯಮಲ್ಲನನ್ನು ಬಂದೂಕಿನಿಂದ ಹೊಡೆದು ಕೊಂದನು.

ಬಾದಷಹನು ಅನೇಕ ಸಮಯ ಪಾರ್ಸೀ ಧರ್ಮವನ್ನವಲಂಬಿಸಿ ಸೂರ್ಯಾಗ್ನಿಗಳ ಉಪಾಸನೆ ನಡೆಸುತ್ತಿದ್ದನು. ಆಗ ಪ್ರತಿವರ್ಷ ಸೂರ್ಯನು ಮೇಷ ರಾಶಿಯನ್ನು ಪ್ರವೇಶ ಮಾಡಿದ ದಿನವೇ ಇರಾಣಿ ಯುಗಾದಿ. ಅಕಬರನು ಇದೇ ದಿನದಿಂದ ವರ್ಷಾರಂಭ ಮಾಡುತ್ತಿದ್ದನು. ಈ ದಿವಸದಿಂದ ಕೆಲವು ದಿನಗಳ ವರೆಗೆ ಆಗ್ರಾದಲ್ಲಿ ಆನಂದೋತ್ಸವವಾಗುತ್ತಿತ್ತು. ಇದಕ್ಕೆ ನವರೋಜ ಅಥವಾ ಹೊಸ ವರ್ಷದ ಸಮಾರಂಭವೆನ್ನುತ್ತಿದ್ದರು. ಇದರ ಸಲುವಾಗಿ ಆಗ್ರಾದಲ್ಲಿ ಉತ್ತಮ ವಸ್ತು ಪ್ರದರ್ಶನದ ಸಂತೆಯು ನಡೆಯುತ್ತಿತ್ತು. ಇದಕ್ಕೆ ಮೀನಾ ಬಜಾರ್ (Fancy fair) ಎನ್ನುತ್ತಿದ್ದರು. ಈ ಬಜಾರಕ್ಕೆ ಬಾದಶಹನ ಅಂತಃಪುರದ ಸ್ತ್ರೀಯರೂ, ಪಟ್ಟಣದೊಳಗಿನ ದೊಡ್ಡ ಮನೆತನದ ಹೆಂಗುಸರೂ ಬರುತ್ತಿದ್ದರು. ಇದರಲ್ಲಿ ಪುರುಷರ ಪ್ರವೇಶವಾಗುವಂತಿದ್ದಿಲ್ಲ. ಇದರಲ್ಲಿ ರಮಣಿಯರೇ ಅಂಗಡಿಕಾರರು; ನಾರಿಯರೇ ಗಿರಾಕಿಗಳು ಮತ್ತು ಅವರೇ ಪ್ರೇಕ್ಷಕರು. ಈ ಬಜಾರದಿಂದ ಸ್ತ್ರೀಯರಿಗೆ ತಮ್ಮ ಗೆಳತಿಯರ ದರ್ಶನ ಲಾಭವಾಗುತ್ತಿತ್ತು. ಬಾದಷಹನೊಡನೆ ಮಿತ್ರತ್ವದಿಂದಿರುವ ಎಲ್ಲಾ ರಜಪೂತರೂ ತಮ್ಮ ಹೆಂಡಿರು ಮಕ್ಕಳನ್ನು ಈ ಪ್ರದರ್ಶನಕ್ಕೆ ಕಳುಹಿಸಬೇಕೆಂಬ ನಿಯಮವಿತ್ತು. ಬಾದಷಹನು ವೇಷ ಬದಲಾಯಿಸಿಕೊಂಡು ಈ ಸಂತೆಯಲ್ಲಿ ಸಂಚರಿಸುತ್ತಾ ಸುಂದರ ಸ್ತ್ರೀಯರ ರೂಪ ಸುಧೆಯನ್ನು ಪಾನಮಾಡುತ್ತಿದ್ದನು. ಕೆಲವು ಸಂದರ್ಭಗಳಲ್ಲಿ ಇಂದುಮುಖಿಯರಾದ ಸುಂದರ ರಮಣಿಯರ ಧರ್ಮನಾಶಮಾಡುವ ಕಾರ್ಯವನ್ನೂ ಕೈಗೊಳ್ಳುತ್ತಿದ್ದನು. ಅಕಬರನು ಈ ಉತ್ಸವಕ್ಕೆ ಖುಷ್‌ರೋಜ್ ಅಥವಾ ಆನಂದದ ದಿವಸವೆಂದು ಹೆಸರಿಟ್ಟಿದ್ದನು. ಬದಾವೂನಿಯೆಂಬ ಇವನ ಆಸ್ಥಾನದಲ್ಲಿದ್ದ ಇತಿಹಾಸಕಾರನು ಇದಕ್ಕೆ ನವರೋಜ-ಇ-ಜಲಾಲೀ ಎಂದು ಕರೆದಿದ್ದಾನೆ. ಅಬುಲ ಫಜಲನೂ ಅಕಬರನ ಈ ಅನ್ಯಾಯವನ್ನು ತನ್ನ ಕೌಶಲ್ಯದಿಂದ ಮುಚ್ಚಿಡಲು ಸಮರ್ಥನಾಗಲಿಲ್ಲ. ಮಹಾತ್ಮಾ ಟಾಡ್ ಸಾಹೇಬರು ಈ ಸಂತೆಯಲ್ಲಿ ಸ್ತ್ರೀಯರ ಸ್ವಮಾನಹಾನಿಯಾಗುವ ಪ್ರಸಂಗದಿಂದ ಉದ್ರಿಕ್ತರಾಗಿ ‘The ingenuous Abul—Fazl thus softens down the unhallowed purchase of this day” (Vol· I. P 279) ಎಂದಿದ್ದಾರೆ. ಐತಿಹಾಸಿಕ ಬದಾವೂನಿಯು— ‘ಖುಷ್‌ರೋಜ್ ಬಾಜಾರದ ಪದ್ಧತಿಯಿಂದ ಅಕಬರನು ಮುಸಲ್ಮಾನ ಧರ್ಮಕ್ಕೆ ಬೇರೊಂದು ಆಘಾತವನ್ನುಂಟುಮಾಡಿರುವನು.’ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಈ ಬಜಾರದಿಂದ ಸ್ವಧರ್ಮನಿರತರಾದ ಹಿಂದುಗಳು ಮರ್ಮಾಹತರಾಗುತ್ತಿದ್ದರು. ಆ ಕಾಲದಲ್ಲಿ ಅನೇಕ ಸ್ತ್ರೀಯರು ರತ್ನಾಲಂಕಾರಗಳ ಆಶೆಯಿಂದ ಅಕ್ಬರನಿಗೆ ತಮ್ಮ ಸತೀಧರ್ಮವನ್ನು ಮಾರಿಕೊಂಡಿದ್ದರು. ಆವನು ಅನೇಕ ಪರಸ್ತ್ರೀಯರನ್ನು ಪತ್ನೀರೂಪವಾಗಿ ಗ್ರಹಿಸಿದ್ದಾನೆಂದು ಹೇಳುತ್ತಾರೆ. ಆಗ ಮೇವಾಡದ ರಾಜರು ಮತ್ತು ಬೂಂದಿಯ ರಾಜರು ಮಾತ್ರ ನವರೋಜದ ಮೀನಾಬಜಾರಕ್ಕೆ ತಮ್ಮ ಪರಿವಾರದ ಸ್ತ್ರೀಯರನ್ನು ಕಳುಹಿಸುತ್ತಿದ್ದಿಲ್ಲ. ಬೂಂದಿಯ ರಾಜರ ಒಪ್ಪಂದದ ಪತ್ರದಲ್ಲಿ ಈ ಶರ್ತವಿತ್ತು.

—ಯು. ನಾ. ಉಡುಪ, ವಿದ್ವಾನ್.

(ಮುಂದುವರಿಯುವುದು)

ವಿಚಾರ ವಿಮರ್ಷೆ

(೧ನೇ ಪುಟದಿಂದ)

ರ್ಥ ಶಾಸ್ತ್ರಜ್ಞರು ಏಕೆ ಮೌನವಾಗಿರುವರೋ ತಿಳಿಯದು. ನಮ್ಮೆಲ್ಲ ಧುರೀಣರು ಪದೇ ಪದೇ ರೂಪಾಯಿಯ ಮೌಲ್ಯವು ಭದ್ರವಿದೆ ಎಂಬ ವಾಕ್ಯವನ್ನು ಉಚ್ಚರಿಸುತ್ತಾರೆ. ಆದರೂ ಸಂಬಂಧಪಟ್ಟವರು ಡಾ| ಶೆಣೈಯವರ ಅಭಿಪ್ರಾಯವನ್ನು ಒರೆಗೆ ಹಚ್ಚಿ ಸತ್ಯ ಶೋಧನೆ ಮಾಡಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ರಾಷ್ಟ್ರದ ಹಿತದೃಷ್ಟಿಯಿಂದ ಆವಶ್ಯವಲ್ಲವೆ?

○○ ○○ ○○ ○○ ○○

ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ನಾಲ್ಕನೆಯ ಬಾರಿಗೆ ಅಧಿಕೃತ ಸಂಚಾರ ಕಾರ್ಯಕ್ರಮಕ್ಕಿಳಿದಿದ್ದಾರೆ. ತಾನು ಹೋದಲ್ಲಿನ ಜನರನ್ನು ಗೌರವದಿಂದ ಕಂಡು, ಅವರಿಂದ ತನ್ನ ಗೌರವವನ್ನೂ ಹೆಚ್ಚಿಸಿಕೊಳ್ಳುವ ಸೌಹಾರ್ದ ಮನೋಭಾವನೆಯ ಪ್ರಸಾದರು ಈ ಬಾರಿ ಕಂಬೋಡಿಯಾ, ವಿಯತನಾಮ ಪ್ರಜಾರಾಜ್ಯ ಮತ್ತು ವಿಯತನಾಮ ಪ್ರಜಾಸತ್ತಾತ್ಮಕ ಪ್ರಜಾರಾಜ್ಯಗಳಿಗೆ ಸಂದರ್ಶನವೀಯುತಿದ್ದಾರೆ. ಕೆಲವು ಶತಮಾನಗಳಿಗೆ ಪೂರ್ವದಲ್ಲಿ ಬೃಹದ್ಭಾರತದ ವಸಾಹತುಗಳೆನಿಸಿಕೊಂಡಿರುವ ಈ ರಾಷ್ಟ್ರಗಳಲ್ಲಿ ಭಾರತೀಯ ಪ್ರಭಾವವು ಬೀರಿರುವುದು ಸ್ವಾಭಾವಿಕವೇ. ತನ್ನ ಸುತ್ತಮುತ್ತಲಿನ ರಾಷ್ಟ್ರಗಳನ್ನು ಸಂದರ್ಶಿಸುವುದು ರಾಷ್ಟ್ರಾಧ್ಯಕ್ಷನಿಗೆ ಹೇಳಿಸಿದ ಮಾತು. ಈಗಾಗಲೇ ಜಪಾನ ಇಂಡೋನೇಶಿಯಾ, ನೇಪಾಳಗಳಿಗೆ ಭೇಟಿಯಿತ್ತು ಈ ದೇಶಗಳು ಮತ್ತು ಭಾರತದ ನಡುವೆ ಸ್ನೇಹ ಸೌಹಾರ್ದಗಳು ಬೆಳೆದು ಬರಲು ಸಹಾಯರಾಗಿದ್ದಾರೆ. ಅಂತೆಯೇ ಅವರ ಸದ್ಯದ ಸಂದರ್ಶನದಿಂದ ಇಕ್ಕಡೆಗಳಿಗೂ ಲಾಭವಾಗದುಳಿಯದೆಂದು ಭಾವಿಸಿ, ಭಾರತೀಯ ಜನತೆ ಅವರ ಸಂದರ್ಶನವು ಸುಫಲದಾಯಕವಾಗಲೆಂದು ಹಾರೈಸುತ್ತದೆ. “ತಾನು ಒಳ್ಳೆಯವನಾದರೆ ಊರು ಒಳ್ಳೆಯದೆ” ಎಂಬಂತೆ ಡಾ| ಪ್ರಸಾದರ ನಿಷ್ಕಲ್ಮಶ ಭಾವನೆಯು ರಾಷ್ಟ್ರರಾಷ್ಟ್ರಗಳನ್ನು ಸ್ನೇಹಬಂಧದಿಂದ ಬೆಸೆಯಲಿ.

○ ○ ○

ಭಾರತ ಮತ್ತು ಪಾಕಿಸ್ತಾನಗಳ ನಡುವೆ ವ್ಯಾಪಾರ ಸಂಬಂಧವು ಈ ವರೆಗೆ ಸ್ವಲ್ಪ ಮಟ್ಟಿಗಿತ್ತಾದರೂ ಈಗ, ಅದು ಸಂಪೂರ್ಣ ನಿಂತು ಹೋಗುವ ಪರಿಸ್ಥಿತಿಯೊದಗಿದೆ. ವ್ಯಾಪಾರ ಸಂಬಂಧವಾಗಿ ಭಾರತವು ಹಾಕಿದ್ದ ಕೆಲವು ಸೂಚನೆಯನ್ನು ಪಾಕಿಸ್ತಾನವು ತಿರಸ್ಕರಿಸಿದೆ. ಪಾಕಿಸ್ತಾನದ ಓರ್ವ ವರಿಷ್ಠ ಅಧಿಕಾರಿಯು ನವದೆಹಲಿಗೆ ಬರುವನೆಂದೂ ಅವನು ಇಂತಹ ವ್ಯಾಪಾರದ ಬಗ್ಗೆ ವಿಚಾರ ಮಾಡಲಿರುವನೆಂದೂ ಕಳೆದ ತಿಂಗಳು ಹೇಳಲಾಗಿತ್ತಲ್ಲದೇ ಈ ಮಾತು ವಾಣಿಜ್ಯ ಮಂತ್ರಿ ಶ್ರೀ ಭುಟ್ಟೊರವರಿಂದಲೂ ಪುಷ್ಟೀಕರಿಸಲ್ಪಟ್ಟಿತು. ಆದರೆ, ಈಗ ಮಾತ್ರ, ಭಾರತಕ್ಕೆ ಆಗಮಿಸಲಿರುವ ಪಾಕ್ ಅಧಿಕಾರಿಯು ದೀರ್ಘಕಾಲದ ರಜೆಯಲ್ಲಿರುತ್ತಾನೆ!

ಇದು ವರೆಗೆ ತಾನು ಆಮದುಮಾಡಿಕೊಂಡಿರುತಿದ್ದ ಚಂದನದ ಎಣ್ಣೆಯನ್ನು ಇನ್ನು ಮುಂದೆ ಬ್ರಿಟನ್ನಿನಿಂದ ತರಿಸಿಕೊಳ್ಳಲು ಪಾಕಿಸ್ತಾನವು ನಿಶ್ಚಯಿಸಿರುತ್ತದೆ ಎಂಬುದು ಉಲ್ಲೇಖನೀಯವಾಗಿದೆ. ಹಾಗಿರುವಾಗ, ಪ್ರಕೃತದ ವಿದ್ಯಮಾನಗಳನ್ನು ಅನುಲಕ್ಷಿಸುವಾಗ, ಪಾಕಿಸ್ತಾನವು ಭಾರತದೊಡನೆ ವ್ಯಾಪಾರ ಮಾಡುವಾಗ, ಆರ್ಥಿಕ ವಿಚಾರಧಾರೆಯನ್ನು ಗಮನಿಸದೆ ಕೇವಲ ರಾಜಕೀಯ ದೃಷ್ಟಿಕೋನವನ್ನೇ ಮುಂದಿಟ್ಟುಕೊಳ್ಳುತ್ತಿದೆ ಎಂಬುದು ಸ್ವಯಂಸಿದ್ಧ. ಭಾರತದ ಮೇಲೆ ಕತ್ತಿಮಸೆಯುತ್ತಿರುವ ಪಾಕಿಸ್ತಾನದ ಗೂಢಾಲೋಚನೆಯು ಈ ಘಟನೆಯಿಂದ ಮತ್ತಷ್ಟು ಸ್ಪಷ್ಟೀಕೃತವೆನಿಸಿದೆ. ಅಮೇರಿಕಾ—ಪಾಕ್ ಸೈನಿಕ ಒಪ್ಪಂದದಲ್ಲಿ “ಆಕ್ರಮಣ”ವೆಂಬ ಪದಕ್ಕೆ ತನ್ನದೇ ಒಂದರ್ಥವನ್ನು ಕಟ್ಟಿ—ಈ ಬಗ್ಗೆ ಅಮೇರಿಕೆಯಿಂದ ಬಂದ ಸ್ಪಷ್ಟೀಕರಣ ಸಾಲದೆಂದು ಪ್ರಧಾನಿ ನೆಹರೂ ಹೇಳುತ್ತಾರೆ—ತನ್ನ ಹಂಚಿಕೆಯನ್ನು ಮುಂದುವರಿಸುತ್ತಿರುವ ಪಾಕಿಸ್ತಾನದ ಆಂತರಿಕ ಇರಾದೆಯು ಮಾತ್ರ ಇನ್ನೂ ಅಗೋಚರವಾಗಿ ಉಳಿದಿದೆ. ಬಟ್ಟ ಬಯಲಲ್ಲಿ ಅಡಗಲು ಯತ್ನಿಸುವ ಪಾಕಿಸ್ತಾನದ ಕಾರಸ್ಥಾನಗಳು ಒಂದೊಂದಾಗಿ, ಕುಲವನ್ನು ನಾಲಗೆ ಹೇಳುವಂತೆ ಕಣ್ಣಾರೆ ಕಾಣತೊಡಗಿವೆ.

—ರಾಶಿ.

ಠಾಕೋರ ಜಯಂತಿ

ಅಮೇರಿಕೆಯಲ್ಲಿ ವಿವಿಧ ಕಾರ್ಯಕ್ರಮ ಸಿದ್ಧತೆ

ಭಾರತೀಯ ಗುರುದೇವನಿಗೆ ಪಾಶ್ಚಾತ್ಯರಿಂದ ಗೌರವ ಪ್ರದರ್ಶನದ ಪ್ರತೀಕವಿದು.

ಅಮೆರಿಕದಲ್ಲಿ ೧೯೬೧ರ ಮೇ ೭ನೇ ತಾರೀಕು ರವೀಂದ್ರನಾಥ್ ಠಾಕೂರರ ಜನ್ಮದಿನದ ಶತಮಾನೋತ್ಸವವನ್ನು ಆಚರಿಸಲು ಮೊದಲ ವ್ಯವಸ್ಥೆಗಳ ಸಿದ್ಧತೆ ನಡೆಯುತ್ತಿದೆ.

ಪೆನ್ಸಿಲ್ವೇನಿಯ ವಿಶ್ವವಿದ್ಯಾನಿಲಯದ ದಕ್ಷಿಣ ಏಷ್ಯ ಅಧ್ಯಯನಗಳ ಇಲಾಖೆಯ ಅಧ್ಯಕ್ಷರಾದ ಪ್ರಾಧ್ಯಾಪಕ ಡಬ್ಲ್ಯು ನಾರ್ಮನ್ ಬ್ರಾನ್ ಅವರ ನಾಯಕತ್ವದಲ್ಲಿ ಈ ಉದ್ದೇಶಕ್ಕಾಗಿ ರಾಷ್ಟ್ರೀಯ ಸಮಿತಿಯೊಂದು ನೇಮಕವಾಯಿತು. ಸುವಿಖ್ಯಾತ ಗ್ರಂಥಕರ್ತೆ ಪರ್ಲ್ ಎಸ್ ಬಕ್ ಮತ್ತು “ಸಾಟರ್ಡೆ ರಿವ್ಯೂ” ಸಂಪಾದಕ ನಾರ್ಮನ್ ಕಸಿನ್ಸ್ ಇವರೂ ಗೌರವ ಅಧ್ಯಕ್ಷ ಮಂಡಳಿಯಲ್ಲಿದ್ದಾರೆ.

“ಅಮೆರಿಕದಲ್ಲಿ ಠಾಕೂರ್” ಎಂಬ ಪುಸ್ತಕದ ರಚನೆಗೆ ೫೦೦ ಡಾಲರುಗಳ ಬಹುಮಾನವೊಂದನ್ನು ಏರ್ಪಡಿಸುವುದು ಈ ಸಮಿತಿಯ ಗಮನಾರ್ಹ ಉದ್ದೇಶಗಳಲ್ಲಿ ಒಂದು. ಈ ಪುಸ್ತಕವನ್ನು ಶತಮಾನೋತ್ಸವದ ಸಂದರ್ಭದಲ್ಲಿ ಪ್ರಕಟಿಸಲಾಗುವುದು. ಭಾರತದ ಈ ಕವಿಯ ಜೀವನ ಮತ್ತು ಕೃತಿಗಳ ಮಹತ್ವಪೂರ್ಣ ಅಂಶಗಳನ್ನು ಕುರಿತ ಪ್ರಬಂಧಗಳಿಗೂ ನಗದು ಬಹುಮಾನಗಳನ್ನು ಕೊಡಲಾಗುವುದು.

೧೯೬೧ರ ಮೇ ೭ನೇ ತಾರೀಖಿನ ದಿನವನ್ನು ಠಾಕೂರರ ದಿನವೆಂದು ಕರೆಯುವ ಮತ್ತು ಠಾಕೂರರ ನಾಟಕಗಳನ್ನು ಆಡಿಸುವ ಮತ್ತು ಉಪನ್ಯಾಸಗಳನ್ನೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಏರ್ಪಡಿಸುವ ಯೋಜನೆಯನ್ನು ಈ ಸಮಿತಿ ಇಟ್ಟುಕೊಂಡಿದೆ.

ಅಮೆರಿಕದ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಠಾಕೂರ ಪ್ರಾಧ್ಯಾಪಕ ಸ್ಥಾನಗಳನ್ನೂ ವಿದ್ಯಾರ್ಥಿ ವೇತನಗಳನ್ನೂ ಏರ್ಪಡಿಸುವುದು; ಶತಮಾನೋತ್ಸವದ ಸಂಪುಟವೊಂದಕ್ಕೆ ಠಾಕೂರರು ಅನೇಕ ಅಮೆರಿಕ ಭೇಟಿಗಳ ಕಾಲದಲ್ಲಿ ನಡೆಸಿದ ಚಟುವಟಿಕೆಗಳ ವಿವರವನ್ನು ಸಂಗ್ರಹಿಸುವುದು; ಠಾಕೂರರು ಸ್ಥಾಪಿಸಿದ ವಿಶ್ವಭಾರತಿ—ಅಂತಾರಾಷ್ಟ್ರೀಯ ವಿಶ್ವವಿದ್ಯಾನಿಲಯಕ್ಕೆ ದಾನಗಳನ್ನು ಸಂಗ್ರಹಿಸುವುದು—ಇವು ಸಮಿತಿಯ ಇತರ ಯೋಜನೆಗಳು.

ಹೊಸ ಶಾಖೆ
(ನಮ್ಮ 117ನೆಯ ಶಾಖೆ)
ವಿಳಾಸ .... : 16/7748, ತಿಲಕ್ ಬೀದಿ,
ಪೋಸ್ಟ್ ಬಾಕ್ಸ್ ನಂ: 56,
ಟೆಲಿಗ್ರಾಮ್: “ಸಿಗ್ಮ”)
ಕಾಕಿನಾಡ.
ಪ್ರಾರಂಭ .... : 20—3—1959.
ಏಜಂಟ್ .... : ಆರ್. ಶೇಷಗಿರಿ ರಾವ್.
ಡಾ| ಟಿ. ಎಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.
ಟಿ. ಎ. ಪೈ. ಬಿ. ಕಾಂ. (ಬೊಂ.)
ಜನರಲ್ ಮೆನೇಜರ್.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್
ಸಿಂಡಿಕೇಟ್ ಲಿಮಿಟೆಡ್, ಉಡುಪಿ.
THE CANARA INDUSTRIAL & BANKING
SYNDICATE LTD., UDIPI.

Edited, Printed & Published by K. H. Shetty, at the Navayuga Press, Udipi, S. India,

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ

ವರುಷ ೩೮. ವಾರ ೨೮ 26-3-1959 Vol 38 No. 28.

ವಿಚಾರ ಮಥನ

ರಾಜೇಂದ್ರರಿಗೆ ಗೌರವಾರ್ಪಣೆ.

× × × ×

ವರಿಷ್ಠರ ಸಮ್ಮೇಳನ.

× × × ×

ಭಾರತಕ್ಕೆ ಸಹಾಯ ಹಸ್ತ.

× × × ×

ಐಕ್ಯಮತ್ಯದ ಪ್ರಾಧಾನ್ಯ.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಭಾರತಕ್ಕೆ ಮಾತ್ರ ಭೂಷಣ ಪ್ರಾಯರಾಗಿರುವುದಲ್ಲ, ಭಾರತದ ನೆರೆ ಹೊರೆಯವರೆಲ್ಲರಿಗೂ ಅಚ್ಚುಮೆಚ್ಚಿನವರಾಗಿರುವರೆಂಬುದಕ್ಕೆ ಅವರ ವಿದೇಶ ಸಂಚಾರದ ಸಮಯದಲ್ಲಿ ಅವರಿಗೆ ದೊರತ ಭವ್ಯ ಹೃತ್ಪೂರ್ವಕ ಸ್ವಾಗತವೇ ನಿದರ್ಶನ. ಸಾಮಾನ್ಯವಾಗಿ ಪ್ರಜಾಸತ್ತೆಯಡಿಯಲ್ಲಿ ನಡೆಯುವ, ಪ್ರಧಾನ ಮಂತ್ರಿಯಿರುವ ರಾಷ್ಟ್ರದಲ್ಲಿ ರಾಷ್ಟ್ರಪತಿಯು ಸ್ಥಾನಮಾನಗಳು ಕೇವಲ ಗೌರವಪ್ರಾಯವಾದುದು ಮಾತ್ರ ರಾಷ್ಟ್ರದ ಎಲ್ಲ ಕಾರಭಾರುಗಳೂ ಪ್ರಧಾನಿಯ ನೇತೃತ್ವದಲ್ಲಿ ನಡೆಯುತ್ತವೆ. ಹಾಗಿದ್ದರೂ ರಾಷ್ಟ್ರಪತಿ ಸ್ಥಾನದಲ್ಲಿ ವಿರಾಜಿಸುತ್ತಿರುವ ರಾಜೇಂದ್ರರಿಗೆ ದೊರೆಯುವ, ದೊರೆಯುತ್ತಿರುವ ಮನ್ನಣೆಯು ಯಾವ ಪ್ರಧಾನಿಗೂ ಕಡಿಮೆಯುದಲ್ಲ. ಏಕೆಂದರೆ, ರಾಜೇಂದ್ರ ಪ್ರಸಾದರ ವ್ಯಕ್ತಿತ್ವದ ಬೆಲೆಯನ್ನು ಕೇವಲ ಏಶ್ಯವಲ್ಲ, ಜಗತ್ತೇ ಅರಿತುಕೊಂಡಿದೆ. ಎಂತಲೇ ಅವರ ಸದ್ಯದ ಕಂಬೋಡಿಯ ವಿಯತನಾಮು ಮೊದಲಾದ ಇಂಡೋಚೀನ ರಾಷ್ಟ್ರಗಳ ಸಂದರ್ಶನವು ಇಕ್ಕೆಡೆಯವರಿಗೂ ಒಂದು ಶುಭ ಸಂದರ್ಶನವಾಗಿದೆ ರಾಜೇಂದ್ರರು ಭಾರತದ ಸದಿಚ್ಛೆಯನ್ನು ಸಲ್ಲಿಸಿ ಭಾರತಕ್ಕೆ ಅವರ ಶುಭ ಕಾಮನೆಗಳನ್ನು ಹೊತ್ತು ತರುವರೆಂಬುದು ನಿರ್ವಿವಾದ.

× × × ×

“ಬರ್ಲಿನ್ ಸಮಸ್ಯೆ” ಎಂದರೇನೆಂದು ತಿಳಿಯದವರು ವಿರಳ ಈ ಸಮಸ್ಯೆ ಮತ್ತಿಂಥವುಗಳಿಂದಲೇ ಪೂರ್ವ ಪಶ್ಚಿಮಗಳು ಬೇರೆ ಬೇರೆಯಾಗುತ್ತ ಬಂದಿವೆ ಕೋಣ ನೀರಿಗೆಳೆದರೆ ಹೋರಿ ಏರಿಗೆಳೆಯಿತೆಂಬಂತೆ ಪೌರ್ವಾತ್ಯ ಮತ್ತು ಪಾಶ್ಚಾತ್ಯರ ಅಭಿಪ್ರಾಯಗಳು ಈ ಸಮಸ್ಯೆಯ ಬಗ್ಗೆ ಇದುವರೆಗೂ ಒಂದುಗೂಡಿಲ್ಲ. ಆದರೂ ಬ್ರಿಟನ್ನದ ಪ್ರಧಾನಿ ಶ್ರೀ ಹೆರೋಲ್ಡ್ ಮೆಕಮಿಲನರ ಇತ್ತೀಚಿನ ರಶ್ಯ ಸಂಚಾರ ಹಾಗೂ ಸದ್ಯದ ಅಮೇರಿಕ ಸಂದರ್ಶನಗಳಿಂದ ಈ ಸಮಸ್ಯೆಯೂ ಪರಿಹಾರಗೊಳ್ಳುವ ಮುಂಸೂಚನೆಗಳು ದೂರದಲ್ಲಿ ಹೊಳೆಯತೊಡಗಿವೆ.

ರಶ್ಯದ ಪ್ರಧಾನಿ ಶ್ರೀ ನಿಕಿಟಾ ಕ್ರುಶೇವರು ರಶ್ಯ ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸಗಳ ಪ್ರತಿನಿಧಿಗಳು ಒಂದೆಡೆ ಸೇರಿ ಶಾಂತಿಯುತವಾದ ರೀತಿಯಲ್ಲಿ ಈ ಸಮಸ್ಯೆಯನ್ನು ಬಿಡಿಸುವುದರ ಕುರಿತು ಚರ್ಚಿಸಬೇಕು ಇದಕ್ಕಾಗಿ ಚತುರ್ಮಹಾರಾಷ್ಟ್ರಗಳ ವರಿಷ್ಠರು ಸಭೆ ಸೇರಬೇಕು ಆ ಮೇಲೆ ವಿದೇಶ ಮಂತ್ರಿಗಳು ಈ ಸಭೆಯು ಚರ್ಚೆಯನ್ನು ಮುಂದುವರಿಸಿ ಪರಿಹಾರವನ್ನು ಕಂಡುಹಿಡಿಯಬಹುದು ಎಂದು ಹೇಳಿ, ವಿದೇಶ ಮಂತ್ರಿಗಳ ಸಭೆಯು ಮೇ ೧೧ನೆ ದಿನಾಂಕದಂದಿಗೆ ಸೇರಬೇಕೆಂದ ಸೂಚಿಸುವ ಹೇಳಿಕೆಯನ್ನು ಪ್ರಕಟಿಸಿದ್ದಾರೆ ಪ್ರಧಾನಿ ಕ್ರುಶೇವರ ಈ ಹೇಳಿಕೆಯು ಭಾಷೆಯಲ್ಲಿ ಎಂದಿನ ಒರಟು ಇರದೆ ಸೌಮ್ಯ ಪದಪುಂಜಗಳಿದ್ದುದು ಪಾಶ್ಚಾತ್ಯ ರಾಷ್ಟ್ರಗಳಿಗೆ ಆಶ್ಚರ್ಯವನ್ನು ಹುಟ್ಟಿಸಿದೆಯಂತೆ ಆದರೆ, ಅತ್ತ ಅಮೇರಿಕೆಯಲ್ಲಿರುವ ಬ್ರಿಟಿಷ ಪ್ರಧಾನಿ ಹಾಗೂ ಐಸನ್ ಹೋವರರ ನಡುವೆ ಜುಲಾಯಿ —ಆಗಸ್ತದ ಸುಮಾರಿಗೆ ಈ ವರಿಷ್ಠರ ಸಭೆ ಸೇರಲು ಮತ್ತೈಕ್ಯವಾಗಿರುವುದೆಂದು ತಿಳಿಯುತ್ತದೆ. ಇವೆಲ್ಲವುಗಳಿಂದ, ರಶ್ಯದ ಅಭಿಪ್ರಾಯವು ಅಮಾನ್ಯವಾಗುವುದು ಸಂಭವನೀಯ ತನ್ನ ಕೊನೆಯ ದಿನವಾದ ಮೇ ೧೧ರ ನಂತರ ಕ್ರುಶೇವರ ಕಾರ್ಯಕ್ರಮವೇನೆಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ ಬಂದೀತು.

× × × ×



ವಾತಾವರಣದ ಬಗ್ಗೆ ಅಭ್ಯಾಸ ಮಾಡಲು ನೆರವಾಗುತ್ತಿರುವ ದೊಡ್ಡ ಪ್ರಮಾಣದ ಆಕಾಶ ಬುಟ್ಟಿಯಿದು, ಇದು ತೇಲುತ್ತಿರುವಂತೆ ಕೆಳಗಿನ ಆಕಾಶವಾಣಿ ಕೇಂದ್ರಗಳಿಗೆ ಮೇಲಿನಿಂದ ವರ್ತಮಾನವನ್ನೂ ಕಳಿಸಬಲ್ಲದು

ತನ್ನ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ಹೆಣಗುತ್ತಿರುವ ಭಾರತದ ಬಗ್ಗೆ ಎಲ್ಲ ರಾಷ್ಟ್ರಗಳೂ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿರುವುದು ಹಿಂದಿನಿಂದಲೂ ಗೋಚರಕ್ಕೆ ಬಂದಿರುವುದು ಈಗ, ಮುಂದಿನ ಎಪ್ರಿಲ್ ೧ನೆ ದಿನಾಂಕದಿಂದ ಪ್ರಾರಂಭವಾಗಲಿರುವ ಒಂದು ವರ್ಷದಲ್ಲಿ ಮುನ್ನೂರು ಮಿಲಿಯ ಡಾಲರುಗಳಷ್ಟು ಸಾಲವನ್ನು ನೀಡುವ ನಿರೀಕ್ಷೆಯಿದೆಯೆಂದು ಭಾರತಕ್ಕೆ ಸಾಲನೀಡುವ ಪ್ರಮುಖ ರಾಷ್ಟ್ರಗಳಾದ ಅಮೇರಿಕ, ಕೆನಡ, ಬ್ರಿಟನ್, ಪೂರ್ವಜರ್ಮನಿ ಮತ್ತು ಜಪಾನ ಹಾಗೂ ವಿಶ್ವ ಬೇಂಕಿನ ಪರಿಣತರು ಆಶ್ವಾಸನವಿತ್ತಿರುವುದು ತಿಳಿದುಬಂದಿದೆ ಈ ಪ್ರತಿನಿಧಿಗಳು ಭಾರತದ ಅಭಿವೃದ್ಧಿ ಕಾರ್ಯ, ವಿದೇಶ ವಿನಿಮಯ ಸ್ಥಿತಿಗಳೆಲ್ಲವನ್ನೂ ರಹಸ್ಯವಾಗಿ ಚರ್ಚಿಸಿದ್ದರು.

“ಪ್ರಜಾ ಪ್ರಭುತ್ವ”ವನ್ನು ಯಶಸ್ವಿಯಾಗಿಸಲು ಶಾಂತ ವಿಧಾನದಲ್ಲಿಯೇ ಕ್ರಾಂತಿಯೆಬ್ಬಿಸುವ ರಾಷ್ಟ್ರ ಭಾರತವಾಗಿದೆಯಲ್ಲವೇ ಇದರ ಯಶಸ್ಸಿನಿಂದಲೇ ಬಡ ರಾಷ್ಟ್ರಗಳನ್ನು ಸಮೃದ್ಧಗೊಳಿಸಲು ಸಾಧ್ಯವಾದವೊಂದೇ ಮಾರ್ಗವಲ್ಲವೆಂಬುದ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3
ಸ್ಥಾಪನೆ- 1931

ಕಾಯಂ ಠೇವಣಾತಿ ಬಡ್ಡಿ ದರ
1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%
ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು, ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ. ..ಇತ್ಯಾದಿ ...

NAVAYUGA WEEKLY, UDIPI, S. India.

ಕಥಾ ವಿಹಾರ

ಸಿರಿಯಣ್ಣ ಉಳ್ಳನಕ ಹಿರಿಯಣ್ಣ ನಂತಕ್ಕು

ಸಿರಿಯಣ್ಣನಿಂದ ಸರಿದ ತತ್‌ಕ್ಷಣದಲ್ಲಿಯೇ ಅವನು ನರಿಯಣ್ಣನಿಗೆ ಸಮನಲ್ಲವೆ?

"ಬಾ ಬಾ, ಏನು ಸಮಾಚಾರ ಸೌಖ್ಯವೇ?" ಹಿತ್ತಾಳೆಯ ಎರಡಾಣೆ ಪಾವಲಿ ಏಕ ವಚನದಿಂದಲೇ ನಯಾ ಪೈಸೆಯನ್ನು ಸ್ವಾಗತಿಸಿತು

"ತಮ್ಮ ದಯೆಯಿಂದ ಇಷ್ಟರತನಕ ಸೌಖ್ಯ ನನಗೊಂದೇ ಸಂತೋಷ" ಆದರೂ ನಯಾ ಪೈಸಾ ಹಿತ್ತಾಳೆ ಎರಡಾಣೆ ರಾಜನನ್ನು ಬಹುವಚನದಿಂದಲೇ ಸಂಬೋಧಿಸಿತು

". . . ?"

"ಅಹಾ! ತಮ್ಮ ದರುಶನದಿಂದ ನನ್ನ ನಯನಗಳು ಪವಿತ್ರವಾದುವು, ತಮ್ಮ ಹಸ್ತಲಾಘವದಿಂದ ನನ್ನ ಕರಯುಗ್ಮಗಳು ಪುನೀತವಾದುವು, ತಮ್ಮ ಪಾದ ಧೂಳಿಯ ಸ್ಪರ್ಶ ಮಾತ್ರದಿಂದ ನನ್ನಾತ್ಮ ಪರಿಶುದ್ಧವಾಯಿತು ತಾವುಗಳ ಅಮೃತ ಸಮಾನ ನುಡಿಗಳು ನನ್ನನ್ನು ಪಾವನನನ್ನಾಗಿ ಮಾಡಿದುವು" ಗೌರವ ಪಡೆಯುತ್ತಿರುವ ಎರಡಾಣೆಯನ್ನು ನಯಾ ಪೈಸಾ ಮುಖ ಸ್ತುತಿಯಿಂದ ಬೆರಗುಗೊಳಿಸಿತು

"ಮತ್ತೆ..?" ಮೀಸೆ ತಿರುಹುತ್ತ ಹಿತ್ತಾಳೆ ರಾಜ ಉಬ್ಬಿದ ಆತ ಎಂದ, "ಅದೆಲ್ಲಾ ಇರಲಿ, ನೀನು ನನ್ನನ್ನು ಚೆನ್ನಾಗಿ ಬೈದು ಕತೆಯಿದೆಯಂತೆ ನಿಜವೆ?"

"ನಿಮ್ಮನ್ನೇ? ನಾನು? ಛೆ! ಛೆ! ನನ್ನ ಕಾಲಡಿಯಲಿಯೇ ಬೃಹತ್ ಕೂಷ್ಮಾಂಡ ಕೋರಯತ್ತಿರಲು ನಿಮ್ಮನ್ನೇಕೆ ದೂರಲಿ, ಧನಿಗಳೆ? ನನ್ನನ್ನೇ ಜನರೆಲ್ಲ ತಿರಸ್ಕಾರದಿಂದ ."

"ಇದು ಸುಳ್ಳು, ನೀನು ಅವಿವೇಕಿ-ಮೂರ್ಖ-ಚಂಡಾಲ"

'ಸುಮ್ಮನಿರು!' ನಯಾ ಪೈಸಾಕ್ಕೂ ರೇಗು ಬಾರದಿದ್ದೀತೆ ಅದು ಎರಡಾಣೆಯನ್ನು ಗೌರವಿಸುವುದಕ್ಕೆ ಮರೆಯಿತು

"ಎಷ್ಟಾದರೂ ಗಾತ್ರದಲ್ಲಿ ನಿನ್ನನ್ನು ಹೆಚ್ಚು ಬಾರಿ ಕಾಣಿಸಿಕೊಂಡರೆ ನಿನ್ನ ಸಮಾನ [illegible] ಆದರೂ ಬೆಲೆಯಲ್ಲಿ ನಿನ್ನ ಹನ್ನೆರಡು ಪಾಲಷ್ಟಿದ್ದೇನೆ ಜೋಕೆ! ಇಷ್ಟೆಂದು ಹಿತ್ತಾಳೆ ಪಾವಲಿ ತನ್ನ ಹನ್ನೆರಡು ಪಾಲಷ್ಟು ಕಮ್ಮಿಯಿರುವ ಒಂದು ನಯಾ ಪೈಸಾದೊಡನೆ ಜಗಳ ಮಾಡಿತು

"ನಿನ್ನಂತೆ ಸವೆದಾಗ! ಸೂರ್ಯನಿಗೊಂದಿಗೆ [illegible] ಹೊಳೆ ಕಾಣಬಲ್ಲೆಯಾ?" ಇನ್ನೊಂದ್ಸಲಕ್ಕೆ ಸುಕು ಜಗಳ ಎಸ್ಕುವ ಭಾವದಿಂದ ನಯಾ ಪೈಸಾ ಹೇಳಿತು ಮಾತು

"ನನ್ನ ಬೆಲೆಯೇನು? ನಿನ್ನ ಬಲವೇನು?" ಜಗಳ ಬೆಳೆಸಿಚ್ಚಿಸಿದ ಎರಡಾಣೆ ರಾಜ

"ನಾನು ಜೀವ ಹೋಗುವ ಸಂದರ್ಭದಲ್ಲಿ ಮಾನವನಿಗೆ ಉಪಯೋಗಕ್ಕೆ ಬೀಳದಿರಲಾರೆ!"

"ಏನು ಜೀವವೋ? ಭಾವವೋ? ನನಗೊಂದೂ ಅರ್ಥವಾಗದು!"

"..... .. ' ಸುಮ್ಮಗಿತ್ತು ನ.ಪೈ ಈ ಮಾತಿಗೆ

"ನನ್ನೊಡನೆ ನನ್ನ ಅರ್ಧಾಂಗಿ ಒಂದಾಣೆ ಬೆರೆತರೆ ಸಾಕು ನನ್ನೊಡೆಯನಿಗೆ ಸಖ! ಲಲಿತರಾಗಿಣಿಯ ನೃತ್ಯ. ಆರ್. ಎಸ್. ಗಣೇಶನ್‌ರವರ ಹುಲಿವೇಷ ನೋಡ ಸಿಗುತ್ತದೆ ಮನಸ್ಸಿಗೆ ವರ್ಣನಾತೀತ ಆನಂದ ದೊರೆಯುತ್ತದೆ" ಮೌನ ಭೇದಿಸಿ ಎರಡಾಣೆ ಆಡಿತು.

"ಜತೆಗೆ ತಗಣೆಯ 'ಇಂಜೆಕ್ಷನ್' ಇದೆಯಲ್ಲ."

' .. ... .' ಎರಡಾಣೆಗೆ ಮಾತೇ ಬರಲಿಲ್ಲ ಅನಂತರ ಅದು, "ಚಂಡಾಲ, ಏನೆಂದೆ? ನಿನ್ನಂತಹ ಹದಿನೆಂಟು ಮೂರ್ಖರು ಸೇರಿದಾಗಲಂತೂ ಈಗಿನ ನನ್ನ ಯುಗದಲ್ಲಿ ನಿನ್ನೊಡೆಯನಿಗೆ ಸಿನಿಮಾ ನೋಡ ಸಿಗದು ನನ್ನ ಮಹಿಮೆ ಅಪಾರವಾದುದು ನನ್ನ ಮೈ ಮೇಲಿನ ವರ್ಣ ..ಅದೇ ಹಳದಿ ಆ ಅರಸಿನ ಬಣ್ಣವನ್ನು ಸರ್ವ ಚಿತ್ರಕಾರರೂ ತುಂಬು ಮೆಚ್ಚಿಕೆಯಿಂದ ಕಾಣುತ್ತಾರೆ ಅದನ್ನೇ ಹೆಚ್ಚು ಹಚ್ಚಾಗಿ ತಮ್ಮ ಚಿತ್ರದಲ್ಲಿ ಬಳಸಿಕೊಳ್ಳುತ್ತಾರೆ ಅಂತಹ ವರ್ಣ ನನ್ನದು ಅಂತಹ ವರ್ಣವು ನೋಡುವವರ ಕಣ್ಣು ಭೇದಿಸಿ, ಬಾಯಿಯಿಂದ, "ಆಹಾ" ಎಂಬ ತೋಷದ ಉದ್ಗಾರವನ್ನು ಹೊರಡಿಸುವಂತೆ ಮಾಡುತ್ತದೆ ನಿನ್ನ ಮೈ ಬಣ್ಣವಾದರೋ ನನಗೆ ತಿಳಿದಂತೆ ಅತ್ತಲಾಗ ಕಂದೂ ಅಲ್ಲ ಇತ್ತಲಾಗೆ ಕಪ್ಪೂ ಅಲ್ಲ ಅಂತಹ ಬಣ್ಣ ನಿನ್ನದು" ಎರಡಾಣೆಗೆ ಬಾಯಿ ಒಣಗಿತು.

"ಅಂತಹ ತೆರನ ಬಣ್ಣ ವಿಶೇಷ ನನಗಿದೆಯೇ ಹೊರತು ನಿನಗಿದೆಯೆ?"

"ಇಲ್ಲ! ಮೊನ್ನೆ ಮೊನ್ನೆ ೧೯೫೭ನೇ ಎಪ್ರಿಲ್‌ನಲ್ಲಿ ಹುಟ್ಟಿ ಬಂದ ಈ ಮೂರ್ಖಂಗೆ ಹದಿನೆಂಟು ಬುದ್ಧಿ ಬಂದು ಹೋಯಿತೆ? ನನ್ನನ್ನು ಒದೆಯುವಷ್ಟು ಧೈರ್ಯ-ಸ್ಥೈರ್ಯ ಬಂದಿತೆ? ಅಬ್ಬಬ್ಬಾ ನಾನು ೧೯೪೦ರಂದು ಹಿಡಿದದ್ದೆ.. . . ನನ್ನ ಅವಸ್ಥೆಯೆ?" ಎಂದು ಎರಡಾಣೆ ಎಣಿಸಿ, ಅಯ್ಯೋ .ನನ್ನನ್ನು ಬಣ್ಣಿಸುತ್ತಾರೆ ಒಗಟುಗಾರರು ಹೀಗೆ ಹಾಗಲ್ಲ

"ಇಸವಿಯಿವೆ ಇತಿಹಾಸದ ಪುಸ್ತಕವಲ್ಲ!
ಚಿತ್ರಗಳಿವೆ ಚಿತ್ರಪುಸ್ತಕ ತಾನಲ್ಲ!
ಬಳ್ಳಿಗಳಿವೆ ಹೂದೋಟ ತಾನಲ್ಲ"

ನಿನ್ನನ್ನು ಹೀಗೆ ಬಣ್ಣಿಸುವವರಿರುತ್ತಾರೆಯೆ? ನಿನ್ನನ್ನು ಪಕ್ಕಾ "ನಾಯಿ ಪೈಸಾ!" ಎಂದು ದೂರುವ ಜನ ಹೊರತು ಬೇರಾರಿಲ್ಲ ನೀನು ಯಾವ ಕೆಲಸಕ್ಕೂ ಬಾರದ ಮಲ್ಲನಯ್ಯ!"

"ಹಾಗೆಂದರೆ? ಇಬ್ಬರಿದ್ದ ನನ್ನ ಸಹಪಾಠಿಗಳ ಕಡೆಗೆ ನಾನು ಸೇರಿದಾಗ ನಮ್ಮ ಬೆಲೆ ಆಗ ಮೊದಲಿಗಿಂತ ಇಮ್ಮಡಿಯಾಗುತ್ತದೆ ಅಂತಹ ಚಾತುರ್ಯ ವಿಶೇಷ ನಿನ್ನಲ್ಲಿದೆ ತಾನೆ? ನೀನೂ ಯಾವುದಕ್ಕೂ ಬಾರದ ದಡ್ಡನಯ್ಯ ನನ್ನ ೨ ಮಂದಿ ಗೆಳೆಯರು ಅವರ ಯಜಮಾನನೊಡನೆ ಜತೆಗೂಡಿದ್ದಾಗ ಆತ ಪರಿತಪಿಸುತ್ತಿದ್ದ. ಆಗ ದಾರಿಯಲ್ಲಿ ನನ್ನತೆರನ ಇನ್ನೊಬ್ಬ ಜತೆಗಾರ ಅವನಿಗೆ ದೊರೆತಾಗ ಅವನಿಗಾದ ಆನಂದ ಅಷ್ಟಿಷ್ಟಲ್ಲ ಆ ದೊರೆ ನಮ್ಮ ಪೈಕಿಯವನಾದ ಆ ನನ್ನ ಗೆಳೆಯನನ್ನು ಮುದ್ದಿಟ್ಟ 'ತುಂಬ ಉಪಕಾರವಾಯಿತು' ಅಂದುಕೊಂಡ. ಮತ್ತೆ ನನ್ನ ಮಹಿಮೆ ಅಷ್ಟಿಷ್ಟೆ?"

'ಹಾಗಾದರೆ ನಾವಿಬ್ಬರೂ ಇಲ್ಲಿ ಬಿದ್ದಿರೋಣವೆ? ಯಾರು ನಮ್ಮಿಬ್ಬರಲ್ಲಿ ಯಾರನ್ನು ಪ್ರಪ್ರಥಮ ಎತ್ತುವರು ಕಾಣೋಣ!" ಎರಡಾಣೆಯೂ ನಯಾಪೈಸಾವೂ ಸಂಧಿಕಟ್ಟಿದುವು ಆದರೆ ಆ ಮಂಕು ನಯಾಪೈಸಾವು ಸುಮ್ಮನಿರಬಹುದಿತ್ತು. ಏಕೆಂದರೆ ಎರಡಾಣೆ ರಾಜನ ಶಕ್ತಿ ಅಪಾರವಾದುದು ಅವನೆಂದಂತೆ ನಯಾಪೈಸಾದ ಹನ್ನೆರಡು ಪಾಲಷ್ಟು ಆತನಿದ್ದ ಹೀಗಿರುವಾಗಲೂ ಆ ನಯಾಪೈಸಾ ದರ್ಪದಿಂದ ಎರಡಾಣೆಯೊಡನೆ ಸಂಧಿಕಟ್ಟಿತು ಎನ್ನುವಲ್ಲಿಗೆ ಅದರ ಮಂಕುತನದ ಪ್ರದರ್ಶನ ನಿಮಗಾಗದೀತು ಆ ನ. ಪೈಗೆ ಎರಡಾಣೆಯೊಡನೆ ಜಗಳಾಡಿ ಇಹಲೋಕದ ಅರಿವೇ ಇಲ್ಲದಾಯಿತೋ ಏನೊ?

ಹಾಗೆಯೇ ತಕ್ಕಂತೆಯೇ ಅವರು ಬಿದ್ದುಕೊಂಡಿರಲು ಓರ್ವ ಪಥಿಕ ಅತ್ತ ಸರಿದ. ಮೊತ್ತಮೊದಲು ಆವನ ಕಣ್ಣಿಗೆ ಕಂಡಿತು ನಯಾಪೈಸಾ ಆದರೂ ಆತ ಎತ್ತಿದ ಎರಡಾಣೆ ಅಷ್ಟರಲ್ಲಿ ಬಸ್ಸು ದಾಪಿಸಿತು. ನ. ಪೈಯನ್ನು ಅಲ್ಲೇ ತ್ಯಜಿಸಿ ಬಸ್ ಹತ್ತಿದ ಈಗ ನ. ಪೈಗೆ ಗತಿಯಿಲ್ಲ, "ಅಯ್ಯೋ!" ಎಂದಿತು ಕಲ್ಲು ಮರಗಳೂ ಕಂಬನಿ ಸುರಿವಂತೆ.

o o o

೧೯೫೯ನೇ ವರುಷ! ಎಲ್ಲರೂ ೧೯೫೮ನೇ ಇಸವಿಯಲ್ಲಿ ನಿದ್ದೆ ತೆಗೆದು ೧೯೫೯ನೇ ಇಸವಿಗೆ ಎದ್ದಿದ್ದಾರೆ ಎಲ್ಲರಿಗೂ ಹರುಷ! ಆನಂದ! ಉತ್ಸಾಹ! ಚೈತನ್ಯ! ಎಂದಿನಂತೆ ಎರಡಾಣೆ, ನ ಪೈ ಭೇಟಿಯಾದರು ಇಂದು ಹಿತ್ತಾಳೆ ಎರಡಾಣೆ ನಿಶ್ಶಕ್ತನಾಗಿದ್ದ! ಆತನ ಮೊಗ ಕಳಾಹೀನವಾಗಿತ್ತು! ಕಣ್ಗಳು ಬಾಡಿದ್ದುವು! ದೇಹ ನಿಸ್ತೇಜ! ರೆಪ್ಪೆ ಬಡಿತ ಮೆಲ್ಲಮೆಲ್ಲಗೆ! ಹಣೆ ನೆರಿಗೆ ನೆರಿಗೆ! ಭ್ರೂಯುಗ್ಮ ಕಣ್ಣಿನಿಂದ ಬಹು ದೂರ.

"ಬಾ, ಬಾ, ಏನು ಸಮಾಚಾರ ಸೌಖ್ಯವೆ?" ಇಂದು ನಯಾಪೈಸೆಯ ಕಳೆ ಇಮ್ಮಡಿಯಾಗಿತ್ತು. ಆದ್ದರಿಂದಲೇ ಅದು ಹಿತ್ತಾಳೆ ಎರಡಾಣೆಗೆ ಪ್ರಶ್ನೆ ಮಾಡಿತು.

"ತಮ್ಮ ದಯೆಯಿಂದ ಇಷ್ಟರತನಕ ಸೌಖ್ಯ ಆದರೆ ಇಂದಿನಿಂದ ನನ್ನ ಗತಿ " ಬಿಕ್ಕಿ ಬಿಕ್ಕಿ ಅತ್ತಿತು ಎರಡಾಣೆ

"ನಿನ್ನ ಗತಿ ಸುಧಾರಿಸಿದೆಯೆ?" ಇಂದು ಗರ್ವದಿಂದ ನ ಪೈ ಹೇಳಿತು

"ಇನ್ನು ನೀನೇ ಧನ್ಯ ಒಡೆಯ! 'ಇಲ್ಲಿ ಹಿತ್ತಾಳೆ ಎರಡಾಣೆ ಪಾವಲಿಯು ಚಲಾವಣೆಯಿಲ್ಲ' ಎಂದೆಲ್ಲ ಪ್ರತೀ ಹೋಟೇಲಲ್ಲೂ ಅಂಗಡಿಯಲ್ಲೂ ಪ್ರಕಟಿಸಿಯೂ ಆಯಿತು ನನ್ನನ್ನು ಹೊರದಬ್ಬುತ್ತಾರೆ ಏನಹ ನಿನ್ನನ್ನು ಈಗ ಹೊರದಬ್ಬಲಾರರು. ಇಂದು ನಿನ್ನನ್ನೇ ಪ್ರೀತಿಸುವವರು ಬಹಳ! "ಹಿತ್ತಾಳೆ, ಅರಶಿನ, ಹಳದಿ ಬಣ್ಣದ ಎರಡಾಣೆ ಇಲ್ಲಿಬೇಡ!" ಎಂದು ಪ್ರಚಾರಿಸಿ ನನ್ನ ಕೊಲೆ ಗೈದರು ಆದರಲ್ಲೂ ಎರಡಾಣೆ, ಹಳದಿ ಬಣ್ಣದ ಎನ್ನುವಲ್ಲಿ ಚೆನ್ನಾದ ಬಣ್ಣ ಕೊಟ್ಟಿದ್ದಾರೆ. ಇಂದು ನನ್ನನ್ನು ಕಂಡದ್ದೇ ಆದರೆ ಜನ "ಇದು ಬ್ಯಾಡ್ ಕ್ವಾಯಿನ್" ಎನ್ನುತ್ತಾರೆ ನನ್ನ ಗೆಳೆಯರನ್ನೆಲ್ಲ ಕೊಂಡು ಹೋಗಿ ದೊಡ್ಡ ಬ್ಯಾಂಕಿಗೊಯ್ದರು ಅಲ್ಲಿ ನಮ್ಮ ಭೀಕರ ಕೊಲೆ! ನಿರ್ಧನಿಗಳು ಪರಾಮರ್ಶಿಸದೆ ಕೈಯ್ಯಾರೆ ಕೊಲೆಮಾಡುವರು ನನ್ನ ಸಾವೂ ಸನ್ನಿಹಿತವಾಯಿತು ನನ್ನ ಕೊಲೆಯ ಸನ್ನಿವೇಶದಲ್ಲಿ, "ಚಂಡಾಲ ಏನೆಂದಿ ನಿನ್ನಂತಹ ೩೨ ಮಂದಿ ಮೂರ್ಖರು ಸೇರಿದಾಗಲಂತೂ ನಿನ್ನೊಡೆಯನಿಗೆ ಸಿನಿಮಾ ನೋಡಸಿಗದು' ಎಂಬ ಮಾತಿನ ಮನವರಿಕೆಯಾಗದೇ ಇಲ್ಲದು ಆದರಿಂದು ನನ್ನಂತಹ ಸಾವಿರ ಗೆಳೆಯರನ್ನು ಕೊಂಡುಹೋದರೂ ಬೆಲೆಯಿಲ್ಲ .." ಹೀಗೆ ಹಿತ್ತಾಳೆ ಎರಡಾಣೆ (ಸೊಕ್ಕು ಮುರಿದ)ಯ ಭಾಷಣ ಮುಗಿಯಲು ಅಲ್ಲಿ ಆವೇಲಿ, ರೂಪಾಯಿ ಪಾವಲಿ ಎಲ್ಲ ಜತೆಗೂಡಿದರು ನ ಪೈ ಮಾತ್ರ ಮೊಸಳೆ ಕಣ್ಣೀರು ಸುರಿಸುತ್ತಿತ್ತು ಆಗ ಎರಡಾಣೆ ಅಸ್ಪೃಶ್ಯನಂತೆ ಇದ್ದನು

—ಕೆ ರಮೇಶ ಪೈ

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಿಮಗೆ ಒಂದು ಕ್ಯಾಬಿನೆಟ್ ಅಗತ್ಯ ಕಳ್ಳರ, ಹುಳುಹುಪ್ಪಟೆಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು, 3 ಸೈಜುಗಳಿವೆ, ಪಿಜನ್, ಹಾಸ್ಪಿಟಲ್, ಯುಟಿಲಿಟಿ ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು ಮತ್ತು ಭದ್ರವಾದ ಬೀಗವುಳ್ಳ ಒಳಕೋಣೆಗಳಿವೆ.

ಅಲ್ಲದೆ
ಸೋಫಾ ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್,
ಡೆಸ್ಕ್‌ಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು,
ವಿ ಕೆ ರಾಜ್ ಇಂಡಸ್ಟ್ರೀಸ್, ಅಲಿಘರ್ ಇವರ
ಉತ್ತಮ ಬೀಗಗಳು
ಇವೆಲ್ಲ ಸ್ಟಾಕಿವೆ.
ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು
7 ಲಿವರ್‌ಗಳ ಬೀಗ ಅದರದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ
ಶೋ ರೂಮನ್ನು ಸಂದರ್ಶಿಸಿ:
ಶಾಸ್ತ್ರೀ ಅಂಡ್ ಕಂಪೆನಿ
ಹಂಪನಕಟ್ಟೆ – – ಮಂಗಳೂರು

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE BY
Crown RUBBER STAMP CO.
BALMATTA ROAD, MANGALORE.

ಇತಿಹಾಸ ಪುಟ

ಅಕಬರನ ಕಾಲದ ಭಾರತ

ಅವನ ರಾಜ್ಯಾಡಳಿತ ವ್ಯವಸ್ಥೆ ಅತ್ಯುತ್ತಮ ರೀತಿಯದಿತ್ತು

(ಮುಂದುವರಿದುದು)

ರಜಪೂತರ ಆಖ್ಯಾಯಿಕೆಯಲ್ಲಿ ಚಾರಣ ಕವಿಗಳು ಮಾನಸಿಂಹನನ್ನು 'ಕಲಿಯುಗದ ಕಲಂಕ'ನೆಂದು ವರ್ಣಿಸಿದ್ದಾರೆ. ಚಿತೋಡದ ಯುವರಾಜರಿಗೆ ಆಗ ರಾಣಾ ಕೀಕಾ ಎನ್ನುವ ಪದ್ಧತಿ ಇತ್ತು. ಆಗ ರಾಜಸ್ಥಾನದ ಅತಿ ರಮಣೀಯ ಪಟ್ಟಣವೂ, ಅತ್ಯುನ್ನತ ಶಿಖರವೂ ಆದ ಆಬೂವಿಗೆ ಆರ್ಬುದಾಚಲವೆಂದು ಕರೆಯುತ್ತಿದ್ದರು. ಇದನ್ನೇ ಟಾಡ್‌ಸಾಹೇಬರು 'Olympus of India' ಎಂದು ಕರೆದಿದ್ದಾರೆ. ಆಗ ಹಿಂದುಸ್ಥಾನದ ಮುಸ್ಲಿಮರು ಮೆಕ್ಕಾ ಯಾತ್ರೆಗೆ ಹೋಗುವ ಪದ್ಧತಿ ಇತ್ತು. ಅಂದು ಅಜಮೀರದಿಂದ ಸುಮಾರು ೪೫ ಮೈಲು ಪೂರ್ವಕ್ಕಿರುವ ಅಂಬರದ ಮುಖ್ಯ ವ್ಯಾಪಾರಸ್ಥಳವಾದ . ಮಾಲಪುರವು ಒಂದು ಉತ್ತಮ ಬಂದರಾಗಿತ್ತು.

ರಾಜಪುತ್ರರಲ್ಲಿ ರಾಖಿ ಬಂದಿನ ಸಮಾರಂಭವು ಬೇಸಗೆಯಲ್ಲಿ ನಡೆಯುತ್ತಿತ್ತು. ರಾಖಿಬಂದ ಭಾಯಿ (ಕಡಗ ಕೊಟ್ಟ ಸಹೋದರ) ಯನ್ನು ಸ್ತ್ರೀಯರು ತಮ್ಮ ಅಣ್ಣನೆಂದೇ ಭಾವಿಸುತ್ತಿದ್ದರು. ಈ ರಾಖಿ ಬಂದನು ಆಕೆಗೆ ಎಷ್ಟು ಉಪಕಾರ ಮಾಡಿದರೂ ಪ್ರತಿಫಲಕ್ಕೆ ಆಶೆ ಮಾಡಬಾರದಿತ್ತು.

ಅಕಬರನು ಪ್ರಜೆಗಳ ಹಿತಕ್ಕಾಗಿ ಮಾಡಿದ ಅಜ್ಞೆಗಳನ್ನು ಮುರಿದ ಜನರನ್ನು ತಪ್ಪದೆ ಶಿಕ್ಷಿಸುತ್ತಿದ್ದನು. ಸ್ವೇಚ್ಛಾಚಾರದ ಅಜ್ಞೆಗಳನ್ನು ಮೀರಿದವರನ್ನು ಎಷ್ಟೋ ಸಾರಿ ಶಿಕ್ಷಿಸದೆ ಬಿಡುತ್ತಿದ್ದನು. ಬಾದಷಹನ ರಜಪೂತ ರಾಣಿಯಾದ ಜೋಧಬಾಯಿಯು ತೀರಿಕೊಂಡಾಗ ಎಲ್ಲಾ ರಜಪೂತ—ಮುಸಲ್ಮಾನ ಸರದಾರರೂ ದುಃಖದ ಪ್ರದರ್ಶನಾರ್ಥವಾಗಿ ತಮ್ಮ ತಮ್ಮ ಗಡ್ಡ ಮೀಸೆಗಳನ್ನು ತೆಗೆಸಬೇಕೆಂದು ಆಜ್ಞೆ ಮಾಡಿದ್ದನು!

ಅಕಬರನ ಕಾಲದಲ್ಲಿ ಪ್ರಜಾಸತ್ತಾತ್ಮಕ ಪದ್ಧತಿಯು ರೂಢಿಯಲ್ಲಿರಲಿಲ್ಲ. ಆಗ ರಾಜಸತ್ತಾತ್ಮಕವೇ ಪ್ರಚಾರದಲ್ಲಿತ್ತು. ೧೬ನೆಯ ಶತಮಾನದಲ್ಲೇ ಪ್ರಜಾಪ್ರಭುತ್ವ ಪದ್ಧತಿಯು ಸಮಗ್ರ ಏಶ್ಯಾ ಖಂಡದಲ್ಲೇ ಇರಲಿಲ್ಲ. ಆಗ ರಾಜಸ್ಥಾನದಲ್ಲಿ ಜಮೀದಾರಿ ಪದ್ಧತಿಯು ಆಚರಣೆಯಲ್ಲಿತ್ತು. ಅಕಬರನ ಆಡಳಿತೆಯ ಕಾಲದಲ್ಲಿ ಪ್ರಮುಖರು ಅಮೀರರಾಗಿದ್ದು, ಇವರು ಬಾದಷಹನ ಮನೆತನಕ್ಕೆ ಸೇರಿದವರಾಗಿದ್ದರು. ಇವರೇ ಮಂತ್ರಿಗಳೂ, ಸುಭೇದಾರರೂ, ಪ್ರಾಂತಾಧಿಪತಿಗಳೂ ಆಗುತ್ತಿದ್ದರು. ಬಾದಷಹನು ವಂಶಪರಂಪರೆಯಾಗಿ ಯಾರಿಗೂ ಉಂಬಳಿ ಬಿಡದೆ, ಕೆಲವು ಅಮೀರರಿಗೆ ಮಾತ್ರ ಅವರು ಬದುಕಿರುವವರೆಗೆ ಅನುಭವಿಸಬಹುದಿತ್ತು. ಕೆಲವೊಮ್ಮೆ ಈ ಅಮೀರರ ಹೆಂಡಿರಿಗೆ ಅವರ ಮರಣಾನಂತರ ಜೀವನಾಂಶ ಕೊಡುವುದೂ ಇತ್ತು. ಈತನು ಮೊದಲಿದ್ದ ಮುಸ್ಲಿಂ ಧರ್ಮೋಪದೇಶಕರ ಅಧಿಕಾರ ತಗಿಸಿದನು.

ಆಗ ನ್ಯಾಯದ ಇಲಾಖೆ, ಸೈನ್ಯದ ಇಲಾಖೆ (ಲಷ್ಕರ್ ಖಾತೆ), ಸಿವಿಲ್ ಇಲಾಖೆ (ಮುಲ್ಕಿ ಖಾತೆ) ಎಂದು ಮೂರು ಮುಖ್ಯ ವಿಭಾಗಗಳಿದ್ದುವು. ಅಕಬರನ ಕಾಲದಲ್ಲಿ ಸಿವಿಲ್ ಇಲಾಖೆಯ ಅಧಿಕಾರಿಗಳು ಲಂಚಗುಳಿಗಳಾಗಿದ್ದುದರಿಂದಲೇ ಬಂಗಾಲದಲ್ಲಿ ದಂಗೆಯುಂಟಾಯಿತು. ಬಂಗಾಲದ ಸರಕಾರಿ ಉದ್ಯೋಗಿಗಳಿಗೆ ಸಂಬಳ ಏರಿಸಬೇಕೆಂದು ಬಾದಷಹನು ಅಪ್ಪಣೆ ಕೊಟ್ಟರೂ ಬಂಗಾಲ ಸರಕಾರವು ಅದನ್ನು ಸಂಪೂರ್ಣ ಪಾಲಿಸದುದೇ ದಂಗೆಯ ಕಾರಣ.

೧. **ನ್ಯಾಯ ಖಾತೆ**—ಅಕಬರನ ರಾಜ್ಯಭಾರದ ಮೊದಲು ಹಿಂದೂ ದ್ವೇಷಿಗಳಾದ ಕಾಜಿಗಳೇ ನ್ಯಾಯಾಧೀಶರು, ಇವರಿಗೆ ಕೇವಲ ಕುರಾಣದ ಜ್ಞಾನ ಮಾತ್ರವಿತ್ತು. ಇವರು ಮನಸ್ಸು ಬಂದಂತೆ ತೀರ್ಪು ಕೊಡುತ್ತಿದ್ದುದರಿಂದ ಜನರು ಇವರ ಬಳಿಗೆ ಫಿರ್ಯಾದನ್ನು ತರಲೂ ಭಯಪಡುತ್ತಿದ್ದರು. ಇವರು ವಿಶೇಷವಾಗಿ ಸುನ್ನಿ ಮತದವರಾಗಿದ್ದುದರಿಂದ ಷಿಯಾ ಮತದವರನ್ನೂ ಇವರು ಹಿಂಸಿಸದೆ ಬಿಡುತ್ತಿರಲಿಲ್ಲ. ಅಕಬರನು ಷಿಯಾ ಮತದವನು. ಅವನು ಮತಾಭಿಮಾನವುಳ್ಳ ನ್ಯಾಯಾಧೀಶರನ್ನು ಮನೆಗೆ ಕಳುಹಿಸಿ, ವಿದ್ವತ್ತೂ ಅನುಭವವೂ ಉಳ್ಳ ಮೀರ್-ಅ-ಆದಿಲ್ಲ (ನ್ಯಾಯಾಧೀಶ)ರನ್ನೇ ನಿಯಮಿಸಿದನು. ಇವರ ಕೈಕೆಳಗೆ ಮತಾಭಿಮಾನವಿಲ್ಲದ ಕಾಜಿಗಳು ಸಲಹೆ ನೀಡುತ್ತಿದ್ದರು. ದೊಡ್ಡ ದೊಡ್ಡ ಊರುಗಳಲ್ಲಿ ಕೊತವಾಲರೆಂಬ ಅಧಿಕಾರಿಗಳಿದ್ದು, ಇವರು, ಜನರು ಸನ್ಮಾರ್ಗವನ್ನು ಬಿಡದಂತೆ ನೋಡುತ್ತಿದ್ದರು. ಕೊತವಾಲರು ಪ್ರಾಮಾಣಿಕರಾಗಿದ್ದರು. ಇವರು ಗ್ರಾಮದ ಮನೆಯ ಸಂಖ್ಯೆ, ಮನೆಯ ಯಜಮಾನರು ಮತ್ತು ಇತರರು—ಇವರ ಉದ್ಯೋಗ—ಇವುಗಳ ಪಟ್ಟಿಯನ್ನಿಡಬೇಕಿತ್ತು. ಗ್ರಾಮದ ಶಾಂತಿ ರಕ್ಷಣೆಯು ಸಂಪೂರ್ಣ ಕೊತವಾಲರನ್ನೇ ಹೊಂದಿಕೊಂಡಿತ್ತು. ಊರ ಹೊರಗಿನವರು ತಮ್ಮ ಗ್ರಾಮಕ್ಕೆ ಬಂದರೆ ಆ ವ್ಯಕ್ತಿಗಳ ಊರು, ಹೆಸರುಗಳನ್ನು ಬರೆದುಕೊಂಡು, ಊರುಗಳಲ್ಲಿ ಅವರು ಅಶಾಂತಿ ಗಲಭೆಗಳನ್ನೆಬ್ಬಿಸದಂತೆ ಕೊತವಾಲರು ಅವರ ಮೇಲೆ ಕಣ್ಣಿಟ್ಟಿರಬೇಕಿತ್ತು. ಗುಡಿಕೈಗಾರಿಕೆಗಳಲ್ಲಿ ಯಾರು ಯಾರು ಯಾವ ಯಾವ ವೃತ್ತಿಯನ್ನವಲಂಬಿಸಿದ್ದರೆಂದೂ ಇವರು ಬರೆದುಕೊಳ್ಳಬೇಕಿತ್ತು. ಮಕ್ಕಳಿಲ್ಲದೆ ಮೃತರಾದವರ ಆಸ್ತಿಗೆ ಬಾಧ್ಯರು ಯಾರೆಂದು ವಿಚಾರಿಸಿ ಅದನ್ನು ಹಕ್ಕುದಾರರಿಗೇ ಸಲ್ಲಿಸುವ ಅಧಿಕಾರವೂ ಇವರಿಗಿತ್ತು. ಚಿಕ್ಕ ಚಿಕ್ಕ ಹಳ್ಳಿಗಳ ಒಡೆತನವು ಗೌಡರ ಅಥವಾ ಕುಲಕರಣಿಗಳ ವಶದಲ್ಲಿತ್ತು.

೨ **ಲಷ್ಕರ ಖಾತೆ** (ಸೇನಾ ಇಲಾಖೆ) ಅಕಬರನು ಸೇನಾಧಿಕಾರಿಗಳಿಗೂ, ಸೈನಿಕರಿಗೂ ಹಣದ ರೂಪದಲ್ಲಿ ಸಂಬಳ ಕೊಡುತ್ತಿದ್ದನು. ಆದರೆ ಹಿಂದಿನಿಂದಲೂ ಉಂಬಳಿಯನ್ನುಪಯೋಗಿಸುತ್ತಿದ್ದ ದಳವಾಯಿಗಳ ಉಂಬಳಿಯನ್ನು ಕಸಿದುಕೊಳ್ಳದೆ ಅವರು ಉತ್ಪತ್ತಿಗೆ ಸರಿಯಾಗಿ ಸೇನೆ ಇಟ್ಟಿದ್ದಾರೋ ಇಲ್ಲವೋ ನೋಡಲು ತಕ್ಕ ಅಧಿಕಾರಿಗಳಿದ್ದರು—ಆಗ ಸೇನೆಯಲ್ಲಿ ತರತರದ ಅಂತರವಿರಲಿಲ್ಲ. ಹತ್ತು ಮಂದಿಯಿಂದ ಹತ್ತು ಸಾವಿರದವರೆಗಿನ ರಾಹುತರ ಮೇಲಧಿಕಾರಿಗಳಿಗೆ ಮನಸಬ್ದಾರರೆಂಬ ಒಂದೇ ಹೆಸರಿತ್ತು. ಇವರಿಗಿಂತ ಮೇಲಿನ ಅಧಿಕಾರಿಗಳೇ ಅಮೀರರು. ಆಗ ಹತ್ತು ಸಾವಿರ ರಾಹುತರ ಮೇಲಿನ ಅಧಿಕಾರಿಗಳೇ ದೊಡ್ಡ ಮನಸಬ್ದಾರರು. ಈ ಪದವಿಯು ಹೆಚ್ಚಾಗಿ ಬಾದಷಹನ ಮಕ್ಕಳಿಗೇ ದೊರೆಯುತ್ತಿತ್ತು. ಅಕಬರನ ಹಿರಿಯ ಮಗ ಸಲೀಮನೂ, ಎರಡನೆಯ ಮಗ ಮುರಾದನೂ, ಮೂರನೆಯ ಮಗ ಡೇನಿಯಲನೂ, ಕ್ರಮವಾಗಿ ಹತ್ತು ಸಾವಿರ, ಎಂಟು ಸಾವಿರ, ಏಳು ಸಾವಿರ ರಾಹುತರ ಮೇಲಧಿಕಾರಿಗಳಾಗಿದ್ದರು. ಇನ್ನು ಅಕಬರನ ಸೇನೆಯಲ್ಲಿ ದೊಡ್ಡ ದಳವಾಯಿಯೆಂದರೆ ರಾಜಾ ಮಾನಸಿಂಹನು. ಇವನು ಏಳು ಸಾವಿರ ಸವಾರರ ಮೇಲಿನ ಮನಸಬ್ದಾರನಾಗಿದ್ದನು. ಸಲೀಮನ ಮಗನು ಐದು ಸಾವಿರ ಸವಾರರ ಮೇಲಧಿಕಾರಿಯಾಗಿದ್ದ. ಆಗ ಮಾನಸಿಂಹನನ್ನು ಬಿಟ್ಟು ಬಾದಷಹನ ಮಕ್ಕಳಲ್ಲದೆ ಯಾರೂ ಐದು ಸಾವಿರ ಸವಾರರ ಮೇಲಧಿಕಾರಿಗಳಾಗಿರಲಿಲ್ಲ. ಅಕಬರನ ಕಾಲದಲ್ಲಿ ಅಮೀರರೂ ಮನಸಬ್ದಾರರೂ ಕೂಡಿ ೪೧೫ ಮಂದಿ ಇದ್ದರು. ಇನ್ನು ಕಡಿಮೆ ತರದ ದಳವಾಯಿಗಳು ೧೪೦೦ ಜನರಿದ್ದರು. ಮನಸಬ್ದಾರರಿಗೆ ತಿಂಗಳೊಂದಕ್ಕೆ ೧೫೦ ರೂ. ಗಳಿಂದ ೭೦೦ ರೂ. ಗಳವರೆಗೆ ಸಂಬಳ ದೊರೆಯುತ್ತಿತ್ತು (ಟಾಲ್ಬಾಯ್ಸ್ ವ್ಹೀಲರ ಹಿಂದುಸ್ಥಾನದ ಇತಿಹಾಸ). ಇನ್ನು ಮೊಗಲರ ದಂಡಿನಲ್ಲಿದ್ದ ಅಹದಿಯರೆಂಬ ಸವಾರರಿಗೆ ತಿಂಗಳಿಗೆ ೨೦ರಿಂದ ೨೫ ರೂ. ಸಂಬಳದವರೆಗೆ ದೊರೆಯುತ್ತಿತ್ತು. ಬಿಲ್ಲಾಳುಗಳಿಗೆ ತಿಂಗಳಿಗೆ ೩॥ರೂ. ಸಂಬಳವೂ, ತುಬಾಕಿಯವರಿಗೆ ೬ರೂ. ಸಂಬಳವೂ ದೊರೆಯುತ್ತಿತ್ತು. ಆಗ ಯುದ್ಧ ಭೂಮಿಯಲ್ಲಿ ಗಜಸೇನೆಗೇ ಪ್ರಾಮುಖ್ಯತೆ ಹೆಚ್ಚಿತ್ತು.

೩ **ಮುಲ್ಕಿಯ ಖಾತೆ**(ಸಿವಿಲ್ ಇಲಾಖೆ)—ಅಕಬರನು ಪಟ್ಟವೇರುವ ಮೊದಲು ಷೇರ್‌ಷಹನ ಕಂದಾಯದ ಕ್ರಮವೇ ಉತ್ತರ ಹಿಂದುಸ್ಥಾನದಲ್ಲಿ ರೂಢಿಯಲ್ಲಿತ್ತು. ಅಕಬರನು ತನ್ನ ಆಡಳಿತೆಯಲ್ಲಿ ಅದನ್ನು ಕಿತ್ತುಹಾಕದೆ, ಅಲ್ಲಲ್ಲಿ ತಿದ್ದುಪಡಿಗಳನ್ನು ಮಾಡಿದನು. ಅವನು ಭೂಮಿಯನ್ನೆಲ್ಲಾ ಹೊಸತಾಗಿ ಅಳತೆಮಾಡಿಸಿ ಒಂದು ಬಿಘೆಗೆ (ಬಂಗಾಲದಲ್ಲಿ ⅓ ಎಕರೆಗೂ, ವಾಯುವ್ಯ ಪ್ರಾಂತದಲ್ಲಿ ⅝ ಎಕ್ರೆಗೂ ಬಿಘೆಯೆನ್ನುತ್ತಾರೆ) ಹತ್ತು ಸೇರು ಕಾಳನ್ನು ಕಂದಾಯವಾಗಿ ಕೊಡಬೇಕೆಂದು ನಿರ್ಣಯಮಾಡಿದನು. ಆಗ ಪ್ರತಿ ಜಿಲ್ಲೆಯಲ್ಲೂ ಸರಕಾರದ ದೊಡ್ಡ ದೊಡ್ಡ ಕಣಜಗಳಿದ್ದುವು. ಈ ಕಣಜವು ಬರಗಾಲದಲ್ಲೂ, ಒಕ್ಕಲಿಗರಿಗೆ ಬೀಜದ ದುರ್ಭಿಕ್ಷೆ ಬಂದಾಗಲೂ ಉಪಯೋಗಕ್ಕೆ ಬರಬೇಕೆಂದು ಸರಕಾರದ ಉದ್ದೇಶವಿತ್ತು.

ಆಗ ಬೆಳೆಯನ್ನನುಸರಿಸಿ ಭೂಮಿಯು ಮೂರು ವರ್ಗಗಳಾಗಿ ವಿಭಾಗವಾಗಿತ್ತು. ಕಂದಾಯವು ಆಗ ಭೂಮಿಯ ಸರಾಸರಿ ಉತ್ಪನ್ನವನ್ನು ಹೊಂದಿತ್ತು. ಅಕಬರನ ಆಡಳಿತೆಯ ಆರಂಭದಲ್ಲಿ ಕಂದಾಯವು ಧಾನ್ಯದ ಮೂಲಕ ಸಲ್ಲುತ್ತಿದ್ದರೂ, ಕಡೆಗೆ ಹಣ ರೂಪದಲ್ಲಿ ತೆರಬೇಕೆಂದಾಯಿತು. ಆಗ ಒಂದು ಕರೋರ ದಾಮು (ಇಪ್ಪತ್ತೈದು ಸಾವಿರ ರೂ.ಗಳು; ೧ ರೂಪಾಯಿ=೪೦ ದಾಮು) ಉತ್ಪತ್ತಿಯ ಪ್ರದೇಶಕ್ಕೆ ಕರೋರಿ ಎಂಬ ಒಬ್ಬ ಅಧಿಕಾರಿ ಇದ್ದನು. ಇವನು ಎರಡು ಲಕ್ಷ ದಾಮನ್ನು ಜನರಿಂದ ತೀರ್ವೆಯಾಗಿ ಎತ್ತಿದೊಡನೆ ರಾಜಭಂಡಾರಕ್ಕೆ ಕಳುಹಿಸಬೇಕಿತ್ತು. ಮುಂದೆ ಈ ಕ್ರಮದಲ್ಲೂ ತೃಪ್ತಿಕಾಣದೆ ಪ್ರತಿಯೊಂದು ಗ್ರಾಮಕ್ಕೂ ಒಬ್ಬ ತೀರ್ವೆ ಎತ್ತುವ ಅಧಿಕಾರಿಯನ್ನು ನಿಯಮಿಸಿದನು. ಆಗ ರಾಜಾ ತೋಡರಮಲ್ಲನು ಕಂದಾಯದ ಮಂತ್ರಿಯಾಗಿದ್ದನು. ಅಕಬರನು ಅವನ ಸೂಚನೆಯಂತೆ ತೆರಿಗೆ ಎತ್ತುತ್ತಿದ್ದನು.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ಎರಡು. ಎರಡು ರೂಪಾಯಿ ೨೫ ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಒಂದೂವರೆ. ಒಂದು ರೂಪಾಯಿ ೭೫ ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಲೋಕಸಭೆಯಲ್ಲಿ

ಭಾರತದಲ್ಲಿ ರೈಲುಗಳು ಮಂದಗಮನಿ

ಲೋಕಸಭೆಯಲ್ಲಿ ರೇಲ್ವೆ ಮುಂಗಡ ಪತ್ರದ ಕುರಿತು ಶ್ರೀ ಕೆ. ಆರ್. ಆಚಾರ್‌ರ ಅಭಿಪ್ರಾಯ.

ಕಳೆದ ವಾರ, ಲೋಕ ಸಭೆಯಲ್ಲಿ ರೈಲ್ವೆ ಮುಂಗಡ ಪತ್ರದ ಸಾಮಾನ್ಯ ಚರ್ಚೆಯಲ್ಲಿ ಭಾಗವಹಿಸಿದ ಶ್ರೀ| ಕೆ. ಆರ್. ಆಚಾರ್ ಅವರು, ನಮ್ಮ ದೇಶದಲ್ಲಿ ರೈಲುಗಳ ಮಂದಗತಿಯ ಬಗ್ಗೆ ಟೀಕಿಸಿದರಲ್ಲದೆ, ಮಂಗಳೂರು–ಬೊಂಬಯಿ ಕರಾವಳಿ ರೈಲು ರಸ್ತೆ ನಿರ್ಮಾಣದ ಆವಶ್ಯಕತೆಯನ್ನೂ ಪ್ರಸ್ತಾಪಿಸಿದರು.

ಶ್ರೀ| ಆಚಾರ್ಯರ ಭಾಷಣದ ಮುಖ್ಯಾಂಶ ಇಂತಿದೆ:

“ನಮ್ಮ ರೈಲುಗಳ ವೇಗದ ಬಗ್ಗೆ ನಾನು ಒಂದೆರಡು ಮಾತು ಹೇಳಬೇಕಾಗಿದೆ. ರೈಲ್ವೆ ಸಂಸ್ಥೆಯೊಂದರ ಆಡಳಿತ ಸಮರ್ಥತೆಯ ಪರಿಗಣನೆಯಲ್ಲಿ, ಅವುಗಳು ಹೊಂದಿರುವ ವೇಗ ಅಥವಾ ಕ್ಷಿಪ್ರ ಸಾಗಾಟವೇ ಪ್ರಧಾನ ಅಳತೆಗೋಲಾಗಿದೆ. ಆದರೆ, ನಮ್ಮ ರೈಲ್ವೆ ಮಂತ್ರಿ ಶಾಖೆ ಅಥವಾ ರೈಲ್ವೆ ಬೋರ್ಡು ಈ ವಿಚಾರಕ್ಕೆ ಗಮನ ಕೊಟ್ಟಂತಿಲ್ಲ. ೩೪,೦೦೦ ಮೈಲುದ್ದದ ರೈಲು ಮಾರ್ಗವಿದೆ ಎಂಬ ಹೆಮ್ಮೆ ನಮಗಿದೆ. ನಮ್ಮ ರೈಲ್ವೆ ಖಾತೆಯಲ್ಲಿ ೧೧ ಲಕ್ಷ ಮಂದಿ ದುಡಿಯುತ್ತಿದ್ದಾರೆ. ಇದೊಂದು ದೊಡ್ಡ ಸಂಸ್ಥೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ನಮ್ಮ ದೇಶವೂ ಅತಿ ದೊಡ್ಡದು ಈ ದೃಷ್ಟಿಯಿಂದ ನಮ್ಮ ರೈಲ್ವೆ ಸಂಸ್ಥೆ ದೊಡ್ಡದೆನಿಸಲಾರದು.

“ನಮ್ಮ ರೈಲ್ವೆಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಮಾತನಾಡುವಷ್ಟು ಸಮಯಾವಕಾಶ ನನಗಿಲ್ಲದಿರುವುದರಿಂದ ವೇಗದ ಬಗ್ಗೆ ಮಾತ್ರ ಮಾತನಾಡುವೆನು. ರೈಲ್ವೆಗೆ ಸಂಬಂಧಿಸಿದ ಹೇರಳ ಮಾಹಿತಿ ಪತ್ರಗಳನ್ನೇನೋ ನಮಗೆ ಒದಗಿಸಲಾಗಿದೆ. ಆದರೆ ವೇಗಕ್ಕೆ ಸಂಬಂಧಿಸಿದ ಯಾವ ಪತ್ರಗಳೂ ಇಲ್ಲ. ಗೂಡ್ಸ್ ಬಂಡಿಯ ವೇಗದ ಕುರಿತು ಕೆಲವು ತಖ್ತೆಗಳಿವೆ. ಸಾಮಾನ್ಯವಾಗಿ ನಮ್ಮ ಗೂಡ್ಸ್ ಬಂಡಿಯ ವೇಗ ಗಂಟೆಗೆ ೧೦ರಿಂದ ೧೨ ಮೈಲು—ಎಂದರೆ ಎತ್ತಿನ ಗಾಡಿಯ ಇಮ್ಮಡಿ ವೇಗ. ಅದಂತಿರಲಿ. ನಮ್ಮ ಪೆಸೆಂಜರ್, ಎಕ್ಸ್‌ಪ್ರೆಸ್ ಮೈಲು ಬಂಡಿಗಳ ವೇಗದ ಕತೆಯೇನು? ರೈಲ್ವೆ ಮಂತ್ರಿ ಶಾಖೆಯು ಆ ಬಗ್ಗೆ ಮಾಹಿತಿಗಳನ್ನೇ ಒದಗಿಸಲಿಲ್ಲ?

“ವಿದೇಶಗಳಲ್ಲಿ ರೈಲುಗಳ ವೇಗದ ಬಗ್ಗೆ ನಾವು ಓದಿದ್ದೇವೆ. ಅಲ್ಲಿ ರೈಲು ಸಾಮಾನ್ಯವಾಗಿ ಗಂಟೆಗೆ ೬೦ ಮೈಲ ವೇಗದಲ್ಲಿ ಓಡುತ್ತಿದೆಯಂತೆ.

(ಆಗ ಡಾ| ಮೇಲ್ಕೋಟೆ ಅವರು ‘ಗಂಟೆಗೆ ೧೦೦ ಮೈಲು ಎಂದರು.)

ಗಂಟೆಗೆ ೧೦೦ ಮೈಲು ಎಂದು ನನ್ನ ಮಾನ್ಯ ಮಿತ್ರರೆನ್ನುತ್ತಾರೆ. ಹೇಗಿದ್ದರೂ ಅಲ್ಲಿಯ ರೈಲುಗಳ ವೇಗದ ಅನುಭವ ನನಗಿಲ್ಲ. ಅಲ್ಲಿಯ ರೈಲುಗಳ ವೇಗವೊಂದಿಗೆ ನಮ್ಮದನ್ನು ಹೋಲಿಸುವ ರೈಲ್ವೆ ಬೋರ್ಡ್ ಅಥವಾ ರೈಲ್ವೆ ಮಂತ್ರಿ ಶಾಖೆ ಈ ವಿಚಾರದಲ್ಲಿ ಯಾವುದೇ ಅಂಕೆಸಂಖ್ಯೆ ಕೊಡದಿದ್ದರೂ ನಾನು ಕೆಲವು ಅಂಕೆಗಳನ್ನು ಸಿದ್ಧಗೊಳಿಸಿರುವೆನು. ಬ್ರಾಡ್ ಗೇಜಿನ ನಮ್ಮ ಕೆಲವು ವೇಗದ ಬಂಡಿಗಳ ಗತಿಯನ್ನು ಪರಿಶೀಲಿಸುವ. ಅಮೃತಸರ ಮೈಲಿನ ವೇಗ ಗಂಟೆಗೆ ಸರಾಸರಿ ೩೧ ಮೈಲು ಎಂದು ನಾನು ಲೆಕ್ಕ ಹಾಕಿರುವೆನು. ಹೌರಾ—ದಿಲ್ಲಿ—ಕಲ್ಕಾ ಮೈಲಿನ ವೇಗ ಗಂಟೆಗೆ ೩೫ರಿಂದ ೩೬ ಮೈಲು ಫ್ರಾಂಟಿಯರ್ ಮೈಲ್, ಬೊಂಬಯಿ—ಕಲ್ಕತ್ತ ಮೈಲ್ ಇವುಗಳ ವೇಗವೂ ಸಾಧಾರಣ ಗಂಟೆಗೆ ೩೫ ಮೈಲು. ಬೊಂಬಯಿ—ಮದರಾಸು ಮೈಲಿನ ವೇಗ ೨೩ ಮೈಲು. ನಾನು ಹೀಗೆನ್ನುವಾಗ, “ರೈಲ್ವೆ ಶಾಖೆಯು ದಕ್ಷಿಣ ಭಾರತವನ್ನು ತೀವ್ರವಾಗಿ ಅಲಕ್ಷಿಸುತ್ತಿದೆ” ಎಂದು ನನ್ನಿಂದ ಮೊದಲು ಮಾತನಾಡಿದ ನನ್ನ ಮಿತ್ರರು, ವೇಗದಲ್ಲಿಯ ಈ ತಾರತಮ್ಯವನ್ನೂ ಒಂದು ಉದಾಹರಣೆಯಾಗಿ ಕೊಡಬಹುದು. ಆದರೆ, ದಕ್ಷಿಣದವರು ಅಲಕ್ಷಿಸಲ್ಪಡುತ್ತಿದ್ದಾರೆ ಎಂಬ ಮಾತನ್ನು ನಾನು ನಂಬಲಾರೆ. ಕಣ್ಣಿಗೆ ಕಾಣಿಸದಿರುವುದು ಮನಸ್ಸಿಗೂ ಹೊಳೆಯದಿರಬಹುದು. ದಕ್ಷಿಣವು ರಾಜಧಾನಿಯಿಂದ ದೂರವಾಗಿದೆ. ನಮ್ಮ ಬೇಡಿಕೆಗಳು ಸರಿಯಾದ ರೀತಿಯಲ್ಲಿ ಒಮ್ಮತದಿಂದ ಮಂಡಿತವಾಗುವುದಿಲ್ಲ. ದಕ್ಷಿಣದ ಬೇಡಿಕೆಗಳು ವಿಳಂಬಗೊಳ್ಳಲು ಇದೇ ಕಾರಣವಲ್ಲದೆ ಉತ್ತರದವರ ಅಲಕ್ಷ್ಯವಲ್ಲ ಎಂದು ನನ್ನ ನಂಬಿಕೆ.

ಉತ್ತರದ ಕೆಲವು ರೈಲುಗಳ ವೇಗವನ್ನು ಪರಿಶೀಲಿಸಿದೆವು. ಇನ್ನು, ಮದ್ರಾಸ್-ಕಲ್ಕತ್ತ ರೈಲಿನ ವೇಗ ೨೦ ಮೈಲು. ಗ್ರೆಂಡ್ ಟ್ರಂಕ್ ಎಕ್ಸ್‌ಪ್ರೆಸ್ ರೈಲಿನ ವೇಗ ಪರಿಶೀಲಿಸಿದಾಗ ಒಂದು ಚೋದ್ಯ ಕಂಡು ಬಂತು. ದಿಹಲಿಯಿಂದ ಇಟಾರ್ಸಿ ವರೆಗಿನ ಉತ್ತರ ಭಾರತ ಪ್ರದೇಶದಲ್ಲಿ ಈ ರೈಲಿನ ವೇಗ ೩೨ ಮೈಲು. ಆದರೆ ದಕ್ಷಿಣಕ್ಕೆ ಬಂದ ಬಳಿಕ ಈ ರೈಲಿನ ವೇಗ ಗಂಟೆಗೆ ೨೨ ಮೈಲಿಗೆ ಇಳಿಯುವುದು. ಇದರ ಕಾರಣ, ಶೋಧನೆಗೆ ನಾನು ಹೋಗುವುದಿಲ್ಲ.

ರೈಲಿನ ವೇಗವು ರೈಲ್ವೆ ಸಂಸ್ಥೆಯ ಆಡಳಿತ ಸಮರ್ಥತೆಯ ಅಳತೆಗೋಲಾಗಿದ್ದರೆ ನಮ್ಮ ರೈಲ್ವೆ ಖಾತೆಯ ಪರಿಸ್ಥಿತಿ ನಿರಾಶಾಜನಕವೇ. ರೈಲ್ವೆ ಬೋರ್ಡು ಹಾಗೂ ಮಂತ್ರಿ ಶಾಖೆ ಈ ವಿಚಾರದಲ್ಲಿ ತೀವ್ರ ಗಮನಕೊಡಬೇಕೆಂದು ನನ್ನ ವಿನಂತಿ. ಈ ಬಗ್ಗೆ ಅಮೆರಿಕ ಮತ್ತಿತರ ದೇಶಗಳಿಗೆ ನಿಯೋಗಗಳನ್ನು ಕಳುಹಿಸಿ ಅನುಭವ ಹೊಂದಬಹುದು.

ಮಂಗಳೂರು-ಬೊಂಬಯಿ ರೈಲು

“ಒಂದು ಕರಾವಳಿ ರೈಲು ಮಾರ್ಗದ ಮೂಲಕ ಮಂಗಳೂರು—ಬೊಂಬಯಿಗಳನ್ನು ಜೋಡಿಸಲಾಗುವುದು”—ಎಂದು ರೈಲ್ವೆ ಮಂತ್ರಿಗಳ ಮಾತನ್ನು ನಾನು ಸ್ವಾಗತಿಸುತ್ತೇನೆ. ನಾನು ಈ ಸಭೆಗೆ ಬಂದಂದಿನಿಂದ ಈ ಬಗ್ಗೆ ಪ್ರಾರ್ಥಿಸುತ್ತಿದ್ದೇನೆ. ಇಡೀ ದೇಶದ ಅಭಿವೃದ್ಧಿಯ ದೃಷ್ಟಿಯಿಂದಲೇ ಈ ರೈಲು ಅತಿ ಆಗತ್ಯ. ರೈಲ್ವೆ ಸಂಪರ್ಕವೇ ಇಲ್ಲದ ಇಷ್ಟೊಂದು ವಿಶಾಲ ಸ್ಥಳ ನಮ್ಮ ದೇಶದಲ್ಲಿ ಇನ್ನೊಂದಿರಲಾರದು. ಬೊಂಬಯಿಯ ದಕ್ಷಿಣದಲ್ಲಿ ಕೊಲಬದಿಂದ ರತ್ನಗಿರಿ ಉತ್ತರ ಕನ್ನಡ. ದಕ್ಷಿಣ ಕನ್ನಡ ಜಿಲ್ಲೆಗಳ ವರೆಗೆ ರೈಲು ಮಾರ್ಗವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫ ಮೈಲು ಉದ್ದಕ್ಕೆ ರೈಲು ಮಾರ್ಗವಿದೆ. ೬೫೦ ಮೈಲು ಉದ್ದದ ಈ ಪ್ರದೇಶದಲ್ಲಿ ರೈಲಿನ ಅನುಕೂಲತೆಯೇ ಇಲ್ಲ. ಈ ಪ್ರದೇಶದಲ್ಲಿ ರೈಲು ದಾರಿ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದನ್ನು ಕೇಳಿ ಸಂತೋಷವಾಗುತ್ತಿದೆ. ಆ ಬಗ್ಗೆ ರೈಲ್ವೆ ಮಂತ್ರಿಗಳು ಅಭಿನಂದನೀಯರು. ಹಾಸನ-ಮಂಗಳೂರು ರೈಲ್ವೆ ಮಾರ್ಗದ ಬಗ್ಗೆಯೂ ಮಾನ್ಯ ಮಂತ್ರಿಗಳು ಆಸೆಯನ್ನು ಕುದುರಿಸಿದ್ದಾರೆ. ಈ ಬಗ್ಗೆ ಬಜೆಟ್ ಅಧಿವೇಶನದ ಕೊನೆಯೊಳಗೆ ಒಂದು ಹೇಳಿಕೆ ಕೊಡುವುದಾಗಿಯೂ ಹೇಳಿದ್ದಾರೆ. ಹೇಳಿಕೆ ಬಂದೀತೆಂದು ನಾನು ನಿರೀಕ್ಷಿಸುತ್ತೇನೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S No. 502/1958.

ಕಾರಿದ ಜಾನ ರುಕ್ಮಾಬಾಯಿ—ವಾದಿಳು.

ರುಕ್ಮಿಣಿಬಾಯಿ ಸಹ—ಪ್ರತಿವಾದಿರು.

3ನೇ ಪ್ರತಿವಾದಿ ಭೋಜರಾಜ ಶೆಟ್ಟಿ, ನಾರಾಯಣ ಶೆಟ್ರ ಮಗ, ಮಂಗಳೂರು ತಾಲ್ಲೂಕು ಬಜ್ಪೆಯಲ್ಲಿರುವವ.

3ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ನೀವು ಕೂಡಾ ವಾದಿಳಿಗೆ ತಾ, 30-5-1956ರಲ್ಲಿ ರೂಪಾಯಿ600-00ಕ್ಕೆ ರಿಜಿಸ್ಟ್ರು ಸಿರಿ ಬರೆಕೊಟ್ಟ ಅಡವು ದಸ್ತಾವೇಜಿನ ಅಸಲು ಬಡ್ಡಿ ರೂ699-79ಕ್ಕೆ ವಾದಿಳು ದಾಖಲು ಮಾಡಿದ ಮೇಲಿನ ದಾವೆಯಲ್ಲಿ ನಿಮಗೆ ಅಪ್ಪೀರಿ ನೋಟೀಸಿಗೆ ತಾರೀಕು3-4-59ಕ್ಕೆ ಇಟ್ಟಿದೆ. ಆಕ್ಷೇಪ ಇದ್ದರೆ ಸದ್ರಿ ದಿವಸ ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉವಾಪರಿಕೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. V. Kamath,
Advocate for plff.

ಕಾರ್ಕಳ, 17.3.59.

ವಿಚಿತ್ರ ಸತ್ಯ

ಜೇಡರ ಹುಳುವಿನ ಆಹಾರಕ್ಕಾಗಿ ತೊಳಲಾಟ

ಮನೆಕಟ್ಟುವುದರಲ್ಲಿಯೇ ತಲ್ಲೀನವಾಗುವ ಈ ಹುಳು ಉಪವಾಸಬಿದ್ದಿರಬೇಕಾಗುವುದು.

ಜೇಡರ ಹುಳವು ಹೊಟ್ಟೆಗಿಲ್ಲದೆ ಜೀವಿಸುವುದಕ್ಕೆ ಅದನ್ನು ಪ್ರಕೃತಿಯು ಸೃಷ್ಟಿಸಿರುವಂತೆ ತೋರುತ್ತದೆ. ಏಕೆಂದರೆ ನಾನು ನೋಡಿದ ಈ ಜೇಡರ ಹುಳವು ಒಂದು ನೊಣವನ್ನು ತಿಂದು ಒಂದು ವಾರ ಉಪವಾಸದಿಂದಿದ್ದಿತು. ಒಂದು ಸಲ ಈ ಜೇಡರ ಹುಳುವಿನ ಗೂಡಿಗೆ ನಾನೆ ಒಂದು ಕಣಜದ ಹುಳವನ್ನು ತೆಗೆದುಕೊಂಡು ಹೋಗಿ ಬಿಟ್ಟೆ. ಎಂದಿನಂತೆ ಅದನ್ನು ಹಿಡಿದುಕೊಳ್ಳಲು ಜೇಡರ ಹುಳವು ಈ ಕಡೆ ಬಂದಿತು. ತನ್ನ ಬಲೆಗೆ ಸಿಕ್ಕಿ ಬಿದ್ದಿರುವ ಹುಳವು ಎಂಥ ಹುಳವೆಂಬುದನ್ನು ಅರಿತುಕೊಂಡು ಕಣಜದ ಹುಳವನ್ನು ಸುತ್ತಿದ್ದ ದಾರವನ್ನು ಅದು ಕಿತ್ತು ಹಾಕಿತು.

ಕಣಜದ ಹುಳವು ದೂರವಾದ ಮೇಲೆ ಜೇಡರ ಹುಳವು ತನ್ನ ಗೂಡನ್ನು ರಿಪೇರಿ ಮಾಡುವುದೆಂದು ನಾನು ಭಾವಿಸಿದ್ದೆ. ಆದರೆ ರಿಪೇರಿಗಳಿಂದ ಗೂಡನ್ನು ಸರಿಪಡಿಸಲು ಸಾಧ್ಯವಿರಲಿಲ್ಲವೆಂದು ಕಾಣುತ್ತದೆ. ಜೇಡರ ಹುಳವು ಬೇರೊಂದು ಗೂಡನ್ನು ಕಟ್ಟಲು ಪ್ರಾರಂಭಿಸಿತು

ಒಂದು ಜೇಡರ ಹುಳುವಿಗೆ ಎಷ್ಟು ಗೂಡನ್ನು ಕಟ್ಟಲು ಸಾಧ್ಯವಿದೆ ಎಂಬುದನ್ನು ಪರೀಕ್ಷಿಸಲು, ಅದು ಕಟ್ಟಿದ ಗೂಡನ್ನು ಕಿತ್ತು ಹಾಕಿದೆ. ಅದು ಪುನಃ ಮತ್ತೊಂದ ಗೂಡನ್ನು ಕಟ್ಟಿತು. ಅದನ್ನೂ ಕಿತ್ತೆ. ಇನ್ನು ಬೇರೆ ಗೂಡನ್ನು ಕಟ್ಟಲು ಸಾಧ್ಯವಿಲ್ಲೆಂಬಂತೆ ಇದೆ. ಬೇರೆ ಗೂಡನ್ನು ಕಟ್ಟಲು ಪ್ರಯತ್ನಿಸಲಿಲ್ಲ.

ಗೂಡೇ ಇಲ್ಲದಾಗ ತನ್ನ ಆಹಾರವನ್ನು ಸಂಪಾದಿಸಿಕೊಳ್ಳಲು ಈ ಹುಳವು ಮಾಡುತಿದ್ದ ಉಪಾಯವು ಆತ್ಯಾಶ್ಚರ್ಯಕರವಾಗಿದ್ದಿತು.

ತನ್ನ ಕಾಲುಗಳನ್ನೆಲ್ಲ ಮುದುಡಿಕೊಂಡು ಗಂಟೆಗಟ್ಟಲೆ ಮಲಗಿರುತಿತ್ತು. ಹಾಗೆ ಮಲಗಿದ್ದರೂ ಎಚ್ಚರದಿಂದಿರುತಿತ್ತು. ನೊಣವೇನಾದರೂ ಹತ್ತಿರ ಬಂದರೆ ಗಕ್ಕನೆ ಹಾರಿ ಅದನ್ನು ಹಿಡಿಯುತಿತ್ತು. ಈ ರೀತಿಯಾಗಿ ಜೀವನ ಮಾಡುವುದು ಅದಕ್ಕೆ ಸ್ವಲ್ಪಕಾಲದಲ್ಲಿಯೇ ಬೇಸರ ಬಂತು. ಬೇರೊಂದು ಜೇಡರ ಹುಳುವಿನ ಗೂಡನ್ನು ಆಕ್ರಮಣ ಮಾಡಲು ನಿರ್ಧರಿಸಿತು. ಹಾಗೆಯೇ ಹತ್ತಿರದಲ್ಲಿದ್ದ ಗೂಡಿನ

(೯ನೇ ಪುಟ ನೋಡಿರಿ)

ನಿಮಗಾಗಿ —
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ, ಉಡುಪಿ (ದ. ಭಾರತ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಹೊಸ ಬೆಳಕು

ಪುರಾಣ ವರ್ಣಿತ ಪಾತಾಳ ಲೋಕ

ಪಾತಾಳ ಲೋಕದ ಮೇಲೆ ಬೀರಿರುವ ಕ್ಷ-ಕಿರಣಗಳಿವು.

"ಬಲಿಯೆಂಬ ಹೆಸರಿನ ಒಬ್ಬ ಮಹಾರಾಜನಿದ್ದ. ಆವನ ದ್ವಾರದಿಂದ ಯಾವನೇ ಯಾಚಕ ರಿಕ್ತಹಸ್ತನಾಗಿ ಹಿಂತಿರುಗಿದುದಿಲ್ಲ. ಬಲಿಗೆ ತನ್ನ ದಾನದಿಂದ ಅಹಂಕಾರ ತಲೆದೋರಿತು. ಆದುದರಿಂದ, ವಿಷ್ಣುವು ವಾಮನಾವತಾರವನ್ನು ತಾಳಿ ಅವನ ಓಲಗಕ್ಕೆ ಬಂದು ಭಿಕ್ಷೆಯನ್ನು ಯಾಚಿಸಿದನು. ಬಲಿಯಿಂದ ಮೂರು ಹೆಜ್ಜೆ ಭೂಮಿಯನ್ನು ಬೇಡಿದನು. ಬಲಿ ಯಾವರೋ ಈ ದಾನವನ್ನು ಹೇಯವೆಂದು ಮನದೆಂದು, ಸ್ವೀಕರಿಸಿ ಒಪ್ಪಿಗೆ ಕೊಟ್ಟನು. ವಿಷ್ಣುವು ತನ್ನ ಮೂರು ಹೆಜ್ಜೆಗಳಿಂದ ಆಕಾಶ, ಪಾತಾಳ ಮತ್ತು ಮರ್ತ್ಯ ಲೋಕವನ್ನೂ ಅಳೆದುಬಿಟ್ಟ. ಈಗ ಬಲಿಗೆ ಉಳಿಯಲು ಭೂಮಿಯೇ ಉಳಿಯಲಿಲ್ಲ. ಆದುದರಿಂದ ಬಲಿಯನ್ನು ಬಂಧಿಸಿ ವಿಷ್ಣುವು ಪಾತಾಳ ಲೋಕಕ್ಕೆ ಕಳಿಸಿಬಿಟ್ಟ" ಎಂಬುದೊಂದು ಕಥೆ ಭಾರತೀಯ ಪುರಾಣಗಳಲ್ಲಿದೆ.

ಈ ಪಾತಾಳ ಲೋಕದ ಉಲ್ಲೇಖ ಪೌರಾಣಿಕ ಗ್ರಂಥಗಳಲ್ಲಿ ಹಲವೆಡೆ ದೊರೆಯುತ್ತದೆ. "ರಾಮಲಕ್ಷ್ಮಣರನ್ನು ಪಾತಾಳಾಧಿಪನಾದ ಅಹಿರಾವಣನು ಬಲಿಯೂಡಲು ಎತ್ತಿಕೊಂಡು ಹೋದ"ನೆಂದು ರಾಮಾಯಣದಲ್ಲಿ ಬರುತ್ತದೆ. ನಾರದ ಮಹರ್ಷಿಯು ವಿಮಾನದ ಮೂಲಕ ಪಾತಾಳಲೋಕಕ್ಕೆ ತೆರಳಿದ್ದನೆಂದು ವಿಷ್ಣು ಪುರಾಣ ಹೇಳುತ್ತದೆ. ನಾರದರು ಮಾಡಿದ ಪಾತಾಳ ಲೋಕದ ವರ್ಣನೆ ನೋಡಿರಿ: "ಸ್ವರ್ಗಕ್ಕಿಂತಲೂ ಪಾತಾಳವು ಅಧಿಕ ಸುಂದರವಾಗಿದೆ. ನಾಗಗಣಗಳ ಆಭೂಷಣಗಳಿಂದಲೂ ಸುಂದರ ಪ್ರಭಾಯುಕ್ತವಾದ ಆಹ್ಲಾದಕಾರಿಯಾದ ಶುಭ್ರಮಣಿಗಳಿಂದ ಕೂಡಿಕೊಂಡಿದೆ. ದೈತ್ಯ ಮತ್ತು ದಾನವರ ಕನ್ನೆಯರಿಂದ ಸುಶೋಭಿತವಾದ ಪಾತಾಳ ಲೋಕದಲ್ಲಿ ಯಾವನೇ ಮುಕ್ತ ಪುರುಷನೂ ಆಸಕ್ತನಾಗದಿರಲಾರ. ಸೂರ್ಯನ ಕಿರಣಗಳು ಕೇವಲ ಪ್ರಕಾಶವನ್ನು ಬೀರುತ್ತವೆಯೇ ಹೊರತು ತೀವ್ರ ತಾಪ ಉಷ್ಣತೆಯೀಯುವುದಿಲ್ಲ. ಚಂದ್ರನ ಕಿರಣಗಳಿಂದ ಜ್ಯೋತ್ಸ್ನೆ ಹರಡುವುದಲ್ಲದೇ ಶೀತವಾಗುವುದಿಲ್ಲ. ಇಲ್ಲಿ ಭಕ್ಷ್ಯ ಭೋಜ್ಯಗಳಿಂದಲೂ ಮಹಾ ಪಾನಾದಿಗಳಿಂದಲೂ ಭೋಗ ಜೀವಿಗಳಾಗಿ ವಾಸಿಸುವ ಸರ್ಪ ಜಾತಿಗಳಿಗೂ ದಾನವಾದಿಗಳಿಗೂ ಇತರ ಭೋಗೇಚ್ಛುಗಳಿಗೂ ಸಮಯ ಹೋದುದರ ಅರಿವೇ ಆಗುವುದಿಲ್ಲ. ಇಲ್ಲಿ ಸುಂದರವನ, ನದಿನದ, ರಮಣೀಯ ಸರೋವರ, ಮತ್ತು ಕಮಲ ಸಂಕುಳಗಳಿವೆ. ಗಂಡು ಕೋಗಿಲೆಗಳ ಕೂಕಾರವು ಕೇಳಬರುತ್ತಿದೆ; ಆಕಾಶ ಮನೋಹಾರಿಯಾಗಿದೆ. ಪಾತಾಳ ನಿವಾಸಿಗಳಾದ ದೇವ-ದೈತ್ಯರು ಮತ್ತು ನಾಗರಿಗೆ, ಅತಿ ನಿರ್ಮಲ ಆಭೂಷಣ, ಸುಗಂಧ ಮಯ ಅನುಲೇಪನ, ವೀಣಾ-ವೇಣು ಮೃದಂಗಾದಿಗಳ ಸ್ವರ, ವಾದ್ಯ ನಿನಾದ, ಮೊದಲಾದ ಭಾಗ್ಯಶಾಲಿಗಳಿಂದ ಮಾತ್ರ ಭೋಗಿಸಲ್ಪಡುವ ಅನೇಕಾನೇಕ ಭೋಗಗಳಿವೆ." ಈ ರೀತಿಯಾಗಿ ಪರಾಶರ ಮುನಿಯು ಪಾತಾಳ ಲೋಕವನ್ನು ವರ್ಣಿಸಿದ್ದಾನೆ.

ಇದರಿಂದ ಪಾತಾಳವು ಸಾಕಷ್ಟು ಸುಸಂಸ್ಕೃತ ಹಾಗೂ ಸಭ್ಯ ದೇಶವೆಂದು ಹೇಳಬಹುದು. ಆದರೆ ಈ ಪಾತಾಳ ಲೋಕ ಯಾವುದು ಎಂಬುದೇ ಇಂದಿನ ಐತಿಹಾಸಿಕ ಸಂಶೋಧಕರ ಮುಂದಿರುವ ಪ್ರಶ್ನೆಯಾಗಿದೆ. ಒಂದು ವೇಳೆ ಕಾಲ ಪ್ರವಾಹದಲ್ಲಿ ಈ ಲೋಕ ನಷ್ಟವಾಯಿತೆಂದು ತಿಳಿಯುವುದಾದರೂ ಅದರ ಅವಶೇಷಗಳಾದರೂ ದೊರೆಯಬೇಕಷ್ಟೆ? ಈ ಬಗ್ಗೆ ಅನೇಕ ವಿದ್ವಾಂಸರು ಬಗೆಬಗೆಯ ವಿಚಾರ ವರ್ಣವನ್ನು ಕರೆದಿದ್ದಾರೆ. ಆದರೂ ಪಾತಾಳ ಲೋಕವು ಎಲ್ಲಿತ್ತು ಎಂಬುದು ನಿಶ್ಚಿತವಾಗಿರದಿದ್ದರೂ ಸಾಮಾನ್ಯವಾಗಿ ಕಲ್ಪಿಸಲು ಸಾಕಷ್ಟು ಅವಕಾಶಗಳಿವೆಯೆಂಬುದು ಗೋಚರವಾಗಿದೆ.

ಈ ಬಗ್ಗೆ ಶ್ರೀ ಚಮನಲಾಲರು ಒಂದು ನೂತನ ಅಭಿಪ್ರಾಯವನ್ನು ಮುಂಡಿಸಿದ್ದಾರೆ. ಅವರಭಿಮತದಂತೆ, ಮಧ್ಯ ಮತ್ತು ದಕ್ಷಿಣ ಅಮೇರಿಕೆಯೇ ಪಾತಾಳ ಲೋಕವಾಗಿದೆ. ಸಂಸ್ಕೃತ ವ್ಯಾಕರಣ ಶಾಸ್ತ್ರಾನುಸಾರ ಅಡಿಗಿರುವುದೇ ಪಾತಾಳ. ಅಮೇರಿಕೆಯು ಪೂರ್ವ ಗೋಲಾರ್ಧದ ಪೃಷ್ಠ ಭಾಗದಲ್ಲಿರುವುದರಿಂದ ಅದೇ ಪಾತಾಳವೆಂದು ಅನೇಕ ವಿದ್ವಾಂಸರು ತಿಳಿದಿದ್ದರು. ಶ್ರೀ ಚಮನಲಾಲರು ಮಾನವ ವಿಜ್ಞಾನ, ನೃತತ್ವ ಶಾಸ್ತ್ರ ಮತ್ತು ಇತಿಹಾಸದ ಆಧಾರದಿಂದ ಭಾರತೀಯ ಶಾಸ್ತ್ರಗಳಲ್ಲಿ ವರ್ಣಿತವಾದ ಪಾತಾಳ ಲೋಕವು ಅಮೇರಿಕೆಯೇ ಆಗಿದೆ ಎಂದು ಹೇಳುತ್ತಾರೆ.

ಭಗವಾನ್ ನಾರದರು ಪಾತಾಳದಲ್ಲಿ ಚಿನ್ನವು ಪ್ರಚಲಿತವಿದೆ ಎಂದು ಹೇಳಿದ್ದಾರೆ. ಕ್ರಿ. ಶ. ೧೫೧೦ರಲ್ಲಿ ಸ್ಪೇನಿಶರು ಮೆಕ್ಸಿಕೊ, ಪೆರು ಮೊದಲಾದ ದೇಶಗಳಿಗೆ ಹೋದಾಗ ಅವನ್ನು ಸ್ವರ್ಣ ಭೂಮಿ ಎಂದೇ ಕರೆದಿದ್ದಾರೆ. ಯುರೋಪೀಯ ಆಕ್ರಮಣಕಾರರು ಚಿನ್ನಕ್ಕಾಗಿಯೇ ಇಲ್ಲಿ ಪರಸ್ಪರ ಹೊಡೆದಾಡಿಕೊಂಡರೆಂದೂ ಹೇಳುತ್ತಾರೆ. ಆಗ, ಅಲ್ಲಿನ ನಿವಾಸಿಗಳು, "ನಾವು ಚಿನ್ನದ ಬಟ್ಟಲಲ್ಲಿ ಉಣ್ಣುವೆವು. ನೀವು ಚಿನ್ನಕ್ಕಾಗಿ ಯಾಕೆ ಹೋರಾಡುವಿರಿ? ನಿಮಗೆ ಬೇಕಷ್ಟು ಚಿನ್ನವನ್ನು ನಾವು ಕೊಡುವೆವು" ಎಂದು ಅಂದರಂತೆ. ಆ ಮೇಲೆ ಆಕ್ರಮಣಕಾರರು ೧೦ ಅರಬ ಮೂಲ್ಯದ ಚಿನ್ನವನ್ನು ತಂದರೆಂದು ಉಲ್ಲೇಖವಿದೆ.

ಪಾತಾಳದಲ್ಲಿ ಮೂರು ಸಂಸ್ಕೃತಿಯ ಪರಿಚಯವಾಗುತ್ತದೆ. ಮೊದಲನೆಯದು ಅಸ್ತಿಕ, ಎರಡನೆಯದು ಮಾಯ ಮತ್ತು ಮೂರನೆಯದು ಇನ್ಕಾ. ಇನ್ಕಾ ಎಂದರೆ, ಸೂರ್ಯವಂಶೀಯರೆಂದು ಅರ್ಥ. ಈ ಮೂರು ಸಂಸ್ಕೃತಿಗಳಲ್ಲೂ ಆರ್ಯ ಸಂಸ್ಕೃತಿಯ ಲಕ್ಷಣಗಳು ದೃಗ್ಗೋಚರವಾಗುತ್ತವೆ. ಮಕ್ಕಳ ಜನ್ಮವಾದ ಮೇಲೆ ಅವರೂ ಜನ್ಮ ಕುಂಡಲಿಯನ್ನು ತಯಾರಿಸುತ್ತಾರೆ. ಆರ್ಯರಂತೆಯೇ ನಾಮಕರಣ, ವಿದ್ಯಾರಂಭ, ವಿವಾಹ ಹಾಗೂ ಉತ್ತರ ಸಂಸ್ಕಾರಗಳನ್ನು ಮಾಡುತ್ತಾರೆ. ಮೃತ್ಯುವು ಸಂಭವಿಸಿದರೆ ಮಡಿಕೆ ಒಡೆಯುವುದು, ಕೂದಲು ಕತ್ತರಿಸುವುದು, ನಿಶ್ಚಿತ ಸಮಯದ ವರೆಗೆ ಮನೆಯಲ್ಲಿ ಬೆಂಕಿ ಉರಿಸದಿರುವುದು ಮೊದಲಾದ ಪದ್ಧತಿಗಳಿದ್ದುವು. ಗುರುಕುಲ ಪದ್ಧತಿಯ ಮೂಲಕ ಶಿಕ್ಷಣವೀಯಲ್ಪಡುತಿತ್ತು; ಹಾಗೂ ಹೆತ್ತವರು ಮಕ್ಕಳ ೭ನೇ ವರ್ಷದಲ್ಲಿಯೇ ಗುರುಗಳಲ್ಲಿಗೆ ಅವರನ್ನು ಕಳಿಸುತಿದ್ದರು ಶಿಷ್ಯರು ನಿತ್ಯ ಗುರುಸೇವೆ ಮಾಡಿಕೊಂಡು ಅಭ್ಯಸಿಸುತಿದ್ದರು. ಗುರುಕುಲಗಳಲ್ಲಿ ಭಾಷೆ, ಗಣಿತ, ಜ್ಯೋತಿಷ, ಶಾಸ್ತ್ರಗಳಲ್ಲದೇ ಯೋಗ ಸಮಾಧಿ ಮತ್ತು ದೇವ ಪೂಜನಗಳೂ ಕಲಿಸಲ್ಪಡುತಿದ್ದುವು. ಪಾತಾಳ ವಾಸಿಗಳೂ ಆರ್ಯರಂತೆ ಚತುರ್ಯುಗಗಳಲ್ಲಿ ವಿಶ್ವಾಸವಿಡುತಿದ್ದರು.

ಶ್ರೀ ಎನ್. ಎಸ್. ಕಿಲ್ಲೆಯವರ ಪ್ರಾಚೀನ ತುಳುನಾಡಿನ ೨ನೇ ಭಾಗ
"ಹೆಗಡೇರ ತುಳುನಾಡು"
ಪ್ರಕಾಶಕರು: ಲಕ್ಷ್ಮಿ-ಬಿ. ವಿ. ಶೈಗಳು.

ಕ್ರಿಸ್ತ ಪೂರ್ವದಿಂದ ಕ್ರಿ. ಶ. 1800ರ ವರೆಗಿನ ತುಳುವರ ಇತಿಹಾಸವು ಅಡಗಿರುವ ಈ ಗ್ರಂಥವು ಶ್ರೀ ಡಾ॥ ಎ. ಬಿ. ಸಾಲೆತ್ತೂರು (M. A. P. H. D. ಲಂಡನ್) ಇವರ ಮುನ್ನುಡಿಯೊಡನೆ ಬೇಗನೇ ಪ್ರಕಟವಾಗುವುದು. ಮೊದಲನೇ ಅಧ್ಯಾಯದಲ್ಲಿ ತುಳುವ ಸ್ಥಾನೀಕರು—ಗತ ವಿಚಾರಗಳು—ತುಳುವರು ಜನನದಿಂದ ವಿವಾಹದ ವರೆಗೆ ಆಚರಿಸುವ ದಶ ಸಂಸ್ಕಾರಗಳ ವಿಧಿ ವಿಧಾನಗಳು ೨ನೇ ಅಧ್ಯಾಯದಲ್ಲಿ ತುಳುವರ ಶವ ಸಂಸ್ಕಾರ—ಸೂತಕ--ಉತ್ತರ ಕ್ರಿಯೆ ವಗೈರೆ ಆಚರಿಸುವ ಕ್ರಮಗಳು ಮತ್ತು ಸೀತಾನದಿಯ ಉತ್ತರಕ್ಕಿರುವ ನಾಡವರ ಶುಭಾಶುಭ ಕಟ್ಟುಕಟ್ಟಳೆಗಳೂ ೩ನೇ ಅಧ್ಯಾಯದಲ್ಲಿ ಆದ್ಯ ಶ್ರೀ ಶಂಕರ ಭಗವತ್ಪಾದರ ಆಗಮನ--ಅದ್ವೈತ ಮತ ಪ್ರಚಾರ, ತುಳುವರ ಹುಟ್ಟು—ಆಲಡೆ, ನಾಗ, ಬೆರ್ಮೆ, ಸುಬ್ರಾಯ ದೇವರುಗಳು ಮತ್ತು ಬಾರಗರು, ಮೊಗವೀರರು, ಬಿಲ್ಲವರು ಇವರೆಲ್ಲರೂ ತುಳುವ ಸಮಾಜದವರು. ಮತ್ತು ಬೌದ್ಧರು, ಜೋಗಿಗಳು, ಜೈನರು, ಬ್ರಾಹ್ಮಣರು ಬಂದು ನೆಲಸಿದ ಕಾಲಗಳು—ದ್ವೈತ ಮತಸ್ಥಾಪಕ ಮಧ್ವಾಚಾರ್ಯರು—ಅವರ ಅಷ್ಟ ಮಠಗಳು—ತುಳು ಶಿವಳ್ಳಿಯವರಿಗೂ, ತುಳು ಜೈನರಿಗೂ-ತುಳುವರಿಗೂ ಇರುವ ಸಂಬಂಧಗಳು ಮತ್ತು ಸ್ಕಾಂದ ಪುರಾಣದ ಉತ್ತರ ಭಾಗ, ಸಹ್ಯಾದ್ರಿ ಖಂಡ, ಗ್ರಾಮ ಪದ್ಧತಿ—ಭೂತಾಳ ಪಾಂಡ್ಯರಾಯನ ಅಳಿಯ ಕಟ್ಟಿನ ಕುರಿತು ಸಂಶೋಧಕರ ಅಭಿಪ್ರಾಯಗಳೂ ೪ನೇ ಅಧ್ಯಾಯದಲ್ಲಿ ಸಾರಸ್ವತರು, ಗೌಡಸಾರಸ್ವತರು, ಕೊಂಕಣ ದೇಶಸ್ಥ ಬ್ರಾಹ್ಮಣರು ಬಂದು ನೆಲಸಿದ ಕಾಲಗಳು ಮತ್ತು ಶ್ರೀ ಕಾಶೀ ಮಠ, ಶ್ರೀ ಗೋಕರ್ಣ ಮಠ, ಶ್ರೀ ಚಿತ್ರಾಪುರ ಮಠ ಸ್ಥಾಪನೆಯ ಕಾಲ ಮತ್ತು ಐತಿಹಾಸಿಕ ಚರಿತ್ರೆಗಳೂ ೫ನೇ ಪರಿಶಿಷ್ಟ ಅಧ್ಯಾಯದಲ್ಲಿ ಬಂಟರ ಯಾನೆ ನಾಡವರ, ಮೊಗವೀರರ, ಬಿಲ್ಲವರ ಸಂಘ-ಸಂಸ್ಥೆಗಳ ಪರಿಚಯವೂ—ತುಳುವರು ಆಚರಿಸುವ ಎಲ್ಲಾ ಹಬ್ಬಗಳ ವಿಧಿ-ವಿಧಾನವೂ, ತಂಬಿಲ—ಕಂಬುಳ—ನಾಗಮಂಡಲ—ನೇಮ ವಗೈರೆ ಸೇವೆಗಳೂ, ಆಟ—ತಾಳಮದ್ದಳೆ—ಚೆಂಡಾಟ ವಗೈರೆ ವಿನೋದಗಳು, ತುಳುನಾಡಿನ ಪ್ರಸಿದ್ಧ ಪುರುಷರ ಪರಿಚಯವೂ ಕೂಡಾ 35 ವರ್ಷಗಳ ಸಂಗ್ರಹದ 200 ಪುಟಗಳ ಗ್ರಂಥವು. ಕಾಗದದ ಬೆಲೆ ವಿಪರೀತವಿರುವುದರಿಂದ ಸ್ವಲ್ಪ ಪ್ರತಿಗಳೇ ಪ್ರಕಟವಾಗುವುವು. ಮುಂದಾಗಿ ಸೂಚಿಸುವವರಿಗೆ ರಿಯಾಯಿತಿ ಬೆಲೆ. ಮತ್ತು ಪುಸ್ತಕದ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಅನಮಣಂಜೆ ಗುತ್ತು ಎನ್. ಎ. ಶೀನಪ್ಪ ಹೆಗಡೆ,
ತುಳುನಾಡು, P. O. ಪೊಳಲಿ. ದ. ಕನ್ನಡ.

ಇಲ್ಲಿ ಲಂಕಷ್ಟೇತರ ದೇವಾಲಯಗಳಿದ್ದು ಅವುಗಳ ಅವಶೇಷಗಳು ಇಂದಿಗೂ ದೊರೆಯುತ್ತವೆ. ಆರ್ಯರಂತೆಯೇ ಇಂದ್ರ, ಗಣೇಶ, ಶಿವ, ಹನುಮಂತ, ಲಕ್ಷ್ಮಿ, ಸರಸ್ವತಿ ಮೊದಲಾದ ಭಾರತೀಯ ದೇವತೆಗಳನ್ನವರು ಪೂಜಿಸುತಿದ್ದರು. ದೇವಾಲಯಗಳಲ್ಲಿ ಪ್ರತ್ಯೇಕ ಗುಹೆಗಳಿದ್ದು ಅಲ್ಲಿ ಯೋಗಿಗಳು ಏಕಾಂತದಲ್ಲಿ ತಪಸ್ಸನ್ನಮಾಡುತಿದ್ದರು. ಮೆಕ್ಸಿಕೋ ಮತ್ತು ಗ್ವಾಟೆಮಾಲಾ (ಗೌತಮಾಲಯ) ಗಳಲ್ಲಿ ಇಂತಹ ಅನೇಕ ಗುಹೆಗಳು ಕಂಡುಬರುತ್ತಿವೆ.

ಇಷ್ಟೇ ಅಲ್ಲದೆ ಪಾತಾಳದ ನಿವಾಸಿಗಳು ಭಾರತೀಯರಂತೆಯೇ ಸ್ವರ್ಗ, ನರಕ ಮೊದಲಾದುವನ್ನು ನಂಬುತಿದ್ದರು; ಸೂರ್ಯ ಲೋಕವನ್ನೇ ಉಚ್ಚತಮ ಲೋಕವೆಂದು ತಿಳಿದಿದ್ದರು. ಸ್ಪೇನಿಶ್ ಪಾದ್ರಿಯೊಬ್ಬನ ಪೆರುವಿನ ರಾಜನಿಗೆ ಬೈಬಲಿನ ಒಂದು ಪ್ರತಿಯನ್ನಿತ್ತಾಗ, "ನಮ್ಮ ದೇವರು ಆಕಾಶದಲ್ಲಿಯೇ ಸ್ಪಷ್ಟವಾಗಿ ಕಾಣುತಿದ್ದಾನೆ" ಎಂದು ಉತ್ತರಿಸಿದನೆಂದು ಹೇಳುತ್ತಾರೆ.

ಭಾಷಾ ಶಾಸ್ತ್ರದ ದೃಷ್ಟಿಯಿಂದಲೂ ಪಾತಾಳಲೋಕದ ಮೇಲೆ ಭಾರತೀಯ ಪ್ರಭಾವ ತುಂಬಿಬಿಟ್ಟಿದೆ. ಸ್ಪೇನಿಶ್ ಇತಿಹಾಸಕಾರ ಲೇ ಪೇಜ್ ಎಂಬವರು ತನ್ನ "ಪರಿಯೋಕ್ವೇಚವಾ-ವಾಕಿಬ್ಯುಲರಿ"ಯಲ್ಲಿ ಭಾರತೀಯ ಮೂಲದಿಂದ ಹುಟ್ಟಿದ ಅನೇಕಾನೇಕ ಪಾತಾಳ ಲೋಕದ ಪದಗಳನ್ನು ಎತ್ತಿ ಹೇಳಿದ್ದಾರೆ. ರಾಮಾಯಣ, ಮಹಾಭಾರತ ಗ್ರಂಥಗಳ ಪ್ರಭಾವವೂ ಈ ಪಾತಾಳ ಲೋಕದ ಮೇಲೆ ಬಿದ್ದಿದ್ದು ಅಂತಹವೇ ಕಥೆಗಳು ಅಲ್ಲಿಯೂ ಪ್ರಚಲಿತವಿದ್ದು, ಆ ತೆರದ ಸಾಹಿತ್ಯವು ದೊರೆಯುತ್ತದೆ.

ಪಾತಾಳ ದೇಶದ ಇತಿಹಾಸವು ಬಹಳ ವಿಚಿತ್ರವಾಗಿದೆ. ಶ್ರೀ ಮಾಯಿಲ್ಸ್ ವಾನ್ಸೇಸ್ಸರರೆಂಬ ಅಮೆರಿಕನರು ಪೆರುವಿನಲ್ಲಿ ಇಪ್ಪತ್ತು ವರ್ಷಗಳ ಕಾಲ ರಾಯಭಾರಿಯಾಗಿದ್ದರು. ಅವರು "ಅಯ್ಯರ್ ಇನ್ ಕಾಸ್" ಎಂಬ ಪುಸ್ತಕವನ್ನು ಬರೆದಿದ್ದಾರೆ. ಇದರಲ್ಲಿ ಅವರು ಪೆರುದೇಶದ ಐಯ್ಯರ್ ರಾಜರ ಕಥೆಗಳನ್ನು ಬರೆದಿದ್ದಾರೆ. ಐಯ್ಯರರು ದಕ್ಷಿಣ ಭಾರತದಲ್ಲಿರುತ್ತಾರೆ. ಅಯ್ಯರ ಎಂಬುದು ಆರ್ಯ ಪದದ ಅಪಭ್ರಂಶವೆಂದು ಹೇಳಬಹುದು. ದಕ್ಷಿಣ ಭಾರತೀಯರು ಯುರೋಪು ಮತ್ತು ದೂರ ಪ್ರಾಚ್ಯಗಳಿಗೆ ಹೋಗಿ ವ್ಯವಹಾರವನ್ನು ನಡೆಸುತ್ತಿದ್ದರೆನ್ನುವಾಗ ಅವರು ಅಮೆರಿಕೆಗೂ ಬಂದು ಅಲ್ಲಿ ರಾಜ್ಯ ಸ್ಥಾಪಿಸಿದರು ಎಂದು ತಿಳಿದರೆ, ಆಶ್ಚರ್ಯಪಡಬೇಕಾಗಿಲ್ಲ. "ಮೋಕ"ವೆಂಬರ್ಥದಲ್ಲಿ ಈ ದೇಶದಲ್ಲಿ 'ಕಬವ್ರನ್' ಎಂಬ ಪದವಿದ್ದು ಇದು ತಮಿಳನ್ನು ಹೋಲುತ್ತದೆ. ಇದರಿಂದಲೂ ಶ್ರೀ ಚಮನ್‌ಲಾಲರ ಅಭಿಪ್ರಾಯಕ್ಕೆ ಬಲ ದೊರೆಯುತ್ತದೆ. ಇಲ್ಲಿ ದೊರೆತಿರುವ ಕಚ್ಛಪಾವತಾರ, ಶಿವ ಮೊದಲಾದ ಅನಂತ ಮೂರ್ತಿಗಳು ಈ ಅಭಿಪ್ರಾಯಕ್ಕೆ ಪುಷ್ಟಿ ಈಯುತ್ತವೆ. ಆರ್ಯ ಮತ್ತು ಪಾತಾಳ ಲೋಕಗಳ ಸಂಬಂಧವನ್ನು ದೃಢಗೊಳಿಸುತ್ತವೆ.

ಕಾಂಗ್ರಿಯ ಗುರುಕುಲದ ಆಚಾರ್ಯರಾಗಿದ್ದ ಡಾ॥ ಮಹೇಶ ಚರಣರು ಅಮೆರಿಕೆಯಲ್ಲಿ ಅಭ್ಯಸಿಸುತ್ತಿದ್ದಾಗ, ಅವರಿಗೆ

(೮ನೇ ಪುಟ ನೋಡಿರಿ)

> ಸಂಸಾರ ರೂಪೀ ಸಾಗರದಲ್ಲಿ ಮನುಷ್ಯನು ಮುಳುಗಿ ಮೃತ್ಯುವನ್ನಪ್ಪಿದರೆ, ಅವನ ಜೀವಿತದ ಉದ್ದೇಶ ಪೂರೈಸಲಿಲ್ಲ; ಅದರಲ್ಲಿ ಈಜಾಡಿ ಉತ್ತಮೋತ್ತಮ ರತ್ನಗಳನ್ನು ಅರಿಸುವ ಪ್ರಯತ್ನದಲ್ಲಿ ತೊಡಗಬೇಕು.

NAVAYUGA
Founder:—
A. B. SHETTY,
Former Minister for Public Health
Govt. of Madras & Govt. of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨೬–೩–'೫೯	೨೮

ಭಾರತಕ್ಕೆ ಶಿರೋವೇದನೆ

ಪ್ರಪಂಚದಲ್ಲಿನ ಅತ್ಯುನ್ನತ ದೇಶವಾಗಿರುವ ಟಿಬೇಟು ವಿಶಾಲ ಚೀನದ ಒಂದು ಅಂಗವಾಗಿದ್ದರೂ ಸ್ವಾಯತ್ತಾಧಿಕಾರವನ್ನು ಹಿಂದಿನಿಂದಲೂ ರಕ್ಷಿಸಿಕೊಂಡು ಬಂದಿದೆ ಅಲ್ಲಿನ ಧರ್ಮಾಧಿಕಾರಿಯಾದ ದಲಾಯ್ ಲಾಮಾರವರೇ ದೇಶದ ಆಡಳಿತೆಯನ್ನೂ ನೋಡಿಕೊಂಡಿರುತ್ತಾರೆ. ಆದರೆ, ಚೀನದಲ್ಲಿ ಕಮ್ಯುನಿಸ್ಟರು ನೆಲೆಯೂರಿದ ನಂತರ ಲಾಮಾರ ಮೇಲೆ ಅವರ ಅಪಕೃಪೆ ಪದೇಪದೇ ಬೀಳುತಿತ್ತು. ಟಿಬೇಟದ ಆಂತರಿಕ ಸ್ವಾತಂತ್ರ್ಯವನ್ನು ಅಪಹರಿಸಿ, ತಮ್ಮ ಸರ್ವಾಧಿಕಾರವನ್ನು ಪ್ರದರ್ಶಿಸಲು ಕೆಂಪು ಚೀನ ಈಗೀಗ ಪ್ರಯತ್ನಿಸುತ್ತ ಬಂದಿದ್ದು, ಇದೀಗ ಲಾಮಾರು ಏಕಾಕಿಯಾಗಿ ಪೇಕಿಂಗ್‌ಗೆ ಬರಬೇಕೆಂಬ ನಿರೂಪ ಅವರ ಕೈಗೆ ಸೇರಿದೆ. ಸ್ವಾತಂತ್ರ್ಯವನ್ನು ಹತ್ತಿಕ್ಕಿ ಸರ್ವಾಧಿಕಾರಿತನವನ್ನೇ ಬೆಂಬಲಿಸುವ ಈ ಕಮ್ಯುನಿಸ್ಟರು ಲಾಮಾರಿಗೆ ಈ ರೀತಿಯಾಗಿ ಆದೇಶವಿತ್ತಿರುವುದು ಅಸಂಭಾವ್ಯವಲ್ಲ. ಇದುವರೆಗೆ ಸಾಮ ಭೇದಗಳಿಂದ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲಾರದ ಕೆಂಪು ಚೀನ ಇದೀಗ ದಂಡೋಪಾಯವನ್ನೇ ಅವಲಂಬಿಸಿರುವುದು ಅದರ ತಪ್ಪಲ್ಲ. ಈ ವಿಚಾರವು ಚೀನದ ಆಂತರಿಕ ವಿಷಯವೆಂದು ಇಲ್ಲಿಗೇನೇ ಕೈಬಿಟ್ಟು ನಿಶ್ಚಿಂತರಾಗಿರುವುದು ಎಂದಿಗೂ ಸಾಧ್ಯವಿಲ್ಲ. 'ಲಾಮಾ'ರ ಹಸ್ತಗತವಾದ ಈ ಆಜ್ಞೆಯು ಅವರನ್ನು ಬಂಧಿಸುವ ಸಲುವಾಗಿಯೇ ಹೊರಟಿದೆ ಎಂದು ಖಂಪಾ ಪಂಗಡದ ಟಿಬೇಟಿಯನರು ಭಾವಿಸಿ, ಲಾಸಾದಲ್ಲಿ ಗಲಭೆಯೆಬ್ಬಿಸಿದ್ದಾರೆ. ಹಲವಾರು ಸಾವು ನೋವುಗಳಾದವೆಂದೂ ಹೇಳುತ್ತಾರೆ ಈ ಗಲಭೆಯು ಸುಲಭದಲ್ಲಿ ನಿಲ್ಲುವುದೂ ಸಾಧ್ಯವಿಲ್ಲ ಲಾಮಾರನ್ನು ಅಧಿಕಾರದಿಂದ ಕಿತ್ತು ಹಾಕಿ. ಕಮ್ಯುನಿಸ್ಟ ವಿರೋಧಿಗಳನ್ನು ಹತ್ತಿಕ್ಕುವ ಪ್ರಬಲೇಚ್ಛೆಯಿಂದಲೇ ಚೀನಾ ಈ ನಿರೂಪವನ್ನಿತ್ತಿದೆ ಎಂದೂ ಊಹಿಸಿದರೆ, ತಪ್ಪಾಗಲಾರದು. ಏಕೆಂದರೆ, ಸ್ವತಃ ಲಾಮಾರೂ ಟಿಬೇಟಿನ ಹಲವು ಪಂಗಡಗಳೂ ಕಮ್ಯುನಿಸ್ಟ ದ್ವೇಷಿಗಳಿರುವರು.

ಟಿಬೇಟಿನ ಈ ಗೊಂದಲವು ಆಂತರಿಕವಾದರೂ, ಭಾರತವು ಮಾತ್ರ ಚಿಂತೆಗೀಡಾಗ ಬೇಕಾಗಿ ಬಂದಿದೆ ಈಗ ಗುಲ್ಲೆಬ್ಬಿಸಿ ಅಶಾಂತಿಯನ್ನು ಹರಡಿಸಿರುವ ಖಂಪಾ ಜನರಾದರೊ ಪರಾಕ್ರಮಿಗಳು, ಸುಲಭದಲ್ಲಿ ಸೋಲೊಪ್ಪುವವರಲ್ಲ. ಆಗ, ಕೆಂಪು ಚೀನ ತನ್ನ ಸೈನ್ಯವನ್ನೇ ಇಲ್ಲಿಗೆ ತಂದು ಹೋರಾಡ ಬೇಕಾಗಿ ಬರಬಹುದು. ಹೀಗಾದಲ್ಲಿ ಈ ದಂಡೋಪಾಯಕ್ಕೂ ಬಗ್ಗದೆ ದಲಾಯ್‌ಲಾಮರೂ ಖಂಪಾ ಜನರೂ ಅವರ ಬೆಂಬಲಿಗರೂ ಎತ್ತಲೂ ಸರಿಯಲಾರದೆ, ಭಾರತದ ಗಡಿಯನ್ನೇ ದಾಟ ಬೇಕಾಗಿ ಬರುವುದು. ಜತೆಗೆ ಭೂತಾನ, ಸಿಕ್ಕಿಂ, ನೇಪಾಳಗಳನ್ನೂ ಹೊಗಬಹುದು ಆದರೆ, ಎಲ್ಲಕ್ಕಿಂತ ಹೆಚ್ಚಿನ ಅಪಾಯಕ್ಕೆ ಭಾರತವೇ ಈಡಾಗಬೇಕಾಗುವುದು. ಚೀನವು ತನ್ನ ಸಾಮ್ರಾಜ್ಯದ ನಕ್ಷೆಯಲ್ಲಿ ಭಾರತದ ಕೆಲವು ಭಾಗಗಳನ್ನೂ ಸೇರಿಸಿಕೊಂಡಿದೆ ಈ ಬಗ್ಗೆ ಸ್ಪಷ್ಟೀಕರಣ ಕೇಳಿದಾಗ, ಗಡಿಯ ಬಗ್ಗೆ ಅಂತಿಮ ನಿರ್ಧಾರವಿನ್ನೂ ಮಾಡಿಲ್ಲವೆನ್ನಲಾಗಿತ್ತು. ಆದರೆ, ಈ ಕುರಿತ ದ ನಿರ್ಧಾರ ಇದುವರೆಗೂ ಆಗದೆ ಉಳಿದಿದೆ. ನಕ್ಷೆಯಲ್ಲಿ ಮಾತ್ರ ಕೆಲ ಕಾಲದಿಂದಲೂ ಭಾರತದ ಅಂಗಗಳು ಸೇರಿಹೋಗಿವೆ ಈ ವಿವಾದ ಹಾಗೆಯೇ ಇರುವಾಗ, ಭಾರತದ ಮೇಲೆ ಆಕ್ರಮಣ ನಡೆಸಲು ಚೀನ ಅವಕಾಶವನ್ನು ಸಾಧಿಸುತ್ತಿಲ್ಲವೆನ್ನುವುದೆಂತು? ಸದ್ಯ, ಚೀನೀ ಸೇನೆಯೆದುರು ನಿಲ್ಲುವ ಧೈರ್ಯವಿಲ್ಲದ ಅಲ್ಪ ಬಲವುಳ್ಳ ಖಂಪಾರು ಭಾರತವನ್ನು ಗಡಿ ದಾಟಿ ಹೊಕ್ಕರೆ, ಆಗ ಚೀನಕ್ಕೆ ತನ್ನ ಹಂಚಿಕೆಯನ್ನು ಫಲಕಾರಿಯಾಗಲು ಸಹಾಯವಾಗದಿರುವುದಿಲ್ಲ ಆದುದರಿಂದ ಈ ಚೀನದ ಆಂತರಿಕ ಗೊಂದಲವು ಪಾಕ್ ಆಂತರಿಕ ಗೊಂದಲಕ್ಕಿಂತಲೂ ಬೃಹತ್ಪ್ರಮಾಣದ್ದು. ಎಂತಲೇ ವಿಪರೀತ ಚಿಂತೆಗೀಡಾಗಲೇಬೇಕಾಗಿದೆ.

ಚೀನೀಯ ಸರಕಾರದ ಆಂತರಿಕ ವಿಷಯಗಳಲ್ಲಿ ಕೈಹಾಕುವುದು ಸರಿಯಲ್ಲವೆಂದು ಎಲ್ಲ ಪಂಚಶೀಲ ವಾದಿಯೂ ಹೇಳುತ್ತಾನೆ. ಆದರೆ, ಈ ಗಲಭೆಯ ಉರಿಯು ಭಾರತಕ್ಕೂ ತಾಗಿಕೊಂಡರೆ, ಆಗ ಗತಿಯೇನು? ಗಡಿ ರಕ್ಷಣೆಗೆ ಭಾರತೀಯ ಸೇನೆ ತಯಾರಿದೆ ಎಂದು ಜ| ತಿಮ್ಮಯ್ಯನವರಂದಿದ್ದರೂ, ಅನಾವಶ್ಯಕ ಹೋರಾಟವನ್ನು ಹೂಡಬೇಕಾಗುವುದು ಭಾರತದಂತಹ ಪಂಚಶೀಲ ಪ್ರತಿಪಾದನಾಶೀಲ ರಾಷ್ಟ್ರಕ್ಕೆ ಇದು ಭೂಷಣವೂ ಅಲ್ಲ. ಆದುದರಿಂದ ಕೆಟ್ಟ ಮೇಲೆ ಬುದ್ಧಿ ಬರುವುದಕ್ಕಿಂತ ಈಗಿಂದೀಗಲೇ ಮುಂದಿನ ಭವಿಷ್ಯವನ್ನು ಊಹಿಸಿ, ತನ್ನ ಮುತ್ಸದ್ದಿತನವನ್ನು ಉಚಿತ ರೀತಿಯಲ್ಲಿ ಬಳಸಿಕೊಂಡು ಚೀನದೊಡನೆ ಸೌಹಾರ್ದದಿಂದಿರುವಂತೆಯೂ ಟಿಬೇಟದ ಅಶಾಂತಿಯಿಂದ ಭಾರತಕ್ಕೆ ಧಕ್ಕೆ ತಗಲದಂತೆಯೂ ನೋಡಿಕೊಳ್ಳುವುದು ಅವಶ್ಯ. ಇದಕ್ಕೆ ನೆರವಾಗಬಹುದಾದ ಟಿಬೇಟಿನ ಸಂಪೂರ್ಣ ವರದಿಗಳು ತಮ್ಮ ಕೈಸೇರಿಲ್ಲವೆಂದು ಪ್ರಧಾನಿ ನೆಹರೂ ಲೋಕ ಸಭೆಯಲ್ಲಿ ತಿಳಿಸಿದ್ದಾರೆ. ಲಾಮಾರಾದರೂ ತಮಗೆ ಭಾರತದಲ್ಲಿ ಆಶ್ರಯ ಕೊಡಬೇಕೆಂದು ಕೇಳಿಕೊಳ್ಳಲೂ ಸಾಕು. ಅಂತೂ ಕಲಸು ಮೇಲೋಗರದಂತೆ ಈ ಟಿಬೇಟದ ಗೊಂದಲ ಭಾರತಕ್ಕೊಂದು ಶಿರೋವೇದನೆಯಾಗಿದೆ. ಇದರಿಂದ ಶಾಂತಿ ಸಮಾಧಾನಗಳಿಂದ ಎದ್ದು ಬರುವ ಹಂಚಿಕೆಯನ್ನು ಮಾಡುವುದೇ ಇಂದಿನ ಮುತ್ಸದ್ದಿತನದ ಪ್ರದರ್ಶನ ನಮ್ಮ ಪ್ರಧಾನರು ಈ ವಿಷಯದಲ್ಲಿ ಎಂದಿಗೂ ಹಿಂದುಳಿಯಲಾರರೆಂದು ನಂಬಬಹುದು.

ಸಂಕ್ಷಿಪ್ತ ಸುದ್ದಿಗಳು

ವಾಸ್ತು ಶಿಲ್ಪ

“ವಾಸ್ತುಶಿಲ್ಪವನ್ನು, ಅದು ಯಾವ ಕಾಲದಲ್ಲಿ ರೂಪಗೊಂಡಿತೋ ಆ ಕಾಲದಿಂದ ಪ್ರತ್ಯೇಕಿಸಿ ಪರಿಗಣಿಸಲು ಸಾಧ್ಯವಿಲ್ಲ ಆ ಕಾಲದ ಸಾಮಾಜಿಕ ಪರಿಸ್ಥಿತಿ, ಆ ಕಾಲದ ಜನತೆಯ ವಿಶಿಷ್ಟವಾದ ಚಿಂತನಾಶಕ್ತಿ, ಗುರಿ ಮತ್ತು ಧ್ಯೇಯಗಳನ್ನು ಗಮನದಲ್ಲಿಟ್ಟುಕೊಂಡೇ ಪರಿಗಣಿಸಬೇಕು. ತ್ವರಿತಗತಿಯಲ್ಲಿ ಪರಿವರ್ತನೆಗೊಳ್ಳುತ್ತಿರುವ ಇಂದಿನ ಯುಗದಲ್ಲಿ, ಅಥವಾ ಕಳೆದ ಕೆಲವು ತಲೆಮಾರುಗಳ ಅವಧಿಯಲ್ಲಿ, ಔದ್ಯೋಗಿಕ ಕ್ರಾಂತಿಯು ಆದಂದೀಚೆಗೆ, ಅದು ವಾಸ್ತು ಶಿಲ್ಪದ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿರುವುದು ಅನಿವಾರ್ಯವಾದುದು”—ಎಂದು ಭಾರತದ ಪ್ರಧಾನ ಮಂತ್ರಿಗಳು ನವದೆಹಲಿಯಲ್ಲಿ ಲಲಿತ ಕಲಾ ಅಕಾಡಮಿಯವರು ವಾಸ್ತು ಶಿಲ್ಪದ ಸಂಬಂಧವಲ್ಲಿ ಏರ್ಪಡಿಸಿದ್ದ ವಿಚಾರಗೋಷ್ಠಿಯನ್ನು ಉದ್ಘಾಟಿಸುವ ಸಂದರ್ಭದಲ್ಲಿ ತಿಳಿಸಿದರು.

ಶ್ರೀನೂಸ್ ಹುಮಾಯೂನ್ ಕಬೀರ್‌ರವರು ತಮ್ಮ ಸ್ವಾಗತ ಭಾಷಣದಲ್ಲಿ, ಭಾರತದಲ್ಲಿ ವಾಸ್ತು ಶಿಲ್ಪ ಕಳೆದ ಎರಡು ಅಥವಾ ಮೂರು ಶತಮಾನಗಳ ಕಾಲದಿಂದ ತಟಸ್ಥ ಸ್ಥಿತಿಯಲ್ಲಿರುವುದೆಂದು ಹೇಳಿದ್ದನ್ನು ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುತ್ತಾ, ಇಂತಹ ತಟಸ್ಥ ಸ್ಥಿತಿಯು, ಭಾರತೀಯರ ಮನಸ್ಸಿನ ಅಥವಾ ಭಾರತೀಯ ಜನಜೀವನ ಪರಿಸ್ಥಿತಿಯ ತಟಸ್ಥ ಸ್ಥಿತಿಯನ್ನು ಪ್ರತಿಫಲಿಸುವುದೆಂದು ತಿಳಿಸಿದರು. ಬದಲಾವಣೆಯನ್ನು ಅಳವಡಿಸಿಕೊಳ್ಳದೆ, ಮುಂದುವರಿಯುವುದನ್ನು ನಿಲ್ಲಿಸಿದ ಸಮಾಜವು ಅಗತ್ಯವಾಗಿ ದುರ್ಬಲವಾಗುವುದು. ಈ ದೌರ್ಬಲ್ಯವು ಸೃಷ್ಟ್ಯಾತ್ಮಕ ಚಟುವಟಿಕೆಯ ಎಲ್ಲಾ ಪ್ರಕಾರಗಳಲ್ಲೂ ವ್ಯಕ್ತಗೊಳ್ಳುವುದು. ಕಳೆದ ನಾಲ್ಕು ಅಥವಾ ಐದು ಶತಮಾನಗಳ ಅವಧಿಯಲ್ಲಿ, ನಮ್ಮ ಸಾಹಿತ್ಯದಲ್ಲಿ ಈ ದೌರ್ಬಲ್ಯವನ್ನು ನಾವು ಕಾಣಬಹುದು. ಆಂದರೆ, ಈ ಕಾಲಾವಧಿಯಲ್ಲಿ ಉತ್ತಮ ಕೃತಿಗಳ ಸೃಷ್ಟಿಯೇ ಆಗಿಲ್ಲವೆಂದಲ್ಲ ಎಂಬು ಅವರು ತಿಳಿಸಿದರು.

'ಯಾವುದೇ ಜನತೆಯ ಭಾಷೆಯನ್ನು ತೋರಿಸು, ನನಗೆ ಆ ಜನತೆಯನ್ನು ನೋಡದಿದ್ದರೂ, ಅವರು ಹೇಗೆ, ಧೈರ್ಯಶಾಲಿಗಳೊ, ಹೇಡಿಗಳೊ ಇಲ್ಲವೆ ಸಾಹಸಿಗಳೊ ಎಂಬುದೆಲ್ಲವನ್ನು ಹೇಳುತ್ತೇನೆ' ಎಂದು ಮಿಲ್ಟನ್ ಒಂದು ಪುಸ್ತಕದಲ್ಲಿ ಹೇಳಿದ್ದಾರೆ. ಈ ಮಾತು, ಭಾಷೆಗಷ್ಟೇ ಅಲ್ಲ ವಾಸ್ತು ಶಿಲ್ಪಕ್ಕೂ ಹಾಗೂ ಎಲ್ಲಾ ಸೃಷ್ಟ್ಯಾತ್ಮಕ ಕಲಾಪ್ರಕಾರಗಳಿಗೂ, ಅನ್ವಯವಾಗುವುದು—ಎಂದು ಅವರು ನುಡಿದರು ಜನಜೀವನದಲ್ಲಿ ಸತ್ವವಿದ್ದರೆ, ಅದು ವರ್ಣಚಿತ್ರದಲ್ಲಿ ವಾಸ್ತುಶಿಲ್ಪದಲ್ಲಿ ಕವಿತೆಯಲ್ಲಿ, ಸಾಹಿತ್ಯದಲ್ಲಿ ಮೇಲಾಗಿ ಅವರು ಮಾಡುವ ಎಲ್ಲಾ ಕಾರ್ಯಗಳಲ್ಲಿ ವ್ಯಕ್ತಗೊಳ್ಳದಿರುವುದಿಲ್ಲ ಎಂದು ಅವರು ನುಡಿದರು

ಹಿಂದಿನ ಹಾಗೂ ಇಂದಿನ ಪರಂಪರೆಯನ್ನು ಪ್ರಧಾನ ಮಂತ್ರಿಗಳು ಸುದೀರ್ಘವಾಗಿ ಪ್ರಸ್ತಾಪಿಸುತ್ತಾ ಪರಂಪರೆಗಳು ಮುಖ್ಯವಾಗಿ ಅದ್ವಿತೀಯವಾಗಿದ್ದರೆ, ಉತ್ಕರ್ಷಪ್ರದವಾಗಿದ್ದರೆ, ಅವು ಪರಿಗ್ರಾಹ್ಯವಾಗುವುವು; ಆದರೆ, ಮನಸ್ಸು ಅಥವಾ ದೇಹವನ್ನು ಬಂಧನದಲ್ಲಿಡುವಂತಹ ಯಾವುದೇ ಪರಂಪರೆಯು ಕಲೆಯ ಸೃಷ್ಟಿ ಹಾಗೂ ಅಭಿವೃದ್ಧಿಗೆ ಅಡ್ಡಿಯಾಗಿರುವುದು ಎಂದೂ ಅವರು ನುಡಿದರು.

ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಛಂಡೀಘರದಲ್ಲಿನ ವಾಸ್ತು ಶಿಲ್ಪದ ವಿಷಯವನ್ನು ಪ್ರಸ್ತಾಪಿಸಿ, ಅದು ಜನತೆಯ ಗಮನವನ್ನು ಸೆಳೆದಿರುವುದು ಗಮನಾರ್ಹವಾದ ವಿಷಯವೆಂದು ತಿಳಿಸಿದರು ಕಟ್ಟಡದ ನಿರ್ಮಾಣದಲ್ಲಿ ಬಳಸುವ ಸಾಮಗ್ರಿಗಳ ಬಗೆಗೂ ಪ್ರಧಾನಿಗಳು ಮಾತನಾಡಿ ದೇಶದಲ್ಲಿ ದೊರೆಯುವ ಕಟ್ಟಡ ಸಾಮಗ್ರಿಗಳನ್ನು ಹೊಸ ಹೊಸ ರೀತಿಯಲ್ಲಿ, ಹಾಗೂ ಕಲಾತ್ಮಕವಾಗಿ ಬಳಸಿಕೊಳ್ಳುವ ವಿಷಯವನ್ನು ಈ ವಿಚಾರಗೋಷ್ಠಿಯು ಪರಿಶೀಲಿಸಲೆಂದು ತಿಳಿಸಿದರು.

ಸಂಸ್ಕೃತಾಭ್ಯಾಸ

ನಾವೆಷ್ಟು ಭಾಷೆಗಳನ್ನು ಕಲಿಯಬೇಕು ಎಂಬ ಪ್ರಶ್ನೆಯನ್ನು ಬದಿಗಿಡುವುದಾದರೆ, ಪ್ರಪಂಚದ ಎಲ್ಲರೂ ಮುಖ್ಯವಾಗಿ ಭಾರತೀಯರಾದರೂ ಸಂಸ್ಕೃತ ಭಾಷೆಯನ್ನು ಅಭ್ಯಸಿಸಲೇಬೇಕಾಗಿದೆ. ಸಂಸ್ಕೃತವು ಪ್ರಾಚೀನವಾದ ಭಾಷೆ ಮಾತ್ರವಲ್ಲ, ಜ್ಞಾನ ಮತ್ತು ಸಂಸ್ಕೃತಿಗಳ ನೆಲೆಯಾಗಿದೆ. ಈ ಕಾರಣದಿಂದಲೇ ಆರ್ಯ ಭಾಷೆಗಳು ಮಾತ್ರವಲ್ಲದೆ ದ್ರಾವಿಡ ಭಾಷೆಗಳು ಕೂಡ ಸಂಸ್ಕೃತಕ್ಕೆ ಚಿರಋಣಿಯಾಗಿವೆ. ಸಂಸ್ಕೃತ ಭಾಷೆಯು, ಸಾಹಿತ್ಯದ ಪ್ರಭಾವವು ಎಲ್ಲ ಭಾರತೀಯ ಭಾಷೆಗಳ ಮೇಲೆಯೂ ಪರಿಣಾಮಕಾರಿಯಾಗಿದೆ. ನಮ್ಮ ನಮ್ಮ ಮಾತೃಭಾಷೆಯನ್ನು ಸುಂದರವೂ ಉತ್ತಮವೂ ಆಗುವಂತೆ ಮಾಡಲು, ಭಾಷೆಯಲ್ಲಿ ಕಸುವು ಕಾಣಿಸಿಕೊಳ್ಳಲು ಸಂಸ್ಕೃತದ ಅಭ್ಯಾಸವು ಅವಶ್ಯವೇ ಆಗಿದೆ. ಆದುದರಿಂದ ಸಂಸ್ಕೃತ ಭಾಷಾಭ್ಯಾಸದ ಸೌಲಭ್ಯ ತೀರ ಆಗತ್ಯವಾಗಿದೆ. ಸದ್ಯ ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲೂ ಸರಕಾರದ ಪರೀಕ್ಷಾ ವಿಭಾಗಗಳಲ್ಲೂ ಸಂಸ್ಕೃತ ಭಾಷಾಭ್ಯಾಸಕ್ಕೆ ಅವಕಾಶ ಕಲ್ಪಿಸಿ ಕೊಡಲಾಗಿದ್ದರೂ ಇದರ ಪರಿಣಾಮವು ತೃಪ್ತಿಕರವಾಗಿ ತೋರುತ್ತಿಲ್ಲ. ಸಂಸ್ಕೃತ ಆಯೋಗವು ಇವೆಲ್ಲವನ್ನೂ ಪರಿಶೀಲಿಸಿ, ಪ್ರತ್ಯೇಕ ಕೇಂದ್ರ ಸಂಸ್ಕೃತ ಶಿಕ್ಷಣ ಮಂಡಳಿಯನ್ನು ರಚಿಸಿ ಸಂಸ್ಕೃತಾಭ್ಯಾಸವನ್ನು ಪ್ರೋತ್ಸಾಹಿಸಬೇಕೆಂದೂ ಸೂಚಿಸಿದೆ. ಜಾಗಧ್ರಿಯಲ್ಲಿ ವಿಶ್ವಸಂಸ್ಕೃತ ಪರಿಷತ್ತಿನ ಪಂಜಾಬ ವಿಭಾಗವನ್ನುದ್ದೇಶಿಸಿ ಮಾತನಾಡುತ್ತ ಲೋಕ ಸಭಾಪತಿಗಳಾದ ಶ್ರೀ ಅನಂತಶಯನಂ ಐಯಂಗಾರರು ಈ ಮಂಡಳಿಯನ್ನು ಶೀಘ್ರವೇ ರಚಿಸಲಾಗುವುದೆಂದು ಆಶ್ವಾಸನೆಯಿತ್ತಿರುವರು. ಆದರೆ, ಸಭಾಪತಿಗಳ ಆಶ್ವಾಸನೆಯನ್ನು ಕಾರ್ಯಕಾರಿಗೊಳಿಸುವವರು ಮಂತ್ರಿ ಶಾಖೆಗಳಾದುದರಿಂದ ಈ ಕಡೆಗೆ ಸಂಬಂಧಿತರು ತ್ವರಿತಗಮನ ಹರಿಸುವುದು ಆವಶ್ಯಕವೆನ್ನಬಹುದು

ತಮ್ಮ ಭಾಷಣವನ್ನು ಮುಕ್ತಾಯಗೊಳಿಸುತ್ತಾ, ಈ ವಿಚಾರ ಗೋಷ್ಠಿಯು, ಹಿಂದಿನ ಹಾಗೂ ಇಂದಿನ ಪರಿಸ್ಥಿತಿಗಳನ್ನು ಗಮನಿಸಿ, ಭಾರತದ ವಾಸ್ತು ಶಿಲ್ಪವನ್ನು ಜನಾನುಕೂಲವಾಗಿರುವಂತಹ, ಹೊಸ ಹಾದಿಯಲ್ಲಿ ವೃದ್ಧಿಗೊಳಿಸಲು ಸಹಾಯಕವಾಗಲೆಂದು ತಿಳಿಸಿದರು

ಇದಕ್ಕೆ ಮೊದಲು, ಭಾರತ ಸರಕಾರದ ಸಾಂಸ್ಕೃತಿಕ ಶಾಖೆಯ ಮಂತ್ರಿಗಳಾದ ಶ್ರೀ ಹುಮಾಯೂನ್ ಕಬೀರ್‌ರವರು ಈ ವಿಚಾರ ಗೋಷ್ಠಿಯನ್ನು ಉದ್ಘಾಟಿಸಲು ಪ್ರಧಾನ ಮಂತ್ರಿಗಳನ್ನು ಸ್ವಾಗತಿಸುತ್ತಾ, ಮಾಡಿದ ಭಾಷಣದಲ್ಲಿ, ಭಾರತದಲ್ಲಿ ವಾಸ್ತು ಶಿಲ್ಪದ ಸಂಬಂಧದಲ್ಲಿ ಏರ್ಪಡಿಸಿರುವ ವಿಚಾರ ಗೋಷ್ಠಿಯಲ್ಲಿ ಬಹುಶಃ ಇದೇ ಮೊದಲನೆಯದು. ವಾಸ್ತು ಶಿಲ್ಪದಲ್ಲಿ ಕಲಾವಿದನು, ಇತರ ಕಲಾಕ್ಷೇತ್ರಗಳಲ್ಲಿನ ಕಲಾವಿದನಷ್ಟು ಸ್ವತಂತ್ರನಲ್ಲ. ಅವನಿಗೂ ಸಮಾಜಕ್ಕೂ ನಿಕಟವಾದ ಸಂಬಂಧವಿರುವುದು. ಅವನ ಕಲೆಯ ಅಭಿವ್ಯಕ್ತಿಯು ಸಾಮಾಜಿಕ ಸ್ಥಿತಿಯ ಅಭಿವೃದ್ಧಿ ಸ್ಥಿತಿಯನ್ನು ಅವಲಂಬಿಸಿರುವುದು" ಎಂದು ತಿಳಿಸಿದರು. ದೇಶವಿದೇಶಗಳ ವಾಸ್ತು ಶಿಲ್ಪದ ವೈವಿಧ್ಯವನ್ನು ಅವರು ತಮ್ಮ ಭಾಷಣದಲ್ಲಿ ವಿವರಿಸಿದರು.

ಭಾರತದ ವಾಸ್ತು ಶಿಲ್ಪ ಪರಂಪರೆಯನ್ನು ಅವರು ಬಣ್ಣಿಸುತ್ತ, ಕಳೆದ ೧೫೦ ಅಥವಾ ೨೦೦ ವರ್ಷಗಳಿಂದ ಅದು ಪ್ರವೃದ್ಧಿಗೊಳ್ಳದೆ ತಟಸ್ಥ ಸ್ಥಿತಿಯಲ್ಲಿರುವುದು ಶೋಚನೀಯವೆಂದು ತಿಳಿಸಿದರು.

ಇಂದು ಎಲ್ಲಾ ಬಗೆಯ ನಿರ್ಮಾಣ ಕಾರ್ಯ ನಡೆಯುತ್ತಿದೆ. ಸರ್ವರಿಗೂ ಸಮಬಾಳು, ಸಮಾನಾವಕಾಶ ಹಾಗೂ ಸಮಾನತೆಯನ್ನು ನೀಡುವ ಸುಖೀರಾಜ್ಯದ ನಿರ್ಮಾಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿನ ಕಲಾವಿದರಿಗೂ ಸದವಕಾಶಗಳು ದೊರಗುವುವು ಎಂದು ಅವರು ಸೂಚಿಸಿದರು. ಮುಂದುವರಿದು ಅವರು ಕಟ್ಟಡ ಸಾಮಗ್ರಿಗಳ ಬಳಕೆಯಲ್ಲಿ ಹಾಗೂ ಕಾರ್ಯತಂತ್ರದಲ್ಲಿ ಗಮನಾರ್ಹವಾದ ಪ್ರಗತಿಯಾಗಿದೆಯೆಂದೂ, ಇಂದು ಎಲ್ಲ ಶಿಲ್ಪಗಳಿಗೆ ತಂತ್ರ ಹಾಗೂ ಸಾಮಗ್ರಿಗಳಲ್ಲಿ ಹೆಚ್ಚಿನ ವ್ಯಾಪ್ತಿ ಇರುವುದೆಂದೂ" ತಿಳಿಸಿದರು.

ಅಮೆರಿಕೆಯ ಸಣ್ಣ ಕೈಗಾರಿಕೆಗಳು

ಅಮೆರಿಕದ ಚಿಕ್ಕ ಕೈಗಾರಿಕೆಗಳ ಪ್ರದರ್ಶನವನ್ನು ತೆರೆಯುತ್ತಾ ರಿಬ್ಬನನ್ನು ಕತ್ತರಿಸಲು, ಪಶ್ಚಿಮ ಬಂಗಾಳದ ಗವರ್ನರ್ ಮಿಸ್. ಪದ್ಮಜಾನಾಯ್ಡು ಸೌರಶಕ್ತಿಯ ಪ್ರಚೋದಿತ ಕತ್ತರಿಗಳನ್ನು ಉಪಯೋಗಿಸಿದರು. ಗಣ್ಯ ಪ್ರೇಕ್ಷಕರ ವೃಂದದಲ್ಲಿ ಅಮೆರಿಕದ ರಾಯಭಾರಿ ಎಲ್ಸ್‌ವರ್ತ್ ಬಂಕರ್‌ರವರು ತನ್ನ ಭಾಷಣದಲ್ಲಿ ಅಮೆರಿಕನ ಆರ್ಥಿಕ ಜೀವನದಲ್ಲಿ ಚಿಕ್ಕ ಉದ್ಯಮಗಳಿಗಿರುವ ಪ್ರಧಾನ ಪಾತ್ರವನ್ನು ಒತ್ತಿ ನುಡಿದರು. ಚಿಕ್ಕ ಪ್ರಮಾಣದ ಕೈಗಾರಿಕೆಗಳ ಮೂಲಕ "ಉತ್ಪಾದನೆ ಅಗ್ಗ ಮತ್ತು ವಿಕೇಂದ್ರೀಕೃತವಾಗುತ್ತದೆ, ಬಳಕೆಗಾರರೂ ಕೊಡಬೇಕಾದ ಬೆಲೆ ಕಡಿಮೆಯಾಗುತ್ತದೆ" ಎಂದವರು ಹೇಳಿದರು ಅಮೆರಿಕದಲ್ಲಿ ಚಿಕ್ಕ ಕೈಗಾರಿಕೆಗಳು ವ್ಯಕ್ತಿಗಳ ಅಥವಾ ಪಾಲುಗಾರರ ಒಡೆತನದಲ್ಲಿವೆ ಮತ್ತು ವಾಸ್ತವವಾಗಿ ಖಾಸಗಿ ಸಾಹಸೋದ್ಯಮಗಳಾಗಿರುತ್ತವೆ ಎಂದು ಬಂಕರ್ ಹೇಳಿದರು. ಅಮೆರಿಕದಲ್ಲಿ ಸುಮಾರು ೪೦ ಲಕ್ಷ ಫರ್ಮ್‌ಗಳು ಚಿಕ್ಕ ಕೈಗಾರಿಕೆಯ ವಿಭಾಗದಲ್ಲಿವೆ ಎಂದವರು ಹೇಳಿದರು.

ಅಲ್ಲಲ್ಲಿಯ ಸುದ್ದಿ ಸಾರ

ಮೂಲ್ಕಿ ಸರಕಾರಿ ಹ್ಯಾಸ್ಕೂಲಿನ ರಜತೋತ್ಸವ—ವನ್ನು ಇದೇ ವರ್ಷಾರಂಭದಲ್ಲಿ ಜರಗಿಸುವ ವ್ಯವಸ್ಥೆಗಾಗಿ ರಜತೋತ್ಸವ ಸಮಿತಿಯೊಂದನ್ನು ಇತ್ತೀಚೆಗೆ ರಚಿಸಲಾಗಿದೆ. ಇದಕ್ಕೆ ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷರಾಗಿ, ಕಾರ್ಯಕಾರಿ ಸಮಿತಿಗೆ ಶ್ರೀ ವಿ.ಎಸ್. ಕುಡುವರು ಅಧ್ಯಕ್ಷರಾಗಿ ಶ್ರೀ ಎಂ ಆರ್. ಎಚ್. ಪೂಂಜರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವರು. ಈ ಸಮಿತಿಯಲ್ಲಿ ಶಾಲಾ ಹಿತಾಕಾಂಕ್ಷಿಗಳೂ ಹಳೇ ವಿದ್ಯಾರ್ಥಿಗಳೂ ಇದ್ದು, ಜನರ ಸಹಕಾರವನ್ನು ಕೋರಲಾಗಿದೆ.

ಸತ್ಕಾರ – ಇತ್ತೀಚೆಗೆ ವಿವಾಹವಾದ ಡಾ| ಕೆ. ಪಿ. ಮಧ್ಯಸ್ತರನ್ನು ಸತ್ಕರಿಸುವ ಸಲುವಾಗಿ ಮೂಲ್ಕಿ ರಿಕ್ರಿಯೇಶನ್ ಕ್ಲಬ್ಬಿನಲ್ಲಿ ತಾ. 20ರಲ್ಲಿ ಡಾ| ಕೆ. ಬಾಬು ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಎಂ. ಆರ್. ಎಚ್. ಪೂಂಜರು ಸ್ವಾಗತ ಭಾಷಣ ಮಾಡಿದ ಮೇಲೆ ಡಾ| ಎಂ ಆರ್. ಕಾಮತ್, ಶ್ರೀ ಕೆ. ಜಿ ಮಾಡಾಯಿ, ಶ್ರೀ ಜೆ. ಬಿ. ಮಹಾಬಲ ಶೆಟ್ಟಿ, ಡಾ| ಸಂಜೀವನಾಥ ಇವರು ಸಂದರ್ಭೋಚಿತ ಮಾತುಗಳನ್ನಾಡಿದರು. ಡಾ ಮಧ್ಯಸ್ತರು ಉತ್ತರವಿತ್ತ ಬಳಿಕ ಶ್ರೀ ಎಂ. ಜಯರಾಮ ಹೆಗ್ಡೆಯವರು ಅಭಾರ ಸೂಚಿಸಿದರು.

ಶ್ರೀ ಶಿವರಾಮ ಕಾರಂತರಿಗೆ ಗೌರವ—ಇಂಟರ್ ನ್ಯಾಶನಲ್ ಡೇನ್ಸ್ ಆರ್ಕೈವ್ಸ್‌ನ ಡ್ಯಾರೆಕ್ಟರರಾದ ಸ್ವೀಡನಿನ ವಿದ್ವಾಂಸ ಬೆಂಟ್ ಹೇಗರ್ ಎಂಬವರು ದಕ್ಷಿಣ ಕನ್ನಡಕ್ಕೆ ಇತ್ತೀಚೆಗೆ ಕಲಾ ಸಂಗ್ರಹಕ್ಕಾಗಿ ಬಂದಿದ್ದು ಶ್ರೀ ಶಿವರಾಮ ಕಾರಂತರು ನೃತ್ಯ, ಯಕ್ಷಗಾನ ಕಲೆಗಳಿಗೆ ಸಲ್ಲಿಸಿರುವ ಸೇವೆಯ ಗೌರವಾರ್ಥವಾಗಿ ಅವರಿಗೆ ಪುತ್ತೂರಿನ ಕರ್ನಾಟಕ ಸಂಘದ ವತಿಯಿಂದ ಏರ್ಪಡಿಸಲಾದ ಸಭೆಯಲ್ಲಿ ತಮ್ಮ ಸಂಸ್ಥೆಯ ಅತ್ಯಂತ ಹೆಚ್ಚಿನ ಗೌರವದ ಕಂಚಿನ ಪದಕವೊಂದನ್ನು ಸಮರ್ಪಿಸಿದರು. ತಾ. 18ರಲ್ಲಿ ಕೋ-ಓಪರೇಟಿವ್ ಟೌನ್ ಬ್ಯಾಂಕ್‌ನಲ್ಲಿ ಡಿ| ಮುನ್ಸಿಫ್ ಶ್ರೀ ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಈ ಸಭೆಯಲ್ಲಿ ಬೆಂಟ್ ಹೇಗರವರು ನೃತ್ಯ ಕಲೆಯ ಕುರಿತು ಭಾಷಣವಿತ್ತರು. ಶ್ರೀ ಕಾರಂತರು ಆಭಾರ ಸೂಚಿಸಿ ಮಾತನಾಡಿದರು. ಸಭಾಧ್ಯಕ್ಷ ಶ್ರೀ ಹೆಗ್ಡೆಯವರು ಸ್ವೀಡಿಶ್ ವಿದ್ವಾಂಸ ಹೇಗರವರ ಭಾಷಣದ ಮಹತ್ವವನ್ನು ತಿಳಿಸಿ ಕಾರಂತರಿಗೆ ದೊರೆತ ಗೌರವ ಎಲ್ಲರಿಗೂ ಆನಂದವನ್ನುಂಟು ಮಾಡಿದೆ ಎಂದರು ಶ್ರೀ ಎ. ಪಿ ಸುಬ್ಬಯ್ಯನವರು ವಂದನೆಗಳನ್ನರ್ಪಿಸಿದರು.

ಪೊಳಲಿ ಚೆಂಡಿನ ಜಾತ್ರೆ—ಮೀನ ಸಂಕ್ರಮಣ ದಿವಸ ಶ್ರೀ ರಾಜರಾಜೇಶ್ವರೀ ಅಮ್ಮನವರ ಉತ್ಸವಕ್ಕೆ ಧ್ವಜಾರೋಹಣವಾಗಿ ಸ್ಥಳ ರಿವಾಜು ಪ್ರಕಾರ ಧ್ವಜದ ನಿರೂಪವಾದಂತೆ ಬರುವ ಎಪ್ರಿಲ್ 6ನೇ ಸೋಮವಾರ 'ಚೆಂಡಿನ ಉತ್ಸವ' ಆರಂಭವಾಗಿ ತಾ. 7ನೇ ಮಂಗಳವಾರ ೨ನೇ ಚೆಂಡು ಅಂಕುರ, ತಾ. 8ನೇ ಬುಧವಾರ ನಡುಚೆಂಡು ಕುಮಾರೋತ್ಸವ, ತಾ. 9ನೇ ಗುರುವಾರ ೪ನೇ ಚೆಂಡು ಚಂದ್ರಮಂಡಲೋತ್ಸವ, ತಾ. 10ನೇ ಶುಕ್ರವಾರ ಕಡೆ ಚೆಂಡಿನ ಮಹೋತ್ಸವ, ತಾ. 11ನೇ ಶನಿವಾರ ಮಹಾರಥೋತ್ಸವ, ತಾ. 12ನೇ ಆದಿತ್ಯವಾರ ಅವಭೃತ ಮಂಗಳ ಸ್ನಾನವು ಜರಗುವುದು. ಭಕ್ತಾದಿಗಳು ಶ್ರೀ ದೇವಿ ದರುಶನ ಮಾಡಬೇಕಾಗಿ ವಿನಂತಿಸಲಾಗಿದೆ.

ಡಾ| ಕೆ. ಎಲ್. ಐತಾಳರಿಗೆ ಸತ್ಕಾರ—ಇದೇ ತಾ. 21ರಲ್ಲಿ ಉಡುಪಿ ಸೆಂಟ್ರಲ್ ವಾರ್ಡಿನ ಮತದಾರ ಮಹಂದಾಳುಗಳು ನಗರ ಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರಿಗೆ ಡಾ| ಸುಂದರ ರಾಮ ಪೈಗಳ ಅಧ್ಯಕ್ಷತೆಯಲ್ಲಿ ಮ್ಯುನ್ಸಿಪಲ್ ನೋರ್ತ್ ಶಾಲಾ ಕಟ್ಟಡದಲ್ಲಿ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಶ್ರೀ ಕಾರ್ನಾಡ್ ಪಾಂಡುರಂಗ ರಾಯರು ಸ್ವಾಗತ ಮಾತುಗಳನ್ನಾಡಿದ ಮೇಲೆ ಹಲವರು ಸಂದರ್ಭೋಚಿತ ಭಾಷಣವಿತ್ತರು.

ಸುರತ್ಕಲ್ ಅಗ್ಗದಕರೆ ಹಾ. ಎ. ಶಾಲೆಯಲ್ಲಿ ದಿನಾಂಕ 17ರಂದು ಬಡ ಹೆಣ್ಮಕ್ಕಳ ಉತ್ತಮ ಹಾಜರಿ ಪಾರಿತೋಷ ವಿತರಣೆಯು ಶಾಲಾ ಮುಖ್ಯೋಪಾಧ್ಯಾಯರ ಹಸ್ತದಿಂದ ಜರಗಿತು. ಸಭಿಕರಲ್ಲಿ ಶಾಲಾಧ್ಯಾಪಕರಾದ ಶ್ರೀ ಟಿ. ನಾರಾಯಣ ರಾವ್, ಶ್ರೀ ಎಂ. ಉಮೇಶ ರಾವ್ ಇವರು ಪಾರಿತೋಷ ವಿತರಣೆಯ ಉದ್ದೇಶ ಹಾಗೂ ನಿಯಮವನ್ನು ವಿವರಿಸಿ ಪ್ರತಿಯೋರ್ವ ಹೆಣ್ಮಕ್ಕಳೂ ಇದನ್ನು ಪಡೆಯಲು ಪ್ರಯತ್ನಿಸಬೇಕೆಂಬುದಾಗಿ ಭಾಷಣವಿತ್ತರು.

ಉಡುಪಿ ರೋಟರಿ ಕ್ಲಬ್ಬಿನ ಸಭೆಯು ಮಣಿಪಾಲದಲ್ಲಿ ತಾ. 13ರಲ್ಲು ರೋಟರಿ ಗವರ್ನರ್ ಶ್ರೀ ಟ್ರೀರಾಜಂ ಅವರಅಧ್ಯಕ್ಷತೆಯಲ್ಲಿ ಜರಗಿತು ಭೋಜನಾನಂತರ ಡಾ| ಟಿ. ಎಂ. ಎ ಪೈಗಳವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈಗಳವರು ಸಂದೇಶ ಮತ್ತು ಪ್ರಶಸ್ತಿ ಪತ್ರಗಳನ್ನೋದಿದರು. ಶ್ರೀ ರಾಜಂ ಅವರು ಮಾತನಾಡುತ್ತ "ರೋಟರಿ ಕ್ಲಬ್" ಎಂದರೆ ಕೆಲವರು ತಪ್ಪಾಗಿ ಗ್ರಹಿಸಿರುವಂತೆ ಧನಿಕರ ಮಾತಿನ ಮಂಟಪವಲ್ಲ; ಅದು ವಿಶಾಲ ಕಾರ್ಯಕ್ರಮಗಳುಳ್ಳ ಮಾನವ ಸೇವಾದೀಕ್ಷೆಯ ಸಂಕೇತವಾಗಿದೆ, ಹಲವು ಜನಹಿತ ಕಾರ್ಯ-ಜನಪದ ಪ್ರಗತಿ ಕಾರ್ಯಗಳಲ್ಲಿ ರೋಟರಿ ಕ್ಲಬ್ಬು ಪ್ರಧಾನಪಾತ್ರವಹಿಸಬಹುದು. ಡಾ. ಟಿ. ಮಾಧವ ಪೈಗಳವರು ರೋಟರಿಯ ಧ್ಯೇಯೊದರ್ಶಗಳನ್ನು ಚೈತನ್ಯಪೂರ್ಣವಾಗಿ ಕೃತಿಗಿಳಿಸಿ ತೋರಿಸುತ್ತಿದ್ದಾರೆ. ನಾನು ವಸ್ತುತಃ ಉಡುಪಿ ರೋಟರಿ ಕ್ಲಬ್ಬಿನಿಂದ ಸ್ಫೂರ್ತಿಪಡೆದಿದ್ದೇನೆಂ"ದರು. ಶ್ರೀ ರಮೇಶ ಪೈಗಳು ಮಾತನಾಡುತ್ತ "ರೋಟರೀ ಸ್ಫೂರ್ತಿ ಶ್ರೀ ಕೆ. ಆರ್. ಕೆ ಭಟ್ಟರವರ ಮೂಲಕ ಉಡುಪಿಗೆ ದೊರಕುವಂತಾಗಿದೆ"ಎಂದು ಹೇಳಿ ಧನ್ಯವಾದಗಳನ್ನರ್ಪಿಸಿದರು

ನಿಟ್ಟೂರು ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು—ದಿನಾಂಕ ೨೧ರಂದು ನೆರವೇರಿತು. ಉಡುಪಿ ಬೋರ್ಡ್ ಹೈಸ್ಕೂಲಿನ ಪ್ರಧಾನಾಧ್ಯಾಪಕರಾದ ಶ್ರೀ ಬಿ. ಅನಂತ ಕೃಷ್ಣ ಸಾಮಗರು ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾರಂಭದಲ್ಲಿ ಮುಖ್ಯೋಪಾಧ್ಯಾಯ ಶ್ರೀ ಎಫ್. ಎಕ್ಸ್. ಕರ್ನೇಲಿಯೊ ಅವರು ಶಾಲೆಯ ಪ್ರಗತಿಯನ್ನು ನಿವರಿಸುವ ವರದಿಯನ್ನು ಓದಿ ಹೇಳಿದರು. ಶಿವಳ್ಳಿ ಪಟೇಲ್ ಶ್ರೀ ಯು. ಬಿ. ಪ್ರಭಾಕರ ರಾಯರು ಕಾರಣಾಂತರದಿಂದ ಅನುಪಸ್ಥಿತರಾದುದರಿಂದ ಅವರ ಪರವಾಗಿ ಲಿಖಿತ ಭಾಷಣವನ್ನು ಶ್ರೀ ಎಸ್. ಗೋಪೀಚಂದರಾಯರು ಓದಿ ಹೇಳಿದರು. ಬಹುಮಾನ ವಿತರಣಾನಂತರ ಅಧ್ಯಕ್ಷರು ಶಾಲೆಯ ಮಟ್ಟವನ್ನೂ ಪ್ರಗತಿಯನ್ನೂ ಪ್ರಶಂಸಿಸಿ ಮಾತನಾಡುತ್ತ ಸರಕಾರಿ ಪರೀಕ್ಷೆಯಲ್ಲಿ ಮೊದಲನೆಯ ವರ್ಷ-ವೇ ಸೇಕಡಾ ಅರುವತ್ತಕ್ಕಿಂತ ಹೆಚ್ಚಿನ ಫಲಿತಾಂಶ ಪಡೆದುದು ಶ್ಲಾಘ್ಯವೆಂದು ಹೇಳಿದರು. ವಿದ್ಯಾರ್ಥಿಗಳಿಂದ ವಿವಿಧವಿನೋದಾವಳಿ ಮತ್ತು ನಾಟಕ ಪ್ರದರ್ಶನವೂ ಹಳೆಯ ವಿದ್ಯಾರ್ಥಿಗಳಿಂದ ನಾಟಕಾಭಿನಯಗಳೂ ನಡೆದುವು

ಪೂರ್ವಾಹ್ನ ಡಾ| ಎನ್. ಎಸ್. ಸುವರ್ಣರವರಿಂದ ಧ್ವಜಾರೋಹಣ ಸಮಾರಂಭವು ನಡೆದಿದ್ದು, ಶಾಲೆಯ ಪ್ರಾಕ್ತನವಿದ್ಯಾರ್ಥಿ ಸಂಘದವರಿಂದ ಶಾಲಾ ಮಕ್ಕಳಿಗೆ ಸಿಹಿ ತಿಂದಿಯನ್ನು ಹಂಚಲಾಗಿತ್ತು.

ಶಾಲಾ ಹಳೆಯ ವಿದ್ಯಾರ್ಥಿಸಂಘದ ಮಹಾಧಿವೇಶನವೂ ಪೂರ್ವಾಹ್ನ ಸಂಘದ ಅಧ್ಯಕ್ಷ ಶ್ರೀ ಯು. ಬಿ. ಪ್ರಭಾಕರ ರಾಯರ ನೇತೃತ್ವದಲ್ಲಿ ನಡೆದು ಹಿಂದಿನ ವರ್ಷದ ವರದಿಯನ್ನೂ ಆಯವ್ಯಯಗಳ ಲೆಕ್ಕಪತ್ರಗಳನ್ನೂ ಸ್ವೀಕರಿಸಿ ಮುಂದಿನ ವರ್ಷಕ್ಕೆ ಕಾರ್ಯಕಾರಿ ಮಂಡಳಿಯನ್ನಾರಿಸಿತ್ತು. ಶ್ರೀ ಪಿ. ಸದಾಶಿವ ಶೆಟ್ಟರು ಅಧ್ಯಕ್ಷರಾಗಿಯೂ ಶ್ರೀ ಎಫ್. ಎಕ್ಸ್. ಕರ್ನೇಲಿಯೋ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರುವರು.

ಉಡುಪಿ ಸರಕಾರಿ ಆಸ್ಪತ್ರೆಯಲ್ಲಿ ಕುಟುಂಬ ಯೋಜನಾ ಕೇಂದ್ರವು ಇತ್ತೀಚೆಗೆ ಆರಂಭವಾಗಿದೆ. ಮಿತ ಸಂತಾನದ ಕುರಿತಾದ ಮಾಹಿತಿಗಳನ್ನು ಈ ಕೇಂದ್ರದಲ್ಲಿ ತಿಳಿಯಬಹುದು. ಸಾರ್ವಜನಿಕರು ಈ ಕೇಂದ್ರದ ಸದುಪಯೋಗವನ್ನು ಹೊಂದುವರೆಂದು ನಿರೀಕ್ಷಿಸಲಾಗಿದೆ. ಬಡವರು ಉಚಿತವಾಗಿ ಸೌಕರ್ಯಗಳನ್ನು ಪಡೆಯಬಹುದು.

ನಗರ ಸಭೆಯ ಮುಂಗಡ ಪತ್ರ ಉಡುಪಿ ನಗರ ಸಭೆಯು ತಾ. ೨೩ರಂದು ನಗರ ಸಭಾಪತಿ ಡಾ| ಕೆ. ಎಲ್. ಐತಾಳರವರ ಹಿರಿತನದಲ್ಲಿ ಸಭೆ ಸೇರಿ ೧೯೫೯-೬೦ರ ಮುಂಗಡ ಪತ್ರವನ್ನು ಅಂಗೀಕರಿಸಿತು ಶ್ರೀ ಟಿ. ಎ. ವಾಸುದೇವನ್‌ರವರು ಆಡಳಿತದಲ್ಲಿಯ ಅಸಡ್ಡೆಯ ಕಾರಣದಿಂದ ನಗರ ಸಭೆಯ ಆದಾಯ ಕುಸಿದು ಬಿದ್ದಿದೆ ಎಂದು ಟೀಕಿಸಿದರು. ಶ್ರೀ ಪಿ. ಶೀನ ನಾಯಕರು ಬಜೆಟನ್ನು ದೀರ್ಘವಾಗಿ ವಿಮರ್ಶಿಸಿ ಶ್ರೀ ವಾಸುದೇವನ್‌ರವರು ಹೇಳಿದುದನ್ನು ವಿಶದೀಕರಿಸಿದರು. ಶ್ರೀ ಆರ್. ಆರ್. ಕುಂಜೂರರೂ ಶ್ರೀ ಎನ್. ಸೀತಾರಾಮ ಕಾಮತರೂ ಕೆಲವು ಮಾತುಗಳನ್ನಾಡಿದರು. ಶ್ರೀ ಎ. ಜೆ. ಅಲ್ಸೆಯವರು ನಗರ ಸಭೆಯ ಆದಾಯವನ್ನು ಹೆಚ್ಚಿಸುವ ಎಲ್ಲ ಕ್ರಮಗಳನ್ನು ಕೈಗೊಂಡು ನಗರದ ಸರ್ವತೋಮುಖ ಪ್ರಗತಿಯ ಕಡೆಗೆ ಯತ್ನಿಸಬೇಕೆಂದು ಹಾರಯಿಸಿದರು. ಹೆಚ್ಚು ಚರ್ಚೆ-ವಿರೋಧಗಳ ವಾತಾವರಣವಿಲ್ಲದೆ ಮುಂಗಡ ಪತ್ರ ಮಂಜೂರಾಯಿತು. ಶ್ರೀಗಳಾದ ಟಿ. ಎ. ವಾಸುದೇವನ್, ಪಿ ಶೀನ ನಾಯಕ ಮತ್ತು ಶ್ರೀಮತಿ ಜಲಜಾಕ್ಷಿಯವರು ಭಾಗವಹಿಸಲಿಲ್ಲ.

ಜನಮತ

ಬಸವ ಕಲ್ಯಾಣದಲ್ಲಿ ಜರುಗಲಿರುವ ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ಶ್ರೀ ಅ. ನ. ಕೃಷ್ಣರಾಯರು ಅಧ್ಯಕ್ಷರಾಗಬೇಕು.

ಈ ವರ್ಷದ ಕನ್ನಡ ಸಾಹಿತ್ಯ ಸಮ್ಮೇಲನ ಕಲಬುರ್ಗಿಯಿಂದ ೪೦ ಮೈಲು ದೂರದಲ್ಲಿರುವ ಬಸವೇಶ್ವರರು ಅನುಭವ ಮಂಟಪ ಸ್ಥಾಪಿಸಿದ, ಶಿವಶರಣರಿಗೆ ಪ್ರಭು ದೇವರು ನಿಚ್ಚ ತಿಳಿವಿನ ಹಾದಿ ತೋರಿದ ಬಸವ ಕಲ್ಯಾಣದಲ್ಲಿ ಮುಂದಿನ ಮೇ ತಿಂಗಳ ಎರಡನೇ ವಾರದಲ್ಲಿ ಜರಗಲಿದೆಯೆಂದು ಅಧಿಕೃತವಾಗಿ ಪ್ರಕಟವಾಗಿದೆ. ಆದರೆ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರ ಆಯ್ಕೆ ಇನ್ನೂ ಆಗಿಲ್ಲ. ಯಾವ ದೃಷ್ಟಿಕೋನದಿಂದ ತೂಗಿ ನೋಡಿ ವಿವೇಚಿಸಿದರೂ ಈ ಬಾರಿಯ ಸಾಹಿತ್ಯ ಸಮ್ಮೇಲನಕ್ಕೆ ಶ್ರೀ ಅ. ನ. ಕೃಷ್ಣರಾಯರೇ ಅಧ್ಯಕ್ಷರಾಗಬೇಕೆಂಬುದು ಯಾರಿಗೂ ಹೊಳೆಯದಿರದು. ಕನ್ನಡ ಸಾಹಿತ್ಯ ರಂಗದಲ್ಲಿ "ಪ್ರಗತಿ ಸಾಹಿತ್ಯ" ವೆಂಬ ಹೊಸ ಪಂಥವನ್ನೇ ಸೃಷ್ಟಿಮಾಡಿ ತಮ್ಮ ವಾಗ್ವೈಖರಿಯಿಂದ ಇಡೀ ಕನ್ನಡ ನಾಡನ್ನೇ ಬೆರಗುಗೊಳಿಸಿರುವ, ತಮ್ಮ ಸರಸ ಜೀವನದಿಂದ ಕಲೋಪಾಸಕರಿಗೆಲ್ಲಾ ಸನ್ಮೋಹನಾಸ್ತ್ರವನ್ನು ಬೀರಿರುವ ತಮ್ಮ ಕಾದಂಬರಿ, ಸಣ್ಣ ಕಥೆ, ನಾಟಕ, ಭಾಷಣ, ಲೇಖನಗಳಿಂದ ಸರ್ವ ಕನ್ನಡಿಗರ ಮನಸ್ಸನ್ನೂ ಸೂರೆಗೊಂಡಿರುವ ಶ್ರೀ ಅ. ನ. ಕೃ ಅವರ ಪರಿಚಯ ಪ್ರತ್ಯೇಕಮಾಡಿ ಕೊಡಬೇಕಾಗಿಲ್ಲ, ಜನರ ಹೃದಯವನ್ನು ಹೊಕ್ಕು ಜನತೆಗೆ ಬೇಕಾಗುವ ಜನತಾ ಸಾಹಿತ್ಯವನ್ನು ರಚಿಸಿದ ಮಹಾವ್ಯಕ್ತಿ ಅ. ನ. ಕೃ. ಪ್ರೊ| ಗೋಕಾಕರೆನ್ನುವಂತೆ ಶ್ರೀ ಅ. ನ. ಕೃಷ್ಣರಾಯರು ಸಾಹಿತ್ಯಕ್ಕೆ ತಮ್ಮ ಜೀವಿತವನ್ನು ಧಾರೆಯೆರೆದಿದ್ದಾರೆ. ಅಂತಹ ಮಹಾ ವ್ಯಕ್ತಿಗೆ ಸಾಹಿತ್ಯ ಸಮ್ಮೇಲನದ ಘನ ಪದವನ್ನು ಕೊಟ್ಟು ಗೌರವಿಸುವುದೆಂದರೆ ಕನ್ನಡಿಗರು ತಮ್ಮನ್ನು ತಾವೇ ಗೌರವಿಸಿ ಕೊಂಡಂತೆ! ಸಂಬಂಧಪಟ್ಟ ಸಕಲರೂ ಗಮನಿಸಿ ವಿವೇಚಿಸಿ ಶ್ರೀ ಅ. ನ. ಕೃ. ಅವರು ಈ ಬಾರಿಯ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಗಾದಿಯಲ್ಲಿ ವಿರಾಜಿಸುವಂತೆ ಪ್ರಯತ್ನಿಸುವರೆಂದು ಹಾರೈಸುತ್ತೇನೆ.

ಶ್ರೀಪತಿರಾವ್ ಪಲಿಮಾರ್‌ಕರ್,
ಬಿ. ಎ, ಬಿ. ಟಿ.

ಹಾನಗಲ್ (ಕೊಡಗು), ೨೨-೩-೧೯೫೯.

ಹೊಸ ಬೆಳಕು

(೫ನೇ ಪುಟದಿಂದ)

ಪಾತಾಳ ಲೋಕಕ್ಕೆ ಹೋಗುವ ಸಂದರ್ಭ ಒದಗಿತು. ಅಲ್ಲಿನ ಒಂದು ದೃಶ್ಯದ ಬಗ್ಗೆ ಅವರು, "ನನ್ನ ಮಿತ್ರರ ಬಲವಂತದ ಮೇಲೆ ನಾನೊಂದು ಸ್ಥಳಕ್ಕೆ ಹೋಗಿದ್ದೆ ಅಲ್ಲಿ ಎರಡು ಪುರುಷರ ಮತ್ತೊಂದು ಸ್ತ್ರೀಯ ಮೂರ್ತಿ ಇತ್ತು. ನಾರಿಯು ಇರ್ವರು ಪುರುಷರ ಮಧ್ಯೆ ಇದ್ದಳು. ಇದನ್ನು ಕಂಡೊಡನೆಯೇ ನನಗೆ ರಾಮ ಸೀತೆ ಲಕ್ಷ್ಮಣರ ವನಗಮನದ ಸ್ಮರಣೆ ಬಂದು ನನ್ನ ಸ್ನೇಹಿತರಿಗೆ ಹಾಗೆಯೇ ತಿಳಿಸಿದೆ" ಎಂದು ಬರೆದಿದ್ದಾರೆ

ಇದೇ ಪ್ರಕಾರ ಭಾರತದಲ್ಲಿದ್ದ ರಾಯಭಾರಿ ಡಾ| ಜಾನ್ ಮೆರೀನರು ದಕ್ಷಿಣ ಭಾರತದ ಒಂದು ದೇವಾಲಯವನ್ನು ಕಂಡು ಹೇಳಿದ್ದಾರೆ "ನಾನು ಹಿಂದೀ ಚೀನ, ಜಾವಾ, ಮೆಕ್ಸಿಕೊಗಳ ಮಾಯಾ ಜಾತಿಯ ಮೂರ್ತಿ ಕಲೆಗಳನ್ನು ಕಂಡಿದ್ದೇನೆ. ಅವೆಲ್ಲವೂ ಈ ಕಲೆಯೊಡನೆ ನಿಕಟವಾಗಿ ಸಂಬಂಧಿಸಲ್ಪಟ್ಟಿವೆ. ಮೆಕ್ಸಿಕೋವಿನ ಮಾಯಾ ಕಲೆಯಲ್ಲಿ ಭಾರತೀಯ ಸಂಸ್ಕೃತಿಯ ಅಚ್ಚಳಿಯದ ಪ್ರಭಾವವಿದೆ ಎಂದು ನಾವು ಹೇಳಬಹುದು"

ಇನ್ನು ಕೆಲವು ವಿದ್ವಾಂಸರು, "ರಾಮಾಯಣದ ಭೌಗೋಲಿಕ ವಿವರಣೆಯಿಂದ ಭೂಮಧ್ಯರೇಖೆಯಲ್ಲಿ ಹಿಂದೂ ಸಾಗರದಲ್ಲಿ ಅನೇಕ ದ್ವೀಪಗಳಿದ್ದು ಅವುಗಳಲ್ಲಿ ಅನಾರ್ಯರು ವಾಸಿಸುತಿದ್ದರೆಂದು ತಿಳಿಯುತ್ತದೆ. ಪಾತಾಳವೆಂಬುದು ಈ ದ್ವೀಪಗುಚ್ಛದಲ್ಲಿನ ಏಳು ದ್ವೀಪಗಳಿಗೆ ಹೆಸರು. ಭಾರತೀಯ ಪುರಾಣಗಳಲ್ಲಿ ಸಪ್ತಪಾತಾಳವೆಂದಿವನ್ನು ಕರೆದಿದ್ದಾರೆ ಇಲ್ಲಿಯ ಜನರು ನಾಗಪೂಜಕರಾಗಿದ್ದರು, ಇದಕ್ಕೆ ಈ ದ್ವೀಪಗಳಲ್ಲಿ ನಾಗಗಳು ಹೆಚ್ಚಾಗಿದ್ದುದೇ ಕಾರಣ"ವೆನ್ನುತ್ತಾರೆ.

ಈಜಿಪ್ತದ ಇತಿಹಾಸದಿಂದ ಪಾತಾಳ ಲೋಕದ ಕಲ್ಪನೆಯೂ ಬರುತ್ತದೆ ಐಗುಪ್ತದ ಇತಿಹಾಸದಲ್ಲಿ, ಸಾಹಿತ್ಯದಲ್ಲಿ ಮತ್ತು ಶಿಲಾಲೇಖಗಳಲ್ಲಿ ಅದನ್ನು "ಪಂತದೇಶ"ವೆಂದು ಕರೆದಿದ್ದಾರೆ. ಇಲ್ಲಿನ ಒಂದು ಹಳೆಯ ದೇವಾಲಯದಲ್ಲಿ ಪಂತದೇಶವಾಸಿಗಳ ಚಿತ್ರವೂ ಇದೆ ೪೨೦೦ ವರ್ಷಗಳ ಪೂರ್ವದಲ್ಲಿ ಐಗುಪ್ತದ ರಾಣಿಯಾಗಿದ್ದ ಹತಾಸುವು ಪಂತ ದೇಶದೊಡನೆ ವ್ಯಾಪಾರ ಸಂಬಂಧ ಬೆಳೆಸಲು ಹಡಗನ್ನು ಕಳಿಸಿದ್ದಳು. ಇವರು ಬರುವಾಗ ಅಪಾರ ಸಂಪತ್ತನ್ನೂ ಗುಲಾಮರನ್ನೂ ತಂದಿದ್ದರು. ಈ ಗುಲಾಮರು ಕರಿಯರೂ ಅಸಂಸ್ಕೃತರೂ ಆಗಿದ್ದರು ಈ ಪಂತ ದೇಶವೆಂದರೆ, ಅರಬ ಪರ್ಯಾಯ ದ್ವೀಪವೆಂದೂ ಸೋಮಾಲೀ ಲ್ಯಾಂಡೆಂದೂ ಭಾರತವೆಂದೂ ಅಭಿಪ್ರಾಯಪಡುವವರಿದ್ದಾರೆ. ಅರಬರು ಕರಿಯರಲ್ಲ, ಸೋಮಾಲೀ ಲ್ಯಾಂಡ್ ಈಜಿಪ್ತದೊಡನೆ ಭೂ ಸಂಬಂಧದಿಂದಲೇ ಕೂಡಿರುವಾಗ ಹಡಗದ ಆವಶ್ಯಕತೆಯಿಲ್ಲ ಅಲ್ಲದೇ ಭಾರತೀಯರಾದರೂ ಅಲ್ಲಿನ ದೇವಾಲಯದಲ್ಲಿನ ಚಿತ್ರದಲ್ಲಿರುವಂತಿರುವುದಿಲ್ಲ. ಆದುದರಿಂದ, ಅವರ ಪಂತದೇಶವು ಹಿಂದೂ ಮಹಾಸಾಗರದ ಒಂದೆಡೆಯಲ್ಲಿರಬೇಕು.

ಈ ರೀತಿ ತಿಳಿಯುವುದಕ್ಕೆ ಇನ್ನೊಂದು ಕಾರಣವೂ ಇದೆ ಪಾತಾಳದ ದೈತ್ಯರು ಮತ್ತು ಆಕಾಶದ ದೇವತೆಗಳ ನಡುವೆ ನಿರಂತರ ಹೋರಾಟ ನಡೆಯುತಿತ್ತು. ಆದುದರಿಂದ ಇಬ್ಬರ ದೇಶವೂ ಸಮೀಪದಲ್ಲಿಯೇ ಇದ್ದಿರಬೇಕು ಭಗವಾನ್ ವಿಷ್ಣು ಕ್ಷೀರ ಸಾಗರದಲ್ಲಿರುವವನೆಂದು ಪುರಾಣ ಸಾರುತ್ತದೆ. ಆದುದರಿಂದ, ಅವನು ಆರ್ಯ ದೇಶದವನಾಗಿರದೆ ಹಿಂದೂ ಸಾಗರದವನೆಂದು ಹೇಳಬಹುದು ಹಾಗಾದರೆ, ವಿಷ್ಣುವು ಆರ್ಯರಂತೆ ಬಿಳಿಯನಲ್ಲವೆನ್ನಬೇಕಾಗುತ್ತದೆ. ಅವನ ಬಣ್ಣ ಮೇಘಶ್ಯಾಮ ಇದರಿಂದ ಇವನು 'ದ್ರಾವಿಡರ ದೇವ'ನೆಂದು ಹೇಳಬಹುದು ಪುರಾಣಗಳಲ್ಲಿ ದೇವದಾನವರ ಉತ್ಪತ್ತಿಯ ಬಗ್ಗೆ ಇರುವ ಕಥೆಯಿಂದಲೂ ಇಬರಿಬ್ಬರ ವಂಶವೂ ಒಂದೇ ಎಂದು ಹೇಳಬಹುದು

ದಕ್ಷಿಣ ಭಾರತದ ಪುರಾಣತತ್ವವೇತ್ತರು ಪಾತಾಳ ಲೋಕವು ಭಾರತದಿಂದ ಪ್ರತ್ಯೇಕವಾಗಿರದೆ, ಭಾರತದಲ್ಲಿಯೇ ಇದೆ ಎಂದೂ ಅದೇ ಮಹಾಬಲಿಪುರ ಎಂದೂ ಹೇಳುತ್ತಾರೆ ಈ ಸ್ಥಳವು ಮದ್ರಾಸಿನಿಂದ ೩೫ ಮೈಲಿ ದೂರವಿದ್ದು ಸಪ್ತಪಗೋಡಗಳ ಹೆಸರಿನಿಂದ ವಿಖ್ಯಾತವಾಗಿದೆ

ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷರೆಂಬ ದಾನವೇಂದ್ರರ ರಾಜ್ಯವು ಇಲ್ಲಿಯೇ ಇತ್ತೆಂದೂ ವಿಷ್ಣುವು ನರಸಿಂಹ ರೂಪವನ್ನು ಧರಿಸಿ ಪ್ರಹ್ಲಾದನನ್ನು ಇಲ್ಲಿಯೇ ಉದ್ಧರಿಸಿದನೆನ್ನುತ್ತಾರೆ ಬಲಿಯ ಮಗನಾದ ಬಾಣಾಸುರನ ರಾಜ್ಯವೂ ಇಲ್ಲಿಯೇ ಇತ್ತೆಂದು ಹೇಳುತ್ತಾರೆ ಕೃಷ್ಣನ ಪೌತ್ರನಾದ ಅನಿರುದ್ಧನು ಒಂದು ಬಾರಿ ಬಾಣಾಸುರನ ರಾಜ್ಯಕ್ಕೆ ಬಂದು ಆತನ ಪುತ್ರಿಯನ್ನು ಅಪಹರಿಸಿದನೆಂದೂ ಪುರಾಣ ಹೇಳುತ್ತದೆ ಈ ಬಗ್ಗೆ ಅನಿರುದ್ಧ–ಬಾಣಾಸುರರ ನಡುವೆ ಭಯಂಕರ ಸಮರವು ನಡೆಯಿತು ಇದರಲ್ಲಿ ಅನಿರುದ್ಧನು ಬಂಧಿತನಾಗಿ ಮಹಾಬಲಿಪುರಕ್ಕೆ ಒಯ್ಯಲ್ಪಟ್ಟನು. ಈ ಸಂಗತಿ ತಿಳಿದಾಗ, ಕೃಷ್ಣನು ಮಹಾಬಲಿಪುರವನ್ನು ಆಕ್ರಮಿಸಿದನೆಂದೂ ಉಲ್ಲೇಖಗಳಿವೆ. ರಾಜನಾದ ಬಲಿಯ ದರಬಾರಿರುವ ಒಂದು ಚಿತ್ರವೂ ಮಹಾಬಲಿಪುರದಲ್ಲಿದೆ.

ಹೀಗೆ ಪಾತಾಳವೆಂಬುದಕ್ಕೆ ಸಪ್ತದ್ವೀಪಗಳು ಅಥವಾ ಭಾರತದ ದಕ್ಷಿಣ ಭಾಗವೆಂಬುದಕ್ಕಿಂತ ಮಧ್ಯ ಮತ್ತು ದಕ್ಷಿಣ ಅಮೇರಿಕೆಯೆಂಬುದಕ್ಕೆ ಪ್ರತ್ಯಕ್ಷ ಆಧಾರಗಳು ಹೆಚ್ಚಾಗಿವೆ ಹಾಗಿದ್ದರೂ ಈ ವಿಷಯದಲ್ಲಿ ಇದಮಿತ್ಥಂ ಎಂದು ಹೇಳಬರುವುದಿಲ್ಲ. ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆದಂತೆ ಈ ವಿಚಾರದ ಮೇಲೆ ಪ್ರಕಾಶ ಹೆಚ್ಚು ಹೆಚ್ಚು ಬೀಳುತ್ತ ಹೋಗುವುದು.

(ವಿವಿಧ ಮೂಲಗಳಿಂದ)

— ಗೋರಾ

ಉಡುಪಿ ತಾಲೂಕು ಪೆರ್ಡೂರು ಮಾತೋಬಾರ್ ಶ್ರೀ ಅನಂತಪದ್ಮನಾಭ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರು—ಸದ್ರಿ ದೇವಸ್ಥಾನದ ಅಮಾನತುಗೊಳಿಸಲ್ಪಟ್ಟ ಉಗ್ರಾಣಿ ಕೆಲಸದ ಕೃಷ್ಣ ಮರಕಾಲನಿಗೆ ಈ ಮೂಲಕ ತಿಳಿಯಪಡಿಸುವುದು.

ನಿನಗೆ ತಾರೀಕು 14-2-59ರಲ್ಲು ಮತ್ತು ತಾರೀಕು 25-2-59ರಲ್ಲು ಕೊಟ್ಟ ನೋಟೀಸಿನಲ್ಲಿ ಕಾಣಿಸಿದ ಚಾರ್ಜುಗಳನ್ನು ಇದೇ ತಾರೀಕು 2-4-59ರಲ್ಲು ಪೂರ್ವಾಹ್ನ ಗಂಟೆ 11ಕ್ಕೆ ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ತನಿಖೆಗೆ ಇಡಲಾಗಿದೆ ಪ್ರಯುಕ್ತ ನೀನು ನಿನ್ನ ಮೇಲಿನ ಚಾರ್ಜುಗಳಿಗೆ ಸಂಬಂಧಿಸಿದ ಸಾಕ್ಷಿಗಳನ್ನೂ ರಿಕಾರ್ಡುಗಳನ್ನು ಮೇಲ್ಕಾಣಿಸಿದ ಸಮಯದಲ್ಲಿ ಹಾಜರುಪಡಿಸಿ ಸ್ವತಃ ಹಾಜರು ಪಡಿಸಿ ಸ್ವತಃ ಹಾಜರಿರತಕ್ಕದ್ದು ಗೈರು ಹಾಜರಾದಲ್ಲಿ ಎಕ್ಸ್‌ಪಾರ್ಟಿ ಎಂಕ್ವೈರಿ ನಡೆಸಿ ತೀರ್ಮಾನವೀಯಲಾಗುವುದು

(True copy)

K B. Shetty,
Executive Officer
Sri Ananthapadmanabha
Temple Perdur

ತಾರೀಕು 13-3-59

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

❖ ಭಾವಾರ್ಚನೆ ❖

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ

ಆಕರ್ಷಕ ಮುಖಪತ್ರ. ಬಿಳಿ ಕಾಗದ
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ
ಮಾರಾಟಗಾರರು: ನವಭಾರತ ಬುಕ್ ಡಿಪೋ, ಉಡುಪಿ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್–ಮೂಲ ಲೇಖಿಕೆ. ಜೇನ್ ಇಯೋಟನ್. ಅನುವಾದಕರು- ಉಡುಪಿ ಲಕ್ಷ್ಮೀನಾರಾಯಣ ಆಚಾರ್ಯ, ಎಂ ಎ, ಎಲ್ ಟಿ ಪ್ರಕಾಶಕರು ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ ಪುಟಗಳು ೧೧೪. ಬೆಲೆ ರೂ. ೧-೨೫

ಜಾಗತಿಕ ಇತಿಹಾಸಾವಲೋಕನ ಮಾಡಿದವರಿಗೆ ಜಾರ್ಜವಾಶಿಂಗಟನ್ನನ ಹೆಸರು ಎಂದೂ ಮರೆತು ಹೋಗಲಾರದು. ಬ್ರಿಟನ್ನಿನಿಂದ ಉತ್ತರಅಮೆರಿಕೆಗೆ ವಲಸೆ ಹೋಗಿ ಅಲ್ಲಿಯೇ ಸ್ಥಿರವಾಗಿ ನೆಲೆನಿಂತು ವಸಾಹತುಗಳನ್ನು ಬ್ರಿಟಿಷರು ಸ್ಥಾಪಿಸಿಕೊಂಡರು. ಈ ವಸಾಹತುಗಳ ಮೇಲೆ ಬ್ರಿಟಿಷಸತ್ತೆಯು ತನ್ನ ಅಧಿಕಾರವನ್ನು ಚಲಾಯಿಸಲು ತೊಡಗಿದುದನ್ನು ಸಹಿಸಲಾರದೆ ಅವರಿಗೆ ಎದುರು ನಿಂತು ಹೋರಾಡಿ, ತಮ್ಮ ೧೩ ವಸಾಹತುಗಳನ್ನು ಸ್ವತಂತ್ರ ರಾಷ್ಟ್ರಗಳೆಂದು ಘೋಷಿಸಿ, ಅಂದಿನಿಂದಿದು ತನಕವೂ ಪ್ರಗತಿಪಥದತ್ತ ಧಾವಿಸುತ್ತಿರುವ ಅಮೆರಿಕೆಯ ಸಂಯುಕ್ತ ರಾಷ್ಟ್ರಗಳ ಸಂಸ್ಥಾಪಕನೆಂದು ಕೀರ್ತಿವೆತ್ತವನೇ ಜಾರ್ಜ್‌ವಾಶಿಂಗ್‌ಟನ್ ತನ್ನ ಬಾಲ್ಯಕಾಲದಿಂದಲೂ ಸಾಹಸದ ಕೆಲಸಗಳಲ್ಲಿ ಆಸಕ್ತನಾಗಿದ್ದ ವಾಶಿಂಗ್‌ಟನ್ ತನ್ನ ಅಣ್ಣನ ಮಾರ್ಗದರ್ಶನದಿಂದಲೂ ತನ್ನ ಬುದ್ಧಿವಂತಿಕೆಯಿಂದಲೂ ಸೈನ್ಯದಲ್ಲಿ ಸೇರಿಕೊಂಡು ಸ್ವಪರಿಶ್ರಮದಿಂದ, ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ವಿವಿಧ ರಾಜ್ಯಗಳಲ್ಲಿ ಮೈತ್ರಿಯನ್ನು ಸಂಪಾದಿಸಿ, ಹೋರಾಡಿ ಜಯಶೀಲನಾದ ಸಾಹಸಿ ನಾಯಕ ಘಟನಾ ಸಮಿತಿಯ ಮುಂದೆ ನಿಂತು ಆದರ ಸ್ವೀಕರಣಕ್ಕಾಗಿ ಹೋರಾಡಿದ ಯೋಧನೀತ ಹಾಗೆಯೇ ಕಾಂಗ್ರೆಸ್‌ನ ಮುಂದೆ ಶಾಂತಿಯನ್ನು ಪ್ರತಿಪಾದಿಸಿದ ಪ್ರವಾದಿಯೀತ ಜನತೆಗೆ ಸಲ್ಲಿಸಿದ ಸೇವೆಗೆ ಪ್ರತಿಫಲವಾಗಿ ಎರಡು ಬಾರಿ ಅಧ್ಯಕ್ಷಪದವಿಗೇರುವ ಮನ್ನಣೆಯನ್ನು ಪಡೆದವನೀತ ಇಂತಹ ಅಪ್ರತಿಮ ಹಾಗೂ ಅದೃಷ್ಟಶಾಲಿ ರಾಷ್ಟ್ರನಾಯಕನ ಸಂಕ್ಷಿಪ್ತ ಜೀವನೇತಿಹಾಸವನ್ನು ನಿರೂಪಿಸುವ ಕಿರು ಹೊತ್ತಗೆಯೇ ಪ್ರಕೃತದ ಪುಸ್ತಕವಾಗಿದೆ ಶ್ರೀಮತಿ ಜೇನ್ ಇಯೋಟನ್ ಬರೆದಿರುವ ಮೂಲವನ್ನು ಶ್ರೀ ಆಚಾರ್ಯರು ತನ್ನ ಪ್ರಗಲ್ಭ ಅಸ್ಖಲಿತ ಲೇಖನಿಯಲ್ಲಿ ಅನುವಾದಿಸಿದ್ದಾರೆ ವಾಶಿಂಗ್‌ಟನ್ನನ ಕುರಿತು ತಿಳಿಯಬಯಸುವವರೆಲ್ಲರೂ ಅವಶ್ಯ ಸಂಗ್ರಹಿಸಬೇಕಾದ ಪುಸ್ತಕವಿದು ಮುದ್ರಣ, ಕಾಗದ ಅತ್ಯುತ್ತಮವಿದೆ, ಬೆಲೆಯೂ ಹೆಚ್ಚಲ್ಲ.

ಅವಳ ನೆನಪು—(ನೀಳ್ಗಬ್ಬ) ಬರೆದವರು "ರಸಿಕ" ಪ್ರಕಾಶಕರು. ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕ. ಪುಟಗಳು: ೧೩. ಬೆಲೆ: ರೂ. ೦-೫೦

"ಅವಳ ನೆನಪು" ಕಾವ್ಯವಿದು ಒಂದು ಮಧುರವಾದ ಶೃಂಗಾರವಲ್ಲರೀ ಸ್ಮೃತಿ, ವಿರಹ, ಶೃಂಗಾರಗಳಿಂದ ಒಪ್ಪವೇರಿನಿಂದ ಒಂದು ಮಧುರವಾದ ಭಾವವಲ್ಲರೀ" ಎಂದು ಈ ನೀಳ್ಗಬ್ಬದ ಕುರಿತು ಬರೆಯುತ್ತ ಪ್ರಸಿದ್ಧ ವಿಮರ್ಶಕರಾದ ಶ್ರೀ ಕೆ. ಎಸ್. ಶರ್ಮರು ಲಿಖಿಸಿದ್ದಾರೆ ಆದರೆ ಹೀಗೆ ಹೇಳಿಸಿಕೊಳ್ಳುವಂತಹ ಶೃಂಗಾರವಾಗಲೀ ಭಾವವಾಗಲಿ ಈ ಕಬ್ಬದಲ್ಲಿ ಹಿತಮಿತವಾಗಿ ಪ್ರತಿಪಾದಿತವಾಗಿಲ್ಲವೆಂದು ಹೇಳಲು ಸಂಕೋಚವೆನಿಸುತ್ತದೆ ಇಲ್ಲಿ "ಅವಳ ನೆನಪ"ನ್ನು ನೆನೆನೆನೆದು ವಿಲಾಪಿಸುವ ಪ್ರೇಯಸನ ಪ್ರಲಾಪವು ಓತಪ್ರೋತವಾಗಿ ಸಾಗಿದೆ. ನವ್ಯ ಕವಿತೆಗಳ ಮಾಲೆಯಲ್ಲಿ ಸೇರಬಹುದೆಂದು ನಂಬುವುದಾದರೂ ವಿಲಾಸ ವೈಖರಿಯು ಕೊಂಚ ಮಿತವಾಗಿದ್ದರೆ ಚೆನ್ನು ಎನ್ನುವಂತಿದೆ ಸದ್ಯ ಈ ನೀಳ್ಗಬ್ಬವನ್ನು ಪ್ರಿಯ ಮನೋವ್ಯಾಪಾರದ ಅಪ್ರಿಯ ವಿವರಣೆಯೆಂದೋ "ಕುವಿಲಾಸವಲ್ಲರೀ" ಎಂದೋ ಕರೆದರೆ ತಪ್ಪಾಗಲಾರದು.

ಕಬ್ಬಗಳಲ್ಲಿ ನವ್ಯತೆಯು ಸ್ವಾಗತಾರ್ಹವಾದರೂ ಅದಕ್ಕೂ ಒಂದು ಮಿತಿಯಿರಬೇಕು, ನವ್ಯತೆಯಿಂದ ಕಾವ್ಯಕ್ಕೆ ಶೋಭೆಯೆತ್ತುವಂತಾಗಬೇಕು. ವಿಚಿತ್ರ ವಿಲಾಸವನ್ನು ಆದಷ್ಟೇ ವ್ಯಂಗಭಾವ ಮರ್ಯಾದೆಯಿಂದ ಹೇಳಿಕೊಂಡರೂ ಅದು ಜನಮನಕ್ಕೆ ಉಚಿತವೆನಿಸಲಾರದು. ನೀಳ್ಗಬ್ಬಕ್ಕೆ ಬರೆದ ಮುನ್ನುಡಿಯು ಮಾತ್ರ ಶ್ಲಾಘನಾರ್ಹವಿದೆ—ಕಾವ್ಯಕ್ಕಿಂತಲೂ.

ಶ್ರೀ ಭುವನೇಶ್ವರೀ ಪಂಚಾಂಗ—(ವರ್ಷ ಭವಿಷ್ಯ ಸಹಿತ) ಕರ್ತರು ಜ್ಯೋತಿರ್ವಿದ್ವಾನ್ ಶ್ರೀ ಶೇಷ ಶಾಸ್ತ್ರೀ ಹೆಬ್ಬಾಳ, ಸುರಪುರ ಪ್ರಕಾಶಕರು ಆರ್ಯ ವೈಶ್ಯ ಸಂಘ, ರಂಗಂಪೇಟೆ (ಸುರಪುರ.) ಪುಟ. ೯೦. ಬೆಲೆ ರೂ. ೦-೭೫.

ಶಾಲಿವಾಹನ ಶಕ ೧೮೮೧ ವಿಕಾರಿನಾಮ ಸಂವತ್ಸರದ ಈ ಪಂಚಾಂಗವನ್ನು ಸಾದರದಿಂದ ಸ್ವೀಕರಿಸುತ್ತೇವೆ, ದಿನ ಪಂಚಾಂಗ ಮಾತ್ರವಲ್ಲವೇ ಇತರ ಜ್ಯೋತಿರ್ವಿಷಯಗಳು ಇಲ್ಲಿ ಕೊಡಲ್ಪಟ್ಟಿವೆ. ಶಕುನ ಫಲ, ಸ್ವಪ್ನ ಫಲ, ರಾಶಿ ಭವಿಷ್ಯ, ಶುಭದಿನಗಳು, ಮೊದಲಾದುವುಗಳು ವಿವರವಾಗಿ ಈಯಲ್ಪಟ್ಟಿವೆ ಸವಿವರವಾದ ಉಪಯೋಗಿ ಪಂಚಾಂಗವೇ ಆಗಿರುವುದರಿಂದ ಇದನ್ನು ಎಲ್ಲರೂ ಸಂಗ್ರಹಿಸಬಹುದು.

—ಗೋರಾ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ

ನವಯುಗವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಿಚಾರ ವರ್ಷ

ಮರುಳಿನಿಸು ತಗಲದಿರೆ ಮನುಜ ಮೇಲ್ಪೆದುವನೆ?

ಜೀವಿಸುವ ಎಲ್ಲರಿಗೂ ಒಂದು ವಿಧದ ಹುಚ್ಚು ಅಂಟಿಕೊಂಡಿದೆ, ತಿಳಿಯಿತೆ?

ಹುಚ್ಚ ಎಂದೊಡನೆ ನಮ್ಮ ಕಣ್ಣುಗಳು ಅವನು ಯಾವ ಕಡೆಗಿರುತ್ತಾನೆಂದು ನೋಡಲು ಸುತ್ತಲೂ ತನ್ನ ದೃಷ್ಟಿಯನ್ನು ಬೀರುತ್ತದೆ. ಲೋಕದಲ್ಲಿ ಜೀವಿಸುವ ಜನರಲ್ಲಿ ಹೆಚ್ಚಿನವರು ಹುಚ್ಚರೇ ಆಗಿರುತ್ತಾರೆಂಬದನ್ನು ನಾನು ಸಿದ್ಧಾಂತಪಡಿಸಲು ಹೊರಟರೆ, ವಾಚಕರು ನನ್ನನ್ನೇ ಹುಚ್ಚನೆನ್ನಬಹುದಲ್ಲವೇ? ಹೌದೆನ್ನಿ.

ಯಾರ ಮೆದುಳು ಕೆಟ್ಟುಹೋಗಿ ಅದು ತನ್ನ ಕೆಲಸವನ್ನು ಕ್ರಮವಾಗಿ ಮಾಡುವುದಿಲ್ಲವೋ, ಅವರು ಹುಚ್ಚರೆಂದು ನಾವು ಸಾಮಾನ್ಯವಾಗಿ ನೆನಸುತ್ತೇವೆ. ಸಿಕ್ಕಿದವರಿಗೆ ಬೈಯ್ಯುವುದು, ಹೊಡೆಯುವುದು ಅಥವಾ ಅಕಾರಣವಾಗಿ ನಗಾಡುವುದು, ಅಳುವುದು ಮಾತ್ರವೇ ಅವರ ಕಾರ್ಯಕ್ರಮಗಳಾಗಿರುತ್ತವೆಂದು ಹೆಚ್ಚಿನವರು ತಿಳಿದಿರಬಹುದು. ಖರೆ; ಆ ಮಾತನ್ನೂ ಅಲ್ಲಗಳೆಯಲಾಗುವುದಿಲ್ಲ.

ಜಗತ್ತಿನಲ್ಲಿ ಒಬ್ಬನ ದೃಷ್ಟಿಯಲ್ಲಿ ಬೇರೊಬ್ಬನು ಹುಚ್ಚನಾಗಿ ಕಾಣುವುದು ಸ್ವಾಭಾವಿಕ. ಆಸ್ತಿಕನೊಬ್ಬನು ನಾಸ್ತಿಕನನ್ನೂ, ತ್ಯಾಗಿಯೊಬ್ಬನು ಲೋಭಿಯನ್ನೂ, ರೈತನೊಬ್ಬನು ವ್ಯಾಪಾರಿಯನ್ನೂ ಹುಚ್ಚನೆನ್ನಬಹುದು. ಜಗತ್ತಿನಲ್ಲಿ ತನ್ನಿಂದ ಬುದ್ಧಿವಂತನಾಗಲೀ, ಸುಸಂಸ್ಕೃತನಾಗಲೀ, ರೂಪವಂತನಾಗಲೀ ಬೇರೊಬ್ಬನಿಲ್ಲವೆಂಬ ಹೆಮ್ಮೆಯು ಪ್ರತಿಯೊಬ್ಬನಲ್ಲೂ ರಕ್ತಗತವಾಗಿರುವುದರಿಂದ, ನಾವು ಅನ್ಯರನ್ನು ಕೀಳಾಗಿ ಕಾಣುತ್ತೇವೆ. ಆದ್ದರಿಂದಲೇ ಲೋಕವೆಲ್ಲವೂ ಹುಚ್ಚರಿಂದಲೇ ತುಂಬಿದೆ. ಯಾರ ಕಾರ್ಯಕ್ರಮಗಳು ಇತರರಂತಿರುವುದಿಲ್ಲವೊ ಅವರೆಲ್ಲರೂ ಹುಚ್ಚರು ಎಂಬ ಮಾತನ್ನು ನೀವು ಒಪ್ಪುವಿರೇ? ಹಾಗಾದರೆ ಕೇಳಿ..

ಕೆಲವರಿಗೆ ಕಂಡ ಕಂಡ ವಸ್ತುಗಳನ್ನು ಸಂಗ್ರಹಿಸುವ ಚಟವಿದೆ. ಬಗೆ ಬಗೆಯ ಚಿತ್ರಗಳು, ಪುಸ್ತಕಗಳು, ಬಾಟ್ಲಿಗಳು, ಅಂಚೆ ಚೀಟು, ಚಿಟ್ಟೆಗಳು ಮೊದಲಾದುವನ್ನು ಸಂಗ್ರಹಿಸುವ ಹುಚ್ಚರು ಜಗತ್ತಿನಲ್ಲಿ ಕೋಟಿಗಟ್ಟಲೆಯಲ್ಲಿರುವರು. ಪುಸ್ತಕಗಳನ್ನು ಕ್ರಯ ಕೊಟ್ಟಾಗಲೀ, ಎರವಲು ತಂದಾಗಲೀ, ಹಾಗೆಯೂ ದೊರೆಯದಿದ್ದರೆ ಕದ್ದಾದರೂ ತಂದು ತಮ್ಮ ಮನೆಯಲ್ಲಿ ಸಂಗ್ರಹಿಸುತ್ತಿರುವವರ ಕುರಿತು ಹೆಚ್ಚು ಹೇಳಬೇಕಾಗಿಲ್ಲ. ಜನಸಾಮಾನ್ಯರಿಗೆ ಚಿಕ್ಕಾಸಿನ ಪ್ರಯೋಜನಕ್ಕೂ ಬಾರದ ಅಂಚೆ ಚೀಟುಗಳು ಸಂಗ್ರಹಕಾರರ ದೃಷ್ಟಿಯಲ್ಲಿ ಅತ್ಯಮೂಲ್ಯವಾದುವು. ೧೮೪೦ನೇ ಮೇ ೬ನೇ ತಾರೀಕಿನ ದಿನ ಜಗತ್ತಿನ ಮೊತ್ತಮೊದಲನೆಯ ಅಂಚೆ ಚೀಟು ಹೊರಟಿತು. ಅಂದಿನಿಂದ ಇಂದಿನ ವರೆಗಿನ ಎಲ್ಲಾ ರಾಷ್ಟ್ರಗಳ ಎಲ್ಲಾ ಜಾತಿಯ ಅಂಚೆ ಚೀಟುಗಳನ್ನು ಶ್ರಮಪಟ್ಟು, ಹಣವನ್ನು ನೀರಿನಂತೆ ವ್ಯಯಿಸಿ ಸಂಗ್ರಹಿಸುವವರಿದ್ದಾರೆ. ಅಮೇರಿಕದ ಆರ್ಥರ್ ಹಿಂಜ್ ಎಂಬ ಹೆಸರಿನ ಅಂಚೆ ಚೀಟಿನ ಸಂಗ್ರಹಕಾರರೊಬ್ಬರು ಬ್ರಿಟಿಷ್ ಗಿಯಾನದ ಒಂದು ಹಳೆಯ ಚೀಟಿಯನ್ನು ಏಳು ಸಾವಿರ ಪವನುಗಳಿಗೆ ಕೊಂಡುಕೊಂಡರಂತೆ. ನಿಮ್ಮ ದೃಷ್ಟಿಯಲ್ಲಿ ಅವರು ತಲೆ ಸರಿಯಿದ್ದವರೇ?

ತಮ್ಮ ಪ್ರತಿಷ್ಠೆಯನ್ನು ಮೆರಸಿಕೊಳ್ಳಲೋಸುಗವಾಗಿ ಧನವನ್ನು ನೀರಿನಂತೆ ವ್ಯಯಿಸಿ, ಕಡೆಗೆ ಪಶ್ಚಾತ್ತಾಪಪಟ್ಟು ಬಡತನದಲ್ಲಿಯೇ ನರಳಿ ಸತ್ತವರಿಗೆ ಕಡಿಮೆಯಿಲ್ಲ. ಲೋಕವನ್ನೇ ಉದ್ಧಾರ ಮಾಡಲು ಹೊರಟು, ತಾವು ಕೂಳಿಗೆ ಗತಿಯಿಲ್ಲದೆ ಸತ್ತವರೆಷ್ಟು ಮಂದಿಯಿಲ್ಲ? ಇವರೆಲ್ಲರೂ ತಲೆ ಸರಿಯಿದ್ದವರೇ? ತಮ್ಮ ಸ್ವಾರ್ಥ ಸಾಧನೆಗಾಗಿ ಅನ್ಯರನ್ನು ವಂಚಿಸಿ, ತಾನೊಬ್ಬ ವಿಭೂತಿ ಪುರುಷನೆನಿಸಿಕೊಳ್ಳಬೇಕೆಂದು ಬಯಸಿ, ತನ್ನ ಸರ್ವಸ್ವವನ್ನು ಕಳಕೊಂಡು ನಿರ್ಗತಿಕರಾದವರೆಷ್ಟು ಮಂದಿ ಇಲ್ಲ? ಅವರನ್ನು ಯಾವ ವರ್ಗದಲ್ಲಿ ಸೇರಿಸೋಣ?

ವಿಜ್ಞಾನವು ನಮ್ಮ ಜೀವನದ ಮಟ್ಟವನ್ನು ಸುಖಮಯವಾಗಿ ಮಾಡುತ್ತದೆ. ಅದರ ಹುಟ್ಟು, ಬೆಳವಣಿಗೆಯೆಲ್ಲವೂ ಹುಚ್ಚರಿಂದಲೇ ಉಂಟಾಯಿತೆಂದರೆ ನೀವು ಆಶ್ಚರಿಪಡುವಿರೇ? ಜೆನ್ನರ್ ಎಂಬವನಿಗೆ ಅಂಟು ರೋಗಗಳನ್ನು ತಡೆಗಟ್ಟಬೇಕೆಂಬ ಒಂದೇ ಒಂದು ಬಗೆಯ ಹುಚ್ಚು ಬಲವಾಗಿ ಅಂಟಿಕೊಂಡಿದ್ದರಿಂದಲೇ ಅವನು ಸಿಡುಬೆಬ್ಬಿಸುವ ಕ್ರಮವನ್ನು ಸಂಶೋಧಿಸಿ, ಸಾಯುತ್ತಿರುವ ಸಾವಿರಾರು ರೋಗಿಗಳು ಬದುಕುವಂತಾಯಿತು. ರಾಂಜೆನನು ಕ್ಷ—ಕಿರಣಗಳನ್ನೂ, ಸ್ಟೀವನ್ಸನನ್ನು ಉಗಿ ಬಂಡಿಯನ್ನೂ, ರೈಟ್ ಸಹೋದರರು ವಿಮಾನವನ್ನೂ, ಎಡಿಸನನು ವಿದ್ಯುತ್— ಗ್ರಾಮಫೋನು — ಚಲಚ್ಚಿತ್ರವೇ ಮೊದಲಾದ ಸಾವಿರಾರು ಸಂಶೋಧನೆಗಳನ್ನೂ, ಮಾರ್ಕೋನಿಯು ಆಕಾಶವಾಣಿಯನ್ನೂ, ಬಯಾರ್ಡನು ದೂರದೃಷ್ಟಿಯನ್ನೂ, ಲುಥರ್ ಫೋರ್ಡನು ಅಣುವಿಚ್ಛೇದನದ ಕ್ರಮವನ್ನೂ ತಮ್ಮ ಸಂಶೋಧನಾ ಹುಚ್ಚಿನಿಂದಲೇ ಬೆಳಕಿಗೆ ತಂದರು.

ಹೀಗಿರುವಲ್ಲಿ ಹುಚ್ಚರನ್ನು ತಿರಸ್ಕರಿಸುವಿರೇಕೆ? ಅತಿ ಬುದ್ಧಿವಂತನೆನಿಸಿದ ವಿದ್ಯಾವಂತನೊಬ್ಬನನ್ನು ಪರೀಕ್ಷಿಸಿರಿ. ಅವನಿಗೆ ನತ್ನ ಉಡುಪು ತೊಡುಪುಗಳ ಕಡೆಗೆ ಗಮನವಿಲ್ಲ; ಗಡ್ಡವೆಷ್ಟು ಉದ್ದ ಬೆಳದಿದ್ದರೂ ಅದನ್ನು ಬೋಳಿಸಬೇಕೆಂಬ ಹಂಬಲವಿಲ್ಲ. ಅವನಿಗೆ ಬೇಕಾದುದು ಏಕಾಂತ; ಏಕಾಂತದಲ್ಲಿ ವಿಚಾರಿಸುವ ಎಡೆ; ಅವನಿಗೆ ಅಭಿರುಚಿಯಿರುವ ವಿದ್ಯೆಯ ಅಭಿಮಾನಿಗಳ ಒಡನಾಟ.

ವರಕವಿಗಳು, ಗಾಯಕರು, ಚಿತ್ರಗಾರರು ಮೊದಲಾದವರು ನಿಜವಾಗಿಯೂ ಹುಚ್ಚರು. ನಾವು ಅವರನ್ನು ಮಾತಾಡಿಸಿದರೆ, ಅವರ ಗಮನವು ನಮ್ಮ ಮಾತಿನ ಕಡೆಗಿರಲಾರದು. ಅವರು ತಮ್ಮಲ್ಲಿಯೇ ತಮ್ಮ ವಿದ್ಯೆಯ ಕುರಿತು ಗುಣಾಕಾರ ಹಾಕಿಕೊಂಡಿರುತ್ತಾರೆ. ಹಾಗಿರುವಾಗ ಅವರನ್ನು ಹುಚ್ಚರೆಂದು ಕರೆದರೆ ತಪ್ಪಾದೀತೇ?

ಜಗದುದ್ಧಾರವು ಶೀಘ್ರದಲ್ಲಿ ಆಗಬೇಕಾದರೆ ಜಗತ್ತಿನಲ್ಲಿ ಹುಚ್ಚರ ಸಂಖ್ಯೆಯು ಬೆಳೆಯಬೇಕು. ಮೇಲೆ ಬರೆದವುಗಳ ಪೈಕಿ ಯಾವುದಾದರೊಂದು ತರದ ಹುಚ್ಚು ನಿಮ್ಮನ್ನು ಅಂಟಿಕೊಂಡಿದ್ದರೆ ಆದಷ್ಟು ಜಾಗ್ರತೆಯಾಗಿ ಅದಕ್ಕೆ ಚಿಕಿತ್ಸೆಯನ್ನು ಮಾಡಿಸಿರಿ. ಅಥವಾ ನೀವೂ ಒಂದು ರೀತಿಯ ಹುಚ್ಚರೆನಿಸಿ ಲೋಕೋದ್ಧಾರಕ್ಕಾಗಿ ಸೊಂಟಕಟ್ಟಿ.

—ಟಿ. ಚಂದ್ರರಾಜ ಸೆಟ್ಟಿ.

ವಿಚಿತ್ರ ಸತ್ಯ

(೪ನೇ ಪುಟದಿಂದ)

ಮೇಲೆ ಬಿತ್ತು. ಆದರೆ ಆ ಜೇಡರ ಹುಳವು ಇವನ್ನು ಓಡಿಸಿ ಬಿಟ್ಟಿತು.

ಈ ಸೋಲಿನಿಂದ ಎದೆಗುಂದಲಿಲ್ಲ. ಪಕ್ಕದಲ್ಲಿದ್ದ ಗೂಡಿಗೆ ಮೂರು ದಿನ ಮುತ್ತಿಗೆ ಹಾಕಿತು. ಕೊನೆಗೆ ಆ ಜೇಡರ ಹುಳವನ್ನು ಕೊಂದು ಆ ಬಲೆಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು.

ಸಣ್ಣ ನೊಣಗಳು ತನ್ನ ಬಲೆಗೆ ಬಿದ್ದಾಗ ಇದು ತಕ್ಷಣವೇ ಗೂಡಿನಿಂದ ಹೊರಕ್ಕೆ ಬರುವದಿಲ್ಲ. ಸಿಕ್ಕಿಕೊಂಡಿರುವ ನೊಣವು ಖಂಡಿತವಾಗಿಯೂ ತನ್ನ ವಶವಾಗುವುದೆಂದು ತಿಳಿಯುವ ವರೆಗೆ ತಾಳ್ಮೆಯಿಂದಿರುತ್ತದೆ.

ಜೇಡರ ಹುಳವು ತಕ್ಷಣ ಹೊರಕ್ಕೆ ಬಂದರೆ, — ಇದರ ಭಯಂಕರಾಕಾರವು ಸಿಕ್ಕಿಕೊಂಡಿರುವ ಹುಳುವಿಗೆ ಪಾರಾಗುವ ಶಕ್ತಿಯನ್ನು ಕೊಡಬಹುದು. ಹೀಗಿರುವುದರಿಂದ ಸಿಕ್ಕಿಕೊಂಡಿರುವ ಬಂದಿಯು ತಪ್ಪಿಸಿಕೊಳ್ಳಲು ನಿಷ್ಪ್ರಯೋಜಕವಾಗಿ ಒದ್ದಾಡಿ ತನ್ನ ಶಕ್ತಿಯನ್ನೆಲ್ಲಾ ವ್ಯರ್ಥಗೊಳಿಸುವ ವರೆಗೆ ಸುಮ್ಮನಿರುವುದೇ ಇದಕ್ಕೆ ಮಾರ್ಗ.

ಈ ಜೇಡರ ಹುಳವು ಮೂರು ವರುಷ ಬಾಳಬಲ್ಲುದು. ಪ್ರತಿ ವರ್ಷವೂ ಅದು ತನ್ನ ಚರ್ಮವನ್ನು ಬದಲಾಯಿಸುತ್ತದೆ. ಅವಕ್ಕೆ ಹೊಸ ಕಾಲುಗಳೂ ಬರುವವು.

(ಗೋಲ್ಡ್ ಸ್ಮಿತ್ ನ ಲೇಖನ)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 9/59.

K. ಸುಬ್ರಾಯ ಕೆದ್ಲಾಯ ಸಹಾ ಅರ್ಜಿದಾರರು. ಎದ್ರಿರು ಯಿಲ್ಲಾ.

ಅರ್ಜಿದಾರರ ಕಡೆಯಿಂದ ಈ ಮೂಲ್ಕ ಜಾಹೀರು ಮಾಡಿಕೊಳ್ಳುವದೇನೆಂದ್ರೆ:

1. ಅರ್ಜಿದಾರರು
1. K. ಸುಬ್ರಾಯ ಕೆದ್ಲಾಯ.
2. K. ರಾಮಚಂದ್ರ ಕೆದ್ಲಾಯ.
3. K. ವಿಘ್ನೇಶ್ವರ ಕೆದ್ಲಾಯ.
4. K. ವಿಷ್ಣುಮೂರ್ತಿ ಕೆದ್ಲಾಯ.
5. ಶಾರದಮ್ಮ.
6. ಲಕ್ಷ್ಮಿಅಮ್ಮ

ಅನಂತಯ್ಯಕೆದ್ಲಾಯರ ಮಕ್ಕಳು.

1ರಿಂದ 4ನೇ ವರೇಗಿನವರು ಕುಂದಾಪುರ ತಾಲ್ಲೂ ಯಡಾಡಿ ಮತ್ಯಾಡಿ ಗ್ರಾಮದಲ್ಲಿಯೂ 5ನೇಯವಳು ಶಿವಮೊಗ್ಗದಲ್ಲಿಯೂ 6ನೇಯವಳು ನರಸಿಂಹರಾಜಪುರದಲ್ಲಿಯೂ ಇರುತ್ತಾರೆ.

ಮೃತ ಕಮಲಮ್ಮನಿಗೆ ಸೌತ್ ಇಂಡಿಯನ್ ಕೊಪರೇಟಿವ್ ಯಿನ್ಶೂರೆನ್ಸ್ ಸೊಸೈಟಿ ಮದ್ರಾಸ್ ಯಿದ್ರ ಪೋಲಿಸಿ ನಂಬ್ರ 913ನೇಗೆ ಸಿಕ್ಕತಕ್ಕ ಹಣಗಳ ವಸೂಲಿಗೆ ತಾವು ವಾರಿಸ್ದಾರರೆಂತಲೂ ತಮಗೆ ವಾರಿಸು ಸರ್ಟಿಫಿಕೇಟು ಕೊಡಬೇಕೆಂತ ಅರ್ಜಿದಾರರು ಕೊಟ್ಟ ಅರ್ಜಿಯು 14—4—59ಕ್ಕೆ ತನ್ನಿಗೆಯಿಟ್ಟಿದೆ. ಆ ಕುರಿತು ಯಾರಾದ್ದಾದರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿದೆ.

M. Anthaya Shetty
Advocate for Petitioners.

Coondapur, Date 17-3-59.

ಡಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್, ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ. ಬೆಲೆ: ರೂ. 2-00.

ಭಾರತದ ಕರ್ಣ

"ಭಾರತದ ಕರ್ಣನು ಡಿ। ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು."(ಪ್ರೊ। ಎಂ.ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—6—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ.

In the Court of the Subordinate Judge of S. K.

R. E. P. No. 186/58
in O. S. No. 236/49

Dhanavanthi & others ... Petrs.
&
Anni alias Nabhiraja & others .. Respts.

To Respts 3 & 11: (3) Chatravathi d/o Radidevi, (11) Vairanabha—minor son of 3rd Respt. by guardian 3rd Respt. Both are residing in Marodi Village of Karkal Tq.

Please take notice that the Petitioners have filed the above execution for recovery of amounts due to them under the decree and the same is posted to 31—3—1959 for your appearance. If you fail to appear on that day the same will be decided in your absence.

By order of the Court.

(Sd.) S Venkat Rao,
Vakil for Petitioners.

Mangalore, 19—3—1959.

ಶುದ್ಧ ಹರಟೆ

ಸರ್ವಜನಮನಾಕರ್ಷಿಣಿ ಬಹಿರಂಗ ಶುದ್ಧತೆ

ಅಂತರಂಗದಲ್ಲಿ ಮಲಿನತೆಯಿದ್ದರೂ ಬಹಿರಂಗದಲ್ಲಿ ಸಮಾಜವಿಡಿ ಶುದ್ಧವಾಗಿಯೇ ಇದೆ

"ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ ಎದುರ ಹಳಿಯಲುಬೇಡ—ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ" ಎಂದು ಬಸವಣ್ಣನವರು ಹೇಳಿ ಸುಮಾರು ವರುಷವಾಗಿ ಹೋಯ್ತು ಆದರೂ ಈ ಮಾತು ಯಾರಿಗೂ ಮರೆತು ಹೋಗಿಲ್ಲ ಅಂತರಂಗ ಶುದ್ಧಿಯಾಗಿರಬೇಕೆಂಬ ಮಾತಿನ ನೆನಪು ಸ್ವಲ್ಪ ಸ್ವಲ್ಪ ಮರೆವಾಗಿದ್ದರೂ—ಬಹಿರಂಗ ಶುದ್ಧವಾಗಿರಬೇಕೆಂದುದನ್ನು ಸರ್ವರೂ ಅಕ್ಷರಶಃ ಪಾಲಿಸುತ್ತಿದ್ದಾರೆ—

ಯಾವನೊಬ್ಬ ಮೂರ್ಖ ಶಿರೋಮಣಿಯನ್ನೇ ಕೇಳಿ—ಸಾವಿರ ಪಾಪ ಮಾಡಿದ್ದನ್ನು ಪರಿಮಾಡಿ ಒಂದೇ ಪುಣ್ಯ ಮಾಡುವುದರಿಂದ ಸಿಗುವ ಪ್ರಯೋಜನವನ್ನು ಬಾಯ್ಬಿಟ್ಟು ಹೇಳುವ ಮಹಾತ್ಮನೊಡನೆ ಬೇಕಾದರೆ ಮಾತಾಡಿ,—ಬಹಿರಂಗದಲ್ಲಿ ಅವರೆಲ್ಲರೂ ಈ ವರೆಗೆ ಭೂಮಿಯಲ್ಲಿ ಅವತರಿಸಿದ ಪರಮಾತ್ಮನಿಗಿಂತ ಮೇಲೆನಿಸಿದ ಸಕಲಗುಣ ಸಂಪನ್ನರಾಗಿ ಏಕ ಗುಣಹೀನರಾಗಿ ಮೆರೆದಾಡುತ್ತಾರೆ. ಮೂಗಿನವರೆಗೆ ಕುಡಿದು ಮತಿಯಿಲ್ಲದ ಯಾವನಾದರೊಬ್ಬ ಮಹಾ ಗೃಹಸ್ಥನೊಡನೆ ಬೇಕಾದರೆ ಒಂದು ಘಳಿಗೆ ನಿಂತು ಮಾತಾಡಿ ನೋಡಿರಿ—ಮದ್ಯ ನಿಷೇಧದ ಕುರಿತು ದೊಡ್ಡ ಲೆಕ್ಚರನ್ನೇ ಹೊಡೆಯಬಲ್ಲನಾತ "ಲೋಕವೇ ಹಾಳಾಯಿತಯ್ಯಾ—ಬೆಳಗಾಗ ಎದ್ದವರೇ ತಲೆಗೆ ಹೊಯ್ದುಕೊಂಡ [illegible]—ಲೇ—ಹಾಕುವುದು. ದರೆ ಮರ್ಯಾದಸ್ಥರ ಮರ್ಯಾದೆ ಅವರವರ ಪೆಟ್ಟಿಗೆಯಲ್ಲಿ ಉಳಿಯುವುದೇ ಕಷ್ಟ! 'ಊರೇ ಹಾಳಾಯಿತು.' ನನ್ನಂತಹ ಪಾಪದವರು ದಾರಿ ನಡೆಯುವುದಕ್ಕೆ ಸಾಧ್ಯವಿಲ್ಲ" (ತಪ್ಪು ಹೇಳುವಾಗಲೇ ದಾರಿಯಲ್ಲಿ ಮೂರು ಸಲ ಬಿದ್ದು ಏಳುತ್ತಾನೆ) ಎಂದು ಸ್ಪಷ್ಟವಾಗಿ ಭಾಷಣ ಬಿಗಿಯುತ್ತಾನೆ. [illegible] ರಂಗದ ಬೃಹಸ್ಪತಿಗಳಾದವರೂ ಇಂದಿನ [illegible] ನಿಂತು, ಗೃಹಸ್ಥನ ಗುಣ, ಶೀಲಗಳನ್ನು ಜೂಜಾಡಿ ಗೆಲ್ಲಬೇಕಿದ್ದರೆ ಒಂದು [illegible] ಗರ್ವದ ನೀರ [illegible] ಕುಡಿಯ ಬೇಕಾದೀತು!

ವ್ಯವಹಾರದ ಯಾವುದೇ ಸಿಟ್ಟಿನಲ್ಲಿ [illegible] ತಪ್ಪಿನಿಂದ ಸಾಧ್ಯವಾದಷ್ಟು ಅನ್ಯಾಯ ಮಾಡುವವರೂ ನಾಲ್ಕು ಜನರ ಮುಂದೆ, ಸಮಾಜದಲ್ಲಿ ತಮಗಾಗದವರನ್ನುದ್ದೇಶಿಸಿ—"ಆ ಪುಣ್ಯಾತ್ಮನೊಬ್ಬ ಮಾಡುವ ಈ ಅನ್ಯಾಯಗಳನ್ನೆಲ್ಲ ನೋಡ್ತಾನೋ ದೇವರೇ ಬಲ್ಲ. ಬಡವರಿಗೆ ಉಪಕಾರ ಮಾಡಲು ಸಾಧ್ಯವಾಗದಿದ್ದರೆ ಉಪದ್ರವನ್ನಾದರೂ ಕೊಡದಿರುವುದು ಒಳ್ಳೇದಲ್ಲವೇ?—" ಎಂದು ಮುಂತಾದ ರಂಗಿನ ಮಾತುಗಳನ್ನಾಡಿ ತಾನೊಬ್ಬ ಮಹಾಗೃಹಸ್ಥನೆಂದು ನಾಲ್ಕು ಜನ ಘಟಂಗರಾದರೂ ಹೇಳಲಿ,—ಎಂದು ಅಂತರಂಗದಲ್ಲಿ ಶುದ್ಧವಾಗಿ ಎಣಿಕೆ ಹಾಕುತ್ತಾ ಇರುತ್ತಾರೆ ಇನ್ನು—ಅಂತರಂಗ ಶುದ್ಧವಾಗಿ ತಪ್ಪದೆ ಸುಳ್ಳಾಡುತ್ತಿರುವ ಕಪಟಿಗಳು, ಬಹಿರಂಗ ಶುದ್ಧವಾಗಿ ತಾವು ಸತ್ಯವಂತರೆನ್ನಿಸಿಕೊಳ್ಳುವುದಕ್ಕೂ ಎಷ್ಟೊಂದು ಸುಳ್ಳನ್ನಾಡುವುದಿಲ್ಲ? ಬಡಜನರ ಮಂಗ್ಯೆಗೆ ಬೆಲ್ಲ ತಾಗಿಸಿ ಅವರಿಗೆ ಹತ್ತು ಕಾಸಿನ ಪ್ರಯೋಜನ ತೋರಿಸಿ, ಅವರಿಂದ ಹತ್ತು ರುಪಾಯಿಯ ಲಾಭವನ್ನು ಪಡೆಯುವ ಮಹಾತ್ಯಾಗಿಗಳೂ, ಧರ್ಮಿಷ್ಠರೂ ನಮ್ಮಲ್ಲಿ ಬಹುಮಂದಿ ಇದ್ದಾರೆ ಇವರು ಗಾಳದ ಮೊನೆಗೆ ಎರೆ ಹುಳವನ್ನು ಚುರುಕಿಸಿ ಮೀನಿಗೆ ಆಹಾರವಾಗಿ ಕೊಟ್ಟು ಅದರ ಪ್ರಾಣವನ್ನೇ ಹೀರುವ ಹಿಂಸಾವಾದಿಗಳ ಜಾತಿಗೆ ಸೇರಿದವರು. ತಮಗೆ ಯಾವ ಸಂಬಂಧವೂ ಇಲ್ಲದೆ ನೀರಲ್ಲಿ ವಾಸಮಾಡಿಕೊಂಡಿರುವ ಮೀನಿಗೆ ಆಹಾರವನ್ನೊದಗಿಸಿ ಇಷ್ಟು ಉಪಕಾರ ಮಾಡುವ ಪುಣ್ಯಾತ್ಮರಿಗೆ ಸ್ವರ್ಗದಲ್ಲೊಂದು ಸ್ಥಾನವನ್ನು ಕೊಡಬೇಕೆಂದು ಪರಮಾತ್ಮನು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗದೆ ಕೊನೆಗೆ ನರಕದ ಅತ್ಯುಚ್ಚ ಪದವಿಯನ್ನೇ ತೋರಿಸಿ ಬಿಟ್ಟನಂತೆ! ಹಾಗೆಯೇ ಎಲ್ಲಿಯೇ ಆಗಲಿ, ಯಾವ ಹೊತ್ತಿನಲ್ಲೇ ಇರಲಿ—ಯಾರೊಡನೆ ಬೇಕಾದರೂ ಮಾತಾಡಿ ನೋಡಿದರೆ, ಅಂತರಂಗ ಶುದ್ಧಿಗಾಗಿ ಬಹಿರಂಗದಲ್ಲಿ ಶುದ್ಧವಾದ ಮಾತು-ನೀತಿಗಳನ್ನಾಡುವ ಜನರೇ ನಮ್ಮಲ್ಲಿ ಹೆಚ್ಚು!

ನಮ್ಮ ಮನೆಯಂಗಳಕ್ಕೆ ಬಂದು ಮಕ್ಕಳ ಕೈಯಲ್ಲಿರುವ ರೊಟ್ಟಿಯನ್ನೋ ಹಪ್ಪಳವನ್ನೋ ಕಸಕೊಂಡು—"ಇದ್ದುದನ್ನು ಬಳಗದೊಳಗೆ ಹಂಚಿ ತಿನ್ನುವ ಬುದ್ಧಿ ನನಗೆ—" ಎಂದು ಕಾಗೆ ತನ್ನ ನೀತಿ ಸಾರವನ್ನು ಜನರಿಗೆ ಹೇಳಿಕೊಟ್ಟದನ್ನು ಚೆನ್ನಾಗಿ ತಿಳಿದುಕೊಂಡಿರುವ ನಮ್ಮ ಸಮಾಜ ಸುಧಾರಕರೂ, ಜನ ಹಿತ ಸಾಧಕರೂ, ತ್ಯಾಗ ಧರ್ಮದ ತಿರುಳನ್ನು ಜನರಿಗೆ ಉದಾರ ದಾನವಾಗಿತ್ತು ಸಿಕ್ಕಿದ ಲಾಭವನ್ನು ತನ್ನ ಹೆಂಡ್ತಿ-ಮಕ್ಕಳಿಗೆ ಹಂಚಿಕೊಡುವ ಸ್ವಾರ್ಥ ಬುದ್ಧಿಯ ಅಂತರಂಗ ಶುದ್ಧಿಗಾಗಿ ನಿಃಸ್ವಾರ್ಥ ಸೇವೆಯ ಬಣ್ಣದ ಮಾತುಗಳನ್ನು ಬಹಿರಂಗ ಶುದ್ಧವಾಗಿ ಬೋಧಿಸುತ್ತಲೇ ಇರುತ್ತಾರೆ. ಇನ್ನು ಭಕ್ತಿಯ ಬಾಹ್ಯಾಡಂಬರದಿಂದ ದೇವಸ್ಥಾನದ ಗರ್ಭಗುಡಿಯ ಒಳಗೂ ಹೊಕ್ಕು ಅಂತರಂಗ ಶುದ್ಧವಾಗಿ ದೇವರ ಮುಡಿಪಿಗೇ ಕೈಕೊಟ್ಟು ನಿತ್ಯವೂ ತಪ್ಪದೆ ದೇವರ ಗುಡಿಗೆ ನೂರು ಸುತ್ತು ಬಂದು ಬಹಿರಂಗ ಶುದ್ಧವಾಗಿ ಕೈಮುಗಿದು ಅಡ್ಡ ಬೀಳುವ ಮಹಾ ಭಕ್ತಶ್ರೇಷ್ಠರೆನ್ನಿಸಿಕೊಳ್ಳುವ ಮಂದಿಯನ್ನು ಕಾಣುವುದು ಕಷ್ಟವೇನಲ್ಲ ಹೀಗೆ ಬಹಿರಂಗ ಶುದ್ಧವಾಗಿರುವ ಆಚಾರ-ವಿಚಾರಗಳೇ ನಮಗೆ ಗೋಚರಿಸುತ್ತಿರುವಾಗ ಅಂತರಂಗದ ಹೊಂಚು ಹೇಗಿದೆ ಎಂಬುದನ್ನು ತಿಳಿವವರ್‍ಯಾರೂ ಇಲ್ಲ

ಡೆಹ್ರಾಡಮ್ನಿನಲ್ಲಿರುವ ಭಾರತೀಯ ಸರ್ವೆಯ ಕೇಂದ್ರವೊಂದರಲ್ಲಿ ನಕ್ಷೆಗಳನ್ನು ಎಳೆಯುತಿದ್ದಾ

ಕಂಡವರ ಹೆಂಡಿರನ್ನು ಕನಸಿನಲ್ಲಿ ಕಂಡು ಅಪೇಕ್ಷಿಸುವ ಶುದ್ಧ ಸನ್ಯಾಸಿಗಳು ನಮ್ಮಲ್ಲಿ ಹೆಜ್ಜೆ ಹೆಜ್ಜೆಗೂ ಕಾಣಸಿಗುತ್ತಾರೆ ಪರಸ್ತ್ರೀಯನ್ನು ಕಣ್ಣು ಬಿಟ್ಟು ನೋಡದೆ ಬಹಿರಂಗ ಶುದ್ಧವಾಗಿರುವಾತ, ಮರೆಯಲ್ಲಿ ಅಂತರಂಗ ಶುದ್ಧವಾಗಿ ಅವಳನ್ನು ಕೈ ಬೀಸಿ ಕರೆಯುತ್ತಾನೆ ಹತ್ತು ಜನರ ಮುಂದೆ, ನೆರೆಮನೆಯ ಚೆಲುವೆಯನ್ನೋ ಅಥವಾ ತನ್ನ ಸಹೋದ್ಯೋಗಿಯಾಗಿರುವ ಸುಂದರಿಯನ್ನೋ—"ಅಕ್ಕ-ತಂಗೀ" ಎಂದು ಬಂಧು ವಾತ್ಸಲ್ಯದಿಂದ ಕರೆಯುವಾತನು, ಏಕಾಂತದಲ್ಲಿ ಅವಳೊಡನೆ ಪ್ರಣಯ ಭಿಕ್ಷೆಯನ್ನು ಬೇಡುವ ದೀನನಾಗುತ್ತಾ,—"ಒಯ್ಯಾರದ ಓಣೀ-ಬೆಡಗಿನ ಗೋಣೀ—ಮನೋ ರೋಗದ ರಾಣೀ,— ನಿನ್ನನ್ನು ಕಂಡಾಗ ನನ್ನ ಬುದ್ಧಿಗೆ ಬೆಂಕಿ ಹಿಡಿದಿರುವ ದೆಸೆಯಿಂದಾಗಿ ಹೃದಯದ ಉರಿಯನ್ನು ಸಹಿಸಲಾರೆ. ಬಾ, ಎನ್ನ ಮುತ್ತಿನ ತೊತ್ತೇ,—ನಿನಗೆ ಮದುವೆಯಾಗುವವರೆಗಾದರೂ ನನ್ನ ಬಾಡಿಗೆಯ ಅರಸಿಯಾಗಿದ್ದು ನನ್ನ ಮನದಾಸೆಯನ್ನು ಪೂರೈಸಲಾರೆಯಾ? ' ಎಂದು ಸೆರಗೊಡ್ಡಿ ಬೇಡಿಕೊಳ್ಳುತ್ತ ಅವಳ ಪಾದಧೂಳನ್ನೇ ದೇವೀ ಪ್ರಸಾದವೆಂದು ಹಣೆಗೆ ಹಚ್ಚಿಕೊಳ್ಳಲೂ ಸಿದ್ಧನಾಗುತ್ತಾನೆ.

ಮಾತ್ರವಲ್ಲ ಹೀಗೆ ಬಹಿರಂಗ ಶುದ್ಧವ
ಯೇ ಆಡುವ ನೀತಿ ತತ್ವಗಳಿಂದ ತವ
ಜೀವನ ಸಾರ್ಥಕವೆಂದು ತಿಳಿಯುವವ
ಯಮನು ನರಕಲೋಕದಲ್ಲಿ ಒಂದು
ಣು ಸ್ಥಳವನ್ನಾದರೂ ಧರ್ಮಾರ್ಥವಾ
ಮೂಲಗೇಣಿಗೆ ಕೊಡುವೆನೆಂದು ಎಂದೆ
ಷಣ ಮಾಡಿಬಿಟ್ಟಿದ್ದಾನಂತೆ! ಬಾ
ಗೋಚರದಲ್ಲಿ ಕೋಗಿಲೆಯಂತೆ ತನ್ನ
ಣ್ಣವೂ ಕಪ್ಪೆಂದು ಹಿಗ್ಗುವ ಕಾ
ಯನ್ನು ನಾವೆಷ್ಟು ಆದರಾಭಿಮಾನದಿಂ
ಸ್ವಾಗತಿಸುತ್ತೇವೂ ಅದಕ್ಕಿಂತ ಹೆಚ್ಚ
ಮರ್ಯಾದೆಯನ್ನು ಈ ಮಾತಿನ ಮ
ರಾದ ಡಾಂಬಿಕ ಜೀವಿಗಳಿಗೇಕೆ ಕೊ
ಬೇಕು? ಆದರೂ ಬಹಿರಂಗ ಶುದ್ಧವಾ
ರುವ ಇಂತಹ ಜನರನ್ನೂ ಎಲ್ಲರೂ ಕೊ
ಡಾಡುತ್ತಾರೆ. ಇಂಥವರ ಮಾತಿನ ಮಾ
ತ್ರಿಕ ಶಕ್ತಿಗೆ ಮರುಳಾಗಿ ಬಹು ಸುಲ
ದಲ್ಲಿ ಮೋಸಹೋಗುತ್ತಾರೆ ಹೀಗಿರುತ
'ದೇಶಕ್ಕಾಗಿ ಹೋರಾಡಿ ಸ್ವಾರ್ಥಕ್ಕಾ
ಪೇಚಾಡಿರೆನ್ನುವ' ಮಾತಿನ ಮಹಾ ತ
ಗಿಗಳಿರುವ ನಮ್ಮ ಸಮಾಜವಾಗಲಿ
ದೇಶವಾಗಲೀ ಉದ್ಧಾರವಾಗುವ ಯೋ
ಜನೆ ಬಹಿರಂಗ ಶುದ್ಧವಾಗಿಯೇ ಉ
ದೀತು!

"ಅನುಭವಿಸಲು ರಾಜಭೋಗ
ಬರಿಯ ಮಾತು,—ಸ್ವಾರ್ಥತ್ಯಾಗ
ಮನದ ಬಯಕೆ ಸಾವಿರಾರು-
ಹೊರಗೆ ಶುದ್ಧ-ತಿಳಿವರ್‍ಯಾರು?" ಎ

ಬೀ ಮಾತು ಅಂತರಂಗ ಬಹಿರಂಗವಾ
ಸರ್ವಥಾ ಸತ್ಯ!. ಅಲ್ಲವಾದರೆ ಬಹಿರಂ
ಶುದ್ಧವಾಗಿ ಆಡುವ ಮಾತನ್ನೇ ನಂಬು
ನಾವು— "ರಾಮನಿಗೆ ರಾಜ್ಯವಾದರ
ಮಂಡೆಗೆ ರಾಗಿಬೀಸುವುದು ತಪ್ಪಿಲ್ಲ!
ಎನ್ನುವ ಗಾದೆಯ ಮಾತನ್ನೇ ಮೆಲು
ಡಬೇಕಾದೀತು!

ಕೆ. ಜೆ. ಶೆಟ್ಟಿ, ಕಡಂದಲ

ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ಕಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ 8/-
(ವಿ. ಪಿ. ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40
ಸ್ಟಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಯೋಜನೆಯ ಯಶಸ್ಸು

ಉತ್ತರ ಪ್ರದೇಶದ ಒಂದು ಮಾದರಿ ಗ್ರಾಮ

ಹೀನಸ್ಥಿತಿಯ ಗ್ರಾಮವಿಂದು ಪ್ರವರ್ಧಮಾನವಾಗುತ್ತಿದೆ.

ಸೋನ್. ಇದು ಉತ್ತರ ಪ್ರದೇಶಕ್ಕೆ ಸೇರಿದ ಆಗ್ರಾ ಜಿಲ್ಲೆಯ ಒಂದು ಗ್ರಾಮ. ಇದು ಖೇರಾಘರ್ ಸಾಮುದಾಯಿಕ ಅಭಿವೃದ್ಧಿ ಕೇಂದ್ರದ ವ್ಯಾಪ್ತಿಗೆ ಒಳಪಡುತ್ತದೆ. ಈ ಗ್ರಾಮಕ್ಕೆ ಸೇರಿದ ಬೇಸಾಯಗಾರ ಹರಬಿಲಾಸ್ ಈ ಪ್ರದೇಶದಲ್ಲಿ ಒಂದು ಪವಾಡವನ್ನೇ ಸಾಧಿಸಿದ್ದಾನೆ; 49 ವರ್ಷಗಳ ವಯಸ್ಸಿನ ಈ ರೈತನ ವಿಷಯದಲ್ಲಿ ಈ ಪ್ರದೇಶದ ಜನರಿಗೆ ಎಲ್ಲಿಲ್ಲದ ಗೌರವ. ಈತನ ಸಾಧನೆ ಈ ಪ್ರದೇಶದ ಇತರರಿಗಂತೂ ಒಂದು ಮಾದರಿ; ಸ್ಫೂರ್ತಿದಾಯಕ ದಾಖಲೆ.

ಮೂರು ವರ್ಷಗಳ ಹಿಂದೆ ಗ್ರಾಮ ಪಂಚಾಯತಿ ಅಧ್ಯಕ್ಷನಾಗಿ ಆತ ಚುನಾಯಿತನಾದ. ಗ್ರಾಮದ ಒಟ್ಟು 305 ಕುಟುಂಬಗಳಿಗೆ ಸೇರಿದ 1612 ಜನರ ಪೈಕಿ ಶೇ 80ಕ್ಕೂ ಹೆಚ್ಚು ಜನ ಆತನ ಅನುಯಾಯಿಗಳಾಗಿ ನಿಲ್ಲುವಂತೆ ಮಾಡಿದ ಸಾಹಸ ಆತನದು.

ಗ್ರಾಮಾಂತರ ಪ್ರದೇಶದ ಜನರ ನಾಯಕತ್ವ ಸಿದ್ಧಿಯಾಗಲು ಬೇಕಾದ ಹೊಸ ಹೊಸ ವಿಚಾರಗಳು ಹರಬಿಲಾಸ್‌ನಲ್ಲಿ ಹೇರಳವಾಗಿದ್ದುದೇ ಇದಕ್ಕೆ ಕಾರಣ. ಗ್ರಾಮದ ಅಳಿವು ಉಳಿವುಗಳನ್ನೇ ತನ್ನ ಅಳಿವು ಉಳಿವು ಅವಲಂಬಿಸಿಕೊಂಡಿದೆ ಎಂಬ ಒಂದು ಸೂತ್ರ ಆತನ ವ್ಯಕ್ತಿತ್ವದಲ್ಲಿ ಮುಖ್ಯವಾಗಿದೆ. ಅಂತೆಯೇ ಗ್ರಾಮದ ಉದ್ಧಾರವಾದರೆ ತಾನೆ ತನ್ನ ಉದ್ಧಾರ ಎಂಬ ಧ್ಯೇಯದೊಡನೆ ನಿಂತು ಕೆಲಸಮಾಡಿ ಎಲ್ಲರ ವಿಶ್ವಾಸಕ್ಕೆ ಆತ ಪಾತ್ರನಾದ. ಆತ ಹೇಳುವುದಾದರೂ ಇಷ್ಟೆ: "ಕಾಲ ಬದಲಾಗಿದೆ ತಮ್ಮಾ, ಜನರ ವಿಶ್ವಾಸಗಳಿಸಬೇಕಾದರೆ ಅವರ ನಾಯಕತ್ವ ವಹಿಸಿ ನಿಲ್ಲುವ ಜೊತೆಗೆ ಎಂತಹ ತ್ಯಾಗಕ್ಕೂ ಸಿದ್ಧನಾಗಿರಬೇಕು!"

ಸೋನ್ ಗ್ರಾಮದ ಹಿಂದಿದ್ದ ಸ್ಥಿತಿ ಗೊತ್ತಿರುವವರಿಗೆ ಇಂದಿನ ಸ್ಥಿತಿ ನಿಜಕ್ಕೂ ರೋಮಾಂಚಕಾರಿ. ಈ ಪ್ರದೇಶದ ಎರಡು ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳಿಂದಾಗಿ ಅಂಚಿನ ಪ್ರದೇಶದ ಈ ಗ್ರಾಮಗಳು ತುಂಬಾ ಹಿಂದುಳಿದೇ ಇತ್ತು. ಹೊಸ ಬೇಸಾಯ ವಿಧಾನಗಳನ್ನು ಅನುಸರಿಸುವ ಹುಮ್ಮಸ್ಸು ಜನರಲ್ಲಿರಲಿಲ್ಲ. 1954ರಲ್ಲಿ ಸಾಮುದಾಯಿಕ ಅಭಿವೃದ್ಧಿ ಕೇಂದ್ರ ಇಲ್ಲಿ ಸ್ಥಾಪಿತವಾದಾಗ, ಈ ಗ್ರಾಮದ ಜನರಿಗೆ ಆ ಹುಮ್ಮಸ್ಸು ಬಂತು.

ಮೊತ್ತ ಮೊದಲಿಗೆ ಆ ಸಾಹಸ ಮಾಡಿದ ಕೃಷಿಕನೆಂದರೆ, ಹರಬಿಲಾಸ್. ಉತ್ತಮ ದರ್ಜೆಯ ಬಿತ್ತನೆ ಬೀಜಗಳನ್ನು ಬೆಳೆಸುವ ವಿಧಾನ, ಸಾಲಾಗಿ ನೆಡುವ ಕ್ರಮ, ಉತ್ತಮ ಬೀಜಗಳನ್ನೇ ಬಿತ್ತನೆಗಾಗಿ ಉಪಯೋಗಿಸುವ ಕಟ್ಟುನಿಟ್ಟು, ರಾಸಾಯನಿಕ ಹಾಗೂ ಎಲೆಗೊಬ್ಬರವನ್ನು ಉಪಯೋಗಿಸುವುದು-ಇವುಗಳ ವಿಚಾರವಾಗಿ ಅಭಿವೃದ್ಧಿ ಕ್ಷೇತ್ರದ ಅಧಿಕಾರಿಗಳು ನೀಡಿದ ಮಾರ್ಗದರ್ಶನವನ್ನು ಹುಮ್ಮಸ್ಸಿನಿಂದ ಅನುಸರಿಸಿದಾಗ ಕ್ಷೇತ್ರ ಸಹ ಆತನ ಬೆಂಬಲಕ್ಕೆ ನಿಂತು ಕೆಲಸಮಾಡಿತು. ಯಾವಾಗ ಈ ವಿವಿಧ ವಿಧಾನಗಳು ಫಲನೀಡುತ್ತವೆಯೆಂದು ಖಾತ್ರಿಯಾಯಿತೋ ಆಗ ತನ್ನ ಭೂಮಿಯಲ್ಲಿ ಒಂದು ಬೆಳೆಯಿಂದ ಮತ್ತೊಂದು ಬೆಳೆಯ ಮಧ್ಯಕಾಲದಲ್ಲಿ ಆಲೂಗೆಡ್ಡೆ, ತರಕಾರಿ, ಅರಳೆ ಇತ್ಯಾದಿ ವಾಣಿಜ್ಯ ಬೆಳೆಗಳನ್ನೂ ತೆಗೆಯಲು ಆತ ಸಾಹಸಮಾಡಿದ. ಈ ಪ್ರಯತ್ನ ನಡೆಸಿದವರ ಪೈಕಿಯೂ ಆತನೇ ಮೊದಲಿಗ. ಇಂದು ಈ ಪ್ರದೇಶದ ಎಲ್ಲ ರೈತರು ಬೇಸಾಯ ವಿಸ್ತರಣ ವಿಧಾನಗಳನ್ನು ಸರ್ವೇ ಸಾಮಾನ್ಯವಾಗಿ ಬಳಸುತ್ತಿದ್ದಾರೆ.

ಉತ್ತಮ ಆಲೂಗೆಡ್ಡೆ ಬೆಳೆ

ಪಶುಪಾಲನೆ ವಿಷಯದಲ್ಲಿಯೂ ಈ ಪ್ರದೇಶದ ಜನ ಇಂದು ಆಧುನಿಕ ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಈ ಪ್ರದೇಶದ ಇನ್ನೂ ಒಂದು ವೈಶಿಷ್ಟ್ಯ—ಅಂಬರ್ ಚರಕದ ಬಳಕೆ. ಈ ಒಂದು ಗ್ರಾಮದಲ್ಲಿಯೇ ಇಂದು ಒಟ್ಟು 60 ಅಂಬರ್ ಚರಕಗಳು ಕೆಲಸಮಾಡುತ್ತಿವೆ. ಗ್ರಾಮದ ಜನ ಕ್ರಿಯಾಶೀಲರಾಗಲು ಮತ್ತು ಆರ್ಥಿಕ ಉನ್ನತಿ ಪಡೆಯಲು ಈ ಪರಿವರ್ತನೆ ಎಷ್ಟು ಸಹಾಯಕ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಪಾಳು ಬಿದ್ದಿದ್ದ ಮೂವತ್ತು ಎಕರೆಗಳಷ್ಟು ಭೂಮಿಯಲ್ಲಿಂದು ಸೌದೆಗಾಗಿ ಒದಗಿಬರುವ ಮರಗಳನ್ನು ನೆಡಲಾಗಿದೆ. ಒಬ್ಬ ರೈತ ತನಗೆಸೇರಿದ ಐದು ಎಕರೆ ಪಾಳು ಭೂಮಿಯಲ್ಲಿ ಇಂದು ಈ ಮರಗಳನ್ನು ಬೆಳೆಯ ಉದ್ದೇಶಿಸಿ ಕಾರ್ಯೋನ್ಮುಖನಾಗಿದ್ದಾನೆ.

ಒಂದು ಬೆಳೆಯಿಂದ ಇನ್ನೊಂದು ಬೆಳೆಯ ಮಧ್ಯಕಾಲದಲ್ಲಿ ಆಲೂಗೆಡ್ಡೆ, ಅರಳೆ, ತರಕಾರಿ ಇತ್ಯಾದಿ ವಾಣಿಜ್ಯ ಬೆಳೆಗಳನ್ನು ತೆಗೆಯುವ ವೈಶಿಷ್ಟ್ಯ ಸೋನ್ ಗ್ರಾಮದ್ದು. ಮೂರನೆ ಒಂದು ಭಾಗದಷ್ಟು ಬೇಸಾಯದ ಭೂಮಿ ಇಂದು ಆಲೂಗೆಡ್ಡೆ ಬೇಸಾಯಕ್ಕೆ ಉಪಯೋಗವಾಗುತ್ತಿದ್ದು ಆಗ್ರಾ ಜಿಲ್ಲೆಯಲ್ಲಿಯೇ ಈ ಗ್ರಾಮ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಆಲೂಗೆಡ್ಡೆ ಬೆಳೆ ತೆಗೆಯುವ ಗ್ರಾಮವೆಂದು ಹೆಸರುವಾಸಿಯಾಗಿದೆ. ಇದರಿಂದಾಗಿ ಗ್ರಾಮದ ಆರ್ಥಿಕ ಪರಿಸ್ಥಿತಿ ತುಂಬಾ ಉತ್ತಮಮಟ್ಟದಲ್ಲಿದೆ. ಕಲ್ಕತ್ತ ಮತ್ತು ಪಾಟ್ನಾಗಳ ವ್ಯಾಪಾರಿಗಳೂ ಈ ಗ್ರಾಮದಿಂದ ಆಲೂಗೆಡ್ಡೆ ತರಿಸಿಕೊಳ್ಳುತ್ತಾರೆ! 1957ರಲ್ಲಿ ಈ ಒಂದು ಬೆಳೆಯಿಂದಲೇ ಗ್ರಾಮಕ್ಕೆ ಒಟ್ಟು 115,000 ರೂಗಳ ಆದಾಯ ಒದಗಿಬಂದಿತು. ಇತರ ವಾಣಿಜ್ಯ ಬೆಳೆಗಳಿಂದ ಬಂದ ಆದಾಯ ಕೂಡ ಕಡಿಮೆ ಇರಲಿಲ್ಲ

ಸಹಕಾರ ಚಳುವಳಿಯ ಮುನ್ನಡೆ

ಈ ಗ್ರಾಮದಲ್ಲಿ ಸಹಕಾರ ಚಳುವಳಿ ಸಹ ತುಂಬಾ ಪ್ರವರ್ಧಮಾನ ಸ್ಥಿತಿಯಲ್ಲಿದೆ. ಒಟ್ಟು 305 ಕುಟುಂಬಗಳ ಪೈಕಿ 240 ಕುಟುಂಬಗಳವರು ಸಹಕಾರ ಸಂಘದ ವ್ಯಾಪ್ತಿಗೊಳಪಟ್ಟಿದ್ದಾರೆ.

ಮಿತ ಭಾಷಿಯಾದ ಬಾಬುಲಾಲ್ ಹಿಂದೆ ರಾಜಕೀಯದಲ್ಲಿದ್ದ ವ್ಯಕ್ತಿ. ಆತ ಇಂದು ಸಹಕಾರ ಸಂಘದ ಅಧ್ಯಕ್ಷನಾಗಿ ನಿಂತು ಗ್ರಾಮಸ್ಥರ ಏಳಿಗೆಗಾಗಿ ದುಡಿಯುತ್ತಿರುವುದನ್ನು ಕಾಣಬಹುದು. 1956ರಲ್ಲಿ ಸಹಕಾರ ಸಂಘ ಒದಗಿಸಿದ ಸಾಲದ ಮೊತ್ತ 500 ರೂ.ಗಳಷ್ಟು ಮಾತ್ರ. ಆದರೆ ಸಂಘದ ಕಾರ್ಯ ಚಟುವಟಿಕೆಗಳು ಬೆಳೆದು 1957ರಲ್ಲಿ ಅದು ಒಟ್ಟು 6000 ರೂ.ಗಳಷ್ಟು ಮೊತ್ತದಲ್ಲಿ ರೈತರಿಗೆ ಸಾಲ ಒದಗಿಸಿ ಅವರಿಗೆ ಬೇಕಾದ ಅಗತ್ಯಗಳನ್ನು ಪೂರೈಸಿದೆ. 1958ರ ಅಕ್ಟೋಬರ್ ತಿಂಗಳ ಅಂಕಿ ಅಂಶಗಳ ಪ್ರಕಾರ 23000 ರೂ.ಗಳನ್ನು ಈ ಸಹಕಾರ ಸಂಘ ತನ್ನ ಸದಸ್ಯರಿಗೆ ಒದಗಿಸಿತ್ತು; ಇನ್ನೂ 5000 ರೂ.ಗಳಷ್ಟು ಹಣವನ್ನು ಒದಗಿಸುವ ಕಾರ್ಯಕ್ರಮವನ್ನು ಆ ಸಮಯದಲ್ಲಿ ಇಟ್ಟುಕೊಂಡಿತ್ತು.

ಈ ಅಂಕಿ ಅಂಶಗಳಿಂದಲೇ ಗ್ರಾಮದ ರೈತರು ಎಷ್ಟು ಮಟ್ಟಿಗೆ ಆರ್ಥಿಕವಾಗಿ ಮುಂದುವರಿದಿದ್ದಾರೆ ಎಂಬುದು ಸ್ಪಷ್ಟವಾಗುವುದು.

ಈ ಗ್ರಾಮದ ಪ್ರಗತಿಯ ಪ್ರತೀಕವಾಗಿ ಇಂದು ಇಲ್ಲಿ ಮೂರು 'ಟ್ರಾಕ್ಟರು'ಗಳು ಕೆಲಸ ಮಾಡುತ್ತಿವೆ. ಇನ್ನೂ ಎರಡು 'ಟ್ರಾಕ್ಟರು'ಗಳಿಗೆ ಆರ್ಡರ್ ಕೊಡಲಾಗಿದೆ.

ತನಗೆ ಸೇರಿದ ಮೂವತ್ತು ಎಕರೆ ಜಮೀನಿನ ಫಸಲಿನಿಂದ ವರ್ಷಕ್ಕೆ ಹತ್ತು ಸಾವಿರ ರೂ. ಗಳ ಆದಾಯ ಕಂಡಿರುವುದಾಗಿ ಒಬ್ಬ ರೈತ ತಿಳಿಸುತ್ತಾನೆ—ಎಲ್ಲಾ ಖರ್ಚು ಕಳೆದು ಈ ಆದಾಯ.

ಈ ಗ್ರಾಮದ 124 ಬಾಲಕ ಬಾಲಕಿಯರು ಇಂದು ಪ್ರಾಥಮಿಕ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಶಾಲೆಗೆ ಹೋಗದೆ ಇರುವ ಮಕ್ಕಳೇ ಇಲ್ಲವೆಂದೂ ಹೇಳಬಹುದು. ಈ ಪೈಕಿ 35 ಹೆಣ್ಣು ಮಕ್ಕಳೂ ಇದ್ದಾರೆ.

ಜೂನಿಯರ್ ಸೆಕೆಂಡರಿ ಪ್ರೌಢ ಶಾಲೆಯೊಂದನ್ನು ತೆರೆಯುವ ಪ್ರಯತ್ನಗಳೂ ಇದೀಗ ನಡೆಯುತ್ತಿವೆ. ಗಣೇಶ ಲಾಲ್ ಎಂಬ ಒಬ್ಬ ವ್ಯಕ್ತಿಯೇ 6000 ರೂ.ಗಳನ್ನು ಇದಕ್ಕಾಗಿ ದಾನ ಮಾಡಿದ್ದಾನೆ; ಒಳ್ಳೆ ಬೆಲೆ ಇರುವುದನ್ನು ಕಡೆಗಣಿಸಿ ಒಬ್ಬ ವಿಧವೆ—ರಾಕುರಾಣಿ ನಂದ ಕುಮಾರ್, ಈ ಶಾಲೆಗೆ 6 ಎಕರೆಗಳಷ್ಟು ಭೂಮಿಯನ್ನೂ ಒಂದು ಬಾವಿಯನ್ನೂ ದಾನವಾಗಿ ಕೊಟ್ಟಿದ್ದಾಳೆ!

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 60/1959.

ಜೊನಾತ್ ಮಸ್ಕರೇಂಞಾಸ್— ವಾದಿ
ಅಗಸ್ಟಿನ್ ಡಿ'ಸೋಜ— ಪ್ರತಿವಾದಿ.
ಇವರೊಳಗೆ

ಉಡ್ಪಿ ತಾಲ್ಲೂಕು ಉಪ್ಪೂರು ಗ್ರಾಮದ ಅಮ್ಮುಂಜೆಯಲ್ಲಿರುವ ಫೆಲಿಕ್ಸ್ ಡಿ'ಸೋಜರ ಮಗ ಅಗಸ್ಟಿನ್ ಡಿ'ಸೋಜರಿಗೆ:

ತಾ. 26-8-1957ರಲ್ಲು ನೀವು ವಾದಿಗೆ ರೂಪಾಯಿ 150ಕ್ಕೆ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಬಾಬ್ತು ಅಸಲು ಬಡ್ಡಿ, ಕೋರ್ಟು ಖರ್ಚು ವಗೈರೆ ನಿವೃತ್ತಿ ಕೇಳಿ ವಾದಿಯು ನಿಂಮ ಮೇಲೆ ಮಾಡಿದ ದಾವೆಯನ್ನು ತಾ. 15-4-1959ಕ್ಕೆ ತನ್ಕಿಗೆ ಇಟ್ಟಿದೆ. ಈ ಬಾಬಿನಲ್ಲಿ ನಿಮಗೆ ಆಕ್ಷೇಪವಿದ್ದಲ್ಲಿ ಸದ್ರಿ ದಿನ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ವಾದಿಯ ಅಪೇಕ್ಷೆ ಮೇರೆಗೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

ಯು. ಬಿ. ಕೃಷ್ಣರಾವ್,
ವಾದಿಯ ಕಡೆಯ ಎಡ್ವೊಕೇಟ್.

ಉಡುಪಿ ತಾರೀಖು. 18-3-1959.

JUST PUBLISHED!
A NEW BOOK WITHIN THE REACH OF EVERYBODY
"LETTER WRITING MADE EASY"
(75 EVERY DAY LETTERS)
Written by An Experienced Teacher.
Useful to one and all, the teacher, the student and the layman.
Price: Rs. 1=25. (Postage extra)
If Rs. 1=50 is sent by M. O. one copy will be sent by Bookpost.
Copies can be had from the Publishers:
Navayuga Enterprise Ltd.
Navayuga Press,
Udipi.
and also from:
M/s Indian Industrials & Agencies, Mangalore-1.
M/s Navabharat Book Depot, Udipi.

The Moolky Bank, Ltd.
MULKI.
ಡಿಪ್ರೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ ಹಣಕ್ಕೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಲೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

NAVAYUGA
REGD. NO. M. 3619

UDIPI, THURSDAY
26-3-1959

LICENSE NO. 31
Licensed to Post without Prepayment

ದೇಶ ಪರಿಚಯ

ಪ್ರಾಚೀನ ಭಾರತದ ವಸಾಹತು-ಕಾಂಬೋಜ

ರಾಷ್ಟ್ರಪತಿ ಸಂದರ್ಶನದಿಂದ ಸಂಬಂಧವು ಮತ್ತಷ್ಟು ದೃಢಗೊಳ್ಳಲಿ.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಕಂಬೋಡಿಯಾ ಉತ್ತರ ಮತ್ತು ದಕ್ಷಿಣ ವಿಯತನಾಮ ಮತ್ತು ಲಾವೋಸ್‌ಗಳಿಗೆ ೧೨ ದಿನಗಳ ಸಂಚಾರಾರ್ಥವಾಗಿ ತೆರಳಿದ್ದಾರೆ. ಇವೆಲ್ಲ ದೇಶಗಳೂ ಭಾರತದ ನೆರೆಯವುಗಳು; ಭಾರತದೊಡನೆ ಹಳೆಯ ಸಂಬಂಧವುಳ್ಳವುಗಳು; ಆದರೆ, ಕಂಬೋಡಿಯಾದ ಮೇಲೆ ಭಾರತೀಯ ಪ್ರಭಾವ ವಿಪರೀತವಾಗಿ ಬಿದ್ದುದರಿಂದ, ಇದು ಅಲ್ಲಿಯ ಜನತೆಯ ಸಂಸ್ಕೃತಿಯ ಮೇಲೆ ಅಚ್ಚು ಹೊಯ್ದಂತೆ ಇಂದಿಗೂ ತೋರಿಬರುತ್ತದೆ

ಕಂಬೋಡಿಯಾವು ಹಿಂದೀ ಚೀನಾ ರಾಜ್ಯ (ಇಂಡೊ ಚೈನಾ) ವಾಗಿದೆ. ೬೯,೯೦೦ ವರ್ಗ ಮೈಲು ವಿಸ್ತೀರ್ಣವಿದೆ. ೪೭ ಲಕ್ಷ ಜನವಸತಿಯುಳ್ಳುದಾಗಿದೆ. ನಾಮಪೇಮ ವೆಂಬುದಿದರ ರಾಜಧಾನಿ. ಇದು ಮಿಕೊಂಗ್ ನದಿಯು ಸೆಳೆದು ತರುತ್ತಿರುವ ಮೆಕ್ಕಲುಮಣ್ಣು ಮೈದಾನ ಭೂಮಿಯೂಗಿದ್ದು ಫಲವತ್ತಾದ ದೇಶವಾಗಿದೆ.

ಕಂಬೋಡಿಯಾದ ಹವೆ ಉಷ್ಣವಾಗಿದೆ. ಇಲ್ಲಿನ ಸೇನಲ್ ಸರೋವರವೆಂಬುದು ಮೀನುಗಳಿಗೆ ಹೆಸರು ಪಡೆದಿದೆ. ರಾಜ್ಯದ ದಕ್ಷಿಣ ಭಾಗದಲ್ಲಿ ಭತ್ತವು ಉತ್ಪತ್ತಿಯಾಗುತ್ತಿದೆ. ರೇಶ್ಮೆ ಕ್ರಿಮಿಗಳ ಸಾಕಣೆ ಹಾಗೂ ರೇಶ್ಮೆ ನೇಯುವುದೂ ಇಲ್ಲಿನ ಪ್ರಮುಖೋದ್ಯೋಗಗಳಲ್ಲಿ ಒಂದಾಗಿದೆ.

ಖ್ಮೇರ ಆಳಿಕೆಯ ಕಾಲದಲ್ಲಿ ಇಲ್ಲಿ ಬಹಳ ಅಭಿವೃದ್ಧಿ ಕಾರ್ಯಗಳಾಗಿದ್ದುವು. ಆದರೆ, ಮುಂದೆ ೧೮ ಮತ್ತು ೧೯ನೆಯ ಶತಮಾನಗಳ ನಡುವೆ ಇದು ಸಯಾಮು ಮತ್ತು ಅನಾಮು ದೇಶಗಳ ಆಕ್ರಮಣಕ್ಕೆ ಗುರಿಯಾಯಿತು. ೧೮೬೩ರಲ್ಲಿ ಕಂಬೋಡಿಯಾದ ರಾಜನು ಫ್ರಾನ್ಸಿನೊಡನೆ ಒಪ್ಪಂದವೊಂದನ್ನು ಮಾಡಿಕೊಂಡುದರಿಂದ ಫ್ರಾನ್ಸು ಅದನ್ನು ಸಂರಕ್ಷಿತ ರಾಜ್ಯವೆಂದು ಘೋಷಿಸಿತು. ೧೯೦೭ರಲ್ಲಿ ಫ್ರಾನ್ಸು ಮತ್ತು ಸಯಾಮುಗಳ ನಡುವೆ ಒಂದು ಸಂಧಿಯಾಗಿ ಕಂಬೋಡಿಯಾಕ್ಕೆ ಅದರ ಪಶ್ಚಿಮ ಭಾಗವೂ ದೊರೆಯಿತು. ದ್ವಿತೀಯ ಲೋಕಸಮರಾ ನಂತರ ಫ್ರಾನ್ಸು ಕಂಬೋಡಿಯಾವನ್ನು ಒಂದು ಸ್ವತಂತ್ರ ರಾಷ್ಟ್ರವಾಗಿಸಿತು

ಭಾರತ ಮತ್ತು ಕಂಬೋಡಿಯಾಗಳ ನಡುವಿನ ಸಾಂಸ್ಕೃತಿಕ ಸಂಬಂಧವು ಪುರಾತನವಾದುದು. ಇಂದು ಕಂಬೋಡಿಯಾವೆಂದು ಕರೆಯಲ್ಪಡುವ ಹೆಸರಿನ ಮೂಲ ಕಾಂಬೋಜವೆಂದಿದ್ದು, ಈ ಹೆಸರು ಭಾರತೀಯರಿಂದ ಕೊಡಲ್ಪಟ್ಟಿದೆ. ಅಲ್ಲದೇ ಭಾರತೀಯ ಪುರಾಣೇತಿಹಾಸಗಳಲ್ಲಿ ಕಾಂಬೋಜದ ರಾಜನ ಉಲ್ಲೇಖಗಳು ಬರುತ್ತವೆ. ಇಲ್ಲಿನ ಚಂಪಾ ಪ್ರದೇಶದಲ್ಲಿ ದೊರೆತ ಒಂದು ಶಿಲಾಲೇಖದಿಂದ ಇಲ್ಲಿ ಬಹಳ ಪೂರ್ವದಲ್ಲಿ ಅಸಭ್ಯ ಜಾತಿಯ ಜನರು ವಾಸಿಸುತಿದ್ದರೆಂದು ತಿಳಿಯುವುದು.

ಕ್ರಮೇಣ ಕಂಬೋಡಿಯಾದ ಮೇಲೆ ಹಿಂದೂ ರಾಜ್ಯಭಾರಕ್ಕೆ ಮೊದಲಾಯಿತು. ಕೌಂಡಿನ್ಯನೆಂಬ ಭಾರತೀಯನು ಕಂಬೋಡಿಯಾದ ರಾಣಿ ಸೋಮಾ ದೇವಿಯನ್ನು ಯುದ್ಧದಲ್ಲಿ ಸೋಲಿಸಿ, ಆಕೆಯನ್ನು ವಿವಾಹವಾದನೆನ್ನುತ್ತಾರೆ. ಅಂದಿನಿಂದ ಕೌಂಡಿನ್ಯನೇ ಅಲ್ಲಿನ ಒಡೆಯನಾದನು. ಈ ಕೌಂಡಿನ್ಯನೇ ಅಪರಿಮಿತ ಪರಿಶ್ರಮ ಸಾಹಸಗಳಿಂದ ಅಸಭ್ಯ ಕಾಂಬೋಜರನ್ನು ಸಭ್ಯರನ್ನಾಗಿಯೂ, ಸುಸಂಸ್ಕೃತರನ್ನಾಗಿಯೂ ಮಾಡಿದನೆಂದು ಹೇಳುತ್ತಾರೆ.

ಕಂಬೋಡಿಯಾದಲ್ಲಿ ಭದ್ರೇಶ್ವರನೆಂಬ ಶಿವ ದೇವಾಲಯವಿದೆ. ಅಗಸ್ತ್ಯ ಮಹಾ ಮುನಿಯು ಶಿವನನ್ನು ಇಲ್ಲಿಯೇ ಅನನ್ಯ ಭಕ್ತಿಯಿಂದ ಜಪಿಸಿ ಮುಕ್ತಿಯನ್ನು ಹೊಂದಿದನೆಂದು ಹೇಳುತ್ತಾರೆ. ಕ್ರಿ. ಶ. ಎರಡನೆ ಮತ್ತು ೧೩ನೆಯ ಶತಮಾನಗಳ ನಡುವಿನ ಸುಮಾರು ಒಂದು ಸಾವಿರ ವರ್ಷಗಳ ಕಾಲ ಕಾಂಬೋಡಿಯಾ ಭಾರತೀಯರ ಆಳಿಕೆಯಲ್ಲಿತ್ತು ಎಂಬುದಕ್ಕೆ ಆಧಾರಗಳು ದೊರೆಯುತ್ತವೆ ೯ನೆಯ ಶತಾಬ್ದಿಯಲ್ಲಿ ಜಯವರ್ಮನ್ ಎಂಬ ದಕ್ಷಿಣ ಭಾರತೀಯಾಧಿಪತಿಯು ಕಂಬೋಡಿಯಾದ ಸುತ್ತಮುತ್ತಲಿನ ಸಣ್ಣ ಸಣ್ಣ ರಾಜ್ಯಗಳೆಲ್ಲವನ್ನೂ ಒಂದು ಸೇರಿಸಿ ಕಂಬೋಡಿಯಾ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಆಗ ಇದರ ರಾಜಧಾನಿ ಅಂಗಕಾರವಾಗಿತ್ತು.

ಅಂಗಕಾರವು ಏಶ್ಯಾದಲ್ಲಿಯೇ ಬೆಳೆದ ಪಟ್ಟಣವಾಗಿತ್ತು. ೧೦ ಲಕ್ಷಕ್ಕೂ ಮಿಕ್ಕಿದ ಜನರು ಇಲ್ಲಿದ್ದರು. ಈ ನಗರವು ಸೀಜರ ಮಹಾರಾಜನ ರೋಮ್ ನಗರಕ್ಕಿಂತಲೂ ವಿಶಾಲವೂ ವಿಸ್ತಾರವೂ ಆಗಿತ್ತು. ಆದರೆ, ಮಿಕಾಂಗ್ ನದಿಯಲ್ಲಿ ನೆರೆಯು ಉಕ್ಕಿಬಂದು, ಹರಿಯುವ ಗತಿಯು ಬದಲಾಯಿಸಿದುದರಿಂದ, ನದಿಯ ಮುಖದಲ್ಲಿದ್ದ ಈ ನಗರದ ಮೇಲೆ ಮಣ್ಣು ಜಮೆಯಾಗಿ ಸಂಪೂರ್ಣ ನಾಶವಾಗಿ ಹೋಯಿತು.

ಕಂಬೋಡಿಯಾದಲ್ಲಿ ಸಂಸ್ಕೃತ ಭಾಷೆಯು ಪ್ರಚಲಿತವಾಗಿತ್ತು. ಇಲ್ಲಿ ದೊರೆಯುವ ಶಿಲಾಲೇಖಗಳಲ್ಲಿ ವೇದ, ಪುರಾಣ, ಮಹಾಭಾರತಾದಿ ಗ್ರಂಥಗಳ ಉಲ್ಲೇಖ ಸಿಗುತ್ತದೆ. ಕಂಬೋಡಿಯಾನರು ಭಾರತೀಯರ ಕ್ರಮಾಚರಣೆಗಳನ್ನು ಮನ್ನಿಸುತಿದ್ದರು. ಭಾರತೀಯರಂತೆಯೇ ಪೂಜೆ ಪುರಸ್ಕಾರಗಳನ್ನು ಮಾಡುತಿದ್ದರು.

ಪ್ರಾಚೀನ ಭಾರತದ ಶಿಲ್ಪ ಕಲೆಯನ್ನು ನಾವು ಅಂಗಕಾರದ ದೇವಾಲಯದಲ್ಲಿ ನೋಡಬಹುದು. ಈ ದೇವಾಲಯವು ಇಂದಿಗೂ ವಿಶ್ವವಿಖ್ಯಾತವಾಗಿದೆ. ಈ ಮಂದಿರವನ್ನು ನಿರ್ಮಿಸಲು ನೂರು ನೂರು ವರ್ಷಗಳು ಬೇಕಾದುವೆಂದು ಹೇಳಲಾಗುತ್ತದೆ.

ಕಂಬೋಡಿಯಾದಲ್ಲಿ ಗಣಪತಿಯ ಅನೇಕ ಮೂರ್ತಿಗಳು ದೃಷ್ಟಿಗೋಚರವಾಗುತ್ತವೆ. ಅವನನ್ನು ಇಲ್ಲಿ ‘ಕನೇಸ’ನೆಂದು ಹೇಳುತ್ತಾರೆ. ಕನೇಶ ಎಂಬುದು ಗಣೇಶ ಎಂಬುದರ ವಿಕಾರ ರೂಪವಾಗಿದೆ.

ಇತರ ದೇಶೀಯರಂತೆಯೇ ಕಂಬೋಡಿಯಾವನ್ನು ಬೌದ್ಧರೂ ಪ್ರವೇಶಿಸಿದರು. ಇಂದಿನ ಜನರಲ್ಲಿ ನೂರಕ್ಕೆ ೧೬ರಷ್ಟು ಬೌದ್ಧರಿದ್ದಾರೆ. ಬೌದ್ಧ ಧರ್ಮವೇ ರಾಜ್ಯ ಧರ್ಮವೆಂದು ಈಗ ಘೋಷಿಸಲ್ಪಟ್ಟಿದೆ.

ಇತರ ದೇಶಗಳಂತೆಯೇ ಕಂಬೋಡಿಯಾದಲ್ಲೂ ಅನೇಕ ಪ್ರಕಾರದ ವಿಶಿಷ್ಟ ಜಾನಪದ ನೃತ್ಯಗಳಿವೆ. ಇವುಗಳಲ್ಲಿ ಹುಡುಗಿಯರು ಮಾಡುವ “ಇರುವೆ ನೃತ್ಯ”ವು ಒಂದು ಮನಮೋಹಕ ನೃತ್ಯವಾಗಿದೆ

ರಾಷ್ಟ್ರಪತಿಗಳ ಪ್ರಕೃತದ ಯಾತ್ರೆಯು ಪ್ರಾಚೀನವಾದ ಈ ಸಂಬಂಧವನ್ನು ದೃಢಗೊಳಿಸುವಂತಾಗಲಿ.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 913/1958 S. C. 1184/55.

ಅರ್ಜಿದಾರ: ಪೂಜಾರಿ ದೇವಪ್ಪ ಸೇರಿಗಾರ.

ಮತ್ತು

ಎದ್ರು: 1. ಮಾರ್ಲಿ ಸೆಟ್ಟಿ.

2 ಸುಬ್ಬಣ್ಣ ಸೆಟ್ಟಿ. ಇವರೊಳಗೆ

ಕುಂದಾಪುರ ತಾಲೂಕು ಪಡುವರಿ ಗ್ರಾಮದಲ್ಲಿರುವ 1ನೇ ಪ್ರತಿವಾದಿ ಸದ್ರಿ ಮಾರ್ಲಿಸೆಟ್ಟಿ ಹಾಗ 2ನೇ ಎದ್ರು ಸುಬ್ಬಣ್ಣ ಸೆಟ್ಟರಿಗೆ ತಿಳಿಯಪಡಿಸಿದ್ದು

ನಿಮ್ಮ ಕೂಡಾ ಎದ್ರಿರ ಮೇಲೆ ಮೇಲ್ಕಂಡ ಅರ್ಜಿದಾರನು ನಡಿಸುತ್ತಿರುವ ಸದ್ರಿ ಅಮಲ್ದಾರಿಯಲ್ಲಿ ನಿಮ್ಮಬಾಬ್ತು ಸ್ಥಿರಾಸ್ತಿ ಜಪ್ತು ಮಾಡಲ್ಪಟ್ಟು ಏಲಮ್ಮಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ. 6-4-59ಕ್ಕೆ ಇಡೋಣಾಗಿಯದೆ. ಆ ಕುರಿತು ಆಕ್ಷೇಪಣೆ ಇದ್ದರೆ ಸದ್ರಿ ದಿವಸ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು.

Coondapur.,
19-3-1959.

A. V. N. Hebbar,
Vakil for Petitioner.

ವಿಚಾರ ಮಥನ

(೧ನೇ ಪುಟದಿಂದ)

ನ್ನು ಪ್ರತ್ಯಕ್ಷವಾಗಿ ತೋರಿಸಲು ಹೆಣಗ ತ್ತಿರುವ ಭಾರತದ ಶ್ರೇಯಸ್ಸು ಜಗತ್ತಿ ಶ್ರೇಯಸ್ಸು; ‘ಪ್ರಜಾಪ್ರಭುತ್ವ”ದ ಯ ಸ್ಸು. ಎಂತಲೇ ಎಲ್ಲರ ಗಮನವೂ ಇತ್ತ ನೋಡುತಿದ್ದು ನೆರವಿನ ಹಸ್ತಗಳು ಮುಂದೆ ಬರುತ್ತಿವೆ.

× × × ×

“ಭಾರತದ ಶಾಂತಿ ಮಂತ್ರ”ವನ್ನು ಅದರ ನಿರ್ಬಲತೆಯ ದ್ಯೋತಕವೆಂದು ಬ ಗೆದಿರುವ ರಾಷ್ಟ್ರಗಳೂ ಇಲ್ಲವೆಂದಿಲ್ಲ ಹೀಗೆ ತಪ್ಪು ತಿಳಿದವರಲ್ಲಿ ಪಾಕಿಸ್ತಾನವೂ ಒಂದೆಂಬುದು ಇತ್ತೀಚೆಗೆ ನಡೆದು ಬರು ತ್ತಿರುವ ಅದರ ಹಿಂಸ್ರಪ್ರವೃತ್ತಿಯಿಂದಲೇ ತಿಳಿಯುತ್ತದೆ. ಗಡಿಸೀಮೆಯನ್ನು ಪ್ರ ನಿತ್ಯವೆಂಬಂತೆ ಉಲ್ಲಂಘಿಸುತ್ತಿರುವ ಹೋದರೆ ಪಾಕಿಸ್ತಾನದ ಕ್ರೂರಾಚರಣೆ ಭಾರತದ ವಿರುದ್ಧವಾಗಿ ಸೈನಿಕ ಒಡಂ ಡಿಕೆಗಳನ್ನು ಮಾಡಿಕೊಂಡೆವೆಂಬ ಬಡಾ ಡಿಕೆಗಳು ಭಾರತಕ್ಕೆ ವಿರೋಧವನ್ನು ನ್ನುಂಟು ಮಾಡುತ್ತಿವೆ. ಆದರೆ, ಇಂತಹ ಕತ್ತಲೆಯ ಆಳದಲ್ಲಿ ಹುದುಗಿರುವ ಪಾ ಸ್ತಾನಕ್ಕೆ ಸಂರಕ್ಷಣಾ ಮಂತ್ರಿ ಯೋಗ್ಯ ವಾದ ಗಂಭೀರ ಎಚ್ಚರಿಕೆಯನ್ನಿತ್ತಿದ್ದಾರೆ. “ಯಾವುದೇ ರಾಷ್ಟ್ರಗಳಿಗೆ ಅವು ಎಣಿ ರುವಷ್ಟು ಸುಲಭವಾಗಿ ಭಾಗತವನ್ನು ಪ್ರ ವೇಶಿಸಲು ಬಿಡಲಾರೆವು. ಅದರ ಶಾಂ ಪ್ರಿಯತೆಯನ್ನು ನಿರ್ಬಲತೆ ಎಂದು ತಪ್ಪು ತಿಳಿಯಬೇಡಿ”ರೆಂದು ಅವರು ಎಚ್ಚರಿ ದ್ದಾರೆ.

ಈ “ಆಕ್ರಮಣ”ಗಳನ್ನು ತಡೆಗಟ್ಟಲು ಭಾರತೀಯರು, ಮುಖ್ಯವಾಗಿ ಸಿಮಾ ಪ್ರ ದೇಶದ ಜನತೆ ಸದಾ ಒಗ್ಗಟ್ಟಿನಿಂದ ಕೂ ಡಿರಬೇಕು ಜನತೆಯಲ್ಲಿ ಆತ್ಮ ನಿರ್ಭರತೆ ಯು ತುಂಬಿರಬೇಕು. ಅಸಭ್ಯ ಘಟನೆ ಳನ್ನು ಶಾಂತಿ ಪೂರ್ವಕ ಹಾಗೂ ಅನ ಶಾಸನಿಕ ರೂಪದಲ್ಲಿ ಎದುರಿಸುವ ಧೈ ರ್ಯ ಗುಣ ಸಂಪನ್ನರಾಗಿರಬೇಕು. ಎಲ್ಲ ಕ್ಕಿಂತ ಹೆಚ್ಚಾಗಿ, ದೇಶದ ಜನತೆಯ ಐಕ್ಯದಿಂದ ಕೂಡಿದ್ದು, ಬರಬಹುದಾ ಗಂಡಾಂತರಮಯ ಪರಿಸ್ಥಿತಿಯನ್ನು ದೃ ತೆಯಿಂದ ಎದುರಿಸಿ ಹೋರಾಡುವ ಧೈ ರ್ಯಶಾಲಿಯಾಗಿರಬೇಕು. ಶ್ರೀ ಕೃಷ್ಣಮೆ ನನರು ತಮ್ಮ ಸಂರಕ್ಷಣಾ ಶಾಖೆಗೆ ಅರ್ಹ ವಾದುದನ್ನೇ ಉದ್ಗರಿಸಿದ್ದಾರೆ; ಇಂತಹ ಎಚ್ಚರಿಕೆ ಚರ್ವಿತ ಚರ್ವಣವಾದರೂ ಅ ದು ನಿತ್ಯನೂತನವಾಗಿಯೇ ಇದೆ. ಅಳಿಯ ದ ಉಪದೇಶಗಳಿಗೆ ಮುದಿಯಂಬುದಿಲ್ಲ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ಪ್ರಗತಿಯ ಪಥದಲ್ಲಿ............

[1958ನೇ ವರ್ಷಾಂತ್ಯದಲ್ಲಿ ನಮ್ಮ ಅಂಕೆಸಂಖ್ಯೆಗಳು]

ರೂ. 56,00,000 .... ಅಧಿಕೃತ ಭಂಡವಾಳ
ರೂ. 32,23,787 .... ತೆತ್ತ ಭಂಡವಾಳ
ರೂ. 32,10,987 .... ಮಾಲು ಭಂಡವಾಳ
ರೂ. 28,96,276 .... ಪಾವ್ತಿಯಾದ ಭಂಡವಾಳ

ಕ್ಷೇಮನಿಧಿ .... ರೂ. 26,50,000.
ಠೇವಣಾತಿ ರೂ. 13 ಕೋಟಿಗೂ ಮಿಕ್ಕಿದೆ
ಒಟ್ಟು ವ್ಯವಹಾರ ಸಂಪತ್ತು ರೂ. 17 ಕೋಟಿಗೂ ಮಿಕ್ಕಿದೆ
ಶಾಖೆಗಳು: 117

ಡಾ| ಟಿ. ಎಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

ಟಿ. ಎ. ಪೈ,
ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.
THE CANARA INDUSTRIAL & BANKING SYNDICATE LTD, UDIPI.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ.ಪೈಸೆ.

ವರುಷ ೩೮ ವಾರ ೨೮ 2-4-1959 Vol 38 No 29.

ವಿಚಾರ ಮಥನ

ದಲ್ಯಾಲಾಮಾರ ನಿವೃತ್ತಿ

* *

ಸರಕಾರಿ ಕೃಷಿ ವ್ಯವಸ್ಥೆ

* *

ಕಾಶ್ಮೀರದ ದೃಢ ಸಂಬಂಧ

* *

ಬ್ರಿಟಿಷರ ಕುತಂತ್ರವೇ?

* *

ಸುಮಾರು ೨೦ ವರ್ಷಗಳಿಗೆ ಹಿಂದೆ ಸಾಧಾರಣ ೫ ವರ್ಷದ ಒರ್ವ ರೈತರ ಹುಡುಗರು ೧೪ನೆಯ ದಲಾಯಿ ಲಾಮಾ ಮತ್ತು ಟಿಬೇಟದ ಶಾಸನಾಧಿಕಾರಿಯೆಂದೂ ಅಲ್ಲದೆ ಲಕ್ಷಾಂತರ ಬೌದ್ಧರ ಧರ್ಮಗುರುವೆಂದೂ ಘೋಷಿಸಲ್ಪಟ್ಟರು ೧೯೫೬ರ ನವಂಬರ ತಿಂಗಳಲ್ಲಿ ಈ ಲಾಮಾರು ಪಂಚೆನ್ ಲಾಮಾರೊಂದಿಗೆ ಭಾರತವನ್ನು ಸಂದರ್ಶಿಸಿ, ಭಾರತ, ಚೀನಾ ಮತ್ತು ಟಿಬೇಟಗಳ ನೂರಾರು ವರ್ಷಗಳ ಮಿತ್ರತ್ವದ ಬಗ್ಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದರು. ಇಂತಹ ದಲಾಯಿ ಲಾಮಾರು ಈಗ ಟಿಬೇಟದಲ್ಲಾದ ಗೊಂದಲಮಯ ಪರಿಸ್ಥಿತಿಯಲ್ಲಿ ಎಲ್ಲಿರುವರೆಂದೂ ಹೇಗಿರುವರೆಂದೂ ತಿಳಿದು ಬಂದಿಲ್ಲ.

ಚೀನೀಯರ ವಿರುದ್ಧ ಎದ್ದು ನಿಂತ ಖಂಪಾರನ್ನು ಚೀನೀಯ ಸೇನೆಯು ಸದೆಬಡೆದು ಶಾಂತಿ ಸ್ಥಾಪಿಸಿದೆ ಎಂದೂ ಟಿಬೇಟದ ನೂತನ ಶಾಸನದ ಪ್ರಮುಖಾಧಿಕಾರಿಯನ್ನಾಗಿ ಪಂಚೆನ್ ಲಾಮಾರನ್ನು ನೇಮಿಸಿರುವುದಾಗಿಯೂ ಚೀನವು ಘೋಷಿಸಿದೆ ಇದುವರೆಗೆ ಟಿಬೇಟಿನ ಸರಕಾರದ ನಾಮಮಾತ್ರ ಅಧ್ಯಕ್ಷರಾಗಿದ್ದ ದಲಾಯ್ ಲಾಮಾರವರು ವಿದ್ರೋಹಿಗಳ ಬಲಾತ್ಕಾರದಲ್ಲಿ ಸಿಲುಕಿಕೊಂಡುದರಿಂದ ಇವರು ಚೀನಾದೊಡನಾದ ಒಪ್ಪಂದವನ್ನು ಮೀರಿದ್ದಾರೆ ಎಂದೂ ಘೋಷಿಸಲಾಗಿದೆ.

ಕೇವಲ ೨೫ ವರ್ಷ ಪ್ರಾಯದ ದಲಾಯ್ ಲಾಮಾರು ಈಗ ಎಲ್ಲಿರುವರೆಂದು ಖಂಡಿತವಾಗಿ ತಿಳಿದಿಲ್ಲ ಸಾಮಾನ್ಯವಾಗಿ, ಅವರು ಖಂಪಾ ಜನರೊಂದಿಗೆ ಟಿಬೇಟದ ದಕ್ಷಿಣದ ಹಿಮಾಲಯ ಪರ್ವತಗಳ ಮರೆಯಲ್ಲಿರಬಹುದೆಂದು ಊಹಿಸಲಾಗಿದೆ ಅಲ್ಲದೇ ದಕ್ಷಿಣ ಭಾಗದಲ್ಲಿ ಅವರು ಪ್ರತಿಸರಕಾರವನ್ನೂ ಸ್ಥಾಪಿಸುವರು ಎಂಬ ಸುದ್ದಿಯೂ ಹರಡಿದೆ.

○○ ○○



ಅಮೇರಿಕೆಯ ಉನ್ನತ ಮಟ್ಟದ ರಾಕೆಟ್—N 15 50 ಅಡಿ ಉದ್ದ ೧೫ ಅಡಿ ಎತ್ತರದ ರಾಕೆಟನ್ನು ಮೇಲ್ಗಡೆಯೂ ಅದನ್ನು ಉಪಾಧ್ಯಕ್ಷ ನಿಕ್ಸನರು ಪರೀಕ್ಷಿಸುತ್ತಿರುವುದನ್ನು ಕೆಳಗಡೆಯೂ ಕಾಣಬಹುದು

"ಮುಂದಿನ ಮೂರು ವರ್ಷಗಳಲ್ಲಿ ದೇಶದಲ್ಲಿ ಸೇವಾ ಸಹಕಾರದ ಸಂಘಟನೆ ಮತ್ತು ಸಹಯೋಗಾತ್ಮಕ ಭಾವನೆಯ ವಿಕಾಸಕ್ಕಾಗಿ ಸಂಭವನೀಯ ಪ್ರಯತ್ನವನ್ನು ಕೈಗೊಳ್ಳಬೇಕು ಅಲ್ಲದೆ ಅನುಕೂಲ ಪರಿಸ್ಥಿತಿಯಿರುವಲ್ಲಿ ಸ್ವೇಚ್ಛೆಯಿಂದ ಸಹಕಾರಿ ಕೃಷಿ ವ್ಯವಸ್ಥೆಯು ಏರ್ಪಡಬಹುದು" ಎಂಬ ಒಂದು ಗೊತ್ತುವಳಿ ಲೋಕ ಸಭೆಯಲ್ಲಿ ಸ್ವೀಕೃತವಾಯಿತು

ಈ ಸಂದರ್ಭದಲ್ಲಿ ಪ್ರಧಾನಿ ನೆಹರೂ ೪೫ ಮಿನಿಟುಗಳ ವರೆಗೆ ಭಾಷಣ ಮಾಡಿ ಸಹಕಾರಿ ವ್ಯವಸಾಯಕ್ಕೆ ಪ್ರೋತ್ಸಾಹಿಸುವ ಕುರಿತು ಬಲವಾದ ಸಮರ್ಥನೆ ಮಾಡಿದರು, ಭಾರತದ ದಾರಿದ್ರ್ಯ ನಿವಾರಣೆಗೆ ಇದೊಂದೇ ತಾರಕವೆಂದು ಅಭಿಪ್ರಾಯಪಟ್ಟರು ಜನತೆಯನ್ನು ಯಾವ ಅಶಾಂತ ವಾತಾವರಣಕ್ಕೂ ಸಿಲುಕಿಸದೆ, ೧೮—೨೦ ಸಾವಿರ ಎಕ್ರೆ ವಿಸ್ತಾರದ ರಾಜ್ಯ ಕೃಷಿಕ್ಷೇತ್ರವನ್ನು ಪ್ರಾರಂಭಿಸಿದರೆ, ಇದರಿಂದ ಉತ್ತಮ ಫಲವು ದೊರೆಯುವುದು ಒಂದು ವಿಶಾಲ ಹಿಂದೂ ಕುಟುಂಬವು ಇಂದಿಗೂ ಹಳ್ಳಿಗಳಲ್ಲಿ ಸಹಕಾರೀ ವ್ಯವಸಾಯವನ್ನೇ ಮಾಡುತ್ತಿದೆ ಎಂಬುದನ್ನು ನಾವು ಮರೆಯಬಾರದು ಇದರಿಂದಾಗಿ ಸಹಕಾರದ ಕಲ್ಪನೆಯೊಂದು ಕ್ರಾಂತಿಕಾರಿಯಲ್ಲ. ಸಹಕಾರಿ ವ್ಯವಸಾಯದಡಿಯಲ್ಲಿ ಸೇರಿಕೊಂಡ ವ್ಯಕ್ತಿಗಳಿಗೆ ಭೂಮಿಯ ಮೇಲಿರುವ ಅಧಿಕಾರವು ಶಾಶ್ವತವಿರುವುದಾದರೂ, ಸ್ವಾಮಿತ್ವದ ಬಣ್ಣ ಮಾತ್ರ ಬದಲಾಗುವುದು." ಎಂದವರು ವಿವರಿಸಿದರು 'ಉತ್ಪಾದನೆಯು ಕಡಿಮೆಯಾಗಬೇಕೆಂದು ಬಯಸುವುದಿಲ್ಲವಾದುದರಿಂದ ತೋಟಗಳಿಗೆ ಅಧಿಕತಮ ಮಿತಿಯನ್ನು ಹೇರುವುದು-ಬಿಡುವುದು ಎಂದು ನಿರ್ಧಾರವಾಗಿ ಹೇಳಲು ಸಾಧ್ಯವಿಲ್ಲ. ಆದರೆ, ಈ ವಿನಾಯತಿಯೂ ಸಮಯ ಸಮಯಕ್ಕೆ ಪರಿವರ್ತನೆಯಾಗಬಲ್ಲುದು' ಎಂಬೊಂದು ಪ್ರಶ್ನೆಗೆ ಉತ್ತರಿಸುತ್ತ ಅವರು ಹೇಳಿದರು.

○ ○

ಕಾಶ್ಮೀರದ ಬಗ್ಗೆ ಪಾಕಿಸ್ತಾನದ ಹಾರಾಟ ಹೆಚ್ಚುತ್ತಿರುವಂತೆ ಕಾಶ್ಮೀರದ ಸಂಬಂಧ ಭಾರತದೊಡನೆ ದಿನೇ ದಿನೇ ಘಟ್ಟಿಯಾಗಿ ನೆಲೆಯೂರುವಂತಾಗಿದೆ ಭಾರತ ಮತ್ತು ಕಾಶ್ಮೀರಗಳ ನಡುವೆ ಸಂಚಾರಾಪೇಕ್ಷಿಗಳು ಈವರೆಗೆ ಪರ್ಮಿಟು ಪಡೆಯಬೇಕಾಗಿತ್ತು. ಭಾರತದ ಅವಿಭಾಜ್ಯ ಅಂಗವಾಗಿದ್ದರೂ ಕೆಲವೊಂದು ವಿಷಯಗಳಲ್ಲಿ ಅದು ಭಾರತದಿಂದ ಬೇರೆಯೇ ಆಗಿದೆ ಕಾಶ್ಮೀರಕ್ಕೆ ತನ್ನದೇ ಆದ ಒಂದು ಪ್ರತ್ಯೇಕ ಘಟನೆಯೂ ಇದೆ. ಇದೇ ಎಪ್ರಿಲ್ ಮೊದಲನೆ ದಿನಾಂಕದಿಂದ, ಸಂಚಾರಾನುಮೋದನಾ ಪತ್ರವನ್ನು ಪಡೆಯಬೇಕೆಂಬ ನಿಯಮವನ್ನು ಕಿತ್ತುಹಾಕಲಾಗಿದೆ ಎಂದು ಕಾಶ್ಮೀರೀ ಮುಖ್ಯಮಂತ್ರಿ ಶ್ರೀ ಬಕ್ಷಿ ಗುಲಾಮ್ ಮಹಮ್ಮದರು ಘೋಷಿಸಿರುತ್ತಾರೆ ಈ ಘೋಷಣೆಯು ರಾಜ್ಯದ ಅನೇಕ ಪ್ರಧಾನ ಪುರುಷರಿಂದ ಸ್ವಾಗತಿಸಲ್ಪಟ್ಟಿದೆ ಅಲ್ಲದೇ ಇದನ್ನು ಜನತೆಯ ಮುಖ್ಯ ಬೇಡಿಕೆಗಳಲ್ಲಿ ಒಂದೆಂದ ಉಲ್ಲೇಖಿಸಿವೆ. ಇನ್ನು ಸುಪ್ರೀಂ ಕೋರ್ಟ್ ಮತ್ತು ಚುನಾವಣಾ ಕಮಿ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3.
ಸ್ಥಾಪನೆ - 1931.

ಕಾಯಂ ಠೇವಣಾತಿ ಬಡ್ಡಿ ದರ
1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%
ರೂಪಾಯಿ 10,000/ ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು;
ಮಂಗಳೂರು ಬೆಂಗಳೂರು, ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ.. ಇತ್ಯಾದಿ ..

ಕಥಾ ವಿಹಾರ

ಆಕಾಶ ಗೋಪುರ ಕುಸಿದುರುಳಿತು!

ಅವನು ಬಯಸಿದರೂ ಬಯಸಿದುದು ಮಾತ್ರ ಅಲಭ್ಯವೆನಿಸಿತು. ದೇವಿಯ ಮಹಿಮೆ ಅಪಾರವಲ್ಲವೆ?

"ಅದೋ ಬಂತು!"

"ಏನು ಬಂತು"

"ಕಾಡು ಕೋಣ"

ಸನ್ಯಾಸಿಯು ವಿಭೂತಿ ಮಂತ್ರಿಸಿ ಒಗೆದ—

"ಓಡಿತು. ಕಾಡುಕೋಣ ಅಡವಿಗೆ ಹೋಯಿತು"

"ಹಾ ಹಾ!! ಸರಿ ಮತ್ತೇನು, ಅಗೆಯಲು ಪ್ರಾರಂಭಿಸಿರಿ!"

"ಅದೋ ಬಂತು."

"ಏನು ಬಂತು?"

"ಸಿಂಹ!! ನರಭಕ್ಷಕ ಸಿಂಹ!."

ಸನ್ಯಾಸಿ ಕುಂಕುಮ ಮಂತ್ರಿಸಿ ಒಗೆದ—

'ಹೋಯಿತು-ಸಿಂಹ ಗವಿ ಸೇರಿತು.'

"ಹಾ!! ಮುಂದೆ ಸಾಗಲಿ ಕೆಲಸ."

ರಂಗಾಚಾರಿ ಕೆಲಸ ಬತ್ತರವಾಗಬೇಕು! ರಾತ್ರಿ ೧೧-೦೦ ಘಂಟೆಯಾಯಿತು!!

"ಅದೊ ಬಂತು ಚೇಳುಗಳು !!"—

ಸನ್ಯಾಸಿ ಮಸಿ ಮಂತ್ರಿಸಿದ

"ಚೇಳುಗಳು ಮಾಯವಾದವು!! — ಕೆಲಸ ಮುನ್ನಡೆಯಿತು"

"ಭೀಮರಾಯರೇ ಇನ್ನು ನೀವು ಧೈರ್ಯದಿಂದ ಇರಬೇಕು! ಎಷ್ಟೇ ಭೀಕರವಾದ ವಸ್ತುಗಳು ಕಂಡರೂ ಅಂಜಬಾರದು! ನಾನು ಇರುವ ತನಕ ನಿಮಗೆ ಅಂಜಿಕೆಯಿಲ್ಲ!! ಇಂತಹ ನೂರು ವನದೇವತೆ ನನ್ನ ಜೇಬಿನಲ್ಲಿದ್ದಾರೆ."

"ಅದೋ ಬಂತು"

"ಏನು ಬಂತು"

"ಸ್ವರ ಕೇಳಿ! ವಜ್ರದುಂಬಿ!! ನೋಡಿ ಸಮೀಪವೇ!!"

ಸನ್ಯಾಸಿಯು ಸಿಂಪೆಹಣ್ಣೊಂದರಲ್ಲಿ ಸೂಜಿ ಚುಚ್ಚಿ ನಾಲ್ಕು ಗೆರೆ ಎಳೆದು ಹೋಮದ ಮಧ್ಯದಲ್ಲಿ ಹಾಕಿದ!! ಕೈಯಿಂದ ವಿಭೂತಿ ಹಾರಿಸಿ ಮಂತ್ರೋಚ್ಚಾರ ಮಾಡಿದ!!

"ಹೋಯಿತು. ತುಂಬಿ ಹಾರಿಹೋಯಿತು ಅಬ್ಬ!!"

ನಡೆಯಲಿ ಕೆಲಸ!! ವೇಳೆ ೨-೩೦ ಆಯಿತು!!

ಕಟ್, ಕಟ್, ಕಟ್ ಪಟ್, ಸಟ್— ಕಲ್ಲು ಕುತ್ತರಿಸಿ ಮಣ್ಣು ಮರಳ ಹೊಂಡ ತೆಗೆಯುವ ಕೆಲಸದಲ್ಲಿ ಇಬ್ಬರು ಕೂಲಿಗಳು ಮಗ್ನರಾಗಿದ್ದರು!! ಊರಿನಲ್ಲಿ ಹೆಸರು ಪಡೆದ ಪುಂಡರ ಗುಂಪಿನ ಮುಂದಾಳು ಭೀಮರಾಯ ಅಂಜನ ಹಚ್ಚಿ ಕುಳಿತಿದ್ದ!! ೧೬ ವರ್ಷದಿಂದ ಛೂ! ಛೂ! ಮಂತ್ರ ಸಿದ್ಧಿ—ಪಡೆದ ಪ್ರಖ್ಯಾತ ಸನ್ಯಾಸಿಯೊಬ್ಬ ಅಡವಿಯ ಇಕ್ಕಟ್ಟು ದಾರಿಗುಂಟ ಹೊನ್ನಿನ ಮಡಿಕೆಯಿದ್ದ ಬಗೆ ತಿಳಿದು ಇವರನ್ನೆಲ್ಲ ಸೇರಿಸಿ 3 ತಿಂಗಳ ಶ್ರಮದಿಂದ ಇಂದದನ್ನು ಪಡೆಯಲು ಯೋಗ್ಯ ಕಾಲವೆಂದು ಗಣಿತಹಾಕಿ ಬಂದಿದ್ದ!! ಸಮೀಪದಲ್ಲಿ ವನದೇವತೆಯ ಗುಡಿಯೊಂದು ಹಾಳುಬಿದ್ದಿದ್ದು—ಅಲ್ಲಲ್ಲಿ ಛಿದ್ರ ವಿಚ್ಛಿನ್ನವಾದ ಮೂರ್ತಿಗಳು ಬಿದ್ದಿದ್ದವು—ಒಂದು ವಿಗ್ರಹ ಮಾತ್ರ ನಿರ್ವಿಕಾರ ಚಿತ್ತವಾಗಿ ನಾಲ್ಕು ಜನರು ಸೇರಿ ಶ್ರಮಿಸುತ್ತಿರುವದನ್ನು ನೋಡುತ್ತಿತ್ತು!! ಅದೇ ಗುಡಿಯ ಹಿಂಭಾಗದಲ್ಲಿಯ ಜಗಲಿಯಲ್ಲಿ ಭಿಕ್ಷುಕನೊಬ್ಬ ಮಲಗಿ ನಿದ್ರಿಸುತ್ತಲಿದ್ದ!! ಅವನ "ಗೊರಕೆ" ಶಬ್ದ ವನದೇವಿಗೂ ಕೇಳಿಸುತ್ತಿರಬೇಕು!! ಅವನಿಗೆ ತನ್ನ ಜೀವನದ ಚಿಂತೆಯೇ ಇಲ್ಲ!! ದೇವರಿಟ್ಟರೆ!! ನಾಲ್ಕು ಮನೆಯಲ್ಲಿ ಭಿಕ್ಷೆಯೆತ್ತಿ— ಬೆಳಗಾದರೆ— ಒಂದೆರಡು ಮನೆಗಳಲ್ಲಿ ಕಟ್ಟಿಗೆ ಒಡೆದು ತನ್ನ ಉದರ ಪೋಷಣ!!

ವನದೇವತೆ ಇತ್ತ ಕಾರ್ಯ ತತ್ಪರರಾದ ನಾಲ್ಕು ಜನರ ಹೃದಯದಿಂಗಿತ ತಿಳಿಯಲೆಳಸಿದಳು. ಒಬ್ಬ ಸನ್ಯಾಸಿ! ವಯಸ್ಸು ಇಳಿದಿದ್ದರೂ ಹಣದಾಸೆ!! ಇನ್ನೊಬ್ಬ ಭೀಮರಾಯ—ಪುಂಡ ವಿಷಯ ಲಂಪಟ!! ಹಣವನ್ನು ನೋಡಿದೊಡನೆ ಸನ್ಯಾಸಿಯೂ ಈ ಜಗತ್ತು ಮರೆಯಬೇಕು! ಇನ್ನುಳಿದಿಬ್ಬರು! ಅವರಿಗೆ ಸಂನ್ಯಾಸಿಯ ಮೇಲಾಗಲೀ ಭೀಮರಾಯನ ಮೇಲಾಗಲೀ ವಿಶ್ವಾಸವಿಲ್ಲ! ತಮ್ಮ ಸ್ವಾರ್ಥಕ್ಕಾಗಿ ಏನು ಮಾಡಲೂ ಹಿಂಜರಿಯುವವರಲ್ಲ! ಲೋಕಮಾತೆಯು ತನ್ನ ಮಡಿಲಲ್ಲಿ ಮಲಗಿ ನಿದ್ರಿಸುವ ೨೬ ವರ್ಷದಲ್ಲಿಯೇ ನಿರಪರಾಧಿಯಾಗಿದ್ದರೂ, ಅಪರಾಧಿಯೆಂದು ತೀರ್ಮಾನಿಸಲ್ಪಟ್ಟ ವೀರ ತರುಣನಾಗಿದ್ದರೂ ಕಾಲಾನುಗತ ಕ್ರಮಬದ್ಧನಾಗಿ ಭಿಕ್ಷುಕನಾದ "ದಾಸಯ್ಯ" (ಬಿಕ್ಷುಕನ ಹೆಸರು) ನತ್ತ ನೋಡಿದಳು! ಕರುಣಾಮಯಿಯೆದ್ದು ಬಂದವನ ಮೈದಡವಿದಳ!

ದಾಸಯ್ಯನೆದ್ದ! ಅವನಿಗೆ ಅಮಾನುಷ ಚೈತನ್ಯವುಂಟಾಗಿತ್ತು! ಎಂದಿನಂತೆ—ಪ್ರಾಕಾರವನ್ನು ಸುತ್ತಿ (ಗರ್ಭಗುಡಿಯ) ದೇವಿಗೆ ನಮಸ್ಕರಿಸಿದ ಆಶ್ಚರ್ಯ "ಇಂದು ದೇವಿಯೆಷ್ಟು ಪ್ರಕಾಶಯುಕ್ತಳಾಗಿದ್ದಾಳೆ! ಈಗ ವೇಳೆಯೆಷ್ಟು? ನಾನೇನು ಸ್ವಪ್ನ ನೋಡುತ್ತಿರುವೆನೆ!? ಹೊರಗೆಲ್ಲ ಕತ್ತಲೆ ಹೋ! ಇಂದು ಅಮಾವಾಸ್ಯೆ! ದೇವಿಯನ್ನು! ದೇವಿಯ ಸುಂದರ ಪ್ರತಿಮೆಯನ್ನು ನೋಡುತ್ತ ಕುಳಿತು ಬಿಟ್ಟ—! ಭಕ್ತನು ದೇವಿಯ ಆರಾಧನೆಯಲ್ಲಿ ತಲ್ಲೀನನಾಗಿದ್ದರೆ! ದೇವಿಯು ಭಕ್ತನ ಅದೃಷ್ಟ—ಚಿಂತನೆಯಲ್ಲಿ ತಲ್ಲೀನಳಾಗಿದ್ದಳು—

೦೦ ೦೦

"ಅದೊ ಬಂತು!"

"ಈಗೇನು ಬಂತು"

"ಘಟ ಸರ್ಪ! ಅಯ್ಯೋ ಭಯಂಕರ!"

ಸನ್ಯಾಸಿ ಹೋಮದಲ್ಲಿ ಕೋಳಿಯನ್ನು ಕಡಿದಿಕ್ಕಿದ!—

"ಅಯ್ಯೋ ಸನ್ಯಾಸಿ, ಹೆಡೆ ತೆಗೆಯಿತು! ಇದು ಹೋಗುವ ಲಕ್ಷಣವಿಲ್ಲ!"

"ಬೆಪ್ಪೆ ಹೆದರ ಬೇಡ! ಹೆದರಿದರೆ ನಾವು ನಾಲ್ವರೂ ಇಲ್ಲಿಯೇ ಸಮಾಧಿ. ಧೈರ್ಯದಿಂದಿರು"—

ಕಟ್ ಕಟ್ ಕಣ್! ಕಣ್! ಕಣ್—! ಹಾರೆಗೆ ಅದೇನೋ ತಗಲಿ ಕಣ್! ಕಣ್! ಸಪ್ಪಳವಾಯಿತು! ಸನ್ಯಾಸಿಯು ವಿಭೂತಿ ಮಂತ್ರಿಸಿ ಹಿಡಿದು, ತೆಂಗಿನ ಕಾಯಿಗೆ ಕಬ್ಬಿಣದ ಮೊಳೆ ಬಡಿದು ಇನ್ನೇನು ಹೋಮದಲ್ಲಿ ಹಾಕಬೇಕು! ಅಷ್ಟರಲ್ಲಿ ಕಣ್! ಕಣ್! ಶಬ್ದ ಕೇಳಿ,—ಭೀಮರಾಯನ ತಾಳ್ಮೆ ಹದಗೆಟ್ಟಿತು! ಅವನ ಮನಸ್ಸು ಚಂಚಲವಾಯಿತು! ಬೇರಾರಾದರೂ ಹೊನ್ನಿನ ಕೊಡ ಹಿಡಿದರೆ! ಅಪಟಾಯಿಸಿಕೊಂಡು ತನಗೆ ಕೊಡದೆ ಓಡಿದರೆ! ಸರಿ! ಅಂಜನಧಾರಿ, ಭೀಮರಾಯ ಕಣ್ ಸಪ್ಪಳವೆದ್ದ ಕಡೆ ಓಡಿದ್ದ! —ಘಟ ಸರ್ಪವು ಸನ್ಯಾಸಿಯ ಬಲ ಬಾಜುವನ್ನೆ ಭುಸ್ಸೆಂದು ಹೊಡೆಯಿತು! ಸರ್ಪನೆ ತಿರುಗಿ ಹೊಂಡವನ್ನು ನುಗ್ಗಿತು! ಭೀಮರಾಯ ಅಷ್ಟರಲ್ಲಿ ಕೊಡಕ್ಕೆ ಕೈಹಾಕಿದ್ದ!— ಭೀಮರಾಯನ ಕೈಮೇಲೆ ನಾಗಪ್ಪನವರ ಪೆಟ್ಟೊಂದಿಗೆ ಅವನು ಚೀರುತ್ತ ಸುಸುಳಿ ಹೊರಬಂದು ಬಿದ್ದ! ಕೆಲಸಗಾರರಿಬ್ಬರೂ ತಮ್ಮ ಕೈಯಲ್ಲಿದ್ದ ಹಾರೆಯನ್ನು ಹೊಂಡದಲ್ಲಿರಿಸಿ ಹೊನ್ನಿನ ಕೊಡ ಮೇಲೇಳಿಸುವವರಿದ್ದರು. ಆದರೆ ಅಷ್ಟರಲ್ಲಿಯೇ ಘಟ ಸರ್ಪವು ಅದೇ ಹಾರೆಯನ್ನೇರಿ ಒಂದು ಒಬ್ಬನನ್ನು ಕಡಿಯಿತು. ಇನ್ನೊಬ್ಬನು ತಡಮಾಡದೆ ತನ್ನ ಕೈಯಲ್ಲಿದ್ದ ಹಾರೆಯಿಂದ ಕೊಡಕ್ಕೆ ಕೈ ಹಾಕಿ ಎಬ್ಬಿಸಿಯೇ ಬಿಟ್ಟ—ಘಟ ಸರ್ಪವು ಅವನ ಕಾಲಿಗೆ ಕಡಿದಾಗಲೇ ಅವನು ಚೀರಿ ಕೆಳಗುರುಳಿದ!

ಕೊನೆಯ ಚೀತ್ಕಾರ ಕೇಳಿ ದಾಸಯ್ಯ ತನ್ನ ತಾ- ತಿಳಿದೆದ್ದ. ಕೂಗು ಬಂದತ್ತ ತನ್ನ ಕೈ ದೀವಿಗೆಯನ್ನು ಹಿಡಿದು ಹೊರಟ. ನಾಲ್ಕು ಮಾರು ಹೋಗುವಷ್ಟರಲ್ಲಿ ಸನ್ಯಾಸಿಯೊಬ್ಬನು ಅಡ್ಡ ಬಿದ್ದುದು ಕಾಣಿಸಿತು! ಅವನ ಮುಂದೆ ಹೋಮದ ಕುಂಡ. ಅದರಲ್ಲಿದ್ದ ಅಗ್ನಿದೇವನು ಕೊಟ್ಟ ಆಹುತಿ ನುಂಗಿ ಶಾಂತನಾಗಿದ್ದ. ಸಮೀಪದಲ್ಲೇ ನೋಡ ನೋಡುತ್ತ ಇನ್ನು ಮೂವರು ಭೂಶಾಯಿಯಾಗಿದ್ದಾರೆ! ದಾಸಯ್ಯ ಸನ್ಯಾಸಿಯ ನಾಡಿ ನೋಡಿದ; ಜೀವವೇ ಇಲ್ಲ! ಉಳಿದ ಮೂವರು— ಅವರದೂ ಅದೇ ಗತಿ!! ಇವರಿಗೇನಾಯ್ತು? ಸಮೀಪವರ್ತಿ ಕುಂಡದಲ್ಲೊಂದು ಹೊನ್ನಿನ ಕೊಡ ಝಗಝಗಿಸುತ್ತಿದೆ. ಇದೇನು? ಕೊಡವನ್ನೇನೋ ಶೋಧಿಸಿದ್ದಾರೆ. ಆದರೆ ಅದನ್ನು ಪಡೆಯಲು ಇವರು ಭಾಗಿಗಳಾಗಿಲ್ಲ! ಎನ್ನುತ್ತ ವನದೇವಿಯನ್ನು ಸ್ಮರಿಸಿ. ಹೊನ್ನಿನ ಕೊಡವನ್ನೆತ್ತಿದ! ಹೊರಡಿಗದ-ಅಪಾಯವೇನೂ ಇಲ್ಲ! ಹಾಗಾದರೆ ಇವರೆಲ್ಲರಿಗೇನಾಯ್ತು? ಸೂಕ್ಷ್ಮವಾಗಿ ಪರಿಶೀಲಿಸಿದ ಓಹೋ, ಸರ್ಪದ ವಿಷವೇರಿದೆ. ಏನೇ ಆಗಲಿ-ಕೈಗೆ ದೊರೆತದ್ದನ್ನು ಬಿಡುವದು ಒಳಿತಲ್ಲ. ದೇವಿ! ನೀನೇ ನನ್ನನ್ನು ಕಾಯ್ದು ಕೊಡು ಎನ್ನುತ್ತಾ ಹೊನ್ನಿನ ಕೊಡ ತೆಗೆದುಕೊಂಡು ದೇವಿಯ ಆಸ್ಥಾನಕ್ಕೆ ಬಂದ. ದೇವಾಲಯದ ಗರ್ಭಗುಡಿಯಲ್ಲಿಯೇ ಅದನ್ನಿಟ್ಟು ನಿದ್ದೆ ಹೋದ

ಮರುದಿನ ರಂಜಾಪುರದಲ್ಲೆಲ್ಲ ಗುಲ್ಲೆದ್ದಿತು. ಪುಂಡ ಪೋಕರ ಮುಂದಾಳು ಭೀಮರಾಯ ಅವನ ಜೋಡಿಗಳಿಬ್ಬರು ಹಾಗೂ ಗಡ್ಡದ ಸನ್ಯಾಸಿಯೊಬ್ಬ ಊರ ಹೊರಗಿನ ದೇಗುಲದ ಮುಂದಿನ ಸ್ಥಳದಲ್ಲಿ ಹಾವು ಕಡಿದು ಸತ್ತುಬಿದ್ದಿದ್ದಾರೆ.— ಹೋಮ ಮಂತ್ರಗಳಿಂದ ಗುಪ್ತಧನವನ್ನು ಶೋಧಿಸಹೋಗಿ ಪ್ರಾಣಹಾನಿ ಮಾಡಿಕೊಂಡಿದ್ದಾರೆ

ದಾಸಯ್ಯನೂ ಈ ಸುದ್ದಿ ಕೇಳಿದ. ಎಂದಿನಂತೆ ಅವನು ಊರಲ್ಲಿ ಕೆಲಸಮಾಡಿ ಹಿಂತಿರುಗುವಾಗ ಅವನಿಗೆ ಯೋಚನೆಯೊಂದು ಹೊಳೆಯಿತು! ಈ ಸನ್ಯಾಸಿ

(೧೧ನೇ ಪುಟ ನೋಡಿರಿ.)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ 10,000/- ಮತ್ತು ಮೇಲಣ
ಹಣಕ್ಕೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಲೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ರಾಮತೀರ್ಥ
ಬ್ರಾಹ್ಮೀ ತೈಲ

ತೈಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

Quality Air Cushion
Rubber Stamps
Crown
RUBBER STAMP CO.
PHONE 243
BALMATTA ROAD, MANGALORE

ಇತಿಹಾಸ ಪೃಷ್ಠ

ಅಕಬರನ ಕಾಲದ ಭಾರತ

ಸುಸಜ್ಜಿತ ರಾಜ್ಯ ವ್ಯವಸ್ಥೆಗೆ ಅಕಬರನು ಹೆಸರಾಗಿದ್ದಾನೆ.

(ಮುಂದುವರಿದುದು)

ಆಗ ಅಕಬರನ ವಿಶಾಲ ಸಾಮ್ರಾಜ್ಯವನ್ನು ೧೫ ಪ್ರಾಂತಗಳಾಗಿ ವಿಭಾಗಿಸಿದ್ದರು. ಕ್ರಿ.ಶ. ೧೫೮೦ರಲ್ಲಿ ಈ ಹದಿನೈದು ಪ್ರಾಂತಗಳಿಂದ ಒಟ್ಟು ೧೪,೧೯,೦೯,೫೭೭ ರೂಪಾಯಿಗಳ ಆದಾಯವಾಗುತಿತ್ತು. ೧೫೯೪ರಲ್ಲಿ ೧೬॥ ಕೋಟಿ ರೂಪಾಯಿ ಉತ್ಪತ್ತಿ ದೊರೆಯಿತು ಇದು ೧೭॥ ಕೋಟಿ ರೂ. ವರೆಗೆ ಹೆಚ್ಚುತ್ತಾ ಹೋಯಿತು. ಅಕಬರ ಬಾದಷಹನ ರಾಜ್ಯಾದಾಯವು ೪೨ ಕೋಟಿ ರೂ. ಆಗಿತ್ತೆಂದು ಹೇಳುತ್ತಾರೆ.

ಆಗ್ರಾ ಮೊದಲಾದ ೧೫ ಪ್ರಾಂತಗಳಿಗೂ ಒಬ್ಬೊಬ್ಬ ಸುಭೇದಾರನಿದ್ದು ಅವನು ಬಾದಷಹನ ಅಧಿಕಾರಕ್ಕೆ ಮಾತ್ರ ಒಳಗಾಗಿದ್ದನು. ಈ ಸುಭೇದಾರರ ಕೈಕೆಳಗೆ ಫೌಜುದಾರರೆಂಬ ಅಧಿಕಾರಿಗಳಿದ್ದು ಜನರ ದೇಹ ಹಣ–ಭೂಮಿಯ ರಕ್ಷಣೆಯ ಸಂಪೂರ್ಣ ಅಧಿಕಾರ ಇವರಿಗಿತ್ತು. ಬಾದಷಹನು ತಾನೇ ಸ್ವಂತ ೫ ಸಾವಿರ ಗಜ ಸೇನೆ ಮತ್ತು ೧೨ ಸಾವಿರ ರಾಹುತರ ಸೇನೆಯನ್ನಿಟ್ಟುಕೊಂಡಿದ್ದನು. ಅವನು ಹಿಂದುಗಳು ಆಡಂಬರ ಪ್ರಿಯರೆಂಬುದನ್ನು ತಿಳಿದುಕೊಂಡಿದ್ದನು ಅವರಿಗೆ ತಾನು ಹೋದಲ್ಲೆಲ್ಲಾ ತನ್ನ ಘೋಷಣೆಯನ್ನು ಪ್ರದರ್ಶಿಸುತ್ತಿದ್ದನು. ಅವನ ಶಿಬಿರದಲ್ಲಿ ಅನೇಕ ಸುಂದರ ಡೇರೆಗಳಿದ್ದು, ಒಂದು ಡೇರೆ ಎರಡು ಎಕ್ರೆಯಷ್ಟು ವಿಸ್ತಾರವಾಗಿತ್ತು.

ಕ್ರಿ.ಶ. ೧೫೭೭ರಲ್ಲಿ ಬಾದಷಹನು ಟಂಕಸಾಲೆ ಇಲಾಖೆಯೊಂದನ್ನು ವ್ಯವಸ್ಥೆಗೆ ತಂದು ಚೌಧರಿ ಎಂಬ ಸಣ್ಣ ಅಧಿಕಾರಿಗಳ ಕೈಯಲ್ಲಿಟ್ಟನು. ಅದು ಸರಿಯಾಗಿ ನಡೆಯದುದರಿಂದ ಅವನು ಕಾಬೂಲು, ಲಾಹೋರು, ಡಿಲ್ಲಿ, ಜಾನಪುರ, ಗೌಡ, ಅಹಮ್ಮದಾಬಾದು— ಈ ಆರು ಪಟ್ಟಣಗಳಲ್ಲಿ ಪ್ರತ್ಯೇಕ ಪ್ರತ್ಯೇಕ ಟಂಕಸಾಲೆಗಳನ್ನಿಡಿಸಿ ಅವುಗಳ ಮೇಲೆ ದೊಡ್ಡ ದೊಡ್ಡ ಅಧಿಕಾರಿಗಳನ್ನು ನಿಯಮಿಸಿ ಬಂಗಾರದ ಮೊಹರುಗಳನ್ನೂ, ಬೆಳ್ಳಿಯ ಚೌಕು ರೂಪಾಯಿಗಳನ್ನೂ ಹೊರಡಿಸಲಾರಂಭಿಸಿದನು. ಈ ಚಿನ್ನ-ಬೆಳ್ಳಿಯ ನಾಣ್ಯಗಳು ಆ ಕಾಲದ ಯುರೋಪು ಖಂಡದ ನಾಣ್ಯಗಳಿಗಿಂತ ತೂಕ, ಆಕಾರ ಮತ್ತು ಶುದ್ಧತೆಯಲ್ಲಿ ಮಿಗಿಲಾಗಿದ್ದುವು. ಅಕಬರನ ಕಾಲದ ನಾಣ್ಯಗಳಿಗೆ ಇನ್ನೊಂದು ವೈಶಿಷ್ಟ್ಯವಿದೆಯೆಂದು ಹೇಳುತ್ತಾರೆ. ಈಗಲೂ ಅಕಬರನ ಕಾಲದ ಚಿನ್ನದ ಮೊಹರನ್ನು ತೊಳೆದು ಆ ನೀರನ್ನು ಕುಡಿದರೆ ಹೊಟ್ಟೆನೋಯುತ್ತೊಡಗಿದ್ದ ಬಸುರಿ ಹೆಂಗಸರು ಬೇಗ ಹಡೆಯುತ್ತಾರೆಂಬ ನಂಬಿಕೆ ನಮ್ಮ ದೇಶದಲ್ಲಿದೆ.

ಅಕಬರನು ತನ್ನ ಪ್ರವಾಸದಲ್ಲಿ ಎಷ್ಟೋ ಬೀಳು ಬಿದ್ದಿದ್ದ ಭೂಮಿಯನ್ನು ನೋಡಿ, ಅಂತಹ ಭೂಮಿಯನ್ನು ಸಾಗುವಮಾಡುವುದಕ್ಕಾಗಿ ಹತ್ತು ಲಕ್ಷ ಟಂಕಗಳ ಅಥವಾ ಐವತ್ತು ಲಕ್ಷ ರೂ.ಗಳ ಹುಟ್ಟುವಳಿಯಾಗುವಷ್ಟು ಭೂಮಿಯನ್ನು ಕರೋಡಿಯೆಂಬೊಬ್ಬ ಅಧಿಕಾರಿಯ ಕೈಕೆಳಗೆ ಕೊಟ್ಟು ಆ ಭೂಮಿಯನ್ನು ಸಾಗುವಳಿ ಮಾಡುವಂತೆ ಕಟ್ಟುಮಾಡಿದನು.

ಅಕಬರನು ಪರಾಕ್ರಮ ಪ್ರಿಯನಾಗಿದ್ದನು. ಒಮ್ಮೆ ಬಡೋಜಿನ ನವಾಬನಿಗೂ ಅಕಬರನ ದಂಡಿಗೂ ಸರ್ನಾಳ (ಇದು ಮುಂಬಯಿ ಸಂಸ್ಥಾನದ ಖೈರಾ ಜಿಲ್ಲೆಗೆ ಸೇರಿದ ಆನಂದ ತಾಲ್ಲೂಕಿನ ಒಂದು ಪಟ್ಟಣ. ಇಲ್ಲಿ ಹತ್ತಿ ಹೆಚ್ಚಾಗಿ ಬೆಳೆಯುತ್ತದೆ.) ಎಂಬಲ್ಲಿ ಯುದ್ಧ ನಡೆಯಿತು. ಇದರಲ್ಲಿ ಭಗವಾನ್ ದಾಸನ ಪರಾಕ್ರಮಕ್ಕೆ ಮೆಚ್ಚಿ ಬಾದಷಹನು ಅವನಿಗೊಂದು ನಗಾರಿಯನ್ನೂ, ಒಂದು ನಿಶಾನಿಯನ್ನೂ ಬಹುಮಾನವಾಗಿ ಕೊಟ್ಟನು. ಇಷ್ಟು ದೊಡ್ಡ ಬಹುಮಾನ ಮುಂದೆ ಅಕಬರನ ಕಾಲದಲ್ಲಿ ಯಾವ ಭಾರತೀಯನಿಗೂ ದೊರೆಯಲಿಲ್ಲ.

ಅಕಬರನು ಪ್ರಜೆಗಳನ್ನು ನೋಯಿಸಲು ಹೆದರುತ್ತಿದ್ದನು. ಅವನು ತನ್ನ ದಂಡಿನವರು ಯಾವಕಾಲದಲ್ಲೂ ಜನರನ್ನು ಸುಲಿಯಬಾರದೆಂದೂ, ಬೆಳೆಗಳನ್ನು ಹಾಳುಮಾಡಬಾರದೆಂದೂ ಅಪ್ಪಣೆ ಮಾಡಿ ಅದನ್ನು ನಡೆಸಲು ತಕ್ಕ ಅಧಿಕಾರಿಗಳನ್ನು ನಿಯಮಿಸಿದ್ದನು. ದಂಡು ಪಾಳೆಯ ಬಿಟ್ಟೆಡೆಯಲ್ಲಿ ರೈತರಿಗಾದ ನಷ್ಟದ ಹಣವನ್ನು ಭಂಡಾರದಿಂದ ಕೊಡಿಸುತ್ತಿದ್ದನು. ಬಾದಷಹನು ಈ ತರದ ಪ್ರಜಾರಂಜನೆಯ ಕಟ್ಟಳೆಗಳಿಂದಲೇ ಪ್ರಜೆಗಳ ಮನಸ್ಸನ್ನು ಸೆಳೆದುಕೊಂಡು ಮೊಗಲರ ಆಳಿಕೆಯನ್ನು ಭಾರತದಲ್ಲಿ ನೆಲೆಗೊಳಿಸಿದನು.

ಆಗ ಕುಡಿತನವು ದೇಶದಲ್ಲಿ ತುಂಬಿತ್ತು. ಅಕಬರನ ಮಕ್ಕಳಲ್ಲಿ ಸಲೀಮನನ್ನು ಬಿಟ್ಟು ಮುರಾದ ಡೇನಿಯಲರು ಕುಡಿತದಿಂದಲೇ ಸತ್ತರು. ಸಲೀಮನೂ ದೊಡ್ಡ ಕುಡುಕನಾಗಿದ್ದನು. ಆದರೆ ಮುಂದೆ ನೂರ್‌ಜಹಾನಳು ಅವನ ಕುಡಿಕತನಕ್ಕೆ ಬಿರಿಯನ್ನು ಹಾಕಿದಳು. ಅಕಬರನಿಗೆ ಪ್ರಜೆಗಳಲ್ಲಿ ತುಂಬಾ ಪ್ರೀತಿಇತ್ತು. ಅವನು ಮರಣಕಾಲದಲ್ಲೂ ಸಲೀಮನೊಡನೆ 'ಪ್ರಜೆಗಳನ್ನು ಚೆನ್ನಾಗಿ ಕಾಪಾಡು' ಎಂದು ಹೇಳಿಯೇ ಸತ್ತನು. ನಿಜವಾಗಿಯೂ ಪ್ರಜಾರಂಜಕನಾದ ಈ ಬಾದಷಹನು ಇತಿಹಾಸದ ಯಾವ ದೊರೆಗೂ ಕಡಿಮೆಯಲ್ಲ.

ಅಕಬರನು ವಿಕ್ರಮಾದಿತ್ಯ ಹರ್ಷರಂತೆ ಹಲವು ವಿದ್ವಾಂಸರಿಗೆ ಆಶ್ರಯದಾತನಾಗಿದ್ದನು. ಅಬುಲ್ ಫಾಯಿಜಿ, ಅಬುಲ್ ಫಾಜಲ್, ಬಡಾನಿ, ಬೀರಬಲ, ತೋಡರ ಮಲ್ಲ ಮೊದಲಾದವರು ಇವನ ಆಸ್ಥಾನದ ರತ್ನಗಳಾಗಿದ್ದರು. ಬಾದಷಹನ ಕಾಲದಲ್ಲೇ ಯುದ್ಧ ಪ್ರವೀಣನಾಗಿದ್ದ ಬೈರಾಮ್ ಖಾನನ ಮಗ ಖಾನ್ ಖಾನನು ತುರ್ಕಿ ಭಾಷೆಯಲ್ಲಿದ್ದ ಬಾಬರನ ಚರಿತ್ರೆಯನ್ನು ಪಾರ್ಸಿ ಭಾಷೆಗೆ ಪರಿವರ್ತಿಸಿದನು. ನಿಜಾಮುದ್ದೀನ ಅಹಮದನು ತಬಾಖತ್–ಈ–ಅಕ್ಬರಿಯನ್ನೂ, ಅಬ್ದುಲ್ ಕಾದಿರ್ ಬಡಾನಿಯು ತರೀಖ-ಈ-ಬಡಾನಿ ಎಂಬ ಗ್ರಂಥವನ್ನೂ ಬರೆದುದಲ್ಲದೆ, ಸಂಸ್ಕೃತ ರಾಮಾಯಣವನ್ನೂ ಮಹಾಭಾರತದ ಕೆಲವು ಭಾಗಗಳನ್ನೂ ಪಾರ್ಸಿ ಭಾಷೆಗೆ ಪರಿವರ್ತಿಸಿದನು. ಅಬುಲ್ ಫಾಜಲ್ಲನು ಅಯಿನ್-ಅಕ್ಬರಿಯನ್ನೂ, ಅಬುಲ್ ಫಾಯಿಜಿಯು ಬೈಬಲ್ಲನ್ನೂ ಭಾಷಾಂತರಿಸಿದರು. ಆ ಕಾಲದಲ್ಲಿ ಬಾದಷಹನು ಓದಿಸಿ ಕೇಳದ ಶಾಸ್ತ್ರೀಯ ಐತಿಹಾಸಿಕ ಮತ್ತು ತಾತ್ವಿಕ ಗ್ರಂಥವೊಂದೂ ಇರಲಿಲ್ಲವೆಂದು ಅಬುಲ್ ಫಾಜಿಲ್ಲನು ಹೇಳಿದ್ದಾನೆ. ಅವನಿಗೆ ಯುದ್ಧ ಸಾಮಗ್ರಿಗಳಾದ ತುಬಾಕಿಗಳನ್ನು ನಿರ್ಮಾಣ ಮಾಡುವ, ತೋಪುಗಳನ್ನು ರಚಿಸುವ ಜ್ಞಾನವು ಕೂಲಂಕಷವಾಗಿತ್ತೆಂದೂ, ಶಿಲ್ಪ ವಿದ್ಯೆಯಲ್ಲಿ ಸೀಮಾ ಪುರುಷನಾಗಿದ್ದನೆಂದೂ ಅಯಿನ್ ಅಕ್ಬರಿಯಲ್ಲಿದೆ.

ಬಾದಷಹನ ಆಸ್ಥಾನ ಕವಿಯೂ, ವೈದ್ಯನೂ ಆಗಿದ್ದ ಸುಫಿಧರ್ಮದವನಾದ ಅಬುಲ್ ಫಾಯಿಜಿಯು ೧೦೭ ಗ್ರಂಥಗಳನ್ನು ಬರೆದಿದ್ದನು. ಇವನ ಪುಸ್ತಕ ಭಂಡಾರದಲ್ಲಿ ೪೩೦೦ ಪುಸ್ತಕಗಳಿದ್ದುವು. ಅಬುಲ್ ಫಾಯಿಜಿಯ ತಮ್ಮನಾದ ಅಬುಲ್ ಫಾಜಲ್ಲನು ಬಾದಷಹನ ತೀರಾ ಆಪ್ತನೂ ವಿದ್ವಾಂಸನೂ ಆಗಿದ್ದನು. ಬಾದಷಹನಿಗೆ ಮತದ ದುರಭಿಮಾನವಿರದುದಕ್ಕೆ ಇವನೇ ಕಾರಣನಾಗಿದ್ದನು. ಕ್ರಿ. ಶ. ೧೫೮೨ರಲ್ಲಿ ಅಕ್ಷೇವಿದ ಎಂಬ ಕ್ರೈಸ್ತ ಪಾದ್ರಿಯು ಬಾದಷಹನ ವ್ಯಭಿಚಾರದ ಕುರಿತು ಟೀಕಿಸಲು ಅವನು ಸಿಟ್ಟಾಗದೆ ಸುಳ್ಳು ನೆವನವನ್ನು ಹೇಳಿ ಕೊನೆಗೆ ಆ ಪಾಪ ವಿಮೋಚನೆಗಾಗಿ ಕೆಲವು ದಿನ ಉಪವಾಸಮಾಡಿದನು. ಸ್ತ್ರೀಪಾಶದಲ್ಲಿ ಋಷ್ಯಶೃಂಗ, ವಿಶ್ವಾಮಿತ್ರರಂತಹ ಸಂಯಮಿಗಳೂ ಬಿದ್ದು ನರಳಿದ್ದರೆಂದ ಮೇಲೆ ಅಕಬರನು ಕ್ಷಮ್ಯನೆಂದ ಹೇಳಿದರೆ ಮಹಾ ಅಪರಾಧವಾಗಲಾರದು.

ಆಗ ಸರಕಾರದಿಂದ ಅಧ್ಯಾಪಕರಿಗೂ, ವಿದ್ವಾಂಸರಿಗೂ, ಸನ್ಯಾಸಿಗಳಿಗೂ ವೈರಾಗಿಗಳಿಗೂ, ಬಡವರು ಮತ್ತು ಅಶಕ್ತರಿಗೂ, ಸತ್ಕಾರ್ಯದಲ್ಲಿ ಸಂಪತ್ತನ್ನು ಹೋಗಲಾಡಿಸಿಕೊಂಡವರಿಗೂ ಹಣ ದೊರೆಯುತ್ತಿತ್ತು. ಅಕಬರನು ಯಾವ ಮತವನ್ನೂ ತಿರಸ್ಕರಿಸುತ್ತಿರಲಿಲ್ಲ. ವಿಧವೆಯರು ಪುನರ್ವಿವಾಹ ಮಾಡಿಕೊಳ್ಳಬಹುದೆಂದೂ, ಹುಡುಗರು ೧೬ ವರ್ಷದ ಅನಂತರವೂ, ಹುಡುಗಿಯರು ಹದಿನಾಲ್ಕು ವರ್ಷದ ಮೇಲೂ ಮದುವೆಗೆ ಯೋಗ್ಯರಾಗುವರೆಂದು ನಿರ್ಣಯ ಮಾಡಿದ್ದನು. ಗೋವಧೆ ಮಾಡಬಾರದೆಂದು ತನ್ನ ರಾಜ್ಯದಲ್ಲಿ ಅಪ್ಪಣೆ ಮಾಡಿದ್ದನು. ಅವನಿಗೆ ಜನರ ಉಪವಾಸ, ಜಪತಪ, ತೀರ್ಥಯಾತ್ರೆ—ಇವುಗಳೆಲ್ಲಾ ಸೇರುತ್ತಿರಲಿಲ್ಲ. ಮುಸ್ಲಿಮರಿಗೆ ೧೨ ವರ್ಷಗಳ ನಂತರ ಮುಂಜಿ ಮಾಡಬೇಕೆಂದೂ, ಉಷ್ಣ ದೇಶದಲ್ಲಿ ಗಡ್ಡದ ಅವಶ್ಯಕತೆ ಇಲ್ಲವೆಂದೂ ತನ್ನ ಮುಸ್ಲಿಮ್ ಪ್ರಜೆಗಳಿಗೆ ಅಪ್ಪಣೆ ಮಾಡಿದ್ದನು. (೧೫೯೨). ಇದರಿಂದ ಮುಸ್ಲಿಮರು ತುಂಬಾ ತಲೆ ಬಿಸಿಮಾಡಿಕೊಂಡರು!

(ಮುಂದುವರಿಯುವುದು.)

--ಯು. ನಾ. ಉಡುಪ, ವಿದ್ವಾನ್.

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಆಲಿಂಗನ

ಅರ್ಧನಾರೀಶ್ವರನ ದೃಢಾಲಿಂಗನದ ಮಹಿಮೆ

ಏಳು ವಿಧದ ಆಲಿಂಗನಗಳಿವೆ. ಅವಾವುವೆಂದು ನಿಮಗೆ ತಿಳಿಯಬೇಕೆ?

ಬೆಳಗಾಯಿತು! ಪೂರ್ವಕ್ಕೆ ಆಗ ತಾನೇ ಕೆಂಪು ವರ್ಣ ಆವರಿಸಿತ್ತು. ರಾತ್ರಿಯಲ್ಲಿ ಆಗಸದ ದೃಢಾಲಿಂಗನದಲ್ಲಿ ಸಂಬದ್ಧಳಾದ ನಿಶಾದೇವಿಯ ವಿರಹಾಶ್ರುಗಳೇ ಹರಿದು ಬೀಳುತ್ತಿರುವಂತೆ, ಒಂದೊಂದಾಗಿ ಆಕಾಶದ ಎಲ್ಲ ತಾರೆಗಳು ಅದೃಶ್ಯವಾಗುತ್ತಲಿವೆ!

ಬಹು ದೂರದಲ್ಲಿ ಹಬ್ಬಿದ ವಿಶಾಲ ಸಾಗರದ ಚಂಚಲ ಜಲತೆರೆಗಳು ದಂಡೆಗೆ ಬಂದು ಪುನಃ ಪುನಃ ಆಲಿಂಗನ ಕೊಡುತ್ತಲಿವೆ. ಹರ್ಷೋತ್ಫುಲ್ಲವಾಗಿ ಅತ್ತಿತ್ತ ಓಡಾಡುತ್ತಿವೆ! ಮತ್ತು ನೊರೆಯಿಂದ ತುಂಬಿದ ದಂಡೆ? ಆ ದಂಡೆ ಸಹ ತೆರೆಗಳ ಕೋಮಲ ಅಂಗಸ್ಪರ್ಶದಿಂದ ಪುಲಕಿತವಾಗಿ ಅತ್ಯಾನಂದದಲ್ಲಿ ನಗುತ್ತಿದೆ! ದಂಡೆ ಮತ್ತು ತೆರೆಗಳು! ಒಬ್ಬರೊಬ್ಬರ ವಿರಹ ಅವಕ್ಕೆ ಗೊತ್ತಿಲ್ಲ ಒಬ್ಬರೊಬ್ಬರ ಆಲಿಂಗನದಲ್ಲಿ ಸದಾಕಾಲವೂ ಮಗ್ನ! ಗಗನ ಚುಂಬಿತ ಗಿರಿ ಶಿಖರಗಳಿಗೆ ಮುಕ್ತ ಆಲಿಂಗನವನ್ನೀಯುವ ಗಾಳಿ ಮದಮತ್ತವಾಗಿ ಸೊಂಯ್‌ಗುಡುತ್ತಿದೆ! ಪ್ರಣಯೋನ್ಮತ್ತವಾಗಿ ತನ್ನ ಬಾಹುಗಳನ್ನು ಅದು ಪ್ರಿಯಕರನ ಸುತ್ತಲೂ ಹಬ್ಬಿಸಿದೆ. ಪ್ರೀತಿಯ ಹಿತಗುಜ ಮಾಡುತ್ತಾ ಅದು ಅವನ ಸುತ್ತಲೂ ಮೋಹದ ಬಲೆಯನ್ನು ಬೀಸುತ್ತಲಿದೆ!

ತನ್ನ ಕೆಂಪು ಆರಕ್ತ ವಸ್ತ್ರವನ್ನು ಮೆಲ್ಲಗೆ ಸರಿಸುತ್ತ "ಉದಯಾಚಲ" ಪರ್ವತದ ಮರೆಯಿಂದ ಮೆಲ್ಲ ಮೆಲ್ಲಗೆ ಹೆಜ್ಜೆಯನ್ನಿಡುತ್ತ ಆ ಸುಂದರ ತರುಣಿ ಯಾರೋ ಬರುತ್ತಿರುವಳು?.. ಆ ಅಪ್ರತಿಮ ಸುಂದರಿಯ ಬೆನ್ನಟ್ಟಿರುವ ಆ ಯುವಕ ನಾರು? ಎಷ್ಟು ಸುಂದರ—ತೇಜಸ್ವೀ ಇವನು ಇವನು! ಕಾದ ಸುವರ್ಣದ ಗೋಳದಂತೆ ಎಷ್ಟು ತೇಜಸ್ವಿಯಾಗಿದ್ದಾನೆ! ಅವನೇನು ತನ್ನ ಪ್ರಿಯತಮೆಯ ಆಲಿಂಗನಕ್ಕಾಗಿ ಆತುರನಾಗಿದ್ದಾನೆಯೋ? ಬಾಗೀರಥಿಯ ದಂಡೆಯ ಮೇಲೆ, ಆ ಯುವಕ-ಯುವತಿಯರ ಪ್ರಣಯ ಕ್ರೀಡೆ ನೋಡಿ ವಿಸ್ಮಿತ ಹಾಸ್ಯಮಾಡುತ್ತ ನಿಂತ ಆ ತೇಜಸ್ವಿ ವ್ಯಕ್ತಿಯಾರು? ಅರೇ ಇವರಾರು—ಜಿತೇಂದ್ರಿಯ ಋಷಿಯಂತೆ ತೋರುತ್ತಾರೆ? ಆದರೆ ಇವರು ಸಹ ತಮ್ಮ ಸ್ನಾನ-ಸಂಧ್ಯಾವಂದನೆಗಳನ್ನೂ, ಜಪ-ತಪವನ್ನೂ ಮರೆತು ಅವರ ಆಹ್ಲಾದದಾಯಕ ಪ್ರಣಯ ಕ್ರೀಡೆಯನ್ನು ಕುತೂಹಲದಿಂದ ನೋಡುತ್ತಿದ್ದಾರೆ. ಅವರ ತುಟಿಗಳು ಪ್ರಸ್ಫುರಿತವಾಗುತ್ತಿವೆ...ಅವರು ಹಾಡುತ್ತಿರುವರು—,

"ಸೂರ್ಯೋ ದೇವಿಂ ಉಷಸಂ ರೋಚಮಾನಾಂ"
"ಮರ್ತ್ಯೋ ನ ಯೋಷಾಂ ಅಭ್ಯೇತಿ ಪಶ್ಚಾತ್"

ಇದೇನು? ವಿಶ್ವದ ಪ್ರಾಂಗಣದಲ್ಲಿ ಸ್ವಚ್ಛಂದವಾಗಿ ಪ್ರಣಯ ಕ್ರೀಡೆ ಮಾಡುವ ಇವರು ಸೂರ್ಯ ಮತ್ತು ಉಷಾದೇವಿಯರಿದ್ದಾರೆ! ಸೂರ್ಯದೇವರಿಗೆ ಉಷೆಯ ದೃಢಾಲಿಂಗನವು ಒಂದೇ ಸಾಕು! ಮತ್ತು ಇದಕ್ಕಾಗಿ ಅನಾದಿಕಾಲದಿಂದಲೂ ಅವನು ಉಷಾ ದೇವಿಯ ಬೆನ್ನುಹತ್ತಿದ್ದಾನೆ. ಕೇವಲ ಒಂದು ಆಲಿಂಗನಕ್ಕಾಗಿ ಅವನ ಹೃದಯವು ದಾಹಗೊಂಡಿತು. ಮತ್ತು ಈಗಂತೂ ಆ ದಾಹದಿಂದ ಅವನು ಭಯಂಕರ ಉರಿದು ಸುಡುತ್ತಿದ್ದಾನೆ! ಯಾರು ಬಲ್ಲರು ಆಲಿಂಗನಕ್ಕಾಗಿ ಜನವೆಲ್ಲ ತಡಪಡಿಸುವ ತಪ್ತ ಸೂರ್ಯನಿಗೆ ಉಷಾ ಎಂದು ಆಲಿಂಗನ ಕೊಡುವಳು?

"ಏಕಾಕೀ ನ ರಮತೇ" ಎಂದು ಉಚ್ಚರಿಸುವ ಮಂತ್ರದೃಷ್ಟಾರ ಋಷಿ ನಿಜವಾಗಿ ಆಲಿಂಗನದ ಇಚ್ಛೆಗೆ ತಡೆಯನ್ನು ಹಾಕಲು ಬಾರದ್ದರಿಂದ ವಿಹ್ವಲನಾಗಿ ತಡಪಡಿಸಬೇಕು ಆಲಿಂಗನ ತೆಗೆದುಕೊಳ್ಳಲು ಯಾರೂ ಸನಿಹದಲ್ಲಿರದ ಮೂಲಕ "ಏಕಾಕೀ ನ ರಮತೇ' ಎಂದು ಅವರು ಹೃದಯ ಸುಪ್ತ ಇಚ್ಛಾವಾಣಿ ದ್ವಾರದಿಂದ ಸಾಕಾರವಾಗಿರಬಹುದು.

ನನ್ನ ಈ "ಆಲಿಂಗನ" ಪುರಾಣಕ್ಕೆ ತಾವು ಎಂದೂ ಸಹಮತ ಕೊಡಲಿಕ್ಕಿಲ್ಲ. ಆದರೆ ನನಗಂತೂ ಇದರಲ್ಲಿ ಅಸಂಖ್ಯ ದುಃಖದ ವಿಸ್ಮರಣೆಯನ್ನು ಉದ್ಭವಿಸುವ ಅಗಂಧ ಶಕ್ತಿಯ ಪ್ರತ್ಯಯ ಬರುತ್ತಿರುವದು.

"ಸತ್ಯಂ ಶಿವಂ, ಸುಂದರಂ'ದ ಅನುಭೂತಿ ನನಗೆ ಆಲಿಂಗನದಲ್ಲಿ ಆಗುತ್ತದೆ —ಪ್ರಪಂಚದಲ್ಲಿ ಅಗಣಿತ ದುಃಖಗಳ ಮೇಲೆ ಒಂದೇ ಒಂದಾದ "ರಾಮಬಾಣ ಔಷಧ" ವಿರುತ್ತದೆ. ಅದೆಂದರೆ—"ಆಲಿಂಗನ". ಒಂದು ಆಲಿಂಗನಕ್ಕಾಗಿ ಕುಬೇರನ ಗಡಗಂಜ ಸಂಪತ್ತಿಯನ್ನು ಸಹಜವಾಗಿ ನಷ್ಟಪಡಿಸಬಹುದು!....

ಸೃಷ್ಟಿ ಉತ್ಪತ್ತಿಯು ಪ್ರಕೃತಿ ಸಹ ಆಲಿಂಗನದ ಒಂದು ಆಟವಲ್ಲವೇ? ಸರ್ವಪ್ರಥಮ ಪೃಥ್ವಿಯು, ಜಲಕ್ಕೆ ಮುಕ್ತ ಆಲಿಂಗನ ಕೊಟ್ಟದ್ದಕ್ಕೋಸ್ಕರವೇ ಕ್ರಮಶಃ ಜಲಚರ ಪ್ರಾಣಿ ಹಾಗೂ ಇಂದಿನ ಮಾನವನ ನಿರ್ಮಾಣವಾದದ್ದು" ಉತ್ಕ್ರಾಂತಿವಾದದ ಈ ತತ್ವವು ಆಲಿಂಗನದ ಮಹಾತ್ಮೆಯನ್ನು ಹೊಗಳುತ್ತಲಿದೆ.

ಒಂದಾನೊಂದು ಕಾಲದಲ್ಲಿಯಂತೂ ಭಾರತದಲ್ಲಿ "ಆಲಿಂಗನ" ಇದು ವಿನಿಮಯಗಳ (ದೇವಿ ದೇವಿಯರ) ಸಹಮೂಧ್ಯಮವಾಗಿತ್ತು. ಯಾವಳೋ ಒಬ್ಬ ನಾಯಕಿಯಂತೆ, ಜೂಜಾಡುವಾಗ ಪಕ್ಕದಲ್ಲಿದ್ದ ಎಲ್ಲ ಸಂಪತ್ತಿ ಮುಗಿಯುತ್ತಲೇ ಧನಪಟ್ಟೀ ತನ್ನ ಒಂದು ಮುಕ್ತ ಆಲಿಂಗನವನ್ನು ಆಟದಲ್ಲಿ ಹಚ್ಚಿದಳು!

"ಸ್ತನಾವಪೀಂಡ ಆಶ್ಲೈಷ್ಟೇಃ ಕೃತೋ ದ್ಯೂತೇ ಪಣಸ್ತಯಾ"

ಇದನ್ನು ಓದುತ್ತ ತಾವು ನಿಶ್ಚಿತವಾಗಿ ತಮ್ಮ ದೈವಕ್ಕೆ ದೋಷಕೊಡುತ್ತ ಅನ್ನುವಿರಿ, "ಹಾದೈವವೇ! ನಾವೇಕೆ ಆ ಕಾಲದಲ್ಲಿ ಜನ್ಮತಾಳಿಲ್ಲ?'

ವಿರಾಗಿ ಶುಕ್ರಾಚಾರ್ಯರ ಪೌರುಷತ್ವಕ್ಕೆ ಆಹ್ವಾನವೀಯುವ ಸ್ವರ್ಗಲೋಕದ ದಿವ್ಯ ಅಪ್ಸರೆ ರಂಭೆ ಇವಳು ತೆಗೆದ ಆಲಿಂಗನದ ವಿಷಯವಾಗಿ ಈ ಉದ್ಗಾರ ವಸ್ತುತಃ ಎಷ್ಟು ಸಾರ್ಥವಾಗಿರುತ್ತದೆ—

"ಪಿನಸ್ತನಿ ಚಂದನ ಚರ್ಚಿತಾಂಗೀ
ವಿಲೋಲನೇತ್ರಾ ತರುಣಿ ಸುಶೀಲಾ!"
ನಾಲಿಂಗಿತಾ ಯೇನ ದೃಢಂ ಭುಜಾಭ್ಯಾಮ್,
ವೃಥಾ ಗತಂ ತಸ್ಯ ನರಸ್ಯ ಜೀವಿತಮ್॥

ಇಂದಿನ ತನಕ ಅನೇಕ ಆಲಿಂಗನಗಳನ್ನು ಕೊಟ್ಟಿರಬಹುದು, ಮತ್ತು ಮುಂದಾದರೂ ಅಸಂಖ್ಯವಾಗಿ ಕೊಡಲ್ಪಡುವವು. ಆದರೆ ಸತ್ಯಾರ್ಥದಿಂದ ಕೊಟ್ಟ ಯಥಾರ್ಥ ಆಲಿಂಗನ ಇಂದಿನ ತನಕ ಒಂದೇ ಆಗಿರುವದು. ಅದೆಂದರೆ—"ಶಿವ-ಪಾರ್ವತಿ"ಯರದು! ಶಿವ-ಪಾರ್ವತಿಯರು ಒಬ್ಬರಿಗೊಬ್ಬರು ಕೊಟ್ಟ ಮುಕ್ತಾಲಿಂಗನದಲ್ಲಿ ಇಬ್ಬರೂ ತಮ್ಮ ಸತ್ವ ಮರೆತು, ಮತ್ತು ಅದೇ ದಿವಸದಿಂದ ಅವರಿಗೆ ಇಬ್ಬರು ಭಿನ್ನ ವ್ಯಕ್ತಿಗಳೆಂದು ತಿಳಿಯದೇ "ಅರ್ಧನಾರೀಶ್ವರ" ಎಂಬ ದಿವ್ಯ ಸ್ವರೂಪದಲ್ಲಿ ಪ್ರಪಂಚವು ಗುರುತಿಸಲು ತೊಡಗಿತು.

ಒಂದಾನುವೇಳೆ ಮಿತ್ರ ಅಥವಾ ಗೆಳತಿ ಕೊಟ್ಟ ಆನಂದದ ಆಲಿಗಂನ ತಾವು ಶಬ್ದಗಳಿಂದ ವ್ಯಕ್ತಪಡಿಸಲು ಸಮರ್ಥರಿರುವಿರಿ ಆದರೆ ನವ-ಪ್ರಾಸ ಉದಂದಲ್ಲಿ ಹೊತ್ತಂಥ ನವಜಾತ ಶಿಶುವಿಗೆ ಪ್ರಥಮತಃ ಕೊಟ್ಟ ಮಾತೆಯ ಆಲಿಂಗನದ ಮಧುರ ಅನುಭೂತಿ ತಾಯಿಯ ಹೊರತು ಬೇರೆಯಾರು ಅನುಭವಿಸಬಲ್ಲರು? ಆ ವೇಳೆಯ ಮಾತೆಯ ಆನಂದ ಶಬ್ದಗಳಿಂದ ವರ್ಣಿಸುವದು ಅಸಕ್ಯವಾಗಿದೆ

ಸಂಸ್ಕೃತ ಸಾಹಿತ್ಯವಂತೂ ಅನಾದಿ ಕಾಲದಿಂದಲೂ "ಆಲಿಗಂನ"ದ ಮಹತ್ವವನ್ನು ವರ್ಣಿಸುತ್ತ ಬಂದಿರುವದು. ಶಾಸ್ತ್ರೀಯ ದೃಷ್ಟಿಯಿಂದ ಸಂಸ್ಕೃತ ಸಾಹಿತ್ಯದಲ್ಲಿ "ಆಲಿಂಗನ"ದ ಏಳು ಭಿನ್ನ-ಭಿನ್ನ ಪ್ರಕಾರಗಳಿರುತ್ತವೆ. ಅವು ಯಾವವೆಂದರೆ—,

(೧) "ಆಮೋದಾಲಿಂಗನ"
(೨) "ಮುದಿತಾಲಿಂಗನ"
(೩) "ಪ್ರೇಮಾಲಿಂಗನ"
(೪) "ಮಾನಸಾಲಿಂಗನ"
(೫) "ರುಚ್ಯಾಲಿಂಗನ"
(೬) "ಮದನಾಲಿಂಗನ"

(೭) "ವಿನೋದಾಲಿಂಗನ" ಈ 'ಆಲಿಗಂನ'ಗಳ ಭಿನ್ನ—ಭಿನ್ನ ಪ್ರಕಾರದ ಅರ್ಥ ಅವುಗಳ ನಾಮಾಭಿಧಾನದಿಂದಲೇ ವ್ಯಕ್ತವಾಗುತ್ತಿವೆ. ರಸಿಕ ವಾಚಕರಿಗೆ ಅವುಗಳ ವಿವರಣೆ ಮಾಡಿ ಹೇಳುವದು ಅವಶ್ಯಕತೆಯಿಲ್ಲ. ಆಂಗ್ಲ ಸಾಹಿತ್ಯದಲ್ಲಿ ಬಹು ಪ್ರಸಿದ್ಧಿ ಪಡೆದ ಕವಿ "ಶಿಲ್ಲಿ" ಸಹ ತನ್ನ ಪ್ರೇಯಸಿಗೆ "ಆಲಿಂಗನ"ದ ವಿಮರ್ಶೆ ಮಾಡುತ್ತಿರುವಾಗ ಹೇಳುತ್ತಾನೆ—, "ಸರ್ವ ಚರಾಚರ ಸೃಷ್ಟಿ ಒಬ್ಬರೊಬ್ಬರ "ಆಲಿಂಗನ"ದಲ್ಲಿ ಮಗ್ನವಾಗಿರುವಾಗ, ನಾನೂ ಸಹ ನಿನಗೆ "ಆಲಿಂಗನ" ಏಕೆ ಕೊಡಬಾರದು?"

ಆದಕಾರಣ ಆಲಿಂಗನವು ಕೇವಲ ಕಾಮೋದ್ರೇಕದ ಭಾವನೆಯಾಗಿರದೇ ವಿವಿಧ ಪ್ರಕಾರದಲ್ಲಿ ಆದರ ಭಾವನೆಗಳಿಂದ ಜಗತ್ತಿನ ಮಾನವಕೋಟಿಯು ವರ್ತಿಸುವದು.

—ರಾಮಕೃಷ್ಣ ಎ ಪೈ

ಮದುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ,
'ಮದುವೆ ಸೀರೆ'
ಇದೀಗ ಪ್ರಕಟವಾಗಿದೆ!
ಜೀವನದ ಬೇರೆ ಘಟನೆಗಳನ್ನು ಹೃದಯ
ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ
ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು
ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್
ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ, ಉಡುಪಿ (ದ. ಭಾರತ)

ಉಡುಪಿ ಕರ್ನಾಟಕ ಸಂಘದ
ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ ಎ)
ಸಾಮಾನ್ಯ ರೋಗಗಳು
(ಡಾ ಕೆ.ಎಲ್. ಐತಾಳ, ಎಂ ಬಿ ಬಿ ಎಸ್.)
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ

ಕ್ಷೇತ್ರ ಮಹಾತ್ಮ್ಯೆ

ಮೋಕ್ಷದಾಯಕವೆನಿಸಿದ ಸಪ್ತ ಪುಣ್ಯ ಸ್ಥಳಗಳು

ಭಾರತದ ಅವಿಭಾಜ್ಯತೆಯನ್ನು ಈ ನಗರಗಳು ಎತ್ತಿ ತೋರಿಸುತ್ತವೆ.

ಭಾರತೀಯ ಸಂಸ್ಕೃತಿಯಲ್ಲಿ ಮೋಕ್ಷ ನೀಡಬಹುದಾದ ಏಳು ನಗರಗಳು ಇವೆಯೆಂದು ತಿಳಿಯಲಾಗುತ್ತದೆ. ಪ್ರಾಚೀನ ಭಾರತದಲ್ಲಿ ಭಾರತೀಯರೆಲ್ಲರೂ ವರ್ಷದ ಕೆಲವೊಂದು ಸಮಯಗಳಲ್ಲಿ ತೀರ್ಥ ಕ್ಷೇತ್ರ ಸಂದರ್ಶನೆ ಮಾಡುತ್ತಿದ್ದರು. ಮುಖ್ಯವಾಗಿ ವೃದ್ಧಾಪ್ಯದ ಕಾಲದಲ್ಲಿ ಇಂತಹ ತೀರ್ಥಾಟನೆ ಮಾಡುವುದು ಜೀವನದ ಒಂದು ಅಂಗವಾಗಿಯೇ ಇತ್ತು. ಇದರಿಂದ, ಪ್ರತಿಯೊಬ್ಬನೂ ತನ್ನ ಬದುಕಿನಲ್ಲಿ ಒಂದು ಸ್ವಲ್ಪ ಭಾಗವನ್ನು ಆಧ್ಯಾತ್ಮಿಕ ಚಿಂತನೆಯಲ್ಲೇ ತಲ್ಲೀನನಾಗಿ ಆತ್ಮ ಮತ್ತು ಶರೀರಗಳೆರಡನ್ನೂ ಅದರಲ್ಲಿಯೇ ತತ್ಪರಗೊಳಿಸುವ ಅವಕಾಶ ಪಡೆಯುತ್ತಿದ್ದನು.

ವರ್ಷದ ಹನ್ನೆರಡು ತಿಂಗಳುಗಳಲ್ಲಿ ಕೆಲವು ಮಾಸಗಳು ಧನಸಂಪಾದನೆಗಾಗಿ ನಿಯತವಾಗಿದ್ದು, ಇನ್ನು ಕೆಲವು ತಿಂಗಳುಗಳು ಮನೆಯ ಇತರ ಕಾರ್ಯಗಳಿಗಾಗಿ ಮೀಸಲಾಗಿಡಲ್ಪಡುತ್ತಿದ್ದವು. ಅಲ್ಲದೇ ತಮ್ಮ ವ್ಯವಸಾಯವನ್ನು ನಿಲ್ಲಿಸಿಬಿಡುವ ತಿಂಗಳುಗಳೂ ಇದ್ದುವು. ಇಂತಹ ವಿರಾಮದ ದಿನಗಳಲ್ಲಿ ಸಮಯವನ್ನು ವ್ಯರ್ಥವಾಗಿ ಹಾಳುಗೆಡವದಂತೆ ಮಾಡಲು ಪ್ರಾಚೀನ ಭಾರತೀಯ ಮಹಾಪುರುಷರು ಧರ್ಮ ಕಾರ್ಯಗಳಿಗಾಗಿ ಈ ಸಮಯ ವಿನಿಯೋಗಿಸಲ್ಪಡುವಂತೆ ನಿಯಮಿಸಿದ್ದರು.

ಹೀಗೆ ಪ್ರತಿ ವರ್ಷದಲ್ಲಿಯೂ ಮಳೆಗಾಲದ ನಾಲ್ಕು ತಿಂಗಳುಗಳು ತೀರ್ಥ ಸಂದರ್ಶನವೇ ಮೊದಲಾದುವುಗಳಿಗೆ ಮೀಸಲಿಡಲ್ಪಟ್ಟಿದ್ದುವು. ಈ ನಡುವಿನ ಶ್ರಾವಣ ಮಾಸವನ್ನು ಧಾರ್ಮಿಕ ದೃಷ್ಟಿಯಿಂದ ವಿಶೇಷ ಮಾನ್ಯತೆಯಿಂದ ನೋಡಲಾಗುತ್ತದೆ. ಪ್ರಾಯಃ ಅಖಂಡ ಭಾರತದಲ್ಲಿ ಎಲ್ಲೆಲ್ಲಿಯೂ ಈ ಮಾಸದಲ್ಲಿ ನಡೆಯುವಷ್ಟು ಧಾರ್ಮಿಕ ಕಾರ್ಯಗಳು ಮತ್ತಾವ ತಿಂಗಳಲ್ಲಿಯೂ ನಡೆಯುತ್ತಿಲ್ಲ. 'ಅಧಿಕ ಶ್ರಾವಣ' ಇರುವ ವರ್ಷವೂ ಕೆಲವೊಮ್ಮೆ ಬರುವುದುಂಟು. ಈ ಅಧಿಕ ಶ್ರಾವಣ ಮಾಸದಲ್ಲಿ ಎಲ್ಲ ತೀರ್ಥಸ್ಥಳಗಳಲ್ಲಿಯೂ ನಾನಾವಿಧದ ಧಾರ್ಮಿಕ ಕೃತ್ಯಗಳನ್ನು ಆಚರಿಸಲಾಗುತ್ತದೆ. ಧಾರ್ಮಿಕ ಜನರು ತೀರ್ಥಸ್ಥಳಗಳಿಗೆ ತೆರಳಿ, ಅಲ್ಲಿ ಧರ್ಮಚಿಂತನೆಯನ್ನು ಮಾಡುವರು. ಇಂತಹ ಸರ್ವಮಾನ್ಯ ಸರ್ವ ಶ್ರೇಷ್ಠ ತೀರ್ಥ ಸ್ಥಳಗಳಲ್ಲಿ ಭಾರತೀಯರ ಸಪ್ತಪುರಿಗಳು ಮಹತ್ವಪೂರ್ಣವಾಗಿವೆ. ಇಲ್ಲಿಯೂ ಈ ಅಧಿಕ ಮಾಸಗಳಲ್ಲಿ ವಿಧ್ಯುಕ್ತವಾಗಿ ವಿಶೇಷ ಪೂಜೆ ಪುರಸ್ಕಾರ, ಆಧ್ಯಾತ್ಮಿಕ ಚಿಂತನಾದಿಗಳು ನಡೆಯುತ್ತವೆ.

ಸಪ್ತ ಪುರಿಗಳು.

ಕಾಶಿ, ಕಾಂಚೀ, ಹರಿದ್ವಾರ, ಅಯೋಧ್ಯೆ, ದ್ವಾರಕೆ, ಮಥುರಾ, ಉಜ್ಜೈನಿಗಳೇ ಈ ಧರ್ಮ ಪ್ರಧಾನನೆನಿಸಿದ ಏಳು ನಗರಗಳು. ಈ ಎಲ್ಲಾ ಕ್ಷೇತ್ರಗಳಲ್ಲಿ ವರ್ಷದ ಎಲ್ಲ ಸಮಯಗಳಲ್ಲೂ ಯಾತ್ರಾರ್ಥಿಗಳ ಗುಂಪು ಬರುತ್ತ ಇರುತ್ತವೆ. ಈ ಪುರಗಳಲ್ಲಿ ಭಾರತದ ಎಲ್ಲ ಮೂಲೆಯ ಕ್ಷೇತ್ರಗಳೂ ಸೇರಿಕೊಂಡಿವೆ ಎಂಬುದನ್ನು ನಾವು ಮರೆಯುವುದು ಸಾಧ್ಯವಿಲ್ಲ. "ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ ಪುರೀದ್ವಾರಾವತೀ ಚೈವ ಸಪ್ತೈತಾ ಮೋಕ್ಷ ದಾಯಿಕಾಃ" ಎಂಬ ಶ್ಲೋಕವೇ ಇದನ್ನು ಸಾರಿ ಹೇಳುತ್ತದೆ. ಭಾರತವು ಎಂದೆಂದಿಗೂ ಏಕ ಸೂತ್ರದಲ್ಲಿ ಕೂಡಿರುವ ರಾಷ್ಟ್ರವೆಂದು ಇಂತಹುದೇ ಬೇರೆ ಬೇರೆ ಆಧಾರಗಳಿವೆ. ಭಾರತದ ಎಲ್ಲೆಡೆಗಳನ್ನೂ ಪ್ರತಿನಿಧೀಕರಿಸುವ ಈ ತೀರ್ಥ ಕ್ಷೇತ್ರಗಳ ಸೂಕ್ಷ್ಮ ಪರಿಚಯ ಮಾಡಿಕೊಳ್ಳೋಣ.

ಕಾಶಿ

ಸಪ್ತಪುರಿಗಳಲ್ಲಿ ಕಾಶಿಯನ್ನು ಸರ್ವಶ್ರೇಷ್ಠವೆಂದು ತಿಳಿಯಲಾಗುತ್ತದೆ. ಧಾರ್ಮಿಕ ದೃಷ್ಟಿಯಿಂದ ಕಾಶಿಯು ಭಗವಂತನಾದ ಶಂಕರನ ತ್ರಿಶೂಲದ ಆಧಾರದಲ್ಲಿ ನಿಂತಿದೆ ಎಂಬ ವಿಶ್ವಾಸವಿಟ್ಟಿದ್ದಾರೆ. ಸೃಷ್ಟಿಯ ಪ್ರಲಯ ಕಾಲದಲ್ಲಿಯೂ ಕಾಶಿಯು ಅಚ್ಯುತವೆಂದು ತಿಳಿಯುತ್ತಾರೆ. ಪ್ರಪಂಚದ ಅತ್ಯಂತ ಪ್ರಾಚೀನ ನಗರ ಕಾಶಿ ಎಂದು ವಿದ್ವಾಂಸರ ಅಭಿಪ್ರಾಯ. ಇಲ್ಲಿ ಮೃತ್ಯುವನ್ನಪ್ಪಿದವನು ಪುನರ್ಜನ್ಮ ಕಷ್ಟದಿಂದ ವಿಮೋಚನೆ ಹೊಂದಿ ಮೋಕ್ಷವನ್ನು ಪಡೆಯುತ್ತಾನೆ. ಈ ಭಾವನೆಯ ಬಲದಿಂದ ದೇಶದ ಬೇರೆ ಬೇರೆ ಮೂಲೆಯ ಜನರು ತಮ್ಮ ಮುಪ್ಪಿನ ಕಾಲದಲ್ಲಿ ಮರಣ ಸಮೀಪಗತವಾಯಿತೆಂದು ತಿಳಿದಾಗ, ಕಾಶಿಯಲ್ಲಿಯೇ ಇದ್ದು ಸತ್ತು ನೇರವಾಗಿ ಬಂಧನ ವಿಮೋಚನೆ ಪಡೆದು ಮೋಕ್ಷಗಾಮಿಯಾಗಬೇಕೆಂದು ಬಂದು ನೆಲಸುತ್ತಾರೆ.

ಕಾಶಿಯು ಮೊದಲು ವೈಷ್ಣವ ನಗರವಾಗಿತ್ತೆಂದೂ ಅದನ್ನು ಈಶ್ವರನು ತನ್ನ ಆವಾಸಕ್ಕೋಸ್ಕರ ಬೇಡಿ ತೆಗೆದುಕೊಂಡನೆಂದೂ ಹೇಳಲಾಗುತ್ತದೆ. ಕಾಶಿಯ ಸಮೀಪದಲ್ಲೇ ಗಂಗಾನದಿಯು ಹರಿಯುತ್ತದೆ. ಹರಿಪಾದ ನಖದಿಂದ ಹರಿದುಬಂದ ಈ ಗಂಗೆ ತನ್ನಲ್ಲಿ ಮುಳುಗಿದವರ ಪಾಪವೆಲ್ಲವನ್ನೂ ದೂರಮಾಡುತ್ತಾಳೆ. ತನ್ನಲ್ಲಿ ಐಕ್ಯಗೊಂಡವರ ಪುನರ್ಜನ್ಮ ಬಂಧನವನ್ನು ಬಿಡಿಸುತ್ತಾಳೆ ಎಂಬ ಭಾವನೆಯಿದೆ. ಹಾಗಾಗಿ ಕಾಶಿಯಲ್ಲಿ ಸದಾ ಜನಸಂದಣಿ ನೆರೆದೇ ಇರುತ್ತದೆ.

ಕಾಶಿಯಲ್ಲಿ ವಿಶ್ವನಾಥ ಈಶ್ವರನ ದೇವಾಲಯವಿದೆ. ಇದೇ ಇಲ್ಲಿನ ಪ್ರಖ್ಯಾತ ಮತ್ತು ಸರ್ವ ಶ್ರೇಷ್ಠ ಗುಡಿ. ಇಲ್ಲಿ ೫೯ ಶಿವಲಿಂಗ, ೧೨ ಆದಿತ್ಯ, ೫೬ ವಿನಾಯಕ, ೮ ಭೈರವ, ೯ ದುರ್ಗೆ, ೧೩ ನೃಸಿಂಹ ಮತ್ತು ೧೬ ಕೇಶವ ಮೊದಲಾದವರ ದೇವಸ್ಥಾನಗಳಿವೆ. ಇಷ್ಟೇ ಅಲ್ಲದೆ ಅನೇಕಾನೇಕ ಐತಿಹಾಸಿಕ ದೃಷ್ಟಿಯಿಂದಲೂ ಕಾಶಿಯು ಒಂದು ಪ್ರಸಿದ್ಧ ಸ್ಥಳವಾಗಿದೆ. ಶೈವರ ಅನುಪಮ ತೀರ್ಥಕ್ಷೇತ್ರವಾಗಿರುವುದಲ್ಲದೇ ಇತರರಿಗೂ ಚಿರಸ್ಮರಣೀಯವಿದೆ. ಹಿಂದುಗಳಿಗೆ ಕಾಶಿ ನಗರ ಮತ್ತು ಗಂಗಾನದಿಗಳು ಪರಮ ಪುನೀತವಾಗಿರುವುದರಿಂದಲೇ ದಕ್ಷಿಣ ಕಾಶಿ, ದಕ್ಷಿಣ ಗಂಗೆ ಮೊದಲಾದ ಹೆಸರುಗಳನ್ನು ಇಟ್ಟುಕೊಂಡಿರುತ್ತಾರೆ. ಕಾಶಿ ಮತ್ತು ಗಂಗೆಗೆ ಹೋಗಲು ಆರ್ಥಿಕ ಅನನುಕೂಲತೆಯಿಂದಲೋ ವೃದ್ಧಾಪ್ಯದ ಕಾರಣದಿಂದಲೋ ಅಸಾಧ್ಯವೆನಿಸಿದರೆ ಅಂತಹರು ದಕ್ಷಿಣ ಕಾಶಿ ಮತ್ತು ಗಂಗೆಗಳಿಗೆ ತೆರಳಿದರೂ ಸಾಕು ಎಂಬ ವಿಶ್ವಾಸ ದಾಕ್ಷಿಣಾತ್ಯರಲ್ಲಿದೆ.

ಸಾಮಾನ್ಯವಾಗಿ, ಪ್ರಾಚೀನ ಕಾಲದಿಂದಲೂ ಭಾರತದ ಸುಪ್ರಸಿದ್ಧ ರಾಜಾಧಿರಾಜರ ಅನುಗ್ರಹಕ್ಕೆ ಪಾತ್ರವಾಗಿ ಅವರ ಉದಾರತೆಯಿಂದಲೂ ಅವರ ಉದಾತ್ತ ಚರಿತ್ರೆಯಿಂದಲೂ ಬೆಳಗಿದ ಕಾಶಿಯನ್ನು ಯವನರು ಹಾಳುಗೆಡವಲು ಬಯಸಿದರೂ ಅದು ಅಯಶಸ್ವಿಯಾಗಿ ಇಂದಿಗೂ ಉಳಿದು ಬಂದಿದೆ. ಇಂದಿಗೂ ಸಂಸ್ಕೃತ ಭಾಷಾಭ್ಯಾಸದ ಒಂದು ದೊಡ್ಡ ಕೇಂದ್ರವಾಗಿರುವ ಕಾಶಿಯು ತನ್ನ ಮೌಲ್ಯವನ್ನು ಇಂದಿಗೂ ಉಳಿಸಿಕೊಂಡಿದೆ ಎಂಬುದು ಭಾರತೀಯರಿಗೊಂದು ಹೆಮ್ಮೆಯ ವಿಷಯವಾಗಿದೆ.

ಅಯೋಧ್ಯೆ

ಅಯೋಧ್ಯೆಯ ಹೆಸರನ್ನು ಕೇಳದಿರುವವರೇ ಇಲ್ಲವೆನ್ನಬಹುದು. ಇದು ಪುಣ್ಯ ಚರಿತನಾದ ಶ್ರೀ ರಾಮಚಂದ್ರನು ಲೀಲಾ ವಿನೋದವಾಡಿದ ಊರು. ಇಲ್ಲಿ ರಾಮನೂ ಅವನ ಆಜ್ಞಾಪಾಲಕರೂ ಉದಾರರೂ ಆಗಿರುವ ತಮ್ಮಂದಿರು ಕ್ರೀಡೆಯಾಡಿದ ಎಡೆ. ಎಂತಲೇ ಅಯೋಧ್ಯೆ, ಶ್ರೀರಾಮಚಂದ್ರ, ಲಕ್ಷ್ಮಣ ಭರತ ಶತ್ರುಘ್ನರ ಹೆಸರು ಕೇಳಿದೊಡನೆಯೇ ಒಂದು ವಿಧದ ಅವ್ಯಕ್ತ ಗೌರವವು ಆ ಸ್ಥಳದ ಬಗ್ಗೆ ನಮ್ಮಲ್ಲಿ ಹುಟ್ಟುವುದು. ಪಾವನ ಮನದಲ್ಲಿ ಅನೇಕ ಸದ್ಗುಣಗಳು ಉದಯವಾಗುವುವು.

ಪ್ರಾಚೀನ ಕಾಲದಲ್ಲಿ ಅಯೋಧ್ಯೆಯು ಐಶ್ವರ್ಯಯುಕ್ತವಾದ ನಗರವಾಗಿತ್ತು. ಕೌಶಲ ರಾಜನ ರಾಜಧಾನಿಯಾಗಿ ಇದು ಸುಪ್ರಸಿದ್ಧವಾಗಿತ್ತು. ಸೂರ್ಯವಂಶದ ಅನೇಕಾನೇಕ ಅರಸರ ಮುಖ್ಯ ಪಟ್ಟಣವಾಗಿ ಇದು ಮೆರೆದಾಡುತಿತ್ತು. ಭಗೀರಥ, ಹರಿಶ್ಚಂದ್ರ, ಶಿಬಿರಾಮ ಮೊದಲಾದ ಅಸಂಖ್ಯ ಸಾಹಸಿ, ಸತ್ಯಸಂಧ, ದಾನಶೂರ ಮತ್ತು ಉದಾರ ಚರಿತರ ಚಾರಿತ್ರ್ಯಶುದ್ಧಿಯಿಂದ ಕೀರ್ತಿಭಾಜನವಾದ ಪುರವಿದು. ಶ್ರೀರಾಮಚಂದ್ರನ ಜನ್ಮಪ್ರಾರಭ್ಯ ಎರಡನೆಯ ಸಾಕೇತವೆಂಬ ಹೆಸರನ್ನು ಪಡೆದಿದೆ.

ಶ್ರೀರಾಮನ ಕಾಲಾನಂತರ ಅವನ ಯಶಸ್ವೀ ಪುತ್ರನಾದ ಕುಶನು ಈ ಅಯೋಧ್ಯೆಯನ್ನು ಕಟ್ಟಿಸಿದನೆಂದು ಹೇಳುತ್ತಾರೆ. ಇಂದು ಇರುವ ಅಯೋಧ್ಯೆಯನ್ನು ಮಹಾರಾಜ ವಿಕ್ರಮಾದಿತ್ಯನು ರಚಿಸಿದನೆಂದು ಅನ್ನುತ್ತಾರೆ. ಒಂದು ಬಾರಿ ವಿಕ್ರಮಾದಿತ್ಯನು ದೇಶಸಂಚಾರ ಮಾಡುತ್ತ ಬಂದನೆಂದೂ ಆಗ ಅಯೋಧ್ಯೆಯಲ್ಲಿ ಏನೋ ಚಮತ್ಕಾರವು ಅವನಿಗೆ ಗೋಚರವಾದುದರಿಂದ ಪ್ರಕೃತವಿರುವ ಪಟ್ಟಣವನ್ನು ಕಟ್ಟಿಸಿದನೆಂದೂ ಅಭಿಪ್ರಾಯಪಡುತ್ತಾರೆ. ಆದರೆ, ಈ ಕಥೆಯಲ್ಲಿ ಸತ್ಯವೆಷ್ಟು ಅಡಗಿದೆ ಎಂದು ಮಾತ್ರ ಹೇಳಲು ಸಾಧ್ಯವಿಲ್ಲ.

ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ದೇವಾಲಯವು ಸುಪ್ರಸಿದ್ಧವಾಗಿದೆ. ಆದರೆ, ಇಂದಿನ ದಿನಗಳಲ್ಲಿ ಅದೇನೋ ಕಾರಣದಿಂದ ಅಯೋಧ್ಯೆಯು ಮೊದಲಿದ್ದ ತನ್ನ ಪ್ರಾಧಾನ್ಯವನ್ನು ಕಳೆದುಕೊಳ್ಳುತ್ತಿದೆ. ಆದರೂ ಸುಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಅಯೋಧ್ಯೆಯೂ ಒಂದೆಂಬುದು ನಿರ್ವಿವಾದ. ಅಯೋಧ್ಯೆಯಲ್ಲಿ ಪಾದಾರ್ಪಣ ಮಾಡಿದೊಡನೆಯೇ ಶ್ರೀರಾಮನ ಕರುಣಾಕಟಾಕ್ಷದಿಂದ ಹೃದಯ ತುಂಬಿಬಂದು ಕಂಠ ಗದ್ಗದಿತವಾಗಿ ವಿಲಕ್ಷಣಾನಂದದ ಅನುಭವವಾಗುವುದು. ಅಂತೂ ಅಯೋಧ್ಯೆಯೂ ತೀರ್ಥಸ್ಥಳಗಳಲ್ಲಿ ಒಂದಾಗಿ ಉಳಿದಿದೆ.

(ಕ್ರಮಶಃ)

ನಾವು ಬೆಳೆದು ಬರಬೇಕಾದರೆ—

- ● ನಮ್ಮ ಜೀವನ ಉದಾತ್ತವಾಗಿರಬೇಕು,
- ● ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ● ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಗೋ ವಿಜಯ

(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೆ ಶಾರೀರಿಕ ಶಿಕ್ಷಣ ಮೊದಲಾದುದನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಉತ್ತಮ ಕರ್ಮಚರನು ಹೊತ್ತನ್ನು ವ್ಯರ್ಥವಾಗಗೊಡುವುದಿಲ್ಲ. ತಾನು ಮಾಡಬಹುದಾದ ಕೆಲಸಗಳನ್ನೂ ತಾನು ಮಾಡಬೇಕೆಂದು ಸ್ಪಷ್ಟ ಕಾಣುತ್ತಿದ್ದ ಕಾರ್ಯಗಳನ್ನೂ ಪೂರ್ಣಗೊಳಿಸಲು ಅವನು ಸದಾ ಪ್ರಯತ್ನ ನಡೆಸುತ್ತಾನೆ.

NAVAYUGA
Founder:—
A. B. SHETTY,
Former Minister for Public Health
Govt. of Madras & Govt. of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨-೪-'೫೯	೨೯

ಸಂಗೀತದ ದುರವಸ್ಥೆ

"ಸಂಗೀತ"ವೂ ಒಂದು ಬಗೆಯ ಕಲೆಯಾಗಿದ್ದು, ಅದು ಇತರ ಕಲೆಗಳಂತೆಯೇ ಪ್ರಯಾಸದಿಂದ ಕರಗತಮಾಡಿಸಿಕೊಳ್ಳಬಹುದಾದುದು. ಸಾಹಿತ್ಯ ಸಂಗೀತ ಕಲಾ ವಿಹೀನನು ವ್ಯಪಶುವಿಗೆ ಸಮಾನನಾದವನೆಂಬ ಉಲ್ಲೇಖ ಅಲ್ಲಲ್ಲಿರುತ್ತವೆ ಸಂಗೀತವು ಮಾನಸಿಕ ಹಾಗೂ ಆಧ್ಯಾತ್ಮಿಕ ವಿಕಾಸಕ್ಕೆ ತೀರ ಅವಶ್ಯವಾದುದು. ಸಮಾಜವು ಸಂಗೀತದ ಕಾರಣದಿಂದಲೇ ಉನ್ನತಗೊಂಡ ಉದಾಹರಣೆಗಳಿವೆ. ಜನತೆ ಸಾಮಾನ್ಯವಾಗಿ ಅದೊಂದು ಭೋಗ್ಯವಸ್ತು ಎಂದು ತಿಳಿದು, ಸಂಗೀತದ ಕೊಲೆಯನ್ನು ಮಾಡುತ್ತಿರುವುದು ಇದೀಗ ಕಂಡುಬರುತ್ತಿದೆ. ಸಂಗೀತವೂ ಒಂದು ಪರಂಪರೆಯನ್ನು ಹೊಂದಿಕೊಂಡು ಬಂದಿರುವ ಕಲೆಯೆಂಬುದನ್ನು ಹೆಚ್ಚಿನವರು ಮರೆತುಬಿಟ್ಟಂತಾಗಿವೆ. ಜನರು ದುಃಖದಿಂದ ಕಂಗೆಟ್ಟು, ಕಂಗಾಲಾಗಿರುವಾಗ ಸಂಗೀತದ ಮೂಲಕವಾಗಿಯೇ ಅವರನ್ನು ಜಾಗ್ರತಗೊಳಿಸುವ ಪ್ರಯತ್ನ ಹಿಂದೆ ನಡೆದಿತ್ತು. ಸಂಗೀತದ ನೆರವಿನಿಂದಲೇ ಹಾಡಿ ಹಾಡಿ ಪರಮಾತ್ಮನನ್ನು ಒಲಿಸಿದ ಉದಾಹರಣೆಗಳೂ ದೊರೆಯುತ್ತವೆ. ಕೆಲವೊಂದು ಪ್ರಕಾರದ ರಾಗಗಳಲ್ಲಿ ಪದ್ಯಗಳನ್ನು ಹಾಡುವುದರಿಂದ ಅನೇಕಾನೇಕ ವಿಚಿತ್ರ ಘಟನೆಗಳು ನಡೆಯಿತೆಂದು ಹೇಳಲಾಗುತ್ತದೆ.

ಶ್ರೀಕೃಷ್ಣನ ವೇಣು ಗಾನವನ್ನಾಲಿಸಲು ದನಗಳು ಮಾತ್ರವಲ್ಲದೇ ಜನಗಳೂ ಗುಂಪು ಸೇರುತ್ತಿದ್ದರಂತೆ. ಮೊಗಲ ಬಾದಶಹ ಅಕಬರನ ಆಸ್ಥಾನದ ಸರ್ವ ಶ್ರೇಷ್ಠ ಸಂಗೀತಗಾರ ತಾನಸೇನನು ಸಂಗೀತವನ್ನು ಹಾಡಿ ಕಲ್ಲನ್ನು ಕರಗಿಸುವ ಸ್ಪರ್ಧೆಯಲ್ಲಿ ಸೋತನಂತೆ. ಉತ್ತಮವಾದ ಗಾನವನ್ನು ಮೇಘ ಮಲ್ಲಾರ ರಾಗದಲ್ಲಿ ಹಾಡಿದಾಗ ಮೋಡಗಳೆಲ್ಲ ಗಾಯನ ಕೇಳಲು ಬರುತ್ತವೆ ಎಂದೂ ತದನಂತರ, ಮಳೆ ಸುರಿಯುತ್ತದೆಂದೂ ಹೇಳುತ್ತಾರೆ. ಹಾಗೆಯೇ ದೀಪಕರಾಗದ ಮಹಿಮೆಯೂ ಜಗಜನಿತವಾಗಿದೆ ಹೀಗೆ ಒಂದೊಮ್ಮೆ ಅದ್ಭುತ ಪವಾಡಗಳನ್ನೇ ನಡೆಸಬಹುದಾದ ಸಂಗೀತ ಕಲೆ ನಮ್ಮ ಇತರ ಕಲೆಗಳಂತೆಯೇ ಇಂದು ನಿರ್ಗತಿಕವಾಗಿ ಹೋಗಿದೆ. ಜನತೆಯು ದರಿದ್ರವಾದಂತೆ ಕಲೆಯು ದಟ್ಟ ದರಿದ್ರವಾಗುತ್ತ ಬರುತ್ತಿದೆ. ಈ ದುಸ್ಥಿತಿಯಲ್ಲಿ ಸಂಗೀತದ ಕಲೆಯನ್ನು ಕೆಡಿಸಿ, ಚಿತ್ರ ಸಂಗೀತವು ಮೇಲ್ಪಡೆಯಲು ಹವಣಿಸುತ್ತದೆ. ಎಳೆಯ ಮಕ್ಕಳಿಂದ ಹಿಡಿದು ಹಳೆಯ ಮುದುಕರವರೆಗೂ ಸಿನೆಮಾ ಸಂಗೀತವೆಂದರೆ ಎಲ್ಲರಿಗೂ ಪ್ರಿಯವಾಗಿದೆ. ಹೀಗಾಗಿ, ಅವೇ ಮಾದರಿಯಲ್ಲಿ ಈಗ ನಾಟಕಾದಿಗಳ ಸಂಗೀತಗಳೂ ಇತರ ಪದ್ಯಗಳೂ ರೂಪುಗೊಳ್ಳತೊಡಗಿವೆ. ಇನ್ನೂ ಸ್ವಲ್ಪ ಕಾಲ ಇದೇ ರೀತಿ ಮುಂದುವರಿದರೆ, ಶಾಸ್ತ್ರೀಯ ಸಂಗೀತವು ನಾಮಾವಶೇಷ ಮಾತ್ರವಾಗುವುದು. ದಕ್ಷಿಣಾದಿ ಸಂಗೀತ ಅಥವಾ ಕರ್ನಾಟಕ ಸಂಗೀತ ಕೇಳಲು ಸುಶ್ರಾವ್ಯವಿದ್ದರೂ ಅದನ್ನು ಶಾಸ್ತ್ರಬದ್ಧವಾಗಿ ಅಭ್ಯಸಿಸಿದವರ ಸಂಖ್ಯೆ ಕಡಮೆ; ಅಭ್ಯಸಿಸುತ್ತಿರುವವರು ಬೆರಳೆಣಿಕೆಯಷ್ಟು. ಕೂಲಂಕಷ ಜ್ಞಾನವಿಲ್ಲದೆ ಹಾಡುತ್ತಿರುವವರಿಂದಾಗಿಯೇ ಈ ಬಗೆಗೆ ಅಪಚಾರವಾಗುತ್ತಿದೆ ಸಂಗೀತ ಕಲೆಯೂ ದಿನೇ ದಿನೇ ಕ್ಷೀಣಗೊಂಡು, ಇತರ ಕಲೆಗಳ ಸಾಲಿಗೆ ಸೇರಿ ಹೋಗುವುದು ನಿಶ್ಚಯ. ಏಂದರೆ, ಇಂದು ಜಗತ್ತು ಬೌದ್ಧಿಕ ವಾದವನ್ನೇ ನೆಮ್ಮಿ, ಅದನ್ನೇ ಸತ್ಯವೆಂದು ಪರಿಗಣಿಸತೊಡಗಿದೆ, ಹೀಗಾಗಿ, ಸಂಗೀತ, ಚಿತ್ರ, ನಾಟಕ ಸಾಹಿತ್ಯ ಮೊದಲಾದ ಉನ್ನತ ಕಲೆಗಳು ಅವಹೇಳನಕ್ಕೆ ಗುರಿಯಾಗುತ್ತಿವೆ. ಸಂಗೀತದ ಲಘು ರೂಪಗಳು ಶಾಸ್ತ್ರೀಯ ಸಂಗೀತವನ್ನು ಕೆಡಿಸುತ್ತವೆ. ನಮ್ಮ ಕಲಾವಿದರಾದರೂ ಶಾಸ್ತ್ರೋಕ್ತ ಸಂಗೀತದ ಮೂಲಕ ಶ್ರೋತೃಗಳನ್ನು ಆಕರ್ಷಿಸುವತ್ತ ಗಮನವೀಯದೆ ತಾಳಕ್ಕೆ ಮಾತ್ರ ಪ್ರಾಧಾನ್ಯವಿತ್ತು ಸಂಗೀತದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಸಾಹಿತ್ಯವನ್ನು ಕೆಡಿಸಿದುದೂ ಶಾಸ್ತ್ರೀಯ ಸಂಗೀತದ ದುರ್ಗತಿಗೆ ಕಾರಣವಾಗಿದೆ. ಏಂದರೆ, ಸಂಗೀತವು ತಾಳಲಯ ಬದ್ಧವಾಗಿರುವುದಲ್ಲದೇ ಉತ್ತಮ ಸಾಹಿತ್ಯದಿಂದಲೂ ಕೂಡಿಕೊಂಡಿರಬೇಕು. ಪರಂತು, ಇಂದು ಉತ್ತಮ ಸಾಹಿತ್ಯದಿಂದಡಕವಾದ ಸಂಗೀತವು ಕಂಡುಬರುವುದು ಅಪರೂಪವಾಗಿದೆ ಎಲ್ಲೆಲ್ಲೂ 'ಸಿನೆಮಾ'ಗಳ ಅಂಧಾನುಕರಣೆ ಹೆಚ್ಚುತ್ತ ಬಂದಿದೆ. ಜನತೆಯ ಸಾಮಾಜಿಕ ಜೀವನದಲ್ಲಿ 'ಸಿನೆಮಾ' ಪ್ರಭಾವ ಬೀರಿರುವಂತೆಯೇ "ಸಂಗೀತ"ದ ಮೇಲೂ ಹರಡಿಸಿವೆ. ಇದರ ಶೃಂಖಲೆಯಿಂದ ಸಂಗೀತವನ್ನು ನಾವು ತಪ್ಪಿಸದೆ ಹೋದರೆ, ಅದಕ್ಕೆ ಉಳಿಗಾಲವಿಲ್ಲವೆಂಬುದು ನಿರ್ವಿವಾದ. ಅಲ್ಲಲ್ಲಿ ಸಂಗೀತದ ಅಭ್ಯುದಯಕ್ಕೆ ದುಡಿಯುತ್ತಿರುವ ಕೆಲವರಾದರೂ ಜನ ಬಲ, ಧನ ಬಲ, ರಾಜ ಬಲವಿಲ್ಲದೆ ನಿಶ್ಶಕ್ತರಾಗಿ ಹೋಗಿರುತ್ತಾರೆ.

ರಾಜ್ಯ ಸಂಗೀತ ನಾಟಕ ಮಂಡಳಿಯಾಗಲೀ, ಕೇಂದ್ರ ಮಂಡಳಿಯಾಗಲೀ, ಎಲ್ಲೆಲ್ಲೂ ಕಂಡುಬರುತ್ತಿರುವ ರಾಜಕಾರಣದಿಂದ ವಂಚಿತವಾಗಿಲ್ಲ. ಶಿಕ್ಷಣಾಭಿವೃದ್ಧಿ, ಕಲಾಭಿವೃದ್ಧಿಯಲ್ಲಿ ರಾಜಕಾರಣವು ನಿಜವಾಗಿಯೂ ನಿಷೇಧನೀಯವಾಗಿದೆ ಸರಕಾರದ ಯಾವುದೇ ವಿಧದ ಪ್ರಭಾವಕ್ಕೆ ಗುರಿಯಾಗದ ಸಂಘ ಸಂಸ್ಥೆಗಳಿಗೆ ಹೇರಳ ಧನಸಹಾಯ ದೊರೆತಲ್ಲಿ ಅಂತಹವುಗಳು ಕಲಾಭಿವೃದ್ಧಿಗೆ ದುಡಿಯಲು ಸಮರ್ಥವಾದಾವು. ನಾವು ಈಗಾಗಲೇ ಅಂಧರಾಗಿ ಕುಳಿತಿದ್ದು, ನಮ್ಮ ಕಲೆಗಳನ್ನು ಮರೆತುಬಿಡುತ್ತಿದ್ದೇವೆ. ಇನ್ನೂ ಕೆಲವು ದಶಕಗಳು ಅಜ್ಞಾನದಲ್ಲೇ ಸರಿದಲ್ಲಿ ಅಲ್ಲಿಗೆ ನಮ್ಮ ಲಲಿತಕಲೆಗಳು ಮಣ್ಣುಗೂಡುವುದು ನಿಶ್ಚಯ ಆದುದರಿಂದ, ಈ ಬಗ್ಗೆ ನಿಷ್ಪಕ್ಷಪಾತಿ ಕಲಾವಿದರು ಒಮ್ಮುಖದಿಂದ ದುಡಿಯಬೇಕು; ಸರಕಾರದ ಸಹಾಯವನ್ನು ನಿಶ್ಶರ್ತವಾಗಿ ಪಡೆದು ಲಲಿತ ಕಲೆಗಳನ್ನು ಉಳಿಸುವ ಪ್ರಯತ್ನ ನಡೆಸಬೇಕು.

ಸಂಕ್ಷಿಪ್ತ ಸುದ್ದಿಗಳು

"ಯಕ್ಷಗಾನ ಬಯಲಾಟ"ಕ್ಕೆ ಮನ್ನಣೆ

ಮೈಸೂರು ಸರಕಾರವು ಕನ್ನಡದ ಶ್ರೇಷ್ಠ ಗ್ರಂಥಗಳಿಗೆ ಒಟ್ಟು ೨೫ ಸಾವಿರ ರೂಪಾಯಿಗಳ ನಗದು ಬಹುಮಾನವನ್ನು ಕೊಡಲು ನಿರ್ಧರಿಸಿತ್ತು. ಈಗ ಈ ಬಹುಮಾನಿತರ ಯಾದಿಯು ಪ್ರಕಟವಾಗಿದೆ. ಈ ಬಹುಮಾನಗಳನ್ನು ಕಾವ್ಯ, ಕಾದಂಬರಿ, ನಾಟಕ, ಸಣ್ಣ ಕತೆಗಳು, ಗದ್ಯ ಸಾಹಿತ್ಯ ಕೃತಿ, ಸಾಹಿತ್ಯ ವಿಮರ್ಶೆ, ಸಂಶೋಧನೆ ಪ್ರಕಟಣೆಗಳು ಮತ್ತು ವಿಜ್ಞಾನ ಸಾಹಿತ್ಯ ಎಂಬ ಎಂಟು ವಿಭಾಗಗಳಿಗೆ ವಿಂಗಡಿಸಿದ್ದು, ಪ್ರತಿಯೊಂದು ವಿಭಾಗದಲ್ಲಿ ರೂ ೧,೫೦೦ರ ಪ್ರಥಮ ಬಹುಮಾನ ರೂ. ೮೦೦ರ ದ್ವಿತೀಯ ಬಹುಮಾನ ಮತ್ತು ರೂ. ೫೦೦ರ ತೃತೀಯ ಬಹುಮಾನಗಳನ್ನೀಯಲು ನಿರ್ಧರಿಸಿತ್ತು. ಈ ಬಹುಮಾನಗಳಲ್ಲಿ ಶ್ರೀ ಶಿವರಾಮ ಕಾರಂತರ 'ಯಕ್ಷಗಾನ ಬಯಲಾಟ'ವೆಂಬ "ಸಾಹಿತ್ಯ ವಿಮರ್ಶೆ" ಕೃತಿಗೆ ಪ್ರಥಮ ಬಹುಮಾನವು ದೊರೆತಿದೆ. ಈ ಕೃತಿಗೆ ಇತ್ತೀಚೆಗೆ ಸ್ವೀಡಿಶ್ ಪ್ರಶಸ್ತಿಯು ಲಭಿಸಿರುವುದು ಈಗಾಗಲೇ ಸರ್ವಶ್ರುತವಿದೆ.

ಕಂಪು ಬೆಳಕಿಗೆ ಬಂತು

'ಕನ್ನಡಕ್ಕೊಬ್ಬರೇ ಕಾರಂತ'ರಿದ್ದಾರೆ. ಅವರು ತಮ್ಮ ವಿವಿಧ ಕ್ಷೇತ್ರಗಳಲ್ಲಿ ದೇಹ ಸವೆಸಿ ಕಂಡುಕೊಂಡ ಅನುಭವ ಬಲದಿಂದ, ಪ್ರತಿಭೆಯಿಂದ ಕನ್ನಡ ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರು ಕಾದಂಬರಿಗಾರ, ಕಥಾ ಲೇಖಕ, ನಾಟಕ ನಿರ್ಮಾತೃ, ಉತ್ತಮ ಕಲಾವಿದ ಲೇಖಕರಿದ್ದಂತೆಯೇ ಸಾಹಸಿಗಳೂ ಸಂಶೋಧಕರೂ ಹೌದು ಎಂಬುದಕ್ಕೆ ಅವರ ಕೃತಿಗಳೇ ಸಾಕ್ಷಿಯಾಗಿವೆ ಆಧುನಿಕ ಕಾಲದ ಅತ್ಯುತ್ತಮ ಸಾಹಿತಿಗಳ ಸಾಲಿನಲ್ಲಿ ಶ್ರೀ ಕಾರಂತರ ಸ್ಥಾನವು ಅದ್ವಿತೀಯವಾದುದು. ಕಲೆಗಳ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮ ಕೈವಾಡವನ್ನು ತೋರಿಸಿದ ಸರ್ವವ್ಯಾಪಿಗಳು. ಕಾದಂಬರಿ ಕಥೆಗಳನ್ನಲ್ಲದೆ, ನೆರಳು ನಾಟಕ, ಗೀತ ನಾಟಕಗಳನ್ನು ಕನ್ನಡದಲ್ಲಿ ಬರೆದು ಆಡಿ ತೋರಿಸಿದ್ದಾರೆ ಇವರು ದೊಡ್ಡ ದೊಡ್ಡ ಸಂಸ್ಥೆಗಳಿಂದಲೂ ಅಸಾಧ್ಯವೆನಿಸಿದ "ಬಾಲಪ್ರಪಂಚ"ವನ್ನು ರಚಿಸಿ ಪ್ರಕಾಶಿಸಿದ್ದಾರೆ; ಅರ್ಥಕೋಶವನ್ನೂ ಸಂಪಾದಿಸಿದ್ದಾರೆ. ಹೀಗೆ ಸರ್ವಮುಖವಾಗಿ ಪ್ರವಹಿಸಿದ ಕಾರಂತರ ವಿಚಾರಧಾರೆ ಕನ್ನಡದ ಶ್ರೇಷ್ಠ ಕಲೆ ಬಯಲಾಟದತ್ತ ತೆರಳಿ "ಯಕ್ಷಗಾನ ಬಯಲಾಟ" ವೆಂಬ ಸಂಶೋಧನಾ ಗ್ರಂಥವನ್ನು ಬರೆಸಿದೆ ಈ ಪುಸ್ತಕಕ್ಕೆ ಸ್ವೀಡಿಶ್ ಬಹುಮಾನವು ದೊರೆತಿದೆ ಎಂಬುದು ಸಂತೋಷದ ವಿಷಯ. ನಮ್ಮ ದೇಶದಲ್ಲಿ ನಾವು ನಮ್ಮ ಕುರಿತು ಹೆಚ್ಚಾಗಿ ಚಿಂತಿಸಬಯಸುತ್ತೇವೆ ಹೊರತು ನಿಷ್ಪಕ್ಷಪಾತತನದಿಂದ ಸಮಾಜಕ್ಕೆ ಸೇವೆ ಸಲ್ಲಿಸಿದವರನ್ನು ಸಾಮಾನ್ಯವಾಗಿ ಮರೆತೇ ಬಿಡುತ್ತೇವೆ. "ತನ್ನ ಮೈಯ ಕಂಪನರಿಯದವನೆ ಹೊರಗೆ ಹುಡುಕುವ ಮೃಗದ ಪಾಡು ನಮ್ಮ ಪಾಡಾ"ಗಿದೆ. ಬೇರೆಯವರು ಕಂಪು ಇಲ್ಲಿದೆ ಎಂದು ಎತ್ತಿ ತೋರಿಸಿದ ವೇಳೆ ನಮಗೆ ಎಚ್ಚರವಾಗುತ್ತದೆ ಎಂಬ ನಮ್ಮ ದೇಶದ ಸಾಮಾನ್ಯ ನಿಯಮ ಕಾರಂತರ ವಿಷಯಕ್ಕೂ ಅನ್ವಯಿಸುವುದಾದರೆ ರಾಜ್ಯ ಮತ್ತು ಕೇಂದ್ರ ಸರಕಾರಗಳು ಇನ್ನಾದರೂ ಜಾಗ್ರತವಾದಾವು. ಅಮೋಘ ಗೌರವವನ್ನು ಸಂಪಾದಿಸಿದ ಶ್ರೀ ಕಾರಂತರನ್ನು ನಾವು ಅಭಿನಂದಿಸುವುದಲ್ಲದೇ ದೇಶದ ಒಳಗಿನಿಂದಲೂ ಅವರು ಪಡೆಯಬೇಕಾದಷ್ಟು ಮರ್ಯಾದೆಯನ್ನು ಪಡೆಯುವಂತಾಗಲೆಂದು ಬಯಸುತ್ತೇವೆ.

ಕಾಲುವೆ ನೀರ ತಂಟೆ.

ಜಾಗತಿಕ ಬ್ಯಾಂಕಿನ ನೇತೃತ್ವದಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವಿರುವ ಕಾಲುವೆ ನೀರ ತಂಟೆಯ ಪರಿಹಾರ ಕಾರ್ಯವು ನಡೆಯುತ್ತಿದ್ದರೂ ಇದುವರೆಗೂ ಅದು ಅಪೂರ್ಣವಾಗಿಯೇ ಇದೆ. ಆದರೂ ಮುಂದಿನ ಒಂದು ವರ್ಷದ ವರೆಗೆ ವ್ಯವಹಾರದಲ್ಲಿರುವ ನಡುಗಾಲ ಒಪ್ಪಂದವೊಂದು ವಾಶಿಂಗ್‌ಟನ್ನಿನಲ್ಲಿ ಮುಕ್ತಾಯಗೊಂಡಿತು. ಈ ಒಪ್ಪಂದಕ್ಕೆ ಅಧಿಕಾರಿಗಳು ಸಹಿ ಮಾಡುವುದು ಮಾತ್ರ ಉಳಿದಿದೆ. ಜಾಗತಿಕ ಬ್ಯಾಂಕು ಈ ಸಮಸ್ಯೆಯ ಶಾಶ್ವತ ಪರಿಹಾರವನ್ನು ಸೂಚಿಸಲು ಅದರ ಅಧ್ಯಕ್ಷರನ್ನು ಮುಂದಿನ ಮೇ ತಿಂಗಳಲ್ಲಿ ಭಾರತ ಮತ್ತು ಪಾಕಿಸ್ತಾನ ರಾಜಧಾನಿಗಳನ್ನು ಸಂದರ್ಶಿಸಲು ಕಳುಹಲಿರುವುದೆಂದು ಅನಧಿಕೃತವಾಗಿ ತಿಳಿದುಬಂದಿದೆ. ಸದ್ಯ ಆಗಿರುವ ತಾತ್ಕಾಲಿಕ ಒಪ್ಪಂದದ ವಿವರಗಳು ಮಾತ್ರ ಇನ್ನೂ ಬಹಿರಂಗವಾಗಿಲ್ಲ.

ಕಾಂಗ್ರೆಸ್‌ನಲ್ಲಿ ಹೊಸ ರಕ್ತ

ಕಾಂಗ್ರೆಸ್ ಸಂಸ್ಥೆಯಲ್ಲಿ ಹೊಸ ರಕ್ತ ತುಂಬುವುದೆಂದರೆ ಕಾರ್ಯಸಮಿತಿಯಲ್ಲಿ ತರುಣರನ್ನು ಸೇರಿಸಿಕೊಳ್ಳುವುದೆಂದು ಅಭಿಪ್ರಾಯವಲ್ಲ. ಆದರೆ, ಉತ್ಸಾಹಿ ತರುಣ ಕಾರ್ಯಕರ್ತರು ಕಾಂಗ್ರೆಸ್ ಸಂಸ್ಥೆಯಲ್ಲಿ ದುಡಿಯಲು ಮುಂದೆ ಬಂದರೆ, ಅವರಿಗೆ ಯೋಗ್ಯ ಕಾರ್ಯಾವಕಾಶವನ್ನೊದಗಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ರಾಷ್ಟ್ರವು ಸ್ವತಂತ್ರವಾದ ಬಳಿಕ ನಿರ್ವಹಿಸಬೇಕಾಗಿರುವ ಹೊಣೆ ಸಮರ್ಥರೀತಿಯಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ ಕಾಂಗ್ರೆಸ್ಸನ್ನು ಪರಿಣಾಮಕಾರಿ ಸತ್ವಯುತ ಸಂಸ್ಥೆಯನ್ನಾಗಿ ಮಾಡುವದೇ ಕಾಂಗ್ರೆಸ್ ಅಧ್ಯಕ್ಷೆಯಾದ ನನ್ನ ಕರ್ತವ್ಯವೆಂದು ಶ್ರೀಮತಿ ಇಂದಿರಾ ಗಾಂಧಿಯವರು ಉದ್ಗರಿಸಿ, ನಮ್ಮ ಜನರು ಇನ್ನೂ ಎಚ್ಚತ್ತಿಲ್ಲ ಎಂದುಅಭಿಪ್ರಾಯ ಪಟ್ಟಿದ್ದಾರೆ

ಟಿಬೇಟನಲ್ಲಿ ದಂಗೆ?

ಚೀನದ ವಿರುದ್ಧ ಲಾಸಾದಲ್ಲಿ ಎದ್ದಿರುವ ದಂಗೆಯನ್ನು ಹತ್ತಿಕ್ಕಲು ದಲೈಲಾಮಾರು ಪ್ರಯತ್ನಿಸಿದ್ದರೂ ಕೊನೆಗೆ ಅವರು ದಂಗೆಕೋರರ ವಶವಾದರೆಂದು ಚೀನೀ ವಾರ್ತಾಸಂಸ್ಥೆ ಘೋಷಿಸಿದೆ ಟಿಬೇಟನಲ್ಲಿ ಚೀನವು ನಡೆಸಿದ ಕೃತ್ಯವನ್ನು ಕ್ರೂರವೆಂದು ಉಲ್ಲೇಖಿಸಿ ಹಾಂಗೆಂಗಿನ

ಮೇಲೆ ರಶ್ಯವು ಮಾಡಿದ ದಾಳಿಗೆ ಮಲಯಾ ಹೋಲಿಸಿದೆ. ಟಿಬೇಟಿನ ಒಳಗಡೆ ಸುಮಾರ ೩೦—೪೦ ಸಾವಿರ ಚದರ ಮೈಲಿಯ ಪ್ರದೇಶವು ಬಂಡುಗಾರರ ಕೈಯಲ್ಲಿದೆ ಎಂದು ತಿಳಿದುಬಂದಿದೆ. ಟಿಬೇಟ್ ಪ್ರಶ್ನೆ ಚೀನದ ಆಂತರಿಕ ಸಮಸ್ಯೆಯಾದುದರಿಂದ ಯಾರು ಈ ವಿಷಯದಲ್ಲಿ ಕೈಹಾಕಬಾರದೆಂದು ಚೀನಾ ಮತ್ತು ರಶ್ಯಾ ಹೇಳಿವೆ. ಅತ್ತ ಚೀನಾದಿಂದ ಬರಬಹುದಾದ ನಿರಾಶ್ರಿತರಿಗೆ ವಾಸ್ತವ್ಯವನ್ನು ಭಾರತದಲ್ಲಿ ಒದಗಿಸಲಾಗುವುದೇ ಎಂದು ಕೇಳಿದ ಪ್ರಶ್ನೆಯೊಂದನ್ನುತ್ತರಿಸುತ್ತ ಪ್ರಧಾನಿ ನೆಹರೂರವರು ಅನುಮತಿ ಪತ್ರವಿಲ್ಲದವರನ್ನು ಗಡಿ ದಾಟಲು ಬಿಡಲಾಗುವುದಿಲ್ಲವೆಂದೂ ಆಶ್ರಯ ನೀಡುವ ಕುರಿತು ಸಂದರ್ಭ ನೋಡಿ ನಿರ್ಧಾರ ಮಾಡಬೇಕೆಂದೂ ಹೇಳಿದರು.

ಮಣ್ಣಿನ ಪರೀಕ್ಷೆಯ ಸದುಪಯೋಗ

ಭಾರತ ಸರಕಾರದ ಸಾಮುದಾಯಿಕ ಅಭಿವೃದ್ಧಿ ಮತ್ತು ಸಹಕಾರ ಮಂತ್ರಿ ಶಾಖೆಯವರು ರಾಜ್ಯ ಸರಕಾರಗಳಿಗೆ ಸೂಚನೆಯಿತ್ತು ಆಯಾಯ ರಾಜ್ಯಗಳಲ್ಲಿರುವ ಬ್ಲಾಕ್ ಮಟ್ಟದ ಸಿಬ್ಬಂದಿಯವರು ಮಣ್ಣಿನ ಸಂಬಂಧದಲ್ಲಿ ಏರ್ಪಡಿಸಿರುವ ಸೌಲಭ್ಯವನ್ನು ಪೂರ್ಣವಾಗಿ ಪಡೆಯುವಂತೆ ನಿರ್ದೇಶನವೀಯಬೇಕೆಂದು ತಿಳಿಸಿರುವರು. ದೇಶದಲ್ಲಿ ಈಗ ಮಣ್ಣಿನ ಪರೀಕ್ಷೆ ನಡೆಸುವ ೨೦ ಪ್ರಯೋಗ ಶಾಲೆಗಳು ಮಣ್ಣಿನ ಉತ್ಪಾದನಾ ಸಾಮರ್ಥ್ಯವನ್ನು ಪರೀಕ್ಷಿಸಿ ರೈತರು ಉಪಯೋಗಿಸಬೇಕಾದ ಗೊಬ್ಬರ ಇತ್ಯಾದಿಗಳ ಬಗ್ಗೆ ಸಲಹೆ ನೀಡುವುವು.

ಜನಮತ

ಶಿರ್ವದಲ್ಲಿ ಟಪ್ಪಾಲು ಅವ್ಯವಸ್ಥೆ

ಮಾನ್ಯ ಸಂಪಾದಕರೇ,

ಶಿರ್ವ ಸಬ್ ಪೋಸ್ಟು ಆಫೀಸಿಗೆ ಮಂಗಳೂರಿನಿಂದ ಬರುವ ಚೀಲವು ಕಟ್ಟಪ್ಪಾಡಿಗೆ 8 ಘಂಟೆಯೊಳಗಾಗಿ ಬಂದರೂ ಅದು ಶಿರ್ವಕ್ಕೆ ಬರುವಾಗ್ಯೆ ಘಂಟೆ 11 ದಾಟುವುದಿದೆ. ಹಾಗೆಯೇ ಶಿರ್ವಕ್ಕೆ 12 ಮೈಲು ದೂರವಿರುವ ಉಡ್ಪಿಯಿಂದ ಬಂದು ಕಾಗದ ಶಿರ್ವಕ್ಕೆ ತಲ್ಪಲು 2 ದಿನ ಬೇಕಾಗುತ್ತದೆ. ಈಗಿನ ಕಾಲದಲ್ಲಿ ಜನತೆಗೆ ಹೆಚ್ಚಿನ ಪ್ರಯೋಜನ ಒದಗಲೆಂದು ಬೊಂಬಾಯಿಯಿಂದ ಟಪ್ಪಾಲು ಮಂಗಳೂರಿಗೆ 5 ಘಂಟೆಯ ಹೊತ್ತಿನೊಳಗಾಗಿ ತಲ್ಪಲು ಸಾಧ್ಯವಿರುವಾಗ ಶಿರ್ವಕ್ಕೆ ಉಡುಪಿ ಮಂಗಳೂರಿನಿಂದ ಟಪ್ಪಾಲು ಸಿಗಲು ದೀರ್ಘ ಸಮಯ ತಗಲುವುದು ಶೋಚನೀಯ. ಶಿರ್ವ ಉಡ್ಪಿಗಳೊಳಗೆ ಬಸ್ಸು ಓಡಾಟವನ್ನು ಸರಳಗೊಳಿಸಿ ಶಿರ್ವ ಮತ್ತು ಉಡ್ಪಿಗೆ ನೇರವಾಗಿ ಟಪ್ಪಾಲು ಸಂಪರ್ಕ ಏರ್ಪಡಿಸಿದರೆ ಶಿರ್ವ ಮತ್ತು ಆಸುಪಾಸಿನ 50,000 ಜನರಿಗೆ ಅವರ ಟಪ್ಪಾಲು ಸಾಧಾರಣ 30ರಿಂದ 24 ಘಂಟೆ ಮುಂಚಿತವಾಗಿ ಸಿಗುತ್ತದೆ. ಈಗ ಉಡ್ಪಿಯಿಂದ 8–10ಕ್ಕೆ ಹೊರಟು ಬಸ್ಸು ಕಾಪಿಗೆ ಹೋಗುವ ಬದಲು ಅದನ್ನು ಶಿರ್ವಕ್ಕೆ ಬರುವಂತೆ ಮಾಡಿ ಬರುವಾಗ್ಯೆ ಕಟ್ಟಪ್ಪಾಡಿಯಿಂದ ಶಿರ್ವಕ್ಕೆ ಟಪ್ಪಾಲು ತರುವಂತೆಯೂ, 9 ಘಂಟೆಗೆ ಹಿಂದೆ ಉಡ್ಪಿಗೆ ಹೋಗುವಾಗ್ಯೆ ಶಿರ್ವದಿಂದ ಉಡ್ಪಿಗೆ ನೇರವಾಗಿ ಟಪ್ಪಾಲು ಕೊಂಡುಹೋಗುವಂತೆಯೂ, ಅನಂತರ ಅದೇ ಬಸ್ಸು ಉಡ್ಪಿ ಕಾಪು ಸರ್ವಿಸ್ ಮುಗಿಸಿ 11–15 ಘಂಟೆಗೆ ಉಡ್ಪಿಯಿಂದ ಟಪ್ಪಾಲನ್ನು ಶಿರ್ವಕ್ಕೆ ಕೊಟ್ಟು ಹಿಂದೆ ಹೋಗುವಾಗ್ಯೆ ಟಪ್ಪಾಲನ್ನು ಮಂಗಳೂರಿಗೆ ಒಯ್ಯುವ ವ್ಯವಸ್ಥೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡುವರಾಗಿ ಹಾರೈಸುತ್ತೇವೆ.

ಶಿರ್ವ. ಕೆ. ಜಗನ್ನಾಥ ಶೆಟ್ಟಿ

ಅಲ್ಲಲ್ಲಿಯ ಸುದ್ದಿ ಸಾರ

ದಿ| ಕರ್ಕೇರರಿಗೆ ಶ್ರದ್ಧಾಂಜಲಿ— ತಾ. 29ರಲ್ಲು ದ. ಕ. ಜಿಲ್ಲಾ ಬಿಲ್ಲವ ಯೂನಿಯನಿನ ಆಶ್ರಯದಲ್ಲಿ ಮಂಗಳೂರು ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನದ ವಠಾರದಲ್ಲಿ ಶ್ರೀ ಎಂ. ರಾಮಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿ, ದಿ| ಬಿ. ಆರ್. ಕರ್ಕೇರ ಎಂ. ಎಲ್. ಎ. ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ದಿವಂಗತರು ಸಮಾಜದ ಉನ್ನತಿಗಾಗಿ ಮಾಡಿದ ಕಾರ್ಯಕಲಾಪಗಳನ್ನು ಶ್ರೀಗಳಾದ ಬಿ. ಪಿ. ಕೂಳೂರ್ಕರ್, ಎಂ. ಚಾರಪ್ಪ, ಎ. ಜೊಡಪ್ಪ ಮೊದಲಾದವರು ವಿವರಿಸಿ ಭಾಷಣವಿತ್ತರು.

ಕಳೆದ ತಾ 26ರಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜಿಲ್ಲಾ ಬೋರ್ಡು ಸಭೆಯು ಜರಗಿದಾಗ ಬೋರ್ಡಿನ ಉಪಾಧ್ಯಕ್ಷರಾಗಿದ್ದ ಶ್ರೀ ಬಿ. ಆರ್. ಕರ್ಕೇರರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು.

ಮೂಲ್ಕಿಯಲ್ಲಿ ಸತ್ಕಾರ– ತಾ 27ರಲ್ಲಿ ಮಂಗಳೂರು ನಗರ ಸಭಾಪತಿ ಶ್ರೀ ಮಾಣೇಲ್ ಶ್ರೀನಿವಾಸ ನಾಯಕರ ಗೌರವಾರ್ಥವಾಗಿ ಮೂಲ್ಕಿ ಸಮಾಜ ವಿಹಾರ ಕೇಂದ್ರದಲ್ಲಿ ಡಾ| ಎಂ. ಆರ್. ಸೆಟ್ಟರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದು ನೆರವೇರಿತು. ಶ್ರೀ ಎಂ. ಆರ್. ಎಚ್. ಪೂಂಜರು ಸ್ವಾಗತಿಸಿದ ಮೇಲೆ ಶ್ರೀಗಳಾದ ಕೆ. ವಿಠಲ ಶೆಣೈ, ಡಾ| ಸಂಜೀವನಾಥ, ಡಾ| ಕೆ. ಬಾಬ ಸೆಟ್ಟಿ ಮೊದಲಾದವರು ಮಾತನಾಡಿ ಅತಿಥಿಗಳನ್ನು ಅಭಿನಂದನೆ ಮಾಡಿದರು. ಅತಿಥಿಗಳು ಉತ್ತರವಿತ್ತ ಮೇಲೆ ಡಾ| ಎಂ. ಆರ್. ಕಾಮತರು ಆಭಾರ ಸೂಚಿಸಿದರು.

ಹೆಬ್ರಿ ವನಿತಾ ಸಮಾಜದ ವಾರ್ಷಿಕೋತ್ಸವವು ತಾ. 27ರಲ್ಲಿ ಶ್ರೀ ವೈ. ಎಂ. ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ನೆರವೇರಿತು. ಉತ್ಸವದ ಅಂಗವಾಗಿ ಶಿಶು ಪ್ರದರ್ಶನ ಕೂಡಾ ಇತ್ತು.

ಮುಂಬ್ಯಾಯಿಯಲ್ಲಿ ಕರ್ನಾಟಕ ಹ್ಯಾಸ್ಕೂಲಿನ ಚಟುವಟಿಕೆ–ತಾ. 21-3-59 ರಲ್ಲಿ ಜರಗಿದ ಡಾ| ಪಿ. ಜಗನ್ನಾಥ ಶೆಟ್ಟಿ ಶೀಲ್ಡ್ ನೋಕ್ ಔಟ್ ಟೂರ್ನಮೆಂಟು ಫ್ಯಾನಲ್ ಪಂದ್ಯಾಟದಲ್ಲಿ ಕರ್ನಾಟಕ ಹ್ಯಾಸ್ಕೂಲಿನ 10ನೇ ತರಗತಿಯ ವಿದ್ಯಾರ್ಥಿಗಳು ವಿಜಯಿಗಳಾಗಿರುವರು. ಮರುದಿನ ಓವಲ್ ಮೈದಾನಿನಲ್ಲಿ ಜರಗಿದ ಕರ್ನಾಟಕ ಹ್ಯಾಸ್ಕೂಲಿನ ಇಂಟರ್ ಕ್ಲಾಸ್ ಕ್ರಿಕೆಟ್ ಟೂರ್ನಮೆಂಟಿನಲ್ಲಿಯೂ 10ನೇ ತರಗತಿಯವರೇ ಗೆದ್ದಿರುವರು.

ಉಡುಪಿ ನಗರ ಸಭಾಧ್ಯಕ್ಷರ ವಾರ್ಡು ಸಂದರ್ಶನೆ ಕಾರ್ಯಕ್ರಮದಂತೆ ಅವರು ಇದೇ ತಾ 5ನೆ ಸಂಜೆ 5 ಗಂಟೆಗೆ ಪಣಿಯೂಡಿ ವಾರ್ಡಿನ ಪಣಿಯೂಡಿ ಎಲಿಮೆಂಟರಿ ಶಾಲೆ, ತಾ. 12ಕ್ಕೆ ತೆಂಕಪೇಟೆಯ ಐಡಿಯಲ್ ಫೋಟೋ ಹೌಸ್, 19ಕ್ಕೆ ಸೆಂಟ್ರಲ್ ವಾರ್ಡಿನ ಸಂಸ್ಕೃತ ಕಾಲೇಜ್, 26ಕ್ಕೆ ಶಿರಿಬೀಡಿನ ಮುನ್ಸಿಪಲ್ ಪ್ರವಾಸಿಕರ ಬಂಗ್ಲೆ. ಇಲ್ಲಿ ಆಯಾಯ ವಾರ್ಡಿನ ಮತದಾರರನ್ನು ಭೇಟಿಯಾಗಲಿರುವರು. ತೆರಿಗೆದಾರರು ಸಂದರ್ಶನ ಸ್ಥಳಕ್ಕೆ ಬಂದು ತಮ್ಮ ವಾರ್ಡಿನ ಆವಶ್ಯಕತೆಗಳನ್ನು ತಿಳಿಸಬಹುದೆಂದು ನಗರಸಭಾಪತಿ ಡಾ. ಕೆ. ಎಲ್. ಐತಾಳರು ತಿಳಿಸುತ್ತಾರೆ.

ನಿಂಜೂರಲ್ಲಿ ಮಹಾಸಭೆ — ತಾ. 29-3-59ರಲ್ಲು ಶ್ರೀ ವಿವೇಕಾನಂದ ಸೇವಾ ಸಂಘದ ವಾರ್ಷಿಕ ಮಹಾಸಭೆಯು ಶ್ರೀ ಎನ್. ಸಂಜೀವ ಸೆಟ್ಟಿ, ಪಟೇಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮಕ್ಕಳಿಂದ ಪ್ರಾರ್ಥನೆಯಾದ ಬಳಿಕ ನಿಂಜೂರು ಕೃಷ್ಣ ಸೆಟ್ರ ಭಾವ ಚಿತ್ರವನ್ನು ಪಂಚಾಯತ್ ಬೋರ್ಡು ಅಧ್ಯಕ್ಷ ಎನ್. ರಾಜು ಸೆಟ್ರು ಅನಾವರಣ ಮಾಡಿದರು. ಅನಂತರ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರದ ಮಂಜೂರಾತಿಯಾಗಿ ಹೊಸ ವರ್ಷಕ್ಕೆ ಈ ಕೆಳಗಿನ ಆಡಳಿತೆ ಮಂಡಳಿಯನ್ನು ಸರ್ವಾನುಮತದಿಂದ ಚುನಾಯಿಸಲಾಯಿತು. ಶ್ರೀ ಎನ್ ಸಂಜೀವ ಸೆಟ್ಟರು (ಅಧ್ಯಕ್ಷ) ಶ್ರೀ ಎನ್. ಜಗನ್ನಾಥ ಸೆಟ್ಟಿ (ಉಪಾಧ್ಯಕ್ಷ), ಶ್ರೀ ಎನ್. ಕೃಷ್ಣರಾಜ ಭಟ್ (ಕಾರ್ಯದರ್ಶಿ) ಶ್ರೀ ಎನ್. ಹಿರಿಯಣ್ಣ ಸೆಟ್ಟಿ (ಕೋಶಾಧಿಕಾರಿ) ಅಲ್ಲದೆ ಶ್ರೀಗಳಾದ ಎನ್. ರಾಜು ಸೆಟ್ಟಿ, ಪಟೇಲ್ ಸಂಜೀವ ಸೆಟ್ಟಿ, ಶ್ರೀನಿವಾಸ ಆಚಾರ್ ಎನ್. ಪಿ., ತಿಮ್ಮಪ್ಪ ಶೆಟ್ಟಿ, ಮುದ್ದಣ್ಣ ಶೆಟ್ಟಿ, ವಿಠಲ ಸೆಟ್ಟಿ, ವಿಶ್ವನಾಥ ಸೆಟ್ಟಿ, ರಘುನಾಥ ಸೆಟ್ಟಿ, ಕೇರಬೆಟ್ಟು ವಿಠಲ ಸೆಟ್ಟಿ, ಆಚ್ಚು ಪೂಜಾರಿ ಮತ್ತು ವಾಪುಲು ಸಾಲ್ಯಾನ ಇವರುಗಳನ್ನು ಕಮಿಟಿ ಮೆಂಬರರನ್ನಾಗಿ ಆರಿಸಲಾಯಿತು. ಅಧ್ಯಕ್ಷರ ಭಾಷಣ ಧನ್ಯವಾದ ಸಮರ್ಪಣೆ ಮಂಗಲ ಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಆಗುಂಬೆಯಲ್ಲಿ ಸನ್ಮಾನ ಸಮಾರಂಭ—ಕಳೆದ ತಾ. 24ರಂದು ತಲ್ಲೂರು ಗ್ರಾಮ ಪಂಚಾಯಿತಿಯ ಕಡೆಯಿಂದ ಡಾ| ಟಿ. ಎಂ. ಎ. ಪೈಗಳಿಗೆ ಆಗುಂಬೆ ಗ್ರಾಮ ಪಂಚಾಯ್ತಿ ಭವನದ ಆವರಣದಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀ ಎ. ಆರ್. ಬದ್ರಿನಾರಾಯಣ್ ಎಂ. ಎಲ್. ಎ. ಅವರು ಸಭಾಧ್ಯಕ್ಷತೆ ವಹಿಸಿದ್ದರು. ಗ್ರಾಮಾಧ್ಯಕ್ಷ ಶ್ರೀ ಡಿ. ಎಸ್. ವಿಜಯೇಂದ್ರ ರಾಯರು ಮಾನಪತ್ರಗಳನ್ನು ಸಮರ್ಪಿಸಿದರು. ಅತಿಥಿ ಡಾ| ಪೈಗಳು ಆಗುಂಬೆಯ ಪ್ರಕೃತಿ ಸೌಂದರ್ಯವನ್ನು ಪ್ರಸ್ತಾಪಿಸಿ ಅದನ್ನು ಬಡವರ ಊಟಿಯನ್ನಾಗಿ ಮಾಡಲು ಸರಕಾರದವರು ಪ್ರಯತ್ನಿಸಬೇಕೆಂದರು. ಸತ್ಕಾರ್ಯಗಳಿಗೆ ಜನತಾ ಪ್ರೋತ್ಸಾಹ ಸಿಕ್ಕಿಯೇ ಸಿಕ್ಕುತ್ತದೆ. ಇದಕ್ಕೆ ನನ್ನ ಸಾಧನೆಯೊಂದು ನಿದರ್ಶನವಾಗಿದೆ ಎಂದರು.

ಬೆಳ್ಪಾರೆ—ಕಳೆದ ತಾ. 24ರಲ್ಲಿ ಬೆಳ್ಪಾರೆ ಪಂಚಾಯ್ತಿ ಬೋರ್ಡಿನ ನೆಟ್ಟಾರು ಶಾಲೆಯ ವರ್ಧಂತಿಯು ಪಟೇಲ್ ಬಿ. ನಾರಾಯಣ ಶೇಕರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಬಿ. ತಿಮ್ಮಣ್ಣ ರೈಗಳು ಶಾಲೆಗೆ ದಾನವಾಗಿ ಕೊಟ್ಟ ಮಹಾತ್ಮಾಜಿಯವರ ಭಾವ ಚಿತ್ರವನ್ನು ಅಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರು ಅನಾವರಣ ಮಾಡಿದರು. ವಿವಿಧ ಕಾರ್ಯಕ್ರಮಗಳಿಂದ ವರ್ಧಂತಿಯು ಜಯಶೀಲವಾಗಿ ನೆರವೇರಿತು.

ಜಿಲ್ಲಾ ಬೋರ್ಡು ವಿಶೇಷ ಸಭೆ–ಶ್ರೀ ಬಿ. ಆರ್. ಕರ್ಕೇರ ಎಂ. ಎಲ್. ಎ. ಅವರ ನಿಧನದಿಂದ ಖಾಲಿಯಾದ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆಯು ಇದೇ ತಾ. 13ರಂದು 2 ಗಂಟೆಗೆ ನಡೆಯಲಿರುವುದೆಂದು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ತಿಳಿಸುತ್ತಾರೆ.

ಬೊಂಬಾಯಿ ದ. ಕ. ಬ್ರಾಹ್ಮಣರ ಸಂಘದ — ವಾರ್ಷಿಕ ಸಭೆಯು ಕಳೆದ ತಾ. 27ರಲ್ಲಿ ಮಾತುಂಗಾ ಸಯನ್ ರಸ್ತೆಯಲ್ಲಿಯ ನೇಶನಲ್ ಕನ್ನಡ ಎಜ್ಯುಕೇಶನ್ ಹ್ಯಾಸ್ಕೂಲಿನ ಮಹಡಿಯಲ್ಲಿ ಶ್ರೀ ಕುಂಜಿ ಭುಜಂಗರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು; ಸಂಘದ ವಾರ್ಷಿಕ ವರದಿ, ಲೆಕ್ಕ ಪತ್ರಗಳ ಮಂಜೂರಾತಿಯಾದ ಮೇಲೆ ಡಾ| ಯು ರಘುರಾಮರಾಯರನ್ನು ತಿರುಗಿ ಸಂಘದ ಕಟ್ಟಡದ ಟ್ರಸ್ಟಿಯನ್ನಾಗಿ ಚುನಾಯಿಸಲಾಯಿತು. ಅಂತೆಯೇ ಸಂಘದ ಉಪಾಧ್ಯಕ್ಷ ಶ್ರೀ ಯು. ಪಿ. ಉಪಾಧ್ಯರ ನೇತೃತ್ವದಲ್ಲಿ ಸಂಘದ ಕಟ್ಟಡ ಮತ್ತು ಕೃಷ್ಣ ಮಂದಿರದ ಕೆಲಸವು ಭರದಿಂದ ಸಾಗುತ್ತಲಿರುವುದಕ್ಕಾಗಿ ಶ್ರೀಯುತರನ್ನು ಶ್ಲಾಘಿಸಿ ಎಪ್ರಿಲ್ 17ಕ್ಕೆ ಭವನದ ಪ್ರವೇಶ ಹಾಗೂ ಶ್ರೀಕೃಷ್ಣ ವಿಗ್ರಹ ಪ್ರತಿಷ್ಠಾದಿ ಕಾರ್ಯಗಳು ನೆರವೇರುವವೆಂದು ಅಧ್ಯಕ್ಷರು ಜ್ಯಾಹೀರು ಮಾಡಿದರು. ಮುಮ್ರಾಸ್ ಬಾಸ ಪ್ರಕಾಶದ ಮಾಲಿಕರಾದ ಶ್ರೀ ಕೆ. ಸೀತಾರಾಮ ರಾಯರು ರೂ. 15,000–ವನ್ನೂ ಶ್ರೀ ಅದಮಾರು ಶ್ರೀ ಪಾದಂಗಳವರು ರೂ. 5,000—ವನ್ನೂ ಮುಂದಾಗಿ ದಾನವಿತ್ತಿದ್ದಾರೆಂದು ಸ್ವಾಗತ ಮಂಡಳಿಯ ಅಧ್ಯಕ್ಷ ಡಾ| ಯು. ಬಿ. ನಾರಾಯಣ ರಾಯರು ತಿಳಿಸಿದರು. ಬಳಿಕ ಹೊಸ ಕಾರ್ಯಕಾರಿ ಮಂಡಳಿಯ ಚುನಾವಣೆಯಾಯಿತು. ಶ್ರೀ ಎ. ಭುಜಂಗ ರಾಯರು ಅಧ್ಯಕ್ಷ, ಶ್ರೀಮತಿ ಡಾ| ಲಲಿತಾ ರಾವ್ ಮತ್ತು ಶ್ರೀ ಯು. ಪಿ. ಉಪಾಧ್ಯ—ಉಪಾಧ್ಯಕ್ಷರು, ಶ್ರೀ ಟಿ. ಸುಬ್ಬರಾವ್ ಮತ್ತು ಶ್ರೀ ಯು. ರಾಮ ರಾವ್–ಗೌರವ ಕಾರ್ಯದರ್ಶಿಗಳು, ಶ್ರೀ ಎಂ. ವ್ಯಾಸರಾವ್ ಗೌರವ ಕೋಶಾಧ್ಯಕ್ಷರು. ಸಾರ್ವಜನಿಕ ಭವನಕ್ಕೆ «ಗೀತಾ ಗೋವಿಂದ ಸ್ಮಾರಕ ಸದನ» ಎಂದು ನಾಮಕರಣ ಮಾಡಲಾಯಿತು. ಇದಕ್ಕಾಗಿ ಶ್ರೀ ಯು. ಆರ್. ಆಚಾರ್ಯ ಸಹೋದರರು ರೂ. 20,000ರವನ್ನು ದಾನವಾಗಿ ಕೊಟ್ಟಿರುವರೆಂದು ಕಾರ್ಯದರ್ಶಿಗಳು ತಿಳಿಸಿದರು. ಶ್ರೀ ಪಿ. ಸುಬ್ಬರಾಯರನ್ನು ಸಂಘದ ಲೆಕ್ಕ ಪರಿಶೋಧಕರಾಗಿ ಚುನಾಯಿಸಲಾಯಿತು.

ತೋನ್ಸೆ — ಕಳೆದ ತಾ 29ರಲ್ಲಿ ಮಂಗಳೂರಿನ ಎಡ್ವಕೇಟ್ ಶ್ರೀ ಎನ್. ಎಸ್. ಸುವರ್ಣರ ಅಧ್ಯಕ್ಷತೆಯಲ್ಲಿ ತೋನ್ಸೆ ಗರಡಿಯ ವಠಾರದಲ್ಲಿ ಬಿಲ್ಲವ ಯೂನಿಯನ್ ಈಡಿಗ ಸಂಘದ ಕಮಿಟಿ ಸ್ಥಾಪಿಸಲಾಯಿತು. ಸಮಾಜಾಭಿವೃದ್ಧಿಯ ಕುರಿತು ಶ್ರೀಗಳಾದ ಗಂಗಾಧರ ದಾಸ್ ಎನ್., ಕಾಳಪ್ಪ ಜತ್ತನ್ನ, ಬಿ. ಕೊರಗಪ್ಪ, ಆರ್. ಜೆ ಮುಟ್ಟಿ, ಶಾಂತಪ್ಪ ಮಾಸ್ಟರ್, ವಿಶ್ವನಾಥ ಮಾಸ್ಟರ್, ಡಾ. ಕೆ. ಎನ್. ಸುವರ್ಣ ಮೊದಲಾದವರು ಭಾಷಣವಿತ್ತ ಮೇಲೆ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಸಿಂಡಿಕೇಟಿನ ಮಹಾಸಭೆ— ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಮಹಾಸಭೆಯು ತಾ. 30ರಲ್ಲಿ ಚೇರ್ಮೇನ್ ಶ್ರೀ ಟಿ ಎಂ. ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಪೈಗಳು ಈ ಸಂದರ್ಭದಲ್ಲಿ ಪಾಲುಗಾರರನ್ನು ಸ್ವಾಗತಿಸಿ ಬ್ಯಾಂಕಿನ ಪ್ರಗತಿಪರ ಕಾರ್ಯಗಳನ್ನು ವಿವರಿಸಿದರು. ಬಳಿಕ ಕಾರ್ಯಕ್ರಮಗಳು ಮಂಜೂರಾದವು. ಆರಂಭದಲ್ಲಿ ಸ್ಪೆಶ್ಯಲ್ ಮಹಾಸಭೆಯು ಜರಗಿ ಬ್ಯಾಂಕಿನ ಪಾಲು ಭಂಡವಾಳವನ್ನು ಹೆಚ್ಚಿಸುವ ಕುರಿತು ನಿರ್ಣಯವಾಯಿತು. ಪಾಲುಗಾರರ ಪರವಾಗಿ ಶ್ರೀ ಪಿ. ಶ್ರೀಪತಿ ಆಚಾರ್ಯರು ಬ್ಯಾಂಕಿನ ಉನ್ನತ ಸ್ಥಿತಿಗೆ ಕಾರಣರಾದ ಡೈರೆಕ್ಟರ ಮಂಡಳಿಯನ್ನೂ ಸಿಬ್ಬಂಧಿಯನ್ನೂ ಅಭಿನಂದಿಸಿದರು.

ಉಡ್ಪಿ ಮುನಿಸಿಪಲ್ ಮಹಾತ್ಮಾಗಾಂಧಿ ಬುನಾದಿ ಶಾಲೆ —ಯ ವರ್ಧಂತಿಯು ಕಳೆದ ತಾ. 28ರಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಜಿ. ಎಸ್. ನಾಗಮೋತಿ ಎಂ. ಎ. ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಪ್ರಧಾನಾಧ್ಯಾಪಕ ಶ್ರೀ ಕೆ. ಕೇಶವ ಕುದ್ವರು ವರದಿವಾಚನ ಮಾಡಿದರು. ಶ್ರೀ ಪಿ. ಎನ್. ಕೃಷ್ಣಮೂರ್ತಿರಾಯರು ಸ್ವಸ್ತಿವಾಚನ ಮಾಡಿದ ಮೇಲೆ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ಸಾಹಿತ್ಯಪೂರ್ಣ ಶೈಲಿಯಲ್ಲಿ ಸಂದರ್ಭೋಚಿತ ಭಾಷಣವಿತ್ತರು. ಕೊನೆಗೆ ವಿವಿಧ ವಿನೋದಾವಳಿ ಕಾರ್ಯಕ್ರಮಗಳು ನೆರವೇರಿದುವು.

ಅಂಕೋಲೆಯ ಜೈ ಹಿಂದ್ ಹ್ಯಾಸ್ಕೂಲಿಗೆ ಕೇಂದ್ರ ಸರಕಾರದ ವಿದ್ಯಾಖಾತೆಯಿಂದ ಕ್ರೀಡಾ ರಂಗವನ್ನು ಕಟ್ಟಿಸಿಕೊಳ್ಳಲು ೨೫ ಸಾವಿರ ರೂ.ಗಳ ವಿಶೇಷ ಸಹಾಯ ಧನ ದೊರಕಿದೆಯೆಂದು ತಿಳಿಯುತ್ತದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 7/1959

ಶೇಕ್ ಮಹಮದ್ ಇಬ್ರಾಹಿಂ ಸಾಹೇಬ—
ವಾದಿ
ಮತ್ತು ಗುಡ್ಡೆ ಫಕೀರ್ ಸಾಹೇಬ–ಪ್ರತಿವಾದಿ
ಇವರೊಳಗೆ—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ತಾರೀಕು 18-8-54ರಲ್ಲು ವಾದಿಗೆ ಪ್ರತಿವಾದಿಯು ಬರಕೊಟ್ಟ ಮೂಲಗೇಣಿ ಚೀಟಿಗೆ ಕಾರಣವಾದ ಸ್ಥಿರಾಸ್ತಿಯ ಬಾಬ್ತು ತಾರೀಕು 18-8-58ಕ್ಕೆ ಪ್ರತಿವಾದಿಯಿಂದ ವಾದಿಗೆ ಬಾಕಿ ಮೂಲಗೇಣಿ, ಬಡ್ಡಿ ಕೂಡಾ ರೂಪ್ಯ 140-46ಕ್ಕೆ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾರೀಕು 6-4-59ಕ್ಕೆ ನಿಮ್ಮ ನೋಟಿಸಿನ ಬಗ್ಗೆ ಇಟ್ಟಿದೆ. ಅ ಕುರಿತು ಉತ್ತರಿಸುವಂತಾದ್ದಿದ್ದರೆ ಅ ದಿವಸ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By order of the Court)

T· S Mahammad Ali,
Advocate for Plaintiff.

Udipi, Dated 28—3—1959.

ನಮ್ಮ ಭಾರತ

ಟಿಕೇಟು ಪಡೆಯುದುದರಿಂದ ಪ್ರಯಾಣಿಕರಿಗೆ ಉಪದ್ರವ

ಇಂತಹ ಹವ್ಯಾಸ ನಾಗರಿಕತೆಗೆ ಎಂದೂ ಶೋಭೆ ತರಲಾರದು

ಮಣಿಪುರದ ಮಡಿಕೆ ಮಾಡುವ ಕಲೆಯು ಭಾರತದಲ್ಲಿಯೇ ಸುಪ್ರಸಿದ್ಧವಿದೆ. ಇಲ್ಲಿ ಕೈಯಿಂದ ತಟ್ಟಿ ಮಡಿಕೆಗಳನ್ನು ತಯಾರಿಸುತ್ತಿರುವುದನ್ನು ನೋಡಬಹುದು.

ಮಂಗಳೂರಿನ ಕಡೆ ನಾವೊಂದು ಮದುವೆ ಸಮಾರಂಭದಲ್ಲಿ ಭಾಗವಹಿಸುವ ಸಲುವಾಗಿ ಹೋಗಿದ್ದೆವು ನಾವು ಎಂದರೆ ಸುಮಾರು ೨೦ ಜನರ ಒಂದು ಪಂಗಡವೇ ಇತ್ತು. ನಾವೆಲ್ಲರೂ ಮಂಗಳೂರಲ್ಲಿ ಊಟ ಮೊದಲಾದುವನ್ನು ತೀರಿಸಿ ಉಡುಪಿಗೆ ಹೋಗ ಬಯಸಿದ್ದೆವು ಆಗ ಮಂಗಳೂರು - ಉಡುಪಿ ಕರಾವಳಿ ರಸ್ತೆಯು ನೇರ ಬಸ್ ಸಂಚಾರಕ್ಕೆ ತೆರೆದಿರಲಿಲ್ಲ. ಆದರೂ ಮೂಲ್ಕಿ ಹೊಳೆಯೊಂದರಲ್ಲಿ ಮಾತ್ರ ಸ್ವಲ್ಪ ತಡವಾಗಬಹುದು, ಅಂತೂ ಕರಾವಳಿ ರಸ್ತೆ ಹಿಡಿದರೆ, ಹತ್ತಾಣೆ ದುಡ್ಡೂ ಲಾಭ; ಜತೆಗೆ ಹತ್ತು ಮಿನಿಟಾದರೂ ಬೇಗನೆ ಹೋಗಬಹುದು ಎಂದುಕೊಂಡೆವು ಏಕೆಂದರೆ, ನಮಗೆ ಉಡುಪಿಗಿಂತಲೂ ಮುಂದೆ ಹೋಗಬೇಕಾಗಿತ್ತು.

ಕೋಸ್ಟ್ ಲೈನಿನ ಬಸ್ಸು ಒಂತು ಅದೇ ಮರ್ಚೆಡಿಸ್ ಬಸ್ಸು ಅದರ ಮುಂಭಾಗದಲ್ಲಿ ಒಳಗಡೆ ೪೦ + ೧೦ + ೨ ಎಂದು ಏನೇನೋ ಬರೆದಿದ್ದರು. ಅಂತೂ ಬಸ್ಸು ತುಂಬಿತು ಟಿಕೇಟು ಇಲ್ಲವೆಂದಾಯಿತು. ಸಮಯವೂ ಆಯಿತು. ಬಸ್ಸು ಹೊರಟಿತು ಕೂಳೂರು ಪಾವಂಜೆಯಲ್ಲಿ ಕೆಲವರು ಇಳಿದರು. ದಾರಿಯಲ್ಲಿ ಬೇರೆ ಕೆಲವರು ಹತ್ತಿದರು ಇದೆಲ್ಲವೂ ತೀರ ಸಾಮಾನ್ಯವಾಗಿಯೇ ನಡೆಯಿತು ಇದರಲ್ಲೇನೂ ವಿಶೇಷವಿಲ್ಲ

ಮೂಲ್ಕಿ ಸ್ಟೇಶನು ಕಾಣಿಸಿಕೊಂಡು, ಬಸ್ಸು ಅದರಲ್ಲಿ ನಿಂತಿತು ಪ್ರಯಾಣಿಕರು ಇಳಿದು ನದಿ ದಾಟತೊಡಗಿದರು ಕೆಲವರು ಅಲ್ಲಿಯೇ ಉಳಿದರು ನಮ್ಮ ಯಾತ್ರಾರ್ಥಿ ಪಂಗಡವೂ ನದಿತಾರಣ ಕಾರ್ಯದಲ್ಲಿ ಉದ್ಯುಕ್ತವಾಯಿತು. ಆದರೆ ಆಚೆಯ ಬಸ್ಸು ಮಾತ್ರ ಬಂದಿರಲಿಲ್ಲ

ಕಾಫಿ, ಎಳನೀರು ಕುಡಿದುದಾಯಿತು ಅರ್ಧ ಘಂಟೆಯೂ ಕಳೆಯಿತು ಇನ್ನೂ ಬಸ್ಸು ಕಾಣಿಸಲಿಲ್ಲ ಆ ಮೇಲೆ ವಿಚಾರಿಸಿದಾಗ ಇಷ್ಟರಲ್ಲೇ ಬಂದು ಬಿಡಬೇಕಿತ್ತು, ಆದರೆ, ಇಂದೇಕೋ ತಡವಾಗಿದೆ ಎಂಬ ಉತ್ತರ ಬಂತು ಅಂತೂ ಐದು ಮಿನಿಟುಗಳಲ್ಲಿ ಬಂತು ಎನ್ನಿ ಬಸ್ಸಿನಿಂದ ಇಳಿಯುವವರಿಗಿಂತಲೂ ಏರುವವರ ಸಂಭ್ರಮವೇ ಹೆಚ್ಚಾಗಿತ್ತು. ಕಂಡಕ್ಟರ ಕೂಗಿಕೊಂಡರೂ ಏರುವವರು ಸಮಾಧಾನ ತಾಳಲಿಲ್ಲ ಎಂತೂ ತುಸು ಪ್ರಯಾಸದಿಂದಲೇ ಇಳಿಯುವವರೂ ಏರುವವರೂ ತಂತಮ್ಮ ಕೆಲಸಗಳನ್ನು ಪೂರೈಸಿ ದೀರ್ಘವಾಗಿ ನಿಟ್ಟುಸಿರು ಬಿಟ್ಟರು

ಮೂಲ್ಕಿಯಲ್ಲಿ ಬಸ್ಸನ್ನೇರುವವರೂ ಏರಿಕುಳಿತರು ಕಂಡಕ್ಟರ "ಬೇಗ ಬೇಗ" ಎನ್ನುತ್ತಲೇ ಇದ್ದ. ಅಂತೂ ಕೂರುವವರೆಲ್ಲರೂ ಕೂರಿಯಾಯಿತು ಏಜಂಟನು ಬಂದು ಲೆಕ್ಕ ಮಾಡುವಾಗ ಒಂದು ಜನ ಹೆಚ್ಚಾಗಿರುವುದು ಗಮನಕ್ಕೆ ಬಂದು "ಇನ್ನು ಯಾರಿಗೆ ಟಿಕೇಟಾಗಬೇಕ ?"ಎಂದು ವಿಚಾರಿಸಿದರೂ ಎಲ್ಲರೂ ಮೌನವಾಗಿ ತಮ್ಮ ಸಂಭಾವಿತತನವನ್ನು ಪ್ರದರ್ಶಿಸಿದರು. ಟಿಕೇಟುಗಳ ಪರಿಶೀಲನೆ ನಡೆಯಿತು ಎಲ್ಲರೂ ಟಿಕೇಟ ತೋರಿಸಿದೆವೆಂದರು ಕಂಡಕ್ಟರನೂ ಒಪ್ಪಿದನು. ಆದರೆ, ಜನ ಮಾತ್ರ ಹಾಗೆಯೇ ಹೆಚ್ಚು

ಏನು ಮಾಡುವುದೆಂದು ತಿಳಿಯದೆ ಕಂಡಕ್ಟರ ತಬ್ಬಿಬ್ಬಾದ "ಅರು ಘಂಟೆಯಾದರೂ ಸರಿಯೇ ಬಸ್ಸ ಬಿಡಲಾರೆ ಯಾರಿಗೆ ಟಿಕೇಟಾಗಿಲ್ಲ?" ಎಂದು ಘರ್ಜಿಸಿದ ಇನ್ನೊಮ್ಮೆ. ಯಾರೊಬ್ಬನೂ ಮುಂದೆ ಬರಲಿಲ್ಲ. ನಾವು ೨೦ ಜನರಿದ್ದೆವು ನಮ್ಮಂತಹುದೇ ಮತ್ತು ೧೫ ಜನರ ಗುಂಪೊಂದು ಮೂಲ್ಕಿಯಲ್ಲಿ ಹತ್ತಿತ್ತು ನಮ್ಮ ಜನರೆಲ್ಲವನ್ನೂ ಕಂಡಕ್ಟರನಿಗೆ ನಾಲ್ಕೈದು ಬಾರಿ ಲೆಕ್ಕ ಮಾಡಿ ತೋರಿಸಿದೆವು. ಉಳಿದ ೧೦-೧೫ ಟಿಕೇಟುಗಳಲ್ಲಿಯೇ ಈ ತಪ್ಪು. ಇದೇಕೆ ಹೀಗೆ? ಎಂಬುದು ತಿಳಿಯಲಿಲ್ಲ ಕಂಡಕ್ಟರನೂ ಪಾಪ, ಬೇಸ್ತು ಬಿದ್ದು ಹೇಳಿದ—"ಎಲ್ಲ ಕೆಳಗಿಳಿಯಿರಿ. ಒಬ್ಬೊಬ್ಬರಾಗಿ ಟಿಕೇಟು ತೋರಿಸಿ ಮೇಲೆ ಬನ್ನಿ" ಆಜ್ಞೆಯನ್ನು ಕೆಲವರು ಮನ್ನಿಸಿ ಇಳಿಯತೊಡಗಿದರು ಆದರೆ, ನಮ್ಮೆರಡು ಪಂಗಡಗಳಲ್ಲಿ ಮಕ್ಕಳೂ ಹೆಂಗಸರೂ ಇದ್ದರು. ಹಾಗಾಗಿ, ಕೆಳಗಿಳಿದು ಮೇಲೆ ಬರುವುದು ಪ್ರಯಾಸವಲ್ಲದೆ ನಾವೇನೂ ತಪ್ಪಿತಸ್ಥರಲ್ಲವೆಂದೂ ತಿಳಿದು, ನಾವೆರಡು ಗುಂಪುಗಳವರು "ಮೊದಲೇ ಏಕೆ ನೋಡಲಿಲ್ಲ? ಹತ್ತಿದ ಮೇಲೆ ಇಳಿಯುವುದೆಂದರೆ, ಅದೇನೂ ಸುಲಭವಲ್ಲ" ಎಂದು ಕುಳಿತೇ ಬಿಟ್ಟೆವು.

ಕಂಡಕ್ಟರನು ಬೇಸರದಿಂದ ಕೂಗಾಡಿದ—"ಕತ್ತಲಾದರೂ ಬಸ್ಸ ಹೊರಡಲಾರದು ಇಳಿಯಿರಿ ಇಲ್ಲವೇ ಯಾರಿಗೆ ಟಿಕೇಟಿಲ್ಲ ಹೇಳಿರಿ" ಎಂದು. ಯಾರೂ ಆ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ ಬದಲು, 'ಬುದ್ಧಿ ಎಲ್ಲಿಟ್ಟು ಕೆಲಸಕ್ಕೆ ಬಂದಿದ್ದೀಯ? ಯಾರಿಗೆ ಟಿಕೇಟುಗಲಿಲ್ಲವೆಂದು ಕಂಡುಹಿಡಿಯಲು ನಿನಗೆ ಒಂದು ತಾಸೂ ಸಾಕಾಗದಿದ್ದರೆ, ಇಳಿ ಇಲ್ಲಿಂದ, ನಾವೇ ತೋರಿಸಿಕೊಡುತ್ತೇವೆ" ಎಂಬ ಒಂದು ಗಡಸು ಧ್ವನಿ ಕೇಳಿತು. ಇದರಿಂದ ಇನ್ನೂ ತಡಮಾಡುವುದು ಒಳಿತಾಗಲಾರದೆಂದು ತಿಳಿದು ಕೊನೆಗೂ ತನ್ನ ಸೋಲೊಪ್ಪಿಕೊಂಡು ಅವನು ಬಸ್ಸು ಹೊರಡಿಸಲು ಆಜ್ಞೆಯಿತ್ತ ಅಂತೂ ಒಂದು ಹೆಚ್ಚಿನ ಜನನ್ನೇ ಹೊತ್ತುಕೊಂಡು ಬಸ್ಸು ಹೊರಟಿತು.

ಉದಿಯಾವರದ ವರೆಗಿನ ಪ್ರಯಾಣದ ನಡುವೆ "ಈ ವ್ಯಕ್ತಿ ಯಾರು" ಎಂಬುದೇ ಪ್ರಶ್ನೆಯಾಗಿ ಪರಿಣಮಿಸಿತು ಆದರೂ ಉತ್ತರ ದೊರೆಯಲಿಲ್ಲ ಉದಿಯಾವರದಲ್ಲಿಯೂ ಇಳಿಯುವವರು ಹತ್ತುವವರ ಗೌಜಿ ಮುಗಿದು ಲೆಕ್ಕಮಾಡುವಾಗ, ಅಲ್ಲಿಯೂ ಒಂದು ಜನ ಹೆಚ್ಚು! ಮೂಲ್ಕಿಯ ಜನ ಇಲ್ಲಿಯೂ ಇದೆ ಎಂದು ನಾವು ಕೂಗಿಕೊಂಡೆವು. "ಯಾರೆಂದು ತಿಳಿದಿದ್ದರೆ, ನಾನಾದರೂ ಇಳಿದು ಸಿಟಿ ಬಸ್ಸಿನಲ್ಲಿ ಬರುತ್ತಿದ್ದೆ" ಎಂದರು ಕೆಲವರು ಅಂತೂ ಟಿಕೇಟುಗಳ ಪರಿಶೀಲನೆಗೆ ಮೊದಲಾಯಿತು ಉದ್ದನೆಯ ಸೀಟಿನಲ್ಲಿ ನಮ್ಮ ಗೆಳೆಯರ ೧೫ ಜನರ ಪಂಗಡ ಕುಳಿತಿತ್ತು. ಅವರ ನಾಯಕರು ತಮ್ಮವರನ್ನು ತೋರಿಸಿಕೊಟ್ಟರು ಅವರ ನಡುವಿನಲ್ಲಿ ಒಬ್ಬ ಸೇರಿಕೊಂಡಿದ್ದ. ಅವನನ್ನು ಕಂಡು "ಇವರು?" ಎಂದ ಚೆಕ್ಕರ್ 'ಇವನಲ್ಲ" ಎಂದುತ್ತರ ಬಂತು. ಆಗ, "ನಿಮ್ಮ ಟಿಕೇಟು ನೋಡೋಣ" ಎಂದನವ 'ಇಲ್ಲಿಯೇ ಕೊಡುತ್ತೀರಾ?" ಎಂದು ತುಳುವಿನಲ್ಲಿ ಕೇಳುತ್ತ ಆತ ಕಿಸೆಗೆ ಕೈ ಹಾಕಿ ಎರಡಾಣೆ ತೆಗೆದು ಕೊಟ್ಟರು!

ನಮಗೆಲ್ಲ ಸಿಟ್ಟು ಬಂತು. "ಈ ಅಜ್ಜಯ್ಯ ಮೂಲ್ಕಿಯಲ್ಲಿ ನಮ್ಮನ್ನು ಒಂದು ತಾಸು ಕಾಯಿಸಿದುದಲ್ಲದೆ ಇಲ್ಲಿಯೂ ಕಾಲು ತಾಸು ತಡ ಮಾಡಿದ. ಅಲ್ಲಿಯೇ ಹೇಳಿ ಬಿಟ್ಟಿದ್ದರೆ ಇವನ ದಾಡಿಯೇನು ಹೋಗುತಿತ್ತು?' ಎಂದರೊಬ್ಬರು.

"ಪಾಪ, ಎರಡಾಣೆಯಲ್ಲಿ ಮೂಲ್ಕಿಯಿಂದ ಉಡುಪಿಗೆ ಹೋಗುವೆನೆಂದು ಹರಕೆ ಹೊತ್ತಿದ್ದ" ಎಂದರಿನ್ನೊಬ್ಬರು.

"ಅನಪೇಕ್ಷಿತ ಪ್ರಯಾಣಿಕ ಅನಪೇಕ್ಷಿತನಾಗಿ ಬಂದು ಅನಪೇಕ್ಷಿತ ವಿಳಂಬ ಮಾಡಿದ" ಎಂದರೊಬ್ಬರು.

ನಮ್ಮ ಭಾರತದಲ್ಲಿ ಇಂತಹುದ ನಡೆಯುವುದು ಅಪರೂಪವೆಂದು ಹೇಳುವುದು ಸರಿಯಾಗುವುದೆ?

— ರಾಶಿ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ
ಭಾವಾರ್ಚನೆ
ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ
ಆಕರ್ಷಕ ಮುಖಪತ್ರ ಬಿಳಿ ಕಾಗದ
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು
ಪ್ರಕಾಶಕರು ನವಯುಗ ಎಂಟರ್‌ಪ್ರೈಸ್ ಲಿ, ಉಡುಪಿ
ಮಾರಾಟಗಾರರು ನವಭಾರತ ಬುಕ್ ಡಿಪೊ, ಉಡುಪಿ

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಚಂದಾಹಣ ಬಾಕಿ ಇರುವವರು
ದಯಮಾಡಿ ಕಳುಹಿಸಿಕೊಡ
ಬೇಕಾಗಿ ವಿನಂತಿ.

ಲೋಕಸಭೆಯಲ್ಲಿ

ಮಂಗಳೂರು ರೈಲು ಬೇಗ ತಲುಪ ಬೇಕು

ಬೆಂಗಳೂರಿನ ಪ್ರವಾಸಿಕರಿಗೆ ತಕ್ಕ ಅನುಕೂಲತೆಗಳನ್ನು ಒದಗಿಸಬೇಕು. ಆಗುವ ವೆಚ್ಚವು ಸದುಪಯೋಗವಾಗ ಬೇಕು.

ಲೋಕ ಸಭೆಯಲ್ಲಿ ರೈಲ್ವೆ ಬೋರ್ಡಿನ ಬಜೆಟ್ ಬೇಡಿಕೆಯ ಚರ್ಚಾ ಕಾಲದಲ್ಲಿ, ಶ್ರೀ ಕೆ. ಆರ್. ಆಚಾರ್ ಅವರು ಮಾತನಾಡುತ್ತ, ಮಂಗಳೂರು—ಮದ್ರಾಸ್ ಮೈಲ್ ಮಂಗಳೂರಿಗೆ ಬೇಗನೆ, ಎಂದರೆ ಸಂಜೆ ೪ ಗಂಟೆಯ ವೇಳೆಗೇ ತಲುಪುವಂತಾಗಬೇಕು ಎಂದರು.

"ರೈಲ್ವೆ ಮುಂಗಡ ಪತ್ರದ ಸಾಮಾನ್ಯ ಚರ್ಚೆಯ ವೇಳೆಯಲ್ಲಿ, ನಮ್ಮ ರೈಲ್ವೆಗಳ ವೇಗ ಹೆಚ್ಚಿಸಬೇಕಾದ ಆವಶ್ಯಕತೆಯನ್ನು ಪ್ರಸ್ತಾವಿಸಿದೆ. ಈಗ ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದ ರೈಲುಗಳ ಕುರಿತು ಎರಡು ಮಾತು ಹೇಳಲು ಬಯಸುವೆನು. ನನ್ನ ಮತ ಕ್ಷೇತ್ರದಲ್ಲಿ ಒಟ್ಟು ೪-೫ ಮೈಲುದ್ದದ ರೈಲ್ವೆ ಇದೆ. ಆದರೂ ಬೇರೆ ರೈಲ್ವೆ ಸಂಪರ್ಕವೇ ಇಲ್ಲದ ಇಡೀ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳ ಜನತೆಗೆ ಇದು ಅತಿ ಪ್ರಾಮುಖ್ಯವಾಗಿದೆ. ೮೦ ಮೈಲು ದೂರದಿಂದ ಇಲ್ಲಿಯ ರೈಲ್ವೆ ನಿಲ್ದಾಣಕ್ಕೆ ಬರುವವರಿದ್ದಾರೆ.

"ಮಂಗಳೂರಿನಿಂದ ಮದ್ರಾಸಿಗೆ ಒಂದು ರೈಲು ಇದೆ. ಹಿಂದೆ ಈ ರೈಲು ಮದ್ರಾಸಿನಿಂದ ಮಂಗಳೂರಿಗೆ ೨೧-೨೨ ಗಂಟೆಗಳಲ್ಲಿ ಬರುತ್ತಿತ್ತು. ಆದರೆ ಈಗ ಇದು ೨೪ ಗಂಟೆಗಳ ಕಾಲ ತೆಗೆದುಕೊಳ್ಳುತ್ತದೆ. ಈ ಮೂರು ಗಂಟೆ ಅಧಿಕ ವೇಳೆಯ ಬಗ್ಗೆ ನನ್ನ ಆಕ್ಷೇಪವಲ್ಲ. ಹಿಂದೆ ಈ ರೈಲು ಸಂಜೆ ೪ ಗಂಟೆಗೇ ತಲುಪುತ್ತಿದ್ದಿತು. ಆದರಲ್ಲಿ ಬಂದ ಟಪ್ಪಾಲು ಮತ್ತು ಪತ್ರಿಕೆಗಳೂ ಅದೇ ದಿನ ಜಿಲ್ಲೆಯ ಮೂಲೆಗಳಿಗೂ, 80 ಮೈಲು ದೂರದಲ್ಲಿರುವ ಮಡಿಕೇರಿಗೆ ಕೂಡಾ ಬಸ್ಸುಗಳಲ್ಲಿ ತಲಪುತ್ತಿದ್ದಿತು. ಆದರೆ ಈಗ ಈ ರೈಲು ೬-೧೫ಕ್ಕೆ ಮಂಗಳೂರಿಗೆ ತಲುಪುತ್ತದೆ. ಹೀಗಾಗಿ ಜಿಲ್ಲೆಯ ಇತರ ಕಡೆಗಳಿಗೆ ಹೋಗುವ ಬಸ್ ಸಿಗುವುದಿಲ್ಲ, ಮಾತ್ರವಲ್ಲ ರೈಲು ಕೊಂಚ ವೇಳೆ ವಿಳಂಬ ಬಂದ ದಿನ ಮಂಗಳೂರು ನಗರದವರಿಗೂ ಅಂದಿನ ಟಪ್ಪಾಲು ಬಟವಾಡೆಯಾಗದು.

ರೈಲಿನ ವೇಗ ಹೆಚ್ಚಿಸಲು ತೊಡಕಿದೆ ಎನ್ನಲಾಗುತ್ತಿದೆ. ಹಾಗಿದ್ದರೆ, ಮದ್ರಾಸಿನಿಂದ ಹೊರಡುವ ವೇಳೆಯನ್ನು ಬದಲಿಸಿ, ಈ ರೈಲು ಮಂಗಳೂರಿಗೆ ನಾಲ್ಕು ಗಂಟೆಗೆ ತಲುಪುವಂತಾಗಬೇಕೆಂದು ನನ್ನ ವಿನಂತಿ. ಈಗ ನಮ್ಮ ರಾಜಧಾನಿಯಾಗಿರುವ ಬೆಂಗಳೂರಿನಿಂದಲೂ ಇದೇ ರೈಲಿನಲ್ಲಿ ಬರಬೇಕಾಗುವುದು. ಬೆಂಗಳೂರು ಮತ್ತು ಮದ್ರಾಸ್‌ಗಳಿಂದ ಹೊರಡುವ ವೇಳೆಯನ್ನು ಬದಲಿಸಿ, ಮಂಗಳೂರಿಗೆ ಈ ರೈಲು ಸಂಜೆ ನಾಲ್ಕು ಗಂಟೆಗೆ ತಲುಪುವಂತೆ ಮಾಡಬೇಕು.

ಮಂಗಳೂರಿನಿಂದ ಬೆಂಗಳೂರಿಗೆ, ಒಂದನೆಯ, ಎರಡನೆಯ ಹಾಗೂ ಮೂರನೆಯ ತರಗತಿಗಳಿರುವ ಒಂದು ಬಂಡಿಯನ್ನು ಹಿಂದೆ ಮದ್ರಾಸ್ ಮೈಲಿಗೆ ಜೋಡಿಸಲಾಗುತ್ತಿದ್ದಿತು. ಈಗ ಅದಿಲ್ಲ. ಹೀಗಾಗಿ ಬೆಂಗಳೂರು ಪ್ರಯಾಣಿಕನು ಜೋಲಾರಪೇಟೆಯಲ್ಲಿ ನಡು ರಾತ್ರಿಯಲ್ಲಿ ಇಳಿದು ಬೆಂಗಳೂರು ರೈಲನ್ನು ಹಿಡಿಯಬೇಕಾಗುತ್ತದೆ. ಮಂಗಳೂರಿನ ಹಾಗೂ, ಮಡಿಕೇರಿಯಿಂದ ಮಂಗಳೂರಿಗಾಗಿ ಬೆಂಗಳೂರಿಗೆ ಹೋಗುವ ರೈಲು ಇದೊಂದೇ ಆಗಿರುವುದರಿಂದ, ಇದನ್ನು ಸುಧಾರಿಸಿ, ಹಿಂದಿನಂತೆ ಎಲ್ಲ ತರಗತಿಗಳಿರುವ ಮಂಗಳೂರು–ಬೆಂಗಳೂರು ಬಂಡಿಯನ್ನು ಈ ರೈಲಿಗೆ ಜೋಡಿಸಬೇಕೆಂದು ವಿನಂತಿ.

ಮಂಗಳೂರಿನಲ್ಲಿರುವ ಗೂಡ್ಸ್ ನಿಲ್ದಾಣ ಅತಿ ಹೀನಸ್ಥಿತಿಯಲ್ಲಿದೆ, ಇಲ್ಲಿಗೆ ಹೋಗುವ ರಸ್ತೆಯೂ ಅತಿ ಹೀನಸ್ಥಿತಿಯಲ್ಲಿದೆ. ಮಳೆಗಾಲದಲ್ಲಿ ಸಾಮಾನು ಒಯ್ಯುವುದಂತಿರಲಿ. ಮನುಷ್ಯನೂ ಗೂಡ್ಸ್ ಬಂಡಿಯ ಸಮೀಪ ಹೋಗುವುದು ಕಷ್ಟ. ಸರಕಾರ ಈ ಕಡೆ ಗಮನ ಕೊಡಬೇಕೆಂದು ಪ್ರಾರ್ಥನೆ.

ಕೊನೆಯದಾಗಿ ವ್ಯಾಪಾರಿ ದಂಧೆಗಳ ಗುಮಾಸ್ತೆಯರು ತಮ್ಮ ಸಂಕಷ್ಟಗಳ ಬಗ್ಗೆ ಹಲವು ಬಾರಿ ಮನವಿಗಳನ್ನೊಪ್ಪಿಸಿದರೂ ಅವು ಸರಕಾರದ ಗಮನಕ್ಕೆ ಇನ್ನೂ ಬಂದಿಲ್ಲ ಎಂದು ಕೇಳುತ್ತೇನೆ. ಈ ವಿಚಾರವನ್ನೂ ಪರಿಶೀಲಿಸಬೇಕು. ಉದಾಹರಣೆಗಾಗಿ: ದೆಹಲಿಯಲ್ಲಿ ಟಿಕೆಟ್ ಕೊಡುವ ಆಫೀಸಿಗೆ ನಾನೊಮ್ಮೆ ಹೋಗಿದ್ದೆ. ಅಲ್ಲೇನೊ ಹೇರಳ ವಿದ್ಯುತ್ ಪಂಕಗಳು ತಿರುಗುತ್ತಿವೆ. ಆದರೆ ಅವುಗಳನ್ನು ಅಳವಡಿಸಿದ ರೀತಿಯಲ್ಲಿ, ಅಲ್ಲಿ ಕೆಲಸ ಮಾಡುವ ನೌಕರರ ಕಡೆಗೆ ಗಾಳಿ ಬೀಸುವುದೇ ಇಲ್ಲ. ಈ ಬಗ್ಗೆ ಹಲವು ಬಾರಿ ಮೇಲಾಧಿಕಾರಿಗಳಿಗೆ ತಿಳಿಸಿದರೂ ಪ್ರಯೋಜನವಾಗಲಿಲ್ಲವಂತೆ. ಈಗ ಇರುವಂತೆ, ಈ ಪಂಕಗಳು ವಿದ್ಯುಚ್ಛಕ್ತಿಯ ವ್ಯಯಕ್ಕೆ ಒಂದು ದಾರಿ ಮಾತ್ರವಲ್ಲದೆ ಅದರಿಂದ ಪ್ರಯೋಜನವೂ ಇಲ್ಲ. ಈ ವಿಚಾರವನ್ನು ಪರಿಶೀಲಿಸುವಂತೆ ಮಾನ್ಯ ರೈಲ್ವೆ ಮಂತ್ರಿಗಳಲ್ಲಿ ನನ್ನ ವಿನಂತಿ."

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ದೇಶ ಪರಿಚಯ

ಪರ್ವತ ಕಂದರ ಸಹಿತ ಅಸಾಧಾರಣ ಟಿಬೆಟ್

ಕಮ್ಯೂನಿಸ್ಟರನ್ನು ಒಲ್ಲದೆ ಹೊರಗೋಡಿಸುವ ಪ್ರಯತ್ನ ಅಲ್ಲಿ ನಡೆಯುತ್ತಿದೆಯೆ?

ಚೈನೀಯ ಸಾಮ್ರಾಜ್ಯದ ಅಂಗವಾದ ಟಿಬೇಟು ಉತ್ತರದಲ್ಲಿ ಸಿಂಕಿಯಾಂಗ್‌ನಿಂದಲೂ ದಕ್ಷಿಣದಲ್ಲಿ ನೇಪಾಲ, ಬರ್ಮಾ, ಭಾರತ ಮತ್ತು ಪಾಕಿಸ್ತಾನಗಳಿಂದಲೂ ಸುತ್ತುವರಿಯಲ್ಪಟ್ಟಿದೆ. ಜಗದ್ವಿಖ್ಯಾತವಾದ ಹಿಮಾಲಯ ಮತ್ತು ಕಿಲೇಮಾನ ಪರ್ವತಶ್ರೇಣಿಗಳ ನಡುವೆ ವ್ಯಾಪಿಸಿರುವ ದೇಶವೆಂದರೆ ಟಿಬೇಟು. ಟಿಬೇಟಿನ ವ್ಯಾಪಾರವು ಹಿಮಾಲಯ ಪರ್ವತಗಳಲ್ಲಿರುವ ಹಲವಾರು ಕಣಿವೆಗಳ ಮೂಲಕ ಭಾರತದೊಡನೆ ಹೆಚ್ಚಾಗಿ ನಡೆಯುತ್ತವೆ. ಆದರೆ, ಈ ಕಣಿವೆಗಳು ಚಳಿಗಾಲದಲ್ಲಿ ದುರ್ಗಮವಾಗಿ ಪರಿಣಮಿಸುವುವು. ಆಗ ವ್ಯವಹಾರವೂ ಸ್ತಬ್ಧವಾಗುವುದು. ಲಾಸವು ಟಿಬೇಟದ ರಾಜಧಾನಿಯಾಗಿದೆ. ನಾಲ್ಕೂಮುಕ್ಕಾಲು ಲಕ್ಷ ಚದರ ಮೈಲಿ ವಿಸ್ತೀರ್ಣದ ಈ ದೇಶವು ಪೀಠಭೂಮಿ ಪ್ರದೇಶವಾಗಿದ್ದು ಗುಡ್ಡ ಬೆಟ್ಟಗಳ ಆವಾಸಸ್ಥಾನವಾಗಿದೆ. ಟಿಬೇಟಿನ ಹೆಚ್ಚಿನ ಭಾಗವು ನಿರ್ಜನವಾಗಿದ್ದು ಅಲ್ಲಿ ಏನಿವೆಯೆಂಬುದೂ ತಿಳಿದ ಬಂದಿಲ್ಲ. ಸಾಮಾನ್ಯವಾಗಿ ಸಮುದ್ರತಟದಿಂದ ೧೬ ಸಾವಿರ ಅಡಿಗಳಷ್ಟು ಎತ್ತರದಲ್ಲಿರುವ ಈ ರಾಷ್ಟ್ರದಲ್ಲಿ ಸುಮಾರು ೧೦ ಲಕ್ಷ ಜನರಿರಬಹುದೆಂದು ಅಂದಾಜು ಮಾಡಿದ್ದಾರೆ. ಬೌದ್ಧಮತದ ಒಂದು ಪ್ರಕಾರವಾದ "ಲಾಮೊಯಿಸಮ್" ಎಂಬುದೇ ಇಲ್ಲಿನ ಹೆಚ್ಚಿನ ಪ್ರಜೆಗಳ ಮತವಾಗಿದೆ.

ಕೇವಲ ಪ್ರತೀಕಾರದ ಭಾವನೆಯಿಂದಾಗಿ, ೨೩-೫-೫೧ರಲ್ಲಿ ಆದ ಒಪ್ಪಂದವೊಂದರಂತೆ ಟಿಬೇಟು ಕಮ್ಯುನಿಸ್ಟ್ ಚೀನದ ಮಂಡಲಾಧಿಪತ್ಯವನ್ನು ಅಂಗೀಕರಿಸಿಕೊಂಡಿದೆ. ಆ ವೇಳೆ, ೧೯೫೧ರ ದಶಂಬರ ೨೦ರಂದು ಅದುವರೆಗೆ ದಲೈ ಮತ್ತು ಪಂಚನ್ ಲಾಮಾರ ಧಾರ್ಮಿಕ ಆಡಳಿತೆಯ ಬದಲಿಗೆ ಕಮ್ಯುನಿಸ್ಟ ಟಿಬೇಟಿನ ಶಾಸನಾಧಿಕಾರವು ಘೋಷಿಸಲ್ಪಟ್ಟಿತು.

ಆದರೆ, ಕಮ್ಯುನಿಸ್ಟರ ಕಪಿ ಮುಷ್ಟಿಯಲ್ಲಿ ಬಾಳುವುದನ್ನು ಮೆಚ್ಚದೆ ದಲೈ ಲಾಮಾ ಹಾಗೂ ಟಿಬೇಟಿಯನರು ಕಮ್ಯುನಿಸ್ಟರಿಗೆ ವಿರುದ್ಧವಾಗಿಯೇ ಕಾರಸ್ಥಾನಗಳನ್ನು ನಡೆಸುತಿದ್ದರು. ಇದರ ಗುಟ್ಟು ಅರಿತುಕೊಂಡ ಪೇಕಿಂಗ್ ಸರಕಾರ ಟಿಬೇಟಿನ ಆಡಳಿತೆಯು ಬಿಗಿಯಾಗುವಂತೆ ಅಪ್ರತ್ಯಕ್ಷವಾಗಿ ಪ್ರೋತ್ಸಾಹವಿತ್ತಿತು. ಆದರೂ ಕಮ್ಯುನಿಸ್ಟ ದ್ವೇಷವು ಮಾಯವಾಗದಿರಲು, ಇತ್ತೀಚೆಗೆ ಪೇಕಿಂಗ್‌ನಿಂದ ಲಾಮಾರವರು ನೇರವಾಗಿ ಪೇಕಿಂಗ್‌ಗೆ ಬರಬೇಕೆಂದು ಆಜ್ಞೆ ಇತ್ತಿದೆ. ಇದರ ವಿರುದ್ಧವಾಗಿ ದೇಶನಿಷ್ಠರಾದ ಖಂಪ ಜನರು ಹೋರಾಡಿದಕತೆ ಜನಜನಿತವಿದೆ.

ವಿಸ್ತಾರವಾದರೂ ದುರ್ಗಮ ಪರ್ವತಕಂದರ ಸಹಿತವಾದ ಟಿಬೇಟು ಜನಜೀವನಕ್ಕೆ ಅಯೋಗ್ಯವೇ ಆಗಿದೆ. ಯಾಕ್ ಪ್ರಾಣಿಗಳ ಮೂಲಕ ಇಲ್ಲಿ ಕೆಲಸಮಾಡಿಸುವುದು ಸಾಮಾನ್ಯ ರೂಢಿ. ಪೀಠಭೂಮಿಯೂ ಪ್ರಪಂಚ ಅತ್ಯಂತ ಎತ್ತರವೂ ಆದ ದೇಶದ ತುಂಬ ನದಿನದಗಳೂ ಹಿಮಾನಿಗಳೂ ಹರಿಯುತ್ತವೆ. ಅಂತೂ ಕಮ್ಯೂನಿಸ್ಟ ಚೀನ ಈ ಒಲ್ಲದ ಮಡದಿಯನ್ನು ಎಷ್ಟು ದಿನ ತನ್ನ ಬಳಿ ಆಳಿಕೊಳ್ಳುವುದೆಂದು ನೋಡಬೇಕಾಗಿದೆ.

ದಿ| ಕಿಲ್ಲೆಯವರ ಮೂರು ಪುಸ್ತಕಗಳು
ಪ್ರಾಚೀನ ತುಳುನಾಡು
(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ, ಬೆಲೆ: ರೂ. 2-00.
ಭಾರತದ ಕರ್ಣ
"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ...... ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು." (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.
ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0-12-0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಅಸಲ ನಂಬ್ರ 34|1959.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ.

ವಾದಿ ಮತ್ತು

1. M. ಪದ್ಮನಾಭಾಚಾರ್ಯ—ಗೋವಿಂದ ಆಚಾರ್ಯರ ಮಗ-ಶಿವಳ್ಳಿ ಗ್ರಾಮದ ಮಣ್ಣ.
2. ಗಣಪತಿ ಆಚಾರ್ಯ-ನಾಗಪ್ಪಾಚಾರ್ಯರ ಮಗ—ನಂಬ್ರ 76ನೇ ಬಡಗಬೆಟ್ಟು ಗ್ರಾಮ.

ಪ್ರತಿವಾದಿರು.

ಸದರಿ ಪ್ರತಿವಾದಿರಿಗೆ

ಸದ್ರಿ ಪ್ರತಿವಾದಿರು ವಾದಿ ಬೇಂಕಿಗೆ ತಾ. 15-4-1957ಲ್ಲಿ ರುಪಾಯಿ 100|-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಾಕಿ ವ ಬಡ್ಡಿ ಕೂಡಾ ರುಪಾಯಿ: 83-94ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾರೀಕು 13-4-1959ಕ್ಕೆ ತನಿಖೆ ಬಗ್ಗೆ ಮುದ್ದತಾಗಿಯದೆ. ಆ ದಿವ್ಸ ಸದರಿ ಪ್ರತಿವಾದಿರು ಸ್ವತಹ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದತರಿಸದೆಯಿದ್ರೆ ಅವರ ಗೈರ್‌ಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು ಈಮೂಲಕ ತಿಳಿಯಪಡಿಸಲಾಗಿಯದೆ.

M. Damodar Kamath
Advocate for Pltiff.
ತಾ. 26-3-59.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಸತ್ಯ ಕಥೆ

ಸರ್ವಶ್ರೇಷ್ಠ ರತ್ನಗಳಿಗೆ ಭಾರತ ಆಶ್ರಯಸ್ಥಾನ

“ಸ್ವರ್ಣಭೂಮಿ” ಎಂಬುದು ಭಾರತದ ಅನ್ವರ್ಥನಾಮ. ಕೆಲವು ಶ್ರೇಷ್ಠ ರತ್ನಗಳ ಕಥೆಗಳು ಇಲ್ಲಿವೆ.

ಮುತಫಿಲೀಯ ಸಂಸ್ಥಾನವನ್ನು ಗೋಲ್ಕೊಂಡವೆಂಬ ಹೆಸರಿನಿಂದಲೂ ಕರೆಯುತ್ತಾರೆ. ಇದು ಅತ್ಯಂತ ಆಕರ್ಷಕ ಜತೆಗೆ ಬಹಳ ಭಯಂಕರವಾದ ಒಂದು ಸಂಸ್ಥಾನವಾಗಿದೆ. ಈ ದೇಶದಲ್ಲಿ ಉದ್ದ ಹಾಗೂ ಎತ್ತರವಾದ ಪರ್ವತಶ್ರೇಣಿಯಿದ್ದು, ಅದು ನಾವು ಆಡುವ ಮಾತೆಲ್ಲವನ್ನೂ ಪ್ರತಿಧ್ವನಿಸುವಂತೆ ಮಾಡುತ್ತದೆ. ಅಲ್ಲದೇ ಈ ಪರ್ವತಗಳಲ್ಲಿ ಭಯಾನಕವಾದ ವಿಷದ ಹಾವುಗಳು ಬಹುಸಂಖ್ಯೆಯಲ್ಲಿ ವಾಸಿಸುತ್ತವೆ ಇದರಿಂದಾಗಿ ಇದು ಭಯಂಕರ ರೂಪವನ್ನು ತಾಳಿದ್ದರೆ, ಈ ಪರ್ವತಗಳ ತೊಡೆಗಳಲ್ಲಿಯೇ ಅಸಂಖ್ಯ ರತ್ನಗಳು ತುಂಬಿ ತುಳುಕಾಡುತ್ತಿವೆ. ಅದೂ ಒಂದಕ್ಕಿಂತ ಇನ್ನೊಂದು ಬಹು ಮೂಲ್ಯವಾಗಿದೆ.

ಈ ರೀತಿಯ ವಜ್ರರತ್ನಗಳ ಆಕರ್ಷಣೆಯಿಂದ ಮಾನವರು ವಿವಿಧ ಪ್ರಯತ್ನಗಳ ಮೂಲಕವಾಗಿ ಅವನ್ನು ಸಂಪಾದಿಸಲು ಕಷ್ಟಪಟ್ಟಿದ್ದಾರೆ ಆದರೆ, ಪರ್ವತಗಳ ಮೇಲಿರುವ ರತ್ನಗಳ ಸುತ್ತಮುತ್ತ ಹರಡಿಕೊಂಡಿರುವ ಚಿಕ್ಕ ದೊಡ್ಡ ಹಾವುಗಳ ಭಯಾನಕ ಅಸ್ತಿತ್ವದಿಂದಾಗಿ ಇದುವರೆಗೆ ಯಾರೊಬ್ಬನಿಂದಲೂ ಅವಕ್ಕೆ ಕೈ ಕೊಡುವಷ್ಟು ಧೈರ್ಯ ಬಂದಿಲ್ಲ. ಪರ್ವತಾರೋಹಣವೂ ಎಣಿಸಿರುವಷ್ಟು ಸುಲಭವಲ್ಲ. ದೊಡ್ಡ ದೊಡ್ಡ ಬಂಡೆಕಲ್ಲುಗಳು ಒಂದರ ಮೇಲೊಂದು ನಿಂತಿದ್ದು, ಹತ್ತುವ ಸಂದರ್ಭದಲ್ಲಿ ಉರುಳಿ ಬೀಳುವಂತೆ ಹೆದರಿಕೆಯಾಗುತ್ತಿದೆ. ಅಲ್ಲದೆ ಕಡಿದಾದ ಈ ದಾರಿಯಲ್ಲಿ ಮೇಲೇರುವಾಗ, ಎಲ್ಲಾದರೂ ಕಾಲು ಜಾರಿ ಕೆಳಗುರುಳಿದರೆ, ನಮ್ಮ ಉತ್ತರ ಸಂಸ್ಕಾರ ನಡೆಸುವುದಕ್ಕಾದರೂ ಶವವು ಸಿಗುವುದೆಂಬ ಆಶೆಯಿರುವುದಿಲ್ಲ.

ಇಷ್ಟೊಂದು ಭಯಾನಕತೆಯಿದ್ದರೂ, ಈ ಬೆಲೆಬಾಳುವ ರತ್ನಗಳ ಆಕರ್ಷಣೆಯು ಎಂದಿಗೂ ಕಡಿಮೆಯಾಗಿಲ್ಲ; ಅಲ್ಲದೇ ಜನರು ತಮ್ಮ ಪ್ರಯತ್ನಗಳನ್ನೂ ನಿಲ್ಲಿಸಿರುವುದಿಲ್ಲ. ಮಳೆಗಾಲವು ಮುಗಿದೊಡನೆಯೇ ಜನರು ಅತ್ಯಂತ ಪ್ರಯಾಸದಿಂದ ಈ ಬೆಟ್ಟಗಳನ್ನು ಸ್ವಲ್ಪ ದೂರಕ್ಕೆ ಹತ್ತಿ ಅಲ್ಲಿ ದೊಡ್ಡ ದೊಡ್ಡ ರತ್ನಗಳನ್ನು ಪಡೆಯಬಹುದು. ಏಕೆಂದರೆ, ಮಳೆಯ ನೀರು ಮೇಲಿಂದ ಕೆಳಗೆ ರಭಸದಿಂದ ಹರಿಯುವಾಗ, ಅದರೊಂದಿಗೆ ರತ್ನವೂ ಕೊಚ್ಚಿ ಬರುವುದುಂಟು. ಆದರೆ, ರತ್ನವೆಷ್ಟು ಬೆಲೆಬಾಳುವುದಾದರೂ, ಮಾನವನಿಗೆ ತನ್ನ ಪ್ರಾಣವು ಅತಿ ಪ್ರಿಯವಾಗಿರುವುದರಿಂದ, ಇಂತಹ ಪ್ರಯತ್ನಗಳು ನಡೆಯುವುದು ಕಡಮೆಯೆನ್ನಬೇಕು. ಆದರೂ ಮಳೆಗಾಲದಲ್ಲಿ ಹರಿದು ಬಂದ ರತ್ನಗಳನ್ನು ಹುಡುಕಿ ತೆಗೆಯಲು ಕಣಿವೆಯಲ್ಲಿ ಜನರ ಗುಂಪುಗಳು ಹೊರಡುತ್ತವೆ. ಕೆಲವೊಮ್ಮೆ ಈ ಗುಂಪುಗಳು ತಮ್ಮ ಕಾರ್ಯದಲ್ಲಿ ಯಶಸ್ವಿಯಾದುದೂ ಇದೆ.

ಹೆಚ್ಚಾಗಿ ಈ ರತ್ನಗಳ ಆಸೆಯಿಂದ ಜನರು ಪರ್ವತಗಳ ಕೆಳಗಡೆ ಗುಡಿಸಲು ಕಟ್ಟಿಕೊಂಡಿರುತ್ತಾರೆ. ಅಮೂಲ್ಯವಾದ ರತ್ನಗಳು ಕಣಿವೆಯ ಭಾಗದಲ್ಲಿ ಜಮೆಯಾಗುತ್ತವೆ. ಮಳೆಗಾಲದ ನೀರಿನೊಡನೆ ಕೊಚ್ಚಿಬಂದು. ರತ್ನಗಳ ಹರಳುಗಳಿರುವ ಆ ಕಣಿವೆಗೆ ಇಳಿದರೆ, ಅಲ್ಲಿ ಬೇಕಾದಷ್ಟನ್ನು ಪಡೆಯಬಹುದು. ಆದರೆ, ದುರ್ದೈವದಿಂ ! ಆ ಕಣಿವೆಯು ಪಾತಾಳಕ್ಕೆ ಸಮಾನವಾದುದರಿಂದಲೂ ಅದಕ್ಕೆ ಹೋಗುವ ದಾರಿಯಾದರೂ ಇರುವುದಿಲ್ಲ. ಆದರೂ ಮಾನವನು ತನ್ನ ಬುದ್ಧಿ ಮತ್ತೆಯನ್ನುಪಯೋಗಿಸಿ ಈ ರತ್ನ ಸಂಪಾದನೆಗೊಂದು ಉಪಾಯವನ್ನು ಹುಡುಕಿದ್ದಾನೆ. ಪರ್ವತಗಳಲ್ಲಿ ಗರುಡವರ್ಗದ ಒಂದು ಪಕ್ಷಿ ಜಾತಿಯಿದೆ. ಇವುಗಳ ಆಹಾರ ಸರ್ಪಗಳು. ಈ ಪಕ್ಷಿಗಳ ಸಹಾಯದಿಂದ ಪರ್ವತದ ಕಣಿವೆಗಳಿಂದಲೂ ರತ್ನಗಳನ್ನು ಪಡೆಯುವ ಬಗ್ಗೆ ಪ್ರಯತ್ನ ನಡೆಸುತ್ತಾರೆ.

ಮಾಂಸದ ದೊಡ್ಡ ದೊಡ್ಡ ತುಂಡುಗಳನ್ನು ರತ್ನದ ರಾಶಿಗಳ ನಡುವೆ ಎಸೆದು ಬಿಡುತ್ತಾರೆ. ಆ ವೇಳೆ ಯಾವುದಾದರೂ ಒಂದು ಪಕ್ಷಿಯು ಕಣಿವೆಗೆ ಹಾರಿ ಇಳಿದು, ಈ ಮಾಂಸವನ್ನು ಕಚ್ಚಿಕೊಂಡು ಹೊರಗೆ ಬರುವುದನ್ನೇ ಕಾಯುತ್ತಿರುತ್ತಾರೆ ಪಕ್ಷಿಯು ಕಣಿವೆಯಿಂದ ಹೊರಬಂದೊಡನೆಯೇ ಗಲಭೆಯೆಬ್ಬಿಸಿ, ಅದನ್ನು ಹೆದರಿಸುವ ಪ್ರಯತ್ನ ನಡೆಸುತ್ತಾರೆ. ಪಾಪ, ಈ ಪಕ್ಷಿಗಳು ಅಕಸ್ಮಾತ್ ಎದ್ದ ಗಲಭೆಯಿಂದಾಗಿ ಕಂಗಾಲಾಗಿ ಕೊಕ್ಕಿನಲ್ಲಿದ್ದ ಮಾಂಸದ ಚೂರನ್ನು ಬಿಟ್ಟು ಬಿಟ್ಟು ಓಡಿ ಹೋಗುತ್ತವೆ. ಜನರು ಮಾಂಸದ ಮುದ್ದೆಗೆ ಅಂಟಿದ ರತ್ನದ ಹರಳುಗಳನ್ನು ಆರಿಸುತ್ತಾರೆ.

ಪ್ರಸಿದ್ಧ ಇಟೇಲಿಯನ್ ಯಾತ್ರಿಕನಾದ ಮಾರ್ಕೋಪೋಲೋ ಈ ಹೃದಯಾಕರ್ಷಕ ಕಥೆಯನ್ನು ಬರೆದಿದ್ದಾನೆ. ಕ್ರಿ ಶ ನಾಲ್ಕನೆಯ ಶತಮಾನದಲ್ಲಿ ಅವನು ಭಾರತಕ್ಕೆ ಬಂದಿದ್ದನು. ಸ್ವದೇಶಕ್ಕೆ ಹಿಂದಿರುಗಿದ ವೇಳೆ ಅವನು ತನ್ನ ದೇಶದ ಜನರಿಗೆ ಭಾರತದ ಅಮೂಲ್ಯ ರತ್ನಗಳ ಕಥೆಗಳನ್ನು ವರ್ಣಿಸಿದ್ದನು.

ಮಾರ್ಕೋಪೋಲೊ ತಾನಾಗಿ ಗೋಲ್ಕೊಂಡಾಕ್ಕೆ ಬಾರದೆ ಇರುವುದರಿಂದ ಈ ಕಥೆಗಳಲ್ಲಿ ಅತಿಶಯೋಕ್ತಿ ಇದೆ ಎನ್ನುವವರೂ ಕೆಲವರಿದ್ದಾರೆ. ಅವನು ಹೇಳಿದ ಕೇಳಿದ ಸಂಗತಿಗಳನ್ನು ಆಯ್ದು ಈ ಕಥೆಗಳನ್ನು ಬರೆದಿರಲೂ ಬಹುದು. ಆದರೆ, ಸಾಮಾನ್ಯತಃ ಭಾರತವು ಸ್ವರ್ಣಭೂಮಿಯಾಗಿತ್ತೆಂಬುವನ್ನು ಮಾತ್ರ ಯಾರೂ ಅಲ್ಲೆನ್ನಲಾರರು. ಬೆಲೆಬಾಳುವ ವಜ್ರಮುತ್ತುಗಳು ಮೊತ್ತಮೊದಲಿಗೆ ಭಾರತದಲ್ಲಿಯೇ ಇದ್ದುವು. ಜಗತ್ತಿನ ಸರ್ವಶ್ರೇಷ್ಠ ವಜ್ರವಿಂದು ಭಾರತದಲ್ಲಿರದೆ ವಿದೇಶದಲ್ಲಿರುವುದಾದರೂ ಅದರ ಜನ್ಮಭೂಮಿಯು ಭಾರತವೇ ಆಗಿದೆ ಎಂಬುದು ನಮಗೆ ಹೆಮ್ಮೆಯ ಮಾತು.

ಇಂದು ಬ್ರಿಟಿಷ ಕೋಶದ ಕೀರ್ತಿಯನ್ನು ಹರಡಿಸುತ್ತಲಿರುವ ಲೋಕವಿಖ್ಯಾತವಾದ ಕೊಹಿನೂರ್ ವಜ್ರದ ಹುಟ್ಟೂರೇ ಭಾರತ. ಈ ವಜ್ರದ ಕಥೆಯು ಹೃದಯಾಕರ್ಷಕವಿರುವುದಲ್ಲದೇ ರಕ್ತರಂಜಿತವಾಗಿಯೂ ಇರುವುದು ಗೋಲಕಂಡದ ಕಣಿವೆಯಲ್ಲಿ ಒಂದು ದಿನ ಒಬ್ಬ ಸಾಮಾನ್ಯ ಕೂಲಿಗೆ ಒಂದು ದೊಡ್ಡ ಆಕಾರದ ವಜ್ರ ದೊರೆಯಿತು. ವಜ್ರದ ಆಕಾರ, ಪ್ರಕಾಶಗಳನ್ನು ಕಂಡು ಗೋಲ್ಕಂಡದ ವಜೀರನಾದ ಮೀರ ಜುಮಲಾನ ಮನಸ್ಸಿತ್ತ ಹರಿಯಿತು. ಕೂಲಿಗೆ ಕೊಂಚ ಹಣವನ್ನಿತ್ತು ತಾನದನ್ನು ಕೊಂಡುಕೊಂಡನು. ಅನಂತರ ಆಗಿನ ಮುಗಲ ಬಾದಶಹ ಶಹಾಜಹಾನನಿಗೆ ಅವನು ಈ ರತ್ನವನ್ನು ಉಡುಗೊರೆಯಾಗಿ ಇತ್ತನು. ಶಹಜಹಾನನನಂತರ ಇದು ಅವರಂಗಜೇಬನ ಕೈಸೇರಿತು. ನಾದಿರಶಹನ ಆಕ್ರಮಣಾನಂತರ ಅದು ಭಾರತದಿಂದ ಪರ್ಶಿಯಾವನ್ನು ಸೇರಿತು. ನಾದಿರ ಶಹನ ವಂಶಜನಾದ ಶಾಹರೂಖ ಎಂಬವನು ತನ್ನ ಕೈ ತೊಳೆಯುವುದಕ್ಕೋಸ್ಕರ ಅಫಘಾನಿಸ್ತಾನದ ಅಪ್ರತಿಮ ಬಲಶಾಲಿ ರಾಜನಾದ ಅಹಮದ ಶಹನಿಗೆ ಕಾಣಿಕೆಯಾಗಿ ಇತ್ತನು.

ಕೊಹಿನೂರನ್ನು ಅಹಮದಶಹನಿಂದಲೂ ಉಳಿಸಿಕೊಳ್ಳಲಾಗಲಿಲ್ಲ ಇವನ ಕಾಲಾನಂತರ ಬೇರೆ ಬೇರೆ ಅರಸರ ಕೈಸೇರಿ ಶಹಶೂಜಾನ ಹಸ್ತಗತವಾಯಿತು. ಈತನು ಈ ವಜ್ರವನ್ನು ನಿತ್ಯ ತನ್ನ ಪಗಡಿಯಲ್ಲಿ ಅಡಗಿಸಿಡುತಿದ್ದನು. ೧೮೧೧ರಲ್ಲಿ ಸಿಕ್ಖ ರಾಜನಾದ ರಣಜಿತ ಸಿಂಗನು ಅಫಘಾನಿಸ್ತಾನವನ್ನು ಯುದ್ಧದಲ್ಲಿ ಸೋಲಿಸಿದಾಗ, ಪಗಡಿ ಬದಲಾಯಿಸುವ ಸಂದರ್ಭದಲ್ಲಿ ಶೂಜನ ಪಗಡಿಯು ರತ್ನವು ರಣಜಿತನ ಕೈಸೇರಿತು. ಬ್ರಿಟಿಷರಿಂದ ಸೋಲಿಸಲ್ಪಟ್ಟ ಸೀಖರಾಜ ದಿಲೀಪಸಿಂಹನು ಈ ರತ್ನವನ್ನು ಆಂಗ್ಲೇಯಾಧಿಕಾರಿಗೆ ಕೊಟ್ಟು ಬಿಟ್ಟನು. ಆ ದಿನದಿಂದ ಕೊಹಿನೂರು ವಜ್ರವು ಬ್ರಿಟಿಷ ರಾಜಮುಕುಟದಲ್ಲಿ ಶೋಭಿಸುತ್ತ ಇದೆ.

ಕೊಹಿನೂರ್ ಮಾತ್ರವಲ್ಲದೆ, ಆರ್ಲಾಫ್. ಗ್ರೇಟ್ ಮುಗಲ್ ಮತ್ತು ಶೀಜ್ ಎಂಬ ಹೆಸರಿನ ಅನರ್ಘ ಸುವಿಖ್ಯಾತ ವಜ್ರವೂ ಭಾರತದ ರತ್ನಗರ್ಭದಲ್ಲಿಯೇ ಜನಿಸಿ ಬಂದವುಗಳಾಗಿವೆ. ಇವುಗಳ ಕಥೆಯು ಬಹಳ ಹಳೆಯ ಕಾಲದ್ದೆನಿಸುವುದಾದರೂ ಭಾರತವು ಸ್ವರ್ಣಭೂಮಿಯೆಂಬುದನ್ನಿವು ಸಮರ್ಥಿಸುತ್ತವೆ. ಈಗ ಅಮೆರಿಕೆಯ ಶ್ರೀಮಂತ ಮನೆತನವೊಂದರಲ್ಲಿರುವ ಅಮೂಲ್ಯ ವಜ್ರವೂ ಭಾರತ ಮೂಲದ್ದೇ ಆಗಿರುತ್ತದೆ. ೧೭ನೆಯ ಶತಮಾನದಲ್ಲಿ ಫ್ರೆಂಚಯಾತ್ರಿಕನಾದ ಬರ್ನಿಯರ್ ಪಾಟ್ನದ ದೇವಾಲಯವೊಂದರ ಮೂರ್ತಿಯನ್ನು ಈಕ್ಷಿಸುವಾಗ, ಈ ವಜ್ರವು ಅವನನ್ನು ಆಕರ್ಷಿಸಿತು. ಅವನೊಂದು ರಾತ್ರಿ ಇದನ್ನು ಅಪಹರಿಸಿ ಫ್ರಾನ್ಸಿಗೆ ಒಯ್ದನು. ಅನೇಕಾನೇಕ ಜನರ ಕೈಸೇರಿ, ಇದು ೧೯೧೧ರಲ್ಲಿ ಅಮೆರಿಕೆಯನ್ನು ಸೇರಿತು. ಅಂದಿನಿಂದ ಇಂದಿಗೂ ಇದು ಅಲ್ಲಿಯೇ ನೆಲೆನಿಂತಿದೆ.

ನೀವು ಎಂದಾದರೂ ಪೇರಿಸಿಗೆ ಹೋದರೆ, ಅಲ್ಲಿನಕೆಥೋಲಿಕ್ ಧರ್ಮಪ್ರಚಾರ ಮಂಡಳಿಯ ಕಾರ್ಯಾಲಯದಲ್ಲಿ ಪ್ರಪಂಚದ ಸರ್ವ ಶ್ರೇಷ್ಠ ಮುತ್ತು ಇರುವುದನ್ನು ನೋಡಲು ಮರೆಯಬೇಡಿರಿ. ಇದು ಮೂರಿಂಚು ಉದ್ದ, ಎರಡಿಂಚು ಅಗಲವಿದೆ. ವಜ್ರಗಂತಿಯೇ ಈ ಮುತ್ತು ಕೂಡ ಭಾರತದಿಂದ ವಿದೇಶೀಯರ ಕೈ ಸೇರಿತು. ಚೀನ ಮತ್ತು ತುರ್ಕಿಸ್ತಾನಗಳನ್ನು ಹಾದು ಇದು ಫ್ರಾನ್ಸನ್ನು ಮುಟ್ಟಿತು. ೧೯೧೮ರಲ್ಲಿ ಈ ಮುತ್ತನ್ನು ಕೆಥೋಲಿಕ್ ಮಂಡಳಿಯವರು ಕೊಂಡುಕೊಂಡರು.

ಹೈದರಬಾದದ (ಈಗ ಆಂಧ್ರ ಪ್ರದೇಶ) ನಾಗರಿಕ ನವಾಬ ರಿಯಾಜ ಅಹಮದ ಖಾನ್ ಎಂಬವನೀಗ ಲಕ್ಷಾಧಿಪತಿಯಾಗಿದ್ದಾನೆ. ವಿಶ್ವದ ಸರ್ವ ಶ್ರೇಷ್ಠ ನೀಲಮಣಿ ಈಗ ಇವನೊಡನೆ ಇದೆ. ನೀರಿನಲ್ಲಿ ಅರಳಿರುವ ಒಂದು ಸುಂದರವಾದ “ಲಿಲ್ಲಿ” ಹೂವಿನ ಆಕಾರದಲ್ಲಿರುವ ಈ ಸುಂದರ ನೀಲಮಣಿಯ ಕಥೆಯು ಇಂದಿನಿಂದ ಹಲವಾರು ನೂರು ವರ್ಷಗಳ ಪೂರ್ವದಿಂದಲೂ ಕೇಳಿಬರುತ್ತಿದೆ. ಈ ಮಣಿಯ ಬೆಲೆಯು ಲಕ್ಷಗಟ್ಟಲೆಯಲ್ಲಿದೆ

ಭಾರತವು ಬಲ್ಲಾಳವಂಶದ ಅರಸರ ಕೈಕೆಳಗಿದ್ದ ಕಾಲವದು. ಬಲ್ಲಾಳರು ಬೌದ್ಧಧರ್ಮಾನುಯಾಯಿಗಳಿದ್ದರು. ಈ ವಂಶದ ಒರ್ವ ರಾಜನಿಗೆ ಸಿಂಹಳದ ಒರ್ವ ಬೌದ್ಧ ಪುರೋಹಿತನು ಈ ಮಣಿಯನ್ನು ಬಹುಮಾನವಾಗಿ ಕೊಟ್ಟನು.

ಬಲ್ಲಾಳರ ಶಕ್ತಿ ಕ್ಷೀಣವಾದ ಮೇಲೆ ಈ ಮಣಿಯು ಮಲ್ಲಿಕಾಫರನ ಕೈಸೇರಿತು. ಮೈಸೂರಲ್ಲಿ ಹೈದರಾಲಿಯು ತಲೆಯೆತ್ತಿದೊಡನೆಯೇ ಅವನ ಪರಾಕ್ರಮದಿಂದ ಇದು ಅವನ ವಂಶಜರ ಸ್ವಾಧೀನವಾಯಿತು. ೧೭೮೪ರಲ್ಲಿ ಟಿಪ್ಪು ಸುಲ್ತಾನನು ಈ ನೀಲಮಣಿಯನ್ನು ರಿಯಾಜ ಅಹಮದನ ಪೂರ್ವಜರಿಗೆ ದಾನವಾಗಿ ಕೊಟ್ಟಿದ್ದಾನೆ.

ಈ ನೀಲಮಣಿಯು ಅಂದಿನಿಂದ ಅಹಮದನ ಪರಿವಾರದೊಡನಿರುವುದಾದರೂ ಇದರ ಆಶ್ಚರ್ಯಕಾರಕಕಥೆಯು ೧೯೩೦ರಲ್ಲಿ ಆರಂಭವಾಗುತ್ತದೆ. ಇದಕ್ಕೆ ಮೊದಲು ಅಹಮದನಿಗೆ ತನ್ನ ಮೇಜಿನ ಮೇಲೆ ಕಾಗದ ಹಾರಿಹೋಗದಂತಿಡುವ ಕಲ್ಲಿನ ಬೆಲೆ ಲಕ್ಷಾಂತರ ರೂಪಾಯಿಗಳೆಂದು ಸ್ವಪ್ನದಲ್ಲಿಯೂ ತಿಳಿದಿರಲಿಲ್ಲ. ಅಹಮದನು ಆಗ ಹೈದರಾಬಾದ ಸರಕಾರದಲ್ಲಿ ರೆವಿನ್ಯೂ ಅಧಿಕಾರಿಯಾಗಿದ್ದನು. ಅವನಲ್ಲಿಗೆ ಒಂದುದಿನ ರೆವಿನ್ಯೂ ಡೈರೆಕ್ಟರರಾದ ಶ್ರೀ ಜಿ. ಇ. ಸಿ. ಪಿಟ್ ಫೀಲ್ಡರು ಬಂದಾಗ, ಸ್ವಾಭಾವಿಕವಾಗಿ ಅವರ ದೃಷ್ಟಿ ಈ ಪ್ರಕಾಶಿಸುವ

(೧೨ನೇ ಪುಟ ನೋಡಿರಿ.)

ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ವಿಚಿತ್ರ ಪ್ರವಾಸಿ

ಹಣವಿರುವ ವರೆಗೆ ತಿರುಗಾಡುವ ಲೆವಿಟ್

ಮೋಟಾರು ಕಾರಿನಲ್ಲಿ ಪ್ರಪಂಚ ಪರ್ಯಟನೆಯ ಹುಚ್ಚು ತಗಲಿದ ಅಮೆರಿಕನ್ ಮಹಿಳೆ.

ಮೋಟಾರಿನಲ್ಲಿ ಪ್ರಚಂಡ ಪ್ರವಾಸವನ್ನು ಕೈಗೊಂಡಿರುವ ಧೀರ ಅಮೆರಿಕನ್ ತರುಣಿಯೊಬ್ಬಳು ಈ ವಾರದ ಆದಿಯಲ್ಲಿ ಮದರಾಸಿಗೆ ಬಂದಳು.

“ಕೈಯಲ್ಲಿರುವ ಹಣ ಮುಗಿಯುವವರೆಗೆ” ಪ್ರಪಂಚದಲ್ಲೆಲ್ಲಾ ಸುತ್ತಾಡಬೇಕೆಂಬ ನಿರ್ಧಾರಕ್ಕೆ ಬಂದ ಈ ತರುಣಿ ಇಟಲಿಯ ಫ್ಲಾರೆನ್ಸ್ ನಗರದಲ್ಲಿ ತಾನು ನಡೆಸುತ್ತಿದ್ದ ಸ್ವತಂತ್ರ ವ್ಯಾಪಾರವನ್ನು ಕೈಬಿಟ್ಟಳು.

ದಕ್ಷಿಣ ಭಾರತದಲ್ಲಿ ಸುತ್ತುತ್ತಾ ಅಲ್ಲಿಯ ಪ್ರವಾಸವನ್ನು ಮೆಚ್ಚಿಕೊಂಡಿರುವ ನ್ಯೂಯಾರ್ಕ್ ನಗರದ ಮಿಸ್, ಲ್ಯೂಸಿಲ್ ಲೆವಿಟ್ ತನ್ನ “ಪ್ರವಾಸದ ರೀತಿಯಲ್ಲಿ ವೈಶಿಷ್ಟ್ಯ ಹೊಂದಿದೆ; ಪ್ರವಾಸಿಗರು ಸಾಮಾನ್ಯವಾಗಿ ಹೋಗುವ ಹಾದಿಗಳಲ್ಲಿ ನಾನು ಹೋಗುವುದಿಲ್ಲ” ಎಂದು ತಿಳಿಸಿದ್ದಾರೆ. “ಹಳ್ಳಿಗಳಿಗೆ ಹೋಗಿ ತಮ್ಮ ತಮ್ಮ ಕೆಲಸಗಳಲ್ಲಿ ಪ್ರವೃತ್ತರಾಗಿರುವ ಜನಸಾಮಾನ್ಯರನ್ನು ನಾನು ಭೇಟಿಮಾಡುತ್ತೇನೆ. ಅಂತಹ ಭೇಟಿಗಳು ಬಹು ಸ್ವಾರಸ್ಯವಾದವು” ಎಂದೂ ಅವರು ಹೇಳಿದರು.

ಮದರಾಸು, ಕೊಲಂಬೋಗಳಂತಹ ನಗರಗಳಲ್ಲಿ ಬಹು ಆತ್ಮೀಯತೆಯ ಸ್ವಾಗತ ದೊರಕಿತು; ಜನರು ವಿಶೇಷವಾದ ದಯೆ ಹಾಗೂ ಸೌಜನ್ಯಗಳನ್ನು ತೋರಿಸಿದರು; ಮದರಾಸಿನಲ್ಲಿ, ಹೋಟೆಲೊಂದನ್ನು ತೋರಿಸುವ ಸಲುವಾಗಿ ಅಪರಿಚಿತನೊಬ್ಬ ತನ್ನ ಕಾರಿನಲ್ಲಿ ಹೋಟೇಲಿನವರೆಗೂ ಬಂದು ಮಾರ್ಗದರ್ಶನ ಮಾಡಿದ; ಕೊಲಂಬೋನಲ್ಲಿ ಎರಡು ಸರ್ವಿಸ್ ಸ್ಟೇಷನ್ನುಗಳ ಮ್ಯಾನೇಜರುಗಳು ತಮ್ಮ ಮನೆಗಳಿಗೆ ಬರಮಾಡಿಕೊಂಡು ತಮ್ಮ ಮಿತ್ರ ಪರಿಚಯ ಮಾಡಿಸಿಕೊಟ್ಟರು-ಎಂದಾಕೆ ತನ್ನ ಪ್ರವಾಸದ ಅನುಭವಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಈ ಸಾಹಸಿ ತರುಣಿಗೆ ಪ್ರವಾಸ ಹೊಸದಲ್ಲ. ಆರೂವರೆ ವರ್ಷಗಳ ಕೆಳಗೆ ಆಕೆ ಪ್ರವಾಸಿಯಾಗಿ ಇಟಲಿಗೆ ಬಂದಳು. ಇಟಲಿಯು ಆಕೆಯ ಮನಸ್ಸನ್ನು ಸೂರೆಗೊಂಡಿತಾಗಿ, ಬರಿ ಕೈಯಲ್ಲಿಯೇ ಆಕೆ ಅಲ್ಲಿ ವ್ಯಾಪಾರವನ್ನು ಆರಂಭಿಸಿದಳು. ಫ್ಲಾರೆನ್ಸಿನಲ್ಲಿ ಇದ್ದುಕೊಂಡು ಅಮೆರಿಕದ ಸುಮಾರು ೨೦ ಸಂಸ್ಥೆಗಳಿಗೆ ಸರಕನ್ನು ಕೊಂಡು ಕಳಿಸುವ ವ್ಯಾಪಾರ ಆಕೆಯದಾಯಿತು

ಮಿಸ್ ಲೆವಿಟ್ ಮೇ ೧ನೇ ತಾರೀಕು ಇಟಲಿಯಿಂದ ಹೊರಟು ಇದುವರೆಗೆ ೧೩,೫೦೦ ಮೈಲಿಗಳಷ್ಟು ಪ್ರವಾಸ ಮಾಡಿದ್ದಾಳೆ ಇದೆಲ್ಲಾ ಕಾರಿನಲ್ಲಿಯ ಪ್ರಯಾಣ, ಇದರ ಜೊತೆಗೆ ಹಡಗುಗಳಲ್ಲಿಯೂ ಅನೇಕ ಸಹಸ್ರ ಮೈಲಿಗಳ ದೂರ ಪ್ರವಾಸ ಮಾಡಿದ್ದಾಳೆ ಆಕೆ. ಪಶ್ಚಿಮ ಯುರೋಪಿನಲ್ಲಿ ಅಪ್ರದಕ್ಷಿಣಾಭಿಮುಖವಾಗಿ ಪ್ರವಾಸ ಕೈಗೊಂಡು, ಇಟಲಿ, ಸ್ಪೈನ್, ಪೋರ್ಚುಗಲ್, ಫ್ರಾನ್ಸ್ ಸ್ಕಾಂಡಿನೇವಿಯ ಮತ್ತು ಬಾಲ್ಕನ್ ಸಂಸ್ಥಾನಗಳಲ್ಲಿ ಸಂಚರಿಸಿದಳು. ಅನಂತರ ಗ್ರೀಸಿನಿಂದ ಈಜಿಪ್ಟಿಗೂ ಲೆಬನಾನಿಗೂ ಹೋದಳು.

ಬೀರತ್ತಿನಲ್ಲಿ ಪೂರ್ವಾಭಿಮುಖವಾಗಿ ಹೊರಟು ಯುಗೋಸ್ಲಾವಿಯಾದ ಫ್ರೈಬರ್ ಹಡಗು ಹತ್ತಿ, ಸಿಂಹಳವನ್ನು ತಲುಪುವ ಮುನ್ನ ಮಧ್ಯೆ ಮಧ್ಯೆ ಅನೇಕ ಕಡೆ ಇಳಿದಳು.

ಸಿಂಹಳದ ಗಾಲ್‌ನಲ್ಲಿ ಆಕೆಯ ಕಾರನ್ನು ಹಡಗಿನಿಂದ ಇಳಿಸಿದಾಗ ಅಲ್ಲಿಯ ಜನ ಅಚ್ಚರಿಗೊಂಡರು. ಆ ಸಣ್ಣ ಬಂದರಿನಲ್ಲಿ ಅದುವರೆಗೆ ಯಾವ ಕಾರನ್ನೂ ಇಳಿಸಿರಲಿಲ್ಲ

ಸಿಂಹಳದಲ್ಲಿ ಅನುಭವಿಸಿದಂತಹ “ಆತಿಥ್ಯವನ್ನು ನಾನು ಇನ್ನೆಲ್ಲಿಯೂ ಕಾಣಲಿಲ್ಲ. ಆ ದೇಶದಲ್ಲಿ ಇರುವ ತನಕ ನಾನು ಹೋಟೆಲುಗಳಲ್ಲಿ ಉಳಿದುಕೊಂಡದ್ದೇ ಅಪರೂಪ” ಎಂದರು ಮಿಸ್ ಲೆವಿಟ್.

ಧನುಷ್ಕೋಣದಲ್ಲಿ ಬಂದಿಳಿದ ಮಿಸ್ ಲೆವಿಟ್ ಮದರಾಸಿಗೆ ಬರುವ ಮುನ್ನ ಅನೇಕ ಪಟ್ಟಣಗಳಿಗೂ, ಹಳ್ಳಿಗಳಿಗೂ ಭೇಟಿ ಇತ್ತಳು ದೇವಸ್ಥಾನಗಳ ಮತ್ತು ಐತಿಹಾಸಿಕ ಪ್ರದೇಶಗಳ ಛಾಯಾ ಚಿತ್ರಗಳನ್ನು ತೆಗೆದುಕೊಂಡಳು, ಆದರೆ ಆಕೆ ಮೆಚ್ಚಿಕೊಂಡದ್ದು ಸಂಚಾರದ ರಸ್ತೆಗಳಲ್ಲಿ ಕಂಡುಬಂದ ಜನಗಳನ್ನು, ರಸ್ತೆ ಪಕ್ಕದ ಹಳ್ಳಿಗಳಲ್ಲಿ ಇದ್ದ ಜನಗಳನ್ನು.

ಮಿಸ್ ಲೆವಿಟ್ ಮದರಾಸಿನಿಂದ ಬೆಂಗಳೂರು, ಮೈಸೂರು, ಹೈದರಾಬಾದ್, ಔರಂಗಾಬಾದ್ ಮತ್ತು ಮುಂಬೈಗಳಿಗೆ ಹೋಗಿ ಅನಂತರ ದೆಹಲಿ ಮತ್ತು ಕಲ್ಕತ್ತಾಗಳಿಗೆ ಭೇಟಿಕೊಡುವರು. ರೋಂ ನಗರಕ್ಕೆ ಹಿಂತಿರುಗುವ ಮುನ್ನ ಮಧ್ಯ ಪ್ರಾಚ್ಯದಲ್ಲಿ ಅಪಾರವಾಗಿ ಸಂಚರಿಸುವ ಬಯಕೆ ಆಕೆಗಿದೆ. ೧೯೬೦ರ ಒಲಿಂಪಿಕ್ ಸಂದರ್ಭದಲ್ಲಿ ಅನಧಿಕೃತ ಮಾರ್ಗದರ್ಶಿನಿಯಾಗಿ ಕೆಲಸ ಮಾಡುವ ನಿರೀಕ್ಷೆಯನ್ನು ಲೆವಿಟ್ ಇಟ್ಟುಕೊಂಡಿದ್ದಾಳೆ.

ಕಥಾ ವಿಹಾರ

(೨ನೇ ಪುಟದಿಂದ.)

ಯಾರು? ನನ್ನ ಹುಣಸೂರು ದೇವಾಲಯದ ದೇವರ ಭಂಡಾರವನ್ನು ಇವನೇ ಕನ್ನವಿಕ್ಕಿ ತೆಗೆದಿರಲಾರನೇಕೆ? ತನಿಖೆ ಮಾಡಲು ಹೊರಟ! ಸನಿಹದ ಮನೆಯಲ್ಲಿದ್ದ ದಾಸಯ್ಯನೇ ದೇವರ ಭಂಡಾರವನ್ನಪಹರಿಸಿರುವನೆಂಬ ಶಂಕೆಯ ಮೇಲೆ ಎರೆಸ್ಟ ಮಾಡಲಾಗಿತ್ತು! ವಾರಂಟ ಬರುವ ಮುನ್ನವೇ ಸುದ್ದಿ ತಿಳಿದು ದಾಸಯ್ಯನು ಊರುಬಿಟ್ಟಿದ್ದ! ತಲೆ ಬೋಳಿಸಿಕೊಂಡು ಮಾರುವೇಷದಿಂದ ರಾಜಾಪುರಕ್ಕೆ ತನ್ನೂರಿಂದ ೫೦ ಮೈಲಿ ನಡದು ಬಂದು ಸೇರಿಕೊಂಡಿದ್ದ, ತನ್ನ ತಾಯಿ ತಮ್ಮಂದಿರು ಎಷ್ಟು ತನ್ನ ಬಗ್ಗೆ ಚಿಂತಿಸಿದರೋ ಎಂದು ಯೋಚನೆ ಮಾಡುತ್ತ ಆವನು ದಿನಾ ಕೊರಗುತ್ತಿದ್ದ! ಇಂದಿಗೆ ೩ ವರ್ಷವಾಗಿತ್ತು! ಅವನು ಊರು ಬಿಟ್ಟು! ತಂದೆಯಂತೂ ಮಗನೇ ಕಳವು ಮಾಡಿರಬೇಕೆಂದೇ ತಿಳಿದಿರಬಹುದು! ಕಳವು ಮಾಡದಿದ್ದಲ್ಲಿ ಊರು ಬಿಟ್ಟು ಓಡಿದ್ದು ಹೇಡಿಗಳ ಲಕ್ಷಣವೆಂತ ತಿಳಿಯುವ ಮನ ಅವನ ತಂದೆಯದು!

ದಾಸಯ್ಯ ನೇರವಾಗಿ ಭೀಮಯ್ಯನ ಮನೆಗೆ ಹೊರಟ! ಭೀಮಯ್ಯನ ತಾಯಿಯನ್ನು ಸಂತೈಸುತ್ತಾ “ಆ ಸನ್ಯಾಸಿ ಯಾರು ಎಲ್ಲಿಂದ ಬಂದ ಅವನಿಲ್ಲಿ ಇದ್ದುದೆಲ್ಲಿ?” ಎಂತ ಕೇಳಿದ.

‘ಏನೊಪ್ಪ! ಇಲ್ಲಿಂದ ಮೈಲು ಹೊರಗೆ ಅದಾವುದೋ ಮೊನ್ನೆ ಮೊನ್ನೆ ತಿಂಗಳೊಂದರಲ್ಲಿ ಹೊಸದೊಂದು ಮನೆ ಖರೀದಿಸಿ ಅದರಲ್ಲಿ ಇದ್ದನಂತೆ!”

ದಾಸಯ್ಯ ಸನ್ಯಾಸಿಯ ಮನೆಯನ್ನು ಹುಡುಕಿದ! ಮನೆಯನ್ನು ಪ್ರವೇಶಿಸಿದ! ಸುಸಜ್ಜಿತ ಮನೆ! ಅರಮನೆಯ ಶೋಭೆ ಅದಕ್ಕಿತ್ತು! ಮನೆಯೊಳಗಿಂದ ಸುಮಾರು ಅರ್ಧ ವಯಸ್ಸಿನ ಹೆಂಗುಸೊಬ್ಬಳು ಬಂದಳು. ಆವಳು ಆಗಂತುಕನನ್ನು ಕೂಡ್ರ ಹೇಳಿದಳು ಅವಳ ಚರ್ಯೆ ನೋಡಿದರೆ ಸನ್ಯಾಸಿಯ ಸಾವಿನಿಂದ ಆವಳಿಗೆ ಲಾಭವೇ ಹೊರತು ಹಾನಿಯಾದಂತೆ ತೋರುತ್ತಿರಲಿಲ್ಲ! ಆವಳನ್ನು ನೋಡುತ್ತ! ನೋಡುತ್ತ ದಾಸಯ್ಯನಿಗೆ ಅವಳ ಕುತ್ತಿಗೆಯಲ್ಲಿದ್ದ ವಜ್ರದ ಹರಳಿನಿಂದ ಯುಕ್ತವಾದ ಪಂಚ ರತ್ನ ಹಾರವು ದೃಷ್ಟಿಗೆ ಬಿತ್ತು! ನಿಮಿಷ ಮಾತ್ರ ಆವನಿಗೆ ಅದೊಂದು ಕನಸಾಯಿತು. ತನ್ನನ್ನೇ ತಾನು ನಂಬದವನಾದ! ಅದೇ ಸರವಲ್ಲವೇ! — ದೇವಿ ಶಾಂತಿ ಶಾಂಬೆಯ ಕೊರಳಲ್ಲಿ ದೇವಾಲಯದ ವಾರ್ಷಿಕ ಮಹೋತ್ಸವದಲ್ಲಿ ಹಾಕುತ್ತಿದ್ದವು! ದಾಸಯ್ಯ ತಂದೆಯೊಡನೇ ದೇವರಿಗೆ ಆ ಸರವನ್ನೇರಿಸಿದ್ದೂ ಇದೆ! ಅವರ ಪರಿಚಯ ಅವನಿಗಿಲ್ಲವೇ! ತಾನು ಬಂದ ಕಾರ್ಯವಾಯಿತೆಂದು ದೇಶಾವರಿ ಮಾತುಗಳನ್ನಾಡಿ ತಮ್ಮ ಸನ್ಯಾಸಿಗಳು ಮೃತಪಟ್ಟುದು ತುಂಬಾ ವಿಷಾದದ ಸಂಗತಿ ಎಂದೆನ್ನುತ್ತಾ ತನ್ನ ಭಿಕ್ಷೆ ಪಡೆದು ಹೊರಬಿದ್ದ—

ದಾಸಯ್ಯನು ರಾಜಾಪುರದ ಪೊಲೀಸ ಸಬ್-ಇನ್ಸಪೆಕ್ಟರ್ ಕಚೇರಿ ತಲ್ಪಿದ! ಕಾಗದದ ಹಾಳೆಯೊಂದರಲ್ಲಿ-ತಾನು-ಹುಣಸೂರು ಶಾಂತಿಶಾಂಬಾ ದೇವಾಲಯದ ಪೂಜಾರಿಯ ಮಗನೆಂತಲೂ, ೩ ವರ್ಷಗಳಿಂದ ಅಜ್ಞಾತನಾಗಿದ್ದು —ಇಂದು ದೇವಿಯ ಆಭರಣಗಳನ್ನು ಕಂಡು ಹಿಡಿದಿರುವುದಾಗಿಯೂ ಕೂಡಲೇ ತನ್ನೊಡನೆ ಬಂದಲ್ಲಿ ತೋರಿಸುವುದಾಗಿಯೂ ತಿಳಿಸಿದ!

ಪೋಲೀಸು ವ್ಯಾನು ಸಶಸ್ತ್ರಯೋಧರೊಡನೆ ಅನಿರೀಕ್ಷಿತವಾಗಿ “ದಂಡಕಾಯಂ” ಸನ್ಯಾಸಿಯ ಬಂಗಲೆಯನ್ನು ಆಕ್ರಮಿಸಿತು, ನಿಮಿಷಾರ್ಧದಲ್ಲಿ ೩ ವರ್ಷದ ಹಿಂದೆ ಕಳವಾದ ಮುಕ್ಕಾಲು ಭಾಗ ಆಭರಣಗಳೆಲ್ಲ ದೊರೆತುವಲ್ಲದೆ — ನಿರಪರಾಧಿ ದಾಸಯ್ಯನ ಮೇಲೆ ಎರೆಸ್ಟ್ ವಾರಂಟ ತೆಗೆದ ಬಗ್ಗೆ ಸರಕಾರವು ಕ್ಷಮಾಪಣೆ ಬೇಡಿಕೊಂಡಿತು.

ಸನ್ಯಾಸಿಯ ಜೊತೆಯಲ್ಲಿದ್ದವಳೊಬ್ಬ ವೇಶ್ಯೆಯೆಂತಲೂ ಅದಾವುದೋ ಸ್ಥಳದಿಂದ ಅಪಹರಿಸಿ ತಂದವಳಾಗಿದ್ದಳೆಂದೂ ತಿಳಿದು! ಅವಳನ್ನು ನಿರ್ದೋಷಿಯೆಂದು ಬಿಡಲಾಯಿತು!

ದಾಸಯ್ಯನು ವನದೇವತೆಯ ಗುಡಿಯನ್ನೊಂದು ದೇವಾಲಯವನ್ನಾಗಿ ಮಾರ್ಪಡಿಸಿದ. ತಾನೇ ಅದರ ದಾಸಯ್ಯನಾಗಿ ನಿಂತನಲ್ಲದೇ ತನ್ನ ಊರಿಗೆ ಹೋಗಿ ತನ್ನ ತಾಯಿ, ತಂದೆ, ತಮ್ಮಂದಿರನ್ನೂ ಅಲ್ಲಿಗೇ ಕರೆತಂದ. ವನದೇವತೆ ಇತ್ತ ಹೊನ್ನಿನ ಗಡಿಗೆಯ ಹಣದಿಂದ ವನದೇವತೆಯ ಸುತ್ತುಮುತ್ತಲೆಲ್ಲ ಮನೆ-ಮಠಗಳೂ ಆದುವಲ್ಲದೆ ವರುಷವೆರಡರಲ್ಲಿ ಕಾಡು ನಾಡಾಯಿತು. ದೇವಿಯ ಮಹಿಮೆಯಿಂದ ಇಂದು ದಾಸಯ್ಯನ ಮನ-ಮನೆಯರಡೂ ತುಂಬಿದೆ. ಆವನ ಮೇಲಿನ ಅಪರಾಧವೂ ದೈವೇಚ್ಛೆಯಿಂದ ಬಂದು ಪಾರಾಯಿತು.

— ಸಿರಿಪತಿ.



MARK OF QUALITY BEEDIES
ಎಸ್. ಆರ್.
ನಕಲಿ ಬಗ್ಗೆ ಎಚ್ಚರಿಕೆ
SR REGD.
ಅತ್ಯುತ್ತಮ ಬೀಡಿಗಳ ಗುರುತು
ಎಸ್. ಆರ್. ಬೀಡಿಗಳ ಶ್ರೇಷ್ಠತೆ ಮತ್ತು ಜನಪ್ರಿಯತೆಯನ್ನು ಕಂಡು ಇತರ ತಯಾರಿಕೆದಾರರು ನಮ್ಮ ಟ್ರೇಡ್‌ಮಾರ್ಕಿನ ಡಿಝೈನಿನಲ್ಲಿಯೂ ಬಣ್ಣಗಳಲ್ಲಿಯೂ ಅನುಕರಣೆಮಾಡಿ ಮೋಸ ಮಾಡುವ ಇತರ ನಕಲಿಬೀಡಿಗಳನ್ನು ತಿರಸ್ಕರಿಸಿರಿ.
ಎಸ್. ಆರ್. ರಿಜಿಸ್ಟರ್ಡ್ ಟ್ರೇಡ್‌ಮಾರ್ಕಿನ ಬೀಡಿಗಳು ಮಾತ್ರ ನಿಮಗೆ ಖಾತ್ರಿದಾಯಕವಾದುವುಗಳು.
S. R. BEEDI WORKS, UDIPI, S. K.

ಮಕ್ಕಳ ಮಗ್ಗಿ ಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು. ಸಂ. ನ.)

ಬೆಳಗಿದ ತಾರೆಗಳು: ಲೇಖಕ. ಶ್ರೀ ಸೂರ್ಯನಾಥ ಕಾಮತ್, ಬಿ. ಎ. ಪ್ರಕಾಶಕರು. ಪ್ರತಿಭಾ ಗ್ರಂಥಮಾಲೆ, ಧಾರವಾಡ ಪುಟಗಳು. ೭೨. ಬೆಲೆ. ರೂ. ೦ ೭೫

ಭಾರತೀಯ ಐತಿಹಾಸಿಕ ಕಾಲದಲ್ಲಿ ಅನೇಕಾನೇಕ ಮಹಾಪುರುಷರೂ ಮಹಿಳಾ ಮಣಿಗಳೂ ಜನಿಸಿ, ತಮ್ಮ ನಿಸ್ವಾರ್ಥತೆ, ತ್ಯಾಗಬುದ್ಧಿ ಸಮಾಜ ಕಲ್ಯಾಣಾದಿ ಸೇವೆಗಳ ಮೂಲಕ ಆಚಂದ್ರಾರ್ಕಸ್ಥಾಯಿಯಾಗಿದ್ದಾರೆ ಇಂತಹ ಎಲೆಯ ಮರೆಯ ಕುಸುಮಗಳಂತೆ ಬಾಳ್ವೆಯನ್ನು ಬೆಳಗಿಸಿದ ತಾರೆಯರಲ್ಲಿ ಕೆಲವರ ಜೀವನ ಚರಿತ್ರೆಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಪತಿಯು ಸಾಹಿತ್ಯ ಕೃತಿಯನ್ನು ಬರೆಯುವುದರಲ್ಲೇ ಅರ್ಧ ಶತಮಾನ ಮಗ್ನನಾಗಿರುವಷ್ಟು ಕಾಲ ತಪೋಜೀವನ ನಡೆಸಿದ ಭಾನುಮತಿ, ಪರಾಣರ ಆಕ್ರಮಣದಿಂದ ಧೂಳಿದೂಸರವಾಗುತ್ತಿದ್ದ ಭಾರತವನ್ನು ಉಳಿಸಿದ ಪರಮ ಸಾಹಸಿ ಪರಿಚರಣಕಾರ್, ಕೋಟೆಯ ಬಾಗಿಲು ಉಳಿಯುವಂತೆ ಗರ್ಭವತಿಯಾದ ತಾನೇ ಬಲಿಯಾಗಿ ಭೂತಬಾಧೆಯನ್ನು ದೂರಮಾಡಿದ ತ್ಯಾಗಮೂರ್ತಿ ಲಕ್ಷ್ಮಮ್ಮ, ಪತಿ ಪುತ್ರರು ರಣರಂಗಕ್ಕೆ ಹೋಗಿ ಅಕ್ಬರನನ್ನು ಎದುರಿಸುತ್ತಿರುವಾಗ, ಅಕ್ಬರನ ಮಾರ್ಗವನ್ನು ತಡೆದು ಹೋರಾಡಿದ ಆದರ್ಶ ಕ್ಷತ್ರಿಣಿ ಕರ್ಮದೇವಿ, ಮಗುವಿನ ಪ್ರೇಮದಿಂದ ಕೋಟೆಯ ಗೋಡೆಗಳನ್ನು ಹಾರಿ, ಕಂದಕವನ್ನು ದಾಟಿದ ಪುತ್ರವತ್ಸಲೆ ಹಿರ್ಕಣಿ, ಸ್ವಾಭಿಮಾನಕ್ಕಾಗಿ ಮುಗಲರೊಡನೆ ಹೋರಾಡಿ ಕೊನೆಗೆ ವೀರಸ್ವರ್ಗವನ್ನೇರಿದ ಮಾನಧನೆ ದುರ್ಗಾವತಿ, ತಂದೆ ನಾನಾಸಾಹೇಬರ ಪತ್ತೆ ಹೇಳಿಲ್ಲವೆಂಬ ಅಪವಾದನೆಯ ಮೇಲೆ ವಿವಿಧ ಚಿತ್ರಹಿಂಸೆಗೆ ಗುರಿಯಾಗಿ ಕೊನೆಗೆ ಜೀವಂತ ಸುಟ್ಟುಬಿಡುವ ಶಿಕ್ಷೆಗೂ ಪಕ್ಕಾದ ನಿಷ್ಠುರೆ ಮೈನಾದೇವಿ ಮತ್ತು ಸ್ವಾತಂತ್ರ್ಯದೋಲನದಲ್ಲಿ ಭಾಗವಹಿಸಿದ ಪತಿ ಬಾಲಮುಕುಂದನು ಗಲ್ಲಿಗೇರುವ ಸಮಯದಲ್ಲಿಯೇ ತಾನೂ ಗುಂಡಿಟ್ಟುಕೊಂಡು ಮುತ್ತೈದೆಯಾಗಿ ವೀರ ಸ್ವರ್ಗವನ್ನಡರಿದ ಪತಿವ್ರತೆ ರಾಮರಖೀ—ಈ ಎಂಟು ಮಹಾ ಮಹಿಳೆಯರ ಜೀವನ ಸಾಫಲ್ಯವನ್ನಿಲ್ಲಿ ಉಲ್ಲೇಖಿಸಲಾಗಿದೆ.

ನಮ್ಮ ಭಾರತೀಯ ಮಹಿಳೆಯರು ತ್ಯಾಗದಲ್ಲಿಯೂ ಭೋಗದಲ್ಲಿಯೂ ಯೋಗದಲ್ಲಿಯೂ ಸಾಹಸ, ಪರಾಕ್ರಮಗಳಲ್ಲಿಯೂ ಎಂದಿಗೂ ಪುರುಷರಿಗಿಂತ ಹಿಂದುಳಿದವರಲ್ಲವೆಂಬುದನ್ನೂ ಕೆಲವೊಮ್ಮೆ ಪುರುಷರಿಗೆ ಅವರೇ ಮಾರ್ಗದರ್ಶಕರೆಂಬುದನ್ನೂ ಈ ಚಿಕ್ಕ ಹೊತ್ತಗೆಯಲ್ಲಿ ನಿರೂಪಿಸಿ, ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರ ಸ್ಥಾನ ಪ್ರಶಂಸೆಯನ್ನು ಮಾಡಲಾಗಿದೆ. ಆಧುನಿಕ ಕಾಲದಲ್ಲಿ ಪುರುಷರೊಡನೆ ಸಮಾನತೆಗಾಗಿ ಹೋರಾಡುತ್ತಿರುವ ಮಹಿಳೆಯರಿಗೆ ಭಾರತದ ಬೆಳಗಿದ ತಾರೆಯರ ಕುರಿತು ಓದಿಕೊಂಡರೆ, ಮೊನ್ನೆ ಮೊನ್ನೆಯವರೆಗೂ ಇದ್ದ ಸಮಾನತೆ ಈಗ ಮಾತ್ರ ಇಲ್ಲವೆಂದು ತಿಳಿದಿರುವುದು ತಪ್ಪೆಂದು ಜ್ಞಾತವಾಗದಿರದು. ಸಂಸ್ಕೃತಿಯ ಜೀವನಾಡಿ ಮಹಿಳೆ ಅದನ್ನು ಬೆಳೆಸಬಲ್ಲವಳೂ ಅಳಿಸಬಲ್ಲವಳೂ ಅವಳೇ ಆಗಿದ್ದಾಳೆ

ಪ್ರಕೃತ ಈ ಗ್ರಂಥ ಶ್ರೀ ಕಾಮತರ ಪ್ರಥಮ ಕೃತಿ. ಇದನ್ನು ಬರೆಯುವಲ್ಲಿ ಹಲವಾರು ಆಧಾರಗಳನ್ನಿಟ್ಟುಕೊಂಡಿದ್ದಾರೆ. ಕಥೆಗಳೆಲ್ಲವೂ ನಿಜವಾದುವೇ ಆದರೆ, ಹೆಚ್ಚಿನವರಿಗೆ ಮಾತ್ರ ತಿಳಿದಿಲ್ಲ ಅಷ್ಟೆ ಇತಿಹಾಸದ ಗರ್ಭದಲ್ಲಿ ಹುದುಗಿರುವವರ ಪರಿಚಯವನ್ನೂ ಅವರ ಮೇಲ್ಮೆಯ ಕಾರಣವನ್ನೂ ಚಿಕ್ಕದರಲ್ಲಿ ಮಾಡಿಕೊಡುವ ಈ ಹೊತ್ತಗೆಯು ಸ್ವಾಗತಾರ್ಹವಿದೆ. ಕೆಲವು ವಿಷಯವನ್ನು ಮಾತ್ರ ಇನ್ನೂ ವಿವರಿಸಬಹುದಿತ್ತು ಬಿಳಿಯ ಹಾಳು ಕಾಗದದಲ್ಲಿ ಸುಂದರವಾಗಿ ಒಪ್ಪುವ ಮುಖಪೃಷ್ಠದಿಂದ ಹೊರಬಂದ ಈ ಪುಸ್ತಕವು ಅಂದವಿದೆ ಮಾತ್ರವಲ್ಲದೇ ರೋಚಕತೆಯಿಂದ ಕೂಡಿಕೊಂಡಿದೆ ಎಲ್ಲರೂ ಸಂಗ್ರಹಿಸಲೇಬೇಕಾದ ಪುಸ್ತಕವಿದು ಶ್ರೀ ಕಾಮತರಿಂದ ವಿಸ್ತಾರವಾಗಿ ಇಂತಹ ಉದಾತ್ತ ಚರಿತರ ಪರಿಚಯ ಕನ್ನಡಿಗರಿಗಾಗಲೆಂದು ಬಯಸುತ್ತೇವೆ

ಸರ್ವೋದಯ ಪಾತ್ರೆ— ಬರೆದವರು ವಿನೋಬಾ ಪ್ರಕಾಶಕರು. ಸರ್ವಸೇವಾ ಸಂಘ ಪ್ರಕಾಶನ, ಬೆಂಗಳೂರು-೨ ಪುಟಗಳು. ೪೪ ಬೆಲೆ ೨೫ ನಯೇ ಪೈಸೇ.

ವಿನೋಬಾ ಕರ್ನಾಟಕದಲ್ಲಿ ಸಂಚರಿಸುವಾಗ ಸರ್ವೋದಯ ಪಾತ್ರೆಯ ಹೊಸ ಯೋಜನೆಗೈದರು. ಈ ಸೂಚನೆಯು ಸರ್ವಸಮಾನ್ಯವೂ ಅದೀತು ಸ್ವೀಕೃತಿಯಿಂದ, ತಾವು ತಿನ್ನುವ ಕಾಳಿನಲ್ಲಿ ಒಂದಂಶವನ್ನು ಸರ್ವೋದಯಕ್ಕೆ ತೆಗೆದಿರಿಸುವ ಪಾತ್ರದ ಅವಶ್ಯಕತೆ, ಉದ್ದೇಶ ಮತ್ತು ಇದರಿಂದ ತಮಗೂ ಸಮಾಜಕ್ಕೂ ಆಗಬಹುದಾದ ಸೇವೆ ಏನು ಎಂಬುದನ್ನು ವಿನೋಬಾ ತಮ್ಮ ಪ್ರವಾಸ ಕಾಲದಲ್ಲಿ ವಿವಿಧೆಡೆಗಳಲ್ಲಿ ಪ್ರವಚನಗಳ ಮೂಲಕ ನಿರೂಪಿಸಿದ್ದಾರೆ ಸರ್ವೋದಯ ಪಾತ್ರೆಗೆ ಸಂಬಂಧಿಸಿದ ವಿಷಯಗಳನ್ನು ಅವರ ಭಾಷಣಗಳಿಂದ ಸಂಗ್ರಹಿಸಿ ಈ ಪುಸ್ತಕದಲ್ಲಿ ಕೊಡಲಾಗಿದೆ. ಈ ಹೊತ್ತಗೆಯನ್ನು ಒಂದು ಬಾರಿ ಓದಿ, ಅರ್ಥಮಾಡಿಕೊಂಡಲ್ಲಿ ಪುಸ್ತಕದ ನಿಜವಾದ ಉದ್ದೇಶವು ಸಫಲವಾಗುವುದು. 'ಸರ್ವೋದಯ'ದಲ್ಲಿ ಆಸಕ್ತಿಯಿರುವವರೆಲ್ಲರೂ ಅವಶ್ಯ ನೋಡಬೇಕಾದ ಗ್ರಂಥವಿದು.

ಯಕ್ಷಗಾನ ಸ್ವಯಂಪ್ರಭಾ ಪರಿಣಯ— ಬರೆದವರು ಮತ್ತು ಪ್ರಕಾಶಕರು. ಶೇರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ, ದೇಲಂಪಾಡಿ, ಕಾಸರಗೋಡು ತಾಲೂಕು. ಪುಟಗಳು. ೩೮. ಬೆಲೆ. ೫೦ ನಯೇಪೈಸೇ

ಸ್ಕಾಂದ ಪುರಾಣದಿಂದ ಆಯ್ದ ಸ್ವಯಂಪ್ರಭಾ ಪರಿಣಯದ ಕಥೆಯನ್ನಿಲ್ಲಿ ಯಕ್ಷಗಾನದ ರೂಪದಲ್ಲಿ ಬರೆಯಲಾಗಿದೆ ಬ್ರಹ್ಮನ ಮಗಳು ಸ್ವಯಂಪ್ರಭೆಯನ್ನು ವರಿಸ ಬಯಸಿ ಇಂದ್ರ ಸೋತು ಹಿಂತಿರುಗುತ್ತಾನೆ ಮಣಿಪುರದ ನಾಗರಾಜನು ಆಕೆಯೊಡನೆ ಪ್ರಯಾಸದಿಂದ ಹೋರಾಡಿ ಪರಬ್ರಹ್ಮರ ದಯದಿಂದ ವಿವಾಹವಾಗುತ್ತಾನೆ ಮುಂದೆ, ಶೋಣಿತಪುರದ ದೈತ್ಯ ಯಮದಂಷ್ಟ್ರನು ಆಕೆಯನ್ನು ಬಯಸಿ ಬಂದರೂ ಪರಾಜಿತನಾಗುತ್ತಾನೆ ಆ ಸೋಲಿ, ತನಗಾದ ಪರಿಭವದ ಸೇಡು ತೀರಿಸಲು ಇಂದ್ರನು ಕೃಷ್ಣನ ಮರೆಹೊಕ್ಕು ಉಪಾಯಾಂತರದಿಂದ, ಸ್ವಯಂಪ್ರಭೆಯನ್ನು ಮೂರ್ಛಿತಳನ್ನಾಗಿ ಮಾಡಿಸಿದನು. ಮುಂದೆ ನಾಗರಾಜ ಪದ್ಮರಾಜರಿಬ್ಬರೂ ಸೋಲಲು, ಅವರು ಹರನನ್ನು ನೆನೆಯಲು ಹರಿಹರರು ಭರದಿಂದ ಹೋರಾಟಕ್ಕೆ ತೊಡಗಿದರು. ಕಡೆಗೆ ಬ್ರಹ್ಮನಿಂದ ಸಂಧಾನವಾಗುವುದು ಸ್ವಯಂಪ್ರಭೆ ಮಹಾಸಾಧ್ವಿ ಎಂದು ಇಂದ್ರ ಸುಮ್ಮನೆ ಹಿಂತೆರಳುತ್ತಾನೆ.

ಹೀಗೆ ಯಕ್ಷಗಾನದ ಕಥೆ ನಾಲ್ಕು ಶ್ರೇಣಿಯಾಗಿ ಬರುತ್ತದೆ. ಅಭಿನಯದ ದೃಷ್ಟಿಯಿಂದ ತರುವುದು ತುಸು ಪ್ರಯಾಸವೆನಿಸುತ್ತದೆ. ಅದರೂ ತಾಳಮದ್ದಳೆಗೆ ಒಳ್ಳೆಯದಾಗಬಹುದು, ಆದಿಯಿಂದ ಅಂತ್ಯದವರೆಗೂ ವೀರರಸವೊಂದೇ ಕೋಡಿಹರಿಯುವುದು ದೃಗ್ಗೋಚರವಾಗುತ್ತದೆ ಸಂಭಾಷಣೆಯಲ್ಲಿ, ಮೊದಲಿಕೆಯ ಮಾತುಗಳು ಬಂದಾಗ, ಲೇಖಕರ ಕಾವ್ಯಶೈಲಿಗೊಂದು ಒಪ್ಪವಿಟ್ಟಂತೆ ಕಂಡುಬರುತ್ತದೆ ಯಕ್ಷಗಾನ ವಿಜ್ಞರು ವೇದಿಕೆಗೆ ತರುವ ಪ್ರಯತ್ನ ನಡೆಸಲಿ.

ಜನ ಮತ—(ಪ್ರಜಾರಾಜ್ಯ ವಿಶೇಷಾಂಕ) ಸಂಪಾದಕರು ಟಿ. ಕೆ. ಜನಾರ್ದನ, ೭೩೧, ಚಿಕ್ಕಪೇಟೆ, ಬೆಂಗಳೂರು—೨.

ಈ ಪ್ರಜಾರಾಜ್ಯ ಸಂಚಿಕೆಯಲ್ಲಿ ದಿ ಎಂ ಶ್ರೀ, ಶಂಕರಾಚಾರ್ಯ, ಚುಂಬನ ಕಲೆ ಮೊದಲಾದ ಲೇಖನಗಳೂ ಚಿತ್ರವಿಜ್ಞಾನ ಕಥೆಗಳೂ, ಭಾರತದ ಪ್ರಗತಿಗೆ ಸಂಬಂಧಿಸಿದ ಹಲವಾರು ಚಿತ್ರಗಳೂ ಇವೆ. ಶಂಕರ ದಿಗ್ವಿಜಯ ಓದಬೇಕಾದ ಲೇಖ.

ಕನ್ನಡಿಗ— (ಅ. ಭಾ. ಕೈಮಗ್ಗ ಸಪ್ತಾಹ ಸಂಚಿಕೆ.) ಸಂಪಾದಕರು. ಎಚ್. ಎ. ಮೋದಿ, ಹುಬ್ಬಳ್ಳಿ.

ಅಖಿಲ ಭಾರತ ಕೈಮಗ್ಗ ಸಪ್ತಾಹದ ಅವಸರದಲ್ಲಿ ಪ್ರಕಟಿಸಿದ ಈ ವಿಶೇಷ ಸಂಚಿಕೆಯಲ್ಲಿ ಕೈಮಗ್ಗ, ಖಾದಿ ಮೊದಲಾದುವುಗಳ ಕೈಗಾರಿಕೆಯ ಬಗ್ಗೆ ಉತ್ತಮ ಲೇಖನಗಳು ಬೆಳಕು ಕಂಡಿವೆ. ಉತ್ತರ ಕರ್ನಾಟಕದ ಕೈಮಗ್ಗ ಕೈಗಾರಿಕೆಯ ವಿವರಣೆಗೆ ಪ್ರಾಶಸ್ತ್ಯ ನೀಡಲಾಗಿದೆ.

--ಗೋರಾ.

ಸತ್ಯ ಕಥೆ

(೧ನೇ ಪುಟದಿಂದ)

ಮೇಜುಗಳ್ಳಿನ ಮೇಲೆ ಹರಿದು, ಅವರಿಗೆ ಸಂದೇಹ ಹುಟ್ಟಿತು. ಅಹಮದನ ಸಲಹೆ ಪಡೆದು, ಅವರದನ್ನು ಪರೀಕ್ಷೆ ಮಾಡಿಸಿದಾಗ ಜಿನಿವಾರರು ಇದನ್ನು ವಿಶ್ವದ ಸರ್ವಶ್ರೇಷ್ಠ ಮಣಿಯ ಸಾಲಿಗೆ ಸೇರಿಸಿಬಿಟ್ಟರು.

ಇವು ಸುಪ್ರಸಿದ್ಧ ರತ್ನಗಳ ಕಥೆ ಮಾತ್ರ ಆದರೆ ಭಾರತದಲ್ಲಿ ಉತ್ತಮೋತ್ತಮ ರತ್ನಗಳು ಈಗಲೂ ಹುಟ್ಟುತ್ತ ಇವೆ. ಭಾರತ ಮಾತೆಯ ಗರ್ಭದಲ್ಲಿ ಎಷ್ಟೆಷ್ಟು ಅಮೂಲ್ಯವಾದ ರತ್ನಗಳಿವೆಯೆಂದು ಯಾರು ತಾನೇ ಹೇಳಬಲ್ಲನು?

ಭಾರತದಲ್ಲಿ ಸರ್ಪಗಳ ಹೆಡೆಯಮೇಲೆ ಬೆಲೆಬಾಳುವ ರತ್ನಗಳಿವೆ ಎಂದು ಜನರು ಅಂದುಕೊಳ್ಳುತ್ತಾರೆ. ಭಾರತೀಯ ಪುರಾಣಗಳಲ್ಲಿಯೂ ಈ ಬಗ್ಗೆ ಬೇಕಾದಷ್ಟು ಉದಾಹರಣೆಗಳು ದೊರೆಯುತ್ತವೆ. ಪಾಶ್ಚಾತ್ಯ ಪುಸ್ತಕಗಳಲ್ಲಿಯೂ ಇವನ್ನು ವರ್ಣಿಸಿರುತ್ತಾರೆ ಎಲ್ಲ ಸರ್ಪಗಳೂ ರಾತ್ರಿ ಕಾಲದಲ್ಲಿ ಮಾಣಿಕ್ಯಾದಿಗಳನ್ನು ತಲೆಯಲ್ಲಿ ಹೊತ್ತು ಅವುಗಳ ಬೆಳಕಿನಿಂದ ಸಂಚರಿಸುತ್ತವೆ ಎಂದು ಹೇಳುತ್ತಾರೆ.

ಇದೇನೇ ಇರಲಿ, ಕಣ್ಣಿನಿಂದ ಕಂಡ ಆಧಾರಗಳಿಂದಲೇ ಭಾರತವು ಸ್ವರ್ಣಭೂಮಿಯೆಂದು ಹೇಳಲು ಬೇರೆ ಆಧಾರಗಳು ಅವಶ್ಯವಿಲ್ಲ.

(ವಿವಿಧ ಮೂಲಗಳಿಂದ)

— ಗೋರಾ.

ವಿಚಾರ ಮಥನ

(೧ನೇ ಪುಟದಿಂದ)

ಷನ್‌ಗಳ ಅಧಿಕಾರವನ್ನು ಕಾಶ್ಮೀರ ರಾಜ್ಯಕ್ಕೂ ವಿಸ್ತರಿಸುವ ಕಾರ್ಯಕ್ರಮವನ್ನು ತೆಗೆದುಕೊಂಡರೆ, ಆಗ ರಾಜ್ಯದ ಸೇರ್ಪಡೆಯು ಭಾರತದೊಡನೆ ಸಂಪೂರ್ಣ ಆದಂತಾಗುವುದೆಂದು ಹೇಳಿ, ಈ ಬಗ್ಗೆ ಕಾರ್ಯೋನ್ಮುಖವಾಗುವಂತೆ ವಿನಂತಿಸಿದ್ದಾರೆ

ಕಾಶ್ಮೀರೀ ಪ್ರಜೆಗಳ ಅಭಿಪ್ರಾಯವನ್ನು ತಿಳಿದಿರುವ ಶ್ರೀ ಬಕ್ಷಿ ಗುಲಾಮ ಮಹಮದರು ಕ್ರಮೇಣ ಈ ಬಯಕೆಗಳನ್ನೂ ಈಡೇರಿಸಿ ಕೊಡುವರೆಂದು ನಂಬಿದರೆ ಅದರಲ್ಲಿ ಅತಿಶಯೋಕ್ತಿಯಿಲ್ಲ. ಭಾರತ—ಕಾಶ್ಮೀರಗಳ ಸಂಬಂಧವು ಮಾನಸಿಕವಾಗಿ ಮಾತ್ರವಲ್ಲ ನಿಯಮಿತ ಶಾಸನಿಕವಾಗಿಯೂ ಒಂದಾಗಬೇಕು. ಇದೇ ಭಾರತೀಯರ ಇಚ್ಛೆ.

* *

- ಮಾಲದೀವಿ ದ್ವೀಪಗಳಲ್ಲಿ ತಮ್ಮ ಅಧಿಕಾರವನ್ನು ಬಲಪಡಿಸಲು ಬ್ರಿಟನ್ನು ಬಯಸುತ್ತಿದೆ ಎಂದು ಮಾಲಿದೀವಿ ಸರಕಾರವು ಆರೋಪಿಸಿದೆ. ನಾಡಿನ ಜನರನ್ನು ಸರಕಾರದ ವಿರುದ್ಧ ದಂಗೆ ಏಳುವಂತೆ ಪ್ರೇರೇಪಣೆ ನಡೆಸಲು ವಿವಿಧ ವ್ಯಾಜಗಳಿಂದ ಬ್ರಿಟನ್ನಿನಿಂದ ಜನರು ಬರುತಿದ್ದಾರೆ ಇಲ್ಲದಸಲ್ಲದ ಆರೋಪಗಳನ್ನು ಹೊರಿಸುತಿದ್ದಾರೆ ಮಾಲದೀವಿಯ ಆಂತರಿಕ ವಿಷಯಗಳಲ್ಲಿ ಬ್ರಿಟನ್ನು ಅನಾವಶ್ಯಕವಾಗಿ ಮಧ್ಯೆ ಪ್ರವೇಶಿಸುತ್ತದೆ. ಸಣ್ಣ ಅಭದ್ರ ರಾಷ್ಟ್ರವಾದ ಮಾಲದೀವಿಯ ಕೇಳಿಕೆಗಳನ್ನು ತಿರಸ್ಕರಿಸಿ ಬ್ರಿಟಿಷರು ಆಕ್ರಮಣಕಾರೀ ಕುತಂತ್ರಗಳನ್ನು ನಡೆಸುತಿದ್ದಾರೆ ಎಂದು ಸರಕಾರವು ದೂರಿದೆ ಅಲ್ಲದೆ, ಬ್ರಿಟಿಷರ ನಿರ್ದಯ ಶರ್ತಗಳಿಗೆ ತಲೆತೂಗಬಲ್ಲ ಸರಕಾರವನ್ನು ಮಾಲದೀವಿಯಲ್ಲಿ ಸ್ಥಾಪಿಸುವುದೇ ಅವರ ಉದ್ದೇಶವೆಂದು ಹೇಳಿ, ಮಾಲದೀವಿಯ ಜನತೆಯು ಬಡತನವಾಗಲೀ ಬ್ರಿಟಿಷರ ಶಕ್ತಿಯಾಗಲೀ ತಮ್ಮ ರಾಷ್ಟ್ರದ ಅಖಂಡತೆಯನ್ನೂ ಸ್ವಾತಂತ್ರ್ಯವನ್ನೂ ದೂರಮಾಡಲಾರವೆಂದು ಘೋಷಿಸಿದೆ.

ಬ್ರಿಟನ್ನೊಡನೆ ರಾಷ್ಟ್ರ ಸಂಬಂಧದ ಕುರಿತು ಮಾತುಕತೆಗಳನ್ನು ಮಾಡಲು ಆಗಮಿಸಿದ್ದ ಮಾಲದೀವಿ ಮಂತ್ರಿಗಳ ಶಿಷ್ಟ ಮಂಡಳಿಯ ಬಯಕೆಗಳು ಭಗ್ನವಾಗಿ ಹೋಗಿವೆ ಆದರೂ, ಈ ಮುರಿದ ಮಾತುಕಥೆಗಳು ಇನ್ನೂ ಮುಂದುವರಿಯಬಹುದೆಂದು ಹೇಳಲಾಗುತ್ತದೆ.

ಪ್ರಗತಿಯ ಪಥದಲ್ಲಿ..........

[1958ನೇ ವರ್ಷಾಂತ್ಯದಲ್ಲಿ ನಮ್ಮ ಅಂಕೆಸಂಖ್ಯೆಗಳು]

ರೂ. 56,00,000	ಅಧಿಕೃತ ಭಂಡವಾಳ
ರೂ. 32,23,787	ತೆತ್ತ ಭಂಡವಾಳ
ರೂ. 32,10,987 ...	ಪಾಲು ಭಂಡವಾಳ
ರೂ. 28,96,276	ಪ್ರಾಪ್ತಿಯಾದ ಭಂಡವಾಳ

ಕ್ಷೇಮನಿಧಿ .... ರೂ. 26,50,000.
ಠೇವಣಾತಿ ರೂ. 13 ಕೋಟಿಗೂ ಮಿಕ್ಕಿದೆ
ಒಟ್ಟು ವ್ಯವಹಾರ ಸಂಪತ್ತು ರೂ. 17 ಕೋಟಿಗೂ ಮಿಕ್ಕಿದೆ
ಶಾಖೆಗಳು: 117

ಡಾ| ಟಿ. ಎಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

ಟಿ. ಎ. ಪೈ,
ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ.
THE CANARA INDUSTRIAL & BANKING SYNDICATE LTD, UDIPI.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ ಪೈಸೆ

ವರುಷ ೩೮ ವಾರ ೩೦ 9-4-1959 Vol 38 No. 30.

ವಿಚಾರ ಮಥನ

ಸುಭದ್ರ ಸರಕಾರ

* *

ಲಾಮರಿಗೆ ಆಶ್ರಯ

* *

ಕಮ್ಯುನಿಸ್ಟರ ರಾಷ್ಟ್ರಪ್ರೇಮ

* *

ನಿಷ್ಪೃಹಧೋರಣೆ ಇಲ್ಲ?

* *

ಮೈಸೂರಲ್ಲಿ ಭದ್ರವಾದ ಸರಕಾರವನ್ನು ರಚಿಸುವ ಆವಶ್ಯಕತೆಯನ್ನೀಗೀಗ ಹಲವಾರು ಪ್ರಮುಖರು ಮನಗಂಡಿದ್ದು, ಅಂತಹರಲ್ಲಿ ಶ್ರೀ ಕೆಂಗಲ್ ಹನುಮಂತಯ್ಯನವರೂ ಒಬ್ಬರು ಶ್ರೀ ಕೆಂಗಲ್ಲರು ಮಾಜಿ ಮೈಸೂರಿನ ಮುಖ್ಯಮಂತ್ರಿಯಾಗಿದ್ದಾಗ, ಸರಕಾರವು ಭದ್ರವಾಗಬೇಕೆಂದೂ ತನ್ನ ಮಂತ್ರಿಮಂಡಳವನ್ನು ಉರುಳಿಸಿದ ಮೇಲೆ, ಸ್ಥಾಪಿಸಲ್ಪಟ್ಟ ಮಂತ್ರಿಮಂಡಳಗಳೆಲ್ಲವೂ ಕಾಂಗ್ರೆಸ್ ಸದಸ್ಯರೆಲ್ಲರ ವಿಶ್ವಾಸವನ್ನು ಗಳಿಸಲು ಅಸಮರ್ಥವಾಗಿರುವುದೆಂದೂ, ಕಾಂಗ್ರೆಸ್ಸಿನ ಎಲ್ಲ ವರ್ಗ ಅಥವಾ ಪಂಗಡಗಳ ವಿಶ್ವಾಸಕ್ಕೆ ಪಾತ್ರವಾಗುವ ಮಂತ್ರಿಮಂಡಳ ಬೇಕೆಂದೂ ಅವರು ಖಚಿತಪಡಿಸಿದ್ದಾರೆ ಆಡಳಿತೆಯಲ್ಲಿರುವ ಅಧಿಕಾರಿಗಳಿಂದಲೂ ಮಂತ್ರಿಮಂಡಳ ಮನ್ನಣೆ ಪಡೆಯಬೇಕೆಂದೂ ಅವರಲ್ಲಿ ಮಂತ್ರಿ ಸಂಪುಟದ ಬಗ್ಗೆ ಭಯಗೌರವಗಳಿಲ್ಲದೆ ಹೋದಲ್ಲಿ ಆಡಳಿತೆಯು ಅತೃಪ್ತಿಕರವಾಗುವುದೆಂದವರು ಸಾರಿದರು. ಮೈಸೂರು ರಾಜ್ಯದ ಆಡಳಿತೆಯ ಬಗ್ಗೆ ಶ್ರೀ ಎ. ಡಿ. ಗೋರವಾಲರು ಒಪ್ಪಿಸಿರುವ ವರದಿಯ ಚರ್ಚಾಸಂದರ್ಭದಲ್ಲಿ ಶ್ರೀ ಹನುಮಂತಯ್ಯನವರು ಸರಕಾರದ ಅಸಮರ್ಥತೆಯನ್ನು ಬಹಿರಂಗಗೊಳಿಸಿದರು. ಆದರೆ, ಸದ್ಯದ ಸರಕಾರವನ್ನು ಉರುಳಿಸುವುದು ತನ್ನ ಅಪೇಕ್ಷೆಯಲ್ಲವೆಂದು ಸ್ಪಷ್ಟೀಕರಿಸಿ, ಎಲ್ಲರ ವಿಶ್ವಾಸ ಪಡೆಯುವ ಮಂಡಳಿಗಿಂತ ಅತ್ಯುತ್ತಮ ಸೇವೆ ಸಲ್ಲಬಹುದು ಎಂದು ಅಭಿಪ್ರಾಯಪಟ್ಟರು

ಸರಕಾರದ ಅಧಿಕಾರಿಗಳಲ್ಲೂ ನೌಕರರಲ್ಲೂ ಶ್ರೀ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಮಂತ್ರಿಮಂಡಳದ ಬಗ್ಗೆ ಭಯಗೌರವಗಳಿದ್ದುವು ಎಂಬುದನ್ನು ಸ್ವಲ್ಪವಾದರೂ ಒಪ್ಪಬೇಕು ಆದರೆ, ಈಗ ಮಂತ್ರಿಮಂಡಳಿಯ ಮೇಲೆಯೇ ಅಧಿಕಾರಿಗಳು ಸವಾರಿ ಮಾಡುತಿದ್ದಾರೆ ಎಂದು ಹೇಳಲಾಗುತ್ತಿದೆ. ಇದು ನಿಜವಲ್ಲ ಎಂದು ಹೇಳಲು ಪುರಾವೆಗಳು ಸಾಕಷ್ಟಿಲ್ಲ ಹಾಗಿರುವಾಗ, ಜನತೆಗೆ ಉತ್ತಮ ಸೇವೆ ಹೇಗೆ ದೊರೆಯಬಹುದು?

ಕಾಂಗ್ರೆಸ್ಸಿಗರು ಪರಸ್ಪರ ಕಚ್ಚಾಡಿಕೊಂಡೇ ಇದ್ದು, ಅಧಿಕಾರಕ್ಕೆ ಅಂಟಿಕೊಳ್ಳಲು ಹವಣಿಸುವುದೇ ತಮ್ಮ ಮುಖ್ಯ ಧ್ಯೇಯವಾಗಿರಿಸಿಕೊಂಡರೆ, ಜನಸೇವೆಗೆ ಅವರಿಗೆ ಬಿಡುವು ದೊರೆಯುವುದು ಹೇಗೆ? ಕಾಂಗ್ರೆಸಿಗರು ತಮ್ಮ ತಪ್ಪನ್ನು ಇನ್ನೂ ಕಂಡುಕೊಳ್ಳದೇ ಇರುವುದರಿಂದಲೇ ಪಕ್ಷದ ಗೌರವವನ್ನೂ ಕಳೆಯುತಿದ್ದಾರೆ ಎಂಬುದು ನಿರ್ವಿವಾದವಲ್ಲವೆ?

* * *

ಟಿಬೇಟದ ಕ್ರಾಂತಿಯಿಂದಾಗಿ ನೊಂದ ದಲಾಯ್ ಲಾಮಾರವರ ಮೇಲೆ ಕೇವಲ ಚೀನ ಮಾತ್ರವಲ್ಲದೆ, ಪ್ರಪಂಚದ ಎಲ್ಲ ರಾಷ್ಟ್ರಗಳವರೂ ದೃಷ್ಟಿಯನ್ನಿಟ್ಟಿರುತ್ತಾರೆ ಆದರೆ, ಈ ದೃಷ್ಟಿಯಲ್ಲಿ ಮಾತ್ರ ಅಲ್ಪ ಸ್ವಲ್ಪ ವ್ಯತ್ಯಾಸವಿರಬಹುದು.

ಕೆಲ ದಿನಗಳ ಹಿಂದೆ, ಕಣ್ಮರೆಯಾದ ದಲಾಯ್ ಲಾಮಾ ಎಲ್ಲಿರುವರೆಂಬ ಶೋಧ ನಡೆಯುತಿದ್ದಿತೆಂಬ ವಾರ್ತೆಯಿಂದ ಕೆಲವರು ಕಳವಳಕ್ಕೀಡಾಗಿದ್ದರು ಆದರೆ, ಈಗ ಮಾತ್ರ, ಅವರು ಸುರಕ್ಷಿತವಾಗಿ ಭಾರತವನ್ನು ಪ್ರವೇಶಿಸಿರುವರೆಂಬ ಸುದ್ದಿ ಹೆಚ್ಚಿನವರನ್ನ ಸಂತುಷ್ಟಗೊಳಿಸಿದೆ ಭಾರತವಾದರೂ ದಲಾಯ್ ಲಾಮಾರವರನ್ನು ಪ್ರೀತ್ಯಾದರದಿಂದ ಸ್ವಾಗತಿಸಿದೆ. ಅವರ ವಸತಿಯ ಬಗ್ಗೆ ನಾಕಷ್ಟು ಅನುಕೂಲತೆಗಳನ್ನು ಒದಗಿಸಿಕೊಡಲು ಪ್ರಯತ್ನಿಸುತ್ತಿದೆ



ಪಿಟ್ಸ್‌ಬರ್ಗ್ (ಅಮೆರಿಕೆ) ನ ಪುನಾರಚನಾಕಾರ್ಯದಿಂದ ಸುಮಾರು ೫೧ ನೂತನ ಭವನಗಳು ನಿರ್ಮಿತವಾಗಿವೆ

ಭಾರತವು ಈ ರೀತಿಯಾಗಿ ಲಾಮಾರಿಗೆ ಇತ್ತ ರಕ್ಷಣೆಯಿಂದ ಚೀನಕ್ಕೆ ಆಶ್ಚರ್ಯವುಂಟಾಗಲಿಲ್ಲ ಎಂದು ಅವರು ಹೇಳುವರಾದರೂ ಭಾರತದ ಬಗ್ಗೆ ದ್ವೇಷವು ಅಂಕುರಿಸದೆ ಇರಲಾರದು ಅಲ್ಲಿಗೇ ಟಿಬೇಟಿನಿಂದ ಭಾರತಕ್ಕೆ ಬರಬಹುದಾದ ನಿರಾಶ್ರಿತರಿಗೂ ಆಶ್ರಯವನ್ನೀಯಲು ಭಾರತವು ಪ್ರಯತ್ನಿಸುವುದರಲ್ಲಿದೆ. ಹೀಗಿರುವಾಗ ಚೀನದ ಅಪಕೃಪೆ ಬರುವುದೆಂದರೂ ಸ್ವಾಭಾವಿಕ ಆದರೆ ಸ್ವತಂತ್ರ ಸ್ವಾಯತ್ತಾಧಿಕಾರಿ ರಾಷ್ಟ್ರ ಭಾರತಕ್ಕೆ ತನ್ನ ಆಶ್ರಯವನ್ನು ಬಯಸಿ ಬಂದವರಿಗೆ ಅದನ್ನು ಈಯುವ ಇಲ್ಲವೇ ಬಿಡುವ ಕುರಿತು ನಿರ್ಧರಿಸಲು ಸ್ವಾತಂತ್ರ್ಯವಿಲ್ಲದುಳಿದೀತೆ? ಆಶ್ರಯ ಬೇಡಿದವರನ್ನು ರಕ್ಷಿಸುವ ಸಂಸ್ಕೃತಿಯುಳ್ಳ ಭಾರತವು ಟಿಬೇಟಿಯನರಿಗೂ ರಕ್ಷಣೆಯೀಯಲು ಮುಂದಾಗುತ್ತಿರುವುದು ಅದರ ಸಂಸ್ಕೃತಿ ಪರಂಪರೆಗೆ ಅನುಗುಣವಾಗಿದೆ— ಅಂತಲೇ ಎಲ್ಲ ಭಾರತೀಯರೂ ಭಾರತ ಸರಕಾರದ ಈ ಧೋರಣೆಯನ್ನು ಸ್ವಾಗತಿಸುತ್ತಾರೆ

* * *

ಭಾರತದಲ್ಲಿದ್ದುಕೊಂಡು ರಷ್ಯ, ಚೀನಗಳಿಂದ ತತ್ವಗಳನ್ನು ಎರವಲು ಪಡೆದು ಇಲ್ಲಿ ಆ ದೇಶಗಳ ಪ್ರಚಾರಕರಂತೆ ಕೆಲಸ ಮಾಡುತ್ತಿರುವ ಭಾರತೀಯ ಕಮ್ಯುನಿಸ್ಟರ ರಾಷ್ಟ್ರಭಕ್ತಿಯು ಟಿಬೇಟಿನ ಗೊಂದಲದಿಂದ ಮತ್ತಷ್ಟು ಬಹಿರಂಗವಾಯಿತೆನ್ನಬಹುದು. ಭಾರತ—ಟಿಬೇಟುಗಳ ಗಡಿಯಲ್ಲಿರುವ ಕಾಲಿಂಪಾಂಗದಲ್ಲಿಯೇ ಟಿಬೇಟದ ದಂಗೆಯ ಬೀಜ ಬಿತ್ತಲ್ಪಟ್ಟಿದೆ ಎಂಬ ಚೀನೀಯರ ಅಭಿಪ್ರಾಯವನ್ನೇ ನಮ್ಮ ಕಮ್ಯುನಿಸ್ಟರು ಪ್ರತಿಧ್ವನಿಸಿದರು ಪ್ರಧಾನಿ ನೆಹರೂರವರು ಈ ಹೇಳಿಕೆಯನ್ನು ನಿರಾಕರಿಸಿದಾಗ, ಲೋಕಸಭೆಯಲ್ಲಿ ಕಮ್ಯುನಿಸ್ಟರು ಹೊರತು ಉಳಿದವರೆಲ್ಲರೂ ಹರ್ಷೋದ್ಗಾರಗಳನ್ನು ಮಾಡಿರುವಾಗ, ಕಮ್ಯು

(೮ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಮಂಗಳೂರು—3
ಸ್ಥಾಪನೆ - 1931

ಕಾಯಂ ಠೇವಣಾತಿ ಬಡ್ಡಿ ದರ
1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%
ರೂಪಾಯಿ 10,000/ ನ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು

ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ

ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ

ನಮ್ಮ ಶಾಖೆಗಳು:
ಮಂಗಳೂರು ಬೆಂಗಳೂರ ಬೊಂಬಾಯಿ, ಮೈಸೂರು,
ಮಡಿಕೇರಿ, ಇತ್ಯಾದಿ ..ಇತ್ಯಾದಿ ...

ಕಥಾ ವಿಹಾರ

ಮೂರನೆಯ ಮಗನು ಮಾಡಿದ ಮಾಟ

ತನ್ನೆರಡು ಸೋದರರು ಮಾಡದ ಮಹಾ ಕಾರ್ಯವನ್ನು ಅವನು ಸಾಧಿಸಿದನು

ಒಂದು ಊರು ಆ ಊರಲ್ಲೊಬ್ಬ ಮುದುಕ ತನ್ನ ಜೀವನದ ಎಂಬತ್ತು ವರ್ಷಗಳನ್ನು ಮನುಷ್ಯನಾಗಿ ಕಳೆದ ಹಣ್ಣು ಹಣ್ಣು ಮುದುಕ ಜೀವನದ ಅಪಾರವಾದ ಅನುಭವಗಳನ್ನು ಪಡೆದು ಆತನ ಕೂದಲು ಹಣ್ಣಾಗಿತ್ತು ಮುಖದಲ್ಲಿ ಹಣೆಯಲ್ಲಿ ಮೂಡಿದ್ದ ನರಿಗೆಗಳು ಅವನ ಬಾಳಿನ ಅನುಭವಕ್ಕೆ ಸಾಕ್ಷಿ ಹೇಳುತ್ತಿದ್ದವು ಗುಳಿಬಿದ್ದರೂ, ತೀಕ್ಷ್ಣವಾದ ಆತನ ಕಣ್ಣುಗಳು ಜೀವನವನ್ನು ಪ್ರಕೃತಿಯನ್ನು ಪ್ರಪಂಚವನ್ನು, ಸಮಾಜವನ್ನು ಕಾಣುವ ಆತನ ಅನುಭವಪೂರಿತ ದೃಷ್ಟಿಗೆ ಬೆಂಗಾವಲಾಗಿ ನಿಂತಿದ್ದುವು ಜೀವನದಲ್ಲಿ ಎಷ್ಟೋ ಕಷ್ಟ ನಷ್ಟಗಳನ್ನು ಎದುರಿಸಿದ ಆತನ ಎದೆ ಇಂದು ಕೂಡಾ ಅವುಗಳಿಗೆ ಸದಾ ಸ್ವಾಗತ ನೀಡುವಂತಿತ್ತು ಬಾಳಿನ ಪೂರ್ಣಾನುಭವದ ಜೀವಂತ ಮೂರ್ತಿಯಾಗಿದ್ದ ಮುದುಕ ಜೀವನದಲ್ಲಿ ಆತನು ಪಡೆಯದ ಅನುಭವವಿರಲಾರದು ಜೀವನದಲ್ಲಿ ಆತನು ಎದುರಿಸದ ಕಷ್ಟನಷ್ಟಗಳಿರಲಾರವು ಆಳವಾದ ಸಂಸಾರ ಸಾಗರದಲ್ಲಿ ಬಹುದೂರಕ್ಕೆ ಸಂಸಾರ ನೌಕೆಯನ್ನು ಸಾಗಿಸಿ ದಡಸೇರುವುದರಲ್ಲಿದ್ದ ಆ ಮುದುಕ

ಆತನಿಗೆ ಮೂವರು ಮಕ್ಕಳು ಹುಟ್ಟಿದವರು ಮೆಚ್ಚುವ ಗಂಡು ಮಕ್ಕಳನ್ನೇ ಪಡೆದ ಭಾಗ್ಯಶಾಲಿ ಆತ ಮುಪ್ಪಿನಕಾಲ ಮಕ್ಕಳ ರಕ್ಷಣೆಯಲ್ಲಾದ ಪುಣ್ಯಶಾಲಿ ತಂದೆ ಆತ ತಂದೆಗೆ ಮಕ್ಕಳೆಂದರೆ ಪ್ರೀತಿ ಮಕ್ಕಳಿಗೂ ಅಷ್ಟೆ

ಅಂದು ಅವನಿದ್ದುದೊಂದು ಹಳ್ಳಿ ಬೇಸಾಯವೇ ಜನರ ಕಸಬಾಗಿದ್ದ ಪ್ರಕೃತಿ ದೇವಿಯು ಹರಸಿ ಕೊಟ್ಟ ಸಸ್ಯಶ್ಯಾಮಲ ಹಳ್ಳಿ ದುಡಿಮೆಯೇ ಅವರ ದೇವರು ಕಾಯಕವೇ ಅವರ ಕೈಲಾಸ ಶ್ರಮಸಾಧನೆಗಳೇ ಅವರು ಪೂಜಿಸುತಿದ್ದ ದೇವರುಗಳು ಕೈಕೆಸರು ಮಾಡಿ ಮೊಸರುಣ್ಣುವ ಕರ್ಮ ಜೀವಿಗಳವರು.

ಮೂವರು ಮಕ್ಕಳೂ ತಂದೆಯ ಕರುಳಿನ ಚೂರುಗಳು ಮೊದಲನೆಯವ. ದೃಢಕಾಯದ, ಉಬ್ಬಿದ ಮೈಯ, ಶಕ್ತಿಶಾಲಿ ಏನನ್ನಾದರೂ ತನ್ನ ತೋಳ ಬಲದಿಂದಲೇ ಸಾಧಿಸಬಲ್ಲೆನೆಂಬ ತೋಳ ಶಕ್ತಿಯ ಬಲಶಾಲಿಯಾತ ತನಗೆ ಯಾರೂ ಎಣೆಯಿಲ್ಲವೆಂಬ ಭಾವ ಅವನದು ತನ್ನ ಶಕ್ತಿಯ ಕುರಿತು, ತನ್ನ ಧೈರ್ಯದ ಕುರಿತು, ತನ್ನ ಎದೆಗಾರಿಕೆಯ ಕುರಿತು ಆತನಿಗೆ ತುಂಬಾ ಆತ್ಮ ವಿಶ್ವಾಸ

ಎರಡನೆಯವ ಸಾಧಾ ಶರೀರಿ ಹೆಚ್ಚು ತೆಳ್ಳಗೂ ಅಲ್ಲದ ಹೆಚ್ಚು ದಪ್ಪಗೂ, ಅಲ್ಲದ ಸಾಧಾ ಮೈ ಅವನದು ಮೊದಲನೆಯಾತ ಶಕ್ತಿಯ ಕುರಿತು ಧೈರ್ಯ ತಳೆದಿದ್ದರೆ ಈತ ತನ್ನ ಕುಶಾಗ್ರ ಬುದ್ಧಿಯ ಕುರಿತು ಬಹು ಭರವಸೆ ತಾಳಿದ್ದ ತಂತ್ರಗಾರ ಎಂತಹವನನ್ನಾದರೂ ಸೆರೆ ಹಿಡಿಯುವ, ಮರುಳು ಮಾಡುವ ಮಾತುಗಾರಿಕೆಯೇ ಆತನ ಸಂಪತ್ತು ತನ್ನ ನಾಲಗೆಯ ಬಲದಿಂದ ಎಂತೆಂತಹವರೆದುರೂ ಬದುಕಿ ಬಂದ ಧೀರನೀತ ತನ್ನ ಕುತಂತ್ರ ಕುಹಕೋಪಾಯಗಳಿಂದ ಈ ವರೆಗೂ ಗ್ರಾಮದ ಜನರಿಂದ ಚಾಣಾಕ್ಷನೆಂದು ಕರೆಯಲ್ಪಡುತಿದ್ದ ಬುದ್ಧಿಶಾಲಿ

ಮೂರನೆಯವನ ರೀತಿಯೇ ಬೇರೆ ದೇವರು ಕೊಟ್ಟ ದೇಹದಾರ್ಢ್ಯತೆ, ಬುದ್ಧಿ ಬಲ ಎಲ್ಲವೂ ಆತನಿಗಿತ್ತು ಆದರೆ ಆತನಿಗೆ ಇದೊಂದೂ ಬೇಡ ಆತನು ಸಾಧು ಸ್ವಭಾವದವನು, ಪ್ರಪಂಚವನ್ನೇ ತನ್ನ ಮನೆಯೆಂದು ಕಾಣುವ ಲೋಕದ ಜನಕೋಟಿಯನ್ನೇ ಬಂಧುಗಳೆಂದು ಕಾಣುವ ವಿಶಾಲ ದೃಷ್ಟಿ ಅವನದು ಅಣ್ಣಂದಿರಿಂದ ಜೋಗಿ ಬೈರಾಗಿ ಎಂಬ ಬಿರುದು ಪಡೆದ ಭಾಗ್ಯಶಾಲಿ ಆತ ಆತ ಪ್ರೀತಿಯನ್ನಲ್ಲದೆ ದ್ವೇಷವನ್ನು ಅರಿಯನು ಮಿತ್ರರನ್ನಲ್ಲದೆ ಶತ್ರುಗಳನ್ನು ಆತ ಪ್ರಪಂಚದಲ್ಲಿ ಕಂಡೇ ಇರಲಿಲ್ಲ

ಮೂರು ಮಕ್ಕಳೂ ತಂದೆಯೆಂದರೆ ಪ್ರಾಣ ಕೊಡಲೂ ಸಿದ್ಧರು ಆ ಮೂವರೂ ಮಕ್ಕಳನ್ನು ಸುಧಾರಿಸಿಕೊಂಡು ಹೋಗುವ ಚಾಕಚಕ್ಯತೆ ಬಲ್ಲವನು ಆ ಮುದುಕನೊಬ್ಬನೇ ತನ್ನ ಮಕ್ಕಳಲ್ಲೇ ಮೂರು ಗುಣಗಳುಳ್ಳ ಇವರನ್ನು ಕಂಡ ತಂದೆ ಅಂತರಂಗದಲ್ಲೇ ಹಿಗ್ಗುತ್ತಿದ್ದ. ಹೊಲಗಳಲ್ಲಿ ದುಡಿದು ಮಕ್ಕಳು ಜೀವನ ಸಾಗಿಸುತ್ತಿದ್ದರು ತಂದೆಯೊಡನೆ

ಬೇಸಗೆ ಕಳೆದು ಮಳೆಗಾಲ ಕಾಲಿಡುತ್ತಿದೆ ರೈತ ಜನ ಬೇಸಾಯದ ಸಿದ್ಧತೆಗಳನ್ನು ಮಾಡುತ್ತಿದೆ ಪಕ್ಷ ಕಳೆಯಿತು ಮಳೆ ಬರಬೇಕಿತ್ತು ಪದ್ಧತಿಯಂತೆ ಗುಡುಗುವ ಗುಡುಗು, ಮಿಂಚುವ ಮಿಂಚು ಇಲ್ಲ ಹಲವು ದಿನಗಳುರುಳಿದುವು ಮಳೆಯ ಸುಳಿವಿಲ್ಲ ರೈತರು ಕಂಗಾಲಾದರು ಮಳೆಗಾಲದ ಸೂಚನೆ ಕೊಡುವ ಪಕ್ಷಿಯೂ ಕೂಗುವುದಿಲ್ಲ ಎತ್ತುಗಳು, ದನಗಳು, ಕರುಗಳು ಮೇವಿಗಾಗಿ ಹಾತೊರೆದುವು ಬಾವಿಯ ನೀರು ಬತ್ತಿತು ಕೆರೆಯ ನೀರು ಇಂಗಿತ್ತು ಉಕ್ಕಿ ಸೊಕ್ಕಿ ಹರಿಯುತ್ತಿದ್ದ ನದಿ ಇಂಗಿ ಹರಿಯದಾಯಿತು ಕಪ್ಪೆಗಳ ವಟಗುಟ್ಟುವಿಕೆ ಎಲ್ಲಿಯೋ ಮಾಯವಾಯಿತು. ಬೇಸಗೆಯ ಬಿಸಿಲಿನಿಂದ ಬಿಸಿ ಏರಿದ ಭೂಮಿ, ಈಗ ಬಿಸಿಲಿನ ಝಳದಿಂದ ಒಡೆಯಿತು ನೆಲಕ್ಕೆ ಕಾಲಿಡುವಂತಿಲ್ಲ ಕುಡಿಯಲು ನೀರಿಲ್ಲ ಹಸುಗಳಿಗೆ ಮೇವಿಲ್ಲ ಜನರ ಹೊಟ್ಟೆಗೆ ಹಿಟ್ಟಿಲ್ಲ ಎಲ್ಲೆಲ್ಲೂ ಹಸಿವು ಎಲ್ಲೆಲ್ಲೂ ನೀರಡಿಕೆ ಎಲ್ಲೆಲ್ಲೂ ನರಳಾಟ, ಬೊಬ್ಬಾಟ, ಕಿರುಚಾಟ ಕ್ಷಾಮ ದೇವತೆಯ ವಿಕಟ ಅಟ್ಟಹಾಸಕ್ಕೆ ಬಲಿಯಾಗಿತ್ತು ಆ ಹಳ್ಳಿ

ತನ್ನ ಮುರುಕಲು ಗುಡಿಸಲಿನಿಂದ ಮುದುಕ ಹೊರಗೆ ಇಣಿಕುತ್ತಿದ್ದಾನೆ ಬಿಸಿಲಿನ ಝಳ ತಾಳಲಾರದೆ ಕಣ್ಣಿಗೆ ಅಂಗೈಯನ್ನು ಅಡ್ಡವಾಗಿ ಹಿಡಿದು ಹಳ್ಳಿಯ ಬಯಲನ್ನು ಆತ ಈಕ್ಷಿಸುತ್ತಾ ಇದ್ದಾನೆ ಹಚ್ಚ ಹಸುರು ಪೈರಿನಿಂದ ಕಂಗೊಳಿಸುತ್ತಿದ್ದ ಸಸ್ಯ ಶ್ಯಾಮಲ ಭೂಮಿ ಇಂದು ಕ್ಷಾಮ ದೇವತೆಯ ರೌದ್ರ ನೃತ್ಯದ ರಂಗಸ್ಥಳವಾಗಿದೆ ಹಳ್ಳಿಗರ ಹಾಡಿನಿಂದ ಮಾರ್ದನಿಗೊಡುತಿದ್ದ ಹಳ್ಳಿಯ ಬೆಟ್ಟ ಇಂದು ಬಿಕೋ ಎನ್ನುತ್ತಿದೆ ಹಳ್ಳಿಗರ ಗುಡಿಸಲಲ್ಲಿ ಸುಗ್ಗಿಯ ಹಾಡಿನ ಹಿಗ್ಗು ಕೇಳಿಬರುವ ಬದಲು ಹೊಟ್ಟೆಯ ಹಸಿವಿನಿಂದ ಕತ್ತರಿಸಿ ಚೀರುತ್ತಿರುವ ಮಕ್ಕಳ ನರಳಾಟ, ತಾಯಂದಿರ ಗೋಳಾಟ ತನ್ನ ೮೦ ವರ್ಷದ ಜೀವನದಲ್ಲಿ ಆತ ಇಂತಹ ದೃಶ್ಯವನ್ನು ಕಂಡವನಲ್ಲ ಕೇಳಿರಬಹುದೇನೋ? ಅದು ತನ್ನ ಬಾಲ್ಯದಲ್ಲಿ ಕತೆ ಹೇಳುವ ಅಜ್ಜಿಯಿಂದ ಅಜ್ಜಿಯ ವರ್ಣನೆಗಿಂತಲೂ ಭೀಕರವಾಗಿತ್ತು ಆತನು ಕಂಡ ದೃಶ್ಯ

ಹಳ್ಳಿಗರ ಬದುಕು ಕಷ್ಟವಾಯಿತು ಮನೆಮಾರನ್ನು ಬಿಡದೆ ಅವರಿಗೆ ಗತ್ಯಂತರವಿಲ್ಲ ತಮ್ಮ ತಾತ ಮುತ್ತಾತಂದಿರ ಕಾಲದಿಂದ ಬದುಕಿಬಂದ ಈ ನೆಲವನ್ನು ಈಗ ಅವರು ಬಿಟ್ಟು ಹೋಗಬೇಕು. ಅವರು ಹೋದ ಮೇಲೆ, ಆ ಹಳ್ಳಿ ಬರಿಯ ಸ್ಮಶಾನ ಹುಲ್ಲುರಿದ ಮಸಣ ಹದ್ದಿಗೂ ಕೋಳಿಗೂ ಬೇಡವಾದ ನರಕ ಊರ ಜನ ಹಿರಿಯ ಮುದುಕನ ಬಳಿ ಬಂದರು ಮಂತ್ರಾಲೋಚನೆಗೆಂದು ಮುದುಕನ ಬಾಯಿ ತತ್ತರಿಸಿತು ಕಣ್ಣಲ್ಲಿ ನೀರು ಉಕ್ಕಿ ಬಂತು ಆತ ಏನು ಹೇಳಬೇಕು? ಇಷ್ಟು ಕಾಲ ಹೆತ್ತು ಹೊತ್ತು ಸಾಕಿ ಸಲಹಿದ ಈ ಭೂಮಿಯನ್ನು ಬಿಟ್ಟು ಹೋಗಬೇಕೆಂದೊ? ಛಿ ಕೃತಘ್ನತೆ ಇದು ಹಾಲಿಲ್ಲದ ಒರಡು ದನವನ್ನು ಕಟುಕನ ಕೈಗೆ ಕೊಟ್ಟಂತೆ, ಮಳೆ ಬಾರದೆ ಉಳಿದರೆ ಭೂಮಿತಾಯಿಯ ತಪ್ಪೇನು? ಈ ಸಂದರ್ಭದಲ್ಲೂ ಆತ ತಾಳ್ಮೆಗೆ ಎರವಾದ

ಘಟ್ಟದ ಕೆಳಗಣ ಹಳ್ಳಿಗಳಲ್ಲಿ ಮಳೆ ಬೆಳೆ ಚೆನ್ನಾಗಿದೆ ಎಂದು ಆತ ಕೇಳಿಬಲ್ಲ ಅಲ್ಲಿಯ ಜನ ತಮ್ಮ ಕಷ್ಟದಲ್ಲಿ ಭಾಗಿಗಳಾಗಲಾರರೆ? ಎಂಬ ಆಶೆ ಆತನಿಗೆ ಆ ಆಶೆಯ ಅಂಕುರ ಮೊಳೆಯಿತು ಬಂದ ಜನಕ್ಕೆ 'ತಾಳಿರಿ' ಎಂದು ಹೇಳಿದ ಹಿರಿಯ ಮಗನನ್ನು ಕರೆದು ಘಟ್ಟದ ಕೆಳಗಣ ಹಳ್ಳಿಯ ಜನರಲ್ಲಿ ತಮ್ಮ ಕಷ್ಟ ತಿಳಿಸಿ ಆಹಾರ ಎರವಲು ತರುವಂತೆ ಹೇಳಿ ಕಳುಹಿಸಿದ ತಂದೆಯ ಆಜ್ಞೆಯನ್ನು ಶಿರಸಾವಹಿಸಿ ಹೊರಟ ಹಿರಿಯಾತ.

ಕೆಳಗಣ ಊರನ್ನು ಸೇರಿದ ಆತ ಅಲ್ಲಿಯ ಜನರ ಸ್ಥಿತಿಕಂಡು ಅಸೂಯೆ ತಾಳಿದ ತಾವು ಹೊಟ್ಟೆಗೆ ಹಿಟ್ಟಿಲ್ಲವೆ ಚೂರು ರೊಟ್ಟಿಗಾಗಿ ಕಷ್ಟಪಡುತ್ತಿರುವಾಗ ಇಲ್ಲಿಯ ಜನ ತಿಂದು ತೇಗುವುದನ್ನು ಕಂಡು

(೧೧ನೇ ಪುಟ ನೋಡಿರಿ)

The Moolky Bank, Ltd.
MULKI
ಡಿಪೊಜಿಟು ಮೇಲಿನ ಆಕರ್ಷಕ
ಬಡ್ಡಿ ದರಗಳು—
4 ತಿಂಗಳ ವರೆಗೆ 4%
5 ರಿಂದ 12 ,, 4¼%
13 ,, 24 , 4½%
ರೂ 10 000/- ಮತ್ತು ಮೇಲಿನ
ರಕಮಿಗೆ ¼% ಹೆಚ್ಚು
ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%
ಕರೆಂಟ್ ಲೇವಾದೇವಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು
ಎಂ ಆರ್ ಯಚ್ ಪೂಂಜ,
ಮೆನೇಜರ್
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ 1940

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)
ನಿಮಗೆ ಒಂದು ಕ್ಯಾಬಿನೆಟ್ ಅಗತ್ಯ ಕಳ್ಳರ, ಮಳೆಹುಪ್ಪಟೆಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು 3 ಸೈಜುಗಳಿವೆ, ಬಜೆಟ್, ಪಾಪ್ಯುಲರ್, ಯುಟಿಲಿಟಿ ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು ಮತ್ತು ಭದ್ರವಾದ ಬೀಗವುಳ್ಳ ಒಳಕೋಣೆಗಳಿವೆ
ಅಲ್ಲದೆ
ಸೋಫಾ, ಡ್ರೆಸಿಂಗ್ ಸೆಟ್, ಆಫೀಸ್ ಫರ್ನಿಚರ್,
ಡೆಸ್ಕ್‌ಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು,
ವಿ ಕೆ ರಾಜ್ ಇಂಡಸ್ಟ್ರೀಸ್, ಅಲಿಘರ್ ಇವರ
ಉತ್ತಮ ಬೀಗಗಳು
ಇವೆಲ್ಲ ಸ್ಟಾಕಿವೆ
ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು
7 ಲಿವರ್‌ಗಳ ಬೀಗ ಆದರದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ
ಶೋ ರೂಮನ್ನು ಸಂದರ್ಶಿಸಿ
ಶಾಸ್ತ್ರೀ ಆಂಡ್ ಕಂಪೆನಿ
ಹಂಪನಕಟ್ಟೆ -- ಮಂಗಳೂರು

ಉಡುಪಿ ಡಿ ಮು ಕೋರ್ಟಿನಲ್ಲಿ
R I A 94/1959
O S 87/56
ಶಂಕ್ರನಾರಾಯಣ ಮಾರಂಬಳ್ಳಿ—ವಾದಿ
ಮತ್ತು
ಕಾಮಿಲ್ ವರ್ಶೇರಾ ಕೂಡಾ—ಪ್ರತಿವಾದಿಗಳು

ಮಾರಂಬಳ್ಳಿ ಗ್ರಾಮದಲ್ಲಿರುವ ರೋಕೇಸ್ ವರ್ಶೇರನ ಹೆಂಡತಿ 1ನೇ ಪ್ರತಿವಾದಿಳು ಕಾರ್ಮಿನ್ ಫುರ್ಟಾದ ಬಾಯಿ ಮತ್ತು ಕಾಮಿಲ್ ವರ್ಶೇರನ ಮಗ 5ನೇ ಪ್ರತಿವಾದಿ ಅಬ್ಬು ಯಾನೆ ಜೂಜೆ ವರ್ಶೇರಾ ಇವರಿಗೆ

ವಾದಿಯು ಪ್ರಿ ಡಿಕ್ರಿಯ ಸ್ಥಿರಾಸ್ತಿ ಮಾರಾಟದ ಬಗ್ಗೆ ಫೈನಲ್ ಡಿಕ್ರಿ ಅಪೇಕ್ಷಿಸಿ ದಾಖಲು ಮಾಡಿದ ಮೇಲಿನ ಅರ್ಜಿಯ ನಿಮ್ಮ ನೋಟೀಸ್ ಬಗ್ಗೆ ತಾ 11 4 59ಕ್ಕೆ ಇಟ್ಟಿದೆ ಆ ದಿವಸ ಹಗಲು ಗಂಟೆ 10ಕ್ಕೆ ನೀವು ಈ ಕೋರ್ಟ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪ ಜಾಹೀರು ಮಾಡತಕ್ಕದ್ದು

B S Hegde,
Vakil for Plff
Udipi, 1-4 59

ಪುಸ್ತಕಪ್ರಿಯತೆ

ಜನತೆಯಲ್ಲಿ ಪುಸ್ತಕಪ್ರಿಯತೆ ಹೇಗೆ ವರ್ಧಿಸುವುದು?

ಅಮೇರಿಕೆಯ ಪುಸ್ತಕ ಕ್ಲಬ್‌ಗಳ ಸಾಹಸದ ಸ್ವಾಗತಾರ್ಹ ಫಲಶ್ರುತಿ.

ಅಮೇರಿಕದಲ್ಲಿ ಪುಸ್ತಕಗಳನ್ನು ಜನಪ್ರಿಯಗೊಳಿಸಿದ ಅತಿಪ್ರಮುಖ ಸಾಧನ ಯಾವುದು ಎಂದು ಕೇಳಿದರೆ ಪುಸ್ತಕದ ಕ್ಲಬ್ಬುಗಳಿಗೆ ನಾವು ಪ್ರಾಶಸ್ತ್ಯವನ್ನು ನೀಡಲೇಬೇಕಾಗುತ್ತದೆ.

ನೆಕ್‌ಟೈನಿಂದ ಹಿಡಿದು ಆಹಾರ ಪದಾರ್ಥಗಳ, ಪುಸ್ತಕಗಳ ಹಾಗೂ ಆಯ್ಕೆ ಮಾಡಿದ ನಾನಾ ವಸ್ತುಗಳ ವರೆಗೆ ಎಲ್ಲವನ್ನೂ ತಿಂಗಳು ತಿಂಗಳಿಗೆ ವ್ಯವಸ್ಥಿತ ರೀತಿಯಲ್ಲಿ ಪಡೆಯುವ ವಿಚಾರದಲ್ಲಿ ಯಾರೊಬ್ಬರ ಭಾವನೆ ಏನೇ ಇರಲಿ, ಈ ಬಗೆಯ ವ್ಯವಸ್ಥೆ ಈ ಶತಮಾನದ ಮಾರಾಟ ಪ್ರಪಂಚದ ಬಹು ಯಶಸ್ವೀ ಕ್ರಮವಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಈ ವ್ಯವಸ್ಥೆಯ ಮಹತ್ವವನ್ನು ಸಂಖ್ಯಾ ಶಾಸ್ತ್ರಜ್ಞನ ಲೆಕ್ಕದಿಂದ ಮತ್ತು ಕೇವಲ ಭಾಷಾಮಟ್ಟಗಳಿಂದ ಅಳೆಯುವುದೂ ಸಾಧ್ಯವಿಲ್ಲ. ಪುಸ್ತಕ ಪ್ರಪಂಚದಲ್ಲಿ ಅಂಚೆ ಮೂಲಕ ಕೊಳ್ಳುವುದರ ಪೂರ್ಣ ಪರಿಣಾಮವನ್ನು, ಲಕ್ಷಾಂತರ ಜನರ ಮೇಲೆ ಅದು ಬೀರುವ ಪ್ರಭಾವದ ದೃಷ್ಟಿಯಿಂದ ಅಳತೆ ಮಾಡಬೇಕು.

ಅಮೇರಿಕದ ಪ್ರಕಾಶಕ ಹ್ಯಾರಿ ಶರ್ಮನ್ ಆರಂಭಿಸಿದ ಆಧುನಿಕ ಪುಸ್ತಕದ ಕ್ಲಬ್ ವ್ಯವಸ್ಥೆ ಅಂಚೆಯ ಮೂಲಕ ಒಳ್ಳೆಯ ಪುಸ್ತಕಗಳನ್ನು ಪಡೆಯುವ ಅವಕಾಶವನ್ನು ಅಮೇರಿಕದ ಜನ ಬಳಸಿಕೊಳ್ಳುವರೆಂಬ ನಂಬುಗೆಯ ಫಲ. "ಬುಕ್-ಆಫ್-ದಿ ಮಂತ-ಕ್ಲಬ್" ಎಂಬ ಹೆಸರಿನಲ್ಲಿ ೧೯೨೬ರಲ್ಲಿ ತನ್ನ ಹೊಸ ಆಲೋಚನೆಯನ್ನು ಶರ್ಮನ್ ಕಾರ್ಯರೂಪಕ್ಕೆ ಇಳಿಸಿದ.

ಪುಸ್ತಕದ ಅಂಗಡಿಯ ಸ್ಥಾನದಲ್ಲಿ ಅಂಚೆಯವನನ್ನು ಸ್ಥಾಪಿಸುವ ಶರ್ಮನ್ ನಂಬುಗೆಗೆ ಕಾಲಾನುಕ್ರಮದಲ್ಲಿ ಅಗಾಧವಾದ ಸಮರ್ಥನೆ ದೊರೆತಿದೆ. "ಬುಕ್ ಆಫ್ ದಿ ಮಂತ್ ಕ್ಲಬ್" ಮೂಲಕ ಮೊದಮೊದಲಲ್ಲಿ ಸಾವಿರಾರು ಜನ ಪುಸ್ತಕಗಳನ್ನು ಕೊಳ್ಳುತ್ತಿದ್ದರೆ, ಇಂದು ಲಕ್ಷಾಂತರ ಮಂದಿ ಕೊಳ್ಳುತ್ತಿದ್ದಾರೆ. ಇಷ್ಟೇ ಅಲ್ಲ ಹೊಸ ಹೊಸ ಕ್ಲಬ್‌ಗಳು ಹುಟ್ಟಿಕೊಂಡಿವೆ; ಅಮೇರಿಕದಲ್ಲಿ ಪ್ರಕೃತ ಸುಮಾರು ೯೦ ಕ್ಲಬ್ಬುಗಳಿವೆ.

ಈ ಪೈಕಿ ಸಾಮಾನ್ಯ ಆಸಕ್ತಿಯ ಪುಸ್ತಕಗಳನ್ನು ಹಂಚುವ ಸಂಸ್ಥೆಗಳು ಕೆಲವೇ ಕೆಲವು. ಉಳಿದವೆಲ್ಲ ಕಲೆ, ಧರ್ಮ, ವಿಜ್ಞಾನ, ಚರಿತ್ರೆ, ಜೀವನ ಚರಿತ್ರೆ ಪತ್ತೆದಾರಿ ಕಥೆಗಳು, ಪ್ರವಾಸ ಅಥವಾ ಅರ್ಥಶಾಸ್ತ್ರ ಇಂತಹ ವಿಶಿಷ್ಟ ವಿಷಯಗಳಿಗೆ ಮೀಸಲಾದವು.

ಎಲ್ಲಾ ಕ್ಲಬ್ಬುಗಳೂ ಸದಸ್ಯರನ್ನು ಆಕರ್ಷಿಸಲು ಹೊಸ ಹೊಸ ಪ್ರೇರಕಗಳನ್ನು ವ್ಯವಸ್ಥೆ ಮಾಡುತ್ತವೆ. ಸಾಮಾನ್ಯವಾಗಿ ಅನೇಕ ಅಮೂಲ್ಯ ಕೃತಿಗಳನ್ನು ಬಹು ಅಗ್ಗದ ಬೆಲೆಯಲ್ಲಿ ಒದಗಿಸಲಾಗುತ್ತದೆ. ಅಥವಾ ಯಾವುದಾದರೊಂದು ಪ್ರಮಾಣ ಪುಸ್ತಕವನ್ನು ಉಚಿತವಾಗಿ ಕೊಡಲಾಗುತ್ತದೆ. ಸಾಮಾನ್ಯವಾಗಿ ಸದಸ್ಯತ್ವವನ್ನು ಉಳಿಸಿಕೊಳ್ಳಲು ವರ್ಷಕ್ಕೆ ನಾಲ್ಕು ಪುಸ್ತಕಗಳನ್ನು ಕೊಂಡರೆ ಸಾಕು.

ದೊಡ್ಡವರಿಗೆಂದು ಏರ್ಪಡಿಸಿದ ಕ್ಲಬ್ಬುಗಳಲ್ಲದೆ ಮಕ್ಕಳ ಸಾಹಿತ್ಯದ ಹಂಚಿಕೆಗೆಂದೇ ಏರ್ಪಟ್ಟ ಕ್ಲಬ್ಬುಗಳೂ ಇವೆ. ಈ ಮೂಲಕ ಅಮೇರಿಕದ ೫೦ ಲಕ್ಷ ಮಂದಿ ಮಕ್ಕಳ ಓದಿನ ಅಭಿರುಚಿಯನ್ನು ರೂಪಿಸಲು ಇವು ಸಹಾಯ ನೀಡುತ್ತಿವೆ.

ಈ ಎಲ್ಲಾ ಕ್ಲಬ್ಬುಗಳಲ್ಲೂ ಸಾಮಾನ್ಯವಾಗಿ ಆಯ್ಕೆಗಾರರ ಮಂಡಳಿಯೊಂದು ಪುಸ್ತಕಗಳನ್ನು ಆಯ್ಕೆ ಮಾಡುತ್ತದೆ. ಅಂದರೆ ಚಂದಾದಾರ ಸ್ವತಃ ಪುಸ್ತಕಗಳನ್ನು ಆಯ್ಕೆ ಮಾಡಬೇಕಾಗಿಲ್ಲ.

ಮಕ್ಕಳಿಗಾಗಿ ಆಯ್ಕೆ ಮಾಡುವ ಪುಸ್ತಕಗಳು ಉತ್ತಮ ವಾಚಕಗಳಷ್ಟೇ ಅಲ್ಲ ಮಕ್ಕಳಿಗೆ ಉತ್ತಮವಾದವೂ ಆಗಿರಬೇಕೆಂಬ ದೃಷ್ಟಿಯಿಂದ ಮಕ್ಕಳ ಕ್ಲಬ್ಬುಗಳು ಪುಸ್ತಕಗಳನ್ನು ಆಯ್ಕೆ ಮಾಡುವುದರಿಂದ ತಂದೆ ತಾಯಿಗಳು ಮಾಡಬಹುದಾದ ಟೀಕೆಗಳಿಗೆ ಅವಕಾಶವಿರದಂತೆ ನೋಡಿಕೊಳ್ಳುತ್ತವೆ. ಈ ದೃಷ್ಟಿಯಿಂದ ವೃತ್ತಿ ತಜ್ಞರು—ಇವರಲ್ಲಿ ಅನೇಕರು ಶೈಕ್ಷಣಿಕರು—ಪ್ರತಿ ವರ್ಷವೂ ಪ್ರಕಟವಾಗುವ ೧,೫೦೦ ಮಕ್ಕಳ ಪುಸ್ತಕಗಳನ್ನು ಪರಿಶೀಲಿಸುತ್ತಾರೆ. ವಾಸ್ತವವಾಗಿ ಪ್ರತಿ ನಾಲ್ಕು ಪುಸ್ತಕಗಳ ಪೈಕಿ ಮೂರನ್ನು ಶಾಲೆಗಳೊಂದಿಗೆ ವ್ಯವಸ್ಥೆ ಮಾಡಿಕೊಂಡು ಹಂಚಲಾಗುತ್ತದೆ.

ಈ ಮಕ್ಕಳ ಪುಸ್ತಕ ಕ್ಲಬ್ಬುಗಳು ಮಕ್ಕಳಲ್ಲಿ ಓದಿಗಾಗಿ ಓದಿನ ಅಭಿರುಚಿಯನ್ನು ಬೆಳೆಸಿವೆ. ಪುಸ್ತಕಗಳ ಸಂಗ್ರಹಣದಲ್ಲಿ ಹೆಮ್ಮೆಯನ್ನು ಬೆಳೆಸಿವೆ ಎಂಬುದು ಈ ವಿಸ್ತಾರ ಚಟುವಟಿಕೆಯ ನಿರ್ಣಕವಾದ ಸಂಗತಿಗಳು.

ಆದರೆ ಪುಸ್ತಕ ಕ್ಲಬ್ಬುಗಳ ವ್ಯವಸ್ಥೆಯಲ್ಲಿ ಕೆಲವು ಕೊರತೆಗಳು ಇಲ್ಲವೆಂದಲ್ಲ. ಈ ಕೊರತೆಗಳು ವಯಸ್ಕರ ಮತ್ತು ಮಕ್ಕಳ ಕ್ಲಬ್‌ಗಳೆರಡಕ್ಕೂ ಅನ್ವಯವಾಗುತ್ತದೆ. ವೈಯುಕ್ತಿಕ ಅಭಿರುಚಿಗಳಿಗೆ ಬದಲು ಜನಪ್ರಿಯ ಪ್ರವೃತ್ತಿಗೆ ಕ್ಲಬ್ಬುಗಳಲ್ಲಿ ಉತ್ತೇಜನ ದೊರಕುತ್ತದೆಂಬುದು ಇಂತಹ ನ್ಯೂನತೆಗಳಲ್ಲಿ ಒಂದು.

ಒಂದು ಸಂಸ್ಥೆ ಮಾತ್ರ ರಚನಾತ್ಮಕ ಕ್ರಮವೊಂದನ್ನು ಕೈಗೊಂಡಿದೆ. "ದಿ ಬುಕ್ ಪ್ಲಾನ್" ಎಂಬ ಸಣ್ಣ ಕ್ಲಬ್ಬೊಂದು ಪ್ರತಿಯೊಬ್ಬ ಮಗು ಸದಸ್ಯನ ಅಭಿರುಚಿಗಳ ಪೂರ್ಣ ಪಟ್ಟಿಯೊಂದನ್ನು ಇಟ್ಟುಕೊಂಡಿರುತ್ತದೆ ಮಗುವಿನ ವಯಸ್ಸು, ಓದಿನ ಅಭಿರುಚಿ, ಕೌಟುಂಬಿಕ ಹಿನ್ನೆಲೆ ಇವುಗಳಿಗೆ ಅನುಗುಣವಾಗಿ ಈ ಕ್ಲಬ್ಬು ಪುಸ್ತಕಗಳನ್ನು ಆಯ್ಕೆಮಾಡಿ ಹಂಚುತ್ತದೆ.

ವಯಸ್ಕ ಓದುಗನಿಗೆ ಈ ರೀತಿಯ ವೈಯುಕ್ತಿಕ ಸೌಲಭ್ಯವಿಲ್ಲ. ತನ್ನ ವೈಯುಕ್ತಿಕ ಅಭಿರುಚಿಗಳನ್ನು ಬಹುಮಟ್ಟಿಗೆ ಪೂರೈಸಬಲ್ಲ ಕ್ಲಬ್ಬಿಗೆ ಆತ ಸೇರಬಹುದಷ್ಟೆ. ಇದರ ಜೊತೆಗೆ ಕ್ಲಬ್ಬಿನ ಆಯ್ಕೆಯ ಪುಸ್ತಕವನ್ನೇ ಕೊಳ್ಳಬೇಕೆಂಬ ಒತ್ತಾಯವಿಲ್ಲ. ಸಾಮಾನ್ಯವಾಗಿ ಅನೇಕ ಬದಲು ಪುಸ್ತಕಗಳನ್ನು ಆಯ್ಕೆಮಾಡಲಾಗಿರುತ್ತದೆ. ಅಂತೆ ಸದಸ್ಯ ತನ್ನ ಅಭಿರುಚಿಗೆ ಬಹುಮಟ್ಟಿಗೆ ಸರಿಹೊಂದುವ ಪುಸ್ತಕವನ್ನು ಆತ ಆಯ್ಕೆಮಾಡಿಕೊಳ್ಳಬಹುದು. ಅಲ್ಲದೆ ತನಗೆ ಬೇಕಾದ ಪುಸ್ತಕವನ್ನು ಅಂಗಡಿಯಿಂದ ಕೊಳ್ಳಲು ಅಭ್ಯಂತರವೇನೂ ಇಲ್ಲ.

ಸಾಮಾನ್ಯವಾಗಿ ಕ್ಲಬ್ಬಿನ ಆಯ್ಕೆಯನ್ನೇ ಸದಸ್ಯ ಅಂಗೀಕರಿಸುತ್ತಾನೆ. ಪ್ರಮುಖವಾದ ಒಂದು ಕ್ಲಬ್ ಆರಿಸಿದ ಪುಸ್ತಕ ಪ್ರಾಮುಖ್ಯವಾದುದಿರಲೇ ಬೇಕೆಂಬ ಸಂಗತಿ ಬೇರೆ ಇದೆ. ಓದಿನ ಅಭಿರುಚಿಯ ಸದಸ್ಯರ ಅಭಿಪ್ರಾಯವು ಈ ಸಂಗತಿಯನ್ನು ಅಂಗೀಕರಿಸುತ್ತದೆ. ಬೇರೆ ಅನೇಕ ಮಂದಿ ಓದುವ ಪುಸ್ತಕವನ್ನು ತಾನು ಓದಬೇಕೆಂಬ ಅಪೇಕ್ಷೆಯಿಂದ ಆಯ್ಕೆಗಾರರ ಶಿಫಾರಸನ್ನು ಸದಸ್ಯ ಅಂಗೀಕರಿಸುತ್ತಾನೆ.

ಅಂದರೆ ಅನುದ್ದೇಶ ಪೂರ್ವಕವಾಗಿ ಯಾವರೂ ಈ ಮೂಲಕ ಸದಸ್ಯ ಏಕರೂಪತೆಗೆ ಬಲಿಯಾಗುತ್ತಾನೆಯೇ? ಇದು ಪುಸ್ತಕ ಕ್ಲಬ್ಬಿನ ದೋಷದ ಭಾಗವೇ?

ಏಕರೂಪತೆಯೆಂದಾಗಲೆಲ್ಲ ಆ ಮಾತಿಗೆ ನಾವು ಸಾಮಾನ್ಯತೆಯ ಅರ್ಥವನ್ನು ಕಟ್ಟಬೇಕಾಗಿಲ್ಲ. ಡಾ। ಝಿವಾಗೋ, ದಿ ಅಫ್ಲೂಯೆಂಟ್ ಸೊಸೈಟಿ, ದಿ ರೂಟ್ಸ್ ಆಫ್ ದಿ ಹೆವನ್, ಓನ್ಲಿ ಇನ್ ಅಮೇರಿಕ, ಇಂಥ ವಿಚಾರ ಪ್ರಚೋದಕ ಕೃತಿಗಳ ವಿಷಯದಲ್ಲಾಗಲಿ, ಎಡೆತ್ ಇನ್ ದಿ ಫ್ಯಾಮಿಲಿ, ದಿ ಒಡೆಸ್ಸಿ, ಎ ಮಾಡರ್ನ್ ಸೀಕ್ವೆಲ್, ದಿ ಕಿಂಗ್ ಮಸ್ಟ್ ಡೈ—ಇಂತಹ ಅದ್ಭುತ ಕೃತಿಗಳನ್ನಾಗಲಿ ಯಾವ ಉಗ್ರ ಟೀಕಾಕಾರನೂ ಆಕ್ಷೇಪಿಸಲಾರ. ದೊಡ್ಡ ದೊಡ್ಡ ಕ್ಲಬ್ಬುಗಳು ಈ ಪುಸ್ತಕಗಳನ್ನು ಒದಗಿಸಿವೆ.

ಇದೇ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಬೃಹತ್ ಪ್ರಮಾಣದಲ್ಲಿ ಪುಸ್ತಕಗಳನ್ನು ಹಂಚುವ ಸಂಸ್ಥೆಗಳು, ಸುಲಭವಾಗಿ ಅರಗುವ ಹೊಟ್ಟೆಬಾಡಿನ ಪುಸ್ತಕಗಳನ್ನು ಹಂಚುವುದಾದರೆ, ಇಂಥ ಪುಸ್ತಕಗಳನ್ನು ಓದಿ ಓದಿ ಬೇಸತ್ತ ಜನರಲ್ಲಿ ಬೌದ್ಧಿಕ ಉತ್ತೇಜನವುಳ್ಳ ಪುಸ್ತಕಗಳ ಬಯಕೆ ಸಕಾಲದಲ್ಲಿ ಉದಿಸೀತು.

ಯಾವುದೇ—ರಾಷ್ಟ್ರದಲ್ಲಿ ಸಾಂಸ್ಕೃತಿಕ ಏಳಿಗೆ ಘಟ್ಟ ಘಟ್ಟವಾಗಿ ಬೆಳೆಯುತ್ತದೆ. ಪ್ರತಿಯೊಂದು ಘಟ್ಟದಲ್ಲೂ ಈ ಪ್ರಭಾವದ ಕ್ಷೇತ್ರ ವಿಸ್ತರಿಸುತ್ತಾ ಹೋಗುತ್ತದೆ. ಈ ದೃಷ್ಟಿಯಿಂದ ಹೇಳುವುದಾದರೆ ಪುಸ್ತಕದ ಕ್ಲಬ್ಬುಗಳು ಬಹು ಉಪಯುಕ್ತವಾದ—ಬೇರೆ ರೀತಿಯಲ್ಲಿ ಸಾಧ್ಯವೂ ಇಲ್ಲದ—ಕ್ರಿಯಾತ್ಮಕ ಕರ್ತವ್ಯವನ್ನು ಸಾರ್ವಜನಿಕ ಓದಿನ ದಿಗಂತದ ವಿಸ್ತರಣ ಕ್ಷೇತ್ರದಲ್ಲಿ ನಿರ್ವಹಿಸುತ್ತಿವೆ ಎನ್ನಬೇಕು.

—ನಾರ್ಮನ್ ಸ್ಮಿತ್.

ಕುಂದಾಪುರ ಎಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

O. P 880/58

ನರಸಿಂಹ ಶೆಟ್ಟಾರ— ಅರ್ಜಿದಾರ.

ಪುಟ್ಟ ಕೂಡ— ಎದ್ರಿರು.

೩ನೆ ಎದ್ರಿ ಗಣಪ. ಮರ್ಲಿ ಹೆಂಗ್ಸಿನ ಮಗ, ಕುಂಭಾರ ಗ್ರಾಮ— ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಅರ್ಜಿದಾರನು ಎದ್ರಿರ ಮೇಲೆ ದಾಖಲ್ಲು ಮಾಡಿದ ಮೇಲ್ಕಾಣ್ಸಿದ ಅರ್ಜಿಯು ಮೇಲ್ಕಾಣ್ಸಿದ ಕೋರ್ಟಿನಲ್ಲಿ 1-6-1959ಕ್ಕೆ ತನಿಖೆಗೆ ಇಡಲ್ಪಟ್ಟಿರುತ್ತದೆ. ಸದ್ರಿ ಅರ್ಜಿ ಬಾಬಿನಲ್ಲಿ ೩ನೆ ಎದ್ರಿಯ ಕಡೆಯಿಂದ ತಕ್ಸೀರು ದಾಖಲ್ಲು ಮಾಡಿ ವ್ಯವಹರಿಸುವಂತಾದ್ದಿದ್ರೆ ೩ನೆ ಎದ್ರಿಯು ಸದ್ರಿ ದಿವಸ ಪೂರ್ವಾಹ್ನ 11 ಗಂಟೆಯೊಳಗೆ ಮೇಲ್ಕಾಣ್ಸಿದ ಕೋರ್ಟಿನಲ್ಲಿ ಸ್ವತಹ ವ ವಕೀಲರ ಮುಖಾಂತ್ರ ಹಾಜ್ರಾಗಿ ವ್ಯವಹರಿಸತಕ್ಕದ್ದು. ತಪ್ಪಿದಲ್ಲಿ ೩ನೆ ಎದ್ರಿಯನ್ನು ಎಕ್ಸ್‌ಪಾರ್ಟೆ ಮಾಡಿ ಮೇಲ್ಕಾಣ್ಸಿದ ಅರ್ಜಿಯು ತೀರ್ಮಾನ ಮಾಡಲ್ಪಡುವುದು ಎಂತ ಈ ಮೂಲಕ ತಿಳಿಸಲಾಗುತ್ತದೆ.

By order of the Court

K. Soorappa Shetty,
Advocate.

Coondapoor, 31—8—1959.

ಶ್ರೀ ಎನ್. ಎಸ್. ಕಿಲ್ಲೆಯವರ ಪ್ರಾಚೀನ ತುಳುನಾಡಿನ ೨ನೇ ಭಾಗ

“ಹೆಗಡೇರ ತುಳುನಾಡು”

ಪ್ರಕಾಶಕರು: ಲಕ್ಷ್ಮೀ—ಬಿ. ವಿ. ರೈಗಳು.

ಕ್ರಿಸ್ತ ಪೂರ್ವದಿಂದ ಕ್ರಿ. ಶ. 1800ರ ವರೆಗಿನ ತುಳುವರ ಇತಿಹಾಸವು ಅಡಗಿರುವ ಈ ಗ್ರಂಥವು ಶ್ರೀ ಡಾ। ಎ. ಬಿ. ಸಾಲೆತ್ತೂರು (M. A. P. H. D. ಲಂಡನ್) ಇವರ ಮುನ್ನುಡಿಯೊಡನೆ ಬೇಗನೇ ಪ್ರಕಟವಾಗುವುದು. ಮೊದಲನೇ ಅಧ್ಯಾಯದಲ್ಲಿ ತುಳುವ ಸ್ಥಾನೀಕರು—ಗತ ವಿಚಾರಗಳು—ತುಳುವರು ಜನನದಿಂದ ವಿವಾಹದ ವರೆಗೆ ಆಚರಿಸುವ ದಶ ಸಂಸ್ಕಾರಗಳ ವಿಧಿ ವಿಧಾನಗಳು ೨ನೇ ಅಧ್ಯಾಯದಲ್ಲಿ ತುಳುವರ ಶವ ಸಂಸ್ಕಾರ—ಸೂತಕ—ಉತ್ತರ ಕ್ರಿಯೆ ವಗೈರೆ ಆಚರಿಸುವ ಕ್ರಮಗಳು ಮತ್ತು ಸೀತಾನದಿಯ ಉತ್ತರಕ್ಕಿರುವ ನಾಡವರ ಶುಭಾಶುಭ ಕಟ್ಟುಕಟ್ಟಳೆಗಳೂ ೩ನೇ ಅಧ್ಯಾಯದಲ್ಲಿ ಆದ್ಯ ಶ್ರೀ ಶಂಕರ ಭಗವತ್ಪಾದರ ಆಗಮನ—ಅದ್ವೈತ ಮತ ಪ್ರಚಾರ, ತುಳುವರ ಹುಟ್ಟು—ಆಲಡೆ, ನಾಗ, ಬೆರ್ಮೆ, ಸುಬ್ರಾಯ ದೇವರುಗಳು ಮತ್ತು ಬಾರಗರು, ಮೊಗವೀರರು, ಬಿಲ್ಲವರು ಇವರೆಲ್ಲಗೂ ತುಳುವ ಸಮಾಜದವರು. ಮತ್ತು ಬೌದ್ಧರು, ಜೋಗಿಗಳು, ಜೈನರು, ಬ್ರಾಹ್ಮರು ಬಂದು ನೆಲಸಿದ ಕಾಲಗಳು—ದ್ವೈತ ಮತಸ್ಥಾಪಕ ಮಧ್ವಾಚಾರ್ಯರು—ಅವರ ಅಷ್ಟ ಮಠಗಳು—ತುಳು ಶಿವಳ್ಳಿಯವರಿಗೂ, ತುಳು ಜೈನರಿಗೂ-ತುಳುವರಿಗೂ ಇರುವ ಸಂಬಂಧಗಳು ಮತ್ತು ಸ್ಕಾಂದ ಪುರಾಣದ ಉತ್ತರ ಭಾಗ, ಸಹ್ಯಾದ್ರಿ ಖಂಡ, ಗ್ರಾಮ ಪದ್ಧತಿ—ಭೂತಾಳ ಪಾಂಡ್ಯರಾಯನ ಅಳಿಯ ಕಟ್ಟಿನ ಕುರಿತು ಸಂಶೋಧಕರ ಅಭಿಪ್ರಾಯಗಳೂ ೪ನೇ ಅಧ್ಯಾಯದಲ್ಲಿ ಸಾರಸ್ವತರು, ಗೌಡಸಾರಸ್ವತರು, ಕೊಂಕಣ ದೇಶಸ್ಥ ಬ್ರಾಹ್ಮಣರು ಬಂದು ನೆಲಸಿದ ಕಾಲಗಳು ಮತ್ತು ಶ್ರೀ ಕಾಶೀ ಮಠ, ಶ್ರೀ ಗೋಕರ್ಣ ಮಠ, ಶ್ರೀ ಚಿತ್ರಾಪುರ ಮಠ ಸ್ಥಾಪನೆಯ ಕಾಲ ಮತ್ತು ಐತಿಹಾಸಿಕ ಚರಿತ್ರೆಗಳೂ ೫ನೇ ಪರಿಶಿಷ್ಟ ಅಧ್ಯಾಯದಲ್ಲಿ ಬಂಟರ ಯಾನೆ ನಾಡವರ, ಮೊಗವೀರರ, ಬಿಲ್ಲವರ ಸಂಘ—ಸಂಸ್ಥೆಗಳ ಪರಿಚಯವೂ—ತುಳುವರು ಆಚರಿಸುವ ಎಲ್ಲಾ ಹಬ್ಬಗಳ ವಿಧಿ—ವಿಧಾನವೂ, ತೆಂಬಿಲ—ಕಂಬುಳ—ನಾಗಮಂಡಲ—ನೇಮ ವಗೈರೆ ಸೇವೆಗಳೂ, ಆಟ—ತಾಳಮದ್ದಳೆ—ಕೆಂಡಾಟ ವಗೈರೆ ವಿನೋದಗಳು, ತುಳುನಾಡಿನ ಪ್ರಸಿದ್ಧ ಪುರುಷರ ಪರಿಚಯವು ಕೂಡಾ 35 ವರ್ಷಗಳ ಸಂಗ್ರಹದ 300 ಪುಟಗಳ ಗ್ರಂಥವು. ಕಾಗದದ ಬೆಲೆ ವಿಪರೀತವಿರುವುದರಿಂದ ಸ್ವಲ್ಪ ಪ್ರತಿಗಳೇ ಪ್ರಕಟವಾಗುವುವು. ಮುಂದಾಗಿ ಸೂಚಿಸುವವರಿಗೆ ರಿಯಾಯಿತಿ ಬೆಲೆ. ಮತ್ತು ಪುಸ್ತಕದ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಅಮುಣಿಂಜೆ ಗುತ್ತು ಎನ್. ಎ. ಶೀನಪ್ಪ ಹೆಗಡೆ,
ತುಳುನಾಡು, P. O. ಪೊಳಲಿ. ದ. ಕನ್ನಡ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕ್ಷೇತ್ರ ಮಹಾತ್ಮ್ಯ

ಮೋಕ್ಷದಾಯಕ ಪುಣ್ಯ ಕ್ಷೇತ್ರಗಳು

ಏಕತೆಯ ಮತ್ತು ಸಮಾನತೆಯ ತತ್ವಗಳನ್ನಳವಡಿಸಿದ ಏಕಸೂತ್ರದಲ್ಲಿ ಇವು ಭಾರತೀಯರನ್ನು ಬಂಧಿಸಿವೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಹರಿದ್ವಾರ

ಸಪ್ತ ಪುಣ್ಯಕ್ಷೇತ್ರಗಳಲ್ಲಿ ಮೂರನೆಯದು ಮಾಯಾಪುರಿಯಾಗಿದೆ. ಮಾಯಾಪುರಿ ಎಂದರೆ ಎಲ್ಲಿದೆ ಎಂದು ಈಗ ನಿರ್ದಿಷ್ಟವಾಗಿ ಗೊತ್ತಾಗುವುದಿಲ್ಲ ಪ್ರಾಯಶಃ ಅದು ಹರಿದ್ವಾರದ ಸಮೀಪದಲ್ಲಿಯೇ ಇದ್ದಿರಬಹುದು ಎಂತಲೇ ಈಗ ಹರಿದ್ವಾರವನ್ನೇ ಮುಖ್ಯ ಕ್ಷೇತ್ರವನ್ನಾಗಿ ಗಣಿಸುತ್ತಾರೆ. ಪರ್ವತ ಶ್ರೇಣಿಗಳನ್ನು ಹಾದು ಬಂದ ಗಂಗೆ ಹರಿದ್ವಾರದಿಂದ ಮೈದಾನ ಪ್ರದೇಶದತ್ತ ಸರಿಯತೊಡಗುತ್ತಾಳೆ. ಆದುದರಿಂದಲೇ ಹರಿದ್ವಾರವನ್ನು ಗಂಗಾ ಮೂಲವೆಂಬ ಉಪನಾಮದಿಂದ ಕರೆಯುತ್ತಾರೆ ಎಂದರೆ, ಗಂಗಾ ನದಿಯ ಮೂಲವು ಇನ್ನೂ ಎತ್ತರದಲ್ಲಿರುವುದಾದರೂ ಅದೆಲ್ಲಿ ಎಂದೂ ಅದು ಹರಿಯುವ ದಾರಿ ಯಾವುದೆಂದೂ ಊಹಿಸಿಕೊಳ್ಳಬಹುದಷ್ಟೆ ಹೊರತು, ಸ್ಪಷ್ಟವಾಗಿ ನಿರೂಪಿಸುವುದು ಅಸಾಧ್ಯವಾಗಿದೆ.

ಹರಿದ್ವಾರದಲ್ಲಿ ಸದಾಕಾಲ ಜನರು ಸಂಚರಿಸುತ್ತ ಇರುತ್ತಾರೆ. ಹೆಚ್ಚಾಗಿ ಯಾತ್ರಿಕರ ಸಂದಣಿ ಇಲ್ಲಿ ನೆರೆಯುತ್ತದೆ. ಅಲ್ಲದೇ ಹರಿದ್ವಾರಕ್ಕಿಂತಲೂ ಉತ್ತರದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸ ಬಯಸುವ ಎಲ್ಲೆಡೆಯ ಯಾತ್ರಾರ್ಥಿಗಳು ಇಲ್ಲಿ ಬಂದು ನೆರೆಯುತ್ತಾರೆ. ಇಲ್ಲಿನ ಗಂಗಾ ನದಿಯು ಅಭಯಂಕರವಾಗಿರುವುದರಿಂದ, ಯಾತ್ರಾರ್ಥಿಗಳೆಲ್ಲರೂ ಹೆಚ್ಚಾಗಿ ಈಜಾಡುವುದು, ದೋಣಿಯಲ್ಲಿ ಕುಳಿತು ವಿಹರಿಸುವುದು ಮೊದಲಾದುವುಗಳಲ್ಲಿಯೇ ಹೊತ್ತು ತೆಗೆಯುತ್ತಾರೆ ಗಂಗೆಯ ಪ್ರತ್ಯೇಕ ಹಬ್ಬದ ದಿನಗಳಲ್ಲಂತೂ ಇಲ್ಲಿ ನೂಕು ನುಗ್ಗಲು ಅಧಿಕವಾಗಿರುತ್ತದೆ ಪುಷ್ಯಮಾಸದಲ್ಲಿನ ಯಾತ್ರಾರ್ಥಿಗಳ ಸಂಖ್ಯೆ ಅತ್ಯಧಿಕವೆಂದು ಹೇಳುತ್ತಾರೆ.

ಹರಿದ್ವಾರದಲ್ಲಿ ಮೂವತ್ತು ಮೂರು ಕೋಟಿ ದೇವತೆಗಳೂ ವಾಸಿಸುವರೆಂದು ಧಾರ್ಮಿಕ ವಿಶ್ವಾಸವಿದೆ ಅಲ್ಲದೇ ಇಲ್ಲಿಯೂ ಅನೇಕಾನೇಕ ದರ್ಶನೀಯ ದೇವಾಲಯಗಳೂ ಸ್ಥಳಗಳೂ ಇರುತ್ತವೆ.

ಮಥುರಾ

ಪ್ರಾಚೀನ ಮೋಕ್ಷದಾಯಕ ಕ್ಷೇತ್ರಗಳಲ್ಲಿ ಮಥುರಾವು ಒಂದು. ಇದು ಯಮುನಾ ನದಿಯ ದಂಡೆಯಲ್ಲಿದೆ ಮಥುರೆಯ ಪ್ರಾಚೀನವಾದ ಹೆಸರು ಮಧುವನ ಎಂದಿತ್ತು ಶ್ರೀಕೃಷ್ಣನು ಇಲ್ಲಿ ಅವತರಿಸಿ ಇದನ್ನು ಪವಿತ್ರಗೊಳಿಸಿದನು. ಬೌದ್ಧ ಧರ್ಮಾವಲಂಬಿಗಳಿಗೂ ಇದು ತೀರ್ಥಸ್ಥಳವಾಗಿದೆ. ಶ್ರೀಕೃಷ್ಣ ಲೀಲೆಯ ಸಂಬಂಧದ ಅನೇಕಾನೇಕ ಕಥೆಗಳ ಸಂಬಂಧವುಳ್ಳ ದರ್ಶನೀಯ ಸ್ಥಳಗಳು ಇಲ್ಲಿವೆ. ಒಬ್ಬನು ಮಥುರೆಗೆ ಹೋದನೆಂದರೆ, ಅಲ್ಲಿ ಅವನು ಶ್ರೀಕೃಷ್ಣನು ಜನ್ಮವಿತ್ತ ಮನೆ, ಜೀವನ ಲೀಲೆಯ ಸ್ಥಳಗಳು ಹಾಗೂ ಕಂಸ ವಧೆಯೇ ಮೊದಲಾದುವನ್ನು ಗೆಯ್ದ ಪ್ರದೇಶಗಳನ್ನು ನೋಡಿದಾಗ, ಶ್ರೀಕೃಷ್ಣನ ಬಾಲಲೀಲೆಯೇ ನಮ್ಮ ಕಣ್ಣೆದುರು ಬಂದು ನಿಲ್ಲುತ್ತದೆ.

ಕೊಂಚ ದೂರದಲ್ಲಿಯೇ ವ್ರಜತೀರ್ಥ ಇಲ್ಲವೇ ಗೋಕುಲವು ಇದೆ. ಗೋವರ್ಧನ ನಂದಗ್ರಾಮ, ವೃಂದಾವನ ಮೊದಲಾದ ಅನೇಕ ಸ್ಥಳಗಳು ಶ್ರೀ ಕೃಷ್ಣನ ಯಶಸ್ವೀ ಜೀವನವನ್ನು ಪ್ರತಿಬಿಂಬಿಸುತ್ತವೆ. ಶ್ರಾವಣ ಮಾಸದಲ್ಲಿ ಶ್ರೀ ಕೃಷ್ಣ ಲೀಲೆ ಮತ್ತು ಮೋಲೋತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ

ಮಥುರಾ ನಗರವು ಭಾರತೀಯ ಪುರಾಣ ಪ್ರಸಿದ್ಧವಾದ ನಗರ. ಇಂದಿನ ಇತಿಹಾಸಕ್ಕೆ ಅತಿ ಸಮೀಪವಿರುವ ಪುರಾಣದ ಶ್ರೀ ಕೃಷ್ಣನು ಉಪದೇಶಿಸಿದ ಅಮರ ತತ್ವ ಮತ್ತು ಜೀವಿಸಿದ ವ್ಯಾವಹಾರಿಕ ಜೀವನದಿಂದ ಅದರ ಕೀರ್ತಿ ಬೆಳಗುತ್ತಿದೆ.

ಉಜ್ಜಯಿನಿ

ಉಜ್ಜೈನ್, ಅವಂತಿಕಾ, ಉಜ್ಜಯಿನಿ ಮೊದಲಾದ ಹೆಸರಿನಿಂದ ಇತಿಹಾಸ ಪ್ರಸಿದ್ಧವಾದ ನಗರವಿದು. ಶಿವನ ದ್ವಾದಶಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಹಾಕಾಲ ಲಿಂಗವು ಇಲ್ಲಿರುವುದು. ಎಂತಲೇ ಇದನ್ನು ಮಹಾಕಾಲ ನಗರಿ ಎಂದೂ ಕರೆಯುತ್ತಾರೆ. ಕ್ಷಿಪ್ರಾ ನದಿಯ ತಟದಲ್ಲಿ ಮಧ್ಯ ಪ್ರದೇಶದಲ್ಲಿರುವ ಈ ನಗರವು ತನ್ನ ತೊಡೆಯಲ್ಲಿ ಅನೇಕಾನೇಕ ಪ್ರಾಚೀನ ರಾಜರ ಕೀರ್ತಿ ವೈಭವಗಳ ಕಥೆಗಳನ್ನು ಹೊತ್ತುಕೊಂಡಿದೆ ಕಾಳಿದಾಸ ಬಾಣ ಭಟ್ಟರ ಕಾವ್ಯಗಳಲ್ಲಿ ಈ ಉಜ್ಜಯಿನಿಯು ಒಂದು ಸಂಸ್ಕೃತಿ ಕಲಾ ಕೇಂದ್ರವಾಗಿತ್ತೆಂದೂ ತಿಳಿದುಬರುತ್ತದೆ.

ಮಹಾರಾಜ ವಿಕ್ರಮಾದಿತ್ಯನು ಈ ಉಜ್ಜಯಿನಿಯನ್ನು ರಾಜಧಾನಿಯನ್ನಾಗಿ ಸಿಕೊಂಡು, ತನ್ನ ರಾಜ್ಯವನ್ನು ವಿಸ್ತರಿಸಿದನು. ಈ ವಿಕ್ರಮನ ಆಡಳಿತೆಯು ಇಂದಿಗೂ ಜನಜನಿತವಾಗಿದೆ ವಿಕ್ರಮಾದಿತ್ಯನ ಧರ್ಮ ಸಿಂಹಾಸನದ ಕಥೆಯನ್ನು ನಾವೆಂದಿಗೂ ಮರೆಯುವುದು ಸಾಧ್ಯವಿಲ್ಲ ಅವಂತಿಕಾವು ೫೨ ಶಕ್ತಿ ಪೀಠಗಳಲ್ಲೂ ಒಂದು ಎಂದು ಗಣಿಸಲ್ಪಡುತ್ತದೆ.

ಮಹಾಭಾರತ ಕಾಲದ ಶ್ರೀಕೃಷ್ಣನು ಸಾಂದೀಪನಿ ಋಷ್ಯಾಶ್ರಮಕ್ಕೆ ಆಗಮಿಸಿ ವಿದ್ಯಾಭ್ಯಾಸವನ್ನು ಪಡೆದಿದ್ದನಷ್ಟೆ? ಅದೇ ಸಾಂದೀಪನಿಯ ಗುರುಕುಲ ಇದ್ದುದು ಇದೇ ಅವಂತಿಕೆಯಲ್ಲಿ ಶ್ರೀಕೃಷ್ಣನ ಸಹಪಾಠಿ ವಿಪ್ರವರ ಕುಚೇಲ ಇಲ್ಲವೇ ಸುಧಾಮನನ್ನು ನಾವು ಮರೆತೇವೆ?

ಇಂತಹ ಪವಿತ್ರವಾದ ಕ್ಷೇತ್ರದಲ್ಲಿ ಮೃತ್ಯುವನ್ನಪ್ಪಿದರೆ, ಭಗವಾನ್ ಶಿವನ ಅನುಗ್ರಹವುಂಟಾಗಿ, ವ್ಯಕ್ತಿಯು ಭವಬಂಧನದಿಂದ ಬಿಡುಗಡೆ ಹೊಂದುತ್ತಾನೆಂಬ ಕಲ್ಪನೆ ಇದೆ

ಇಲ್ಲಿಗೆ ಆಗಮಿಸಬಹುದಾದ ಪ್ರೇಕ್ಷಕ ಯಾತ್ರಾರ್ಥಿಗಳು ಪುರಾಣಕಾಲದ ಮಹಾಕಾಲನ ದೇವಾಲಯವನ್ನು ಮಾತ್ರ ಕಾಣುವುದಲ್ಲದೆ ಅನೇಕಾನೇಕ ದರ್ಶನೀಯ ಸ್ಥಳಗಳನ್ನೂ ನೋಡಿ ಆನಂದವಿಭೋರರಾಗುತ್ತಾರೆ ಉಜ್ಜಯಿನಿಗೆ ಆಗಮಿಸಿರುವವರು ಹರಸಿದ್ಧಿ ದೇವಿಯ ದರ್ಶನ ಭಾಗ್ಯವನ್ನು ಪಡೆಯುವುದೂ ಅವಶ್ಯವಾಗಿದೆ ಮಹಾರಾಜ ವಿಕ್ರಮಾದಿತ್ಯನು ಈ ಹರಸಿದ್ಧಿ ದೇವಿಯ ಅನನ್ಯ ಉಪಾಸಕನಾಗಿದ್ದೇ ಕೀರ್ತಿ ಭಾಜನನಾದನು

ಕಾಂಚೀ

ಮದ್ರಾಸಿನಿಂದ ಧನಷ್ಕೋಟಿ ರೇಲ್ವೆ ದಾರಿಯಲ್ಲಿ ಚೆಂಗಲ್ಪರ್ ನಿಲ್ದಾಣದ ಸಮೀಪ ಕಾಂಜೀವರಮ್ ನಿಲ್ದಾಣವಿದೆ. ಈ ಕಾಂಜೀವರಮ್ ಎಂಬುದು ವಿಖ್ಯಾತ ಸಪ್ತಪುರಿಗಳಲ್ಲಿ ಒಂದಾದ ಕಾಂಚೀ. ಈ ಕಾಂಚೀಯಲ್ಲಿ ಒಂದು ವಿಷ್ಣುಕಾಂಚಿಯೂ ಇನ್ನೊಂದು ಶಿವಕಾಂಚಿಯೂ ಇದೆ. ಕಾಂಚಿಯು ಹರಿಹರರೆರಡರ ಸಮ್ಮಿಲಿತ ಪುರಿಯಾಗಿದೆ. ೫೨ ಶಕ್ತಿ ಪೀಠಗಳಲ್ಲಿ ಉಜ್ಜಯಿನಿಯಂತೆಯೇ ಕಾಂಚಿಯೂ ಒಂದು.

ಕಾಶಿ ಮತ್ತು ಕಾಂಚಿಗಳು ಶಿವನ ಎರಡು ನಯನಗಳೆಂದು ಉಲ್ಲೇಖವಿರುವುದರಿಂದ, ಉಳಿದುವುಗಳಿಗಿಂತ ಇವಕ್ಕೆ ಅಧಿಕ ಪ್ರಾಧಾನ್ಯವು ಇರುವುದು. ಭಾರತದ ಐಕ್ಯಕ್ಕಾಗಿ ಹೋರಾಡುತ್ತಿದ್ದ ಪ್ರಾಚೀನ ಭಾರತೀಯರು ಉತ್ತರದ ಕಾಶಿ ಮತ್ತು ದಕ್ಷಿಣದ ಕಾಂಚಿಗಳಲ್ಲಿ ಯಾವ ಭೇದ ಭಾವವೂ ಇಲ್ಲವೆಂದು ಕಲ್ಪಿಸಿ ಅವನ್ನು ಶಿವನೆರಡು ಕಣ್ಣುಗಳಿಗೆ ಹೋಲಿಸಿದ್ದಾರೆಂದು ತಿಳಿದುಕೊಳ್ಳಬಹುದು.

ಕಾಂಚಿಯ ಕಾಮಾಕ್ಷೀ ದೇವಿಯ ಹೆಸರನ್ನು ಕೇಳದಿರುವವರು ಇಲ್ಲವೆನ್ನಬಹುದು ಈಕೆ ಭಕ್ತರ ಅಭೀಷ್ಟವನ್ನು ತಪ್ಪದೆ ಸಲಿಸುತ್ತಾಳೆ ಎಂಬ ಕಲ್ಪನೆಯಿದೆ. ಮನಮೋಹಕವಾದ ನಯನಗಳಿಂದ ಕೂಡಿರುವ ಈ ದೇವಿಯ ಮೂರ್ತಿಯ ರಚನೆಯೂ ಕಲಾದೃಷ್ಟಿಯಿಂದ ಉತ್ತಮವಾಗಿದೆ. ವಿಷ್ಣು ಕಾಂಚಿಯಲ್ಲಿ ಜಗದ್ಗುರು ಕಾಮಕೋಟಿ ಪೀಠವಿದೆ. ಇಲ್ಲಿ ಆದಿ ಶಂಕರಾಚಾರ್ಯರು ವಾಸಿಸಿಕೊಂಡಿದ್ದರೆಂದು ಹೇಳಲಾಗುತ್ತದೆ ಈ ಧರ್ಮ ಪೀಠವು ತಮಿಳುನಾಡಿನ ಶ್ರೇಷ್ಠ ಪೀಠಗಳಲ್ಲಿ ಒಂದಾಗಿದೆ.

ದ್ವಾರಕಾ

ದ್ವಾರಕೆಯನ್ನು ಮರೆತವರು ಯಾರೂ ಇಲ್ಲ ಎಂಬುದು ನಿಶ್ಚಯ ದ್ವಾರಾವತಿಯಲ್ಲಿ ವಾಸಿಸುವವರ ದರ್ಶನ ಮತ್ತು ಸ್ಪರ್ಶಮಾತ್ರದಿಂದಲೇ ಮನುಷ್ಯನ ಪಾಪವು ದೂರವಾಗುತ್ತದೆ ಎಂದು ಸ್ಕಾಂದಪುರಾಣದಲ್ಲಿ ಹೇಳಲಾಗಿದೆ. ಇದೇ ಸಂದರ್ಭದಲ್ಲಿ ದ್ವಾರಕೆಯ ಧೂಳಿನಿಂದಲೇ ಪಾಪಿಯ ಪಾಪ ಕ್ಷಯವಾಗುವುದು ಎನ್ನಲಾಗಿದೆ.

ದ್ವಾರಕೆಯು ಯಾದವರ ರಾಜಧಾನಿಯಾಗಿ ಬಹುಕಾಲ ಮೆರೆದಾಡಿಕೊಂಡಿತ್ತು ಶ್ರೀ ಕೃಷ್ಣನೂ ದ್ವಾರಾವತಿಯಲ್ಲಿಯೇ ತನ್ನ ಮಧ್ಯ ವಯಸ್ಸಿನ ದಿನಗಳನ್ನು ಕಳೆದಿದ್ದನು. ಆದರೆ, ಯಾದವರು ಮದಿರಾ ಪಾನೋನ್ಮತ್ತರಾಗಿ ಅಂತಃಕಲಹದಿಂದ ನಾಶಗೊಂಡರಂತೆ ಶ್ರೀ ಕೃಷ್ಣನೂ ಅಂತರ್ಧಾನ ಹೊಂದಿದನಂತೆ. ಆಗ ಸಮುದ್ರದ ನೀರು ಉಕ್ಕೇರಿ ಬಂದು ದ್ವಾರಕೆಯು ನೀರಲ್ಲಿ ಮುಳುಗಿ ಹೋಯಿತಂತೆ ಆದರೂ ಈ ನೀರ ಸಾಗರದ ನಡುವೆ ಒಂದು ದೇವಾಲಯವು ಮಾತ್ರ ತಲೆ ಮರೆಸದುಳಿದಿದೆ. ಈ ದೇವಾಲಯದ ಅಸ್ತಿತ್ವದಿಂದಾಗಿ ದ್ವಾರಕೆಯಿಲ್ಲಿತ್ತೆಂದು ಊಹಿಸಬೇಕಾಗಿದೆ.

ಈಗ ದ್ವಾರಾವತಿಯನ್ನು ಗೋಮತೀ ದ್ವಾರವೆಂದು ಕರೆಯಲಾಗುತ್ತದೆ. ಕಾಟಿಯಾವಾಡದ ಪಶ್ಚಿಮ ಸಮುದ್ರ ತಟದಲ್ಲಿದು ಇದೆ. ಸುರೇಂದ್ರ ನಗರ—ಓಖಾ ರೇಲ್ವೆ ದಾರಿಯ ನಡುವೆ ಸಿಗುತ್ತದೆ.

ಇಲ್ಲಿ ಅನೇಕ ದರ್ಶನೀಯ ಸ್ಥಳಗಳಿವೆ ಶ್ರೀ ಕೃಷ್ಣನು ಮಥುರೆಯಿಂದ ಇಲ್ಲಿಗೆ ಆಗಮಿಸಿ ಇದನ್ನು ಸಾಕಷ್ಟು ಸುಂದರವಾಗಿ ಕಟ್ಟಿಸಿದನಂತೆ, ಆದರೆ, ಈಗ ಮುಖ್ಯ ನಗರವೆಲ್ಲವೂ ಮುಳುಗಿ ಹೋಗಿದ್ದು ಅಲ್ಲಲ್ಲಿ ಕುರುಹುಗಳು ಮಾತ್ರ ದೃಷ್ಟಿಗೋಚರವಾಗುತ್ತವೆ.

ಈ ಸಪ್ತಕ್ಷೇತ್ರಗಳು ಭಾರತದ ಏಕತೆಯನ್ನು ಬಲಪಡಿಸುವುದಕ್ಕೆ ಪ್ರಯೋಜನಕಾರಿಯಾದ್ದುವಲ್ಲದೇ ಮತಗಳ ವೈಷಮ್ಯವನ್ನು ಕಳೆದು ಯಾವ ಭೇದಭಾವನೆಗೂ ಅವಕಾಶಕೊಡದೆ, ಎಲ್ಲರಲ್ಲಿಯೂ ಸಮಾನತೆಯ ಬೀಜವನ್ನು ಬಿತ್ತಲು ಸಹಾಯವಾಗಿವೆ. ಹಿಂದೆ ಇಲ್ಲಿದ್ದ ಶೈವ ಮತ್ತು ವೈಷ್ಣವರು ಪರಸ್ಪರ ಪ್ರೇಮಪೂರ್ವಕಾನುರಾಗದಿಂದ ಬಾಳಿಕೊಂಡಿದ್ದರೆಂಬುದಕ್ಕೆ ಈ ಎರಡೂ ಸಂಪ್ರದಾಯಗಳ ಪವಿತ್ರ ಸ್ಥಳಗಳೇ ಈ ಸಪ್ತಪುರಿಗಳಲ್ಲಿ ಸೇರಿಕೊಂಡಿರುವುದನ್ನೂ ಅವುಗಳ ಸಂದರ್ಶನದಿಂದ ಮೋಕ್ಷ ಪ್ರಾಪ್ತಿಯಾಗುವುದೆಂದು ಹೇಳಿರುವುದನ್ನೂ ಗಮನಿಸಬಹುದು.

ಹಾಗಿರುವಾಗ, ನಾವು ಮಾತ್ರ ಇಂದು ನಮ್ಮ ಏಕತೆಯ ಭವ್ಯ ಪರಂಪರೆಯನ್ನೂ ಬಿಟ್ಟು ವಿಚಲಿತರಾಗುತ್ತಿರುವೆವೆ ಎಂಬ ಪ್ರಶ್ನೆಯನ್ನು ನಾವೇ ಉತ್ತರಿಸಬೇಕು.

(ಸಂಪೂರ್ಣ)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು
ದಿ. ಕೆನರಾ ಬ್ಯಾಂಕಿಂಗ್ ಕೋಪೋರೇಶನ್ ಲಿಮಿಟೆಡ್
(ಸ್ಥಾಪನೆ: ಮಾರ್ಚ್ 12, 1906)
ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಕೈಗಾರಿಕಾ ಶಾಂತಿ

ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿ ಸೂತ್ರಗಳು

ಉದಾತ್ತ ತತ್ವಗಳು ಈ ಸೂತ್ರಗಳಿಗೆ ಹಿನ್ನೆಲೆಯಿದ್ದು ಉತ್ತಮ ಪರಿಣಾಮವೆಸಗಬಲ್ಲವು.

ಭಾರತದಲ್ಲಿ ಕೈಗಾರಿಕಾ ಸಂಬಂಧದ ಒಂದು ಇತಿಹಾಸವಿದೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಕಾರಣ, ಭಾರತದ ಕೈಗಾರಿಕೆಗಳು ಬೆಳೆಯುತ್ತಿರುವುದಾದರೂ ಇತ್ತೀಚೆಗೆ. ಅಂತೆಯೇ ಕೈಗಾರಿಕಾ ಸಂಬಂಧದ ಇತಿಹಾಸ ರೂಪುಗೊಳ್ಳುತ್ತಿರುವುದು ಸಹ ಇತ್ತೀಚೆಗೆ. ಕೈಗಾರಿಕಾ ಕ್ಷೇತ್ರದಲ್ಲಿ ರಾಷ್ಟ್ರ ಒಂದು ಮುಖ್ಯ ಹೆಜ್ಜೆ ಇಡುತ್ತಿರುವ ಕಾರಣ ಕೈಗಾರಿಕಾ ಸಂಬಂಧದ ಪ್ರಾರಂಭದಿಶೆಗೂ ಒಂದು ಮಹತ್ವವಿದೆ. ಒಂದೊಂದು ಹೊಸ ಕೈಗಾರಿಕೆಯ ಸ್ಥಾಪನೆ ಕಾರ್ಯ ಆರಂಭವಾದ ಹಾಗೆ ಅಥವಾ ಒಂದೊಂದು ಹೊಸ ಯಂತ್ರದ ಜೋಡಣೆ ಆದ ಹಾಗೆ, ಕೈಗಾರಿಕಾ ಸಂಬಂಧದ ವ್ಯಾಪ್ತಿಯೂ ಬೆಳೆಯತೊಡಗುತ್ತದೆ.

ಭಾರತದ ಆರ್ಥಿಕ ಪ್ರಗತಿಗೆ ಪ್ರಯತ್ನ ನಡೆಸುತ್ತಿರುವ ಈ ಸಮಯದಲ್ಲಿ ಉತ್ಪನ್ನ ಪ್ರಮಾಣ ಹೆಚ್ಚಲು ಹಾಗೂ ಉತ್ತಮ ದರ್ಜೆಯ ವಸ್ತುಗಳ ತಯಾರಿಕೆ ಸಾಧ್ಯವಾಗಲು ಕೈಗಾರಿಕಾ ಸಂಬಂಧ ಒಂದು ಉತ್ತಮ ತಳಹದಿಯ ಮೇಲೆ ಬೆಳೆಯಬೇಕಾಗುತ್ತದೆ; ಕೈಗಾರಿಕಾ ಮಾಲೀಕರ ಹಾಗೂ ಕಾರ್ಮಿಕರ ನಡುವೆಯ ಸಂಬಂಧ ಹಿತಕರವಾಗಿರದಿದ್ದರೆ ನಮ್ಮ ಗುರಿ ಮುಟ್ಟುವುದು ಅಸಾಧ್ಯವಾಗುತ್ತದೆ.

ಆರ್ಥಿಕ ಬೆಳವಣಿಗೆಗೆ ಕೈಗಾರಿಕಾ ಸಂಬಂಧ ಜೀವನಾಡಿ ಇದ್ದಂತೆ. ಈ ಸಂಬಂಧ ಸ್ವಲ್ಪ ಅಸ್ತವ್ಯಸ್ತವಾದರೆ ನಾಕು ಮುಷ್ಕರಗಳು ಮತ್ತು 'ಲಾಕೌಟ್'ಗಳ ಪರಂಪರೆ ಆರಂಭವಾಗಿ ದುಷ್ಪರಿಣಾಮಗಳು ಬೆಳೆಯುತ್ತವೆ; ನಾಡಿನ ಆರ್ಥಿಕ ಪ್ರಗತಿ ಕುಂಠಿತವಾಗುತ್ತದೆ.

ಸಣ್ಣ ಪುಟ್ಟ ಕಾರಣಗಳಿಗಾಗಿ ಮುಷ್ಕರಗಳು ಮತ್ತು 'ಲಾಕೌಟ್'ಗಳು ನಡೆಯುವ ಸಂದರ್ಭಗಳೇ ಹೆಚ್ಚು ಅನುಭವಕ್ಕೆ ಬಂದಿವೆಯೇ ಹೊರತು ನ್ಯಾಯವಾದ ಕಾರಣಗಳಿಗಾಗಿ ಮುಷ್ಕರಗಳಾಗಲಿ 'ಲಾಕೌಟ್'ಗಳಾಗಲಿ ನಡೆದಿರುವುದು ತುಂಬಾ ವಿರಳ.

ಮುಷ್ಕರಗಳು ಮತ್ತು ಲಾಕೌಟ್‌ಗಳ ಹಾವಳಿ

ಮುಷ್ಕರಗಳು ಮತ್ತು 'ಲಾಕೌಟ್'ಗಳನ್ನು ತಡೆಯುವುದಾದರೂ ಹೇಗೆ? ಇದಕ್ಕೆ ಸಂಬಂಧಪಟ್ಟ ಹಾಗೆ ಶಾಸನಗಳಿವೆ ಮತ್ತು ಒಂದು ನಿರ್ದಿಷ್ಟ ಕಾರ್ಯವಿಧಾನವೂ ಇದೆಯೆಂಬುದು ನಿಜ. ರಾಜಿಗಾಗಿ ಸಂಧಾನದ ಪ್ರಯತ್ನ, ಮಧ್ಯಸ್ಥಿಕೆ ವಹಿಸಿ ಒಂದು ತೀರ್ಪು ಕೊಡುವ ಕಾರ್ಯ ಮತ್ತು ಕೊನೆಯದಾಗಿ ವಿವಾದವನ್ನು ನ್ಯಾಯಾಸ್ಥಾನದ ಪರಿಶೀಲನೆಗೊಪ್ಪಿಸಿ ತೀರ್ಪು ಪಡೆಯುವುದು ಇವೆಲ್ಲ ಕಾರ್ಯ ವಿಧಾನದ ವಿವಿಧ ಹಂತಗಳಾಗುತ್ತವೆ. ಆದರೆ ಇದರಿಂದ ಕಾರ್ಮಿಕರು ಮತ್ತು ಮಾಲೀಕರ ವಿವಾದದಲ್ಲಿ ಇನ್ನೊಬ್ಬರು—ಸರ್ಕಾರ—ತಲೆಹಾಕಲು ಅವಕಾಶಮಾಡಿಕೊಟ್ಟಂತಾಗುತ್ತದೆ. ಕೈಗಾರಿಕಾ ಸಂಬಂಧವನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲರಾದಾಗ ಸರ್ಕಾರ ಈ ರೀತಿ ಪ್ರವೇಶಿಸಬೇಕಾಗುತ್ತದೆ.

ಹೀಗೆ ಸರ್ಕಾರ ಮಧ್ಯೆ ಪ್ರವೇಶಿಸಿ ತನ್ನ ನಿರ್ಧಾರವನ್ನು ಇಬ್ಬರ ಮೇಲೂ ಹೊರಿಸುವುದಕ್ಕೆ ಅವಕಾಶ ಕಲ್ಪಿಸುವ ಬದಲು. ಕೈಗಾರಿಕೆಯಲ್ಲಿ ಶಿಸ್ತಿನ ನಿಯಮಾವಳಿಯೊಂದನ್ನು ಅಂಗೀಕರಿಸಿ ಕೆಲಸ ಮಾಡುವುದು ಹೆಚ್ಚು ಸಾಧುವೆನಿಸುತ್ತದೆ. ಇತರರು ಹೊರಿಸುವ ನಿರ್ಬಂಧಕ್ಕೆ ಬದಲು ತಾವೇ ಅನುಸರಿಸುವ ಶಿಸ್ತಿನ ಮಾರ್ಗ ಮೇಲು. ಸರ್ಕಾರ, ಕೈಗಾರಿಕಾ ಮಾಲೀಕರು ಮತ್ತು ಕಾರ್ಮಿಕರು—ಮೂವರೂ ಕಲೆತು ಇಂತಹ ಶಿಸ್ತಿನ ಒಂದು ಸೂತ್ರವನ್ನು ದೇಶದ ಆರ್ಥಿಕ ಪ್ರಗತಿಗೆ ಸಹಾಯಕವಾಗಿ ಅಂಗೀಕರಿಸಬಹುದು. ಇದರ ಹಿಂದೆ ಶಾಸನದ ಒತ್ತಾಯವಾಗಲಿ ಬಲೋದ್ಬಂಧವಾಗಲಿ ಇರದೆ ಎಲ್ಲರ ಒಪ್ಪಿಗೆಗೊಳಪಟ್ಟು ಇದು ರೂಪಿತವಾಗುತ್ತದೆ.

ಇಂತಹ ಶಿಸ್ತಿನ ಒಂದನ್ನು ಪ್ರತಿಯೊಂದು ಕೈಗಾರಿಕೆಯಲ್ಲೂ ಅಂಗೀಕರಿಸುವಂತೆ ಕೇಂದ್ರ ಸರ್ಕಾರದ ಕಾರ್ಮಿಕ ಶಾಖೆ ಮಂತ್ರಿಗಳು ೧೯೫೭ರಲ್ಲಿ ಸಲಹೆಮಾಡಿದರು. ದೇಶದಲ್ಲಿ ಮುಷ್ಕರಗಳು ಮತ್ತು 'ಲಾಕೌಟ್'ಗಳ ಸಂಖ್ಯೆ ಹೆಚ್ಚುತ್ತಿರುವ ಹಾಗೂ ಹಿಂಸಾಪ್ರವೃತ್ತಿ ಬೆಳೆಯುತ್ತಿರುವ ಕಾರಣ ಇಂತಹ ಒಂದು ಸೂತ್ರದ ಅಂಗೀಕಾರ ಅತ್ಯಾವಶ್ಯಕವೆಂಬುದು ಅವರ ಅಭಿಪ್ರಾಯವಾಗಿದ್ದಿತು. ಮುಂದಿನ ವರ್ಷ ಮತ್ತೆ ಕಾರ್ಮಿಕ ಸಮ್ಮೇಳನವೊಂದು ನೈನಿತಾಲ್‌ನಲ್ಲಿ ನಡೆದಾಗ ಅಂತಹ ಒಂದು ಸೂತ್ರದ ರೂಪರೇಷೆಗಳು ಸೂಚಿತವಾಗಿ ಅದಕ್ಕೆ ಒಪ್ಪಿಗೆ ದೊರೆಯಿತು. ಮತ್ತು, ಈ ಸೂತ್ರವನ್ನು ಮಾಲೀಕರ ಸಂಘಗಳೂ ಅನುಮೋದಿಸಿದುವು.

ಕೈಗಾರಿಕಾ ಶಾಂತಿಗೆ ಯೋಗ್ಯ ಸೂತ್ರ

ಕೈಗಾರಿಕಾ ಶಾಂತಿಯ ರಕ್ಷಣೆ ದೃಷ್ಟಿಯಿಂದ ಮುಷ್ಕರವಾಗಲಿ ಲಾಕೌಟ್ ಆಗಲಿ ನಡೆಯುವುದಕ್ಕೆ ಮೊದಲು ನಿರ್ದಿಷ್ಟ ಮುನ್ಸೂಚನೆ ಕೊಡಬೇಕು. ಇಂತಹ ಮುನ್ಸೂಚನೆ ಕೊಡದೆ ಮುಷ್ಕರವಾಗಲಿ ಲಾಕೌಟ್ ಆಗಲಿ ನಡೆಯಬಾರದು. ಯಾವುದೇ ಕೈಗಾರಿಕಾ ವಿಷಯದಲ್ಲಿ ಏಕಪಕ್ಷೀಯ ನಿರ್ಧಾರ ಕೂಡದು; ಉದ್ದೇಶಪೂರ್ವಕವಾಗಿ 'ನಿಧಾನ ಪ್ರವೃತ್ತಿ' ಅನುಸರಿಸಿ ಉತ್ಪನ್ನ ಪ್ರಮಾಣವನ್ನು ಕುಂಠಿತಗೊಳಿಸಬಾರದು; ಯಂತ್ರೋಪಕರಣಗಳನ್ನು ಉದ್ದೇಶಪೂರ್ವಕವಾಗಿ ಹಾಳುಮಾಡಬಾರದು; ಹಿಂಸಾಪ್ರವೃತ್ತಿ, ಬೆದರಿಕೆ ಹಾಕುವುದು, ಒತ್ತಾಯ ತರುವುದು ಇತ್ಯಾದಿ ಕಾರ್ಯಗಳನ್ನು ಮಾಡಬಾರದು. ಸಂಧಾನಗಳಿಗೆ ಇರುವ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು; ಅವಾರ್ಡುಗಳು ಮತ್ತಿತರ ಕೈಗಾರಿಕಾ ತೀರ್ಪುಗಳನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕು; ಮತ್ತು ಕೈಗಾರಿಕಾ ಶಾಂತಿಯನ್ನು ಕದಡುವ ಯಾವುದೇ ಕಾರ್ಯವನ್ನು ಮಾಡಬಾರದು.

ಕುಂದುಕೊರತೆಗಳನ್ನು ಆಗಾಗ ಸೂಚಿಸುವುದಕ್ಕೆ ಅವಕಾಶವಿರಬೇಕೆಂಬ ತತ್ವವನ್ನು ಮಾನ್ಯಮಾಡಲಾಗಿದೆ; ಕಾರಣ, ಇಂತಹ ಕುಂದುಕೊರತೆಗಳು ಕೊನೆಗೆ ಒಟ್ಟುಗೂಡಿ ಭಾರಿ ಹಗರಣಕ್ಕೆ ಕಾರಣವಾಗದಂತೆ ನೋಡಿಕೊಳ್ಳುವುದು ಅತ್ಯಾವಶ್ಯಕ.

ಅಷ್ಟೇ ಅಲ್ಲ. ಈ ಸೂತ್ರದ ಪಾಲನೆಯಾಗದೆ ಹೋದರೆ ಅದರ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಲೂ ಅವಕಾಶವಿರುತ್ತದೆ. ಕೈಗಾರಿಕಾ ಮಾಲೀಕರ ಹಾಗೂ ಕಾರ್ಮಿಕರ ಸಂಘ ಸಂಸ್ಥೆಗಳೇ ಈ ಬಗ್ಗೆ ನಿರ್ದಿಷ್ಟ ಕ್ರಮ ತೆಗೆದುಕೊಳ್ಳುತ್ತವೆ. ಇಂತಹ ನಿಯಮದ ಉಲ್ಲಂಘನೆ ಏಕಾಯಿತು ಎಂದು ತನ್ನ ಅಂಗಸಂಸ್ಥೆಗೆ ಪ್ರಧಾನ ಸಂಸ್ಥೆ ಕೇಳುತ್ತದೆ. ಮತ್ತು ಇಂತಿಷ್ಟು ಕಾಲದಲ್ಲಿ ನಿಯಮದ ಪಾಲನೆ ಆಗಬೇಕೆಂದು ಸೂಚಿಸುತ್ತದೆ. ಅಲ್ಲದೆ ಅಗತ್ಯ ಕಂಡುಬಂದರೆ ಸೂಕ್ತ ಎಚ್ಚರಿಕೆ ಕೊಟ್ಟು ಶಿಸ್ತಿನ ಕ್ರಮ ಕೈಗೊಳ್ಳುವ ಅಧಿಕಾರ ಸಹ ಮಾತೃ-ಸಂಸ್ಥೆಗೆ ಇರುತ್ತದೆ.

ಇಷ್ಟೆಲ್ಲದರ ಜೊತೆಗೆ ಕೈಗಾರಿಕಾ ಶಾಂತಿ ಸೂತ್ರದ ಪಾಲನೆಗೆ ಇನ್ನೂ ಹಲವಾರು ಹಂತಗಳಲ್ಲಿ ಪ್ರಯತ್ನ ನಡೆಸಲಾಗುವುದು. ಮತ್ತು, ಈ ಕಾರ್ಯ ನೋಡಿಕೊಳ್ಳಲು ಬೇರೆಬೇರೆ ಸಮಿತಿಗಳೂ ತ್ರಿಪಕ್ಷೀಯ ಒಡಂಬಡಿಕೆ ವ್ಯವಸ್ಥೆಯೂ ರೂಪಗೊಂಡಿರುತ್ತದೆ.

ಈ ಕೈಗಾರಿಕಾ ಶಾಂತಿ ಸೂತ್ರ ನಮ್ಮ ದೇಶದ ಸ್ಥಿತಿಗತಿಗಳ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗುತ್ತದೆ ಎಂಬುದನ್ನು ನಾವಿನ್ನೂ ಕಾದು ನೋಡಬೇಕಾಗಿದೆ. ಆದರೆ ಇಷ್ಟು ನಿಜ. ಈ ಸೂತ್ರದ ಹಿಂದಿರುವ ಉದಾತ್ತ ತತ್ವಗಳ ಪಾಲನೆ ನಡೆದರೆ ಕೈಗಾರಿಕಾ ಸಂಬಂಧ ಒಂದು ಹಿತಕರ ವಾತಾವರಣದಲ್ಲಿ ಬೆಳೆಯಲು ತುಂಬಾ ಸಹಾಯಕವಾಗುತ್ತದೆ.

ಕೆನರಾ ಬೇಂಕು
ನಿಮ್ಮ
ಕಾರ್ಯಕಾರಕ
ಮತ್ತು
ಮೊಕ್ತೇಸರನಾಗಿ

- ಕೆನರಾ ಬೇಂಕ್ ಲಿಮಿಟೆಡನ್ನು ನಿಮ್ಮ ಕಾರ್ಯಕಾರಕ ಮತ್ತು ಮೊಕ್ತೇಸರನ್ನಾಗಿ ನೇಮಿಸುವುದರಿಂದ ಹಲವಾರು ಪ್ರಯೋಜನಗಳಿವೆ.
- ಮಿತವ್ಯಯದಲ್ಲಿ ನಿರಂತರ ತಜ್ಞ ಆಡಳಿತೆಯ ಪ್ರಯೋಜನವು ನಿಮಗೆ ಲಭಿಸುವುದು ಮತ್ತು ನಿಮ್ಮ ಬೆನಿಫಿಶಿಯರಿಗಳ ಹಿತಾಸಕ್ತಿಗಳು ಸಂಪೂರ್ಣವಾಗಿ ರಕ್ಷಿಸಲ್ಪಡುವುವು.

ದಯೆಮಾಡಿ ಇಂದೇ ನಮ್ಮ ಸ್ಥಳೀಯ ಬ್ರಾಂಚ್ ಮೆನೇಜರರೊಡನೆ ಸಂಪರ್ಕ ಬೆಳೆಸಿರಿ.

ವಿವರವಾದ ಉಚಿತ ಸಾಹಿತ್ಯ ಮತ್ತು ಇತರ ಮಾಹಿತಿಗಳಿಗೆ ಬರೆಯಿರಿ:

ಕೆನರಾ ಬೇಂಕು ಲಿಮಿಟೆಡ್
ಎಡ್ಮಿನಿಸ್ಟ್ರೇಟಿವ್ ಆಫೀಸು, ಬೆಂಗಳೂರು-2.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

R.I.A. No. 162/1959.
O.S. No. 400/1957.

P. S. ವಾಸುದೇವ ರಾವ್, ನಾಗಾಮ ಕಾಶಿ ಶ್ರೀನಿವಾಸಯ್ಯನ ಮಗ—ಈಗ ಬೊಂಬಾಯಿಯಲ್ಲಿರುವವ. ವಾದಿ-ಅರ್ಜಿದಾರ.

ಮತ್ತು

1. P. S. ಗೋಪಾಲಕೃಷ್ಣ ರಾವ್, ನಾಗಾಮ ಕಾಶಿ ಶ್ರೀನಿವಾಸಯ್ಯನ ಮಗ—ಉಡುಪಿ ತಾಲ್ಲೂಕು ನಡ್ಸಾಲು ಗ್ರಾಮಸ್ಥ—
2. ಭಾಗೀರತಿ ಶ್ರೀನಿವಾಸಯ್ಯನವರ ಮಗಳು—ನಡ್ಸಾಲು ಗ್ರಾಮ –
3. ಕಾವೇರಿ ಅಮ್ಮ ಶ್ರೀನಿವಾಸಯ್ಯನ ಮಗಳು—ಟ್ಯೂಟಿಕೋರಿನಲ್ಲಿರುವವಳು—ಪ್ರತಿವಾದಿರು—ಎದ್ರಿರು—

ಸದರಿ 1ನೇ ಯದ್ರಿ P. S. ಗೋಪಾಲಕೃಷ್ಣ ರಾವ್‌ರವರಿಗೆ.

ಮೇಲಿನ ದಾವೆಯಲ್ಲಿ ವಾದಿ ಗುಣಾಕ್ಯಾದ ಪ್ರಿಲಿಮಿನರಿ ಡಿಕ್ರಿಯ ಮೇರೆಗೆ ದಾವಾ ಆಸ್ತಿಗಳನ್ನು ವಿಂಗಡಿಸಿ, ಮತ್ತು ಯಿತರ ನಿವೃತ್ತಿಗಳನ್ನು ಕೊಡಿಸಿ, ಫೈನಲು ಡಿಕ್ರಿ ಕೊಡಬೇಕಾಗಿ ವಾದಿಯು ಕೊಟ್ಟ ಮೇಲಿನ ಅರ್ಜಿಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 5-6-1959ನೇ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಯಿಟ್ಟಿದೆ. ಈ ವಿಷಯದಲ್ಲಿ ಆಕ್ಷೇಪಯಿರುವಲ್ಲಿ ನೀವು ಸ್ವತಹ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳಬಹುದಾಗಿಯೂ, ತಪ್ಪಿದರೆ ಸದರಿ ಅರ್ಜಿಯು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುವದಾಗಿಯೂ, ಈ ಮುಲಕ ನಿಮಗೆ ತಿಳಿಯಪಡಿಸೋಣಾಗುತ್ತದೆ.

A. N. S. Achar,
Advocate for Petitioner.

ಕಾರ್ಕಳ, ತಾರೀಕು 6-4-1959.

ಚಂದ್ರನಲ್ಲಿ ಕಳಂಕವಿದ್ದರೂ ಅವನ ನಿರ್ಮಲವಾದ ಕಿರಣಗಳು ಜನಮನೋಹ್ಲಾದಕಾರಕವಿರುವುದರಿಂದ ಜಗದ್ವಂದ್ಯನಾಗಿದ್ದಾನೆ. ಅಧಿಕ ಜನೋಪಯೋಗಿ ಕಾರ್ಯಕ್ರಮದಲ್ಲಿ ಅಲ್ಪ ಕುಂದುಕೊರತೆಗಳಿದ್ದರೂ ಅವು ಅಕ್ಷಮ್ಯವೆನಿಸಲಾರವು.

NAVAYUGA
Founder—
A. B. SHETTY,
Former Minister for Public Health
Govt. of Madras & Govt. of Mysore
ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ
ವರುಷ ೩೮ | ಉಡುಪಿ ೯-೪-'೫೯ | ವಾರ ೩೦

ಆರ್ಥಿಕ ಮಾನದಂಡ

“ಹಿಂದುಳಿದವರು ಯಾರು?” ಎಂಬ ಪ್ರಶ್ನೆಗೆ ವಿವಿಧ ಎಡೆಗಳಿಂದ ನಾನಾತರದ ಉತ್ತರಗಳು ಬರುತ್ತಿರುವುದು ಸ್ವಾಭಾವಿಕವೇ. ನಮ್ಮ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಹಿಂದುಳಿದವರೆಂದು ಜಾತೀಯತೆಯನ್ನು ಹೊಂದಿಕೊಂಡು ಜನತೆಯನ್ನು ವಿಭಾಗಮಾಡಿವೆ. ಜಾತ್ಯತೀತ ಭಾರತದಲ್ಲಿ ಜಾತೀಯತೆಯನ್ನನುಸರಿಸಿ ಈ ರೀತಿ ಇಬ್ಭಾಗಮಾಡುವುದು ಸಮಂಜಸವಲ್ಲ ಎಂಬುದಾಗಿ ವಿವೇಕಿಗಳೆಲ್ಲರೂ ಒಪ್ಪುತ್ತಾರೆ. ಸರಕಾರಿ ಉದ್ಯೋಗಗಳನ್ನು ಹಂಚುವುದು, ವಿಶ್ವವಿದ್ಯಾಲಯಗಳಿಗೆ ಪ್ರವೇಶ ನೀಡುವುದು ಇವೇ ಮೊದಲಾದ ಸಂದರ್ಭಗಳಲ್ಲಿ ಈ ಜಾತೀಯತೆಯ ಕಾರಣದಿಂದಾಗಿ ಅದೆಷ್ಟೋ ಅನಾಹುತಗಳು ಕಾಣಿಸಿಕೊಂಡಿರುವುದು ಅನುಭವವೇದ್ಯ. ಇಂತಹ ಜಾತೀಯತೆಯ ಕೊಳಸಿನಿಂದಾಗಿ ನ್ಯಾಯವಾಗಿ ದೊರೆಯಬೇಕಾದಂತಹವರಿಗೆ ಸವಲತ್ತು ಸೌಲಭ್ಯಗಳು ದೊರೆಯದೆ ಮುಕ್ತಮಾರ್ಗದಲ್ಲಿ ಜಾತೀಯತೆಯ ಪ್ರಕಾರ ಹಿಂದುಳಿದ ವರ್ಗಗಳವರಿಗೆ ಈ ಅನುಕೂಲಗಳು ಸಿಗುತ್ತವೆ. ಆದರೆ ಜಾತೀಯತೆಯನ್ನು ಆಮೂಲ ಕಿತ್ತು ಹಾಕಬೇಕೆಂದು ಬಯಸುತ್ತಿರುವ ಭಾರತದಲ್ಲಿ ಉಳಿದ ಎಲ್ಲ ಸಂದರ್ಭಗಳಲ್ಲಿ ಜಾತೀಯತೆಯನ್ನು ತೊರೆಯಬೇಕೆಂದು ನಾಯಕರು ಉಪದೇಶಿಸುತ್ತ ಬಂದಿದ್ದರೂ ಕೆಲವೊಂದು ಸೌಲಭ್ಯಗಳನ್ನು ನಾಗರಿಕರಿಗೆ ಕೊಡಮಾಡುವಾಗ ಈ ಜಾತೀಯತೆಯ ಬೀಜವನ್ನು ಅವರೇ ಬಿತ್ತುತಿದ್ದುದರಿಂದ ಜನತೆಯ ಮನಸ್ಸಿನಿಂದ ಜಾತೀಯತೆಯು ದೂರವಾಗುವುದು ಸಾಧ್ಯವಿಲ್ಲವೆಂಬುದು ನಿರ್ವಿವಾದ. ಆದುದರಿಂದ, ನ್ಯಾಯವಾಗಿ ಇಂದಿನ ಸ್ಥಿತಿಗತಿಗಳಿಗನುಸಾರವಾಗಿ, ಆರ್ಥಿಕ ಮಾನದಂಡದಿಂದಲೇ ಈ ಸದವಕಾಶಗಳನ್ನು ಹಂಚುವುದು ನ್ಯಾಯೋಚಿತವೆಂದು ಬೇರೆ ಹೇಳಬೇಕಾಗಿಲ್ಲ.

ಭಾರತದಲ್ಲಿರುವ ಕೊರತೆಯನ್ನು ನೀಗಿಸಲು ಇಂದು ವಿಚಾರಶೀಲರೂ ಮತಿವಂತರೂ ಪರಿಶ್ರಮಪಟುಗಳೂ ಬೇಕು. ನಮ್ಮಲ್ಲವು ಅಧಿಕಾಧಿಕವಾಗಬೇಕೆಂದು ಉಪದೇಶಗಳು ದಿನನಿತ್ಯವೆಂಬಂತೆ ಒಬ್ಬರಲ್ಲಿನ್ನೊಬ್ಬ ಮೇಧಾವೀ ನಾಯಕರಿಂದ ದೊರೆಯುತ್ತಿದೆ. ಆದರೆ, ಇಂತಹ ಮತಿವಂತರು ಜಾತಿಯಲ್ಲಿ ಮುಂದುವರಿದವರೆಂಬ ಒಂದೇ ಒಂದು ಕಾರಣದಿಂದ ಅವರಿಗೆ ದೊರೆಯಬೇಕಾದ ಸೌಲಭ್ಯ ದೊರಕದೆ ದೇಶದ ಕೊರತೆಯನ್ನು ತುಂಬಿಸುವ ಅವಕಾಶ ಅವರಿಗೆ ಸಿಗದೆ ಹೋಗುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಇಂದು ಜಾತಿಯಲ್ಲಿ ಹಿಂದುಳಿದವರು ಕೇವಲ ಇಂದು ಮಾತ್ರವಲ್ಲ, ನೂರಾರು ವರ್ಷಗಳಿಂದಲೂ ಹಿಂದೆಯೇ ಉಳಿದಿದ್ದು, ಅದರ ಪರಿಣಾಮವಾಗಿ ಸಾಮಾನ್ಯತಃ ಪರಿಣತ ಮತಿಗಳೂ ವಿಚಾರಶೀಲರೂ ಆಗಿರುವುದಿಲ್ಲ. ಆರ್ಥಿಕವಾಗಿ ಹಿಂದುಳಿದವನನ್ನು ಹಣಕೊಟ್ಟಾದರೂ ಶ್ರೀಮಂತನನ್ನಾಗಿ ಒಂದು ಕ್ಷಣದಲ್ಲಿ ಮಾಡಬಹುದು; ಆದರೆ, ಹೀಗೆ ದೊರಕಿದುದರ ಸದುಪಯೋಗ ಮಾಡಲಾರದವನನ್ನು ಹೇಗೆ ತೃಪ್ತಿಪಡಿಸಬಹುದೋ ಕಾಣುವುದಿಲ್ಲ. ಆದುದರಿಂದ “ಮತಿಹೀನ”ರಾದವರನ್ನು ಎಷ್ಟು ಪ್ರಯತ್ನಪಟ್ಟರೂ ಬೌದ್ಧಿಕವಾಗಿ ಮೇಲೆತ್ತುವುದು ಪ್ರಯಾಸ. ಆದರೆ, ಇಷ್ಟು ಹೇಳಿದಮಾತ್ರಕ್ಕೆ ಅಂತಹರನ್ನು ಇದೇ ರೀತಿ ತಿರಸ್ಕಾರದೃಷ್ಟಿಯಿಂದ ಕಾಣಬೇಕೆಂದು ತಿಳಿಯಬಾರದು. ಅವರನ್ನೂ ಇತರರಿಗೆ ಸರಿಸಮಾನ ಸ್ಥಿತಿಗತಿಗೆ ತರುವ ಪ್ರಯತ್ನ ಮುಂದುವರಿಯಬೇಕು; ಅವರಿಗೆ ಅವಕಾಶವಿರುವಲ್ಲಿ ವಿಶೇಷ ಸೌಲಭ್ಯಗಳನ್ನು ಕೊಡಬೇಕು; ಆದರೆ, ಕೇವಲ ಈ ರೀತಿ ಹಿಂದೆ ಬಿದ್ದಿರುವವರನ್ನು ಮುಂದೆ ತರುವ ಧೋರಣೆಯಿಂದ ಮುಂದುವರಿದ ಜಾತಿಯವರೆನಿಸುವವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದೂ ಅವಶ್ಯ. ಅದರಲ್ಲೂ ಯೋಗ್ಯತೆಯನ್ನು ನಿರ್ಲಕ್ಷಿಸಿ ಜಾತಿಯನ್ನೇ ಗಮನಿಸುವುದು ಮಹಾಪರಾಧವೆನ್ನಲೇ ಬೇಕು

ಸದ್ಯ, ನಮ್ಮ ರಾಷ್ಟ್ರ ಘಟನೆಯಲ್ಲಿ ಹರಿಜನರು, ಗಿರಿಜನರು ಹಾಗೂ ಹಿಂದುಳಿದ ಕೆಲವು ಜಾತಿಗಳವರಿಗೆ ಒದಗಿಸಿದ ಸೌಲಭ್ಯಗಳ ಅವಕಾಶ ಮುಗಿಯುತ್ತ ಬಂದಿದ್ದು, ಈ ಬಗ್ಗೆ ಒಂದು ಪ್ರಕೃತದ ಸ್ಥಿತಿಗಳಿಗನುಸಾರವಾದ ಧೋರಣೆಯನ್ನು ರೂಪಿಸುವುದು ಆವಶ್ಯಕವಾಗಿದೆ. ಈ ಬಗ್ಗೆ ಇತ್ತೀಚೆಗೆ ಸೇರಿದ ರಾಜ್ಯಗಳ ಮಂತ್ರಿ ಪರಿಷತ್ತು ಚರ್ಚೆ ನಡೆಸಿತು. ಜಾತೀಯತೆಯನ್ನುಳಿದು, ಆರ್ಥಿಕ ಸ್ಥಿತಿಗತಿಗಳನ್ನು ಅನುಲಕ್ಷಿಸಿ ಹಿಂದುಳಿದವರು ಯಾರೆಂದು ನಿರ್ಧರಿಸಬೇಕೆಂಬ ಅಭಿಪ್ರಾಯ ಸಾಮಾನ್ಯವಾಗಿ ಬಂತು. ಸುಮಾರು ೭೫ ರೂಪಾಯಿಗಿಂತ ಕಡಿಮೆ ಮಾಸಿಕೋತ್ಪನ್ನವಿರುವವರನ್ನು ಹಿಂದುಳಿದವರೆಂದು ಪರಿಗಣಿಸಬೇಕೆಂದು ಹಲವರು ಅಭಿಪ್ರಾಯಪಟ್ಟರು. ಪಂಜಾಬ ಸರಕಾರವು ಎಲ್ಲರಿಗಿಂತ ಮುಂದುವರಿದು ರೂ. ೧,೫೦೦ರಷ್ಟು ವಾರ್ಷಿಕ ಆದಾಯಕ್ಕಿಂತ ಕಡಿಮೆ ಆದಾಯವಿರುವವರು ಹಿಂದುಳಿದವರೆಂದು ಪರಿಗಣಿಸಲ್ಪಡುವರೆಂದು ಘೋಷಿಸಿದೆ. ನಮ್ಮ ಮೈಸೂರು ಸರಕಾರ ಈ ವಿಚಾರದಲ್ಲಿ ಇನ್ನೂ ನಿರ್ಧಾರಕ್ಕೆ ಬರದೆ, ಈ ಬಗ್ಗೆ ನೇಮಿಸಿದ ಸಮಿತಿಯ ವರದಿಯನ್ನು ಪರ್ಯಾಲೋಚಿಸುತ್ತಿದೆಯೆಂದು ಮುಖ್ಯ ಮಂತ್ರಿ ಜತ್ತಿಯವರು ಅಂದಿದ್ದಾರೆ. ಈ ವರದಿಯ ರೂಪರೇಷೆಗಳು ತಿಳಿದು ಬಂದಿಲ್ಲ. ಆದರೂ ಕೇವಲ ಒಂದು ಕುಟುಂಬದ ಮಾಸಿಕ ಇಲ್ಲವೇ ವಾರ್ಷಿಕ ಆದಾಯವನ್ನು ಮಾತ್ರ ಗಣನೆಗೆ ತಾರದೆ, ಆ ಕುಟುಂಬದಲ್ಲಿರುವ ಸದಸ್ಯರ ಸಂಖ್ಯೆಯನ್ನೂ ಎಣಿಸುವುದು ಅವಶ್ಯಕವೆಂದು ಸೂಚಿಸಬಹುದು. ಅಲ್ಲದೇ ಹಣದುಬ್ಬರದ ಈ ಕಾಲದಲ್ಲಿ ರೂ. ೭೫ ಮಾಸಿಕಾದಾಯವೂ ತುಸು ಕಡಿಮೆಯೆಂದು ಕಂಡು ಬರುವುದು. ಆದರೂ ಭಾರತೀಯನೊಬ್ಬನ ಸರಾಸರಿ ಆದಾಯ ದಿನವೊಂದಕ್ಕೆ ಒಂದು ರೂಪಾಯಿಗಿಂತಲೂ ಕಡಿಮೆಯಿದೆ ಎಂಬುದನ್ನು ನೆನಪಿನಲ್ಲಿಡಬೇಕು. ಅಂತೂ ಈಗಿರುವಂತೆ ಜಾತೀಯತೆಯನ್ನು ಮುಂದಿಟ್ಟು ವಿಭಜಿಸುವ ಅನ್ಯಾಯ ಧೋರಣೆಯನ್ನು ಇನ್ನೂ ಮುಂದುವರಿಸದೆ ಪಂಜಾಬ ಸರಕಾರದ ದಿಟ್ಟತನದಂತೆ ನಮ್ಮ ವಿವಿಧ ರಾಜ್ಯ ಸರಕಾರಗಳು ಆವಶ್ಯಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಬಹುದು. ಆರ್ಥಿಕ ಸಮಾನತೆಯನ್ನು ನಾವು ಸಾಧಿಸಿಕೊಂಡರೆ, ಆಗ ಯೋಗ್ಯತೆಯೇ ಪ್ರಾಶಸ್ತ್ಯವನ್ನು ಪಡೆಯುವುದು. ಅಲ್ಲದೇ ಜಾತಿ ಭೇದಗಳ ಕೀಟಲೆಯೂ ದೂರಾಗುವುದು ಸಾಧ್ಯವೆಂದು ಹೇಳಿದರೆ ತಪ್ಪಾಗಲಾರದು.

ಭಾರತದ ಉದಾರತೆ

ನೆರೆರಾಜ್ಯ ಟಿಬೇಟವು ಕಮ್ಯೂನಿಸ್ಟ ಸಾಮ್ರಾಜ್ಯದ ಅಂಕೆಯೊಳಗಿದ್ದರೂ ಟಿಬೇಟ ಭಾರತ ಸಂಬಂಧವನ್ನು ಅಲ್ಲಗಳೆಯುವುದು ಅಸಾಧ್ಯ. ಇತ್ತೀಚೆಗೆ ಟಿಬೇಟದಲ್ಲೆದ್ದ ಕ್ರಾಂತಿಯು ಯಾವ ಸ್ವರೂಪದ್ದೇ ಇರಲಿ, ಅಲ್ಲಿಯ ಧರ್ಮಾಧಿಕಾರಿಗಳಾದ ದಲಾಯಿ ಲಾಮಾರವರು ಸ್ವದೇಶವನ್ನು ಬಿಟ್ಟು ಭಾರತಕ್ಕೆ ಓಡಿಬಂದು ಆಶ್ರಯ ಬೇಡಿದ್ದಾರೆ; ಭಾರತ ಸರಕಾರದವರೂ ತನ್ನ ಆದರ್ಶ ತತ್ವಗಳಿಗನುಸಾರವಾಗಿ, ಆಶ್ರಯ ಬೇಡಿ ಬಂದವರನ್ನು ಯೋಗ್ಯ ರೀತಿಯಿಂದ ಸ್ವಾಗತಿಸಿ, ತಕ್ಕ ಏರ್ಪಾಡುಗಳನ್ನು ಮಾಡಲಿದೆ. ದಲಾಯಿಲಾಮಾರವರನ್ನು ಹಿಡಿಯಲು ಚೀನವು ಪ್ರಯತ್ನಗಳನ್ನು ಬಹುವಾಗಿ ನಡೆಸಿದ್ದರೂ ಅದು ಯಶಸ್ವಿಯಾಗುವುದಕ್ಕೆ ಮೊದಲೇ ಭಾರತದಲ್ಲಿ ಅವರ ಉದಯವಾಯಿತು. ಭಾರತ ಸರಕಾರವು ಈ ವಿಷಯವನ್ನು ಚೀನಕ್ಕೆ ತಿಳಿಸಿದೆ. ಇದಕ್ಕಾವ ರೀತಿಯ ಉತ್ತರ ಬರುವುದೋ ಸ್ಪಷ್ಟವಿಲ್ಲ. ಚೀನಾವು ಇತ್ತೀಚೆಗೆ ಭಾರತದ ವಿರುದ್ಧ ಕೂಗೆಬ್ಬಿಸುವ ಸಾಹಸ ಮಾಡುತ್ತಿದೆ. ಟಿಬೇಟದ ಸ್ಥಿತ್ಯಂತರಕ್ಕೆ ಭಾರತದ ಗಡಿಯ ಕಾಲಿಂಪೋಂಗೇ ಕಾರಣವೆಂದು ಸಾರುತ್ತಿದೆ. ಪ್ರಧಾನಿ ನೆಹರೂ ಈ ಉಲ್ಲೇಖವನ್ನೆಷ್ಟುಬಾರಿ ಖಂಡಿಸಿದರೂ ಚೀನಕ್ಕೂ ನಮ್ಮ ದೇಶದ ಕಮ್ಯುನಿಸ್ಟರಿಗೂ ಇದು ಸರಿಯೆನಿಸಲಿಲ್ಲ. ಇದೀಗ ಲಾಮಾರವರಿಗೀಯುವ ಆಶ್ರಯದಿಂದ, ಚೀನಾ-ಭಾರತಗಳನಡುವಿನ ಸಂಬಂಧವು ಯಾವ ರೀತಿಯಾಗುವುದೋ ಹೇಳುವುದು ಕಷ್ಟ. ಈ ದೇಶಗಳ ಬಾಂಧವ್ಯ ಕೆಡುವುದಕ್ಕೆ ಈ ಆಶ್ರಯದಾನವು ಕಾರಣವಾಗುವುದು ಸಾಧ್ಯವಿಲ್ಲವಾದರೂ ಮಡದಿಯೊಲ್ಲದವನಿಗೆ ಮಜ್ಜಿಗೆಯಲ್ಲಿ ಕಲ್ಲು ಎಂಬಂತಾದರೆ ಮಾತ್ರ ಪರಿಸ್ಥಿತಿ ಚಿಂತಾಜನಕವಾಗಿ ಪರಿಣಮಿಸಬಾರದೆಂದಿಲ್ಲ. ಮಾನವತೆಯ ದೃಷ್ಟಿಯಿಂದ ಈ ವಿಷಯವನ್ನು ತೂಗಿ ನೋಡುವುದು ಅವಶ್ಯವೆಂದು ಸೂಚಿಸದೆ ಇರುವುದು ಅಸಮಂಜಸ.

ಸಂಕ್ಷಿಪ್ತ ಸುದ್ದಿಗಳು

ವರದಕ್ಷಿಣೆಗೆ ಪ್ರತಿಬಂಧ.

ವರದಕ್ಷಿಣೆಯನ್ನೀಯುವ ಮತ್ತು ಸ್ವೀಕರಿಸುವುದನ್ನು ಪ್ರತಿಬಂಧಿಸುವ ಬಗ್ಗೆ ವಿಧೇಯಕದ ಕರಡೊಂದು ತಯಾರಾಗಿದೆ. ಅಲ್ಲದೆ ಸಂಸತ್ತಿನ ಪ್ರಕೃತದ ಅಧಿವೇಶನದಲ್ಲಿಯೇ ಇದು ಮಂಡಿಸಲ್ಪಡಬಹುದು. ಈ ವಿಧೇಯಕದಲ್ಲಿ ವಿವಾಹಿತ ದಂಪತಿಗಳಿಗೆ ಹೆಣ್ಣಿನ ಹೆತ್ತವರು ಕೊಡಬಹುದಾದ ವರದಕ್ಷಿಣೆ ಮತ್ತು ಇತರ ಕೊಡುಗೆಗಳಿಗೆ ಮಿತಿ ಹೇರಲಾಗಿದೆ. ಈ ಮಿತಿಯು ರೂ. ೨,೦೦೦ ವಾಗಿದೆ.

ಕೆಲ ದಿನಗಳಿಗೆ ಮೊದಲು ರಾಜ್ಯಸಭೆಯಲ್ಲಿ ಸರಕಾರೇತರ ಗೊತ್ತುವಳಿಯೊಂದನ್ನು ವರದಕ್ಷಿಣಾ ಪ್ರತಿಬಂಧಕಕ್ಕಾಗಿ ಮಂಡಿಸಿದಾಗ, ಸರಕಾರವು ತಾನೇ ಈ ಬಗ್ಗೆ ಆವಶ್ಯಕ ವಿಧೇಯಕವನ್ನು ತಯಾರಿಸುವುದಾಗಿ ಭರವಸೆಯಿತ್ತಂತೆ, ಸದ್ಯದ ವಿಧೇಯಕವು ಸಿದ್ಧಗೊಂಡು ಅಂತಿಮ ರೂಪವನ್ನು ತಾಳಿ.

ಮಂಗಳೂರಿಗೆ ರೇಲು ಮಾರ್ಗ

ಕಡೂರು, ಚಿಕ್ಕಮಗಳೂರು, ಸಕಲೇಶಪುರ, ಮಂಗಳೂರು ರೇಲು ಮಾರ್ಗ ರಚನೆಯ ಬಗ್ಗೆ ಸರ್ವೆಯನ್ನು ಮಾಡಲಾಗಿದ್ದು ಅದರ ವರದಿಯು ಶೀಘ್ರದಲ್ಲಿಯೇ ಸರಕಾರದ ಕೈಸೇರುವುದೆಂದೂ ಅದು ಹಸ್ತಗತವಾದ ನಂತರ ಮುಂದಿನ ವ್ಯವಸ್ಥೆ ಮಾಡಲಾಗುವುದೆಂದೂ ರೇಲ್ವೆ ಮಂತ್ರಿ ಶ್ರೀ ಜಗಜೀವನರಾಮ್ ಅವರು ಪ್ರಶ್ನೆಯೊಂದನ್ನುತ್ತರಿಸುತ್ತ ಹೇಳಿದರು. ಕರಾವಳಿಯನ್ನು ಮೇಲಿನ ಮಲೆನಾಡುಗಳೊಂದಿಗೆ ಸಂಪರ್ಕಗೊಳಿಸುವ ದೃಷ್ಟಿಯಿಂದ ಈ ರೇಲು ಮಾರ್ಗವು ಆವಶ್ಯಕವಾಗಿದೆ. ಅಲ್ಲದೆ ಮಂಗಳೂರು—ಹಾಸನ ರೇಲು ಮಾರ್ಗದ ರಚನೆಯಾಗಲಿರುವುದೆಂದೂ ಈ ಬಗ್ಗೆ ಸರ್ವೆ ಈ ಮೊದಲೇ ನಡೆದಿದೆ ಎಂದೂ ತಿಳಿದು ಬರುತ್ತದೆ. ಎರಡೂ ರೇಲು ಮಾರ್ಗಗಳ ನಿರ್ಮಾಣವಾಗುವುದೇ ಅಥವಾ ಯಾವುದಾದರೂ ಒಂದೇಯೋ ಎಂದು ಮುಂದೆ ತಿಳಿಯಬೇಕಷ್ಟೆ.

ತಾರಾಸಿಂಗರ ಉಪವಾಸ

ಪಂಜಾಬ ಗುರುದ್ವಾರ (ತಿದ್ದುಪಡಿ) ಕಾಯದೆಯ ವಿಷಯವನ್ನು ವಿರೋಧಿಸಿ, ಕೊನೆಗೆ ಅದನ್ನು ಮಧ್ಯಸ್ಥಿಕೆಗೆ ಒಪ್ಪಿಸಿ ಕೊಡಬೇಕು ಎಂದು ಕೇಳಿಕೊಂಡ ಮಾಸ್ಟರ್ ತಾರಾಸಿಂಗರ ಕೇಳಿಕೆಯನ್ನು ಪ್ರಧಾನಿ ನೆಹರೂ ತಿರಸ್ಕರಿಸಿದ್ದಾರೆ. ವಿಧಾನ ಮಂಡಳವು ಸ್ವೀಕರಿಸಿದ ಕಾಯದೆಯೊಂದನ್ನು ಪಂಚಾಯತಿಗೆ ಒಪ್ಪಿಸಬೇಕೆಂಬುದು ವಿಚಿತವಾಕ್ಯವಾಗಿದೆ. ಇದೇ ಪ್ರವೃತ್ತಿ ಮುಂದುವರಿದರೆ, ಇನ್ನೊಂದು ದಿನ ಸಂವಿಧಾನವನ್ನೂ ಕಿತ್ತುಹಾಕಬೇಕಾಗಿ ಬರಬಹುದು ಎಂದು ಪ್ರಧಾನಿ ನೆಹರೂ ಹೇಳಿದ್ದಾರೆ. ತಾನು ಕೈಗೊಂಡ ಸಂಧಾನ ಪ್ರಯತ್ನಗಳು ಮುರಿದುಹೋದುದರಿಂದ ಸಿಖ ಧರ್ಮಾಭಿಮಾನಿಗಳನ್ನು ತಮ್ಮ ಪಂಥದ ಸ್ವಾತಂತ್ರ್ಯ ಮತ್ತು ರಕ್ಷಣೆಗಾಗಿ ತ್ಯಾಗಕ್ಕೆ ಸಿದ್ಧರಾಗುವಂತೆ ಕೇಳಿಕೊಂಡು ಎಪ್ರಿಲ್ ೧೫ರಿಂದ ತಾರಾಸಿಂಗರು ಅಮರಣ ಉಪವಾಸ ಕೈಗೊಳ್ಳಲಿರುವರು.

ಸಂಸ್ಕೃತ ಖತ್ತಾಯಪಿರಲಿ.

ಸಂಸ್ಕೃತ ಆಯೋಗದ ಶಿಫಾರಸಿನಂತೆ ಸಂಸ್ಕೃತದ ಕೇಂದ್ರ ಮಂಡಳವನ್ನು ರಚಿ

ಅಲ್ಲಲ್ಲಿಯ ಸುದ್ದಿಸಾರ

ಮಂಗಳೂರಲ್ಲಿ ಮೈಸೂರ ಬಿಶೋಪರ ಪಟ್ಟಾಭಿಷೇಕ–ಸಮಾರಂಭವು ತಾ. 31ನೇ ಬೆಳಿಗ್ಗೆ ರುಜಾರಿಯೋ ಇಗರ್ಜಿಯಲ್ಲಿ, ರೈ ಫಾ| ಅರ್. ಫ್ಯೂಗಾರವರ ಸಹಾಯಕ ಬಿಶೋಪರಾಗಿ ನೇಮಕಗೊಂಡ ಮಂಗಳೂರ ವಿಕಾರ್ ಕೆಪಿಟುಲಾರ್ ಆಗಿದ್ದ ರೈ| ರೈ ಮಾ| ಎ. ವಿ. ಡಿ'ಸೋಜರ ಪಟ್ಟಾಭಿಷೇಕ ಸಮಾರಂಭವು ಜರಗಿತು,

ಸಂಜೆ ಚರ್ಚಿನಲ್ಲಿ ಒಂದು ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಪ್ರಾರ್ಥನೆಯ ನಂತರ ಶ್ರೀ ಪಿಂಟೊ, ಎಂ. ಎಲ್. ಎ. ಯವರು ಹೊಸ ಬಿಶೋಪರಿಗೆ ಮಾನಪತ್ರವನ್ನು ಅರ್ಪಿಸಿದರು, ನಂತರ ಸಂದೇಶಗಳನ್ನು ಓದಲಾಯಿತು.

ರೈ| ಅರ್. ಫ್ಯೂಗಾರವರು ಕನ್ನಡದಲ್ಲಿ ಭಾಷಣ ಮಾಡಿದರು. ನಂತರ ರೈ| ರೈ| ಎ. ವಿ. ಡಿ'ಸೋಜರು ಜನತೆಯ ಸಹಕಾರವನ್ನು ಕೋರಿದರು.

ಧನ್ಯವಾದದ ನಂತರ, ಹೊಸ ಬಿಶೋಪರಿಗೆ ಸ್ಥಳೀಯ ಕ್ರೈಸ್ತ ನಾಗರಿಕರಿಂದ ನಿಧಿ ಅರ್ಪಿಸಲಾಯಿತು. ಸಭೆಗೆ ಅನೇಕ ಊರುಗಳ ಬಿಶೋಪರು ಆಗಮಿಸಿದ್ದರು.

ಬಿಶೋಪರಿಗೆ ಸತ್ಕಾರ—ಮೈಸೂರಿನ ಸಹಾಯಕ ಬಿಶೋಪ ಮೊ, ರೆ ಡಾಕ್ಟರ್ ಎ. ವಿ. ಡಿ'ಸೋಜರನ್ನು ಬಿಜೈ ನಾಗರಿಕರು ಬಿಜೈ ಇಗರ್ಜಿಯಲ್ಲಿ ಸತ್ಕರಿಸಿದರು, ನಂತರ ಚರ್ಚಿನ ಪಕಾರದಲ್ಲಿ ಶ ವಿ ಲಿ ಯ ರ್ ಎಲ್. ಸಿ ಪ್ಯಾಸ್ಟರವರು ಹೊಸ ಬಿಶೋಪರಿಗೆ ಮಾನಪತ್ರ ಸಮರ್ಪಿಸಿದರು. ಶ್ರೀ ಜೆ. ಎಂ ಬಿ. ಡಿ'ಸೋಜರು ಹೂಮಾಲೆ ಹಾಕಿದರು ಬಿಜೈನ ಕ್ರೈಸ್ತ ನಾಗರಿಕರ ಪರವಾಗಿ ಅಲ್ಲಿನ ಗುರುಗಳಾದ ರೆ. ಫಾ. ಜೆ. ಸಿ. ನಜ್ರೆತ್‌ರವರು ಹೊಸ ಬಿಶೋಪರಿಗೆ ಕಾಣಿಕೆಯೊಂದನ್ನು ಸಮರ್ಪಿಸಿದರು ಹೊಸ ಬಿಶೋಪರು ಸಂದರ್ಭಾನುಸಾರ ಭಾಷಣ ಮಾಡಿದರು.

ಸಿ ಆದಕ್ಕೆ ವಿಶ್ವವಿದ್ಯಾಲಯ ಸಹಾಯಧನ ಆಯೋಗದಂತೆ ಅಧಿಕಾರವೀಯಬೇಕು. ಮತ್ತು ಸಂಸ್ಕೃತದ ಬೆಳವಣಿಗೆಯ ಮಟ್ಟಿಗೆ ವಿನಿಯೋಗಿಸುವುದಕ್ಕೆ ಸಾಕಷ್ಟು ಹಣವೀಯಬೇಕು; ಸಂಸ್ಕೃತದ ಅಭ್ಯಾಸವನ್ನು ಮಾಧ್ಯಮಿಕ ಹಂತದಲ್ಲಿ ಖಡ್ಡಾಯವನ್ನಾಗಿ ಮಾಡಬೇಕು ಎಂದು ಪುರಿಯಲ್ಲಿ ಸೇರಿದ್ದ ಸಂಸ್ಕೃತ ವಿಶ್ವಪರಿಷತ್ತು ಗೊತ್ತುವಳಿಗಳನ್ನು ಸ್ವೀಕರಿಸಿದೆ. ಸಂಸ್ಕೃತವು ಖಡ್ಡಾಯವಿರದಿದ್ದರೆ, ಭಾರತೀಯನು ಅವಶ್ಯಕ ಮಾನಸಿಕ ಶಿಸ್ತು, ಸಾಂಸ್ಕೃತಿಕ ಹಾಗೂ ನೈತಿಕ ಹಿನ್ನೆಲೆಗಳನ್ನು ಸಂಪಾದಿಸಲು ಶಕ್ತನಾಗಲಾರನು ಎಂದು ಉಲ್ಲೇಖಿಸಲಾಗಿದೆ. ಇನ್ನೂ ಕೆಲವು ವಿಶ್ವವಿದ್ಯಾಲಯಗಳು ಸಂಸ್ಕೃತವಿದ್ಯಾಪೀಠಗಳನ್ನು ಸ್ಥಾಪಿಸದಿರುವ ಬಗ್ಗೆ ಪರಿಷತ್ತು ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿದೆ.

ಬಸವ ಕಲ್ಯಾಣ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ತಿನ ೪೧ನೆಯ ಅಧಿವೇಶನವು ಬಸವ ಕಲ್ಯಾಣದಲ್ಲಿ ಮೇ ೧೫ರಿಂದ ಮೂರು ದಿನಗಳ ವರೆಗೆ ನಡೆಯಲಿರುವುದು. ಕೇಂದ್ರ ಗೃಹಶಾಖಾ ಮಂತ್ರಿ ಶ್ರೀ ಬಿ. ಎನ್. ದಾತಾರರು ಸಮ್ಮೇಳನವನ್ನು ಉದ್ಘಾಟಿಸುವರಲ್ಲದೇ ಶ್ರೀ ಡಿ. ಎಲ್. ನರಸಿಂಹಾಚಾರ್ ಅವರು ಅಧ್ಯಕ್ಷತೆಯನ್ನು ವಹಿಸಲಿರುವರು. ವರು. ಬೀದರ ಜಿಲ್ಲೆಯ ಸುತ್ತುಮುತ್ತಲೂ ಮರಾಠಿ ಮತ್ತು ತೆಲುಗು ಭಾಷೆಯ ಪ್ರಚಾರ ಬಹಳವಾಗಿರುವುದರಿಂದ ಆ ಪ್ರದೇಶದಲ್ಲಿ ಕನ್ನಡದ ಪ್ರಚಾರ ಮಾಡುವ ಉದ್ದೇಶದಿಂದ ಈ ಬಸವ ಕಲ್ಯಾಣದಲ್ಲಿ ಅಧಿವೇಶನವನ್ನು ಕರೆಯಲಾಗಿದೆ. ಅಲ್ಲದೇ ಸಮ್ಮೇಳನದ ವೇಳೆಗೆ ಬಸವ ಜಯಂತಿಯ ಸಮಾರಂಭವಿದ್ದು ಅದರಲ್ಲಿ ಕನ್ನಡದ ಪ್ರಚಾರವು ಪರಿಣಾಮಕಾರಿ ಆಗುವ ನಿರೀಕ್ಷೆಯೂ ಇದೆ.

ಕಲಾವಿದರಿಗೆ ಜಿಲ್ಲಾಧಿಕಾರಿಗಳ ಹಿತೋಕ್ತಿ–ದ. ಕ. ಜಿಲ್ಲಾ ಮಹೋತ್ಸವ ಮತ್ತು ವಸ್ತುಪ್ರದರ್ಶನದ ಸಂದರ್ಭದಲ್ಲಿ, ದ. ಕ. ಜಿಲ್ಲಾ ಸಂಗೀತ ನಾಟಕ ಅಕಾಡೆಮಿಯವರಿಂದ ಅಣಿಗೊಳಿಸಲ್ಪಟ್ಟ ಮನರಂಜನೀಯ ಕಾರ್ಯಕ್ರಮದಲ್ಲಿ ಕೆಲಸಮಾಡಿದ ಕಲಾವಿದರನ್ನು ತಾ ೬ನೇ ಸಂಜೆ 'ಮೋಹಿನಿ ವಿಲಾಸ' ದಲ್ಲಿ ಶ್ರೀ ವ್ಹಾ. ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ಸತ್ಕರಿಸಲಾಯಿತು. ಆರಂಭದಲ್ಲಿ ಅಕಾಡೆಮಿಯ ಕಾರ್ಯದರ್ಶಿ ಶ್ರೀ ಶ್ರೀನಿವಾಸ ಉಡುಪರಿಂದ ಸ್ವಾಗತ ಭಾಷಣಾನಂತರ, ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾವಿದರಿಗೆ ಧನ್ಯವಾದ ಪತ್ರಗಳನ್ನು ಶ್ರೀ ಹೊಂಬಾಳಯ್ಯನವರು ವಿತರಣೆ ಮಾಡಿದರು. ಅವರು ತಮ್ಮ ಅಧ್ಯಕ್ಷಪೀಠದಿಂದ "ಕಲೆಯನ್ನು ಬೆಳೆಸಲು ಕಲಾವಿದರು ಒಗ್ಗಟ್ಟಾಗಿ ದುಡಿಯಬೇಕು, ಗ್ರಾಮ್ಯ ಕಲೆಯನ್ನು ಕಲಾವಿದರು ಪ್ರಕಾಶಗೊಳಿಸಬೇಕು" ಎಂದು ಹೇಳಿದರು. ಕೊನೆಯಲ್ಲಿ ಅಕಾಡೆಮಿಯ ಉಪಾಧ್ಯಕ್ಷ ಶ್ರೀ ಬಿ. ಅಪ್ಪಯ್ಯನವರಿಂದ ಧನ್ಯವಾದವಾಯಿತು

ಜಿಲ್ಲಾ ಕಾಂಗ್ರೆಸ್ ಸಮಿತಿ ಮಹಾಸಭೆಯು ಇದೇ ತಾ. ೧೧ನೇ ಶನಿವಾರ ಮಧ್ಯಾಹ್ನ 8 ಗಂಟೆಗೆ ಮಂಗಳೂರಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಜರಗಲಿರುವುದು. ಈ ಸಭೆಯಲ್ಲಿ ಲ್ಯಾಂಡ್ ರಿಫಾರ್ಮ್ ಬಿಲ್, ಮಧ್ಯಪಾನ ನಿಷೇಧ, ಪಂಚಾಯತ್ ಮತ್ತು ತಾಲೂಕ್ ಬೋರ್ಡ್ ಬಿಲ್‌ಗಳ ಕುರಿತು ಪರ್ಯಾಲೋಚನೆ ಜರಗಲಿರುವುದು.

ವಿದೇಶೀಪತ್ರ ಮತ್ತು ಪಾರ್ಸೆಲು ಅಂಚೆ ದರಗಳು—ತಾ ೧.೪.೧೯೫೯ರಿಂದ ಬದಲಾಯಿಸಲ್ಪಟ್ಟಿವೆ ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಮೀಪದ ಅಂಚೆ ಅಫೀಸಿನಿಂದ ಪಡೆಯಬಹುದು

ವಿಜಯಾ ಬ್ಯಾಂಕಿನ—ಭಟ್ಕಳ ಶಾಖೆಯು ತಾ. ೪ರಲ್ಲಿ ತೆರೆಯಲ್ಪಟ್ಟಿರುವುದು. ಶಾಖೆಯ ಉದ್ಘಾಟನೆಯನ್ನು ಶ್ರೀ ಪಿ. ವಿ. ನಾಯಕ್, ಪ್ರೆಸಿಡೆಂಟ್—ಭಟ್ಕಳ ಮುನಿಸಿಪಾಲಿಟಿ, ಇವರು ನೆರವೇರಿಸಿದರು. ಜನಾಬ್ ಎಂ. ಎಚ್. ಅಬ್ದುಲ್ ಗಫೂರ್ ಸಾಹೇಬ್ ಇವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು

ಶ್ರೀ ತಿರುಮಲೇಶ್ವರ ಭಟ್ಟರ ನಿಧನ ಜಿಲ್ಲೆಯ ಖ್ಯಾತ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎ. ಜಿ. ತಿರುಮಲೇಶ್ವರ ಭಟ್ಟರು ತಾ. ೨ರ ರಾತ್ರಿ ನಿಧನರಾದರು. ಕೇವಲ ೪೧ ವರ್ಷದ ಶ್ರೀ ಭಟ್ಟರು ಕಳೆದ ಮೂರು ತಿಂಗಳಿಂದ ಅನಾರೋಗ್ಯದಿಂದಿದ್ದರು ಶ್ರೀ ಭಟ್ಟರು ಜಿಲ್ಲೆಯ ಹಳೆಯ ಕಾಂಗ್ರೆಸಿಗರು. ೧೯೪೦ರ ಸತ್ಯಾಗ್ರಹ ಹಾಗೂ ೧೯೪೨ರ ಚಳವಳದಲ್ಲೂ ಭಾಗವಹಿಸಿ ಜೇಲಿಗೆ ಹೋಗಿದ್ದರು ಶ್ರೀಯುತರು ಅನೇಕ ಜನಹಿತ ಕಾರ್ಯಗಳಲ್ಲಿ ಭಾಗವಹಿಸಿ ಪ್ರಸಿದ್ಧಿ ಪಡೆದಿದ್ದರು.

ಬೆಳ್ತಂಗಡಿ ..ನಾಲಾಡಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ "ಶಾಲಾ ದಿನ"ವು, ತಾ. ೩೧ ೩—೫೯ರಂದು ಜಿಲ್ಲಾ ಬೋರ್ಡ್ ಸದಸ್ಯ ಶ್ರೀ. ಡಾ| ಬಿ. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು,

ಪುತ್ತೂರು ಡಿವಿಜನಿನ ಆಹಾರೋತ್ಪಾದನೆ—ಈ ವಿಷಯದಲ್ಲಿ ಏರ್ಪಡಿಸಿದ ತಾಳಮದ್ದಲೆ ಸಮಿತಿಯವರು, "ನಮ್ಮ ನಾಡ ಕಲೆಯಾದ ಯಕ್ಷಗಾನ ಕಲೆಯ ಚೈತನ್ಯದ ಮೂಲಕ, ಇಂದಿನ ಅಧಿಕ ಆಹಾರೋತ್ಪಾದನೆಯ ಪ್ರಚಾರವನ್ನು ಸಾಧಿಸಬಹುದೆಂಬ ದೃಷ್ಟಿಯಿಂದ ಒಂದು ಸುಧಾರಿತ ಯಕ್ಷಗಾನ ತಾಳಮದ್ದಲೆಯ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಲೇಖಕರು ಒಂದು ಗಂಟೆಯೊಳಗೆ ಪ್ರದರ್ಶಿಸಲು ಯೋಗ್ಯವಾದ ಆಹಾರೋತ್ಪಾದನೆಯ ಯಕ್ಷಗಾನ ಪ್ರಸಂಗಗಳನ್ನು ಬರೆದು ತಾ. ೧೪-೪-೫೯ರ ಒಳಗೆ ಪುತ್ತೂರು ಬಿ ಡಿ ಒ. ಆಫೀಸಿಗೆ ಕಳುಹಿಸಿಕೊಡಬೇಕು. ಉತ್ತಮವಾದ ಕೃತಿಗೆ ಚಿನ್ನದ ಪದಕವನ್ನು ಬಹುಮಾನಿಸಲಾಗುವುದು. ತಾ. ೨೨-೪-೫೯ನೇ ರಾತ್ರಿ ೯ ಗಂಟೆಗೆ ಬಹಿರಂಗವಾಗಿ ಪುತ್ತೂರು ಕೋರ್ಟ್ ಮೈದಾನದಲ್ಲಿ ಬೇರೆ ಬೇರೆ ಕೂಟಗಳನ್ನು ಕರೆದು ಸ್ಪರ್ಧೆ ನಡೆಸುವುದು ಪ್ರಥಮಸ್ಥಾನಪಡೆದ ಕೂಟಕ್ಕೆ 'ರೋಲಿಂಗ್ ಕಪ್'ನ್ನು ಬಹುಮಾನಿಸುವುದು. ಆ ಕೂಟದ ಪ್ರತಿಯೊಬ್ಬರಿಗೂ ಒಂದೊಂದು ಪದಕ ಬಹುಮಾನವಾಗಿ ದೊರಕುವುದು ಎರಡನೆ ಸ್ಥಾನ ಪಡೆದ ಕೂಟದವರಿಗೆ ಒಂದೊಂದು ಪದಕ ಬಹುಮಾನವಾಗಿ ದೊರಕುವುದು. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಯಕ್ಷಗಾನ ಕೂಟಗಳು ತಾ ೧೨—೪—೫೯ರ ಒಳಗೆ ಪುತ್ತೂರು ಬಿ. ಡಿ. ಒ. ರವರಿಗೆ ಅರ್ಜಿಗಳನ್ನು ಕಳಿಸಬೇಕೆಂದು" ಪುತ್ತೂರಿನ ಅಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ಎಸ್. ತಿಮ್ಮಪ್ಪಶೆಟ್ಟರು ತಿಳಿಸುತ್ತಾರೆ.

ಆದಿವುಡುಪಿ—ತಾ. 3.4.59ರಲ್ಲಿ ಆದಿವುಡುಪಿ ಕಿರಿಯ ಬುನಾದಿ ಹಾಗೂ ದಾ| ಎ| ಶಾಲೆಯಲ್ಲಿ ಸರಕಾರದಿಂದ ಕೊಡಲ್ಪಟ್ಟ ಹಲವಾರು ವೇತನಗಳನ್ನು, ಮಕ್ಕಳಿಗೀಯುವ ಸಮಾರಂಭವು ಬನ್ನಂಜೆ ವಾರ್ಡಿನ ಕೌನ್ಸಿಲರಾದ ಶ್ರೀಮತಿ ಓ. ರಾಜಮ್ಮ ಇವರ ಹಿರಿತನದಲ್ಲಿ ನಡೆಯಿತು. ಆದರೊಂದಿಗೆ 8ನೆಯ ಮಕ್ಕಳನ್ನು ಬೀಳ್ಕೊಡುವ ಸಮಾರಂಭವೂ ನಡೆಯಿತು.

ರ್‍ಯಾಂಗ್ಲರ್ ಪಾವಟೆಯವರ ೬೧ನೇ ಜನ್ಮದಿನೋತ್ಸವ— ಭಾರತದ ವಿಖ್ಯಾತ ಶಿಕ್ಷಣ ತಜ್ಞರೂ, ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳೂ ಆದ ರ್‍ಯಾಂಗ್ಲರ್ ಡಿ. ಸಿ ಪಾವಟೆಯವರ ೬೧ನೇ ಜನ್ಮದಿನೋತ್ಸವವನ್ನು ವಿಜೃಂಭಣೆಯಿಂದ ಆಚರಿಸಬೇಕೆಂದು ಅವರ ಹಿತಚಿಂತಕರು ಗೊತ್ತುಪಡಿಸಿದ್ದಾರೆ ಇದರ ಅಂಗವಾಗಿ ಅವರ ಸೇವೆಯ ಪ್ರತೀಕವಾಗಿ ಶ್ರೀ ಪಾವಟೆಯವರಿಗೆ ಒಂದು ಉದ್‌ಗ್ರಂಥವನ್ನು ಉಡುಗೊರೆಯಾಗಿ ಅರ್ಪಿಸಬೇಕೆಂದು ನಿರ್ಧರಿಸಲಾಗಿದೆ. ಈಬಗೆಯಲ್ಲಿ ಸಂಗ್ರಹಿಸಿದ ಹಣವನ್ನು ಸಮಾರಂಭ ಹಾಗೂ ಗ್ರಂಥ ಪ್ರಕಟಣೆಗೆ ಉಪಯೋಗಿಸಿ ಉಳಿದುದನ್ನು ಶ್ರೀ ಪಾವಟೆಯವರ ಹೆಸರಿನಿಂದ ಶಿಷ್ಯವೇತನವನ್ನು ನಿರ್ಮಿಸಲಾಗುವುದು. ಈ ಸಮಾರಂಭಕ್ಕಾಗಿ ಎಲ್ಲರೂ ಆರ್ಥಿಕ ನೆರವಿತ್ತು, ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಸ್ವಾಗತಸಮಿತಿಯ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಸಾರ್ವಜನಿಕರನ್ನು ಕೇಳಿಕೊಳ್ಳುತ್ತಾರೆ.

ಕಿದಿಯೂರು-ಕಿರಿಯ ಬುನಾದಿ ಮತ್ತು ಪ್ರೌಢ ಪ್ರಾಥಮಿಕಶಾಲೆಯಲ್ಲಿ ತಾ. ೪-೪-೫೯ರ ಪೂರ್ವಾಹ್ನ ೧೦ ಘಂಟೆಗೆ ಸರಿಯಾಗಿ, ಶ್ರೀ. ಆರೂರು ಲಕ್ಷ್ಮೀನಾರಾಯಣ ರಾವ್, ಬಿ. ಎ. ಬಿ. ಎಲ್. ಇವರ ಹಿರಿತನದಲ್ಲಿ ವಿದ್ಯಾರ್ಥಿ ವೇತನ ಮತ್ತು ವಿದ್ಯಾರ್ಥಿನಿಯರ ಹಾಜರಿ ವೇತನ ವಿತರಣೋತ್ಸವವು ಜರಗಿತು. ಉಡುಪಿ ಉತ್ತರ ಶ್ರೇಣಿಯ ಹಿರಿಯ ಪರೀಕ್ಷಾಧಿಕಾರಿಗಳಾದ ಶ್ರೀ ಎನ್ ವಿಶ್ವನಾಥ್, ಬಿ. ಎ. ಬಿ. ಟಿ.ಯವರೂ ಉಪಸ್ಥಿತರಿದ್ದರು. ಪ್ರಾರ್ಥನಾ ನಂತರ ಸ್ವಾಗತ ಗೀತೆ, ಸ್ವಾಗತ ಭಾಷಣಗಳಾದುವು ಶ್ರೀ ಎನ್ ಶ್ರೀಶ ಬಲ್ಲಾಳ್, ಎಂ. ಎ.ರವರು ಅಬ್ರಹಾಮಲಿಂಕನರ ಭಾವಚಿತ್ರವನ್ನು ಅನಾವರಣಗೊಳಿಸಿದರು. ಶ್ರೀಮತಿ ಆರೂರು ಲಕ್ಷ್ಮೀನಾರಾಯಣ ರಾಯರು ವಿದ್ಯಾರ್ಥಿ ವೇತನ ಮತ್ತು ವಿದ್ಯಾರ್ಥಿನಿಯರ ಹಾಜರಿ ವೇತನಗಳನ್ನು ವಿತರಣೆಗೈದರು. ಅಧ್ಯಕ್ಷರ ಭಾಷಣಾನಂತರ ಶಾಲೆಯ ಮುಖ್ಯೋಪಾಧ್ಯಾಯರಿಂದ ಧನ್ಯವಾದ ಅರ್ಪಿತವಾಯಿತು. ಮನರಂಜನಾ ಕಾರ್ಯಕ್ರಮವಾದ ಬಳಿಕ ಮಂಗಲ ಗೀತೆಯೊಂದಿಗೆ ಅಂದಿನ ಸಭೆ ಚದುರಿತು.

ಪಡುಕರೆ ಯುವಕ ಸಂಘದ ವಾರ್ಷಿಕೋತ್ಸವವು ತಾ ೪ರಂದು ಶ್ರೀ ಯು. ಕೃಷ್ಣಪ್ಪ ಸಾಹುಕಾರರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರ ಆಯ್ಕೆ, ವರದಿವಾಚನ, ಮಾನಪತ್ರ ಸಮರ್ಪಣೆ. ಸಭಿಕರ ಭಾಷಣ, ಅಧ್ಯಕ್ಷರ ಭಾಷಣವಾದ ತರುವಾಯ ಮನರಂಜನೀಯ ಕಾರ್ಯಕ್ರಮಗಳು ಜರಗಿದುವು.

ವಿಮಾಕ್ಷೇತ್ರಾಧಿಕಾರಿಗಳ ಸಮ್ಮೇಲನ.–ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನಿನ ಉಡುಪಿ ಶಾಖೆಯ ಕ್ಷೇತ್ರಾಧಿಕಾರಿಗಳ ಸಮ್ಮೇಲನವೊಂದು ಕಳೆದ ತಾ.೨೬ ರಂದು ಬೊಂಬೇ ಲೈಫ್ ಕಟ್ಟಡದಲ್ಲಿ ಜರಗಿತು ಶ್ರೀ ಇ. ಯು. ಜಾಕೋಬರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಟಿ ಸಿ. ಎನ್ ನಂಬಿಯಾರರು ಸ್ವಾಗತ ಭಾಷಣಮಾಡಿ ಕಾರ್ಯ ಸಾಧನೆಯ ವಿವರವಿತ್ತು ಮುಂದಿನ ಕಾರ್ಯಕ್ರಮವನ್ನು ಸೂಚಿಸಿದರು, ನಂತರ ಪರಸ್ಪರ ವಿಚಾರವಿನಿಮಯ ನಡೆಸಲಾಯಿತು, ಅಧ್ಯಕ್ಷರ ಭಾಷಣಾನಂತರ, ಶ್ರೀ ವಿ. ಆರ್. ಪರ್ಮರ್ಲೊ ಶ್ರೀ ಟಿ ಸಂಜೀವಪ್ಪಗಳೂ ಧನ್ಯವಾದವಿತ್ತರು.

ಜಾಗತಿಕ ಆರೋಗ್ಯ ದಿನಾಚರಣೆಯು ತಾ. ೭ನೇ ಬೆಳಿಗ್ಗೆ ಉಡುಪಿ ಮಹಾತ್ಮಾ ಗಾಂಧಿ ಬೇಸಿಕ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಡಾ. ಕೆ. ಎಲ್. ಐತಾಳರಿಂದ ಜಾಗತಿಕ ಆರೋಗ್ಯದಿನದ ಘೋಷಣೆಯೊಂದಿಗೆ ಆಚರಿಸಲ್ಪಟ್ಟಿತು ಶ್ರೀಮತಿ ಲೀಲಾ ಭಂಡಾರಿಯವರು ಅಧ್ಯಕ್ಷತೆ ವಹಿಸಿದ್ದರು. ಸಂಜೆ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್‌ನಲ್ಲಿ ಡಿ ಮುನ್ಸಿಫ್ ಶ್ರೀ ಟಿ. ಎಸ್. ನಾಗವೋತಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಡಾ. ಎಂ. ವಿ. ಚಾರಿ ಡಾ. ಇ. ಅನಂತರಾವ್ ಇವರು ಮಾನಸಿಕ ಆರೋಗ್ಯದ ಕುರಿತು ಭಾಷಣವಿತ್ತರು ಅಧ್ಯಕ್ಷರು ತಮ್ಮ ಮೃದುಮಧುರ ವಾಣಿಯಲ್ಲಿ ಬೋಧಪ್ರದ ಭಾಷಣವಿತ್ತ ಮೇಲೆ ಕನ್ವೀನರ್ ಡಾ. ವಿ. ಎಲ್ ಪಂಡಿತರು ಧನ್ಯವಾದಗಳನ್ನಿತ್ತರು. ಇವರು ಸಭಾರಂಭದಲ್ಲಿ ಪ್ರಸ್ತಾವನಾ ಭಾಷಣವನ್ನೂ ಮಾಡಿದ್ದರು.

ಮಂತ್ರಿ ರಾಚಯ್ಯನವರು – ಮೈಸೂರು ಸರ್ಕಾರದ ಸಾಮಾಜಿಕ ಹಿತಚಿಂತನೆ, ಎಕ್ಸೈಜ್ ಮತ್ತು ಪಾನನಿರೋಧ ಶಾಖೆಗಳ ಮಂತ್ರಿ ಎನ್. ರಾಚಯ್ಯನವರು ತಾ ೭ರಂದು ನಮ್ಮ ಜಿಲ್ಲೆಗೆ ಬಂದಿದ್ದು ತಾ ೯ರ ತನಕ ಜಿಲ್ಲೆಯಲ್ಲಿ ಸಂಚರಿಸಲಿರುವರು.

ಭೂ ಸಮಸ್ಯೆಗಳ ವಿಷಯಕ ವಿಚಾರಗೋಷ್ಠಿಯನ್ನು ತಾ. ೬ರಲ್ಲಿ ಮಾಜೀ ಮಂತ್ರಿ ಶ್ರೀ ಎ ಬಿ. ಶೆಟ್ಟರು ಉದ್ಘಾಟಿಸುತ್ತ ಬಲಾತ್ಕಾರದ ಭೂಸುಧಾರಣೆ ಬೇಡವೆಂದೂ, ಒತ್ತಾಯದ ಭೂಸುಧಾರಣೆ ತಂದಲ್ಲಿ ಅದರಿಂದ ಗ್ರಾಮಾಂತರಗಳಲ್ಲಿ ಬಿಕ್ಕಟ್ಟು ತಲೆದೋರಬಹುದೆಂದೂ ಹೇಳಿದರು. ಶ್ರೀ ಪಿ. ರೆಬೆಲ್ಲೊ, ಶ್ರೀ ಕೆ. ಬಿ ಜಿನರಾಜ ಹೆಗ್ಡೆ, ಶ್ರೀ ಇ. ಪಿ. ಸಿಲ್ದಾನ ಇವರು ವಿಚಾರಗೋಷ್ಠಿಯಲ್ಲಿ ಭಾಗವಹಿಸಿ ಭೂ ಸಮಸ್ಯೆಯನ್ನು ಕುರಿತು ಭಾಷಣವಿತ್ತರು.

ಹಿಂದೀ ಪ್ರಮಾಣ ಪತ್ರ ವಿತರಣೋತ್ಸವವು—ಉಡುಪಿ ಮಹೇಂದ್ರ ಕಲಾ ಮಂದಿರದಲ್ಲಿ ಡಾ| ಆರ್. ವಿ. ಕೊಪ್ಪೀಕರ್ ಇವರ ಆಧ್ಯಕ್ಷತೆಯಲ್ಲಿ ತಾ ೫ರಂದು ಜರಗಿತು ಶ್ರೀ ಟಿ. ಎ ಪೈಗಳು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀ ಸಿ, ಮಹಾಬಲ ನಾಯಕರು ವರದಿಯನ್ನೋದಿದರು ಶ್ರೀ ಶಂಕರ ಭಟ್ಟರು ಸಂದೇಶವಾಚನ ಮಾಡಿದರು. ಪ್ರಮಾಣಪತ್ರ ಮತ್ತು ಬಹುಮಾನ ವಿತರಣೆ, ಸಭಾಧ್ಯಕ್ಷರ ಭಾಷಣಗಳಾದ ಮೇಲೆ ಮನರಂಜನೆಯ ಕಾರ್ಯಕ್ರಮಗಳಾದುವು. ಶ್ರೀ ಶಂಕರ ಭಟ್ಟರು ಆಭಾರ ಸೂಚಿಸಿದರು.

ಗೋವಿಜಯ
(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—3—0
ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳುಹಿಸಬೇಕು ಸಂ. ನ.)

ಶೋಭನ ಗೀತೆ— ಕವಿ: ಪುಂಡೂರು ದಾಮೋದರ ಪುಣಿಂಚತ್ತಾಯ. ಪ್ರಕಾಶಕರು. ವಿಶ್ವರೂಪ ಸಾಹಿತ್ಯ ವಿಸ್ತರಣ, ಪುಂಡೂರು (ಅಂಚೆ) ನೆಕ್ರಾಜೆ ಪೆರಡಾಲ, ದ ಕ ಪುಟಗಳು ೪೦ ಬೆಲೆ ರೂ ೦-೧೨-೦.

ಉಪನಯನ, ವಿವಾಹ, ಶ್ರೀಮಂತ ಮುಂತಾದ ಧಾರ್ಮಿಕ ಸಮಾರಂಭಗಳಲ್ಲಿ ಶೋಭನ ಗೀತೆಗಳನ್ನು ಹಾಡುವುದು ನಮ್ಮ ಸಂಪ್ರದಾಯವಾಗಿದೆ ಹಿಂದೆ ಇಂತಹ ಗೀತೆಗಳನ್ನು ಕಂಠಗತವಾಗಿಯೇ ಪ್ರಚಾರ ಮಾಡುತಿದ್ದರೂ, ಅಚ್ಚಿನ ಸೌಲಭ್ಯ ದೊರೆತನಂತರ, ಉಳಿದ ಸಾಹಿತ್ಯ ಪ್ರಕಾರಗಳು ಬೆಳೆದು ಬಂದಷ್ಟು ಈ ಶೋಭನ ಗೀತೆಗಳು ವಿಕಸಿತಗೊಳ್ಳಲಿಲ್ಲ. ಮೊದಮೊದಲು ಉತ್ಸಾಹ ಪೂರಿತವಾಗಿ ಹಾಡುತಿದ್ದ ಈ ಹಾಡುಗಳು ಕ್ರಮೇಣ ಮಾನವನು ಬೌದ್ಧಿಕವಾದದತ್ತ ಒಲಿಯತೊಡಗಿದಾಗ ಯಾಂತ್ರಿಕ ಕಾರ್ಯಾಚರಣೆಗೆ ಗುರಿಯಾಗಿ, ಈಗೀಗ ನೆಲಸಮವಾಗುತ್ತ ಬಂದಿರುವುದು ಗೋಚರವಾಗುತ್ತವೆ ಇದಕ್ಕೆ ಹಲವಾರು ಕಾರಣಗಳಿರಬಹುದು ಕೆಲ ವರ್ಷಗಳ ಹಿಂದೆ ಮನೆ ಮನೆಯಲ್ಲಿ ಪುರಂದರ, ಕನಕಾದಿ ದಾಸವರ್ಯರ ಕೀರ್ತನೆಗಳನ್ನು ಹಾಡುತಿದ್ದರೆ, ಇಂದಿನ ದಿನಗಳಲ್ಲಿ ರೇಡಿಯೋ, ಸಿನೆಮಾ ಸಂಗೀತವನ್ನು ಹಾಡುತ್ತಿರುವುವನ್ನು ಕೇಳಿಯೋ ಆನಂದ ತನ್ಮಯರಾಗುತ್ತಾರೆ ಇದರ ಸೌಲಭ್ಯ ದೊರೆಯದೆ ಹೋದರೂ ಒಂದಾಣೆಗೆ ಸಿಗುವ ಸಿನೆಮಾ ಪದ್ಯಾವಳಿಯನ್ನು ಕಂಠಗತ ಮಾಡಿಕೊಳ್ಳುವತ್ತ ಮನ ಹರಿಯುತ್ತದೆ ಹೀಗೆಯೇ ಅನೇಕಾನೇಕ ಕಾರಣಗಳಿಂದ ಮರೆಯಾಗಿರುವ ಈ ಶೋಭನ ಗೀತೆಗಳೂ ನಮ್ಮ ಸಾಹಿತ್ಯದ ಬಗೆಗಳಲ್ಲಿ ಒಂದೆಂದು ಹೇಳುವುದು ಸರಿಯೇ ಆಗಿದೆ ಜಾನಪದ ಗೀತೆಗಳಿಗೆ ಪ್ರಾಶಸ್ತ್ಯ ಆಸಕ್ತಿ ಹೆಚ್ಚುತ್ತಿರುವ ಈ ಕಾಲದಲ್ಲಿ ಅವುಗಳಿಗೆ ಸಮಜೋಡಿಯಾಗಿ ನಿಲ್ಲಲು ಶಕ್ತವಾದ ಶೋಭನ ಗೀತೆಗಳೂ ಬೆಳಕು ಕಾಣುವುದು ಅವಶ್ಯ ಎಂತಲೇ ಪ್ರಕೃತ ಈ ಪ್ರಕಾಶನವು ಆ ದಾರಿಯಲ್ಲಿ ನಡೆದ ಪ್ರಯತ್ನವೊಂದೆನ್ನಬಹುದು

ಕವಿ ದಾಮೋದರ ಪುಣಿಂಚತ್ತಾಯರು ರಚಿಸಿದ ಈ ಗೀತೆಗಳಲ್ಲಿ ಕಾವ್ಯಗುಣಗಳೂ ತುಂಬಿಕೊಂಡಿದ್ದು ಅವು ಅರ್ಥಗರ್ಭಿತವಿವೆ. ಶಬ್ದಾಲಂಕಾರ ಅರ್ಥಾಲಂಕಾರಗಳೂ ಪದಲಾಲಿತ್ಯ, ಪ್ರಸಾದ ಗುಣಗಳೂ ಇದ್ದಿರುವ ಗೀತೆಗಳಲ್ಲಿ ಕಂಡುಬರುತ್ತವೆ ಗೀತೆಗಳಲ್ಲಿ ಸರಳ ಸಂಸ್ಕೃತ ಪದಗಳು ಹೇರಳವಾಗಿ ತುಂಬಿಬಂದಿವೆ ಆಯಾಯ ಸಂದರ್ಭಕ್ಕೆ ಅನುಗುಣವಾದ ಪದ್ಯಗಳು ಸೇರಿವೆ. 'ಉಪನಯನ' ಸಂಸ್ಕಾರದಲ್ಲಿ ವಟುವಿಗೆ ಉಪದೇಶಿಸುವ ಪದ್ಯವೊಂದನ್ನು ಇವೆಲ್ಲಕ್ಕೂ ಉದಾಹರಣೆಯಾಗಿ ಕೊಡಬಹುದು

ಬ್ರಹ್ಮಚಾರಿಯು ನೀನು! ನಿನಗಿದು
ಧರ್ಮ ರಕ್ಷೆಗಧರ್ಮ ಶಿಕ್ಷೆಗೆ
ಕರ್ಮ ಸಾಧನೆಗಿರುವ ದಂಡವಿ
ದೊಮ್ಮನದಿ ಸ್ವೀಕರಿಸು

ಇದೇ ರೀತಿಯ ಪದ್ಯಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ ಮೊದಲನೆಯ ಭಾಗದಲ್ಲಿ ಪ್ರಾರ್ಥನೆ, ಜೋಗಾಳ, ಕ್ಷೀರಪಾನ, ಅನ್ನಪ್ರಾಶನ ಚೌಲದ ಹಾಡು, ಅರಸಿನೆಂಣೆ, ಉಪನಯನ, ಭಿಕ್ಷಾಯಾಚನೆ ಮತ್ತು ಸಮಾವರ್ತನೆ ಎಂಬ ಒಂಬತ್ತು ವಿಭಾಗಗಳಿವೆ. ಎಂದರೆ, ಇದರಲ್ಲಿ ಗಂಡು ವಿದ್ಯಾಭ್ಯಾಸವನ್ನು ಪೂರೈಸಿ ಬರುವವರೆಗಿನ ವಿವಿಧ ಕರ್ಮಗಳ ಸಂದರ್ಭದಲ್ಲಿ ಹಾಡಬಹುದಾದ ಪದ್ಯಗಳಿವೆ ಎರಡನೆಯದು ಮುಖ್ಯವಾಗಿ ವಿವಾಹ ಮತ್ತು ಸೀಮಂತಗಳಿಗೆ ಸಂಬಂಧಿಸಿದುದು. ಈ ಅವಸರಗಳ ಪ್ರತಿಯೊಂದು ಅಂಗಗಳಲ್ಲೂ ಹಾಡಲು ಯೋಗ್ಯವಾದ ಶೋಭನ ಗೀತೆಗಳು ಇಲ್ಲಿವೆ ಕೆಲವೆಡೆ ಈ ಶೋಭನ ಗೀತೆಗಳು ಕಾವ್ಯ ಮಟ್ಟವನ್ನೂ ಮುಟ್ಟಿಬಿಟ್ಟಿವೆ ಎನ್ನಬಹುದು ಉದಾಹರಣೆಗೆ,

ವೇದ ವೇದ್ಯ! ರಾಧಾ
ರಮಣ! ದ್ವಿರದ ರಾಜವರದ
ಪ್ರಸೀದ ಸಮಾಧಿಗಮ್ಯ ಪದ ಸಾಧು
ಜನಾಸ್ವಾದ
ಯಾದವೇಂದ್ರ! ದಾಮೋದರ! ವರದ,

ಇಂತಹ ಮನೋಜ್ಞವಾದ ಗೀತೆಗಳನ್ನು ಓದುವಾಗಲೇ ಆನಂದೋತ್ಸಾಹ ಉಕ್ಕಿ ಬರುತ್ತದೆ ಇನ್ನು ವಿಶೇಷ ಸಮಾರಂಭಗಳಲ್ಲಿ ರಾಗಯುಕ್ತವಾಗಿ ಹಾಡುವಾಗ ಉಂಟಾಗಬಹುದಾದ ತನ್ಮಯತೆಯನ್ನು ಹೇಳಲಸಾಧ್ಯ ಎಂತಲೇ ಈ ಶೋಭನ ಗೀತೆಗಳನ್ನು ಸ್ವಾಗತಿಸುವುದು ಎಲ್ಲರ ಕರ್ತವ್ಯ ಇವನ್ನು ಹಾಡಿ ಪ್ರೋತ್ಸಾಹಿಸುವುದು ನಮ್ಮೆಲ್ಲರ ಆದ್ಯ ಕರ್ಮ

ಶ್ರೀ ರಾಮಕೃಷ್ಣ ಭಜನ ಸಹಸ್ರ ನಾಮಾವಳಿ—ಲೇಖಿಕೆ, ಕೆ ಕಮಲಾಕ್ಷಮ್ಮ ಪ್ರಕಾಶಕರ, ಕೆ ವ್ಯಾಸಕೃಷ್ಣ ಉಪಾಧ್ಯಾಯ, ಕಾರ್ಕಳ, ದ ಕ. ಪುಟಗಳು ೫೬. ಬೆಲೆ ರೂ. ೦-೫೦

ಭಗವನ್ಮಹಿಮೆ ನೆಚ್ಚುವವರೆಲ್ಲರೂ ಭಜನೆಗೆ ಪ್ರಾಶಸ್ತ್ಯವನ್ನೀಯುವರು ತನ್ನ ವ್ಯಾವಹಾರಿಕ ಜೀವನದಲ್ಲಿ ಪರಾಜಿತನಾಗಿ ದಾಸವರೆನ್ನಾಗಿ ಭಗವನ್ನಾಮಾಮೃತವನ್ನು ಕನ್ನಡಿಗರ ಮನೆ ಮನೆಗೂ ಒಯ್ದು ಮುಟ್ಟಿಸಿದ ಕೃಷ್ಣಪ್ಪನ ಜೀವನವನ್ನೇ ನಾವು ನೆನೆಸಬಹುದು ತನ್ನ ಕಷ್ಟಕಾರ್ಪಣ್ಯವೆಲ್ಲವನ್ನೂ ಮರೆತು ಭಗವಂತನ ಅನಂತ ಲೀಲೆಯನ್ನು ಸ್ಮರಿಸುವುದೆಂದರೆ, ತನಗಿಂತಲೂ ಉನ್ನತವಾದ ಮತ್ತು ಸರ್ವ ಶಕ್ತನೂ ಸರ್ವಾಂತರ್ಯಾಮಿಯೂ ಆದ ಶಕ್ತಿಯೊಂದಿರುವುದೆಂಬುದಕ್ಕೆ ಅನುಮೋದಯೆನ್ನಬಹುದು ಇದಕ್ಕಾಗಿಯೇ ಅನೇಕಾನೇಕ ಭಜನ ಮಂಡಳಿಗಳು ರಚಿತವಾಗಿವೆ. ಕೀರ್ತನೆಗಳು ರೂಪಾಂತಿವೆ ಸಹಸ್ರನಾಮಾವಳಿಯೂ ಸಿದ್ಧವಾಗಿವೆ

ತನಗಿಂತ ಹಿರಿಯನೆಂದು ಒಪ್ಪಿಕೊಂಡು ಅವನನ್ನು ಆರಾಧಿಸುವ ವಿಧಾನಗಳಲ್ಲಿ ಶ್ರವಣ, ಕೀರ್ತನ, ಸ್ಮರಣ ಪಾದಸೇವನೆ, ಅರ್ಚನ, ವಂದನ, ಉಪಾಸನ, ಸಖ್ಯ, ಆತ್ಮನಿವೇದನವೆಂದು ನವವಿಧಗಳಿದ್ದರೂ ಇವುಗಳಲ್ಲಿ ಸ್ಮರಣ ಕೀರ್ತನಗಳು ಅಸದೃಶವಾಗಿವೆ ಎಂತಲೇ ಕೀರ್ತನೆಗಳಿಗಾಗಿ ಹಾಡುಗಳೂ ಸ್ಮರಣಗಾಗಿ ಸಹಸ್ರನಾಮಾವಳಿಗಳೂ ರಚಿತವಾಗಿವೆ.

ಶ್ರೀಮತಿ ಕೆ. ಕಮಲಾಕ್ಷಮ್ಮನವರು ತಮ್ಮ ರಕ್ತಗತವಾಗಿರುವ ಭಗವದ್ಭಕ್ತಿಯನ್ನು ಈ ಸಹಸ್ರ ನಾಮಾವಳಿಯಲ್ಲಿ ಹೊರಸೂಸಿದ್ದಾರೆ ಇದನ್ನು ವಾಚಿಸುವಾಗಲೇ ಅವರ್ಣ್ಯ ಆನಂದ ತನ್ಮಯರಾಗಿ ಪರಮಾತ್ಮನಲ್ಲಿಯೇ ಅನನ್ಯ ಮನಸ್ಕರಾಗುತ್ತೇವೆ ಇವರಲ್ಲಿ ವಿವಿಧ ರೀತಿಗಳಲ್ಲಿ ಶ್ರೀ ಕೃಷ್ಣನ ಸಂಸ್ಮರಣೆಯನ್ನು ಮಾಡಲಾಗಿದೆ ಭಗವಂತನ ಅವತಾರ ಲೀಲೆಗಳನ್ನು ಅಕ್ಷರ ಮಾಲೆಯಲ್ಲಿ ನಿರೂಪಿಸುವ, ಕೇಶವಾದಿ ೨೪ ನಾಮಗಳನ್ನು ಸಂಸ್ಮರಿಸುವ, ವೆಂಕಟೇಶ ಕಲ್ಯಾಣ, ಶ್ರೀ ಕೃಷ್ಣ ಬಾಲಲೀಲೆ, ದಶಾವತಾರ ಸ್ತುತಿ, ಸುಧಾಮ ಚರಿತ, ಧ್ರುವನ ಕಥೆ, ಖಾಂಡವ ರಕ್ಷಣೆ ಇತ್ಯಾದಿಗಳು ಈ ನಾಮಾವಳಿಯಲ್ಲಿ ಎಡೆ ತಾಳಿವೆ ಇಲ್ಲಿರುವ ಪದ್ಯಗಳು ತನ್ನದೇ ಆದ ಧಾಟಿಯಲ್ಲಿದ್ದು ಓದುವುದಕ್ಕೆ ಸುಗಮವಾಗಿದೆ

ರಾಧಾರಮಣನೇ ಶ್ರೀ ಕೃಷ್ಣ । ನಿನ್ನ
ಪಾದಕೆ ಎರಗುವೆ ಹರಿ ಕೃಷ್ಣ
ಮೋದವ ತೋರೋ ಶ್ರೀ ಕೃಷ್ಣ । ದಾ
ಮೋದರ ಮೂರುತಿ ಹರಿಕೃಷ್ಣ ॥

ಎಂಬಿತ್ಯಾದಿಯಾಗಿ ಪದ್ಯಗಳ ಸರಣಿಯು ಮುಂದೆ ಸಾಗುತ್ತಿವೆ ಆದರೂ ಒಂದೆರಡೆಡೆ ಸ್ವಲ್ಪ ತಿದ್ದುಪಡಿ ಮಾಡುತಿದ್ದರೆ, ಸೊಗಸಾಗುತಿತ್ತು ಎನಿಸುತ್ತದೆ ಉದಾಹರಣೆಗೆ (ಪುಟ 12, ಪದ್ಯ ೧೫)

ಅಸುರನ ಸೆರೆಯೊಳು ಶ್ರೀಕೃಷ್ಣ । ಅರ್ಧ
ರಾತ್ರಿಯೊಳು ಜನಿಸಿದೆ ಹರಿಕೃಷ್ಣ
ಆಶ್ರಿತ ರಕ್ಷಕ ಶ್ರೀಕೃಷ್ಣ । ಮಾತೆ
ಗೆ ವಿಶ್ವವ ತೋರಿದೆ ಹರಿಕೃಷ್ಣ ॥

ಎಂಬುದನ್ನು

ಅಸುರನ ಸೆರೆಯೊಳು ಶ್ರೀಕೃಷ್ಣ । ಅರಿ
ಯಾ ಇರುಳೊಳು ಜನಿಸಿದೆ ಹರಿಕೃಷ್ಣ
ಆಶ್ರಿತ ರಕ್ಷಕ ಶ್ರೀಕೃಷ್ಣ । ಜಗ
ತಾಯಿಗೆ ತೋರಿದೆ ಹರಿಕೃಷ್ಣ ॥

ಎಂಬುದಾಗಿ ತಿದ್ದಿಕೊಂಡಿದ್ದರೆ, ಓದುವಾಗ ಕಟ್ಟಿ ಬರುತ್ತಿರಲಿಲ್ಲ, ಅರ್ಥಕ್ಕೂ ಕುಂದುಂಟಾಗುತ್ತಿರಲಿಲ್ಲ

ಇಂತಹ ಒಂದೆರಡು ಕುಂದುಕೊರತೆಗಳನ್ನು ಉಳಿದರೆ, ಈ ಸಹಸ್ರನಾಮಾವಳಿಯು ವಾಚನಾರ್ಹವಿದೆ. ಆದಿಯಲ್ಲಿ ಶ್ರೀ ಕೆ ಎಲ್ ಎನ್ ಉಪಾಧ್ಯಾಯರು ಉದ್ಬೋಧಕವಾದ ಮುನ್ನುಡಿಯನ್ನು ಬರೆದಿದ್ದಾರೆ

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟನಲ್ಲಿ

OS 609/1955 RIA 1165/1958.
RIA 1172/1958
(RIA 421—422/1959)

ಶ್ರೀನಿವಾಸ ರಾವ್ [illegible] ಲಕ್ಷ್ಮೀನಾರಾಯಣ [illegible] ನಂದಿಕೂರು ಗ್ರಾಮ— ಅರ್ಜಿದಾರ

ಮತ್ತು

1 [illegible] ರಾಮ ಮಧ್ಯಸ್ಥ, 2. ನರಸಿಂಹ ಮಧ್ಯಸ್ಥ, 3 ಶ್ರೀನಿವಾಸ ಮಧ್ಯಸ್ಥ, 4. ಕೃಷ್ಣಮೂರ್ತಿ ಮಧ್ಯಸ್ಥ— ಸೀತಾರಾಮ ಮಧ್ಯಸ್ಥರ ಮಗಂದಿಯರು, ನೀಲಾವರ ಗ್ರಾಮ- 5 [illegible] ಮಧ್ಯಸ್ಥರ ಮಗಳು —[illegible] ಪ್ರತಿವಾದಿರು

ಮೇಲ್ಕಂಡ ವ್ಯಾಜ್ಯದ ಪ್ರಿಲಿಮಿನರಿ ಡಿಕ್ರಿ ಫೈನಲ ಮಾಡಬೇಕೆಂತ ಅರ್ಜಿದಾರನ ಕಡೆಯಿಂದ ದಾಖಲಾದ RIA 1165|1958ನೆ ಅರ್ಜಿಯಲ್ಲಿ ತನ್ನನ್ನು 2ನೆ ವಾದಿಯಾಗಿ ಸೇರಿಸಬೇಕೆಂತ ದಾಖಲಾದ RIA 1172|1958 ನೆ ಅರ್ಜಿಯೂ 1—2ನೆ ಯೆದ್ರಿಗೆ ನೋಟೀಸ ಮಾಡಿಸುವ ಬಗ್ಗೆ ತಾರೀಕು 14-4-1959ಕ್ಕೆ ಇಟ್ಟಿದೆ ಅವರಿಗೆ ಆಕ್ಷೇಪ ಯಿರುವುದಾದರೆ ಸದರಿ ತಾರೀಕಿನ ಬೆಳಿಗ್ಗೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ಈ ಮೂಲಕ ತಿಳಿಸಿಯದೆ

K Laxminarayana Aithal
Vakil for Petitioner

ಉಡುಪಿ, ತಾರೀಕ್, 4-4-1959

ಏಲಂ ನೋಟೀಸು

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಕುಂದಾಪುರ.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದೆ ಇರುವುದರಿಂದ, ಸದ್ರಿಯವರು ಈಡಿಟ್ಟ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 24-4-1959ನೇ ಶುಕ್ರವಾರ ಮಧ್ಯಾಹ್ನ ಗಂಟೆ ಎರಡಕ್ಕೆ ಸರಿಯಾಗಿ ನಮ್ಮ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

ಮೇಲ್ಕಾಣಿಸಿದ ತಾರೀಕಿಗೆ ಏಲಂ ಮಾಡಲು ಅಸಾಧ್ಯವಾದಲ್ಲಿ ಪುನಃ ನೋಟೀಸು ಕೊಡದೆನೇ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಏಲಂ ಮುಂದುವರಿಸಲಾದೀತು

ತಾರೀಕು ಮತ್ತು ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
28—2—57 33/281	ಕೃಷ್ಣ ಮೊಗೇರ N/o ಕೊರಗ ಮೊಗೇರ, ವಡ್ಡನಾಡಿ ಮನೆ, ತೆಕ್ಕಟ್ಟೆ ಪೋಸ್ಟ್.	ರೂ 55—00
6—4—57 470	ಸುಬ್ಬಣ್ಣ ಸೆಟ್ಟಿ N/o ಸಿದ್ದಯ್ಯ ಸೆಟ್ಟಿ, ಮೇಲ್ಮನೆ, ಹರ್ಕೂರು, ಆಲೂರು ಪೋಸ್ಟ್	ರೂ 70—00
1—3—58 31/260	ಬಾಂಡ್ಯ ವಾಸುದೇವ ಪೈ S/o ಬಾಂಡ್ಯ ನಾರಾಯಣ ಪೈ, ಮರ್ಚೆಂಟ್, ಗಂಗೊಳ್ಳಿ ಪೋಸ್ಟ್	ರೂ 60—00

Office of The Catholic Bank
Ltd., COONDAPUR
3-4-1959

I MENEZES,
Agent

ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್‌ನ ವರದಿ, ೧೯೫೮—೧೯೨೦ರಲ್ಲಿ ಸ್ಥಾಪಿತವಾದ ಈ ಬೇಂಕು ಅಭಿವೃದ್ಧಿ ಪಥದತ್ತ ಸರಿಯುತ್ತಿರುವುದು ಈ ವರದಿಯಿಂದ ವೇದ್ಯವಾಗುತ್ತದೆ ವರದಿ ವರ್ಷದಲ್ಲಿ ೧೬ ಶಾಖೆಗಳ ಮೂಲಕ ಜನತೆಗೆ ಬೇಂಕಿಂಗ್ ಸೌಲಭ್ಯಗಳನ್ನು ಒದಗಿಸಿದೆ ಬೇಂಕಿನ ತೆತ್ತ ಬಂಡವಳವು ಸುಮಾರು ೪ ಲಕ್ಷವಿದ್ದು, ಕಾದಿಟ್ಟ ನಿಧಿಯು ಒಂದೂವರೆ ಲಕ್ಷದಷ್ಟಿದೆ ಒಟ್ಟು ಠೇವಣಾತಿಯು ೬೩ ಲಕ್ಷದಷ್ಟಿದೆ ಬೇಂಕು ಈ ವರ್ಷ ೬೭ ಸಾವಿರ ರೂಪಾಯಿ ಲಾಭವನ್ನು ಗಳಿಸಿದೆ ಇದರಲ್ಲಿ ಸೇಕಡಾ ೪ರಂತೆ ಕರರಹಿತ ಡಿವಿಡೆಂಡು ಕೊಡಲು ಡೈರೆಕ್ಟರರು ಶಿಫಾರಸು ಮಾಡಿರುತ್ತಾರೆ ಬೇಂಕಿನ ನಿಧಿಯನ್ನು ಸರಕಾರಿ ಭದ್ರತಾ ಪತ್ರಗಳಲ್ಲಿ ಹಾಗೂ ಇನ್ನಿತರ ಉತ್ತಮ ಹಾಗೂ ಲಾಭದಾಯಕ ಶೇರುಗಳಲ್ಲಿ ತೊಡಗಿಸಲಾಗಿದೆ ಹಾಗಾಗಿ ಬೇಂಕಿನ ಸ್ಥಿತಿಯು ಭದ್ರವಿದೆಯೆನ್ನಬಹುದು ಇನ್ನೂ ಮುಂದಿನ ವರ್ಷಗಳಲ್ಲಿ ಇದಕ್ಕಿಂತಲೂ ಹೆಚ್ಚು ಉತ್ತಮವಾದ ಲೆಕ್ಕಪತ್ರ-ವರದಿಗಳನ್ನು ಹೊರಡಿಸುವಂತಾಗಲೆಂದು ಹಾರೈಸುತ್ತೇವೆ ಆಡಳಿತ ಮಂಡಳಿ ಹಾಗೂ ಜನರಲ್ ಮೆನೇಜರ ಶ್ರೀ ಕೆ ಎಸ್ ಕಾಮತ್‌ರವರೂ ಅಭಿನಂದನಾರ್ಹರು. —ಗೋರಾ

ವಿಚಾರ ಮಥನ

(೧ನೇ ಪುಟದಿಂದ)

ಸ್ಟರು ಮಾತ್ರ ಚೀನಾದ ಮಾತನ್ನೇ ವೇದವಾಕ್ಯವೆಂದು ಕಂಡುಕೊಂಡಿದ್ದರು. ಇಂತಹ ರಾಷ್ಟ್ರಭಕ್ತಿ ಹೀನ ಪಕ್ಷವನ್ನು ಏಕೆ ಮುರಿಯಲು ಸರಕಾರ ಎಳಸುತ್ತಿಲ್ಲ ಎಂದು ಶ್ರೀ ಜೆ ಬಿ. ಕೃಪಲಾನಿಯವರೂ ಪ್ರಶ್ನಿಸಿದರು.

ಪ್ರತಿಯೊಂದಕ್ಕೂ ರಶ್ಯ ಚೀನಗಳ ಉದಾಹರಣೆಯನ್ನಿತ್ತು, ಅವನ್ನೇ ತಮ್ಮ ಜನ್ಮಭೂಮಿ ಎಂದು ತಿಳಿದು, ಅಲ್ಲಿನ ಹೇಳಿಕೆಗಳನ್ನೇ ಅಭಿಪ್ರಾಯಗಳನ್ನೇ ಇಲ್ಲಿಯೂ ಪುನರುಚ್ಚರಿಸುವ ಸೋಂಕು ಜಾಡ್ಯದ ಈ ಭಾರತೀಯ ಕಮ್ಯುನಿಸ್ಟರಲ್ಲಿ ದೇಶಭಕ್ತಿ ಲವಲೇಶವೂ ಇಲ್ಲ ಎಂಬುದಕ್ಕೆ ಅವರ ಈ ವರ್ತನೆಯೂ ಪುಟಗೊಡುತ್ತದೆ. ಇಂತಹ ರಾಷ್ಟ್ರದ್ರೋಹಿಗಳಿಂದ ದೂರವಿರುವುದು ರಾಷ್ಟ್ರಭಕ್ತರೆಲ್ಲರ ಕರ್ತವ್ಯವೆಂದು ಹೇಳಬೇಕಾಗಿಲ್ಲ

* * *

ಸ್ವೀಡಿಶ್ ಪದಕವನ್ನು ಪಡೆದ ಶ್ರೀ ಶಿವರಾಮ ಕಾರಂತರಿಗೆ ಮೈಸೂರು ರಾಜ್ಯ ಸರಕಾರದ ಬಹುಮಾನವೂ ದೊರೆಯಿತು. ಶ್ರೀ ಕಾರಂತರ "ಯಕ್ಷಗಾನ ಬಯಲಾಟ"ವೆಂಬ ವಿಮರ್ಶಾ ಗ್ರಂಥವನ್ನು ಬಹುಮಾನಾರ್ಹವೆಂದು ಸಂಪಾದಕ ಮಂಡಳಿ ಕಂಡುಕೊಂಡಿರುವುದು ಅಭಿನಂದನಾರ್ಹ ವಿಷಯವಾಗಿದೆ. ಆದರೆ ಒಂದು ವಿಷಯ ಮಾತ್ರ ಖೇದ ಪೂರ್ಣವಾಗಿದೆ ನಮ್ಮ ಸಾಹಿತಿಗಳ ಬೆಲೆಯನ್ನು ಅನ್ಯರು ಕಂಡುಕೊಂಡ ನಂತರವೇ ನಮಗದರ ಬೆಲೆ ತಿಳಿಯುತ್ತದೆ—ಎಂದರೆ, ನಮ್ಮಲ್ಲಿ ಒಬ್ಬ ಸಾಹಿತಿಯ ಕೃತಿಯ ಬೆಲೆಯನ್ನು ಕಂಡು ಹಿಡಿಯುವ ನೈಪುಣ್ಯವಿಲ್ಲ ಎಂಬರ್ಥವಲ್ಲವಾದರೂ, ಈ ಬಗ್ಗೆ ಸಾಕಷ್ಟು ಪ್ರಯಾಸ ಪಡುವ ಗೋಜಿನಿಂದ ದೂರವಾಗಿದ್ದೇವೆ ಎಂಬುದು ಸ್ವಯಂವೇದ್ಯ ಏನಾದರೂ ನಿರ್ಣಾಯಕ ಮಂಡಳಿಯು ಮತ್ತಾರಿಗೆ ವಂಚನೆ ನಡೆಸಿದರೂ ಶ್ರೀ ಕಾರಂತರ ಮಟ್ಟಿಗೆ ಅದು ನಿಸ್ಪೃಹವಾಗಿದ್ದುದು ಪ್ರಶಂಸಾರ್ಹ ಎಲ್ಲರ ಬಗ್ಗೆಯೂ ಇದೇ ರೀತಿಯ ಧೋರಣೆಯಿಟ್ಟುಕೊಂಡಿದ್ದರೆ ಚೆನ್ನಾಗಿತ್ತು.

—ರಾಶಿ.

ಅಮೂಲ್ಯ ಸಂಪತ್ತು

ಕವಿಯ ಒಂದೊಂದಕ್ಷರವೂ ಅತ್ಯಮೂಲ್ಯವಾಗಿವೆ!

ಒಂದು ಶ್ಲೋಕದ ದೆಸೆಯಿಂದ ದಟ್ಟದರಿದ್ರ ಭಾರವಿಯು ಸಂಪತ್ತಿನಧಿಪತಿಯಾದನು!

ಸಂಸ್ಕೃತ ಸಾಹಿತ್ಯದ ಸುಪ್ರಸಿದ್ಧ ಕಾವ್ಯವಾದ "ಕಿರಾತಾರ್ಜುನೀಯ"ದ ಕರ್ತಾರನಾದ ಭಾರವಿ ಮಹಾಕವಿಯು ಮೊದಲಲ್ಲಿ ದಟ್ಟದರಿದ್ರನಾಗಿದ್ದನು. ಆತನ ಪತ್ನಿಯು ಒಂದು ದಿನ ಹಸಿಗೆದುರಾಗಿ ಸೊಂಟಕಟ್ಟಿ, "ಇಂತಹ ಕವಿತ್ವ ಮತ್ತು ಪಾಂಡಿತ್ಯ ಹೊಳೆಗೆ ಬೀಳಲಿ. ಮನೆಯಲ್ಲಿ ಧಾನ್ಯದ ಕಾಳೊಂದೂ ಇಲ್ಲ; ದೇಹ ಮುಚ್ಚಿಕೊಳ್ಳಲು ಗೇಣು ಬಟ್ಟೆ ಇಲ್ಲ; ಮಾಡಿನಿಂದ ನೀರು ಸರಾಗವಾಗಿ ಒಳಗೆ ಸುರಿಯುತ್ತಿದೆ; ಹೀಗಿರುವಾಗ ತಾವು ಕಾವ್ಯಾಲಾಪದಲ್ಲಿ ನಿಮಗ್ನರಾಗಿದ್ದೀರಾ?... ಈ ರೀತಿ ನೀವು ಕಾವ್ಯ ರಚಿಸುವುದಕ್ಕಿಂತ ಮಹಾರಾಜರಲ್ಲಿಗೆ ತೆರಳಿ ಏನಾದರೂ ಉದ್ಯೋಗ ಮಾಡಿಕೊಂಡಿರುವುದೇ ಸುಖವಾಗುತಿತ್ತು. ಮಹಾರಾಜರು ಬಹಳ ಉದಾರಿಗಳೆಂದೂ ಪಂಡಿತರು ಮತ್ತು ವಿದ್ವಾಂಸರಿಗೆ ಸಂಪತ್ತನ್ನೂ ಸಂಮಾನವನ್ನೂ ಈಯುತ್ತಿರುವರೆಂದೂ ಕೇಳಿದ್ದೇನೆ. ಅಲ್ಲಿಗೆ ಹೋಗಿ ನಿಮ್ಮ ಅದೃಷ್ಟ ಪರೀಕ್ಷೆ ಏಕೆ ಮಾಡಬಾರದು? ಚಿರಂತನ ಅಭಾವದ ತೀವ್ರ ಜ್ವಾಲೆಯು ಈಗ ಸಹನೆಯ ತಟವನ್ನು ಮೀರಿ ಹೋಗಿದೆ." ಎನ್ನ ತೊಡಗಿದಳು.

ಭಾರವಿಯು ನೀರವನಾಗಿ ಪತ್ನಿಯ ಮುಖವನ್ನೇ ದೃಷ್ಟಿಸ ತೊಡಗಿದನು. ಎಣ್ಣೆಯ ಕೊರತೆಯಿಂದ ಅಸ್ತವ್ಯಸ್ತವಾದ ತಲೆ ಕೂದಲು, ರಾಹುಗ್ರಸ್ತ ಚಂದ್ರನನ್ನು ಹೋಲುವ ಮುಖಕಾಂತಿ, ಒಣಗಿದ ಬಿಂಬ ಫಲಗಳಂತೆ ಕಪ್ಪಾದ ತುಟಿಗಳು, ಮರಣೋನ್ಮುಖವಾದ ಜಿಂಕೆಯಂತೆ ಕಾಂತಿಹೀನ ನಯನಗಳು, ಅನೇಕಾನೇಕ ತೇಪೆಗಳಾಕಿದ್ದರೂ ಜೀರ್ಣವಾಗಿ ಹೋದ ವಸ್ತ್ರ! ತತ್‌ಕ್ಷಣವೇ ಕವಿಯ ಭಾವಪೂರಿತ ಕಣ್ಣುಗಳು ಸಜಲವಾದುವು. ಆಕಾಶದ ಕಡೆಗೆ ನೋಡುತ್ತ ಕಾತರಪೂರ್ಣ ಕಂಠದಿಂದ ಹೇಳಿದನು — "ಹೋಗುವೆನು; ಇಂದೀಗಲೇ ಮಹಾರಾಜರ ಆಸ್ಥಾನವನ್ನು ಕಾಣುವೆನು. ದರಿದ್ರನಾದವನಿಗೆ ಆತ್ಮಾಭಿಮಾನವಾದರೂ ಎಲ್ಲಿಯದು?"

ಇಷ್ಟು ಆಡುತ್ತಲೇ ಕವಿಭಾರವಿ ಹರಿದ ವಸ್ತ್ರದ ತುಂಡೊಂದನ್ನು ಮೌಲೀ ವಸ್ತ್ರ (ರುಮಾಲು?)ವನ್ನಾಗಿ ಮಾಡಿ, ಉಟ್ಟ ವಸ್ತ್ರಾರ್ಧವನ್ನು ಹರಿದು ಉತ್ತರೀಯವಾಗಿ ಹಾಕಿ ವಿವಾಹ ಕಾಲದಲ್ಲಿ ಮಾವನು ಇತ್ತಿರುವ ಏಕಮಾತ್ರ ಚೀನಾಂಶುಕ ಉತ್ತರೀಯ ಖಂಡವೊಂದರಲ್ಲಿ ತನ್ನ ಪ್ರಾಣೋಪಮ ಕಾವ್ಯಸಂಪತ್ತನ್ನು, ತಾಳೆಪತ್ರಗಳನ್ನು—ಕಟ್ಟಿ ಮನೆಯಿಂದ ಹೊರಬಿದ್ದನು. ಆತನ ಪತ್ನಿಯು ಇದನ್ನು ಸಜಲ ನೇತ್ರಗಳಿಂದ ನೋಡುತಿದ್ದಳು. ಕವಿಯನ್ನು ಓಡಿ ಹಿಂದೆ ಕರೆಯೋಣವೆನಿಸಿತಾಕೆಗೊಮ್ಮೆ. ಅಲ್ಲದೇ, ಆತನೊಡನೆ, "ಒಟ್ಟಿಗಿದ್ದೇ ಹಸಿವೆಯಿಂದ ಮೃತ್ಯುವನ್ನಪ್ಪುವ; ನೀವು ಈ ರೀತಿಯಾಗಿ ದೀನವೇಷದಲ್ಲಿ ಹೋಗಬೇಡಿರಿ" ಎನ್ನಬೇಕೆನಿಸಿತು. ಆದರೆ ಪರವಶವಾಗಿದ್ದ ಪಾದಗಳು ಮಾತ್ರ ಮುಂದುವರಿಯದೆ ಸ್ತಬ್ಧವಾಗಿದ್ದುವು.

ಮಧ್ಯಾಹ್ನದ ಸೂರ್ಯ ತನ್ನ ಪ್ರಚಂಡ ಕಿರಣಗಳಿಂದ ಆಕಾಶದಲ್ಲಿದ್ದುಕೊಂಡು ಭೂಮಿಯನ್ನು ಸುಡುತಿದ್ದನು. ಕವಿಯ ಪಾದಗಳಲ್ಲಿ ಬೊಕ್ಕೆಗಳೇಳುತಿದ್ದುವು ಶರೀರದಲ್ಲಿ ಸ್ವೇದವು ಸುರಿಯುತಿತ್ತು. ಒಂದಡಿ ಮುಂದೆ ಸರಿಯುವುದೂ ದುಸ್ಸಾಧ್ಯವೆನಿಸಿತು. ಸಮೀಪದಲ್ಲಿಯೇ ಒಂದು ಸರೋವರವನ್ನು ಕಂಡು, ಅಲ್ಲಿನ ವೃಕ್ಷಛಾಯೆಯಲ್ಲಿ ವಿಶ್ರಮಿಸಲುಪಕ್ರಮಿಸಿದನು. ಸರೋವರದಲ್ಲಿ ಕಮಲಗಳರಳಿದ್ದುವು. ಕವಿಹೃದಯವೊಂದುಕ್ಷಣ ಆ ವಿಕಸಿತ ಪುಷ್ಪಗಳನ್ನು ಕಂಡು ಆತ್ಮವಿಭೋರವಾಯಿತು. "ಈ ಸಮಯದ ಈ ಪ್ರಫುಲ್ಲ ಕಮಲಗಳೂ ರಾತ್ರಿ ಸಮಯದಲ್ಲಿ ಸಂಕುಚಿತವಾಗುತ್ತವೆ. ಚಂದ್ರನ ಅಮೃತ ಕಿರಣಗಳಿಂದಲೂ ವಿಕಾಸಹೊಂದದೆ ದುಃಖಿಸುತ್ತವೆ. ಹನ್ನೆರಡು ತಾಸುಗಳ ದೃಢತಪಸ್ಯೆಯನಂತರ ಪುನಃ ಅರಳುತ್ತವೆ ಈ ಹೂಗಳ ಅಲ್ಪಕಾಲೀನ ಜೀವಾವಧಿಯಲ್ಲೂ ಸುಖ, ದುಃಖಗಳು ಗೋಚರವಾಗುತ್ತವೆ. ದೈವೀ ವಿಧಾನವನ್ನು ತನ್ನ ಸೋಲು ಎಂದವು ತಿಳಿದುಕೊಳ್ಳುವುದಿಲ್ಲ. ನಾನು ಮಾನವನಾಗಿದ್ದುಕೊಂಡು ಏಕೆ ಅವಸರ ಮಾಡುತಿದ್ದೇನೆ. ಆಮಂತ್ರಿಸಲ್ಪಡದ ಹೊರತು ರಾಜಸ್ಥಾನಕ್ಕೆ ಕಾಲಿಡಲಾರೆನೆಂದು ಒಂದು ಬಾರಿ ಸಂಕಲ್ಪ ಮಾಡಿದ ನಾನೆ. ಈಗೇನು ಗೈಯಲು ಮುಂದುವರಿಯುತಿದ್ದೇನೆ! ಕರೆಯಿಲ್ಲದೆ ತೆರಳಲು ಉದ್ಯುಕ್ತನಾಗಿದ್ದೇನೆ! ನಾನು ತಿಳಿಗೇಡಿಯಾಗಿಯೇ ಈ ಕಾರ್ಯವನ್ನೆಸಗುತಿದ್ದೇನೆ,....ಇಲ್ಲ....ಇದು ನನಗೆ ಅಶೋಭನವಾಗಿದೆ." ಎಂದುಕೊಂಡನು

ಅವನಿಗೆ ತನ್ನ ಮಹಾ ಕಾವ್ಯ ಕಿರಾತಾರ್ಜುನೀಯದ ದೃಢಸಂಕಲ್ಪ ಯುಧಿಷ್ಠಿರನ ಸ್ಮರಣೆ ಬಂತು; ದ್ರೌಪದಿಯು ನೂರಾರು ಕಹಿ ಮಾತುಗಳನ್ನು ಕೇಳಿಕೊಂಡಿದ್ದರೂ ಆತ ತನ್ನ ನಿಶ್ಚಲ ಮನಸ್ಸನ್ನು ಒಂದು ಸಲವೂ ಚಂಚಲಗೊಳಿಸಿರಲಿಲ್ಲ. ಸಂಕಲ್ಪ ವಿಮುಖನಾಗಿ ಗುಪ್ತವಾಸಕ್ಕೆ ಮೊದಲು ಕೌರವರೊಡನೆ ಹೋರಾಡಲೂ ಆತ ಬಯಸಿರಲಿಲ್ಲ. ಆ ಕೂಡಲೇ ಅವನು ಒಂದು ಕಮಲ ಪತ್ರದ ಮೇಲೆ ಮೊನಚಾದ ಕಲ್ಲಿನ ಒಂದು ತುಂಡಿನಿಂದ ಈ ಶ್ಲೋಕವನ್ನು ಬರೆದನು:

ಸಹಸಾ ವಿಧದೀತ ನ ಕ್ರಿಯಾ
ಮವಿವೇಕಃ ಪರಮಾಪದಾಂ ಪದಮ್
ವೃಣುತೇ ಹಿ ವಿಮೃಶ್ಯಕಾರಿಣಂ
ಗುಣಲುಬ್ಧಾಃ ಸ್ವಯಮೇವ ಸಂಪದಃ ॥

(ಯಾವುದೇ ಕೆಲಸವನ್ನು ತತ್‌ಕ್ಷಣವೇ ಮಾಡಬಾರದು. ಅವಿವೇಕವು ಅನೇಕಾನೇಕ ಬೃಹತ್ ವಿಪತ್ಪರಂಪರೆಯನ್ನು ಒದಗಿಸುತ್ತದೆ. ವಿಚಾರಿಸಿ ಕಾರ್ಯವೆಸಗುವವನಲ್ಲಿ ಸಂಪತ್ತುಗಳು ತಾವಾಗಿಯೇ ಬರುತ್ತವೆ.)

ಈ ಶ್ಲೋಕವನ್ನು ಬರೆದು ಆತ ಇಟ್ಟದ್ದು ಮಾತ್ರ; ಅಷ್ಟರಲ್ಲಿ ಕುದುರೆಗಳ ಖುರಪುಟಧ್ವನಿ ಕರ್ಣತಮಟೆಯನ್ನು ಭೇದಿಸಿತು. ಕವಿಯು ಎದ್ದು ನಿಂತು ಯಾರೆಂದು ನೋಡುವಾಗ ಸ್ವಯಂ ಮಹಾರಾಜನೇ ಕುದುರೆಸವಾರಿ ಮಾಡಿಕೊಂಡು ಬರುತಿದ್ದನು. ಕವಿಯು ಅಲ್ಲಿಂದ ಕೂಡಲೇ ಎದ್ದು ಹೋಗಿ ಮರೆಯಾದನು. ಬಗಲಲ್ಲಿದ್ದ ಕಾವ್ಯದ ಗಂಟು ಮಾತ್ರ ಬಗಲಲ್ಲಿಯೇ ಇತ್ತು.

ಮಹಾರಾಜನೂ ಆಯಾಸಗೊಂಡಿದ್ದನು. ಆದುದರಿಂದ ಸರೋವರದ ತೀರ ಬಂದು ವಿಶ್ರಮಿಸುವ ಸಲುವಾಗಿ ಇಳಿದನು. ಅಲ್ಲಿಯೇ ಕಮಲ ಪತ್ರದ ಮೇಲೆ ಬರೆದಿದ್ದ, ಮೇಲಿನ ಶ್ಲೋಕವನ್ನಾತ ಓದಿದನು. ಬಹಳ ಚಲೋದಾಗಿತ್ತು. ಕಮಲ ಪತ್ರವನ್ನು ಎತ್ತಿಕೊಂಡನು, ಅದನ್ನು ತನ್ನೊಡನೆ ಕೊಂಡುಹೋದನು. ಅರಮನೆಗೆ ತೆರಳಿ, ಅಲ್ಲಿ ಚಿನ್ನದ ಅಕ್ಷರಗಳಿಂದ ಈ ಶ್ಲೋಕವನ್ನು ಕೆತ್ತಿಸಿ ಶಯನಗೃಹದಲ್ಲಿ ತೂಗಾಡಿಸಿದನು.

ಕೆಲದಿನಾನಂತರ ಮಹಾರಾಜನು ಪುನಃ ಮೃಗಯಾರ್ಥವಾಗಿ ಹೊರಬಿದ್ದನು. ಸಾಮಾನ್ಯವಾಗಿ ಆರೇಳು ದಿನಗಳಿಗೆ ಹಿಂತಿರುಗಲು ತಗಲುತಿತ್ತು. ಆದರೆ, ಈ ಬಾರಿ ಮಳೆಗಾಲವು ಆರಂಭವಾಗಲಿದ್ದುದರಿಂದ ಶೀಘ್ರವಾಗಿಯೇ ಮರಳಿದನು. ರಾತ್ರಿಯು ಹೊತ್ತಾಗಿದ್ದುದರಿಂದ ಅವನು ನೇರವಾಗಿ ಅಂತಃಪುರದಲ್ಲಿದ್ದ ತನ್ನ ಶಯ್ಯಾಗಾರಕ್ಕೆ ಬಂದನು. ಅಲ್ಲಿ ಮಹಾರಾಣಿಯು ಪಕ್ಕದಲ್ಲಿ ಒಬ್ಬ ಯುವಕನು ಮಲಗಿಕೊಂಡಿರುವುದನ್ನು ಕಂಡು ರಾಜನಿಗೆ ಕ್ರೋಧವುದ್ಭವಿಸಿತು. ಇರ್ವರನ್ನೂ ಖಡ್ಗದಿಂದ ಕಡಿದು ಕೊಂದುಬಿಡಬೇಕೆಂದಾತ ಬಯಸಿದನು. ಎಂತಲೇ ಆತನು ಒರೆಯಿಂದ ನಿಶಿತ ಖಡ್ಗವನ್ನು ಹಿರಿಯ ತೊಡಗಿದಾಗ, ಗೋಡೆಯಲ್ಲಿದ್ದ ಒಂದು ವಸ್ತು ಸುರಗಿಯನ್ನು ತಡೆಹಿಡಿಯಿತು. ರಾಜನು ಮುಖ ಮೇಲೆತ್ತಿದನು: ದೊಡ್ಡ ದೊಡ್ಡ ಸ್ವರ್ಣಾಕ್ಷರಗಳಿಂದ ಕೆತ್ತಿಸಿದ ಅದೇ ಶ್ಲೋಕ! ಒಂದು ಕ್ಷಣ ಜಡನಂತೆ ನಿಂತಿದ್ದು ಆ ಶ್ಲೋಕವನ್ನು ಓದತೊಡಗಿದನು....ಮುಖದ ಆಕ್ರೋಶ ರೇಖೆಗಳು ಶಿಥಿಲವಾಗ ತೊಡಗಿದುವು. ಖಡ್ಗ ಕೈಯಿಂದ ಜಾರಿ ಕೆಳಗುರುಳಿತು. ಬಹಳ ಧೈರ್ಯವನ್ನು ತಂದುಕೊಂಡು ಆತನು ಮಹಾರಾಣಿಯನ್ನೂ ಯುವಕನನ್ನೂ ಎಚ್ಚರಿಸಿದನು. ಯುವಕನು ಏಳುತ್ತಲೇ ಮಹಾ ರಾಜನ ಚರಣಸ್ಪರ್ಶ ಮಾಡಿದನು. ಮಹಾ ರಾಣಿಯು ಪ್ರಸನ್ನಳಾಗಿ ಹೇಳಿದಳು—"ಬಾಲ್ಯ ಕಾಲದಲ್ಲಿಯೇ ಒಬ್ಬ ದಾಸಿಯು ಅಪಹರಿಸಿಕೊಂಡು ಹೋದ ನಿಮ್ಮ ರಾಜಕುಮಾರನೇ ಇವನು, ಇಷ್ಟು ವರ್ಷಗಳ ನಂತರ ನಮ್ಮ ಸೇವಕರು ಇವನ ಶೋಧಮಾಡಿ ಕರೆತಂದಿರುವರು."

ಮರುದಿನವೇ ಮಹಾರಾಜನು ತನ್ನನ್ನು ಎಚ್ಚರಿಸಿದ ಶ್ಲೋಕ ಕರ್ತಾರನನ್ನು ಅರಸಿತರಲು ಸೇವಕರನ್ನಟ್ಟಿದನು. ಈ ಒಂದು ನಾಲ್ಕು ಪಂಕ್ತಿಯ ಶ್ಲೋಕದಿಂದಾಗಿ, ಅವನು ತನ್ನ ಏಕ ಮಾತ್ರ ಉತ್ತರಾಧಿಕಾರಿಯ ಹತ್ಯೆಮಾಡ ಬಯಸಿದರೂ ಅವನನ್ನು ಉಳಿಸಿಕೊಳ್ಳಲು ಸಮರ್ಥನಾಗಿದ್ದನು.

ಎರಡು ಮೂರು ದಿನಗಳನಂತರ ಒರ್ವ ದೂತನು ಬಂದು ಹೇಳಿದನು—"ಮಹಾರಾಜರೆ, ಆ ಕವಿಯ ಪತ್ತೆಯೇನೋ ಆಯಿತು; ಆದರೆ, ಅವರು ಇಲ್ಲಿಗೆ ಬರಲು ಮಾತ್ರ ಸಿದ್ಧರಿಲ್ಲ".

ಇದನ್ನು ಕೇಳಿ ರಾಜನಿಗೆ ಆ ಕವಿಯಲ್ಲಿ ಹುಟ್ಟಿರುವ ಅಭಿಮಾನ ಮತ್ತಷ್ಟು ಹೆಚ್ಚಿತು. ಆದರಾತಿಶಯದಿಂದ ರಾಜನು ಸ್ವಯಂ ಮೂರು ಲಕ್ಷ ಸುವರ್ಣ ಮುದ್ರೆಗಳೊಡನೆ ಭಾರವಿಯ ಭಗ್ನ ಕುಟೀರವನ್ನು ಪ್ರವೇಶಿಸಿದನು. ಸಂಮಾನದೊಡನೆ "ಮಹಾಕವಿ" ಎಂಬ ಬಿರುದನ್ನೂ ಮಹಾರಾಜನು ಭಾರವಿಗೆ ಒಪ್ಪಿಸಿದನು.

ಅಂದಿನಿಂದ ಭಾರವಿಯ ದಾರಿದ್ರ್ಯ ದೂರವಾಯಿತು. ಒಂದು ಶ್ಲೋಕದ ಕಾರಣದಿಂದ ಎಂತಹ ವಿಚಿತ್ರ ನಡೆದುಹೋಗುತ್ತವೆ! ಮಹಾಕವಿಯ ಒಂದೊಂದು ಅಕ್ಷರಕ್ಕೆ ಅಷ್ಟಷ್ಟು ಬೆಲೆಯಿದೆಯಲ್ಲವೆ?

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಾವು ಬೆಳೆದು ಬರಬೇಕಾದರೆ—
● ನಮ್ಮ ಜೀವನ ಉದಾತ್ತವಾಗಿರಬೇಕು,
● ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
● ನಮ್ಮ ಬದುಕು ಸರಳವಾಗಿರಬೇಕು.
ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.
ಇದೀಗ ಸಿದ್ಧವಾಗಿದೆ.
ಭಾರತೀಯ ಮಹಾಪುರುಷರು
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)
ಪುಟಗಳು: ೧೨೪. ಬೆಲೆ ರೂ. ೧-೫೦.
ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.
ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ.ಕಾ.
ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು
ದೊರೆಯುತ್ತವೆ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇತಿಹಾಸ ಪೃಷ್ಠ

ಅಕಬರನ ಕಾಲದ ಭಾರತ

ಅಕಬರನ ದೈನಿಕ ಕಾರ್ಯಕ್ರಮ, ವಿನಯಗಳು ಆದರಣೀಯವಾಗಿರುವುವು.

(ಮುಂದುವರಿದುದು)

ಅಕಬರನು ಬಹು ಸ್ತ್ರೀಯರನ್ನು ವಿವಾಹವಾಡಿಕೊಳ್ಳುವುದನ್ನು ಒಪ್ಪುತ್ತಿರಲಿಲ್ಲ. ಮಿತಿಯಿಂದ ಮದ್ಯಪಾನ ಮಾಡಬಹುದೆಂತಲೂ, ಹಂದಿ ನಾಯಿಗಳ ಮಾಂಸ ತಿನ್ನಬಹುದೆಂದೂ, ಅವು ನಿಷಿದ್ಧವಲ್ಲವೆಂದೂ, ಸಹಗಮನವನ್ನು ಮಾಡಲೇ ಬಾರದೆಂದೂ ಪ್ರಚಾರಮಾಡಿದನು. ರಾಜಾ ಬಿಹಾರಿ ಮಲ್ಲನ ಮಗ ಜಯಮಲ್ಲನು ಸ್ವರ್ಗಸ್ಥನಾಗಲು, ಅವನ ಪತ್ನಿಗೆ ಸಹಗಮನವಾಗಲು ಮನಸ್ಸಿರದಿದ್ದರೂ, ಆಕೆಯ ಬಾಂಧವರು ಅದು ಪುಣ್ಯಕಾರ್ಯವೆಂದು ಪ್ರೋತ್ಸಾಹಿಸಿದರು. ಇದನ್ನು ತಿಳಿದು ಸ್ವತಃ ಬಾದಷಹನೇ ಅಂಬರ ನಗರಕ್ಕೆ ಹೋಗಿ ಬೆಂಕಿಯಲ್ಲಿ ಬೀಳುವ ಆಕೆಯನ್ನು ಉಳಿಸಿದನು.

ಅಕ್ಬರನು ನಿತ್ಯವೂ ಜರೋಖಾ ಎಂಬ ಕಿಟಕಿಯ ಬಳಿಯಲ್ಲಿ ನಿಂತು ಸಾಮಾನ್ಯ ಜನರ ಹೇಳಿಕೆಗಳನ್ನು ಕೇಳುತ್ತಿದ್ದನು. ಇವನು ತಾನು ದೇವರ ಪ್ರತಿನಿಧಿಯೆಂದು ಸಿಂಹಾಸನದ ಪಕ್ಕದಲ್ಲಿ ನಿಂತೇ ರಾಜಕಾರ್ಯಗಳನ್ನು ನಡೆಸುತ್ತಿದ್ದನು. ಅವನ ರಾಜ್ಯದ ಎಲ್ಲಾ ನ್ಯಾಯಾಧೀಶರು ಬಾದಷಹನ ಅನುಮತಿ ಇಲ್ಲದೆ ಮರಣ ಶಿಕ್ಷೆಯನ್ನು ಕೊಡಬಾರದಿತ್ತು. ಆಗ ಪಕ್ಕಾ ಕಳ್ಳರ ಕೈಗಳನ್ನೇ ತುಂಡರಿಸುತ್ತಿದ್ದರು ಕೊಲೆಗೈವವರಿಗೆ ಮರಣಶಿಕ್ಷೆಯೂ ಪ್ರಚಾರದಲ್ಲಿತ್ತು ಬಾದಷನು ಕೊನೆ ಕೊನೆಗೆ ಮಾಂಸಾಹಾರವನ್ನು ಮಾಡುತ್ತಿರಲಿಲ್ಲ ಅವನಿಗೆ ದೇವರೊಬ್ಬನಿದ್ದಾನೆ ಮಹಮ್ಮದ ಪೈಗಂಬರನು ಅವನ ಭವಿಷ್ಯವಾದಿಯೆಂಬ ನಂಬಿಕೆ ಆತನಿಗಿತ್ತು

ಅಕಬರನು ತನ್ನ ಕೈಕೆಳಗಿನ ಅಧಿಕಾರಿಗಳಿಗೆ ಕೊಟ್ಟ ಹುಕುಮಿನಿಂದಲೇ ಆತನ ಯೋಗ್ಯತೆ ಸ್ಪಷ್ಟವಾಗುವುದು. "ಎಲ್ಲರೂ ದೇವರು ಮೆಚ್ಚುವ ಕೆಲಸವನ್ನೇ ಮಾಡಬೇಕು. ಅವನನ್ನು ಭಕ್ತಿಯಿಂದ ತ್ರಿಕಾಲದಲ್ಲೂ ಪ್ರಾರ್ಥಿಸಬೇಕು. ದೇವರೊಡನೆ ನಿತ್ಯವೂ ನಿಮ್ಮ ತಪ್ಪಿಗಾಗಿ ಕ್ಷಮೆಯನ್ನು ಪ್ರಾರ್ಥಿಸಿರಿ. ಎಲ್ಲರೂ ಉದಾತ್ತ ಮನಸ್ಸಿನವರಾಗಬೇಕು, ಚಿಲ್ಲರೆ ಬುದ್ಧಿಯು ಸಲ್ಲದು ಎಲ್ಲಾ ಅಧಿಕಾರಿಗಳೂ ಸಾಧ್ಯವಾದಷ್ಟು ಜನರೊಡನೆ ಬೆರತೇ ಇರಬೇಕು. ನಿರುದ್ಯೋಗಿಗಳಾಗಿ ಯಾರೂ ಇರಬಾರದು ಎಲ್ಲರೂ ತಮ್ಮ ವಿಶ್ರಾಂತಿ ಕಾಲದಲ್ಲಿ ಪ್ರಸಿದ್ಧ ಕಾವ್ಯಗಳನ್ನೂ ನೀತಿ ಗ್ರಂಥಗಳನ್ನೂ ಓದಬೇಕು. ಸತ್ಪಾತ್ರರಿಗೆ ದಾನ ಮಾಡುವುದು ಉತ್ತಮ ಅಭ್ಯಾಸ ತಪ್ಪಿತಸ್ಥರನ್ನು ಪ್ರೇಮದಿಂದಲೇ ಮಾರ್ಗಕ್ಕೆ ತನ್ನಿರಿ ಮರಣ ಶಿಕ್ಷೆಯ ಮೊದಲು ತುಂಬಾ ವಿಚಾರಮಾಡಬೇಕು ಯಾಕೆಂದರೆ ಹೋದ ಜೀವ ಎಂದೂ ಬರಲಾರದು ಸಜ್ಜನರನ್ನು ಹೀಯಾಳಿಸಬೇಡಿರಿ ಪರಹಿತಕ್ಕಾಗಿ ದುಡಿಯುವವರನ್ನು ಒಂದು ಅಮೌಲ್ಯರತ್ನವೆಂದು ಭಾವಿಸಿ ಅವರನ್ನು ಚೆನ್ನಾಗಿ ರಕ್ಷಿಸಿರಿ. ಮುಖಸ್ತುತಿಯೊಂದು ದುರಭ್ಯಾಸ ಅದನ್ನೆಂದೂ ಮೆಚ್ಚಬೇಡಿರಿ ನ್ಯಾಯ ವಿಚಾರಣೆ ಮಾಡುವಾಗ ತಾಳ್ಮೆ ಇರಲಿ ಪಕ್ಷಪಾತವಿಲ್ಲದಿರಲಿ ಮಾತು ಮಾತಿಗೆ ಆಣೆ ಇಡುವವರನ್ನು ನಂಬುವುದು ಕಷ್ಟ. ಒಕ್ಕಲಿಗರನ್ನು ಪ್ರೀತಿಸಿ, ಅವರ ಕಾರ್ಯಕ್ಕೆ ಸಹಾಯ ಮಾಡಿರಿ ಕಂದಾಯವನ್ನು ಅವರಿಗೆ ನೋವಾಗದಂತೆ ಎತ್ತಿರಿ, ರಾಜ ಮಾರ್ಗಗಳ ರಕ್ಷಕರನ್ನಾಗಿ ದೇವರಿಗೆ ಹೆದರುವವನನ್ನೇ ನಿಯಮಿಸಬೇಕು ತಪ್ಪಿಗೆ ಸರಿಯಾದ ದಂಡನೆಬೇಕು. ಯಾವ ಧರ್ಮ, ಮತವು ಸರಿಯೆಂಬುದು ತಿಳಿಯುವುದಿಲ್ಲ. ಅದಕ್ಕಾಗಿ ಯಾವ ಮತ ಧರ್ಮಗಳನ್ನೂ ಹಿಂಸಿಸಬಾರದು. ಆಲಸರಾಗಿ ಸಮಯ ಹಾಳುಮಾಡಬಾರದು ಗೂಢಚರರ ಮಾತುಗಳನ್ನೆಲ್ಲಾ ನಂಬಬಾರದು. ಪ್ರಾಮಾಣಿಕರಾಗಿರಿ ಎಲ್ಲರಿಗೂ ಬಾಣ ಹೊಡೆಯಲು ಮತ್ತು ತುಪಾಕಿ ಹಾರಿಸಲು ಗೊತ್ತಿರಬೇಕು

ಅಕಬರನು ಮಹಮ್ಮದೀಯ ಮತವನ್ನೂ ಸಂಪೂರ್ಣ ಬಿಡದಿದ್ದರೂ ತಾನೇ ಹೊಸತೊಂದು ಮತವನ್ನು ಸ್ಥಾಪಿಸಿ ಅದಕ್ಕೆ ದೇವತಾ ಮತವೆಂದು ಹೆಸರಿಟ್ಟನು. ಇದಕ್ಕೆ ಸೇರಿದವರಿಗೆ 'ಅಲ್ಲಾ ಹುಅಕ್ಬರ' ಎಂಬುದೇ ಪರಮ ಮಂತ್ರವಾಗಿತ್ತು ಇದಕ್ಕೆ ದೇವರು ದೊಡ್ಡವರೆಂದೂ, ಅಕ್ಬರನು ದೇವರೆಂದೂ ಎರಡು ಅರ್ಥವಿದೆ ಈ ಮತದವರು ಮಾಂಸಾಹಾರಿಗಳಲ್ಲ. ಈ ಹೊಸ ಮತಕ್ಕೆ ಅಬುಲ್ ಫಜಲ್, ಬೀರಬಲ ಮೊದಲಾದ ದರಬಾರಿನ ೧೮ ಮಂದಿ ಪ್ರಮುಖರು ಸೇರಿದ್ದರು ಬೀರಬಲನು ಈ ಜಗತ್ತಿಗೆ ಸೂರ್ಯನೇ ದೇವನೆಂದೂ, ಪ್ರಾರ್ಥನೆ ಮಾಡುವಾಗ ಪೂರ್ವ ದಿಕ್ಕಿಗೇ ಮುಖಮಾಡಿ ಪ್ರಾರ್ಥನೆ ಮಾಡಬೇಕೆಂದೂ, ಅಗ್ನಿ, ಜಲ, ಗೋ, ಕಟ್ಟಿಗೆ, ಕಲ್ಲುಗಳಲ್ಲೂ ದೇವತಾ ಸಾನ್ನಿಧ್ಯವಿದೆಯೆಂದೂ ಬಾದಶಹನನ್ನು ಒಡಂಬಡಿಸಿದ್ದನು ಅಕಬರನ ಮತಕ್ಕೆ ಅಕಬರನ ದಾದಿಯ ಮಗನಾದ ಖಾನ-ಇ-ಅಜಮ್ ಮಿರ್ಜಾ ಎಂಬವನೂ ಸೇರಿದ್ದನು. ಇವನು ಮೊದಲು ಅಕಬರನ ಮತವನ್ನು ತಿರಸ್ಕರಿಸಿ ಮಕ್ಕಾ ಯಾತ್ರೆ ಮಾಡಿಕೊಂಡು ಬಂದ ಮೇಲೆ—ಅಲ್ಲಿಯ ಮುಲ್ಲಾಗಳ ಮೋಸದಿಂದ ಅವನ ಹಣವನ್ನೆಲ್ಲಾ ಸೂಲಿಗೆ ಮಾಡಿದುದರಿಂದ—ಆ ಮತದಲ್ಲಿ ಜಿಗುಪ್ಸೆ ಹುಟ್ಟಿತು ಇವನು ಕವಿಯೂ, ವಿದ್ವಾಂಸನೂ ಆಗಿದ್ದನು.

ಅಕಬರನು ನಸು ಗಂಪಾಗಿದ್ದು ಹದ ಪ್ರಮಾಣದಲ್ಲಿದ್ದನು. ಇವನು ಸುಂದರನಾಗಿದ್ದು ಆಜಾನುಬಾಹುವೂ, ವಿಶಾಲ ವಕ್ಷಸ್ಥಳನೂ ಆಗಿದ್ದನು ಇವನು ಮದ್ದಾನೆಗಳ ಮೇಲೂ ಜಿಗಿದು ಹಾರಿ ಕುಳಿತು ಅವನ್ನು ಹತೋಟಿಗೆ ತರುತ್ತಿದ್ದನು. ಸೈನಿಕರು ಯುದ್ಧದಲ್ಲಿ ಭಯಪಡುವಂತೆ ಕಂಡರೆ ನೆಪೋಲಿಯನನಂತೆ ತಾನೇ ಯುದ್ಧರಂಗದಲ್ಲಿ ಮುಂದೆ ನಿಂತು ಕಾದುತ್ತಿದ್ದನು.

ಅಕಬರನಿಗೆ ಹಣ್ಣು ಹಂಪಲುಗಳಲ್ಲಿ ಪ್ರೀತಿ ಇದ್ದು, ಅವನು ಮಿತಾಹಾರಿಯಾಗಿದ್ದನು. ಅವನು ರಾತ್ರಿಯಲ್ಲಿ ಮೂರು ತಾಸು ಮಾತ್ರ ನಿದ್ರಿಸಿ, ಬಿಸಿಲುಹೊತ್ತಿನಲ್ಲಿ ಮೂರು ನಾಲ್ಕು ತಾಸು ಮಲಗುತ್ತಿದ್ದನು, ನಿತ್ಯವೂ ರಾತ್ರಿ ಎರಡು ಮೂರು ಗಂಟೆ ವಿದ್ವಾಂಸರೊಡನೆ ಸಂಭಾಷಣೆ ಮಾಡುತ್ತಿದ್ದನು

ಬಾದಷಹನ ದಿನಚರಿಯಲ್ಲಿ ಆತನ ಸರದಾರರ ಮೇಲೂ ಪ್ರಜೆಗಳ ಮೇಲೂ ಪ್ರತಿಬಿಂಬಿಸಿತ್ತು. ಯಥಾ ರಾಜಾ ತಥಾ ಪ್ರಜಾ. ಮೊಗಲ್ ಚಕ್ರವರ್ತಿಗಳಲ್ಲೆ ಈತನು ಸಮರ್ಥನು ಆ ಕಾಲದಲ್ಲಿ ಹೆಚ್ಚಿನ ಪ್ರಭುಗಳಿಗೂ ಪ್ರಜೆಗಳಿಗೂ ತಮ್ಮ ತಮ್ಮ ಮತದ ಗರ ಹೊಡೆದಿರುವಾಗ ಅಕಬರನು ಸಮಸ್ತ ಮತದವರ್ಗಗಳನ್ನೂ ಒಂದೇ ದೃಷ್ಟಿಯಿಂದ ಕಂಡು ಪ್ರಜೆಗಳಿಗೆ ಮಾರ್ಗದರ್ಶಕನಾದುದು ಯಾವ ಕಾಲಕ್ಕೂ ಇದೊಂದು ವೈಶಿಷ್ಟ್ಯವೇ. ಭಾರತವನ್ನು ಆಳಿಹೋದ ಇತಿಹಾಸ ಕಾಲದ ಅಶೋಕ ಶ್ರೀಹರ್ಷ, ಚಂದ್ರಗುಪ್ತ ಮೊದಲಾದ ರಾಜವರೇಣ್ಯರೊಡನೆ ಮುಸ್ಲಿಮ್ ದೊರೆಯೊಬ್ಬನನ್ನು ಕೂಡಿಸುವುದಾದರೆ ಆಸ್ಥಾನವು ಅಕಬರನಿಗಲ್ಲದೆ ಬೇರೆ ಯಾರಿಗೂ ದೊರೆಯಲಾರದು.

(ಸಂಪೂರ್ಣ)

—ಯು ನಾ ಉಡುಪ, ವಿದ್ವಾನ್

Notice

In the Court of the District Munsiff of Udipi.

R E P No 748/58

in O S No 281/54

Between —

Kamala Shedth. Petitioner.

and

Nokku *Pujarthi* & another— Respondents

To the 2nd respondent Apro D' Souza son of Gaspar D' Souza, Mudu Thonse village, Udipi Taluk

Please take notice that the petitioner has applied for sale of the immoveable properties fully described in the draft sale proclamation you are hereby informed that the 14th day of April 1959 has been fixed for fixing the terms of the sale proclamation

Y. C. S Hegde,
Advocate for Petitioner.

Udipi, Dated 28—3—59

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ ಬೆಲೆ ರೂ ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ ರೂ ಒಂದೂವರೆ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ
ಬೆಲೆ ರೂ 1-4-0 (1=25) ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc No 466 N/50 date 2-12-1950 of the Director of public Instruction, Madras.

AMRUTANJAN

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಕಥಾ ವಿಹಾರ

(೨ನೇ ಪುಟದಿಂದ)

ಆತ ರೇಗಿದ. ಹಳ್ಳಿಯ ಯಜಮಾನನನ್ನು ಕಂಡು ಹೇಳಿದ. 'ನಾವು ಸಾಯುತ್ತಿದ್ದೇವೆ. ನನ್ನ ಜನರಿಗೆ ಆಹಾರ ಕೊಡು'. ಯಜಮಾನ ಈತನ ಬಿರುಸು ಮಾತಿಗೆ ಬೆದರುವನೇ? ನಿರಾಕರಿಸಿದ ಯಜಮಾನ. ನಿರಾಕರಣೆಯಿಂದ ತಾಳ್ಮೆ ಕಳೆದುಕೊಂಡ ಹಿರಿಯ ಮಗ. ಯಜಮಾನನೆದುರು ಶಕ್ತಿ ಪ್ರದರ್ಶನಕ್ಕೇ ಆತ ಮುಂದಾದ. ಆದರೆ ಆತ ಒಬ್ಬಂಟಿಗ. ಹಳ್ಳಿಯ ಜನ ಕೂಡಿ ಆತನನ್ನು ಹೊಡೆದು ದಬ್ಬಿದರು ಹಳ್ಳಿಯಿಂದಾಚೆ. ಕುಂಟುತ್ತಾ, ತೆವಳುತ್ತಾ ತನ್ನ ಹಳ್ಳಿ ಸೇರಿದ ಹಿರಿಯಾತ ನಾಚಿಕೆಯಿಂದ. ತಂದೆಗೆ ಅರ್ಥವಾಯಿತು. ಎರಡನೆಯವನನ್ನು ಅದೇ ಕೆಲಸಕ್ಕೆ ಕಳುಹಿಸಿದ.

ಅಣ್ಣನಿಗಾದ ಅವಸ್ಥೆ ಕಂಡ ಎರಡನೆಯಾತ ಶಕ್ತಿಗಿಂತ ಯುಕ್ತಿ ಮೇಲೆಂದುಕೊಂಡ. ತನ್ನ ಜೊತೆಗೆ ಇತರರನ್ನು ಕರೆದುಕೊಂಡು ಪಯಣ ಹೊರಟ. ಹಳ್ಳಿಯ ಹೊರಗಡೆ ಅವರನ್ನು ಕುಳ್ಳಿರಿಸಿ ಯಜಮಾನನ ಮನೆ ಹೊಕ್ಕ, ತನ್ನ ನಾಲಗೆಯ ಚಪಲವನ್ನು ಬೇಕಷ್ಟು ತೀರಿಸಿಕೊಂಡ. ಅವನ ಮಾತಿಗೆ ಮರುಳಾದ ಯಜಮಾನ ಎಂದು ಅವನ ಭಾವನೆ. ಆದರೆ ಎರಡು ದಿನ ಹಿಂದೆ ಬಂದು ಹೋದ ಅಣ್ಣನ ತಮ್ಮ ಈತ ಎಂದು ಆತನರಿಯನೆ? ತೋರಿಕೆಗೆ ಅಂತೆಯೇ ನಟಿಸಿದ ಯಜಮಾನ. ಸನ್ಮಾನ, ಮರ್ಯಾದೆ ಮಾಡಿದ. ರಾತ್ರಿ ಎಲ್ಲರೂ ಮಲಗಿದ ವೇಳೆ ಎರಡನೆಯವನೆದ್ದು ತನ್ನ ಸಂಗಾತಿಗಳನ್ನು ಕರೆದು ತಂದು ದವಸಧಾನ್ಯಗಳನ್ನು ಅವರ ತಲೆಯ ಮೇಲೇರಿಸಿ ಓಟ ಕೀಳುವುದರಲ್ಲಿದ್ದ. ಆದರೆ...ಹಳ್ಳಿಯ ಯಜಮಾನನ ಆಳುಗಳ ಕೈಗೆ ಸಿಕ್ಕಿಬಿದ್ದ. ಮಂಗಳಾರತಿ ಮಾಡಿಸಿಕೊಂಡು ಮರಳಿದ ಆತ ಜೋಲು ಮೋರೆಯೊಡನೆ.

ತಂದೆಗೆ ಈ ಮಗನ ಪಾಡು ಅರ್ಥವಾಯಿತು. ಮೂರನೇಯಾತನನ್ನು ಕಳುಹಿಸಿದ ಇದೇ ಕಾರ್ಯಕ್ಕೆ. ಆತನೂ ಹೊರಟ ಮರುಮಾತಿಲ್ಲದೆ. ಅದೇ ಹಳ್ಳಿಗೆ ಬಂದ. ಅದೇ ಯಜಮಾನನ ಮನೆ ಸೇರಿದ. ಮತ್ತೆ ಬಂದ ಈತನಾರೆಂದು ತಿಳಿದ ಯಜಮಾನ. ಅನೇ ಅಣ್ಣಂದಿರ ತಮ್ಮನೆಂದು ಬೇರೆ ಹೇಳಬೇಕೆ? ಇಬ್ಬರು ಸಹೋದರರ ಬುದ್ಧಿ ತಿಳಿದ ಯಜಮಾನ ಆಳುಗಳನ್ನು ಕರೆದು ಈತನನ್ನು ಬಂಧಿಸಲು ಆಜ್ಞೆಯಿತ್ತ. ಆಳುಗಳು ಈತನನ್ನು ಸೆಳೆದೊಯ್ದಾಗ, ಕಂಬಕ್ಕೆ ಬಿಗಿದಾಗ ಈತ ಚಾಚೂ ಮಾತೆತ್ತಲಿಲ್ಲ. ಮೌನ ಮುಖದಲ್ಲಿ ಮಂದಹಾಸ. ಯಾಕೋ ಏನೋ ಮನಸ್ಸಿನೊಳಗೇನೇ ಆತನಿಗೆ ಒಂದು ವಿಧದ ನಗು ಉಕ್ಕಿ ಬರುತ್ತಿತ್ತು. 'ಇನ್ನೇನಾದರೂ ಇದೆಯೇ?' ಎಂದಾತ ಕೇಳಿದ. ಯಜಮಾನ ಸಿಟ್ಟಾದ. "ಅಬ್ಬಾ, ಒಬ್ಬಂಟಿಗನಾದರೂ ಏನು ಅಬ್ಬರ"! "ಹೂಂ, ಚಾಟಿಯಿಂದ ಬಡೆಯಿರಿ". ಎಂದಾತ ಆಜ್ಞಾಪಿಸಿದ. ಆಳುಗಳು ಚಾಟಿ ತಂದರು 'ರಪ ರಪ ರಪ' ಚಾಟಿ ಏಟಿನ ಸದ್ದು. ಆತ ಮಾತನಾಡಲಿಲ್ಲ, ಹೊಡೆದವರನ್ನಾಗಲೀ, ಹೊಡಿಸಿದವನನ್ನಾಗಲೀ ನಿಂದಿಸಲಿಲ್ಲ. "ಮಿತ್ರ, ನಿನಗಿದೇ ಆನಂದದಾಯಕವಾಗಿದ್ದರೆ ಇನ್ನೂ ಕೆಲವು ಏಟುಗಳನ್ನು ಕೊಟ್ಟು, ನೀನು ಇನ್ನಷ್ಟು ಸಂತೋಷಪಡು" ಎಂದ ಮೂರನೆಯ ಸಾಧುಮಗ. "ಯಾಕೆ ನೀನು ಬಂದಿರುವೆ?"

"ನಿನ್ನ ಮನಸ್ಸನ್ನು ಆನಂದಗೊಳಿಸಿ ನಿನ್ನ ಸಹಾಯ ಪಡೆಯಲು ಬಂದಿದ್ದೇನೆ"

"ಏನು ಸಹಾಯ?"

"ಮಿತ್ರಾ, ಸಂಶಯ ದೃಷ್ಟಿಯಿಂದ ನನ್ನನ್ನು ನೀನು ಹಿಂಸಿಸಿದೆ ಅದಕ್ಕೆ ಕಾರಣ ನೀನಲ್ಲ ಬದಲು ನಿನ್ನನ್ನು ವಂಚಿಸಿದ ನನ್ನ ಅಣ್ಣಂದಿರು. ನಾನು ನನ್ನ ಹಳ್ಳಿಯ ನೂರಾರು ಮಾನವಹೃದಯಗಳ ಪ್ರತಿನಿಧಿಯಾಗಿ ಬಂದಿದ್ದೇನೆ. ಕ್ಷಾಮದೇವತೆಯ ಕ್ರೂರದೃಷ್ಟಿಗೆ, ಆಕೆಯ ಮಹಾಘಾತಕ್ಕೆ ಸಿಕ್ಕಿ ನರಳುತ್ತಿರುವ ನೂರುಗಟ್ಟಲೆ ಮಾನವ ಹೃದಯಗಳ, ಜೀವಗಳ ಜೀವಂತ ಮೂರ್ತಿಯಾಗಿ ನಾನು ಬಂದಿದ್ದೇನೆ. ಹೊಟ್ಟೆಗೆ ಹಿಟ್ಟಿಲ್ಲದೆ ನರಳುತ್ತಿರುವ ನನ್ನ ಹಳ್ಳಿಯ ಕಂದರ ರಾಯಭಾರಿಯಾಗಿ ನಾನು ಬಂದಿದ್ದೇನೆ ನಿನ್ನ ಮನಸ್ಸನು ನಾನು ಆನಂದಗೊಳಿಸಿದೆ. ಇಗೋ, ನನ್ನ ಮನಸ್ಸನ್ನು ನೀನು ಆನಂದಗೊಳಿಸು. ಕ್ಷುಧೆಯ ಬಾಧೆಯಿಂದ ಪೀಡಿತರಾದ ನನ್ನ ಬಂಧುಗಳ ಕ್ಷುಧಾಶಾಂತಿಯನ್ನು ಮಾಡಿ ಪುಣ್ಯಗಳಿಸು. ಅದರಿಂದಲೇ ನನ್ನ ಆತ್ಮತೃಪ್ತಿ. ಮಾನವರ ಕಷ್ಟದಲ್ಲಿ ಮಾನವರು ಸಹಭಾಗಿಗಳಾಗುವುದು ಮಾನವರ ಕರ್ತವ್ಯ. ಅಂತೆಯೇ ನಿನ್ನ ಕಾಲದಲ್ಲಿ ಹುಟ್ಟಿಬಂದ ನನ್ನ ಬಾಂಧವರನ್ನು ನಿನ್ನ ಬಾಂಧವರೆಂದೇ ತಿಳಿದು ಕಾಪಾಡು." ಮೂರನೆಯಾತ ಆತನ ಕಾಲುಗಳಲ್ಲಿ ಬಿದ್ದು ಬೇಡಿಕೊಂಡ.

ಯಜಮಾನನ ಕಣ್ಣಲ್ಲಿ ನೀರು ಬಂತು. "ಎಂತಹ ಸಹನಾಶೀಲ ಈತ" ಆತನ ನಾಲಿಗೆ ಆತನಿಗರಿವಿಲ್ಲದಂತೆಯೇ ಉದ್ಗರಿಸಿತು. "ಇಹೋ ಮಿತ್ರಾ, ನಾನು ನಿನ್ನ ಬಾಂಧವ. ನನ್ನವರು ನಿನ್ನ ಬಾಂಧವರು. ಬಾ, ಆಲಿಂಗಿಸು" ಯಜಮಾನ ಮೂರನೆಯ ಮಗನನ್ನು ಆಲಿಂಗಿಸಿದ.

—ಸದಾಶಿವರಾವ್.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 432/1958.

P. ಗುರುರಾಜಾಚಾರ್ಯ ವಾದಿ.

ಮತ್ತು

ವೆಂಕಟ್ರಮಣಾಚಾರ್ಯ.-ಕೃಷ್ಣಾಚಾರ್ಯರ ಮಗ.-ಉಡುಪಿ ತಾಲೂಕು ಬಾಳ್ಕುದ್ರು ಗ್ರಾಮ....9ನೇ ಪ್ರತಿವಾದಿ.

ಇವರೊಳಗೆ-

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:-

ವಾದಿಗೆ 1ನೇ ಪ್ರತಿವಾದಿಯಿಂದ ತಾರೀಕು 15-2-1940 ಮತ್ತು 16-12-1943ನೇ ರಿಜಿಸ್ಟ್ರ ನಿಶಿಂ ಈಡು ದಸ್ತಾವೇಜುಗಳ ಬಾಬ್ತು ಬರತಕ್ಕ ಅಸಲು ಬಡ್ಡಿ ಸಹಗಳನ್ನು ಬರಮಾಡಿಕೊಳ್ಳುವರೆ ನಂತರದ ಅಧೀನಗಾರರಾದ ನೀವು ವಗೈರೆರನ್ನು ಸೇರಿಸಿ ವಾದಿಯು ಮಾಡಿದ ನೋಲ್ವಂಡ ದಾವೆಯು ತಾರೀಕು 11-4-1959ಕ್ಕೆ ಇಟ್ಟಿರುವದ್ರಿಂದ ಆ ಕುರಿತು ಉದಾಹರಿಸುವಂಥಾದ್ದಿದ್ದರೆ ಆ ದಿನ್ನ ಪೂರ್ವಾಹ್ನ 10ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರ್ರಾಗಿ ಡಿಕ್ಲೇರು ಮಾಡಿಕೊಳ್ಳಬಹುದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು-

K. Ramakrishna Rao,
Vakil for Plaintiff.
Udipi, 31-3-1959.

ಅನುಭವಾಮೃತ

ಇಂಗ್ಲಿಷ್ ಕಲಿಕೆ ಎಂದರೆ ಏನು?

ಹಳ್ಳಿಯ ಜನರಿಂದ ಪೇಚಿನಲ್ಲಿ ಸಿಕ್ಕಿಬಿದ್ದ ಕಿಟ್ಟಣ್ಣ ಜಾಣತನದಿಂದ ತಪ್ಪಿಸಿಕೊಂಡ!

ಕಿಟ್ಟು ಮೆಟ್ರಿಕ್ ಪರೀಕ್ಷೆಯ ನಂತರ ಮೇ ತಿಂಗಳ ರಜೆಯಲ್ಲಿ ಅಮ್ಮನೊಟ್ಟಿಗೆ ಅಜ್ಜಮನೆಗೆ ಹೊರಟ. ಅದೊಂದು ಹಚ್ಚ ಹಸುರಿನ ಮರಮಟ್ಟುಗಳೂ ತೆಂಗು ಅಡಿಕೆ ಬಾಳೆಯ ತೋಟಗಳೂ ಅಲ್ಲಲ್ಲಿ ಹೊಲ ಪೈರುಗಳೂ ತುಂಬಿದ ಗುಡ್ಡಗಾಡಿನ ಸ್ಥಳವೂ ಆಗಿತ್ತು!! ಕಿಟ್ಟುವಿನ ಅಜ್ಜನಂತೂ ಮೊಮ್ಮಗನ ರೀತಿಯನ್ನು ನೋಡಿ ಪರಮಾನಂದಗೊಂಡ.

ಹಳೇ ಸಂಪ್ರದಾಯದ ಹಳ್ಳಿಯ ಜನ. ಆ ಹಳ್ಳಿಯಲ್ಲಿ ಕ್ರಾಪುಹಾಕಿ ಸೂಟು ಬೂಟು ಧರಿಸಿದ ವ್ಯಕ್ತಿ ಅದೂ ಹೊಸದಾಗಿ ಇಂಗ್ಲಿಷ ಕಲಿತು ಬಂದಿದ್ದಾನೆಂದು ಎಲ್ಲರಿಗೂ ಅವನ ಬಗ್ಗೆ ಗೌರವ ಪ್ರೇಮವಲ್ಲದೆ ಒಂದು ತರದ ಭಯವೂ ಆಗಿತ್ತು! (ಇಂಗ್ಲಿಷ ಕಲಿಯುವದೆಂದರೆ ಕಾಯ್ದೆ ಕಾನೂನು ಕಲಿತಂತೆ ಎಂದು!)

ರಾತ್ರಿಯ ಊಟ ಮುಗಿಯಿತು. ಊರಿನ ಸುತ್ತಮುತ್ತಲೆಲ್ಲ ತಿರುಗಾಡಿ ನೈಸರ್ಗಿಕ ರಮ್ಯ ನೋಟವನ್ನೆಲ್ಲ ಮನದಣಿ ಕಣ್ದಣಿ ನೋಡಿ ಬಳಲಿದ ಕಿಟ್ಟು ನಿದ್ದೆಮಾಡಲು ತವಕಿಸುತ್ತಿದ್ದ. ಆದರೆ ಸುತ್ತಲಿನ ಮನೆಯಿಂದ ಪ್ರತಿಯೊಬ್ಬರೂ ಕಿಟ್ಟುವನ್ನೇ ಮಾತಾಡಿಸಿ ಬಂದು ಕೂಡುತ್ತಿದ್ದರು! ಕಿಟ್ಟುವಿನ ಅಜ್ಜ ಎಲೆ ಅಡಿಕೆ ಸವಿಯುತ್ತ "ಕಿಟ್ಟಪ್ಪ ನೀನು ಇಂಗ್ಲಿಷ ಓದಿ ಬಂದಿದ್ದಿ ಎಂತ ರಾಧಾ ಹೇಳಿದ್ಲು ಅದೂ ಪಸ್ಟ್‌ಕ್ಲಾಸ್ನಲ್ಲೆ ಪಾಸುಮಾಡ್ತಾ ಬಂದಿದ್ದೀ ಅಂತೆ. ಅದೇನಪಾ ನಾಲ್ಕು ಇಂಗ್ಲೀಸ ಮಾತಾಡು ನೋಡೋಣ. ನಾವೆಲ್ಲ ಕಲೀದೋರು. ಇಂಗ್ಲಿಸೆಂದರೆ ಹೇಗಿರುತ್ತೆ ಒಸೆ ಕೇಳ್ಕೊಂತೇವೆ" ಎಂದ.

ಕಿಟ್ಟು ಬೆಪ್ಪನಾಗಿ ಕುಳಿತುಬಿಟ್ಟ! ಒಬ್ಬನೇ ಇಂಗ್ಲೀಷನ್ನೇನು ಮಾತಾಡುವದು? ಒಂದೇ ಕೈಯಿಂದ ಚಪ್ಪಾಳೆ ತಟ್ಟುವದು ಸಾಧ್ಯವೇ? ಈ ಹಳ್ಳಿ ಜನಕ್ಕೆ ಬುದ್ಧಿಯೇ ಇಲ್ಲ! ಹೀಗೇನೇನೋ ಆಲೋಚಿಸುತ್ತಾ ಕೆಳಮೋರೆ ಹಾಕಿ ಕುಳಿತ್ಬಿಟ್ಟ!

ಅಜ್ಜಯ್ಯನಿಗೆ ಮೊದಲೇ ಇಂದಿನ ಯುವಕರ ಮೇಲೆ ಅದೂ ಶಹರವಾಸಿ ಯುವಕರ ಮೇಲೆ ಒಂದು ತರದ ಕಹಿಭಾವನೆಇತ್ತು! ನಮ್ಮ ಕಿಟ್ಟು ಹಾಗಲ್ಲವೆಂದು ತಿಳಿದಿದ್ದ. ಆದರೆ,ಅವನ ಗ್ರಹಿಕೆ ಸರಿಯೆಂದು ಸ್ಪಷ್ಟವಾಗಿತ್ತು! ಅಷ್ಟರಲ್ಲಿ ಕಿಟ್ಟುವಿನ ತಾಯಿ ರಾಧಾ ಹಾಗೂ ಅತ್ತೆಯೊಡನೆ ಊಟ ತೀರಿಸಿ ಹೊರಬಂದ ೧೨ ವರ್ಷದ ಸರಸಿ ಇಬ್ಬರೂ ಚಾವಡಿಯಲ್ಲಿ ಸೇರಿದರು!

ಕಿಟ್ಟುನ ಅಜ್ಜಯ್ಯ "ರಾಧಾ, ಇದೇ ಯೇನಮ್ಮ ಮಾಕ ಇಂಗ್ಲಿಷ ನೀನು ಸಾವಿರಗಟ್ಟಲೆ ಖರ್ಚು ಮಾಡಿ ಕಲಿಸಿದೋನ.! ಈಗಿನ ಕಾಲದ ಹುಡುಗರು ಕಲಿಯೋದೆಂದರೆ, ಬೀಡಿ ಸೇದುವದು, ಚಹಾ—ಕಾಫಿ ಕುಡಿಯುವದು, ಸಿನೇಮಾ ನೋಡುವದು ಕೂತ್ರೆ—ಮತ್ತೇನಿಲ್ಲ! ಕಿಟ್ಟುಗೆ ಇಂಗ್ಲಿಷ ಮಾತಾಡೋಕೇ ಬರೋಲ್ಲ! ನೀನು ಸರಸಿನ್ನ ಬೇರೆ ಇಂಗ್ಲಿಷ ಕಲಿಸ್ಬೇಕೂಂತ ಹೇಳ್ತೀಯೆ. ಅವಳು ಒಂದು ವರ್ಷದಿಂದ ಕಲಿತ ನಾಲ್ಕಾರು ಎ. ಬಿ. ಸಿ. ಡಿ. ಬಾಕಿ.. ನಾಳೆನೇ ಅವಳನ್ನು ಮನೆ ಕೆಲ್ಸಕ್ಕೆ ಹಾಕುವದೊಳಿತು" ಎಂದ.

ರಾಧಮ್ಮನವರು ಕಿಟ್ಟುವನ್ನುದ್ದೇಶಿಸಿ "ಕಿಟ್ಟಣ್ಣ, ಅಡಪ್ಪಾ ನಾಲ್ಕು ಮಾತು. ಅದಾಗೇನ್ಬಂತು? ಅಜ್ಜ ದಿನಾ ನಿನ್ನ ಇಂಗ್ಲಿಷ ಕೇಳೋಕೆಂತ ಶಿಳ್ಳೂರಿಂದ ಭದ್ರಾಪುರಕ್ಕೆ ಬರ್ತಾರೆಯೇ, ಏನೋ ನಾವು ಬಂದಾಗ ಕೇಳ್ತಾರೆಪ್ಪಾ! ನಾನಂತೂ ಕಲಿತೋಳಲ್ಲ. ನಾ ಕಲಿತಿದ್ದರೆ ಇಷ್ಟೊತ್ತಾಗ ಮಾತಾಡಿ ತೋರಿಸಿ ಬಿಡುತ್ತಿದ್ದೆ." ಅಂದಳು. ಇಂಗ್ಲಿಷ ಕಲಿತ ಮಗನನ್ನು ಸಿಳ್ಳೂರು ಹಳ್ಳಿಗೆ ಕರೆತಂದು ಎಲ್ಲರಿಗೆ ತೋರಿಸುವ ಹೆಮ್ಮೆ ಅವಳಲ್ಲಿತ್ತು!

ಕಿಟ್ಟುವಿನ ಅವಸ್ಥೆ ಶೋಚನೀಯವಾಗಿತ್ತು! ಇಂತು ಅಮ್ಮನಿಗೂ ಏನಾಗಿದೆ, ಅಂತೂ ಈ ಹಳ್ಳಿಯವರೆಲ್ಲ ಹುಂಬ ಜನ! ನನ್ನನ್ನು ನಿರುಪಯೋಗಿ ದಡ್ಡನೆಂತ ಮಾಡಿ ಬಿಡುತ್ತಾರೆ. ಅಮ್ಮನೂ ಬೇಸರಿಕೊಳ್ಳುವಳು! ಅಷ್ಟೇ ಅಲ್ಲ! ಸರಸೂ ಸಹ, ನಾನೊಬ್ಬ ದಡ್ಡ ಎಂತ ತಿಳಿದು ಬಿಡುತ್ತಾಳೆ! ಎನ್ನುತ್ತಾ ಕೈ ಹಿಸುಕ ತೊಡಗಿದ! ಅಜ್ಜನಂತೂ ಪರಿಹಾಸದ ನಗೆ ನಗುತ್ತಿದ್ದ!

ಕಿಟ್ಟುವಿಗೆ ಬುದ್ಧಿಯಲ್ಲೇನೋ ಹೊಳೆಯಿತು! ಮೊನ್ನೆ "ಹಮ್ಲೆಟ್" ನಾಟ

(೧೨ನೇ ಪುಟ ನೋಡಿರಿ.)

ಕುಮಾರಿ ಚಿಲ್ಲಿಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯಕ್ಕೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳಿಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!
P. DEVEE & Co. (N. J.) CALCUTTA—40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE-1

NAVAYUGA
REGD. NO. M. 3619

UDIPI, THURSDAY
9-4-1959

LICENSE NO. 31
Licensed to Post without Prepayment

ನುಡಿಚಿತ್ರ

ಟಿಬೇಟದ ಧರ್ಮಾಧಿಕಾರಿ ದಲಾಯ್ ಲಾಮಾ

ಟಿಬೇಟಿಯಾನರಿಗೆ ಅನುಪಮ ಶ್ರದ್ಧೆ ಭಕ್ತಿಗಳು ಇವರ ಮೇಲಿರುವುದು.

ಭಾರತದಿಂದ ಬೌದ್ಧ ಧರ್ಮದ ಸಂದೇಶವು ಹರಡಿ, ಕೆಂಪು ಬೇರಿದ ಹಲವಾರು ರಾಷ್ಟ್ರಗಳಲ್ಲಿ ಟಿಬೇಟು ಒಂದು ಎಂಬುದು ಸತ್ಯ. ಟಿಬೇಟು ಚೀನಾ ಮತ್ತು ಭಾರತಗಳ ನಡುವೆ ಇರುವ ದೇಶ. ಪರ್ವತರಾಜ ಹಿಮಾಲಯ ಟಿಬೇಟದಲ್ಲಿಯೇ ಸುಶೋಭಿತವಾಗಿದೆ.

ರಾಜನೀತಿಕ ದೃಷ್ಟಿಯಿಂದ ಟಿಬೇಟು ಚೀನ ಪ್ರಜಾರಾಜ್ಯದ ಅಂತರ್ಗತವಿರುವ ಒಂದು ಸ್ವಾಯತ್ತ ಆಡಳಿತೆ ಪಡೆದಿರುವ ರಾಷ್ಟ್ರ. ಈ ಬಗ್ಗೆ ಚೀನದೊಡನೆ ೨೩—೫—೫೧ರಂದು ಸಂಧಿಯೂ ಆಗಿತ್ತು. ಇದರಂತೆ, ಟಿಬೇಟಿನ ವಿದೇಶನೀತಿ ಮತ್ತು ಭದ್ರತೆಗಳ ಅಧಿಕಾರವನ್ನು ಚೀನಕ್ಕೆ ಒಪ್ಪಿಸಲಾಗಿತ್ತು. ಆದರೆ, ಆಧುನಿಕ ಚೀನದ ನಿರ್ಮಾತೃ ಟಿಬೇಟದ ಮೇಲೆ ತಮ್ಮ ಹೆಚ್ಚಿನ ಅಧಿಕಾರವನ್ನು ಚಲಾಯಿಸುವ ಹಂಬಲವು ಬೆಳೆದುದರ ಪರಿಣಾಮವಾಗಿಯೇ ತಮ್ಮ ಸಂಸ್ಕೃತಿ ಮತ್ತು ಪರಂಪರೆಗಳನ್ನು ಅವಿಚ್ಛಿನ್ನವಾಗಿರಿಸಿಕೊಂಡೇ ಚೀನದೊಡನೆ ಸಂಬಂಧ ಬೆಳೆಸಲು ಬಯಸುತ್ತಿದ್ದ ಟಿಬೇಟು ಈ ಹಂಬಲವನ್ನು ಪೂರೈಸಲು ಸಿದ್ಧವಾಗಿಲ್ಲದಿರುವುದೇ ರಾಜಧಾನಿ ಲಾಸಾದಲ್ಲಿ ಇತ್ತೀಚಿಗೆ ಗೊಂದಲಗಳೇಳಲು ಕಾರಣವಾಗಿರುವುದೆಂಬುದು ಬಹುಮಟ್ಟಿಗೆ ಸತ್ಯ. ತನ್ನ ನೆರೆರಾಷ್ಟ್ರವಾದ ಟಿಬೇಟಿನಲ್ಲಾದ ಈ ದಂಗೆಯಿಂದಾಗಿ ಭಾರತೀಯರೆಲ್ಲರೂ ವಿಶೇಷ ಚಿಂತೆಗೀಡಾಗುವುದೂ ಸ್ವಾಭಾವಿಕವಾಗಿದೆ.

ಚೀನ ಮತ್ತು ಭಾರತಗಳ ಪಾರಸ್ಪರಿಕ ಸಂಬಂಧವು ಬಹಳ ಮಧುರವಾಗಿದೆ. ಇದರೊಡನೆಯೇ ಭಾರತ ವರ್ಷವು ಟಿಬೇಟು ಮತ್ತು ಅಲ್ಲಿಯ ಧರ್ಮಗುರು ದಲಾಯ್ ಲಾಮಾರ ಕಡೆಗೆ ವಿಶೇಷ ಅಭಿರುಚಿ ಮತ್ತು ಶ್ರದ್ಧೆಗಳನ್ನೂ ತೋರಿಸುತ್ತದೆ. ಏಕೆಂದರೆ, ದಲಾಯ್ ಲಾಮಾರವರನ್ನು ಟಿಬೇಟಿಯಾನರು ಪರಮಾತ್ಮ ಸ್ವರೂಪಿಯಾದ ಗೌತಮ ಬುದ್ಧನ ಅವತಾರವೆಂದು ತಿಳಿಯುತ್ತಾರೆ. ಅಲ್ಲದೇ ಸದ್ಯದ ದಲಾಯ್ ಲಾಮಾರವರು ಈ ಮೊದಲೊಮ್ಮೆ ಭಾರತವನ್ನು ಸಂದರ್ಶಿಸಿದ್ದು, ಅವರಿಂದ ಪ್ರಸಾದರೂಪದಲ್ಲಿ ಕೊಡಲ್ಪಟ್ಟ ಕೆಂಪು ರುಮಾಲು ಇಂದಿಗೂ ಅನೇಕ ಭಾರತೀಯರೊಡನೆ ಭದ್ರವಾಗಿದೆ. ಆದುದರಿಂದಲೇ ಚೀನಾದ ಸೈನಿಕ ಗವರ್ನರ ಜನರಲ್ಲರಾದ ಚಾಂಗ್ ಚಿಂಗ ಬರು ಅಂಗರಕ್ಷರನ್ನುಳಿದು ಟಿಬೇಟಿನ ಈ ಧರ್ಮಗುರು ತನ್ನಲ್ಲಿಗೆ ಬರಬೇಕೆಂದು ಆದೇಶವಿತ್ತರೆಂದೂ, ಇದನ್ನು ವಿರೋಧಿಸುತ್ತ ಟಿಬೇಟಿನ ಜನತೆಯು ಪ್ರತಿರೋಧವನ್ನಾರಂಭಿಸಿದರೆಂದೂ ಕೇಳಿದೊಡನೆಯೇ ಭಾರತೀಯರೆಲ್ಲರೂ ವ್ಯಾಕುಲಚಿತ್ತರಾಗುವುದೂ ಸ್ವಾಭಾವಿಕವೇ. ದಲಾಯ್ ಲಾಮಾರು ನಮ್ಮ ದೇಶದ ನಾಗರಿಕರಲ್ಲವಾದರೂ ನಮ್ಮೆಲ್ಲರ ಹೃದಯದಲ್ಲಿ ಅವರು ಮನೆಮಾಡಿರುವರೆಂಬುದಂತೂ ನಿಸ್ಸಂಶಯ.

ಭಾರತದ ಬೌದ್ಧ ಧರ್ಮದಿಂದ ಕವಲೊಡೆದ ಮಹಾಯಾನ ಶಾಖೆಯ ಒಂದು ರೂಪವೇ ಟಿಬೇಟದಲ್ಲಿ ಪ್ರಚಲಿತವಿರುವ ಧರ್ಮವಾಗಿದೆ. ಈ ಧರ್ಮವು ಭಾರತೀಯರ ವಿಶ್ವಾಸಕ್ಕೂ ಪಾತ್ರವಾಗಿದೆ. ಟಿಬೇಟೀಯ ಸಂಪ್ರದಾಯಕ್ಕನುಸಾರವಾಗಿ ದಲಾಯ್ ಲಾಮಾರಿಗೆ ತನ್ನ ಉತ್ತರಾಧಿಕಾರಿಯನ್ನು ನೇಮಿಸಲಾರನು; ಅಥವಾ ಅವನನ್ನು ಆರಿಸಲಾರನು. ಭಗವಂತನಾದ ಅವಿಲೋಕಿತೇಶ್ವರ ಬುದ್ಧನು ಸ್ವಯಂ ಟಿಬೇಟಿಯನರ ಮಾರ್ಗದರ್ಶನ ಮಾಡುವುದಕ್ಕಾಗಿ ದಲಾಯ್ ಲಾಮಾರಿರುವರೆಂದು ಟಿಬೇಟೀಯರ ವಿಶ್ವಾಸವಿದೆ. ಲಾಮಾರು ತಮ್ಮ ಶರೀರವನ್ನು ಮಾತ್ರ ಬದಲಾಯಿಸುತ್ತಾರೆ, ಈ ವಿಶ್ವಾಸದ ಬಲದಿಂದಲೇ ಒಬ್ಬ ದಲಾಯ್ ಲಾಮಾರು ದೇಹಾಂತ ಹೊಂದಿದೊಡನೆಯೇ ಆ ದಲಾಯ್ ಲಾಮಾರ ಲಕ್ಷಣಗಳುಳ್ಳ ಅವರ ಮೃತ್ಯುವಿನ ಸಮಯ ಉತ್ಪನ್ನವಾಗಿದ್ದ ಬಾಲಕರಲ್ಲಿಯೇ ಓರ್ವನನ್ನು ಆರಿಸಿ, ಅಂತಹವನನ್ನು ಆ ಕೂಡಲೇ ದಲಾಯ್ ಲಾಮಾ ಪದವಿಗೇರಿಸುತ್ತಾರೆ. ಈಗಿನ ದಲಾಯ್ ಲಾಮಾರ ಶೋಧನೆಯಲ್ಲಿ ಟಿಬೇಟಿಯಾನರು ತೊಡಗಿ ಕೆಲವಾರು ವರ್ಷಗಳ ವರೆಗೆ ಪ್ರಯತ್ನ ಮಾಡಬೇಕಾಯಿತು.

೧೯೩೩ರಲ್ಲಿ ಈ ಹಿಂದಿನ ಲಾಮಾರು ಮೃತ್ಯುಮುಖರಾದರು. ೧೯೩೫ನೆಯ ವರ್ಷ ಕಳೆದರೂ ಟಿಬೇಟಿಯನ್ನರಿಗೆ ತಮ್ಮ ಲಾಮಾರ ಉತ್ತರಾಧಿಕಾರಿ ಪತ್ತೆಯಾಗಲಿಲ್ಲ. ಒಂದು ದಿನ ಓರ್ವ ಅಧಿಕಾರಿಯು ಚೋಂಕೋರ್ ಜೇಲಿನ ಯಾತ್ರೆಗೆ ಹೊರಟನು. ಅಲ್ಲಿ ಅವನು ಸತ್ವಪಾನ್‌ಮಾ ಪರ್ವತಗಳ ತಟದಲ್ಲಿ ಮೂರು ಪ್ರವಾಹಗಳ ಒಂದು ದೃಶ್ಯವನ್ನು ಕಂಡನು. ಈ ಪ್ರವಾಹದ ಸಮೀಪದಲ್ಲಿಯೇ ಒಂದು ಮನೆಯೂ ತೋರಿ ಬಂದಿತು. ಅಲ್ಲಿಯೇ ಅವನಿಗೆ "ಅ", "ಕ" ಮತ್ತು "ಮ" ಎಂಬ ಅಕ್ಷರಗಳು ದೃಷ್ಟಿಗೋಚರವಾದವು. ಭಾವೀ ದಲಾಯ್ ಲಾಮಾರವರು ಪೂರ್ವ ದಿಕ್ಕಿನಲ್ಲಿ ದೊರೆಯುವರೆಂದು ಧರ್ಮಜ್ಞಾನಿಗಳು ಅರ್ಥಮಾಡಿದರು. ದಲಾಯ್ ಲಾಮಾರ ಮೃತ ಶರೀರವು ಪೂರ್ವ ದಿಶೆಯತ್ತ ಮೊಗಮಾಡಿಕೊಂಡಿರುವಂತೆ ಕಂಡುಬಂದಿದ್ದುದೂ ಈ ಅರ್ಥ ಕಟ್ಟುವುದಕ್ಕೆ ಸಾಧನವಾಯಿತು. ಇದರಿಂದಾಗಿ ಪೂರ್ವ ದಿಕ್ಕಿನತ್ತ ದಲಾಯ್ ಲಾಮಾರವರ ಶೋಧನೆಗೆ ಹೋಗಲಾಯಿತು. ಹೀಗೆ ಹೊರಟ ಒಂದು ತಂಗಡಕ್ಕೆ ಒಂದು ನದಿಯ ಬಳಿಯ ಮನೆಯ ಬಾಗಿಲಿಂದ ಮೂರು ವರ್ಷದ ಹುಡುಗನೊಬ್ಬನು ಹೊರಬರುತ್ತಿರುವುದು ಗೋಚರವಾಯಿತು. ಈ ದಳವನ್ನು ಕಂಡೊಡನೆಯೇ ಆತ "ಲಾಮಾ ಲಾಮಾ" ಎಂದು ಕೂಗಾಡಿದನು. ದಳದವರು ಕುತೂಹಲ ಪೂರ್ಣ ನೇತ್ರಗಳಿಂದ ಹುಡುಗನ ಶರೀರ ರಚನೆಯನ್ನು ನೋಡತೊಡಗಿದರು, ಅಲ್ಲದೇ ಲಾಮಾರಿಗೆ ಆವಶ್ಯವಿದ್ದ ಲಕ್ಷಣಗಳು ಅವನಲ್ಲಿ ತೋರಿಬಂದುವು. ಅಲ್ಲದೆ ೧೩ನೆಯ ಲಾಮಾರ ಕುರುಹುಗಳೂ ಕಂಡುಬಂದುವು. ಆ ಮೇಲೆ ಅವನನ್ನು ಲಾಮಾರನ್ನಾಗಿ ಆರಿಸಲಾಯಿತು. ೧೯೩೯ರಲ್ಲಿ ಲಾಸಾಕ್ಕೆ ಕರೆತರಲಾಯಿತು; ಮತ್ತು ೧೯೪೦ರಲ್ಲಿ ಅವನನ್ನು ಲಾಮಾರೆಂದು ನಿಯುಕ್ತಮಾಡಲಾಯಿತು. ೧೭—೧೧—೧೯೫೦ರಂದು ಈ ಲಾಮಾರೇ ಟಿಬೇಟಿನ ಸ್ವಾಧಿಕಾರ ಸಂಪನ್ನ ಸರ್ವೋಚ್ಚ ಧಾರ್ಮಿಕ ಅಧಿಕಾರಿಯೆಂದು ಅಧಿಕಾರ ವಹಿಸಿದರು.

ದಲಾಯ್ ಲಾಮಾರ ಪದವಿಯು ಟಿಬೇಟದಲ್ಲಿ ಬಹಳ ಗೌರವಪೂರ್ಣವಾಗಿದೆ. ಕ್ರಿಸ್ತೀಯರಲ್ಲಿ ರೋಮದ ಪೋಪರಿಗಿರುವಷ್ಟೆ ಸ್ಥಾನಮಾನಗಳು ಟಿಬೇಟದಲ್ಲಿ ದಲಾಯ್ ಲಾಮಾರವರಿಗಿದೆ. ಇದರಿಂದಾಗಿಯೇ ಟಿಬೇಟಿಯಾನರು ಲಾಮಾರ ಮೇಲೆ ಅಪಾರ ಶ್ರದ್ಧೆಯನ್ನಿಟ್ಟಿದ್ದಾರೆ. ಅವರ ಪ್ರತಿಯೊಂದು ಮಾತನ್ನೂ ಜನರು ವೇದವಾಕ್ಯವೆಂದು ಮನ್ನಿಸುತ್ತಾರೆ

ದಲಾಯ್‌ಲಾಮಾ ಎಂದರೆ, ಜ್ಞಾನ ಮಹಾಸಾಗರ ಎಂದರ್ಥ. ವಾಸ್ತವದಲ್ಲಿ ಲಾಮಾ ಶಬ್ದವು ಮಂಗೋಲ ಭಾಷೆಯ ಶಬ್ದ. ಮಂಗೋಲದಿಂದ ಬಂದೀಗ ಟಿಬೇಟ ಭಾಷೆಯಲ್ಲಿ ಹುದುಗಿ ಕೊಂಡಿದೆ. ಮಂಗೋಲಿಯಾ ಮತ್ತು ಲಾಮಾರ ಸಂಬಂಧ ಪ್ರಾಚೀನವಿರುವುದೇ ಇದಕ್ಕೆ ಕಾರಣವೆನ್ನಬಹುದು. ೧೫೭೮ರಲ್ಲಿ ಮಂಗೋಲಿಯಾನರ ನಿಮಂತ್ರಣವನ್ನು ಸ್ವೀಕರಿಸಿ, ೩ನೆಯ ಲಾಮಾನು ಆದೇಶವನ್ನು ಸಂದರ್ಶಿಸಿದ್ದನು. ಆಗ ಅವನನ್ನು ಅವರು ವಜ್ರಧಾರಿ ದಲಾಯಿ ಲಾಮಾ ಎಂಬ ಬಿರುದಿತ್ತು ಗೌರವಿಸಿದರಂತೆ.

ಇಂದಿಗೂ ತಮ್ಮ ಗುರು ಶಿಕ್ಷಣ ದೀಕ್ಷೆ ಮತ್ತು ಅಧ್ಯಯನಗಳಲ್ಲಿ ಪೂರ್ಣತೆಯನ್ನು ಪಡೆದಿರುವರೆಂಬ ವಿಶ್ವಾಸ ಟಿಬೇಟಿಯಾನರಲ್ಲಿದೆ. ದಲಾಯಿಲಾಮಾರು ಆಯ್ಕೆಯಾದ ಮೇಲೆ, ಅವರನ್ನು ತಮ್ಮ ತಂದೆತಾಯಿಯರಿಂದ ಬೇರೆಯಾಗಿಸುತ್ತಾರೆ. ಲಾಮಾರವರ ಮಹಲಿನಲ್ಲಿಯೇ ಒಂದೆಡೆ ಅವರನ್ನು ಇರಗೊಡುತ್ತಾರೆ. ಬಾಲ್ಯಾವಸ್ಥೆಯಿಂದಲೂ ಅವರ ವ್ಯಕ್ತಿತ್ವವು ಒಂದು ವಿಧದ ಗಾಂಭೀರ್ಯದಿಂದಲೇ ರೂಪಿಸಲ್ಪಡುತ್ತದೆ; ಸೌಮ್ಯವಾಗಿಯೇ ಘಟಿಸಲ್ಪಡುತ್ತದೆ.

ದಲಾಯ್ ಲಾಮಾರ ವೈಭವ ಮತ್ತು ಐಶ್ವರ್ಯಗಳು ಅಪರಿಮಿತ. ಸದ್ಯದ ದಲಾಯ್ ಲಾಮಾರು ಅಧಿಕ ಜನ ಪ್ರಿಯರಾಗಿರುವರು. ಎಂತಲೇ ಅವರ ಮೇಲೆ ಹೇರಿದ ನಿರ್ಬಂಧವನ್ನು ಕೇಳಿದ ಕೂಡಲೇ ಟಿಬೇಟಿಯಾನರು ಉರಿದು ಬಿದ್ದರು. ಲಾಮಾರ ರಕ್ಷಣೆಗಾಗಿ ಟಿಬೇಟಿಯಾನರು ತಮ್ಮ ಜೀವವನ್ನೂ ಮುಡುಪಾಗಿರಿಸಲು ಸಿದ್ಧರಿದ್ದಾರೆ.

ಅನುಭವಾಮೃತ

(೧೧ನೇ ಪುಟದಿಂದ)

ಕದಲ್ಲಿ ಸ್ಕೂಲ್ ಡೇ ದಿನ ಹೀರೋ ಪಾತ್ರ ಅವನದೇ. ಸರಿ! ನಾಟಕದ ಸನ್ನಿವೇಶವೊಂದರ ಬಾಯಿಪಾಠ ಮಾಡಿದ ಪುಟವೊಂದನ್ನು ಸಾಭಿನಯದಿಂದ—ಪ್ರಾರಂಭಿಸಿಯೇ ಬಿಟ್ಟ! ಇಂಗ್ಲಿಷ "ಪಟ ಪಾಟಾ ಪಟ ಪಾಟ್" ಎನ್ನುತ್ತಾ ಮನೆ ತುಂಬ ವ್ಯಾಪಿಸಿತು! ಕಿಟ್ಟು ಎದ್ದು ನಿಂತು ಕೈ ಮೇಲೆ ಮಾಡಿ ಮುಖ ಗಂಟು ಹಾಕಿ "I heard three speak one a speech once — but it was never acted; or if, it was, not above once; for the play I remember in pleased not the millions · · let me see—let me see—the fair daughter and no more!"

ರಾಧಮ್ಮನವರ ಕಂಗಳಲ್ಲಿ ಆನಂದ ಬಾಷ್ಪವಿಳಿದಿದ್ದುವು. ಅಜ್ಜಯ್ಯನೆದ್ದು ಕಿಟ್ಟುವನ್ನು ಹೆಗಲು ತಪ್ಪರಿಸಿ 'ಭೇಷ್. ಕಲಿತಿದ್ದೀ ಕಣೋ, ನಾಗೊತ್ತು—ಕಿಟ್ಟು ಅವನಪ್ಪನಂಗೇ ಅಂತ! ರಾಧುಗೆ ಗಂಡು ಹುಡುಗನಾದ ಯಾರು ನಾನೇ ಅಲ್ವೆ ಜೋಡಿ ನೋಡಿ. ಕಿಟ್ಟುನಂಥವನೇ ಹುಟ್ಲಿ ಅಂತ ಹರಕೆ ಹಾಕ್ಕೊಂಡಿದ್ದೆ! ನಾಳೆಯೇ ಗ್ರಾಮದೇವರಲ್ಲಿ ದೇವಕಾರ್ಯ ಆಗ್ಬೇಕು. ಕಿಟ್ಟು ನೀನು ಓದೋದು ಮಾತ್ರ ಬಿಡಬೇಡ. ಲಂಡನ್ ವರೆಗೂ ಓದ್ಬೇಕು. ನೋಡು ಈ ಇಂಗ್ಲಿಷರ ಗುಟ್ಟು ತಿಳಿದು ಅವರನ್ನು ಅಟ್ಟುವತನಕ ನಮಗೆ ಉಳಿವಿಲ್ಲ!'

— ಸಿರಿಪತಿ

ದಾಂಡೇಲಿ
ಮತ್ತು
ಯಾದಗಿರಿ

ಎರಡು ಹೊಸ
ಶಾಖೆಗಳು
ಸಿಂಡಿಕೇಟಿನ ಬೇಂಕಿಂಗ್
ಸೇವೆಯ ಹೆಚ್ಚಳಕ್ಕಾಗಿ

16—4—1959ರಂದು ತೆರೆಯಲ್ಪಡುವುವು.

ಇಲ್ಲಿಗೆ ನಮ್ಮ ಶಾಖೆಗಳ ಸಂಖ್ಯೆಯು
119 ಆಗುವುದು.

— ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.



ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ.
ವರುಷ ೩೮. ವಾರ ೩೧. 16-4-1959 Vol. 38. No. 31.

ವಿಚಾರ ಮಥನ

ಪಾಕಿಸ್ತಾನದ ಪಂಥಾಹ್ವಾನ

* *

ಭಾರತ ರತ್ನ ಜವಾಹರ

* *

ಮುಂದುವರಿಯಬೇಕೆ?

* *

ಮೂರ್ಖರೊಡನೆ ಸಖ್ಯವನ್ನು ಬೆಳೆಸಿಕೊಂಡರೆ, ಅದೆಷ್ಟು ದಿನ ಉಳಿಯಬಹುದು ಎಂಬ ಪ್ರಶ್ನೆಯನ್ನು ಈಗ ಭಾರತವು ಉತ್ತರಿಸುವ ಕಾಲ ಬಂದಿದೆ. ಹೊರಗೆ ಬಣ್ಣದ ನುಡಿಗಳಿಂದ ಸಖ್ಯ, ಸೌಹಾರ್ದ, ಶಾಂತಿಗಳನ್ನೇ ಬಯಸಿ, ಭಾರತದೊಡನೆ ಹೊಂದಾಣಿಕೆಯಿಂದ ಬಾಳಬಯಸುವ ಪಾಕಿಸ್ತಾನದ ದುರಾಚಾರವು ದಿನೇ ದಿನೇ ಪ್ರವೃದ್ಧಮಾನಸ್ಥಿತಿಗೇರುತ್ತಿದೆ. ಭಾರತ-ಪಾಕ್ ಗಡಿಯಲ್ಲಿ ಮಾಡಬಾರದ ಅನ್ಯಾಯಗಳನ್ನೂ ಗಲಭೆಗಳನ್ನೂ ಮಾಡಿಕೊಂಡು ಭಾರತದ ಸಹನಾಶಕ್ತಿಗೆ ಪಂಥಾಹ್ವಾನವೀಯುವ ಪಾಕಿಸ್ತಾನ ಇದೀಗ ಮತ್ತೂ ಮತ್ತೂ ಮುಂದುವರಿಯುತ್ತಿರುವುದು ಕಂಡು ಬರುತ್ತಿದೆ. ರಾವಲ್ಪಿಂಡಿಯ ಸಮೀಪದಲ್ಲಿ ಭಾರತದ ಒಂದು ವಿಮಾನವನ್ನು ಗುಂಡಿಟ್ಟು ಕೆಳಗುರುಳಿಸಿದರು ಎಂಬ ವಾರ್ತೆಯು ಖೇದದಾಯಕವಾಗಿದೆ. ಈ ಘಟನೆ ನಡೆಯಲು ಪಾಕಿಸ್ತಾನವು ಯಾವುದೇ ಕಾರಣವನ್ನು ಮುಂದಿಟ್ಟರೂ ಈ ಕೃತ್ಯವು ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಯಿಂದಲೂ ಅನ್ಯಾಯವಾಗಿದೆ ಎಂಬುದನ್ನು ಗಮನಿಸಬೇಕು. ಅತ್ತ ಕಾಶ್ಮೀರದ ಸೈನಿಕ ಕ್ಷೇತ್ರವನ್ನು ಗುಲಾಮ್ ಎಂಬ ಪಾಕ್ ಸಂಚಾರಿಯು ಅಕ್ರಮವಾಗಿ ಪ್ರವೇಶಿಸಲು ಪ್ರಯತ್ನಿಸುತ್ತಿರುವಾಗ ಬಂಧಿಸಲ್ಪಟ್ಟನೆಂದೂ ಸುದ್ದಿ ಬಂದಿದೆ. ಕಾಶ್ಮೀರದ ಯುದ್ಧವಿರಾಮ ರೇಖೆಯ ಸಮೀಪದ ಸುಥಪುರದ ಹತ್ತಿರದ ಒಂದು ಹಳ್ಳಿಯಲ್ಲಿ ಪರಿಶೀಲನೆ ನಡೆಸುತ್ತಿದ್ದ ಸಂಯುಕ್ತ ರಾಷ್ಟ್ರ ಸಂಘದ ವೀಕ್ಷಕರ ತಂಡವೊಂದರ ಮೇಲೆಯೂ ಪಾಕಿಸ್ತಾನವು ಮೆಶಿನುಗನ್ನುಗಳನ್ನು ಹಾರಿಸಿದೆ ಎಂದು ಶ್ರೀನಗರದ ವಾರ್ತೆಯಿದೆ ಹೀಗೆ ಒಂದಲ್ಲ ಹಲವು ಅವಿವೇಕಯುತ ಕರ್ಮಗಳಿಂದ ಪಾಕಿಸ್ತಾನವು ತನ್ನ ಮೂರ್ಖತನವನ್ನೂ ಈರ್ಷೆಯನ್ನೂ ಪ್ರಕಟಗೊಳಿಸುತ್ತ ಬರುತ್ತಿದೆ ನಿರಪರಾಧಿ ಭಾರತೀಯ ವಿಮಾನವನ್ನು ಉರುಳಿಸುವುದರಲ್ಲಿ ಪಾಕೀಸ್ಥಾನಕ್ಕೆ ಯಾವ ದುರುದ್ದೇಶವೂ ಇಲ್ಲವೆಂದು ಹೇಳುವುದು ಹೇಗೆ? ಪಾಕಿಸ್ತಾನ ಸರಕಾರಕ್ಕೆ ಮಾಮೂಲು ಪ್ರಕಾರ ಈ ಕೃತ್ಯಕ್ಕೆ ವಿರೋಧ ಸೂಚಿಸುವ ಪತ್ರವು ಭಾರತದಿಂದ ಹೋಗುವುದು ಸ್ವಾಭಾವಿಕ. ಆದರೂ ಮೂರ್ಖನಿಗೆ ಬುದ್ಧಿಯನ್ನು ನೂರ್ಕಾಲ ಹೇಳಿದರೆ ಅದರಿಂದ ಪ್ರಯೋಜನವಿದೆಯೆ? ಅಂತಲೇ ಮೂರ್ಖಸ್ಯ ನಾಸ್ತ್ಯೌಷಧಂ ಎಂಬುಕ್ತಿಯಿದೆ. ಆದರೆ ಈ ಮೂರ್ಖರನ್ನು ಶಾಂತಿಪ್ರಿಯರಾದ ಭಾರತೀಯರು ಕಟ್ಟಿಕೊಂಡು ಏನು ಮಾಡಬೇಕೆಂಬುದೇ ಮಹಾ ಪ್ರಶ್ನೆಯಾಗಿದೆ. ಭಾರತದ ಸತ್ವ ಪರೀಕ್ಷೆಯ ಕಾಲ ಸನ್ನಿಹಿತವಾಗುತ್ತಿದೆ ಎಂಬುದರ ಸೂಚನೆಗಳೇ ಪಾಕಿಸ್ತಾನದಿಂದ ಅವ್ಯಕ್ತವಾಗಿ ಬರುತ್ತಿವೆಯೆ?

○○ ○○ ○○



ಹೆನ್ರಿ ಕಬೇಟ್ ಲೋಜರು ಅಂತಾರಾಷ್ಟ್ರೀಯ ಧ್ರುವ ಪರಿಶೀಲನಾನಿಲಯವನ್ನು ತೋರಿಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಭಾರತ ಮತ್ತು ಭಾರತೀಯರ ಬಗ್ಗೆ ತಮ್ಮ ಸಹಾನುಭೂತಿಯನ್ನೋ ಸಂತಾಪವನ್ನೋ ಅನೇಕಾನೇಕ ಮಹಾವ್ಯಕ್ತಿಗಳು ಪ್ರದರ್ಶಿಸಬಹುದು. ಭಾರತದಲ್ಲಿಯೂ ವಿಶಾಲ ಮನೋಭಾವನೆಯಿಂದ ಭಾರತೀಯತ ಮೇಲ್ಮೆಯನ್ನೇ ಬಯಸುವ ಪರಹಿತರಿರಬಹುದು. ಆದರೆ, ಅಹರ್ನಿಶಿ ಭಾರತೀಯರ ಮಾತ್ರವಲ್ಲ ವಿಶ್ವದ ಪ್ರಜೆಗಳೆಲ್ಲರ ಸುಖವನ್ನು ಹಾರೈಸುವ ವಿಶಾಲಹೃದಯಿ ಪಂಡಿತ ನೆಹರೂ ನಮ್ಮ ಪ್ರಧಾನಿಯಾಗಿದ್ದಾರೆ. ಭಾರತವೆಂದರೆ ನೆಹರೂ ಎಂದು ವಿದೇಶೀಯರು ಅನ್ನಬಹುದು; ಆದರೆ, ನೆಹರೂ ಎಂದರೆ ಭಾರತ ಎಂದು ಅವರು ತಿಳಿದಿರಬಾರದು ದಿನದ ಇಪ್ಪತ್ತು ಗಂಟೆಗಳ ಕಾಲ ವೈಯಕ್ತಿಕ ಹಿತಚಿಂತನೆಯನ್ನು ಬದಿಗಿರಿಸಿ, ನಲುವತ್ತು ಕೋಟಿ ಭಾರತೀಯರ ಹಿತಚಿಂತನೆಗಾಗಿ ದುಡಿಯುವ ನೆಹರೂ ಏನೆಂದರೂ ಅದಕ್ಕೊಂದು ಬೆಲೆಯಿದೆ ಭಾರತೀಯರ ಬಡತನವನ್ನು ದೂರ ಮಾಡಲು ದರಿದ್ರತನದೊಡನೆ ಹೋರಾಟ ಹೂಡಬೇಕು; ಆಲಸ್ಯದೊಡನೆ ಕಾದಾಡಬೇಕು ಎಂದು ಉಪದೇಶಿಸುವ ನೆಹರೂ ಭಾರತದ ಮಹಾ ಸಮಸ್ಯೆಯ ಪರಿಹಾರಕ್ಕೆ, ದೇಶದ ಉತ್ಪಾದನೆಯನ್ನು ಹೆಚ್ಚಿಸಲು ತಕ್ಕ ವಾತಾವರಣವನ್ನು ನಿರ್ಮಿಸಬೇಕು ಎಂದೀಗ ಹೇಳತೊಡಗಿದ್ದಾರೆ ಜನರ ಆರ್ಥಿಕ ಪರಿಸ್ಥಿತಿಯು ಸುಧಾರಿಸಬೇಕಾದರೆ, ವೇತನ ಮಟ್ಟವು ಹೆಚ್ಚಬೇಕು; ಈ ವೇತನದ ಏರಿಕೆಯು, ಉತ್ಪಾದನೆ ಹೆಚ್ಚಾದರೆ ಮಾತ್ರ ಸಾಧ್ಯ. ಒಂದಷ್ಟು ಕಾಗದದ ಚೂರುಗಳಲ್ಲಿ ನೋಟುಗಳನ್ನು ಅಚ್ಚು ಹಾಕಿಸಿದ ಮಾತ್ರಕ್ಕೆ ದೇಶದ ಆದಾಯವು ಹೆಚ್ಚಿದಂತಾಗಲಿಲ್ಲ. ಆ ನೋಟುಗಳಿಗೆ ಯಾವ ಬೆಲೆಯೂ ಬಾರದೆ ಹೋಗಬಹುದು. ದೇಶವು ದಿವಾಳಿತನವನ್ನೂ ಎದುರಿಸಬೇಕಾಗಿ ಬರಬಹುದು. ಆದರೆ, ಪರಿಶ್ರಮ ಸಹಿತವಾಗಿ ದುಡಿದಲ್ಲಿ, ರಾಷ್ಟ್ರದ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಿದಲ್ಲಿ, ಆಗ ಪ್ರತಿ ರಾಷ್ಟ್ರೀಯನ ವೈಯಕ್ತಿಕ ಹಿತಾಕಾಂಕ್ಷೆಯೂ ಈಡೇರುವುದು. ಆದುದರಿಂದಲೇ ಪರಿಶ್ರಮ ಪೂರ್ವಕವಾಗಿ ದುಡಿದು ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾದ ವಾತಾವರಣವನ್ನು ನಿರ್ಮಿಸಲು ಹೆಣಗಬೇಕು ಎಂದ ಪ್ರಧಾನಿ ನೆಹರೂ ವಿನಂತಿಸಿದ್ದಾರೆ. ಇಂತಹ ವಾತಾವರಣ ನಿರ್ಮಿಸುವುದೆಂದರೆ, ಸ್ವಯಂ ಪರಿಶ್ರಮಶೀಲನಾಗುವುದೆಂದು ಬೇರೆ ಹೇಳಬೇಕಾದ ಆವಶ್ಯಕತೆಯಿಲ್ಲ ತಾನೆ?

○○ ○○ ○○

ಈ ವರ್ಷದ ಮದ್ರಾಸು ಕರ್ನಾಟಕದ ಎಂಟನೆ ತರಗತಿಯ ಸರಕಾರಿ ಪರೀಕ್ಷೆಯ ಪ್ರಶ್ನಪತ್ರಗಳ ಮೇಲೆ ಕಟು ಟೀಕೆಗಳು ಬರಲಾರಂಭಿಸಿವೆ ಅವೆಲ್ಲವೂ ಸತ್ಯವೆಂದು ಒಪ್ಪಬೇಕು. ಪ್ರಶ್ನಪತ್ರಗಳನ್ನು ಉತ್ತರಿಸ

(೧೩ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)
ಪ್ರಧಾನ ಕಛೇರಿ:- ಮಂಗಳೂರು—3. ಸ್ಥಾಪನೆ:- 1931.
ಕಾಯಂ ಠೇವಣಾತಿ ಬಡ್ಡಿ ದರ
1 ತಿಂಗಳಿಂದ 5 ತಿಂಗಳ ವರೆಗೆ 4¼%
6 ,, 12 ,, 4½%
13 ,, 24 ,, 4¾%
ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ¼% ಅಧಿಕ ಬಡ್ಡಿ ಕೊಡಲ್ಪಡುವುದು.
ಹಲವು ವಿಧದ ಉಳಿತಾಯ ಯೋಜನೆಗಳ ಪ್ರಯೋಜನ ಪಡೆಯಿರಿ.
ಹೆಚ್ಚಿನ ವಿವರಕ್ಕೆ ನಮ್ಮ ಸಮೀಪದ ಶಾಖೆಯಲ್ಲಿ ವಿಚಾರಿಸಿರಿ.
ನಮ್ಮ ಶಾಖೆಗಳು:
ಮಂಗಳೂರು. ಬೆಂಗಳೂರು, ಬೊಂಬಾಯಿ, ಮೈಸೂರು, ಮಡಿಕೇರಿ, ಇತ್ಯಾದಿ....ಇತ್ಯಾದಿ ...

NAVAYUGA WEEKLY, UDIPI, S. India.

ಕಥಾ ವಿಹಾರ

ಅವಳಿಗಾಗಿ

ಎಲ್ಲಾ ತ್ಯಜಿಸಿದ

ಎಲ್ಲವನ್ನೂ ಬಿಟ್ಟರೂ ಆಕೆಯನ್ನು ಬಿಡಲಿಲ್ಲ ಶೇಖರ, ಅವಳು..?

ಬಾರಿ ಬಾರಿಗೂ ಅದೇ ವಿಷಯ. ಶೇಖರನ ಅಜ್ಜಿ ಸಾಯುವಾಗ ಶೇಖರನ ಮದುವೆ ಮಾಡಿ ಸಾಯುವೆ ಎಂದು ತನ್ನ ಮಗ ಸೋಮಪ್ಪನವರಿಗೆ ಹೇಳುತ್ತಿದ್ದಳು. ಶೇಖರನು ಆಗ ಬಿ. ಎಸ್‌ಸಿ. ಮೊದಲನೆಯ ವರ್ಗದಲ್ಲಿ ಪಾಸಾಗಿದ್ದ, ಮುಂದೆ ಎಂ. ಬಿ. ಬಿ. ಎಸ್. ಕಲಿಯಲಿಕ್ಕೆ ಹೊರಟಿದ್ದ. ಒಂದು ದಿನ ಸೋಮಪ್ಪನವರು ಶೇಖರನಿಗೆ "ಶೇಖರ, ನಿನ್ನ ಮದುವೆಗೆ ನನ್ನ ಸ್ನೇಹಿತ ಸಹದೇವನ ಮಗಳು ಶಾರದೆಯನ್ನು ಗೊತ್ತುಮಾಡಿದ್ದೇನೆ. ಅವರು ನಿನಗೆ ಕಲಿಯಲು ದುಡ್ಡು ಕೊಡುವರು" ಎಂದರು ಇದನ್ನು ಕೇಳಿದೊಡನೆ ಶೇಖರ ತುಂಬಾ ನಿರಾಶನಾದನು ಕೊನೆಗೆ ತನ್ನ ತಂದೆಗೆ 'ಅಪ್ಪಾ ನಾನು ಇಂದೂವಿನೊಡನೆ....." ಎನ್ನುವಾಗಲೇ "ಸಾಕು ನಿನ್ನ ಅವಿವೇಕತನ, ಅವರು ವರದಕ್ಷಿಣೆ ಕೊಡುವದಿಲ್ಲ" ಎಂದು ಸಿಟ್ಟಿನಿಂದ ನುಡಿದಿದ್ದರು

ಶೇಖರನು ಈ ವಿಷಯವನ್ನು ಚರ್ಚಿಸಿ, ಚರ್ಚಿಸಿ, ಸಾಕುಬೇಕಾಗಿದ್ದ ಒಮ್ಮೊಮ್ಮೆ ವಿಚಾರತರಂಗದಲ್ಲಿ ಮುಳುಗಿದರೆ ಆತನಿಗೆ ದಡ ಸಿಕ್ಕುವದು ಕಷ್ಟವಾಗುತ್ತಿತ್ತು. ಶೇಖರ ತನ್ನ ಮದುವೆಗೆ ತನ್ನ ಪ್ರಾಣಕ್ಕಿಂತ ಹೆಚ್ಚಿನ ಇಂದಿರಾಳನ್ನು ಬಿಟ್ಟು ಆ ಶಾರದೆಯನ್ನೇ ಚೀ, ಚೀ, ಅದಾಗದು ಪ್ರಾಣ ಹೋದರೂ ಪರವಾಯಿಲ್ಲ ಆ ಶಾರದೆಯ ಸಂಗಡ ಮದುವೆ ಆಗದು. ಎಂದಿಲ್ಲದೊಂದು ದಿನ ಸಾಯುವದಲ್ಲವೇ" ಎಂದು ಅನೇಕ ವಿಚಾರ ಮಾಡಿ ಸಾಕುಬೇಕಾಗಿದ್ದ. ಒಮ್ಮೆ ಈ ವಿಷಯ ಇಂದೂನಿಗೂ ತಿಳಿಸಿದಾಗ "ಶೇಖರ .. ನನಗಾವುದೂ ತಿಳಿಯುವದಿಲ್ಲ ನೀನು ಆ ಶಾರದೆಯನ್ನೇ ಮದುವೆಯಾದಲ್ಲಿ ನನ್ನ ಮುಖ ನೀನು ಮತ್ತೆ ಕಾಣುವದಿಲ್ಲ ದೇವರೇ ಈಗ ನಮ್ಮಿಬ್ಬರನ್ನು ಅಗಲಿಸುವದಕ್ಕಿಂತ ನನ್ನನ್ನು ಚಿಕ್ಕವಳಿರುವಾಗಲೇ ಕೊಂದುಬಿಟ್ಟಿದ್ದರೆ ಎಷ್ಟು ಚೆನ್ನಾಗುತ್ತಿತ್ತು' ಎನ್ನುವಾಗಲೇ "ಇಂದೂ ನಾನಿರುವಾಗ ನೀನೇಕೆ ಭಯಪಡಬೇಕು, ಅವರು ಅಂದ ವಿಷಯ ಅಷ್ಟೇ ಹೇಳಿದೆ "I may live without air and water but not without you" ನಿನ್ನನ್ನು ಅಗಲಿ ಒಂದು ಗಳಿಗೆಯಾದರೂ ಜೀವಿಸಲಾರೆ ಅಳಬಾರದು. ಅತ್ತರೇನಾಗತ್ತದೆ ("Even trident of Shiva has no power to destroy him" ಕಸ್ತ) ಪರಮೇಶ್ವರನ ಕೈಯಲ್ಲಿರುವಂತ ತ್ರಿಶೂಲಕ್ಕೂ ಮನುಷ್ಯನನ್ನು ನಾಶಮಾಡುವ ಅಧಿಕಾರವಿಲ್ಲದಾಗ ನಮ್ಮಿಬ್ಬರನ್ನು ಯಾವ ತಾನೇ ಅಗಲಿಸುವದು" ಎಂದು ಅವಳಿಗೆ ಸಮಾಧಾನಪಡಿಸಿದನು

ಇಂದೂ ಶೇಖರರು ಬಾಲ್ಯದಿಂದಲೇ ಕೂಡಿ ಬೆಳೆದವರಲ್ಲದೇ ಕೂಡಿಯೇ ಆಟ್ಟಹತ್ತಿದ್ದುದರಿಂದ ಅವರಿಬ್ಬರೂ ತುಂಬಾ ಸಲಿಗೆ ಎಂದರೆ ತುಂಬಾ ಸಲಿಗೆ ತುಂಬಾ ಆತ್ಮೀಯತೆ ಎಂದರೆ ಆತ್ಮೀಯತೆ ಇವಳಿಗೆ ನೋವಾಯಿತೆಂದರೆ, ಅವನಿಗೆ ನೋವಾದಂತೆ ಅವನಿಗೆ ನೋವಾಯಿತೆಂದರೆ ಇವಳಿಗೆ ನೋವಾದಂತೆ ಆಗುತ್ತಿತ್ತು ಹಾಗಾಗಲು ಕಾರಣವೇನಂದರೆ—

ಒಮ್ಮೆ ಶೇಖರನ ಮನೆಯವರೆಲ್ಲರೂ ಕಾಶಿಯಾತ್ರೆಗೆ ಹೋಗಿದ್ದರು. ಅವರು ಹೋದ ಮರುದಿನವೇ ಶೇಖರನಿಗೆ ಟಾಯಿಫಾಯಿಡ್ ಆಯಿತು ಡಾಕ್ಟರರ ಕಾಟ್ ಬಿಟ್ಟು ಏಳಕೂಡದೆಂದು ಕಟ್ಟಪ್ಪಣೆ ಮಾಡಿದ್ದರು. ಮನೆಯಲ್ಲಿ ಈತನ ಉಪಚಾರಕ್ಕಾಗಿ ಯಾರೂ ಇರಲಿಲ್ಲ ಈ ಸಂಗತಿ ಇಂದೂನಿಗೆ ತಿಳಿದಾಗ ನರವಿಲ್ಲದೇ ಓಡುತ್ತ ಶೇಖರನ ಮನೆಗೆ ಬಂದಳು. ಶೇಖರ ಹಾಯಾಗಿ ಕಾಟಿನ ಮೇಲೆ ಮಲಗಿದ್ದಾನೆ ಇಂದೂನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು ಮೆಲ್ಲನೇ ಕಾಟಿನ ಬದಿ ಬಂದು 'ಶೇಖರ' ಎಂದಳು. 'ಹಾಂ ಯಾರದು?' ಎಂದು ಹೊರಳಿ ನೋಡುವಾಗ 'ಹೊರಳಬೇಡ ಶೇಖರ ನಾನು ಇಂದಿರಾ. ಡಾಕ್ಟರರು ಅಲುಗಾಡಬೇಡವೆಂದಿದ್ದಾರೆ ಕಾಫಿಯನ್ನಾದರೂ ಮಾಡಲೇ?' ಎಂದಳು. "ನನಗೇನೂ ಬೇಕಿಲ್ಲ ಇಂದಿರಾ, ಟಾಯಿಫಾಯಿಡ್ ಜ್ವರ ನನ್ನ ಸ್ನೇಹಿತ ಬರುತ್ತಾನೆ, ನೀನು ಮನೆಗೆ ಹೋಗು" ಎಂದ. 'ಯಾವ ಜ್ವರವಾದರೇನು?' ನಾನು ಮಾತ್ರ ಇಲ್ಲಿಂದ ಕದಲುವದಿಲ್ಲ ನಿನಗಾರು ಉಪಚಾರ ಮಾಡಬೇಕು?" ಎಂದು ಅವರ ಮನೆಯವರು ಬರುವ ವರೆಗೂ ಹಗಲಿರುಳೆನ್ನದೇ, ಶೇಖರನಿಗೆ ಔಷಧ, ಚಹ, ಕಾಫಿ, ವೇಳೆಗೆ ಸರಿಯಾಗಿ ಕೊಡುತ್ತಿದ್ದಳು" ಅದನ್ನು ಕಂಡು ಆ ದಿನವೇ ನಿಜವಾಗಿ ಮದುವೆ ಮಾಡಿಕೊಳ್ಳುತ್ತೇನೆಂದು ಅವಳಿಗೆ ವಚನವಿತ್ತಿದ್ದ. ಮನೆಯವರು ಬರಬೇಕಾದರೆ ಒಂದು ತಿಂಗಳ ಮೇಲೆ ಆಯಿತು. ಅವರು ಬಂದಾಗ ಶೇಖರನಿಗೆ ಗುಣವಾಗಿತ್ತು ತಾವು ಊರಿಗೆ ಹೋದಾಗ ಶೇಖರನಿಗೆ ಉಪಚಾರಮಾಡಿದ ಇಂದೂನನ್ನು ಬಾಯಿ ತುಂಬ ಹೊಗಳಿದ್ದರು.

ಮತ್ತೆ ಸೋಮಪ್ಪನವರಿಗೆ ಎಂ. ಬಿ. ಬಿ. ಎಸ್. ಕಲಿಯಲಿಕ್ಕೆ ಹಣ ಕೇಳಿದರೆ ಮತ್ತೂ ಅದೇ ವಿಷಯವೇ" ನನ್ನ ಹತ್ತಿರ ದುಡ್ಡಿಲ್ಲ ಶಾರದೆಯನ್ನು ಮದುವೆಯಾದರೆ ಮಾತ್ರ ನಿನಗೆ ಅವರು ದುಡ್ಡು ಕೊಡುವರು" ಎಂದೆನ್ನುತ್ತಿದ್ದರು ಶೇಖರ ಇನ್ನು ಹಣ ಕೇಳಬಾರದೆಂದು ರಾತ್ರಿ ಅವನ ತಂದೆ ಮಲಗಿದ ಕಾಟಿನ ಮೇಲೆ ಚೀಟಿ ಬರೆದಿಟ್ಟು ಶೇಖರ ಮಧ್ಯರಾತ್ರಿಯಲ್ಲಿ ಇಂದೂನನ್ನು ಕರೆದುಕೊಂಡು ಮುಂಬಯಿಗೆ ಹೋದ

ಮರುದಿನ ಮುಂಜಾನೆ ಸೋಮಪ್ಪನವರು ಎದ್ದು ನೋಡಿದಾಗ ಪಕ್ಕದಲ್ಲಿ ಚೀಟಿ ಬಿದ್ದದನ್ನು ಕಂಡು ಓದತೊಡಗಿದರು.

ತಂದೆಯವರಿಗೆ —ವಂದನೆಗಳು.

ನಿಮಗೆ ಎಷ್ಟು ಬಾರಿ ಹೇಳಿದರೂ, ನೀವು ಆ ವಿಷಯವನ್ನೇ ಮುಂದುಮಾಡಿದಿರಿ. ಇಂದಿನಿಂದ ನಿಮ್ಮ ಆಸ್ತಿಪಾಸ್ತಿಗಳೇನೂ ಬೇಕಿಲ್ಲ ಇಂದಿರಾನೇ ನನಗೆ ಸರ್ವಸ್ವ ಹೆಚ್ಚಿಗೆ ಬರೆದರೆ ಏನು ಪ್ರಯೋಜನವಿಲ್ಲ. ನನ್ನ ಹಾಗೆ ನನ್ನ ತಮ್ಮ ಪ್ರಕಾಶನಿಗೂ ಹಾಗೆ ಮಾಡದಿರಿ

ಇಂತು ನಿಮ್ಮ
—ಶೇಖರ

ಈ ಕಾಗದ ಕಂಡೊಡನೆ ಸೋಮಪ್ಪನವರು "ಹೋಗಿದ್ದಾನೆ ಅವಿವೇಕಿ, ದುಡ್ಡಿಲ್ಲದೇ ಎಷ್ಟುದಿನ ಬದುಕುತ್ತಾನೆ ನೋಡೋಣ ಒಂದು ತಿಂಗಳಲ್ಲಿಯೇ ಬರುತ್ತಾನೆ" ಎಂದು ಸುಮ್ಮನಾದರು

ಮುಂಬಯಿ ಪಟ್ಟಣದಲ್ಲಿ ನೌಕರಿಗಾಗಿ ಅಲೆದಲೆದು ಎರಡು-ಮೂರು ದಿನ ಉಪವಾಸ ಬೀಳಬೇಕಾಯಿತು ಆದರೂ ನೌಕರಿ ದೊರೆಯಲಿಲ್ಲ. ಕೊನೆಗೆ ಇಂದಿರಾ— "ಶೇಖರ ನೀನು ನೌಕರಿ ಮಾಡುವದು ಬೇಕಿಲ್ಲ M B B S ಕಲಿಯಬೇಕು" ಎಂದು ದಿನಾಲು ಮನೆಗೆ ಬಂದ ತಕ್ಷಣವೇ ಇದೇ ವಿಷಯ ಪ್ರಾರಂಭಿಸುತ್ತಿದ್ದಳು ಈ ವಿಷಯ ಕೇಳಿ, ಕೇಳಿ, ಒಂದು ದಿನ ಶೇಖರ "ಇಂದೂ ನೀನನ್ನುವದೂ ನಿಜ M B B S ಕಲಿಯುವದಾದಲ್ಲಿ ದುಡ್ಡು ಬೇಕಲ್ಲ" ಎಂದ ದುಡ್ಡು ಎಂದೊಡನೆ ಇಂದಿರಾ ಕೈಯಲ್ಲಿಯ ಭಂಗಾರದ ಆಭರಣಗಳನ್ನು ಬಿಚ್ಚಿ, ಇವನ್ನೊಯ್ದು ಮಾರಿಬಿಡಿ ಬಂದ ಹಣದಲ್ಲಿ 'ಉಷಾ'ರಾಟೆಯನ್ನು ಉಳಿದ ಹಣವನ್ನು ನಿಮ್ಮ ಕಾಲೇಜಿಗೆ ಕಟ್ಟಿಬಿಡಿ" ಎಂದು ಬಲವಂತಮಾಡಿ, ಶೇಖರನನ್ನು ಪೇಟೆಗೆ ಕಳುಹಿಸಿದಳು.

ಶೇಖರನು ಬಂದ ಹಣದಲ್ಲಿ 'ಉಷಾ'ರಾಟೆಯನ್ನು ಉಳಿದ ಹಣವನ್ನು ಕಾಲೇಜಿಗೆ ಕಟ್ಟಿ, M. B. B. S. ಕಲಿಯಲು ಪ್ರಾರಂಭಮಾಡಿದ. ಇತ್ತ ಇಂದೂ, ನೆರೆ-ಹೊರೆ ಹೆಣ್ಣುಮಕ್ಕಳ ಬಟ್ಟೆಯನ್ನು ಹೊಲೆದು ಬಂದ ಹಣದಲ್ಲಿ ಮನೆತನ ಸಾಗಿಸಹತ್ತಿದಳು ಶೇಖರನು ಸಾಯಂಕಾಲ ಕೆಲ ಹುಡುಗರಿಗೆ, ಮನೆಯಲ್ಲಿ ಅಭ್ಯಾಸ ಹೇಳಿ ಆತನೂ ಬಂದ ಹಣ, ಕಲಿಯಲು ಉಪಯೋಗಿಸತೊಡಗಿದ

ಒಂದುಸಲ ಬೇಡವಾಯಿತೆಂದರೆ ಆ ವಸ್ತುವಿನ ಕಡೆಗೆ ತಿರುಗಿ ಸಹ ನೋಡದಿರುವದು ಸೋಮಪ್ಪನವರ ಸ್ವಭಾವ. 'ತನಗಿಲ್ಲದಾವಸ್ತು ಎಲ್ಲಿದ್ದರೇನು?' ಎಂಬ ವಚನದಂತೆ, ಸೋಮಪ್ಪನವರ ಮಾತನ್ನು ಕೇಳದೇ ಶೇಖರ ಹೋದುದರಿಂದ 'ಮಾತು ಕೇಳದವನು ಇದ್ದರೇನು? ಹೋದರೇನು?' ಎಂದು ಶೇಖರನ ವಿಷಯವಾಗಿ, ಸೋಮಪ್ಪನವರು ಬಿಟ್ಟು ಬಿಟ್ಟಿದ್ದರು ಶೇಖರನಿಗೆ ಕೊಡಬಯಸಿದ ಶಾರದೆಯನ್ನೇ ಪ್ರಕಾಶನಿಗೆ ಮದುವೆ ಮಾಡಿದರು.

'ನಾಗರ ಪಂಚಮಿ' ನಾಡನಾರಿಯರು ತಮ್ಮ ಗಂಡಂದಿರ ಮನೆಯಿಂದ ಬರುವ ಸುದಿನ' 'Unity of the women' ಎಲ್ಲ ಹೆಣ್ಣುಮಕ್ಕಳನ್ನು ಕೂಡಿಸುವ ಹಬ್ಬ' ಎಲ್ಲರೂ ಆ ದಿನ ನಾಗರಾಜನಿಗೆ ಹಾಲನ್ನೆರೆದು, ಉಂಡಿತಿಂದು, ಜೋಕಾಲಿ ಜೀಕಿ, ಆನಂದದಿಂದ ಇರುವ ದಿನ! ಆ ದಿನ ಪಾಪ ಆ ಬಡ ಪ್ರಾಣಿಗಳಿಗೆ ಉಂಡಿ ತಿನ್ನುವ ಸುಯೋಗ ಬರಲಾರದೇ? ಆ ದಿನ ಇಂದೂ, ಶೇಖರನ ತಾಟಿನಲ್ಲಿ ರೊಟ್ಟಿ ನೀಡುವಾಗ ಆಕೆಯ ಕಣ್ಣೊಳಗಿಂದ ತಟಕ್ಕನೇ ಎರಡು ಹನಿ ಕಣ್ಣೀರಿಳಿದು ಅವಳ ಕೆನ್ನೆಯ ಮೇಲೆ ಇಳಿಯಲಾರಂಭಿಸಿದವು ಅದನ್ನು ಕಂಡು ಶೇಖರ "ಇಂದಿರಾ ಇಂಥ ಆನಂದದ ದಿನದಲ್ಲಿ ಕಣ್ಣೀರು ಸುರಿಸುವಿಯಲ್ಲಾ!' ಎಂದು ಅದಾವುದನ್ನು ಅರಿಯದ ಶೇಖರ ಅವಳನ್ನು ಕೇಳಿದ "ಏನೂ ಇಲ್ಲರಿ" ಎಂದು ನಿಟ್ಟುಸಿರು ಬಿಟ್ಟಳು. "ಇಂದಿರಾ ನಿನ್ನ ಹೃದಯವನ್ನು ಆವರಿಸಿರುವ ದುಃಖವನ್ನು ನನ್ನೆದುರು ಹೇಳುವದಿಲ್ಲವೇ?" ಎಂದ. "ಏನೂ ಇಲ್ಲ ಶೇಖರ ಎಲ್ಲರೂ; ಉಂಡಿಯನ್ನು ನೀಡುವ ಸಮಯದಲ್ಲಿ ನಾನು ನಿನಗೆ ರೊಟ್ಟಿ ನೀಡಿದೆ

(೧೧ನೇ ಪುಟ ನೋಡಿರಿ)

ರಾಮತೀರ್ಥ
ಬ್ರಾಹ್ಮೀ ತೈಲ

ಟ್ರೈಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಒಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—
4 ತಿಂಗಳ ವರೆಗೆ 4%
5 ರಿಂದ 12 ,, 4¼%
13 ,, 24 ,, 4½%
ರೂ. 10,000/- ಮತ್ತು ಮೇಲಣ
ಹಣಕ್ಕೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ 1%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್ ಯಚ್. ಪೂಂಜ
ಮೆನೇಜರ್
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ. 1929

ಶುದ್ಧ ಹರಟೆ

ಧರ್ಮ ಸಂಕಟದ ನಡುವಿನ ಧರ್ಮ

ಧರ್ಮವೂ ಪರಿವ್ರಾಜಕವಾಗಿ ಪರಿಣಮಿಸಲು ಕಾರಣ ಹೇಳಬಲ್ಲಿರಾ?

ಅದೊಂದು ಕಾಲವಿತ್ತು. ಆಗ ಧರ್ಮವು ನಾಲ್ಕು ಕಾಲುಗಳಿಂದ ಲೋಕ ಸಂಚಾರ ಮಾಡುತಿತ್ತಂತೆ! ಆಗಲೇ—"ಧರ್ಮೋ ರಕ್ಷತಿ ರಕ್ಷಿತಃ" ಎನ್ನುವ ವೇದ ವಾಕ್ಯವು ಯಾವುನೋ ಪುಣ್ಯಾತ್ಮನ ಹೊಟ್ಟೆಯಲ್ಲಿ ಕೃತಕ ಗರ್ಭಧಾರಣೆಯಾಗಿ ಜನಿಸಿರಬೇಕು. ಆಗಲೇ— "ಸತ್ಯ ವಾಕ್ಯಕೆ ತಪ್ಪಿನಡೆದರೆ ಮೆಚ್ಚನಾ ಜಗದೀಶನು..." ಎನ್ನುವ ಮುತ್ತಿನಂಥಾ ಮಾತನ್ನು ಆ ಮೂಕ ಪ್ರಾಣಿಯಾದ ಪುಣ್ಯಕೋಟಿಯು ಬಾಯಿಯಿಂದ ಕೈ ಹಾಕಿ ಹೊರಗೆ ಎಳೆದು ಹಾಕಿರಬೇಕು! ಆದರೆ ಈ ಕಾಲವೋ ಅದಕ್ಕೆ ತೀರ ಪ್ರತಿಕೂಲವಾಗಿದೆ ಎನ್ನಲು ದಾಕ್ಷಿಣ್ಯಪಡರೂ ಸ್ಪಷ್ಟವಾಗಿ ಹೇಳಬೇಕಾಯ್ತು. ಧರ್ಮದ ನಾಲ್ಕು ಕಾಲುಗಳೂ ಪಕ್ಷವಾತದಿಂದ ನರಳುತ್ತಾ ಒಂದೆಡೆ ಬಿದ್ದುಕೊಂಡಿರಬೇಕಾಗಿದೆ—ಹೌದು—ಕೆಲವು ಯುಗಗಳೇ ಹೇಳದೆ ಕೇಳದೆ ಕಳೆದು ಹೋದ ಮೇಲೆ ಈ ಧರ್ಮಕ್ಕಾದರೂ ಮುದಿ ಪ್ರಾಯ ಬಾರದಿರುವುದುಂಟೇ? ಯೌವನದ ಹುಮ್ಮಸದಲ್ಲಿ ಬೀದಿ ಬೀದಿ ಓಣಿ ಓಣಿ ಸುತ್ತಾಡಿಕೊಂಡು 'ನಾನೂ ಇದ್ದೇನೆ' ಎನ್ನುವ ನೆನಪನ್ನು ಜನರಲ್ಲಿ ಉಳಿಸಿ ಅದೆಷ್ಟು ಕಾಲ ಬದುಕೀತು? ಅದಕ್ಕೂ ಒಂದು ಕೊನೆ ಎಂಬುದು ಬೇಕಲ್ಲ! ಪರಮಾತ್ಮನು ಸೃಷ್ಟಿ ಮಾಡಿದ ಪ್ರತಿಯೊಂದು ವಸ್ತುವೂ ಒಂದಲ್ಲ ಒಂದು ದಿನ ನಾಶವಾಗಲೇಬೇಕೆಂಬ ನಿಯಮವಿರುವಾಗ, ಈ ಧರ್ಮನೆಂಬುದು ಜನರು ಚಲಿಸುವ ಬಾಯಿಯಿಂದ ಬಾಯಿಗೆ ಬಿದ್ದು ಸುಖವಾಗಿ ಎಷ್ಟು ಕಾಲ ಉಳಿದೀತು? ಅಂತಲೇ ಹೇಳಬೇಕಾಗಿದೆ ಈ ಧರ್ಮವೆಂಬ ಮೂರು ಮಾತ್ರೆಯ ಶಬ್ದಕ್ಕೆ ಯಾವ ಪುಣ್ಯಾತ್ಮ ಜನ್ಮವಿತ್ತನೋ ತಿಳಿಯದು. ಪೂರ್ವದಲ್ಲಿ ಅದೆಷ್ಟು ಕರ್ಮಮಾಡಿ ಈ ನರಲೋಕದಲ್ಲಿ ಜನ್ಮತಾಳಿತೋ ಗೊತ್ತಿಲ್ಲ! ಈಗೀಗ ಈ ಧರ್ಮಕ್ಕೆ ಬಹು ದೊಡ್ಡ ರೌರವ ನರಕವೇ ಪ್ರಾಪ್ತಿಯಾಗಿದೆ ಎನ್ನಬೇಕು ಒಂದು ದಿನವಾದರೂ ಅದಕ್ಕೆ ವಿಶ್ರಾಂತಿ ಸಿಗಲು ಈ ನರ ಜೀವಿಗಳು ಬಿಡುತ್ತಾರೆಯೇ? ಮನುಷ್ಯನ ಬಾಯಿಯಿಂದ ತಪ್ಪುವ ಒಂದೇ ಒಂದು ಘಳಿಗೆಯ ಪುರುಸೊತ್ತಾದರೂ ಅದಕ್ಕೆ ಸಿಗುತ್ತಿದ್ದರೆ ಈ ಧರ್ಮವು ಇಷ್ಟರಲ್ಲೇ ಆತ್ಮಹತ್ಯೆಯನ್ನಾದರೂ ಮಾಡಿಕೊಳ್ಳುವ ವೈರಾಗ್ಯವನ್ನು ತಾಳದಿರುತ್ತಿರಲಿಲ್ಲ!—ಇಲ್ಲವಾದರೂ ಅದಕ್ಕೆ ಒಂದಲ್ಲ ಒಂದು ದಿನ ಸಾವು ಬಂದೇ ಬರುತ್ತೆ. ಮನಸ್ಸಿನಿಂದಲೇ ಹುಟ್ಟಿದ ಧರ್ಮಕ್ಕೆ ಅವನಿಂದಲೇ ಸಾವೂ ಬಂದೀತು! ಇನ್ನೇನು ಅದರ ಅಂತ್ಯಕ್ಕೆ ಹೆಚ್ಚು ಕಾಲವೂ ಹೋಗದೆನ್ನಿ!—ಈ ಕಲಿಕಾಲ ಪ್ರಾರಂಭವಾದಾಗಲೇ ಧರ್ಮಕ್ಕೆ ಜೀವ ಎಳೆಯಲು ಶುರುವಾಗಿದೆ. ಹಾಗಾಗಿಯೇ ಈಗಿನ ಅದರ ಸಕಲ ಗುಣ ವಿಶೇಷತೆಗಳನ್ನೂ ಜನರು ಬಾಯಿ ತುಂಬ ಹಾಡಿ ಹೊಗಳಲು ಮುಂದಾಗಿದ್ದಾರೆ. 'ಸತ್ತ ಎಮ್ಮೆಗೇ ಹಾಲು ಹೆಚ್ಚು,' ಎಂಬೊಂದು ವಾಡಿಕೆಯ ಮಾತಿರುವಂತೆ—ಈ ಧರ್ಮದ ಕೊನೆ ಆಗುವುದಂತೂ ಖಂಡಿತವೆಂಬುದನ್ನು ತಿಳಿದ ಜನ ಅದರ ಕುರಿತಾಗಿ ಭಾರೀ ಚಲೋದಾದ ಭಾಷಣ-ಘೋಷಣೆಗಳನ್ನೇ ಮಾಡಲು ಉತ್ಸಾಹಿತರಾಗಿದ್ದಾರೆ. ಯಾವ ಪಾಪಿಗೂ ಈ 'ಧರ್ಮ'ದ ಗುಣಾವಗುಣಗಳನ್ನು ಮರೆತು ಬಿಡುವುದಕ್ಕಾಗಲಿಲ್ಲ! ಯಾವ ಕರ್ಮ ಚಂಡಾಲನೂ ಈ 'ಧರ್ಮ'ದ ಕುರಿತಾಗಿ ಒಂದೇ ಒಂದು ಮಾತನ್ನೂ ದೂಷಿಸಿ ಆಡುವ ಮನಸ್ಸು ಮಾಡಿದ್ದಿಲ್ಲ. ದೂಷಿಸುವುದಾದರೂ ಹೇಗೆ?—ಮಾತು ಬರುವ ಪ್ರತಿಯೊಬ್ಬ ಮಾನವನೂ ಅದನ್ನು ಬಹು ಪ್ರೀತಿಯಿಂದ ಸಾಕಿ ರಕ್ಷಿಸಲಿಲ್ಲವೇ? ಪ್ರತಿಯೊರ್ವ ಕಿರಿಯನೂ ತನ್ನ ಹಿರಿಯರು ಪಿತ್ರಾರ್ಜಿತವಾಗಿ ಬಿಟ್ಟುಹೋದ "ಧರ್ಮೋಪದೇಶ"ವೆಂಬ ಅಜ್ಜ ನೆಟ್ಟ ಗೋಳೀಮರಕ್ಕೆ ನೇಣು ಹಾಕಿಕೊಳ್ಳುವ ಮೃತಸಂಪ್ರದಾಯಕ್ಕೆ ಕಟ್ಟುಬೀಳದೆ ಹೋಗಲಿಲ್ಲ!

ಹಿಂದಿನ ಕಾಲದಲ್ಲಿ ಧರ್ಮಕ್ಕಾಗಿಯೇ ತಮ್ಮ ಸರ್ವಸ್ವವನ್ನು ಕಳಕೊಂಡು ಆ ಲೋಕದ ದಾರಿ ಹಿಡಿದಿದ್ದವರಿದ್ದರಂತೆ! ಆದರೆ ಈ ಕಾಲದಲ್ಲಿ ಹೆರವರಿಗೆ ಧರ್ಮೋಪದೇಶ ಮಾಡಿ ತಮ್ಮ ಭಂಡಾರ ಭರ್ತಿ ಮಾಡಿಕೊಳ್ಳುವ ಬಗೆ ಹೇಗೆಂದು ಚಿಂತಿಸುತ್ತಿರುವವರು ರಕ್ತದ ಒತ್ತಡ ಹೆಚ್ಚಾಗಿ ಈ ಜಡದೇಹವನ್ನು ಇಲ್ಲಿಯೇ ಬಿಟ್ಟು, ತಾವು ಮಾಡಿದ ಧರ್ಮದ ಫಲವಾಗಿ ಬೆಂಬತ್ತಿದ್ದ ಕರ್ಮದ ಬುತ್ತಿಯನ್ನು ಹೊತ್ತುಕೊಂಡು ಯಮಲೋಕದಲ್ಲೊಂದು ಸ್ವಂತ ಮನೆಮಾಡಿಕೊಂಡಿರಬೇಕೆಂಬ ಆಸೆಯಿಂದ ಪ್ರಾಣದೊಂದಿಗೆ ಸರಾಗವಾಗಿ ಹೊರಟುಹೋಗುತ್ತಾರೆ.

ಕೈಧಾರೆಯ ಸತಿಗೆ ಕೈಕೊಟ್ಟು ನಾಲ್ಕು ಜನರ ಮುಂದೆ 'ಇವಳೇ ನನ್ನ ಹೆಂಡ್ತಿ' ಎನ್ನುವ ಹಕ್ಕಿನಿಂದ ಹುಟ್ಟುವ ಪ್ರೀತಿಯಲ್ಲಿ ಗೋಪ್ಯವಾಗಿ ಆಕೆಗೆ ಚೆನ್ನಾಗಿ ನಾಲ್ಕು ಗುದ್ದಿ, ಆಕ್ಷಣವೇ ಹೊರಚಾವಡಿಗೆ ಬಂದು- "ದಯೆಯೇ ಧರ್ಮದ ಮೂಲವಯ್ಯಾ...." ಎಂದು ಧರ್ಮದ ತಾಯಿ ಬೇರನ್ನೇ ಕಿತ್ತು ತೋರಿಸುವವರೂ ಇದ್ದಾರೆ. ತನ್ನಾಕೆಯ ಮುಂದೆ ಸಿಟಿ ಬಸ್ಸಿಗಾಗಿ ಆರು ನಯಾಪೈಸೆ ಬೇಕೆಂದು ಕೈನೀಡಿ ನಿಂತ ಪತ್ನಿಯನ್ನು ಕಂಡು—ಭಾರೀ ಸಮಾಧಾನದಿಂದ 'ಇಲ್ಲ'ವೆಂದು ಮಾಡಿನ ಹಂಚು ಹಾರುವಂತೆ ಅವಳು ಘರ್ಜಿಸುತ್ತಾ "ಪತಿಯೇ ಪರದೈವ"ವೆನ್ನುವ ಸ್ತ್ರೀ ಧರ್ಮದ ಮೇಲ್ಪಂಕ್ತಿಯನ್ನು ಬಾಯಿಪಾಠವಾಗಿ ಹೇಳುವ ಹೆಮ್ಮಕ್ಕಳನ್ನೂ ನೀವು ಕಂಡಿಲ್ಲವೇ? ಹೀಗೆಯೇ ಈ ಧರ್ಮದ ಕುರಿತಾದ ಸುಭಾಷಿತಗಳು ಈ ಕಾಲದಲ್ಲಿ ಅತ್ತ ಸಾಯಲಾರದೆ ಇತ್ತ ಬದುಕಲಾರದೆ ಉಳಿದಿವೆ. ಅಲ್ಲ- ಮಾನವ ತನ್ನ ಅನುಕೂಲಕ್ಕಾಗಿ ಅವನ್ನು ಉಳಿಸಿಕೊಂಡಿದ್ದಾನೆ. ನಾಳೆ ಕೊಡುತ್ತೇನೆಂದು ಕೊಂಡುಹೋದ ಪುಣ್ಯಾತ್ಮ ಕೆಲವು ಸಂಕ್ರಾಂತಿ ಕಳೆದುಹೋದರೂ ಕೊಡಬೇಕಾದ ನಾಲ್ಕಾಣೆಯನ್ನು ತಂದುಕೊಡಲಿಲ್ಲ! ಸಾಲಕ್ಕಾಗಿ ಆತ ನನ್ನಲ್ಲಿಗೆ ಬಂದಾಗ ಬೇಕಾದ ಬೇಡವಾದ ಎಲ್ಲ ವಿಚಾರಗಳನ್ನೂ ಚರ್ಚಿಸಿ ತಾನೊಬ್ಬ ಮಹಾ ನಂಬಿಗಸ್ಥನೆನ್ನುವುದನ್ನೂ ಸಮರ್ಥಿಸುವುದಕ್ಕಾಗಿ ತನಗಾಗದ ಬೇರೆಯವರು ಮೋಸ ಮಾಡಿದ ಬಗೆಯನ್ನೂ ವರ್ಣಿಸುತ್ತಾ ಆತ ಹೇಳಿದ್ದ—"ಕೊಟ್ಟ ಮಾತನ್ನು ಇಟ್ಟುಕೊಂಡರೆ ಮನೆಮಾರು ಉಳಿಯದು" ಎಂದು. ಅದೇ ದಿನ ಕೋರ್ಟಿನಲ್ಲಿ ಸುಳ್ಳು ಸಾಕ್ಷಿ ಹೇಳಿ ಅಲ್ಲಿಯೇ ಕಂಪೌಂಡಿನೊಳಗಿರುವ ಹೊಟೇಲಲ್ಲಿ ಯಾರೋ ತೆಗೆದು ಕೊಟ್ಟ ಕಾಫಿಯನ್ನು ಕುಡಿಯುತ್ತಾ, "ಸತ್ಯಂ ಮೇವ ಜಯತೇ ನಾನೃತಂ" ಎಂದು ಯಾವುದೋ ಸುಳ್ಳಿನ ಸಮರ್ಥನೆಗಾಗಿ ಹೇಳಿದ್ದ. ಹಾಗಾಗಿ ಸುಳ್ಳು ಹೇಳುವಾಗಲೂ ನಾನು ಸತ್ಯವನ್ನೇ ನಂಬಿಕೊಂಡಿರುವವನೆಂಬುದು ನಿಮಗಿಷ್ಟರಲ್ಲೇ ತಿಳಿದಿರಬಹುದು. ಹೌದು—ಸುಳ್ಳು ಹೇಳುವಾಗ ಸತ್ಯವನ್ನೂ, ಕರ್ಮ ಮಾಡುವಾಗ ಧರ್ಮವನ್ನೂ, ಪಾಪ ಮಾಡುವಾಗ ಪುಣ್ಯವನ್ನೂ ಮನಸಾ ನೆನೆದುಕೊಂಡರೆ ಮಾತ್ರ ಸಾಕಲ್ಲವೇ? ಇದಕ್ಕಿಂತ ಹೆಚ್ಚನ್ನು ಸಾಧಿಸಲು—ಬಗೆದಂತೆ ಬಿಟ್ಟ ಈ ಮನವೆಂಬ ಮರ್ಕಟನ ಹುಟ್ಟು ಸ್ವಭಾವ ಬಿಟ್ಟೀತೇ? ಇದೇನು ಕಾಲಮಹಿಮೆಯೋ? ವಿನಾಶ ಕಾಲದ ವಿಪರೀತ ಬುದ್ಧಿಯೋ? ಹೇಳಬರುವಂತಿಲ್ಲ. "ಹಳಸಿದ ಅನ್ನ ಹೊಟ್ಟೆಗೆ ಮಾರಿ!" ಎಂಬ ಸಂಗತಿ ತಿಳಿದರೂ ನಾಲಗೆ ಅದನ್ನೇ ಅಪೇಕ್ಷಿಸುತ್ತಿದೆ ಎಂದಾದರೆ, ರೋಗಿಯಾಗಿ ನರಳುವ ಭಾಗ್ಯವನ್ನೇ ನಾವು ಬಯಸಿದಂತಲ್ಲವೇ? ಹೀಗಾಗಿ ಇರುಳು ಕಂಡ ಬಾವಿಯಲ್ಲೇ ಹಗಲಲ್ಲಿ ಬೀಳುವ ಬುದ್ಧಿವಂತರು ನಾವಾಗುವುದೆಂದಾದರೆ ಅದಕ್ಕಿಂತ ನಮ್ಮ ಕಣ್ಣೇ ಕುರುಡಾಗಿ ಬಿಟ್ಟರೆ ಹೆಚ್ಚಿನ ನಷ್ಟವೂ ಇರದು—ಆದರಿಂದ ವಿಪರೀತ ಕಷ್ಟವೂ ಬಾರದು!

ಹೆತ್ತ ತಂದೆ-ತಾಯಂದಿರನ್ನು ಕೂಡಾ ಮೀಸೆ ಹುಟ್ಟಿದ ಮರುಘಳಿಗೆಯಲ್ಲಿ ತೃಣಕ್ಕಿಂತ ಕೀಳಾಗಿ ಕಾಣುವವರೂ, "ಮಾತೃ ದೇವೋ ಭವ ಪಿತೃ ದೇವೋ ಭವ" ಎನ್ನುತ್ತಾ ಧರ್ಮದ ಮರ್ಮವನ್ನು ಎಳೆಎಳೆಯಾಗಿ ಬಿಡಿಸಿ ಎಷ್ಟು ಚಲೋದಾಗಿ ವಿವರಿಸುತ್ತಾರೆ?—ಹೆಚ್ಚೇಕೆ ಹಸಿದ ಭಿಕ್ಷುಕನೊಬ್ಬ ಬೇಡುತ್ತಾ ಸಿರಿವಂತನಲ್ಲಿಗೆ ಬಂದು, 'ನಿನ್ನ ಕಾಲ ಬುಡದಲ್ಲೇ ಪ್ರಾಣ ಹೋಗುತ್ತೆ; ಒಂದು ಪಾವಾಣೆ ಯಾದರೂ ಕೊಡಯ್ಯಾ—' ಎಂದು ಕೂಗಿಕೊಂಡರೂ—ಅದನ್ನು ಕೊಟ್ಟರೆ ಎಲ್ಲಿ ತನ್ನ ಪ್ರಾಣವೇ ಹೋಗಿ ಬಿಡುತ್ತೋ? ಎಂಬ ಭಯದಿಂದ ಕೊಡುವ ಮನಸ್ಸಿದ್ದರೂ 'ಕೊಟ್ಟರೆ ಹೊಯ್ತಲ್ಲಾ?' ಎಂದು ಪರಿತಪಿಸುತ್ತಾ ಬಡವನಿಗೆ ಬೇರೆ ಮನೆಯ ದಾರಿ ತೋರಿಸಿ ಬಿಡುವ ಉದಾರಿಗಳೂ, ದಾನಶೂರರೂ ಈ ಧರ್ಮ ರಕ್ಷಣೆಗಾಗಿ ಎಷ್ಟೊಂದು ಹೆಣಗಾಡುವುದಿಲ್ಲ? ಹೀಗೆ ಕಾರ್ಯತಃ ಲೋಭಿಗಳಾದರೂ ಮಾತಿನಲ್ಲಿ ಈ ಧರ್ಮವನ್ನು ಸಂಕಟದಿಂದ ಪಾರು ಮಾಡಲು ಧರ್ಮದ ಕುರಿತಾದ ಮುತ್ತಿನಂಥಾ ಮಾತುಗಳನ್ನು ಮನಸಾ ಮೆಚ್ಚಿಕೊಂಡು ಆಡುತ್ತಾ ಹಾಡುತ್ತಾ 'ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಕೊಟ್ಟು ತಾ ಕೆಟ್ಟೆನೆನಬೇಡ ಅದು ಮುಂದೆ ಕಟ್ಟಿಹುದು ಬುತ್ತಿ-ಸರ್ವಜ್ಞ—' ಎಂದು ತನ್ನ ಪೆಟ್ಟಿಗೆಗೆ ಗಟ್ಟಿಯಾದ ಬೀಗ ಹಾಕಿ ನೂರು ನೂರು ಸಲ ಎಳೆದು ನೋಡುವವರನ್ನು ಕಂಡು, 'ತಾನು ಈ ನರನ ಕೈ ಬಾಯಿಯಿಂದ ತಪ್ಪಿ ಉಳಿಯುವ ಬಗೆ ಎಂತಯ್ಯಾ?' ಎಂದು ಧರ್ಮವು ಸಂಕಟ ಪಡುತ್ತಾ ಮೊರೆಯಿಟ್ಟಿತಂತೆ!

(೧೧ನೇ ಪುಟ ನೋಡಿರಿ)

AMRUTANJAN

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ನಿಮಗಾಗಿ—

ನಿಮ್ಮ ಜನರ ನಿರ್ದೇಶನದಲ್ಲಿ—

ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು

ದಿ. ಕೆನರಾ ಬ್ಯಾಂಕಿಂಗ್ ಕೋಪೋರೇಶನ್ ಲಿಮಿಟೆಡ್

(ಸ್ಥಾಪನೆ: ಮಾರ್ಚ್ 12, 1906)

ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;

'ಮದುವೆ ಸೀರೆ'

ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನು

ಬುಕ್‌ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾಹಸ ಶೀಲತೆ

ಇಲ್ಲಿ ಸುಮಾರು ೧೫೦ ಭಾಷೆಗಳು ಮಾತಾಡುತ್ತವೆ!

ಮಾರ್ಟಿನ್ ಟ್ಯಾಯ್ಟೆಲನ ಟ್ಯಾಯ್ಪರಾಯ್ಟರ ಅಂಗಡಿಯ ರೋಚಕ ವೃತ್ತಾಂತ

ನ್ಯೂಯಾರ್ಕ ನಗರದ “ಫುಲ್ಟನ್ ಸ್ಟ್ರೀಟ್”ನಲ್ಲಿ ಒಂದು ಸಾಧಾರಣ ತರದ ಭವನದ ಮುಂದೆ ಹಲವಾರು ವರ್ಷ ಹಳೆಯದಾದ, ದೂಳು ಮುಚ್ಚಿದ ಒಂದು ನಾಮಫಲಕವಿದೆ. ಈ ಫಲಕವು ನೀರು ಕುಡಿದು ದೂಳನ್ನು ತಿಂದುದರಿಂದ ಅಕ್ಷರಗಳು ಅಸ್ಪಷ್ಟವಿವೆಯಲ್ಲದೇ ಅವೇನೆಂದು ಅವಿರತ ಪ್ರಯತ್ನಪಟ್ಟರೆ ಮಾತ್ರ ಓದುವಂತಿವೆ. ಆ ಅಕ್ಷರಗಳು ಈ ರೀತಿಯಿವೆ: “ಮಾರ್ಟಿನ್ ಟಾಯ್ಟೆಲ್. ಇಲ್ಲಿ ಎಲ್ಲ ಪ್ರಕಾರದ ಹಳೆಯ ಟೈಪ್‌ರಾಯ್ಟರುಗಳನ್ನು ರಿಪೇರಿ ಮಾಡಲಾಗುತ್ತೆ ಮತ್ತು ಹೊಸ ಟೈಪ್‌ರಾಯ್ಟರುಗಳನ್ನೂ ತಯಾರಿಸಲಾಗುತ್ತೆ ”

ಈ ಅಂಗಡಿಯೊಳಹೊಕ್ಕೊಡನೆ ಆಗಂತುಕನಿಗೆ ಆಧುನಿಕತೆಯ ಗಂಧಗಾಳಿಯೂ ಸೋಕುವುದಿಲ್ಲ ಒಂದು ಸಣ್ಣದಾದ “ಬ್ಲಾಕ್”ನಲ್ಲಿ ಟಾಯ್ಟೆಲ್ಲರ ಕಾರಖಾನೆಯಿದೆ. ಇಲ್ಲಿ ಹನ್ನೊಂದು ಕುಶಲ ಕರ್ಮಚಾರಿಗಳು ದೇಶವಿದೇಶಗಳಿಂದ ಬಂದ ಬೇಡಿಕೆಗಳನ್ನು ಪೂರ್ಣಗೊಳಿಸುವುದಕ್ಕೆ ಹಗಲು ಇರುಳು ನೂತನ ಟೈಪ್‌ರಾಯ್ಟರುಗಳನ್ನು ತಯಾರಿಸುವುದರಲ್ಲಿಯೇ ನಿಮಗ್ನರಾಗಿದ್ದಾರೆ ಇವರು ಕೇವಲ ಯಾಂತ್ರಿಕ ತಜ್ಞರು ಮಾತ್ರವಲ್ಲದೇ ಭಾಷಾ ತಜ್ಞರೂ ಹೌದು ಪ್ರಪಂಚದ ಜ್ಞಾತ–ಅಲ್ಪ ಜ್ಞಾತ, ಪ್ರಾಚೀನ—ಅರ್ವಾಚೀನ, ಮೃತ–ಜೀವಂತ ಭಾಷೆಗಳ ವರ್ಣಮಾಲೆಗಳೂ ಸಂಖ್ಯೆಗಳೂ ಇವರಿಗೆ ತಿಳಿದಿವೆ

ಸುಸಂಸ್ಕೃತ ಜಗತ್ತು ಪರಿಚಯವಿಟ್ಟುಕೊಳ್ಳದಂತ ಹಲವಾರು ಭಾಷೆಗಳ ಟೈಪ್‌ರೈಟರ್‌ಗಳು ಮಾರ್ಟಿನ್ ಟಾಯ್ಟೆಲ್ಲನ ಅಂಗಡಿಯಲ್ಲಿ ತಯಾರಾಗುತ್ತವೆ. ಸೋಡಾಸಿಸ ಮರುಭೂಮಿಯಲ್ಲಿ ಆಡುವ ‘ಡಿಂಕ್ರಾ’ ಉತ್ತರ ಆಫ್ರಿಕದ ಮೂಲವಾಸಿಗಳ ಭಾಷೆಯಾದ ‘ಕ್ರೀ’, ಜೆರೂಸಲೇಮ್‌ನಲ್ಲಿ ಇಂದಿಗೆ ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಪ್ರಚಲಿತವಿದ್ದ “ಪ್ರಾಚೀನ ಹಿಬ್ರ್ಯೂ” ಮೊದಲಾದ ಭಾಷೆಗಳ ಟೈಪರಾಯ್ಟರುಗಳೂ ಕೇವಲ ಆರು ವಾರ ಪೂರ್ವ ಸೂಚನೆಯಿತ್ತರೆ, ಅವಧಿಯೊಳಗೆ ಸಿದ್ಧವಾಗಿ ನಮಗೆ ದೊರೆಯುವುವು.

ಟೈಪ ರಾಯ್ಟರ ಸಂಬಂಧದಲ್ಲಿನ ಕಠಿಣ ಸಮಸ್ಯೆಗಳನ್ನು ಚಿಟಿಕೆ ಮುರಿವಷ್ಟು ಹೊತ್ತಿನಲ್ಲಿ ದೂರೀಕರಿಸುವುದು ಮಾರ್ಟಿನನ ವಿಶೇಷತೆ. ಇದರಿಂದಲೇ “ಟೈಪ ರಾಯ್ಟರವಾಲಾ” ಎಂಬ ಉಪನಾಮಧೇಯದಿಂದಲೇ ಈತ ಅಮೇರಿಕೆ ತುಂಬ ಪ್ರಸಿದ್ಧನಾಗಿದ್ದಾನೆ. ದೇಶ-ವಿದೇಶಗಳಿಂದ ವಿವಿಧ ಬಗೆಯ ಸಾವಿರಾರು ಪತ್ರಗಳು ಮಾರ್ಟಿನನಿಗೆ ಸಿಗುತ್ತವೆ ಕೆಲವರು ಲಕೋಟೆಯ ಮೇಲೆ ಕೇವಲ ವಿಳಾಸದಲ್ಲಿ ಮಾರ್ಟಿನ್, ಟೈಪ್ ರಾಯ್ಟರ್ ನಿರ್ಮಾತೃ ಅಮೇರಿಕ ಎಂದಿಷ್ಟೇ ಬರೆದು ಅಂಚೆಗೆ ಸುರಿಯುತ್ತಾರೆ. ಆದರೂ ಆ ಪತ್ರಗಳು ನಿರ್ದಿಷ್ಟ ಸ್ಥಾನವನ್ನು ತಡವಿಲ್ಲದೇನೇ ಸೇರುತ್ತವೆ.

ನೂರಕ್ಕೂ ಮಿಕ್ಕಿದ ಭಾಷೆಗಳನ್ನಾಡುವ ಸಾವಿರಾರು ಗ್ರಾಹಕರೊಡನೆ ವ್ಯಾಪಾರ ಸಂಬಂಧವಿಟ್ಟುಕೊಳ್ಳುವುದೆಂದರೆ, ನಕ್ಕು ಬಿಡುವ ಕೆಲಸವಲ್ಲ ಅಧಿಕಾಂಶ ಜನರು ಕೇವಲ ತಮ್ಮ ಭಾಷೆಯನ್ನು ಮಾತ್ರ ಆಡಬಲ್ಲರಾದರೂ ತನ್ನ ಬುದ್ಧಿವಂತಿಕೆಯಿಂದ ಮಾರ್ಟಿನ್ ಈ ಪ್ರಯಾಸವನ್ನು ದೂರಮಾಡಿದ್ದಾನೆ. ಒಂದು ಕೋಣೆಯ ಗೋಡೆಯಲ್ಲಿ ಪ್ರಪಂಚದ ಸುಮಾರು ೧೫೦ ಭಾಷೆಗಳ ವರ್ಣಮಾಲೆಯ ಸಚಿತ್ರ ನಕಾಶೆಯೊಂದನ್ನು ತೂಗಹಾಕಿದ್ದಾನೆ ಇದರಲ್ಲಿ ಗುರುತುಮಾಡಲ್ಪಟ್ಟ ಟೈಪುಗಳು ಮಾರ್ಟಿನನಲ್ಲಿ ಸದಾ ಸಿದ್ಧವಿವೆ ಯಾರಾದರೂ ಗ್ರಾಹಕರು ತಮ್ಮ ಟಾಯ್ಪರಾಯ್ಟರದ ಕೀಯನ್ನು ಬದಲಿಸಬೇಕೆಂದು ಬಯಸಿದರೆ, ಕಾರಖಾನೆಯ ಹತ್ತು ಲಕ್ಷ ಕೀ ಸಂಗ್ರಹದಲ್ಲಿಲ್ಲವಾದರೆ, ಆಗ ಮಾರ್ಟಿನನ ಕುಶಲ ಕೆಲಸಗಾರರ ಆ ವಿಶೇಷ ಸಂಕೇತವನ್ನು ಹೋಲಬಲ್ಲ ಕೀಯನ್ನು ಅಲ್ಪ ಸ್ವಲ್ಪ ಸರಿಮಾಡಿ ರಿಕ್ತ ಸ್ಥಾನವನ್ನು ಭರ್ತಿಮಾಡುವರು.

ಹೆಚ್ಚಿನ ದೇಶಗಳ ರಾಷ್ಟ್ರಸಂಘದ ಪ್ರತಿನಿಧಿಯು ಅವಕಾಶಮಾಡಿಕೊಂಡು, ತನ್ನ ದೇಶಭಾಷೆಗಳ ಟಾಯ್ಪರಾಯ್ಟರ ತಯಾರಿಯ ಬಗ್ಗೆ ಇಲ್ಲಿಗೆ ಆಗಮಿಸುತ್ತಾನೆ. ಭಾರತೀಯ ಪ್ರತಿನಿಧಿಮಂಡಳವು ಕೆಲವು ವರ್ಷಗಳಿಗೆ ಮೊದಲು “ಗುರಖಾಲೀ” ಭಾಷೆಯ ಸರ್ವಪ್ರಥಮ ಟೈಪರಾಯ್ಟರ ಮತ್ತು ಬಂಗಾಳಿ ಭಾಷೆಯ ಟಾಯ್ಪರಾಯ್ಟರದ ಉನ್ನತ ಸಂಸ್ಕರಣಗಳನ್ನು ಟಾಯ್ಟೆಲ್ಲನ ವಿಶ್ವವಿಖ್ಯಾತ ಮಳಿಗೆಯಲ್ಲಿಯೇ ಮಾಡಿಸಿತ್ತು

೧೯೪೮ರಲ್ಲಿ ಐಗುಪ್ತ ಪ್ರತಿನಿಧಿಗಳು ತಮ್ಮ ಭಾಷೆಗೊಂದು ಟೈಪ್‌ರಾಯ್ಟರಿನ ಆವಶ್ಯಕತೆಯನ್ನು ಕಂಡುಕೊಂಡಾಗ, ಟಾಯ್ಟೆಲನು ಕಠಿನ ಸಮಸ್ಯೆಯೊಂದನ್ನೆದುರಿಸಬೇಕಾಯಿತು ಐಗುಪ್ತದ ಲಿಪಿಯಲ್ಲಿಯೂ ಎರಡು ಬಗೆಗಳಿವೆ. ಒಂದು ಆಂಗ್ಲ ಭಾಷೆಯಿಂದ ಮತ್ತೊಂದು ಫ್ರೆಂಚ ಭಾಷೆಯಿಂದ ಪ್ರಭಾವಿತವಾಗಿರುವುದು ಇವೆರಡೂ ಸರ್ವತ್ರ ಮನ್ನಿಸಲ್ಪಟ್ಟಿವೆ, ಅಂತೂ ಕೊನೆಗೆ ಎರಡೂ ಲಿಪಿಯ ಟಾಯ್ಪರಾಯ್ಟರಗಳನ್ನು ತಯಾರಿಸಿ ತಮಗೆ ಬೇಕಾದುದನ್ನು ಉಪಯೋಗಿಸುವ ನಿರ್ಣಯಮಾಡುವ ಹೊರೆಯನ್ನು ಗ್ರಾಹಕರಿಗೇನೇ ಬಿಟ್ಟುಕೊಡಲಾಯಿತು

ನಲವತ್ತೈದು ವರ್ಷ–ಕುಸು ಹೆಚ್ಚು ಕಡಿಮೆ ಪ್ರಾಯದಲ್ಲಿ ಕಾಲಿರಿಸಿದ ಟಾಯ್ಟೆಲನ ಜೀವನವು ಅನೇಕ ಕುತೂಹಲಕಾರಕ ಘಟನೆಗಳಿಂದ ತುಂಬಿದೆ. ಅತನ ಹದಿಮೂರನೆಯ ವರ್ಷದಲ್ಲಿಯೇ ಅವನಿಗೊಂದು ಇಂಗ್ಲಿಷ್ ಟಾಯ್ಪರೈಟರನು ಸಮೀಪದಲ್ಲಿ ನೋಡುವ ಸಂದರ್ಭ ಲಭಿಸಿತ್ತು ತನ್ನ ಅಧ್ಯಾಪಿಕೆಯರ ಅನುಪಸ್ಥಿತಿಯಲ್ಲಿ ಕಿಸೆಯಲ್ಲಿಟ್ಟುಕೊಂಡಿದ್ದ ಚೂರಿಯೊಂದರ ಸಹಾಯದಿಂದ ಅವನು ವರ್ಗದ ಕೋಣೆಯಲ್ಲಿಟ್ಟ ಟಾಯ್ಪರಾಯ್ಟರದ ಮೇಲೆ “ಪ್ರಯೋಗ” ಪ್ರಾರಂಭಿಸಿದನು. ಅಧ್ಯಾಪಿಕೆಯರು ಹಿಂದಿರುಗಿದಾಗ ಟಾಯ್ಪರಯ್ಟರದ ಸ್ಥಾನದಲ್ಲಿ ನೂರಾರು ಸಣ್ಣ ಸಣ್ಣ ಸ್ಕ್ರ್ಯೂ, ನಟ್, ಮತ್ತು ಬೋಲ್ಟ್‌ಗಳ ರಾಶಿ ಬಿದ್ದಿರುವುದನ್ನು ಕಂಡು ಕಕ್ಕಾಬಿಕ್ಕಿಯಾದರು ಕೂಡಲೇ ಒಬ್ಬ ಕರ್ಮಚರರನ್ನು ಕರೆಯಲಾಯಿತು ಅವನು ಅರ್ಧತಾಸಿಗೂ ಕಡಿಮೆ ಹೊತ್ತಿನಲ್ಲಿ ಆ ಲೋಹದ ಚೂರುಗಳನ್ನು ಒಂದು ಸೇರಿಸಿ ಸುಂದರ ಟಾಯ್ಪರಯ್ಟರಿನ ರೂಪಕ್ಕೆ ಪರಿವರ್ತಿಸಿದನು.

ಆದರೆ, ಟಾಯ್ಟೆಲನ ಉತ್ಸುಕತೆಯು ಕೇವಲ ಇದೊಂದೇ ಪ್ರಯೋಗದಿಂದ ಶಾಂತವಾಗಲಿಲ್ಲ. ಆದರೆ ಮೂರನೇ ಬಾರಿ ಅದೇ ಕರ್ಮಚಾರಿಯು ಬಂದು ಸರಿ ಮಾಡಬೇಕಾಯಿತು ಇದರಿಂದಾಗಿ ಟಾಯ್ಟಲ ಮತ್ತು ಅವನೊಡನೆ ನಾಲ್ಕು ಬಿಸಿಯಾದ ಮಾತುಗಳು ನಡೆದುವು. ಇದರಿಂದಾಗಿ ಟಾಯ್ಟೆಲನ ಅಂತಃಸತ್ವವು ಕೆದಕಿದಂತಾಗಿ, “ನಾನೇ ಸ್ವಯವಾಗಿ ಈ ಕೆಲಸವನ್ನು ಕಲಿತುಕೊಳ್ಳುವೆನು; ಮಾತ್ರವಲ್ಲ, ಕೆಟ್ಟು ಹೋದ ಟಾಯ್ಪರಾಯ್ಟರಗಳನ್ನು ರಿಪೇರಿ ಮಾಡಿಯೇ ನನ್ನ ಜೀವನವನ್ನು ಸಾಗಿಸುವೆನು”ಎಂದು ಪ್ರತಿಜ್ಞೆ ಮಾಡಿದನು

ಕೇವಲ ಎಂಟೇ ವರ್ಷಗಳಲ್ಲಿ ಅವನ ಪ್ರತಿಜ್ಞೆಯು ಪೂರೈಸಿತು ಹದಿನೈದನೆಯ ವರ್ಷಗಳಲ್ಲಿಯೇ ಅವನು ಶಾಲೆಗೆ ರಜೆ ಬರೆದು ಮನೆ ಮನೆಯ ಟಾಯ್ಪರೈಟರ [illegible] ಪರಿಶೋಧಿಸಿ [illegible] ಳಿಂದ ಹೊಸ ಯಂತ್ರಗಳನ್ನು [illegible] ಸುವ ಪ್ರಯತ್ನ ಮಾಡಿದನು ಇಪ್ಪತ್ತೆನಾರನೆಯ ವರ್ಷದಲ್ಲಿಯೇ ಅವತನ್ನದೇ ಆದ ಅಂಗಡಿಯೊಂದನ್ನು ತೆರೆದನು ನಾಲ್ಕು ವರ್ಷಾನಂತರ ನ್ಯೂಯಾರ್ಕಿನ ಪ್ರಮುಖ ವ್ಯವಸಾಯ ಕ್ಷೇತ್ರ ಬ್ರಾಡ್‌ವೇಯಲ್ಲಿ ತನ್ನ ಕಾರಭಾರವನ್ನು ಮೊದಲು ಮಾಡಿದನು ಕೆಲವೇ ವರ್ಷಗಳಲ್ಲಿ ಈತನ ವ್ಯವಸಾಯವು ಬೆಳೆದು ಬಂದು ಶೀಘ್ರವೇ ಫುಲ್ಟನ್ ಸ್ಟ್ರೀಟ್‌ನಲ್ಲಿ ತನ್ನ ಸ್ವಂತ ಗೃಹವನ್ನು ಕೊಂಡುಕೊಳ್ಳುವಂತಾಗಿ, ಅಲ್ಲೇ “ಮಾರ್ಟಿನ್ ಟಾಯ್ಟೆಲ್” ಎಂಬ ಹೆಸರಿನ ಜಗದ್ವಿಖ್ಯಾತ ಕಾರಖಾನೆಯನ್ನೂ ಆತ ಪ್ರಾರಂಭಗೈದನು

ಟಾಯ್ಟೆಲ್ಲನು ಜನ್ಮತಃ ಪ್ರಯೋಗವಾದಿ. ಆತನು ಟಾಯ್ಪ ಮೆಶಿನುಗಳ ‘ಕೀ’ಗಳ ರಾಶಿಯ ನಡುವೆ ಸದಾ ನಿಮಗ್ನನಾಗಿರುತ್ತಾನೆ. ಶ್ರೀಮಂತ ಬಡವರೆಲ್ಲರೂ ಆತನಲ್ಲಿಗೆ ತಮಗೆ ಬೇಕಾದ ರೀತಿಯ ಟೈಪರಾಯ್ಟರಗಳನ್ನು ತಯಾರಿಸುವಂತೆ ಹೇಳುತ್ತಾರೆ. ಒಬ್ಬನು ಮೆಶಿನಿನ ಎಲ್ಲ ಕೀಗಳೂ ಪ್ರಶ್ನಾರ್ಥಕ ಚಿಹ್ನೆಯನ್ನು ಹೊಡೆಯುವಂತೆ ಒಂದು ಟಾಯ್ಪರಯ್ಟರನ್ನು ನಿರ್ಮಿಸಿದ್ದನು. ‘ಬ್ರಿಜ್’ನ ಓರ್ವ ವಿಶ್ವವಿಖ್ಯಾತ ಆಟಗಾರನಿಗಾಗಿ ಟಾಯ್ಟಲನು ಆಂಗ್ಲ ವರ್ಣಮಾಲೆ ಮಾತ್ರವಲ್ಲದೇ ಎಲೆ, ಹಕ್ಕಿ, ಇತ್ಯಾದಿಗಳನ್ನೂ ಅಚ್ಚುಮಾಡುವ ವ್ಯವಸ್ಥೆಯಿರುವ ಯಂತ್ರವೊಂದನ್ನು ತಯಾರಿಸಿದ್ದನು.

ಹಳೆಯ ಜೀರ್ಣವಾದ ಟಾಯ್ಪರಾಯ್ಟರಗಳನ್ನು ಕಾರಖಾನೆಗಳಿಗೆ ಒಯ್ದು ಹೊಚ್ಚಹೊಸತಾಗಿ ಮಾಡುವ ಕಲೆ ಟಾಯ್ಟೆಲನಿಗೆ ಕರತಲಾಮಲಕವಾಗಿತ್ತು ಬೆಂಕಿಯಲ್ಲಿ ಉರಿದು ನಿರುಪಯೋಗಿಯಾದ್ದ ಸುಮಾರು ೨೧೦ ಟಾಯ್ಪರಾಯ್ಟರಗಳನ್ನು ಈತ ಪುನಃ ಉಪಯೋಗಿಯಾಗಿ ಮಾಡಿಕೊಟ್ಟಿದ್ದಾನೆ

ತನ್ನ ಉದ್ಯೋಗದಿಂದ ಟಾಯ್ಟೆಲನಿಗೆ ಪ್ರತಿವರ್ಷವೂ ಲಕ್ಷಾಂತರ ಡಾಲರ್ ಆಯಬರುತ್ತದೆ. ಇದರಲ್ಲಿ ಹೆಚ್ಚಿನ ಆಯ ವಿದೇಶೀ ಗ್ರಾಹಕರಿಂದ ಆಗುತ್ತದೆ ಈತನ ಕೆಲಸಕ್ಕೆ ಮೆಚ್ಚಿ ಒಂದೊಂದು ಟಾಯ್ಪರೈಟರಿಗೆ ಸುಮಾರು ೧೦ ಸಾವಿರ ಡಾಲರ್‌ಗಳಷ್ಟು ನೀಡುವವರೂ ಇದ್ದಾರೆ! ೧೯೫೭ರಲ್ಲಿ ಓರ್ವ ಶ್ರೀಮಂತನಿಗೆ ಬರ್ಮಾ ಭಾಷೆಯ ಟಾಯ್ಪರಾಯ್ಟರನ್ನು ಕೇವಲ ಐದು ದಿನಗಳಲ್ಲಿ ಮಾಡಿಕೊಟ್ಟುದಕ್ಕೆ ಆರು ಆಂಗ್ಲ ಟೈಪ್‌ರಾಯ್ಟರಗಳ ಬೆಲೆಯು ಬಂದಿತ್ತು

ಪ್ರತಿಯೊಂದು ಭಾಷೆಯಲ್ಲೂ ತನ್ನದೇ ಆದ ಅಕ್ಷರ ಮತ್ತು ಸಂಖ್ಯೆಗಳಿವೆ.

(೯ನೇ ಪುಟ ನೋಡಿರಿ)

ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್, ಎಸ್. ಕಿಲ್ಲೆ ಮತ್ತು ಎನ್ ಎ ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ
(ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು ಬಿಳಿ ಕಾಗದ. ಆಕರ್ಷಕ ರಕ್ಷಾಪತ್ರ ಬೆಲೆ: ರೂ 2 00

ಭಾರತದ ಕರ್ಣ

“ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ......ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು ಆ ದುರಂತದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು.”(ಪ್ರೊ। ಎಂ ಆರ್.ಶಾಸ್ತ್ರಿಗಳ ಮುನ್ನುಡಿಯಿಂದ)
ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0—೬—0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ ಬೆಲೆ 0—12—0.
(ಮುನ್ನುಡಿಕಾರರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

“ನವಯುಗ”ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ ನ

... ಮಾತುಕದೆ ಪೂರಾಲೋಚನೆ ... ಲೋಕೋಪಕಾರಿಯಾಗುವನು ಈ ... ನುಯುವೆಂದು ಕಂಡು ಬರುವುದಾದರೂ ಎಂ... ನಿಷ್ಫಲವೆನಿಸಲಾರದು.

NAVAYUGA
Founder —
A B SHETTY.
Former Minister for Public Health
Govt. of Madras & Govt. of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೬-೪-'೫೯	೩೧

ಅಸಹನೀಯ ಸಾಹಸ

ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತೆಯು ಬಂದು ಹಲವು ಮಾಸಗಳು ಗತಿಸಿದುವು. ಸಾಮಾನ್ಯತಃ ಪ್ರಜಾಪ್ರಭುತ್ವ ಸರಕಾರವು ಜನತೆಯನ್ನು ಸಂತೃಪ್ತಗೊಳಿಸಲು ಅಸಮರ್ಥಗೊಂಡಾಗ ರಕ್ತಪಾತವಾಗಿಯಾಗಲಿ ಆಗದೆಯಾಗಲಿ ಸೈನಿಕಾಡಳಿತೆಯು ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಪರಿಸ್ಥಿತಿಯನ್ನು ಹತೋಟಿಗೆ ತಂದುಕೊಂಡು, ಹೊಸ ಚುನಾವಣೆಗಳನ್ನು ನಡೆಸಿ ಪುನಃ ಪ್ರಜಾಪ್ರಭುತ್ವ ಸರಕಾರವನ್ನು ರಚಿಸುತ್ತದೆ ಫ್ರಾನ್ಸದಲ್ಲಿ ಆದ ರೀತಿಯಿದು. ಆದರೆ, ಪಾಕಿಸ್ತಾನದಲ್ಲಿ ಸಂವಿಧಾನವನ್ನು ಸಹ ರದ್ದುಗೊಳಿಸಿರುವುದರಿಂದ ನೂತನ ಸಂವಿಧಾನವು ರೂಪುಗೊಂಡು, ಮುಂದಿನ ಕಾರ್ಯಕ್ರಮಗಳು ನಡೆಯಬೇಕಷ್ಟೆ. ಪಾಕಿಸ್ತಾನದ ಪ್ರಜಾಪ್ರಭುತ್ವ ಸರಕಾರವು ಹತ್ತು ವರ್ಷಗಳಲ್ಲಿ ಮಾಡಲಾಗದ ಮಹಾಕಾರ್ಯಗಳಲ್ಲಿ ಕೆಲವನ್ನು ಈ ಮಿಲಿಟರಿ ಸರಕಾರ ಕೇವಲ ಕೆಲವೇ ಮಾಸಗಳಲ್ಲಿ ಕಾರ್ಯಗತಮಾಡಿ ತೋರಿಸಿದೆ. ಪಾಕಿಸ್ತಾನದಲ್ಲಿ ಈ ಬಗ್ಗೆ ಯಾವ ವಿರೋಧಾಭಿಪ್ರಾಯವೂ ಮೂಡಿ ಬರಲು ಎಡೆಯಿಲ್ಲ. ಇದುವರೆಗೆ ಮಹಾನಾಯಕರೆನಿಸಿಕೊಂಡವರೂ ಈಗ ಮೌನವಾಗಿಯೇ ಕೂತುಕೊಳ್ಳುವಂತಾಗಿದೆ. ಆದರೂ ಅಯೂಬಖಾನರ ಆಡಳಿತೆಯು ಹಿಂದಿನ ಆಡಳಿತೆಯ ಲೋಪದೋಷಗಳನ್ನು ದೂರಮಾಡಿ, ದೇಶವನ್ನು ವಂಚಕರ ಮತ್ತು ಮೋಸಗಾರರ ದವಡೆಯಿಂದ ತಪ್ಪಿಸಿ, ಎಲ್ಲರೊಡನೆ ಸರ್ವ ಸಮಭಾವನೆಯಿಂದ ನಡೆದುಕೊಂಡು ದೇಶದಲ್ಲಿ ಶಾಂತಿ ಮತ್ತು ಭದ್ರತೆಗಳನ್ನು ಕಾಯ್ದುಕೊಂಡು ದೇಶವಾಸಿಗಳನ್ನು ಸುಖೀರಾಜ್ಯದತ್ತ ಕರೆದೊಯ್ಯುವ ಮಹೋದ್ದೇಶದಿಂದ ಬಂದಿದೆಯೆಂಬುದನ್ನು ನೆನಪಿಸಿಕೊಂಡು, ಭಾರತದ ಕಡೆಗೆ ಮಾತ್ರ ತನ್ನ ಹಿಂದಿನವರು ತೋರಿಸುತಿದ್ದ ವಕ್ರದೃಷ್ಟಿಯನ್ನೇ ಮತ್ತೂ ಮತ್ತೂ ಬೀರುತ್ತಿರುವುದನ್ನು ನೋಡಿದರೆ, ಮಹದಾಶ್ಚರ್ಯವೆನಿಸುತ್ತದೆ.

ಭಾರತವು ಪಾಕಿಸ್ತಾನದ ನೆರೆಯ ರಾಷ್ಟ್ರವಾಗಿರುವಾಗ, ಸಹಜವಾಗಿಯೂ ಈ ಎರಡು ದೇಶಗಳ ನಡುವೆ ಸ್ನೇಹ ಸೌಹಾರ್ದಗಳಿರುವದರಿಂದ ಉಭಯತರಿಗೂ ಕ್ಷೇಮವೆಂಬುದು ಸುವಿದಿತ. ಆದರೆ ಭಾರತವಂತೂ ತನ್ನ ಪಂಚಶೀಲ [illegible] ತಂದುಕೊಂಡು ತನ್ನ ಮನೆಗೆ ಬೆಂಕಿಬೀಳುತ್ತಿದ್ದರೂ ಯಾವ ಉಗ್ರವಾದ ಕ್ರಮಗಳನ್ನೂ ಕೈಗೊಳ್ಳಲಾರದು ಎಂಬ ಆತ್ಮವಿಶ್ವಾಸದ ಬಲದಿಂದ ಪಾಕಿಸ್ತಾನವು ಭಾರತದ ಕಡೆಗೆ ತನ್ನ ಪರಂಪರಾಪ್ರಾಪ್ತವಾದ ಕ್ರೂರ ಮತ್ತು ಅಸಭ್ಯ ದೃಷ್ಟಿಯನ್ನು ಹರಿಸುತ್ತಿರುವುದೂ ತನ್ಮೂಲಕ ಭಾರತವನ್ನು ಕೆರಳಿಸಲು ಬಯಸುತ್ತಿರುವುದೂ ಕಂಡು ಬರುತ್ತದೆ. ಇದಕ್ಕೆ ಈ ಮೊದಲೇ ನಾನಾ ದೃಷ್ಟಾಂತಗಳು ತೋರಿ ಬಂದಿವೆಯಾದರೂ ಇದೀಗ ನಿರಪರಾಧಿ ವಿಮಾನವೊಂದನ್ನು ಗುಂಡಿಕ್ಕಿ ಕೆಳಗುರುಳಿಸಿದ ದುರ್ದೈವದ ಘಟನೆಯಾದರೂ ಇದೇ ಮಾತನ್ನು ಬಲವಾಗಿ ಪುಷ್ಟೀಕರಿಸುತ್ತದೆ. ರಾವಲ್ಪಿಂಡಿಯ ಬಳಿಯ ಆಕಾಶದಲ್ಲಿ ಸುಮಾರು ೫೦ ಸಾವಿರ ಅಡಿಗಳಷ್ಟೆತ್ತರದಲ್ಲಿ ಸಂಚರಿಸುತ್ತ ಸರ್ವೆಯ ಕಾರ್ಯವನ್ನು ಮಾಡುತ್ತಿದ್ದ ಕೇವಲ ಈರ್ವರಿಂದ ಕೂಡಿದ ಭಾರತೀಯ ಕೆನ್‌ಬೆರಾ ವಿಮಾನವೊಂದನ್ನು ಗುಂಡು ಹೊಡೆದು ಕೆಳಗುರುಳಿಸಿದ ಕಾರಣದಿಂದ, ವಿಮಾನವು ಸಂಪೂರ್ಣ ನಾಶಗೊಂಡದಲ್ಲದೇ ಅದರಲ್ಲಿದ್ದ ಚಾಲಕ ಮತ್ತು ಇನ್ನೊಬ್ಬನಿಗೆ ಅತೀವ ಗಾಯಗಳಾಗಿವೆಯೆಂದರೆ ಇಂತಹ ಅಮಾನುಷ ಹಾಗೂ ಹಿಂಸ್ರ ಕೃತ್ಯದ ಉದ್ದೇಶವಾದರೂ ಏನಿರಬೇಕು ಎಂಬುದು ತಿಳಿಯುತ್ತಿಲ್ಲ.

ಪಾಕ್ ಹೇಳಿಕೆಯಂತೆ, ವಿಮಾನವನ್ನು ಇಳಿಯ ಹೇಳಿದರೂ ಕೇಳದ ಕಾರಣದಿಂದ ಗುಂಡಿಡಲಾಯಿತು. ಆದರೆ, ಈ ಬಗ್ಗೆ ಭಾರತೀಯ ಲೋಕಸಭೆಯಲ್ಲಿ ಸದಸ್ಯರ ಕೇಳಿಕೆಯಂತೆ ಸಂರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣ ಮೆನನರು ಇತ್ತ ಹೇಳಿಕೆಯು ಸ್ವಾಗತಾರ್ಹವಿದೆ. ಈ ವಿಮಾನವು ಯಾವ ದುರುದ್ದೇಶದಿಂದಲೂ ಹೋಗಿರದೇ ರೂಢಿಯ ಸರ್ವೆ ಚಿತ್ರಪಟ ಕಾರ್ಯಕ್ರಮದಂತೆ ತೆರಳಿರುವುದೆಂದವರು ಸ್ಪಷ್ಟೀಕರಿಸಿ. "ಪಾಕಿಸ್ತಾನಿಗಳದನ್ನು ಅಜ್ಞಾತ ವಿಮಾನವೆಂದು ಕರೆಯುತ್ತ ಬಂದಿದ್ದಾರೆ. ನಮ್ಮ ವಿಮಾನದ ಮೇಲೆ ಏರಿ ಹೋದ ವಿಮಾನವು ಗುಂಡಿಕ್ಕಬಲ್ಲದಾದರೆ, ಅದಕ್ಕೆ ಈ ನಮ್ಮ ವಿಮಾನದ ಮೇಲಿನ ಚಿಹ್ನೆಗಳು ಕಾಣದಿರುವುದು. ಈ ವಿಮಾನವು ಎಂಥದು ಎಂಬುದು ತಿಳಿಯದೆ ಹೋದುದು ಆಶ್ಚರ್ಯದ ಸಂಗತಿಯೇಸರಿ. ನಾವು ಪಾಕಿಸ್ತಾನವನ್ನು ನಡೆಸಿಕೊಳ್ಳುವ ರೀತಿಗೆ ಪಾಕಿಸ್ತಾನದ ಈ ಕೃತಿಯು ತೀರ ಅನುಚಿತವಾದುದು" ಎಂದವರು ತಿಳಿಸಿದ್ದಾರೆ. ಅಲ್ಲದೇ ಭಾರತವಾದರೋ ಇಂತಹ ಸಂದರ್ಭಗಳಲ್ಲಿ ಉದ್ರೇಕಗೊಳ್ಳದೆ, ತಪ್ಪಿತಸ್ಥವೆನಿಸಬಹುದಾದ ವಿಮಾನವನ್ನು ಭೂಮಿಗ ಇಳಿಸುವುದು ಎಂದವರು ಭಾರತದ ಕ್ರಮವನ್ನು ತಿಳಿಸಿದ್ದಾರೆ. ಈ ಪಾಕಿಸ್ತಾನದ ದುಷ್ಕೃತ್ಯ ಮತ್ತು ಹೇಳಿಕೆಗಳು ಕೇವಲ ನಿರಾಧಾರ ಮತ್ತು ಅವಿಶ್ವಾಸಾರ್ಹವಾಗಿದ್ದು ದುರುದ್ದೇಶಪೂರಿತವಾಗಿಯೇ ಇವೆ ಎಂದು ತಿಳಿಯಲೇ ಬೇಕಾಗುತ್ತದೆ.

ಪಾಕಿಸ್ತಾನದ ವಿಮಾನಗಳೂ ಸೀಮೋಲ್ಲಂಘನೆಯನ್ನು ಮಾಡುತ್ತಿವೆ. ಆದರೆ, ಭಾರತೀಯರು ಹೀಗೆ ಹಾದಿತಪ್ಪಿ ಬಂದವರನ್ನು ಸಹನೆಯಿಂದ ನೋಡಿಕೊಳ್ಳುತ್ತಿದ್ದಾರೆ. ಆದರೆ, ಪಾಕಿಸ್ತಾನದ ಅಧಿಕಾರಿಗಳು ಭಾರತದೊಡನೆ ಶಾಂತಿ ಸ್ನೇಹಗಳನ್ನು ಕೋರುತ್ತ ಈ ರೀತಿಯ ಅನಾಗರಿಕ ಕೃತ್ಯಗಳನ್ನು ತೋರ್ಪಡಿಸುವುದೆಂದರೆ, ಅವರ ಒಳಮನಸ್ಸು ಬೇರೆಯೇ ರೀತಿಯಿದೆ ಎಂದು ತಿಳಿಯಬೇಕಾಗುತ್ತದೆ. ಇಂತಹ ಕುತಂತ್ರಗಳಿಂದ ಭಾರತದ ಏಳಿಗೆಯಂತಿರಲಿ, ಸ್ವಯಂ ಪಾಕಿಸ್ತಾನವೂ ಊರ್ಜಿತವಾಗಲಾರದು ಎಂಬುದು ಸ್ವಯಂವಿದಿತ. ಆದುದರಿಂದಲೇ ಭಾರತವು ಕೇವಲ ವಿರೋಧ ಪ್ರದರ್ಶನದಿಂದಲೇ ತೃಪ್ತವಾಗದೆ ಇನ್ನು ಮುಂದೆಯಾದರೂ ಈ ರೀತಿಯ ಅನಾಹುತಗಳು ನಡೆಯದಂತೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವುದು ಅವಶ್ಯವೆಂದು ಸೂಚಿಸಬಯಸುತ್ತೇವೆ.

ಸಂಘಟನೆ ಅವಶ್ಯ

ದೇಶದಲ್ಲಿ ಕಾಂಗ್ರೆಸ್ಸು ಪ್ರಬಲ ರಾಜಕೀಯ ಪಕ್ಷವೆಂಬುದು ಇತ್ತೀಚಗಿನ ಸಾರ್ವತ್ರಿಕ ಚುನಾವಣೆಗಳಿಂದ ವ್ಯಕ್ತಪಟ್ಟಿರುವುದಾದರೂ ಆ ಮೇಲೆ ನಡೆದಿದ್ದ ಕೆಲವೊಂದು ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ಸು ಪಕ್ಷವಾಗಿ ಸ್ಪರ್ಧಿಸಿ ಸೋಲನ್ನು ಅನುಭವಿಸಿರುವುದು ಗೋಚರವಾಗುತ್ತಿದೆ. ದಿಲ್ಲಿಯ ಕಾರ್ಪರೇಶನಿನ ಚುನಾವಣೆಯಲ್ಲಿ ಕಾಂಗ್ರೆಸ್ಸು ಸೋತು ಜನಸಂಘ ಹಾಗೂ ಕಮ್ಯುನಿಸ್ಟರು ಅಧಿಕಾಧಿಕ ಬೆಂಬಲವನ್ನು ಪಡೆದಿರುವುದಲ್ಲದೇ ಮೊನ್ನೆ ಮೊನ್ನೆ ನಡೆದ ಮದರಾಸು ಕಾರ್ಪರೇಷನಿನಲ್ಲಿಯೂ ಕಾಂಗ್ರೆಸ್ಸು ಸೋಲುಣ್ಣಬೇಕಾಯಿತು. ಗಾಂಧಿ ನೆಹರೂ ಮೊದಲಾದ ರಾಷ್ಟ್ರೀಯ ವ್ಯಕ್ತಿಗಳನ್ನು ನಿಂದಿಸಿ, ರಾಮ, ಗಣೇಶ ಮೊದಲಾದವರ ವಿಗ್ರಹಗಳನ್ನು ಒಡೆದು, ಪಟಗಳನ್ನು ಸುಟ್ಟು, ಭಾರತೀಯ ಸಂವಿಧಾನವನ್ನೇ ಸುಡುವುದಲ್ಲದೇ ಬ್ರಾಹ್ಮಣರ ಹೋಟೇಲುಗಳ ಗೋಡೆಗಳನ್ನೂ ಮಲಿನಗೊಳಿಸುವ ಬ್ರಾಹ್ಮಣ ವಿರೋಧೀ ಭಾವನೆಯಿಂದ ಮಾತ್ರವಲ್ಲದೇ ರಾಷ್ಟ್ರ ವಿಘಾತುಕವೆನಿಸಿದ ದುಷ್ಕೃತ್ಯಗಳನ್ನು ಪ್ರೋತ್ಸಾಹಿಸುತ್ತಿರುವ ಪ್ರತ್ಯೇಕ ತಮಿಳು ನಾಡನ್ನು ಬೇಡುತ್ತಿರುವ ದ್ರಾವಿಡ ಮುನ್ನೇತ್ರ ಕಳಗಂ ಭಾರಿ ವಿಜಯವನ್ನು ಸಂಪಾದಿಸಿದೆ. ಈ ಚುನಾವಣೆಯ ಫಲಿತಾಂಶವನ್ನು ನೋಡುವಾಗ, ಮದ್ರಾಸಿನ ಜನತೆಯಲ್ಲಿ ಕಾಂಗ್ರೆಸ್ಸಿನ ಧೋರಣೆಗಳತ್ತ ಅನಾಸಕ್ತಿಯು ಧ್ಯೈಯ ತೋರಿಬರುತ್ತಿದೆಯೋ? ಎಂಬ ಸಂದೇಹ ಬರುತ್ತಿದೆ. ಮದ್ರಾಸದ ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡಾರರು ಮೂಲತಃ ತಮಿಳುನಾಡಿನ ಪ್ರಮುಖ ಕಾಂಗ್ರೆಸ್ ಆಧಾರಸ್ತಂಭವಾಗಿರುವರಾದರೂ, ಅಂಶತಃ ಅವರು ದ್ರಾವಿಡ ಮುನ್ನೇತ್ರ ಕಳಗಂ ಅನ್ನು ಪ್ರೋತ್ಸಾಹಿಸುತ್ತಿರುವರೆಂದು ತೆರೆಯ ಮರೆಯಲ್ಲಿ ಕೇಳಿಬರುತ್ತಿದೆ. ಇವರ ಸತ್ಯಾಸತ್ಯತೆಯು ಸ್ಪಷ್ಟಗೊಳ್ಳದೆ ಇವರ ವಿಷಯವಾಗಿ ಏನೂ ಹೇಳಲು ಸಾಧ್ಯವಿಲ್ಲವಾದರೂ ಕಾಂಗ್ರೆಸಿನ ಶಕ್ತಿ ಮಾತ್ರ ಕುಂದಿ, ಅಲ್ಲಿ ರಾಷ್ಟ್ರೀಯತೆಯು ದೂರವಾಗುತ್ತಿದೆಯೆಂಬುದು ಸುವಿದಿತ. ಮದ್ರಾಸ ದಿಲ್ಲಿಯಂತಹ ತಿಳುವಳಿಕೆಯಿಂದ ಕೂಡಿದ ನಾಗರಿಕರಿರುವ ಮಹಾನಗರಗಳಲ್ಲಿಯೇ ಕಾಂಗ್ರೆಸ್ಸು ಬಲಗುಂದುತ್ತ ಬರುವುದು ಅಧಿಕಾರದ ಗ್ರಹಣದ ದೃಷ್ಟಿಯಿಂದ ಮುಖ್ಯವಲ್ಲವಾದರೂ ಪಕ್ಷದ ಉನ್ನತಿ ಮತ್ತು ಸಂಘಟನೆಯ ದೃಷ್ಟಿಯಿಂದ ಗಮನಾರ್ಹವೆಂದು ತಿಳಿಯಬೇಕು

ಇತ್ತೀಚೆಗೆ ರಾಷ್ಟ್ರದ ವಿವಿಧೆಡೆಗಳಲ್ಲಿ ಕಂಡು ಬರುತ್ತಿರುವ ಈ ರೀತಿಯ ವಿಪರ್ಯಾಸ ಫಲಶ್ರುತಿಯಿಂದ ಕಾಂಗ್ರೆಸ್ಸು ದುರ್ಬಲವಾಗುತ್ತಿದೆ, ಜನಾನುರಾಗಕ್ಕೆ ಎರವಾಗುತ್ತಿದೆ ಎಂಬುದನ್ನು ಗಮನಿಸಿ, ಈ ಕೊರತೆಗಳನ್ನು ನಿವಾರಿಸಿ, ಸುದೃಢ ಹಾಗೂ ಭದ್ರಪಕ್ಷವಾಗಿ ಮುನ್ನಡೆಸುವ ಗುರುತರ ಉತ್ತರದಾಯಿತ್ವವಿಂದು ಕಾಂಗ್ರೆಸಿಗರ ಮೇಲೆ ಇದೆ ಎಂಬುದನ್ನು ತಿಳಿಯಬೇಕು. ಇದನ್ನು ನಿರ್ಲಕ್ಷಿಸಿದರೆ, ಮುಂಬರುವ ಚುನಾವಣೆಗಳಲ್ಲಿ ಕೇರಳದಂತೆಯೇ ಉಳಿದ ಕೆಲವು ರಾಜ್ಯಗಳಲ್ಲೂ ಕಾಂಗ್ರೆಸ್ಸು ದೂರ ಸರಿದು ಕಮ್ಯುನಿಜಂ ಅಥವಾ ಅದಕ್ಕೆ ಸರಿಸಮಾನವಾದ ಇತರ ದೇಶ ಪ್ರೇಮ ವಿರಹಿತರ ಕೈಮೇಲಾಗುವ ಸಂಭವವು ಹೆಚ್ಚು. ರಾಷ್ಟ್ರದ ಐಕ್ಯವನ್ನು ಮತ್ತು ಪ್ರಜಾಪ್ರಭುತ್ವವನ್ನು ಉಳಿಸಲು ಹೆಣಗುವ ಮಹಾ ರಾಜಕೀಯ ಪಕ್ಷ ಕಾಂಗ್ರೆಸ್ಸು ತೀವ್ರ ಕಾರ್ಯಕ್ರಮಗಳನ್ನು ಕೈಗೊಂಡು ದೇಶವನ್ನು ಮುತ್ತಬಹುದಾದ ತಿಮಿರಾಂಧಕಾರವನ್ನು ದೂರೀಕರಿಸುವುದು ಅವಶ್ಯ.

ಸಂಕ್ಷಿಪ್ತ ಸುದ್ದಿಗಳು

ಮಂಗಲದಾಸ ಪಕ್ವಾಸ

ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರು ಮೂರು ತಿಂಗಳ ರಜೆಯ ಮೇಲೆ ವಿದೇಶಗಳಿಗೆ ತೆರಳಲಿರುವುದರಿಂದ, ಆ ಕಾಲಾವಧಿಗೆ ತಾತ್ಕಾಲಿಕ ರಾಜ್ಯಪಾಲರಾಗಿ ಶ್ರೀ ಮಂಗಲದಾಸ ಪಕ್ವಾಸರನ್ನು ರಾಷ್ಟ್ರಪತಿಗಳು ನೇಮಿಸಿದ್ದಾರೆ. ಶ್ರೀ ಪಕ್ವಾಸರು ಈ ಮೊದಲು ಮಧ್ಯಪ್ರದೇಶ ಹಾಗೂ ಮುಂಬಯಿಯ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅವರಿಗೀಗ ೭೭ ವರ್ಷ ಪ್ರಾಯ. ಸಾಮಾನ್ಯವಾಗಿ ಒಂದು ರಾಜ್ಯದ ರಾಜ್ಯಪಾಲರ ಅನುಪಸ್ಥಿತಿಯಲ್ಲಿ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ತಾತ್ಕಾಲಿಕ ರಾಜ್ಯಪಾಲರೆಂದು ಕೆಲಸ ಮಾಡುವುದಾದರೂ, ಸದ್ಯ ಮೈಸೂರು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ದಾಸಗುಪ್ತರವರೂ ರಜೆಯ ಮೇಲೆ ಹೋಗಿರುತ್ತಾರೆ. ಆದುದರಿಂದ ಈ ಹೊಸ ನೇಮಕವಾಯಿತು.

ಮಾಸ್ಟರ ತಾರಾಸಿಂಘ

ಪಂಜಾಬ ಸರಕಾರವು ಸೀಖ ಗುರುದ್ವಾರಗಳ ಅಂತರಿಕಕ್ಕೆ ಕೈಹಾಕಿದೆ ಎಂದು ದೂರಿ, ಅದನ್ನು ವಿರೋಧಿಸಿ, ಅಕಾಲಿ ದಳದ ನಾಯಕ ಮಾಸ್ಟರ ತಾರಾಸಿಂಘರು ಇದೇ ೧೬ ರಿಂದ ಆಮರಣ ಉಪವಾಸವನ್ನು ಕೈಗೊಳ್ಳುವೆನೆಂದು ಘೋಷಿಸಿದ್ದರು. ಆದರೆ, ಇತ್ತೀಚೆಗೆ ಪ್ರಧಾನಿ ನೆಹರೂ ಅವರು ಶ್ರೀ ಸಿಂಘರೊಡನೆ ಮಾತನಾಡಿ ಈ ವಿಷಯದಲ್ಲಿ ಗುರುದ್ವಾರಗಳ ಆಡಳಿತೆಯ ವಿಷಯದಲ್ಲಿ ಹಸ್ತಕ್ಷೇಪವಾಗದಂತೆ ನೋಡಿಕೊಳ್ಳುವ ಸಲುವಾಗಿ ಒಂದು ಸಮಿತಿಯನ್ನು ನೇಮಿ

ಷುವ ಸೂಚನೆಯು ಬಂದು ಅದು ಕಾರ್ಯಕಾರಿಯಾಗುವುದರಿಂದ, ತಾನು ಮೊದಲು ಮಾಡಿದ್ದ ನಿರ್ಧಾರವನ್ನು ಬದಲಿಸಿದ್ದಾರೆ. ಈಗಿನ ವರದಿಗಳಂತೆ ನೇಮಿಸಬಹುದಾದ ಸಮಿತಿಯಲ್ಲಿ ಸರಕಾರದ ಇರ್ವರು ಮತ್ತು ಶ್ರೀ ಸಿಂಘರಿಂದ ನೇಮಿತರಾದ ಇರ್ವರು ಪ್ರತಿನಿಧಿಗಳಿರುವರು. ಈ ಸಮಿತಿಯು, ಹಸ್ತಕ್ಷೇಪ ಮಾಡಿದ ಬಗ್ಗೆ ಬರುವ ಆರೋಪಗಳನ್ನು ವಿಚಾರಿಸಬೇಕು; ಸಮಿತಿಯ ಸದಸ್ಯರಲ್ಲಿ ಭಿನ್ನಾಭಿಪ್ರಾಯವು ತೋರಿಬಂದಾಗ ಪಂಜಾಬದ ರಾಜ್ಯಪಾಲರಿಗೆ ಈ ವಿಷಯವನ್ನು ಒಪ್ಪಿಸಬೇಕಾಗಿದೆ.

ದಲಾಯ್ ಲಾಮಾ

ಟಿಬೇಟದ ಧರ್ಮಾಧಿಕಾರಿಯಾದ ದಲ್ಯಾ ಲಾಮಾರವರನ್ನು ಭಾರತ ಸರಕಾರವು ಆದರಪೂರ್ವಕವಾಗಿ ಸ್ವಾಗತಿಸಿ ಅವರಿಗೆ ಆಶ್ರಯವಿತ್ತು ಉಳಕೊಳ್ಳುವ ವ್ಯವಸ್ಥೆಯನ್ನು ಯೋಗ್ಯ ರೀತಿಯಲ್ಲಿ ಮಾಡಿಕೊಡಲು ನಿರ್ಧರಿಸಿದೆ. ಅವರು ಮುಸ್ಸೋರಿಯಲ್ಲಿ ವಿಶ್ರಾಂತಿ ಪಡೆಯುವರೆಂದು ತಿಳಿದು ಬಂದಿದೆ. ದಲ್ಯಾ ಲಾಮಾರೊಂದಿಗೆ ಅವರ ಮಾತಾಪಿತರೂ ಕುಟುಂಬದವರೂ ಇರುವರು.

ದಿನಕರ ದೇಸಾಯಿ

ಸುಪ್ರಸಿದ್ಧ ಕನ್ನಡ ಕವಿಗಳಾದ ಶ್ರೀ ದಿನಕರ ದೇಸಾಯಿಯವರನ್ನು ಬ್ರಿಟಿಷ ಕೌನ್ಸಿಲು ತನ್ನ ಅತಿಥಿಯನ್ನಾಗಿ ಇಂಗ್ಲೆಂಡಿಗೆ ಆಮಂತ್ರಿಸಿದೆ. ಬ್ರಿಟಿಷ ಕೌನ್ಸಿಲು ಅತಿಥಿಯನ್ನಾಗಿ ಆಮಂತ್ರಿಸುವುದು ಒಂದು ಗೌರವವಾಗಿದ್ದು, ಬ್ರಿಟನ್ನಿನ ವಿದ್ಯಾಸಂಸ್ಥೆಗಳನ್ನೂ ಗ್ರಾಮೀಣ ವೈದ್ಯಕೀಯ ಕೇಂದ್ರಗಳನ್ನೂ ಕಾರ್ಮಿಕ ಸಂಘಗಳನ್ನೂ ಸಂದರ್ಶಿಸಲು ಒಂದು ಅವಕಾಶ ಮಾಡಿಕೊಡುವುದೇ ಈ ಆಮಂತ್ರಣದ ಉದ್ದೇಶವಾಗಿದೆ. ಭಾರತೀಯ ಕಾರ್ಮಿಕರ ಪ್ರತಿನಿಧಿಯಾಗಿ ಈ ಹಿಂದೆ ಅಮೆರಿಕೆಗೂ ಯುರೋಪಿಗೂ ಶ್ರೀ ದೇಸಾಯಿಯವರು ಹೋಗಿರುತ್ತಾರೆ. ಮುಂದಿನ ಜೂನ್ ತಿಂಗಳಲ್ಲಿ ಇವರು ಸದ್ಯದ ಆಮಂತ್ರಣದ ಮೇರೆಗೆ ಬ್ರಿಟನ್ನಿಗೆ ತೆರಳಲಿರುವರು. ಶ್ರೀ ದೇಸಾಯಿಯವರು ಅಂಕೋಲೆಯ ಕೆನರಾವೆಲ್ ಫೇರ್ ಟ್ರಸ್ಟಿನ ಅಧ್ಯಕ್ಷರಿರುವರು.

ರಾಜಗೋಪಾಲಾಚಾರಿ.

ಕಾಂಗ್ರೆಸ್ ಆಡಳಿತೆಯೂ ಪಕ್ಷವೂ ಈಗ ಲಂಗುಲಗಾಮಿಲ್ಲದೆ ಇತರ ಸಾಮಾನ್ಯ ಪಕ್ಷಗಳಂತೆಯೇ ತನ್ನ ನೀತಿಯನ್ನು ರೂಪಿಸಿಕೊಳ್ಳುವುದರಿಂದ, ಅದಕ್ಕೊಂದು ತಡೆ ಹಾಕುವ ಸಾಂಪ್ರದಾಯಿಕ ಪಕ್ಷವೊಂದನ್ನು ರಚಿಸುವ ಆವಶ್ಯಕತೆಯಿಂದು ಅಧಿಕಾಧಿಕವಾಗಿದೆಯಾದ ದರಿಂದ ಇನ್ನೂ ತಡಗೆಯ್ಯದೆ ಶೀಘ್ರದಲ್ಲಿಯೇ ಈ ಪಕ್ಷವನ್ನು ಸ್ಥಾಪಿಸಬೇಕೆಂದು ರಾಜಾಜಿ ಮದ್ರಾಸಿನ ಸಭೆಯೊಂದರಲ್ಲಿ ಆಡಿದ್ದಾರೆ. ಅವರು ಮುಂದುವರಿದು ಮಿಲಿಟರಿಗಳಿಗೆ ಶಾಂತಿ ಮತ್ತು ವ್ಯವಸ್ಥೆಗಳ ಪರಿಚಯ ಮಾತ್ರವಿದ್ದು, ಕೇವಲ ಇವುಗಳಿಂದಷ್ಟೇ ಆಡಳಿತೆ ಸಾಗುವಂತಿಲ್ಲವಾದುದರಿಂದ ಭಾರತದಲ್ಲಿ ಸೈನಿಕಾಡಳಿತೆಯು ಯಶಸ್ವಿಯಾಗಲಾರದು ಎಂದು ಹೇಳಿದರು. ಮದ್ರಾಸದಲ್ಲಿ ಕಾಂಗ್ರೆಸ್ ಗೆಲ್ಲಲ್ಲು ಯಾವ ಪ್ರಯತ್ನ ನಡೆಸಿದರೂ ಅದು ಸೋತು ಹೋದುದನ್ನುದ್ದೇಶಿಸಿಯೂ ಅವರು ಮಾತಾಡಿದರು.

ಅಲ್ಲಲ್ಲಿಯ ಸುದ್ದಿಸಾರ

ಸಮಾಜ ಕಲ್ಯಾಣ ಮಂತ್ರಿ ರಾಚಯ್ಯ—ನವರು, ತಾ. ೮ನೇ ಸಂಜೆ ಮಂಗಳೂರಿನ ಹರಿಜನ ಹಾಸ್ಟೇಲಿನಲ್ಲಿ ಜರಗಿದ ಹರಿಜನ ವಿದ್ಯಾಭಿವೃದ್ಧಿ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಭಾಷಣಮಾಡುತ್ತಾ, 'ದೇಶದಲ್ಲಿ ಸುಖೀ ರಾಜ್ಯವನ್ನು ಕಟ್ಟಲು ಮೇಲುಕೀಳೆನ್ನದೆ ಪ್ರತಿಯೊಬ್ಬರಿಗೂ ವಿದ್ಯೆಯನ್ನೊದಗಿಸುವುದು ಅಗತ್ಯ. ಹಿಂದುಳಿದ ಹರಿಜನರು ಮತ್ತು ಗಿರಿಜನರಿಗೆ ಸರ್ಕಾರವು ಕಾದಿರಿಸಿದ ಹಣದಿಂದ ಅರ್ಧದಷ್ಟನ್ನಾದರೂ ಅವರ ವಿದ್ಯಾಪ್ರಗತಿಗಾಗಿ ಉಪಯೋಗಿಸುತ್ತದೆ. ಹರಿಜನರು ಕಷ್ಟ ಸಹಿಷ್ಣುಗಳಾಗಿ ಜ್ಞಾನಾಭಿವೃದ್ಧಿಗಾಗಿ ಮುನ್ನುಗ್ಗಬೇಕು" ಎಂದು ಮುಂತಾಗಿ ಭಾಷಣವಿತ್ತರು.

ಸಮ್ಮೇಳನವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ.ಕೆ. ಶೆಟ್ಟಿ, ಎಂ.ಎಲ್.ಸಿ. ಯವರು ಉದ್ಘಾಟಿಸಿದರು. ನಂತರ ಶ್ರೀಗಳಾದ ವೈಕುಂಠ ಬಾಳಿಗ, ಎಂ. ಎಲ್. ಎ. ಜಿಲ್ಲಾ ಬೋರ್ಡು ಅಧ್ಯಕ್ಷ ಬಿ. ಮಂಜಯ್ಯ ಹೆಗ್ಡೆ, ಎಸ್. ಸುಬ್ಬಯ್ಯ ನಾಯ್ಕ ಎಂ.ಎಲ್.ಎ, ಎಫ್. ಎಕ್ಸ್. ಡಿ. ಪಿಂಟೊ, ಎಂ.ಎಲ್.ಎ. ಮೊದಲಾದವರು ಭಾಷಣವಿತ್ತರು. ಆರಂಭದಲ್ಲಿ ಶ್ರೀ ಯು. ಮಂಜಪ್ಪ, ಎಂ.ಎಲ್.ಎ. ಯವರಿಂದ ಸ್ವಾಗತ ಭಾಷಣವಾಯಿತು.

ನಂತರ ಶ್ರೀ ರಾಚಯ್ಯನವರು ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣವಿತ್ತರು.

ಬಾಬುಗುಡ್ಡೆ ಹರಿಜನ ಕೊಲನಿಯಲ್ಲಿ ಶ್ರೀ ಕೆ. ರಂಗರಾಯರ ಹೆಸರಿನಲ್ಲಿ ಕಟ್ಟಿಸಲಾದ ಸಮಾಜ ಕೇಂದ್ರವೊಂದನ್ನೂ ಸೂಟರ್ ಪೇಟೆ ಹರಿಜನ್ ಕೊಲನಿಯಲ್ಲಿನ ಸರ್ಕಾರಿ ಶಾಲೆಯ ಕಟ್ಟಡವೊಂದನ್ನೂ ಶ್ರೀ ರಾಚಯ್ಯನವರು ಬೆಳಿಗ್ಗೆ ಉದ್ಘಾಟಿಸಿದರು.

ಕೆನರಾ ಚೇಂಬರ್ ಆಫ್ ಕಾಮರ್ಸಿನ ಪರವಾಗಿ ಶ್ರೀ ಸುಜೀರ್ ದಾಮೋದರ ನಾಯ್ಕ, ಶ್ರೀ ಕೆ ಪಿ. ಹೆಗ್ಡೆ ಮತ್ತು ಶ್ರೀ ಕೆ. ಬಿ. ಪೈಯವರು ಸಚಿವರನ್ನು ಇಂದು ಕದ್ರಿ ಪ್ರವಾಸ ಬಂಗ್ಲೆಯಲ್ಲಿ ಭೇಟಿಯಾಗಿ, ಫ್ರೆಂಚ್ ಟೈಲ್ಸ್ ಕೈಗಾರಿಕಾ ಪ್ರಗತಿಗೆ ಇರುವ ಕುಂದು ಕೊರತೆಗಳನು ನಿವಾರಿಸಬೇಕೆಂಬ ಮನವಿಯೊಂದನ್ನು ಅರ್ಪಿಸಿದರು.

ಬೆಳ್ಳಾರೆ ಮಂಡಲ ಕಾಂಗ್ರೆಸಿನ ಆಶ್ರಯದಲ್ಲಿ ಕಳೆದ ತಾ. ೫ರ ಸಂಜೆ ಚೊಕ್ಕಾಡಿಯಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.ಯವರ ಹಿರಿತನದಲ್ಲಿ ಜರಗಿತು. ಶ್ರೀ ವಿ. ಆನಂದನವರ ಸ್ವಾಗತ ಭಾಷಣದ ನಂತರ ಶ್ರೀಗಳಾದ ಕೆ. ಶಂಕರ ಆಳ್ವ, ಡಾ! ಬಾಳಪ್ಪ ಶೆಟ್ಟಿ, ಕೆ. ಜತ್ತಪ್ಪ ರೈಗಳೇ ಮೊದಲಾದವರಿಂದ ಭಾಷಣವಾದ ತರುವಾಯ ಶ್ರೀ ವಿ. ಆನಂದನವರು ಧನ್ಯವಾದವಿತ್ತರು.

ಉಡುಪಿ ಪೋಲೀಸ್ ಖಾತೆಯವರ ಶ್ರೀ ಸುಖಶಾಂತಿಕಾ ಭಜನಾ ಮಂಡಳಿಯ ವಾರ್ಷಿಕೋತ್ಸವವು ತಾ. ೭ರಂದು ಡಿ. ಸು. ಮುಖ್ಯಸ್ಥರಾದ ಶ್ರೀ ಜಿ. ಎಸ್. ನಾಗನೋತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಎ. ದೇವದಾಸರಿಂದ ಸ್ವಾಗತವಾದ ನಂತರ ಶ್ರೀ ತಿಮ್ಮಯ್ಯನವರು ಸ್ವಸ್ತಿವಾಚನ ಮಾಡಿದರು. ಶ್ರೀಗಳಾದ ಪದ್ಮನಾಭ ಶೆಟ್ಟಿ, ಶಾಮಸುಂದರ ದೇಶಪಾಂಡೆ ಮುಂತಾದವರು ಭಜನೆಯ ಮಹತ್ವವನ್ನು ಕುರಿತ ಭಾಷಣ ಮಾಡಿದರು.

ಕುನ್ಹಾರ್ಡ್ ಬೋರ್ಡ್ ಹ್ಯಾಸ್ಕೂಲಿನ ವರ್ಧಂತಿಯು—ಕಳೆದ ತಾ. 28ರಲ್ಲಿ ಶ್ರೀ ಪಿ. ಎಸ್. ಆಂಚನ್ ಎಂ. ಎ ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ನೆರೆಯಿತು. ಶ್ರೀ ಕೆ ವೆಂಕಟ್ರಮಣ ಭಟ್ಟರು ಸ್ವಾಗತಿಸಿದ ಮೇಲೆ ಹೆಡ್ಮಾಸ್ತರ್ ಶ್ರೀ ಕೆ. ಶಂಕರ ನಾರಾಯಣ ಭಟ್ಟರು ವರದಿಯನ್ನೋದಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಮನರಂಜನೆಯ ಕಾರ್ಯಕ್ರಮಗಳಾದುವು. ಅಂದು ಬೆಳಿಗ್ಗೆ ಡಾ ಎ. ವಿ. ಸೆಟ್ಟರು ಧ್ವಜಾರೋಪಣ ಮಾಡಿದ್ದರು.

ಡಾ। ಸಾಮುವೇಲ್ ಎನ್ನಿಮನ್ನರ ದಿನಾಚರಣೆ..ಯು ಮಂಗಳೂರಲ್ಲಿ ಕೆನರಾ ಹೋಮಿಯೋಪಥಿಕ್ ಸಮಿತಿಯ ಆಶ್ರಯದಲ್ಲಿ ತಾ 10ರಲ್ಲಿ ಶ್ರೀ ಎಸ್. ನರ್ಸಪ್ಪಯ್ಯ ಎಮ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಕೆ ಶ್ರೀಧರರಾಯರು ಸ್ವಾಗತಿಸಿದ ಮೇಲೆ ಡಾ| ಪಿ. ಅಪ್ಪುಕುಟ್ಟಿ ಮೆನನ್ ಶ್ರೀ ಸಿ. ಪಿ. ಕ್ಲೀಟಸ್, ಡಾ! ಕೆ.ಎ ಸ್ವಯಂಪ್ರಕಾಶ ಮೊದಲಾದವರು ಭಾಷಣಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಡಾ! ನಿ. ಕೆ. ಕೊಪಕೋಡಿಕರ್ ಅವರು ಧನ್ಯವಾದಗಳನ್ನಿತ್ತರು.

ಬ್ರಹ್ಮಾವರ— ತಾ. ೯ರಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಹೆಬ್ಬಾಗಿಲಿನಲ್ಲಿ ಶ್ರೀ ಕೃಷ್ಣ ರಾವ್, ಎಂ. ಎ. ಎಮ್. ಎಲ್ ಇವರ ಅಧ್ಯಕ್ಷತೆಯಲ್ಲಿ ಉಗಾದಿ ಸಾಹಿತ್ಯೋತ್ಸವವನ್ನು ಆಚರಿಸಲಾಯಿತು. ಶ್ರೀ ಎಂ. ಜನಾರ್ಧನ ಎಂ. ಎ. ಅವರು ಉಪನ್ಯಾಸವಿತ್ತರು. ಶ್ರೀ ಗೋಪು ಸೇರಿಗಾರ ಮತ್ತು ವೃಂದದವರಿಂದ ಕ್ಲೇರಿಯೋನೆಟ್ ವಾದನವೂ, ಶ್ರೀಮತಿ ಕಾತ್ಯಾಯಿನಿ ಕೃಷ್ಣಮೂರ್ತಿ ಮತ್ತು ವೃಂದದವರಿಂದ ಸಂಗೀತವೂ ನಡೆಯಿತು. ಕಾರ್ಯದರ್ಶಿ ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು ಧನ್ಯವಾದಗಳನ್ನಿತ್ತರು.

ಉಡುಪಿಯಲ್ಲಿ ಸಚಿವ ರಾಚಯ್ಯನವರು—ಇದೇ ತಾ. ೯ನೇ ಮಧ್ಯಾಹ್ನ ಮೈಸೂರು ಸರಕಾರದ ಸಮಾಜ ಕಲ್ಯಾಣ ಮತ್ತು ಪಾನನಿರೋಧ ಖಾತೆಗಳ ಮಂತ್ರಿ ಶ್ರೀ ಎನ್. ರಾಚಯ್ಯ ಬಿ.ಎ ಎಲ್ ಎಲ್.ಬಿ ಇವರು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಕೆ. ಕೆ. ಸೆಟ್ಟಿ ಎಮ್. ಎಲ್. ಸಿ, ಶ್ರೀ ಮಂಜಪ್ಪ ಉಳ್ಳಾಲ ಎಂ. ಎಲ್. ಎ, ಮೊದಲಾದವರೊಂದಿಗೆ ಮಣಿಪಾಲಕ್ಕೆ ಆಗಮಿಸಿ ಡಾ. ಟಿ. ಎಂ. ಎ. ಪೈಗಳು ಏರ್ಪಡಿಸಿದ ಭೋಜನ ಸತ್ಕಾರದಲ್ಲಿ ಭಾಗವಹಿಸಿದರು. ಭೋಜನಾನಂತರ ಶ್ರೀ ಟಿ. ಎ. ಪೈಗಳು ಮಂತ್ರಿಗಳನ್ನು ಸ್ವಾಗತಿಸಿ ಮಣಿಪಾಲ ಮತ್ತು ಅಲ್ಲಿನ ವಿದ್ಯಾ ಸಂಸ್ಥೆಗಳ ಪರಿಚಯಮಾಡಿಕೊಟ್ಟು, ಮಣಿಪಾಲವು ಯಾವತರದ ಜಾತೀಯತೆಯ ಸಂಕುಚಿತತೆಯೂ ಇಲ್ಲದ ವಿಶಿಷ್ಟ ಕೇಂದ್ರ ಎಂದರು. ಮಂತ್ರಿಗಳು ಮಾತನಾಡುತ್ತ ತಾನು ಮೊದಲೇ ಕೇಳಿರುವ ಇಲ್ಲಿಯ ವಿವಿಧ ವಿಖ್ಯಾತ ಸಂಸ್ಥೆಗಳನ್ನು ಪ್ರತ್ಯಕ್ಷ ನೋಡಿದನಂತರ ತನಗೆ ಅತ್ಯಾನಂದವಾಗಿರುವುದೆಂದರಲ್ಲದೆ "ಮಣಿಪಾಲವು ದಕ್ಷಿಣ ಹಿಂದೂಸ್ಥಾನದ ಚಂಡೀಘರ್" ಎಂದರು. ಬಳಿಕ ಹರಿಜನ ವಿದ್ಯಾರ್ಥಿ ಭವನ, ಕಸ್ತೂರಿಬಾ ಮೆಡಿಕಲ್ ಕಾಲೇಜ್, ಇಂಜಿನಿಯರಿಂಗ್ ಕಾಲೇಜ್, ಎಂ. ಜಿ. ಎಂ. ಕಾಲೇಜುಗಳಿಗೆ ಸಂದರ್ಶನವಿತ್ತರು. ಅನಂತರ ಬನ್ನಂಜೆ ಹರಿಜನರು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಮಂತ್ರಿಗಳು ಹರಿಜನರ ಅಭಿವೃದ್ಧಿಗಾಗಿ ಸರಕಾರ ಕೈಗೊಂಡಿರುವ ಯೋಜನೆಗಳನ್ನು ವಿವರಿಸಿ ಸರಕಾರ ಕೊಡುವ ಸಾಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದರು. ಶ್ರೀ ಮಂಜಪ್ಪ ಉಳ್ಳಾಲ ಎಂ. ಎಲ್. ಎ. ಅವರು ಮಾತನಾಡಿದ ಮೇಲೆ ಶ್ರೀ ಟಿ. ಎ. ಪೈಗಳು ಮಾತಾಡುತ್ತ ಹರಿಜನರಲ್ಲಿ ಸಂಕುಚಿತ ಭಾವನೆ ಇರಕೂಡದೆಂದೂ ಹರಿಜನರು ಕೂಡಾ ಇತರ ಸಮಾಜದವರಿಗೆ ಮಾರ್ಗದರ್ಶಕರಾಗಬೇಕೆಂದೂ ತಮ್ಮ ಕೆಲಸವನ್ನು ನಿಷ್ಠೆಯಿಂದೇ ಮಾಡಬೇಕೆಂದೂ ಹೇಳಿದರು.

ಬಳಿಕ ಮಂತ್ರಿಗಳು ಮಲ್ಪೆಗೆ ತೆರಳಿ ಶ್ರೀ ಚೆನ್ನ ಬಸವೇಶ್ವರ ಸೇವಾಸಮಾಜ ಮಂದಿರದ ಉದ್ಘಾಟನೆ ಮಾಡಿದರು. ಶ್ರೀ ಟಿ. ಎ. ಪೈಗಳು ಅಧ್ಯಕ್ಷತೆ ವಹಿಸಿದ್ದರು.

ನಗರ ಸಭೆಯ ಮಾನಪತ್ರ—ತರುವಾಯ ಮಂತ್ರಿಗಳು ಉಡುಪಿ ಮೈನ್ ಶಾಲೆಯಲ್ಲಿ ನಗರ ಸಭೆಯ ಮಾನ ಪತ್ರವನ್ನು ಸ್ವೀಕರಿಸಿದರು. ಪುರ ಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರು ಮಂತ್ರಿಗಳನ್ನು ಸ್ವಾಗತಿಸಿ ಬಿನ್ನವತ್ತಳೆಯನ್ನರ್ಪಿಸಿದರು. ಮಂತ್ರಿಗಳು ನಗರ ಸಭೆಯವರು ಪಕ್ಷ ಭಾವನೆ ಬಿಟ್ಟು ನಗರದ ಅಭಿವೃದ್ಧಿಗಾಗಿ ದುಡಿಯಬೇಕೆಂದೂ ಹಿಂದುಳಿದ ವರ್ಗದವರಿಗೂ ತಕ್ಕ ಸೌಕರ್ಯಗಳನ್ನೊದಗಿಸಬೇಕೆಂದೂ ಹೇಳಿದರು. ಅಂತ್ಯದಲ್ಲಿ ಪುರಸಭೆಯ ಉಪಾಧ್ಯಕ್ಷ ಪಿ. ರಂಗನಾಥ ಶೆಣೈಯವರು ಧನ್ಯವಾದಗಳನ್ನಿತ್ತ ಮೇಲೆ ಮಂತ್ರಿಗಳು ಮಂಗಳೂರು ಪುತ್ತೂರಿಗಾಗಿ ಮಡಿಕೇರಿಗೆ ತೆರಳಿದರು.

ಜಿಲ್ಲಾ ಬೋರ್ಡಿನ ಉಪಾಧ್ಯಕ್ಷ ರಾಗಿ—ತಾ. ೭ರಂದು ಜರಗಿದ ಜಿಲ್ಲಾ ಬೋರ್ಡ ಸಭೆಯಲ್ಲಿ ಕುಂದಾಪುರದ ಎಡ್ವಕೇಟ್ ಶ್ರೀ ಎಚ್ ಎಸ್ ಪರಮೇಶ್ವರಯ್ಯನವರು ಆರಿಸಲ್ಪಟ್ಟಿರುವರು. ಶ್ರೀ ಬಿ. ಆರ್. ಕರ್ಕೇರರ ನಿಧನದಿಂದ ಈ ಸ್ಥಾನವು ತೆರವಾಗಿತ್ತು.

ಬಂಟರ ಯಾನೆ ನಾಡವರ ಸಂಘದ ಮಹಾ ಸಭೆಯು ಮಂಗಳೂರಲ್ಲಿ ಬರುವ ತಿಂಗಳ ತಾ. ೧೭ಕ್ಕೂ, ಸುವರ್ಣ ಮಹೋತ್ಸವವು ತಾ. ೧೮ಕ್ಕೂ ಜರಗಲಿರುವುವು.

ನಿಟ್ಟೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ—ಸರಕಾರದಿಂದ ಕೊಡಮಾಡಿದ ಉಪಸ್ಥಿತಿ ಶಿಷ್ಯವೃತ್ತಿಗಳನ್ನು ವಿತರಿಸುವ ಸಮಾರಂಭವು ತಾ. ೧೦ರಂದು ಶ್ರೀಯು ಬಿ. ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಹೆಮ್ಮಕ್ಕಳನ್ನು ಹೆಚ್ಚು ಹೆಚ್ಚಾಗಿ ಅಕ್ಷರಸ್ಥರನ್ನಾಗಿ ಮಾಡುವ ಇರಾದೆಯಿಂದ ಸರಕಾರವು ಈ ರೀತಿ ಹಿಂದಿನ ವರ್ಷದಲ್ಲಿ ಅತ್ಯಧಿಕ ದಿನ ಶಾಲೆಗೆ ಬಂದಿರುವ ಬುದ್ಧಿವಂತ ವಿದ್ಯಾರ್ಥಿನಿಯರಿಗೆ ಇಂತಹ ಶಿಷ್ಯವೃತ್ತಿಗಳನ್ನು ಕೊಡುತ್ತಿದೆ. ಶ್ರೀ ಎನ್. ನಾರಾಯಣ ಶೆಟ್ಟರು ವಿತರಣೆ ಮಾಡಿದರು. ಶ್ರೀ ಸಿ. ಕೆ. ಮಂಜರು ಸರಕಾರವೀಯುತ್ತಿರುವ ಪ್ರೋತ್ಸಾಹದಿಂದ, ಅಧಿಕಾಧಿಕ ಹೆಮ್ಮಕ್ಕಳು ಶಾಲೆಗೆ ತಪ್ಪದೆ ಬಂದು ಅಧ್ಯಯನಶೀಲರಾಗಬೇಕೆಂದು ಕೇಳಿಕೊಂಡರು. ಮುಖ್ಯೋಪಾಧ್ಯಾಯ ಶ್ರೀ ಎಫ್. ಎಕ್ಸ್. ಕರ್ನೇಲಿಯೊರು ಧನ್ಯವಾದ ಸಮರ್ಪಣೆ ಮಾಡಿದರು.

ಅಂಕೋಲಾ—ಇಲ್ಲಿಯ ಗ್ರಾಮ ಪಂಚಾಯತಿನ ಸರಪಂಚರ ಚುನಾವಣೆಯು ತಾ. ೭ರಂದು ನಡೆದು, ಉತ್ಸಾಹಿ ತರುಣ ಕಾರ್ಯಕರ್ತರಾದ ಶ್ರೀ ಗೋವಿಂದರಾಯ ಪ್ಲಿ. ಬಗಳ ಇವರು ಆಯ್ಕೆಯಾದರು.

ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನದಲ್ಲಿ ಇದೇ ತಾ. ೨೨ರಿಂದ ೨೮ರ ವರೆಗೆ ರಥೋತ್ಸವಾದಿ ಕಾರ್ಯಕ್ರಮಗಳು ಜರಗಲಿರುವುವು. ಈ ವರ್ಷ ಹೊಸತಾಗಿ ಏರ್ಪಡಿಸಿದ ಧರ್ಮ ಮತ್ತು ಸಾಹಿತ್ಯ ಸಮ್ಮೇಳನವು ತಾ. ೨೪ರಿಂದ ತಾ. ೨೬ರ ವರೆಗೆ ನೆರವೇರಲಿರುವುದು ಎಂದು ದೇವಸ್ಥಾನ ಟ್ರಸ್ಟಿ ಶ್ರೀ ಎ. ಜಗಜ್ಜೀವನ ಆಳ್ವರು ತಿಳಿಸುತ್ತಾರೆ.

ಪ್ರಕಟಣೆ
ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 49/1959.

P. ನಾರಾಯಣಾಚಾರ್ಯ ವಾದಿ.

ಮತ್ತು

ನರಸಿಂಹ ಮೂರ್ತಿ ಕೂಡಾ ಪ್ರತಿವಾದಿರು

ಇವರೊಳಗೆ.—

1ನೆ ಪ್ರತಿವಾದಿ ನರಸಿಂಹ ಮೂರ್ತಿ—ವಾಸುದೇವ ಶಾಸ್ತ್ರಿಗಳ ಮಗ—ಉಡ್ಪಿ ತಾಲ್ಲೂಕು ಕೊಡವೂರು ಗ್ರಾಮದ ವಡಭಾಂಡೇಶ್ವರ—ಇವರಿಗೆ ತಿಳಿಸುವದೇನೆಂದ್ರೆ—

ಪ್ರತಿವಾದಿರು-ವಾದಿವಳಗೆ—ಬಾಡಿಗೆಗೆ ಅನುಭವಿಸುವ ಸ್ಥಳ ಕಟ್ಟೋಣ ಸ್ವಾಧೀನತೆಗೂ ಗೇಣಿ ಬಾಕಿ ಹುಟ್ಟುವಳಿಗೆ ಕೂಡಾ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯಲ್ಲಿ 1ನೆ ಪ್ರತಿವಾದಿಯ ನೋಟೀಸು ಬಗ್ಗೆ ತಾ. 6-6-1959ಕ್ಕೆ ಇಟ್ಟಿದೆ—ಆ ಕುರಿತು 1ನೆ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಇದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ 10 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯಂಬ ಸಂಗ್ತಿ ತಿಳಿಸೋಣಾಗಿಯದೆ.

V. R. Kidyur,
Advocate for Plaintiff.

ಉಡ್ಪಿ, 14-4-1959.